# ಕ್ರಿಸ್ತನ ಜೀವಿತ

## ಭಾಗ–3



# ಕ್ರಿಸ್ತನ ಜೀವಿತ

## ಪಾಸ್ಟರ್ ರಸಲ್ಲರ ಲೇಖನಿಯಿಂದ ಬಂದ
## ಕ್ರಿಸ್ತನ ಜೀವನ ಚರಿತ್ರೆ

ಸತ್ಯವೇದ ವಿದ್ಯಾರ್ಥಿಗಳ
ಒಂದು ಪ್ರಕಟಣೆ

ಮೊದಲ ಮುದ್ರಣ: 100 ಪ್ರತಿಗಳು

ಕ್ರಿಸ್ತನ ಜೀವಿತ ಗ್ರಂಥದ ಪಿ.ಡಿ.ಎಫ್ ರೂಪದ ಪ್ರತಿಯು
www.dawnbiblestudents.com ನಲ್ಲಿ ಲಭ್ಯವಿದೆ.

ವರುಷ: 2023

ಮುದ್ರಕರು:
ಡಾನ್ ಪ್ರಿಂಟಿಂಗ್ ಸರ್ವೀಸ್
ಮಾಗಡಿ ರಸ್ತೆ
ಬೆಂಗಳೂರು–91.

ಸಂಪರ್ಕಿಸ ಬೇಕಾದವರು:
ಶ್ರೀ. ಜೆ. ಜಯಪ್ರಸಾದ್,
ಎಫ್–01, ದಿವ್ಯಪಂಚಮಿ–2,
4ನೇ ಮುಖ್ಯ ರಸ್ತೆ, ತಾಯಪ್ಪ ಗಾರ್ಡನ್,
ಬಿಳೇಕಹಳ್ಳಿ, ಬೆಂಗಳೂರು–76

ಮೊಬೈಲ್: 9535096517

# ಮುನ್ನುಡಿ

ಯೇಸುವು ತನಗೆ ಹಿಂಬಾಲಕರಾಗಬೇಕೆಂದು ತನ್ನ ಮೊದಲ ಶಿಷ್ಯರನ್ನು ಕರೆದಾಗ ಅವರು ತಮ್ಮ ಜೀವಿತದಲ್ಲಿ ಒಂದು ಆಶ್ಚರ್ಯಕರವಾದ ಬದಲಾವಣೆಗಳ ಅನುಭವ ಪಡೆಯಬೇಕಿತ್ತು. ವೈಯಕ್ತಿಕವಾದ ಯಜ್ಞಾರ್ಪಣೆಯ ಜೀವಿತವನ್ನು ನಡೆಸುವುದಕ್ಕಾಗಿ ಅವರು ತಮ್ಮ ಮೀನುಗಾರರ ಹಾಗೂ ಸುಂಕದವರ ವೃತ್ತಿಯನ್ನು ತ್ಯಜಿಸಬೇಕಾಯಿತು. ಗುರುವಿನ ಪಾದದ ಬಳಿಯಲ್ಲಿ ಕುಳಿತು ಆತನಿಂದಲೇ ನೇರವಾಗಿ ಕಲಿತುಕೊಳ್ಳುವುದು ಅವರಿಗೆ ಒಂದು ಅದ್ಭುತವಾದ ಅನುಭವವಾಗಿರಬೇಕು. ಅಪೋಸ್ತಲರು ಆದಿ ಕ್ರೈಸ್ತ ಸಭೆಯ ನಾಯಕರುಗಳಾಗಿ ಬೆಳೆಯುತ್ತಿರಲು, ಆತನ ವಿಶೇಷ ವರ್ತನೆಗಳು ಹಾಗೂ ಆತನು ಜನರೊಂದಿಗೆ ನಡಕೊಳ್ಳುವ ವಿಧಾನಗಳು ಅವರಿಗೆ ಒಂದು ಮಾದರಿಯಾದವು. ಯೇಸುವಿನ ಮಾತನ್ನು ಕೇಳುವುದು ಮಾತ್ರವಲ್ಲದೆ ಆತನು ನಡೆಸಿದ ತನ್ನ ಪ್ರತಿಷ್ಠಾರ್ಪಿತವಾದ ಜೀವನದ ರೀತಿಗಳಿಗೆ ಸಾಕ್ಷಿಗಳಾಗುವುದು ಸಹ ಅವರಿಗೆ ಮುಖ್ಯವಾಗಿತ್ತು. ಆತನ ಮಾತಿನ ಸ್ವರಶೈಲಿಯು ಸಹ ಅವರ ಹೃದಯ ಮತ್ತು ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮ ಬೀರಿರಬೇಕು.

ಯೇಸುವಿನೊಂದಿಗೆ ಜೀವಿಸುತ್ತಿದ್ದವರಿಗೆ ಆತನ ಜೀವಿತವು ಪರಿಣಾಮ ಬೀರಿದ್ದಂತೆ ತಮಗೂ ಪರಿಣಾಮ ಬೀರಬಹುದೆಂದು ಈ ದಿನದಲ್ಲಿ ಯಾರಾದರೂ ಒಬ್ಬರು ನಿರೀಕ್ಷಿಸಬಹುದಾದರೂ ಹೇಗೆ? ನಮಗೆ ಕೇವಲ ಆತನು ಹೇಗೆ ರೋಗಿಗಳು ಹಾಗೂ ಬಡವರೊಂದಿಗೆ ಮೃದುವಾದ ರೀತಿಯಲ್ಲಿ ಬಳಕೆಯಾಗಿದ್ದನೆಂಬು ದನ್ನು ವರ್ಣಿಸುವ ಮಾತುಗಳನ್ನು ಓದಲು ಮಾತ್ರ ಸಾಧ್ಯ. ಆದರೆ ಪ್ರತಿಯೊಂದು ಘಟನೆಗಳು ನಡೆದಾಗ ಅದರ ಸುತ್ತಲಿದ್ದ ವಾತಾವರಣ ಮತ್ತು ಅಲ್ಲಿನ ನಿರ್ದಿಷ್ಟ ಸಂದರ್ಭಗಳ ವಿವರಣೆಗಳನ್ನು ನಾವು ಪಡೆಯದೆ ಹೋಗುತ್ತೇವೆ. ಅತ್ಯುತ್ತಮವೆಂದರೆ, ನಮಗೆ ದೊರಕಿರುವ ವಿಷಯಗಳು ಪರೋಕ್ಷವಾಗಿ ಬಂದಿರುವಂತವುಗಳು. ಇದರ ಪರಿಣಾಮವಾಗಿ ಕರ್ತನ ಕಡೆಗೆ ಭಕ್ತಿ ತೋರಲು ಮತ್ತು ಆತನ ನಿಮಿತ್ತ ತ್ಯಾಗಗಳನ್ನು ಮಾಡಲು ಈಗಿನ ನವ್ಯಕಾಲದ ಕ್ರೈಸ್ತನಿಗೆ ಕಷ್ಟಕರವಾಗಿ ತೋರಬಹುದು. ಆದರೆ ಸುವಾರ್ತಾ ಯುಗದ ಅಂತ್ಯದಲ್ಲಿರುವ ನಾವು ನಮ್ಮ ರಕ್ಷಕನನ್ನು ತಿಳಿದು ಆತನನ್ನು ಅರಿತುಕೊಳ್ಳಲು ಸಾಧ್ಯವಾದಷ್ಟೂ ಉತ್ತಮ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕರ್ತನು ತನ್ನ ಭಕ್ತರಿಗಾಗಿ ವಿಶೇಷ ಏರ್ಪಾಟುಗಳನ್ನು ಮಾಡಿರುವುದಕ್ಕಾಗಿ ಆತನಿಗೆ ಹೃದಯ ಪೂರ್ವಕವಾಗಿ ಅಭಾರಿಗಳಾಗಿದ್ದೇವೆ. ಪುನರಾಗಮಿಸಿರುವ ನಮ್ಮ ಕರ್ತನು ಆ ವಿವೇಕಿಯೂ ನಂಬಿಗಸ್ತನೂ ಆದ ಸೇವಕನ ಲೇಖನಿಯ ಮೂಲಕ ಪ್ರವಾಹ ದೋಪಾದಿಯಲ್ಲಿ ಸತ್ಯವನ್ನು ಬಿಡುಗಡೆ ಮಾಡಿದ್ದಾನೆ. ಯೇಸುವಿನ ಬಗ್ಗೆ ಪ್ರತ್ಯಕ್ಷವಾದ ತಿಳುವಳಿಕೆ ನಮಗೆ ಇಲ್ಲದಿದ್ದರೂ. ಆತನ ವಿಮೋಚನಾ ಕಾರ್ಯಗಳ ವಿಷಯವಾಗಿ ಆಳವಾದ ಪರಿಜ್ಞಾನವನ್ನು ಹೊಂದುವುದರ ಮೂಲಕ ನಮಗಾದ ನಷ್ಟವು ಹೆಚ್ಚಿನ ರೀತಿಯಲ್ಲಿ ಸರಿದೂಗಲ್ಪಟ್ಟಿದೆ. ಈ ಪರಿಜ್ಞಾನವು ಬಹು ನಂಬಿಗಸ್ತರಾಗಿ ಸೇವೆ ಮಾಡಿದ ಆದಿ ಕ್ರೈಸ್ತರ ತ್ಯಾಗಮಯ ಜೀವಿತದ ಶೈಲಿಯಲ್ಲಿ ನಡೆಸಲು ನಮ್ಮನ್ನು ಚೈತನ್ಯಗೊಳಿಸಬೇಕು.

ನಾವು ದೇವರ ಯೋಜನೆಯನ್ನು ಹೆಚ್ಚು ಕೂಲಂಕುಷವಾಗಿ ಅರಿಯಲು ಪ್ರಯತ್ನಿಸುವಾಗ ನಮಗೆ ತಿಳಿದುಬಂದದ್ದೇನೆಂದರೆ, ಯೇಸುವಿನ ಜೀವಿತದ ಅಧ್ಯಯನವು ಇಲ್ಲದೆ ದೇವರ ವಿಷಯದ ಅರ್ಥಪೂರ್ಣ ಪರಿಜ್ಞಾನ ಸಂಪೂರ್ಣವಾಗುವುದಿಲ್ಲವೆಂಬುದು. ಈ ಕಾರಣದಿಂದಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ಆತನ ಜೀವಿತದ ಪ್ರತಿಯೊಂದು ಸಂಗತಿಗಳ ಬಗ್ಗೆ ಆಮೂಲಾಗ್ರವಾಗಿ ಪರಿಚಿತರಾಗಿರುವುದು ಅವರಿಗೆ ವಿವೇಕಕರ. ಅಪೋಸ್ತಲನು ಸಭೆಗೆ ಬುದ್ಧಿಮಾತಾಗಿ ಹೇಳಿರುವುದು "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು." ನಮ್ಮ ಕರ್ತನ ವಿಷಯವಾಗಿ ಈ ವಿಧವಾದ ಪರಿಗಣನೆಗಿಂತ ನಮ್ಮ ಜೀವಿತಕ್ಕೆ ಇನ್ನೂ ಹೆಚ್ಚು ಘನವಾದ ಅಧ್ಯಯನ ಹಾಗೂ ಕಾರ್ಯರೂಪ ಮಾರ್ಗದರ್ಶಿಯು ಬೇರೊಂದಿಲ್ಲ. ನಾವು ಹೇಗೆ ಜೀವಿಸಬೇಕು, ಹೇಗೆ ಸೇವೆ ಮಾಡಬೇಕು, ಹೇಗೆ ದೇವರ ಹೋಲಿಕೆಯ ಗುಣಗಳನ್ನು ನಮ್ಮಲ್ಲಿ ವೃದ್ಧಿಗೊಳಿಸಬಹುದೆಂಬುದನ್ನು ಆತನು ನಮಗೆ ಬೋಧಿಸಿದ್ದಾನೆ.

ಮುಂದಿನ ಪುಟಗಳಲ್ಲಿ "ಸುವಾರ್ತೆಗಳಲ್ಲಿರುವ ಸಾಮರಸ್ಯ ವನ್ನು ನೀವು ನೋಡುವಿರಿ, ಅದು ನಾಲ್ಕು ಸುವಾರ್ತೆಗಳಲ್ಲಿರುವ ಕಾಲಾನುಕ್ರಮದ ವಿವರಗಳು. ಈ ಕ್ರಮವನ್ನೇ ಅನುಸರಿಸಿ ನಾವು ಇದಕ್ಕೆ ಹೊಂದಿಕೊಂಡಂತೆ ಲೇಖನವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಹೀಗೆ ಪ್ರಕಟಿಸಿರುವ ಈ ಲೇಖನಗಳನ್ನು ಪರಿಶೀಲಿಸುವಾಗ ಸತ್ಯವೇದದ ಪ್ರತಿಯೊಂದು ವಾಕ್ಯಭಾಗಗಳ ವಿಷಯವಾದ ಲೇಖನಗಳು ಇಲ್ಲದಿರುವುದನ್ನು ನೀವು ಗಮನಿಸಿ. ಆದಾಗ್ಯೂ ಈ ವಾಕ್ಯ ಭಾಗಗಳನ್ನು ದಾಟಿಹೋಗದಂತೆಯೂ, ಎಕ್ಸ್‌ಪಾಂಡೆಡ್ ಬಿಬ್ಲಿಕಲ್ ಕಾಮೆಂಟರಿ ಎಂಬ ಗ್ರಂಥವನ್ನಾಗಲಿ ಇಲ್ಲವೇ ಅಧಿಕ ಉಪಯುಕ್ತವಾದ ಗ್ರಂಥ ಮೂಲಗಳನ್ನು ಬಳಸಬೇಕೆಂಬುದಾಗಿಯೂ ಸಹೋದರರನ್ನು ನಾವು ಪ್ರೋತ್ಸಾಹಿಸುತ್ತೇವೆ. ಇದರ ಜೊತೆಯಲ್ಲಿ ಈ ಪುಸ್ತಕದೊಂದಿಗೆ ಒಂದು ಸೀಡಿ ಸೇರಿಸಿದ್ದೇವೆ. ಈ ಸೀಡಿಯಲ್ಲಿ "ಅಡೋಬ್ ಪೀಡಿಎಫ್ ಫೈಲ್" ಮತ್ತು "ಮೈಕ್ರೋಸಾಫ್ಟ್ ವರ್ಡ್ ಫೈಲ್‌ಗಳಿದ್ದು, ಇವುಗಳು ಈ ಪುಸ್ತಕದ ಎಲ್ಲಾ ಲೇಖನಗಳನ್ನು ಒಳಗೊಂಡಿರುತ್ತದೆ. ಲ್ಯಾಪ್‌ಟಾಪ್ ಕಂಪ್ಯೂಟರ್‌ನ್ನು ಬಳಸಲು ಇಚ್ಛಿಸುವವರಿಗೆ ಇದು ಸಹಾಯಕಾರಿ. ವೈಯಕ್ತಿಕ ಅಧ್ಯಯನಕ್ಕೆ ಒಂದು ಲೇಖನವನ್ನು ಸಹ ಪ್ರಿಂಟ್ ತೆಗೆದುಕೊಂಡು ಅದಕ್ಕೆ ಸಿದ್ಧತೆ ಮಾಡಿಕೊಳ್ಳಬಹುದು. ಯಾವ ವಿಧದಲ್ಲಿಯೂ ಈ ಸೀಡಿ ಉಪಯೋಗ ಮಾಡ ಬಯಸಿದರೂ ಅದು ಉಪಯುಕ್ತವಾಗಿ ಪರಿಣಮಿಸುವುದೆಂದು ನಮ್ಮ ನಿರೀಕ್ಷೆ.

ಕ್ರಿಸ್ತನಲ್ಲಿ ನಿಮ್ಮ ಸಹೋದರರು,

ಚಿಕಾಗೋ ಸತ್ಯವೇದ ವಿಧ್ಯಾರ್ಥಿಗಳು,
ಪುಸ್ತಕ ಮರುಪ್ರಕಾಶನ ಸಮಿತಿ – 2007

# ಅನುವಾದಕರ ನುಡಿ

ಕ್ರಿಸ್ತನ ಜೀವಿದ ವಿಷಯವಾಗಿ ಪಾಸ್ಟರ್ ರಸಲ್ಲರು ಬರೆದ ಲೇಖನಗಳನ್ನು ಸಂಗ್ರಹಿಸಿ 'ಲೈಫ್ ಆಫ್ ಕ್ರೈಸ್ಟ್' ಎಂಬ ಗ್ರಂಥವನ್ನು ಶಿಕಾಗೋ ಸತ್ಯವೇದ ವಿಧ್ಯಾರ್ಥಿಗಳ ಮರು–ಪ್ರಕಾಶನ ಸಮಿತಿಯು ಪ್ರಕಟಮಾಡಿದ್ದು ಅದನ್ನು ಸತ್ಯವೇದ ವಿಧ್ಯಾರ್ಥಿಗಳು ಎಲ್ಲೆಡೆ ಆಸಕ್ತಿಯಿಂದ ಅಧ್ಯಯನ ಮಾಡುತ್ತಿರುವುದು ಸಂತೋಷಕರವಾದ ವಿಷಯ. ಈ ಗ್ರಂಥವನ್ನು ಕನ್ನಡ ಭಾಷೆಗೆ ಅನುವಾದಿಸಿ ಅದನ್ನು ಕೇವಲ ಕನ್ನಡ ಮಾತ್ರ ತಿಳಿದಿರುವ ಸಹೋದರರಿಗೆ ಒದಗಿಸಿಕೊಡುವುದು ಬಹು ದಿನಗಳಿಂದ ಇದ್ದ ಬಯಕೆ. ಈ ಗ್ರಂಥವು ಸುಮಾರು 580 ಪುಟಗಳಷ್ಟಿದ್ದು ಅದರ ಪೂರ್ಣ ಅನುವಾದವು 2–3 ವರುಷಗಳು ತೆಗೆದುಕೊಳ್ಳುವ ಸಂಭವವಿರುವುದರಿಂದಲೂ ಹಾಗೂ ವರುಷವರುಷಕ್ಕೆ ಅನುವಾದಗೊಂಡ ಪಾಠಗಳನ್ನು ಸಹೋದರರ ಪ್ರಯೋಜನಾರ್ಥ ಭಾಗಭಾಗವಾಗಿ ಪ್ರಕಟಿಸುವುದು ಉಚಿತವೆಂದು ತೋರಿದ್ದರಿಂದಲೂ ಮೊದಲನೆಯ ಭಾಗವಾಗಿ ಈ ಗ್ರಂಥವನ್ನು ಪ್ರಕಟ ಮಾಡಲಾಗುತ್ತಿದೆ. ಹಾಗೂ ಈ ಗ್ರಂಥದ ಪಿ.ಡಿ.ಎಫ್. ರೂಪದ ಪ್ರತಿಯನ್ನು www.dawnbiblestudents.com ನಲ್ಲಿಯೂ ಸಹ ಪ್ರಕಟಿಸಲಾಗಿದೆ.

ಈ ಗ್ರಂಥದ ಮೂರನೇ ಭಾಗದ ಅನುವಾದ ಕಾರ್ಯಕ್ಕೆ ಎಲ್ಲಾ ವಿಧವಾದ ಅನುಕೂಲ ಆಶೀರ್ವಾದಗಳನ್ನು ನೀಡಿದ ಪರಲೋಕದ ನಮ್ಮ ತಂದೆ ದೇವರಾದ ಯೆಹೋವನಿಗೆ ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮೂಲಕ ಮೊದಲನೆಯದಾಗಿ ಸ್ತೋತ್ರವಾಗಲಿ. ಹಾಗೂ ಶ್ರಮವಹಿಸಿ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟ ಸಹೋದರರಾದ ನಂಜಪ್ಪನವರಿಗೂ ಹಾಗು ಇದರ ಮುದ್ರಣದ ಜವಾಬ್ದಾರಿ ಹೊತ್ತ ಡಾನ್ ಪ್ರಿಂಟಿಂಗ್ ಸರ್ವೀಸ್ ಸಂಸ್ಥೆಗೆ ಮತ್ತು ವಿಶೇಷವಾಗಿ ಇದಕ್ಕೆ ಬೇಕಾದ ಮುದ್ರಣ ಕಾಗದವನ್ನು ಒದಗಿಸಿದ ಶ್ರೀ ದಯಾಶಂಕರ್‌ರವರಿಗೂ ಹಾಗೂ ಪ್ರಕಾಶನಕ್ಕೆ ಬೇಕಾದ ಹಣ ಸಹಾಯ ಮಾಡಿದ ಶ್ರೀ ಜಗನ್ ರವರಿಗೂ, ಇದಕ್ಕೆ ಪ್ರಾರ್ಥನಾಪೂರ್ವಕವಾಗಿ ಪ್ರೋತ್ಸಾಹಿಸಿದವರೆಲ್ಲರಿಗೂ ಅನುವಾದಕರು ಬಹು ಅಭಾರಿ.

ಈ ಗ್ರಂಥವನ್ನು ಓದಿ ಅಧ್ಯಯನ ಮಾಡಿ ಇದರಲ್ಲಿರುವುದನ್ನು ಅಭ್ಯಾಸಿಸಿ ಕ್ರಿಸ್ತನ ವಿಷಯವಾಗಿ ಪೂರ್ಣವಾದ ತಿಳಿವಳಿಕೆಯನ್ನು ಹೊಂದಿ ಅನುದಿನವೂ ಆತನ ಸಾರೂಪ್ಯಕ್ಕೆ ಸಾಗುತ್ತಾ ಅಂತ್ಯದಲ್ಲಿ ಕ್ರಿಸ್ತನಲ್ಲಿರುವ ಜೀವಾಶೀರ್ವಾದಗಳಿಗೆ ಭಾಧ್ಯರಾಗಿ ಪರಲೋಕದ ತಮ್ಮ ತಂದೆ ದೇವರಿಗೆ ತಮ್ಮ ರಕ್ಷಕನ ಮೂಲಕವಾಗಿ ಮಹಿಮೆಯುಂಟಾಗುವ ಹಾಗೆ ನಡೆಯಲೆಂಬ ಪ್ರಾರ್ಥನೆಯೊಡನೆ ಇದನ್ನು ಪ್ರಕಾಶಗೊಳಿಸುತ್ತಿದ್ದೇವೆ.

ಕ್ರಿಸ್ತನ ಸೇವೆಯಲ್ಲಿ ತಮ್ಮ ಸಹೋದರ
**ಜಿ. ಜಯಪ್ರಸಾದ್**

# ವಿಷಯ ಸೂಚಿ


ಮುನ್ನುಡಿ ........ iii

ಅನುವಾದಕರ ನುಡಿ ........ iv

ವಿಷಯ ಸೂಚಿ ........ v

ಪಠ್ಯ ವಿಷಯ ಸೂಚಿ ........ vi & vii

## ಪತ್ರ್ಯ ವಿಷಯ ಸೂಚಿ


| ಕ್ರ.ಸಂ. | ಪಾಠ | ರಿಪ್ರಿಂಟ್ಸ್ ಪುಟ | ಪುಟ |
|---|---|---|---|
| 01 | ವಾಚ್ ಟವರ್ ಸಂಘದ ವೀಕ್ಷಣಾಭಿಪ್ರಾಯ | 748 | 01–06 |
| 02 | ಸಬ್ಬತ್ ದಿನದಲ್ಲಿ ನ್ಯಾಯಸಮ್ಮತವಾದದ್ದು | 5405 | 06-11 |
| 03 | ಆ ಕುರುಬನು, ಆ ಬಾಗಿಲು, ಆ ಕುರಿಹಿಂಡು | 4157 | 17-22 |
| 04 | ಒಳ್ಳೆಯ ಕುರುಬನೂ – ಕ್ರಿಸ್ತನೂ | 2441 | 22-25 |
| 05 | ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗುವದಕ್ಕು ಹೆಣಗಾಡಿರಿ | 1951 | 25-30 |
| 06 | ಆ ಮಹಾಬೋಧಕನ ಭೋಜನ ವೇಳೆಯ ಸಂಭಾಷಣೆಗಳು | 3831 | 31-35 |
| 07 | ರಾಜೌತಣವನ್ನು ನಿರಾಕರಿಸಿದ್ದು | 2701 | 35-40 |
| 08 | ಶಿಷ್ಯತನಕ್ಕೆ ತಗಲುವ ಕಷ್ಟನಷ್ಟಗಳು | 5425 | 40-45 |
| 09 | ಕಳೆದುಹೋದಂಥವರಿಗಾಗಿ ಇರುವ ದೇವರ ಚಿಂತನೆ | 2706 | 45-49 |
| 10 | ತಪ್ಪಿಹೋದ ಮಗನ ಹಿಂದಿರುಗುವಿಕೆ | 1459 | 49-55 |
| 11 | ಅನ್ಯಾಯಗಾರನಾದ ಮನೇವಾರ್ತೆಯವನು | 2715 | 55-59 |
| 12 | ಐಶ್ವರ್ಯವಂತನು ನರಕಕ್ಕೆ – ಬಡವನು ಪರಲೋಕಕ್ಕೆ | 5444 | 60-65 |
| 13 | ನಾವು ಪ್ರಯೋಜನವಿಲ್ಲದ ಆಳುಗಳು | 5445 | 65-73 |
| 14 | ನಾವು ಅವನನ್ನು ಎಬ್ಬಿಸುವುದಕ್ಕೆ ಹೋಗುತ್ತೇನೆ | 4160 | 74-77 |
| 15 | ಒಂಭತ್ತು ಮಂದಿ ಎಲ್ಲಿ? | 5453 | 77-82 |
| 16 | ಮೆಸ್ಸೀಯನ ರಾಜ್ಯವು ಅಗೋಚರವಾಗಲಿರುವದು | 5455 | 82-90 |
| 17 | ದೀನಭಾವದಿಂದ ಎಡೆಬಿಡದೆ ಪ್ರಾರ್ಥಿಸಿರಿ | 3841 | 90-93 |
| 18 | ಒಂಟೆ ಮತ್ತು ಸೂಜೀ ಕಣ್ಣು | 4658 | 93-100 |
| 19 | ದ್ರಾಕ್ಷೇತೋಟದ ಕೆಲಸಗಾರರು | 5473 | 100-101 |
| 20 | ಹೆಚ್ಚಿನವನಾದ ಆ ಸೇವಕನು | 4668 | 106-114 |
| 21 | ಸುಗಂಧತೈಲವು ಬಹು ಅಮೂಲ್ಯ | 3534 | 117-119 |
| 22 | ನಮ್ಮ ಕರ್ತನ ಮಾದರೀ ಗೆಲುವು | 1794 | 120-126 |
| 23 | ಆಕರ್ಷಣಾಕಾರನಾದ ಕ್ರಿಸ್ತನು – ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು | 2757 | 129-131 |
| 24 | ಉತ್ತಮಪಡಿಸಿಕೊಳ್ಳಲಾಗದ ಅವಕಾಶಗಳು ತೆಗೆದುಹಾಕಲ್ಪಡುವದು | 4678 | 131-135 |
| 25 | ಮದುವೆಯ ಔತಣ | 5510 | 137-140 |
| 26 | ಮೂರು ಪ್ರಚೋದನಾಕಾರಿ ಪ್ರಶ್ನೆಗಳು | 4686 | 142-145 |
| 27 | ವಿಶೇಷ ಆಜ್ಞೆಗಳು | 5521 | 150-156 |
| 28 | ಬುದ್ಧಿವಂತೆಯರಾದ ಹಾಗು ಬುದ್ಧಿಯಿಲ್ಲದ ಕನ್ಯೆಯರು | 3867 | 156-162 |
| 29 | ಅವನವನ ಸಾಮರ್ಥ್ಯದ ಪ್ರಕಾರ (ಹಂಚಿಕೊಡಲಾಗುವದು) | 2764 | 162-167 |
| 30 | ಆಡುಕುರಿಗಳ ಸಾಮ್ಯ | 2606 | 170-175 |
| 31 | ಕಡೇ ರಾತ್ರಿ ಭೋಜನ | 3363 | 176-179 |
| 32 | ಆತ್ಮವಿಶ್ವಾಸ ಒಂದು ಬಲಹೀನತೆ | 4711 | 183-187 |
| 33 | ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ | 2453 | 187-191 |
| 34 | ಆತನು ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವಕ್ಕೆ ಕೊಡುವನು | 2455 | 191-200 |
| 35 | ನಿಜವಾದ ದ್ರಾಕ್ಷೇಬಳ್ಳಿ ಅದರ ಫಲಗಳು | 3544 | 200-207 |
| 36 | ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮ | 4164 | 208-215 |

## ಪ ಠ್ಯ ವಿ ಷ ಯ ಸೂ ಚಿ


| ಕ್ರ.ಸಂ. | ಪಾಠ | ರಿಪ್ರಿಂಟ್ಸ್ ಪುಟ | ಪುಟ |
|---|---|---|---|
| 37 | ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ | 3551 | 216-218 |
| 38 | ಕರ್ತನ ಗುಣದ ಹೋಲಿಕೆ | 5358 | 220-227 |
| 39 | ಕರ್ತನಿಗಾದ ವಿಶ್ವಾಸದ್ರೋಹ | 2467 | 229-233 |
| 40 | ಶ್ರೇಷ್ಠ ಮಹಾಯಾಜಕನು ನಿಂದಿಸಲ್ಪಟ್ಟದ್ದು | 2469 | 234-237 |
| 41 | ಒಬ್ಬ ಅಪನಂಬಿಗಸ್ತ ಖಜಾಂಚಿಯ ಪತನ | 5552 | 240-246 |
| 42 | ಪಿಲಾತನ ಮುಂದೆ "ಒಳ್ಳೆಯ ಅರಿಕೆ" | 2470 | 246-247 |
| 43 | ಪಿಲಾತನ ಎದುರಿನಲ್ಲಿ ಯೇಸು | 1809 | 251-253 |
| 44 | ಕ್ರಿಸ್ತನು ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು | 1815 | 256-266 |
| 45 | ಯೇಸುವಿನ ಪುನರುತ್ಥಾನದ ಮಹತ್ವ | 3374 | 268-272 |
| 46 | ನಮ್ಮ ಕರ್ತನ ದಿವಾರೋಹಣ | 1415 | 273-275 |

# ವಾಚ್ ಟವರ್ ಸಂಘದ ವೀಕ್ಷಣಾಭಿಪ್ರಾಯ

**ರೀಪ್ರಿಂಟ್ಸ್ ಪುಟ 748**

## ಲೂಕ 12:56

**"ಭೂಮ್ಯಾಕಾಶಗಳ ಭಾವವನ್ನು ಶೋಧಿಸುವದಕ್ಕೆ ನಿಮಗೆ ಗೊತ್ತಿರುವಲ್ಲಿ ಈ ಸಮಯವನ್ನು ಶೋಧಿಸುವದಕ್ಕೆ ನಿಮಗೆ ಯಾಕೆ ಗೊತ್ತಿಲ್ಲ?"**

ಹದಿನೆಂಟು ಶತಮಾನಗಳಿಗೂ ಸ್ವಲ್ಪ ಹಿಂದಿನ ಸಮಯಕ್ಕೆ ಕಣ್ಣು ಹಾಯಿಸಿ. ಅಲ್ಲಿ ಯೇಸುವು ಹನ್ನೆರಡು ಅಪೋಸ್ತಲರ ಜೊತೆಯಲ್ಲಿ ನಿಂತಿರುತ್ತಾನೆ; ಅವರಲ್ಲಿ ಹೆಚ್ಚುಭಾಗ ಯೌವನಸ್ಥರು, ಗುರುವು ತಾನೆ ಮೂವತ್ತು ವರುಷಗಳಿಗಿಂತಲೂ ಸ್ವಲ್ಪ ಹೆಚ್ಚಿನವನು. ಅವರು ಎಂದೂ ವಿದ್ಯೆ ಕಲಿತವರಲ್ಲ, ಅಲ್ಲದೆ ಅವರಲ್ಲಿ ಹೆಚ್ಚುಭಾಗದವರು ಸಾಮಾನ್ಯ ಬೆಸ್ತರು. ಆದರೆ "ಶಾಸ್ತ್ರಾಭ್ಯಾಸ ಮಾಡದ ಸಾಧಾರಣದವರಾದರೂ" (ಅ.ಕೃ. 4:13) ಆ ಶಿಷ್ಯರು ಭರವಸ ಹೊಂದಿದವರೂ ಮತ್ತು ಬೋಧಿಸ ಶಕ್ತರೂ ಆಗಿದ್ದು, ಇವು ಅವರನ್ನು ವಿಶಿಷ್ಠ ವ್ಯಕ್ತಿಗಳೆಂದು ಜನರಲ್ಲಿ ಗುರುತು ಮಾಡಿಕೊಟ್ಟಿತ್ತು; ಹಾಗು ಅವರು ಎಲ್ಲಿಗೆ ಹೋಗಿದ್ದರೂ "ಇವರು ಯೇಸುವಿನ ಸಂಗಡ ಇದ್ದವರೆಂದು" ಗುರುತು ಹಿಡಿಯಲ್ಪಡುತ್ತಿದ್ದರು, ಯಾಕಂದರೆ ಅವರ ಗುರುವು "ಎಂದೂ ಶಾಸ್ತ್ರಾಭ್ಯಾಸ" ಇಲ್ಲದವನಾದರೂ ಧರ್ಮಶಾಸ್ತ್ರದಲ್ಲಿ ಪಾರಾಂಗತನಾಗಿದ್ದು ಅಕ್ಷರಾಭ್ಯಾಸವಿದ್ದವನಾಗಿದ್ದನು. ಯೋಹಾನ 7:15.

ಆದರೆ ಏನೇ ಇದ್ದರೂ ಸೇನಾಪತಿಯಾದ ಪಿಲಾತನ, ಆ ದಿನದಲ್ಲಿನ ಧರ್ಮವಿಧಿಯಾನುಸಾರದ ಪರಿಶುದ್ಧತೆಯ ಪ್ರಚಾರಕರಾಗಿದ್ದ ಮಹಾಯಾಜಕರ ಹಾಗು ಧರ್ಮಶಾಸ್ತ್ರ ಪಂಡಿತರಾದ ಶಾಸ್ತ್ರಿಗಳ ಮತ್ತು ಫರಿಸಾಯರ ದೃಷ್ಟಿಯಲ್ಲಿ ಅದು ಮಹತ್ವವಿಲ್ಲದ ಒಂದು ಚಿಕ್ಕ (ವ್ಯವಸ್ಥಿತ) ಗುಂಪಾಗಿತ್ತು. ಯೇಸುವನ್ನು ಯೆಹೂದ್ಯರ ಅರಸನೆಂದು ಪ್ರಕಟಿಸುವದಕ್ಕೆ ಆಯಲ್ಪಟ್ಟ ವರ್ಗವಾಗಿದ್ದು, ಅವರು ಹೀಗೆ ಹೇಳಬೇಕಿತ್ತು: "ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು." (ಮಾರ್ಕ 1:15) ಅವರು ಮನಸ್ಸನ್ನು ಆವರಿಸಿಕೊಂಡವರಾಗಿರಲಿಲ್ಲ ಮತ್ತು ಮತಾಭಿಮಾನಿ ಯೆಹೂಧ್ಯರಿಗೆ ತಮ್ಮ ಬಹುಕಾಲ ನಿರೀಕ್ಷಿತನಾಗಿದ್ದ ಮೆಸ್ಸೀಯನನ್ನು ಎದುರು ನೋಡುತ್ತಿದ್ದಾಗ ಇದು ಬಹು ಅನಿರೀಕ್ಷಿತವಾಗಿದ್ದು ಅವರ ಶ್ರೇಷ್ಠ ದಾರ್ಮಿಕಬೋಧನೆಗೆ ಎಷ್ಟು ಅಸಮಂಜಸವಾಗಿತ್ತೆಂದರೆ ಅವರು ಯೇಸುವನ್ನು ಅಂಥವನೆಂದು ಗುರುತುಹಿಡಿಯಲು ವಿಫಲರಾಗಿದ್ದರು.

ಕೇವಲ ಕರ್ತನ ಪ್ರವಾದಿಗಳು ಬಹು ಹಿಂದೆ ಮುಂತಿಳಿಸಿರುವ ಯೇಸುವಿನ ಅದ್ಭುತಗಳು ಮತ್ತು ಬೋಧನೆಗಳು ಮತ್ತು ಇವುಗಳಿಗೆ ಸರಿಹೊಂದುವ ಮೆಸ್ಸೀಯನ ಕುರಿತಾದ ಭವಿಷ್ಯ ನುಡಿಗಳು ಮಾತ್ರ ಯೇಸುವು ಬಹು ಕಾಲದಿಂದ ನಿರೀಕ್ಷಿತನಾಗಿದ್ದ ಅರಸನೆಂಬುದಕ್ಕೆ ಇಸ್ರಾಯೇಲ್ಯರಿಗೆ ಇದ್ದ ಸಾಕ್ಷ್ಯಾಧಾರಗಳಾಗಿದ್ದವು. ಇದು ಕೇವಲ "ಮತ್ತೂ ದೃಢವಾದ ಪ್ರವಾದನಾ ವಾಕ್ಯಗಳಿಗೆ" ಜಾಗರೂಕತೆಯಿಂದ ಲಕ್ಷ್ಯಕೊಡುವಂಥವರಿಗೆ ಮಾತ್ರ ಏನನ್ನು ನಿರೀಕ್ಷಿಸಬೇಕೆಂಬದು ತಿಳಿದಿತ್ತು ಮತ್ತು ಯಾರು ದೀನ ಮನಸ್ಸಿನಿಂದ ಯೇಸುವು ತಿರಸ್ಕಾರ ಹೊಂದುವುದರ ಮತ್ತು ಶಿಲುಬೆಗೆ ಹಾಕಲ್ಪಡುವದರ ಕುರಿತಾಗಿ ಮುಂತಿಳಿಸಿರುವ ಪ್ರವಾದನೆಯ ನುಡಿಗಳನ್ನು ಗಮನಿಸಲು ಸಿದ್ಧರಿರುವದು ಮಾತ್ರವಲ್ಲದೆ ದೀನರಾದ ಬೆಸ್ತರ ಬೆಂಗಾವಲಿನಲ್ಲಿ ದೀನನಾಗಿ ಬಂದಿದ್ದಾತನನ್ನು ಅಂಗೀಕರಿಸುವವರಿಗೆ ಮಾತ್ರ ಇದು ಸಾಕ್ಷ್ಯಾಧಾರವಾಗಿರಲು ಸಾಧ್ಯವಿತ್ತು.

ಯೇಸುವಿಗೆ ದೀಕ್ಷಾಸ್ನಾನ ನೀಡಿದ ಮತ್ತು ದೇವರಿಂದ ಆತನಿಗಾದ ಪವಿತ್ರಾತ್ಮನ ಅಭಿಷೇಕವನ್ನು ಕಂಡು ಅದಕ್ಕೆ ಸಾಕ್ಷಿಯಾಗಿದ್ದ ಆತನ ದಾಯಾದಿಯಾದ ಸ್ನಾನಿಕನಾದ ಯೋಹಾನನೂ ಸಹ ಅಲ್ಲಿ ನಡೆಯುತಿದ್ದ ಅಸಾಧಾರಣವಾದ ಸಂಗತಿಗಳ ಬಗ್ಗೆ ವಿಪರೀತವಾದ ಗೊಂದಲಕ್ಕೀಡಾಗಿದ್ದನು. ತಾನು ಅಭಿಷೇಕಿಸಲ್ಪಟ್ಟಾಗ ಯೇಸುವು ಬಲ ಮತ್ತು ಅಧಿಕಾರದಿಂದ ತನ್ನ ವಿಷಯವನ್ನು ಬಹಿರಂಗವಾಗಿ ಪ್ರಕಟಮಾಡಿಕೊಳ್ಳುವನೆಂದೂ ಮತ್ತು ತನ್ನ ಜೊತೆಗೂಡಿದವರೆಲ್ಲರಿಗೆ ಘನತೆ ಗೌರವಗಳನ್ನು ತಂದುಕೊಡುವನೆಂದೂ ಬಹುಶಃ ಆತನು ಭಾವಿಸಿದ್ದನು; ಆದರೆ ಇದಕ್ಕೆ ಬದಲಾಗಿ ಆತನು (ಯೋಹಾನನು) ಸೆರೆಯಲ್ಲಿ ಹಾಕಲ್ಪಟ್ಟಾಗ ಯೇಸುವು ಶಾಂತ ಸ್ವಭಾವವುಳ್ಳವನಾಗಿ ಒಬ್ಬ (ಅರಸನಾಗಿ) ಆಳುವವನಂತೆ ಯಾವ ಗುರುತರವಾದ ಅಧಿಕಾರವನ್ನೂ ಬಳಸಲು ಯತ್ನಿಸಿರಲಿಲ್ಲ. ಸಂಗತಿಗಳು ತಾನು ನಿರೀಕ್ಷಿಸಿದ್ದುದಕ್ಕಿಂತಲೂ ಬಹು ಭಿನ್ನ ರೀತಿಯಲ್ಲಿ ಮುಂದುವರಿಯುತ್ತಿದ್ದು ಯೇಸುವು ಮೆಸ್ಸೀಯನೆಂದು ನಂಬಿದ್ದ ಯೋಹಾನನ ನಂಬಿಕೆಯೂ ಸಹ ವಿಫಲವಾಗುವದಕ್ಕೆ ತೊಡಗಿ ಯೇಸುವಿಗೆ, "ಬರಬೇಕಾದವನು ನೀನೋ, [ಅಥವಾ ನನ್ನಂತೆಯೇ ನೀನೂ ಸಹ ಕೇವಲ ಮುಂದೂತನೋ ಅಲ್ಲದೆ, ಮೆಸ್ಸೀಯನಾಗಿ ಇಸ್ರಾಯೇಲ್ಯರನ್ನು ದಾಸತ್ವದಿಂದ ಬಿಡಿಸಿ ಅವರನ್ನು ಆಶೀರ್ವದಿಸಿ ಅವರ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವನಾಗುವದಕ್ಕಾಗಿ] ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ?" ಎಂದು ಆತನು ಸಂದೇಶ ರವಾನಿಸಿದ್ದನು.

ಯೇಸುವು ಯೋಹಾನನಿಗೆ ಕೊಟ್ಟ ಉತ್ತರವನ್ನು ಗಮನವಿಟ್ಟು ಗುರುತುಮಾಡಿಕೊಳ್ಳಿ; ಆತನು ಸಾರಾಂಶವಾಗಿ ಈ ಲೇಖನದ ಶಿರಸ್ಸಿನಲ್ಲಿರುವ ಸತ್ಯವೇದವಾಕ್ಯದ ಪ್ರಕಾರ ಸಂಭವಿಸುತ್ತಿದ್ದ ಘಟನೆಗಳನ್ನು ಅವನು ಜ್ಞಾಪಿಸಿಕೊಳ್ಳುವಂತೆ ಮಾಡಿ, ಈ ಘಟನೆಗಳ ಮೂಲಕವಾಗಿ ಯೋಹಾನನು ಆ ಕಾಲದ

ವಿಷಯವಾಗಿ ಗ್ರಹಿಸಶಕ್ತನಾಗುವಂತೆ ಅಪೇಕ್ಷಿಸಿದ್ದನು. ಆತನು ಹೇಳಿದ್ದು: "ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತದೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತದೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ; ನೀವು ಹೋಗಿ ಕಂಡು ಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ." ಮತ್ತಾಯ 11:3–6

ಅಲ್ಲಿ ಸಂಭವಿಸುತ್ತಿದ್ದ ಘಟನೆಗಳಲ್ಲಿ ಆಗ ಉಪಸ್ಥಿತನಾಗಿರು–ವವನು ಯಾರೆಂಬುದಕ್ಕೆ ಸಾಕ್ಷಿಪುರಾವೆಗಳಿತ್ತು; ಆತನು ವಾಗ್ದತ್ತನಾದ ಮೆಸ್ಸೀಯನಿಗೆ ಕಡಿಮೆಯೇನಿರಲಿಲ್ಲ. ಆದರೆ ಯೇಸುವಿನ ಅದ್ಭುತಕಾರ್ಯಗಳು ಒಂದು ಮಟ್ಟದಲ್ಲಿ ಗುಪ್ತವಾಗಿ ನೆರವೇರಲ್ಪಡುತ್ತಿದ್ದುದು ಮಾತ್ರವಲ್ಲದೆ ಅವುಗಳು ದೇಶದ ಉದ್ದಕ್ಕೂ ಹರಡಿರುವ ವಿಶಾಲ ಭಾಗಗಳಲ್ಲಿ ಮಾಡಲ್ಪಟ್ಟದ್ದರಿಂದ ಯೆಹೂದ್ಯರಲ್ಲಿ ಬಹುಪಾಲು ಜನರು ಗುಣಹೊಂದಿದ ಒಬ್ಬ ವ್ಯಕ್ತಿಯನ್ನಾದರೂ ಎಂದೂ ನೋಡಿರುವ ಸಂಭವವಿರಲಿಲ್ಲ. ಇಲ್ಲವೇ ಅವರು (ಸುದ್ದಿ ಪ್ರಕಟಿಸುವ) ಮುದ್ರಣಾಲಯಗಳನ್ನು ಮತ್ತು ಅದ್ಭುತಕಾರ್ಯಗಳ ವಿವರಗಳನ್ನು ವರದಿಮಾಡಿ ಪ್ರಚಾರಮಾಡುವ ವಾರ್ತಾವರದಿಗಾರರನ್ನೂ ಹೊಂದಿರಲಿಲ್ಲ.

ಶಾಸ್ತ್ರಾಭ್ಯಾಸ ಮಾಡಿದವರಿಗೆ ಆಲ್ಲಿ ದಾನಿಯೇಲನ ಪ್ರವಾದನೆಗಳ ಮೂಲಕವಾಗಿ ಕಾಲವು ಪರಿಪೂರ್ಣವಾಗಿರುವ ದನ್ನು ತಿಳಿದಿರಬಹುದಾಗಿತ್ತು. (ದಾನಿಯೇಲ 9:24–27; ಮಾರ್ಕ 1:15) ಆದರೆ ಜನಸಾಮಾನ್ಯರಿಗೆ ಈ ಸಾಕ್ಷಿಪುರಾವೆಗಳು ಕೇವಲ ಕಾಲಗಳ ಸೂಚನೆ ಮಾತ್ರವಾಗಿತ್ತು; ಆದರೆ ಇವರು ಮನುಷ್ಯ ಸಂಪ್ರದಾಯಗಳಿಂದ ಕುರುಡರಾಗಿದ್ದ ಕಾರಣ ಇದು ಅವರಿಗೆ ಮನವರಿಕೆಯಾಗಿರಲಿಲ್ಲ. ಮನುಷ್ಯರನ್ನು ಅನುಸರಿಸುವದರ ಫಲವಾಗಿ ದೇವರ ವಾಕ್ಯಗಳು ಅವರಲ್ಲಿ ಪರಿಣಾಮ ಬೀರಿರಲಿಲ್ಲ; ಹೀಗಾಗಿ ಜನರು ಸಹಿತವಾಗಿ ನಾಯಕರುಗಳೂ ಕುರುಡರಾಗಿ ದ್ದರು. ಒಬ್ಬ ಕುರುಡನು ಇನ್ನೊಬ್ಬ ಕುರುಡನನ್ನು ಹಿಂಬಾಲಿಸಿದ್ದು, ಇಬ್ಬರೂ ಮುಗ್ಗರಿಸಿದ್ದರು. ಹೀಗೆ ಇಸ್ರಾಯೇಲ್ಯರು ಜನಾಂಗವಾಗಿ ಆಶೀರ್ವಾದವನ್ನು ಹೊಂದಲಿಲ್ಲ ಆದರೆ ಅದು ಆದುಕೊಂಡ–ವರಿಗೆ ಮಾತ್ರ ದೊರೆಯಲ್ಪಟ್ಟದ್ದಾಗಿತ್ತು. ಅವರು ಆಯಲ್ಪಟ್ಟ ವರ್ಗದವರಾಗಿ "ನಿಜವಾದ ಇಸ್ರಾಯೇಲ್ಯರಾಗಿದ್ದರು."

ಅಲ್ಲದೆ ನಾವು ಈಗ ನೋಡುತ್ತಿದ್ದೇವಾದರೂ ಏನನ್ನು? ಮೆಸ್ಸೀಯನು ಪುನಃ ಉಪಸ್ಥಿತನಾಗಿರುವನು; ಆತನ ಎರಡನೆಯ ಬರುವಿಕೆಗೆ ಕಾಲವು ಪರಿಪಕ್ವವಾಗಿರುವದು; ಯೇಸುವು ಒಬ್ಬ ಆತ್ಮೀಕ ಜೀವಿಯಾಗಿ ಅಧಿಕಾರ ಪಡೆದವನಾಗಿ ತನ್ನ "ದೇಹವನ್ನು" (ಅಂದರೆ ಸಭೆಯನ್ನು) ಅತ್ಯುನ್ನತ ಪದವಿಗೆ ಅಂದರೆ ಸ್ವತಃ ತನ್ನ ಸ್ಥಿತಿಗೆ ಎತ್ತಲಿರುವನು ಮತ್ತು ಲೋಕವನ್ನು ಅಂದರೆ ಯಾಕೋಬನ ಮನೆತನವನ್ನು ಮತ್ತು ಭೂಲೋಕದ ಎಲ್ಲಾ ಕುಲಗಳಿಗೆ ನ್ಯಾಯವಿಚಾರಣೆಮಾಡಿ ಅವರನ್ನು ಶುದ್ಧೀಕರಿಸಿ ಸ್ವಸ್ಥತೆಗೆ ತಂದು ಆಶೀರ್ವದಿಸಲಿರುವನು.

ಇದಕ್ಕೆ ಸಾಕ್ಷಿಪುರಾವೆಗಳೇನು? ಅವುಗಳನ್ನು ಪದೇಪದೇ ಈ ಅಂಕಣಗಳಲ್ಲಿ ಒದಗಿಸಲಾಗುತ್ತಿರುವದು, ಅಲ್ಲದೆ ಅವುಗಳು ನಿರಂತರವಾಗಿ ಅಧಿಕಗೊಳ್ಳುತ್ತಿರುವದು. ಕರ್ತನ ದಿನವು [ಕ್ರಿಸ್ತನ ಪ್ರತ್ಯಕ್ಷತೆಯ ಕಾಲ] ಒಂದು ಸಂಕಷ್ಟದ ದಿನವೆಂದು ಪ್ರವಾದಿಗಳು ನೀಡಿರುವ ಸಾಕ್ಷಿಗಳೆಂಬುದನ್ನೂ; ಇದರಲ್ಲಿ ಆಕಾಶದ ಶಕ್ತಿಗಳು ಕದಲುತ್ತಿರುವದೆಂಬುದನ್ನೂ [ಅಂದರೆ ಪ್ರಪಂಚದ ಸರ್ಕಾರಗಳು ಮತ್ತು ಅಧಿಕಾರಸ್ಥರನ್ನು ತೆಗೆದುಹಾಕಲ್ಪಡುತ್ತಿರುವುದನ್ನು – ಮತ್ತಾಯ 24:29; ಇಬ್ರೀಯ 12:27,28; ದಾನಿಯೇಲ 2:44] ನಾವು ತೋರಿಸಿಕೊಟ್ಟಿರುವೆವು. ಅಲ್ಲಿ ಅದು ಪೂರ್ಣವಾಗಿ ಕಾರ್ಯನಿರ್ವಹಿಸುವಾಗ, ಆತನು (ಸಮಸ್ತವನ್ನು) ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿರುವವನಾಗಿಯೂ ಮತ್ತು ಭೂಲೋಕದ ಎಲ್ಲಾ ಕುಲಗಳನ್ನು ಅಂದರೆ ಜನರೆಲ್ಲರನ್ನು ಆಶೀರ್ವದಿಸಲು ಬರುತ್ತಿರುವವನಾಗಿಯೂ, ಇದಕ್ಕೆ ಅಡ್ಡಿಗೊಳಿಸಿ ಜನರನ್ನು ಕಟ್ಟಿಹಾಕಿ ದಮನಮಾಡಿ ಅವರನ್ನು ಕುರುಡಾಗಿಸಿರುವ ಎಲ್ಲಾ ದುಷ್ಟ ಪದ್ದತಿಗಳನ್ನು ಕದಲಿಸಿ ಚೂರುಚೂರು ಮಾಡುವವ–ನಾಗಿಯೂ ಇರುವ ಕಾರಣ ಭೂಲೋಕದ ಕುಲಗಳೆಲ್ಲರೂ ಪ್ರಲಾಪಿಸುವರು. ಆಗ ಪ್ರಧಾನರುಗಳು ಲೋಕದ ಮೇಲೆ ಬರುತ್ತಿರುವ ಆ ಸಂಗತಿಗಳನ್ನು ನೋಡುವಾಗ ಭಯಪಡುವರು. ಅವರು ಈಗಾಗಲೇ ಈ ಸ್ಥಿತಿಯಲ್ಲಿರುವರು. ಸ್ವಾತಂತ್ರ್ಯಭಾವವು ಸಾಧಾರಣಜನರಲ್ಲಿ ಕಾರ್ಯವೆಸಗುತ್ತಿರುವದನ್ನು ಅವರು ನೋಡುತ್ತಲಿರುವರು ಹಾಗೂ ಅದು ಶೀಘ್ರವಾಗಿ ಅವರನ್ನು ಹುಚ್ಚುತನಕ್ಕೆ ನಡೆಸಿ ರಕ್ತಪಾತದ ಹೋರಾಟಕ್ಕೆ ಕೊಂಡುತರುವ–ದೆಂಬುದನ್ನು ಇವರು ವಾಸ್ತವದಲ್ಲಿ ನೋಡುತ್ತಿರುವರು. ಮತ್ತೆ, ಈ ಲೋಕದ ಐಶ್ವರ್ಯವಂತರು ಬರುತ್ತಿರುವ ಕಷ್ಟಗಳಲ್ಲಿ ಬಹುವಾಗಿ ಸಂಕಟಪಡುವರೆಂದು ಸತ್ಯವೇದವು ಗಮನಿಸಿ ಹೇಳಿರುವದು (ಯಾಕೋಬ 5:1–4); ಮತ್ತು ಅದು ಹೀಗೆಯೇ ಇರುವದು; ಈದಿನಗಳಲ್ಲಿ ಅತೃಪ್ತರ ಗುರಿ ಮತ್ತು ಬೆದರಿಸುವಿಕೆಗಳು ಸ್ಥಿತಿವಂತರ ವಿರೋಧವಾಗಿರುವದು. ಈ ಸಂಗತಿಗಳು ನಮ್ಮ ಸುತ್ತಲೂ ಇರುವುದನ್ನು ನಾವು ನೋಡುತ್ತಲಿದ್ದೇವೆ; ನಾವು ಜೀವಿಸುತ್ತಿರುವ ಕಾಲಗಳ ಸೂಚನೆಗಳಲ್ಲವೇ ಇವುಗಳು?

ಮತ್ತೆ ದೃಷ್ಟಿಸಿ ನೋಡಿ; ಯೆಹೂದ್ಯರು ವಾಗ್ದತ್ತ ದೇಶದಲ್ಲಿ ಪುನಃ ನೆಲೆಯನ್ನು ಕಂಡುಕೊಳ್ಳುತ್ತಿರುವರೆಂಬುದನ್ನು ನೋಡಿ; ಈವರೆಗೂ ಅವರು ಅಲ್ಲಿಂದ ಗಡಿಪಾರು ಮಾಡಲ್ಪಟ್ಟಿದ್ದರು. ಆತನ (ಯೆಹೂದ್ಯನ) ಕುರುಡುತನವು ತೆಗೆದುಹಾಕಲ್ಪಡುತ್ತಿದ್ದು ತಾವು ಇರಿದವನ ಗುರುತು ಹಿಡಿಯಲಾರಂಭಿಸಿ ಅದಕ್ಕಾಗಿ ರೋಧಿಸುತ್ತಿರುವರೆಂಬುದನ್ನು ಮತ್ತೂ ಗಮನಿಸಿ. (ಜೆಕರ್ಯ 12:10) ಅಪೋಸ್ತಲನಾದ ಯಾಕೋಬನ ಹೇಳಿಕೆಯ ಕಡೆಗೆ ಈಗ ತಿರುಗಿಕೊಂಡು, ಆತನ ಹೆಸರಿಗಾಗಿ ಒಂದು ಜನವನ್ನು ಅಂದರೆ ಅನ್ಯಜನರೊಳಗಿಂದ ಮದಲಗಿತ್ತಿಯನ್ನು ಆದುಕೊಂಡ ನಂತರ ದಲ್ಲಿ ಇಸ್ರಾಯೇಲ್ಯರ ಪುನಃ ನಿರ್ಮಾಣಕ್ಕೆ ನಿಶ್ಚಿತವಾದ ಕಾಲವು ಬರುವದೆಂಬುದನ್ನೂ ಸಹ ಗಮನಿಸಿ. (ಅ.ಕೃ. 15:16–17) ಪೌಲನ ಕಡೆಗೆ ತಿರುಗಿಕೊಂಡು ಆತನ ಹೇಳಿಕೆಯನ್ನು ಅಂದರೆ ಅನ್ಯಜನಗಳ ಸಮಯವು ಪೂರ್ಣಗೊಂಡಾಗ (ಕ್ರಿಸ್ತನ ಮದಲಗಿತ್ತಿ ಅಂದರೆ ಅನ್ಯಜನರಿಂದ ಕ್ರಿಸ್ತನೊಡನೆ ಸಹಬಾಧ್ಯರಾಗಿ ಆಯಲ್ಪಡು–ವವರ ಸಂಖ್ಯೆಯು ಪೂರ್ಣಗೊಂಡಾಗ) ಯಾಕೋಬನಲ್ಲಿರುವ ಅಂದರೆ ಶರೀರ ಸಂಬಂಧವಾಗಿ ಇಸ್ರಾಯೇಲ್ಯರಾಗಿರುವವರ (ಮೊಂಡತನವೆಂಬ) ಕುರುಡುತನವು ನಿವಾರಣೆಯಾಗಲು

ಆರಂಭಗೊಳ್ಳುವದೆಂಬುದನ್ನು ಗಮನಿಸಿ. ರೋಮಾ 11:25–32. ಯೆಹೂದ್ಯರಲ್ಲಿ ಒಬ್ಬ ಬೋಧಕನನ್ನು ದೇವರು ಎಬ್ಬಿಸುತ್ತಿ–ದ್ದಾನೆಂಬಂತೆ ಕಾಣುವವನಿಂದ ಬಂದ ಒಂದು ಪತ್ರವು ಇನ್ನೊಂದು ಅಂಕಣದಲ್ಲಿ ಕಂಡುಬರುವದು ಮತ್ತು ಅದರಲ್ಲಿ ಪುನರುದ್ಧಾರ ವಿಷಯದ ಲಕ್ಷಣಗಳು ಒಳಗೊಂಡಿರುವದರಿಂದ ಅದು ಒಂದು ಗಾಢವಾದ ಆಸಕ್ತಿಯುಳ್ಳದ್ದಾಗಿರುವದು. ಕ್ರೈಸ್ತರ ಯುಗದ ಸುಗ್ಗಿಕಾಲದಲ್ಲಿ ನಾವು ಜೀವಿಸುತ್ತಿರುವೆವೆಂಬುದಕ್ಕೆ ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲವು ಉದಯ–ವಾಗುತ್ತಿರುವದೆಂಬುದಕ್ಕೆ; "ಆತನ (ಕ್ರಿಸ್ತನ) ದೇಹವಾದ ಸಭೆಯ" ಆದುಕೊಳ್ಳುವಿಕೆ ಹಾಗು ಅದರ ಪರೀಕ್ಷೆಯು ಪೂರ್ಣವಾಗುವ–ದರಲ್ಲಿದೆ ಎಂಬುದಕ್ಕೆ ಪ್ರವಾದಿಗಳು ಈಗಾಗಲೇ ನಮಗೆ ತೋರಿಸಿರುವ ಕಾಲಸಮಯಗಳಿಗೆ ಇವು ಒಂದು ಸಾಕ್ಷಿಪ್ರಮಾಣ–ವಾಗದೆ ಇದ್ದಲ್ಲಿ; ಇದು ಏನು? ಬಿಡುಗಡೆ ಮಾಡುವವನು (ಶಿರಸ್ಸು ಮತ್ತು ದೇಹ) ಬಂದಿರುವನೆಂದು ಮತ್ತು ಇಸ್ರಾಯೇಲ್ಯರಿಗೆ ಉಂಟಾಗುತ್ತಿರುವ ಆಶೀರ್ವಾದವು ಎಲ್ಲಾ ಜನಾಂಗಗಳಿಗೆ ಉಂಟಾಗುವ ಆಶೀರ್ವಾದಗಳಿಗೆ ಒಂದು ಮುನ್ಸೂಚನೆ ಮಾತ್ರವೆಂಬುದನ್ನು ಇದು ಸಾಬೀತುಪಡಿಸುವದು. ಇದರಲ್ಲಿ ಇಸ್ರಾಯೇಲ್ಯರು ಪ್ರಥಮ ಫಲವಾಗಿರುವರು.

ಆದರೂ ಇನ್ನೊಂದು ದಿಕ್ಕಿನಿಂದ ಇದನ್ನು ಮತ್ತೆ ನೋಡಿ; 1874ನೇ ಇಸವಿಯ ನಂತರ ವ್ಯಾಧಿಗಳನ್ನು ವಿಶೇಷ ರೀತಿಯಲ್ಲಿ ಗುಣಪಡಿಸುವದು ಹೆಚ್ಚಾಗುತ್ತಿರುವದನ್ನು ಗಮನಿಸಿ. ಕೆಲವು ಪ್ರಾರ್ಥನೆಗೆ ಉತ್ತರವಾಗಿಯೂ, ಕೆಲವು ಎಣ್ಣೆಹಚ್ಚಿ ಪ್ರಾರ್ಥಿಸು–ವದರಿಂದ ಮತ್ತು ಕೆಲವು ಪ್ರಾರ್ಥನೆಯಿಲ್ಲದೆಯೇ ಅಥವಾ ಎಣ್ಣೆ ಹಚ್ಚುವಿಕೆಯಿಲ್ಲದೆ ಇಲ್ಲವೇ ಯಾವ ವಿಧದಲ್ಲಿಯಾದರೂ ಇರುವದು. ಹೀಗೆ ಈದಿನದಲ್ಲಿ ಕುಂಟನು ನಡೆದಾಡುವದು, ಕಿವುಡನು ಕೇಳುವದು, ಮೂಕನು ಮಾತನಾಡುವದು, ಕುರುಡನ ಕಣ್ಣು ತೆರೆಯಲ್ಪಡುವದು ಮತ್ತು ಪೂರ್ವದಲ್ಲಿದ್ದ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಿದ ನರಳುತ್ತಿರುವ ಜಗತ್ತಿನಲ್ಲಿರುವ ಸಮಸ್ತವನ್ನು ಸರಿಮಾಡುವದರ (ಅ.ಕೃ. 3:21) ವಿಷಯವಾದ ಸುವಾರ್ತೆಯು (ಶುಭ ಸಮಾಚಾರವು) ಹಲವಾರು ಬಗೆಯಲ್ಲಿ ಸಾರಲ್ಪಡುತ್ತಿರುವದನ್ನು ನೀವು ನೋಡುತ್ತಿರುವಿರಿ.

ಸತ್ತವರನ್ನು ಸಮಾಧಿಯಿಂದ ಇನ್ನೂ ಎಬ್ಬಿಸಲಾಗಿಲ್ಲ–ವೆಂಬುದನ್ನು ಹೊರತು ಪಡಿಸಿದರೆ (ಯೇಸುವಿನ) ಮೊದಲ ಬರುವಿಕೆಯಲ್ಲಿದ್ದಂತೆ ನಮ್ಮ ದಿನಗಳಲ್ಲಿನ ಗುಣಪಡಿಸುವಿಕೆಯೂ ದೃಡವೂ ವಾಸ್ತವವೂ ಆಗಿರುವದು. ಇಲ್ಲವೇ ಇದು ಒಂದು ಸ್ಥಳದಲ್ಲಿ ಆಗಿರುವಂಥದಲ್ಲ ಆದರೆ ಎಲ್ಲೆಡೆ ನಡೆಯುತ್ತಿರುವದು; ಈ ಶಕ್ತಿಯು ಎಲ್ಲಡೆ ತೋರ್ಪಡಲಾಗುತ್ತಿದ್ದು ಸಮಸ್ತವನ್ನು ಸರಿಪಡಿಸುವ ಕಾರ್ಯದ ಈ ಲಕ್ಷಣವು ಆರಂಭಗೊಳ್ಳುತ್ತಿರುವದು. ನಮ್ಮ ದೇಶದಲ್ಲಿದ್ದಂತೆಯೇ ಸ್ವೀಡನ್ ಮತ್ತು ಜರ್ಮನಿ ಮತ್ತು ಬ್ರಿಟನ್ ದೇಶಗಳಲ್ಲಿ ಇದು ಅಷ್ಟೇ ಹೆಚ್ಚಿನ ರೀತಿಯಲ್ಲಿರುವದು. ಇತ್ತೀಚೆಗೆ ನಮ್ಮ ಗಮನಕ್ಕೆ ಬಂದಿರುವಂತೆ ಗಣನೀಯವಾಗಿ ಸ್ವಸ್ಥತೆಯಾದವುಗಳಲ್ಲಿ ಕೆಂಟಕಿ ರಾಜ್ಯದ ಲೂಸಿವಿಲ್ಲಾ ಪಟ್ಟಣದ ಒಂದು ಕುಟುಂಬದ ಸಂಗತಿಯಾಗಿರುವದು. ಅದು ಆ ಕುಟುಂಬದ ನಾಲ್ಕು ಮಂದಿ ಕಿವುಡು ಮತ್ತು ಮೂಕರಾಗಿದ್ದವರು ಸಂಪೂರ್ಣವಾಗಿ ತಕ್ಷಣವೇ ಗುಣಹೊಂದಿರುವಂಥದು. ಅವರಲ್ಲಿ ಒಬ್ಬನು ಹನ್ನೊಂದು ವರುಷ ವಯಸ್ಸಿನವನು ಹುಟ್ಟಿದಂದಿನಿಂದ ಎಂದೂ ಮಾತನಾಡಲಾರದೆ ಕೇಳಲಾರದೆ ಇದ್ದವನು. ಪೆನ್ಸಿಲ್ವೇನಿಯ ರಾಜ್ಯದ ಎರಡು ಸಣ್ಣ ಪಟ್ಟಣಗಳಾದ ಮಿಡ್–ವೇ ಮತ್ತು ಪ್ರಿಮ್–ರೋಸ್ ಎಂಬಲ್ಲಿ ಕಳೆದ ತಿಂಗಳು ಹಲವಾರು ಜಾಡ್ಯಗಳಿಂದ ನಂಬಿಕೆಯ ಮೂಲಕವಾಗಿ ಗುಣಹೊಂದಿದ ಆರು ಗಣನೀಯವಾದ ಸಂಗತಿಗಳ ಬಗ್ಗೆ ಬಹು ಪುಳಕಿತವಾಗಿರುವದು. ಹಾಮಿಲ್ಟನ್ ಸ್ಮಿತ್ ಎಂಬ ಒಬ್ಬ ವಯಸ್ಸಾದ ಮನುಷ್ಯನು ಸಂಧಿವಾತ ರೋಗದಿಂದ ಎಷ್ಟು ಊನನಾಗಿದ್ದನೆಂದರೆ ಆತನಿಗೆ ಕೆಳಗೆ ಬಗ್ಗಲು ಸಾಧ್ಯವಾಗುತ್ತಿರಲಿಲ್ಲ; ಆದರೆ ಆತನು ತಕ್ಷಣದಲ್ಲಿ ಗುಣಹೊಂದಿದ್ದನು. ತಾನು ಗುಣವಾದ ಬಗ್ಗೆ ವಿಚಾರಿಸಲು ಬಂದ ವರದಿಗಾರನಿಗೆ ತನ್ನ ಎತ್ತರಕ್ಕಿಂತಲೂ ಮೇಲಕ್ಕೆ ಒದೆಯುವದರ ಮೂಲಕ ತನ್ನ ಬಗ್ಗಿ ಏಳುವ ಸಾಮರ್ಥ್ಯವನ್ನು ಪ್ರದರ್ಶಿಸಿದ್ದನು. ಅಲ್ಲದೆ ಹಿಂದಿನ ರಾತ್ರಿ ತಾನು ಗುಣವಾದಾಗ ಅಗ್ನಿರಕ್ಷಕ ಬೇಲಿಯನ್ನು ಅನಾಯಾಸವಾಗಿ ಜಿಗಿದು ಹಾರಿದ್ದನು. ತಾನು ಹಿಂದೆಂದಿಗಿಂತಲೂ ಬಲಿಷ್ಠನೆಂಬುದನ್ನೂ ಹಾಗೂ ತಾನೂ ಯೌವನಸ್ಥನಾಗುತ್ತಿರುವೆಂಬುದನ್ನೂ ಆತನು ತೋರಿಸಿಕೊಟ್ಟಿದ್ದನು. ವಾಸ್ತವದಲ್ಲಿ ಅದು ನಿಜವಿದ್ದಂತೆ ತೋರುತ್ತದೆ. ಆತನು ಎಪ್ಪತ್ತೆರಡು ವರುಷ ವಯಸ್ಸಿನವನಾಗಿದ್ದನು ಆದರೆ ಸ್ವಲ್ಪ ಸಮಯದಲ್ಲೇ ಆತನ ನರೆಕೂದಲುಗಳು ತನ್ನ ಮೊದಲ ಬಣ್ಣಕ್ಕೆ ಹಿಂದಿರುಗಲು ಆರಂಭಿಸಿದ್ದವು; ಮುಖದ ಸುಕ್ಕುಗಳು ಬಿಟ್ಟು ಹೊಗುತ್ತಿದ್ದು ಆತನ ಮುಖ ಚರ್ಯೆಯು ಹೊಸದಾಗುತ್ತಾ ಬಂದು ಆತನು ಐವತ್ತು ವರುಷದಂಥವನಾಗಿದ್ದನು.

ನಾವು ವಿವಿಧ ದೃಷ್ಟಾಂತಗಳ ಬಗ್ಗೆ ತಿಳಿಸಬಹುದು: ಮೂವತ್ತಾರು ವರುಷದ ಒಬ್ಬ ಸ್ತ್ರೀಯು ಹದಿನಾರು ವರುಷಗಳು ರೋಗಗ್ರಸ್ಥಳಾಗಿದ್ದ ನಂತರ ಗುಣಹೊಂದಿ ಇತ್ತೀಚೆಗೆ ಅಕೆಯನ್ನು ಇಪ್ಪತ್ತು ವರುಷದವಳೆಂದು ತಪ್ಪಾಗಿ ತಿಳಿಯುವಂತಾಗಿದ್ದಳು. ಆಕೆಯು ಸಾವಿರ ವರುಷದ (ಆಳ್ವಿಕೆಯ) ದಿನವು ಉದಯವಾಗುತ್ತಿರುವುದೆಂಬುದರ ಬಗ್ಗೆ ವಾಚ್ ಟವರ್ ಸಂಘ ಪ್ರಸ್ತುತಪಡಿಸಿದ ವೀಕ್ಷಣಾಭಿಪ್ರಾಯವನ್ನು ತಿಳಿಯದಿದ್ದರೂ ತಾನು ಪುನರುತ್ಥಾನ ಹೊಂದಿದ ಜೀವಿತಕ್ಕೆ ಸೇರಿದ್ದೇನೆಂದು ಹೇಳುವವಳಾಗಿ ಆಕೆಯು ಸಂತೃಪ್ತಿಯನ್ನು ವ್ಯಕ್ತಪಡಿಸಿರುವಳು.

ಇವುಗಳು ಸಮಸ್ತವನ್ನು ಸರಿಮಾಡುವ ಕಾರ್ಯಗಳ ಆರಂಭಕ್ಕೆ ಪ್ರಮಾಣವಲ್ಲದಿದ್ದಲ್ಲಿ, ಇವುಗಳು ಮತ್ತೇನು? ರೋಗ ಗುಣಪಡಿಸುವ ಕಾರ್ಯಗಳಿಗೆ ಇದು ಸೂಕ್ತ ಸಮಯ–ವಾಗಿರುವದು; (ಕ್ರಿಸ್ತನ) ಮೊದಲ ಬರುವಿಕೆಯ ಕಾಲವು ಸಮಸ್ತವನ್ನು ಸರಿಮಾಡುವದು ಮತ್ತು ಪುನರುದ್ಧಾರ ಕಾರ್ಯ, ರೋಗಗುಣಪಡಿಸುವಿಕೆ, ಮೊದಲಾದವುಗಳಿಗೆ ನಿಗದಿತ–ವಾಗಿರಲಿಲ್ಲ; ಅವು ಅಂದು ಅಕಾಲಿಕವಾಗಿದ್ದು ಮುಂಬರುವ ಕಾಲದಲ್ಲಿ ಪ್ರದರ್ಶಿತವಾಗುವ ಕ್ರಿಸ್ತನ ಮಹಿಮೆಗೆ ಕೇವಲ ದೃಷ್ಟಾಂಗಳಾಗಿದ್ದು ಬರಲಿರುವ ಲೋಕದ (ಯುಗದ) ಪ್ರಭಾವಬಲಾಧಿಕಾರಗಳಿಗೆ ಸಚಿತ್ರ ನಿದರ್ಶನಗಳಾಗಿದ್ದವು; ಇವುಗಳು ನೆರವೇರುವದಕ್ಕೆ ಕಾಲವು ಈಗ ಸಮೀಪವಾಗಿರುವದು. ಇತರ ಎಲ್ಲಾ ಸಂಗತಿಗಳಲ್ಲಿದ್ದಂತೆ ತನ್ನ ಅದ್ಭುತ ಕಾರ್ಯಗಳ

ಮೂಲಕವಾಗಿ ಯೇಸುವು ಆ (ಯೆಹೂದ್ಯರ) ಕಾಲವನ್ನು ಮುಕ್ತಾಯಗೊಳಿಸಿದ್ದನು. ಇವುಗಳನ್ನು ಆತನು ಸುವಾರ್ತಾ ಯುಗದಲ್ಲಿಯೋ ಎಂಬಂತೆ ನಿರ್ವಹಿಸಿದ್ದನು; ಅವು ಆಗ ಕೇವಲ ಛಾಯಾರೂಪದವುಗಳಾಗಿದ್ದವು. ಆದುದರಿಂದ ಆತನು (ಯೇಸುವು) ಮತ್ತು ಶಿಷ್ಯರು ನಿರ್ವಹಿಸಿದ ಪುನರುದ್ಧಾರ ಕಾರ್ಯಗಳು ತಾನು ಆಗ ಅವರ ಅರಸನು ಮತ್ತು (ಸುಗ್ಗಿಯ) ಕೊಯ್ಲುಗಾರನಾಗಿದ್ದೇನೆಂದು ತೋರಿಸಿಕೊಳ್ಳುವದಕ್ಕೆ ಏನೂ ಕಡಿಮೆಯಿಲ್ಲದಿದ್ದರೂ ಅದು ಕ್ರೈಸ್ತರ (ಸುವಾರ್ತಾ) ಯುಗವು ಮುಕ್ತಾಯವಾಗುತ್ತಿರುವದಕ್ಕೆ, ತಾನು ರಾಜ್ಯಾಧಿಕಾರ ಮೊದಲಾದವುವನ್ನು ವಹಿಸಿಕೊಂಡಿರುವದಕ್ಕೆ ಕೇವಲ ನಿದರ್ಶನ ಮಾತ್ರವಾಗಿದ್ದವು. ಈಗ ಅವುಗಳಿಗೆ ಕಾಲವು ಪೂರ್ಣವಾಗಿ ಸೂಕ್ತವಾಗಿರುವದು, ಕಾರಣ ಸಭೆಯೆಂಬ ಆತನ "ದೇಹವು' ಪೂರ್ಣಗೊಂಡಿದ್ದು ಯೆಹೋವನಿಂದ ಅನುಗ್ರಹಿತವಾದ ಈ ಸಂತತಿಯು (ಗಲಾತ್ಯ 3:29) ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವಂಥ ಸಮಯವು ಸಮೀಪದಲ್ಲಿರುವದು.

ಲೋಕಕ್ಕೆ ಇರುವ ನಿರೀಕ್ಷೆಯು ಪರಿಪೂರ್ಣತೆಗೆ ಮರಳು–ವದೆಂಬುದನ್ನು ದೃಷ್ಟಿಸಲು ಎಲ್ಲರಿಗೂ ಸಾಧ್ಯವಾಗಿದ್ದಲ್ಲಿ ಈ ವರ್ಗದಲ್ಲಿನ ಹೆಚ್ಚು ಅಧಿಕವಾದ ಜನರು ಶಾರೀರಿಕವಾಗಿ ಗುಣ ಹೊಂದುವುದಕ್ಕಾಗಿ ಕರ್ತನನ್ನು ನಂಬಿಕೆಯಿಂದ ಬೇಡಿಕೊಳ್ಳಲು ಸಿದ್ಧರಾಗಿರುತ್ತಿದ್ದರು. ಮತ್ತು ಸಮಾಧಿಗೆ ಸೇರುವದರ ಬದಲಾಗಿ ಮನುಷ್ಯ ಸ್ವಭಾವದಲ್ಲಿನ ಪರಿಪೂರ್ಣತೆಗೆ ಸಾಗುತ್ತಿದ್ದರು. ನಂಬುವವನು ಸಮಾಧಿಗೆ ಸೇರುವ ಅಗತ್ಯವು ಇಲ್ಲದಿರುವ ಸಮಯವು ಸಮೀಪದಲ್ಲಿರುವದು ಮಾತ್ರವಲ್ಲದೆ ಅವರು ಬಲದಿಂದ ಅಧಿಕವಾದ ಬಲದೆಡೆಗೆ ಸಾಗುವ ಸಮಯವೂ ಸಮೀಪದಲ್ಲಿರುವದು. ಜನರು ಸತ್ಯವೇದ ಬೋಧನೆಯನ್ನು ಉತ್ತಮ ರೀತಿಯಲ್ಲಿ ಗ್ರಹಿಸುವವರಾಗಿದ್ದರೆ ಮತ್ತು "ಕ್ರಿಸ್ತನ ದೇಹವಾದ" ಸುವಾರ್ತಾಯುಗದ ಕ್ರೈಸ್ತಸಭೆಗೆ ಇರುವ ಪರಲೋಕ ಸಂಬಂಧವಾದ ನಿರೀಕ್ಷೆಯನ್ನು ಲೋಕಕ್ಕಿರುವ ಪುನರುದ್ಧಾರದ ನಿರೀಕ್ಷೆಗೆ ಮಿಶ್ರಗೊಳಿಸದಿದ್ದಲ್ಲಿ ಅವರು ಈಗ ತಮಗೆ ನಿಲುಕುವಂತಿರುವ ಪುನರುದ್ಧಾರ ಹೊಂದುವ ಆಶೀರ್ವಾದವನ್ನು ಪಡೆಯಲು ಹೆಚ್ಚು ಅಧಿಕವಾಗಿ ಸಿದ್ಧರಾಗಿರುತ್ತಿದ್ದರು. ಪುನರುದ್ಧಾರ ಕುರಿತಾದ ಸರಳವಾದ ಮೂಲತತ್ವವು ಕೇವಲ ಇಂತಿರುವದು: ಮನುಷ್ಯನು ಪಾಪಿಯಾದನು ಮತ್ತು ಆದಾಮನಲ್ಲಿ ತನಗಿರುವ ಜೀವದ ಹಕ್ಕು ಮತ್ತು ಅದರ ಮೇಲಿನ ಹಿಡಿತವು ಆತನಿಂದ ಕಳೆದು ಹೋಗಿತ್ತು. ಅಂದಿನಿಂದ ಮರಣವು ಎಲ್ಲರ ಮೇಲೆ ಅಧಿಕಾರ ನಡೆಸುತ್ತಿರುವದು. ಆದರೆ ದೇವಾನುಗ್ರಹದಿಂದ ಯೇಸುವು ಎಲ್ಲರನ್ನು ವಿಮೋಚಿಸಲು ಶರೀರಧಾರಿಯಾದನು. ಅವನು (ಪಾಪದಿಂದಾದ) ಮರಣಕ್ಕೆ ದಂಡವನ್ನು ಪೂರ್ಣವಾಗಿ ತೆತ್ತನು, ಆ ಮೂಲಕವಾಗಿ ಎಲ್ಲರನ್ನು ವಿಮೋಚಿಸಿದನು. (ರೋಮಾ 5:17–19)

ಯೇಸುವು ಈಡನ್ನು ಕೊಟ್ಟಿರುವ ಕಾರಣ ಈಗ ಎಲ್ಲರೂ ಜೀವ ಮತ್ತು ಪರಿಪೂರ್ಣತೆಗಳಿಗೆ ಮರಳಬಹುದು. ಯೇಸುವು ಮರಣ ಹೊಂದಿ ಎದ್ದು ಬಂದು ಉನ್ನತ(ಲೋಕ)ಕ್ಕೆ ಏರಿ ಮನುಷ್ಯನ ಪರವಾಗಿ ಯಜ್ಞಫಲವನ್ನು ಅರ್ಪಿಸಿದ ಕೂಡಲೇ ಈ ಪುನರುದ್ಧಾರ ಕಾರ್ಯವು ಜಾರಿಗೆ ಬರಬಹುದಿತ್ತು. ಸಮಸ್ತವನ್ನು ಸರಿಪಡಿಸಲು ಯೇಸುವು ಕೂಡಲೇ ಹಿಂದಿರುಗಿ ಬರಬಹುದಿತ್ತು. ಆದರೆ ಪುನರುದ್ಧಾರಮಾಡಿ ಆಶೀರ್ವದಿಸುವ ಈ ಆಳ್ವಿಕೆಯಲ್ಲಿ ಆತನಿಗೆ ಸಹಬಾಧ್ಯರಾಗಲಿರುವ 'ಆತನ ದೇಹವೂ' "ಮದಲಗಿತ್ತಿಯೂ" ಆಗಿರುವ ಕ್ರೈಸ್ತಸಭೆಯನ್ನು ಆಯ್ಕೆಮಾಡುವ ಇನ್ನೊಂದು ಕಾರ್ಯವು ಇದರ ನಡುವೆ ಪ್ರವೇಶಮಾಡಿತ್ತು. ಈಗ ಪುನರುದ್ಧಾರ ಕಾರ್ಯಕ್ಕೆ ಕಾಲವು ಪೂರ್ಣವಾಗಿ ಪಕ್ವವಾಗಿರು–ವದು; ಕಾರಣ ಕ್ರಿಸ್ತನ ದೇಹವಾಗುವವರನ್ನು ಲೋಕದಿಂದ ಆಯ್ಕೆಮಾಡುವ ಕಾರ್ಯವು ಪೂರ್ಣವಾಗಿದ್ದು ಪ್ರತಿಷ್ಠಿತರಾದ ದೇವಜನರನ್ನು (ಹಣಜಿಯಿಂದ) ಬೇರ್ಪಡಿಸುವ ಕಾರ್ಯವು ಕೊನೆಗೊಳ್ಳುತ್ತಾ ಬರುತ್ತಿರುವಲ್ಲಿ (ಸಮಸ್ತವನ್ನು ಸರಿಮಾಡುವ) ಪುನರುದ್ಧಾರ ಕಾರ್ಯವು ಆರಂಭವಾಗುತ್ತಿರು–ವದು. ಮಾನವರು ಈ ಮುಂದೆ, ಅಲ್ಲದೆ ಬಹುಶಃ ಈಗಲೇ, ಈಡನ್ನು ನೀಡಿರುವಾತನ (ಕ್ರಿಸ್ತನ) ಮೇಲಿನ ನಂಬಿಕೆಯ ಮೂಲಕವಾಗಿ ನೋವು ನರಳಾಟಗಳಿಂದ ಬಿಡುಗಡೆ ಹೊಂದುವದು ಮಾತ್ರವಲ್ಲದೆ ಅಂತಿಮವಾಗಿ ಮರಣದ ಎಲ್ಲಾ ಬಾಧೆಗಳಿಂದ (ವಿಮುಕ್ತರಾಗಿ) ಪರಿಪೂರ್ಣವಾದ ಜೀವ ಹೊಂದಬಹುದು.

ಈವರೆಗೆ ನಾವು ಗಮನಿಸಿರುವ ಹಾಗೆ, ಅದ್ಭುತಗಳನ್ನು ನಡೆಸಿದ್ದ ಆ ಹನ್ನೆರಡು ಮಂದಿಯಲ್ಲಿ ಯೂದನೂ ಸಹ ಒಬ್ಬನಾಗಿದ್ದಂತೆ, ಕರ್ತನು ಈ ಸ್ವಸ್ಥತಾಕಾರ್ಯಕ್ಕೆ ಹಲವಾರು ವಿಶೇಷಗುಣವುಳ್ಳ ವ್ಯಕ್ತಿಯನ್ನು ಸಾಧನಗಳನ್ನಾಗಿ ಬಳಸಿ –ಕೊಳ್ಳುವನು. ಹಾಗೂ "ಮಹತ್ಕಾರ್ಯಗಳನ್ನು" ನಡೆಸುವಲ್ಲಿ ಕೆಲವರು ಗಮನಾರ್ಹವಾಗಿದ್ದೂ (ಮತ್ತಾಯ 7:22) ಕರ್ತನ ಅನುಮೋದನೆ ಪಡೆಯದೆ ಇರುವವರಾಗಿರುವರು. ಅಲ್ಲದೆ ಕೆಲವರು ಕ್ರಿಸ್ತನ ಹಿಂಬಾಲಕರೊಡನೆ ಎಣಿಸಲ್ಪಡದೆ ಇರುವರು (ಮಾರ್ಕ 9:38–39). ಯಾರೇ ಆದರೂ ಈ ನಿಟ್ಟಿನಲ್ಲಿ ನಂಬಿಕೆ–ಯನ್ನು ಪ್ರಯೋಗಿಸುವವರಾದರೆ ಆ ನಂಬಿಕೆಯನ್ನು ಕರ್ತನು ಸ್ಪಷ್ಟವಾಗಿ ಅಂಗೀಕರಿಸಿ ಅದಕ್ಕೆ ಉತ್ತರಿಸುವನು, ಯಾಕೆಂದರೆ ಈ ಬಗೆಯ ಪುರುದ್ಧಾರ ಕಾರ್ಯವು ಪ್ರಾರಂಭವಾಗುವದಕ್ಕೆ ಈಗ ಕಾಲವು ಪಕ್ವವಾಗಿರುವದು.

ಈ ಹಿಂದೆ ತೋರಿಸಿಕೊಟ್ಟಿರುವಂತೆ, ಶಾರೀರಿಕ ಪುನರುದ್ಧಾರವು "ಚಿಕ್ಕ ಹಿಂಡಿನ" ಎದುರಿನಲ್ಲಿ ಇಟ್ಟಿರುವ ನಿರೀಕ್ಷೆಯಾಗಿರುವುದಿಲ್ಲ, ಆದರೆ ಆದಕ್ಕೆ ಬದಲಾಗಿ ಅದು ಯಜ್ಞಾರ್ಪಣೆ ಮಾಡಿಕೊಳ್ಳುವದಾಗಿರುವದು. ತಾವು ಹಿಂಬಾಲಿಸಿರುವ ಕರ್ತನ ವಿಷಯದಲ್ಲಿದ್ದಂತೆ ಮನುಷ್ಯರಾಗಿ ತಮ್ಮ ಜೀವವನ್ನು ತ್ಯಜಿಸಿ ಅದನ್ನು ಹಿಂದೆಗೆದುಕೊಳ್ಳದಿರುವದು ಅವರ ಕಾರ್ಯಭಾರ. ಪೌಲನಂತೆ (ಅ.ಕೃ. 19:12) ಅವರು ಇತರರನ್ನು ಆಶೀರ್ವದಿಸಲು ದೇವರ ಸಾಧನವಾಗಬಹುದು. ತಾವೇ ವ್ಯಾದಿಯಿಂದ ಬಾಧಿತರಾಗಿದ್ದರೂ ಆತನಂತೆ (ಪೌಲನಂತೆ) ಅವರು ಇತರರನ್ನು ಗುಣಪಡಿಸುವ ಸಾಧನಗಳಾಗಬಹುದು. (2 ಕೊರಿಂಥ 12:8–9) ಅವರ ಗುರುವಿನ ವಿಷಯವಾಗಿ ಖಚಿತವಾಗಿ ಹೇಳಲ್ಪಟ್ಟದ್ದೇನಂದರೆ: "ಅವನು ಬೇರೆಯವರನ್ನು ರಕ್ಷಿಸಿದನು ಆದರೆ ತನ್ನನ್ನು ರಕ್ಷಿಸಿಕೊಳ್ಳಲಾರನು." ಆತನು ತನ್ನನ್ನು ರಕ್ಷಿಸಿಕೊಂಡಿದ್ದೇಯಾದರೆ ಆತನು ನಮ್ಮ ವಿಮೋಚಕನಾಗಿರಲು

ಸಾಧ್ಯವಾಗುತ್ತಿರಲಿಲ್ಲ. ಹಾಗಿದ್ದಲ್ಲಿ ನಾವು ಆತನ ಮಹಿಮೆಯಲ್ಲಿ ಪಾಲುಗಾರರಾಗಿ ಆತನೊಡನೆ ಭೂಲೋಕದ ಕುಲಗಳನ್ನು ಆಶೀರ್ವದಿಸಿ ಪುನರುದ್ಧಾರಗೊಳಿಸುವವರಾಗಲು ಆತನೊಡನೆ ಆತನ ಯಜ್ಞಾರ್ಪಣೆಯಲ್ಲಿಯೂ ಪಾಲುಗಾರರಾಗಬೇಕು.

ಆದರೆ ತಮ್ಮ ಒಡಂಬಡಿಕೆಯ ವಿಷಯವಾಗಿ ಮನವರಿಕೆ ಮಾಡಿಕೊಂಡಿರುವರಾದ ಇವರು ಸ್ವಸ್ಥವಾಗುವಿಕೆಯನ್ನಾಗಲೀ ಅಥವಾ ಭೂಸಂಬಂಧದ ಆಶೀರ್ವಾದಗಳನ್ನಾಗಲೀ ಕೇಳಿಕೊಳ್ಳು–ವುದಿಲ್ಲ. ಅವರು ಕೇಳಿಕೊಂಡದ್ದೇಯಾದಲ್ಲಿ, ಪೌಲನ ವಿಷಯ–ದಲ್ಲಿದ್ದಂತೆ, ದೇವರು ಅವರ ಬೇಡಿಕೆಗಳನ್ನು ಯಾವಾಗಲೂ ತಿರಸ್ಕರಿಸುವನೆಂದಾಗಲೀ ಇರಬೇಕಾಗಿರುವದಿಲ್ಲ. ಯೇಸುವು ಗೆತ್ಸೆಮನೆ ತೋಟದಲ್ಲಿ ಹೀಗೆ ಹೇಳಿದ್ದನು: "ನಾನು ತಂದೆಯನ್ನು ಬೇಡಿಕೊಳ್ಳಲಾರೆನೆಂದೂ ಬೇಡಿಕೊಂಡರೆ ನನಗೆ ಈಗಲೇ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವದಿಲ್ಲವೆಂದೂ ನೆನಸುತ್ತೀರಾ? ಕಳುಹಿಸಿಕೊಟ್ಟರೆ ಇಂಥಿಂಥದು ಆಗಬೇಕೆಂಬುವ ಶಾಸ್ತ್ರದ ಮಾತುಗಳು ನೆರವೇರುವದು ಹೇಗೆ ..." ಮತ್ತಾಯ 26:53–54

ದೇವದೂತರ ಗಣಗಳು ಆತನನ್ನು ಯಾಜಕರಿಂದಲೂ ಸೈನಿಕರಿಂದಲೂ ರಕ್ಷಿಸಿದ್ದಾದರೆ ಆತನ ಯಜ್ಞಾರ್ಪಣೆಯ ವಿಷಯವು ಎಲ್ಲಿರುತ್ತಿತ್ತು? ಹೀಗಾಗಿ ಆತನು ಅದನ್ನು ಕೇಳಿಕೊಳ್ಳಲಿಲ್ಲ. ಇದರಂತೆಯೇ ಅದೇ "ಇಕ್ಕಟ್ಟಾದ ಮಾರ್ಗ–ವನ್ನು" ('ಆಹಾರ' ಎಂಬ ಕಿರುಹೊತ್ತಿಗೆಯ 134ನೇ ಪುಟವನ್ನು ನೋಡಿ) ಈಗ ಅನುಸರಿಸುತ್ತಿರುವವರು. ಇದೇ ಕಾರಣಕ್ಕಾಗಿ ತಾವು ಯಜ್ಞದ ಮೂಲಕ ಮಾಡಿಕೊಂಡ ಒಡಂಬಡಿಕೆಯನ್ನು ಪೂರ್ಣಗೊಳಿಸುವ ಸಲುವಾಗಿ (ಶಾರೀರಿಕ ಸ್ವಸ್ಥತೆಯನ್ನಾಗಲೀ ಭೂಸಂಬಂಧದ ಆಶೀರ್ವಾದಗಳನ್ನಾಗಲೀ) ಕೇಳಿಕೊಳ್ಳಲು ಅವರು ನಿರಾಕರಿಸುವರು. ಹೇಗೂ, ಕೆಲವು ಸಮಯಗಳಲ್ಲಿ, ಅಂಥವರು ಕರ್ತನ ದ್ರಾಕ್ಷೇತೋಟದಲ್ಲಿನ ತಮ್ಮ ಮುಂದಿರುವ ಪರಿಶ್ರಮವನ್ನು ಪೂರ್ಣಗೊಳಿಸುವ ಸಲುವಾಗಿ ಅವರು ಕೇಳಿಕೊಳ್ಳದೆಯೇ ಅವರನ್ನು ಬಾಧೆಗಳಿಂದ ವಿಮುಕ್ತರನ್ನಾಗಿ ಮಾಡಲಾಗುವದು. (ಫಿಲಿಪ್ಪ 1:12–13, 24–25)

ನಮ್ಮ ಕಾಲದ ವಿಷಯದ ಸೂಚನೆಗಳ ಬಗ್ಗೆ ನೀವು ಏನೆಂದು ಆಲೋಚಿಸುವಿರಿ? ನೀವು ಆಕಾಶವನ್ನು ನೋಡಿಯೂ ಈ ಕಾಲದ ವಿಷಯವಾಗಿ ಗ್ರಹಿಸದಿರುವುದು ಹೇಗೆ? ಕರ್ತನ ಮೊದಲನೇ ಬರುವಿಕೆಯಲ್ಲಿ ಇದ್ದದಕ್ಕಿಂತಲೂ ಈಗ ಬಹು ಸ್ಪಷ್ಟವಾಗಿ ಇದನ್ನು ಗುರುತಿಸಲಾಗಿರುವದಲ್ಲವೇ? ನಾವು ಕರ್ತನ ಪ್ರತ್ಯಕ್ಷತೆಯ ದಿನದಲ್ಲಿ ಇರುವೆವೆಂಬುದಕ್ಕೆ ಹಿಂದೆ ಇದ್ದುದ–ಕ್ಕಿಂತಲೂ ಹೆಚ್ಚು ಮನವರಿಕೆಯಾಗುವಂಥ ಸಾಕ್ಷ್ಯಾಧಾರಗಳು ಈಗಲೂ ಸಹ ಕಾಲಗಳ ಸೂಚನೆಗಳ ವಿಷಯವಾಗಿ ಇರುವುದಲ್ಲವೇ?

ಕರ್ತನ ಚಿತ್ತವಾದ್ದಲ್ಲಿ ಇನ್ನು ಮುಂದೆ, ನಮ್ಮ ಓದುಗರಿಗೆ ಎಲ್ಲೆಡೆ ನಡೆಯುತ್ತಿರುವ ಸ್ವಸ್ಥತಾಕಾರ್ಯಗಳ ವಿಷಯವಾಗಿ ತಿಳಿಸಲು ಮತ್ತು ಇದರಿಂದ ಸಮಸ್ತವನ್ನು ಸರಿಮಾಡುವ ಕಾಲದ (ಅ.ಕೃ. 3:21) ಸೂಚನೆಗಳನ್ನು ಮತ್ತು ಆ ಮೂಲಕವಾಗಿ ಕರ್ತನ ಪ್ರತ್ಯಕ್ಷತೆಯನ್ನು ಸೂಕ್ತವಾಗಿ ಗಮನಿಸುವಂತಾಗಲು, ಹೆಚ್ಚು ಸ್ಥಳವನ್ನು ಮುಡುಪಾಗಿಡಲು ನಾವು ಉದ್ದೇಶಿಸುವವರಾಗಿದ್ದೇವೆ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಯೂದಾಯ | ಸಬ್ಬತ್ ದಿನದಲ್ಲಿ ನಡು ಬಗ್ಗಿದ ಹೆಂಗಸನ್ನು ಸ್ವಸ್ಥಮಾಡಿದುದು, ಮೂರು ದೃಷ್ಟಾಂತಗಳು. | –– | –– | 13:1–21 | –– |

# ಲೂಕ 13:1–21

ಅದೇ ಸಮಯದಲ್ಲಿ ಕೆಲವರು ಆತನ ಹತ್ತಿರದಲ್ಲಿದ್ದು ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರಸಿದನೆಂದು ಆತನಿಗೆ ತಿಳಿಸಿದರು. ಅದಕ್ಕೆ ಆತನು ಅವರಿಗೆ–ಆ ಗಲಿಲಾಯದವರು ಅಂತ ಕೊಲೆಯನ್ನು ಅನುಭವಿಸಿದ್ದರಿಂದ ಅವರನ್ನು ಎಲ್ಲಾ ಗಲಿಲಾಯದವರಿಗಿಂತ ಪಾಪಿಷ್ಠರೆಂದು ಭಾವಿಸುತ್ತೀರೋ? ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ. ಇಲ್ಲವೆ ಸಿಲೋವಾಮಿನಲ್ಲಿ ಬುರುಜುಬಿದ್ದು ಸತ್ತ ಆ ಹದಿನೆಂಟು ಮಂದಿಯೂ ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳೆಂದು ಭಾವಿಸುತ್ತೀರೋ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿ ಹೋಗುವಿರಿ ಎಂದು ಹೇಳಿದನು.

ಆ ಮೇಲೆ ಆತನು ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ–ಒಬ್ಬಾನೊಬ್ಬನು ತನ್ನ ದ್ರಾಕ್ಷೆಯ ತೋಟದಲ್ಲಿ ಒಂದು ಅಂಜೂರದ ಗಿಡವನ್ನು ನೆಡಸಿದ್ದನು. ತರುವಾಯ ಅವನು ಅದರಲ್ಲಿ ಹಣ್ಣನ್ನು ಹುಡುಕುತ್ತಾ ಬಂದನು, ಸಿಕ್ಕಲಿಲ್ಲ. ಬಳಿಕ ಅವನು ತೋಟಮಾಡುವವನಿಗೆ–ನೋಡು, ನಾನು ಮೂರು

ವರುಷದಿಂದಲೂ ಈ ಅಂಜೂರದ ಮರದಲ್ಲಿ ಹಣ್ಣನ್ನು ಹುಡುಕುತ್ತಾ ಬಂದಿದ್ದೇನೆ; ಆದರೂ ನನಗೆ ಸಿಕ್ಕಲಿಲ್ಲ. ಇದನ್ನು ಕಡಿದು ಹಾಕು; ಇದರಿಂದ ಭೂಮಿಯು ಯಾಕೆ ಬಂಜೆಯಾಗಬೇಕು ಎಂದು ಹೇಳಿದನು. ಆದರೆ ತೋಟಮಾಡು–ವವನು–ಅಯ್ಯಾ, ಈ ವರುಷವೂ ಇದನ್ನು ಬಿಡು; ಅಷ್ಟರಲ್ಲಿ ನಾನು ಇದರ ಸುತ್ತಲೂ ಅಗೆದು ಗೊಬ್ಬರ ಹಾಕುತ್ತೇನೆ; ಮುಂದೆ ಹಣ್ಣುಬಿಟ್ಟರೆ ಸರಿ; ಇಲ್ಲದಿದ್ದರೆ ಇದನ್ನು ಕಡಿದುಹಾಕಬಹುದು ಎಂದು ಉತ್ತರ ಕೊಟ್ಟನು.

ಒಂದಾನೊಂದು ಸಬ್ಬತ್ ದಿನದಲ್ಲಿ ಆತನು ಒಂದು ಸಭಾಮಂದಿರದೊಳಗೆ ಉಪದೇಶ ಮಾಡುತ್ತಾ ಇದ್ದನು. ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು. ಆಕೆಯು ನಡುಬೊಗ್ಗಿ ಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೆ ಇದ್ದಳು. ಯೇಸು ಆಕೆಯನ್ನು ನೋಡಿ ಹತ್ತಿರಕ್ಕೆ ಕರೆದು ಆಕೆಗೆ–ಅಮ್ಮಾ, ನಿನಗೆ ರೋಗ ಬಿಡುಗಡೆಯಾಯಿತು ಎಂದು ಹೇಳಿ ಆಕೆಯ ಮೇಲೆ ತನ್ನ ಕೈಗಳನ್ನಿಟ್ಟನು; ಇಟ್ಟ ಕೂಡಲೇ ಆಕೆ ನೆಟ್ಟಗಾದಳು, ದೇವರನ್ನು ಕೊಂಡಾಡಿದಳು. ಆದರೆ ಆ ಸಭಾಮಂದಿರದ ಅಧಿಕಾರಿಯು ನಡೆದ ಸಂಗತಿಯನ್ನು ನೋಡಿ ಸಬ್ಬತ್‌ದಿನದಲ್ಲಿ ಯೇಸು ಸ್ವಸ್ಥಮಾಡಿದನಲ್ಲಾ ಎಂದು ರೋಷಗೊಂಡು ಜನರಿಗೆ–ಕೆಲಸಮಾಡುವದಕ್ಕೆ ಆರು ದಿವಸಗಳು ಅವೆಯಷ್ಟೇ; ಆ ದಿವಸಗಳಲ್ಲಿ ಬಂದು ವಾಸಿಮಾಡಿಸಿಕೊಳ್ಳಿರಿ, ಸಬ್ಬತ್ ದಿನದಲ್ಲಿ ಮಾತ್ರ ಬೇಡ ಎಂದು ಹೇಳಿದನು. ಆ ಮಾತನ್ನು ಕೇಳಿ ಸ್ವಾಮಿಯು ಅವನಿಗೆ–ಕಪಟಿಗಳು ನೀವು, ನಿಮ್ಮಲ್ಲಿ ಪ್ರತಿಯೊಬ್ಬನೂ ಸಬ್ಬತ್ ದಿನದಲ್ಲಿ ತನ್ನ ಎತ್ತನ್ನಾಗಲೀ ಕತ್ತೆಯನ್ನಾಗಲಿ ಗೋದಲಿಯಿಂದ ಬಿಚ್ಚಿ ನೀರು ಕುಡಿಸುವದಕ್ಕಾಗಿ ಹಿಡುಕೊಂಡು ಹೋಗುತ್ತಾನಲ್ಲವೇ. ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದವಳು ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್ ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸ–ಬಾರದೋ ಎಂದು ಉತ್ತರಕೊಟ್ಟನು. ಈ ಮಾತುಗಳನ್ನು ಆತನು ಹೇಳುತ್ತಿರಲಾಗಿ ಆತನ ವಿರೋಧಿಗಳೆಲ್ಲರೂ ನಾಚಿಕೊಂಡರು; ಗುಂಪುಕೂಡಿದ್ದ ಜನರೆಲ್ಲಾ ಆತನಿಂದಾಗುತ್ತಿದ್ದ ಎಲ್ಲಾ ಮಹತ್ವದ ಕಾರ್ಯಗಳಿಗೆ ಸಂತೋಷಪಟ್ಟರು.

ಆತನು ಹೇಳಿದ್ದೇನಂದರೆ, ದೇವರರಾಜ್ಯವು ಯಾವದಕ್ಕೆ ಹೋಲಿಕೆಯಾಗಿದೆ? ಅದನ್ನು ನಾನು ಯಾವದಕ್ಕೆ ಹೋಲಿಸಲಿ? ಅದು ಸಾಸಿವೆ ಕಾಳಿಗೆ ಹೋಲಿಕೆಯಾಗಿದೆ. ಒಬ್ಬ ಮನುಷ್ಯನು ಅದನ್ನು ತೆಗೆದುಕೊಂಡು ಹೋಗಿ ತನ್ನ ತೋಟದಲ್ಲಿ ಹಾಕಿದನು; ಅದು ಬೆಳೆದು ಮರವಾಯಿತು; ಮತ್ತು ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಅದರ ಕೊಂಬೆಗಳಲ್ಲಿ ವಾಸಮಾಡಿದವು ಅಂದನು. ಆತನು ಇನ್ನೂ ಹೇಳಿದ್ದೇನಂದರೆ–ದೇವರ ರಾಜ್ಯವನ್ನು ನಾನು ಯಾವುದಕ್ಕೆ ಹೋಲಿಸಲಿ? ಅದು ಹುಳಿಹಿಟ್ಟಿಗೆ ಹೋಲಿಕೆ ಯಾಗಿದೆ. ಅದನ್ನು ಒಬ್ಬ ಹೆಂಗಸು ತಕ್ಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು ಅಂದನು.

# ಸಬ್ಬತ್ ದಿನದಲ್ಲಿ ನ್ಯಾಯಸಮ್ಮತವಾದದ್ದು

**ರೀಪ್ರಿಂಟ್ಸ್ ಪುಟ 5405**

## ಲೂಕ 13:10–17; 14:1–6

**"ಸಬ್ಬತ್ ದಿನವು ಮನುಷ್ಯರಿಗಾಗಿರುವದು, ಮನುಷ್ಯರು ಸಬ್ಬತ್ ದಿನಕ್ಕಾಗಿರುವದಿಲ್ಲ" – ಮಾರ್ಕ 2:27**

ಸಬ್ಬತ್ ದಿನದ ಬಗ್ಗೆ ಕ್ರೈಸ್ತ ಜನರಲ್ಲಿ ಬಹು ಗೊಂದಲವು ಆವರಿಸಿಕೊಂಡಿರುವದು. ಈ ಗೊಂದಲಕ್ಕೆ ಮೂಲಕಾರಣವೆಂದರೆ ಅದು ಕ್ರಿಸ್ತನ ಹಿಂಬಾಲಕರ ವಿಷಯವಾಗಿ ಮತ್ತು ಧರ್ಮಶಾಸ್ತ್ರ ಮೂಲಕವಾದ ಒಡಂಬಡಿಕೆಯಲ್ಲಿರುವ ಶಾರೀರಿಕ ಸಂಬಂಧದ ಇಸ್ರಾಯೇಲ್ಯರ ವಿಷಯವಾದ ದೇವರ ಏರ್ಪಾಟುಗಳು ಪೂರ್ಣವಾಗಿ ಭಿನ್ನವಾಗಿರುವದೆಂಬುದನ್ನು ಕೆಲವರು ಮಾತ್ರ ಗ್ರಹಿಸಿಕೊಂಡಿರುವದೇ. ಛಾಯಾರೂಪದ ಒಡಂಬಡಿಕೆಯಲ್ಲಿನ ಎಲ್ಲಾ ಅಂಶಗಳು ಕ್ರೈಸ್ತರಿಗೆ ಛಾಯಾರೂಪವಾಗಿ ಒಂದು ಅಮೂಲ್ಯವಾದ ಪಾಠವನ್ನು ಒಳಗೊಂಡಿರುವದು, ಆದರೆ ಆ ಛಾಯಾರೂಪವನ್ನು ನಿಜರೂಪವೆಂದು ತಪ್ಪಾಗಿ ತಿಳಿಯುವ–ದಾದರೆ ಅದು ನಮ್ಮ ಮನಸ್ಸುಗಳನ್ನು ಗೊಂದಲಕ್ಕೀಡು ಮಾಡಿಕೊಂಡು ನಿಜರೂಪದಲ್ಲಿನ ಸೊಗಸು ಮತ್ತು ಅದರ ಪ್ರಭಾವಗಳನ್ನು ಕಳಕೊಂಡಂತಾಗುವದು.

ಸಬ್ಬತ್ ಎಂಬ ಶಬ್ಧವು ವಿಶ್ರಾಂತಿಯನ್ನು ಸೂಚಿಸುವದೆಂಬು–ದನ್ನು ಹೊರತು ಪಡಿಸಿದರೆ, ಯೆಹೂದ್ಯರ ಧರ್ಮಶಾಸ್ತ್ರ ನಿಯಮಗಳಿಗೆ ಮೊದಲು ಸಬ್ಬತ್ತೆಂಬುದು ಇರಲಿಲ್ಲ. (ಏಳು ದಿನಗಳ) ಸೃಷ್ಟಿಕ್ರಮ ವಾರದಲ್ಲಿನ ಏಳನೇ ಮಹಾ ದಿನದಲ್ಲಿ ಅಥವಾ ಕಾಲಾವಧಿಯಲ್ಲಿ ದೇವರು ವಿಶ್ರಮಿಸಿಕೊಂಡನೆಂದು ನಮಗೆ ತಿಳಿಸಲಾಗಿದೆ. ದೇವರೊಂದಿಗೆ ಅನ್ಯೋನ್ಯವಾಗಿ ನಡೆದ ಹನೋಕನು, ದೇವರ ಸ್ನೇಹಿತನಾದ ಅಬ್ರಹಾಮನು ಮತ್ತು ದೇವರಿಗೆ ಮೆಚ್ಚಿಕೆಯಾಗಿದ್ದ ಇತರರಿಗೆ ದೋಷಪರಿಹಾರಕ ಮಹಾದಿನ ಮತ್ತು ಅದರಲ್ಲಿನ ಯಜ್ಞಗಳು ಇಲ್ಲವೇ ಇಸ್ರಾಯೇಲ್ಯರ ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಗೆ ಸಂಬಂಧಿಸಿದ ಇತರ ವಿಷಯಗಳಂತೆ ಸಬ್ಬತ್ತಿನ ವಿಷಯವಾಗಿಯೂ ಏನೂ ತಿಳಿದಿರಲಿಲ್ಲ.

ಇಸ್ರಾಯೇಲ್ಯರು ಮೋಶೆಯ ಮೂಲಕವಾಗಿರುವ ಒಂದು ಸೇವಕರ ಮನೆತನದವರೆಂದು; ಆದರೆ ಕ್ರೈಸ್ತಸಭೆಯು ಕ್ರಿಸ್ತನ ಮೂಲಕವಾಗಿರುವ ಮಕ್ಕಳ ಮನೆತನದವರೆಂದು ಅಪೋಸ್ತಲ–ನಾದ ಪೌಲನು ವಿವರಿಸಿ ಹೇಳಿದ್ದಾನೆ. (ಇಬ್ರೀಯ 3:1–6) ಸೇವಕರ ಮನೆತನದವರೊಡನೆ ದೇವರು ನಡಕೊಳ್ಳುವ ವಿಧಾನವು ಮತ್ತು ಮಕ್ಕಳ ಮನೆತನದವರೊಡನೆ ದೇವರು ನಡಕೊಳ್ಳುವ ವಿಧಾನದಿಂದ ಬಹು ಸೂಕ್ತ ರೀತಿಯಲ್ಲಿ ಭಿನ್ನವಾಗಿರುವದು. ಯಾವ ಕಾರಣಕ್ಕಾಗಿ ಅಥವಾ ಯಾವ ಕಾರಣದಿಂದ ಎಂಬ ವಿವರಗಳನ್ನು ನೀಡದೆಯೇ ಸೇವಕರಿಗೆ ಆಜ್ಞಾವಿಧಿಗಳನ್ನು ಕೊಡಲಾಗಿತ್ತು. ಆದರೆ ದೇವರು ನಮ್ಮೊಂದಿಗೆ ಮಕ್ಕಳೊಡನೆ ನಡಕೊಳ್ಳುವಂತೆ ನಡೆದುಕೊಳ್ಳುವನೆಂದು ಪೌಲನು ವಿವರಿಸಿ ಹೇಳಿದ್ದಾನೆ. ತನ್ನ ಆತ್ಮವನ್ನು ಹೊಂದಿರುವ ತನ್ನ ಮಕ್ಕಳು ತನ್ನ ಸಂಕಲ್ಪಗಳ ವಿಷಯವಾಗಿ ಸಹಾನುಭೂತಿಯುಳ್ಳವರಾಗಿ ಅವುಗಳಲ್ಲಿ ಭಾಗಿಯಾಗುವ ಸಲುವಾಗಿ, ತಮ್ಮನ್ನು ಯಜ್ಞಾರ್ಪಿತ –ರನ್ನಾಗಿ ಮಾಡಿಕೊಳ್ಳುವದರ ಮೂಲಕವಾಗಿ ವಿಧೇಯರಾಗುವ ಸಲುವಾಗಿ, ಅದು ಆಜ್ಞೆಯಾಗಿ ವಿಧಿಸಲ್ಪಟ್ಟಿರುವ ಕಾರಣಕ್ಕಾಗಿ–ಯಲ್ಲ ಆದರೆ ತಂದೆಯ ಚಿತ್ತವನ್ನು ನೆರವೇರಿಸುವದರಲ್ಲಿ ದೊರಕುವ ಸಂತೋಷದ ಕಾರಣಕ್ಕಾಗಿ ನಿಜವಾದ ಕ್ರೈಸ್ತರಿಗೆ ಪರಲೋಕದ ತಂದೆಯು ತನ್ನ ಯೋಜನೆ ತನ್ನ ಉದ್ದೇಶ ತನ್ನ ಏರ್ಪಾಟುಗಳನ್ನು ತಿಳಿಯಪಡಿಸುವನು.

ಯೇಸುವು ಮತ್ತು ಅಪೋಸ್ತಲರು ಯೆಹೂದ್ಯರಾಗಿದ್ದು, ಯೇಸುವು ತನ್ನ ಮರಣದ ಮೂಲಕವಾಗಿ "ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿ ಕರ್ಮಮಾರ್ಗವನ್ನು ಅಂತ್ಯಗೊಳಿಸಿದ" ಕಾಲದ ವರೆಗೆ ಅವರು ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯಲ್ಲಿನ ಆಜ್ಞಾವಿಧಿಗಳನ್ನು ಅನುಸರಿಸುವ ಹಂಗಿನಲ್ಲಿದ್ದರು. ಆ ಕಾಲದಿಂದ ಈಚೆಗೆ ಯೇಸುವಿನ ಹಿಂಬಾಲಕರು ಯಾವ ಅರ್ಥದಲ್ಲಿಯೂ ಯೆಹೂದ್ಯರ ಧರ್ಮಶಾಸ್ತ್ರವಿಧಿಗಳ ಕಟ್ಟುಪಾಡಿನಲ್ಲಿ ಇರುವದಿಲ್ಲ. ಅವರು ದಶಾಜ್ಞೆಗಳ ವಿಷಯದಲ್ಲಿ ಆಸಕ್ತರಾಗಿರುವರು, ಏಕೆಂದರೆ ಆ ಆಜ್ಞೆಗಳು ಒಂದು ಹೊರಗಣ ಅರ್ಥದಲ್ಲಿ ದೇವರ ಚಿತ್ತವನ್ನು ಸೂಚಿಸುವದು; ಅಲ್ಲದೆ ದೇವರ ಮಕ್ಕಳೆಲ್ಲರೂ ತಂದೆಯ ಚಿತ್ತವನ್ನು ತಿಳಿದುಕೊಂಡು, ಅದನ್ನು ಸ್ವಯಂಪ್ರೇರಿತರಾಗಿ ನೆರವೇರಿಸಲು ಕಾತುರದಿಂದ ಇರುವರು. ಆದರೆ ಮಕ್ಕಳ ಮನೆತನದವರಿಗೆ ದೇವರು ಹೀಗೆ ಸಂಬೋಧಿಸಿರುವದಿಲ್ಲ: "ಕೊಲೆಮಾಡಬಾರದು; ಕದಿಯಬಾರದು;" ಎಷ್ಟೇ ಆದರೂ ಅವರು ಬಹು ಖಂಡಿತವಾಗಿ ಪವಿತ್ರಾತ್ಮನಿಂದಲೇ ಹುಟ್ಟಿದವರಾದ ಕಾರಣ, ಅವರು ಕೊಲೆಮಾಡಲು ಇಚ್ಛಿಸಲಾರರು ಇಲ್ಲವೇ ಕದಿಯಲು ಬಯಸಲಾರರು.

ದೇವರ ಮಕ್ಕಳ ಮನೆತನದವರ ಮುಖ್ಯಸ್ಥನ ಮೂಲಕವಾಗಿ ಆ ಮನೆತನದವರೊಂದಿಗೆ ನಡಕೊಳ್ಳುವಾಗ ಆತನು (ದೇವರು) ಒಂದು ಹೊಸ ಆಜ್ಞೆಯನ್ನು ನೇಮಿಸಿ ಸ್ಥಾಪಿಸಿರುವನು; ಅದು ಸವಿಸ್ತಾರವಾಗಿದ್ದು ಹಿಂದೆ ಮೋಶೆಯ ಆಜ್ಞಾವಿಧಿಗಳು ಸೂಚಿಸುವದನ್ನು ತಿಳಿಯುವದಕ್ಕಿಂತಲೂ ಬಹು ಅಧಿಕ–ವಾದುದನ್ನು ತಿಳಿಯುವ ಸಾಧನವಾಗಿರುವದು. ಅದು ಪ್ರೀತಿಯ ಸಂಬಂಧವಾದ ಆಜ್ಞೆ. ಅಪೋಸ್ತಲನು ಪ್ರಕಟಿಸಿ ಹೇಳಿರುವಂತೆ: "ಪ್ರೀತಿಯಿಂದಲೇ ಧರ್ಮಪ್ರಮಾಣವು ನೆರವೇರುತ್ತದೆ." ಧರ್ಮಶಾಸ್ತ್ರವೆಲ್ಲಾ ಪ್ರೀತಿಯೆಂಬ ಒಂದೇ ಮಾತಿನಲ್ಲಿ ಅಡಕವಾಗಿರುವದು; ಅದು ದೇವರ ಮೇಲಿನ ಅತಿಶ್ರೇಷ್ಠವಾದ ಪ್ರೀತಿ ಮತ್ತು ನಮ್ಮ ಸಹಜೀವಿಗಳಾದ ಮನುಷ್ಯರ ಮೇಲಿನ ಪ್ರೀತಿ. ಅಂತಿಮವಾಗಿ, ಯೇಸುವು ಪ್ರಕಟಿಸಿ ಹೇಳಿರುವಂತೆ: "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬುದೇ." ಒಬ್ಬರು ಮತ್ತೊಬ್ಬರಿಗಾಗಿ ತಮ್ಮ ಪ್ರಾಣವನ್ನು ಕೊಡುವವ–ರಾಗಿರುವ ನಮಗೆ ಆತನು ಇದನ್ನು ಹೇಳಿದ್ದಾನೆ.

## ಏಳನೆಯ ದಿನ – ಮೊದಲನೆ ದಿನ

ಸುವಾರ್ತಾಯುಗದಲ್ಲಿನ ವ್ಯವಸ್ಥೆಯ ಆದಿಯಲ್ಲಿ ಯೇಸುವಿನ ಹಿಂಬಾಲಕರು ವಾರದ ಮೊದಲನೆಯ ದಿನದಲ್ಲಿ ಸಭೆಕೂಡುವದಕ್ಕೆ ಆರಂಭಿಸಿದ್ದರು. ಯೇಸುವು ಇದೇ ದಿನದಲ್ಲಿ ಮರಣದಿಂದ ಎದ್ದು ಬಂದು ತನ್ನ ಹಿಂಬಾಲಕರಿಗೆ ಇದೇ ದಿನದಲ್ಲಿ ಹಲವು ಸಾರಿ ಕಾಣಿಸಿಕೊಂಡಿದ್ದ ಸಂಗತಿಗಳ ಮೂಲಕವಾಗಿ ಈ ಪದ್ಧತಿಯು ಆರಂಭಗೊಂಡಿತೆಂಬದು ಸ್ಪಷ್ಟ. ಅಲ್ಲದೆ ಮುಂದಿನ ವಾರದ ಮೊದಲನೇ ದಿನದಲ್ಲಿ ಮತ್ತೆ ಅವರಿಗೆ ಕಾಣಿಸಿ–ಕೊಂಡಿದ್ದನು. ಈ ದಿನದಲ್ಲಿ ತಮ್ಮ ಅನ್ಯೋನ್ಯಕೂಟವನ್ನು ನಡೆಸುವದು ಆದಿಶಿಷ್ಯರಲ್ಲಿ ಒಂದು ವಾಡಿಕೆಯಾಯಿತು. ಆದರೆ ಇದು ಕರ್ತನಿಂದ ಆಜ್ಞಾಪಿಸಲ್ಪಟ್ಟಿತೆಂದಲ್ಲ, ಇದು ಒಡೆಯನನ್ನು ಸ್ಮರಿಸುವ ಮತ್ತು ಒಬ್ಬರೊಡನೆ ಒಬ್ಬರು ಅನ್ಯೋನ್ಯತೆಯನ್ನು ಹೊಂದುವ ತಮ್ಮ ಬಯಕೆಯ ದೆಸೆಯಿಂದಾದದ್ದು. ಒಂದು ಕಾಲದವರೆಗೆ ಅವರು ವಾರದ ಮೊದಲನೆಯ ದಿನವನ್ನು ಆಚರಿಸುವದರ ಜೊತೆಗೆ ಸಬ್ಬತ್ ದಿನವನ್ನೂ ಸಹ ಆಚರಿಸುವದು ನಡೆದುಬಂದದ್ದು ಬಹು ಸಂಭವನೀಯ. ತಾವು ಮೋಶೆಯ ಮತ್ತು ಆತನ ಆಜ್ಞಾವಿಧಿಗಳ ಅಧೀನತೆಯಿಂದ (ಬಿಡುಗಡೆ ಹೊಂದಿ) ಯೇಸುವಿನ ನೇತೃತ್ವದ ಹಾಗೂ ಆತನ ನಡೆಸುವಿಕೆಗೆ (ನಿಜವಾಗಿಯೂ "ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು") ಹೇಗೆ ಪೂರ್ಣವಾಗಿ ದಾಟಿಬಂದಿರುವದೆಂಬುದನ್ನು ಗ್ರಹಿಸಿಕೊಳ್ಳುವದು ಅವರಿಗೆ ಕಷ್ಟಕರವಾಗಿತ್ತೆಂಬುದು ಸ್ಪಷ್ಟವಾಗಿತ್ತು.

ಕ್ರೈಸ್ತರು (ವಾರದ) ಮೊದಲನೆ ದಿನವನ್ನು ಆಚರಿಸುವ ಸಲುವಾಗಿ ಏಳನೆಯ ದಿನದ ಆಚರಣೆಯನ್ನು ಬಿಟ್ಟುಬಿಟ್ಟಿರುವ–ರಾದರೂ, ಈ ಬದಲಾವಣೆ ಮಾಡಲು ದೇವರು ಅಧಿಕಾರ ನೀಡಿರುವನೆಂದು ಅನೇಕರು ತಪ್ಪಾಗಿ ಆಲೋಚಿಸುವರು. ಆದರೆ ಅದು ಹಾಗಿರುವುದಿಲ್ಲ; ಕ್ರೈಸ್ತರು ಧರ್ಮಶಾಸ್ತ್ರದ ಅಧೀನ–ದಲ್ಲಿರುವದಿಲ್ಲ, ಆದರೆ ಕೃಪೆಗೆ ಅಧೀನರಾಗಿದ್ದಾರೆ. ಆದಿಶಿಷ್ಯರು ತಮಗೆ ದೊರೆತ ವಿಶೇಷ ಸೌಭಾಗ್ಯದ ದೆಸೆಯಿಂದ ವಾರದ ಮೊದಲನೇ ದಿನದಲ್ಲಿ ಒಟ್ಟಾಗಿ ಕೂಡಿಬರುತ್ತಿದ್ದರೇ ಹೊರತು ದೇವರ ಆದೇಶದಿಂದಲ್ಲ. ಆದ್ದರಿಂದ ಅದು ಇಂದಿನ ವರೆಗೂ ಹೀಗೆಯೇ ಇರಬೇಕು, ಮತ್ತು ಕೆಲವರಲ್ಲಿ ಅದು ಮುಂದೆಯೂ

ಹೀಗೆಯೇ ಇರುವದು. ಪರಲೋಕದಲ್ಲಿರುವ ತಂದೆಯ ವಾಕ್ಯಗಳನ್ನು ಅಧ್ಯಯನ ಮಾಡಲು ಮತ್ತು ತಮ್ಮ ಹೃದಯಗಳಲ್ಲಿ ಆತನನ್ನು ಆರಾಧಿಸಿ ಗೌರವನ್ನು ಅರ್ಪಿಸಲು ನಿಜವಾದ ಕ್ರೈಸ್ತರಿಗೆ ಅತಿಯಾದ ಸಮಯಾವಕಾಶವಿರಲು ಸಾಧ್ಯವಾಗದು.

ಭಾನುವಾರವೆಂಬುದನ್ನು ಜಾರಿಗೊಳಿಸಿರುವದು ಮಾನವನ ಮೂಲಕವಾದ ಶಾಸನದಿಂದಾರೂ, ಹಾಗು ಅದು ತಪ್ಪುಕಲ್ಪನೆಯ ಮುಖಾಂತರವಾಗಿರುವದಾದರೂ, ವಾರದಲ್ಲಿ ಒಂದು ವಿಶೇಷವಾದ ದಿನವನ್ನು ಮುಡುಪಾಗಿಡುವದು, ಅದರಲ್ಲಿ, ನಿಸ್ಸಂಶಯವಾಗಿ, ನಿಜ ಕ್ರೈಸ್ತರು ಬಹು ವಿಶೇಷವಾಗಿ ಪ್ರಾರ್ಥಿಸು–ವದು, ಆರಾಧಿಸುವದು ಸ್ತುತಿಸುವದು ಅಲ್ಲದೆ ಸತ್ಯವೇದಾಧ್ಯಯನ ಮತ್ತು ಸತ್ಕ್ರೀಯೆಗಳನ್ನು ಮಾಡಲು ತಮ್ಮನ್ನು ತೊಡಗಿಸಿ–ಕೊಳ್ಳುವದಕ್ಕೆ ಉಲ್ಲಾಸಿಸುವರು. ಕರ್ತನ ಜನರಿಗೆ ಪ್ರತಿವಾರವೂ ಎರಡು ಅಥವಾ ಹೆಚ್ಚು ಭಾನುವಾರಗಳನ್ನು ಆಚರಿಸಲು ಅನುಮತಿಯಾಗುವಂತೆ ತಮ್ಮ ಲೌಕಿಕ ವಿಷಯವಾಗಿ ಏರ್ಪಾಡುಗಳು ಮಾಡಲ್ಪಟ್ಟಲ್ಲಿ ಅನೇಕರು ಸಂತೋಷಿಸುವರು. ಆದರೆ ಭಾನುವಾರವನ್ನು ಸೂಕ್ತವಾಗಿ ಆಚರಿಸುವ ಸಲುವಾಗಿ (ಜನರಲ್ಲಿ) ಅತಿ ಸಾಮಾನ್ಯವಾಗಿ ವ್ಯಾಪಿಸಿಕೊಂಡಿರುವ ತಪ್ಪು ಕಲ್ಪನೆಗಳಿಂದ ಕರ್ತನ ಪ್ರತಿಷ್ಠಿತ ಜನರು ಮುಕ್ತರಾಗಬೇಕು.

## ಸಬ್ಬತ್ ವಿಶ್ರಾಂತಿ

ಇಸ್ರಾಯೇಲ್ಯರ ಧರ್ಮಶಾಸ್ತ್ರವು ಎರಡು ಸಬ್ಬತ್ತುಗಳನ್ನು ಒದಗಿಸಿಕೊಟ್ಟಿರುತ್ತದೆ. ಒಂದು, ಪ್ರತಿ ಏಳನೇ ವರುಷದ್ದಾಗಿದ್ದು, ಇದರ (ಏಳು) ಗುಣಿತಾಂಶಗಳು ಐವತ್ತನೇ ವರುಷದಲ್ಲಿ ಅಂದರೆ ಜೂಬಿಲಿ ಸಂವತ್ಸರದಲ್ಲಿ ಅಲ್ಲದೆ ಪೂರ್ಣವಾದ ಬಿಡುಗಡೆಯಲ್ಲಿ ನೆರವೇರಲ್ಪಡುತ್ತದೆ. ಮತ್ತೊಂದು ಪ್ರತಿ ಏಳನೇ ದಿನದ್ದಾಗಿದ್ದು, ಇದರ (ಏಳು) ಗುಣಿತಾಂಶಗಳು ಐವತ್ತನೇ ದಿನದಲ್ಲಿ ಅಂದರೆ ಪಂಚಾಶತ್ತಮ ದಿನದಲ್ಲಿ ನೆರವೇರಲ್ಪಡುತ್ತದೆ; ಈ ದಿನವು ವಿಶ್ರಾಂತಿಯನ್ನು ಮುಂದಾಗಿ ಸೂಚಿಸಿಸುವ ಛಾಯಾ ರೂಪವಾಗಿದ್ದು, ಈಗಲೂ ಸಹ ದೇವ ಜನರು ಇದರಲ್ಲಿ ಸೇರುವಂತಾಗಿರುವದು.

ಅಪೋಸ್ತಲನು ಈ ಎರಡನ್ನೂ ಇಬ್ರೀಯ 4:1–11 ವಚನಗಳಲ್ಲಿ ಉಲ್ಲೇಖಿಸಿರುವನು. ನಿಜರೂಪದ ಇಸ್ರಾಯೇಲ್ಯರು ಹೃದಯದಲ್ಲಿ ಅನುಭವಿಸುವ ವಿಶ್ರಾಂತಿ ಸಮಾಧಾನಗಳಲ್ಲಿ ಸಬ್ಬತ್ ದಿನವು ನೆರವೇರಲ್ಪಡುತ್ತದೆ. ಅದು ಅವರಲ್ಲಿ ನಿರಂತರವಾದ ಸಬ್ಬತ್ತಾಗಿರುವದು. ಅವರು ವಿಶ್ರಾಂತಿಯಲ್ಲಿ ಸೇರಿರುವರು. ದೇವರ ಶಾಂತಿಯು ತಮ್ಮ ಹೃದಯಗಳಲ್ಲಿ ಆಳ್ವಿಕೆಮಾಡುವ ಸ್ಥಿತಿಗೆ ಅವರು ತಲುಪಿರುವರು. ತಮ್ಮ ಸ್ವಂತ ಕ್ರಿಯೆಗಳಿಂದ ಅಂದರೆ ಯಾವ ವಿಧವಾದ ಕ್ರಿಯೆಗಳ ಮೂಲಕವಾಗಿ ಆದರೂ, ಅಂದರೆ ಸಬ್ಬತ್ತನ್ನು ಆಚರಿಸುವರಿಂದಾಗಲೀ ಅಥವಾ ಇನ್ನಾತರಿಂದಾಗಲೀ, ತಾವು ದೇವರನ್ನು ಮೆಚ್ಚಿಸಬಹುದೆಂಬ ನಿರೀಕ್ಷೆಯಿಂದ (ತಮ್ಮನ್ನು ಹೊರತುಪಡಿಸಿಕೊಂಡು) ಅವರು ವಿಶ್ರಾಂತಿ ಪಡೆಯುವರು. ಅವರು ವಿಶ್ರಾಂತಿಯಲ್ಲಿ ಸೇರಿರುವರು, ಏಕೆಂದರೆ ದೇವರು ಯೇಸುವಿನಲ್ಲಿ ಎಲ್ಲರಿಗೂ ಅವಶ್ಯಕವಾದ ಸಹಾಯವನ್ನು ಒದಗಿಸಿರುವನೆಂಬುದನ್ನು, ಹೀಗಾಗಿ ಅವರು "ಆತನಲ್ಲಿ ಪರಿಪೂರ್ಣತೆಯುಳ್ಳ ವರೆಂಬುದನ್ನು" ಅವರು ಕಂಡುಕೊಂಡಿರು–ವರು. ಈ ವಿಶ್ರಾಂತಿ ಸಮಾಧಾನಗಳನ್ನು ಯಾವ ಮನುಷ್ಯನೂ ಅವರಿಂದ ತೆಗೆಯಲಾರನು. ಅವರು ನಂಬಿಕೆಯ ಮೂಲಕವಾಗಿ ಕ್ರಿಸ್ತನಲ್ಲಿಯೂ, ದೇವರಲ್ಲಿಯೂ ನೆಲೆಗೊಂಡಿರುವ ಪರ್ಯಂತರ ಇದು ಅವರದ್ದಾಗಿರುವದು.

ಆದರೆ, ಅಪೋಸ್ತಲನು ತೋರಿಸಿಕೊಟ್ಟಿರುವಂತೆ, "ದೇವ–ಜನರು ಅನುಭವಿಸಲಿರುವ ವಿಶ್ರಾಂತಿಯು ಇನ್ನೂ ಉಂಟು" ಅಂದರೆ ಮುಂದೆ ದೊರೆಯಲಿರುವ ವಿಶ್ರಾಂತಿ. ಕ್ರೈಸ್ತಸಭೆಯು ತಮ್ಮ ಪುನರುತ್ಥಾನದಲ್ಲಿ ಮಾರ್ಪಟ್ಟಾಗ, ಅವರು ರಕ್ಷಕನಂತೆ ಮಾಡಲ್ಪಟ್ಟು ತಮ್ಮ ಕರ್ತನ ಸೌಭಾಗ್ಯದಲ್ಲಿ ಸೇರಿದಾಗ, ಆ ವಿಶ್ರಾಂತಿಯಲ್ಲಿ ಸೇರುವರು. ಅದು ಸಂಪೂರ್ಣವಾದ ವಿಶ್ರಾಂತಿಯಾಗಿರುವದು. ಲೋಕಕ್ಕೆ ಸಂಬಂಧಿಸಿದಂತೆ ಹೇಳುವದಾದರೆ, ಆ ಶ್ರೇಷ್ಠ ಮೆಸ್ಸೀಯನ ಒಂದು ಸಾವಿರ ವರುಷದ ಆಳ್ವಿಕೆಯು ಲೋಕದವರಿಗೆ ಸಾಮಾನ್ಯವಾಗಿರುವ ಸಬ್ಬತ್ತಾಗಿರುವದು; ಅದರಲ್ಲಿ ಅವರು ಪರಿಪೂರ್ಣತೆಯನ್ನು ಹೊಂದುವ ಸೌಭಾಗ್ಯವನ್ನು ಆ ಮಾತಿನ ಪ್ರತಿಯೊಂದು ಅರ್ಥದಲ್ಲಿಯೂ ಪಡೆಯುವರು ಮತ್ತು ಹೀಗೆ ದೇವರೊಂದಿಗೆ ಹೊಂದಾಣಿಕೆಗೆ ಬರುವದರ ಮೂಲಕ ಅವರು ವಿಶ್ರಾಂತಿಗೆ ಸೇರುವರು.

ಯೇಸುವು ತನ್ನ ಹಲವು ಅದ್ಭುತಗಳನ್ನು ಸಬ್ಬತ್ ದಿನದಲ್ಲಿ ಮಾಡಿದ್ದನು, ನಿಸ್ಸಂಶಯವಾಗಿ, ಭಾಗಶಃ ಇದು ಆ ಮಹಾ ಸಬ್ಬತ್, ಸಾವಿರ ವರುಷಗಳ ದಿನ, ಭೂಲೋಕದ ಇತಿಹಾಸದ ಏಳನೇ ಸಾವಿರ ವರುಷವು, ಆತನ ರಾಜ್ಯದ ಕಾಲವಾಗಿದ್ದು, ಅದರಲ್ಲಿ ಎಲ್ಲಾ ಮನುಷ್ಯರು ಪಾಪ ವ್ಯಾಧಿಗಳಿಂದ ಮತ್ತು ದುಃಖನೋವುಗಳಿಂದ ಸ್ವಸ್ಥಮಾಡಲ್ಪಟ್ಟು ಸಂಪೂರ್ಣವಾಗಿ ಪರಿಪೂರ್ಣಮನುಷ್ಯನ ಸ್ವಭಾವಕ್ಕೆ ಹಾಗೂ ಆದಾಮನಲ್ಲಿ ಕಳಕೊಂಡದ್ದಾಗಿದ್ದು ಕಲ್ವಾರಿಯಲ್ಲಿ ವಿಮೋಚಿಸಲ್ಪಟ್ಟ ಸಮಸ್ತವನ್ನೂ (ಹಿಂದಿರುಗಿಸಿ) ಕೊಡಲಾಗುವದು ಎಂಬುದರ ಮಹತ್ವವನ್ನು ಒತ್ತಿಹೇಳುವ ಸಲುವಾಗಿತ್ತು.

## ಸಬ್ಬತ್ತಿನಲ್ಲಿ ಒಳ್ಳೆಯದನ್ನು ಮಾಡುವದು

ಯೇಸುವು ಶರೀರ ಸಂಬಂಧದಲ್ಲಿ ಒಬ್ಬ ಯೆಹೂದ್ಯನಾ–ಗಿದ್ದರಿಂದಲೂ ಮತ್ತು ಹೀಗಾಗಿ ಯೆಹೂದ್ಯರ ಎಲ್ಲಾ ಆಜ್ಞಾವಿಧಿಗಳಿಗೆ ಆತನು ಬದ್ಧನಾಗಿದ್ದುದರಿಂದಲೂ, ಆ ಆಜ್ಞಾವಿಧಿಗಳಿಗೆ ವಿರುದ್ಧವಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ–ವೆಂಬುದು ಇದನ್ನು ಅನುಸರಿಸಿ ಹೋಗುತ್ತದೆ. ಆತನಿಗೆ ಇದನ್ನು ತೆಗೆದು ಹಾಕಲು ಸಾಧ್ಯವಿರಲಿಲ್ಲ, ಇಲ್ಲವೆ ಸಬ್ಬತ್ತಿನ ನಿಜವಾದ ಅರ್ಥವನ್ನು ಆತನು ಯೆಹೂದ್ಯರಿಗೆ ವಿವರಿಸಿ ಹೇಳುವದೂ ಸೂಕ್ತವಾಗಿರಲಿಲ್ಲ. ಪಂಚಾಶತ್ತಮ ದಿನದ ನಂತರದಲ್ಲಿ ಆತ್ಮನಿಂದ ಹುಟ್ಟುವಿಕೆಯ ತರುವಾಯ ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಎಲ್ಲವೂ ಮುಂದೆ ಬರುವಂಥದಾಗಿತ್ತು; ಯಾಕೆಂದರೆ "ಪ್ರಾಕೃತ

ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ...ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು." ಆದರೆ ಅವರ ಗುರುಗಳು (ರಬ್ಬಿಗಳು), ಧರ್ಮೋಪದೇಶಕರು ಮತ್ತು ಫರಿಸಾಯರ ಬೋಧನೆಗಳ ಮೂಲಕವಾಗಿ ನುಸುಳಿ ಬಂದಿದ್ದ ಧರ್ಮಶಾಸ್ತ್ರ ಸಂಬಂಧವಾದ ಕೆಲವು ತಪ್ಪು ಗ್ರಹಿಕೆಗಳನ್ನು ಸರಿಪಡಿಸಲು ಯೇಸುವಿಗೆ ಸಾಧ್ಯವಾಗಿರಲು ಅದನ್ನು ಆತನು ಮಾಡಿದ್ದನು.

ಇವರು ತೋರಿಕೆಗಾಗಿ ಧರ್ಮಶಾಸ್ತ್ರವಿಧಿಗಳ ಅಕ್ಷರಾರ್ಥ–ವನ್ನು ಕೆಲವು ರೀತಿಯಲ್ಲಿ ಉತ್ಪ್ರೇಕ್ಷೆಗೊಳಿಸಿ, ಅದರ ಒಳಾರ್ಥವನ್ನು ಪೂರ್ಣವಾಗಿ ನಿರ್ಲಕ್ಷಿಸಿದ್ದರು. ಹೀಗೆ ಯೇಸುವಿನ ಶಿಷ್ಯರು ಗೋದಿಯ ಹೊಲವನ್ನು ಹಾದುಹೋಗುವಾಗ ಕೆಲವು ಗೋದಿ ಕಾಳುಗಳನ್ನು ತಿನ್ನುವ ಮೊದಲು ಕೈಯಿಂದ ಹೊಸಕಿದಾಗ ಫರಿಸಾಯರು ಅವರು ಸಬ್ಬತ್ತನ್ನು ಉಲ್ಲಂಘಿಸುತ್ತಿರುವರೆಂದು ಅಂದರೆ (ಗೋದಿಯನ್ನು) ಒನೆದು ತೂರುತ್ತಿರುವರೆಂದು ದೂರಿದ್ದರು. ಇದು ಧರ್ಮಶಾಸ್ತ್ರನಿಯಮದ ಉದ್ದೇಶವಲ್ಲ–ವೆಂಬುದನ್ನು ಯೇಸುವು ತೋರಿಸಿಕೊಟ್ಟಿದ್ದನು. ಯಾವ ಒಳ್ಳೆಯ ಅಥವಾ ಅವಶ್ಯಕವಾದ ಕಾರ್ಯಗಳಿಗೆ ಅಡ್ಡಿಮಾಡುವ ಸಲುವಾಗಿ ಅದನ್ನು (ಸಬ್ಬತ್ತನ್ನು) ಮಾಡಿದ್ದಾಗಿರಲಿಲ್ಲ, ಆದರೆ ಜನರಿಗೆ ಹಿತವನ್ನುಮಾಡುವ ಸಲುವಾಗಿತ್ತು. ಧರ್ಮೋಪದೇಶಕರ ಅನುಸಾರ, ಸಬ್ಬತ್ ದಿನದಲ್ಲಿ ಕಚ್ಚುತ್ತಿರುವ ಸೊಳ್ಳೆಯನ್ನು ಹುಡುಕುವದು ಪಾಪವಾಗುತ್ತಿತ್ತು, ಯಾಕೆಂದರೆ ಅದು "ಬೇಟೆ" ಎಂದಾಗುತ್ತಿತ್ತು. ಹೀಗೆ ಅವರು ಸಮಯೋಚಿತವಾಗಿರುವ ದೇವರ ಧರ್ಮಶಾಸ್ತ್ರನಿಯಮವನ್ನು ಜನರಿಗೆ ಹಲವಾರು ವಿಧದಲ್ಲಿ ಅನುಚಿತವಾಗಿ ಕಾಣುವಂತೆ ಮಾಡಿದ್ದರು. ಅಲ್ಲದೆ ಧರ್ಮಶಾಸ್ತ್ರ–ದಲ್ಲಿನ ಲಘುವಾದ ವಿಷಯದಲ್ಲಿ ನಿರ್ದಿಷ್ಟತೆಯುಳ್ಳವರಾಗಿದ್ದರೂ ಅದರಲ್ಲಿ ಗೌರವವಾದದ್ದನ್ನು ಅಂದರೆ ನೀತಿ ಪ್ರೀತಿ ಮತ್ತು ಕರುಣೆಗೆ ಸಂಬಂಧಿಸಿದ ವಿಷಯಗಳನ್ನು ನಿರ್ಲಕ್ಷಿಸುವರಾಗಿದ್ದರು.

ನಮ್ಮೆದುರಿಗೆ ಇರುವ ಪಾಠದಲ್ಲಿ, ಸಬ್ಬತ್ತಿನಲ್ಲಿ ಸ್ವಸ್ಥಮಾಡಿದ ಎರಡು ದೃಷ್ಟಾಂತಗಳು ನಮ್ಮ ಮುಂದಿರುವದು. ಒಬ್ಬ ಸ್ತ್ರೀಯು ಹದಿನೆಂಟು ವರುಷಗಳಿಂದ ಊನಳಾಗಿದ್ದು ಅದು ಅವಳನ್ನು ನಡುಬೊಗ್ಗಿದವಳನ್ನಾಗಿ ಮಾಡಿತ್ತು. ಯೇಸುವು ಸಬ್ಬತ್ ದಿನದಲ್ಲಿ ಆಕೆಯನ್ನು ಆ ಕಟ್ಟಿನೊಳಗಿಂದ ಬಿಡಿಸಿದ್ದನು. ಆತನು ಅವಳ ತಲೆಯ ಮೇಲೆ ತನ್ನ ಕೈಗಳನ್ನಿಟ್ಟು ಆಕೆಗೆ–ಅಮ್ಮಾ, ನಿನಗೆ ರೋಗ ಬಿಡುಗಡೆಯಾಗಿತು ಎಂದು ಹೇಳಿದನು. ಮತ್ತು ಆಕೆಯು ನೆಟ್ಟಗಾಗಿ ದೇವರನ್ನು ಕೊಂಡಾಡಿದಳು. ಆದರೆ ಸಭಾಮಂದಿರದ ಅಧಿಕಾರಿಯು ರೋಷಗೊಂಡು ಜನರಿಗೆ ಕೆಲಸ ಮಾಡುವದಕ್ಕೆ ಆರು ದಿನಗಳು ಅವೆಯಷ್ಟೆ; ಆ ದಿವಸಗಳಲ್ಲಿ ಬಂದು ವಾಸಿ ಮಾಡಿಸಿಕೊಳ್ಳಿರಿ, ಸಬ್ಬತ್ ದಿನದಲ್ಲಿ ಮಾತ್ರ ಬೇಡ ಎಂದು ಹೇಳಿದನು.

ಇದು ವಿಶೇಷವಾಗಿ ಯೇಸುವನ್ನು ಗದರಿಸುವ ಉದ್ದೇಶವುಳ್ಳದ್ದಾಗಿದ್ದು, ಆತನು ಸಬ್ಬತ್ತಿನ ವಿಷಯವಾಗಿ ಇರಬೇಕಾದಷ್ಟು ಜಾಗ್ರತೆಯಿಲ್ಲದವನಾಗಿದ್ದು ಆತನು ಅಷ್ಟಾಗಿ ಪರಿಶುದ್ಧನಲ್ಲವೆಂದೂ ಆದರೆ ಧರ್ಮಶಾಸ್ತ್ರನಿಯಮವನ್ನು ಉಲ್ಲಂಘಿಸುವವನಾಗಿರುವನೆಂದೂ ತಿಳಿಸುವ ಸಲುವಾಗಿತ್ತು. ಆದರೆ ಯೇಸು ಉತ್ತರವಾಗಿ, "ಕಪಟಿಗಳು ನೀವು, ನಿಮ್ಮಲ್ಲಿ ಪ್ರತಿಯೊಬ್ಬನೂ ಸಬ್ಬತ್ ದಿನದಲ್ಲಿ ತನ್ನ ಎತ್ತನ್ನಾಗಲಿ ಕತ್ತೆಯನ್ನಾಗಲಿ ಗೋದಲಿಯಿಂದ ಬಿಚ್ಚಿ ನೀರು ಕುಡಿಸುವದಕ್ಕಾಗಿ ಹಿಡುಕೊಂಡು ಹೋಗುತ್ತಾನಲ್ಲವೇ. ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್ ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ?" ಎಂದು ಹೇಳಿದನು. ಮತ್ತು ಆತನ ವೈರಿಗಳು ನಾಚಿಕೆಗೊಳಗಾದರು.

ಮತ್ತೊಂದು ಸಂಗತಿಯು ಜಲೋದರವುಳ್ಳ ಒಬ್ಬ ಮನುಷ್ಯನ ವಿಷಯದ್ದಾಗಿತ್ತು. ಯೇಸುವು ಅವರ ಮನೋಭಾವವನ್ನು ತಿಳಿದು ಆ ಸಂದರ್ಭದಲ್ಲಿ ಈ ವಿಷಯವನ್ನು ಮುಂದಾಗಿ ಚರ್ಚಿಸುವ ವನಾಗಿ, "ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ? ಸರಿಯಲ್ಲವೋ ಎಂದು ಧರ್ಮೋಪದೇಶಕರನ್ನು ಮತ್ತು ಫರಿಸಾಯನ್ನು ಕೇಳಿದನು. ಅವರು ಉತ್ತರಿಸಲಿಲ್ಲ. ಆತನು ಆ ಅಸ್ವಸ್ಥ ಮನುಷ್ಯನ ಕೈಹಿಡಿದು ಅವನಿಗೆ ವಾಸಿಮಾಡಿ, ಟೀಕೆಮಾಡುವವರನ್ನು–"ನಿಮ್ಮಲ್ಲಿ ಯಾವನೋ ಒಬ್ಬನ ಕತ್ತೆಯಾಗಲಿ ಎತ್ತಾಗಲಿ ಬಾವಿಯಲ್ಲಿ ಬಿದ್ದರೆ ಅವನು ತಡಮಾಡದೆ ಸಬ್ಬತ್ ದಿನದಲ್ಲಾದರೂ ಮೇಲಕ್ಕೆ ತೆಗೆಯುವದಿಲ್ಲವೇ?" ಎಂದು ಕೇಳಿದನು. ಆದರೆ ಅವರಿಗೆ ಉತ್ತರಿಸಲಾಗಲಿಲ್ಲ.

ಸಬ್ಬತ್ ಅಂದರೆ ದೇವರು ತನ್ನ ಜನರಿಗೆ ದಯಪಾಲಿಸಿರುವ ವಿಶ್ರಾಂತಿಯ ಬಗ್ಗೆ ಸೂಕ್ತವಾದ ತಿಳುವಳಿಕೆಯು ಒಂದು ದೊಡ್ಡ ಆಶೀರ್ವಾದವಾಗಿರುವದು. "ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ." ಅದು ಒಂದು ನಿರಂತರವಾದ ವಿಶ್ರಾಂತಿ, ಒಂದು ನಿರಂತರವಾದ ಸಬ್ಬತ್ತು. ಮತ್ತು ಇವುಗಳು ಕರ್ತನ ಹೆಸರಿನಲ್ಲಿ ಕೂಡಿಬರುವದಕ್ಕಾಗಿ, ಆರಾಧಿಸು –ವದಕ್ಕಾಗಿ ಸ್ತುತಿಸುವದಕ್ಕಾಗಿ ಅಧ್ಯಯನ ಮತ್ತು ಅನ್ಯೋನ್ಯತೆಗಾಗಿ ಒಂದು ವಿಶೇಷ ಅವಕಾಶವನ್ನು ಒದಗಿಸಬಹುದಾದ್ದರಿಂದ ಇಂಥವರೆಲ್ಲರೂ ಇದನ್ನು ಪಡೆಯಲು ಸಂತೋಷವುಳ್ಳವರಾಗಿರು –ವರು. ಯಾವ ದಿನವೆಂಬುದರ ಬಗ್ಗೆ ಪರಿಗಣಿಸದೆ, ಅಪೋಸ್ತಲನು ನಮಗೆ ಸಲಹೆ ಮಾಡಿರುವದು: ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ನಾವು ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ. ಆ ದಿನವೆಂದರೆ ಮೆಸ್ಸೀಯನ ರಾಜ್ಯವು ಸಮೀಪಿಸುತ್ತಿರುವ ಹಾಗೂ ರಾತ್ರಿಯ ಕರಾಳ ನೆರಳು, ಅಜ್ಞಾನ ಮೂಢನಂಬಿಕೆಗಳು ಗತಿಸಿ ಹೋಗುತ್ತಿರುವ ದಿನ. – ಇಬ್ರೀಯ 10:25

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಯೆರೂಸಲೇಮ್ | ದೇವಾಲಯ ಪ್ರತಿಷ್ಠೆಯ ಹಬ್ಬದಲ್ಲಿ ಯೇಸು, ಒಳ್ಳೆಯ ಕುರುಬನು | -- | -- | -- | 10:1–39 |

# ಯೋಹಾನ 10:1–39

ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರೀ ಹಟ್ಟಿಯೊಳಗೆ ಬಾಗಲಿಂದ ಬಾರದೆ ಮತ್ತೆಲ್ಲಿಂದಾದರೂ ಹತ್ತಿಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ. ಬಾಗಲಿಂದ ಒಳಗೆ ಬರುವವನು ಆ ಕುರಿಗಳ ಕುರುಬನು. ಬಾಗಲು ಕಾಯುವವನು ಅವನಿಗೆ ಬಾಗಲನ್ನು ತೆರೆಯುತ್ತಾನೆ, ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ. ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ. ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ. ಈ ಉಪಮಾನವನ್ನು ಯೇಸು ಅವರಿಗೆ ಹೇಳಿದನು; ಆದರೂ ಆತನ ಮಾತಿನ ಅರ್ಥವನ್ನು ಅವರು ಗ್ರಹಿಸಲಿಲ್ಲ.

ಆದಕಾರಣ ಯೇಸು ಮತ್ತೂ ಅವರಿಗೆ–ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರಿಗಳಿಗೆ ನಾನೇ ಬಾಗಲಾಗಿದ್ದೇನೆ. ನನಗಿಂತ ಮುಂಚೆ ಬಂದವರೆಲ್ಲರು ಕಳ್ಳರೂ ಸುಲುಕೊಳ್ಳುವವರೂ ಆಗಿದ್ದಾರೆ; ಆದರೆ ಕುರಿಗಳು ಅವರಿಗೆ ಕಿವಿಗೊಡಲಿಲ್ಲ. ನಾನೇ ಆ ಬಾಗಿಲು; ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು, ಮೇವನ್ನು ಕಂಡುಕೊಳ್ಳುವನು, ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು.

ನಾನೇ ಒಳ್ಳೇ ಕುರುಬನು; ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಅಗಿರದೆ ತೋಳ ಬರುವದನ್ನು ಕಾಣುತ್ತಲೇ ಕುರಿಗಳನ್ನು ಬಿಟ್ಟು ಓಡಿಹೋಗುತ್ತಾನೆ; ತೋಳವು ಅವುಗಳನ್ನು ಹಿಡುಕೊಂಡು ಹಿಂಡನ್ನು ಚದುರಿಸುತ್ತದೆ. ಅವನು ಕೂಲಿಯಾಳು; ಕುರಿಗಳ ಚಿಂತೆ ಅವನಿಗಿಲ್ಲ. ನಾನೇ ಒಳ್ಳೇ ಕುರುಬನು; ತಂದೆಯು ನನ್ನನ್ನು ನಾನು ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನ್ನು ತಿಳಿದವೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ. ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವದು, ಒಬ್ಬನೇ ಕುರುಬನಿರುವನು. ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು; ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ ಅಂದನು.

ಈ ಮಾತುಗಳ ದೆಸೆಯಿಂದ ಯೆಹೂದ್ಯರಲ್ಲಿ ತಿರಿಗಿ ಭೇದವಾಯಿತು. ಅವರಲ್ಲಿ ಅನೇಕರು–ಅವನಿಗೆ ದೆವ್ವಹಿಡಿದದೆ, ಹುಚ್ಚು ಹಿಡಿದದೆ, ಯಾಕೆ ಅವನ ಮಾತು ಕೇಳುತ್ತೀರಿ? ಅಂದರು. ಮತ್ತು ಕೆಲವರು–ಇವು ದೆವ್ವಹಿಡಿದವನ ಮಾತುಗಳಲ್ಲ; ದೆವ್ವವು ಕುರುಡರಿಗೆ ಕಣ್ಣುಕೊಡಬಲ್ಲದೇ? ಅಂದರು.

ಆ ಕಾಲದಲ್ಲಿ ದೇವಾಲಯಪ್ರತಿಷ್ಠೆಯ ಹಬ್ಬವು ಯೆರೂಸಲೇಮಿನಲ್ಲಿ ನಡೆಯಿತು; ಆಗ ಚಳಿಕಾಲವಾಗಿತ್ತು. ಯೇಸು ದೇವಾಲಯದೊಳಗೆ ಸೊಲೊಮೋನನ ಮಂಟಪದಲ್ಲಿ ತಿರುಗಾಡುತ್ತಾ ಇರುವಾಗ ಯೆಹೂದ್ಯರು ಆತನನ್ನು ಸುತ್ತಿಕೊಂಡು–ಇನ್ನು ಎಷ್ಟು ಕಾಲ ನಮ್ಮಲ್ಲಿ ಅನುಮಾನ ಹುಟ್ಟಿಸುತ್ತೀ? ನೀನು ಕ್ರಿಸ್ತನಾಗಿದ್ದರೆ ಅದನ್ನು ನಮಗೆ ಸ್ಪಷ್ಟವಾಗಿ ಹೇಳು ಅಂದರು. ಅದಕ್ಕೆ ಯೇಸು–ನಿಮಗೆ ಹೇಳಿದೆನು, ಆದರೆ ನೀವು ನಂಬದೆ ಇದ್ದೀರಿ; ನನ್ನ ತಂದೆಯ ಹೆಸರಿನಲ್ಲಿ ನಾನು ಮಾಡುವ ಕ್ರಿಯೆಗಳೇ ನನಗೆ ಸಾಕ್ಷಿಯಾಗಿವೆ. ಆದರೂ ನೀವು ನನ್ನ ಕುರಿಗಳಿಗೆ ಸೇರಿದವರಲ್ಲವಾದದರಿಂದ ನಂಬದೆ ಇದ್ದೀರಿ. ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ. ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು. ನನ್ನ ತಂದೆಯು ನನಗೆ ಕೊಟ್ಟದ್ದು ಎಲ್ಲಾದ್ದಕ್ಕಿಂತ ದೊಡ್ಡದು; ಅದನ್ನು ತಂದೆಯ ಕೈಯೊಳಗಿಂದ ಯಾರೂ ಕಸಕೊಳ್ಳಲಾರರು. ನಾನೂ ತಂದೆಯೂ ಒಂದಾಗಿದ್ದೇವೆ ಅಂದನು.

ಯಹೂದ್ಯರು ಆತನನ್ನು ಹೊಡೆದು ಕೊಲ್ಲಬೇಕೆಂದು ತಿರಿಗಿ ಕಲ್ಲುಗಳನ್ನು ತೆಗೆದುಕೊಂಡು ಬರಲು ಯೇಸು ಅವರನ್ನು–ತಂದೆಯ ಕಡೆಯಿಂದ ಅನೇಕ ಒಳ್ಳೇ ಕ್ರಿಯೆಗಳನ್ನು ನಿಮಗೆ ತೋರಿಸಿದೆನು; ಅವುಗಳಲ್ಲಿ ಯಾವ ಕ್ರಿಯೆಯ ದೆಸೆಯಿಂದ ನನ್ನ ಮೇಲೆ ಮೇಲೆ ಕಲ್ಲೆಸೆಯುತ್ತೀರಿ ಎಂದು ಕೇಳಿದ್ದಕ್ಕೆ ಯೆಹೂದ್ಯರು–ನಾವು ನಿನ್ನ ಮೇಲೆ ಕಲ್ಲೆಸೆಯುವದು ಒಳ್ಳೆಯ ಕಾರ್ಯದ ದೆಸೆಯಿಂದಲ್ಲ, ದೇವದೂಷಣೆಯ ದೆಸೆಯಿಂದಲೂ ನೀನು ಮನುಷ್ಯನಾಗಿದ್ದು ನಿನ್ನನ್ನು ನೀನೇ ದೇವರನ್ನಾಗಿ ಮಾಡಿಕೊಳ್ಳುವದರ

ದೆಸೆಯಿಂದಲೂ ನಿನ್ನ ಮೇಲೆ ಕಲ್ಲೆಸೆಯುತ್ತೇವೆ ಅಂದರು. ಅದಕ್ಕೆ ಯೇಸು–ನೀವು ದೇವರುಗಳೇ ಎಂದು ನಾನು ಹೇಳಿದೆನು ಎಂಬದಾಗಿ ನಿಮ್ಮ ಧರ್ಮಶಾಸ್ತ್ರದಲ್ಲಿ ಬರೆದದೆಯಲ್ಲಾ; ಶಾಸ್ತ್ರವು ಸುಳ್ಳಾಗಲಾರದಷ್ಟೆ; ಹಾಗಾದರೆ ದೇವರ ವಾಕ್ಯವನ್ನು ಹೊಂದಿದ ವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಠೆಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ? ನಾನು ನನ್ನ ತಂದೆಯ ಕ್ರಿಯೆಗಳನ್ನು ಮಾಡದಿದ್ದರೆ ನನ್ನ ಮಾತನ್ನು ನಂಬಬೇಡಿರಿ; ಮಾಡಿದರೆ ನನ್ನ ಮಾತನ್ನು ನಂಬದೆ ಇದ್ದರೂ ಆ ಕ್ರಿಯೆಗಳ ಸಾಕ್ಷಿಯನ್ನಾದರೂ ನಂಬಿರಿ; ಆಗ ನನ್ನಲ್ಲಿ ತಂದೆಯು ಇದ್ದಾನೆಂತಲೂ ತಂದೆಯಲ್ಲಿ ನಾನು ಇದ್ದೇನೆಂತಲೂ ನೀವು ತಿಳುಕೊಂಡು ಮನನ ಮಾಡಿ–ಕೊಳ್ಳುವಿರಿ ಅಂದನು. ಅವರು ತಿರಿಗಿ ಆತನನ್ನು ಹಿಡಿಯುವದಕ್ಕೆ ನೋಡಿದರು; ಆದರೆ ಅವರ ಕೈಗೆ ತಪ್ಪಿಸಿಕೊಂಡು ಹೋದನು.

*****

# ಆ ಕುರುಬನು, ಆ ಬಾಗಿಲು, ಆ ಕುರಿಹಿಂಡು

**ರೀಪ್ರಿಂಟ್ಸ್ ಪುಟ 4157**

## ಯೊಹಾನ 10:1–18

**"ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ." – ಯೋಹಾನ 10:11**

ಸತ್ಯವೇದವು ನಮ್ಮ ಕರ್ತನಿಗೆ ತನ್ನಲ್ಲಿ ನಂಬಿಗಸ್ತರಾದ–ವರೊಂದಿಗೆ ಇರುವ ತನ್ನ ಸಂಬಂಧವನ್ನು ವರ್ಣಿಸುವ ನಿಟ್ಟಿನಲ್ಲಿ ಹಲವು ಬಗೆಯ ಸೊಗಸಾಗಿಯೂ ಸ್ಪಷ್ಟವಾಗಿಯೂ ಇರುವ ಬಿರುದುನಾಮಾಂಕಿತಗಳನ್ನು ನಿಗದಿಮಾಡಿಕೊಟ್ಟಿರುತ್ತದೆ. ಇವುಗಳಲ್ಲಿ ಅತಿ ಸೊಗಸಾಗಿಯೂ ಮನತಟ್ಟುವಂಥದಾಗಿಯೂ ಇರುವದೆಂದರೆ ಅದು ಒಳ್ಳೆಯ ಕುರುಬನ ಬಗ್ಗೆ, ಅಥವಾ ಹೆಚ್ಚು ಅಕ್ಷರಾರ್ಥದಲ್ಲಿ, ಭವ್ಯವಾದ ಕುರುಬನು, ಆದರ್ಶ ಕುರುಬನು ಎನ್ನುವ ಬಗ್ಗೆ. ಇದರಂತೆಯೇ ನಮ್ಮ ಕರ್ತನ ಹಿಂಬಾಲಕರಿಗೆ ಅನ್ವಯವಾಗುವ ಹಲವು ಬಗೆಯ ಹೆಸರುಗಳಲ್ಲಿ "ಕುರಿ" ಎಂಬ ಪದವು ಬಹು ಪ್ರಚಲಿತವೂ ಅತಿ ಹೆಚ್ಚು ಸರಿಹೊಂದುವಂಥದೂ ಸಹ ಆಗಿರುವದು. ಖಂಡಿತವಾಗಿಯೂ ಇಂಥಾ ಒಂದು ಸಚಿತ್ರ ವಿವರಣೆಯನ್ನು ಬಳಸಲು ಪ್ರಾಕೃತ ಮನುಷ್ಯನಿಗೆ ಎಂದೂ ಹೊಳೆಯಲಾರದು. ಸಚಿತ್ರ ವಿವರಣೆಯಲ್ಲಿ ನಾವು ಗಮನಿಸಿಬೇಕೆನ್ನುವ ಅಂಶವೇನೆಂದರೆ ಇಂಗ್ಲೆಂಡ್ ದೇಶದ (ಪಾರ್ಲಿಮೆಂಟಿನ) ಮೇಲ್ಮನೆಯ ಸದಸ್ಯರುಗಳು ಹಾಗು ಶ್ರೀಮಂತರುಗಳು ಹಲವಾರು ಹಸ್ತಾಕ್ಷರ ಚಿನ್ಹೆ (Signets), ತೋಳುಡುಗೆ, ಮುಂತಾದವುಗಳನ್ನು, ಅಳವಡಿಸಿಕೊಂಡಿದ್ದು, ಇಂಥವುಗಳಲ್ಲಿ ಹಲವಾರು ಪ್ರಾಣಿಗಳು ಇಲ್ಲವೇ ಪ್ರಾಣಿಗಳ ತಲೆಯ (ಚಿತ್ರಗಳು) ಕಾಣಬರುತ್ತದೆ. ಇಂಥ ಯಾವದೇ ಚಿನ್ಹೆಗಳಲ್ಲಿ ಯಾರಾದರೂ ಕುರಿಯ ತಲೆ ಇರುವದನ್ನು ಎಂದಾರೂ ನೋಡಿರುವರೇ? ಇಲ್ಲವೆಂದು ನಾವು ನೆನಸುತ್ತೇವೆ. ಭೂಲೋಕದ ಶ್ರೀಮಂತರುಗಳು ಕುರಿಯ ಚಿನ್ಹೆಯನ್ನು ಅಳವಡಿಸಿಕೊಳ್ಳುವದನ್ನು ಕಲ್ಪಿಸಿಕೊಳ್ಳಲು ನಮಗೆ ಸಾಧ್ಯವಾದಲ್ಲಿ ಖಂಡಿತ ಅದು ಗಡಸುಕೊಂಬಿನ ಟಗರನ್ನು ಸೂಚಿಸುವಂಥ–'ದ್ದಾಗಿರುವದು. ಸಿಂಹದ ತಲೆ, ಹುಲಿಯ ತಲೆ, ಹದ್ದಿನ ತಲೆ, ಇಲ್ಲವೇ ವರ್ಣಿಸಲಾಗದ ಕ್ರೂರಸ್ವಭಾವವುಳ್ಳ ಪ್ರಾಣಿಯ ತಲೆ, ಬೆಂಕಿ ಉಗುಳುವ ಮೊಸಳೆಗಳು (ಡ್ರಾಗನ್), ಮುಂತಾದವುಗಳು, ಇಂಥವುಗಳನ್ನು ಸಾಧಾರಣವಾಗಿ ಆಯ್ಕೆಮಾಡಲಾಗುವದು. ಪ್ರಾಕೃತ ಮನುಷ್ಯನು ಬಲಿಷ್ಠನೂ ಕ್ರೂರತೆಯುಳ್ಳವನೂ ಆಗಿ ತೋರಬೇಕೆಂಬ ಮತ್ತು ಇತರರಿಗೆ ಕಂಡುಬರಬೇಕೆಂಬ ಸಹಜ ಮನೋಭಿಲಾಷೆಯನ್ನು ಇದು ಸೂಚಿಸುವದು. ತನ್ನನ್ನು ಒಳ್ಳೆಯ ಕುರುಬನಂತೆ ತೋರಿಸಿಕೊಳ್ಳುವಾತನು ಮತ್ತು ಆತನ ಹಿಂಬಾಲಕರು ಕುರಿಗಳಂತೆ ತೋರಿಬರುವದು ಎಂಬದು ಸಹಜ ಮನುಷ್ಯನು ಹೊಂದಿರುವದಕ್ಕಿಂತಲೂ ಸಂಪೂರ್ಣವಾಗಿ ವಿಭಿನ್ನವಾದ ಅಭಿಪ್ರಾಯದ್ದಾಗಿರುವದು. ಹಾಗು ಆತನ ಹಿಂಬಾಲಕರಾಗಿರುವಂಥ ನಾವುಗಳು ಇದನ್ನು ಗಮನಿಸಲೇಬೇಕು ಅಲ್ಲದೆ ಇದನ್ನು ಮನಗಂಡವರಾಗಿ ಕುರುಬನ ಸಂಬಂಧದಲ್ಲಿರುವ ನಾವುಗಳು ಆತನೊಡನೆ ಕುರಿಯಂಥ ಸ್ವಭಾವವನ್ನು ಹೆಚ್ಚುಹೆಚ್ಚಾಗಿ

## ಕುರಿಹಟ್ಟಿಯ ಬಾಗಿಲು

ಸಾಮ್ಯದಲ್ಲಿನ ಪಾಠವು ತಾನಾಗಿಯೇ ಎರಡು ವಿಭಾಗಗಳಾಗಿ ವಿಂಗಡಿಸಿಕೊಳ್ಳುತ್ತದೆ, ಮೊಟ್ಟ ಮೊದಲನೆಯದಾಗಿ ಯೇಸುವನ್ನು ಕುರಿಹಟ್ಟಿಯ ಬಾಗಿಲಾಗಿಯೂ ಮತ್ತು ಎರಡನೆಯದಾಗಿ ಕುರುಬನನ್ನಾಗಿಯೂ ಸೂಚಿಸುವಂಥದು. ಸಾಮ್ಯದಲ್ಲಿ ವರ್ಣಿಸ–ಲಾದ ಕುರಿಹಟ್ಟಿಯ ಬಗ್ಗೆ ಅದರೊಡನೆ ನೀಡಲಾದ ನಿದರ್ಶನದ ಮೂಲಕವಾಗಿ ಬಹು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿ–ರುವದು. ಅದು ಸಂರಕ್ಷಿತವಾದ, ವಿಶ್ರಮದಾಯಕವಾದ, ಸದ್ದಿಲ್ಲದೆ ನುಸುಳಿ ಬರುವ ಕಾಡು ಮೃಗಗಳು ಮತ್ತು ಕಳ್ಳರಿಂದ ಕಾಪಾಡಲ್ಪಟ್ಟ ಒಂದು ಸ್ಥಳವಾಗಿತ್ತು. ಈ ಹಟ್ಟಿಯೊಳಗೆ ಹೋಗಲು ಕೇವಲ ಒಂದೇ ಬಾಗಿಲು ಅಲ್ಲಿದ್ದು ಅದು ಕಾವಲುಗಾರನಿಂದ ಕಾಯಲ್ಪಟ್ಟು ಆತನು ನಿಜವಾದ ಕುರುಬನನ್ನು ತಿಳಿದವನಾಗಿದ್ದು ಅವನನ್ನಲ್ಲದೆ ಬೇರೆ ಯಾರನ್ನೂ ಒಳಗೆ ಬಿಡುವದಿಲ್ಲವೆಂಬುದನ್ನು ಕಲ್ಪಿಸಕೊಳ್ಳಲಾಗಿತ್ತು. ನಮ್ಮ ಕರ್ತನು ತಾನೇ ಯೆಹೋವನ ಕುರಿಹಿಂಡಿಗೆ ನಿಜವಾದ ಕುರುಬನಾಗಿರುವೆನೆಂದೂ ಬಾಗಿಲು ಕಾಯುವವನು

ತನ್ನೊಬ್ಬನನ್ನೇ ಮಾತ್ರ ಒಳಗೆ ಹೋಗಲು ಬಿಡುವನೆಂದೂ ಹಾಗಾಗಿ ಆ ಕುರಿಗಳನ್ನು ನಿಯಂತ್ರಿಸಲು ತನ್ನೊಬ್ಬನಿಗೇ ಮಾತ್ರ ಹಕ್ಕಿದ್ದು ತನಗೇ ಅವುಗಳಿಗೆ ರಕ್ಷಣೆಯನ್ನು ಒದಗಿಸಲು ಸಾಧ್ಯವೆಂದು ಪ್ರಕಟಿಸಿಕೊಂಡಿದ್ದನು. ಹೀಗೆ ನಿಜವಾದುದಕ್ಕೆ ಮತ್ತು ಸುಳ್ಳಾದುದಕ್ಕೆ ಇರುವ ತಾರತಮ್ಯವನ್ನು ತಿಳಿದ ಬಾಗಿಲ ಕಾಯುವವನು ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಗೆ ಹೋಲಿಕೆಯಾಗಿದ್ದನು. ಧರ್ಮಶಾಸ್ತ್ರವಿಧಿಗಳಿಗೆ ಹೊಣೆಯಾಗಿ ಉತ್ತರಿಸಲಾರದವನಿಗೆ, ಅದರ ಆಜ್ಞಾವಿಧಿಗಳ ಬೇಡಿಕೆಗಳನ್ನು ಈಡೇರಿಸಲಾಗದವನಿಗೆ, ಒಳ್ಳೆಯ ಕುರುಬನಾದ ಮೆಸ್ಸೀಯ–ನಾಗಿರುವನೆಂದು ಹೇಳಿಕೊಳ್ಳುವದನ್ನು ಸಮರ್ಥಿಸಿಕೊಳ್ಳಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ನಮ್ಮ ಕರ್ತನು ಧರ್ಮಶಾಸ್ತ್ರವಿಧಿಗಳ ಬೇಡಿಕೆಗಳೆಲ್ಲವನ್ನು ಸಂಪೂರ್ಣವಾಗಿ ಈಡೇರಿಸಿದ್ದನು. "ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ." ಆತನು ಆಗಲೇ ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಗಿದ್ದನು. ಆತನು ನ್ಯಾಯಸಮ್ಮತನಾದ (ಹಕ್ಕುಳ್ಳ) ಕುರುಬನೆಂದು ನಮ್ಮಿಂದ ಹೀಗೆ ಗುರುತಿಸಲ್ಪಟ್ಟಿರುವನು. ಇತರರು ಆತನ ಹೆಸರಿನಲ್ಲಿ ಬಂದು (ಸುಳ್ಳು ಮೆಸ್ಸೀಯರಾಗಿ) ಮೆಸ್ಸೀಯನಂತೆ ತೋರ್ಪಡಿಸಿ–ಕೊಂಡು ಕುರಿಗಳನ್ನು ಆಕರ್ಷಿಸಲು ಪ್ರಯತ್ನಿಸಿದ್ದರು. ಆದರೆ ನಮ್ಮ ಕರ್ತನು ಅವರನ್ನು ವಂಚಕರೆಂದೂ, ಅವರು "ಕಳ್ಳರೂ ಸುಲುಕೊಳ್ಳುವವರೂ" ಆಗಿದ್ದು ಕೇವಲ ಕುರಿಗಳನ್ನು ಕದ್ದುಕೊಳ್ಳಲು ಸಹಾಯಮಾಡಿದ್ದರೆಂದೂ, ಅವರು ಕುರಿಗಳಿಗೆ ಹಿತವನ್ನು ಮಾಡುವದನ್ನು ಬಯಸಲು ಉತ್ಸುಕರಾಗದೆ ಸ್ವಂತ ಹೊಟ್ಟೆಯನ್ನು ಹೊರೆದುಕೊಳ್ಳುವಂಥ ಸ್ವಾರ್ಥವುಳ್ಳ ಆಕಾಂಕ್ಷೆ ಹೊಂದಿದವರಾಗಿದ್ದರೆಂದು ತಿಳಿಯಪಡಿಸಿದ್ದನು.

ಕರ್ತನ ಹಿಂಡನ್ನು ಹಸಿರುಗಾವಲುಗಳಿಗೆ ಮತ್ತು ಕೃಪಾಸತ್ಯತೆಗಳೆಂಬ ವಿಶ್ರಾಂತಿಕರ ನೀರುಗಳ ಬಳಿಗೆ ನಡಿಸಿ ಮತ್ತೆ ವಿಶ್ರಮವುಳ್ಳ ಸುರಕ್ಷಿತವಾದ ಹಟ್ಟಿಗೆ ಕರತಂದು ನಿಜವಾದ ಕುರುಬನಾಗಲು ಮತ್ತು ತನ್ನ ಹಿಂಡನ್ನು ಮುನ್ನಡೆಸುವ ಹಕ್ಕನ್ನು ಪಡೆಯಲು ಇರುವದಾದರೋ ಒಂದೇ ಮಾರ್ಗವಿತ್ತು. ಆ ಮಾರ್ಗವು ತನ್ನನ್ನು ಎಲ್ಲರಿಗೋಸ್ಕರ ಈಡನ್ನಾಗಿ ಅರ್ಪಿಸಿಕೊಳ್ಳುವ ಶಿಲುಬೆಯ ಮಾರ್ಗವಾಗಿತ್ತು. ಇದನ್ನು ನಮ್ಮ ಕರ್ತನು ಮಾಡಿದ್ದನು; ಹೀಗೆ ಆತನು ಕುರಿಹಟ್ಟಿಯ ಬಾಗಿಲಾಗಿದ್ದನು ಅಂದರೆ ಜೀವವುಳ್ಳ ಹೊಸ ಮಾರ್ಗಕ್ಕೆ ಅಥವಾ ಇನ್ನೂ ಸೂಕ್ತವಾಗಿ ಹೇಳುವದಾದರೆ ಹೊಸದಾದ ಒಂದು ಜೀವಮಾರ್ಗಕ್ಕೆ ಬಾಗಿಲಾಗಿದ್ದನು. ಹೀಗಿದ್ದರೂ ಅದು ಕುರಿಹಟ್ಟಿಗೆ ಒಂದು ಹೊಸದಾದ ಬಾಗಿಲನ್ನು ಮಾಡುವದಾಗಿರಲಿಲ್ಲ, ಅದು ಹಿಂದೆ ಮುಚ್ಚಲಾಗಿದ್ದ ಬಾಗಿಲನ್ನು ತೆರೆಯುವದಾಗಿತ್ತು. ಧರ್ಮಶಾಸ್ತ್ರದ ಆಜ್ಞಾವಿಧಿಗಳು ಆ ಬಾಗಿಲಾಗಿದ್ದವು. ಆ ಆಜ್ಞಾವಿಧಿಗಳಿಗೆ ವಿಧೇಯರಾಗುವುದರ ಮೂಲಕವೇ ಹೊರತು ಆ ಬಾಗಿಲನ್ನು ತೆರೆಯಲು ಸಾಧ್ಯವಿರುತ್ತಿರಲಿಲ್ಲ. ಮತ್ತು ಈಗ ನಮ್ಮ ಕರ್ತನಾದ ಯೇಸುವು ಆಜ್ಞಾವಿಧಿಗಳನ್ನು ಕೈಕೊಳ್ಳುವದರ ಮೂಲಕವಾಗಿ ನಿಜವಾದ ತನ್ನ ಕುರಿಗಳಿಗೆ ಅದೇ ಬಾಗಿಲಿನಿಂದ ಒಳಗೆ ಹೋಗಲು ಸಾಧ್ಯವಾಗುವಂತೆ ಮಾಡಿದ್ದನು. ಅಂದರೆ ಅದು ಆಜ್ಞಾವಿಧಿಗಳನ್ನು ಅಕ್ಷರಾರ್ಥದಲ್ಲಿ ಕೈಗೊಳ್ಳುವದರ ಮೂಲಕವಾಗಿ ಅಲ್ಲ, ಅದು ನಮಗೆ ಸಾಧ್ಯವಾಗದು, ಆದರೆ ಅದರ ಒಳಾರ್ಥಗಳ ಮೂಲಕವಾಗಿತ್ತು. ನಿಜವಾದ ಕುರಿಗಳು ಕುರಿಹಟ್ಟಿಯ ಒಳಗೆ ಸೇರುವದರ ವಿಷಯವಾಗಿ ಅಪೋಸ್ತಲನು ಹೀಗೆ ಹೇಳುತ್ತಾನೆ: "ಶರೀರ ಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನು–ಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು." (ರೋಮಾ 8:4) ಏಕೆಂದರೆ ನಮ್ಮ ಕುಂದುಕೊರತೆಗಳೆಲ್ಲವನ್ನು (ಮುಚ್ಚಿ) ಸರಿದೂಗುವ ಸಲುವಾಗಿ ನಮ್ಮ ಕುರುಬನು ತನ್ನ ಕೃಪೆಯನ್ನು ನಮ್ಮ ಪರವಾಗಿ ವಿನಿಯೋಗಿಸಿರುವನು. ಎಲ್ಲಿಯವರೆಗೂ ನಾವು ಆತನವರಾಗಿದ್ದು ಆತನ ಮಾರ್ಗದಲ್ಲಿ ನಡೆಯಲು ಪರಿಶ್ರಮಿಸುತ್ತಿರುವೆವೋ ಆವರೆಗೆ ನಮ್ಮ ಪ್ರತಿಯೊಂದು ಕುಂದುಕೊರತೆಗಳನ್ನು ಆತನ ಹೇರಳವಾದ ಕೃಪಾತಿಶಯದ ಮೂಲಕವಾಗಿ ಸರಿದೂಗಲಾಗುವದು. ಮೋಶೆಯ ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಗ್ರಂಥಗಳು ಇದಕ್ಕೆ ಸಾಕ್ಷಿಯಾಗಿವೆ.

## "ಆದರೂ (ಆ ಮಾತಿನ ಅರ್ಥವನ್ನು) ಅವರು ಗ್ರಹಿಸಲಿಲ್ಲ"

ಸಭಾಮಂದಿರದಿಂದ ಹೊರಗೆ ಹಾಕಲ್ಪಟ್ಟ ಆ ಹುಟ್ಟು ಕುರುಡನು ಮತ್ತು ಇವನನ್ನು ಹೊರಹಾಕುವಲ್ಲಿ ಸಫಲರಾದ ಫರಿಸಾಯರು ಸಹ ಕೇಳಿಸಿಕೊಳ್ಳುವಂತೆ ಈ ಸಾಮ್ಯವನ್ನು ಹೇಳಲಾಗಿತ್ತೆಂದು ಭಾವಿಸಲಾಗಿರುವದು. ದೇವಜನರಿಗೆ ಸೇರಿದ್ದೆಂದು ಭಾವಿಸಲಾಗಿದ್ದ ಹಟ್ಟಿಯಿಂದ ತಾನು ಹೊರ–ಹಾಕಲ್ಪಟ್ಟದಕ್ಕೆ ಆ ಮನುಷ್ಯನು ಅಧೈರ್ಯಗೊಂಡು ಮನಗುಂದಿದವನಾಗಿದ್ದುದರಲ್ಲಿ ಸಂದೇಹವಿರದು. ಹೀಗಾಗಿ ಆತನು ನಿಜವಾಗಿಯೂ ಕರ್ತನ ಹಟ್ಟಿಯಿಂದ ಹೊರಹಾಕಲ್ಪಟ್ಟಿ–ರಲಿಲ್ಲ, ಆದರೆ ಮಾನವ ನಿರ್ಮಿತ ಸಂಸ್ಥೆಯಿಂದ ಆತನನ್ನು ಹೊರ ಹಾಕಲಾಗಿರುವದೆಂಬುದನ್ನು ನಿದರ್ಶಿಸಿ ಹೇಳಲು ಈ ಸಾಮ್ಯವನ್ನು ಕರ್ತನು ನೀಡಿರುವನೆಂದು ಭಾವಿಸಲಾಗಿರುವದು. ಅವರಿಗೆ (ಫರಿಸಾಯರಿಗೆ) ಈ ವಿಷಯದಲ್ಲಿ ಅಧಿಕಾರವಿರಲಿಲ್ಲ. ಕರ್ತನು ಇಚ್ಛೈಸುವದೇನಂದರೆ: ತಾನು ಕುರುಬನಾಗಿ ಮುನ್ನಡೆಸುವ ಕುರಿಹಿಂಡನ್ನು ಹೊರತುಪಡಿಸಿ ಬೇರೆ ಯಾವ ಹಿಂಡೂ ಇರುವದಿಲ್ಲವೆಂದೂ: (ಆ ಹಟ್ಟಿಗೆ ಸೇರಲು) ತನ್ನ ಮೂಲಕವಾಗಿ ಹೊರತು ಬೇರೆ ಯಾವ ಮಾರ್ಗವು ಇರುವದಿಲ್ಲವೆಂದೂ ಆ ಮನುಷ್ಯನು ಫರಿಸಾಯರು ತನ್ನ ಶಿಷ್ಯರು ಹಾಗು ನಾವುಗಳು ತಿಳಿದುಕೊಳ್ಳಬೇಕೆಂಬುದೇ. ಆತನ ಯಜ್ಞಾರ್ಪಣೆಯ ಮೂಲಕವಾಗಿ ಮತ್ತು ನಾವು ನಂಬಿಕೆಯಿಂದ ಅದನ್ನು ಅಂಗೀಕರಿಸುವದರ ಮೂಲಕವಾಗಿ ಇದು ನೆರವೇರಲ್ಪಡುವದು. ಆದರೆ ಅಲ್ಲಿ ಕೇಳುತ್ತಿದ್ದವರು ಆ ಸಾಮ್ಯದ ಅರ್ಥವನ್ನು ಗ್ರಹಿಸಲಿಲ್ಲವೆಂದು 6ನೇ ವಚನವು ಹೇಳುತ್ತದೆ. ಆದುದರಿಂದ ಕರ್ತನು ತಾನೇ ಆ ಬಾಗಿಲಾಗಿರುವನೆಂದೂ ತನ್ನ ಮೂಲಕವಾಗಿಯೇ ಯಾವನಾದರೂ ದೇವರ ಅನುಗ್ರಹಕ್ಕೆ ಸೇರಿ ಕರ್ತನ ಹಿಂಡಿನ ಅಂಗಗಳಾಗಬಹುದೆಂದು ಆತನು ಸ್ವಲ್ಪ

ಭಿನ್ನವಾದ ರೀತಿಯಲ್ಲಿ ಪುನಃ ಇದನ್ನು ಹೇಳಿದ್ದನು. ಹೀಗೆ ಸಭಾಮಂದಿರದಿಂದ ಹೊರಹಾಕಲ್ಪಟ್ಟ ಆ ಮನುಷ್ಯನು ನಿಜವಾಗಿಯೂ ಏನನ್ನೂ ಕಳಕೊಂಡಿರಲಿಲ್ಲವೆಂಬದನ್ನೂ, ಆದರೆ ಬದಲಾಗಿ ಆತನು ನಿಜವಾದ ಹಟ್ಟಿಗೆ ಇರುವ ಸರಿಯಾದ ಬಾಗಲಿನ ಕಡೆಗೆ ಹೋಗಲು ಸಹಾಯ ನೀಡಲಾಗಿರುವ–ದೆಂಬುದನ್ನು ತಿಳಿಯಬಹುದೆಂದು ಗ್ರಹಿಸಿಕೊಳ್ಳುವ ಸಲುವಾಗಿತ್ತು. ಅಲ್ಲಿ ವಿಶ್ರಾಂತಿಯನ್ನು ನಿಜವಾಗಿಯೂ ಪಡೆಯಲು ಸಾಧ್ಯವಿತ್ತು. ದೇವರ ಆಜ್ಞಾನುಸಾರವಾದ ವಿಶ್ರಾಂತಿ ಪಡೆದು ರಕ್ಷಿಸಲ್ಪಟ್ಟು ಆತ್ಮಿಕ ಪುನಃಶ್ಚೇತನ ಹೊಂದಲು ಕರ್ತನೊಬ್ಬನೇ ಮಾರ್ಗವೆಂಬುದನ್ನು ಕಂಡುಕೊಳ್ಳಲು ಆತನು ಆಹ್ವಾನಿಸಲ್ಪಟ್ಟಿದ್ದನು. ಇತರರು ಸ್ವಾರ್ಥಭಾವದಿಂದ ಕುರಿಗಳನ್ನು ಕದ್ದುಕೊಳ್ಳಲು ಇಲ್ಲವೇ ನಾಶಮಾಡಲು ಬಯಸಿ, ಆ ಮೂಲಕವಾಗಿ ತಾವು ವೈಯುಕ್ತಿಕವಾಗಿ ಲಾಭಹೊಂದುವದನ್ನು ಮುಂದುವರೆಸಿಕೊಳ್ಳಲು ಪ್ರಯತ್ನಿಸಿದ್ದರು; ಆದರೆ ಈತನು ನಿಜವಾದ ಕುರುಬನಾಗಿ ತನ್ನ ಸ್ವಂತ ಹಿತವನ್ನು ನೋಡಿಕೊಳ್ಳದೆ ಕುರಿಗಳ ಹಿತವನ್ನು ಅನುಕೂಲವನ್ನು ಬಯಸುವವನಾಗಿ ಅಂದರೆ ಅವು ಜೀವವನ್ನು ಹೊಂದುವಂತೆಯೂ ಅದು ಸಮೃದ್ಧಿಯಾಗಿರುವಂತೆಯೂ ಬಯಸಿದ್ದನು.

ಎಂಥಾ ಒಂದು ಪಾಠವಿರುವದು ಇಲ್ಲಿ ನಮಗೆ! ಕುರಿಗಳನ್ನು ನಿತ್ಯಯಾತನೆಯಿಂದ ಬಿಡುಗಡೆಮಾಡಲು ತಾನು ಬಂದಿದ್ದಾಗಿ ಈ ಒಡೆಯನು ಹೇಳಲಿಲ್ಲ, ಆದರೆ ಅವುಗಳನ್ನು ಮರಣದಿಂದ ಬಿಡುಗಡೆಮಾಡಲು ತಾನು ಬಂದಿರುವದಾಗಿ ಹೇಳಿದ್ದನು. ಅವುಗಳಿಗೆ ಈಗಾಗಲೇ ಜೀವವಿರುವದಾಗಿಯೂ ಅವುಗಳು ಅದನ್ನು ಎಲ್ಲಿಯಾದರೂ ಸಂತೋಷಿಸಲು ಇಲ್ಲವೇ ಯಾತನೆಪಡಲು ವಿನಿಯೋಗಿಸಬೇಕೆಂದು ಆತನು ಹೇಳಿರಲಿಲ್ಲ; ತಾನು ಅವುಗಳಿಗೆ ಸಹಾಯಮಾಡಲು ಬಂದಿರುವದಾಗಿಯೂ ಹೀಗಾಗಿ ಅವುಗಳು ಅದನ್ನು ಯಾತನೆಪಡಲು ವಿನಿಯೋಗಿ–ಸದಂತೆ ಮಾಡಲು ತಾನು ಬಂದಿರುವದಾಗಿ ಹೇಳಿದ್ದನು. ಬದಲಾಗಿ ಆತನ ಮಾತುಗಳು–ಜೀವದಾಯಕನಾಗಿರುವ ತನ್ನ ಮೂಲಕವಾಗಿ ಹೊರತು ಕುರಿಗಳಿಗೆ ಜೀವಹೊಂದಲು ಸಾಧ್ಯವಿಲ್ಲವೆಂದೂ, ನಿಗದಿತ ಕಾಲದಲ್ಲಿ ಪುನರುದ್ಧಾರ ಕಾರ್ಯದ ಮೂಲಕವಾಗಿ ಆದಾಮನ ಅವಿಧೇಯತೆಯ ಮುಖಾಂತರ ಕಳೆದುಹೋದ ಮಾನುಷ್ಯ ಜೀವವನ್ನು ಸ್ವೀಕರಿಸುವವರೆಲ್ಲರಿಗೆ ಕೊಡುವದಕ್ಕಾಗಿ ಬಂದಿರುವದಾಗಿ ಬೋಧಿಸುತ್ತವೆ. ಹೌದು, ಕಳೆದುಕೊಂಡದ್ದಕ್ಕಿಂತಲೂ ಬಹು ಸಮೃದ್ಧಿಯಾದ ಜೀವವನ್ನು ಕೊಡುವ ಉದ್ದೇಶವುಳ್ಳವನಾಗಿರುವೆನೆಂದು ಆತನು ಪ್ರಕಟಮಾಡಿ ಹೇಳಿರುವನು! ಆದಿ ತಂದೆಯಾದ ಆದಾಮನು ಪರಿಪೂರ್ಣ ನಾಗಿದ್ದು, ಹೀಗೆ ದೇವರು ಮಾಡಿದ ಏರ್ಪಾಡಿನ ಪ್ರಕಾರವಾಗಿ ಅವನು ನಿತ್ಯಜೀವವನ್ನು ಪಡದದ್ದೇ ಆದಲ್ಲಿ, ಇದು ಹೇಗೆ ಸಾಧ್ಯವಾಗುತ್ತಿತ್ತು. ನಾವು ಉತ್ತರಿಸುವದೇನಂದರೆ, ಸವಾರ್ತಾ ಯುಗದಲ್ಲಿ ತನ್ನ ಕುರಿಗಳಿಗೆ ಅಂದರೆ ಚಿಕ್ಕ ಹಿಂಡಿಗೆ, ಕರ್ತನು ಕೊಡುವದಾಗಿ ಪ್ರಸ್ತಾಪಿಸಿರುವ ಜೀವವು ಇನ್ನೂ ಉನ್ನತ ಸ್ವರೂಪವೂ ಪ್ರಮಾಣವೂ ಉಳ್ಳದ್ದಾಗಿರುವದು. ಅಂದರೆ ಅಮರತ್ವವಳ್ಳದ್ದೂ, ಸ್ವತಃ ಜೀವವುಳ್ಳದ್ದೂ ಆಗಿರುವದು. ಇವರಿಗೆ "ತನ್ನ ಪುನರುತ್ಥಾನದಲ್ಲಿ", ಅಂದರೆ "ಪ್ರಥಮ ಪುನರುತ್ಥಾನದಲ್ಲಿ" ತನ್ನೊಂದಿಗೆ ಪಾಲನ್ನು ಹೊಂದುವ ಮೂಲಕವಾಗಿ ದೈವಿಕ ಸ್ವಭಾವದಲ್ಲಿ ಪಾಲುಗಾರರಾಗುವದನ್ನು ಪ್ರಸ್ತಾಪಿಸಿರುವನು. – ಫಿಲಿಪ್ಪಿ 3:10

## ಆತನು ನಮಗೋಸ್ಕರ ತನ್ನ ಜೀವವನ್ನು ಕೊಟ್ಟನು.

ಇದು ನಮ್ಮ ಪಾಠದ ಕೇಂದ್ರದಲ್ಲಿರುವ ಅಂಶ. ಒಳ್ಳೆಯ ಕುರುಬನು, ಸ್ವಹಿತವನ್ನು ಬಯಸುವದರಿಂದ ದೂರಸರಿದು, ಕುರಿಗಳಿಗಾಗಿ ಸಂತೋಷದಿಂದ ತನ್ನ ಪ್ರಾಣವನ್ನು ಕೊಟ್ಟಿರುವನು, ಹಾಗೂ ಈ ಮೂಲಕವಾಗಿ ತನ್ನ ಸ್ವಂತ ರಕ್ತದ ಮುಖಾಂತರ ಕುರಿಗಳನ್ನು ಕೊಂಡುಕೊಂಡಿರುವ ಫಲವಾಗಿ ಅವುಗಳಿಗೆ ನಿತ್ಯಜೀವವು ಸಾಧ್ಯವಾಗಿರುವದು; ಆತನು ಕೊಂಡುಕೊಳ್ಳದೇ ಇದ್ದಲ್ಲಿ ಕುರಿಹಿಂಡೆಂಬುದು ಇರುತ್ತಿರಲಿಲ್ಲ, ಈ ಮೂಲಕ ವಾಗಿಯೇ ಆತನು ಕುರಿಗಳಿಗೆ ಕುರುಬನಾಗುವನು. ಈ ಅಂಶವು ಎಷ್ಟು ಸ್ಪಷ್ಟವೂ ಸೊಗಸೂ ಆಗಿರುವದು: "ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರಾಗಿದ್ದೀರಿ!" (1 ಕೊರಿಂಥ 6:20) ಇತರ ಯಾರೂ ನಮಗಾಗಿ ಈಡನ್ನು ನೀಡಲು ಸಾಧ್ಯವಿರಲಿಲ್ಲ, ಬೇರೆ ಯಾರೂ ನಮ್ಮನ್ನು ಕೊಂಡುಕೊಳ್ಳಲು ಸಾಧ್ಯವಿರಲಿಲ್ಲ, ಇಲ್ಲವೇ ನಿತ್ಯಜೀವವನ್ನು ಅನುಗ್ರಹಿಸಲು ಸಾಧ್ಯವಿರಲಿಲ್ಲ, ಆದುದರಿಂದ ಇತರ ಯಾರೂ ನ್ಯಾಯಬದ್ಧವಾಗಿ ನಮ್ಮ ಕುರುಬನಾಗಿರಲು ಅಥವಾ ದೇವರ ವಿಶ್ರಾಂತಿ ಸಮಾಧಾನಗಳಿಗೆ, ಸತ್ಯದ ಪರಿಜ್ಞಾನದ ಕಡೆಗೆ, ಪರಲೋಕವೆಂಬ ಕುರಿಹಟ್ಟಿಗೆ, ದೇವಜನರು ಇನ್ನು ಅನುಭವಿಸಲಿರುವ ವಿಶ್ರಾಂತಿಯ ಕಡೆಗೆ ನಮ್ಮನ್ನು ನಡೆಸಲು ಸಾಧ್ಯವಿರಲಿಲ್ಲ. ವಧಿತನಾದ ಯಜ್ಞದಕುರಿಯಾದಾತನು ಪ್ರಭಾವ ಮಾನ ಆಧಿಪತ್ಯ ಹಾಗೂ ಅಧಿಕಾರವನ್ನು ಹೊಂದಲು ಯೋಗ್ಯನು!

## "ಕುರಿಗಳು ಆತನ ಸ್ವರವನ್ನು ಕೇಳುವವು"

ಪೌರಾತ್ಯ ದೇಶದ ಕುರುಬರು ಮತ್ತು ಅವರ ಕುರಿಹಿಂಡಿನ ವಿಷಯವಾಗಿ ಒಂದು ಗಮನಾರ್ಹವಾದ ಕಥೆಯು ಹೇಳಲಾಗಿರುವದು ಮತ್ತು ಅದು ನಮ್ಮ ಕರ್ತನು ಈ ಸಾಮ್ಯದಲ್ಲಿ ತಿಳಿಸಿರುವ ಸಂಗತಿಯನ್ನು ಚೆನ್ನಾಗಿ ನಿದರ್ಶಿಸಿ ತೋರಿಸುವದು. ನಾವು ಸಹಾನುಭೂತಿಯುಳ್ಳವರಾಗಿ ಕರ್ತನ ಮಾತಿನ ಭಾವಾರ್ಥದ ಒಳಹೊಕ್ಕುವದಕ್ಕಾಗುವಂತೆ ನಾವು ಕೆಲವೊಂದು ಸಂಗತಿಯನ್ನು ವಿಮರ್ಶಿಸೋಣ. ಆತನನ್ನು ಆಲಿಸಿದವರಿಗೆ ಈ ಸಂಗತಿಗಳು ಪ್ರಚಲಿತವಾಗಿದ್ದವು. ಒಬ್ಬ ಲೇಖಕನು ಬರೆಯುವದು: "ಬಾಯಾರಿದ ಕುರಿಗಳ ಹಿಂಡುಗಳು ನೀರಿನ ಬುಗ್ಗೆಯ ಬಳಿಯಲ್ಲಿ ನೋಡುವದು ಬಹು ಕುತೂಹಲಕಾರಿಯಾದ ದೃಶ್ಯವಾಗಿರುವದು. ಪ್ರತಿಯೊಂದು ಹಿಂಡೂ ವಿಧೇಯತೆಯಿಂದ ತಮ್ಮ ತಮ್ಮ ಸರದಿಗಾಗಿ ಕುರುಬನ ಕರೆಗೆ ಕಾದು ಕುಳಿತಿರುವದು. ಒಂದು ಹಿಂಡಿನ ಕುರುಬನು ತನ್ನ ಕುರಿಗಳನ್ನು ತಂಡವಾಗಿ ಬರಲು ಕರೆಯುವನು, ಮತ್ತು ಆ ತಂಡವು ಕುಡಿದ ನಂತರ ಹೊರ ಬರಲು ಶಬ್ದದ ಮೂಲಕವಾಗಿ ಅಪ್ಪಣೆಮಾಡುವನು ಕುರಿಗಳು ಅದನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳುವವು, ಆನಂತರ ಬೇರೊಂದು ತಂಡವನ್ನು ಕರೆಯುವನು. ತಮಗೆ ಯಾರು ಶಿಳ್ಳೆಹೊಡೆಯವರು

ಅಥವಾ ಕರೆಯುವರು ಎನ್ನುವದರಲ್ಲಿ ಕುರಿಗಳು ಎಂದೂ ತಪ್ಪುಮಾಡವು. ನೂರು ಕುರಿಗಳ ಅಥವಾ ಸಾವಿರ ಕುರಿಗಳ ಒಂದು ಹಿಂಡಿನಲ್ಲಿ ಪ್ರತಿಯೊಂದು ಕುರಿಗೂ ಒಂದು ಹೆಸರಿರುತ್ತದೆ, ಅದನ್ನು ಅದು ತಿಳಿದಿರುತ್ತದೆ ಹಾಗು ಆ ಮೂಲಕವಾಗಿ ಅದನ್ನು ತಿಳಿಯಲಾಗಿರುತ್ತದೆ. ಗ್ರೀಕರಲ್ಲಿಯೂ ಇದೇ ರೀತಿಯ ಒಂದು ಪದ್ಧತಿಯಿತ್ತು. ಹೆಸರುಗಳು ಅನೇಕ ವೇಳೆ ಕೆಲವು ದೋಷ ನ್ಯೂನ್ಯತೆಗಳಿಗೆ ಸರಿಹೊಂದಿಸಲಾಗಿರುತ್ತದೆ, ಉದಾಹರಣೆಗಾಗಿ ಹೇಳುವದಾದರೆ: 'ಬಿರಿದ' ಅಥವಾ 'ಒಡೆದ ಕಾಲುಳ್ಳದ್ದು', 'ಒಂಟಿ ಕಣ್ಣಿನದು', 'ಸುರುಳಿಯ ಕೊಂಬಿನದು' 'ಬೊಕ್ಕುತಲೆಯದು'. ಹಿಂಡಿನ ಮಿಕ್ಕಾದವುಗಳಿಂದ ಮುಂದೆ ಬರಲು ಹಿಂದೆ ಹೋಗಲು ತಾಳ್ಮೆಯಿಂದ ಅಭ್ಯಾಸ ಮಾಡಿಸುವ ಮೂಲಕವಾಗಿ ಕುರಿಮರಿಗಳಿಗೆ ಕರೆಗೆ ಸೂಕ್ತವಾಗಿ ಸ್ಪಂದಿಸುವಂತೆ ಕಲಿಸಲಾಗಿರು–ತ್ತದೆ. ಅವುಗಳು ಸರಿಯಾಗಿ ಸ್ಪಂದಿಸುವವರೆಗೆ ಅವುಗಳನ್ನು ಹಾಲಿಗಾಗಿ ತಮ್ಮ ತಾಯಿಯ ಬಳಿಗೆ ಹೋಗಲು ಬಿಡುವದಿಲ್ಲ. ಪೌರಾತ್ಯದಲ್ಲಿ ಕುರುಬನು ಎಂದೂ ತನ್ನ ಕುರಿಯ ಹಿಂದೆ ಹೋಗುವದಿಲ್ಲ, ಆದರೆ ಅವುಗಳ ಮುಂದೆ ಹೋಗುತ್ತಾನೆ, ಅವುಗಳು ಆತನನ್ನು ಹಿಂಬಾಲಿಸುವವು. ಆತನು ಅವುಗಳಿಂದ ತಪ್ಪಿಸಿಕೊಂಡಂತೆ ಕಂಡುಬಂದರೆ ಅವು ಆತನ ಹಿಂದೆ ಓಡಿಹೋಗುತ್ತವೆ ಮತ್ತು ಅವುಗಳ ದೃಷ್ಟಿಗೆ ಕಾಣದೆ ಹೋದರೆ ಅಲ್ಲದೆ ಆತನಿಗೆ ಬದಲಾಗಿ ಅನ್ಯನೊಬ್ಬನು ಕಾಣಿಸಿಕೊಂಡರೆ ಅವು ಭೀತಿಗೊಳಗಾಗುತ್ತವೆ. ತಾನು ಸಮೀಪದಲ್ಲಿಯೇ ಇರುವನೆಂದು ಅವುಗಳಿಗೆ ತಿಳಿದು ಬರುವದಕ್ಕಾಗಿ ಆತನು ಕಾಲಕಾಲಕ್ಕೆ ಅವುಗಳನ್ನು ಕರೆಯುತ್ತಿರುವನು; ಅವುಗಳು ಅದನ್ನು ಕೇಳಿ ಹುಲ್ಲು ತಿನ್ನುವದನ್ನು ಮುಂದುವರೆಸುವವು, ಆದರೆ ಯಾವನಾದರೂ ಅದೇ ವಿಶಿಷ್ಟವಾದ ಶಬ್ಧವನ್ನು ಮಾಡಿದರೆ ಅವು ಸುತ್ತಲೂ ನೋಡಿ ಅಚ್ಚರಿಗೊಂಡು ಚದರಿ ಹೋಗುವವು. ಸ್ಕಾಟ್‌ಲೆಂಡ್ ದೇಶದ ಒಬ್ಬ ಪ್ರಯಾಣಿಕನು ಕುರುಬನೊಡನೆ ಆತನ ಬಟ್ಟೆಗಳನ್ನು ಬದಲಿಸಿಕೊಂಡಿದ್ದನು ಮತ್ತು ಹೀಗೆ ವೇಷಮರೆಸಿಕೊಂಡು ಕುರಿಗಳನ್ನು ಕರೆಯಲು ಆರಂಭಿಸಿದನು; ಅವುಗಳು ಸ್ತಬ್ದವಾಗಿ ನಿಂತವು; ಆನಂತರ ನಿಜವಾದ ಕುರುಬನು ಧ್ವನಿ ಎತ್ತಿದನು ಮತ್ತು ಆತನ ಬಟ್ಟೆಯು ಬದಲಾಗಿದ್ದರೂ ಅವುಗಳು ಆತನ ಬಳಿಗೆ ತ್ವರೆಯಾಗಿ ಓಡಿ ಬಂದವು.

## "ಆತನು ತನ್ನ ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆಯುತ್ತಾನೆ"

ಮೇಲಿನ ನಿದರ್ಶನವು ಈ ಹೇಳಿಕೆಯನ್ನು ಮನನ ಮಾಡಿಕೊಳ್ಳಲು ಸಹಾಯ ಮಾಡುತ್ತದೆ ಹಾಗು ಕರ್ತನ ಚಿಕ್ಕಹಿಂಡಿಗೆ ಅದನ್ನು ಅನ್ವಯುಮಾಡಲು ಅನುವು ಮಾಡಿಕೊಡುತ್ತದೆ. "ತನ್ನವರು ಯಾರೆಂಬುದನ್ನು ಕರ್ತನು ತಿಳಿದಿದ್ದಾನೆ..." ಯಾರು ಆತನವರಾಗಿರುವರೋ ಅವರೂ ಆತನನ್ನು ತಿಳಿದಿರುವರೆಂಬದೂ ಸಹ ಸತ್ಯವೇ. "ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ. ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ." ಕರ್ತನ ಸ್ವರವು ನೀತಿನ್ಯಾಯವುಳ್ಳ ಸ್ವರ, ಪ್ರೀತಿಸತ್ಯತೆಯುಳ್ಳ ಸ್ವರ, ಮತ್ತು ಯಾರು ಆತನ ಕುರಿಗಳಾಗಿರುವರೋ ಅವರೆಲ್ಲರೂ ಆತನ ಸಂದೇಶಗಳಿಗೆ ಮತ್ತು ಹಿಂಡನ್ನು ತಪ್ಪುದಾರಿಗೆ ಎಳೆಯುವ ವಿರೋಧಿಯಾದ ಸೈತಾನನನ್ನು ಪ್ರತಿನಿಧಿಸುವ ಅನೇಕ ಸುಳ್ಳು ಸಂದೇಶಗಳಿಗೆ ಇರುವ ಬೇಧವನ್ನು ಅರಿಯುವ ಸಾಮರ್ಥ್ಯವನ್ನು ಹೊಂದಿರಬೇಕೆಂಬುದನ್ನು ನಿರೀಕ್ಷಿಸಲಾಗಿರುತ್ತದೆ. ಸೈತಾನನು ಮಾನವ ಸಾಧನಗಳನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳುವನು. ಸುಳ್ಳಿನಿಂದ ಕೂಡಿದ ಸುವಾರ್ತೆಯಿಂದ ಯಾವ ನಿಜವಾದ ಕುರಿಯೂ ತೃಪ್ತವಾಗುವದಿಲ್ಲವೆಂದು ಕರ್ತನು ನಮಗೆ ಭರವಸೆ ನೀಡಿರುವನು; ಅದು ಅವುಗಳ ಮನಸ್ಸನ್ನು ಆಕರ್ಷಿಸಲಾರದು ಮತ್ತು ನಿಜವಾದ ಕುರಿಯು ನಿಜವಾದ ಸುವಾರ್ತೆಯ ಮೂಲಕವಾಗಿ ತೃಪ್ತಿಹೊಂದುವದೆಂದು ಇದಕ್ಕೆ ಸಮನಾದ ಭರವಸೆಯೂ ನಮಗಿರುವದು, ಯಾಕೆಂದರೆ ಅದು ಬೇರೆ ಯಾವದೂ ಕೊಡಲಾರದ ರೀತಿಯಲ್ಲಿ ಅವರ ಬಯಕೆಗಳನ್ನು ತೃಪ್ತಿಪಡಿಸುವದು. ಇದು ನಮ್ಮ ಮನಸ್ಸುಗಳಲ್ಲಿ ಇಟ್ಟುಕೊಳ್ಳ ಬೇಕಾದ ಒಂದು ಮುಖ್ಯವಾದ ಅಂಶ. ಇದು ನಿಜವಾಗಿಯೂ ಸಂಪೂರ್ಣವಾದ ರೀತಿಯಲ್ಲಿ ಒತ್ತಾಸೆಯಿಂದ ಕರ್ತನ ಕುರಿಯಾಗುವದರ, ಆತನೊಡನೆ ಒಡಂಬಡಿಕೆಯ ಸಂಬಂಧದಲ್ಲಿ ಸೇರುವದರ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ ಮತ್ತು ಹೀಗೆ ಅದು ಆತನ ರಕ್ಷಣಾಪೂರ್ವಕವಾದ ಪರಿಪಾಲನೆಯನ್ನು ಹಾಗು ಶಿಕ್ಷಣವನ್ನು ಖಚಿತಪಡಿಸುತ್ತದೆ.

## "ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ"

ಆನಂತರ ನಾವು ಹೇಗೆ ಮತ್ತು ಎಂದು ಕರ್ತನ ಕುರಿಯಾದೆವು ಎಂಬದು ಒಂದು ಮುಖ್ಯ ಪ್ರಶ್ನೆಯಾಗುವದು. ಜ್ಞಾನಿಗಳು ಪಂಡಿತರುಗಳು, ಐಶ್ವರ್ಯವಂತರು ಮತ್ತು ಕುಲೀನರು ಇವರೆಲ್ಲರೂ ಕರ್ತನ ಕುರಿಗಳೇ? ಅಪೋಸ್ತಲನು ಉತ್ತರಿಸುವದು ಇಲ್ಲವೆಂದು, ಹಾಗೂ ಮುಂದುವರೆದು ಆತನು ಹೇಳುವದು, ಇವರಲ್ಲಿ ಅನೇಕರು ಕುರಿಗಳಲ್ಲಿರುವದು ಕಂಡುಬರುವದಿಲ್ಲ – ನಿಮ್ಮೊಳಗೆ... ಜ್ಞಾನಿಗಳು ಅನೇಕರಿಲ್ಲ, ಅಧಿಕಾರಿಗಳು ಅನೇಕರಿಲ್ಲ, ಕುಲೀನರು ಅನೇಕರಿಲ್ಲ, ಆದರೆ ಅವರು ಲೌಕಿಕ ವಿಷಯದಲ್ಲಿ ಬಡವರು, ನಂಬಿಕೆಯ ವಿಷಯದಲ್ಲಿ ಐಶ್ವರ್ಯವಂತರೂ ಆಗಿರುವರು. (1 ಕೊರಿಂಥ 1:26–28; ಯಾಕೋಬ 2:5) ಹೀಗಿದ್ದಲ್ಲಿ ಬಡವರೆಲ್ಲರೂ ಕರ್ತನ ಕುರಿಗಳೇ? ನಾವು ಉತ್ತರಿಸುವದು, ಇಲ್ಲವೆಂದು. ಈ ವಿಭಿನ್ನವಾದ ಹಿಂಡುಗಳು ನಿಜವಾಗಿಯೂ ಸಾಧಾರಣವಾದ ರೀತಿಯಲ್ಲಿ ಕ್ರಿಸ್ತನ ಹೆಸರನ್ನು ಪಡೆದಿರುವರು. ಆದರೆ ಅವರಲ್ಲಿ ಅನೇಕರು ಆತನ ಶಿಷ್ಯರಾಗಿದ್ದೇವೆಂಬದನ್ನು, ಹಿಂಬಾಲಕರಾಗಿದ್ದೇವೆಂಬದನ್ನು ಪ್ರಮಾಣೀಕರಿಸುವದಿಲ್ಲ. ಅವರಲ್ಲಿ ಅನೇಕರು ಆತನ ವಾಕ್ಯಗಳ ವಿಷಯವಾಗಿ, ಸ್ವರದ ವಿಷಯವಾಗಿ ಏನೂ ತಿಳಿದಿರುವದಿಲ್ಲ; ಅವರಲ್ಲಿ ಅನೇಕರು ಹಸಿರುಗಾವಲುಗಳಿಗೆ, ದೈವಿಕವಾದ ಕೃಪಾಸತ್ಯತೆಗಳೆಂಬ ವಿಶ್ರಾಂತಿಕರವಾದ ನೀರುಗಳ ಬಳಿಗೆ ನಡೆಸುವದರ ಬಗ್ಗೆ ಏನೂ ತಿಳಿದಿರುವದಿಲ್ಲ; ಅವರಲ್ಲಿ ಅನೇಕರಿಗೆ ನಿಜವಾದ ಕುರಿಹಟ್ಟಿಯ ಹಾಗು ಅದರಲ್ಲಿರುವ ವಿಶ್ರಾಂತಿ ಸಮಾಧಾನ ಮತ್ತು ರಕ್ಷಣಾಪೂರ್ವಕವಾದ ಪರಿಪಾಲನೆಯ ಬಗ್ಗೆ

ಏನೂ ತಿಳಿದಿರುವದಿಲ್ಲ. ಈ ವಿಧವಾದ ಅರಿವು ಅವರಲ್ಲಿ ಇಲ್ಲದಿರುವದು ಅವರು ಕರ್ತನ ನಡೆಸುವಿಕೆಯಲ್ಲಿರುವ ನಿಜವಾದ ಹಿಂಡಿಗೆ ಸೇರಿದವರಲ್ಲವೆಂಬುದನ್ನು ತೋರಿಸಿಕೊಡುತ್ತದೆ. ಆದರೂ ಕರ್ತನ ನಿಜವಾದ ಕುರಿಗಳು ಪ್ರತಿಯೊಂದು ಕ್ರೈಸ್ತ ಪಂಗಡಗಳಲ್ಲಿಯೂ ಕಂಡುಬರಬಹುದು. ಆದರೆ ಅವರು ಎಲ್ಲಿಲ್ಲಿ ಕಂಡುಬಂದರೂ, ಅವರು ಆತನವರಾಗಿದ್ದರೆ ಅವರು ಆತನಿಂದ ನಡೆಸಲ್ಪಟ್ಟು ಪೋಷಣೆ ಹೊಂದಿ ಆತನನ್ನು ತಿಳಿದಿರುವರು, ಮತ್ತು ಆತನ ಸ್ವರವನ್ನು, ಆತನ ವಾಕ್ಯವನ್ನು ತಿಳಿದವರಾಗಿದ್ದು, ಮಾನವ ಸಂಪ್ರದಾಯವೆಂಬ ಹೊಟ್ಟಿನ ವಿಷಯದಲ್ಲಿ ಅತೃಪ್ತರಾಗಿರುವರು.

## "ಕೂಲಿಯಾಳು ಓಡಿಹೋಗುವನು"

ನಿಜವಾಗಿಯೂ ಹಲವರಿಗೆ ಕರ್ತನ ಹಿಂಡಿನ ಕುರುಬರೆಂಬ, ಪರಿಚಾರಕರೆಂಬ ಗೌರವವನ್ನು ಪಡೆಯಲು ಸಂತೋಷವಾಗಬಹುದು. ಆದರೆ ಅದಕ್ಕೆ ಉಂಟಾಗುವ ಪರೀಕ್ಷೆ, ಕಷ್ಟನಷ್ಟಗಳು ಅವರಿಗೆ ಬಹು ಅಧಿಕವಾಗಿರುವದು. ದೇವದೂತರಲ್ಲಿ ಅನೇಕರಿಗೆ ಇಂಥಾ ಒಂದು ಸ್ಥಾನವನ್ನು ತುಂಬಲು ಸಂತೋಷವಾಗ ಬಹುದೆಂದು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಬಹುದು. ಆದರೆ ಅದಕ್ಕೆ ಸಂಭವಿಸುವ ಕಷ್ಟನಷ್ಟಗಳ ಸಹಿತವಾಗಿ ಕಾರ್ಯ ನಿರ್ವಹಿಸಲು ಅವರು ಇಚ್ಛಿಸುವರೇ? ಕರ್ತನಿದ್ದ ದಿನಗಳಿಗೆ ಮೊದಲು ಹಾಗು ಆನಂತರ ಮನುಷ್ಯರಲ್ಲಿ ಹಲವರು ಕುರುಬನ ಕಾರ್ಯಸ್ಥಾನವನ್ನು ಪಡಕೊಳ್ಳುವ ದುರಾಸೆಯುಳ್ಳವರಾಗಿರುವರು; ಆದರೆ ಎಲ್ಲರೂ ಮರಣ ದಂಡನೆಗೆ ಒಳಗಾಗಿರುವದರಿಂದ, ಅವರಲ್ಲಿ ಯಾರಿಗೂ ಕುರಿಗಳನ್ನು ವಿಮೋಚಿಸಲು ಸಾಧ್ಯವಾಗಲಿಲ್ಲ. ತನ್ನದೆಲ್ಲವನ್ನೂ ಅರ್ಪಿಸುವದರ ಮೂಲಕವಾಗಿ ಅವುಗಳನ್ನು ಕೊಂಡುಕೊಳ್ಳುವ ಇಚ್ಛೆಯುಳ್ಳವರಾಗಿರುವರೆಂದು ಕಲ್ಪಿಸಿಕೊಳ್ಳಲು ಯಾವ ಕಾರಣವೂ ನಮಗಿರುವದಿಲ್ಲ. ನಮ್ಮ ಕರ್ತನ ಮಾತುಗಳಲ್ಲಿ ಇದು ಅಡಕವಾಗಿರುವದೆಂದು ತೋರುತ್ತದೆ. ಕೇವಲ ನಿಜವಾದ ಕುರುಬನೇ ತನ್ನ ಕುರಿಗಳಿಗಾಗಿ ತನ್ನ ಜೀವವನ್ನೇ ಕೊಟ್ಟು, ಯಜ್ಞವನ್ನಾಗಿ ಅರ್ಪಿಸಿಕೊಳ್ಳುವ ಇಚ್ಛೆಯುಳ್ಳವನಾಗಿದ್ದನು. ಕರ್ತನ ಕುರಿಹಿಂಡಿಗೆ ಇರುವದಾದರೋ ಒಬ್ಬನೇ ಕುರುಬನು ಇರುವನೆಂಬುದನ್ನು ನಾವು ಇಲ್ಲಿ ಗಮನಿಸಬಹುದಾದರೂ, ಆತನು ತನ್ನ ಅನುಪಸ್ಥಿತಿಯಲ್ಲಿ ತನ್ನ ದೇವರ ಮಂದೆಯನ್ನು ಪೋಷಿಸಿ ಅವರ ಪ್ರಾಣಗಳನ್ನು ಕಾಯುವ, ಅವರ ಜೀವಿತವನ್ನು, ಅವರ ಹಿತವನ್ನು ಕಾಪಾಡುವ ಸಲುವಾಗಿ ಸಭಾಪಾಲಕನ್ನೂ ಮತ್ತು ಬೋಧಕರನ್ನು ಏರ್ಪಡಿಸಿರುವನು.

ಒಡೆಯನ ಈ ಬೋಧನೆಯ ಅನುಸಾರವಾಗಿ ನಾವು ಕಂಡುಕೊಳ್ಳುವದೇನಂದರೆ, ಯಾರು ಹಿಂಡಿಗೆ ಕುರುಬನಾಗಿ ಈ ಹಿಂಡನ್ನು ಪೋಷಿಸುವ ಸ್ಥಾನಕ್ಕೆ ಯೋಗ್ಯರಾಗುವರೋ ಅವರು ಆತನ ಮನೋಭಾವವನ್ನು ಹೊಂದಿದವರಾಗಿ, ಆತನ ಪ್ರತಿನಿಧಿಯಾಗಿ, ಕುರಿಗಳ ಸಂರಕ್ಷಣೆಗಾಗಿ ಮತ್ತು ಅವುಗಳನ್ನು ವಿರೋಧಿಯಾದ ಸೈತಾನನಿಂದ ಮತ್ತು ಆತನ ಹಲವಾರು ಕುತಂತ್ರೋಪಾಯಗಳಿಂದ ಕಾಪಾಡುವ ಸಲುವಾಗಿ ತನ್ನ ಪ್ರಾಣವನ್ನು ಕೊಡುವ ಇಚ್ಛೆಯುಳ್ಳವರಾಗಿರಬೇಕೆಂಬುದನ್ನು ಅತನು ನಿರೀಕ್ಷಿಸುವನು; ಅಲ್ಲದೆ ಈಗ ಪ್ರಕಟವಾಗಿರುವ ಸತ್ಯಾರ್ಥಗಳೆಂಬ ಹಸಿರುಗಾವಲುಗಳಿಗೆ ನಡೆಸುವ ಬದಲು 'ಕುರಿಗಳನ್ನು ಮತ್ತೆ ದಾಸತ್ವದೊಳಗೆ ಸಿಕ್ಕಿಸಿ ನಿಜವಾದ ಕುರುಬನಿಂದ ಪ್ರಾರಂಭಿಸಲಾದ ನಿಜವಾದ ಕುರಿಹಟ್ಟಿಯಿಂದ ವಿಭಿನ್ನವಾಗಿರುವ ಮಾನವನ ಲೇಖನಗಳ ಮೂಲಕವಾಗಿ ಹೊಟ್ಟಿನಂತಿರುವ ಮಾನವ ಸಂಪ್ರದಾಯದಿಂದ ಅವುಗಳನ್ನು ಪೋಷಿಸಿ ಅವುಗಳಿಂದ ಲಾಭಗಳಿಸುವ ಸಲುವಾಗಿ ಬರುವ ಕುರಿ ವೇಷದ ತೋಳಗಳಿಂದ ಕಾಪಾಡ ಇಚ್ಛೆಯುಳ್ಳವರಾಗಿರಬೇಕೆಂಬುದನ್ನೂ ನಿರೀಕ್ಷಿಸುವನು. ನಿಜವಾದ ಕುರಿಗಳು ನಿಜವಾದ ಕುರುಬನನ್ನು ತಿಳಿದಿರುವಂತೆ ಮತ್ತು ಆತನಿಂದ ತಿಳಿಯಲ್ಪಟ್ಟಿರುವಂತೆಯೇ ನಿಜವಾದ ಕುರುಬನೂ ತನ್ನ ಕೈಕೆಳಗಿರುವ ಕುರಿಕಾಯುವ ಆಳುಗಳನ್ನು ಸಹ ತಿಳಿದಿರಬೇಕು. ಹೀಗಾಗಿ ಆ ಆಳುಗಳೂ ಕುರಿಗಳನ್ನು ನಿಕಟವಾಗಿ ತಿಳಿದುಕೊಂಡಿರಬೇಕು. ಯಾರು ತಮ್ಮ ಸ್ವಂತ ರೀತಿಯಲ್ಲಿ ಧ್ವನಿಕೊಡುವರೋ ಅಥವಾ ಕರೆಯುವರೋ ಅವರು ನಿಜವಾದ ಕುರುಬನಿಂದ ಇಲ್ಲವೇ ನಿಜವಾದ ಕುರಿಗಳಿಂದ ಮನ್ನಣೆಪಡೆಯಲು ಸಾಧ್ಯವಾಗದು; ನಂಬಿಗಸ್ತರಾದ ಕೂಲಿಯಾಳುಗಳು ಕೇವಲ ನಿಜವಾದ ಕುರುಬನ ಮಾತುಗಳನ್ನೇ ನುಡಿಯುವದು ಮಾತ್ರವಲ್ಲದೆ ಆತನ ಸ್ವರದಲ್ಲೇ, ಆತನ ಶೈಲಿಯಲ್ಲೇ ಮಾತನಾಡುವರು.

14ನೇ ವಚನವು ನೀಡಿರುವ ಭರವಸೆಯಲ್ಲಿ ಎಂಥಾ ಸಾಂತ್ವನವಿರುವದು: "ತಂದೆಯು ನನ್ನನ್ನು ನಾನು ನನ್ನ ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನ್ನು ತಿಳಿದವೆ." (ರಿವೈಸ್ಡ್ ವರ್ಷನ್) ಕರ್ತನ ಮತ್ತು ಆತನವರ ನಡುವಿನ ಸಂಬಂಧದ ಬಗ್ಗೆ ಎಂಥಾ ಸೊಗಸಾದ ಮತ್ತು ಅಮೂಲ್ಯವಾದ ವರ್ಣನೆ ಇದು! ಆತನ ತಿಳುವಳಿಕೆ ಹಾಗು ತಂದೆಯ ನಡುವಿನ ಹೋಲಿಕೆಯು ಪ್ರಭಲವಾಗಿರುವದು ಅಲ್ಲದೆ ನಮ್ಮ ಕರ್ತನು ಬೇರೊಂದೆಡೆ ತೋರಿಸಿಕೊಟ್ಟಿರುವಂತೆ, ಯಾರು ಆತನನ್ನು ತಿಳಿಯದೆ ಇರುವರೋ ಅವರು ತಂದೆಯನ್ನೂ ತಿಳಿಯದಿರುವವರಾಗಿರುವರು. ದೇವರ ದೃಷ್ಟಿಯಿಂದ ತಿಳುವಳಿಕೆ ಎಷ್ಟು ಮುಖ್ಯವಾದುದು, ಅದು ಕೇವಲ ತಲೆಯಲ್ಲಿ ತುಂಬಿರುವ ತಿಳುವಳಿಕೆಯಲ್ಲ ಆದರೆ ಹೃದಯದಲ್ಲಿಯೂ ತುಂಬಿರುವ ತಿಳಿವಳಿಕೆ ಯಾಗಿರುವದು, ಅದು ಕರ್ತನ ಹಾಗು ಆತನ ಭವ್ಯವಾದ ಯೋಜನೆಗಳ ವಿಷಯವಾಗಿರುವ ವಿವರವಾದ ತಿಳುವಳಿಕೆ.

## ಒಂದೇ ಹಿಂಡು ಒಬ್ಬನೇ ಕುರುಬನು

ಒಂದು ಮುಖ್ಯವಾದ ಸತ್ಯಾರ್ಥವು 17ನೇ ವಚನದಲ್ಲಿ ಪ್ರತಿಪಾದಿಸಲಾಗಿರುವದು: ಅದೇನಂದರೆ ಈಗ ಕರ್ತನ ಕುರಿಗಳಿಗೆ ಒಂದೇ ಒಂದು ಹಟ್ಟಿಯನ್ನು ಏರ್ಪಡಿಸಲಾಗಿರುವದು ಹಾಗು ಅದರಲ್ಲಿ ಸುವಾರ್ತಾಯುಗದಲ್ಲಿ ನಿಜವಾಗಿಯೂ ಆತನವರೆಲ್ಲರು ನಂಬಿಕೆ ಹಾಗೂ ವಿಧೇಯತೆಗಳ ಮೂಲಕವಾಗಿ ವಿಶ್ರಾಂತಿ ಸಮಾಧಾನಗಳನ್ನು ಕಂಡುಕೊಳ್ಳುವರೆಂಬದೇ. ತಂದೆಯು ಆ ರಾಜ್ಯವನ್ನು ಕೊಡಲು ಸಂತೋಷವುಳ್ಳವನಾಗಿರುವ ಆ ಚಿಕ್ಕ ಹಿಂಡು ಇದೇ. ಆಯಲ್ಪಟ್ಟ ಈ ಚಿಕ್ಕಹಿಂಡು ಒಂದೇ ರಾಜ್ಯಪ್ರಭಾವ ಮಾನ ನಿರ್ಲಯತ್ವಗಳನ್ನು ಪಡೆಯಲಿರುವದು ಮತ್ತು ಕರ್ತನಿಂದ

ಗುರುತಿಸಲ್ಪಡುವದು ಕೇವಲ ಇದೊಂದನ್ನೆ ಮತ್ತು ಇತರರೆಲ್ಲರೂ ಪಾಪಗಳನ್ನು ತೊಳೆದುಕೊಳ್ಳುವ 'ಪರ್ಗೆಟೊರಿ' ಎಂಬ ಸ್ಥಳಕ್ಕೆ ಇಲ್ಲವೇ ನಿತ್ಯಯಾತನೆಗೆ ಸೇರಿಸಲ್ಪಡುವರೆಂಬುದನ್ನು ಈ ಹಿಂದೆ ಹಲವರು ಭಾವಿಸಿದ್ದರು. ಈ ಅಭಿಪ್ರಾಯದಲ್ಲಿರುವ ತಪ್ಪನ್ನು ಈ ವಚನದಲ್ಲಿ ಬಹು ಸಮೃದ್ಧವಾದ ರೀತಿಯಲ್ಲಿ ತೋರಿಸಿ ಕೊಡಲಾಗಿರುವದು. ಕರ್ತನು ತನಗೆ ಈ ಹಟ್ಟಿಗೆ ಸೇರದಿರುವ, ಅಂದರೆ ನಾವು ಸೇರಿರುವ ನಂಬಿಕೆಯ ಮೂಲಕವಾದ ವಿಶ್ರಾಂತಿಗೆ ಇನ್ನೂ ಸೇರದಿರುವ, ಮುಂದೆ ಬರಲಿರುವ ರಾಜ್ಯದ ಮಹಿಮೆಯನ್ನು ನಿರೀಕ್ಷಿಸುತ್ತಿರುವ ಬೇರೆ ಕುರಿಗಳೂ ಇವೆ ಎಂಬುದನ್ನು ಸ್ಪಷ್ಟವಾಗಿ ಪ್ರಕಟಿಸಿ ಹೇಳಿರುತ್ತಾನೆ. ದೇವ ಪ್ರೀತಿಯ ಉದ್ದ ಅಗಲ ಎತ್ತರ ಮತ್ತು ಆಳದ ವಿಷಯವಾಗಿ, ಕ್ರಿಸ್ತನಲ್ಲಿ ಮಾಡಲಾಗಿರುವ ಏರ್ಪಾಡುಗಳ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಳ್ಳೋಣ: ಇಡೀ ಲೋಕವು ಪಾಪದಲ್ಲಿಯೂ ಹಾಗು ಆದಿತಂದೆಯಾದ ಆದಾಮನ ಅವಿಧೆಯತೆಯ ಮೂಲಕವಾಗಿ ಎಲ್ಲವನ್ನೂ ಕಳೆದುಕೊಂಡಿತ್ತು, ಇಡೀ ಲೋಕವು ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ವಿಮೋಚಿಸಲಾಗಿತ್ತು. ಈ ವರೆಗೆ ಒಂದು ವಿಶೇಷವಾದ ವರ್ಗವು ಮಾತ್ರ ಕತ್ತಲೆಯೊಳಗಿಂದ ಕರ್ತನ ಆಶ್ಚರ್ಯಕರವಾದ ಬೆಳಕಿಗೆ ಸೇರಲು ಮತ್ತು ಈಗ ಇರುವ ಕುರಿಹಟ್ಟಿಯಲ್ಲಿ ಸೇರುವ ಸೌಭಾಗ್ಯದ ಸ್ಥಿತಿಗೆ ಕರೆಯಲ್ಪಟ್ಟಿರುವರೆಂಬುದನ್ನು ಕಾಣುವವ–ರಾಗೋಣ! ಮಾನವರಲ್ಲಿನ ಒಂದು ದೊಡ್ಡ ಪಾಲು ಜನರಿಗೆ ದೇವರಿಲ್ಲದೆ ಇರುವರೆಂಬುದನ್ನು ಅವರ ಕಣ್ಣುಗಳು ಕುರುಡಾಗಿರುವ, ಅವರ ಕಿವಿಗಳು ಮುಚ್ಚಿರುವ ಕಾರಣ ಹಾಗೂ ಅವರು ದೇವರ ಕೃಪೆಯ ವಿಷಯವಾಗಿ ತಿಳಿಯದವರಾಗಿದ್ದು ಈ ಮೂಲಕವಾಗಿ ದೊರೆಯುವ ಆಶೀರ್ವಾದಗಳನ್ನು ಇನ್ನೂ ಪಡೆಯದ ಕಾರಣ, ಲೋಕದಲ್ಲಿ ಅವರು ಯಾವ ನಿರೀಕ್ಷೆಯೂ ಇಲ್ಲದೆ ಇರುವರು ಎಂಬುದನ್ನು ಗಮನದಲ್ಲಿಟ್ಟುಕೊಳ್ಳೋಣ!

ಆದರೆ ಒಂದು ನಿಗದಿತ ಕಾಲದಲ್ಲಿ ಕುರುಡರೆಲ್ಲರ ಕಣ್ಣುಗಳು ಕಾಣಲಾಗುವದು ಮತ್ತು ಕಿವುಡರೆಲ್ಲರ ಕಿವಿಗಳು ತೆರೆಯ ಲಾಗುವದೆಂದು ಕರ್ತನು ತಿಳಿಸಿರುವದಕ್ಕೆ ಸಹ ಕಿವಿಗೊಡುವ–ವರಾಗೋಣ! ಈಗ ಆಯಲ್ಪಡುತ್ತಿರುವ ಚಿಕ್ಕಹಿಂಡು ಆತನ (ಕ್ರಿಸ್ತನ) ಮದಲಗಿತ್ತಿಯೂ ಮತ್ತು ಆ ರಾಜ್ಯಕ್ಕೆ ಸಹಬಾಧ್ಯಳೂ ಆಗಿ ರೂಪುಗೊಳ್ಳಲಿದ್ದು ಆನಂತರ ಆತನ ಹಾಗು ಆತನ ಮಹಿಮೆ ಹೊಂದಿದ ಮದಲಗಿತ್ತಿಯ ಮೂಲಕವಾಗಿ ಮಾನವಕುಲದ ಪ್ರತಿಯೊಬ್ಬನಿಗೂ ದೇವರ ಆಶೀರ್ವಾದವನ್ನು ವಿಸ್ತರಿಸ–ಲಾಗುವದು ಎಂಬ ಆತನ ಪ್ರಕಟನೆಯನ್ನು ಆಲಿಸುವವ–ರಾಗೋಣ. ನೀತಿಸೂರ್ಯನು ಸ್ವಸ್ಥತೆಯ ಕಿರಣಗಳುಳ್ಳವನಾಗಿ ಮೂಡುವನು, ಆಗ ಎಲ್ಲರೂ ಮೊಣಕಾಲೂರುವರು ಹಾಗೂ ಎಲ್ಲರ ನಾಲಿಗೆಗಳೂ (ಯೇಸು ಕ್ರಿಸ್ತನನ್ನು ಒಡೆಯನೆಂದು) ಅರಿಕೆ ಮಾಡುವದು. ಆಗ, ಯೋಹಾನ 16:10ರಲ್ಲಿ ನಮೂದಿಸಿರುವಂತೆ, ಬೇರೆ ಹಿಂಡಿನ ಕುರಿಗಳನ್ನೂ ಒಟ್ಟುಗೂಡಿಸಲು ಆರಂಭಿಸ –ಲಾಗುವದು. ಆ ಕಾಲದಲ್ಲಿ ಈಗಿರುವ ಕುರಿಹಿಂಡು ತೆರೆಯ ಆಚೆಗೆ ದಾಟಿಹೋಗಿ ಆ ರಾಜ್ಯಪ್ರಭಾವದಲ್ಲಿ ಸೇರುವದು. ಆಗ ಈಗಿರುವ ಕುರಿಹಟ್ಟಿಯು ಮುಕ್ತಾಯವಾಗುವದು ಅಲ್ಲದೆ ಮುಂದೆ ಇಂಥ ಒಂದು ಬಗೆಯ ಕುರಿಹಟ್ಟಿಯು ಪ್ರಯೋಜನಕ್ಕೆ ಬರುವದಿಲ್ಲ, ಯಾಕಂದರೆ ಅಲ್ಲಿ ಯಾವ ಕಳ್ಳರನ್ನಾಗಲಿ ದರೋಡೆಗಾರರನ್ನಾಗಲಿ ಬಿಡಲಾಗುವದಿಲ್ಲ. – "ನನ್ನ ಪರಿಶುದ್ಧ ಪರ್ವತದಲ್ಲಿ (ರಾಜ್ಯದಲ್ಲಿ) ಯಾರೂ ಕೇಡುಮಾಡರು ಹಾಳುಮಾಡರು". (ಯೆಶಾಯ 11:9) ಆನಂತರ ಇನ್ನು ಯಾವ ಕುರಿಯನ್ನೂ ಸಾವಿರ ವರುಷಗಳು ಮುಗಿಯುವ ವರೆಗೆ ವಂಚಿಸದಂತೆ ಆ ಮಹಾ ವಿರೋಧಿಯಾದ ಸೈತಾನನನ್ನು ಒಂದು ಸಾವಿರ ವರುಷಗಳ ಪರ್ಯಂತರ ಬಂಧಿಸಿಡಲಾಗುವದು. ಈ ಮದ್ಯೆ ಮಾನವ ಕುಲವೆಲ್ಲವೂ ಕರ್ತನ ಮತ್ತು ಆತನ ಮದಲಗಿತ್ತಿಯ ವರ್ಗದವರ ಮೂಲಕವಾಗಿ ಶಿಕ್ಷಣಕ್ಕೆ ಒಳಗಾಗುವರು ಮತ್ತು ಯೆಹೋವನ ಮಹಿಮೆಯ ಜ್ಞಾನವು ಭೂಲೋಕದಲ್ಲೆಲ್ಲಾ ತುಂಬಿಕೊಂಡಿರುವದು. (ಹಬ್ಬಕ್ಕೂಕ 2:14) ಇದರ ಪರಿಣಾಮವಾಗಿ ಮಾನವ ಕುಲಕ್ಕೆ ಒಂದು ಪರೀಕ್ಷೆಯಾಗುವದು ಮತ್ತು ಕೆಲವರು ತಾವಾಗಿಯೇ ಸಂತೋಷದಿಂದ ಕರ್ತನಿಗೆ ಕುರಿಯಾಗಿ ಆತನೊಂದಿಗೆ ಹೊಂದಾಣಿಕೆಗೆ ಬಂದವರಾಗಿ ಆತನ ಬಲಗಡೆಯ ಭಾಗಕ್ಕೆ, ಅಂದರೆ ಆತನ ಅನುಗ್ರಹಸ್ಥಾನಕ್ಕೆ ಅಂಗೀಕಾರವಾಗುವರು; ಅವರಿಗೆ ಆತನು ನಿತ್ಯಜೀವವನ್ನು ದಯಪಾಲಿಸಲು ಸಂತೋಷವುಳ್ಳವನಾಗಿರುವನು. ಇತರರು ಇದೇ ಅನುಕೂಲಕರ ಸನ್ನಿವೇಶದಲ್ಲಿ ಆಡಿನಂಥ ಅಂದರೆ ಮೊಂಡು ಸ್ವಭಾವವನ್ನು ತೋರ್ಪಡಿಸುವವರಾಗಿ ಕ್ರಮೇಣ ಆತನ ಅಸಮ್ಮತಿಸ್ಥಾನವಾದ ಎಡಭಾಗಕ್ಕೆ ಕೂಡಿಸಲ್ಪಡುವರು. ಅವರು ವಿರೋಧಿಯಾದ ಸೈತಾನನ ಮನೋಭಾವವನ್ನು ಹೊಂದಿದವರಾಗಿ ಕರ್ತನ ಅನುಗ್ರಹಕ್ಕೆ ಪಾತ್ರರಾಗುವದಿಲ್ಲ. ಇವರು ಕಡೆಯಲ್ಲಿ ಸೈತಾನನೊಂದಿಗೆ ಸಾವಿರ ವರುಷಗಳ ಮುಕ್ತಾಯದ ಸಮಯದಲ್ಲಿ ಎರಡನೆ ಮರಣದಲ್ಲಿ ಸಂಪೂರ್ಣವಾಗಿ ನಿರ್ನಾಮವಾಗುವರು. ಅವರಿಗಾಗುವ ದಂಡನೆಯು ನಿರಂತರ–ವಾದದ್ದು ಕಾರಣ ಅವರ ಮರಣವು ಶಾಶ್ವತ–ವಾಗಿರುವದು; ಅವರಿಗೆ ಎಂದೂ ಪುನರುತ್ಥಾನವಾಗದು, ಅವರದು ಎರಡನೆಯ ಮರಣ, ಸಾಂಕೇತಿಕವಾಗಿ ಅದು ಗೆಹನ್ನಾ, ಇಲ್ಲವೇ ನಾಶನವಾಗಿರುವದು.

ಸುವಾರ್ತಾಯುಗದ ಪರ್ಯಂತರವಾಗಿ ಆಕಾಶದ ಕೆಳಗೆ ರಕ್ಷಣೆ ಹೊಂದಲು ನೀಡಲಾಗಿರುವ ಆ ಒಂದೇ ನಾಮವನ್ನು ಎಂದೂ ಕೇಳದಿರುವ ಒಂದು ದೊಡ್ಡ ಗುಂಪು ಇರುವದೆಬುದನ್ನು ಯಾರೂ ಅಲ್ಲಗಳೆಯಲಾರರು. ಹೀಗಾಗಿ ಕರ್ತನ ಹಿಂಡಿಗೆ ಸೇರುವ ಅವಕಾಶವನ್ನು ಅವರು ಎಂದೂ ಹೊಂದಿರುವದಿಲ್ಲ. ಆ 'ಒಂದೇ ನಾಮವನ್ನು' ತಿಳಿಯದೆ ಅವರು ಪರಲೋಕಕ್ಕೆ ಹೋಗಿರುವದೆಂಬದು ಸತ್ಯವೇದದಲ್ಲಿ ಆಧಾರ ರಹಿತವಾದದ್ದು ಮತ್ತು ಅಯುಕ್ತವಾದದ್ದು ಅಲ್ಲದೆ ಅವರು ರಕ್ಷಣೆಹೊಂದುವ ಅವಕಾಶವನ್ನು ಹೊಂದದೆ ನಿತ್ಯಯಾತನೆಗೆ ಹೋಗಿರುವ–ರೆಂಬದೂ ಸಹ ಅದರಂತೆಯೇ ಸತ್ಯವೇದದಲ್ಲಿ ಆಧಾರ ರಹಿತವಾದದ್ದು ಮತ್ತು ಅಯುಕ್ತವಾದದ್ದು. ಈ ಸುವಾರ್ತಾ ಯುಗದಲ್ಲಿ ಆಯಲ್ಪಟ್ಟವರಾದ ಚಿಕ್ಕಹಿಂಡನ್ನು ಸಾವಿರ ವರುಷದ ಆಳ್ವಿಕೆಯಲ್ಲಿ ತನ್ನ ಅಧಿಪತಿಗಳನ್ನಾಗಿಯೂ ಯಾಜಕರನ್ನಾಗಿಯೂ ಬಳಸಿಕೊಂಡು ತನ್ನ ಕೃಪಾನುಗ್ರಹಗಳನ್ನು ಇವರೆಲ್ಲರಿಗೂ ತೋರಿಸುವವನಾಗಿ ಅವರಿಗೆ ಮಾನವರ ಹಿಂಡಿನ ಅಂಗಗಳಾಗಿ ಕೂಡಿಬರುವ ಅವಕಾಶವನ್ನು ಒದಗಿಸಿ ಅವರಿಗೆ ನಿತ್ಯಜೀವವನ್ನು

ಅನುಗ್ರಹಿಸಲು ಸಂತೋಷವುಳ್ಳವನಾಗಿರು-ವನೆಂಬುದು ಸತ್ಯವೇದಸಮ್ಮತವೂ, ಸಮಂಜಸವೂ ಸಹ ಆಗಿರುವದು.

### ಒಂದೇ ಹಟ್ಟಿ ಆದರೂ ಒಂದೇ ಹಿಂಡು ಇರದು

"ಆಗ ಒಂದೇ ಹಟ್ಟಿ ಇರುವದು ಒಬ್ಬನೇ ಕುರುಬನಿರುವನು" ಎಂದು ಸಾಮಾನ್ಯ ಭಾಷಾಂತವು (ಕಾಮನ್ ವರ್ಷನ್) ಹೇಳುವದು, ಆದರೆ ಇದನ್ನು ಗ್ರೀಕ್ ಭಾಷಾಮೂಲವು ಸಮರ್ಥಿಸುವದಿಲ್ಲ. ಇದನ್ನು ರಿವೈಸ್ಡ್ ವರ್ಷನ್ ಹಾಗು ಡಯಾಗ್ಲಟ್‌ನಲ್ಲಿ ಸೂಕ್ತವಾಗಿ ಹೀಗೆ ಭಾಷಾಂತರಿಸಲಾಗಿರುವದು; "ಆಗ ಒಂದೇ ಹಿಂಡು ಒಬ್ಬನೇ ಕುರುಬನು ಇರುವನು." ಇದು ಅಪೋಸ್ತಲನ ಹೇಳಿಕೆಗೆ ಪೂರ್ಣವಾಗಿ ಸರಿಹೊಂದುತ್ತದೆ. (ಎಫೆಸ್ಸ 1:10) ಹೇಗೆಂದರೆ: ಕಾಲವು ಪರಿಪೂರ್ಣವಾದಾಗ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಒಬ್ಬನಲ್ಲಿ (ಅಕ್ಷರಾರ್ಥದಲ್ಲಿ, ಒಬ್ಬ ಮುಖ್ಯಸ್ಥನ ಕೈಕೆಳಗೆ) ಅಂದರೆ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದು. ಅಂತಿಮವಾಗಿ ದೇವರ ಸೃಷ್ಟಿಗಳೆಲ್ಲವೂ ಈ ಹಿರೀ ಕುರುಬನ ನೇತೃತ್ವದಲ್ಲಿರುತ್ತವೆ. ಆತನು ಈಗ ಕ್ರೈಸ್ತಸಭೆಯ ಅಂದರೆ ಚಿಕ್ಕ ಹಿಂಡಿನ ಮುಖ್ಯಸ್ಥನಾಗಿರುವನು. ಆತನು ಮುಂದೆ ಪುನರುದ್ಧಾರವಾದ ಮಾನವಕುಲದ ಮೇಲೂ ಅಲ್ಲದೆ ದೇವದೂತರ ಮೇಲೆಯೂ ಮುಖ್ಯಸ್ಥನಾಗುವನು. ಹಿಂಡು ಒಂದೇ ಆಗಿರುವದು, ಆದರೆ ಕುರಿಗಳು ಹಲವಾರು ಸ್ವಭಾವದವುಗಳಾಗಿದ್ದು ಬೇರೆ ಬೇರೆ ಮಟ್ಟಗಳಲ್ಲಿನ ಜೀವಿಗಳಾಗಿ-ರುವವು; ಲಿಖಿತವಾಗಿರುವಂತೆ, "ನನ್ನ ತಂದೆಯ ಮನೆಯಲ್ಲಿ ಅನೇಕ ಬಿಡಾರಗಳಿವೆ", ಅನೇಕ ವಿಭಾಗಗಳು, ಅನೇಕ ಮಟ್ಟಗಳು, ಆದರೆ ಎಲ್ಲವೂ ಹೊಂದಾಣಿಕೆಯಿಂದಿದ್ದು ಭವ್ಯವಾಗಿರುವವು. ಆದರೆ ಈ ಎಲ್ಲಾ ಅಂತಸ್ತುಗಳಲ್ಲಿ ಅತ್ಯುನ್ನತವಾದುದೆಂದರೆ ಅದು ಕರ್ತನು ಈ ಸುವಾರ್ತಾಯುಗದಲ್ಲಿನ ಮದಲಗಿತ್ತಿಯ ವರ್ಗವಾದ ಚಿಕ್ಕ ಹಿಂಡಿಗೆ ನೀಡಲು ಆಹ್ವಾನಿಸಿರುವ ಮಹಿಮಾ ಪದವಿ. ನಾವು ಆತನ ಸ್ವರಕ್ಕೆ ಕಿವಿಗೊಡುವವರಾಗೋಣ, ನಾವು ಆತನ ಹೆಜ್ಜೆಗಳ ಜಾಡನ್ನು ಅನುಸರಿಸುವವರಾಗೋಣ, ನಾವು ದೇವರಿಂದ ಕರೆಯಲ್ಪಟ್ಟದ್ದನ್ನು ಆಯಲ್ಪಟ್ಟದನ್ನು ದೃಢಪಡಿಸಿ-ಕೊಳ್ಳುವವರಾಗೋಣ.

*****

# ಒಳ್ಳೆಯ ಕುರುಬನೂ – ಕ್ರಿಸ್ತನೂ

**ರೀಪ್ರಿಂಟ್ಸ್ ಪುಟ 2441 (ಕಡೆಯ ಅರ್ಧಭಾಗ)**

## ಯೋಹಾನ 10:1–16

**"ನಾನೇ ಒಳ್ಳೇ ಕುರುಬನು; ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ." – ಯೋಹಾನ 10:11**

ಯೆಹೋವ ದೇವರು ಒಂದು ಮಾದರಿಯ ರಾಜ್ಯವನ್ನು ಅಥವಾ ಕುರಿಹಟ್ಟಿಯನ್ನು ಸ್ಥಾಪಿಸಿ ಇಸ್ರಾಯೇಲ್ ಜನಾಂಗವನ್ನು ತನ್ನ ಕುರಿಗಳನ್ನಾಗಿ ಅಂಗೀಕರಿಸಿದ್ದನು, ಆದರೆ ಒಂದು ಜನಾಂಗವಾಗಿ ಅವರು ದಾರಿತಪ್ಪಿದ ಕುರಿಗಳಾಗಿದ್ದು ಆತನನ್ನು ತಿಳಿದುಕೊಳ್ಳಲಿಲ್ಲ. ಹೀಗಾಗಿಯೂ ಧರ್ಮಶಾಸ್ತ್ರ ಸಂಬಂಧದ ಒಂದು ಒಡಂಬಡಿಕೆಯ ಮೂಲಕವಾಗಿ ಬೇಲಿಯನ್ನು ಹಾಕಿ ಅವರನ್ನು ಅದರಲ್ಲಿರಿಸಿದ್ದನು. ಅವರು ತಮ್ಮನ್ನು ಆಳುವವನೂ, ಪರಿಪಾಲಿಸುವವನೂ, ಅಧಿಪತಿಯೂ ಆದ ಒಬ್ಬ ರಾಜನನ್ನು ಬಯಸಿದ್ದರು ಮತ್ತು ತಮ್ಮ ಬಯಕೆ ಈಡೇರಿಸಿಕೊಳ್ಳಲು ದೇವರು ಅವರನ್ನು ಬಿಟ್ಟದ್ದನು. ಆದರೆ ಅವರಲ್ಲಿ ಯಾರೂ ನಿಜವಾದ ಕುರುಬನಾಗಿರಲಿಲ್ಲ ಇಲ್ಲವೇ ಯಾರೂ ಆ ಕುರಿಗಳನ್ನು ಅವು ಬಯಸಿದಂಥ ಸ್ಥಿತಿಗೆ ಕೊಂಡುತರಲಿಲ್ಲ. ಅಲ್ಲದೆ ಕಡೆಯದಾಗಿ ಇವರುಗಳನ್ನು ತೆಗೆದುಹಾಕಿದಾಗ ಬೇರೆ ಹಲವರು ತಮ್ಮನ್ನು ಮೆಸ್ಸೀಯನನ್ನಾಗಿ ಪ್ರಸ್ತುತಪಡಿಸಿಕೊಂಡಿದ್ದರು. ಅವರು ಇಸ್ರಾಯೇಲ್ಯರಿಗೆ ಮಾರ್ಗದರ್ಶನಮಾಡುವ ಹಕ್ಕು ತಮಗೆ ಇರುವದೆಂಬುದನ್ನು ಸುಳ್ಳಾಗಿ ಹೇಳಿಕೊಂಡಿದ್ದ ಸುಳ್ಳು ಮೆಸ್ಸೀಯರಾಗಿದ್ದರು. ನಮ್ಮ ಕರ್ತನು ತಿಳಿಸಿರುವಂತೆ ಅವರು ಕಳ್ಳರೂ ಸುಲುಕೊಳ್ಳುವವರೂ ಆಗಿದ್ದು, ಕುರಿಗಳ ಹಿತವನ್ನು ನೋಡುವವರಾಗಿರದೆ ತಮ್ಮ ಸ್ವಾರ್ಥ ಉದ್ದೇಶಕ್ಕಾಗಿ, ಅಂದರೆ ತಮ್ಮನ್ನು ವೈಭವೀಕರಿಸಿಕೊಂಡು ಉನ್ನತಿಗೆ ಬರುವ ಬಯಕೆಯಿಂದ ಕುರಿಗಳನ್ನು ನಿಯಂತ್ರಿಸಲು ಯತ್ನಿಸುವವರಾಗಿದ್ದರು. ಇವರು ಕರ್ತನ ಜನರನ್ನು ನಡೆಸುವ ಸಲುವಾಗಿ ಬಾಗಿಲ ಮೂಲಕವಾಗಿ ಬರದೆ ಬೇರೆ ಮಾರ್ಗವಾಗಿ ಹತ್ತಿಬಂದವರಾಗಿದ್ದರು. ಅಂದರೆ ಆಜ್ಞಾವಿಧಿಗಳ ಮೇಲೆ ದಾಟಿಬರುವವರಾಗಿ ಇಲ್ಲವೇ ಅವುಗಳ ಅಡಿಯಲ್ಲಿ ನುಸುಳಿ ಬರುವದರ ಮೂಲಕವಾಗಿ ಕುರಿಗಳ ಬಳಿಗೆ ತಲುಪಿ ಅವುಗಳ ಮೇಲೆ ನಾಯಕರಾಗ ಮಾಡಿಕೊಂಡಿದ್ದರು; ಒಟ್ಟಾಗಿ ಅವರೆಲ್ಲರೂ ಇಸ್ರಾಯೇಲ್ಯರಲ್ಲಿನ ಒಂದು ದೊಡ್ಡ ಭಾಗವನ್ನು ಹಲವು ಮಾರ್ಗಗಳ ಮೂಲಕವಾಗಿ ಹಟ್ಟಿಯಿಂದ ಹೊರನಡೆಸಿ ದಾರಿತಪ್ಪುವಂತೆ ಮಾಡಿ ಕೆಲವರನ್ನು ವಿಗ್ರಹಾರಾಧನೆಗೆ ಮತ್ತು ಕೆಲವರನ್ನು ಅರಣ್ಯದಲ್ಲಿ ಸುಮ್ಮನೆ ಅಲೆದಾಡುವಂತೆ ಮಾಡಿದ್ದರು.

ನಮ್ಮ ಕರ್ತನ ಮೊದಲನೆಯ ಬರುವಿಕೆಯ ಸಮಯದಲ್ಲಿ ಇದು ಅಲ್ಲಿನ ವಸ್ತುಸ್ಥಿತಿಯಾಗಿತ್ತು. ದೇವರು ಮಾಡಿಕೊಂಡ ಒಡಂಬಡಿಕೆಯು ಆ ಜನಾಂಗಕ್ಕೆ ಕಾವಲಿನ ಗೋಡೆಯಾಗಿ ನಿಂತಿತ್ತು, ಆದರೆ ಅದರ ಬಾಗಿಲು ಇಸ್ರಾಯೇಲ್ಯರ ಒಡಂಬಡಿಕೆ-ಯಲ್ಲಿನ ಮೋಶೆಯ ಧರ್ಮಶಾಸ್ತ್ರವಿಧಿನಿಯಮಗಳಿಂದ ಸೂಚಿತವಾಗಿದ್ದ ನೀತಿನ್ಯಾಯಗಳಿಂದ ನಿರ್ಬಂಧಿತವಾಗಿತ್ತು.

ಒಳಹೋಗಿ ಬರಲು ಅಲ್ಲಿ ಸೂಕ್ತವಾದ ದ್ವಾರವಿಲ್ಲದೆ ಎಲ್ಲರೂ ನಿಯಮವಿಧಿಗಳಿಂದ ಬಂಧಿತರಾಗಿದ್ದು, ಮುಂದೆ ಪ್ರಕಟಗೊಳ್ಳುವ ನಿರೀಕ್ಷೆ ಅಂದರೆ ಕ್ರಿಸ್ತನೊಬ್ಬನೇ ಆ ಬಾಗಿಲು ಅಥವಾ ಜೀವದ ಮಾರ್ಗವೆಂಬುದರಿಂದ ಮುಚ್ಚಲ್ಪಟ್ಟವರಾಗಿದ್ದರು. ಈ ಮಧ್ಯೆ ಆ ಬಾಗಿಲು ಶಾಸ್ತ್ರಿಗಳು ಮತ್ತು ಫರಿಸಾಯರ ಮೂಲಕವಾಗಿ ಉತ್ಸಾಹ ದಿಂದ ಕಾಯಲ್ಪಟ್ಟಿದ್ದು ಅಲ್ಲಿ ಕಳ್ಳರು ಮತ್ತು ದರೋಡೆಗಾರರು ಅಂದರೆ ಸೈತಾನನ ಸೇವಕರ ಮೂಲಕವಾಗಿ ಕುರಿಹಟ್ಟಿಯಲ್ಲಿ ಕೊಳ್ಳೆಹೊಡೆಯುವ ಕಾರ್ಯ ನಡೆಯಲಾಗುತ್ತಿರುವದೆಂಬ ಅಂಶವು ಸಂಪೂರ್ಣವಾಗಿ ನಿರ್ಲಕ್ಷ್ಯವಾಗಿತ್ತು. ಯೋಹಾನ 10:1,2,7,9; ಗಲಾತ್ಯ 3:24; ಯೋಹಾನ 14:6; ಜೆಫನ್ಯ 9:9–12.

ಇಲ್ಲವೇ ನಮ್ಮ ಕರ್ತನಿಗೂ ತನ್ನ ಸ್ವಂತ ಪ್ರಾಣವನ್ನು ತೆರುವುದರ ಮೂಲಕವಾಗಿ ಹೊರತು ನ್ಯಾಯಬದ್ಧವಾಗಿ ಕುರಿಹಟ್ಟಿಯ ಬಾಗಿಲನ್ನು ತೆರೆದು ಕುರಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ. ಇದು ಆ ಮಹಾ ಕುರುಬ–ನಾಗಿರುವ ತಂದೆಯ ಉದ್ದೇಶವಾಗಿತ್ತು. ಹಾಗು ಈ ದೃಷ್ಟಿಯಿಂದ ಆತನು ಕ್ರಿಸ್ತನು ದೊರಕಿಸುವ ಸ್ವತಂತ್ರ್ಯದಲ್ಲಿ ಇರಿಸುವ ಮೊದಲು ಕುರಿಗಳನ್ನು ತನ್ನ ಮಗನ (ಒಳ್ಳೆಯ ಕುರುಬನ) ಮೂಲಕವಾಗಿ ದರ್ಮಶಾಸ್ತ್ರದವಿಧಿಗಳ ಆಧಿಪತ್ಯದಿಂದ ವಿಮೋಚಿಸಬೇಕೆಂಬ ಕಾರಣಕ್ಕಾಗಿ ಆ ವಿಧಿಗಳೊಳಗೆ ಮುಚ್ಚಿಬಿಟ್ಟಿದ್ದನು. ಇದು ಆ ಒಳ್ಳೆಯ ಕುರುಬನು ಕುರಿಗಳಿಗಾಗಿ ಮಾಡಿದ ಮೊದಲನೆಯ ಕಾರ್ಯ. ಆತನು ತನ್ನ ಸೇವೆಯ ಆರಂಭದಲ್ಲಿ ಅಂದರೆ ತಾನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವುದಕ್ಕೆ ಸೂಚಿತವಾಗಿದ್ದ ಸ್ನಾನದೀಕ್ಷೆಯಲ್ಲಿ ತನ್ನ ಜೀವವನ್ನು ಕೊಡುವ ಕಾರ್ಯವನ್ನು ಪ್ರಾರಂಭಮಾಡಿದ್ದನು. ತನ್ನನ್ನು ಯಜ್ಞಮಾಡಿಕೊಳ್ಳುವ ಈ ದೃಷ್ಟಿಯಿಂದಲೇ ಅಂದರೆ ಆತನು (ತನ್ನ ಜೀವವನ್ನು) ಆಗಲೇ ಮುಡುಪಾಗಿಟ್ಟದ್ದೂ ಅಲ್ಲದೆ ಅದನ್ನು ಆಗಲೇ ಅರ್ಪಿಸಿ–ಕೊಳ್ಳುವುದನ್ನೂ ಸಹ ಮಾಡುತ್ತಿದ್ದವನಾಗಿ, ಆನಂತರದಲ್ಲಿ ಅಂತಿಮವಾಗಿ ಕಲ್ವಾರಿಯಲ್ಲಿ ಅದನ್ನು ಪೂರ್ಣಗೊಳಿಸುವ ಈ ದೃಷ್ಟಿಯಿಂದಲೇ ನಮ್ಮ ವಿಮೋಚಕನು ತನ್ನ ಕುರಿಗಳಿಗಾಗಿ ತನ್ನ ಪ್ರಾಣವನ್ನೇ ಕೊಡುವ ಒಳ್ಳೆಯ ಕುರುಬನಾಗಿರುವೆನೆಂದು ತನ್ನ ಬಗ್ಗೆ ಸಾರಿ ಹೇಳಿದ್ದನು.

ನಮ್ಮ ಕರ್ತನ ಮರಣವು ಇಸ್ರಾಯೇಲ್ಯರನ್ನು ಧರ್ಮಶಾಸ್ತ್ರದಿಂದಾದ ಶಾಪದೊಳಗಿಂದ (ದಂಡನೆಯೊಳಗಿಂದ) ವಿಮೋಚಿಸಿರುವದೆಂದು ತಿಳಿಸಿರುವನು, ಆದರೆ (ಕರ್ತನು) ಕುರಿಹಟ್ಟಿಯನ್ನು ತೆರೆಯುವಂತಾಗಲು ಆತನು ಕೇವಲ "ಕಾಯುವ ಆಳಿನಂತಿದ್ದ" ಧರ್ಮಶಾಸ್ತ್ರವಿಧಿಗಳನ್ನು ಕೈಗೊಂಡು ಅವುಗಳನ್ನು ನೆರವೇರಿಸುವದು ಮಾತ್ರವಲ್ಲದೆ ಆ ಮೂಲಕವಾಗಿ ನಿಜವಾದ ಕುರುಬನಿಗೆ ಕುರಿಗಳನ್ನು ನಿಯಂತ್ರಿಸುವ ಹಾಗು ಅವುಗಳಿಗೆ ಒಡೆಯನಾಗುವ ಅಧಿಕಾರವನ್ನು ಅವು ಒದಗಿಸಿದ್ದವು; ಹೀಗೆ ಕುರಿಗಳನ್ನು ಹೊರಗೆ ಹಸಿರುಗಾವಲುಗಳಿಗೆ ನಡೆಸಲು ಮತ್ತು ಅವುಗಳು ಹೊರಗೆ ಹೋಗಿ ಆತನ ಕುರಿಗಳಾಗಿ ಸಂಪೂರ್ಣವಾದ ಸ್ವಾತಂತ್ರ್ಯದಿಂದ ಆತನನ್ನು ಹಿಂಬಾಲಿಸು –ವಂತೆಯೂ ಆದವು. ಹೀಗಿದ್ದರೂ ಹಲವು ನಿಜವಾದ ಕುರಿಗಳು ಹಟ್ಟಿಯಿಂದ ಹೊರಗೆ ಹೋಗಿ ಅರಣ್ಯದಲ್ಲಿ ತಪ್ಪಿಸಿಕೊಂಡು ಹೋಗಿರುವುದಾಗಿ ಸಾಕ್ಷಿಹೇಳಿರುವನು. ಹಟ್ಟಿಯೊಳಗೆ ಉಳಿದಿರುವ ಕುರಿಗಳನ್ನು ಅಂದರೆ ದೇವರಿಗೆ ಹತ್ತಿರವಾಗಿ ಜೀವಿಸುತ್ತಿರುವವರನ್ನು ಕರೆಯುವುದರ ಸಹಿತವಾಗಿ ಇವುಗಳನ್ನೂ ಅಂದರೆ ಸುಂಕದವರನ್ನು ಪಾಪಿಗಳನ್ನು ಕರೆದುಕೊಂಡು ಬರುವದು ಆತನ ಸೇವಾಕಾರ್ಯವಾಗಿತ್ತು.

ನಿಜವಾದ ಕುರುಬನು ಕುಂಟಾದವುಗಳು ಬಲಹೀನ ವಾದವುಗಳು ಹಸಿದವುಗಳು ಒಳಗೊಂಡಂತೆ ತನ್ನ ನಿಜವಾದ ಕುರಿಗಳೆಲ್ಲವುಗಳ ವಿಷಯದಲ್ಲಿ ಆಸಕ್ತಿಯನ್ನು ತೋರಿಸಿದ್ದನು. ಆತನು ಪಾಪಿಗಳನ್ನು ಮಾನಸಾಂತರಹೊಂದಲು ಕರೆದಿದ್ದನು, ಮತ್ತು ನಿಜವಾದ ಕುರಿಗಳು ಧರ್ಮಶಾಸ್ತ್ರವಿಧಿಗಳ ಸಂಬಂಧದಲ್ಲಿ ತಮ್ಮಲ್ಲಿರುವ ಕುಂದುಕೊರತೆಗಳನ್ನು ಮನಗಂಡವುಗಳಾಗಿ ಕರೆಗೆ ಸ್ಪಂದಿಸುವವುಗಳಾಗಿ ತಮ್ಮ ಆತ್ಮಗಳನ್ನು ಕಾಯುವ ಕುರುಬನೂ ಅಧ್ಯಕ್ಷನೂ ಆಗಿರುವಾತನ ಬಳಿಗೆ ಬಂದಿದ್ದವು. ಆದರೆ ಹಿಂಡಿನ ಅನೇಕ ಕುರಿಗಳು ನಿಜವಾದ ಕುರಿಗಳ ಸ್ಥಾನದಿಂದ ಬಹು ದೂರ ಅಲೆದಾಡುತ್ತಾ ಹೋಗಿರುವ ಕಾರಣ ಅಲ್ಲಿ ಆತನ ಸ್ವರವನ್ನು ಕೇಳಿದವುಗಳು ಸಾಕಷ್ಟು ಇರಲಿಲ್ಲ; ತನ್ನ ಹಿಂಡಿನ ಸಂಖ್ಯೆಯು ಪೂರ್ಣಗೊಳ್ಳಲು ಈ ಒಳ್ಳೆಯ ಕುರುಬನು ಈ ಸುವಾರ್ತಾ ಯುಗದ ಪರ್ಯಂತರ ತನ್ನ ಸ್ವರವನ್ನು ಎತ್ತಿ (ತನ್ನ ದೇಹದ ಅಂಗಗಳಾದವರ ಮೂಲಕವಾಗಿ ನುಡಿಯುವವನಾಗಿ) ಅನ್ಯಜನರ ಮಧ್ಯದೊಳಗಿಂದಲೂ ಕುರಿಗಳನ್ನು ಕರೆಯುತ್ತಿರುವನು. ಮತ್ತು ಆದಿಯಲ್ಲಿ ಮೊದಲೇ ನಿಷ್ಕರ್ಷೆಮಾಡಿದ ಸಂಖ್ಯೆಯು ಪೂರ್ಣವಾಗಲು ಸಾಕಷ್ಟು ಕುರಿಗಳು ಕರೆಗೆ ಅಂತಿಮವಾಗಿ ಸ್ಪಂದಿಸಲಿರುವವು.

ಈಗಿನ ಕಾಲದಲ್ಲಿ ನೀಡಲಾಗಿರುವ ಕರೆಯು ಸಾಧಾರಣವಾಗಿ ಎಲ್ಲರಿಗಾಗಿ ಇರುವಂಥದಲ್ಲ, ಆದರೆ ಈ ಸತ್ಯವೇದ ಭಾಗವು ತಿಳಿಸಿರುವಂತೆ, "ಆತನು ತನ್ನ ಸ್ವಂತ ಕುರಿಗಳನ್ನು ಹೆಸರು ಹಿಡಿದು ಕರೆಯುವನು"; ಆದುದರಿಂದ ಇದು ಒಂದು ವಿಶೇಷವಾಗಿರುವ ಕರೆ. "ಕರ್ತನು ತನ್ನವರು ಯಾರೆಂಬುದನ್ನು ತಿಳಿದಿರುವನು." ಆತನ ಕರೆಗೆ ವಿಧೇಯರಾಗುವದರ ಮೂಲಕವಾಗಿ ಅಂದರೆ ಆತನನ್ನು ಹಿಂಬಾಲಿಸುವದರ ಮೂಲಕವಾಗಿ ಅವರು ಕುರಿಗಳಾಗಿ ಆತನೊಡನೆ ತಮಗಿರುವ ಸಂಬಂಧವನ್ನು ತೋರ್ಪಡಿಸುವರು. ಈಗ ಕರೆಯಲಾಗುತ್ತಿರುವ ಹಿಂಡು ಹಾಗು ಅಂತಿಮವಾಗಿ ತಮ್ಮ ಕರೆಯನ್ನು ಆಯುವಿಕೆಯನ್ನು ದೃಢಪಡಿಸಿಕೊಳ್ಳುವವರು ಕೇವಲ ಒಂದು "ಚಿಕ್ಕಹಿಂಡು" ಎಂದು ಸತ್ಯವೇದವು ನಮಗೆ ತಿಳಿಸಿರುವದು, ಅಲ್ಲದೆ ಇವುಗಳಿಗಾಗಿ ಏರ್ಪಡಿಸಲಾಗಿರುವ ಹಟ್ಟಿಯು ಒಂದು ವಿಶೇಷದ್ದಾಗಿರುವದು; ಅದು ಯಾವದೆಂದರೆ, ಆ ರಾಜ್ಯ. – ಲೂಕ 12:32

ಈ ಸುವಾರ್ತಾಯುಗದ ಪರ್ಯಂತರ ಕರ್ತನು ಈ ವರ್ಗದವರನ್ನು ಕಾಳಜಿ ವಹಿಸಿ ಪರಿಪಾಲಿಸುತ್ತಿರುವನು; ಇತರರಿಗೆ ಇವರು ಕಠಿಣವಾದ ಪರಿಶೋಧನೆ ಶಿಕ್ಷಣ ಕಷ್ಟಸಂಕಟಗಳ ಮೂಲಕವಾಗಿ ನಡೆದು ಬರುತ್ತಿರುವಂತೆ ಕಂಡುಬಂದರೂ ಆತನು ಇವರನ್ನು ವಿಶೇಷವಾಗಿ ನಡೆಸಿ ಪೋಷಿಸಿ ಆಶೀರ್ವದಿ–ಸುತ್ತಿರುವನು. ಹೌದು, ನಮ್ಮ ಕುರುಬನು ತಾನೇ ತಿಳಿಸಿರುವಂತೆ,

ಕ್ರಿಸ್ತನಲ್ಲಿ ಸದ್ಭಕ್ತರಾಗಿ ನಡೆಯಲು ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಗುರಿಯಾಗುವರು. ಆದರೆ ವಿಶಿಷ್ಟತೆಯುಳ್ಳದ್ದೂ ಆಯಲ್ಪಟ್ಟದ್ದೂ ಆಗಿರುವ ಕುರಿಹಿಂಡಿಗೆ ಈ ಕಾಲವು ಒಂದು ವಿಶಿಷ್ಟವಾದ ಪರಿಶೋಧನಾ ಸಮಯವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಕುರುಬನು ತಿಳಿಯಪಡಿಸಿರುವಂತೆ, ಆ ರಾಜ್ಯಕ್ಕಾಗಿ ನೀಡಿರುವ ಕರೆಯ ಏರ್ಪಾಡಿನಲ್ಲಿ ಒಳಗೊಂಡಿರ –ದಂಥ, ಈ ಹಟ್ಟಿಗೆ ಸೇರದಂಥ ಬೇರೆ ಕುರಿಗಳೂ ಇರುವವು ಎಂಬುದನ್ನೂ ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಬೇರೆ ಕುರಿಗಳು ಈಗಲೂ ಪಾಪವೆಂಬ ಅರಣ್ಯದಲ್ಲಿ ದಾರಿತಪ್ಪಿ ಅಲೆದಾಡುತ್ತಿರುವವು, ಆದರೆ ಸಾವಿರ ವರುಷಗಳ ಕಾಲದ ದಿನವು ಸಮೀಪವಾಗಿದ್ದು, ಅದರಲ್ಲಿ ಚದರಿಹೋಗಿರುವ ತನ್ನ ಕುರಿ–ಗಳೆಲ್ಲವನ್ನು ಕರ್ತನು ಒಟ್ಟುಗೂಡಿಸುವನು. ಪ್ರೀತಿ ನೀತಿಗಳನ್ನು ಮತ್ತು ಅನುಕೂಲಕರವಾದ ಸನ್ನಿವೇಶಗಳಲ್ಲಿ ದೇವರೊಂದಿಗೆ ಹೊಂದಾಣಿಕೆಗೆ ಬರಲು ಪ್ರಯತ್ನಿಸುತ್ತಿರುವ ಎಲ್ಲರೂ ಆತನೊಡನೆ ಹೊಂದಾಣಿಕೆಗೆ ಬಂದು ಆತನ ಹಿಂಡಾಗುವರು. ಕೇವಲ “ಆ ರಾಜ್ಯಕ್ಕೆ ಬಾಧ್ಯರಾದ” ಈ ಕಾಲದಲ್ಲಿನ “ಚಿಕ್ಕ ಹಿಂಡಿಗೆ” ಮಾತ್ರವಲ್ಲದೆ, ತನ್ನ ಈ ಎಲ್ಲಾ ಕುರಿಗಳಿಗಾಗಿಯೂ ಆ ಒಳ್ಳೆಯ ಕುರುಬನು ತನ್ನ ಜೀವವನ್ನು ಈಡನ್ನಾಗಿ ಕೊಟ್ಟಿರುವನು. ಆ ರಾಜ್ಯವು ಸ್ಥಾಪನೆಯಾದ ನಂತರ ಕ್ರಿಸ್ತನ ಈ ವಿಶಾಲವಾದ ಹಿಂಡನ್ನು ಒಟ್ಟುಗೂಡಿಸಲಾಗುವದು. – ಮತ್ತಾಯ 24:31,32.

ಈ ಸಾಮ್ಯದ ಅರ್ಥವನ್ನು, ಅಲ್ಲದೆ ದೇವರ ಯೋಜನೆಯ ಇತರ ಹಲವಾರು ಲಕ್ಷಣಗಳನ್ನೂ ಸಹ ತಿಳಿಯಲು ಕೀಲಿಯಂತಿರುವ ಸಾಧನದ ಒಂದು ಭಾಗವು: “ಚಿಕ್ಕ ಹಿಂಡಿನ” ಕುರಿಗಳನ್ನು ಈಗ ಕರೆಯಲಾಗುತ್ತಿದ್ದು ಮತ್ತು ಆ ರಾಜ್ಯಲ್ಲಿ ಸಹ–ಬಾಧ್ಯತೆಯನ್ನು ಹೊಂದಲು ಅವುಗಳನ್ನು ಆದುಕೊಳ್ಳಲಾಗುತ್ತಿದ್ದು, ಅವುಗಳು ಯಜ್ಞಾರ್ಪಿತವಾಗಬೇಕು ಎಂಬ ಅಂಶದಲ್ಲಿ ಕಂಡುಬರುತ್ತದೆ. ಆ ರಾಜಕುಮಾರನೂ, ಆ ಕುರುಬನು ತಾನೇ ದೇವರು ನೇಮಿಸಿದ ಯಜ್ಞದ ಕುರಿಯಾಗಿ ಈ ಪ್ರಕಾರ ತನ್ನನ್ನೇ ಯಜ್ಞವನ್ನಾಗಿ ಅರ್ಪಿಸಿಕೊಂಡು ಧರ್ಮಶಾಸ್ತ್ರದ ಅಡಿಯಲ್ಲಿ ಮುಚ್ಚಲ್ಪಟ್ಟಿದ್ದವರಿಗೆ ಬಾಗಿಲು ತೆರೆದದ್ದು ಮಾತ್ರವಲ್ಲದೆ ಅದೇ ಯಜ್ಞಾರ್ಪಣೆಯಲ್ಲಿ ಮಾನವ ಕುಲದವರೆಲ್ಲರನ್ನೂ ಸಹ ವಿಮೋಚಿಸಿದ್ದನು. ಇವುಗಳಲ್ಲಿ ತಾನು ಇನ್ನೂ ಹುಡುಕಲಿರುವ “ಆ ಬೇರೆ ಕುರಿಗಳೂ” ಇರುವವು. ಹೀಗೆಯೇ “ಚಿಕ್ಕ ಹಿಂಡಿನ” ಕುರಿಗಳು ಈಗ ಕರೆಯಲ್ಪಡುತ್ತಿದ್ದು ಅವುಗಳೆಲ್ಲವೂ ದೇವರು ನೇಮಿಸಿದ ಯಜ್ಞದ ಕುರಿಯಾಗಿರುವ ಕ್ರಿಸ್ತನೊಂದಿಗೆ ಶ್ರಮೆಯನ್ನು ಅನುಭವಿಸಬೇಕಿರುವದು, ಅವರೆಲ್ಲರೂ “ತಮ್ಮ ತಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿಕೊಳ್ಳಬೇಕಿರುವದು; ಇದು ಅವರ ವಿವೇಕಪೂರ್ವಕವಾದ ಆರಾಧನೆಯೂ ಆಗಿರುವದು.” (ರೋಮಾ 12:1) ಅಪೋಸ್ತಲನು ಬೇರೊಂದೆಡೆ ತಿಳಿಸಿರುವಂತೆ: “ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೆ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ (ಜೊತೆ ಕುರಿಗಳಿಗೋಸ್ಕರ) ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ.” – 1 ಯೋಹಾನ 3:16

ಈ ದೃಷ್ಟಿಯಿಂದ ತಿಳಿದುಬರುವದೇನಂದರೆ: ನಮ್ಮ ಕರ್ತನು ಲೋಕದ ಪಾಪದ ನಿವಾರಣೆಗಾಗಿ ತಂದೆಯಿಂದ ನೇಮಿತವಾದ ಯಜ್ಞದ ಕುರಿಯಾಗಿದ್ದಂತೆ ಯೇಸುವಿನ ಕುರಿಹಿಂಡಾಗಿರುವ ನಾವು ಸಹ ಕ್ರಿಸ್ತನ ಸಂಕಟಗಳಲ್ಲಿ ಉಳಿದುದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ತಮ್ಮ ಶರೀರದಲ್ಲಿ ಅನುಭವಿಸಿ ತೀರಿಸಬೇಕಾಗುತ್ತದೆ ಎಂಬುದು. ಮತ್ತು ಹೀಗೆ ಕುರುಬನನ್ನು “ಮರಣ ಪರ್ಯಂತರವಾಗಿ” ನಂಬಿಗಸ್ತರಾಗಿ ಹಿಂಬಾಲಿಸುವ ಹಿಂಡಿನವರೆಲ್ಲರು ಆ ಕುರುಬನ ದೇಹದ ಅಂಗಗಳಾಗಿ ಎಣಿಸಲ್ಪಡುವರೆಂದು ಬೇರೊಂದು ಸತ್ಯವೇದ ವಾಕ್ಯಭಾಗವು ನಮಗೆ ತೋರಿಸಿಕೊಡುತ್ತದೆ. ಹೀಗೆ ಸುವಾರ್ತಾಯುಗ ಸಂಪೂರ್ಣವಾಗಿ ಕ್ರಿಸ್ತನೊಂದಿಗೆ ಬಾಧೆಯನ್ನು ಅನುಭವಿಸುವ, ಅನುದಿನವೂ ಮರಣವನ್ನು ಅನುಭವಿಸುವ, ಸಹೋದರರಿ – ಗೋಸ್ಕರ ನಮ್ಮ ಪ್ರಾಣವನ್ನೇ ಕೊಡುವ ಸಮಯವಾಗಿರುವದು; ಅಲ್ಲದೆ ಸುವಾರ್ತಾಯುಗದ ಅಂತ್ಯದಲ್ಲಿ ಈ ಯಜ್ಞವು ಪೂರ್ಣವಾಗುವವರೆಗೆ ಅಂದರೆ ಹಿರೀ ಕುರುಬನ ಶಿರಸ್ಸು ಮತ್ತು ದೇಹವು ಸಂಪೂರ್ಣವಾಗುವವರೆಗೆ, ಒಂದು ವಿಶಾಲ ಅರ್ಥದಲ್ಲಿ ಮನುಕುಲದವರೆಲ್ಲರಿಗೆ ಸಾಮಾನ್ಯವಾಗಿರುವ ಹೊಸ ಒಡಂಬಡಿಕೆಯು ಅನಾವರಣಗೊಳ್ಳುವದಿಲ್ಲ. ಆಗ ಆತ್ಮನೂ ಮದಲಗಿತ್ತಿಯೂ ಬಾ ಅನ್ನುವರು ಮತ್ತು ಬಾಯಾರಿದವರು (ಇಚ್ಛೆಯುಳ್ಳವರು) ಬರಲಿ. ಆದರೆ ಈಗ “ತಂದೆಯು ಎಳೆದ ಹೊರತು ಯಾರೂ ನನ್ನ ಬಳಿಗೆ ಬರಲಾರರು.” ಅವರೆಲ್ಲರೂ ಒಟ್ಟಾಗಿ ಒಂದು “ಚಿಕ್ಕ ಹಿಂಡಾಗಿರುವರು.”

ಆ ರಾಜ್ಯದಲ್ಲಿ ಆತನೊಡನೆ ಸಹಕಾರಿಗಳಾಗಲು ಈಗ ಕರೆಯಲಾಗುತ್ತಿರುವ ಎಲ್ಲರಲ್ಲಿಯೂ ಹಿಂಡಿನ ಮುಖ್ಯಸ್ಥನಾಗಿರುವ ಹಿರೀ ಕುರುಬನ (ಅಥವಾ ಶಿರಸ್ಸಿನ) ಮನೋಭಾವವು (ಆತ್ಮವು) ಇರಬೇಕಾಗುತ್ತದೆ. ಆ ಒಳ್ಳೆಯ ಕುರುಬನು ತನ್ನ ಕುರಿಹಿಂಡಿಗಾಗಿ ತನ್ನ ಪ್ರಾಣವನ್ನು ಕೊಡುವವನಾಗಿರುವಂತೆಯೇ ಇವರೆಲ್ಲರೂ ಸತ್ಯದ ವಿಷಯವಾದ ಸೇವೆಯಲ್ಲಿ ತಮ್ಮ ಪ್ರಾಣವನ್ನು ಕೊಡುವರು. ಆ ಒಳ್ಳೆಯ ಕುರುಬನು ಕುರಿಗಳ ಅಗತ್ಯತೆಗಳ ಬಗ್ಗೆ ಉದಾಸೀನನಾಗಿ ಕೇವಲ ತನಗೋಸ್ಕರವಾಗಿ ಚಿಂತಿಸುವವನಾಗಿ ಅವುಗಳಿಂದ ತಾನು ಎಷ್ಟು ಲಾಭ ಪಡಕೊಳ್ಳಲು ಸಾಧ್ಯವೆಂದು ಯೋಚಿಸದೇ ಇರುವಂತೆಯೇ ಆತನ ಮನೋಭಾವವನ್ನು (ಆತ್ಮವನ್ನು) ಹೊಂದಿರುವವರಲ್ಲಿಯೂ ಇರುವದು. ಕ್ರಿಸ್ತನ ದೇಹದ ಪರವಾಗಿ ಅವರು ಮಾಡುವ ಸೇವೆಯು ಯಾವ ಅರ್ಥದಲ್ಲಿಯೂ ನೀಚ ದ್ರವ್ಯಾಶೆಗೋಸ್ಕರವಾಗಿರದೆ, ಇಲ್ಲವೇ ಮನುಷ್ಯರಿಂದ ಗೌರವ ಪಡೆಯ ಸಲುವಾಗಿರದೆ ಅಥವಾ ಲೌಕೀಕಲಾಭಕ್ಕೋಸ್ಕರವಾಗಿರದೆ; ದೇವರ ಮೇಲಣ ಪ್ರೀತಿಯ ಸಲುವಾಗಿ, ಸತ್ಯದ ಮೇಲಣ ಪ್ರೀತಿಯ ಸಲುವಾಗಿ, ಕುರೀಹಿಂಡಿನ ಮೇಲಣ ಪ್ರೀತಿಯ ಸಲುವಾಗಿ ಇರುವದು.

*****



**ಲಾಜರನ ಪುನರುತ್ಥಾನ**

“ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ–ಲಾಜರನೇ, ಹೊರಗೆ ಬಾ ಎಂದು ಕೂಗಿದನು.
ಸತ್ತಿದ್ದವನು ಹೊರಗೆ ಬಂದನು” ಯೋಹಾನ 11:43

## ಯೊರ್ದನಿನ ಪೂರ್ವಭಾಗದಲ್ಲಿ ನಡೆದ ಯೇಸುವಿನ ಆನಂತರದ ಸೇವಾಕಾರ್ಯ

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಯೊರ್ದನ್ ಹೊಳೆಯ ಆಚೆ | ಹಲವರು ಯೇಸುವಿನಲ್ಲಿ ನಂಬಿಕೆಯಿಟ್ಟದ್ದು | — | — | — | 10:40–42 |
| | ಪೆರೀಯ (ಯೊರ್ದನ್ ಹೊಳೆಯ ಆಚೆ) | ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಬೋಧಿಸಿದುದು, ಯೆರೂಸಲೇಮ್ ಕಡೆಗೆ ಹೊರಟದ್ದು | — | — | 13:22 | — |
| | ಪೆರೀಯ | ರಾಜ್ಯದ ಪ್ರವೇಶ, ಹೆರೋದನ ಬೆದರಿಕೆ, ಮನೆ ಬರಿದಾಗಿರುವದು | — | — | 13:23–35 | — |
| | ಬಹುಶಃ ಪೆರೀಯ | ಒಬ್ಬ ಫರಿಸಾಯನ ಮನೆಯ ಮೂಲಕವಾಗಿ ನೀಡಲಾದ ಪಾಠಗಳು | — | — | 14:1–24 | — |
| | ಬಹುಶಃ ಪೆರೀಯ | ಶಿಷ್ಯತನಕ್ಕೆ ತಗಲುವ ಕಷ್ಟನಷ್ಟಗಳ ಲೆಕ್ಕಾಚಾರ | — | — | 14:25–35 | — |
| | ಬಹುಶಃ ಪೆರೀಯ | ದೃಷ್ಟಾಂತಗಳು: ತಪ್ಪಿಹೋದ ಕುರಿ, ಕಳೆದು ಹೋದ ಪಾವಲಿ, ತಪ್ಪಿಹೋದ ಮಗ | — | — | 15:1–32 | — |
| | ಬಹುಶಃ ಪೆರೀಯ | ದೃಷ್ಟಾಂತಗಳು: ಅನ್ಯಾಯಗಾರನಾದ ಮನೆವಾರ್ತೆಯವನು, ಐಶ್ವರ್ಯವಂತನು ಮತ್ತು ಲಾಜರನು | — | — | 16:1–31 | — |
| | ಬಹುಶಃ ಪೆರೀಯ | ಕ್ಷಮೆ ಮತ್ತು ನಂಬಿಕೆ, ಪ್ರಯೋಜನವಿಲ್ಲದ ಆಳುಗಳು | — | — | 17:1–10 | — |
| | ಬೆಥಾನಿ | ಯೇಸುವು ಲಾಜರನನ್ನು ಮರಣದಿಂದ ಎಬ್ಬಿಸಿದುದು | — | — | — | 11:1–46 |
| | ಯೆರೂಸಲೇಮ್, ಎಪ್ರಾಯಿಮ್ | ಯೇಸುವಿನ ವಿರುದ್ಧವಾಗಿ ಕಾಯಫನು ಕೊಟ್ಟ ಆಲೋಚನೆ, ಯೇಸುವು ತನ್ನನ್ನು ಹಿಂದೆಗೆದುಕೊಂಡದ್ದು | — | — | — | 11:47–54 |
| | ಸಮಾರ್ಯ, ಗಲಿಲಾಯ | ಸಮಾರ್ಯ, ಗಲಿಲಾಯಗಳ ನಡುವೆ ಹಾದು ಹೋಗುವಾಗ ಮಾಡಿದ ಸ್ವಸ್ಥಪಡಿಸುವಿಕೆ ಮತ್ತು ಬೋಧನೆಗಳು | — | — | 17:11–37 | — |
| | ಸಮಾರ್ಯ ಇಲ್ಲವೇ ಗಲಿಲಾಯ | ದೃಷ್ಟಾಂತಗಳು: ನ್ಯಾಯಕ್ಕಾಗಿ ಬಿಡದೆ ಬೇಡುತ್ತಿದ್ದ ವಿಧವೆ, ಫರಿಸಾಯನು ಮತ್ತು ಸುಂಕದವನು | — | — | 18:1–14 | — |
| | ಪೆರೀಯ | ಪೆರಿಯಾದ ಸುತ್ತ ತಿರುಗಾಡಿದುದು, ಹೆಂಡತಿಯನ್ನು ಬಿಟ್ಟುಬಿಡುವ ಕುರಿತಾದ ಬೋಧನೆ | 19:1–12 | 10:1–12 | — | — |
| | ಪೆರೀಯ | ಚಿಕ್ಕಮಕ್ಕಳನ್ನು ಹತ್ತಿರಕ್ಕೆ ಸೇರಿಸಿಕೊಂಡು ಆಶೀರ್ವದಿಸಿದುದು | 19:13–15 | 10:13–16 | 18:15–17 | — |
| | ಪೆರೀಯ | ಐಶ್ವರ್ಯವಂತನಾದ ಯವನಸ್ಥನು, ದ್ರಾಕ್ಷೇತೋಟದಲ್ಲಿನ ಕೆಲಸಗಾರರು | 19:16–20:16 | 10:17–31 | 18:18–30 | — |
| | ಬಹುಶಃ ಪೆರೀಯ | ಯೇಸುವು ತನ್ನ ಮರಣ ಪುನರುತ್ಥಾನಗಳನ್ನು ಮೂರನೇ ಸಾರಿ ಮುಂತಿಳಿಸಿದುದು | 20:17–19 | 10:32–34 | 18:31–34 | — |
| | ಬಹುಶಃ ಪೆರೀಯ | ರಾಜ್ಯದಲ್ಲಿ (ಕ್ರಿಸ್ತನ) ಬಲಗಡೆ ಮತ್ತು ಎಡಗಡೆ ಕುಳಿತುಕೊಳ್ಳಲು ಯಾಕೋಬ ಯೋಹಾನರ ಬೇಡಿಕೆ | 20:20–28 | 10:35–45 | — | — |
| | ಯೆರಿಕೋ | ಯೆರಿಕೋವನ್ನು ಹಾದುಹೋಗುದುದು, ಆತನು ಇಬ್ಬರು ಕುರುಡರನ್ನು ಸ್ವಸ್ಥಪಡಿಸಿದುದು, ಜಕ್ಕಾಯನ ಮನೆಗೆ ಭೇಟಿ, ಮೊಹರಿಗಳ ಸಾಮ್ಯ | 20:29–34 | 10:46–52 | 18:35–19:28 | — |

## ಯೋಹಾನ 10:40-42

ಆ ಮೇಲೆ ಆತನು ಯೊರ್ದನ್ ಹೊಳೆಯ ಆಚೆ ಯೋಹಾನನು ಮೊದಲು ಸ್ನಾನ ಮಾಡಿಸುತ್ತಿದ್ದ ಸ್ಥಳಕ್ಕೆ ತಿರಿಗಿ ಅಲ್ಲಿ ಇದ್ದನು. ಅನೇಕರು ಆತನ ಬಳಿಗೆ ಬಂದು–ಯೋಹಾನನು ಒಂದು ಸೂಚಕ ಕಾರ್ಯವನ್ನೂ ಮಾಡಲಿಲ್ಲ; ಆದರೆ ಈತನ ವಿಷಯವಾಗಿ ಯೋಹಾನನು ಹೇಳಿದ್ದೆಲ್ಲಾ ನಿಜವಾಗಿತ್ತು ಎಂದು ಮಾತಾಡುತ್ತಿದ್ದರು. ಅಲ್ಲಿ ಅನೇಕರು ಆತನನ್ನು ನಂಬಿದರು.

## ಲೂಕ 13:22-35

ಆತನು ಊರೂರಿಗೂ ಗ್ರಾಮಗ್ರಾಮಕ್ಕೂ ಹೋಗಿ ಉಪದೇಶ ಮಾಡುತ್ತಾ, ಯೆರೂಸಲೇಮಿಗೆ ಪ್ರಯಾಣ ಮಾಡುತ್ತಿದ್ದನು. ಆ ಕಾಲದಲ್ಲಿ ಒಬ್ಬನು–ಸ್ವಾಮೀ, ರಕ್ಷಣೆ ಹೊಂದುವವರು ಸ್ವಲ್ಪಜನರೋ ಎಂದು ಕೇಳಲು ಆತನು ಅವರಿಗೆ–ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ. ಬಹುಜನ ಒಳಕ್ಕೆ ಹೋಗುವದಕ್ಕೆ ನೋಡುವರು, ಆದರೆ ಅವರಿಂದಾಗು–ವದಿಲ್ಲ ಎಂದು ನಿಮಗೆ ಹೇಳುತ್ತೇನೆ. ಮನೇಯಜಮಾನನು ಎದ್ದು ಕದಾ ಹಾಕಿಕೊಂಡಮೇಲೆ ನೀವು ಹೊರಗೆ ನಿಂತುಕೊಂಡು ಕದತಟ್ಟಿ–ಸ್ವಾಮೀ, ನಮಗೆ ತೆರೆಯಿರಿ ಎಂದು ಹೇಳುವದಕ್ಕೆ ತೊಡಗುವಾಗ ಅವನು–ನೀವು ಎಲ್ಲಿಯವರೋ? ನಿಮ್ಮ ಗುರುತು ನನಗಿಲ್ಲ ಅಂದಾನು. ಅದಕ್ಕೆ ನೀವು–ನಿನ್ನ ಸನ್ನಿಧಿಯಲ್ಲಿ ನಾವು ಊಟಮಾಡಿದೆವು, ಕುಡಿದೆವು, ನಮ್ಮ ಬೀದಿಗಳಲ್ಲಿ ನೀನು ಉಪದೇಶಮಾಡಿದಿ ಎಂದು ಹೇಳುವದಕ್ಕೆ ತೊಡಗೀರಿ; ಆದರೆ ಅವನು–ನೀವು ಎಲ್ಲಿಯವರೋ ನಿಮ್ಮ ಗುರುತುನನಗಿಲ್ಲ; ಅಧರ್ಮವಾಡುವ ನೀವೆಲ್ಲರೂ ನನ್ನ ಕಡೆಯಿಂದ ಹೊರಟುಹೋಗಿರಿ ಎಂದು ನಿಮಗೆ ಹೇಳುತ್ತೇನೆ ಅನ್ನುವನು. ಅಬ್ರಹಾಮ ಇಸಾಕ ಯಾಕೋಬ ಇವರು ಮತ್ತು ಎಲ್ಲಾ ಪ್ರವಾದಿಗಳು ದೇವರ ರಾಜ್ಯದಲ್ಲಿರುವದನ್ನೂ ನಿಮ್ಮನ್ನು ಮಾತ್ರ ಹೊರಗೆ ಹಾಕುವದನ್ನೂ ನೀವು ನೋಡುವಾಗ ನಿಮಗೆ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು. ಇದಲ್ಲದೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಊಟಕ್ಕೆ ಕೂಡ್ರುವರು. ಇಗೋ, ಕಡೆಯವರಾದ ಕೆಲವರು ಮೊದಲಿನವರಾಗುವರು; ಮೊದಲಿನವರಾದ ಕೆಲವರು ಕಡೆಯವರಾಗುವರು ಅಂದನು.

ಅದೇ ಗಳಿಗೆಯಲ್ಲಿ ಕೆಲವು ಮಂದಿ ಫರಿಸಾಯರು ಹತ್ತಿರ ಬಂದು ಆತನಿಗೆ–ನೀನು ಇಲ್ಲಿಂದ ಹೊರಟು ಹೋಗು, ಹೆರೋದನು ನಿನ್ನನ್ನು ಕೊಲ್ಲಬೇಕೆಂದಿದ್ದಾನೆ ಎಂದು ಹೇಳಲು ಆತನು ಅವರಿಗೆ–ನೀವು ಹೋಗಿ–ಇಗೋ ನಾನು ಈಹೊತ್ತು ನಾಳೆ ದೆವ್ವಗಳನ್ನು ಬಿಡಿಸುತ್ತಾ ರೋಗಗಳನ್ನು ವಾಸಿಮಾಡುತ್ತಾ ಇದ್ದು ಮೂರನೆಯ ದಿನದಲ್ಲಿ ಸಿದ್ಧಿಗೆ ಬರುತ್ತೇನೆ ಎಂದು ಆ ನರಿಗೆ ಹೇಳಿರಿ. ಹೇಗೂ ನಾನು ಈ ಹೊತ್ತು ನಾಳೆ ನಾಡಿದು ಸಂಚಾರ ಮಾಡಬೇಕು; ಪ್ರವಾದಿಯಾದವನು ಯೆರೂಸಲೇಮಿನಲ್ಲಿಯೇ ಹೊರತು ಬೇರೆ ಪಟ್ಟಣದಲ್ಲಿ ಕೊಲ್ಲಲ್ಪಡಕೂಡದಷ್ಟೆ. ಯೆರೂಸ–ಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿ ಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ. ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು.

# ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ.

**ರೀಪ್ರಿಂಟ್ಸ್ ಪುಟ 1951**

## ಲೂಕ 13:22-30

"ಸ್ವಾಮೀ, ರಕ್ಷಣೆಹೊಂದುವವರು ಸ್ವಲ್ಪ ಜನರೋ?" ಎಂಬ ಪ್ರಶ್ನೆಗೆ ನಮ್ಮ ಕರ್ತನು ನೇರವಾಗಿ ಉತ್ತರಿಸಲಿಲ್ಲ. ದೇವರ ರಾಜ್ಯದ ವಿಷಯವಾಗಿ ಉಪದೇಶಮಾಡುವ ಮತ್ತು "ಕೇಳುವ ಕಿವಿ" ಇದ್ದವರಿಗೆ ಅದರಲ್ಲಿ ಸೇರಲು ಆಹ್ವಾನಿಸುವ ಕರೆಯನ್ನು ನೀಡುವ ಸಮಯವು ಒದಗಿಬಂದಿತ್ತು. ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ಕ್ರಿಸ್ತನೊಡನೆ ಸಹಬಾಧ್ಯತೆ ಹೊಂದುವ ಸಲುವಾದ ಉನ್ನತ (ಸ್ಥಾನದ) ಕರೆಯು ಆ ಸಮಯಕ್ಕೆ ಸೀಮಿತವಾಗಿತ್ತು; ಮತ್ತು ಅದು ಹೀಗೆಯೇ ಅಂದಿನಿಂದ ಮುಂದುವರೆದಿತ್ತು. ಈ (ಸುವಾರ್ತಾಯುಗದ) ಕಾಲದಲ್ಲಿ ನೀಡಲು ಇರುವದಾದರರೋ ಒಂದೇ ಒಂದು ಕರೆ. "ನೀವೆಲ್ಲರೂ ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು." ದೇವರು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಬೇರೊಂದು ಕರೆಯನ್ನು ಬೇರೊಂದು ವರ್ಗಕ್ಕೆ ನೀಡಲು ಉದ್ದೇಶಿಸಿರುವನೆಂಬ ಅಂಶವು ಈಗ ನಮಗೆ ಆದರಣೆನೀಡಿ ಹರ್ಷಗೊಳಿಸುವಂಥದಾಗಿದ್ದು ದೇವರ ಗುಣಸ್ವಭಾವ ಹಾಗೂ ಆತನು ಮಾಡಿರುವ ಏರ್ಪಾಡಿನಲ್ಲಿ ಸಾಮರಸ್ಯ ಸ್ಥಿರತೆಗಳು ಇರುವದನ್ನು ನಾವು ಇಲ್ಲಿ ಕಾಣಬಹುದಾದರೂ ಅವು ಈಗಿನ ಕಾಲದಲ್ಲಿ ನೀಡಲಾಗಿರುವ ಕರೆಯನ್ನು ಉಪೇಕ್ಷಿಸಿ ಬೇರೊಂದನ್ನು ನಿರೀಕ್ಷಿಸಲು ನಮ್ಮಲ್ಲಿ ಯಾರನ್ನೂ ಪ್ರೋತ್ಸಾಹಿಸಬಾರದು. ಯಾವನು ಈ ಪ್ರಸ್ತುತದಲ್ಲಿ ನೀಡಲಾಗಿರುವ ಕರೆಗೆ "ಕಿವಿಗೊಡುವನೋ" ಅವನಿಗೆ ನಿಲುಕುವಂಥದನ್ನು ನೀಡಿರುವಲ್ಲಿ ಅದು ತನಗೆ ಅನರ್ಹವೆಂದು ಅದನ್ನು ನಿರಾಕರಿಸುವನೊ ಅಂಥವನಿಗೆ ಮತ್ತೊಂದು ಕರೆಯನ್ನು

ಎದುರು ನೋಡುವ ಹಕ್ಕು ಇರುವದಿಲ್ಲ. ಅಪೋಸ್ತಲನು ಹೇಳಿರುವಂತೆ, "[ನಮ್ಮ ಮುಂದಿಟ್ಟಿರುವ] ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ?'

ನಮ್ಮ ಕರ್ತನು ತನ್ನ ಕಾರ್ಯಭಾರದ ಬಗ್ಗೆ, ತನ್ನ ರಾಜ್ಯ ಹಾಗು ಅದರ ಧ್ಯೇಯಗುರಿಉದ್ದೇಶಗಳ ಬಗ್ಗೆ ಅಪೋಸ್ತಲರಿಗೆ ಅಧಿಕವಾಗಿ ಕಲಿಸಿಕೊಟ್ಟಿದ್ದನಾದರೂ ಸಹ ಅವರಿಗೆ ಹೀಗೆ ಹೇಳಿದ್ದನು. "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಅದನ್ನು ಸಧ್ಯಕ್ಕೆ ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ (ಕ್ರಮೇಣ) ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು." (ಯೋಹಾನ 16:12–13) ಅವರ ಪ್ರಶ್ನೆಗಳಿಗೆ ಪೂರ್ಣವಾಗಿ ಉತ್ತರಿಸುವದು ಅವರನ್ನು ಬೇರೆ ಅನೇಕ ಪ್ರಶ್ನೆಗಳಿಗೆ ನಡೆಸುತ್ತಿತ್ತು, ಅವುಗಳ ಉತ್ತರಗಳಿಗೆ ಅವರು ಸಿದ್ಧರಿರುತ್ತಿರಲಿಲ್ಲ. ಆದುದರಿಂದ ನಮ್ಮ ಕರ್ತನು ವಿವೇಕದಿಂದ ಅವರ ಮರು ಪ್ರಶ್ನೆಗಳನ್ನು ತಪ್ಪಿಸಿ ಕೇವಲ ಅವರ ಕರ್ತವ್ಯ ಮತ್ತು ಅವರು ತೆಗೆದುಕೊಳ್ಳಬೇಕಾದ ಸೂಕ್ತ ಮಾರ್ಗ ಏನೆಂಬುದನ್ನು ತಿಳಿಸಿದ್ದನು: "ಇಕ್ಕಟ್ಟಾದ (ಕಷ್ಟಕರವಾದ) ಬಾಗಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ (ಬಹುವಾಗಿ ಪರಿಶ್ರಮಿಸಿರಿ) ಬಹುಜನ ಒಳಕ್ಕೆ ಹೋಗುವದಕ್ಕೆ ನೋಡುವರು, ಆದರೆ ಅವರಿಂದಾಗುವದಿಲ್ಲ... ಮನೇಯಜಮಾನನು ಎದ್ದು ಕದಾ ಹಾಕಿಕೊಂಡ ಮೇಲೆ...."

ಈ ನಿದರ್ಶನವು ಹತ್ತು ಮಂದಿ ಕನ್ನಿಕೆಯರ ಸಾಮ್ಯದಲ್ಲಿ ಸೂಚಿತವಾಗಿದ್ದ ಪೌರಾತ್ಯ ದೇಶದ ವಿವಾಹಕ್ಕೆ ಸಂಬಂಧಿಸು–ದಾಗಿದೆ. ಕರೆಯಲ್ಪಟ್ಟವರು ಮದಲಿಂಗನು ಬರುವದಕ್ಕೆ ಮೊದಲೇ ಆತನೊಡನೆ ಒಳಗೆ ಹೋಗಲು ಸಿದ್ಧವಾಗಿರಬೇಕೆಂಬುದನ್ನು ಅಲ್ಲಿ ನಿರೀಕ್ಷಿಸಲಾಗಿತ್ತು. ಆತನು ಮತ್ತು ಆತನ ಕಡೆಯವರು ಅಲ್ಲದೆ ಆತನ ಜೊತೆಯ ಸ್ನೇಹಿತರು ಒಳಗೆ ಹೋದನಂತರ ಬಾಗಿಲು ಮುಚ್ಚಲಾಗುತ್ತದೆ ಮತ್ತು ಆ ಸಂದರ್ಭದಲ್ಲಿ ಬಾಗಲಿನ ಹೊರಗೆ ಉಳಿದಿರುವವರೆಲ್ಲರನ್ನೂ ಗೊತ್ತಿಲ್ಲದ ಅನ್ಯರೆಂದು ಪರಿಗಣಿಸ–ಲಾಗುವದು ಮತ್ತು ಅವರಿಲ್ಲದೆಯೇ ಮದುವೆಯ ಸಮಾರಂಭವನ್ನು ಮುಂದುವರೆಸಲಾಗುವದು.

ತನ್ನ ಎಲ್ಲಾ ಸಾಮ್ಯಗಳಲ್ಲಿ ನಮ್ಮ ಕರ್ತನು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ ರಾಜ್ಯವು ಈ (ಸುವಾರ್ತಾಯುಗದ) ಅಂತ್ಯದಲ್ಲಿ, ಆ ಶ್ರೀಮಂತ ಮನುಷ್ಯನು ಪರಲೋಕವೆಂಬ ದೂರದೇಶದಿಂದ ಹಿಂದಿರುಗಿ ತನ್ನ ರಾಜ್ಯವನ್ನು ಪಡಕೊಂಡು ಅದರ ಪ್ರಭಾವಗೌರವಗಳನ್ನು ತನ್ನ ಅನುಪಸ್ಥಿತಿಯಲ್ಲಿ ತನಗೆ ನಂಬಿಗಸ್ತರಾಗಿದ್ದವರಿಗೆ ಪಾಲು ಕೊಡಲು ಬರುವಾಗ, ಅವುಗಳನ್ನು ಪಡಕೊಳ್ಳುವರೆಂಬುದನ್ನು ಸೂಚಿಸಿರುವನು. (ಲೂಕ 19:12–27) ಇಲ್ಲವೇ, ಇನ್ನೊಂದು ಚಿತ್ರಣದಲ್ಲಿ, ತನ್ನನ್ನು ಮದಲಿಂಗನನ್ನಾಗಿಯೂ, ತನಗೆ ನಂಬಿಗಸ್ತರಾಗಿದ್ದವರನ್ನು, ತನಗಾಗಿ ಕಾಯುತ್ತಿರುವ ನಿಶ್ಚಿತಾರ್ಥವಾದ ಕನ್ಯೆಯರಂತೆ ತನ್ನ ಮನೆಗೆ ಕರೆದುಕೊಂಡು ಹೋಗುವವನನ್ನಾಗಿಯೂ ಸೂಚಿಸಿರುವನು. ಆತನು ಅವರಿಗೆ ತಾನು ಹಿಂದಿರುಗಿ ಬರುವ ಕಾಲದ ಬಗ್ಗೆ ಯಾವ ನಿರ್ಧಿಷ್ಟವಾದ ವಿವರಗಳನ್ನೂ ನೀಡಲಿಲ್ಲ, ಹೀಗಾಗಿ ತಮ್ಮ ಒಡೆಯನು ಯಾವ ಗಳಿಗೆಯಲ್ಲಿ ಬರುವನೆಂಬ ಅರಿವಿಲ್ಲದವರಾಗಿ ಅವರು ಸತತವಾಗಿ ಎಚ್ಚರವಾಗಿರು–ವಂಥಾಗಿರುವದು. ಹೀಗಿದ್ದರೂ ತಮ್ಮನ್ನು ಸಿದ್ಧಪಡಿಸಿಕೊಂಡು ಕಾಯುತ್ತಾ ಎಚ್ಚರವಾಗಿರುವವರೆಲ್ಲರೂ ಮದುವೆಯ ಔತಣದಲ್ಲಿ ಸೇರಲು ಸಮರ್ಥರಾಗುವಂತೆ ಅವರು ಸಕಾಲದಲ್ಲಿ ಸೂಚನೆಯನ್ನು ಪಡೆಯುವರೆಂಬುದನ್ನು ಖಚಿತವಾಗಿ ಹೇಳಿರುವನು.

ಹೀಗಿರಲಾಗಿ, ಮದಲಿಂಗನ ಬರುವಿಕೆ ಹಾಗೂ ಸೂಕ್ತ ಸಮಯದಲ್ಲಿ ಬಾಗಿಲ ಮುಚ್ಚುವಿಕೆಗಳು ಮೊದಲೇ ನಿರ್ಧರಿಸ–ಲಾದ ಕ್ರಿಸ್ತನ ಮದಲಗಿತ್ತಿಯೆಂಬ ಸಭೆಯ ಸಂಖ್ಯೆಯವರು ನಂಬಿಗಸ್ತರಾಗಿ ತಾವು ಕರೆಯಲ್ಪಟ್ಟದ್ದನ್ನು ಆಯಲ್ಪಟ್ಟದ್ದನ್ನು ದೃಢಪಡಿಸಿಕೊಂಡ ನಂತರ ಈ (ಸುವಾರ್ತಾಯುಗದ) ಅಂತ್ಯವಾಗುವದು ಎಂಬ ವಿವರದಲ್ಲಿ ಉಲ್ಲೇಖವಾಗಿರುವದು. ಆಗ "ಬಾಗಿಲು" ಇಲ್ಲವೇ ಮದಲಗಿತ್ತಿ ವರ್ಗದವರಾಗಿ ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗುವ ಅವಕಾಶವು ನಿರಂತರವಾಗಿ ಮುಕ್ತಾಯಗೊಳ್ಳುವದು. ಅಲ್ಲಿ ಮೊದಲೇ ನಿಶ್ಚಿತವಾದ ಸಂಖ್ಯೆಗೆ ಒಂದು ಕಡಿಮೆ ಇರಲು ಸಾಧ್ಯವಾಗಿರ –ದಂತೆಯೇ ಒಂದು ಹೆಚ್ಚಿನ ಸಂಖ್ಯೆ ಇರಲೂ ಸಾಧ್ಯವಾಗದು.

ನಾವು ಈಗ ಈ (ಸುವಾರ್ತಾಯುಗದ) ಅಂತ್ಯಕ್ಕೆ ಇಳಿದು ಬಂದಿದ್ದೇವೆ. ಅರಸನಾದ ಮದಲಿಂಗನು ಬಂದಿರುವನು; ಬುದ್ಧಿವಂತೆಯರಾದ ಕನ್ಯೆಯರು ಸತ್ಯವೇದದಲ್ಲಿನ ಸಾಕ್ಷಾಧಾರಗಳನ್ನು ಪರಿಶೀಲಿಸುವವರಾಗಿ ತಮ್ಮ ಆರತಿ ದೀಪದ ಕುಡಿಯನ್ನು ಕತ್ತರಿಸಿಕೊಳ್ಳುತ್ತಿರುವರು, ಆತನ ಪ್ರತ್ಯಕ್ಷತೆಯ ಗುರುತನ್ನು ಕಂಡುಕೊಂಡವರಾಗಿ ಮುನ್ನಡೆದು ಮದುವೆಗೆ ಹೋಗುತ್ತಿರುವದಾಗಿ ತಮ್ಮ ವಿಷಯದಲ್ಲಿ ಘೋಷಿಸಿ–ಕೊಂಡಿರುವರು. ಸ್ವಲ್ಪ ಕಾಲದಲ್ಲೇ ಈ ವರ್ಗದಲ್ಲಿನ ಕಡೇ ಸದಸ್ಯನು ಒಳಗೆ ಸೇರುವನು ಮತ್ತು ಬಾಗಿಲು ಮುಚ್ಚಲ್ಪಡುವದು. ಆನಂತರ ಬುದ್ಧಿಯಿಲ್ಲದ ಕನ್ನಿಕೆಯರು ತೂಕಡಿಸುವವರಾಗಿ ಚಿಂತಾಭಾರಗಳಿಂದ ತುಂಬಿರುವದೂ ಮಾತ್ರವಲ್ಲದೆ ಸಾಕಷ್ಟು ಉತ್ಸಾಹದ ಕೊರತೆಯೂ ಉಳ್ಳವರಾದರೂ "ಕನ್ನಿಕೆಯರಾಗಿ" ತಮ್ಮನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಆರಂಭಿಸು–ವರು; ಅವರು ಜೀವಿತಾನುಭವವೆಂಬ ಮಾರುಕಟ್ಟೆಯಲ್ಲಿ ಎಣ್ಣೆಯನ್ನು ಕೊಂಡುಕೊಳ್ಳುವರು; (ಸುವಾರ್ತಾಯುಗದ) ಅಂತ್ಯವು ತಮ್ಮ ಮೇಲೆ ಬಂದಿರುವದನ್ನು, ಮದಲಿಂಗನು ಆಗಮಿಸಿರುವದನ್ನು ಮತ್ತು ರಾಜ್ಯದಲ್ಲಿನ ಔತಣಕೂಟವು ಇನ್ನು ನಡೆಯಲಿದೆ ಎಂಬುದನ್ನು ಗ್ರಹಿಸಿಕೊಳ್ಳಲು ಆರಂಭಿಸುವರು. ಆದರೆ ಬಿರುಗಾಳಿಯು ದಟ್ಟವಾಗುತ್ತಿರುವದನ್ನು ಅವರು ನೋಡುವಾಗ ಮದುವೆಗೆ ಹೋಗಲು ಆತುರಪಡುವರು ಅಲ್ಲದೆ ಅನೇಕರು ತಾವು ಒಳಸೇರಲು ನಿರಾಕರಿಸಲ್ಪಟ್ಟವರಾಗಿ ತಮಗೆ ಬಹಿಷ್ಕಾರವಾಗಿರುವದನ್ನು ಕಂಡುಕೊಳ್ಳುವರು. ಆಗ ಅವರು ತಾವು ಕ್ರಿಸ್ತನೊಂದಿಗೆ ಸಹಭಾಧ್ಯತೆಯೆಂಬ ಬಹುಮಾನವನ್ನು ಪಡೆಯಲು ಓಡುವದರ ಮೂಲಕವಾಗಿ (ದೇವರಿಂದ) ಕರೆಯಲ್ಪಟ್ಟು ಆಯಲ್ಪಡುವದನ್ನು ದೃಢಪಡಿಸಿಕೊಳ್ಳಲು ತಾವು ವಿಫಲರಾಗಿದ್ದೇವೆಂಬುದನ್ನು ಗ್ರಹಿಸಿಕೊಳ್ಳುವರು.

"ನಿಮಗೆ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು." ಹೌದು, ಕೊಡುವದಾಗಿ ಪ್ರಸ್ತಾಪಿಸಿದ ಅಲ್ಲದೆ ಹೊಂದಲು ಪ್ರಯತ್ನಿಸಿದ (ಆದರೆ ಬಹು ಭಿನ್ನವಾಗಿ ಪ್ರಯತ್ನಿಸಿದ) ಬಹುಮಾನವನ್ನು ಕಳಕೊಂಡಾಗ ಅಲ್ಲಿ ಕೇವಲ ನಿರಾಶೆಯಾಗುವದು ಮಾತ್ರವಲ್ಲದೆ ಕೆಲವು ಬಗೆಯ ಗೋಳಾಟ ಸಂಕಟಗಳು ಬೇರೊಂದು ಕಾರಣದಿಂದಲೂ ಏಳುತ್ತದೆ: ಇದ್ದಕ್ಕಿದ್ದಂತೆಯೇ ತಾವು "ಮೊಟ್ಟ ಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂತ ಮಹಾ ಸಂಕಟದ" (ದಾನಿಯೇಲ 12:1) ನಡುವೆ ಇರುವದನ್ನು ಕಂಡುಕೊಳ್ಳುವರು. ಆ ಒಂದು ಸಂಕಟವು ಲೋಕವನ್ನೆಲ್ಲಾ ವ್ಯಾಪಿಸಿಕೊಳ್ಳುವದು ಹಾಗು ಬಾಗಿಲು ಮುಚ್ಚುವದರೊಳಗೆ ಅದರಲ್ಲಿ ಸೇರಿಕೊಂಡವರ ಹೊರತು ಬೇರೆ ಯಾರೂ ಅದರಿಂದ ತಪ್ಪಿಸಿಕೊಳ್ಳಲಾರರು, ಅವರ ವಿಷಯವಾಗಿ ಹೀಗೆ ಹೇಳಿದು–ದಾಗಿತ್ತು, "ಇವೆಲ್ಲವುಗಳೊಳಗಿಂದ ತಪ್ಪಿಸಿ ಕೊಳ್ಳುವದಕ್ಕೂ... ನೀವು ಪೂರ್ಣ ಶಕ್ತರಾಗುವಂತೆ... ಎಚ್ಚರವಾಗಿರ್ರಿ." – ಲೂಕ 21:36

ಆಯಲ್ಪಟ್ಟವರ ಪೂರ್ಣ ಸಂಖ್ಯೆಯವರು ಮುದ್ರೆ ಒತ್ತಿಸಿಕೊಂಡವರಾಗಿ ತಾವು ಕರೆಯಲ್ಪಟ್ಟದ್ದನ್ನು ಆದುಕೊಳ್ಳಲ್ಪಟ್ಟ–ದ್ದನ್ನು ದೃಡಪಡಿಸಿಕೊಳ್ಳುವ ಪರ್ಯಂತರ ದೇವದೂತರು ಹಿಂಸಾಚಾರವೆಂಬ "ಬಿರುಗಾಳಿಯನ್ನು" ತಡೆಹಿಡಿದಿರುವರು; ಅಲ್ಲದೆ ಇದು ಪೂರ್ಣಗೊಂಡಾಗ ಆ ಸಂಕಟವು "ಕೂಡಲೇ ಸುಳಿಗಾಳಿಯಂತೆ" ಲೋಕದ ಮೇಲೆಲ್ಲಾ ಬಂದು ಆವರಿಸಿಕೊಳ್ಳುವದು.

ಆದರೆ ನಂಬಿಗಸ್ತರ ಮನೆತನದವರಿಗೆ ಸೇರಿದವರಾಗಿದ್ದರೂ ಸೋಮಾರಿಗಳಾಗಿ ಜಯಶಾಲಿಗಳಾಗದೇ ಇರುವವರಾದ "ಬುದ್ಧಿಯಿಲ್ಲದ ಕನ್ನಿಕೆಯರು" ಮಾತ್ರವೇ ತಾವು ಆ ರಾಜ್ಯದಿಂದ ಹೊರಗೆ ಉಳಿದಿರುವೆವೆಂಬುದನ್ನು ಕಂಡು–ಕೊಳ್ಳುವದಿಲ್ಲ. ಹಲವಾರು ಇತರರು ಅಂದರೆ ಅನೀತಿಯನ್ನು ನಡಿಸುವವ–ರೆಲ್ಲರೂ, ಅವರು ಯೆಹೂದ್ಯರಾಗಲಿ ಇಲ್ಲವೇ ಅನ್ಯಜನಾಂಗದ –ವರಾಗಿರಲಿ, ದೇವರ ರಾಜ್ಯದಲ್ಲಿ ಯಾವುದೇ ಭಾಗವನ್ನಾಗಲಿ ಅಥವಾ ಪಾಲನ್ನಾಗಲಿ ಪಡೆಯಲು ನಿರಾಕರಿಸಲ್ಪಟ್ಟವರಾಗಿ ತಾವು ಹೊರಗೆ ಉಳಿದಿರುವದನ್ನು ಕಂಡುಕೊಳ್ಳುವರು.

ಪರಲೋಕದಿಂದ ಬಂದ ಮದಲಿಂಗನು ಮದಲಗಿತ್ತಿಯೊ –ಡನೆ ಕೂಡಿದಾಗ ಎಂಥಾ ದೊಡ್ಡ ಆಶೀರ್ವಾದವು ಇದನ್ನು ಅನುಸರಿಸಿ ಬರುವದೆಂಬುದನ್ನು ನಮ್ಮ ಕರ್ತನು ಈ ಉಪದೇಶ –ದಲ್ಲಿ ತಿಳಿಸಲಿಲ್ಲ, ಆದರೆ ಇದಾದ ನಂತರ ಭೂಲೋಕದವರೆಲ್ಲಾ ಆಶೀರ್ವದಿಸಲ್ಪಡುವರೆಂದು ಇತರ ಶಾಸ್ತ್ರೋಕ್ತಿಗಳು ನಮಗೆ ತಿಳಿಸುವವು; ಯಾಕಂದರೆ ಆತ್ಮನೂ ಮದಲಗಿತ್ತಿಯೂ ಆಮಂತ್ರಣವನ್ನು ನೀಡುವರು, ಅಂದರೆ "ಬಾ ಅನ್ನುವರು" ಇಷ್ಟವುಳ್ಳವರು (ಕೇವಲ "ಚಿಕ್ಕ ಹಿಂಡು" ಮಾತ್ರವೇ ಅಲ್ಲದೆ, ಅನೇಕರು) ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಕೊಳ್ಳಲಿ. (ಪ್ರಕಟನೆ 22:17) ಇದಲ್ಲದೆ, "ಬುದ್ಧಿಯಿಲ್ಲದ ಕನ್ನಿಕೆಯರಿಗೆ" ಏನು ಸಂಭವಿಸುವದೆಂದು ಈ ಸಾಮ್ಯವು ತಿಳಿಸುವದಿಲ್ಲ; ಆದರೆ ಬೇರೊಂದು ವಾಕ್ಯಭಾಗವು "ಬೆಂಕಿಯಿಂದ ಎಳೆಯಲ್ಪಟ್ಟು ರಕ್ಷಿಸಲ್ಪಡುವರು" ಎಂಬುದನ್ನು ಅವರಿಗೆ ತೋರಿಸಿಕೊಡುವದು. 1 ಕೊರಿಂಥ 3:15

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ಒಬ್ಬ ಫರಿಸಾಯನ ಮನೆಯ ಮೂಲಕವಾಗಿ ನೀಡಲಾದ ಪಾಠಗಳು. | –– | –– | 14:1–24 | –– |

# ಲೂಕ 14:1–24

ಆತನು ಸಬ್ಬತ್ ದಿನದಲ್ಲಿ ಫರಿಸಾಯರ ಮುಖ್ಯಸ್ಥರಲ್ಲಿ ಒಬ್ಬನ ಮನೆಗೆ ಊಟಕ್ಕೆ ಹೋದಾಗ ಅವರು ಆತನನ್ನು ಹೊಂಚಿನೋಡುತ್ತಿದ್ದರು. ಆಗ ಯೇಸು ತನ್ನೆದುರಿಗೆ ಜಲೋದರವುಳ್ಳ ಒಬ್ಬ ಮನುಷ್ಯನಿರುವದನ್ನು ನೋಡಿ–ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ? ಸರಿಯಲ್ಲವೋ ಎಂದು ಧರ್ಮೋಪದೇಶಕರನ್ನೂ ಫರಿಸಾಯರನ್ನೂ ಕೇಳಿದನು. ಅವರು ಸುಮ್ಮನೇ ಇರಲು ಆತನು ಅವನ ಕೈ ಹಿಡಿದು ಅವನಿಗೆ ವಾಸಿಮಾಡಿ ಕಳುಹಿಸಿ–ನಿಮ್ಮಲ್ಲಿ ಯಾವನೊಬ್ಬನ ಮಗನಾಗಲಿ ಎತ್ತಾಗಲಿ ಬಾವಿಯಲ್ಲಿ ಬಿದ್ದರೆ ಅವನು ತಡಮಾಡದೆ ಸಬ್ಬತ್ ದಿನದಲ್ಲಾದರೂ ಮೇಲಕ್ಕೆ ತೆಗೆಯುವದಿಲ್ಲವೇ ಎಂದು ಅವರನ್ನು ಕೇಳಿದನು. ಅವರು ಅದಕ್ಕೆ ಉತ್ತರ ಕೊಡಲಾರದೆ ಇದ್ದರು.

ಊಟಕ್ಕೆ ಕರಿಸಿಕೊಂಡವರು ಪಂಕ್ತಿಯ ಮೊದಲನೆಯ ಸ್ಥಾನವನ್ನು ಆರಿಸಿಕೊಳ್ಳುವದನ್ನು ನೋಡಿ ಯೇಸು ಒಂದು ಸಾಮ್ಯವನ್ನು ಹೇಳಿದನು, ಏನಂದರೆ–ಯಾವನಾದರೂ ನಿನ್ನನ್ನು ಮದುವೇ ಊಟಕ್ಕೆ ಕರೆದರೆ ಪಂಕ್ತಿಯೊಳಗೆ ಮೊದಲನೆಯ ಸ್ಥಾನದಲ್ಲಿ ಕೂತುಕೊಳ್ಳಬೇಡ; ಒಂದು ವೇಳೆ ನಿನಗಿಂತ ಮಾನವುಳ್ಳವನನ್ನು ಅವನು ಕರೆದಿರಬಹುದು, ಮತ್ತು ನಿನ್ನನ್ನೂ ಅವನನ್ನೂ ಕರೆದವನು ಬಂದು–ಇವನಿಗೆ ಸ್ಥಳಬಿಡು ಎಂದು ನಿನಗೆ ಹೇಳುವಾಗ ನೀನು ನಾಚಿಕೊಂಡು ಕಡೆಯ ಸ್ಥಾನದಲ್ಲಿ ಕೂತುಕೊಳ್ಳುವದಕ್ಕೆ ಹೋಗುವಿ. ಆದರೆ ಯಾವನಾದರೂ ನಿನ್ನನ್ನು ಕರೆದಾಗ ನೀನು ಹೋಗಿ ಕಡೆಯ ಸ್ಥಾನದಲ್ಲಿ ಕೂತುಕೋ; ಹೀಗೆ ಮಾಡಿದರೆ ನಿನ್ನನ್ನು ಕರೆದವನು

ಬಂದು ನಿನ್ನನ್ನು ನೋಡಿ–ಸ್ನೇಹಿತನೇ, ಇನ್ನೂ ಮೇಲಕ್ಕೆ ಬಾ ಅನ್ನುವನು. ಆಗ ನಿನ್ನ ಸಂಗಡ ಕೂತಿರುವವರೆಲ್ಲರ ಮುಂದೆ ನಿನಗೆ ಮಾನ ಬರುವದು. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು.

ಆತನು ತನ್ನನ್ನು ಊಟಕ್ಕೆ ಕರೆದವನಿಗೆ ಸಹ ಒಂದು ಮಾತು ಹೇಳಿದನು; ಅದೇನಂದರೆ–ನೀನು ಮಧ್ಯಾಹ್ನದ ಊಟಕ್ಕೆ ಅಥವಾ ಸಾಯಂಕಾಲದ ಊಟಕ್ಕೆ ನಿನ್ನ ಸ್ನೇಹಿತರನ್ನಾಗಲಿ ನಿನ್ನ ಅಣ್ಣತಮ್ಮಂದಿರನ್ನಾಗಲಿ ನಿನ್ನ ಬಂಧುಬಾಂಧವರನ್ನಾಗಲಿ ಐಶ್ವರ್ಯವಂತರಾದ ನೆರೆಯವರನ್ನಾಗಲಿ ಕರೆಯಬೇಡ. ಒಂದು ವೇಳೆ ಅವರು ಸಹ ಪ್ರತಿಯಾಗಿ ಇನ್ನನ್ನು ಕರೆದಾರು, ಮತ್ತು ನಿನಗೆ ಮುಯ್ಯಿಗೆ ಮುಯ್ಯಾಗುವದು. ಆದರೆ ನೀನು ಔತಣ ಮಾಡಿಸುವಾಗ ಬಡವರು ಊನವಾದವರು ಕುಂಟರು ಕುರುಡರು ಇಂಥವರನ್ನು ಕರೆ; ಅವರು ನಿನಗೆ ಮುಯ್ಯಿಗೆ ಮುಯ್ಯಿ ಮಾಡುವದಕ್ಕೆ ಏನೂ ಇಲ್ಲದವರಾಗಿದ್ದಾರೂ ನೀತಿವಂತರು ಜೀವಿತರಾಗಿ ಎದ್ದು ಬರುವಲ್ಲಿ ನಿನಗೆ ಮುಯ್ಯಿಗೆ ಮುಯ್ಯಾಗುವದರಿಂದ ನೀನು ಧನ್ಯನಾಗುವಿ ಅಂದನು.

ಊಟಕ್ಕೆ ಕೂತವರಲ್ಲಿ ಒಬ್ಬನು ಈ ಮಾತುಗಳನ್ನು ಕೇಳಿ–ದೇವರ ರಾಜ್ಯದಲ್ಲಿ ಊಟ ಮಾಡುವವನೇ ಧನ್ಯನು ಎಂದು ಹೇಳಲು ಯೇಸು ಅವನಿಗೆ ಹೇಳಿದ್ದೇನಂದರೆ–ಒಬ್ಬಾನೊಬ್ಬ ಮನುಷ್ಯನು ದೊಡ್ಡ ಅಡಿಗೆ ಮಾಡಿಸಿ ಅನೇಕರಿಗೆ ಊಟಕ್ಕೆ ಹೇಳಿಸಿದನು. ಆ ಮೇಲೆ ಊಟದ ಹೊತ್ತಿಗೆ ಅವನು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ–ಈಗ ಸಿದ್ಧವಾಗಿದೆ, ಬರಬೇಕು ಎಂದು ಕರೆಯುವದಕ್ಕೆ ತನ್ನ ಆಳುಗಳನ್ನು ಕಳುಹಿಸಿದನು. ಆದರೆ ಅವರೆಲ್ಲರೂ ಕ್ಷಮಿಸಬೇಕೆಂದು ಒಂದೇ ಮನಸ್ಸಿನಿಂದ ಹೇಳುವದಕ್ಕೆ ತೊಡಗಿದರು. ಮೊದಲನೆಯವನು ಆ ಆಳುಗಳನ್ನು ನೋಡಿ–ಹೊಲವನ್ನು ಕ್ರಯಕ್ಕೆ ತಕ್ಕೊಂಡಿದ್ದೇನೆ, ಅದನ್ನು ಹೋಗಿ ನೋಡುವದಕ್ಕೆ ನನಗೆ ಅಗತ್ಯವಿದೆ, ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡೆನೆಂಬದಾಗಿ ಹೇಳು ಅಂದನು. ಮತ್ತೊಬ್ಬನು–ನಾನು ಐದು ಜೋಡಿ ಎತ್ತುಗಳನ್ನು ತಕ್ಕೊಂಡಿದ್ದೇನೆ, ಅವುಗಳನ್ನು ಪರೀಕ್ಷಿಸುವದಕ್ಕೆ ಹೋಗುತ್ತೇನೆ, ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡೆನೆಂಬದಾಗಿ ಹೇಳು ಅಂದನು. ಇನ್ನೊಬ್ಬನು–ನಾನು ಮದುವೆ ಮಾಡಿಕೊಂಡಿದ್ದೇನೆ, ಅದ್ದರಿಂದ ನಾನು ಬರುವದಕ್ಕಾಗುವದಿಲ್ಲ ಅಂದನು. ಆ ಆಳು ಬಂದು ತನ್ನ ಯಜಮಾನನಿಗೆ ಈ ಸಂಗತಿಗಳನ್ನು ತಿಳಿಸಲು ಮನೇಯ ಜಮಾನನು ಸಿಟ್ಟುಗೊಂಡು ಆಳಿಗೆ–ನೀನು ತಟ್ಟನೆ ಈ ಊರಿನ ಬೀದಿಬೀದಿಗೂ ಸಂದುಸಂದಿಗೂ ಹೋಗಿ ಬಡವರು ಊನವಾದವರು ಕುರುಡರು ಕುಂಟರು ಇಂಥವರನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು. ಬಳಿಕ ಆ ಆಳು–ಅಯ್ಯಾ, ನೀನು ಅಪ್ಪಣೆಕೊಟ್ಟಂತೆ ಮಾಡಿದ್ದಾಯಿತು; ಆದರೂ ಇನ್ನೂ ಸ್ಥಳವದೆ ಅಂದನು. ಆಗ ಆ ಯಜಮಾನನು ತನ್ನ ಆಳಿಗೆ ಹೇಳಿದ್ದು–ನೀನು ಹಾದಿಗಳಿಗೂ ಬೇಲಿಗಳ ಬಳಿಗೂ ಹೋಗಿ ಅಲ್ಲಿ ಸಿಕ್ಕವರನ್ನು ಬಲವಂತಮಾಡಿ ಒಳಕ್ಕೆ ಕರಕೊಂಡು ಬಾ, ನನ್ನ ಮನೆ ತುಂಬಲಿ. ಆದರೆ ಊಟಕ್ಕೆ ಹೇಳಿಸಿಕೊಂಡವರಲ್ಲಿ ಒಬ್ಬನಾದರೂ ನಾನು ಮಾಡಿಸಿದ ಅಡಿಗೆಯ ಸವಿಯನ್ನು ನೋಡಬಾರದು ಎಂದು ನಿಮಗೆ ಹೇಳುತ್ತೇನೆ ಅಂದನು.

# ಆ ಮಹಾ ಬೋಧಕನ ಭೋಜನ ವೇಳೆಯ ಸಂಭಾಷಣೆಗಳು

**ರೀಪ್ರಿಂಟ್ಸ್ ಪುಟ 3831**

## ಲೂಕ 14:1–14

**"ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು"**

ಸಬ್ಬತ್ ಎಂಬುದು ಯೆಹೂದ್ಯರಲ್ಲಿ ಒಂದು ಔತಣದ ದಿನವಾಗಿತ್ತು, ಆದರೆ ಧರ್ಮಶಾಸ್ತ್ರವಿಧಿಯ ಅನುಸಾರ ಅಡುಗೆಯನ್ನು ಹಿಂದಿನ ದಿನದಲ್ಲಿ ತಯಾರಿಸಿರಲಾಗಿ ಅದನ್ನು ತಣ್ಣಗೆ ಬಡಿಸಲಾಗುತ್ತಿತ್ತು. ನಮ್ಮ ಕರ್ತನು ಅನೇಕ ಸಂದರ್ಭಗಳಲ್ಲಿ ಸಬ್ಬತ್ ಔತಣಗಳಲ್ಲಿ ಭಾಗವಹಿಸಿದ್ದುದನ್ನು ನಾವು ಕಂಡುಕೊಂಡಿರುವದರಿಂದ ಇದರ ಬಗ್ಗೆ ಆತನು ಆಕ್ಷೇಪಿಸದಿದ್ದುದು ಸ್ಪಷ್ಟವಾಗಿತ್ತು. ಆತನ ಶಿಲುಬೆಯ ಮರಣದ ಮುನ್ನ ಬೇಥಾನ್ಯದಲ್ಲಿ ಔತಣವನ್ನು ಸಬ್ಬತ್ ದಿನದಲ್ಲಿ ನಡೆಸಲಾಗಿತ್ತು, ಮತ್ತು ಈ ಪಾಠದಲ್ಲಿ ಉಲ್ಲೇಖಿಸಿರುವದೂ ಸಹ ಇದರಂತೆಯೇ ಆಗಿತ್ತು. ಅಧಿಕಾರಿಗಳಲ್ಲಿ ಒಬ್ಬನಾದ ಫರಿಸಾಯರ ಮುಖ್ಯಸ್ಥನಿಂದ ಆಹ್ವಾನಿಸಲ್ಪಟ್ಟದ್ದಾಗಿತ್ತು. ಇದರಲ್ಲಿ ನಮ್ಮ ಕರ್ತನ ಸಹಿತವಾಗಿ ಶಿಷ್ಯರೂ ಒಳಗೊಂಡದ್ದು ಅಲ್ಲದೆ ಅತಿಥೇಯನ ಪ್ರಮುಖ ಸ್ನೇಹಿತರುಗಳು ಫರಿಸಾಯರು ಮತ್ತು ಧರ್ಮೋಪದೇಶಕರಲ್ಲಿ ಅನೇಕರಿದ್ದುದು ಸ್ಪಷ್ಟವಾಗಿತ್ತು.

ಯೇಸುವಿನ ಪ್ರಸಿದ್ಧಿಯು ಗಣನೀಯವಾಗಿ ವ್ಯಾಪನಗೊಂಡಿದ್ದು ಈ ಮನುಷ್ಯರು ಆತನೊಡನೆ ನಿಕಟವಾದ ಸಂಪರ್ಕಕ್ಕೆ ಬರಲು ಆಸಕ್ತರಾಗಿದ್ದುದರಲ್ಲಿ ಸಂದೇಹವಿರಲಿಲ್ಲ. ಅವರು ತಮ್ಮದೇ ಆದ ಗುಣಮಟ್ಟಗಳ ಮೂಲಕವಾಗಿ ಆತನ ಗುಣಸ್ವಭಾವಗಳ ಬೋಧನೆಗಳ ಹಾಗು ಅದ್ಭುತಗಳ ಬಗ್ಗೆ ತೀರ್ಪುಮಾಡುವ ದೃಷ್ಟಿಯಿಂದ–ಅಂದರೆ ಈತನು ಮತಾಂಧತೆಯುಳ್ಳವನೋ ಇಲ್ಲವೋ, ಈತನು ತನ್ನನ್ನು ಅತಿಯಾಗಿ ಹೊಗಳಿಕೊಳ್ಳುವನೋ ಇಲ್ಲವೋ, ಸಾಧಾರಣ ಜನರು ಏಕೆ ಈತನಿಂದ ಹೀಗೆ ಆಕರ್ಶಿಸಲ್ಪಡುವರು, ಮತ್ತು ಈವರೆಗೂ ನಾವು ತಿಳಿದಿರುವಂತೆ ಇವನು ಎಂದೂ ಔತಣದ ಕರೆಯನ್ನು ನಿರಾಕರಿಸುವದಿಲ್ಲವಾದರೂ ಏಕೆ ಐಶ್ವರ್ಯವಂತರ ಪ್ರಭಾವಿಗಳ ಸಹವಾಸವನ್ನು ವಿಶೇಷವಾಗಿ ಬಯಸುವದಿಲ್ಲ, ಯಾವಾಗಲೂ ಇಂಥಾ ಸನ್ನಿವೇಶಗಳನ್ನು ಸತ್ಯದ ವಿಷಯವಾಗಿಯೂ ಪರಲೋಕದಲ್ಲಿರುವ

ತಂದೆಯನ್ನು ಮಹಿಮೆಪಡಿಸುವದರಲ್ಲಿಯೂ ತನ್ನ ಸಂಪರ್ಕದಲ್ಲಿ ಬಂದವರಿಗೆ ಸಹಾಯ ಮಾಡಿ ಉಪದೇಶಿಸಿ ಅವರಿಗೆ ಹಿತವನ್ನು ಉಂಟುಮಾಡುವ ಅವಕಾಶಗಳನ್ನಾಗಿ ಬಳಸಿಕೊಳ್ಳುತ್ತಿರುವದರ ಬಗ್ಗೆ ತಿಳಿದುಕೊಳ್ಳಲು ಬಯಸುತ್ತಿದ್ದರು.

ಅಥಿತಿಗಳು ಈತನ ಮೇಲೆ ಸಹಾನುಭೂತಿ ಹೊಂದಿರು–ವದಕ್ಕಿಂತಲೂ ಹೆಚ್ಚಾಗಿ ಈತನಲ್ಲಿ ಹುಳುಕನ್ನು ಹುಡುಕುವ ಸಲುವಾಗಿ ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಅವರು ಆತನಲ್ಲಿರುವ ಸದ್ಗುಣಗಳಿಗಿಂತಲೂ ಅಧಿಕವಾಗಿ ನ್ಯೂನ್ಯತೆಗಳನ್ನು ಕಂಡುಕೊಳ್ಳಲು ನೋಡುತ್ತಿದ್ದರು. ಇತರರಂತೆಯೇ ಇವರಿಗೂ ಯಾವ ದೋಷವನ್ನು ಕಂಡುಹಿಡಿಯಲಾಗಲಿಲ್ಲ. ಬಹುಶಃ ಆಕಸ್ಮಿಕವಾಗಿಯೋ ಇಲ್ಲವೇ ಸಂಚಿನ ಮೂಲಕವೋ ಆ ಕೂಟದಲ್ಲಿ ಜಲೋದರವುಳ್ಳ ಒಬ್ಬ ಮನುಷ್ಯನು ಇದ್ದನು. ಇವನು ಆ ಮನೆಯವರಲ್ಲಿ ಒಬ್ಬನೋ ಇಲ್ಲವೇ ಆ ಕುಟುಂಬದ ಒಬ್ಬ ಸದಸ್ಯನಾಗಿಯೋ ಆಗಿದ್ದು ವಾಸ್ತವದಲ್ಲಿ ನ್ಯೂನ್ಯತೆಯುಳ್ಳ ಈ ಮನುಷ್ಯನಿಗೆ ಗುಣಪಡಿಸಿಕೊಳ್ಳುವದನ್ನು ಪ್ರಸ್ತಾಪಿಸುವ ದೃಷ್ಟಿಯಿಂದಲೇ ನಮ್ಮ ಕರ್ತನನ್ನು ಕರೆದಿರುವ ಸಾಧ್ಯತೆಯೂ ಇತ್ತು.

ನಮ್ಮ ಕರ್ತನು ರೋಗಪೀಡಿತರ ಬಗ್ಗೆ ವಿಶೇಷವಾದ ಸಹಾನುಭೂತೀ ಭಾವನೆ ಹೊಂದಿದ್ದಂತೆ ತೋರುತ್ತದೆ ಅಲ್ಲದೆ ಆತನು ಕೂಡಲೇ ಜಲೋದರವುಳ್ಳ ಆ ಮನುಷ್ಯನನ್ನು ಗಮನಿಸಿದ್ದನು. ಯಾರೇ ಇತರರ ಹಾಗೆಯೇ, ಫರಿಸಾಯರೂ ಅದ್ಭುತಕ್ಕೆ ಸಾಕ್ಷಿಯಾಗಿರಲು ಆಸಕ್ತರಾಗಿದ್ದುದು ನಿಸ್ಸಂದೇಹ–ವಾಗಿತ್ತು; ಮತ್ತು ಆ ಸಮಯದಲ್ಲಿ ಅವರ ಪದ್ಧತಿಯ ಅನುಸಾರವಾಗಿ ಇಂಥ ಅದ್ಭುತಗಳನ್ನು ಸಬ್ಬತ್ ದಿನದಲ್ಲಿ ಮಾಡುವದು ಸಹ ಒಂದು ಅಸಭ್ಯ ವರ್ತನೆಯಾಗುತ್ತಿತ್ತು. ನಮ್ಮ ಕರ್ತನು ಆ ಸಂದರ್ಭವನ್ನು ನಿಭಾಯಿಸಲು ಉತ್ಸುಕನಾಗಿದ್ದುದು ಸ್ಪಷ್ಟ. ಆತನು ಮೊದಲು ತನ್ನನ್ನು ಕರೆದವನನ್ನು ಮತ್ತು ಪಾಂಡಿತ್ಯವುಳ್ಳ ಆತನ ಜೊತೆಯವರನ್ನು ಸಬ್ಬತ್ ದಿನದಲ್ಲಿ ಖಾಯಿಲೆಯುವರನ್ನು ಗುಣಪಡಿಸುವುದು ಸರಿಯೋ ಸರಿಯುಲ್ಲವೋ ಎಂದು ವಿಚಾರಿಸಿದನು. ಜನರಿಂದ ಮಂಡಿಸಲಾದ ಇಂಥ ಪ್ರಶ್ನೆಗಳಿಗೆ ಯಾವ ಸಮಯದಲ್ಲಾದರೂ ಉತ್ತರಿಸುವಲ್ಲಿ ಧರ್ಮೋಪದೇಶಕರು ಸಮರ್ಥರೂ ಅದನ್ನು ಇಚ್ಛಿಸುವವರೂ ಆಗಿರುವರೆಂಬುದನ್ನು ನಿರೀಕ್ಷಿಸಲಾಗಿತ್ತು; ಆದಾಗ್ಯೂ ಈ ಮಹಾ ಬೋಧಕನ ಸಮಕ್ಷಮದಲ್ಲಿ ಅವರು ಉತ್ತರಿಸದೇ ಮೌನವಾಗಿದ್ದರು; ಈತನು ಯಾವ ಕ್ರಮವನ್ನು ಅನುಸರಿಸುವನೆಂಬುದನ್ನು ಅವರಿಗೆ ನೋಡಬೇಕಿತ್ತು. ಆತನಿಗೆ ಅಡ್ಡಿಪಡಿಸಲು ಅವರು ಆಶಿಸಲಿಲ್ಲ. ಬಹುಶಃ ಈ ಸಂಬಂಧವಾಗಿ ಆತನಲ್ಲಿ ತಪ್ಪು ಕಂಡುಹಿಡಿಯುವ ಅವಕಾಶವನ್ನು ಅವರು ಬಯುಸಿದ್ದರು. ಸಬ್ಬತ್ ದಿನದಲ್ಲಿ ಗುಣಪಡಿಸುವದಕ್ಕೆ ಧರ್ಮಶಾಸ್ತ್ರದಲ್ಲಿ ಯಾವ ಆಕ್ಷೇಪಣೆಯೂ ಇಲ್ಲದಿರುವದನ್ನು ತೋರಿಸಿ, ನಮ್ಮ ಕರ್ತನು ಅದ್ಭುತವನ್ನು ನೆರವೇರಿಸಿದನು. ಹೇಗಂದರೆ "ಆತನು ಅವನ ಕೈ ಹಿಡಿದು ಅವನಿಗೆ ವಾಸಿಮಾಡಿ ಕಳುಹಿಸಿ(ದ್ದನು)..." ಇಲ್ಲಿ ಸೂಚಿತವಾಗಿರುವದೇನಂದರೆ ಈ ಅದ್ಭುತವು ತನ್ನ ಮೂಲಕವಾಗಿ ದೇವರ ಶಕ್ತಿಯಿಂದ ನಡೆಸಲಾಯಿತೆಂಬುದು ಹೀಗೆ ದೊಡ್ಡದಾಗಿ ಪ್ರದರ್ಶಿತ –ವಾಗಬೇಕೆಂದು ನಮ್ಮ ಕರ್ತನು ಆ ಬಾಧಿತನನ್ನು ಒಂದು ವಿಧವಾಗಿ ಮುಟ್ಟಿದ್ದನು.

## ಆವರು ಮೂಕ ಪ್ರಾಣಿಗಳಿಗೆ ಸಹಾಯ ಮಾಡುವರು

ತನ್ನ ಪ್ರಶ್ನೆಗೆ ಅದ್ಭುತವನ್ನು ಮಾಡುವದರ ಮೂಲಕವಾಗಿ ಉತ್ತರಿಸಿದ ನಂತರ ಮತ್ತು ಹೀಗೆ ಸಬ್ಬತ್ ದಿನದಲ್ಲಿ ರೋಗಿಗಳಿಗೆ ಗುಣಪಡಿಸುವದನ್ನು ಧರ್ಮಶಾಸ್ತ್ರನಿಯಮಗಳಲ್ಲಿ ಯಾವ ನಿರ್ಬಂಧವೂ ಇಲ್ಲವೆಂಬುದಕ್ಕೆ ಸಾಕ್ಷಿ ನೀಡುವವನಾಗಿ ನಮ್ಮ ಕರ್ತನು ಆ ಗುಂಪಿನವರ ಎದುರಿನಲ್ಲಿ ತಾನು ಅನುಸರಿಸಿದ ವಿಧಾನವನ್ನು ಸಮರ್ಥಿಸಿಕೊಳ್ಳುತ್ತಾ ಹೇಳಿದ್ದು: "ನಿಮ್ಮಲ್ಲಿ ಯಾವನೊಬ್ಬನ ಕತ್ತೆಯಾಗಲಿ ಎತ್ತಾಗಲಿ ಬಾವಿಯಲ್ಲಿ ಬಿದ್ದರೆ ಅವನು ತಡಮಾಡದೆ ಸಬ್ಬತ್ ದಿನದಲ್ಲಾದರೂ ಮೇಲಕ್ಕೆ ತೆಗೆಯುವದಿಲ್ಲವೇ..." ಇನ್ನೊಂದು ಕಡೆ ಓದುವದು: "ನಿಮ್ಮಲ್ಲಿ ಯಾವನೊಬ್ಬನ ಮಗನಾಗಲಿ ಎತ್ತಾಗಲಿ ಬಾವಿಯಲ್ಲಿ ಬಿದ್ದರೆ ಅವನು ತಡಮಾಡದೆ ಸಬ್ಬತ್ತ್ ದಿನದಲ್ಲಾದರೂ ಮೇಲಕ್ಕೆ ತೆಗೆಯುವದಿಲ್ಲವೇ..." ಆ ಹೇಳಿಕೆಯು ಉತ್ತರಿಸತಕ್ಕದ್ದಾಗಿರಲಿಲ್ಲ. ಅವರೆಲ್ಲರಿಗೂ ತಮ್ಮ ಸ್ವಾರ್ಥಪೂರ್ಣವಾದ ಹಿತಾಸಕ್ತಿ ಯಾವುದರಲ್ಲಿ ಒಳಗೊಂಡಿರುವದೆಂಬುದು ತಿಳಿದಿತ್ತು, ಸಬ್ಬತ್ತ್ ದಿನದಲ್ಲಿ ಸಹಾಯ ನೀಡುವದಕ್ಕೆ ಅಡ್ಡಿಮಾಡುವಂಥದು ಧರ್ಮಶಾಸ್ತ್ರ ನಿಯಮದಲ್ಲಿ ಯಾವದೂ ಇರುವದಿಲ್ಲವೆಂಬುದನ್ನು ಅವರು ನಿರ್ಣಯಿಸಿಕೊಳ್ಳುವರು. ಸಬ್ಬತ್ ದಿನದಲ್ಲಿ ಮನುಕುಲವನ್ನು ಗುಣಪಡಿಸುವ ವಿಷಯುದಲ್ಲಿ ಅವರ ಆಲೋಚನೆಯು ಮೋಸಕರವಾದ್ದೂ ಧರ್ಮಶಾಸ್ತ್ರ ಸಮ್ಮತವಲ್ಲದ್ದೂ ಅಗಿರುವದೆಂದು ನಮ್ಮ ಕರ್ತನು ಹೀಗೆ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದನು.

ನಮ್ಮ ಕರ್ತನು ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆ–ಯಲ್ಲಿನ ನಿಬಂಧನೆಗಳಿಗೆ ಆಗಲೂ ಅಧೀನನಾಗಿದ್ದು ಇತರ ಯೆಹೂದ್ಯರಂತೆಯೇ ಸೀನಾಯಿ ಪರ್ವತದ ಬಳಿಯಲ್ಲಿ ಧರ್ಮಪ್ರಮಾಣಗಳನ್ನು ನೀಡಿದ ಕಾಲದಿಂದಲೂ ಧರ್ಮಶಾಸ್ತ್ರದ ಪ್ರತಿಯೊಂದು ವಿಧಿನಿಯಮಗಳಿಗೆ ಬದ್ಧನಾಗಿದ್ದನೆಂಬುದನ್ನು ನೆನಪಿಸಿಕೊಳ್ಳಲಾಗುವದು. ಅಪೋಸ್ತಲನು ತೋರಿಸಿಕೊಟ್ಟಿರುವಂತೆ ಕ್ರಿಸ್ತನು "ಅದನ್ನು ಶಿಲುಬೆಗೆ ಜಡಿಯುವವರೆಗೆ" ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯು ರದ್ದಾಗಿರಲಿಲ್ಲ. (ಕೊಲೆಸ್ಸೆ 2:14) ಆದುದರಿಂದ ನಮ್ಮ ಕರ್ತನು ಸಬ್ಬತ್ ದಿನದಲ್ಲಿ ಮಾಡಿದ್ದ, ರೋಗಿಗಳ ಗುಣಪಡಿಸುವಿಕೆ ಮುಂತಾದ, ಯಾವದೂ ನಾಲ್ಕನೆಯ ದಶಾಜ್ಞೆಯನ್ನು ಅಥವಾ ಧರ್ಮಶಾಸ್ತ್ರವಿಧಿಗಳ ಇತರ ಯಾವದೇ ವಿಶೇಷ ನಿಯುಮಾವಳಿಗಳ ಉಲ್ಲಂಘನೆ–ಯಾಗುವದೆಂದು ಸೂಕ್ತವಾಗಿ ಪರಿಗಣಿಸಲು ಸಾಧ್ಯವಿರಲಿಲ್ಲ.

ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯು ಸೀನಾಯಿ ಬಳಿಯಲ್ಲಿ ಮುದ್ರಿತವಾದ ಕಾಲಕ್ಕೆ ಮೊದಲು ಅದು ಯೆಹೂದ್ಯರ

ಮೇಲೆ ಅಧಿಕಾರ ಹೊಂದಿರಲಿಲ್ಲವೆಂಬುದನ್ನೂ, ಇತರ ಯಾವ ಜನರಿಗೂ ಅದನ್ನು ನೀಡಿರಲಿಲ್ಲವೆಂಬುದನ್ನೂ, ಕ್ರಿಸ್ತನನ್ನು ಅಂಗೀಕರಿಸಿಕೊಂಡವರ ವಿಷಯದಲ್ಲಿ ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯು ಶಿಲುಬೆಯಲ್ಲಿ ಅಂತ್ಯಗೊಂಡಿತ್ತೆಂಬುದನ್ನು ನಾವು ಈಗಾಗಲೇ (ಸತ್ಯವೇದ ಅಧ್ಯಯನದ 6ನೇ ಗ್ರಂಥದ 7ನೇ ಅಧ್ಯಾಯದಲ್ಲಿ) ತೋರಿಸಿಕೊಟ್ಟಿರುತ್ತೇವೆ. ಹೀಗಾಗಿ ಯೆಹೂದ್ಯರ ಸಬ್ಬತ್ತಿನ ಸಂಬಂಧದ ಕರ್ತವ್ಯಗಳೆಲ್ಲವೂ ಸಹ ಅಲ್ಲಿಯೇ ಮುಕ್ತಾಯಗೊಂಡಿತ್ತು. ಈ ಸುವಾರ್ತಾಯುಗದ ಪರ್ಯಂತರ ಯೇಸುವಿನ ಹಿಂಬಾಲಕರು ಉನ್ನತವಾಗಿರುವ ನಿಜರೂಪದ ಸಬ್ಬತ್ತನ್ನು ಅಂದರೆ "ದೇವಜನರು ಅನುಭವಿಸುವ ವಿಶ್ರಾಂತಿಯನ್ನು" ಆಚರಿಸುತ್ತಿರುವರು. ಹೇಗಂದರೆ (ರಕ್ಷಣೆಯ ವಿಷಯವಾಗಿರುವ) ತಮ್ಮ ಸ್ವಂತ ಕ್ರಿಯೆಗಳನ್ನು ಮಾಡುವದರಿಂದ ವಿಶ್ರಮಿಸಿಕೊಳ್ಳುವದು, ಭಯ ಪಡುವದರಿಂದ ವಿಶ್ರಮಿಸಿಕೊಳ್ಳುವದು, ತನ್ನನ್ನು ಪ್ರೀತಿಸುವರೆಲ್ಲರಿಗೆ ದೇವರು ಕ್ರಿಸ್ತನ ಮೂಲಕವಾಗಿ ಒದಗಿಸಿರುವ ಭವ್ಯವಾದ ಸಂಗತಿಗಳೆಲ್ಲವುಗಳನ್ನು ನಿರೀಕ್ಷಿಸುವದರಲ್ಲಿ ವಿಶ್ರಮಿಸಿಕೊಳ್ಳುವದು, ಲೋಕಕ್ಕಾಗಿರುವ ನಿರೀಕ್ಷೆಯಲ್ಲಿಯೂ ಸಹ ವಿಶ್ರಮಿಸಿಕೊಳ್ಳುವದು, ಒಂದು ಕ್ಲುಪ್ತ ಕಾಲದಲ್ಲಿ ಎಲ್ಲರೂ ಕರ್ತನ ವಿಷಯವಾದ ಪರಿಜ್ಞಾನವನ್ನು ಹೊಂದುವರೆಂಬುದರಲ್ಲಿ ವಿಶ್ರಮಿಸಿಕೊಳ್ಳುವದು. ಈ ನಿರಂತರವಾದ ಸಮಾದಾನದ ಮೂಲಕವಾಗಿ ದೊರಕುವ ವಿಶ್ರಾಂತಿಯು ಪ್ರತಿದಿನವೂ ಒಂದೇ ರೀತಿಯಾಗಿ ನಮ್ಮಲ್ಲಿ ನೆಲೆಗೊಂಡಿರುವದು.

## "ಇನ್ನು ದಾಸನಲ್ಲ, (ಆದರೆ) ಮಗನಾಗಿದ್ದಿ"

ಕ್ರೈಸ್ತರ ಸಬ್ಬತ್ತೆಂಬ ವಾರದ ಮೊದಲನೆಯ ದಿನದ ನಮ್ಮ ಆಚರಣೆಯು ಒಂದು ನಿಯಮ ಇಲ್ಲವೇ ಕಟ್ಟುಪಾಡು ಎಂಬ ಅಭಿಪ್ರಾಯವಿರಬಾರದು, ಆದರೆ ಅದು ನಿಜವಾಗಿಯೂ ನಾವು ಜೀವಿತದ ಸಾಧಾರಣವಾದ ಸಂಗತಿಗಳನ್ನು ಬಿಟ್ಟು ಆ ದಿನದಲ್ಲಿ ನೂತನ ಸೃಷ್ಟಿಗಳಿಗೆ ಸಂಬಂಧಿಸಿದ ಆತ್ಮಿಕ ಸಂಗತಿಗಳ ಬಗ್ಗೆ ವಿಶೇಷವಾಗಿ ಆಲೋಚಿಸುವವರಾಗಿ ಒಬ್ಬರೊಡನೆ ಮತ್ತೊಬ್ಬರು ಅನ್ಯೋನ್ಯತೆಗೆ ಸೇರಿ ಅನುಭವಿಸುತ್ತಿರುವಂಥ ಮಹಾ ಸೌಭಾಗ್ಯವನ್ನು ಮನನಮಾಡಿಕೊಳ್ಳುವಂಥದಾಗಿದೆ; ಆ ದಿನದಲ್ಲಿ ನಮ್ಮ ಕರ್ತನು ಸತ್ತವರೊಳಗಿಂದ ಎದ್ದು ಬಂದು ನೂತನ ಸೃಷ್ಟಿಯ ಕಾರ್ಯಗಳನ್ನು ಆರಂಭಿಸಿದುದನ್ನು ಅದು ಸ್ಮರಿಸುವಂಥದಾಗಿರುವದು. ದೇವ ಜನರು ಇನ್ನೂ ಅನುಭವಿಸುವದಕ್ಕಿರುವ ಭವ್ಯವಾದ ವಿಶ್ರಾಂತಿಯನ್ನು ಸಹ ಎದುರು ನೋಡುವವರಾಗಿದ್ದೇವೆ. ನಮ್ಮ ಕರ್ತನ ಸಾರೂಪ್ಯದಲ್ಲಿ ಎಬ್ಬಿಸಲ್ಪಟ್ಟಾಗ ಸತ್ತವರೊಳಗಿಂದ ಪುನರುತ್ಥಾನವಾಗುವದರ ಮೂಲಕವಾಗಿ ಉದಯವಾಗಲಿರುವ ಆಶೀರ್ವಾದಕರವಾದ ನಿರಂತರ ಪರಿಪೂರ್ಣತೆಯನ್ನು ಸಹ ಎದುರು ನೋಡುವವ-ರಾಗಿದ್ದೇವೆ. ಈ ಸುವಾರ್ತಾಯುಗದ ಪರ್ಯಂತರ ಪರಲೋಕದಲ್ಲಿರುವ ನಮ್ಮ ತಂದೆಯು ನಮ್ಮನ್ನು ಸೇವಕರ ಮನೆತನದವರೆನ್ನದೆ ಕ್ರಿಸ್ತನಲ್ಲಿರುವ ನೂತನ ಸೃಷ್ಟಿಗಳಾದ ಮಕ್ಕಳ ಮನೆತನದವರೆಂದು ಸಂಬೋಧಿಸುವವನಾಗಿದ್ದಾನೆ. ಸೇವಕರ ಮನೆತನದವರಾದ ಯೆಹೂದ್ಯರಿಗೆ ನೀಡಿದಂಥ ನಿಯಮ ವಿಧಿಗಳನ್ನು ತನ್ನ ಆತ್ಮದಿಂದ ಹುಟ್ಟಿದವರಾದ ಈ ನೂತನ ಸೃಷ್ಟಿಗಳಿಗೆ ನೀಡುವದು ಆತನಿಗೆ ಸೂಕ್ತವಾಗಿರುವದಿಲ್ಲ.

ದಶಾಜ್ಞೆಗಳಲ್ಲಿ ವಿಧಿಸಿರುವ ಅನೇಕ ಸಂಗತಿಗಳನ್ನು ಅನುಸರಿಸಲು ಸಲಹೆಮಾಡುವದರ ಮೂಲಕವಾಗಿ ದೇವರು ನೂತನ ಸೃಷ್ಟಿಗಳನ್ನು ಅವಮಾನಪಡಿಸುವದಿಲ್ಲ. ಕ್ರಿಸ್ತನಲ್ಲಿರುವ ನೂತನ ಸೃಷ್ಟಿಗಳು ಅಪವಿತ್ರತೆ, ವಿಗ್ರಹಾರಾಧನೆ, ಅಪನಂಬಿಕೆ-ಯೆಂಬ ಅವಿಶ್ರಾಂತಿ, ತಂದೆತಾಯಿಗಳನ್ನು ಗೌರವಿಸದಿರುವದು, ನರಹತ್ಯೆ ಹಾಗೂ ವ್ಯಭಿಚಾರ, ಸುಳ್ಳು ಸಾಕ್ಷಿ, ದುರಾಶೆ, ಇವುಗಳ ಬಗ್ಗೆ ಸಹಾನುಭೂತಿಯುಳ್ಳವರಲ್ಲ. ಈ ದಿಕ್ಕಿನಲ್ಲಿ ಓಡುವ ಮನಸ್ಸುಳ್ಳವರು ಆತ್ಮನಿಂದ ಹುಟ್ಟಿದವರಾಗಿರುವದಿಲ್ಲ, ಅವರು ಕ್ರಿಸ್ತನ ಆತ್ಮವುಳ್ಳವರಲ್ಲ, ಆತನಿಗೆ ಸೇರಿದವರೂ ಅಲ್ಲ. ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾದವರಿಗೆ ಕರ್ತನ ಆಜ್ಞಾಪನೆ ಏನಂದರೆ, ತಾವು ಪ್ರೀತಿಯುಳ್ಳ ಆತ್ಮನಿಂದ ಹುಟ್ಟಿದವರಾಗಿರಲಾಗಿ ಅವರು ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಪ್ರೀತಿಯಲ್ಲಿಯೂ ಅಭಿವೃದ್ಧಿಯನ್ನು ಹೊಂದಬೇಕೆಂಬದೇ; ಅವರು ಆತ್ಮನಿಂದ ಹುಟ್ಟಿದ ಕ್ಷಣದಿಂದ ತಮ್ಮನ್ನು ಸತ್ತವರಂತೆ ಎಣಿಸಿಕೊಂಡವ-ರಾಗಿರಲು, ತಮ್ಮ ಮರ್ತ್ಯಶರೀರದಲ್ಲಿನ ಬಲಹೀನತೆಗಳೆಲ್ಲವನ್ನು ಅಧೀನಮಾಡಿಕೊಳ್ಳಲು ಅನುದಿನವೂ ಪರಿಶ್ರಮಿಸುವರು. ಶರೀರಭಾವದ ಹಾಗು ಸೈತಾನನ ಕೃತ್ಯಗಳಾದ ಕೋಪ ಮತ್ಸರ ಅಸೂಯೆ ಕಲಹ ಮುಂತಾದವುಗಳನ್ನು ಬಿಟ್ಟುಬಿಡಬೇಕೆಂದು ಅಪೋಸ್ತಲರು ದೇವ ಜನರನ್ನು ಒತ್ತಾಯಿಸಿರುವದು ನಿಜವೇ; ಹೀಗಿದ್ದರೂ ಅವರು ನೂತನ ಸೃಷ್ಟಿಗಳನ್ನು ಈ ಅನುಚಿತ ಕಾರ್ಯಗಳ ವಿಷಯವಾಗಿ ಅನುಕಂಪವುಳ್ಳವರೆಂದು ಸಂಬೋಧಿಸದೆ, ಪ್ರತಿಯಾಗಿ, ಈಗಾಗಲೇ ತಮ್ಮನ್ನು ಸತ್ತವರಂತೆ ಎಣಿಸಿಕೊಂಡಿರುವ ನೂತನ ಸೃಷ್ಟಿಗಳು ಈ ಶರೀರಭಾವದ ಕರ್ಮಗಳನ್ನು ಬಿಟ್ಟುಬಿಡಬೇಕೆಂದು, ಅವುಗಳನ್ನು ಹತೋಟಿಗೆ ತಂದುಕೊಂಡು ನಿರ್ನಾಮಗೊಳಿಸಬೇಕೆಂದು ಒತ್ತಾಯಿಸಿರುವರು.

ನಮ್ಮ ತಂದೆಯು ವ್ಯವಹರಿಸುವ ಸಂಗತಿಗಳು ಮತ್ತು ನೀಡುವ ಆದೇಶಗಳು ಎಂದೂ ಶಾರೀರಿಕ ವಿಷಯಗಳ ಬಗ್ಗೆ ಇರುವದಿಲ್ಲವಾದರೂ, ಅದು ನೂತನ ಸೃಷ್ಟಿಯ ವಿಷಯ-ವಾಗಿರುತ್ತದೆ. ಅದು ಈ ದೃಷ್ಟಿಕೋನದ ಮೂಲಕವಾಗಿರುವದು, "ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ." (ರೋಮಾ 8:9) "ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ ಶರೀರಸಂಬಂಧವಾಗಿ ಅರಿತುಕೊಳ್ಳುವದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವದಿಲ್ಲ." (2 ಕೊರಿಂಥ 5:16) "ಸತ್ತಿರುವವರು ಮನುಷ್ಯ ಜಾತಿಗೆ ಬರುವ ಮರಣವೆಂಬ ತೀರ್ಪನ್ನು ಶರೀರಿಗಳಾಗಿದ್ದಾಗ ಹೊಂದಿದರು; ಅವರು ಆತ್ಮಸಂಬಂಧವಾಗಿ ದೇವರ ಜೀವದಲ್ಲಿ ಪಾಲುಗಾರರಾಗುವಂತೆ ಅವರಿಗೂ ಸುವಾರ್ತೆಯು ತಿಳಿಸಲ್ಪಟ್ಟಿತ್ತು." ನಾವು ದೇವರ ವಿಷಯವಾಗಿಯೂ ಮನುಷ್ಯರ ವಿಷಯವಾಗಿಯೂ ಇರುವ ದೈವಿಕ ವಿಧಿನಿಯಮಗಳು ಉತ್ಕೃಷ್ಟವಾಗಿ ಬಯಸುವಂಥದನ್ನು

ನಡೆಸುವವರಾಗಿರುವೆವೆಂದು ಎಣಿಸಲ್ಪಟ್ಟಿರುವೆವು, ಯಾಕಂದರೆ ನಾವು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾಗಿದ್ದೇವೆ.

## ತಗ್ಗಿಸಲ್ಪಟ್ಟವರು ಹೆಚ್ಚಿಸಲ್ಪಡುವವರು

ಕೆಲವು ಪ್ರಶ್ನೆಗಳಿಗೆ ಪರ್ಯಾಲೋಚನೆಯ ಉತ್ತರವಾಗಿ ನಮ್ಮ ಕರ್ತನು ಮದುವೆಯ ಔತಣಕ್ಕೆ ಕರೆಸಿಕೊಂಡ ಅತಿಥಿಗಳ ಸಂಬಂಧವಾದ ಆ ಸಾಮ್ಯವನ್ನು ಹೇಳಿರುವ ಸಂಭವವಿತ್ತು. ಅದು ಔತಣ ಕೂಟದ ಪಂಕ್ತಿಯಲ್ಲಿ ಪ್ರಮುಖ ಸ್ಥಾನಗಳನ್ನು ಬಯಸುವಾಗ ಹೆಚ್ಚಿನ ಮಾನವುಳ್ಳನು ನಂತರದಲ್ಲಿ ಬಂದಾಗ ಕೂಡಿದ್ದವರ ಸಮಕ್ಷಮದಲ್ಲಿ ಹೀಗೆ ಕೆಳಗಿನ ಸ್ಥಾನಕ್ಕೆ ಹೋಗಲು ಹೇಳಿಸಿಕೊಳ್ಳುವ ಅಪಾಯದ ಬಗ್ಗೆ ನೀಡಿದ ಎಚ್ಚರಿಕೆಯ ವಿಷಯವಾಗಿತ್ತು. ನಮ್ಮ ಕರ್ತನು ಅಲ್ಲಿ ಕರೆದವನ ಊಟದ ಮೇಜಿನ ಬಳಿ ಕೂಡಿಬಂದವರಲ್ಲಿ ಸ್ವಾರ್ಥದ ಕುರುಹುಗಳನ್ನು ಗಮನಿಸಿದ್ದನು. ಆದರೆ ಅಂಥ ಸಮಯದಲ್ಲಿ ನಮ್ಮ ಕರ್ತನು ಯಾವ ಪ್ರಶ್ನೆಯೂ ಕೇಳಲ್ಪಡದೆ ಅಥವಾ ವಿಷಯವನ್ನು ಮುಂದುವರೆಸಲು ಯಾವ ಕಾರಣವೂ ಇಲ್ಲದೆ ಈ ಸಂಗತಿಯನ್ನು ತಿದ್ದುಪಾಟಿಗಾಗಿ ಮಧ್ಯಪ್ರವೇಶಮಾಡಿ ಒರಟಾಗಿ ಹೇಳಿದನೆಂದು ನಾವು ಭಾವಿಸಬಾರದು.

ಈ ಸಾಮ್ಯದಲ್ಲಿನ ಪಾಠವು ಸಂಪೂರ್ಣವಾಗಿ ದೇವರ ದೃಷ್ಟಿಕೋನದಲ್ಲಿ ಮಾನವರು ಅನುಸರಿಸಬೇಕಾದ ಸೂಕ್ತವಾದ ಮಾರ್ಗದ ಬಗ್ಗೆ ಒಂದು ನಿದರ್ಶನವಾಗಿರುವಂತೆ ತೋರುತ್ತದೆ. ಮತ್ತು ಹೀಗಾಗಿ ನಿಜರೂಪದಲ್ಲಿನ (ಕ್ರಿಸ್ತನ) ಮದುವೆಯ ಔತಣಕ್ಕೆ ಕರೆಸಿಕೊಂಡವರೊಡನೆ ದೇವರು ನಡೆದುಕೊಳ್ಳುವ ವಿಧಾನ–ಗಳೆಲ್ಲವುಗಳ ಬಗ್ಗೆ ನಿರೂಪಿಸುವ ಒಂದು ನಿದರ್ಶನವೂ ಆಗಿರುವದು. ಮುಖ್ಯಸ್ಥಾನಗಳನ್ನು ಅತಿ ದೈರ್ಯಶಾಲಿಗಳಿಗೆ, ಅಧಿಕಾರವನ್ನು ಕಸಿದುಕೊಳ್ಳುವಂಥ ಪ್ರವೃತ್ತಿ ಅತಿಯಾಗಿರುವ ವರಿಗೆ ಕೊಡಲಾಗುವದಿಲ್ಲ; ಅದಕ್ಕೆ ಬದಲಾಗಿ, ಕೃತಜ್ಞತಾಪೂರ್ವಕವಾಗಿಯೂ ಉಪಕಾರಸ್ಮರಣಾಭಾವದಿಂದಲೂ ದೇವರ ಸಮಕ್ಷಮದಲ್ಲಿ ಅತಿ ದೀನ ಸ್ಥಾನವನ್ನು ಮೆಚ್ಚಿಗೆಯಿಂದ ಅಪೇಕ್ಷಿಸುವ ದೀನಭಾವವುಳ್ಳ ಮತ್ತು ತಮ್ಮ ಬಗ್ಗೆ ಅಲ್ಪವಾಗಿ ಆಲೋಚಿಸುವ ಪುರುಷರನ್ನು ಸ್ತ್ರೀಯರನ್ನು ನಮ್ಮ ಕರ್ತನು ಮರೆಯದಿರನು.

ಮಹತ್ವಾಕಾಂಕ್ಷೆಯೆಂಬದು ಸಹಜವಾಗಿ ಮಾನವ ಮನಸ್ಸಿನ ಒಂದು ಅವಶ್ಯವಾದ ಸಾಮರ್ಥ್ಯವಾಗಿದ್ದು, ಇದು ಇಲ್ಲದೆ ಲೋಕವನ್ನು ಹೋಲಿಸಿ ನೋಡಿದ್ದಲ್ಲಿ ಬಹು ಅಲ್ಪ ಅಭಿವೃದ್ಧಿ ಹೊಂದುವದು; ಆದರೆ ಕ್ರಿಸ್ತೀಯ ಗುಣಗಳನ್ನು ರೂಪಿಸಿಕೊಳ್ಳುವ ಸಂಬಂಧದಲ್ಲಿ ಇದು ಒಂದು ಅಪಾಯಕಾರಿ ಅಂಶವಾಗಿರುವದು. ಸತ್ಯವೇದವು ನಿರೂಪಿಸಿರುವ ಸಂಗತಿಗಳೆಲ್ಲವುಗಳ ಮೂಲಕವಾಗಿ ನಮಗೆ ಖಚಿತವಾಗಬಹುದೇನಂದರೆ, ಆ ರಾಜ್ಯದ ಪ್ರಭಾವ ಮಾನಗಳನ್ನು ಹಂಚಿಕೊಡುವದರ ಬಗ್ಗೆ ದೇವರು ಅನುಸರಿಸುವ ಸೂತ್ರವು ಗುರುವು (ಕ್ರಿಸ್ತನು) ವಿಧಿಸಿರುವ ತತ್ವಗಳ ಅನುಸಾರವಾಗಿರುತ್ತದೆಂಬದೇ: ಅದೇನಂದರೆ, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು, ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನೆಂಬದೇ.

## ಒಳ್ಳೆಯದನ್ನು ಮಾಡುವ ಸಾಮರ್ಥ್ಯದ ಆಶಿಸುವಿಕೆ

“ಈ ಮಾರ್ಗದವರು” ಸ್ವಾರ್ಥಪರರಾಗಿ ಆ ರಾಜ್ಯದಲ್ಲಿನ ಪ್ರಭಾವ ಮಾನ ನಿರ್ಣಯತ್ವಗಳನ್ನು ಪಡೆಯುವ ಸಂಬಂಧದಲ್ಲಿ, ಇತರರು ಕರ್ತನ ಕೈಯಿಂದ ಸ್ವೀಕರಿಸುವದಕ್ಕಿಂತಲೂ ಉತ್ಕೃಷ್ಟ–ವಾದುದನ್ನು ಬಯಸುತ್ತಿರುವರೆಂದು ಆತ್ಮಿಕ ವಿಷಯಗಳಿಗೆ ಕುರುಡಾಗಿರುವ ಅಥವಾ ಇತರ ಕಾರಣಗಳಿಂದಾಗಿ ದೇವರ ರಾಜ್ಯದ ಪ್ರಭಾವವುಳ್ಳ ಸುವಾರ್ತೆಯನ್ನು ನಿಷ್ಫಲಗೊಳಿಸುವವ–ರಾದ ಕೆಲವರಿಂದ ನಾವು ಆಗಾಗ್ಗೆ ಆಪಾದಿಸಲ್ಪಡುತ್ತಿರುವೆವು. ಇದು ಸಂಪೂರ್ಣವಾಗಿ ಅನ್ಯಾಯದಿಂದ ಕೂಡಿರುವ ಅಯುಕ್ತವಾದ ಅರೋಪವಾಗಿರುವದು; ಏಕೆಂದರೆ ನಮಗೆ ತಿಳಿದಿರುವಂತೆ “ಈಗಿನ ಕಾಲದಲ್ಲಿ ಪ್ರಕಟವಾಗಿರುವ ಸತ್ಯಾರ್ಥದ” ವಿಷಯದಲ್ಲಿ ಆಸಕ್ತರಾಗಿರುವರಲ್ಲಿ ಬಹು ಪಾಲಿನವರು ಘನತೆಗೌರವಗಳನ್ನು ಪಡೆಯುವ ಬಗ್ಗೆ ಅತಿ ದೊಡ್ಡ ಆಕಾಂಕ್ಷೆಯುಳ್ಳವರಲ್ಲ; ಅವರು ಮದುವೆಯ ಆ ಮಹಾ ಔತಣಕೂಟದಲ್ಲಿ ಯಾವ ಸ್ಥಳವನ್ನಾದರೂ ಪಡೆಯಲು ಅಂದರೆ ಆ ಭವ್ಯವಾದ ಮದಲಗಿತ್ತಿಯ ವರ್ಗದಲ್ಲಿನ ಯಾವ ಬಗೆಯ ಸದಸ್ಯಸ್ಥಾನವನ್ನಾದರೂ ಹೊಂದಲು, ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲು ಪರಲೋಕದ ಮದಲಿಂಗನು ನಿರ್ವಹಿಸಲಿರುವ ಆಶ್ಚರ್ಯಕರವೂ ಶ್ರೇಷ್ಠವೂ ಆದ ಆ ಕಾರ್ಯದಲ್ಲಿ ಭಾಗವಹಿಸುವ ಯಾವ ಬಗೆಯ ಅವಕಾಶ–ಕ್ಕಾದರೂ ಅವರು ಆಕಾಂಕ್ಷಿತರಾಗಿರುವರು. ದೇವರ ವಾಕ್ಯದಲ್ಲಿ ಸರಳವಾಗಿ ತಿಳಿಸಲ್ಪಟ್ಟಿರುವ ಸಂಗತಿಗಳ ಹೊರತಾಗಿ ಆ ಅತ್ಯುನ್ನತ ಘನತೆ ಗೌರವ ಪ್ರಭಾವ ನಿರ್ಣಯತ್ವ ಇವುಗಳನ್ನು ಪಡೆಯುವ ವಿಷಯವಾಗಿ ತಮ್ಮನ್ನು ಹೋಲಿಸಿಕೊಂಡು ಆಲೋಚಿಸುವದು ನಮ್ಮಲ್ಲಿ ಯಾರ ಮನಸ್ಸಿಗೂ ಹೊಳೆದಿರುವದಿಲ್ಲ. ಆದರೆ ನಾವು ಇವುಗಳನ್ನು ಕಂಡುಕೊಂಡವರಾಗಿ ಯಾವ ಸ್ಥಾನಕ್ಕಾದರೂ ಯೋಗ್ಯರೆಂದು ಎಣಿಸಲ್ಪಟ್ಟಾಗ, ಕರ್ತನು ಬಯಸಿರುವಂತೆ, ನಾವು ಅದನ್ನು ಸ್ವೀಕರಿಸಿಕೊಂಡು ಕರ್ತನ ಚಿತ್ತದ ಪ್ರಕಾರವಾಗಿರುವ ಉದ್ದೇಶ ಹಾಗು ಪ್ರಯತ್ನಗಳನ್ನು ಉಂಟುಮಾಡುವ ಬಗ್ಗೆ ಅದು ನಮ್ಮಲ್ಲಿ ಕಾರ್ಯವೆಸಗುವಂತೆ ಮಾಡುವದು ನಂಬಿಕೆಯ ವಿಷಯವಾಗಿರುವ ನಮ್ಮೆಲ್ಲರ ಕರ್ತವ್ಯವಾಗಿರುವದು.

ನಮ್ಮ ಅನುಭವಕ್ಕೆ ಬಂದಿರುವ ಪ್ರಕಾರ, ಇದರಲ್ಲಿರುವ ದೊಡ್ಡ ತೊಡಕು ಏನಂದರೆ, ಕೇವಲ ಅದು ಆ ರಾಜ್ಯದಲ್ಲಿನ ಪ್ರಭಾವ ಮಾನ ಅಧಿಕಾರಸ್ಥಾನ ಪಡೆಯುವ ವಿಷಯವಾಗಿ ನಮ್ಮಲ್ಲಿರುವ ಮಹತ್ವಾಕಾಂಕ್ಷೆಯ ಬಗ್ಗೆ ಮಾತ್ರವಾಗಿರದೆ, ಅದು ಈಗಿನ ನಮ್ಮ ಜೀವಿತ ಕಾಲದ ಮಹತ್ವಾಕಾಂಕ್ಷೆಯ ವಿಷಯವಾಗಿ ಅಂದರೆ ತೆರೆಯ ಈಚೆ ಕಡೆಯಲ್ಲಿ ಯಾರು ಹೆಚ್ಚಿನವರು ಎನ್ನುವ ಬಗ್ಗೆಯೂ ಇರುವದು. ನಾವು ಗಮನಿಸಿರುವದೇನಂದರೆ, ಕರ್ತನ ಹಿಂಬಾಲಕರಲ್ಲಿ ಬಹು ಪ್ರತಿಭೆ ಸಾಮರ್ಥ್ಯಗಳನ್ನು ಪಡೆದಿರುವ–ವರಲ್ಲಿ, ಅತಿ ಹೆಚ್ಚು ಮನಸಾಕ್ಷಿ ಪೀಡಿತರಲ್ಲಿ ಕೆಲವರು ಈ ಸಂಬಂಧವಾಗಿ ಅಪಾಯದ ಸ್ಥಿತಿಯಲ್ಲಿರುವರೆಂಬದು; ನಮ್ಮ ಸಾಮರ್ಥ್ಯವೆಲ್ಲವನ್ನೂ ಬಳಸಿಕೊಂಡು ಈ ಸಂಗತಿಯನ್ನು ಸಾಧಾರಣವಾಗಿ ಎಲ್ಲರ ಗಮನಕ್ಕೆ ತಂದು, ದೇವಜನರಲ್ಲಿ

ಯಾರಿಗಾದರೂ “ಚಿಕ್ಕ ಹಿಂಡಿನಲ್ಲಿ” ಒಂದು ಪಾಲನ್ನು ಅಂಗೀಕರಿಸಿಕೊಳ್ಳಲು ತನಗೆ ಹೆಮ್ಮೆಯೆಂಬುದು ನಿಜವಾಗಿಯೂ ಸಂಪೂರ್ಣವಾಗಿ ಅಡ್ಡಿಮಾಡುತ್ತಿಲ್ಲವಾದಲ್ಲಿ, ಅಂಥವನು ಈಗಿನ ಕಾಲದಲ್ಲಿ ಪ್ರಭಾವ ಘನತೆಗೌರವಗಳಿಗಾಗಿ ಹಾತೊರೆಯುವ ಆಕಾಂಕ್ಷೆ ಹೊಂದಿರುವದು ಖಂಡಿತವಾಗಿಯೂ ಅಂಥವನಿಗೆ ತಾನು ದೇವಾನುಗ್ರಹ ಹೊಂದಿದವನಾಗಿ ಅಂತಿಮವಾಗಿ ಬಹು ದೀನತೆಯುಳ್ಳ ಸ್ಥಾನವನ್ನು ಆ ರಾಜ್ಯದಲ್ಲಿ ಪಡಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುವಂಥ ಸಂಭವವಿರುವದೆಂಬುದನ್ನು ಕಂಡುಕೊಳ್ಳುವಂತೆ ಮಾಡುವದು, ಇದರ ಬಗ್ಗೆ ನಾವು ಮಾಡುವ ಕರ್ತವ್ಯದ ಒಂದು ಭಾಗವಾಗಿರುವದು. ನಾವು ಅಪೋಸ್ತಲನ ಈ ಬುದ್ಧಿಮಾತನ್ನು ನೆನಪಿನಲ್ಲಿಟ್ಟುಕೊಳ್ಳೋಣ: “ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು.” – 1 ಪೇತ್ರ 5:6

## ಬಡವರನ್ನು ನಿಸ್ಸಹಾಯಕರನ್ನು ನೆನಪಿಸಿಕೊಳ್ಳುವದು

ಬಹುಶಃ ನಮ್ಮ ಕರ್ತನು ಕೆಲವು ಪ್ರಶ್ನೆಗಳಿಗೆ ಉತ್ತರವಾಗಿಯೇ ಔತಣವನ್ನು ಮಾಡಿಸಿ ಅದಕ್ಕೆ ಯಾರನ್ನು ಕರೆಯಲ್ಪಡಬೇಕೆಂಬುದರ ವಿಷಯವಾಗಿ ತನ್ನ ಪ್ರೌಢಿಮೆಯ ಬೋಧನೆಯನ್ನು ನಮ್ಮ ಪಾಠದ ಮುಕ್ತಾಯವಾಗಿ ನೀಡಿದ್ದನು. ಆತನು ಒಂದು ಹೊಸ ಪ್ರಸ್ತಾವನೆಯನ್ನು ಮಂಡಿಸಿದ್ದನು. ತಮ್ಮನ್ನು ಪ್ರತಿಯಾಗಿ ತಮ್ಮ ಮನೆಯ ಔತಣಕ್ಕೆ ಕರೆಯುವಂಥವರನ್ನೇ ತಾವು ಮಾಡಿಸಿದ ಔತಣಕ್ಕೆ ಕರೆಯಲು ಬಯಸುವದು ವಾಡಿಕೆಯಾಗಿತ್ತು. ಮುಯ್ಯಿಗೆ ಮುಯ್ಯಿಮಾಡುವ ಆಲೋಚನೆ ಹೀಗೆ ಇಲ್ಲಿ ಜೊತೆಗೂಡಿದ್ದು, ಇದು ಒಂದು ಸ್ವಾರ್ಥಪರ ಆಲೋಚನೆಯಾಗಿತ್ತು. ನಮ್ಮನ್ನು ಪ್ರತಿಯಾಗಿ ತನ್ನ ಮನೆಯ ಔತಣಕ್ಕೆ ಕರೆಯುವ ಸಂಭವವಿರುವದೆಂಬ ಅಭಿಪ್ರಾಯದಿಂದ ಅಂಥವರನ್ನು ನಮ್ಮ ಮನೆಯ ಔತಣಕ್ಕೆ ಕರೆಯುವದು ತಪ್ಪು ಎನ್ನುವದು ಅನಿವಾರ್ಯವೆಂದು ನಮ್ಮ ಕರ್ತನು ಮಾಡಿದ ಸಲಹೆಯು ಅರ್ಥೈಸುವದೆಂದು ನಾವು ನೆನಸುವದಿಲ್ಲ. ನಿಜವಾಗಿಯೂ ಆತನ ಅಭಿಪ್ರಾಯವೇನಂದರೆ ಹೀಗೆ ಮಾಡುವದು ಒಂದು ಮೆಚ್ಚಿಗೆಯಾಗಿಯೂ ಹಿತಕರವಾಗಿಯೂ ಇರುವ ಪರಸ್ಪರ ವಿನಿಮಯವಾದರೂ ಹೀಗೆ ಮಾಡುವಲ್ಲಿ ಕರ್ತನ ದೃಷ್ಟಿಯಲ್ಲಿ ಯಾವ ಮಹತ್ವವೂ ಇರುವದಿಲ್ಲ; ಇಂಥಾ ಒಂದು ಪರಸ್ಪರ ವಿನಿಮಯದಲ್ಲಿ ಪ್ರತಿಯೊಬ್ಬನೂ ತನಗೆ ಬರತಕ್ಕ ಪ್ರತಿಫಲವನ್ನು ಪಡೆದಿರುವನು.

ಅಲ್ಲಿ ಕೂಡಿದ್ದವರನ್ನು ಪ್ರತಿಯಾಗಿ ತಮ್ಮ ಮನೆಗೆ ಊಟಕ್ಕೆ ಕರೆಯುವ ಸನ್ನಿವೇಶವಿರದಂಥ ಪರಿಸ್ಥಿತಿಯಲ್ಲಿದ್ದ ತನ್ನನ್ನು ಹಾಗು ತನ್ನ ಶಿಷ್ಯರನ್ನು ಕರೆದವನಿಗೆ, ಇದರ ಹಿಂದೆ ಘನವಾದ ಉದ್ದೇಶ ಹೊಂದಿದ್ದೇಯಾದಲ್ಲಿ, ಇದು ಒಂದು ಔದಾರ್ಯವುಳ್ಳ ಕ್ರಿಯೆ ಎಂಬುದನ್ನು ತೋರಿಸಿಕೊಡಲು ಬಹುಶಃ ಆಶಿಸಿದ್ದನು. ಬಡವರು ನಿಸ್ಸಹಾಯಕರು ಊನವಾದವರು ಮತ್ತು ಕುರುಡರು ಇಂಥವರಿಗೆ ಔತಣಮಾಡಿಸುವದು ಒಂದು ಪ್ರೀತಿಅನುಕಂಪದ ಕ್ರಿಯೆಯನ್ನು ಮಾಡಿದ್ದಾಗಿದ್ದು ಅದಕ್ಕೆ ಈಗಿನ ಜೀವಿತ ಕಾಲದಲ್ಲಿ ಪ್ರತಿಫಲ ದೊರೆಯದಿದ್ದರೂ ಮುಂದಿನ ಜೀವಿತದಲ್ಲಿ ಅವರು ಒಂದು ಆಶೀರ್ವಾದವನ್ನು ಹೊಂದುವದು ಖಚಿತವಾಗಿತ್ತು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ಕೆಟ್ಟ ಉದ್ದೇಶ, ಕೆಟ್ಟ ಪ್ರವೃತ್ತಿಯಿಂದ ಮಾಡಿದ ಪ್ರತಿಯೊಂದು ದುಷ್ಕೃತ್ಯ ಹಾಗು ಹಾನಿಕರವಾದ ಸಂಗತಿಗಳಿಗೆ ಈಗಿನ ಜೀವಿತದಲ್ಲಿ ಅಥವಾ ಮುಂದಿನ ಜೀವಿತದಲ್ಲಿ ದಂಡನೆಯಿರುವದು ಖಚಿತವಾಗಿದ್ದಂತೆಯೇ ಮನಃಪೂರ್ವಕವಾಗಿಯೂ ಬುದ್ಧಿಪೂರ್ವಕವಾಗಿಯೂ ಸದುದ್ದೇಶದಿಂದಲೂ ಮಾಡಿದ ಪ್ರತಿಯೊಂದು ಸುಕೃತ್ಯಕ್ಕೂ ಆಶೀರ್ವಾದವಿರುವದು ಖಚಿತವಾಗಿರುವದೆಂಬದು.

ಇಂಥಾ ಒಂದು ಸುಕೃತ್ಯಕ್ಕೆ ನೀತಿವಂತರಿಗಾಗುವ ಪುನರುತ್ಥಾನದಲ್ಲಿ ಪ್ರತಿಫಲ ಉಂಟಾಗುವದೆಂದು ನಮ್ಮ ಕರ್ತನು ಸಾರಿ ಹೇಳಿದ್ದನು, ಆದರೂ ಆತನು ಇದನ್ನು ತನ್ನ ಶಿಷ್ಯರನ್ನು ಸಂಬೋಧಿಸಿ ಹೇಳಲಿಲ್ಲವಾದ್ದರಿಂದ, ಅಂದರೆ ನೀತಿವಂತರನ್ನು ಸಂಬೋಧಿಸಿ ಹೇಳಲಿಲ್ಲವಾದ್ದರಿಂದ, ಬಡವರಿಗೆ ಮಾಡುವ ಇಂಥಾ ಔತಣ, ಮುಂತಾದ ಆತನ ಈ ಮಾತುಗಳು, ಮೊದಲನೇ ಪುನರುತ್ಥಾನದಲ್ಲಿ ದೇವರಿಗೆ ರಾಜವಂಶದ ಯಾಜಕರಾಗಿಯೂ, ಮದಲಿಂಗನೊಡನೆ ಇರುವ ಮದಲಗಿತ್ತಿಯ ವರ್ಗದವರೂ ಆಗಿದ್ದು, ಅಲ್ಲದೆ ರಾಜವಂಶಸ್ಥರ ಗುಂಪಿಗೆ ಸೇರಿದವರಾಗಿ ಆಳ್ವಿಕೆಮಾಡಲಿರುವ ಧನ್ಯರೂ ಪರಿಶುದ್ಧರೂ ಆದಂಥವರಲ್ಲಿ ಅತ್ಯುನ್ನತವಾದ ಸ್ಥಾನವನ್ನು ಗಳಿಸಿಕೊಡುವದೆಂಬುದನ್ನು ಅರ್ಥೈಸುವದೆಂದು ನಮಗೆ ಅನ್ನಿಸುವುದಿಲ್ಲ. ಈ ವಾಕ್ಯಗಳ ಮೇಲೆ ಇಂಥಾ ದೃಷ್ಟಿಯನ್ನು ಇರಿಸುವದು ಉಚಿತವಾಗಿರಲಾರದು, ಏಕೆಂದರೆ ಯೇಸುವು ಮಧ್ಯಸ್ಥನೆಂದು ನಂಬುವದು ಅವಶ್ಯಕವಾಗಿರುವದು ಮಾತ್ರವಲ್ಲದೆ ಮೊದಲನೇ ಪುನರುತ್ಥಾನದಲ್ಲಿ ಒಂದು ಪಾಲನ್ನು ಪಡೆಯಲು ಇಕ್ಕಟ್ಟಾದ ಮಾರ್ಗದಲ್ಲಿ ನಂಬಿಗಸ್ತರಾಗಿ ಪ್ರಯಾಣಿಸುವುದೂ ಅವಶ್ಯವಾಗಿರುವದೆಂದು ಇತರ ವಾಕ್ಯಭಾಗಗಳು ತಿಳಿಸಿರುವವು.

ಹೀಗಿರುವಲ್ಲಿ ನಮ್ಮ ಕರ್ತನ ಮಾತಿನ ಅರ್ಥವೇನಾಗಿತ್ತು? ನಾವು ಉತ್ತರಿಸುವದೇನಂದರೆ, ಭಕ್ತರೂ, ಕ್ರಿಸ್ತನ ಮದಲಗಿತ್ತಿಯೂ, ಮಹಿಮೆ ಹೊಂದಿದ ಸಭೆಯ ಶಿರಸ್ಸೂ ಆದ ಮದಲಿಂಗನೊಡನೆ ಇರುವ ಮದಲಗಿತ್ತಿಯೂ ಆಗಿರುವಂಥ “ಪರಿಶುದ್ಧರೂ ಧನ್ಯರೂ” ಆದವರನ್ನು ಮಾತ್ರ ಮೊದಲನೇ ಪುನರುತ್ಥಾನವು ಒಳಗೊಂಡಿದ್ದು, ಅದು ನಮ್ಮ ಕರ್ತನು ಉಪದೇಶಿಸಿ ಹೇಳಿದ್ದ ಆ ರಾಜ್ಯದ ಆರಂಭವನ್ನು ಗುರುತಿಸುವಂಥದ್ದಾಗಿರುವದು, ಅಲ್ಲದೆ ನಮ್ಮ ಕರ್ತನು ಇದಕ್ಕಾಗಿಯೇ ಪ್ರಾರ್ಥಿಸುವಂತೆ ಬೋಧಿಸಿ ಹೀಗೆ ಹೇಳಿದ್ದನು: “ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.” ಮೊದಲನೇ ಪುನರುತ್ಥಾನದಲ್ಲಿ ಪಾಲನ್ನು ಹೊಂದುವವರು ರಾಜರೂ ಯಾಜಕರೂ ಮತ್ತು ಲೋಕಕ್ಕೆ ನ್ಯಾಯವಿಚಾರಣೆ ಮಾಡುವವರೂ ಆಗಲಿರುವರು. (1 ಕೊರಿಂಥ 6:2; ಪ್ರಕಟನೆ 20:6) ಖಂಡಿತವಾಗಿಯೂ ಮೊದಲನೇ ಪುನರುತ್ಥಾನದ ನಂತರ ಲೋಕಕ್ಕೆ ಆಶೀರ್ವಾವನ್ನು ಉಂಟುಮಾಡುವ ಅಂದರೆ

ಸಮಸ್ತವನ್ನು ಸರಿಪಡಿಸುವ ಕಾಲವು ಆರಂಭವಾಗುವದು! ಆನಂತರ ಸಾವಿರ ವರುಷ ಪರ್ಯಂತರವಾಗಿ ಇಡೀ ಲೋಕವೆಲ್ಲಾ ಈ ನ್ಯಾಯಾಧಿಪತಿಗಳ ಎದುರಿನಲ್ಲಿ ಸಹಾಯ ಹೊಂದಲು ನಿಂತುಕೊಳ್ಳುವದು. ಅವರು ಇಚ್ಛಿಸಿದ್ದಲ್ಲಿ ಸಂಪೂರ್ಣವಾಗಿ ಪರಿಪೂರ್ಣ ಮನುಷ್ಯರಾಗಲು ಸಹಾಯ ಹೊಂದುವರು, ಇಲ್ಲವೇ ಅವರು ತಮಗೆ ದೊರೆತ ಈ ಭವ್ಯವಾದ ಅವಕಾಶಗಳಿಗೆ ಸ್ಪಂದಿಸಲು ವಿಫಲರಾದಲ್ಲಿ ಎರಡನೇ ಮರಣದಲ್ಲಿ ನಾಶವಾಗುವರು.

ಆ ನ್ಯಾಯವಿಚಾರಣೆಯ ದಿನದಲ್ಲಿ ಬಡವರಿಗೆ ದಯೆತೋರಿಸುವ ಪ್ರತಿಯೊಂದು ಕೃತ್ಯಗಳಿಗೂ ಅದನ್ನು ನಡೆಸಿದ ವ್ಯಕ್ತಿಗಳಿಗೆ ಅವರು ಅಲ್ಲಿ ಪಡೆಯಲಿರುವ ಸ್ಥಾನಕ್ಕೆ ಸಂಬಂಧಿಸಿದಂತೆ ಅವರು ನಡೆಯಲಿರುವ ಪರಿಶುದ್ಧ ರಾಜಮಾರ್ಗದ ಆರಂಭ ಹಂತದಲ್ಲಿ ಕೆಲವು ಗುಣಗಳನ್ನು ಹೊಂದಸಲುವಾದ ಆಶೀರ್ವಾದವು ಸಿದ್ಧಪಡಿಸಿಕೊಟ್ಟಿರುವದಾಗಿ ಕಂಡುಬರುವದು. ಈಗಿನ ಕಾಲದಲ್ಲಿ ಗುಣನಡತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಏನನ್ನೂ ಸಾಧಿಸದ ಅತಿ ಹೀನ ಸ್ಥಿತಿಯಲ್ಲಿರುವವರಿಗೆ ಅವರು ನಡೆಯುವ ಆ ಮಾರ್ಗದ ಆರಂಭದ ಹಂತದಿಂದ ಪರಿಪೂರ್ಣತೆಯ ಅಂತಿಮ ಸ್ಥಿತಿಯನ್ನು ತಲುಪಲು ಬಹು ದೂರದ ಪ್ರಯಾಣ ಮಾಡಬೇಕಿರುವದು; ಆದರೆ ಈಗಿನ ಕಾಲದಲ್ಲಿ ಧರ್ಮವನ್ನು ಪ್ರೀತಿಸಿ ಅಧರ್ಮವನ್ನು ಹಗೆಮಾಡುವವರು, ತಮ್ಮ ಸಹ ಜೀವಿಗಳಿಗೆ ಆದರಣೆಯನ್ನು ಹಿತವನ್ನು ಮಾಡಲು ಪರಿಶ್ರಮಿಸಿದವರು, ವಿಶೇಷವಾಗಿ ಕರ್ತನ ಶಿಷ್ಯರಿಗೆ ಅವರು ಆತನ ಶಿಷ್ಯರೆಂದು ಕೇವಲ ಒಂದು ತಂಬಿಗೆ ತಣ್ಣೀರನ್ನಾದರೂ ಕೊಡುವವರಾದ ಇಂಥವರೆಲ್ಲರೂ ಭವ್ಯವಾದ ಸದವಕಾಶ ಪಡೆಯುವ ಸಾಧ್ಯತೆಗಳಿರುವ ಆ ದಿನದಲ್ಲಿ ಅನುಕೂಲ ಹೊಂದಿದವರಾಗಿ ಕಂಡುಬರುವರು. ಯಾರಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕೊಡುವವರಿಗೆ ಇಲ್ಲವೇ ಊನವಾದವರು ಕುರುಡರು ಬಡವರೂ ಇವರಿಗೆ ಹಿತವನ್ನು ಮಾಡುವಂಥವರು ನೀತಿವಂತರಿಗೆ ಆಗುವ ಪುನರುತ್ಥಾನದಲ್ಲಿ ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಒಂದು ಆಶೀರ್ವಾದವನ್ನು ಪ್ರತಿಫಲವಾಗಿ ಅನುಭವಿಸುವರೆಂಬದನ್ನು ನಮ್ಮ ಕರ್ತನ ಮಾತುಗಳು ಹೀಗೆ ಸೂಚಿಸುವವು.

## ಭೋಜನ ವೇಳೆಯ ಸಂಭಾಷಣೆಗಳ ಮಹತ್ವ

ನಮ್ಮ ಕರ್ತನು ಭೋಜನ ವೇಳೆಯ ಸಂಭಾಷಣೆಗಳಲ್ಲಿ ತೋರಿಸಿದ ಮಾದರಿಯನ್ನು ನಾವು ಬೈಬಲ್ ಹೌಸ್ ಎಂಬಲ್ಲಿ ಹಲವು ವರುಷಗಳ ವರೆಗೆ ಬಹು ಪ್ರಯೋಜನಕಾರಿಯಾಗಿ ಅನುಸರಿಸುತ್ತಾ ಬಂದಿದ್ದೆವು. ಇದನ್ನು ಅನುದಿನವೂ ಕ್ರಮವಾಗಿ ಅನುಸರಿಸುವುದರಲ್ಲಿ ಬಹು ಪ್ರಯೋಜನವಿರುವದೂ ಕಂಡುಬಂದಿತ್ತು. ಪ್ರತಿ ದಿನವೂ ಬೆಳಿಗ್ಗೆ 7 ಗಂಟೆ (ಭಾನುವಾರದಲ್ಲಿ 8 ಗಂಟೆಗೆ) ಆದ ಕೂಡಲೇ ನಾವು ಸ್ತುತಿಪ್ರಾರ್ಥನೆಗಳನ್ನು ನಡೆಸುವವರಾಗಿದ್ದೆವು. ಆಗ ನಾವು ಮೇಜಿಗೆ ಕೂಡಿಬಂದು ಆಹಾರಕ್ಕಾಗಿ ಕೃತಜ್ಞತೆ ಸಲ್ಲಿಸಿ ಅನ್ಯೋನ್ಯತೆಯಲ್ಲಿ ಕೂಡಿಬಂದಿರುವ–ದರಿಂದ ಒಂದು ಆಶೀರ್ವಾದವು ಉಂಟಾಗಲೆಂದು ಪ್ರಾರ್ಥಿಸಿದ ಬಳಿಕ ನಮ್ಮಲ್ಲಿ ಒಬ್ಬನು ಆ ದಿನದ ಅನುದಿನ ಮನ್ನಾದ ವಾಕ್ಯಭಾಗವನ್ನು ಓದುವನು. ಬೆಳಗಿನ ಉಪಹಾರವು ಮುಂದುವರೆಯುತ್ತಿದ್ದ ಹಾಗೆ ವಾಕ್ಯಭಾಗದ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿದ ನಂತರ ಪ್ರಶ್ನೆಗಳನ್ನು ಕೇಳಲಾಗುವದು. ಆನಂತರ ಮೇಜಿನಿಂದ ಹೊರಡುವ ಮುನ್ನ ವಾಕ್ಯಭಾಗದ ಕೆಳಗಿರುವ ವ್ಯಾಖ್ಯಾನವನ್ನು ಪಾಠದ ಮುಕ್ತಾಯವಾಗಿ ಓದಲಾಗುವದು. ನಮ್ಮ ಮಧ್ಯಾಹ್ನ ಊಟದ ಹಾಗು ರಾತ್ರಿಯ ಊಟದ ವೇಳೆಯ ಸಂಭಾಷಣೆಗಳು ಅಲ್ಲಿ ಉಪಸ್ಥಿತರಿರುವವರ ಮೂಲಕವಾಗಿ ಸೂಚಿಸಲ್ಪಡುವ ಯಾವದಾದರರೂ ಪ್ರಶ್ನೆಗಳ ಮೇಲಿರುವದು. ಅಲ್ಲಿ ಸಾಧಾರಣವಾಗಿ ಸಹೋದರರಿಂದ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವಿರುವದು. ಅಂದರೆ ಸಾಮಾನ್ಯವಾಗಿ ಸಹೋದರರೆಲ್ಲರಿಗೂ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ನೀಡಿದ ನಂತರ ಅವಕಾಶವನ್ನು ಮುಕ್ತವಾಗಿ ಯಾರಿಗಾದರೂ ತೆರೆದಿಡಲಾಗುವದು. ಭೋಜನದ ಸಮಯದಲ್ಲಿ ಮುಖ್ಯಸ್ಥಾನದಲ್ಲಿರುವವರಿಂದ ಪ್ರಶ್ನೆಗೆ ಅಂತಿಮವಾಗಿ ಉತ್ತರಿಸುವದನ್ನು ಅಪೇಕ್ಷಿಸಲಾಗುವದು. ಈ ಭೋಜನ ವೇಳೆಯ ಸಂಭಾಷಣೆಗಳ ಮೂಲಕವಾಗಿ ಕಲಿಯುವಿಕೆಗಳು ನಡೆಯುತ್ತಿರುತ್ತದೆ. ದೇವರ ವಾಕ್ಯದ ಎಲ್ಲಾ ವಿಷಯಗಳ ಪರಿಮಿತಿಯಲ್ಲಿದ್ದು ಅವುಗಳು ಅಲ್ಲಿ ಉಪಸ್ಥಿತರಿದ್ದವರೆಲ್ಲರೂ ಹಿಂದೆ ಕಲಿತಿದ್ದ ವಿಷಯಗಳ ನೆನಪುಗಳನ್ನು ನವೀಕರಿಸುವವುಗಳಾಗಿರುವವು. ನಾವು ಈ ವಿಧಾನವನ್ನು ಅನುಸರಿಸಲು ದೇವರ ಪ್ರಿಯರಾದ ಮಕ್ಕಳೆಲ್ಲರಿಗೂ ಶಿಫಾರಸ್ಸುಮಾಡುತ್ತೇವೆ. ಇಂಥಾ ಸನ್ನಿವೇಶಗಳಲ್ಲಿ ತೆಗೆದುಕೊಂಡ ಆಹಾರವು ಏನಿಲ್ಲದಿದ್ದರೂ ಒಂದು ಹೆಚ್ಚಿನ ಪ್ರಯೋಜನವನ್ನು ಉಂಟುಮಾಡುವದು ಹಾಗೂ ಆತ್ಮಿಕ ಪುನಶ್ಚೇತನವು ಪ್ರಯೋಜನಕಾರಿಯಾಗಲಿರುವದು ಇಲ್ಲಿ ಬಹುತೇಕ ಖಚಿತ. ವಾದವಿವಾದಮಾಡಿ ಒಬ್ಬರಿಗೊಬ್ಬರು ಉತ್ತರಿಸುವದನ್ನು ನಾವು ಬೆಂಬಲಿಸುವದಿಲ್ಲವಾದರೂ, ವಾಕ್ಯಭಾಗಗಳನ್ನು ಒಳಗೊಂಡ ಪ್ರಶ್ನೆಗಳ ವಿಷಯವಾಗಿ ಕೇವಲ ತಮ್ಮ ಸ್ವಂತ ಗ್ರಹಿಕೆಯ ಬಗ್ಗೆ ಪ್ರತಿಯೊಬ್ಬರಿಂದಲೂ ಹೇಳಿಕೆ ನೀಡುವದನ್ನು ಪ್ರೋತ್ಸಾಹಿಸುವೆವು. ನಮ್ಮ ಮನಸ್ಸುಗಳನ್ನು ಕ್ರಿಯಾಶೀಲವಾಗಿಡುವದರ ಹೊರತು ಬೇರೆ ಪ್ರಯೋಜನವಿಲ್ಲವಾದ್ದರಿಂದ ಅದನ್ನು ಉಪಯೋಗಕರ–ವಾದ ಹಾದಿಗಳ ನಿಟ್ಟಿನಲ್ಲಿ ಹರಿಬಿಡುವದು ಲಾಭಕರವೇ. ಹೇಗೂ ನಮ್ಮ ಕರ್ತನು ತೋರಿಸಿರುವದು ಖಂಡಿತವಾಗಿಯೂ ಒಂದು ಒಳ್ಳೆಯ ಮಾದರಿ.

*****

# ರಾಜೌತಣವನ್ನು ನಿರಾಕರಿಸಿದ್ದು

**ರೀಪ್ರಿಂಟ್ಸ್ ಪುಟ 2701**

## ಲೂಕ 14:15-24

**"ಈಗ ಸಿದ್ಧವಾಗಿದೆ, ಬರಬೇಕು."**

ಫರಿಸಾಯನ ಮನೆಯ ಊಟದ ವೇಳೆಯಲ್ಲಿ ನಮ್ಮ ಕರ್ತನು ನಮ್ಮ ಹಿಂದಿನ ಪಾಠದಲ್ಲಿ ಹೇಳಿದ್ದ ತನ್ನ ಸಂಭಾಷಣೆಯನ್ನು ಮುಂದುವರೆಸಿದ್ದನು. ನಮ್ಮ ಕರ್ತನು ತನ್ನ ಜೊತೆಯಲ್ಲಿದ್ದವರ ಗಮನವನ್ನು ಜೀವನದ ಸೂಕ್ತ ನಡಾವಳಿಗಳ ಕಡೆಗೆ ಸೆಳೆದದ್ದು ಮಾತ್ರವಲ್ಲದೆ ಮುಂದೆ ನಡೆಯುವ ಸಂಗತಿಗಳನ್ನು ಅಂದರೆ ಔತಣಗಳನ್ನು ತಮಗೆ ಪ್ರತಿಯಾಗಿ ಔದಾರ್ಯ ತೋರಲು ಅಶಕ್ತರಾದ ಬಡವರಿಗೆ ನೀಡುವುದು ಮುಂದೆ ದೇವರ ರಾಜ್ಯದಲ್ಲಿ ಹೆಚ್ಚಾದ ಪ್ರತಿಫಲದ ಆಶೀರ್ವಾದವನ್ನು ಖಚಿತಪಡಿಸುವದೆಂಬುದನ್ನು ಸೂಚಿಸಿದ್ದನು. ಇದು ಆ ಗುಂಪಿನಲ್ಲಿದ್ದ ಒಬ್ಬನನ್ನು ಈ ಒಂದು ಮಾತನ್ನು ಟೀಕೆಯಾಗಿ ಹೇಳಲು ನಡೆಸಿತ್ತು. ನಾವು ಅದರ ತಾತ್ಪರ್ಯವನ್ನು ಸರಳವಾಗಿ ಹೀಗೆ ಹೇಳುವೆವು–ಅಹಾ, ಹೌದು! ನಾವು ನಿರೀಕ್ಷಿಸುವ ಆ ರಾಜ್ಯವು ಒಂದು ಆಶೀರ್ವಾದಕರ ಸಮಯ ವಾಗಿರುವದು. ಆ ಮಹಾ ಔತಣದಲ್ಲಿ ದೇವರು ಅಣಿಮಾಡುವ – ದಾಗಿ ವಾಗ್ದಾನ ಮಾಡಿರುವ ಆ ಭೋಜನಸಮೃದ್ಧಿಯಲ್ಲಿ ಪಾಲನ್ನು ತೆಗೆದುಕೊಳ್ಳುವದು ಅದೆಷ್ಟು ಆಶೀರ್ವಾದಕರವಾದದ್ದು! ಇದನ್ನು ಹೇಳುತ್ತಿದ್ದವನು ದೇವರ ರಾಜ್ಯದ ವಿಷಯವಾಗಿ ಯೆಶಾಯನು ಪ್ರವಾದಿಸಿದ ಸಂಗತಿಗಳನ್ನು ಚೆನ್ನಾಗಿ ತಿಳಿದವನಾಗಿರುವ ಸಂಭವವಿತ್ತು. (ಯೆಶಾಯ 25:6) ಅದರಲ್ಲಿ ಲೋಕಕ್ಕೆ ದೊರೆಯಲಿರುವ ದೇವರ ಕೃಪಾಶೀರ್ವಾದಗಳನ್ನು ಸಾಂಕೇತಿಕವಾಗಿ ಒಂದು ಔತಣವೆಂದು ಈ ಮಾತಿನಲ್ಲಿ ಸೂಚಿಸಿ ಹೇಳಲಾಗಿರುವದು: "ಇದಲ್ಲದೆ ಸೇನಾದೀಶ್ವರನಾದ ಯೆಹೋವನು ಈ ಪರ್ವತದಲ್ಲಿ ಸಕಲಜನಾಂಗಗಳಿಗೂ ಸಾರವತ್ತಾದ ಮೃಷ್ಟಾನ್ನದಿಂದಲೂ ಮಡ್ಡಿಗಟ್ಟಿದ ಮೇಲೆ ಶೋಧಿಸಿದ ದ್ರಾಕ್ಷಾರಸದಿಂದಲೂ ಕೂಡಿದ ಔತಣವನ್ನು ಅಣಿಮಾಡುವನು."

ಹೀಗೆ ಕ್ರಮೇಣ ಅಲ್ಲಿ ಉಪಸ್ಥಿತರಿದ್ದ ಗುಂಪಿನವರ ಮನಸ್ಸುಗಳನ್ನು ಅವರ ಗಮನ ಸೆಳೆದಿರಬಹುದಾದ ಪ್ರಾಪಂಚಿಕ ಹಾಗು ಸಾಮಾನ್ಯ ಸಂಗತಿಗಳು ಅಲ್ಲದೆ ಸಮಾಜಿಕ ಸಂಬಂಧದ ಮಾತುಕತೆಗಳಿಂದ ದೇವರ ವಾಗ್ದಾನಗಳನ್ನು ಪರಿಗಣಿಸುವದರ ಕಡೆಗೆ ಕೊಂಡೊಯ್ಯಲಾಗಿತ್ತು. ಹಾಗು ಇದು ನಿಸ್ಸಂದೇಹವಾಗಿ ನಮ್ಮ ಕರ್ತನು ಆ ಫರಿಸಾಯನ ಕರೆಯುವಿಕೆಯನ್ನು ಅಂಗೀಕರಿಸಿದುದರ ಮತ್ತು ಸಂಭಾಷಣೆಯನ್ನು ಕ್ರಮೇಣ ಈ ದಿಕ್ಕಿಗೆ ನಡೆಸುವ ಉದ್ದೇಶವೇ ಆಗಿತ್ತು. ಈಗ ಆತನಿಗೆ ಆ ರಾಜ್ಯದ ಮತ್ತು ಅದರಲ್ಲಿನ ಆಶೀರ್ವಾದಗಳ ಅಲ್ಲದೆ ಅದರಲ್ಲಿ ಪಾಲುಹೊಂದಲು ಮಾಡಿದ ಕರೆಯುವಿಕೆಯ ಬಗ್ಗೆ ಕೆಲವು ಸಂಗತಿಗಳನ್ನು ಬೋಧಿಸುವ ಅವಕಾಶವು ದೊರಕಿತ್ತು. ಅದನ್ನು ಆತನು ಸದುಪಯೋಗಮಾಡಿಕೊಂಡಿದ್ದನು. ತನ್ನನ್ನು ಆಲಿಸುತ್ತಿದ್ದವರಿಗೆ ಯೆಶಾಯನ ಪ್ರವಾದನೆ ಮತ್ತು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನ ಇವುಗಳು ಅವರ ಮನಸ್ಸಿನಲ್ಲಿದ್ದದ್ದೇ ಆದಲ್ಲಿ ಆ ರಾಜ್ಯ ಅಥವಾ ಯೆಹೋವನ ಪರ್ವತವೆನ್ನುವದು ಮೆಸ್ಸೀಯನ ಅಧೀನತೆಯಲ್ಲಿ ಉನ್ನತ ಸ್ಥಿತಿಯುಲ್ಲಿರುವ ವೈಭವಯುತವಾದ ಇಸ್ರಾಯೇಲ್ ಜನಾಂಗವೆಂಬುದನ್ನೂ ಮತ್ತು ಈ ರಾಜ್ಯದ ಮೂಲಕವಾಗಿ ದೇವಾಶೀರ್ವಾದವೆಂಬ ಔತಣವನ್ನು ಎಲ್ಲಾ ಜನಾಂಗಗಳಿಗೆ ವಿಸ್ತೃತವಾಗಿ ಉಣಬಡಿಸಲಾಗುತ್ತಿತ್ತೆಂಬುದನ್ನು ಅವರು ಗ್ರಹಿಸಿಕೊಳ್ಳುತ್ತಿದ್ದರು. ಈಗ ನಮ್ಮ ಕರ್ತನು ಒಂದು ಸಾಮ್ಯದ ಮೂಲಕವಾಗಿ ಶ್ರೇಷ್ಠ ಸೌಭಾಗ್ಯಾಶೀರ್ವಾದಗಳಿಗೆ ಸುವಾರ್ತೆಯ ಮೂಲಕವಾಗಿ ನೀಡಲಾಗುವ ಕರೆಯ ಬಗ್ಗೆ ಅವರ ಗಮನ ಸೆಳೆದು, ಆ ರಾಜ್ಯವು ಒಂದು ಆಶೀರ್ವಾದಕರವಾದುದೆಂಬುದನ್ನು ಮತ್ತು ಅಲ್ಲಿನ ಔತಣವು ಬಹುವಾಗಿ ಬಯಸತಕ್ಕದೆಂಬುದನ್ನು ಅವರೆಲ್ಲರೂ ಸಾಧಾರಣವಾಗಿ ಒಪ್ಪುತ್ತಾರಾದರೂ ಆ ರಾಜ್ಯದಲ್ಲಿ ತಮ್ಮ ಮನಸ್ಸಿಗೆ ಇಷ್ಟವಾದುದನ್ನು ನೀಡುವ ಪ್ರಸ್ತಾಪಮಾಡಿದ್ದಲ್ಲಿ ಅಲ್ಲಿದ್ದ ಬಹು ಪಾಲಿನವರ ಮೇಲೆ ಅದು ಪರಿಣಾಮ ಬೀರುತ್ತಿರಲಿಲ್ಲವೆಂಬುದನ್ನು ತನ್ನನ್ನು ಆಲಿಸುತ್ತಿದ್ದವರು ತಿಳಿಯಬೇಕೆಂದು ಬಯಸಿದ್ದನು.

ಈ ಸಾಮ್ಯವು ಮುಂದಾಗಿ ಅಧಿಕ ಸಂಖ್ಯೆಯಲ್ಲಿ ಕರೆದು, ಔತಣ ಸಿದ್ಧಪಡಿಸಿರುವದನ್ನು ಸಾರಿದ ಸಮಯದಲ್ಲಿ ಅದಕ್ಕೆ ಸಿದ್ಧರಾಗಿರಬಹುದಾದ ಅತಿಥೇಯನ ಸ್ನೇಹಿತರಿಂದ ಕೂಡಿದ ಒಂದು ದೊಡ್ಡ ಔತಣವನ್ನು ಸೂಚಿಸುತ್ತದೆ. ಈ ಸಾಮ್ಯದಲ್ಲಿ ದೇವರು ತಾನೇ ಔತಣಕ್ಕೆ ಕರೆದವನು ಮತ್ತು ಇಸ್ರಾಯೇಲ್ ಜನಾಂಗವು ಆತನ ಸ್ನೇಹಿತರು. ಜನಾಂಗವಾಗಿ ಅವರಿಗೆ ಆತನು ಎಲ್ಲಾ ವಿಧದಲ್ಲಿಯೂ ಬಹು ಅನುಕೂಲತೆಗಳನ್ನು ದಯಪಾಲಿಸಿದ್ದನು, ಇದರಲ್ಲಿ ಮುಖ್ಯವಾಗಿ ಮಾನವರ ರಕ್ಷಣೆಯ ವಿಷಯವಾದ ದೇವರ ಯೋಜನೆಯ ಅನೇಕ ಬಗೆಯ ತಿಳುವಳಿಕೆಯಿಂದ ಕೂಡಿದ ದೈವೋಕ್ತಿಗಳು ಅವರಿಗೆ ಒಪ್ಪಿಸಲಾಗಿದ್ದವು; ಅಲ್ಲದೆ ಅವರು ಅಬ್ರಹಾಮನ ಸಂತತಿಯವರಾಗಿ ನಂಬಿಗಸ್ತರಾಗಿದ್ದಲ್ಲಿ ಈ ದೊಡ್ಡ ಔತಣಕ್ಕೆ ಕರೆಯಲ್ಪಡುವಂಥ ಸೌಭಾಗ್ಯಾವಕಾಶಗಳನ್ನು ಪಡೆಯುವ ವಿಷಯವಾದ ವಾಗ್ದಾನಗಳನ್ನೂ ನೀಡಲಾಗಿತ್ತು. ಪ್ರವಾದಿಯ ಮೂಲಕವಾಗಿ ದೇವರು ಅವರನ್ನು ಸಂಬೋಧಿಸಿ ಹೀಗೆ ಹೇಳಿರುವನು: "ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ (ಮಾನ್ಯತೆ ನೀಡಿದ್ದೇನೆ)." (ಆಮೋಸ 3:2) ಕೇವಲ ಇಸ್ರಾಯೇಲ್ಯರು ಮಾತ್ರ ಈ ಔತಣಕ್ಕೆ ಕರೆಯಲ್ಪಟ್ಟಿದ್ದರು; ಆದರೆ ನಮ್ಮ ಕರ್ತನ (ಮೊದಲ ಬರುವಿಕೆಯ) ದಿನದ ವರೆಗೆ ಈ ಔತಣವು ಸಿದ್ಧಗೊಂಡಿರಲಿಲ್ಲ,

ಹೀಗಾಗಿ ಆ ವರೆಗೆ ಅದರಲ್ಲಿ ಭಾಗವಹಿಸಲು ಕರೆಯನ್ನು ಹೊರಡಿಸಲಾಗಿರಲಿಲ್ಲ. ಅಂತಿಮವಾಗಿ ಸಮಯವು ಹೇಗೂ ಕೂಡಿ ಬಂದಿತ್ತು; ದೋಷಪರಿಹಾರ ಯಜ್ಞದ ಹೋರಿಯಲ್ಲಿ ಸೂಚಿತನಾಗಿದ್ದ ಕ್ರಿಸ್ತನು ತನ್ನನ್ನು ಆಗಲೇ ಅರ್ಪಿಸಿಕೊಂಡಿದ್ದನು, ನಮ್ಮ ಕರ್ತನು ಯೊರ್ದಾನ್ ನದಿಯ ಬಳಿಯಲ್ಲಿ ಯೋಹಾನನ ಮುಂದೆ ತನ್ನನ್ನು ಮರಣ ಪರ್ಯಂತರವಾಗಿ ಪೂರ್ಣ ರೀತಿಯಲ್ಲಿ ಪ್ರತಿಜ್ಞೆಮಾಡಿಕೊಂಡವನಾಗಿ ನಿಂತುಕೊಂಡಿರುವಾಗ ಆ ಯಜ್ಞವು ಈ ಅರ್ಪಣೆಯಲ್ಲೇ ನೆರವೇರಲ್ಪಟ್ಟಿತ್ತೆಂದು ಎಣಿಸಲಾಗಿತ್ತು. ಈ ದೋಷಪರಿಹಾರ ಯಜ್ಞದ ದೃಷ್ಟಿಯಿಂದ ಆಗಲೇ ವಾಗ್ದಾನಮಾಡಲ್ಪಟ್ಟ ಅತಿಥಿಗಳಿಗೆ ಈ ದೊಡ್ಡ ಔತಣಕ್ಕೆ ಕರೆನೀಡುವದನ್ನು ಆರಂಭಿಸಲು ದೇವರಿಗೆ ಸಾಧ್ಯವಾಗಿತ್ತು. ದೇವಾನುಗ್ರಹ ಮತ್ತು ಆಶೀರ್ವಾದಗಳಿಂದ ಕೂಡಿದ ಈ ದೊಡ್ಡ ಔತಣಕ್ಕೆ ಅವರ ಮೂಲ ಪಿತೃವಾದ ಅಬ್ರಹಾಮನ ಮೂಲಕವಾಗಿ ಬಹು ಹಿಂದೆಯೇ ಇದರ ವಿಷಯವಾಗಿ ದೇವರು ವಾಗ್ದಾನಮಾಡಿದ್ದನು.

ಮತ್ತು ಹೀಗೆ ಯೇಸುವು ಬಂದು ತನ್ನ ಶಿಷ್ಯರನ್ನು (ಸುವಾರ್ತೆ ಸಾರಲು) ಕಳುಹಿಸಿಕೊಟ್ಟಾಗ ನೀಡಿದ್ದ ಸಂದೇಶವು ಹೀಗಿತ್ತು: "ಪರಲೋಕರಾಜ್ಯವು ಸಮೀಪವಾಯಿತು;" ಅಂದರೆ ದೇವರು ಬಹು ಹಿಂದೆಯೇ ಸಾರವತ್ತಾದ ಮೃಷ್ಟಾನ್ನ ಭೋಜನವನ್ನು ನೀಡುವ ಆ ದೊಡ್ಡ ಔತಣವು ಸಿದ್ಧವಾಗಿರುವದೆಂಬದು; ಯಾರು ಇಚ್ಛಿಸುವರೋ ಅವರು ಬಂದು ಇದರಲ್ಲಿ ಭಾಗವಹಿಸಬಹುದು. ಯೇಸುವಿನ ಮತ್ತು ಆ ಹನ್ನೆರಡು ಮಂದಿ ಅಲ್ಲದೆ ನಂತರದಲ್ಲಿ ಎಪ್ಪತ್ತು ಮಂದಿಯ ಮೂಲಕವಾಗಿ ಯೂದಾಯ ಪ್ರಾಂತ್ಯಕ್ಕೆಲ್ಲಾ ನೀಡಿದ ಸಂದೇಶವು ಅನುಗ್ರಹಿತರಾದ ಆ ಜನರು ಬಂದು ಆ ಔತಣದಲ್ಲಿ ಉಲ್ಲಾಸಿಸುವದಕ್ಕಾಗಿರುವ ಕರೆಯಾಗಿತ್ತು. ಆ ರಾಜ್ಯದಲ್ಲಿ ದೊರೆಯಲಾಗುವ ಮಹಾ ಸೌಭಾಗ್ಯ ಸದವಕಾಶಗಳಿಗಾಗಿ ಅವರು ಹದಿನಾರು ಶತಮಾನಗಳ ಪರ್ಯಂತರ ಪ್ರಾರ್ಥಿಸುವವರಾಗಿ ಅದಕ್ಕಾಗಿ ನಿರೀಕ್ಷಿಸುತ್ತಾ ತಾಳ್ಮೆಯಿಂದ ಕಾದುಕೊಂಡಿದ್ದರು.

ಆದರೆ ಸಾಮ್ಯವು ತೋರಿಸಿಕೊಟ್ಟಿರುವಂತೆ, ವಾಸ್ತವದಲ್ಲಿ ಆ ರಾಜ್ಯದ ವಿಷಯವಾದ ಪ್ರಸ್ತಾಪವನ್ನು ನೀಡಿದಾಗ, ಅಂದರೆ ಆ ಮಹಾ ಔತಣದ ಮೂಲಕವಾಗಿ ದೊರೆಯುವ ಆಶೀರ್ವಾದದಲ್ಲಿ ಪಾಲುಗಾರರಾಗಲು ಆಹ್ವಾನವನ್ನು ನಿಜವಾಗಿಯೂ ಅವರಿಗೆ ನೀಡಲಾದಾಗ ಅವರು ಆ ರಾಜ್ಯವನ್ನು ಹಾಗು ಮುಂದೆ ಲಭಿಸುವ ಸಂಗತಿಗಳನ್ನು ಅವರಿಂದ ನಿರೀಕ್ಷಿಸಿದ್ದಕ್ಕಿಂತಲೂ ಅಲ್ಪವಾಗಿ ಆಶಿಸಿದ್ದರು. ಅದಕ್ಕೆ ಪ್ರತಿಯಾಗಿ, ಆ ರಾಜ್ಯದ ವಿಷಯವಾದ ಕರೆಯನ್ನು ಒಕ್ಕೊರಲಿನಿಂದ ನಿರಾಕರಿಸಿದಂಥದ್ದು, ಅದನ್ನು ನಿರಾಕರಿಸಿದವರು ಬಹುತೇಕ ಆ ವಿಷಯದಲ್ಲಿ ಒಟ್ಟಾಗಿ ಕೂಡಿಕೊಂಡು ಅದನ್ನು ನಿರಾಕರಿಸಿದ್ದಂತೆ ಕಾಣಬರುತಿತ್ತು. ತಾವು ಬಹು ಕಾಲದಿಂದಲೂ ಕುತೂಹಲದಿಂದ ಬಯಸುತ್ತಿರುವದಾಗಿ ಹೇಳಿಕೊಂಡಂಥ ದೇವರ ವಾಗ್ದಾನದ ಸಂಗತಿಗಳ ಬಗ್ಗೆ ಅಲ್ಪ ಆಸಕ್ತಿಹೊಂದಿರುವಕ್ಕಾಗಿ ಅವರು ನೀಡಲಾದ ಸಬೂಬುಗಳು ಇತರ ಸಂಗತಿಗಳ ಬಗ್ಗೆ ಅವರು ಕೈಗೊಳ್ಳಬೇಕಾಗಿರುವ ಕರ್ತವ್ಯಗಳ ಒತ್ತಡದ ದೆಸೆಯಿಂದಾಗಿ ಅವರಿಗೆ ಆ ರಾಜ್ಯದ ವಿಷಯವಾಗಿ ದೇವರ ವಾಗ್ದಾನಗಳಿಗೆ ಸ್ಪಂದಿಸಲು ಸಮಯವನ್ನು ಕೊಡಲಾಗಲಿಲ್ಲವೆಂಬಂತೆ ತೋರುತ್ತಿದ್ದುದು ಸ್ಪಷ್ಟವಾಗಿತ್ತು. ಒಬ್ಬನಿಗೆ ತನ್ನ ಹೊಲವನ್ನು ನೋಡಲು ಹೋಗುವ ದಿಕ್ಕಿನಲ್ಲಿ ಒತ್ತಡವಿದ್ದು ಅವನು ಹೀಗೆ ತನ್ನ ವಿಷಯದಲ್ಲಿ ಆಲಸ್ಯಗಾರನಾಗಿರಲಿಲ್ಲ; ಜನರಿಗೆ ಮಾಡಲು ಏನೂ ಇಲ್ಲದೆ ಇದ್ದಾಗ ಅವರು ಆತ್ಮಿಕವಾದ ಔತಣಗಳ ಬಗ್ಗೆ ಗಮನಕೊಡುವದು ಅವರಿಗೆ ಉತ್ತಮವೆಂದು ಮತ್ತೊಬ್ಬನಿಗೆ ಅನ್ನಿಸಿತ್ತು. ಆದರೆ ಅವನಿಗೆ ತನ್ನ ಆಸ್ತಿ ಎತ್ತು ಕುರಿ ಅಂಗಡಿ–ವ್ಯವಹಾರ ಮತ್ತೆಲ್ಲಾ ವಿಷಯದ ಬಗ್ಗೆ ಅವನ ಸಮಯವೆಲ್ಲವೂ ಪೂರ್ಣವಾಗಿ ಆಕ್ರಮಿಸಿಕೊಂಡಿತ್ತು. ಬೇರೊಬ್ಬನಿಗೆ ತನ್ನ ಹೆಂಡತಿ ಮಕ್ಕಳು ಸಾಮಾಜಿಕ ಸಂಬಂಧಗಳ ವಿಷಯವಾದ ಕರ್ತವ್ಯಗಳು ತನ್ನ ಗಮನವನ್ನೆಲ್ಲಾ ತೆಗೆದುಕೊಂಡಿದ್ದು ಹೀಗಾಗಿ ಆತನಿಗೆ ಆ ರಾಜ್ಯದ ಸೌಭಾಗ್ಯಗಳನ್ನು ಅಂಗೀಕರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಅನ್ನಿಸಿತ್ತು.

ಮತ್ತು ಈಗ ಆತ್ಮಿಕವಾದ ರಾಜ್ಯದ ವಿಷಯವಾಗಿ ಸಾರಲ್ಪಟ್ಟಿರಲಾಗಿ, ಶಾರೀರಿಕ ಸಂಬಂಧದ ಇಸ್ರಾಯೇಲ್ಯರ ಪ್ರವೃತ್ತಿಯಾಗಿದ್ದ ಇದೇ ವಿಷಯವು ಬಹು ಪಾಲು ಆತ್ಮಿಕ ಇಸ್ರಾಯೇಲ್ಯರ ಸಂಗತಿಯೂ ಸಹ ಆಗಿರುವದು. ಜೀವಿತದಲ್ಲಿ ವಾಸ್ತವವಾಗಿ ಹಾಗು ಅಕ್ಷರಶಃ ನಡೆಯುತ್ತಿರುವ ಸಂಗತಿಗಳು ಎನ್ನಲಾದವುಗಳಿಗೆ ತಮ್ಮ ಗಮನವೆಲ್ಲವನ್ನು ನೀಡುವದು ಅಗತ್ಯವಿರುವದೆಂದು ಹಲವರು ಭಾವಿಸಿರುವಂತೆ ತೋರುವದು. ಈ ಪ್ರಪಂಚದ ಸಂಗತಿಗಳಿಗೆ "ಹೊಂದಿಕೊಂಡು ಹೋಗುವದು" ಮತ್ತು ಅದರಲ್ಲಿ ಅವರೂ ಒಬ್ಬರಾಗಿರುವಂಥದು ಅವರಿಗೆ ಬೇಕಿರುವದು, ಅಲ್ಲದೆ ಸಾಮಾಜಿಕ ಹಾಗು ಲೌಕಿಕ ವಿಷಯಗಳಲ್ಲಿ ಇಂಥಾ ಆಸಕ್ತಿಹೊಂದಿರುವದು ಕ್ರಿಸ್ತನೊಂದಿಗೆ ಸಹಬಾಧ್ಯರಾಗಿ ಆ ಸಾವಿರ ವರುಷದ ಭವ್ಯವಾದ ಆಳ್ವಿಕೆಯಲ್ಲಿ ಭಾಗವಹಿಸ ಸಲುವಾದ ದೇವರ ಕರೆಯುವಿಕೆಗೆ ಸ್ಪಂದಿಸಲು ಅಂದರೆ ಮಹಾ ಔತಣದ ಕರೆಯಾದಂಥ, ಉನ್ನತ (ಸ್ಥಾನದ) ಕರೆಗೆ ಸ್ಪಂದಿಸಲು ಒಂದು ದೊಡ್ಡ ತೊಡಕಾಗುವದೆಂಬುದನ್ನು ಅವರು ಕಂಡುಕೊಂಡಿರುವರು. ಹೌದು, ಈ ಮಾತಿನ ಒಂದು ಅರ್ಥದಲ್ಲಿ ಇದೆಲ್ಲವೂ ಸರಿಯಾಗಿರುವದು, ಏಕೆಂದರೆ ಇದು ಆ ವರ್ಗವನ್ನು ಕೇವಲ ರಾಜ್ಯದಿಂದ ಹೊರಗಿರುಂತೆ ಮಾಡುವದು; ಆ ವರ್ಗವು ಇದರಲ್ಲಿರಬೇಕೆಂಬುದನ್ನು ಕರ್ತನೂ ಸಹ ಬಯಸುವದಿಲ್ಲ ಅಲ್ಲದೆ ಅದು ಇದರಲ್ಲಿ ಸೇರಿಬಂದದ್ದೇಯಾದಲ್ಲಿ ಅದನ್ನು ನಂತರದಲ್ಲಿ ಬೇರ್ಪಡಿಸುವ ಅಗತ್ಯವಾಗುವದು. ದೇವರು ಅನೇಕರನ್ನು ಈ ಔತಣಕ್ಕೆ ಕರೆದಿರುವನಾದರೂ, ಎಲ್ಲಾ ಸೌಭಾಗ್ಯಗಳಿಗಿಂತಲೂ ಅತ್ಯುತ್ತಮವೆಂದು ಇದರ ಬಗ್ಗೆ ಮನನಮಾಡಿಕೊಂಡವರಾಗಿ ಇದರಲ್ಲಿ ಪಾಲು ತೆಗೆದುಕೊಳ್ಳಲು ಬೇರೆ ಎಲ್ಲಾ ಸಂಗತಿಗಳನ್ನು ತ್ಯಜಿಸುವ ಮನಸ್ಸುಳ್ಳವರನ್ನು ಮಾತ್ರ ಆತನು ಹುಡುಕುತ್ತಿರುವನು.

ಸಾಮ್ಯದಲ್ಲಿ ವಿವರಿಸಿರುವಂತೆ, ನಮ್ಮ ಕರ್ತನ ಸೇವಾವಧಿಯ ಮೊದಲನೇ ವರುಷವನ್ನು ಸೂಚಿಸುವ ಔತಣದ ಮೊದಲ ಕರೆಯುವಿಕೆಯನ್ನು ವಿಶೇಷವಾಗಿ ಶಾಸ್ತ್ರಿಗಳ ಫರಿಸಾಯರ ಹಾಗು ಧರ್ಮೋಪದೇಶಕರ ಆಸಕ್ತಿಯನ್ನು ಸೆಳೆಯುವ ನಿಟ್ಟಿನಲ್ಲಿ

ನೀಡಲಾಗಿತ್ತು. ಇವರು ಆ ಜನಾಂಗದವರಲ್ಲಿ ಪ್ರಮುಖರಾದ ಮನುಷ್ಯರಾಗಿದ್ದರು ಅಲ್ಲದೆ ಅವರು ಮೋಶೆಯ ಪೀಠದಲ್ಲಿ ಕುಳಿತಿರುವವರಾಗಿ ವಾಸ್ತವದಲ್ಲಿ ಆ ಜನಾಂಗವನ್ನು ಪೂರ್ಣವಾಗಿ ಪ್ರತಿನಿಧಿಸುತ್ತಿರುವರೆಂದು ನಮ್ಮ ಕರ್ತನು ಹೇಳಿದ್ದನು. ಇವರಿಂದ ಕರೆಯು ನಿರಾಕರಿಸಲ್ಪಡುವಂಥದು ಆ ಜನಾಂಗವು ಇದನ್ನು ಪೂರ್ಣವಾಗಿ ನಿರಾಕರಿಸಿದರೆಂಬ ಅರ್ಥಬರುವದು. ಹೀಗೆ ನಮ್ಮ ಕರ್ತನು ಆ ಕಾಲದಲ್ಲಿದ್ದ ಯಾಜಕ ವರ್ಗದವರ ಎದುರಿಗೆ ತಾನು ಮೆಸ್ಸೀಯನಾಗಿರುವೆನೆಂಬುದರ ಪ್ರಮಾಣವನ್ನು ತೋರಿಸಿ–ಕೊಡಲು ಜಾಗರೂಕತೆ ವಹಿಸಿದ್ದನು. ದೃಷ್ಟಾಂತವಾಗಿ ಹೇಳುವದಾದರೆ, ಹತ್ತು ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದಾಗ ಆತನು ಯಾರಿಗೂ ಇದನ್ನು ಹೇಳದೆ ಅವರು ಹೋಗಿ ಯಾಜಕರಿಗೆ ಮಾತ್ರ ತೋರಿಸಿಕೊಳ್ಳುವಂತೆ ಆಜ್ಞಾಪಿಸಿದ್ದುದು. ಹೀಗೆ ಇತರರಿಗಿಂತಲೂ ವಿಶೇಷವಾಗಿ ಯಾಜಕ ವರ್ಗದವರಿಗೆ ನಮ್ಮ ಕರ್ತನ ಅದ್ಭುತ ಕಾರ್ಯದ ಬಗ್ಗೆ ತಿಳಿಸಲಾಗಿತ್ತು. ಹೀಗಾಗಿ ಅವರು ಇತರರಿಗಿಂತಲೂ ಬಹು ವಿಶೇಷವಾಗಿ ಔತಣಕ್ಕೆ ಕರೆಸಿಕೊಂಡಿದ್ದರು. ಹೇಗಿದ್ದರೂ ಇಸ್ರಾಯೇಲ್ಯರ ಪ್ರಮುಖ ಪ್ರತಿನಿಧಿಗಳು ಕರೆಯನ್ನು ಅಂಗೀಕರಿಸಲು ಸಿದ್ಧರಿರಲಿಲ್ಲವೆಂಬ ಅಂಶವು ಇದಕ್ಕೆ ಅಡ್ಡಿಯಾಗಲು ಬಿಟ್ಟಿರಲಿಲ್ಲ. ಅಲ್ಲದೆ ನಮ್ಮ ಕರ್ತನು ನಂತರದಲ್ಲಿ ತನ್ನ ಶಿಷ್ಯರ ಮೂಲಕವಾಗಿ ಮತ್ತೊಂದು ವರ್ಗದವರಿಗೆ ಕರೆ ನೀಡುವದನ್ನು ಮುಂದುವರೆಸಿದ್ದನು.

ಆ ಇಡೀ ಜನಾಂಗಕ್ಕೆ ಅದರ ಪ್ರತಿನಿಧಿಗಳ ಮೂಲಕವಾಗಿ ನೀಡಲಾದ ಪರೀಕ್ಷಾಕಾಲವು ಕಲ್ವಾರಿಯಲ್ಲಿ ಮುಕ್ತಾಯವಾಗಿತ್ತು ಅಥವಾ ವಾಸ್ತವದಲ್ಲಿ ಕಲ್ವಾರಿಯ ಮರಣಕ್ಕೆ ಐದು ದಿನಗಳ ಹಿಂದೆಯೇ ನಮ್ಮ ಕರ್ತನು ಕತ್ತೆಯ ಮೇಲೆ ಕುಳಿತವನಾಗಿ ಬಂದು ಯೆರೂಸಲೇಮಿನ ವಿಷಯವಾಗಿ ಅಳುತ್ತಾ, "ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿ ಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗ ಬರಿದಾಗಿ ಬಿಟ್ಟದೆ." ಎಂದು ಹೇಳುವಲ್ಲಿ ಅದು ಮುಕ್ತಾಯವಾಗಿತ್ತು. ನೀವು ಒಂದು ಜನಾಂಗವಾಗಿ, ಜನರಾಗಿ ಮಹಾ ಔತಣಕ್ಕೆ ನೀಡಿದ ದೇವರ ಕರೆಯನ್ನು ನಿರಾಕರಿಸಿ ಬಿಟ್ಟಿದ್ದೀರಿ; ಒಂದು ಜನಾಂಗವಾಗಿ ನೀವು ಅದನ್ನು ರುಚಿನೋಡಲು ಸಾಧ್ಯವಾಗದು. ಹೇಗಿದ್ದರೂ ಆ ರಾಜ್ಯದ ಸೌಭಾಗ್ಯಗಳಿಗೆ ಆ ಇಡೀ ಜನಾಂಗವು ಅನರ್ಹರೆಂಬುದು ಪ್ರಮಾಣಿಸಲ್ಪಟ್ಟ ನಂತರ ದೇವರ ವಾಗ್ದಾನದ ಉದ್ದೇಶಾನುಸಾರ ದೇವರು ಪ್ರವಾದಿಗಳ ಮೂಲಕವಾಗಿ ಆ ಜನಾಂಗದ ಹಲವಾರು ವ್ಯಕ್ತಿಗಳಿಗೆ ಕರುಣೆತೋರುವದನ್ನು ಮುಂದುವರೆಸಿದ್ದನು. ಆ ಔತಣದಲ್ಲಿ ಪಾಲು ತೆಗೆದುಕೊಳ್ಳಲು ದೀನಭಾವವುಳ್ಳಂಥವರನ್ನು ಒಟ್ಟುಗೂಡಿಸಲು ಅಪೋಸ್ತಲರು ಕಳುಹಿಸಲ್ಪಟ್ಟಿದ್ದರು, ಆದರೆ ಅವರು ಆ ಜನಾಂಗವನ್ನು ಒಟ್ಟುಗೂಡಿಸುವದಕ್ಕಾಗಿರಲಿಲ್ಲ. ಇಸ್ರಾಯೇಲ್ ಜನಾಂಗವರಿಗೆ ಬದಲಾಗಿ ವ್ಯಕ್ತಿಗಳಿಗಾಗಿ ಮಾಡಿದ ಕರೆಯು ಪ್ರತ್ಯೇಕವಾಗಿ ತಮ್ಮ ಅಯೋಗ್ಯತೆಯನ್ನು ಮನಗಂಡವರಿಂದ ಅಂದರೆ ಕುಂಟರು, ಪಾರ್ಶ್ವವಾಯು ರೋಗಿಗಳು, ಕುರುಡರು, ತಾವು ಪರಿಪೂರ್ಣರಲ್ಲವೆಂಬುದನ್ನು ಒಪ್ಪಿಕೊಂಡವರಾಗಿ ಪರಿಪೂರ್ಣತೆಯನ್ನು ಬಯಸುವವರು ಮತ್ತು ಆ ರಾಜ್ಯದ ಸೌಭಾಗ್ಯಗಳಲ್ಲಿ ಪಾಲುಗಾರರಾಗಲು ಹರ್ಷವುಳ್ಳವರಾಗಿ ಬೇರೆ ಎಲ್ಲವನ್ನು ಸಂತೋಷದಿಂದ ಬಿಟ್ಟುಬಿಟ್ಟವರು, ಇವರುಗಳಿಂದ ಸ್ಪಂದಿಸಲ್ಪಟ್ಟಿತ್ತು. ನಮಗೆ ದೃಢಪಟ್ಟಿರುವಂತೆ, ಇವರಲ್ಲಿ ಜ್ಞಾನಿಗಳು ಅನೇಕರಿಲ್ಲ ಗಣ್ಯರು ಅನೇಕರಿಲ್ಲ ಕಲಿತವರು ಅನೇಕರಿಲ್ಲ ಆದರೆ ಮುಖ್ಯವಾಗಿ ಬಡವರು ಏಕೆಂದರೆ ಬಡವರೆಲ್ಲರು ಯಾವಾಗಲೂ ಎಲ್ಲಾ ವಿಧವಾಗಿಯೂ ದೀನಭಾವವುಳ್ಳವರಲ್ಲವಾದರೂ ಅವರ ಪ್ರಮಾಣದಲ್ಲಿ ಅಧಿಕ ಜನರು (ರಾಜ್ಯಕ್ಕೆ) ಅಂಗೀಕೃತರಾಗುವ ಗುಣಗಳನ್ನು ಹೊಂದಿರುವರು; ಐಶ್ವರ್ಯವಂತರು ಮತ್ತು ಗಣ್ಯರುಗಳಲ್ಲಿ ದೀನಭಾವದವರು ಎಲ್ಲಾ ಸಮಯದಲ್ಲಿಯೂ ಪ್ರಮಾಣದಲ್ಲಿ ಬಹು ವಿರಳವಾಗಿರುವರು.

ತೆರಿಗೆ ಹಣದ ಮೂಲಕ ನಡೆಸಲ್ಪಡುವ ಆಸ್ಪತ್ರೆಗಳು ಧರ್ಮಶಾಲೆಗಳು ಇರುವ ನಮ್ಮ ದಿನದಲ್ಲಿ ಬಡವರಿಗೆ, ಪಾರ್ಶ್ವವಾಯುಗಳಿಗೆ, ಕುರುಡರಿಗೆ ಪಟ್ಟಣದ ಹಾದಿಬೀದಿಗಳಲ್ಲಿ ನೀಡಲಾದ ಎರಡನೆಯ ಕರೆಯನ್ನು ಒಂದು ಸಾಂಕೇತಿಕ ಚಿತ್ರಣವಾಗಿ ಅರ್ಥಮಾಡಿಕೊಳ್ಳಲು ಬಹು ಕಷ್ಟಕರ; ಆದರೆ ನಮ್ಮ ಕರ್ತನ ದಿನಗಳಲ್ಲಿ ಅಲ್ಪ ಸಮಯದಲ್ಲೇ ಅಂಗಹೀನರನ್ನು ಮಾನಸಿಕ ಅಸ್ವಸ್ಥರ ಒಂದು ದೊಡ್ಡ ಗುಂಪನ್ನು ಕಲೆಹಾಕುವದು ನಿಜವಾಗಿಯೂ ಬಹು ಸುಲಭವಾಗುವದು.

ಮೊದಲ ಎರಡು ಕರೆಗಳೂ ಪಟ್ಟಣಕ್ಕೆ ಸಂಭಂದಿಸಿರುವ–ದೆಂದು ಅಂದರೆ ಹೆಸರಿಗೆ ಮಾತ್ರ ದೇವರ ರಾಜ್ಯವಾಗಿರುವ ಇಸ್ರಾಯೇಲ್ಯರಿಗೆ ಸಂಬಂಧಿಸಿರುವದೆಂಬುದನ್ನು ಗಮನಿಸ–ಲಾಗುವದು. ಆದರೆ ಎರಡು ಕರೆಗಳೂ ದೇವರು ಮೊದಲೇ ನೇಮಿಸಿದ ಆ ರಾಜ್ಯದ ವರ್ಗದವರಾಗಬೇಕಾದವರಲ್ಲಿ ಸಾಕಷ್ಟು ಸಂಖ್ಯೆಯನ್ನು ಕಂಡುಕೊಳ್ಳಲು ವಿಫಲವಾಗಿತ್ತು. ಬಂದು ಸೇರುವಂತೆ ಇತರರನ್ನು ಮನವೊಲಿಸಲು ಆತನಿಗೆ ನಿಜವಾಗಿಯೂ ಸಾಧ್ಯವಿತ್ತು; ಆದರೆ, ಬದಲಾಗಿ, ಉದ್ದೇಶ ಪೂರ್ವಕವಾಗಿಯೇ ಆತನು ಔತಣದ ಕರೆಯನ್ನು ಯಾವ ವಿಧದಲ್ಲಿ ಮಾಡಿದ್ದನೆಂದರೆ ಅದು ಹೃದಯದಲ್ಲಿ ಸೂಕ್ತ ಭಾವವಿಲ್ಲದವರನ್ನು ಹಿಮ್ಮೆಟ್ಟುವಂತೆ ಮಾಡಿತ್ತು. ಅದು ಯಾವ ವಿಧದಲ್ಲಿತ್ತೆಂದರೆ ತಮ್ಮಲ್ಲಿರುವ ಅಯೋಗ್ಯತೆಯನ್ನು ಪರಿಗಣಿಸು ವವರಾಗಿ ಅದನ್ನು ಒಪ್ಪಿಕೊಂಡು ತಮ್ಮ ಅಪರಿಪೂರ್ಣತೆಯೆಂಬ ಕೊಳಕು ಬಟ್ಟೆಯನ್ನು ಮುಚ್ಚಲ್ಪಡುವಂಥ ಅತಿಥಿಗಳಿಗೆ ನೀಡಲಾಗುವ (ಕ್ರಿಸ್ತನಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡುವ ಸಾಂಕೇತಿಕವಾದ) ವಸ್ತ್ರವನ್ನು ಪಡಕೊಂಡವರಾಗಿ ಔತಣದಲ್ಲಿ ಸೇರಲು ಸಂತೋಷವುಳ್ಳವರಾದ ನಿಜವಾದ ಇಸ್ರಾಯೇಲ್ಯರನ್ನು ಆಕರ್ಷಿಸುವಂತಿತ್ತು. ಆದರೆ ಈಗ ಆಯಲ್ಪಡುವವರ ಸಂಖ್ಯೆಯು ಇಸ್ರಾಯೇಲ್ಯರಲ್ಲಿ ಸಾಕಷ್ಟು ಕಂಡುಬರದ ಕಾರಣ ಸಂದೇಶವನ್ನು ಪಟ್ಟಣದ ಹೊರಗೆ ಅಂದರೆ ಯೆಹೂದ ಧರ್ಮದ ಹೊರಗೆ ಅನ್ಯಜನರಿಗೆ ಕಳುಹಿಸಬೇಕಿತ್ತು; ಮತ್ತು ಹೀಗೆಯೇ ಮೂರನೇ ಕರೆಯನ್ನು ನೀಡಲಾಗಿತ್ತು, "ನೀನು ಹಾದಿಗಳಿಗೂ ಬೇಲಿಗಳ

ಬಳಿಗೂ ಹೋಗಿ ಅಲ್ಲಿ ಸಿಕ್ಕಿದವರನ್ನು ಬಲವಂತಮಾಡಿ ಒಳಕ್ಕೆ ಕರಕೊಂಡು ಬಾ," "ಬಲವಂತಮಾಡಿ" ಎನ್ನುವ ಶಬ್ಧವು ಇಲ್ಲಿ ತಪ್ಪು ಭಾವನೆಯನ್ನು ಕೊಡುತ್ತದೆ: ಅದನ್ನು ಉತ್ತಾಯಿಸು, ಮನವೋಲಿಸು ಎಂದು ಸೂಕ್ತವಾಗಿ ತರ್ಜುಮೆ ಮಾಡಬೇಕಿತ್ತು.

ಮತ್ತು ಹೀಗೆಯೇ ಸುವಾರ್ತಾಯುಗದ ಪರ್ಯಂತರವೂ ಇರುವದು, ಅಂದರೆ ಸುವಾರ್ತೆಯ ಮೂಲಕವಾದ ಅನುಗ್ರಹವನ್ನು ಪಡೆಯಲು ಸಿದ್ಧರಿರುವ ಯೆಹೂದ್ಯರಿಗೆ ದೊರಕಿಸಿದಂದಿನಿಂದ ಆ ಔತಣದಲ್ಲಿ ಉಳಿದ ಯೆಹೂದ್ಯ-ರೊಂದಿಗೆ ಭಾಗವಹಿಸಲು ಸಂದೇಶದ ಮೂಲಕವಾದ ಕರೆಯನ್ನು ಅನ್ಯಜನರ ಕಡೆಗೆ ತಿರುಗಿಸಲಾಗಿರುವದು, "ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡ ವಿಧ..." ಅಪೋಸ್ತಲನು ತನ್ನ ಉಪದೇಶದಲ್ಲಿ ಯೆಹೂದ್ಯರಲ್ಲಿ ಕೆಲವರಿಗೆ ಹೀಗೆ ಹೇಳಿರುವನು, "ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು; ಆದರೆ ನೀವು ಅದನ್ನು ತಳ್ಳಿಬಿಟ್ಟು ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರೆಂದು ತೀರ್ಪುಮಾಡಿಕೊಂಡ-ದ್ದರಿಂದ ಇಗೋ, ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ. ಹಾಗೆಯೇ ಕರ್ತನು ನಮಗೆ ಅಪ್ಪಣೆಕೊಟ್ಟಿದ್ದಾನೆ;" (ಅ.ಕೃ. 13:46-47) ಅವರು ತಮ್ಮನ್ನು ಈ ಮಹಾ ಆಶೀರ್ವಾದ ಅಥವಾ ವರಕ್ಕೆ ಅಪಾತ್ರರೆಂದು ತೋರ್ಪಡಿಸಿಕೊಂಡರು; ಇದರಲ್ಲಿ ಅವರು ಮುಂದೆ ನಿತ್ಯವಾದ ಸಂಗತಿಗಳ ವಿಷಯವಾದ ಪ್ರಭಾವದಿಂದ ಕೂಡಿದ ವಾಗ್ದಾನಗಳಿಗಿಂತಲೂ ಹೆಚ್ಚಾಗಿ ನಶಿಸಿಹೋಗುವಂಥ ವಸ್ತುಗಳ ವಿಷಯದಲ್ಲಿ ಆಸಕ್ತರಾಗಿದ್ದರು.

ಅಪೋಸ್ತಲನಾದ ಪೌಲನು ಈ ಅಂಶವನ್ನು ರೋಮಾ. 9:27ರಲ್ಲಿ ಗಮನಕ್ಕೆ ತಂದಿರುವನು: "ಇಸ್ರಾಯೇಲ್ಯರ ಸಂಖ್ಯೆಯು ಸಮುದ್ರದ ಉಸುಬಿನಂತೆ ಅಸಂಖ್ಯವಾಗಿದ್ದರೂ ಅವರಲ್ಲಿ ಒಂದು ಅಂಶ (ಉಳಿದವರು) ಮಾತ್ರ ರಕ್ಷಣೆಹೊಂದುವದು" ಅಪೋಸ್ತಲನು ಮುಂದುವರೆದು ತೋರಿಸಿರುವದೇನಂದರೆ, ಆ ರಾಜ್ಯದಲ್ಲಿ ಪಾಲುಗಾರರಾಗಲು ಅನ್ಯಜನರಿಗೆ ನೀಡಲಾದ ಕರೆಯು ಕೇವಲ ಮೊದಲೇ ನೀಡಲಾದ ಕರೆಯ ಮುಂದುವರಿಕೆ-ಯಾಗಿರುವದೆಂಬದು, ಅಲ್ಲದೆ ಈ ಅತ್ಯಂತ ವಿಶೇಷವಾದ ರಕ್ಷಣೆಯ ಸೌಭಾಗ್ಯವನ್ನು ಅಲಕ್ಷ್ಯಮಾಡಿದವರ (ಕಳಕೊಂಡವರ) ಸ್ಥಾನವನ್ನು ತೆಗೆದುಕೊಳ್ಳಲು ನಮಗೆ ಕರೆನೀಡಲಾಗಿರುವದು. ಆತನು ಓಲೀವ ಮರದ ನಿದರ್ಶನದ ಮೂಲಕ ಇದನ್ನು ವಿವರಿಸಿ ಹೀಗೆ ಹೇಳಿರುವನು: "ಕೆಲವು ಕೊಂಬೆಗಳು ಮುರಿದು ಹಾಕಲ್ಪಡಲು ಕಾಡೆಣ್ಣೇಮರದಂತಿರುವ ನೀವು ಅವುಗಳ ತಾವಿನಲ್ಲಿ ಕಸಿಕಟ್ಟಿಸಿಕೊಂಡವನಾಗಿ ಊರೆಣ್ಣೇಮರದ ರಸವತ್ತಾದ ಬೇರಿನಲ್ಲಿ ಪಾಲುಹೊಂದಿದರೂ..." ರೋಮಾ. 11:17

ಆ ರಾಜ್ಯದ ಸೌಭಾಗ್ಯಾಶೀರ್ವಾದಗಳನ್ನು ಒಳಗೊಂಡ ಆ ಮಹಾ ಔತಣದ ಮೂರನೇ ಕರೆಯು ಈ ಸುವಾರ್ತಾಯುಗದ ಪರ್ಯಂತರ ಮುನ್ನಡೆಯುತ್ತಿದೆ, ಅಲ್ಲದೆ ನಾವು ಗ್ರಹಿಸಿರುವಂತೆ ಅದು ಬಹುತೇಕವಾಗಿ ಪೂರ್ಣಗೊಂಡಿರುವದು ಅಂದರೆ ಮೇಜಿನ ಬಳಿಯಲ್ಲಿರುವ ಬಹುತೇಕ ಎಲ್ಲಾ ಸ್ಥಾನಗಳಲ್ಲಿಯೂ ಅತಿಥಿಗಳನ್ನು ಒದಗಿಸಿ ಕುಳ್ಳಿರಿಸಲಾಗಿರುವದು; ಕೇವಲ ಕೆಲವೇ ಸ್ಥಾನಗಳು ಇನ್ನೂ ಖಾಲಿಯಿರುವದು ಅಲ್ಲದೆ ಈ ಸ್ಥಾನಗಳು ತುಂಬಲ್ಪಟ್ಟ ಕೂಡಲೇ ಆ ಮಹಾ ಔತಣವು ಆರಂಭವಾಗುವದು; ಮತ್ತು ನಾವು ನಿಜವಾಗಿಯೂ ನಮ್ಮ ಕರ್ತನ ಆ ಸಂತೋಷ ಸೌಭಾಗ್ಯಗಳಲ್ಲಿ ಸೇರುವೆವು; ಔತಣಕೂಟದಲ್ಲಿ ಸೇರುವ ಸೌಭಾಗ್ಯವನ್ನು ನಾವು ಹೊಂದಿರುವದು ಮಾತ್ರವಲ್ಲದೆ ಅದರಲ್ಲಿನ ಸಮೃದ್ಧವಾದ ಆಶೀರ್ವಾದಗಳನ್ನು ಭೂಲೋಕದ ಎಲ್ಲಾ ಕುಲಗಳಿಗೆ ಕೊಂಡೊಯ್ಯುವ ಭಾಗ್ಯವನ್ನೂ ಹೊಂದಿರುವೆವು.

ಮೊದಲನೇ ಕರೆಯುವಿಕೆಯಲ್ಲಿ ಯೆಹೂದ್ಯರಿಗೆ ಈ ಕರೆಯನ್ನು ಅಂಗೀಕರಿಸಿಕೊಳ್ಳಲು ಅಡ್ಡಿಪಡಿಸಿದ ಸಂಗತಿಗಳೇ ಮೂರನೇ ಕರೆಯನ್ನು ಕೇಳಿಸಿಕೊಂಡಿರುವ ಅನೇಕ ಅನ್ಯಜನರಿಗೂ ಸಹ ಬಹು ಮಟ್ಟಿಗೆ ಅಡ್ಡಿಪಡಿಸಿರುವವು. ಪೂರ್ಣ ವ್ಯಾಪಾರಸ್ಥರು ಐಶ್ವರ್ಯವುಳ್ಳವರು ಪ್ರಭಾವಿಗಳು ಮುಂತಾದ ಇವರೆಲ್ಲರಿಗೆ, ತಮ್ಮ ಈ ಎಲ್ಲಾ ಲೌಕಿಕ ಸಂಗತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅದೇ ಸಮಯದಲ್ಲಿ ಈ ಔತಣದ ವಿಷಯವಾದ ಕರ್ತನ ಕರೆಯನ್ನು ಅಂಗೀಕರಿಸಿಕೊಂಡವರಾಗಿ ಆತನಿಗೆ ತಮ್ಮ ಮನಸ್ಸು ಪ್ರತಿಭೆ ಶಕ್ತಿಸಾಮರ್ಥ್ಯಗಳೆಲ್ಲವನ್ನು ನೀಡಿ ಯೇಸುವಿನ ಹೆಜ್ಜೆಯ ಜಾಡನ್ನು ಅನುಸರಿಸುವದು ಅಸಾಧ್ಯವಾಗಿರುವದು. ಈ ಔತಣದ ಕರೆಯನ್ನು ಅಂಗೀಕರಿಸಿಕೊಳ್ಳುವದೆಂದರೆ ಎಲ್ಲಾ ಸಂಗತಿಯನ್ನೂ ಬಿಟ್ಟವರಾಗಿ ಇದರಲ್ಲಿ ಗಾಢವಾದ ಆಸಕ್ತಿಯುಳ್ಳವರಾಗಿರುವದೆಂಬ ಅರ್ಥಕೊಡುತ್ತದೆ. ಹೀಗಾಗಿ ಬೇರೆ ಎಲ್ಲಾ ಸಂಗತಿಗಳು ಅಂದರೆ ಮನೆ ಜಮೀನು, ತಂದೆ ತಾಯಿ, ಹೆಂಡತಿ ಮಕ್ಕಳು ಆ ರಾಜ್ಯದ ಮತ್ತು ಆ ಕರೆಯ ಸಂಬಂಧದ ಷರತ್ತುವಿಧಿಗಳ ವಿಷಯವಾಗಿ ಹೋಲಿಸಿದ್ದಲ್ಲಿ ಇವುಗಳು ಎರಡನೇ ಸ್ಥಾನವನ್ನು ಪಡೆದಿರುವವು. ಪರಿಣಾಮವಾಗಿ, ಯಾವದು ಇಸ್ರಾಯೇಲ್ಯರ ವಿಷಯದಲ್ಲಿ ನಿಜವಾಗಿತ್ತೋ ಅದು ಅನ್ಯಜನರ ವಿಷಯದಲ್ಲಿಯೂ ನಿಜವಾಗಿತ್ತು; ಹೇಗಂದರೆ, ಬಹುತೇಕವಾಗಿ ಪ್ರಾಪಂಚಿಕವಾದ ಆಶೀರ್ವಾದಗಳು ಅನುಕೂಲಗಳನ್ನು ಹೊಂದಿದ್ದವರಿಂದ ಆ ರಾಜ್ಯಕ್ಕಾಗಿರುವ ಕರೆಯು ಸಾಧಾರಣವಾಗಿ ನಿರಾಕರಿಸಲ್ಪಟ್ಟಿತ್ತು. ಧನಿಕರು, ಮನುಷ್ಯರಿಂದ ಗೌರವ ಪಡೆದವರು ಮತ್ತು ಸಾಮಾಜಿಕ ಸ್ಥಾನಮಾನ ಅಥವಾ ಪ್ರತಿಭೆ ಇಲ್ಲವೇ ಕೀರ್ತಿ ಅಥವಾ ಹಣ ಹೊಂದಿದವರು ಇವರಿಗೆ ಎಲ್ಲವನ್ನೂ ಬಿಟ್ಟು ಇಕ್ಕಟ್ಟಾದ ಮಾರ್ಗದಲ್ಲಿ ಯೇಸುವನ್ನು ಹಿಂಬಾಲಿಸುವದು ಕಷ್ಟಕರವಾಗಿ ತೋರುವದು; ಪರಿಣಾಮವಾಗಿ, ಸತ್ಯವೇದವು ಆಶ್ವಾಸನೆ ನೀಡಿ ಹೇಳಿರುವದೇನಂದರೆ, ಯೆಹೂದ್ಯರ ಕಾಲದ ಅಂತ್ಯದಲ್ಲಿ ಆಯಲ್ಪಟ್ಟವರು ಮುಖ್ಯವಾಗಿ ಬಡವರು ಮತ್ತು ದೀನರಾಗಿದ್ದುದು ಮಾತ್ರವಲ್ಲದೆ ಅನ್ಯಜನರ ವಿಷಯವಾಗಿಯೂ ಇದೇ ಸತ್ಯವಾಗಿತ್ತು. ಅಲ್ಲದೆ ಈ ದಿನದಲ್ಲೂ ಇದೇ ಸತ್ಯವಾಗಿರುವದು: "ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳು ಅನೇಕರಿಲ್ಲ, ಅಧಿಕಾರಿಗಳು ಅನೇಕರಿಲ್ಲ, ಕುಲೀನರು ಅನೇಕರಿಲ್ಲ." ಅವರು ಲೌಕಿಕ ವಿಷಯ-ದಲ್ಲಿ ಬಡವರಾಗಿದ್ದು ನಂಬಿಕೆಯ ವಿಷಯದಲ್ಲಿ ಐಶ್ವರ್ಯವಂತ-ರಾಗಿರುವರು. – 1 ಕೊರಿಂಥ 1:26; ಯಾಕೋಬ 2:5

ಇದು ಯಾವುದೇ ವಿಷಯದಲ್ಲಿ ಸಂಪತ್ತುಳ್ಳವರನ್ನು ನಿಷೇದಿಸುವದಿಲ್ಲ, ಆದರೆ ನಿಜವಾಗಿಯೂ ಇದು ಅವರೆಲ್ಲರಿಗೆ ಹೆಚ್ಚು ಅಧಿಕ ಸೌಭಾಗ್ಯಾವಕಾಶಗಳನ್ನು ನೀಡುವದು; ಯಾಕೆಂದರೆ

ಅವರು ಬಹು ವಿಶೇಷ ಪ್ರತಿಭೆ ಪಡೆದಿರುವರು; ಅವರು ಇಚ್ಛೆಸಿದಲ್ಲಿ ಅವರು ಇವುಗಳನ್ನು ತ್ಯಾಗಮಾಡಬಹುದು ಹಾಗು ಔತಣದ ವಿಷಯವಾಗಿಯೂ ಮತ್ತು ಅದರ ಕರೆಯ ವಿಷಯುವಾಗಿಯೂ ತಮಗೆ ಹೆಚ್ಚು ಪೂರ್ಣವಾಗಿ ಮನವರಿಕೆಯಾಗಿರುವದನ್ನು ಅವರು ಹೀಗೆ ತೋರ್ಪಡಿಸುವರು ಮತ್ತು ಔತಣಕ್ಕೆ ಕರೆನೀಡಿದವನಿಂದ ಇದಕ್ಕೆ ಸರಿಯಾಗಿ ಪ್ರಸಂಶಿಸಲ್ಪಡುವರು. ನಾವೆಲ್ಲರೂ, ಅಪೋಸ್ತಲನಾದ ಪೌಲನಂತೆ, ಆ ರಾಜ್ಯದಲ್ಲಿ ನಮ್ಮ ಕರ್ತನೊಡನೆ ಸಹಬಾಧ್ಯರಾಗುವ ಆ ಮಹಾ ಔತಣಕ್ಕೆ ನೀಡಲಾದಂಥ ಕರೆಗೆ ಸ್ಪಂದಿಸುವವರಾಗಿ, ನಮ್ಮ ಮುಂದಿರುವ ಓಟವನ್ನು ಸ್ಥಿರಚಿತ್ತದಿಂದ ಓಡುವ ಸಲುವಾಗಿ ನಮಗೆ ಹತ್ತಿಕೊಳ್ಳುವ ಭಾರವೆಲ್ಲವನ್ನು, ಅಡ್ಡಿಆತಂಕಗಳೆಲ್ಲವನ್ನು, ಎಡರುತೊಡರುಗಳೆಲ್ಲವನ್ನು, ನಮಗೆ ಅಮೂಲ್ಯವಾಗಿರುವಂಥ ಭೂಸಂಬಂಧದ ಸಂಗತಿಗಳನ್ನೆಲ್ಲಾ ಬದಿಗೆ ಇಡುವವರಾಗೋಣ. – ಇಬ್ರೀಯ 12:1–2; ರೋಮಾ 8:16–18; 12:1–2

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ಶಿಷ್ಯತನಕ್ಕೆ ತಗಲುವ ಕಷ್ಟನಷ್ಟಗಳನ್ನು ಲೆಕ್ಕಾಚಾರಹಾಕುವದು | -- | -- | 14:25–35 | -- |

## ಲೂಕ 14:25–35

ಬಹು ಜನರು ಗುಂಪುಗುಂಪಾಗಿ ಯೇಸುವಿನ ಸಂಗಡ ಹೋಗುತ್ತಾ ಇರಲು ಆತನು ತಿರುಗಿಕೊಂಡು ಅವರಿಗೆ ಹೇಳಿದ್ದೇನಂದರೆ–ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕತಂಗಿಯರು ಇವರನ್ನೂ ತನ್ನ ಪ್ರಾಣವನ್ನೂ ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು. ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು. ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು–ಅದಕ್ಕೆ ಎಷ್ಟು ಖರ್ಚು ಹಿಡಿದೀತು, ಅದನ್ನು ತೀರಿಸುವದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕಮಾಡುವದಿಲ್ಲವೆ? ಹೀಗೆ ಲೆಕ್ಕಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರು–ಈ ಮನುಷ್ಯನು ಕಟ್ಟಿಸುವದಕ್ಕಂತೂ ತೊಡಗಿದನು, ಕೆಲಸಪೂರೈಸಲಾರದೆ ಹೋದನು ಎಂದು ಅವನನ್ನು ಹಾಸ್ಯಮಾಡಾರು. ಇಲ್ಲವೆ ಯಾವ ಅರಸನಾದರೂ ಮತ್ತೊಬ್ಬ ಅರಸನ ಸಂಗಡ ಯುದ್ಧ ಮಾಡುವದಕ್ಕೆ ಹೋಗುವಾಗ ತನ್ನ ಮೇಲೆ ಇಪ್ಪತ್ತು ಸಾವಿರ ದಂಡು ತೆಗೆದುಕೊಂಡು ಬರುವವನನ್ನು ತಾನು ಹತ್ತು ಸಾವಿರ ದಂಡಿನಿಂದ ಎದುರಿಸುವದಕ್ಕೆ ಶಕ್ತನಾಗುವೆನೋ ಇಲ್ಲವೋ ಎಂದು ಕೂತುಕೊಂಡು ಆಲೋಚಿಸುವದಿಲ್ಲವೇ? ತಾನು ಶಕ್ತನಲ್ಲದಿದ್ದರೆ ಬರುವ ಅರಸನು ಇನ್ನೂ ದೂರದಲ್ಲಿರುವಾಗಲೇ ರಾಯಭಾರಿಗಳನ್ನು ಕಳುಹಿಸಿ ಸಂಧಾನಕ್ಕೆ ಒಪ್ಪಂದವನ್ನು ಕೇಳಿಕೊಳ್ಳುವನು. ಹಾಗೆಯೇ ನಿಮ್ಮಲ್ಲಿ ಯಾವನೇ ಆಗಲಿ ತನಗಿರುವದೆಲ್ಲವನ್ನೆಲ್ಲಾ ಬಿಟ್ಟುಬಿಡದೆ ಹೋದರೆ ಅವನು ನನ್ನ ಶಿಷ್ಯನಾಗಿರಲಾರನು.

ಉಪ್ಪಂತೂ ಒಳ್ಳೆಯ ಪದಾರ್ಥವೇ; ಉಪ್ಪು ಸಹ ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ರುಚಿಬಂದೀತು? ಅದು ಭೂಮಿಗಾದರೂ ತಿಪ್ಪೆಗಾದರೂ ಉಪಯೋಗವಲ್ಲ; ಅದನ್ನು ಹೊರಗೆ ಬಿಸಾಡುತ್ತಾರೆ. ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ ಅಂದನು.

*****

# ಶಿಷ್ಯತನಕ್ಕೆ ತಗಲುವ ಕಷ್ಟನಷ್ಟಗಳು

### ರೀಪ್ರಿಂಟ್ ಪುಟ 5425

## ಲೂಕ 14:25–35

**"ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು." – ಮತ್ತಾಯ 16:24**

ಆ ಮಹಾ ಬೋಧಕನ ಸೇವೆಯು ಮುಕ್ತಾಯದಲ್ಲಿತ್ತು. ವಿಶಾಲವಾದ ಗುಂಪು ಆತನನ್ನು ಹಿಂಬಾಲಿಸಿ ಹೋಗುತ್ತಿತ್ತು. ಧರ್ಮಶಾಸ್ತ್ರದ ನಿಯಮಾನುಸಾರವಾಗಿ ಅವರೆಲ್ಲರೂ ಪಸ್ಕಹಬ್ಬವನ್ನು ಆಚರಿಸಲು ಯೆರೂಸಲೇಮಿಗೆ ಏರಿ ಹೋಗುತ್ತಿದ್ದರು. ತಾನು ಅದರಲ್ಲಿ ನಿಜರೂಪದ ಪಸ್ಕದ ಕುರಿಯಾಗಿ ಸಾಯಲಿರುವೆನೆಂದು ಯೇಸುವಿಗೆ ಮುಂದಾಗಿ ತಿಳಿದಿತ್ತು. ಪ್ರಯಾಣದಲ್ಲಿ ಆಗಾಗ್ಗೆ ಆತನು ಹಿಂದೆ ತಿರುಗಿಕೊಂಡು ಆ ಗುಂಪಿನ ಕೆಲವರನ್ನು ಸಂಬೋಧಿಸಿ

ಹೇಳುವನು. ಈ ದಿನದ ಪಾಠವು ನಮಗೆ ಆತನ ಕೆಲವು ಬೋಧನೆಗಳ ವಿಷಯವಾಗಿ ತಿಳಿಸಿಕೊಡುವದು. ತಮ್ಮನ್ನು ಶ್ರೇಷ್ಠ ಬೋಧಕರೆಂದು ಎಣಿಸಿ ಅವರ ಉಪದೇಶಗಳಿಂದ ಕಲಿತುಕೊಂಡ–ವರಾಗಿ ಪ್ರಯೋಜನ ಪಡೆಯ ಬಯಸುವವವರನ್ನು ಶಿಷ್ಯರನ್ನಾಗಿ ಅಥವಾ ಅನುಯಾಯಿಗಳನ್ನಾಗಿ ಅಂಗೀಕರಿಸಿ–ಕೊಳ್ಳುವದು ಆ ದಿನಗಳಲ್ಲಿನ ಬೋಧಕರುಗಳಲ್ಲಿ ಒಂದು ವಾಡಿಕೆಯಾಗಿತ್ತು. ಈ ದಿನದಲ್ಲಿಯೂ ಕ್ರೈಸ್ತರು ಯೇಸುವಿನ ಶಿಷ್ಯರೆಂದು ಅಥವಾ ಹಿಂಬಾಲಕರೆಂದು ಹೇಳಿಕೊಂಡು ಆತನ ಮಾತುಗಳಿಗೆ ಲಕ್ಷ್ಯಕೊಡುವದಾಗಿಯೂ ಹಾಗು ತನ್ನ ನಂಬಿಗಸ್ತರಾದ ಹಿಂಬಾಲಕರಿಗೆ ಆತನು ವಾಗ್ದಾನಮಾಡಿರುವ ಆಶೀರ್ವಾದಗಳನ್ನು ಹೊಂದ ಬಯಸುವವರಾಗಿಯೂ ಇರುವೆವೆಂದು ಹೇಳಿಕೊಳ್ಳುವರು.

ಶಿಷ್ಯರಾಗುವದಕ್ಕೆ ಯೇಸುವು ವಿಧಿಸಿರುವ ಷರತ್ತುಗಳು ಆತನಿಗೆ ಬಾಯಂತಿರುವದಾಗಿ ಹೇಳಿಕೊಳ್ಳುವ ಆತನ ಕೆಲವು ಸೇವಕರುಗಳು ಘೋಷಿಸಿ ಹೇಳುತ್ತಿರುವದಕ್ಕಿಂತಲೂ ಬಹು ಭಿನ್ನವಾಗಿರುವದೆಂಬುದನ್ನು ಇಲ್ಲಿ ಗಮನಿಸಲಾಗುವದು. ವ್ಯಕ್ತಿಗಳು ಸಭೆಯಲ್ಲಿ ಎದ್ದು ನಿಂತು ದೇವ ಜನರ ಪ್ರಾರ್ಥನೆಗಳನ್ನು ತಾವು ಬಯಸುತ್ತಿರುವದಾಗಿ ಪ್ರಕಟಿಸಿದ್ದಲ್ಲಿ ಅದು ಶಿಷ್ಯರಾಗುವದಕ್ಕೆ ಸಾಕಾಗುವ ಸೂಚನೆಯಾಗಿರುವದೆಂದು ಕೆಲವು ಸಾರಿ ಅವರು ಘೋಷಿಸುತ್ತಿರುವರು. ಅಂಥವರನ್ನು ಪರಿವರ್ತನೆ ಹೊಂದಿದವರೆಂದು ಎಣಿಸಲಾಗುವದು. ಇಂಥ ಒಂದು ಕ್ರಮವನ್ನು ತೆಗೆದುಕೊಳ್ಳಲೂ ಸಹ ಅವರನ್ನು ಮನವೊಲಿಸುವ ಅಗತ್ಯವಿರುವದು. ಮನವೊಲಿಕೆಯ ವಿಧಾನಗಳು ಕೆಲವು ಸಾರಿ ವ್ಯವಹಾರಿಕಸ್ವರೂಪವುಳ್ಳ ಅಂದರೆ ಇದು ವ್ಯಾಪಾರಸ್ಥರಿಗೆ ವ್ಯಾಪಾರದಲ್ಲಿ ಉತ್ತಮ ಭವಿಷ್ಯಉಂಟಾಗುವದೆಂದೂ, ಗುಮಾಸ್ತರಿಗೆ ತಮ್ಮ ಉದ್ಯೋಗದಾತರಿಂದ ಹೆಚ್ಚು ಅನುಗ್ರಹಪಡ–ಕೊಳ್ಳುವರೆಂದೂ, ಗಣ್ಯರ ಸಮಾಜದಲ್ಲಿ ಸೇರಿದವರಾಗುವ ಇಲ್ಲವೇ ರಾಜಕೀಯಕ್ಕೆ ಸೇರಿ ಆದ್ಯತೆಪಡೆಯುವ ಭವಿಷ್ಯವಿರುವದಾಗಿಯೂ ಪ್ರೇರೇಪಿಸುವಂಥದ್ದಾಗಿರುವದು.

ಇವುಗಳಿಗೆ ಪ್ರತಿಯಾಗಿ ಈ ಪಾಠದಲ್ಲಿ ತಿಳಿಸಿರುವ ಯೇಸುವಿನ ಮಾತುಗಳನ್ನು ಗಮನಿಸಿದಾಗ–ಹೆಸರಿನ ಕ್ರೈಸ್ತರಲ್ಲಿ ದೊಡ್ಡಪಾಲು ಜನರ ಬಗ್ಗೆ ಹೇಳುವದಾದರೆ, ತಾವು ಎಂದೂ ಹೇಳಿಕೊಳ್ಳ ಬಯಸದ ಸಂಗತಿಗಳನ್ನು ತಾವು ಹೇಳಿಕೊಳ್ಳಲು ಮನವೊಲಿಸಲ್ಪಟ್ಟಿರುವರೆಂಬ ಸಂಗತಿಯು ನಮ್ಮ ಗ್ರಹಿಕೆಗೆ ಬರುತ್ತದೆ. ಒಡೆಯನ ಶಿಷ್ಯರಾಗುವದಕ್ಕಿರುವ ಷರತ್ತುಗಳಾನುಸಾರ ಎಂದೂ ಕ್ರೈಸ್ತರಲ್ಲದ ಹಾಗೂ ಆತನ ಮಾತುಗಳನ್ನು ಕೇಳಲೊಲ್ಲದ ಅನೇಕರು ಕ್ರೈಸ್ತತ್ವವನ್ನು ಅನುಸರಿಸುವದಾಗಿ ಹೇಳಿಕೊಳ್ಳುವವರಾಗುವಂತೆ ಮರಳುಗೊಳಿಸಲಾಗಿರುವದು.

"ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು. ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು." ಇಂಥಾ ಒಂದು ಸರಳವಾದ ಷರತ್ತುವಿಧಿಗಳನ್ನು ಅಪಾರ್ಥಮಾಡಿಕೊಳ್ಳಲು ನಮಗೆ ಯಾವ ನೆಪಗಳೂ ಇರಲಾರವು. ಯಾವಾಗಲಾದರೂ, ಕೇವಲ ತನ್ನ ಶಿಷ್ಯರು ಮಾತ್ರ ನಿತ್ಯಜೀವವನ್ನು ಪಡೆಯಲು ಸಾಧ್ಯವೆಂದು ಈ ಒಡೆಯನು ಹೇಳಿರಲಿಲ್ಲ. ಲೋಕವೆಲ್ಲಾ ದೇವರಿಂದ ದೂರವಾಗಿ ನಿತ್ಯಜೀವದ ಹಕ್ಕನ್ನು ಕಳಕೊಂಡವರಾಗಿರುವರೆಂಬದು ಸಾಮಾನ್ಯವಾಗಿ ಆತನ ಬೋಧನೆಯಾಗಿತ್ತು. ಅನೀತಿವಂತರೆಲ್ಲರೂ ದೇವಾನುಗ್ರಹಕ್ಕೆ ಹಿಂದಿರುಗಿ ಬರುವ ಅವಕಾಶವನ್ನು ಪಡೆಯಲು ಸಲುವಾಗಿ ತಾನು "ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ" ಪ್ರಾಣಕೊಡುವದಕ್ಕಾಗಿ ಬಂದಿದ್ದನು. ತನ್ನ ಹಿಂಬಾಲಕರು ಮಾತ್ರವೇ ಹೊರತಾಗಿ ಯಾರೂ ಮುಂದಿನ ಜೀವಿತದ ಅವಕಾಶವನ್ನು ಪಡೆಯುವದಿಲ್ಲವೆಂದು ಆತನು ಹೇಳಿರಲಿಲ್ಲ. ಹೀಗೆ ಪ್ರಕಟಿಸಿ ಹೇಳುವಂಥವರು ಆ ವಾಕ್ಯಕ್ಕೆ ಹೆಚ್ಚಾದುದನ್ನು ಕೂಡಿಸುವವರಾಗಿದ್ದು ಹೀಗೆ ತಾವು ಕಡೆಯಲ್ಲಿ (ತಾವು ಹೇಳಿದ್ದನ್ನೇ) ವಿರೋಧಿಸುವಂಥವರಾಗಲು ಅನುವು ಮಾಡಿಕೊಳ್ಳುತ್ತಿರುವರು.

ಯೇಸುವು ಬೋಧಿಸಿದ್ದೇನಂದರೆ, ತಾನು ಕ್ಲುಪ್ತ ಕಾಲದಲ್ಲಿ "ಲೋಕಕ್ಕೆ ಬರುವಂಥ ಪ್ರತಿ ಮನುಷ್ಯನಿಗೂ ಬೆಳಕು ಕೊಡುವ ನಿಜವಾದ ಬೆಳಕಾಗಿರುವನು" ಎಂಬುದು. ಯೇಸುವು ಬರುವದಕ್ಕೆ 4,000 ವರುಷದ ಮೊದಲಿನಿಂದಲೂ ಲೋಕವು ಅಸ್ತಿತ್ವದಲ್ಲಿತ್ತು. ಅಲ್ಲದೆ ಆತನು ಬರುವದಕ್ಕೆ ಮೊದಲು ಆತನ ವಿಷಯವಾಗಿ ತಿಳಿಯುವ ಮತ್ತು ಆತನ ಶಿಷ್ಯರಾಗುವ ಅವಕಾಶವು ಯಾರಿಗೂ ದೊರೆತಿರಲಿಲ್ಲವೆಂಬುದನ್ನು ಯಾರೂ ವಿವಾದಿಸಲಾರರು. ಆದಾಗ್ಯೂ ಅವರೂ ಸಹಿತವಾಗಿ ಲೋಕದಲ್ಲಿ ನಂತರ ಹುಟ್ಟಿದವರೆಲ್ಲರನ್ನೂ ಆಶೀರ್ವದಿಸುವದಕ್ಕಾಗಿ ಆತನು ಮರಣಹೊಂದಿದ್ದನು. ಲೋಕಕ್ಕಾಗುವ ಈ ಆಶೀರ್ವಾದವು ತನ್ನ ರಾಜ್ಯದಲ್ಲಿ ನೆರವೇರುವದೆಂದು ಆತನು ಸಾರಿ ಹೇಳಿದ್ದನು; ತನ್ನ ರಾಜ್ಯವು ಈ ಲೋಕ ಅಥವಾ ಕಾಲ ಇಲ್ಲವೇ ಯುಗಕ್ಕೆ ಸಂಬಂಧಿಸಿದ್ದಲ್ಲವೆಂದು ಆದರೆ ಅದು ಮುಂದಿನ ಕಾಲಕ್ಕೆ ಸಂಬಂಧಿಸಿದುದೆಂದು ಅವರಿಗೆ ಸರಳವಾಗಿ ಹೇಳಿದ್ದನು. ಆ ಸಮಯದಲ್ಲಿ ಆತನು ಕೇವಲ ಶಿಷ್ಯರನ್ನು ಆಹ್ವಾನಿಸುತ್ತಿದ್ದನು, ಲೋಕವನ್ನು ಆಹ್ವಾನಿಸಲು ಪ್ರಯತ್ನಿಸಿರಲಿಲ್ಲ.

ಯೇಸುವಿನೊಡನೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗಲು ಶಿಷ್ಯರಿಗೆ ಕರೆನೀಡಲಾಗಿತ್ತು; ಹೀಗೆ ಅವರು ಆತನ ಸಿಂಹಾಸನದಲ್ಲಿ ಆತನೊಡನೆ ಕುಳಿತುಕೊಂಡವರಾಗಿ ಮಾನವರನ್ನು ಮೇಲಕ್ಕೆತ್ತುವ ಮಹಾ ಕಾರ್ಯದಲ್ಲಿ ಅಂದರೆ ಆದಾಮನಲ್ಲಿ ಕಳೆದುಹೋದ್ದಾಗಿ ಕಲ್ವಾರಿಯಲ್ಲಿ ವಿಮೋಚಿಸಲ್ಪಟ್ಟಂಥದ್ದನ್ನು ಹಿಂದಿರುಗಿಸಿ (ಲೋಕವನ್ನು) ಪುನರುದ್ಧರಿಸುವ ಕಾರ್ಯದಲ್ಲಿ ಆತನೊಂದಿಗೆ ಭಾಗಿಗಳಾಗಲು ಅವರಿಗೆ ಕರೆನೀಡಲಾಗಿತ್ತು. ಅವರು ಬಹು ಸಂಕಟಗಳನ್ನು ತಾಳಿ ಆ (ದೇವರ) ರಾಜ್ಯದ ವರ್ಗಕ್ಕೆ ಸೇರಶಕ್ತರಾಗುವರೆಂದೂ; ಆ ಸಂಕಟಗಳು ಅವರ ನೀತಿಯನ್ನು ದೇವರ ಪರವಾದ ಅವರ ನಿಷ್ಠೆಯನ್ನು ಪ್ರಮಾಣೀಕರಿಸುವ–ದೆಂಬುದನ್ನು; ಅಲ್ಲದೆ ದೇವರು ಉದ್ದೇಶಪೂರ್ವಕವಾಗಿಯೇ ಕೆಲವರು ಮಾತ್ರವೇ ಅಂದರೆ ಮನುಷ್ಯರಲ್ಲಿ ತನ್ನ ದೃಷ್ಟಿಗೆ ಬಹು

ಉತ್ಕೃಷ್ಟವಾಗಿರುವವರು ಮಾತ್ರವೇ ಅದನ್ನು ಕಂಡುಕೊಳ್ಳು–ವಂತಾಗಲು ಅದನ್ನು ಬಹು ಇಕ್ಕಟ್ಟನ್ನಾಗಿ ಮಾಡಿರುವನೆಂದೂ, ಹೀಗಾಗಿ ಕೆಲವೇ ಕೆಲವರು ಮಾತ್ರ ಆ ಮಾರ್ಗದಲ್ಲಿ ನಡೆದು ಅಂತ್ಯದಲ್ಲಿ ದೊರಕುವ ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದುವಂತಾಗುವದೆಂದು ಅವರಿಗೆ ಸರಳವಾಗಿ ಹೇಳಿದ್ದನು.

ಈ ದೃಷ್ಯವನ್ನು ಸ್ಪಷ್ಟವಾಗಿ ನಮ್ಮ ಮನೋನೇತ್ರಗಳ ಎದುರಿನಲ್ಲಿ ಇಟ್ಟುಕೊಳ್ಳುವದರಿಂದ ಶಿಷ್ಯತನಕ್ಕಿರುವ ಕಠಿಣ ವಿಧಿಗಳು ಸಮರ್ಥನೀಯವಾಗುತ್ತದೆ. ಇಂಥಾ ಷರತ್ತುಗಳನ್ನು ಅನುಸರಿಸಲು ಇಚ್ಛಿಸುವವರಾಗಿ ದೇವರ ಪರವಾಗಿರುವ ತಮ್ಮ ಪ್ರೀತಿನಿಷ್ಠೆಗಳನ್ನು ಈ ಬಗೆಯಲ್ಲಿ ತೋರ್ಪಡಿಸುವವರಿಗೆ ಮಾತ್ರ ಆ ರಾಜ್ಯದಲ್ಲಿ ಸೇರುವ ವರ್ಗದವರಿಗೆ, ಅದು ಪೂರ್ಣಗೊಂಡ ಕೂಡಲೇ, ವಿಮೋಚಕನೊಂದಿಗೆ ನೀಡಲಾಗುವ ಆ ಮಹಾ ಅಧಿಕಾರ ಪ್ರಭಾವ ಮಾನವನ್ನು ಸೂಕ್ತವಾಗಿ ಅನುಗ್ರಹಿಸ–ಲಾಗುವದು. ನಮ್ಮನ್ನು ಆಳೆದುಕೊಳ್ಳುವ ಸಂದರ್ಭದಲ್ಲಿ ಅಂದರೆ ನಮ್ಮ ಶರೀರಭಾವವನ್ನಲ್ಲ ಆದರೆ ನಮ್ಮಲ್ಲಿರುವ ಮನೋಭಾವ ಉದ್ದೇಶ ಆಕಾಂಕ್ಷೆಗಳನ್ನು ಅಳೆಯುವ ಸಂದರ್ಭದಲ್ಲಿ ಈ ಮಾತುಗಳನ್ನು ನಾವು ಜಾಗರೂಕತೆಯಿಂದ ಪರಿಶೀಲಿಸುವವರಾಗಿ ನಮ್ಮನ್ನು ಅಳೆದುಕೊಳ್ಳುವಂಥವರಾಗೋಣ.

ನಮ್ಮ ರಕ್ಷಕನ ಈ ಹೇಳಿಕೆಯ ವಿಷಯವಾಗಿ ಹೆನ್ರಿ ವಾರ್ಡ್ ಬೀಚರ್ ಅವರು ಹೀಗೆ ವಿಹಿತವಾಗಿ ನುಡಿದಿದ್ದರು: "ಮತ್ತೊಬ್ಬರನ್ನು ಹಿಂಬಾಲಿಸಲು ಮನಸ್ಸುಳ್ಳವರೂ ಅದಕ್ಕೆ ಆಕಾಂಕ್ಷೆಯುಳ್ಳವರೂ ಆಗಿರುವವರ ವಿಷಯುವಾಗಿ ಮಾಡಿರುವಂಥ ಉಪನ್ಯಾಸವು ಹಿಂದೆಂದೂ ಮಾಡಿರಲಿಲ್ಲ ಮತ್ತು ಅಲ್ಲಿಂದ ಈಚೆಗೂ ಮಾಡಿಲ್ಲವೆಂದು ನಾನು ಶಂಖಿಸುತ್ತೇನೆ." ಅಲ್ಲದೆ ಬಹುಶಃ ಇದಕ್ಕೆ ಸಮನಾಗಿರುವ ಹೇಳಿಕೆಯು ಮತ್ತಾಯನ ಸುವಾರ್ತೆಯಲ್ಲಿ ಕಂಡುಬರುತ್ತದೆ. (10:37) "ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ತನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ;" ಹಗೆ ಎಂಬ ಶಬ್ದವು ಪ್ರೀತಿಗೆ ವಿರುದ್ಧವಾಗಿ ಬಳಸಲಾಗಿರುವದೆಂಬದು ಸ್ಪಷ್ಟ. ಹೀಗಿರುವಲ್ಲಿ ಕ್ರಿಸ್ತನ ಶಿಷ್ಯರಾಗುವದೆಂದರೆ ನಾವು ಕರ್ತನನ್ನು ಮತ್ತು ಆತನು ಹಿಡಿದಿರುವ ತತ್ವಗಳನ್ನು ಉತ್ಕೃಷ್ಟವಾಗಿ ಪ್ರೀತಿಸುವದು ಎಂಬ ಅರ್ಥವನ್ನು ಕೊಡುವದು; ಹೀಗಾಗಿ ಇತರರಿಗಾಗಿರುವ ಪ್ರೀತಿಯನ್ನು ಇದಕ್ಕೆ ಹೋಲಿಸಿದಾಗ ಅದು ಹಗೆಮಾಡುವದು ಎಂದಾಗುತ್ತದೆ.

ಮನುಷ್ಯರ ಸಂಬಂಧವಾಗಿ ಇದನ್ನು ಹೇಳುವದಾದರೆ, ಈ ಪ್ರಸ್ತಾವನೆಯ ಆರಂಭದಿದಲೂ ಇದು ನಮ್ಮ ಕರ್ತನನ್ನು ಪ್ರೀತಿಸುವದರ ಮತ್ತು ಆತನ ಚಿತ್ತಕ್ಕೆ ವಿಧೇಯರಾಗುವದಕ್ಕೆ ವಿರುದ್ಧವಾಗಿರುವ ಇತರ ಎಲ್ಲಾ ಬಗೆಯ ಸಂಗತಿಗಳನ್ನು ಪ್ರೀತಿಸುವ ಇಚ್ಛೆ ಉದ್ದೇಶಗಳನ್ನು ತೆಗೆದುಹಾಕುವದನ್ನು ಸೂಚಿಸುವದು. ಭೂಸಂಬಂಧವಾದ ವಿಷಯಗಳ ಮೇಲಿನ ನಮ್ಮ ಪ್ರೀತಿಯು ಇದಕ್ಕೆ ಹೋಲಿಸಿದ್ದಲ್ಲಿ ಏನೂ ಅಲ್ಲವೆಂದು ಎಣಿಸಲ್ಪಡಬೇಕು. ನಮ್ಮ ಕರ್ತನ ಆಜ್ಞಾನುಸಾರವಾಗಿ ಭೂಸಂಬಂಧವಾದ ನಮ್ಮ ನಿರೀಕ್ಷೆ ಗುರಿ ಧ್ಯೇಯಗಳನ್ನು ತ್ಯಜಿಸುವದು ಮತ್ತು ನಮ್ಮ ಪ್ರಾಣವನ್ನು ಸ್ವಇಚ್ಛೆಯಿಂದ ಸಂತೋಷವಾಗಿ ಕೊಡಲು ಸಿದ್ಧರಾಗಿರಬೇಕು. ಈ ವಿಧವಾದ ಶ್ರದ್ಧಾಭಕ್ತಿಯನ್ನು ತೋರ್ಪಡಿಸುವಂಥವರ ಬಗ್ಗೆ ಯಾವ ವಿಷಯವಾಗಿಯೂ ಭರವಸವಿಡಲು ಸಾಧ್ಯ. ಇವರ ಬಗ್ಗೆ ಕರ್ತನು ಪ್ರವಾದನಾ ರೂಪದಲ್ಲಿ ಹೀಗೆ ಹೇಳಿರುವನು: "ನಾನು ಕಾರ್ಯಸಾಧಿಸುವ (ಕಾರ್ಯಸಾಧಿಸುವದಕ್ಕೆ ಬರುವ) ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು." – ಮಲಾಕಿ 3:17

ಯೇಸುವು ಇದೇ ಗುಣವುಳ್ಳವನಾಗಿದ್ದನೆಂದೂ ಮತ್ತು ತಂದೆ ಚಿತ್ತವನ್ನು ಇತರ ಎಲ್ಲಾದಕ್ಕಿಂತಲೂ ಹೆಚ್ಚಾಗಿ ಪರಿಗಣಿಸಿ–ದ್ದನೆಂಬದೂ ಆ ರಾಜ್ಯದಲ್ಲಿ ಆತನ ಸಹಬಾಧ್ಯರಲ್ಲಿ ಇದೇ ಮನಸ್ಸೂ ಇದೇ ಭಾವವು ಇರುವದೆಂಬದಕ್ಕೆ ಒಂದು ಭರವಸೆಯಾಗಿರುವದು. ಆ ರಾಜ್ಯವು ಸ್ವಾರ್ಥಪ್ರೇರಿತವಾದುದ್ದಲ್ಲ ಆದರೆ ಅದಕ್ಕೆ ತದ್ವಿರುದ್ಧವಾಗಿರುವದೆಂದು ಆತನು ಆಶ್ವಾಸನೆ ನೀಡಿರುವನು. ಆ ರಾಜ್ಯದ ಪ್ರಭುಗಳು ಅಧಿಪತಿಗಳು ಹಾಗು ನ್ಯಾಯಾಧಿಪತಿಗಳು ಅಧಿಕಾರಕ್ಕೆ ಮಾರುಹೋಗದಂಥವರು ಮಾತ್ರವಲ್ಲದೆ ಭ್ರಷ್ಟರಾಗದವರೂ ಆಗಿದ್ದು, ಇಂಥವುಗಳನ್ನು ಎಂದೂ ಸಹಿಸಲಾಗದವರೂ ಆಗಿರುವರು. ಅವರಲ್ಲಿ ದೈವಿಕ ಗುಣಮಟ್ಟಗಳು ಸಂಪೂರ್ಣವಾಗಿ ಪ್ರಥಮ ಸ್ಥಾನಪಡೆದಿರುವದು.

ಇಲ್ಲಿ ವಿವರಿಸಲಾದ ಕರ್ತನ ಕಡೆಗಿರುವ ಶ್ರದ್ಧಾಭಕ್ತಿಯು ಯಾವುದೇ ಕಾಲದಲ್ಲಿಯಾದರೂ ಅಗತ್ಯವಾಗಿ ಅದು ಹಲವು ಬಗೆಯ ಭೂಸಂಬಂಧಗಳಿಂದ ಪ್ರತ್ಯೇಕಿಸಿಕೊಳ್ಳುವದೆಂಬ ಅರ್ಥಕೊಡುವದು. ಅಂದರೆ ಯೇಸುವಿನ ಹಿಂಬಾಲಕರು ಒಂದು ವಿಶಿಷ್ಟವಾದ ಜನರೆಂದು ಭಾವಿಸಲಾಗುವದೆಂಬ ಅರ್ಥ ಕೊಡುವದು, ಮತ್ತು ಅವರ ನಡೆಯು ವಿಚಿತ್ರವೂ ಅಸಹಜವೂ ಹುಚ್ಚುತನವೂ ಆಗಿರುವದೆಂದು ಅನೇಕರು ಅಭಿಪ್ರಾಯ ಪಡುವರು. ಆದುದರಿಂದ ಭಕ್ತನಾದ ಪೌಲನು ಹೇಳಿರುವಂತೆ ದಿನ ನಿತ್ಯವೂ ನಾವು ಕ್ರಿಸ್ತನ ನಿಮಿತ್ತವಾಗಿ ಹುಚ್ಚರಾಗಿದ್ದೇವೆಂದು ಎಣಿಸಲ್ಪಡುವೆವು ಕಾರಣ ನಾವು ಮಾನುಷ್ಯಜ್ಞಾನಕ್ಕಿಂತಲೂ ಮತ್ತು ಮನುಷ್ಯರ ಮೇಲಿನ ಪ್ರೀತಿಗಿಂತಲೂ ದೇವಜ್ಞಾನದ ಮತ್ತು ದೇವರ ಪ್ರೀತಿಯ ವಿಷಯವಾಗಿ ಆಧ್ಯತೆನೀಡಿ ಅವುಗಳನ್ನು ಸಾರುವವರಾಗಿದ್ದೇವೆ. ಇಂಥವರ ವಿಷಯವಾಗಿ ಭಕ್ತನಾದ ಯೋಹಾನು ಹೀಗೆ ಬರೆದು ತಿಳಿಸಿರುವನು: "ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ." ಅಂದರೆ ಬಹಿಷ್ಕರಿಸಲ್ಪಟ್ಟವರೂ ಅಪಾರ್ಥಮಾಡಿಕೊಳ್ಳಲ್ಪಟ್ಟರೂ; ಖಂಡಿಸಲ್ಪಟ್ಟವರೂ ನಿಂದಿಸಲ್ಪಟ್ಟವರೂ ಆಗಿರುವರೆಂಬದು. ಕೇವಲ ಇಂಥಾ ಅನುಭವಗಳನ್ನು ಸಹಿಸಿಕೊಂಡು ನಿಲ್ಲಲು ಸಾಧ್ಯವಿರುವವರಿಗೆ ಮಾತ್ರ ಯೇಸುವು ಸೂಚಿಸಿರುವ ಜಯಮಾಲೆಯನ್ನು ಪಡಕೊಳ್ಳಲು ಸಾಧ್ಯವೆಂವೆಂಬುದನ್ನು ಹೀಗೆ ಹೇಳಿರುವದು, ಯಾವನು ಜಯಹೊಂದುವನೋ ಅವನಿಗೆ ನಾನು ಜೀವವೆಂಬ ಜಯಮಾಲೆಯನ್ನು ಕೊಡುವೆನು ಮತ್ತು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು.

ಈ ವಿಷಯಗಳಿಗೆ ಯಾರು ಸಮರ್ಥರು? ಎಂದು

ಅಪೋಸ್ತಲನು ಕೇಳುತ್ತಾ ಇದಕ್ಕೆ ಉತ್ತರವನ್ನೂ ಆತನು ಒದಗಿಸಿರುವನು: "ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು;" ಹಾಗೂ ಈ ಮುಂದಿನ ವಾಗ್ದಾನದಲ್ಲಿಯೂ ಉತ್ತರವನ್ನು ಒದಗಿಸಿರುವನು, "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ.." ಅಲ್ಲದೆ "ನಾನು ನಿನ್ನನ್ನು ಎಂದಿಗೂ ತೊರೆಯುವದಿಲ್ಲ, ಎಂದಿಗೂ ಕೈಬಿಡುವದಿಲ್ಲ." ಎಂದು ಮತ್ತೆ (ಉತ್ತರವನ್ನು ಸೂಚಿಸಿ) ಹೇಳಿರುವನು.

## ಶಿಲುಬೆ ಹೊತ್ತುಕೊಳ್ಳುವದೆಂಬುದರ ವ್ಯಾಖ್ಯಾನ

ಷರತ್ತುವಿಧಿಗಳ ತೀವ್ರತೆಯನ್ನು ಹೆಚ್ಚಿಸುವವನಾಗಿ ಯೇಸುವು ಪ್ರಕಟಿಸಿ ಹೇಳಿದ್ದೇನಂದರೆ: "ಯಾವನಾದರೂ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬಂದ ಹೊರತು ಅವನು ನನ್ನ ಶಿಷ್ಯನಾಗಿರಲಾರನು." ನಾವು ಧೀರೋದ್ದೇಶ–ವುಳ್ಳವರಾಗಿ ಯೇಸುವನ್ನು ಧೈರ್ಯವಾಗಿ ಒಪ್ಪಿಕೊಂಡು ಧೀರತೆಯಿಂದ ಶಿಷ್ಯವೃತ್ತಿಯನ್ನು ಪ್ರಾರಂಭಿಸುವದಷ್ಟೇ ಸಾಕಾಗುವದಿಲ್ಲ. ನಾವು ನಂಬಿಗಸ್ತರಾಗಿ ಯೇಸುವಿನ ಪಕ್ಷವನ್ನು ಹಿಡಿದ ನಂತರ ಅದನ್ನು ನಾವು ಪ್ರಮಾಣೀಕರಿಸಿ ತೋರಿಸುವಂಥವರಾಗಬೇಕು. ಆರಂಭದಲ್ಲಿ ಕೇವಲ ಅಲ್ಪ ಉತ್ಸಾಹವುಳ್ಳಂಥವರು ಮಾತ್ರವಲ್ಲದೆ ತಾವು ಯೋಗ್ಯರೆಂಬುದನ್ನು ಯಾರು ತಮ್ಮ ನಂಬಿಗಸ್ತಿಕೆಯ ಮೂಲಕವಾಗಿ ತೋರ್ಪಡಿಸು–ವರೋ ಅವರು ಯೋಗ್ಯರೆಂದು ಎಣಿಸಲ್ಪಡುವರು. ಹಾಗು ಅವರು ಅಂತಿಮವಾಗಿ ಕರ್ತನಿಂದ ಅಂಗೀಕರಿಸಲ್ಪಡುವರು. ಶಿಲುಬೆ ಹೊರುವದು ಅನುದಿನದ ಸಂಗತಿಯಾಗಿರಬೇಕು. ದೇವರ ವಾಕ್ಯದಲ್ಲಿ ನಮಗಾಗಿ ವಿಧಿಸಲ್ಪಟ್ಟಿರುವ ದೇವರ ಚಿತ್ತವನ್ನು ಪ್ರತಿರೋಧಿಸುವಸಲುವಾಗಿರುವ ಲೋಕ ಶರೀರ ಮತ್ತು ಸೈತಾನನ ಮೂಲಕವಾಗಿ ಉಂಟಾಗುವ ವಿರೋಧಗಳು ನಮ್ಮ ಶಿಲುಬೆಯಾಗಿರುವದು. ನಮ್ಮ ಒಡೆಯನು ವ್ಯಕ್ತಪಡಿಸಿರುವಂತೆ, "ನನ್ನ ಚಿತ್ತವಲ್ಲ, ನಿನ್ನ ಚಿತ್ತದಂತೆಯೇ ಆಗಲಿ." ಎಂಬುದೇ ಕೇವಲ ಸೂಕ್ತ ಮನೋಭಾವವಾಗಿರುವದು.

ಅಸ್ತಿವಾರವನ್ನು ಹಾಕಿ ಒಂದು ಬುರುಜನ್ನು ಕಟ್ಟಿಸತೊಡ–ಗಿದನಾದರೂ ನಂತರದಲ್ಲಿ ಅದನ್ನು ಪೂರ್ಣಗೊಳಿಸಲಾಗದೆ ತನ್ನ ಪರಿಶ್ರಮವನ್ನು ವ್ಯರ್ಥಮಾಡಿಕೊಂಡು ತನ್ನನ್ನು ಹಾಸ್ಯಕ್ಕೆ ಗುರಿಮಾಡಿಕೊಂಡ ಬುದ್ಧಿಯಿಲ್ಲದ ಮನುಷ್ಯನನ್ನು ಕುರಿತಾದ ಒಂದು ಸಾಮ್ಯವನ್ನು ನಮ್ಮ ಕರ್ತನು ಪೂರ್ವಭಾವಿಯಾಗಿ (ಸಾಧಕಬಾಧಕಗಳ) ವಿವೇಚನೆಮಾಡದೆ ಶಿಷ್ಯತನವನ್ನು ಅಂಗೀಕರಿಸಿಕೊಳ್ಳುವಂಥವರೆಲ್ಲರಿಗೆ ಒಂದು ಬುದ್ಧಿಪಾಠವಾಗಿ ಹೇಳಿರುವನು. ಸಾಕಷ್ಟು ಸಿದ್ಧತೆಯಿಲ್ಲದೆ ಯುದ್ಧಕ್ಕೆ ಹೋದ ಪರಿಣಾಮವಾಗಿ ನಿರ್ನಾಮಗೊಂಡಂಥದ್ದು ಮತ್ತೊಂದು ನಿದರ್ಶನವಾಗಿತ್ತು. ಕ್ರಿಸ್ತನ ಹಿಂಬಾಲಕರೆಲ್ಲರೂ ಸದ್ಗುಣಗಳನ್ನು ಬೆಳಸಿಕೊಂಡವರಾಗಿ "ಶ್ರೇಷ್ಠ ಹೋರಾಟವನ್ನು ಮಾಡಲು" ಹೊರಟಂಥವರಾಗಿದ್ದಾರೆ. ಯೇಸುವಿನ ಧ್ವಜಪತಾಕೆಯ ಕೆಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವಂಥವರೆಲ್ಲರೂ ಸೈತಾನನಿಗೆ ಮತ್ತು ಪಾಪಕ್ಕೆ ವಿರೋಧವಾಗಿ ನಿಂತು ಕಠಿಣವಾಗಿ ಹೋರಾಡುವಂಥದನ್ನು ಹಾಗು ಒಳ್ಳೆಯದನ್ನು ಮಾಡುವದರಲ್ಲಿ ನಂಬಿಗಸ್ತಿಕೆಯಿಂದ ನಿರಂತರವಾಗಿ ಪರಿಶ್ರಮಿಸದ ಹೊರತು ಜಯಶಾಲಿಗೆ ನೀಡಲಾಗುವ ಜಯಮಾಲೆಯನ್ನು ಅಪೇಕ್ಷಿಸಲಾಗದೆಂಬುದನ್ನು ಇಲ್ಲವೇ "ಭಲಾ, ಒಳ್ಳೆಯ ಆಳು" ಎಂಬ ಪ್ರಶಂಸನಾವಚನವನ್ನು ಕೇಳಿಸಿಕೊಳ್ಳಲಾಗದೆಂಬುದನ್ನು ನಿರೀಕ್ಷಿಸುವಂಥವರಾಗಿರಬೇಕು.

ಕ್ರಿಸ್ತನ ವಿಷಯವಾದ ಧ್ಯೇಯೋದ್ದೇಶಪ್ರಚಾರಗಳನ್ನು ಪ್ರತಿಪಾದಿಸುವಂಥವರು ತಾವು ಮಾಡುವಂಥದನ್ನು ಪೂರ್ಣವಾಗಿ ಸ್ಪಷ್ಟವಾದ ರೀತಿಯಲ್ಲಿ ಗ್ರಹಿಸಿಕೊಂಡವರಾಗಿ ಈ ಒಳ್ಳೆಯ ಮಾರ್ಗದಲ್ಲಿ ಹಿಂದಿರುಗಿ ನೋಡದಂತೆ ಸ್ಥಿರ ನಿರ್ಧಾರದಿಂದ ಮುಂದೆ ನಡೆದಲ್ಲಿ ಅದು ಎಂಥಾ ಆಶೀರ್ವಾದಕರವಾಗುವದು! ಕ್ರಿಸ್ತನ ವಿಷಯವಾದ ಪ್ರಚಾರಕಾರ್ಯಗಳು ಜನರಲ್ಲಿ ಮತ್ತೂ ಹೆಚ್ಚಾಗಿ ಮುಂದುವರೆಸಲಾಗುವದು; ಅವರ ಸಂಖ್ಯೆಯು ಬಹು ಅಲ್ಪವಾಗಿದ್ದಾಗ್ಯೂ ಲೋಕದಲ್ಲಿ ಅವರ ಪ್ರಭಾವ ಅಧಿಕಾರಗಳು ನಿಸ್ಸಂದೇಹವಾಗಿಯೂ ಬಹು ಅಧಿಕವಾಗಿರುವದು.

## "ಉಪ್ಪು ಒಳ್ಳೆಯದೇ, ಆದರೆ...."

ಉಪ್ಪನ್ನು ಯಾವುದಕ್ಕೆ ಸೋಕಿಸಿದರೂ ಅದೆಲ್ಲವನ್ನು ಸಂರಕ್ಷಿಸುವ ಗುಣವನ್ನು ಅದು ಪಡೆದಿರುವದು. ಅದನ್ನು ನಮ್ಮ ಆಹಾರದಲ್ಲಿ ರುಚಿಯನ್ನುಂಟುಮಾಡಲು ಸಹ ಬಳಸಲಾಗುವದು. ಹಿಂದಿನ ಕಾಲದಲ್ಲಿ ಅದನ್ನು ನಂಬಿಗಸ್ತಿಕೆ ನಿಷ್ಠಾವಂತಿಕೆಯ ಸಂಕೇತವಾಗಿ ಬಳಸಲಾಗುತ್ತಿತ್ತು; ಈಗಲೂ ಸಹ ಅರಬ್ ದೇಶದಲ್ಲಿ ಕೆಲವರು ಯಾರ ಮನೆಯಲ್ಲಿಯಾದರೂ ಉಪ್ಪನ್ನು ತಿಂದಾಗ ಆ ವ್ಯಕ್ತಿಗಳಿಗೆ ಅವರು ಮರಣಪರ್ಯಂತರವಾಗಿ ನಂಬಿಗಸ್ತರಾಗುವರೆಂದು ಹೇಳಲಾಗಿರುವದು. ಅವರಿಗೆ ಅದು ನಿಷ್ಠಾವಂತಿಕೆಯ ಪ್ರತಿಜ್ಞೆಯೆಂಬ ಅರ್ಥಬರುವದೆಂದು ಕಾಣುತ್ತದೆ.

ದೇವರಿಗಾಗಿ ಇರುವ ತನ್ನ ಸ್ವಂತ ನಿಷ್ಠೆ ಅಲ್ಲದೆ ತನ್ನ ಹಿಂಬಾಲಕರೆಲ್ಲರೂ ಇಟ್ಟುಕೊಳ್ಳಬೇಕಾದ ನಿಷ್ಠೆಯನ್ನು ಸೂಚಿಸಲು ಯೇಸುವು ಉಪ್ಪನ್ನು ಒಂದು ಸಂಕೇತವನ್ನಾಗಿ ಬಳಸಿ–ಕೊಂಡಿದ್ದನು; ಮತ್ತು ಅದು ಮಾತ್ರವಲ್ಲದೆ ಅವರು ಇದನ್ನು ಕಾಪಾಡಿಕೊಳ್ಳುವವರಾಗಬೇಕು. ಉಪ್ಪು ರುಚಿಕೊಡುವ ತನ್ನ ಸಂಸ್ಕರಣಗುಣವನ್ನು ಕಳಕೊಂಡದ್ದೇಯಾದರೆ ಅದು ಇತರ ಯಾವ ಕೆಲಸಕ್ಕೂ ಪ್ರಯೋಜನವಾಗುವದಿಲ್ಲ. ಅದು ಗೊಬ್ಬರವಾಗಿಯೂ ಉಪಯೋಗವಾಗುವದಿಲ್ಲ, ಕಾರಣ ಅದು ವಿರುದ್ಧ ಪರಿಣಾಮವನ್ನು ಉಂಟುಮಾಡುತ್ತದೆ. ಅದನ್ನು ಅಪೇಕ್ಷಿತ ಉದ್ದೇಶಗಳಿಗೆ ಉಪಯೋಗಿಸುವದನ್ನು ಹೊರತುಪಡಿಸಿದ್ದಲ್ಲಿ ಅದು ಸಂಪೂರ್ಣವಾಗಿ ನಿರುಪಯೋಗದ ವಸ್ತು ಆಗುತ್ತದೆ. ಹೀಗೆಯೇ ಕ್ರೈಸ್ತರು ಲೋಕದಲ್ಲಿ ಒಂದು ವಿಶೇಷ ಉದ್ದೇಶವುಳ್ಳ–ವರಾಗಿದ್ದಾರೆ. ಅದೇನಂದರೆ ಅವರು ಸಂರಕ್ಷಕ ಸಾಮರ್ಥ್ಯವುಳ್ಳವರಾಗಿದ್ದು, ಹೀಗಾಗಿ ನಂಜು ನಿರೋಧಕ ಗುಣವನ್ನು ಹೊಂದಿದವರಾಗಿ ಅವರು ಯಾರೊಡನೆ ಸಂಬಂಧ ಬೆಳಸುವರೋ ಅವರ ಒಳ್ಳೆಯ ಗುಣಗಳೆಲ್ಲವನ್ನು ಹೊರಗೆಳೆಯುವ ಶಕ್ತಿಯನ್ನು

ಪಡೆದುಕೊಳ್ಳುವ ಉದ್ದೇಶವುಳ್ಳವರಾಗಿರು–ವರು. ಇದು ಲೋಕದ ಸಂಬಂಧದಲ್ಲಿ ಕ್ರೈಸ್ತರು ನಿರ್ವಹಿಸುವ ಕಾರ್ಯಭಾರವಾಗಿರುತ್ತದೆ. ಇದರಲ್ಲಿ ಆತನು ವಿಫಲನಾದರೆ, ತನ್ನನ್ನು ಕರೆಯಲಾದ ಉದ್ದೇಶದಲ್ಲಿ ಆತನು ವಿಫಲ ಗೊಂಡಿರುತ್ತಾನೆ; ಮತ್ತು ಆತನು ಕರ್ತನ ಸೇವೆಯಲ್ಲಿ ಯಾವ ನಿರ್ದಿಷ್ಟವಾದ ಪ್ರಯೋಜನವೂ ಇಲ್ಲದಂಥವನಾಗುತ್ತಾನೆ.

"ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ" ಎಂದು ಯೇಸುವು ಅಂತಿಮವಾಗಿ ಹೇಳಿದ್ದನು. ಆತನ ಹಿಂಬಾಲಕರೆಲ್ಲರೂ ಈ ಮಾತುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಇವುಗಳನ್ನು ಅಲಕ್ಷ್ಯಮಾಡುವನು ಇವುಗಳನ್ನು ದಯಪಾಲಿಸಿದಂಥವನನ್ನು ತಿರಸ್ಕರಿಸುವವನಾಗಿದ್ದು ಅಲ್ಲದೆ ಈ ಮೂಲಕವಾಗಿ ಅವನು ಹೇಗೂ ಪಡಕೊಳ್ಳುವ ಆಶೀರ್ವಾದವನ್ನು ಹೊಂದಲು ಖಂಡಿತವಾಗಿಯೂ ವಿಫಲನಾಗುವನು. ಆದರೆ ಲೋಕದ ವಿಷಯವಾಗಿ ಹೇಳುವದಾದರೆ, "ಅವರಿಗೆ ಕಿವಿಯಿದ್ದರೂ ಅವರು ಕೇಳಲಾರರು; ಅವರಿಗೆ ಕಣ್ಣಿದ್ದರೂ ಅವರು ನೋಡಲಾರರು." ನಮ್ಮನ್ನು ಹಾಗು ಯೇಸುವಿನ ಹಿಂಬಾಲಕರೆಂದು ಹೇಳಿಕೊಳ್ಳುವ–ವರನ್ನು ಅಳೆಯುವಂಥ ಅಳತೆಪ್ರಮಾಣಗಳಿಂದ ನಾವು ಲೋಕವನ್ನು ಅಳೆಯುವಂತಿಲ್ಲ. ಲೋಕದ ಸಲುವಾಗಿರುವ ಅತ್ಯುನ್ನತವಾದ ಗುಣಮಟ್ಟವು (ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬ) ರಾಜಾಜ್ಞೆಯಾಗಿರುವದು. ಕ್ರೈಸ್ತರಿಗೋಸ್ಕರವಾಗಿರುವ ಅತ್ಯುನ್ನತ ಗುಣಮಟ್ಟವು ತಮ್ಮನ್ನು ತಾವು ಯಜ್ಞವನ್ನಾಗಿ ಅರ್ಪಣೆಮಾಡಿಕೊಳ್ಳುವದು, ಅಂದರೆ ಏನೇ ನಷ್ಟವಾದರೂ ದೇವರ ಚಿತ್ತವನ್ನು ನೆರವೇರಿಸುವಂಥ–ವರಾಗುವರೆಂಬದೇ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ಕಳೆದುಹೋದ ಕುರಿ, ಕಳೆದುಹೋದ ನಾಣ್ಯ, ಕೆಟ್ಟುಹೋದ ಮಗನು – ಇವುಗಳ ನಿದರ್ಶನಗಳು | -- | -- | 15:1–32 | -- |

# ಲೂಕ 15:1–32

ಯೇಸುವಿನ ಉಪದೇಶವನ್ನು ಕೇಳಬೇಕೆಂದು ಎಲ್ಲಾ ಸುಂಕದವರೂ ಪಾಪಿಗಳೂ ಆತನ ಬಳಿಗೆ ಬರುತ್ತಾ ಇರಲು ಫರಿಸಾಯರು ಶಾಸ್ತ್ರಿಗಳೂ–ಇವನು ಪಾಪಿಗಳನ್ನು ಸೇರಿಸಿಕೊಂಡು ಅವರ ಜೊತೆಯಲ್ಲಿ ಊಟಮಾಡುತ್ತಾನೆ ಎಂದು ಹೇಳಿಕೊಂಡು ಗುಣುಗುಟ್ಟುತ್ತಿದ್ದರು.

ಆಗ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ–ನಿಮ್ಮೊಳಗೆ ಯಾವ ಮನುಷ್ಯನಾದರೂ ತನಗೆ ನೂರು ಕುರಿಗಳಿರಲಾಗಿ ಅವುಗಳಲ್ಲಿ ಒಂದು ಕಳೆದು ಹೋದರೆ ಅವನು ತೊಂಭತ್ತೊಂಭತ್ತನ್ನು ಅಡವಿಯಲ್ಲಿ ಬಿಟ್ಟು ಕಳೆದುಹೋದದ್ದು ಸಿಕ್ಕುವ ತನಕ ಅದನ್ನು ಹುಡುಕಿಕೊಂಡು ಹೋಗದೆ ಇದ್ದಾನೇ? ಸಿಕ್ಕಿದ ಮೇಲೆ ಅವನು ಸಂತೋಷಪಡುತ್ತಾ ಅದನ್ನು ತನ್ನ ಹೆಗಲಿನ ಮೇಲೆ ಇಟ್ಟುಕೊಂಡು ಮನೆಗೆ ಬಂದು ಸ್ನೇಹಿರನ್ನೂ ನೆರೆಹೊರೆಯವರನ್ನೂ ಕೂಡಿಸಿ–ಕಳೆದು ಹೋಗಿದ್ದ ಕುರಿ ಸಿಕ್ಕಿತು, ನನ್ನ ಸಂಗಡ ಸಂತೋಷಿಸಿರಿ ಎಂದು ಅವರಿಗೆ ಹೇಳುವನಲ್ಲವೇ. ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತೇನೆ.

ಯಾವ ಹೆಂಗಸು ತನ್ನಲ್ಲಿ ಹತ್ತು ಪಾವಲಿಗಳಿರಲಾಗಿ ಒಂದು ಪಾವಲಿ ಕಳೆದುಹೋದರೆ ದೀಪಾಹಚ್ಚಿ ಮನೆಯನ್ನು ಗುಡಿಸಿ ಸಿಕ್ಕುವ ತನಕ ಅದನ್ನು ಎಚ್ಚರದಿಂದ ಹುಡುಕದೆ ಇದ್ದಾಳು? ಸಿಕ್ಕಿದ ಮೇಲೆ ಆಕೆಯು ತನ್ನ ಗೆಣತಿಯರನ್ನು ನೆರೆಹೊರೆಯವರನ್ನೂ ಕೂಡಿಸಿ–ಕಳೆದು ಹೋಗಿದ್ದ ಪಾವಲಿ ಸಿಕ್ಕಿತು, ನನ್ನ ಸಂಗಡ ಸಂತೋಷಿಸಿರಿ ಎಂದು ಹೇಳುವಳಲ್ಲವೇ. ಅದರಂತೆ ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ದೇವದೂತರ ಮುಂದೆ ಸಂತೋಷವಾಗುವದೆಂದು ನಿಮಗೆ ಹೇಳುತ್ತೇನೆ ಅಂದನು.

ಇನ್ನೂ ಆತನು ಹೇಳಿದ್ದೇನಂದರೆ–ಒಬ್ಬಾನೊಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ಕಿರಿಯವನು ತಂದೆಗೆ–ಅಪ್ಪಾ, ಆಸ್ತಿಯಲ್ಲಿ ನನಗೆ ಬರತಕ್ಕ ಪಾಲನ್ನು ಕೊಡು ಎಂದು ಕೇಳಿಕೊಳ್ಳಲು ತಂದೆಯು ಬದುಕನ್ನು ಅವರಿಗೆ ಹಂಚಿಕೊಟ್ಟನು. ಸ್ವಲ್ಪ ದಿವಸದ ಮೇಲೆ ಆ ಕಿರೀಮಗನು ಎಲ್ಲಾ ಕೂಡಿಸಿಕೊಂಡು ದೂರದೇಶಕ್ಕೆ ಹೊರಟು ಹೋಗಿ ಅಲ್ಲಿ ಪಟಿಂಗನಾಗಿ ಬದುಕಿ ತನ್ನ ಆಸ್ತಿಯನ್ನು ಸೂರೆಮಾಡಿಬಿಟ್ಟನು. ಹೀಗೆ ಅವನು ಎಲ್ಲಾ ಹಾಳುಮಾಡಿಕೊಂಡ ಮೇಲೆ ಆ ದೇಶದಲ್ಲೆಲ್ಲಾ ಘೋರವಾದ ಬರ ಬಂದು ಏನೂ ಗತಿಯಿಲ್ಲದವನಾದನು. ಆಗ ಅವನು ಹೋಗಿ ಆ ದೇಶದ ನಿವಾಸಿಗಳೊಳಗೆ ಒಬ್ಬನಲ್ಲಿ ಸೇರಿಕೊಂಡನು; ಆ ಮನುಷ್ಯನು ಹಂದಿಗಳನ್ನು ಮೇಯಿಸುವದಕ್ಕೆ ಅವನನ್ನು ತನ್ನ ಹೊಲಗಳಿಗೆ ಕಳುಹಿಸಿದನು. ಹೀಗಿರಲಾಗಿ ಅವನು ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ ತಿಂದು ಹಸಿವನ್ನು ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು; ಆದರೂ ಯಾರೂ ಅವನಿಗೆ ಕೊಡಲಿಲ್ಲ. ಆಗ ಅವನಿಗೆ ಬುದ್ಧಿ ಬಂದು ಅವನು–ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವದೆ;

ನಾನಾದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ. ನಾನು ಎದ್ದು ತಂದೆಯ ಬಳಿಗೆ ಹೋಗಿ ಅವನಿಗೆ–ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು. ಅವನು ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು. ಆದರೂ ಮಗನು ಅವನಿಗೆ–ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಲು ತಂದೆಯು ತನ್ನ ಆಳುಗಳಿಗೆ–ಶ್ರೇಷ್ಠವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಪಶುವನ್ನು ತಂದು ಕೊಯ್ಯಿರಿ; ಹಬ್ಬಮಾಡೋಣ, ಉಲ್ಲಾಸ ಪಡೋಣ. ಈ ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿಹೋಗಿದ್ದನು, ಸಿಕ್ಕಿದನು ಎಂದು ಹೇಳಿದನು. ಆಗ ಅವರು ಉಲ್ಲಾಸಪಡುವದಕ್ಕೆ ತೊಡಗಿದರು. ಆದರೆ ಅವನ ಹಿರೀಮಗನು ಹೊಲದಲ್ಲಿದ್ದನು. ಅವನು ಮನೆಯ ಹತ್ತಹತ್ತರಕ್ಕೆ ಬರುತ್ತಿರುವಾಗ ವಾದ್ಯನರ್ತನಗಳನ್ನು ಕೇಳಿ ಆಳುಗಳಲ್ಲಿ ಒಬ್ಬನನ್ನು ತನ್ನ ಬಳಿಗೆ ಕರೆದು–ಇದೇನು ಎಂದು ವಿಚಾರಿಸಿದನು. ಆಳು ಅವನಿಗೆ–ನಿನ್ನ ತಮ್ಮ ಬಂದಿದ್ದಾನೆ; ಇವನು ಸುರಕ್ಷಿತವಾಗಿ ಬಂದದ್ದರಿಂದ ನಿನ್ನ ತಂದೆಯು ಆ ಕೊಬ್ಬಿಸಿದ ಪಶುವನ್ನು ಕೊಯ್ಸಿದ್ದಾನೆ ಎಂದು ಹೇಳಿದನು. ಇದನ್ನು ಕೇಳಿ ಅವನಿಗೆ ಸಿಟ್ಟುಬಂದು ಒಳಕ್ಕೆ ಹೋಗಲೊಲ್ಲದೆ ಇದ್ದನು. ಆಗ ಅವನ ತಂದೆಯು ಹೊರಗೆ ಬಂದು ಅವನನ್ನು ಬೇಡಿಕೊಂಡನು. ಆದರೆ ಅವನು ತನ್ನ ತಂದೆಗೆ–ನೋಡು, ಇಷ್ಟು ವರುಷ ನಿನಗೆ ಸೇವೆಮಾಡಿದ್ದೇನೆ, ಮತ್ತು ನಾನು ನಿನ್ನ ಒಂದಪ್ಪಣೆಯನ್ನಾದರೂ ಎಂದೂ ಮೀರಲಿಲ್ಲ; ಆದರೂ ನಾನು ನನ್ನ ಸ್ನೇಹಿತರ ಸಂಗಡ ಉಲ್ಲಾಸಪಡುವದಕ್ಕಾಗಿ ನೀನು ಎಂದು ನನಗೆ ಒಂದು ಆಡನ್ನಾದರೂ ಕೊಡಲಿಲ್ಲ. ಆದರೆ ಸೂಳೆಯರನ್ನು ಕಟ್ಟಿಕೊಂಡು ನಿನ್ನ ಬದುಕನ್ನು ನುಂಗಿಬಿಟ್ಟ ಈ ನಿನ್ನ ಮಗನು ಬಂದಾಗ ಕೊಬ್ಬಿಸಿದ ಪಶುವನ್ನು ಅವನಿಗೆ ಕೊಯ್ಸಿದಿ ಎಂದು ಉತ್ತರಕೊಟ್ಟನು. ಅದಕ್ಕೆ ತಂದೆಯು–ಕಂದಾ, ನೀನು ಯಾವಾಗಲೂ ನನ್ನ ಸಂಗಡ ಇದ್ದೀ, ಮತ್ತು ನನ್ನದೆಲ್ಲಾ ನಿನ್ನದೇ. ಆದರೆ ಉಲ್ಲಾಸಪಡುವದೂ ಸಂತೋಷಗೊಳ್ಳುವದೂ ನ್ಯಾಯವಾದದ್ದೇ; ಯಾಕಂದರೆ ಈ ನಿನ್ನ ತಮ್ಮ ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿಹೋಗಿದ್ದನು, ಸಿಕ್ಕಿದನು ಎಂದು ಹೇಳಿದನು.

*****

# ಕಳೆದುಹೋದಂಥವರಿಗಾಗಿ ಇರುವ ದೇವರ ಚಿಂತನೆ

**ರೀಪ್ರಿಂಟ್ಸ್ ಪುಟ 2706**

## ಲೂಕ 15:1–10

**“ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ದೇವದೂತರ ಮುಂದೆ ಸಂತೋಷವಾಗುವದೆಂದು ನಿಮಗೆ ಹೇಳುತ್ತೇನೆ”**

ಮಾನವರ ಸಂಬಂಧದಲ್ಲಿ ‘ಕಳೆದುಹೋಗುವದು’ ಎನ್ನುವ–ದಕ್ಕೆ ಸತ್ಯವೇದದಲ್ಲಿ ಈಗಿನ ದೇವತಾಶಾಸ್ತ್ರದಲ್ಲಿ (ಥಿಯಾಲೊಜಿ) ಸಾಧಾರಣವಾಗಿ ಹೇಳಿರುವದಕ್ಕಿಂತಲೂ ಅತಿ ಭಿನ್ನವಾದ ಒಂದು ಅರ್ಥವಿರುತ್ತದೆ. ಈಗಿನ ದೇವತಾಶಾಸ್ತ್ರದಲ್ಲಿ “ಕಳೆದು–ಹೊಗುವದು” ಎಂಬ ಶಬ್ದವನ್ನು ನೀತಿಭ್ರಷ್ಟರ ಸಂಬಂಧದಲ್ಲಿ ಬಳಸಲಾಗಿರುವದು, ಏಕೆಂದರೆ ಅವರಿಗೆ (ಮುಂದಿನ ಜೀವಿತದ) ಯಾವ ನಿರೀಕ್ಷೆಯೂ ಇರುವದಿಲ್ಲ; “ಸಾಂಪ್ರಾದಾಯಿಕ ದೇವತಾಶಾಸ್ತ್ರದ” ಪ್ರಕಾರ ಇದು ನಿರೀಕ್ಷೆಯಿಲ್ಲದಿರುವಿಕೆ, ನಿರಂತರ ನಿತ್ಯಯಾತನೆ ಎಂಬುದು ಅಡಕವಾಗಿರುತ್ತದೆ. ಆದರೆ ಸತ್ಯವೇದದ ದೃಷ್ಟಿಯಿಂದ “ಕಳೆದುಹೋದುದು” ಎಂಬ ಶಬ್ದವು, ನಮ್ಮ ಮುಂದಿರುವ ಪಾಠದಲ್ಲಿ ಗಮನಿಸಲಾಗುವಂತೆ, ಬಹುತೇಕವಾಗಿ ಇದರ ವಿರುದ್ಧಾರ್ಥದಲ್ಲಿ ಬಳಸಲಾಗಿರುವದು.

ನಮ್ಮ ಕರ್ತನು, ನಡೆನುಡಿಯಲ್ಲಿಯೂ ಪರಿಶುದ್ಧನಾಗಿದ್ದು, ಸಹಜವಾಗಿ ತನ್ನ ದಿನದಲ್ಲಿನ ಪರಿಶುದ್ಧಜನರನ್ನು ವಿಶೇಷವಾಗಿ ಎಳೆದುಕೊಳ್ಳುವವನಿದ್ದನು. ಇವರು ಫರಿಸಾಯರಾಗಿದ್ದು, ಇಂಥವರಲ್ಲಿನ ಹಲವರ ವಿಷಯದಲ್ಲಿ ಪರಿಶುದ್ಧತೆಯೆಂಬುದು ಹೇಗೂ ಒಂದು ಕಪಟಾಚಾರವಾಗಿತ್ತು. ಅವರು ಹೃದಯದಲ್ಲಿನ ಪರಿಶುದ್ಧತೆ, ನಿರ್ಮಲತೆ ಇವುಗಳಿಗಿಂತಲೂ ತೋರಿಕೆಯ ವಿಷಯದಲ್ಲಿ ಸಂತೋಷವುಳ್ಳವರಾಗಿದ್ದರು. ನಮ್ಮ ಕರ್ತನು ಫರಿಸಾಯರಲ್ಲಿ ಮುಖ್ಯಸ್ಥನ ಅತಿಥಿಯಾಗಿ ಅಲ್ಲಿದ್ದ ಆತನ ಸಹಚರರು ಸಹಿತವಾಗಿ ಇತರರಿಗೆ ಸುವಾರ್ತೆಯನ್ನು ಸಾರುವ ಅವಕಾಶವನ್ನು ಹೇಗೆ ಉತ್ತಮಪಡಿಸಿಕೊಂಡಿದ್ದನೆಂಬುದನ್ನು ಇತ್ತೀಚಿನ ಪಾಠಗಳಲ್ಲಿ ತೋರಿಸಲಾಗಿತ್ತು. ಫರಿಸಾಯರು ತಾವು ಯೆಹೂದ್ಯರಲ್ಲಿ ಹೆಚ್ಚು ಪರಿಶುದ್ಧರೆಂದು ಭಾವಿಸಿಕೊಳ್ಳುವ ವಾಡಿಕೆಯಲ್ಲಿದ್ದು ಕ್ರಮೇಣ ತಮ್ಮನ್ನು ಆ ಜನರಲ್ಲಿ ಕೆಳವರ್ಗದವರಿಂದ ಬೇರ್ಪಡಿಸಿಕೊಂಡಿದ್ದರು. ಹೀಗಾಗಿ ನಮ್ಮ ಕರ್ತನ ದಿನದಲ್ಲಿ ಈ ಎರಡು ಗುಂಪುಗಳು ಬಹು ಸ್ವಲ್ಪವಾಗಿ ಬೆರೆಯುತ್ತಿದ್ದು, ಫರಿಸಾಯರು ಇತರರನ್ನು ಸಹೋದರರೆಂದೂ ವಾಗ್ದಾನಗಳಿಗೆ ತಮ್ಮೊಡನೆ ಸಹಬಾಧ್ಯರೆಂದೂ ಅಂಗೀಕರಿಸಿಕೊಳ್ಳಲು

ನಿರಾಕರಿಸುವವರಾಗಿದ್ದರು. ಪರಿಣಾಮವಾಗಿ ಯೆಹೂದ್ಯರಲ್ಲಿನ ಕೆಳವರ್ಗದವರು ಯೇಸುವಿನ ಬೋಧನೆಗಳಲ್ಲಿ ಆಸಕ್ತಿಯುಳ್ಳವ–ರಾಗಿರುವರೆಂಬುದನ್ನು ಅಲ್ಲದೆ ಯೇಸುವು ಅವರಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳದೆ ಅವರೊಡನೆ ಬೆರೆಯುವವನಾಗಿ ಇತರ–ರಂತೆಯೇ ಅವರಿಗೂ ಬೋಧಿಸುತ್ತಿರುವನೆಂಬುದನ್ನು ಗ್ರಹಿಸಿದ್ದಾಗ ಅವರು ಆಶ್ಚರ್ಯಪಟ್ಟಿದ್ದರು. ಅಲ್ಲದೆ ಇದು ಅವರು ಯೇಸುವನ್ನು ನಿಂದಿಸುವ ಪ್ರವೃತ್ತಿಯುಳ್ಳವರಾಗುವಂತೆ ಮಾಡಿತ್ತು. ಯೇಸುವು ತನ್ನನ್ನು ಒಬ್ಬ ಫರಿಸಾಯನೆಂದು ತಿಳಿಸುವದಕ್ಕೆ ಮನಸ್ಸುಳ್ಳವನಾಗಿ ತಮ್ಮ ಪದ್ಧತಿಗಳನ್ನು ಆತನು ಅನುಸರಿಸುವವ ನಾಗಿದ್ದಲ್ಲಿ ಅವರು ಆತನನ್ನು ತಮ್ಮಲ್ಲಿ ಒಬ್ಬನನ್ನಾಗಿ ಮಾಡಿಕೊಳ್ಳಲು ಸಂತೋಷಿಸುವವರಾಗಿದ್ದರು. ಫರಿಸಾಯರ ಈ ತಪ್ಪಾದ ಅಭಿಪ್ರಾಯಗಳನ್ನು ತಿದ್ದುವ ಸಲುವಾಗಿ ಯೇಸುವು ಐದು ಸಾಮ್ಯಗಳನ್ನು ಹೇಳಿದ್ದನು. ಇವುಗಳಲ್ಲಿ ನಾವು ಎರಡನ್ನು ಈ ಪಾಠದಲ್ಲಿ ಪರಿಗಣನೆಗೆ ತೆಗೆದುಕೊಳ್ಳುವದರಲ್ಲಿದ್ದೇವೆ.

ತನ್ನ ಕುರಿಗಳನ್ನು ಪ್ರೀತಿಸಿ ಅವುಗಳನ್ನು ಪರಿಪಾಲಿಸುವ–ವನಾಗಿ, ಕುರುಬರ ಆಳುಗಳಿಂದ ಚೆನ್ನಾಗಿ ಪರಿಪಾಲನೆ ಹೊಂದಿದ ತೊಂಭತ್ತೊಂಭತ್ತು ಕುರಿಗಳನ್ನು ಅಡವಿಯಲ್ಲಿ (ಬೆಂಗಾಡಿನಲ್ಲಿ–ಯಲ್ಲ) ಬಿಟ್ಟು ಕಳೆದುಹೋದ ಒಂದು ಕುರಿಯನ್ನು ಅದು ಸಿಕ್ಕುವವರೆಗೂ ಹುಡುಕಿದಂಥ ನಿಜವಾದ ಕುರುಬನ ಸಾಮ್ಯವು ನಮಗೆ ದೇವರ ಪರಿಪಾಲನೆಯ ಬಗ್ಗೆ ಒಂದು ನಿದರ್ಶನವನ್ನು ನೀಡುವದು. ತನ್ನ ಮಾತಿನಿಂದ ಈ ಪಾಠಾರ್ಥವನ್ನಲ್ಲದೆ ಇದರಿಂದ ಮುಂದುವರಿದು ಬೇರೆ ಯಾವ ಪಾಠಾರ್ಥವ–ನ್ನಾದರೂ ತೆಗೆದುಕೊಳ್ಳಬಾರದೆಂಬುದು ನಮ್ಮ ಕರ್ತನ ಮಾತಿನ ಅರ್ಥವಿರಲೂ ಸಾಧ್ಯವಿರುವದು. ಆದರೆ ಈ ಸಾಮ್ಯದಲ್ಲಿನ ವೈವಿದ್ಯ ವಿವರಗಳು ರಕ್ಷಣೆಯ ವಿಷಯವಾದ ದೇವರ ಯೋಜನೆಯ ಗುಣಲಕ್ಷಣಗಳನ್ನು ನಿದರ್ಶಿಸುವದೆಂದು ನಾವು ಭಾವಿಸಿದ್ದೇಯಾದಲ್ಲಿ, ಕಳೆದುಹೋದ ಆ ಒಂದು ಕುರಿಯು ಆದಾಮನು ಮತ್ತು ಮಾನವ ಕುಲವನ್ನು ಸೂಚಿಸುವದೆಂದೂ, ತಪ್ಪಿಸಿಕೊಳ್ಳದೇ ಇವರುವ ತೊಂಭತ್ತೊಂಭತ್ತು ಕುರಿಗಳು ಎಂದೂ ದೇವರಿಂದ ದೂರವಾಗಿ ಪಾಪವೆಂಬ ಅರಣ್ಯದಲ್ಲಿ ಅಲೆದಾಡದೇ ಕುರುಬನ ಪರಿಪಾಲನೆಯಲ್ಲೇ ಇರುವ ದೇವದೂತರು ಹಾಗು ಇತರ ಆತ್ಮಿಕ ಜೀವಿಗಳನ್ನು ಸೂಚಿಸುವದೆಂದೂ, ಭಾವಿಸಲು ನಮ್ಮನ್ನು ಇದು ಒತ್ತಾಯಿಸುತ್ತದೆ. ಈ ದೃಷ್ಟಿಯಿಂದ ತಪ್ಪಿಹೋದ ಕುರಿಯನ್ನು ಹುಡುಕಲು ಹೋದ ಕುರುಬನು ನಮ್ಮ ಕರ್ತನಾದ ಯೇಸುವನ್ನು ಸೂಚಿಸುವನು. ಈತನು ಜಗದುತ್ಪತ್ತಿಗೆ ಮೊದಲು ತಂದೆಯೊಡನೆ ಇದ್ದ ಪ್ರಭಾವ ಮಹಿಮೆಗಳನ್ನು ಬಿಟ್ಟು ಮಾನವರಿಗೆ ಹಿತವನ್ನುಂಟು ಮಾಡುವ ಸಲುವಾಗಿ ಮಾನವಸ್ಥಿತಿಗೆ ಬಂದನು.

ಇದಕ್ಕಿಂತಲೂ ಬೇರೆ ಯಾವ ವೈವಿಧ್ಯ ದೃಷ್ಟಿಯನ್ನು ತೆಗೆದುಕೊಂಡಲ್ಲಿ ಅದು ಅಸಮಂಜಸವಾಗಿ ತೋರುವದು. ಯಾಕೆಂದರೆ, ಉದಾಹರಣೆಯಾಗಿ ಹೇಳುವದಾದರೆ, ಕಳೆದುಹೋದ ಆ ಕುರಿಯನ್ನು ಮಾನವರಲ್ಲಿ ಹೀನಸ್ಥಿತಿಗೆ ಬಂದಿರುವ ಗುಂಪನ್ನು ಸೂಚಿಸುವದೆಂದೂ ಆ ತೊಂಭತ್ತೊಂಭತ್ತು ಕುರಿಗಳು ಪರಿಶುದ್ಧ ವರ್ಗದವರನ್ನು ಸೂಚಿಸುವದೆಂದೂ ಭಾವಿಸುವದಾದರೆ ಅದು ಈ ಎರಡು ವಿಧದಲ್ಲಿ ಅಸಮಂಜಸವಾಗಿರುವದು: (1) "ನೀತಿವಂತನು ಒಬ್ಬನೂ ಇಲ್ಲ, ಒಬ್ಬನಾದರೂ ಇಲ್ಲ," ಎಂಬುದು ಸತ್ಯವೇದವು ಸಾರಿಹೇಳುವ ಸಂಗತಿ; ಅಲ್ಲದೆ ಪ್ರವಾದಿಯು ಪ್ರಕಟಮಾಡಿ ಹೇಳಿರುವಂತೆ, "ನಾವೆಲ್ಲರೂ ದಾರಿತಪ್ಪಿದ ಕುರಿಗಳಂತೆ ತೊಳಲುತ್ತಿದ್ದೆವು." (ರೋಮಾ 3:10; ಯೆಶಾಯ 53:6). (2) ಹೋಲಿಕೆ ಮಾಡಿದಲ್ಲಿ ಕೆಲವರು ಪರಿಪೂರ್ಣರಾಗಿ ಕಂಡು–ಬಂದರೂ ನಿಜವಾಗಿಯೂ ಹಾಗಿಲ್ಲದಂಥವರು ತೊಂಭ–ತ್ತೊಂಭತ್ತು ಕುರಿಗಳೆಂದು ಹೇಳುವದಾದರೆ ಈ ನಿದರ್ಶನವೂ ಸಹ ಅಸಮರ್ಪಕವಾಗುವದು; ಕಾರಣ ಕೇವಲ ಸಣ್ಣದಾದ ಒಂದು ಅಲ್ಪಸಂಖ್ಯೆಯವರು ಅಂದರೆ ಹತ್ತು ಸಾವಿರ ಮಂದಿಯಲ್ಲಿ ಒಬ್ಬನು ಅಥವಾ ಸಾವಿರದ ಆರುನೂರು ದಶಲಕ್ಷ ಮಂದಿಯಲ್ಲಿ ಲಕ್ಷಕ್ಕೆ ಒಬ್ಬನು ಇಂಥಾ ಸ್ಥಿತಿಯಲ್ಲಿದ್ದು ಹಿರೀ ಕುರುಬನಾದ ಯೆಹೋವ–ನೊಡನೆ ಹೊಂದಾಣಿಕೆಯಲ್ಲಿರುವನೆಂದು ಎಣಿಸಿದರೂ ಅದೂ ಸಹ ಅಸಮರ್ಪಕವಾಗುವದು.

ಪರಿಪೂರ್ಣತೆಯಿಂದ ಬಿದ್ದುಹೋದ ಆದಾಮನಲ್ಲಿ ನೀತಿಮಾರ್ಗದಿಂದ ದಾರಿತಪ್ಪಿ ಬಹು ದೂರ ಹೋಗಿರುವ ಮಾನವಕುಲವನ್ನು ಸಂಪೂರ್ಣವಾಗಿ ಆ ಒಂದು ಕುರಿಯು ಸೂಚಿಸುವದೆಂದೂ ಮತ್ತು ಯೇಸುವು ಒಳ್ಳೆಯ ಕುರುಬನಾಗಿ ಆ ಹಿರೀ ಕುರುಬನಾಗಿರುವ ತಂದೆಯನ್ನು (ಕೀರ್ತನೆ 23:1) ಪ್ರತಿನಿಧಿಸುವನೆಂಬ ಅಭಿಪ್ರಾಯವನ್ನು ತೆಗೆದುಕೊಂಡದ್ದೇ–ಯಾದಲ್ಲಿ ಕಳೆದು ಹೋದ ಆ ಕುರಿಯನ್ನು ಹುಡುಕಲು ಹೊರಟಂಥದ್ದು ನಮ್ಮ ಕರ್ತನ ಮೊದಲ ಬರುವಿಕೆಯಲ್ಲಿ ಆರಂಭವಾಗಿತ್ತೆಂಬುದನ್ನು ನಾವು ನೋಡುತ್ತೇವೆ. ಈ ಕುರಿಯನ್ನು ಹಿಂದಿರುಗಿ ಪಡೆಯುವ ಈ ಕಾರ್ಯದ ಕಾರಣಕ್ಕಾಗಿ ನಮ್ಮ ರಕ್ಷಕನಿಗೆ ಸಂಭವಿಸಿದಂಥ ಕಷ್ಟನಷ್ಟಗಳನ್ನು ನಾವು ನೋಡಿದ್ದೇ–ವಾದರೂ ಈಗಾಗಲೇ ಕುರಿಯು ಹಿಂದಿರುಗಿರುವದನ್ನು ನಾವು ಇನ್ನೂ ನೋಡಿರುವುದಿಲ್ಲ; ಯಾಕೆಂದರೆ ಯಾವ ಅರ್ಥ–ದಲ್ಲಿಯೂ ಮಾನವ ಕುಲವು ದೇವರೊಂದಿಗೆ ಹೊಂದಾಣಿಕೆ–ಯಾಗಲು ಹಿಂದಿರುಗಿ ಬಂದಿರುವದಿಲ್ಲ. ಹೀಗಿದ್ದರೂ ಈ ಸುವಾರ್ತಾ ಯುಗದಲ್ಲಿ ದೇವರು ಆಯಲ್ಪಟ್ಟ ಸಭೆಯನ್ನು ಕ್ರಿಸ್ತನ ದೇಹದ ಅಂಗಗಳಾಗುವದಕ್ಕಾಗಿ ಅಂದರೆ ಆ ಒಳ್ಳೆಯ ಕುರುಬನಾದ ಯೇಸುವನ್ನು ತಮ್ಮ ಶಿರಸ್ಸನ್ನಾಗಿ ಅಂಗೀಕರಿಸುವ–ವರನ್ನು ಮಾನವರಿಂದ ಆದುಕೊಳ್ಳುತ್ತಿರುವನೆಂಬುದನ್ನು ನಾವು ನೋಡುತ್ತೇವೆ. ಕಳೆದುಹೋದ ಈ ಕುರಿಯನ್ನು ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಮಾನವರೆಲ್ಲರನ್ನೂ ಸಾಮಾನ್ಯವಾಗಿ ಹುಡುಕುವ ಕಾರ್ಯಕ್ಕೆ ಸಿದ್ಧರನ್ನಾಗಿಮಾಡಲು ಕ್ರಿಸ್ತನ ದೇಹದ ಅಂಗದಲ್ಲಿನ ಪ್ರತಿಯೊಬ್ಬರಿಗೆ ಕೆಲವು ಕಷ್ಟನಷ್ಟಗಳು ಸಂಭವಿಸುತ್ತಿರುವದೆಂಬುದನ್ನು ನಾವು ನೋಡುತ್ತೇವೆ.

ಕುರಿಯ ಗುರುತನ್ನು ಹಿಡಿಯಲಾಗಿರುವದೆಂಬ ಅರ್ಥದಲ್ಲಿ, ಕುರಿಯನ್ನು ಈಗಾಗಲೇ ಕಂಡುಕೊಳ್ಳಲಾಗಿರುವದು; ಈ ಮಾತಿನ ಅರ್ಥದಲ್ಲಿ ನಿಜವಾಗಿಯೂ (ಕುರಿಯು) ಕಳೆದುಹೋಗಿರುವದಿಲ್ಲ. ಆದರೆ ದೇವರಿಂದ ದೂರಹೋಗಿ ಪಾಪ ಮತ್ತು ಹೀನಸ್ಥಿತಿಯಲ್ಲಿ ಅಲೆದಾಡುತ್ತಿರುವದೆಂಬ ಅರ್ಥದಲ್ಲಿ ಅದು ಕಳೆದುಹೋದ್ದ–

ದ್ದಾಗಿರಲು, ಇದೇ ಮಾತಿನ ಅರ್ಥದಲ್ಲಿ (ಸಮಸ್ತವನ್ನು ಸರಿಪಡಿಸಿ) ಪುನಃಸ್ಥಾಪಿಸುವ (ಅ.ಕೃ. 3:19–21) ಕಾರ್ಯದ ಮೂಲಕವಾಗಿ ಅದನ್ನು ಹೀನಸ್ಥಿತಿಯಿಂದ, ಅಂದರೆ ಪಾಪವೆಂಬ ಕೆಸರಿನಿಂದ ಅಲ್ಲದೆ ಅನೀತಿ ಅಕ್ರಮ ಹಾಗೂ ಮರಣವೆಂಬ ಭಯಾನಕವಾದ ಗುಂಡಿಯಿಂದ ಮೇಲಕ್ಕೆ ತಂದು ಅದನ್ನು ಪುನರ್ವಶಪಡಿಸಿಕೊಳ್ಳಬೇಕು ಇಲ್ಲವೇ ಹಿಂದಕ್ಕೆ ತರಬೇಕು. ಈ ಸಾಮ್ಯದ ಪರಿಪೂರ್ಣವಾದ ಅರ್ಥದಲ್ಲಿ, ಕುರಿಗಳನ್ನು ಪೂರ್ಣವಾಗಿ ಹಿಂತರಲು ಇಡೀ ಸಾವಿರ ವರುಷದ ಆಳ್ವಿಕೆಯ ಕಾಲವು ಬೇಕಾಗುವದು. ಈ ಸಂದರ್ಭದಲ್ಲಿ ನಮ್ಮ ಕರ್ತನು ಭರವಸೆಯಾಗಿ ನಮಗೆ ಹೇಳಿರುವದೇನಂದರೆ, ಮಾನವರ ರಕ್ಷಣೆಯ ಕುರಿತಾದ ಈ ಮಹಾ ಯೋಜನೆಯ ಪ್ರತಿಯೊಂದು ಹಂತವನ್ನು ತಂದೆಯ ಹಟ್ಟಿಯಿಂದ ತಪ್ಪಿಹೋಗದ ಕುರಿಗಳಾದ ಪರಲೋಕದ ದೂತಸೈನ್ಯವು ಬಹು ಆಸಕ್ತಿಯಿಂದ ನೋಡುತ್ತಿರುವದೆಂಬುದು. ನಮ್ಮ ಕರ್ತನ ವಿವರಣೆಯಲ್ಲಿ ಒಂದು ಅಲ್ಪ ಬದಲಾವಣೆ ಮಾಡಿದಲ್ಲಿ ಅದು ಇನ್ನು ಆ ಒಂದು ಕುರಿಯ ಮೂಲಕವಾಗಿ ಸೂಚಿತವಾಗುವದಿಲ್ಲ, ಆದರೆ ಅದು ಅನೇಕ ಕುರಿಗಳಿಂದ ಸೂಚಿತವಾಗುವದು (ಆದಿಯಲ್ಲಿ ಮಾನವಕುಲವು ಒಬ್ಬನ ಮೂಲಕವಾಗಿ ಸೂಚಿತವಾದರೂ ಈಗ ಅದು ಅನೇಕವಾಗಿರುವದು); ಒಬ್ಬ ಪಾಪಿಯು ಮಾನಸಾಂತರಗೊಂಡಲ್ಲಿ ಅಂದರೆ (ಒಂದು ಕುರಿಯು) ಹಟ್ಟಿಗೆ ಹಿಂದಿರುಗಿ ದೇವರೊಂದಿಗೆ ಹೊಂದಾಣಿಕೆಗೆ ಬಂದಲ್ಲಿ ದೇವದೂತರ ಸಮ್ಮುಖದಲ್ಲಿ ಸಂತೋಷವುಂಟಾಗುವದೆಂದು ಆತನು ಪ್ರಕಟಮಾಡಿ ಹೇಳಿರುವನು. ಈಗ ದೇವರೊಡನೆ ಹೊಂದಾಣಿಕೆಗೆ ಬರುತ್ತಿರುವವರನ್ನು ಆತನ ಪ್ರಿಯನಲ್ಲಿ ಅಂಗೀಕರಿಸಲಾಗುತ್ತಿರುವದು ಹಾಗು ಆತನಲ್ಲಿರುವ (ಕ್ರಿಸ್ತನಲ್ಲಿರುವ) ಕೃಪೆಯ ಮೂಲಕವಾಗಿ ಅವರು ಎಲ್ಲವುಗಳಿಂದ ವಿಮುಕ್ತರಾಗಿ ನೀತಿವಂತರೆಂದು ಉಚಿತವಾಗಿ ನಿರ್ಣಯಿಸಲ್ಪಡುವರು. ಅಪೋಸ್ತಲನ ಭಾಷೆಯಲ್ಲಿ ಹೇಳುವದಾದರೆ “ಆದರೆ ಈಗ ನೀವು ತಿರುಗಿಕೊಂಡು ನಿಮ್ಮ ಆತ್ಮಗಳನ್ನು ಕಾಯುವ ಕುರುಬನೂ ಅಧ್ಯಕ್ಷನೂ ಆಗಿರುವಾತನ ಬಳಿಗೆ ಬಂದಿದ್ದೀರಿ.” (1 ಪೇತ್ರ 2:25) ಮತ್ತು ಅವರು ಆತನ “ದೇಹದ” ಅಂಗಗಳಾಗಿ ಆ ಒಳ್ಳೆಯ ಕುರುಬನೊಡನೆ ಜೊತೆ ಕೆಲಸದವರೆಂದು ಕರೆಯಲ್ಪಟ್ಟಿರುವರು.

ದಾರಿ ತಪ್ಪಿದ ಆ ಮೊದಲ ಕುರಿಯಾಗಿರುವ ತಂದೆಯಾದ ಆದಾಮನ ವಿಷಯದಲ್ಲಿದ್ದಂತೆ, ಆತನ ಸಂತತಿಯಾಗಿರುವ ಅನೇಕರ ವಿಷಯದಲ್ಲಿಯೂ ಹೇಳುವದಾದರೆ, ಕಳೆದುಹೋದಂಥ ಸ್ಥಿತಿಯು ಅಪೇಕ್ಷಿತವಾದುದಲ್ಲ, ಆದರೂ ವಾಸ್ತವದಲ್ಲಿ ಆತನೂ ಹಾಗೂ ಇತರ ಅನೇಕರೂ ತಪ್ಪಿಸಿಕೊಂಡು ಹೊರಬಂದಿರುವ ಆ ಹಟ್ಟಿಗೆ ಮತ್ತೆ ಹಿಂದಿರುಗಿ ಬರಲು ಇಚ್ಛೆಯುಳ್ಳವರಾಗಿರುವರು. ಆದರೆ ಆ ಹೀನಸ್ಥಿತಿಯಲ್ಲಿ ಮತ್ತು ಪಾಪದ ಕೆಸರಿನಲ್ಲಿ ಅವರು ಎಂಥಾ ದುಸ್ಥಿತಿಗೆ ಹೋಗಿರುವರೆಂದರೆ ತಾವು ಹೋದ ದಾರಿಯಿಂದ ತಮ್ಮ ಸಾಮರ್ಥ್ಯದ ಮೂಲಕವಾಗಿ ಮತ್ತೆ ಹಿಂದಿರುಗಿ ಬರಲು ಅವರಿಗೆ ಅಸಾಧ್ಯವಾಗಿರುವದು. ಅವರಿಗೆ ತಮ್ಮನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾದ, ತಮ್ಮನ್ನು ಪೂರ್ಣವಾಗಿ ಪಾಪಕ್ಕೆ ಉಂಟಾದ ದಂಡನೆಯೆಲ್ಲವುಗಳಿಂದ ಪುನರ್ವಶಪಡಿಸಿಕೊಂಡವನಾಗಿ ಅವರನ್ನು ದೇವರ ಹಟ್ಟಿಯೊಳಗೆ ಪೂರ್ಣವಾಗಿ ಹಿಂದಕ್ಕೆ ಕೊಂಡುತರುವ ಒಬ್ಬ ರಕ್ಷಕನ ಅಗತ್ಯವಿರುವದು; ಇಂಥಾ ಒಬ್ಬನನ್ನು ಪರಲೋಕದಲ್ಲಿರುವ ತಂದೆಯು ನಮ್ಮ ಕರ್ತನ ಯೇಸುವಿನಲ್ಲಿ ಒದಗಿಸಿರುವನು: “ಆದಕಾರಣ ಆತನು ತನ್ನ ಮೂಲಕ ದೇವರ (ತಂದೆಯ) ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ.”

ನಿಜವೇ, ಸತ್ಯವೇದವು ಸ್ಪಷ್ಟವಾಗಿ ತೋರಿಸುವಂತೆ, ತಮ್ಮ ಪುನರುದ್ಧಾರಕ್ಕಾಗಿ ಕರ್ತನಿಂದ ಪ್ರೀತಿಪೂರ್ವಕವಾಗಿ ಒದಗಿಸಲಾದ ಆಶೀರ್ವಾದಾವಕಾಶಗಳೆಲ್ಲವನ್ನು ಪಡೆಕೊಂಡ ನಂತರವೂ ಅಲ್ಲಿ ಒಂದು ವರ್ಗವು ಆಗಲೂ ಹಠಹಿಡಿದು ಸ್ವೇಚ್ಛೆಯಿಂದ ಮನಃಪೂರ್ವಕವಾಗಿ ಆ ಒಳ್ಳೆಯ ಕುರುಬನು ನೀಡುವ ಸಹಾಯವನ್ನು ನಿರಾಕರಿಸುವದು. ಇಂಥವರನ್ನು “ಸತ್ಯದ ಪರಿಜ್ಞಾನವನ್ನು ತಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿ (ದವರು)” ಎಂದು ಸತ್ಯವೇದವು ಹೇಳುವದು. ಇಂಥವರಿಗೆ ಆ ಮಹಾ ಯಜ್ಞದ ವಿಷಯದಲ್ಲಿ ಯಾವ ಆಸಕ್ತಿಯೂ ಇರುವದಿಲ್ಲ ಹಾಗು ಹಿಂದಿರುಗಿ ಬರಲು “ಅವರಲ್ಲಿ ತಿರಿಗಿ ಮಾನಸಾಂತರ ಹುಟ್ಟಿಸುವದು ಅಸಾಧ್ಯ” ಎಂದು ಅಪೋಸ್ತಲನು ಪ್ರಕಟಮಾಡಿ ಹೇಳಿರುತ್ತಾನೆ. ಇಂಥವರು ಅನುಸರಿಸುವ ಮಾರ್ಗದ ವಿಷಯವಾಗಿ, ಹೀಗೆ ಬರೆಯಲಾಗಿರುವದು: “ಮರಣಕರವಾದ ಪಾಪವುಂಟು; ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವದಿಲ್ಲ.” ಯಾರಾದರೂ ಹೀಗೆ ಮನಃಪೂರ್ವಕವಾಗಿ ಪಾಪಮಾಡಿ ಹಠದಿಂದ ಆ ಒಳ್ಳೆಯ ಕುರುಬನ ವ್ಯಾಪ್ತಿಯೊಳಗಿಂದ ಸರಿದುಹೋಗುವರೋ ಅಂಥವರು ಎರಡನೇ ಮರಣದಲ್ಲಿ ಸಾಯುವರು ಮತ್ತು ಹೀಗೆ ಅವರಿಗೆ ದೇವರ ಯೋಜನೆಯಲ್ಲಿ ಯಾವ ಪಾಲಾಗಲೀ ಪಾತ್ರವಾಗಲೀ ಇಲ್ಲದೆಹೋಗುವದು. (ಇಬ್ರೀಯ 6:4–6; 1 ಯೋಹಾನ 5:16) “ಆಡಿಗೆ” ಸೇರಿದ ವರ್ಗದವರಿಗೆ ಆ ಒಳ್ಳೇ ಕುರುಬನು ತನ್ನ ಪ್ರಾಣವನ್ನು ಕೊಡಲಿಲ್ಲ; ಅಲ್ಲದೆ ಅಡವಿಯಲ್ಲಿ ಅವುಗಳನ್ನು ಹುಡುಕಿರಲೂ ಇಲ್ಲ; ಇಲ್ಲವೇ “ತೋಳಗಳನ್ನು” ಹುಡುಕಿರಲಿಲ್ಲ; ಆದರೆ ಕೇವಲ ಪಾಪದಿಂದ ಹೀನಸ್ಥಿತಿಗೆ ಬಂದಾಗ್ಯೂ ತಮ್ಮ “ಕುರಿಯ” ಸ್ವಭಾವವನ್ನು ಕನಿಷ್ಠ ರೀತಿಯಲ್ಲಿ ಉಳಿಸಿಕೊಂಡಿರುವಂಥವರಿಗಾಗಿ ತನ್ನ ಪ್ರಾಣವನ್ನು ಕೊಟ್ಟಿದ್ದನು. ಆದಾಮನು ಒಂದು ಕುರಿಯಾಗಿದ್ದನು ಅಥವಾ ಸತ್ಯವೇದವು ಪ್ರಕಟಿಸಿರುವಂತೆ ಒಬ್ಬ ‘ದೇವರ ಮಗನಾಗಿದ್ದನು” (ಲೂಕ 3:38); ಕೆಲವು ವಿಧದಲ್ಲಿ ಆತನು ಮಾಡಿದ ಅಪರಾಧವು ಮನಃಪೂರ್ವಕವಾಗಿದ್ದರೂ ಇದು “ಕುರಿ” ಸ್ವೇಚ್ಛಾ ಮಾರ್ಗದಲ್ಲಿ ಅಲೆದಾಡುವದು ಎನ್ನುವದಕ್ಕಿಂತಲೂ ಹೆಚ್ಚಿನದನ್ನು ನಾವು ಊಹಿಸಿಕೊಳ್ಳಲು ನಮಗೆ ಯಾವ ಕಾರಣವೂ ಇರುವದಿಲ್ಲ; ಕುರಿಯ ಸ್ವಭಾವದಿಂದ ಆಡಿನ ಇಲ್ಲವೇ ತೋಳದ ಸ್ವಭಾವಕ್ಕೆ ಬದಲಾವಣೆ ಹೊಂದುವದೆಂಬ ಅರ್ಥವನ್ನೂ ಇದು ಕೊಡುವುದಿಲ್ಲ. ಆದಾಮನು ‘ಸೈತಾನನ ಮಗನು’ ಎನ್ನಿಸಿಕೊಳ್ಳುವದಕ್ಕೆ ಇಷ್ಟಪಟ್ಟಿದ್ದನು ಎಂಬ ಅರ್ಥವನ್ನೂ ಇದು ಕೊಟ್ಟಿರಲಿಲ್ಲ.

ಆದಾಮನು ಹೃದಯದಲ್ಲಿ ಬುದ್ಧಿಪೂರ್ವಕವಾಗಿಯೂ ಮನಃಪೂರ್ವಕವಾಗಿಯೂ ದೇವರಿಗೂ ಮತ್ತು ನೀತಿಗೂ ಒಬ್ಬ

ವಿರೋಧಿಯಾಗಿದ್ದಲ್ಲಿ ಸರ್ವಜ್ಞಾನಿಯಾದ ಕುರುಬನು ಆತನನ್ನು "ಕುರಿಯಂತೆ" ಹುಡುಕಲು ತನ್ನ ಮಗನನ್ನು ಕಳುಹಿಸುತ್ತಿದ್ದನೆಂದು ನಮಗೆ ಭಾವಿಸಲು ಸಾಧ್ಯವಾಗದು. ಈ ದಿನದಲ್ಲಿ ಆದಾಮನ ಮಕ್ಕಳಲ್ಲಿ ಅನೇಕರು ಸ್ಪಷ್ಟವಾಗಿ ಆಡಿನ ಗುಣಸ್ವಭಾವಗಳನ್ನು ಪಡೆದವರಾಗಿದ್ದು ಅಪೋಸ್ತಲನು ಪ್ರಕಟಿಸಿರುವಂತೆ ಅವರು "ದುಷ್ಕೃತ್ಯಗಳನ್ನು ಮಾಡುವ ಮೂಲಕವಾಗಿ (ದೇವರ ವಿರೋಧಿಗಳಾಗಿರುವರು)" (ಕೊಲೆಸ್ಸೆ 1:21) ಎಂಬುದು ನಿಜವೇ. ಹೀಗಿದ್ದರೂ ಅಪೋಸ್ತಲನು ವಿವರಿಸಿ ಹೇಳುವದೇನಂದರೆ: ಇವರಲ್ಲಿ ಅನೇಕರು ಮನಸ್ಸೋ ಇಚ್ಛೆಯಿಂದ ಇಂಥಾ ಸ್ಥಿತಿಯಲ್ಲಿರುವದಿಲ್ಲ, ಆದರೆ ಸೈತಾನನು ಬೆಳಕನ್ನು ಕತ್ತಲೆಗೂ ಕತ್ತಲೆಯನ್ನು ಬೆಳಕಿಗೂ ಮಾರ್ಪಡಿಸಿದ್ದು ಅವರ ಮನೋನೇತ್ರಗಳು ಅವರನ್ನು ಮೋಸಗೊಳಿಸಿರುವ ಕಾರಣ–ದಿಂದಾಗಿರುವದು. ಅವರು ಪ್ರಭಾವದಿಂದ ಕೂಡಿರುವ ಸತ್ಯದ ಜ್ಞಾನಪ್ರಕಾಶವನ್ನು ಕಾಣುವವರಾಗಬಾರದೆಂದು "ಈ ಪ್ರಪಂಚದ ದೇವರು (ಸೈತಾನನು) ನಂಬದವರ ಮನಸ್ಸುಗಳನ್ನು ಮಂಕು ಮಾಡಿರುವನು" (2 ಕೊರಿಂಥ 4:4). ಹೀಗಾಗಿ, ಇವರಲ್ಲಿ ಅನೇಕರು ದೇವವಿರೋಧಿಯಾಗಿರುವ ಸೈತಾನನ ಒಡನಾಟದ ಮೂಲಕವಾಗಿ ಅನೇಕ ವಿಧದಲ್ಲಿ ಆಡಿನಂಥವರಾದರೂ ಈಗಲೂ ಅವರಲ್ಲಿ ಕೆಲವು ಕುರಿಯ  ಸ್ವಭಾವವಿರುವದು. ಅವರಿಗೆ ಸೂಕ್ತ ಜ್ಞಾನೋದಯವಾದಾಗ ಈ ಸ್ವಭಾವು ಅವರಲ್ಲಿ ಅರಿವು ಉಂಟಾಗುವಂತೆ ಪ್ರತಿಪಾದನೆ ಮಾಡಿ ಅವರನ್ನು ಆ ಒಳ್ಳೆಯ ಕುರುಬನು ದೇವಾನುಗ್ರಹಕ್ಕೆ ಪೂರ್ಣವಾಗಿ ಹಿಂದಿರುಗುವ–ವರನ್ನಾಗಿ ಮಾಡಿ ಅವರು ಆ ಹಟ್ಟಿಗೆ ಸೇರುವಂತೆ ಮಾಡಲು ಅದು ಸಂತೋಷವುಳ್ಳದ್ದಾಗಿರುವದು.

ಈ ಸಾಮ್ಯದ ಹಲವಾರು ಗುಣಲಕ್ಷಣಗಳಿಗೆ ಹೊಂದಿ–ಕೊಳ್ಳುವಂಥದು ನಿಜವಾಗಿಯೂ ಕೇವಲ ಈ ಒಂದೇ ದೃಷ್ಟಿಯೆಂಬುದನ್ನು ನಾವು ನಂಬಿಕೊಂಡು  ಈ ಮೂಲಕವಾಗಿ ನಾವು ಗ್ರಹಿಸಿಕೊಳ್ಳುವದೇನಂದರೆ, ದೇವರು ಎರಡನೇ ಮರಣಕ್ಕೆ ಹೋಗುವವರನ್ನು ಯಾವ ವಿಧದಲ್ಲಿಯೂ ಪರಿಗಣಿಸುವದಿಲ್ಲ–ವೆಂಬದು; ದೇವರ ಹಾಗು ಆತನ ಯೋಜನೆಯ ಸಂಬಂಧವಾಗಿ ಹೇಳುವದಾದರೆ, ಅವರು ಕುರಿಯ ಸ್ವಭಾವವನ್ನು ಕಳೆದುಕೊಂಡ ಕ್ಷಣದಿಂದ ಅವರಿಗೆ ಯಾವುದೇ ಅಸ್ಥಿತ್ವವು ಇರಲಾರದು. ಅಲ್ಲದೆ ಸಮಸ್ತವನ್ನು ಸರಿಪಡಿಸುವ ಕಾಲದಲ್ಲಿ ಕರ್ತನು ಪುನರ್ವಶಪಡಿಸಿಕೊಂಡು ಹಾಗು ಆ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ದೇವರ ಹಟ್ಟಿಗೆ ಪೂರ್ಣವಾಗಿ ಹಿಂತರುವ ಆ ಒಂದು ಕುರಿಯು ಯಾವುದಂದರೆ ದೇವರು ಮೊದಲಿನಿಂದಲೂ ಮಾನ್ಯಮಾಡಿರುವ ಆ ಮಾನವ ಕುಲವಾಗಿರುವದು. ಅವರು ಯಾರೆಂದರೆ ದೇವರ ಸ್ವರೂಪ ಮತ್ತು ಹೋಲಿಕೆಯಲ್ಲಿ ಉಂಟುಮಾಡಲ್ಪಟ್ಟವರಾಗಿ ಈ ಸ್ವರೂಪ ಹೋಲಿಕೆಗಳನ್ನು ಎಂದೂ ಸಂಪೂರ್ಣವಾಗಿ ಕಳಕೊಳ್ಳದೆ ಆ ಸಾವಿರ ವರುಷದ ಆಳ್ವಿಕೆಯಲ್ಲಿ ಆತನ ಹೋಲಿಕೆ ಸ್ವರೂಪಗಳು ಪುನಸ್ಥಾಪಿತಗೊಂಡು  ಪುನಶ್ಚೇತನಪಡಕೊಳ್ಳುವಂಥವರೇ.  ಆ ಕಳೆದುಹೋದ ಕುರಿಯು ಆದಿಯಲ್ಲಿ ಒಬ್ಬರಲ್ಲಿ (ಆದಾಮ ಮತ್ತು ಹವ್ವಳಲ್ಲಿ) ಸೂಚಿತವಾಗಿದ್ದು ಅದು ಪುನರುದ್ಧಾರಗೊಂಡಾಗ ಮಾನವಕುಲದವರಲ್ಲಿ ವಿಮೋಚಿಸಲ್ಪಟ್ಟವರಾಗಿ ಪುನಃಸ್ಥಾಪಿತ–ರಾದ ಕೋಟ್ಯಾನುಕೋಟಿಯವರಲ್ಲಿ ಸೂಚಿತವಾಗುವದು.

## ಕಳೆದುಹೋದ ಬೆಳ್ಳಿನಾಣ್ಯ

ವಿವಾಹದ ಗುರುತಾಗಿ ತನ್ನ ಕಡಗದಲ್ಲಿ ಹತ್ತು ಬೆಳ್ಳಿನಾಣ್ಯವನ್ನು ಜೋತಾಡುವಂತೆ ತೊಟ್ಟಿರುವವಳಾಗಿ ಅದರಲ್ಲಿನ ಒಂದು ನಾಣ್ಯವನ್ನು ಕಳೆದುಕೊಂಡವಳಾಗಿ ಅದು ಸಿಕ್ಕುವವರೆಗೂ ಜಾಗ್ರತೆಯಿಂದ ಹುಡುಕುವ ಆ ಹೆಂಗಸಿನ ವಿಷಯವಾದ ಸಾಮ್ಯವು ಮೇಲೆ ವ್ಯಕ್ತವಾದ ಸಂಗತಿಯನ್ನು ಮತ್ತೊಂದು ವಿಧದಲ್ಲಿ  ಸೂಚಿಸಿರುವದು. ಕಳೆದು ಹೋದ ನಾಣ್ಯವನ್ನು ಹುಡುಕುವದರಲ್ಲಿ ವ್ಯಯಮಾಡಲ್ಪಟ್ಟ ಆ ಹೆಂಗಸಿನ ಶಕ್ತಿಯನ್ನು ಕಳೆದುಹೋದ ಮಾನವಕುಲದ ಪರವಾಗಿ ವ್ಯಯಮಾಡಲ್ಪಡುವ ದೈವಿಕ ಶಕ್ತಿಯ ಒಂದು ನಿದರ್ಶನವನ್ನಾಗಿ ನಮ್ಮ ಕರ್ತನು ನೀಡಿರುವನು. ಮತ್ತು ಸತ್ಯವೇದವು "ಕಳೆದುಹೋದದ್ದು" ಎಂಬ ಶಬ್ಧವನ್ನು (ಆದಾಮನಲ್ಲಿ) ಮೂಲವಾಗಿ ಕಳಕೊಂಡದ್ದರ ಸಂಬಂಧದಲ್ಲಿ ಉಲ್ಲೇಖಿಸ–ಲಾಗಿರುವದೆಂದೂ, ಎರಡನೆಯ ಮರಣದಲ್ಲಿ ನಾಶವಾಗುವವರ ಸಂಬಂಧವಾಗಿ ಅಲ್ಲವೆಂಬುದನ್ನು ನಾವು ಇಲ್ಲಿ ಪುನಃ ನೋಡುತ್ತೇವೆ. ಎರಡನೆಯ ಮರಣದಲ್ಲಿ ನಾಶವಾಗಿ ಹೋಗುವವರು ಕಳೆದುಹೋದವರೆಂದು ಹೇಳಲಾಗುವದಿಲ್ಲ; ಅವರ ಅಸ್ಥಿತ್ವವು ಇಲ್ಲದೆಹೋಗುವದು; ಅವರು ದೇವರ ಎಣಿಕೆಯಲ್ಲಿ ಬರುವದೇ ಇಲ್ಲ, ಅವರ ಬಗ್ಗೆ ತಿಳಿಸಲು ಅವರು ಅರ್ಹರಾಗಿರುವದಿಲ್ಲ. ಅವರು (ಆದಾಮನಲ್ಲಿ) ಮೂಲದಲ್ಲಿ ಕಳಕೊಂಡದ್ದಕ್ಕೆ ಸಮನಾಗಿರುವದಿಲ್ಲ. ದೇವರು (ಆದಾಮನಲ್ಲಿ) ಮೂಲವಾಗಿ ಕಳಕೊಂಡದ್ದನ್ನು ಪುನರ್ವಶಪಡಿಸುವ ಪ್ರಸ್ತಾಪವನ್ನು ಮಾಡಿರುವನು.

ಹತ್ತು ಬೆಳ್ಳಿ ನಾಣ್ಯಗಳು ಕೇವಲ ಅದಕ್ಕಿರುವ ಬೆಲೆ ಮಾತ್ರವಲ್ಲದೆ ನಾಣ್ಯವನ್ನು ಮುದ್ರಿಸುವ ಪದ್ದತಿಯ ಮೇರೆಗೆ ಅದರಲ್ಲಿ ಛಾಪಿಸಿರುವ ಕೆಲವು ಆಕೃತಿಸ್ವರೂಪ ಹಾಗು ಹೋಲಿಕೆಗಳ ವಿಷಯವೂ ಒಳಗೊಂಡಿರುವದು. ದೇವರ ಮಕ್ಕಳು ದೇವದೂತರು ಪ್ರಧಾನದೂತರು ಇವರ ವಿಷಯದಲ್ಲಿಯೂ ಹೀಗೆಯೇ ಇರುವದು. ಆತ್ಮಿಕ ಜೀವಿಗಳ ಸೃಷ್ಟಿಕ್ರಮಗಳಲ್ಲಿ ಎಷ್ಟು ಜೀವಿಗಳು ದೇವರ ಸ್ವರೂಪ ಹಾಗು ಹೋಲಿಕೆಗಳಲ್ಲಿ ಉಂಟು–ಮಾಡಲಾಗಿರುವದೆಂಬುದು ನಮಗೆ ತಿಳಿದುಬಂದಿರುವದಿಲ್ಲ. ಈ ಕ್ರಮಗಳಲ್ಲಿ ಒಂದಾದ ಮಾನವಜೀವಿಯೆಂಬ ಮನುಷ್ಯನು ಕಳೆದುಹೋದವನಾಗಿದ್ದನು. ಹೀಗೆ ಕಳೆದುಹೋದಂಥದು ಹುಡುಕಲ್ಪಟ್ಟು ಅಂತಿಮಾಗಿ ಅದನ್ನು ಕಂಡುಕೊಳ್ಳಲಾಯಿತು.

ಹಳೆಯ ಕಾಲದ ಮನೆಗಳಲ್ಲಿ ಮುಖ್ಯವಾಗಿ ಬಾಗಿಲಪ್ರದೇಶ ದಲ್ಲಿ ದೀಪವನ್ನು ಹಚ್ಚಿಡಲಾಗುತ್ತಿತ್ತು, (ಮಣ್ಣು ಅಥವಾ ಮರಳು ಇಲ್ಲವೇ ಕಲ್ಲಿನಿಂದ ಮಾಡಿದ) ನೆಲವು ಹೆಚ್ಚು ಕಡಿಮೆ ಕಸ ಕಡ್ಡಿಗಳಿಂದ ಆವೃತಗೊಂಡು ಮಲಿನವಾಗಿರುತ್ತಿತ್ತು. ಇಂಥಾ ಮನೆಗಳು ದೇವರ ಸ್ವರೂಪಹೋಲಿಕೆಗಳನ್ನು ಧರಿಸಿಕೊಂಡಿದ್ದ ಆದಿತಂದೆಯಾದ ಆದಾಮನಲ್ಲಿ ಸೂಚಿತವಾದ ಮಾನವಕುಲವು ಪಾಪ ಮತ್ತು ಹೀನಸ್ಥಿತಿಗೆ ತಲುಪಿ ಕಳೆದುಹೋಗಿರುವಂಥದಕ್ಕೆ ಚೆನ್ನಾಗಿ ಪ್ರತಿನಿಧಿಸಲ್ಪಟ್ಟಿರುವದು. ಸಾಮ್ಯದಲ್ಲಿ ತಿಳಿಸಲಾಗಿರುವ ಕಳೆದುಹೋದ ನಾಣ್ಯದಲ್ಲಿ ಈ ಸಂಗತಿಯು ಸೂಚಿತವಾಗಿರು–ವದು. ಈ ಸಾಮ್ಯವು ಪುನರ್ವಶಪಡಿಸಿಕೊಳ್ಳುವಿಕೆಯು

ಕಾರ್ಯವಿಧಾನದ ಬಗ್ಗೆ ಸೂಚಿಸುವದಿಲ್ಲ. ಆದರೆ ಇದು ಕೇವಲ ಮೂಲದಲ್ಲಿ ಕಳೆದುಹೋದಂಥದ್ದನ್ನೂ ಹಾಗು ಅಂತಿಮವಾಗಿ ಆ ಕಳೆದುಹೋದಂಥದ್ದನ್ನೇ ಪುನರ್ವಶಪಡಿಸುವದನ್ನು ಅಲ್ಲದೆ ಅಂತಿಮವಾಗಿ ಈ ನಿಟ್ಟಿನಲ್ಲಿ ವ್ಯಯಮಾಡಲ್ಪಟ್ಟ ಶಕ್ತಿಸಾಮರ್ಥ್ಯ-ಗಳನ್ನು ಸೂಚಿಸುವದು. ದೀಪಹಚ್ಚುವಿಕೆ ಮತ್ತು ಶ್ರದ್ಧಾಪೂರ್ವಕವಾದ (ನೆಲದ) ಸ್ವಚ್ಛಗೊಳಿಸುವಿಕೆಗಳು ಸಾವಿರ ವರುಷದ ಆಳ್ವಿಕೆಯ ಕಾಲದ ಅಂತ್ಯದಲ್ಲಿ ಕ್ರಿಸ್ತನ ಮೂಲಕವಾಗಿ ನಿರ್ವಹಿಸಲ್ಪಡಲಿರುವ ದೇವರ ಕಾರ್ಯವನ್ನು ಸೂಚಿಸ-ಲಾಗಿರುವದು. ಆಗ ಕಳೆದುಹೋದಂಥದ್ದು ಹುಡುಕಲ್ಪಟ್ಟಿರು-ವದು ಹಾಗೂ ಅದನ್ನು ಸಂಪೂರ್ಣವಾಗಿ ಪುನರ್ವಶ-ಪಡಿಸಿಕೊಳ್ಳಲಾಗಿರುವದು.

ಪುನಸ್ಥಾಪಿತವಾದ ಮಾನವಕುಲದ ಪ್ರತಿಯೊಬ್ಬರೂ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಪರಲೋಕದಲ್ಲಿರುವ ತಂದೆಯ ಬಳಿಗೆ ಹಿಂದಿರುಗಿ ಬಂದಾಗ ಅವರು, ಆದಾಮನು ತನ್ನ ಸೃಷ್ಟಿಯ ಸಮಯದಲ್ಲಿದ್ದಂತೆ, ಸಂಪೂರ್ಣವಾಗಿ ಆತನ (ತಂದೆ ದೇವರ) ಹೋಲಿಕೆಸ್ವರೂಪಗಳಲ್ಲಿರುವರು. ತಾವು ಯಾವ ದೇವನ ಹೋಲಿಕೆಯನ್ನು ಧರಿಸಿಕೊಂಡಿರುವರೋ ಆತನ ವಿಷಯವಾಗಿ ಅಧಿಕವಾದ ತಿಳುವಳಿಕೆ ಹೊಂದಿದವರಾಗಿ ಆ ದೇವರ ವಿಷಯವಾಗಿ ಅವರು ಸಂಪೂರ್ಣ ಮನಗೊಂಡವರಾಗಿರುವರು. ಈ ಸಾಮ್ಯದಲ್ಲಿ ಅಧಿಕಗೊಂಡ ಮಾನವಕುಲದ ಸಂಖ್ಯೆಯನ್ನಾಗಲೀ ಇಲ್ಲವೇ ಆದಾಮನ ಸಂತತಿಯವರಲ್ಲಿ ಯಾರು ಮನಃಪೂರ್ವಕವಾಗಿ (ನೀತಿಗಿಂತಲೂ ಪಾಪವನ್ನು ಹೆಚ್ಚಾಗಿ ಪ್ರೀತಿಸಿ) ಮಾಡುವ ಪಾಪದ ಕಾರಣದಿಂದಾಗಿ "ಜನರ ಮಧ್ಯದಿಂದ ನಾಶವಾಗುವಂಥವರನ್ನಾಗಲಿ" (ಅ.ಕೃ. 3:23) ಪರಿಗಣನೆಗೆ ತೆಗೆದುಕೊಂಡಿರುವದಿಲ್ಲ. ತಂದೆಯ ದೃಷ್ಟಿಯಲ್ಲಿ ಅವರಿಗೆ ಯಾವ ಸ್ಥಾನಮಾನವೂ ಇರುವದಿಲ್ಲ; ಕಳೆದುಹೋದಂಥವರಾಗಿದ್ದು ಅಂತಿಮವಾಗಿ ತನ್ನೊಂದಿಗೆ ನಂಬಿಗಸ್ತನಾದ ತನ್ನ ಪ್ರತಿನಿಧಿಯಾದ ಕ್ರಿಸ್ತನ ಮೂಲಕವಾಗಿ ಪುನಸ್ಥಾಪಿತಗೊಂಡವರನ್ನು ಹೊರತಾಗಿ ಮತ್ತೆ ಯಾರನ್ನೂ ತಂದೆಯು ವಾಸ್ತವದಲ್ಲಿ ಪರಿಗಣನೆಗೆ ತೆಗೆದುಕೊಳ್ಳುವದಿಲ್ಲ. ಕ್ರಿಸ್ತನು ಇಂಥವರನ್ನು ಹುಡುಕಿ ಕಂಡುಕೊಂಡಿದ್ದನು.

ಸಾವಿರ ವರುಷದ ಆಳ್ವಿಕೆಯ ಕಾಲದ ಅಂತ್ಯದಲ್ಲಿ ಭೂಮ್ಯಾಕಾಶಗಳಲ್ಲಿರುವದೆಲ್ಲವೂ ಸಿಂಹಾಸನಾಸೀನನ್ನೂ ಮತ್ತು ಯಜ್ಞದ ಕುರಿಯಾದಾತನನ್ನು ಸ್ತುತಿಸುವದನ್ನು ಕೇಳಿಸಿಕೊಂಡಾಗ ಪರಲೋಕ ಭೂಲೋಕಗಳಲ್ಲಿ ಮಹಾ ಸಂತೋಷದ ಕಾಲವು ಬರುವದು; ಅದರೆ ಈಗ ಆ ಸಂಪೂರ್ಣವಾದ ಸಂತೋಷ-ವುಂಟಾಗುವ ಮೊದಲೇ ಆ ಮಹಾ ಕಾರ್ಯವು ನೆರವೇರಿಸಲ್ಪಡು ವದೆಂಬುದಕ್ಕೆ ದೊರೆಯುವ ಪ್ರತಿಯೊಂದು ಸಾಕ್ಷಿಪ್ರಮಾಣಗಳ ವಿಷಯದಲ್ಲಿ ಪರಲೋಕಸೈನ್ಯದವರೆಲ್ಲರೂ ಆನಂದಿಸುವರೆಂದು ನಮ್ಮ ಕರ್ತನು ಭರವಸೆನೀಡಿ ಹೇಳಿರುವನು; ಒಬ್ಬ ಪಾಪಿಯು ಪಶ್ಚಾತಾಪಪಟ್ಟು ಪಾಪದ ಕಡೆಯಿಂದ ತಿರುಗಿಕೊಂಡು ದೇವರ ಬಳಿಗೆ ಹೊಂದಾಣಿಕೆಯಾಗಿ ಬರುವ ವಿಷಯದಲ್ಲಿ ಅವರು ಆನಂದಿಸುವರು. ಅಲ್ಲದೆ ದೇವದೂತರು ಪರಲೋಕದಲ್ಲಿ ಹೀಗೆ ಸಂತೋಷಿಸುವದಾದರೆ ಭೂಮಿಯ ಮೇಲೆ ದೇವಜನರೆಂದು ಹೇಳಿಕೊಂಡು ದೇವರೊಂದಿಗೆ ಹಾಗು ಪರಲೋಕ ಜೀವಿಗಳೊಂದಿಗೆ ಅದೇ ಪ್ರಮಾಣದಲ್ಲಿ ಹೊಂದಾಣಿಕೆಯಲ್ಲಿರು-ವದಾಗಿ ಹೇಳಿಕೊಳ್ಳುವವರೆಲ್ಲರೂ ತಮ್ಮ ಸಹಜೀವಿಗಳು ಪಾಪ ಮತ್ತು ಸೈತಾನನ ಪಾಶ ಹಾಗೂ ಮರುಳುಗೊಳಿಸುವಿಕೆಯಿಂದ ಹಿಂದಿರುಗಿ ಬರುವದರ ವಿಷಯವಾಗಿ ಸಂತೋಷಿಸುವರು.

ಈ ನಿರ್ದಿಷ್ಟವಾದ ಪಾಠವನ್ನೇ ನಮ್ಮ ಕರ್ತನು ಫರಿಸಾಯರಿಗೆ ಮನವರಿಕೆಯಾಗುವಂತೆ ಮಾಡಲು ಪ್ರಯತ್ನಿಸಿ -ದ್ದುದು; ಅಂದರೆ ಯೇಸುವನ್ನು ಸಂತೋಷದಿಂದ ಕೇಳುತ್ತಿದ್ದವರ ವಿಷಯದಲ್ಲಿ ಅಪರಾಧ ಮನೋಭಾವ ಹೊಂದಿದವರಾಗಿ ತಮ್ಮನ್ನು ಅವರಿಂದ ಪ್ರತ್ಯೇಕಪಡಿಸಿಕೊಳ್ಳುವ ಬದಲು ಅವರು ದೇವರು ಹಾಗೂ ಪರಲೋಕದಲ್ಲಿರುವ ಪರಿಶುದ್ಧರೊಂದಿಗೆ ಹೊಂದಾಣಿಕೆಯಲ್ಲಿ ಇರುವದೇ ಆದಲ್ಲಿ, ಪಶ್ಚಾತಾಪಪಟ್ಟು ಮಾನಸಾಂತರ ಹೊಂದುವದನ್ನು ಅವರು ನೋಡುವಾಗ ಸಂತೋಷಿಸುವಂಥವರಾಗಬೇಕು; ಅಲ್ಲದೆ ಅಪೋಸ್ತಲನು ವ್ಯಕ್ತಪಡಿಸಿರುವಂತೆ "ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು" ಹೀಗೆ ದೇವರನ್ನು ಹುಡುಕುವಂಥವರನ್ನು ಮತ್ತೆ ದೇವರೊಂದಿಗೆ ಹೊಂದಾಣಿಕೆಗೆ ಬರುವದಕ್ಕೆ ಸಹಾಯ ಮಾಡಲು ಅವರು ಸಂತೋಷಿಸುವಂಥವರಾಗಬೇಕು.

ಮತ್ತು ಇದೇ ಈ ದಿನದ ದೇವಜನರ ಮನೋಭಾವ-ವಾಗಿರಬೇಕು: ಅವರಿಗೆ ಹೃದಯದಲ್ಲಿ ಇದೇ ಮನೋಭಾವವ-ವಿಲ್ಲದೇ ಹೋದಲ್ಲಿ ಅವರು ದೇವರ ಆತ್ಮವನ್ನು ಹೊಂದಿದವರಲ್ಲ ವೆಂಬದಕ್ಕೆ ಇದು ಒಂದು ಪ್ರಮಾಣವಾಗಿದೆ. ಅಲ್ಲದೆ ಇತರರು ಪಾಪದಿಂದ ಹೊರಬರುವದನ್ನು ಆಶಿಸುವರಾಗಿ ಅದರಲ್ಲಿ ಆಸಕ್ತಿ ತೋರುವ ಮನೋಭಾವವನ್ನು ಹೊಂದಿರುವಂಥದ್ದು ಹಾಗು ಅವರನ್ನು ದೇವರೊಂದಿಗೆ ಮತ್ತೆ ಹೊಂದಾಣಿಕೆಗೆ ತರಲು ಸಹಾಯಮಾಡುವ ಪ್ರವೃತ್ತಿಯಿರುವಂಥದು ದೇವರೊಂದಿಗೆ ಹೊಂದಾಣಿಕೆಯಲ್ಲಿರುವ ಹೃದಯದ ಸ್ಥಿತಿಗೆ ಕೇವಲ ಒಂದು ಪ್ರಮಾಣ ಮಾತ್ರವಲ್ಲದೆ ಇಂಥವರಿಗೆ ಇದು ಅವರು ತಾವಾಗಿಯೇ ಕುರುಬನ ಪರಿಪಾಲನೆಯಲ್ಲಿ ಅಂತಿಮವಾಗಿ ಹಟ್ಟಿಯನ್ನು ಸುರಕ್ಷಿತವಾಗಿ ತಲುಪುವಂತಾಗಲು ಅವರ ಪಾದಗಳಿಗೆ ಹಾದಿಯನ್ನು ನೆಟ್ಟಗೆಮಾಡಲು ನೆರವಾಗುವದು.

ಹೀಗಿರಲು ಈಗಾಗಲೇ ಒಳ್ಳೆಯ ಕುರುಬನಿಂದ ಕಂಡು-ಕೊಳ್ಳಲ್ಪಟ್ಟವರಾಗಿರುವ ದೇವರಿಗೆ ಪ್ರಿಯ ಜನರಾದ ನಾವೆಲ್ಲರೂ ಆತನ ಪ್ರೀತಿಪೂರ್ವಕವಾದ ಪರಿಪಾಲನೆಯನ್ನು ಹಾಗೂ ದೇವರ ಬಳಿಗೆ ಹಿಂದಿರುಗಲು ಸಹಾಯವನ್ನು ಪಡೆದವರಾಗಿರಲು ಇತರರ ಬಗ್ಗೆ ಸಹಾನುಭೂತಿಯುಳ್ಳವರಾಗಿರುವ ಮನೋಭಾವವನ್ನು ಹೆಚ್ಚು ಹೆಚ್ಚಾಗಿ ಬೆಳಸಿಕೊಂಡವರಾಗಿ ಆ ಒಳ್ಳೆಯ ಕುರುಬನು ನಿರತನಾಗಿರುವ ಕಾರ್ಯದಲ್ಲಿ ಸಹಾಯಕರೂ ಸಹಕಾರಿಗಳೂ ಆಗಿರೋಣ. ಲೋಕವನ್ನು ಸಂಪೂರ್ಣವಾಗಿ ಇನ್ನು ಹುಡುಕು-ವಂಥವರಾಗಿರದೆ ಈಗಿನ ಕಾಲದಲ್ಲಿ ಕರ್ತನು ವಿಶೇಷವಾಗಿ ತನ್ನ ಕಾರ್ಯಕ್ಕೆ ಹಾಗು ಯಶಸ್ಸಿಗೆ "ಪ್ರಥಮ ಫಲ" ಆಗಲು ಹುಡುಕುತ್ತಿರುವಂಥವರಿಗೆ ನೆರವು ನೀಡುವಂಥವರಾಗಿರೋಣ.

ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸಿಕೊಳ್ಳುವವರಾಗಿ, ನಮಗಿರುವ ಅತಿಪರಿಶುದ್ಧವಾದ ನಂಬಿಕೆಯನ್ನು ಆಧಾರ ಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುವಂಥ–ವರಾಗಿ ಒಬ್ಬರನ್ನು ಮತ್ತೊಬ್ಬರು ಪ್ರೇರೇಪಿಸುಸುವವರಾಗೋಣ. ಆ ರಾಜ್ಯದಲ್ಲಿ ಸಹಬಾಧ್ಯರಾಗಸಲುವಾಗಿ ಬೆಳಕಿನಲ್ಲಿರುವ ದೇವಜನರೊಂದಿಗೆ ಬಾಧ್ಯತೆ ಹೊಂದಲು ಯೋಗ್ಯರಾಗುವಂತೆ ಮದುವೆಯ ವಸ್ತ್ರವನ್ನು ಧರಿಸಿಕೊಳ್ಳುವದರಲ್ಲಿ ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡುವಂಥವರಾಗಿರೋಣ. 1 ಥೆಸಲೋನಿಕ 5:11; ಯೂದ 20; ಕೊಲೆಸ್ಸೆ 1:12; ರೋಮಾ 8:17

*****

# ತಪ್ಪಿಹೋದ ಮಗನ ಹಿಂದಿರುಗುವಿಕೆ

### ರೀಪ್ರಿಂಟ್ಸ್ ಪುಟ 1459

## ಲೂಕ 15:11–32

ಅನ್ಯಜನಗಳು ತಪ್ಪಿಹೋದ ಮಗನಾಗಿ ನಿದರ್ಶಿಸಲ್ಪಟ್ಟಿರು–ವರೆಂದು ಭಾವಿಸಿಕೊಂಡವರಾಗಿ ಅನೇಕರು ಈ ಸಾಮ್ಯವನ್ನು ಯೆಹೂದ್ಯರು ಮತ್ತು ಅನ್ಯಜನಗಳಿಗೆ ಅನ್ವಯಮಾಡಿರುವರು. ನಮಗೆ ತಿಳಿದಿರುವಂತೆ, ಈ ಅರ್ಥವಿವರಣೆಯು ಸತ್ಯವೇದದ ಸಂಗತಿಗಳಿಗೆ ಹೊಂದಿಕೊಳ್ಳುವದಿಲ್ಲ; ಕಾರಣ ಈ ಸಾಮ್ಯವನ್ನು ನೀಡಿದ ಕಾಲದವರೆಗೂ ಅಲ್ಲದೆ ಮುಂದಿನ ವರುಷಗಳಲ್ಲಿಯೂ (ಅಂದರೆ, ಪಂಚಾಶತ್ತಮ ದಿನದಿಂದ ಮೂರುವರೆ ವರುಷಗಳ ವರೆಗೂ) ಅನ್ಯಜನಗಳು ದೇವರ ಮಕ್ಕಳಾಗಿ ಗುರುತಿಸಲ್ಪಟ್ಟಿರಲಿಲ್ಲ, ಆದರೆ ಅವರು "ಅನ್ಯರು", "ಪರದೇಶಿಗಳು" "ವಿದೇಶಿಯರು", "ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯ–ದವರೂ" ಆಗಿದ್ದರು (ಎಫೆಸ್ಸ 2:11–12). ಆದಾಮನು (ಅವಿಧೇಯನಾಗಿ ಪರಿಪೂರ್ಣತೆಯಿಂದ) ಬಿದ್ದು ಹೋದ ಕಾಲದಿಂದ ಆತನ ಒಂದು ಸಂತತಿಯಲ್ಲದೆ ಮತ್ತೆ ಯಾವದೂ ದೇವಾನುಗ್ರಹವನ್ನು ಹೊಂದಿರಲಿಲ್ಲ, ಈ ಸಂತತಿಯಲ್ಲಿ ಸೇತನ ಮೂಲಕವಾಗಿ ನೋಹನು ಮತ್ತು ಅಬ್ರಹಾಮನು ಅಲ್ಲದೆ ಇಸ್ರಾಯೇಲ್ಯರು ಮತ್ತು ಕ್ರಿಸ್ತನೂ ಬಂದಿದ್ದರು. (ಆಮೋಸ 3:2) ದಾಖಲೆಗಳು ತೋರಿಸಿಕೊಟ್ಟಿರುವಂತೆ, ಈ ಸಂತತಿಯವರೆಲ್ಲರೂ ತಮ್ಮ ಪಾಪ ದೋಷಗಳಿಗಾಗಿ ಛಾಯಾರೂಪದ ಯಜ್ಞಾರ್ಪ–ಣೆಗಳ ಮಧ್ಯಸ್ಥಿಕೆಯ ಮೂಲಕ (ದೇವರೊಂದಿಗೆ) ಸಂಧಾನ ಹೊಂದಿದವರಾಗಿ ಅಂಗೀಕೃತವಾಗಿದ್ದರು. ಆದಾಮನಲ್ಲದೆ ಬೇರೊಬ್ಬ ತಂದೆಯಿಂದ ಜೀವ ಪಡೆದಿದ್ದ ಕ್ರಿಸ್ತನು ಹೊರತಾಗಿ ಎಲ್ಲರೂ ತಮ್ಮ ಜೀವವನ್ನು (ಅಂದರೆ ನಿರಂತರವಾಗಿ ಪರಿಪೂರ್ಣತೆಯುಳ್ಳವರಾಗಿ ಜೀವಿಸುವದನ್ನು) ಕಳೆದುಕೊಂಡ–ವರಾಗಿದ್ದರು. ಆದಾಮನು ಮತ್ತು ಆತನಲ್ಲಿ ಜೀವ ಕಳಕೊಂಡ–ವರೆಲ್ಲರಿಗಾಗಿ ಕ್ರಿಸ್ತನು ತಾನೇ ನಿಜರೂಪದ ದೋಷಪರಿಹಾರಕ ಯಜ್ಞವಾಗಿದ್ದನು.

ಹೀಗಿರಲಾಗಿ, ಅನ್ಯಜನಗಳು ಈ ಸಾಮ್ಯದಲ್ಲಿನ ತಪ್ಪಿಹೋದ ಮಗನಲ್ಲಿ ಅರ್ಥೈಸಲ್ಪಟ್ಟಿರುವರೆನ್ನುವದಕ್ಕಾಗಲಿ ಇಲ್ಲವೇ ನಿದರ್ಶಿ–ಸಲ್ಪಟ್ಟಿರುವರೆನ್ನುವದಕ್ಕಾಗಲಿ ಸಾಧ್ಯವಾಗದು, ಯಾಕೆಂದರೆ ಅವರು ಎಂದೂ ಮಕ್ಕಳಾಗಿರಲಿಲ್ಲ, ಅಲ್ಲದೆ ಅವರು ತಂದೆಯ ಮನೆಯನ್ನು ತೊರೆಯಲು ಸಾಧ್ಯವಾಗದು ಕಾರಣ ಅವರು ಎಂದೂ ಆ ಮನೆಯಲ್ಲಿರಲಿಲ್ಲ. ಇಲ್ಲಿ ಸೂಚಿತವಾದ ವರ್ಗವನ್ನು ನಾವು ಬೇರೆಡೆಯಲ್ಲಿ ನೋಡಬೇಕು.

ಇತರರು ಸಲಹೆಮಾಡಿರುವದೇನಂದರೆ, ಹಿರಿಮಗನು ಸುವಾರ್ತಾಯುಗದಲ್ಲಿನ "ಜಯಶಾಲಿಗಳು" ಹಾಗೂ ಕಿರಿಮಗನು ಅದರಲ್ಲಿನ "ಮಹಾಸಮೂಹ" ಇವುಗಳಲ್ಲಿ ಸೂಚಿತವಾಗಿರುವ–ದೆಂಬುದು: ತಮ್ಮ ಒಡಂಬಡಿಕೆಯಾನುಸಾರ ಜೀವಿಸಲು ವಿಫಲರಾದವರು ಆ ತಪ್ಪಿಹೋದ ಮಗನಲ್ಲಿ ಸೂಚಿತವಾಗಿದ್ದು ಅವರು ತಮ್ಮ ಆತ್ಮಿಕ ಸೌಲಭ್ಯಗಳನ್ನು ನಷ್ಟಪಡಿಸಿಕೊಂಡವರೆಂದು ಹೇಳಲಾಗಿರುವದು. ಸಾಂಕೇತಿಕವಾದ ಸುಂಕದವರು ಹಾಗು ಸೂಳೆಯರು ಇವರೊಂದಿಗೆ ಪ್ರಾಪಂಚಿಕ ಸ್ನೇಹಸಮ್ಮತಿಗಳನ್ನು ಅನುಭವಿಸುತ್ತಿರುವರಾಗಿದ್ದು, ತಮ್ಮ ಒಡಂಬಡಿಕೆಯಾನುಸಾರ ಒಡೆಯನ ಸೇವೆಯಲ್ಲಿ "ಅನುದಿನವೂ ಸಾಯುತ್ತಲಿದ್ದು" ಒಡಂಬಡಿಕೆಯನ್ನು ನಂಬಿಗಸ್ತರಾಗಿ ಕೈಗೊಳ್ಳುವದರ ಮೂಲಕ–ವಾಗಿ ಉಂಟಾಗುವ ನಿಂದನೆಯನ್ನು ಅನುಭವಿಸುವದರಿಂದ ಇವರು ವಿಮುಕ್ತರಾಗಿರುವರು. ಆದರೆ ಈ ನಿರೂಪಣೆಯು ಈ ಸಾಮ್ಯದ ಅನುಕ್ರಮವನ್ನು ಹಿಂದುಮುಂದು ಮಾಡಿ ತಪ್ಪಿಹೋದ ಮಗನನ್ನು ಲೋಕದಿಂದ ಸಂಭವಿಸುವಂಥ ನಿಂದನೆ ಮತ್ತು ವಿರೋಧಗಳಿಂದ ಬಿಡುಗಡೆಹೊಂದಿದವನಾಗುವಂತೆ ಮಾಡಿರು–ವದು. ಅಲ್ಲದೆ ಕ್ರಿಸ್ತನ ಹಾಗು ನೀತಿಯ ನಿಮಿತ್ತವಾಗಿ ಬಾಧೆಯನ್ನು ಅನುಭವಿಸುವವರನ್ನು ಯಾವ ಬಾಧೆಗಳನ್ನೂ ಅನುಭವಿಸದ ಹಿರೀಮಗನಲ್ಲಿ ಸೂಚಿಸಲ್ಪಟ್ಟಿರುವದು. ಈ ಸಾಮ್ಯದಲ್ಲಿ ಹಿರೀಮಗನು ಅನ್ನವಸ್ತ್ರಗಳನ್ನು ಇತರ ಸೌಕರ್ಯಗಳು ಮುಂತಾದ ಒಳ್ಳೆಯ ಸಂಗತಿಗಳೆಲ್ಲವನ್ನೂ ಯಥೇಚ್ಛವಾಗಿ ಹೊಂದಿದವ–ನಾಗಿದ್ದನು. ಮತ್ತು ತಪ್ಪಿಹೋದ ಆ ಮಗನು ಹರಕು ವಸ್ತ್ರಗಳನ್ನು ತೊಟ್ಟು ಹಸಿದವನಾಗಿ ಕಾಲಿಗೆ ಜೋಡಿಲ್ಲದೆ ಸಂಕಟಪಡುವಂಥ–ವನಾಗಿ ಹಂದಿಗಳೊಂದಿಗೆ (ಅವುಗನ್ನು ಕಾಯುವಂತವನಾಗಿ) ಹೊರಹಾಕಲ್ಪಟ್ಟವನಾಗಿದ್ದನು.

ಈ ಸಾಮ್ಯವನ್ನು ಬಹು ಸಮರ್ಥನೀಯವಾಗಿ ಹಾಗು ಸಮಂಜಸವಾಗಿ ಅನ್ವಯಿಸುವಂತಾಗಲು, ಇದರಲ್ಲಿನ ಎಲ್ಲಾ ಹಂತಗಳನ್ನು ಹಾಗು ವಾಸ್ತವಾಂಶಗಳನ್ನು ಈ ಮುಂದಿನ ರೀತಿಯಲ್ಲಿ ಪರಿಗಣಿಸಲಾಗಿರುವದು:

ಈ ಸಾಮ್ಯದಲ್ಲಿನ ಹಿರೀಮಗನು ಫರಿಸಾಯರನ್ನು ಹಾಗು ಕಿರೀಮಗನು ಸುಂಕದವರು ಮತ್ತು ಪಾಪಿಗಳನ್ನು ಸೂಚಿಸುವರು. ಈ ಸನ್ನಿವೇಶವು ತೋರಿಸಿಕೊಡುವದೇನಂದರೆ ಯೆಹೂದ್ಯರಲ್ಲಿನ "ಕೆಳವರ್ಗದವರನ್ನು" ಅಂದರೆ ದೇವರ ನಿಯಮಗಳನ್ನು ಹಾಗೂ ತಮ್ಮ ಒಡಂಬಡಿಕೆಯನ್ನು ಗೌರವಿಸದೆ ಪಾಪಮಯ ಜೀವಿತ ವನ್ನು ನಡೆಸುತ್ತಿರುವವರನ್ನು ನಮ್ಮ ಕರ್ತನು ಅಂಗಿಕರಿಸಿಕೊಳ್ಳಲು ಇಚ್ಛೆಯುಳ್ಳವನಾಗಿರುವಂಥದ್ದು ಫರಿಸಾಯರ ಸಿಟ್ಟನ್ನು ಕೆರಳಿಸಿತ್ತೆಂಬದು. ಈ ಫರಿಸಾಯರು ದೇವರ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು ಹಾಗು ಈ ವಿಷಯವು ಪ್ರಶಂಸನೀಯವಾಗಿತ್ತು; ಆದರೆ ಅವರು ತಮ್ಮ ಧರ್ಮದ ಬಗ್ಗೆ ಹೆಮ್ಮೆಯುಳ್ಳವರಾಗಿ ತಮ್ಮ ಒಳ್ಳೆತನವನ್ನು ಹೊಗಳಿಕೊಳ್ಳುತ್ತಿದ್ದುದು; ಹಾಗು ಅವರು ಧರ್ಮಭ್ರಷ್ಟರನ್ನು ನಿಕೃಷ್ಟವಾಗಿ ಕಾಣುವವರಾಗಿ ಅವರನ್ನು ನಿರಾಕರಿಸಿ ಅವರಿಗೆ ಮನ್ನಣೆ ನೀಡುತ್ತಿರಲಿಲ್ಲ; ಇಲ್ಲವೆ ಅವರೊಡನೆ ಮಾತನಾಡದ ಅಥವಾ ಅವರೊಂದಿಗೆ ಊಟ ಮಾಡದ ಕಾರಣ ಅವರು ನಿಂದನಾರ್ಹವಾಗಿದ್ದರು; ಇದಕ್ಕೂ ಮಿಗಿಲಾಗಿ ಅವರು ತಾವು ಹೆಮ್ಮೆಪಡುವದರಲ್ಲಿ ಒಂದು ವಾಸ್ತವಾಂಶವನ್ನು ಅಂಗೀಕರಿಸಿಕೊಳ್ಳಲು ವಿಫಲರಾಗಿದ್ದರು, ಅದೇನಂದರೆ ದೇವರ ಆಜ್ಞೆಗಳನ್ನು ಅತ್ಯುತ್ತಮವಾಗಿ ಅನುಸರಿಸುತ್ತಿರುವಂಥ ಅವರಿಗೆ ಪರಿಪೂರ್ಣವಾದ ವಿಧೇಯತೆಯ ಕೊರತೆಯಿತ್ತು.

ನಮ್ಮ ಕರ್ತನು ಕಟ್ಟುನಿಟ್ಟಾಗಿ ಧರ್ಮವಿಧಿಗಳನ್ನು ಅನುಸರಿ-ಸುತ್ತಿದ್ದುದು (ಏಕೆಂದರೆ ಯೆಹೂದ್ಯನಾಗಿ ಧರ್ಮಶಾಸ್ತ್ರಾಧೀನನಾಗಿ ಹುಟ್ಟಿದ ಆತನು ತನ್ನ ಮರಣಪರ್ಯಂತರ ಆಜ್ಞಾವಿಧಿಗಳು ಆದೇಶಿಸುವಂಥದನ್ನು ಗೌರವಿಸುವ ಕಟ್ಟುಪಾಡಿನಲ್ಲಿದ್ದನು. ಆತನ ಮರಣವು ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯನ್ನು ಅಂತ್ಯಗೊಳಿಸಿತು.) ನಿಸ್ಸಂದೇಹವಾಗಿ ಮೊದಲಲ್ಲಿ ಆತನನ್ನು ಫರಿಸಾಯರಿಗೆ ಪ್ರೀತಿಪಾತ್ರನನ್ನಾಗಿ ಮಾಡಿತ್ತು: ಇದರ ಅನುಸಾರವಾಗಿಯೇ ಆತನು ಅನೇಕ ಸಾರಿ ಫರಿಸಾಯರಲ್ಲಿ ಕೆಲವರ ಮನೆಯಲ್ಲಿ ಅತಿಥಿಯಾಗಿದ್ದುದನ್ನು ನಾವು ನೋಡುತ್ತೇವೆ. (ಲೂಕ 7:36; 5:17; ಯೋಹಾನ 3:1–2) ಆದರೆ ಆತನು ಪಾಪಿಗಳನ್ನು ಸೇರಿಸಿಕೊಂಡು ಅವರೊಡನೆ ಊಟ ಮಾಡುವದನ್ನು ಫರಿಸಾಯರು ನೋಡಿದಾಗ ಈತನ ನೀತಿಯು ತಮ್ಮ ನೀತಿಗಿಂತಲೂ ಬೇರೆಯೆಂಬುದನ್ನು ಗ್ರಹಿಸಲಾರಂಭಿಸಿ, ಕತ್ತಲೆಯು ಬೆಳಕನ್ನು ವಿರೋಧಿಸಿದಂತೆ, ಅವರು ಆತನನ್ನು ಹಗೆಮಾಡುತ್ತಿದ್ದರು. ಇದಕ್ಕೂ ಮಿಗಿಲಾಗಿ, ಆತನ ಉಪದೇಶಗಳು ತಮ್ಮ ವಿರೋಧವಾಗಿ ಪ್ರತಿಬಿಂಬಿಸು-ವವುಗಳಾಗಿದ್ದು ತಾವು ಹೇಳಿಕೊಳ್ಳುವ ಅಪರಿಪೂರ್ಣವಾದ ಪರಿಶುದ್ಧತೆಯನ್ನು ತೀಕ್ಷ್ಣವಾಗಿ ಖಂಡಿಸುತ್ತಿರುವದೆಂಬುದನ್ನು ಶೀಘ್ರವಾಗಿ ಕಂಡು ಕೊಳ್ಳಲಾರಂಭಿಸಿದ್ದರು. ಹೀಗೆ ಈ ಸಾಮ್ಯ ಹಾಗು ಇದೇ ವಾಕ್ಯೋಪದೇಶದಲ್ಲಿನ ಆತನ ಇತರ ಸಾಮ್ಯಗಳು ಫರಿಸಾಯರಿಗೆ ಒಂದು ತಿದ್ದುಪಾಟಿಯಾಗಿ ಹೇಳಲ್ಪಟ್ಟಿತ್ತು, ಯಾಕೆಂದರೆ ಅವರು ಆತನು ಮಾಡುತ್ತಿದ್ದ ಉಪದೇಶದ ಬಗ್ಗೆ ಇಲ್ಲವೇ ಹಿಂದೆ ಸರಿದವರಾಗಿ ಅಪಕೀರ್ತಿಗೊಳಗಾದವರ ವಿಷಯ ವಾಗಿ ಏನನ್ನಾ ದರೂ ಆತನು ಮಾಡುತ್ತಿದ್ದರ ಬಗ್ಗೆ ಆತನಿಗೆ ವಿರೋಧವಾಗಿ ಗುಣುಗುಟ್ಟುವವರಾಗಿದ್ದರು. – ಲೂಕ 15:1–3 ನೋಡಿ.

ಮೊದಲಲ್ಲಿ ಯೆಹೂದ್ಯರೆಲ್ಲರೂ ದೇವರೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಸೇರಿದ್ದವರಾಗಿ ಮತ್ತು ಹೀಗೆ ಅವರು (ಛಾಯಾರೂಪವಾಗಿ) ಒಂದು ಮಾದರಿಯಲ್ಲಿ ಆತನ ಮಕ್ಕಳಾಗಿದ್ದರು. ಸುವಾರ್ತಾಯುಗದಲ್ಲಿನ ಮಕ್ಕಳ "ಮನೆತನದವರಿಗೆ" ಪ್ರತಿಯಾಗಿದ್ದ ಸೇವಕರ "ಮನೆತನ" ಎಂದು ಕರೆಯಲ್ಪಟ್ಟವರಾಗಿದ್ದರೂ ಅವರು ಆತ್ಮಿಕವಾದ ಮಕ್ಕಳ ಮನೆತನದವರಿಗೆ ಛಾಯಾರೂಪದಲ್ಲಿ ಮಾದರಿಯಾಗಿರು-ವರೆಂಬುದನ್ನು ಮತ್ತು ಪಾಪಮಾಡುವದಕ್ಕೆ ಮೊದಲು ಆದಾಮನು ಮಾನವನಾಗಿ ದೇವರ ಮಗನಾಗಿದ್ದಂತೆಯೇ ಪಾಪಕ್ಷಮೆಯನ್ನು ಹೊಂದಿ ದೇವರೊಂದಿಗೆ ಹೊಂದಾಣಿಕೆಗೆ ಹಿಂದಿರುಗುವರೆಲ್ಲರೂ ಮತ್ತೆ ಮಕ್ಕಳಾಗುವರೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವರು ಭೂಸಂಬಂಧವಾದ ಇಲ್ಲವೇ ಆತ್ಮಿಕಸಂಬಂಧವಾದ ಸಂತಾನದವರಾಗಿರುವರು. ಹೀಗೆ ಈ ಸಾಮ್ಯದಲ್ಲಿ ಹೇಳಿರುವಂತೆ ಯೆಹೂದ್ಯರೊಡನೆ ಮಾಡಿಕೊಂಡ ಒಡಂಬಡಿಕೆಯ ಮೂಲಕವಾಗಿ ಇಸ್ರಾಯೇಲ್ಯರೆಲ್ಲರೂ (ಮಾನವಕುಲದಲ್ಲಿನ) ದೇವರ ಮಕ್ಕಳಂತೆ ನಡೆಸಿಕೊಳ್ಳಲ್ಪಟ್ಟಿ-ದ್ದರು. ಸೀನಾಯಿ ಬಳಿಯಲ್ಲಿ ಒಡಂಬಡಿಕೆ ಮಾಡಲ್ಪಟ್ಟ ದಿನದಿಂದ ಈ ಸಂಬಂಧವು ಪ್ರಾರಂಭವಾಗಿತ್ತು.

ವಿಧೇಯರಾದ ಮಕ್ಕಳ ಬಾಂಧವ್ಯಕ್ಕೆ ಅನುಗುಣವಾಗಿ ನಡೆದುಕೊಂಡವರಾಗಿ ಎಲ್ಲರೂ ಮೊದಲಲ್ಲಿ ದೇವಾನುಗ್ರಹದಲ್ಲಿ ನೆಲೆಗೊಂಡವರಾಗಿ "ಮನೆಯಲ್ಲಿ" ಇರುವಂಥವರಾಗಲು ಪರಿಶ್ರಮಿಸಿದ್ದರು. ನಮ್ಮ ಕರ್ತನ ದಿನದಲ್ಲಿ ಈ ಸಾಮ್ಯದ ಮೊದಲ ಅಥವಾ ಹಿರಿಯ ಮಗನು ಅತಿ ಪ್ರಾಮುಖ್ಯವಾಗಿ ಫರಿಸಾಯರಿಂದ ಸೂಚಿತನಾಗಿದ್ದನು. ಆದರೆ ಮತ್ತೊಂದು ವರ್ಗವು ಬೆಳೆದುಬಂದಿತ್ತು. ಅದು ದೇವಾನುಗ್ರಹವನ್ನು ಹೊಂದಿಕೊಂಡ ತರುವಾಯ ಪಾಪದ ಮಾರ್ಗಗಳಲ್ಲಿ ಅಲೆದಾಡಿ ದೇವರನ್ನು ಮರೆತುಹೋದ ಸ್ಥಿತಿಗೆ ತಲುಪಿ ಆತನ ಪ್ರೀತಿ ಪರಿಪಾಲನೆಗಳನ್ನು ವ್ಯರ್ಥಪಡಿಸಿಕೊಂಡಿತ್ತು. ನಮ್ಮ ಕರ್ತನ ದಿನದಲ್ಲಿ ಕಿರೀಮಗನು ಸುಂಕದವರು ಮತ್ತು ಪಾಪಿಗಳಲ್ಲಿ ಸೂಚಿತನಾಗಿದ್ದನು.

ಪಾಪವು ಯಾವಾಗಲೂ ಕೆಲವು ಬಗೆಯಲ್ಲಿ ದುರ್ಗತಿಯನ್ನು ತಂದುಕೊಡುವದು, ಅಲ್ಲದೆ ಹಲವು ಬಾರಿ ಅನೇಕ ರೀತಿಯ ದುರ್ಗತಿಯನ್ನು ತರುವದು: ಸುಂಕದವರು ಮತ್ತು ಪಾಪಿಗಳು ತಪ್ಪಿಹೋದ ಕಿರಿಯ ಮಗನ ಕಥೆಯನ್ನು ಕೇಳಿದಾಗ ತಮ್ಮಲ್ಲಿರುವ ಕೊರತೆಯ ಬಗ್ಗೆ ಅರಿವುಂಟಾಗಿ ಅದರಲ್ಲಿ ಚಿತ್ರಿತಗೊಂಡ ತಮ್ಮ ದುಃಸ್ಥಿತಿಯನ್ನು ಅರ್ಥಮಾಡಿ-ಕೊಳ್ಳುವರೆಂದು ಒಬ್ಬರು ಊಹೆಮಾಡ ಬಯಸಲು ಸಾಧ್ಯ. ಆ ತಪ್ಪಿಹೋದವನಿಗೆ ಹೇಗೆ "ತನಗೆ ಬುದ್ಧಿಬಂತೆಂದು" ಮತ್ತು ಆ ತಂದೆಯು ಹೇಗೆ "ಅವನು ಬಹು ದೂರದಲ್ಲಿರುವಾಗಲೇ ಕಂಡನು" ಎಂಬುದನ್ನು ಒಡೆಯನು ಹೇಳಲು ಮುಗಿಸುವ ಮೊದಲೇ ಕೇಳುತ್ತಿದ್ದ ಅನೇಕರ ಕಣ್ಣುಗಳು ಒದ್ದೆಯಾಗಿದ್ದ-ವೆಂಬುದರಲ್ಲಿಯೂ ಹಾಗೂ ಅವರಲ್ಲಿ ಅನೇಕರ ಹೃದಯಗಳು ಭಾವಾವೇಶ ಅನುಕಂಪದಿಂದ ತುಂಬಿಹೋಗಿ ಸೈತಾನನ್ನು ಸೇವಿಸುವದರಿಂದ ತಿರುಗಿಕೊಂಡು ದೇವಾನುಗ್ರಹ ಪ್ರೀತಿಗಳ

ಸೇವನೆಯನ್ನು ಇದರಂತೆಯೇ ಬಯಸುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ.

ಬಡಪಾಯಿಯಾಗಿದ್ದ ಆ ತಪ್ಪಿಹೋದವರಿಗೆ ದೇವರ ಪ್ರೀತಿಯ ವಿಷಯವಾಗಿಯೂ, ಹಾಗು ಅವರನ್ನು ಕ್ಷಮಿಸಲು ಇಚ್ಛೆಯುಳ್ಳವನಾಗಿರುವನೆಂದೂ, ಅವರು ಹಿಂದಿರುಗಿ ಮನೆಗೆ ಮತ್ತೆ ಬರುವದನ್ನು ಸ್ವಾಗತಿಸುವನೆಂದು ಆತನು ಹೇಳುವದನ್ನು ಫರಿಸಾಯರು ಸುತ್ತಲೂ ನಿಂತುಕೊಂಡು ಅಕ್ಷೇಪಿಸುವ ಚಿತ್ರಣವು ವಾಸ್ತವಾಂಶಗಳಿಗೆ ಹೇಗೆ ಸರಿಬೀಳುವಂಥದ್ದಾಗಿರುವದು. ಸಾಮ್ಯದಲ್ಲಿನ ಹಿರೀಮಗನಿಗೆ "ಸಿಟ್ಟುಬಂದು ಒಳಗೆ ಹೋಗಲೊಲ್ಲದೆ ಇದ್ದನು." ಸ್ವನೀತಿಯುಳ್ಳವರಾದ ಫರಿಸಾಯರೂ ಸಹ ಸಿಟ್ಟುಗೊಂಡು ಆ ರಾಜ್ಯದಲ್ಲಿ ಸೇರಲು ನಿರಾಕರಿಸಿದ್ದರು. ದೇವರ ವಾಗ್ದಾನಾನುಸಾರವಾಗಿ ಆ ರಾಜ್ಯವು ಆಗ ಸಮೀಪವಾಗಿದ್ದು ಮೊದಲು ಆ ಜನಾಂಗದವರಿಗೆ ನೀಡುವ ಪ್ರಸ್ತಾಪವನ್ನು ಮಂಡಿಸಲಾಗಿತ್ತು. ನಮ್ಮ ಕರ್ತನು ಇನ್ನೊಂದು ಸಂದರ್ಭದಲ್ಲಿ ಅವರಿಗೆ ಹೀಗೆ ಹೇಳಿದ್ದನು: "ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ಪರಲೋಕರಾಜ್ಯದ ಬಾಗಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ; ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗಗೊಡಿಸುವದಿಲ್ಲ." (ಮತ್ತಾಯ 23:13) ಹಾಗು ಮತ್ತೆ ಆತನು ಹೇಳಿದ್ದು, "ಭ್ರಷ್ಟರೂ (ಸುಂಕದವರೂ) ಸೂಳೆಯರೂ ನಿಮಗಿಂತ ಮೊದಲು ದೇವರ ರಾಜ್ಯವನ್ನು ಸೇರುವರು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." (ಮತ್ತಾಯ 21:31) ಸ್ವನೀತಿಯುಳ್ಳ ಬಡಪಾಯಿಗಳಾದ ಫರಿಸಾಯರು! ಈ ದಿನದ ವರೆಗೂ ಅವರು ಅಸೂಯೆಯುಳ್ಳವರು ಹಾಗು "ಒಳಗೆ ಹೋಗಲೊಲ್ಲದವರು" ಆಗಿರುವರು. ಒಂದು ವರ್ಗವಾಗಿ ಅವರು ಷರತ್ತುಗಳಿಂದ ಕೂಡಿದ ಆ ರಾಜ್ಯದ ಪ್ರಸ್ತಾವನೆಯನ್ನು-- ತಮ್ಮಿಂದ ಅದನ್ನು ಸಂಪೂರ್ಣವಾಗಿ ತೆಗೆದುಬಿಡುವ ಹಾಗು ಸುಂಕದವರು ಹಾಗೂ ಪಾಪಿಗಳಿಗಿಂತಲೂ ಇನ್ನೂ ಕನಿಷ್ಠವೆಂದು ಅವರು ಎಣಿಸಿದ್ದ ಒಂದು ವರ್ಗಕ್ಕೆ ಅದನ್ನು ನೀಡಲಾಗುವ ಪರ್ಯಂತರವಾಗಿ-ಅದನ್ನು ನಿರಾಕರಿಸಿದ್ದರು. (ಮತ್ತಾಯ 21:43) ಅವರು "ನಾಯಿಗಳು" ಎಂದು ಎಣಿಸುವ ಅನ್ಯಜನರಿಗೆ ಅದನ್ನು (ಆ ರಾಜ್ಯದ ಪ್ರಸ್ತಾವನೆಯನ್ನು) ನೀಡಲಾಗಿತ್ತು. ಪರದೇಶಿಗಳೂ ಅನ್ಯರೂ ಆಗಿದ್ದು ಮಕ್ಕಳಾಗದೆ ಇದ್ದವರಿಂದ ಮದಲಗಿತ್ತಿಯ (ವರ್ಗದ) ಸದಸ್ಯರಾಗುವದಕ್ಕೆ ಹಾಗೂ ಕ್ರಿಸ್ತನ ರಾಜ್ಯವಾಗುವದಕ್ಕೆ ಆಯ್ಕೆಮಾಡಲಾಗುತ್ತಿರುವದು.

ವಿಮೋಚಕನ ಬಾಯಿಂದ ಹೊರಟುಬಂದ ಕೃಪಾಪೂರ್ಣ-ವಾದ ಮಾತುಗಳನ್ನು ಕೇಳಿದ ಸುಂಕದವರೂ ಹಾಗು ಪಾಪಿಗಳು ಮಾಡಿದಂತೆ ತನಗೆ ಮಕ್ಕಳೂ ಕ್ರಿಸ್ತನೊಂದಿಗೆ ಸಹಬಾಧ್ಯರೂ ಆಗುವದಕ್ಕೆ ಅನ್ಯಜನರಲ್ಲಿ ದೇವರಿಂದ ಅಂಗೀಕರಿಸಲ್ಪಟ್ಟವರಾದ ನಮಗೆ ಬಹುಶಃ ಈ ಸಾಮ್ಯದಲ್ಲಿನ ಭಾವದಲ್ಲಿ ಸಂಪೂರ್ಣವಾಗಿ ಸೇರಿದವರಾಗಲು ಸಾದ್ಯ. ಆದಾಮನಲ್ಲಿ ದಂಡನೆಗೆ ಒಳಗಾದವರೆಲ್ಲರ ಪಾಪಪರಿಹಾರಕ್ಕಾಗಿ ತಂದೆಯು ಒಂದು ಮಹಾ ಯಜ್ಞವನ್ನು ಸಿದ್ಧಮಾಡಿರುವನೆಂಬುದನ್ನು ಪರದೇಶಿಗಳೂ ಅನ್ಯರೂ ಆಗಿದ್ದ ನಾವು ಕಲಿತುಕೊಂಡಿದ್ದೇವೆ. ತನ್ನ ಪರಿವಾರಕ್ಕೆ ಪ್ರೀತಿಪೂರ್ವಕವಾಗಿ ಸ್ವಾಗತಿಸಿರುವದನ್ನು ಕೇಳಿ ಅದನ್ನು ನಾವು ಅನುಭವಕ್ಕೆ ತೆಗೆದುಕೊಂಡಿರುವೆವು. ಪಾಪ ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದರೂ ಈಗ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರಿಗೋಸ್ಕರವಾಗಿ ಬದುಕುವವರಾಗಿದ್ದೇವೆ. ನಮ್ಮ ಅನೀತಿಯೆಂಬ ಕೊಳಕು ವಸ್ತ್ರಕ್ಕೆ ಬದಲಾಗಿ ಕ್ರಿಸ್ತನ ನೀತಿಯೆಂಬ "ಉತ್ತಮವಾದ ವಸ್ತ್ರವನ್ನು" ನಾವು ಸ್ವೀಕರಿಸಿ-ರುವೆವು; ನಾವು ಮಕ್ಕಳಾಗಿ ಬಾಧ್ಯರಾಗಿದ್ದೇವೆಂಬುದನ್ನು ಸೂಚಿಸುವ ಪವಿತ್ರಾತ್ಮನ ಸಾಕ್ಷಿಯೆಂಬ ಉಂಗುರವನ್ನು ಸ್ವೀಕರಿಸಿದವರಾಗಿರುವೆವು; ಆಗಾಗ್ಗೆ ಉಂಟಾಗುವ ಈ ದುಷ್ಟಲೋಕದಲ್ಲಿನ ಹೀನಸ್ಥಿತಿಯ ತೀವ್ರತೆಯ ಸ್ಪರ್ಷದ ಅನುಭವವನ್ನು ಸಹಿಸಿಕೊಳ್ಳುವ ಸಲುವಾದ ಪಾದರಕ್ಷೆಯನ್ನು ಪಡೆದವರಾಗಿದ್ದೇವೆ; ಮತ್ತು ಇವೆಲ್ಲವುಗಳಿಗೆ ಮಿಗಿಲಾಗಿ ದೈವ ಪರಿವಾರಕ್ಕೆ ಪುತ್ರಭಾವದೊಡನೆ ಅಂಗೀಕೃತರಾಗಿರುವಕ್ಕೆ ಗುರುತಾಗಿಯೂ, ನಾವು ದೇವರೊಡನೆ ಮತ್ತೆ ಸಾಮರಸ್ಯಕ್ಕೆ ಬಂದಿರುವದರ ಗುರುತಾಗಿರುವ ಮುದ್ದು ಎಂಬ ಮುದ್ರೆಯನ್ನು ಸ್ವೀಕರಿಸಿದವರಾಗಿರುವೆವು. ಸತ್ಯವೇದದ ಇತರ ವಾಕ್ಯಭಾಗಗಳಲ್ಲಿ ತೋರಿಸಲಾಗಿರುವಂತೆ ಈಡನ್ನು ಕೊಡುವ ಅಗತ್ಯತೆಯ ಯಾವ ಅಂಶವನ್ನೂ ಈ ಸಾಮ್ಯದಲ್ಲಿ ತೋರಿಸಲಾಗಿಲ್ಲ. ಇದು ಹೇಗೂ ಈ ಸಾಮ್ಯದ ಬಗ್ಗೆ ನೀಡಲಾದ ಈ ವ್ಯಾಖ್ಯಾನಕ್ಕೆ ಹೊಂದಿಕೆ-ಯಾಗದಿದ್ದರೂ ಇದಕ್ಕೆ ಸರಿಬೀಳುವಂಥದ್ದಾಗಿರುವದು; ಏಕೆಂದರೆ ಇಸ್ರಾಯೇಲ್ಯರೆಲ್ಲರೂ ಒಟ್ಟಾಗಿ ತಮ್ಮ ಒಡಂಬಡಿಕೆ ಸ್ಥಾಪನೆಯಾದುದರ ಸಂಕೇತವಾಗಿರುವ ಛಾಯಾರೂಪದ ದೋಷಪರಿಹಾರಕ ಯಜ್ಞದ ಮೂಲಕವಾಗಿ ಪ್ರತಿವರುಷವೂ ದೇವರೊಡನೆ ಸಂಧಾನವಾಗುತ್ತಿದ್ದರು. ಆದುದರಿಂದ ಇದು ತಪ್ಪಿಹೋದ ಮಗನಿಗೆ ಒಂದು ಸಚಿತ್ರ ನಿದರ್ಶನವಾಗಿದ್ದುದಲ್ಲದೆ ದಂಡನೆಗೆ ಒಳಗಾಗಿ ಅನ್ಯರೂ ಪರದೇಶಿಗಳೂ ಆದವರ ವಿಮೋಚನೆಗೆ ಅಲ್ಲವೆಂಬದು ಸ್ಪಷ್ಟ.

ಫರಿಸಾಯರಿಗೋಸ್ಕರವಾಗಿರುವ ಈ ಸಾಮ್ಯದಲ್ಲಿನ ಪಾಠವು ತಾತ್ವಿಕವಾಗಿ ಬಹು ವಿಶಾಲವಾಗಿ ಅನ್ವಯವಾಗುವಂಥದ್ದು; ಅದೇನಂದರೆ ದೇವರೊಂದಿಗೆ ಸಾಮರಸ್ಯದಲ್ಲಿರುವೆವೆಂದು ಹೇಳಿಕೊಳ್ಳುವವರೆಲ್ಲರೂ, ಅಲ್ಲ, ಪರಿಶುದ್ಧಾತ್ಮದ ಭಾವವನ್ನು ಹೊಂದಿರುವರೆಲ್ಲರೂ ಒಬ್ಬ ಪಾಪಿಯು ದೇವಾನುಗ್ರಹಕ್ಕೆ ಹಿಂದಿರುಗುವದನ್ನು ಕಾಣುವಾಗ ಅವರು ಸಂತೋಷಿಸ-ಬೇಕೆಂಬುದೇ. ಇತರ ಯಾವುದೇ ಭಾವಾಭಿಪ್ರಾಯವು ಖಂಡಿತವಾಗಿಯೂ, ಅದು ಫರಿಸಾಯರಿಗೆ ಮಾಡಿದಂತೆ, ಹಾನಿಯನ್ನುಂಟುಮಾಡುವುದು. ಫರಿಸಾಯರು ಒಂದು ವರ್ಗವಾಗಿ ದೇವರಾಶೀರ್ವಾದವನ್ನು ಹಿಂದಿನ ಕಾಲದಲ್ಲಿ ಇಲ್ಲವೇ ಮುಂದೆ ಎಂದಾದರೂ ಕೊಡುವದಿದ್ದರೆ ಅದು ತಮಗೇ ಹಂಚಿಕೊಡಬೇಕೆಂಬ ಸ್ವಾರ್ಥಭಾವದಲ್ಲಿದ್ದ ಕಾರಣ ಅವರು ಅನರ್ಹಗೊಂಡಿದ್ದರು. ಕುರುಡುತನವನ್ನು ತೆಗೆದುಹಾಕುವ ಕಾಲವು ಬೇಗನೆ ಇಲ್ಲಿಗೆ ಬರುವದೆಂಬುದಕ್ಕೆ ದೇವರಿಗೆ ಕೃತಜ್ಞತೆಗಳು. (ಯೆಶಾಯ 35:5) ಈಗ ಸ್ವಾರ್ಥಭಾವದ ಆದಿಪತ್ಯದಲ್ಲಿರುವ ಬಹುಪಾಲಿನ ಹೆಚ್ಚು ಜನರು ಹೊಸ (ವ್ಯವಸ್ಥೆಯ) ಸನ್ನಿವೇಶಗಳಲ್ಲಿ ಪ್ರೀತಿಭಾವವನ್ನು ಕಲಿತುಕೊಂಡು ಅದನ್ನು ಅಭ್ಯಾಸ ಮಾಡುವರೆಂಬುದರಲ್ಲಿ ನಾವು

ಭರವಸವಿಟ್ಟುಕೊಳ್ಳೋಣ. ಸ್ವಾರ್ಥಿಯಾದ ಒಬ್ಬ ಮನುಷ್ಯನು ಆ ರಾಜ್ಯವನ್ನು ಸೇರುವಂಥಾಗಲು ಎಷ್ಟೋ ಕಠಿಣವಾಗುವದು. ಸ್ವಾರ್ಥದ ವಿಷಯದಲ್ಲಿ ನಾವು ಎಚ್ಚರಿಕೆಯಿಂದ ಇರೋಣ, ಅಲ್ಲದೆ ನಮ್ಮ ವಿವಾಹದ ವಸ್ತ್ರದಲ್ಲಿ ಪ್ರೀತಿದೈನ್ಯತೆಯೆಂಬ ಹೂವುಗಳ ಕಸೂತಿಮಾಡಿ ಅದನ್ನು ಅಲಂಕರಿಸಿ-ಕೊಳ್ಳುವವರಾಗೋಣ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ಅನ್ಯಾಯಗಾರನಾದ ಮನೆವಾರ್ತೆಯವನು, ಐಶ್ವರ್ಯವಂತನು ಮತ್ತು ಲಾಜರನು – ಇವರ ನಿದರ್ಶನಗಳು | -- | -- | 16:1–31 | -- |

# ಲೂಕ 16:1–31

ಯೇಸು ತನ್ನ ಶಿಷ್ಯರಿಗೂ ಹೇಳಿದ್ದೇನಂದರೆ–ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಒಬ್ಬ ಮನೆವಾರ್ತೆಯವನಿದ್ದನು. ಇವನ ವಿಷಯವಾಗಿ ಯಜಮಾನನ ಬಳಿಯಲ್ಲಿ–ಇವನು ನಿನ್ನ ಆಸ್ತಿಯನ್ನು ಹಾಳುಮಾಡುತ್ತಾ ಇದ್ದಾನೆ ಎಂದು ಯಾರೋ ದೂರು ಹೇಳಿರಲಾಗಿ ಯಜಮಾನನು ಅವನನ್ನು ಕರೆದು–ಇದೇನು ನಾನು ನಿನ್ನ ವಿಷಯದಲ್ಲಿ ಕೇಳುವ ಸಂಗತಿ? ನಿನ್ನ ಮನೆವಾರ್ತೆಯ ಲೆಕ್ಕವನ್ನು ಒಪ್ಪಿಸು; ನೀನು ಇನ್ನು ಮನೇವಾರ್ತೆಯವನಾಗಿರುವದಕ್ಕಾಗುವದಿಲ್ಲ ಎಂದು ಹೇಳಿದನು. ಹೀಗಿರಲಾಗಿ ಆ ಮನೇವಾರ್ತೆಯವನು–ನಾನೇನು ಮಾಡಲಿ? ನನ್ನ ಯಜಮಾನನು ನನ್ನಿಂದ ಈ ಮನೆವಾರ್ತೆ ಕೆಲಸವನ್ನು ತೆಗೆದುಬಿಡುತ್ತಾನಲ್ಲಾ. ಅಗೆಯುವದಕ್ಕೆ ನನಗೆ ಬಲವಿಲ್ಲ; ಭಿಕ್ಷಾ ಬೇಡುವದಕ್ಕೆ ನನಗೆ ನಾಚಿಕೆಯಾಗುತ್ತದೆ. ಈ ಮನೆವಾರ್ತೆ ಕೆಲಸದಿಂದ ನನ್ನನ್ನು ತೆಗೆದ ಮೇಲೆ ಜನರು ನನ್ನನ್ನು ತಮ್ಮ ಮನೆಗಳೊಳಗೆ ಸೇರಿಸಿಕೊಳ್ಳುವಂತೆ ನಾನು ಮಾಡಬೇಕಾದದ್ದು ಗೊತ್ತಾಯಿತು ಎಂದು ತನ್ನೊಳಗೆ ಅಂದುಕೊಂಡು ತನ್ನ ಯಜಮಾನನ ಸಾಲಗಾರರಲ್ಲಿ ಪ್ರತಿಯೊಬ್ಬನನ್ನೂ ಕರೆದು ಮೊದಲನೆಯವನನ್ನು–ನೀನು ನನ್ನ ಯಜಮಾನನಿಗೆ ಏನು ಕೊಡಬೇಕು ಎಂದು ಕೇಳಲು ಅವನು–ನೂರು ಬುದ್ದಲಿ ಎಣ್ಣೆ ಅಂದಾಗ ಅವನಿಗೆ–ಈ ನಿನ್ನ ಪತ್ರವನ್ನು ತೆಗೆದುಕೊಂಡು ಬೇಗ ಕೂತುಕೊಂಡು ಐವತ್ತು ಬುದ್ದಲಿ ಅಂತ ಬರಿ ಎಂದು ಹೇಳಿದನು. ಬಳಿಕ ಮತ್ತೊಬ್ಬನನ್ನು–ನೀನು ಏನು ಕೊಡಬೇಕು ಎಂದು ಕೇಳಲು ಅವನು–ನೂರು ಖಂಡಗ ಗೋದಿ ಅಂದಾಗ ಅವನಿಗೆ–ಈ ನಿನ್ನ ಪತ್ರವನ್ನು ತೆಗೆದುಕೊಂಡು ಎಂಭತ್ತು ಖಂಡಗ ಅಂತ ಬರಿ ಎಂದು ಹೇಳಿದನು. ಯಜಮಾನನು ಇದನ್ನು ಕೇಳಿ ಅನ್ಯಾಯಗಾರನಾದ ಆ ಮನೆವಾರ್ತೆಯವನನ್ನು–ಇವನು ಜಾಣತನ ಮಾಡಿದನು ಎಂದು ಹೊಗಳಿದನು. ಯಾಕಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ. ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ; ಹೀಗೆ ಮಾಡಿದರೆ ಅದು ನಿಮ್ಮ ಕೈಬಿಟ್ಟುಹೋದಾಗ ಅವರು ನಿಮ್ಮನ್ನು ಶಾಶ್ವತವಾದ ವಾಸಸ್ಥಾನಗಳಲ್ಲಿ ಸೇರಿಸಿ-ಕೊಳ್ಳುವರು ಎಂದು ನಾನು ನಿಮಗೆ ಹೇಳುತ್ತೇನೆ. ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗು-ವನು; ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾಗುವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು. ಹೀಗಿರುವದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು? ಮತ್ತೊಬ್ಬನ ಸೊತ್ತಿನ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಮ್ಮದನ್ನು ನಿಮಗೆ ಯಾರು ಕೊಟ್ಟಾರು? ಯಾವ ಆಳಾದರೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು; ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು, ಇಲ್ಲವೇ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ ಅಂದನು.

ಫರಿಸಾಯರು ಈ ಮಾತುಗಳನ್ನೆಲ್ಲಾ ಕೇಳಿ ತಾವು ಹಣದಾಶೆಯುಳ್ಳವರಾಗಿದ್ದರಿಂದ ಹಾಸ್ಯಮಾಡಿದರು. ಆಗ ಆತನು ಅವರಿಗೆ ಹೇಳಿದ್ದೇನಂದರೆ – ಮನುಷ್ಯರ ಮುಂದೆ ನೀತಿವಂತ – ರೆಂದು ತೋರಿಸಿಕೊಳ್ಳುವವರು ನೀವು; ಆದರೆ ದೇವರು ನಿಮ್ಮ ಹೃದಯಗಳನ್ನು ತಿಳುಕೊಂಡಿದ್ದಾನೆ. ಮನುಷ್ಯರಲ್ಲಿ ಶ್ರೇಷ್ಠವೆನಿಸಿ ಕೊಳ್ಳುವಂಥದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದೆ.

ಧರ್ಮಶಾಸ್ತ್ರವೂ ಪ್ರವಾದಿಗಳೂ ಯೋಹಾನನ ತನಕವೇ. ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ಅದರಲ್ಲಿ ಸಕಲರೂ ಬಲಾತ್ಕಾರವಾಗಿ ನುಗ್ಗುತ್ತಾರೆ.

ಧರ್ಮಶಾಸ್ತ್ರದೊಳಗಿನ ಒಂದು ಗುಡುಸಾದರೂ ಬಿದ್ದು ಹೋಗುವದಕ್ಕಿಂತಲೂ ಆಕಾಶವೂ ಭೂಮಿಯೂ ಅಳಿದು ಹೋಗುವದು ಸುಲಭ.

ತನ್ನ ಹೆಂಡತಿಯನ್ನು ಬಿಟ್ಟು ಬೇರೊಬ್ಬಳನ್ನು ಮದುವೆ-ಮಾಡಿಕೊಳ್ಳುವ ಪ್ರತಿಯೊಬ್ಬನು ವ್ಯಭಿಚಾರ ಮಾಡುವವನಾಗಿ-ದ್ದಾನೆ. ಮತ್ತು ಗಂಡಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗಿದ್ದಾನೆ.

ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು

ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖಸಂತೋಷ-ಪಡುತ್ತಿದ್ದನು. ಅವನ ಮನೇ ಬಾಗಿಲಲ್ಲಿ ಲಾಜರನೆಂಬ ಒಬ್ಬ ಭಿಕ್ಷಗಾರನು ಬಿದ್ದುಕೊಂಡಿದ್ದನು. ಇವನು ಮೈತುಂಬಾ ಹುಣ್ಣೆದ್ದವನು; ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕೆಂದಿದ್ದನು; ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು. ಹೀಗಿರುವಲ್ಲಿ ಸ್ವಲ್ಪಕಾಲದ ಮೇಲೆ ಆ ಭಿಕ್ಷಗಾರನು ಸತ್ತನು; ದೇವದೂತರು ಅವನನ್ನು ತೆಗೆದುಕೊಂಡುಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು; ಅವನಿಗೆ ಉತ್ತರಕ್ರಿಯೆಗಳು ಅದವು. ಅವನು ಪಾತಾಳದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿ-ತಂದೆಯೇ, ಅಬ್ರಹಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ ಎಂದು ಕೂಗಿ ಹೇಳಿದನು. ಆದರೆ ಅಬ್ರಹಾಮನು – ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ. ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಅದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು. ಆಗ ಅವನು-ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು. ಆದರೆ ಅಬ್ರಹಾಮನು-ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥವೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ ಅನ್ನಲು ಅವನು-ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಅಂದನು. ಅಬ್ರಹಾಮನು ಅವನಿಗೆ-ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ ಎಂದು ಹೇಳಿದನು.

*****

# ಅನ್ಯಾಯಗಾರನಾದ ಮನೇವಾರ್ತೆಯವನು

**ರೀಪ್ರಿಂಟ್ಸ್ ಪುಟ 2715**

## ಲೂಕ 16:1-13

**"ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ"**

ಈ ಭೋಜನ ವೇಳೆಯ ಸಂಭಾಷಣೆಯಲ್ಲಿ ಹೇಳಲಾದ ಹಿಂದಿನ ಸಾಮ್ಯಗಳು ವಿಶೇಷವಾಗಿ ಫರಿಸಾಯರನ್ನು ಸಂಬೋಧಿಸಿ ನುಡಿದದ್ದಾಗಿದ್ದು ಈ ಸಾಮ್ಯವನ್ನು ಮತ್ತು ಇದನ್ನು ಅನುಸರಿಸಿ ಹೇಳಲಾದ ಐಶ್ವರ್ಯವಂತ ಮನುಷ್ಯನ ಹಾಗು ಬಡ ಮನುಷ್ಯನ ಕುರಿತದ್ದು (ಧನಿಕನು ಮತ್ತು ಲಾಜರನು) ಫರಿಸಾಯರಿಗೆ ಪ್ರತ್ಯೇಕವಾಗಿದ್ದುದಲ್ಲ, ಆದರೆ ನಮ್ಮ ಪಾಠದ ಮೊದಲನೆ ವಚನವು ತಿಳಿಸಿರುವಂತೆ ಅದೇ ಮೇಜಿನಲ್ಲಿದ್ದ ಶಿಷ್ಯರಿಗೂ ಸಹ ಫರಿಸಾಯರ ಸಹಿತವಾಗಿ ಸಂಬೋಧಿಸಿ-ದುದಾಗಿತ್ತು. ಆ ಮೊದಲ ಮೂರು ಸಾಮ್ಯಗಳನ್ನು ಫರಿಸಾಯರಿಗೆ ಮಾತ್ರ ಸಂಬೋಧಿಸಿದ್ದ ಕಾರಣ ಸ್ಪಷ್ಟವಾಗಿರುವದು. ಅದೇನಂದರೆ ಇಂಥಾ ಆದೇಶಗಳು ಶಿಷ್ಯರಿಗೆ ಅಗತ್ಯವಿರಲಿಲ್ಲ, ಬಡವರ್ಗದವರ ಬಗ್ಗೆ ಪಕ್ಷಪಾತವಿಲ್ಲದೆ "ತಪ್ಪಿಹೋದವನ" ಜೊತೆಗೆ ತಮ್ಮನ್ನು ಗುರುತಿಸಿಕೊಂಡ ಇವರು ಒಳ್ಳೆಯ ಕುರುಬನಿಂದ ಕಂಡು-ಕೊಳ್ಳಲ್ಪಟ್ಟವರಾಗಿರಲು ಸಂತೋಷಿಸಿದ್ದರು.

ಈ ಸಾಮ್ಯದ ಮನೇವಾರ್ತೆಯವನು ಹಿಂದಿನ ಸಾಮ್ಯದ ಹಿರೀಮಗನಿಗೆ ಹಾಗು ಮುಂದಿನ ಸಾಮ್ಯದ ಐಶ್ವರ್ಯವಂತನಾದ ಮನುಷ್ಯನಿಗೆ ಸರಿಬೀಳುವನು; ಇದು ವಿಶೇಷವಾಗಿ ಶಾಸ್ತ್ರಿಗಳು ಮತ್ತು ಫರಿಸಾಯರಿಗೆ ಅನ್ವಯಿಸುವಂಥದು; ಇನ್ನೊಂದು ಸಂದರ್ಭದಲ್ಲಿ ನಮ್ಮ ಕರ್ತನು ಪ್ರಕಟಮಾಡಿ ಹೇಳಿರುವಂತೆ ಅವರು "ಮೋಶೆಯ ಪೀಠದಲ್ಲಿ ಕುಳಿತುಕೊಂಡಿದ್ದು" ಮೋಶೆಯನ್ನು ಮತ್ತು ಆತನು ಮಧ್ಯಸ್ಥನಾಗಿರುವ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯನ್ನು ಅಲ್ಲದೆ ಈ ಒಡಂಬಡಿಕೆಯ ಮೂಲಕವಾಗಿ ಪಡೆಯಲಾದ ಆಶೀರ್ವಾದಗಳನ್ನೂ ಪ್ರತಿನಿಧಿಸುತ್ತಿದ್ದರು. ಮೋಶೆಯು ಈ ಸಂಬಂಧವಾಗಿ ಮೊದಲ ಮನೆವಾರ್ತೆಯವನಾಗಿದ್ದನು ಹಾಗು ಇವರು (ಶಾಸ್ತ್ರಿಗಳು ಮತ್ತು ಫರಿಸಾಯರು) ಆತನನ್ನು ಪ್ರತಿನಿಧಿಸುವವರಾಗಿ ಈಗ ಮನೆವಾರ್ತೆಯವರಾಗಿದ್ದರು. ಈ ಮನೆವಾರ್ತೆಯ ಉದ್ಯೋಗವು ಯಾವುದನ್ನು ಒಳಗೊಂಡಿರುವದು? ಅಪೋಸ್ತಲನಾದ ಪೌಲನು ಇದನ್ನು ಕೇಳಿರುವದಲ್ಲದೆ ಇದಕ್ಕೆ ಉತ್ತರವಾಗಿ ಹೀಗೆ ಹೇಳಿರುವನು: "ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು?... ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು." ದೇವಜ್ಞಾನ-ದೊಂದಿಗೆ ಛಾಯಾರೂಪವಾದ ನೀತಿವಂತರನ್ನಾಗ ಮಾಡಿ ದೇವರೊಂದಿಗೆ ಸಂಧಾನವಾಗಿಸುವದು ಮತ್ತು ತಮ್ಮ ಪಿತೃಗಳಿಗೆ ಮಾಡಿದ ವಾಗ್ದಾನಗಳಲ್ಲಿ ಒಂದು ನ್ಯಾಯಬದ್ಧವಾದ ಪಾಲುಗಾರಿಕೆ ಇವುಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟಿದ್ದವು.

ಯಹೂದ್ಯರು, ಮೋಶೆಯ ಮತ್ತು ಆತನ ಉತ್ತರಾಧಿಕಾರಿ–ಗಳ ಪ್ರತಿನಿಧಿಗಳಾಗಿ, ತಮ್ಮ ಮನೇವಾರ್ತೆಯ ಕೆಲಸದ ವಿಷಯ–ದಲ್ಲಿ ವಿಫಲರಾಗಿದ್ದರು. ತಮ್ಮ ಪಾಲನೆಗೆ ನೀಡಲಾದ ಕೃಪಾನುಗ್ರಹ ಗಳನ್ನು ದೇವರಿಗೆ ಸಮರ್ಪಕವಾದ ರೀತಿಯಲ್ಲಿ ಉಪಯೋಗಿಸಿ–ಕೊಂಡು ಬರುವಲ್ಲಿ ಅವರು ವಿಫಲರಾಗಿದ್ದರು. ಇಲ್ಲವೇ ಅಪೋಸ್ತಲನಾದ ಪೌಲನು ತೋರಿಸಿಕೊಟ್ಟಿರುವಂತೆ ವಾಸ್ತವದಲ್ಲಿ ಇದಕ್ಕಾಗಿ ಅವರನ್ನು ಪೂರ್ಣವಾಗಿ ಹೊಣೆ ಮಾಡುವಂತಿರಲಿಲ್ಲ; (ಪರಿಪೂರ್ಣತೆಯಿಂದ) ಬಿದ್ದುಹೋಗಿರುವ ದೆಸೆಯಿಂದ ಅವರು ಅಶಕ್ತರಾಗಿದ್ದು, ಶ್ರೇಷ್ಠವಾದ ಆ ಒಂದು ಹೊಣೆಗಾರಿಕೆಯ ನಿರ್ವಹಣೆಯನ್ನು ಮಾಡಿಕೊಂಡು ಬರಲು ಅವರು ಸಾಮರ್ಥ್ಯ–ವಿಲ್ಲದವರಾಗಿದ್ದರು. ಅವರಿಗೆ ಈ ಮನೇವಾರ್ತೆಯ ಕೆಲಸವನ್ನು ಕೊಡುವಾಗಲೇ ದೇವರಿಗೆ ಇದು ತಿಳಿದಿತ್ತು. ಅಂದರೆ ಧರ್ಮ–ವಿಧಿಗಳನ್ನು ಪರಿಪೂರ್ಣವಾಗಿ ಕೈಗೊಂಡು ನಡೆಯಲು ಅವರು ವಿಫಲರಾಗುವರೆಂಬುದು ದೇವರಿಗೆ ತಿಳಿದಿತ್ತು. ಕ್ಲುಪ್ತಕಾಲದಲ್ಲಿ ಅವರನ್ನು ಈ ಮನೇವಾರ್ತೆ ಉದ್ಯೋಗದಿಂದ ಉಚ್ಚಾಟಿಸಿ ಅದನ್ನು ಮುಂದಾಗಿ ತಿಳಿದಿದ್ದ ಮೆಸ್ಸೀಯನೆಂಬ ಒಬ್ಬನಿಗೆ ನೀಡಬೇಕೆಂದು ದೇವರು ಸಂಪೂರ್ಣವಾಗಿ ಉದ್ದೇಶಿಸಿದ್ದನು.

ಆ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಬದಲಾವಣೆಯನ್ನು ತರುವಂಥಾಗುವ ಸಮಯವು ಈಗ ಒದಗಿ ಬಂದಿತ್ತು. ಅಲ್ಲದೆ ಇಸ್ರಾಯೇಲ್ಯರ ಪ್ರತಿನಿಧಿಗಳಿಗೆ ತಮ್ಮ ಮನೇವಾರ್ತೆಯ ಲೆಕ್ಕವನ್ನು ಒಪ್ಪಿಸಲು ದೇವರು ಕೇಳಿಕೊಳ್ಳುತ್ತಿದ್ದನು; ಅಲ್ಲದೆ ಒಂದು ಹೊಸದಾದ ವ್ಯವಸ್ಥೆಯು ಆರಂಭವಾಗುವದರಲ್ಲಿದೆ ಎಂಬುದನ್ನು ಅವರಿಗೆ ತಿಳಿಸಿದ್ದನು. ಈ ಸಾಮ್ಯದಲ್ಲಿ ನಮ್ಮ ಕರ್ತನಾದ ಯೇಸುವು ಆ ಸನ್ನಿವೇಶದಲ್ಲಿ ಅವರು ಅನುಸರಿಸಬಹುದಾದ ಅತ್ಯಂತ ವಿವೇಕಪೂರ್ಣವಾದ ಮಾರ್ಗವು ಯಾವುದೆಂಬುದನ್ನು ತೋರಿಸಿಕೊಡಲು ಆಶಿಸಿದ್ದನು. ಭೂಲೋಕದಲ್ಲಿನ ಒಬ್ಬ ಮನೇವಾರ್ತೆಯವನು ಇಂಥಾ ಒಂದು ಸನ್ನಿವೇಶದಲ್ಲಿ ಏನು ಮಾಡುತ್ತಿದ್ದನೆಂಬುದನ್ನು ಆತನು ಅವರಿಗೆ ತೋರಿಸಿಕೊಟ್ಟಿದ್ದನು ಅಲ್ಲದೆ ಇಂಥಾ ಒಂದು ವಿಧಾನವನ್ನು ಅನುಸರಿಸುವದರಲ್ಲಿ ವಿವೇಕವಿರುವದೆಂದು ಹೀಗೆ ಹೇಳಿದ್ದನು: "...ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ ಜಾಣರಾಗಿದ್ದಾರೆ." ನೀವು ದೇವಜನರಾಗಿ ದೇವರ ಗುಣಸ್ವಭಾವ ಹಾಗು ಆತನ ಯೋಜನೆಯ ವಿಷಯವಾಗಿ ಇತರರಿಗಿಂತಲೂ ಅಧಿಕವಾದ ಬೆಳಕಿನ ಸವಲತ್ತುಸೌಕರ್ಯಗಳನ್ನು ಹೊಂದಿ ಲೌಕಿಕರಾದ ಮನೇವಾರ್ತೆಯುವರಾಗಿರುವಲ್ಲಿ ನೀವು ನಡಕೊಳ್ಳಬೇಕಾದ ವಿವೇಕವುಳ್ಳ ರೀತಿಯಲ್ಲಿ ನಡೆದುಕೊಳ್ಳುತ್ತಿಲ್ಲ.

ಇಲ್ಲಿ ಬಹುಪಾಲು ಜನರು ಸ್ಪಷ್ಟವಾಗಿ ಗ್ರಹಿಸಲಾರದಂಥ ಸಂಕಷ್ಟವನ್ನು ನಾವು ಎದುರಿಸುವವರಾಗಿದ್ದೇವೆ, ಏನಂದರೆ ಅದು ಹಿಂದಿನ ಕಾಲದ ಮನೇವಾರ್ತೆಯವರಿಗಿದ್ದ ಸವಲತ್ತುಗಳ ಪರಿಮಿತಿಯ ವಿಷಯವಾದದ್ದು. ಈ ದಿನದ ನಾಗರಿಕ ಜನರಲ್ಲಿ ಇಂಥದ್ದೊಂದು ಕಾರ್ಯಸ್ಥಾನವನ್ನು ನಾವು ಹೊಂದಿರುವದಿಲ್ಲ. ಒಬ್ಬ ಮನೇವಾರ್ತೆಯವನ ಕಾರ್ಯಸ್ಥಾನವು ಒಂದು ಗೋಪ್ಯತೆಯುಳ್ಳದ್ದಾಗಿತ್ತು. ಆತನಿಗೆ ಯಜಮಾನನು ತನ್ನ ವಸ್ತುಗಳ ವಿಷಯದಲ್ಲಿ ತನಗೆ ಮಾಡಲು ಸಾಧ್ಯವಿರುವ ಪ್ರತಿಯೊಂದು ಕಾರ್ಯಗಳೆಲ್ಲವನ್ನು ನಿರ್ವಹಿಸುವ ಪೂರ್ಣ ಅಧಿಕಾರ ಹಾಗು ಸ್ವಾತಂತ್ರ್ಯದ ಸವಲತ್ತುಗಳಿದ್ದವು. ಆತನಿಗೆ ಉಡುಗೊರೆ ನೀಡುವ, ಸಾಲ ಮನ್ನಾ ಮಾಡುವ, ಅಥವಾ ತನ್ನ ವಶದಲ್ಲಿದ್ದ ವಸ್ತುಗಳನ್ನು ಯಾವ ಬಗೆಯಲ್ಲಾದರೂ ಉಪಯೋಗಿಸಲು ಸಾಧ್ಯವಿತ್ತು. ಕಾನೂನಿನ ಅಡಿಯಲ್ಲಿ ಆತನನ್ನು ಅಪರಾಧಿಯನ್ನಾಗಿ ನಿಲ್ಲಿಸಲು ಸಾಧ್ಯವಿರಲಿಲ್ಲ; ಕಾರಣ ಆತನ ಕಾರ್ಯಸ್ಥಾನದ ಗುಣಲಕ್ಷಣಗಳೇನಾಗಿತ್ತೆಂದರೆ ಆತನು ತನ್ನ ಯಜಮಾನನನ್ನು ಪೂರ್ಣವಾಗಿ ಪ್ರತಿನಿಧಿಸಿ ಯಜಮಾನನ ಪರವಾಗಿ ಕಾರ್ಯನಿರ್ವಹಿಸುವಂಥದ್ದಾಗಿತ್ತು. ಮನೇವಾರ್ತೆ–ಯವನು ಅಪನಂಬಿಗಸ್ತನಾದಲ್ಲಿ ಯಜಮಾನನು ಅತನನ್ನು ಕೆಲಸದಿಂದ ತೆಗೆದುಹಾಕುವದು ಮಾತ್ರವೇ ಆತನಿಗೆ ನೀಡುವ ಶಿಕ್ಷೆಯಾಗಿತ್ತು; ಏಕೆಂದರೆ ಆತನನ್ನು ಮನೇವಾರ್ತೆಯವನನ್ನಾಗಿ ಮಾಡಿದಾಗ ಅತನಿಗೆ ನಿರ್ಣಯಗಳನ್ನು ತೆಗೆದುಕೊಳ್ಳುವ ಪೂರ್ಣಾಧಿಕಾರ ನೀಡಲಾಗುತ್ತಿತ್ತು.

ಈ ಸಾಮ್ಯದಲ್ಲಿ ಅನ್ಯಾಯಗಾರನಾದ ಆ ಮನೇವಾರ್ತೆ–ಯವನು ಹಿಂದೆ ತನ್ನ ಯಜಮಾನನ ವ್ಯವಹಾರಗಳನ್ನು ಅನ್ಯಾಯವಾದ ರೀತಿಯಲ್ಲಿ ಬಳಸಿಕೊಂಡಿದ್ದನು, ಅಂದರೆ ಅನೀತಿವಂತನಾಗಿ ಅತೃಪ್ತಿಕರವಾಗಿ ದೋಷವುಳ್ಳವನಾಗಿ ನಡಕೊಂಡಿದ್ದನು; ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಕೂಡಲೇ ಆತನು ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಲಿಲ್ಲ, ಇಲ್ಲವೇ ತಾನು ಪರಿಪೂರ್ಣವಾದ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಿರುವದಾಗಿ ಹೇಳಿಕೊಳ್ಳಲೂ ಇಲ್ಲ; ಆದರೆ ತನ್ನ ಲೆಕ್ಕವನ್ನು ಒಪ್ಪಿಸುವ ಮೊದಲು ತನ್ನ ಯಜಮಾನನ ಸಾಲಗಾರರ ವಿಷಯದಲ್ಲಿ ಮೃದುವಾಗಿ ನಡಕೊಂಡು ಅವರ ಸಾಲಗಳನ್ನು ಭಾಗಶಃ ಮನ್ನಾಮಾಡಿದ್ದನು. (ಇದು ಒಂದು ಜಾಣತನದ ವಿಧಾನವಾಗಿರುವದು. ದೃಷ್ಟಾಂತವಾಗಿ ಹೇಳುವದಾದರೆ, ಈ ದಿನದ ದಿವಾಳಿತನ ವಿಷಯವಾದ ನಿಯಮಗಳು ಹೀಗೆಯೇ ಸಾಲಗಾರರನ್ನು ಅವರಿಗೆ ತೀರಿಸಲಾಗದ ಸಾಲಗಳ ವಿಷಯದಲ್ಲಿ ತಮ್ಮ ಹೊಣೆಗಾರಿಕೆಯಿಂದ ವಿಮುಕ್ತರನ್ನಾಗಿ ಮಾಡುವವು; ಮತ್ತು ಹೀಗೆಯೇ ಸಾಲಕೊಟ್ಟವರು ಆಗಾಗ್ಗೆ ತಮ್ಮ ಹಿತಾಸಕ್ತಿಯ ದೃಷ್ಟಿಯಿಂದ ತಾವು ನೀಡಿದ ಸಾಲದ ಮೊತ್ತದ ಶೇಕಡಾ 60, 50, 40 ಭಾಗವನ್ನು ಇಲ್ಲವೇ ಸಾಲಗಾರರು ಪೂರ್ಣವಾಗಿ ಸಾಲದ ಮೊತ್ತವನ್ನು ಕೊಡಲು ಅಶಕ್ತರಾಗಿರುವಾಗ ಅವರಿಗೆ ಸಾಧ್ಯವಿರುವ ಉತ್ತಮವಾದುದನ್ನು ಮಾಡಲು ಪ್ರೋತ್ಸಾಹಿಸುವ ದೃಷ್ಟಿಯಿಂದ ಆ ಸಾಲದ ಒಟ್ಟು ಮೊತ್ತದ ಯಾವುದೆ ಭಾಗವನ್ನು ಒಪ್ಪಿಕೊಳ್ಳುವರು. ಜೂಬಿಲಿ ಸಂವತ್ಸರದಲ್ಲಿ ಸಾಲಗಳಿಂದ ಪೂರ್ಣವಾಗಿ ವಿಮುಕ್ತಿಗೊಳಿಸುವಂಥ ಯೆಹೂದ್ಯರ ಆಚರಣೆಯು ಈ ದಿನದ ಇದೇ ರೀತಿಯ "ದಿವಾಳಿತನದ ನಿಯಮಗಳಲ್ಲಿ" ಕಂಡುಬರುವ ವಿವೇಕವುಳ್ಳ ಹಾಗೂ ಮೃದುಸ್ವಭಾವದ ವ್ಯವಹಾರ ನೀತಿಗಳಾಗಿತ್ತು.) ಮನೇವಾರ್ತೆಯವನು ಕಡೆಯಲ್ಲಿ ಮಾಡಿದ ಆ ನಡವಳಿಕೆಯ ಕಾರಣಕ್ಕಾಗಿ ಆತನನ್ನು ಅನ್ಯಾಯಗಾರನೆಂದು (ಅನೀತಿವಂತನೆಂದು) ಈ ಸಾಮ್ಯದಲ್ಲಿ ಕರೆಯಲ್ಪಡಲಿಲ್ಲ; ಆದರೆ ಆತನು ಮನೇವಾರ್ತೆಯ ಕೆಲಸದಲ್ಲಿ ಹಿಂದೆ ತನ್ನ ಯಜಮಾನನು ಬಯಸಿದಂಥ ಪರಿಪೂರ್ಣತೆಯ ಮಟ್ಟದಲ್ಲಿ ಕಾರ್ಯ–ನಿರ್ವಹಿಸದ ಕಾರಣ ಅನ್ಯಾಯಗಾರನೆಂದು ಕರೆಯಲ್ಪಟ್ಟಿದ್ದನು.

ಈಗ ಸಮಸ್ತ ಇಸ್ರಾಯೇಲ್ ಜನಾಂಗಕ್ಕೆ, ವಿಶೇಷವಾಗಿ ಮೋಶೆಯ ಪೀಠದಲ್ಲಿ ಕುಳಿತುಕೊಂಡು (ಧಾರ್ಮಿಕ) ಸಂಗತಿಗಳ ಮೇಲೆ ನಿಯಂತ್ರಣ ಹೊಂದಿದವರಾಗಿದ್ದು ಅಲ್ಲದೆ ಯಾವದು ಧರ್ಮಶಾಸ್ತ್ರವಿಧಿಗಳ ಸರಿಯಾದ ಮತ್ತು ಯಾವದು ಸರಿಯಲ್ಲದ ವ್ಯಾಖ್ಯಾನವೆಂಬುದನ್ನು ನಿರ್ಧರಿಸುವಂಥವರಿಗೆ ಈ ಸಾಮ್ಯವನ್ನು ಅನ್ವಯವಾಡಿ ನಮ್ಮ ಕರ್ತನು–ಅವರು ಆ ಲೌಕಿಕ ಮನೇವಾರ್ತೆಯವನಂತೆ ಜಾಣರಾಗಿದ್ದಲ್ಲಿ ತಮಗೊದಗಿದ ಅವಕಾಶವನ್ನು ಅವರು ಇದೇ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದ–ರೆಂದು ತಿಳಿಸಿದ್ದನು. ಈಗ ಅವರು ಇದನ್ನು ಹೇಗೆ ನಿರ್ವಹಿಸಲು ಸಾಧ್ಯವಾಗಿತ್ತು. ಅವರು ದೇವರ ಆಜ್ಞಾವಿಧಿಗಳು ಬಯಸುವಂಥವುಗಳನ್ನು ತಾವು ಕೈಗೊಂಡಿರುವದಿಲ್ಲವೆಂಬುದನ್ನು ಭಾವಿಸಿಕೊಂಡು, ದೈವವ್ಯವಸ್ಥೆಯು ಬದಲಾಗುವ ಸಮಯವು ಬಂದಿರುವದನ್ನು ಮನಗಂಡವರಾಗಿದ್ದೇವೆಂಬುದನ್ನು ಸಹ ಊಹಿಸಿಕೊಂಡವರಾಗಿ, ಅಲ್ಲದೆ ದೇವರು ತಮ್ಮಿಂದ ಲೆಕ್ಕವನ್ನು ತೆಗೆದುಕೊಳ್ಳ ಬಯಸುತ್ತಿರುವನೆಂದೂ ಹಾಗೂ ಒಬ್ಬ ಹೊಸ ಮನೇವಾರ್ತೆಯವನು ಸಂಗತಿಗಳನ್ನು ತನ್ನ ವಶಕ್ಕೆ ತೆಗೆದು–ಕೊಳ್ಳುವನೆಂದೂ ಭಾವಿಸಿಕೊಂಡಾಗ, ಮೋಶೆಯ ಪೀಠದಲ್ಲಿ ಕುಳಿತಿರುವ ಇವರು ಈ ಸನ್ನಿವೇಶದಲ್ಲಿ ಹೇಗೆ ನಡಕೊಳ್ಳಬೇಕು? ನಮ್ಮ ಉತ್ತರವೇನಂದರೆ, ಈ ಸಾಮ್ಯದಲ್ಲಿನ ಪಾಠದ ಪ್ರಕಾರ ಅವರು ತಮ್ಮೊಳಗೆ ಹೀಗೆ ಹೇಳಿಕೊಳ್ಳಬೇಕಿತ್ತು: ನಾವು ದೇವರ ಆಜ್ಞಾವಿಧಿಗಳನ್ನು ಪರಿಪೂರ್ಣವಾಗಿ ಕೈಗೊಂಡಿರುವದಿಲ್ಲ–ವೆಂಬುದು ನಮಗೆ ಅರಿವಾಗಿರುವದು; ನಿಜವಾಗಿಯೂ, ಹೀಗೆ ಮಾಡುವದು ನಮ್ಮ ಅಧಿಕಾರ ಸಾಮರ್ಥ್ಯದಲ್ಲಿರುವದಿಲ್ಲ. ಈ ವ್ಯವಸ್ಥೆಯ ಬದಲಾವಣೆಯು ಸನ್ನಿಹಿತವಾಗಿರುವದೆಂಬುದನ್ನೂ ಅಲ್ಲದೆ ನಮ್ಮ (ಮನೆವಾರ್ತೆಯ) ಲೆಕ್ಕವನ್ನು ಒಪ್ಪಿಸಲು ಕೇಳಲ್ಪಟ್ಟಿರುವೆವೆಂಬುದನ್ನು ಹಾಗು ನಾವು ಧರ್ಮಶಾಸ್ತ್ರದ ಆಜ್ಞಾವಿಧಿಗಳು ಬಯಸುವದನ್ನು ನಾವು ನಿರ್ವಹಿಸಿದವರಾಗಿ ಅದರಿಂದ ದೊರಕುವ ನಿತ್ಯಜೀವವನ್ನು ಪಡಕೊಳ್ಳಲು ಮತ್ತು ದೇವರು ನೀಡಿರುವ ಅನೇಕ ವಿಧವಾದ ಅನುಕೂಲಗಳನ್ನು ಬಳಸಿಕೊಳ್ಳುವದರಲ್ಲಿಯೂ ವಿಫಲರಾಗಿದ್ದೇವೆಂದು ದೇವರ ಮುಂದೆ ಒಪ್ಪಿಕೊಳ್ಳಬೇಕಿರುವದೆಂಬುದನ್ನು ನಾವು ಮನಗಂಡವ–ರಾಗಿರುವೆವು. ಕೆಲವು ವಿಷಯಗಳಲ್ಲಿ ನಮಗೆ ನೀಡಲಾದ ಅನುಕೂಲಗಳನ್ನು ನಾವು ಚೆನ್ನಾಗಿ ಬಳಸಿಕೊಂಡಿರುವೆವಾದರೂ ಈ ಲೋಕದಲ್ಲಿ ಏನನ್ನಾದರೂ ಸಾಧಿಸುವದರಲ್ಲಿಯೂ ಅಥವಾ ನಮಗಾಗಿ ಇಲ್ಲವೇ ಬೇರೆ ಯಾರಿಗಾದರೂ ನಿತ್ಯಜೀವವನ್ನು ಒದಗಿಸಿಕೊಳ್ಳುವದರಲ್ಲಿ ಒಟ್ಟಾರೆ ವಿಫಲರಾಗಿರುವೆವು. ಹೀಗಿರುವಲ್ಲಿ "ಕರ್ಮಮಾರ್ಗದಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬುದು ಸ್ಪಷ್ಟವಾಗಿದೆ." ಎಂಬುದನ್ನು ವಿವಾದಿಸುವದಕ್ಕೆ ನಮಗೆ ಸಾಧ್ಯವಿರುವದಿಲ್ಲ.

ಆದುದರಿಂದ ನಮ್ಮ ಮನೆವಾರ್ತೆಯ ಕೆಲಸಗಳೆಲ್ಲವೂ ವಿಫಲಗೊಂಡಿದ್ದಾಗಿ ಪರಿಣಮಿಸಿದ್ದರಿಂದ ನಾವು ಹೊರಹಾಕಲ್ಪ–ಟ್ಟಿದ್ದೇವೆಂಬದು ಶೀಘ್ರದಲ್ಲಿ ಎಲ್ಲರಿಗೂ ವ್ಯಕ್ತವಾಗುವದು; ನಾವು ಮಾಡಬೇಕಿರುವ ಜಾಣತನದ ಸಂಗತಿಯೆಂದರೆ ಈ ಕ್ಷಣವೇ ತಿರುಗಿಕೊಂಡವರಾಗಿ ಈ ಪಾಪಿಗಳ (ತಪ್ಪಿಹೋದ ಮಗನ ವರ್ಗದ) ವಿಷಯದಲ್ಲಿ ಕರುಣೆಯುಳ್ಳವರೂ ಉದಾರಿಗಳೂ ಆಗಿ ಅವರನ್ನು ನಮಗಿಂತಲೂ ಹೆಚ್ಚಾದ ಪಾಪಿಗಳೆಂದು ಖಂಡಿಸು–ವದಕ್ಕೆ ಬದಲಾಗಿ ನಾವು ಅವರಿಗೆ ಮರೆಮಾಚದೆ ಹೀಗೆ ಹೇಳಬೇಕು: ಈ ದೇವಾಜ್ಞೆಗಳನ್ನು ಪರಿಪೂರ್ಣವಾದ ರೀತಿಯಲ್ಲಿ ಕೈಗೊಂಡು ನಡೆಯಲು ನಮಗೆ ಸಾಧ್ಯವಾಗಿಲ್ಲವೆಂದೂ, ನಿಮಗೂ ಸಹ ಇದನ್ನು ಮಾಡಲು ಸಾಧ್ಯವಾಗಿಲ್ಲವೆಂಬುದು ನಮಗೂ ಗೊತ್ತಿರುವದು. ಆದರೆ ಈಗ ನಿರೀಕ್ಷೆಯಿಲ್ಲದವರಂತೆ ಎದೆಗುಂದಿ–ದವರಾಗಿ ಕೆಳಗೆ ಬೀಳಲ್ಪಟ್ಟಿರುವೆವೆಂದು ಯೋಚಿಸುವದಕ್ಕೆ ಬದಲಾಗಿ ನಿಮಗೆ ಸಾಧ್ಯವಾಗುವಂಥ ಉತ್ತಮವಾದುದನ್ನು ಮಾಡಿರಿ; ಧರ್ಮಶಾಸ್ತ್ರದ ನಿಯಮಗಳನ್ನು ಕೈಗೊಂಡು ನಡೆಯಲು ನೀವು ಅಸಮರ್ಥರೆಂಬುದನ್ನು ನಾವು ಒಪ್ಪಿಕೊಂಡು ನಾವು ಧರ್ಮವಿಧಿಗಳನ್ನು ಕೈಗೊಳ್ಳುವುದರಲ್ಲಿ ಭಾಗಶಃ ರಿಯಾಯಿತಿ ನೀಡುತ್ತೇವೆ ಹಾಗು ನಿಮ್ಮ ಅತ್ಯುತ್ತಮ ಸಾಮರ್ಥ್ಯದ ಅನುಸಾರವಾಗಿ ಅದನ್ನು ಕೈಗೊಳ್ಳುವದನ್ನು ಬಯಸುತ್ತೇವೆ ಅಂದರೆ ನಿಮ್ಮ ಸನ್ನಿವೇಶ ಪರಿಸ್ಥಿತಿಗಳ ಅನುಸಾರವಾಗಿ ಐವತ್ತರಷ್ಟು ಇಲ್ಲವೇ ಎಂಭತ್ತರಷ್ಟನ್ನು ನಿಮ್ಮ ಸಾಮರ್ಥ್ಯದ ಪ್ರಕಾರ ಧರ್ಮಶಾಸ್ತ್ರವಿಧಿಗಳನ್ನು ನೀವು ಕೈಗೊಳ್ಳಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

ಶಾಸ್ತ್ರಿಗಳು ಮತ್ತು ಫರಿಸಾಯರು ಈ ನಿಲುವನ್ನು ತೆಗೆದು–ಕೊಂಡಿದ್ದೇ ಆದಲ್ಲಿ ಅವರು ತಮ್ಮ ಮತ್ತು ಜನರ ಮಧ್ಯದಲ್ಲಿನ ಡೊಂಗರವನ್ನು ನಿವಾರಣೆಮಾಡಿಕೊಳ್ಳುತ್ತಿದ್ದರು, ಅಲ್ಲದೆ ತಮಗೆ ನ್ಯಾಯವಿಧಿಗಳನ್ನು ಕೈಗೊಂಡು ನಡೆಯಲು ಸಾಧ್ಯವಾಗಲಿಲ್ಲ–ವೆಂಬುದನ್ನು ಅವರು ಒಪ್ಪಿಕೊಳ್ಳುವದರಲ್ಲಿ ತೋರಿಬಂದ ಅವರ ಪ್ರಾವಾಣಿಕತೆಯು ಮುಂದೆ ಹೊಸ ದೈವವ್ಯವಸ್ಥೆಯ ಸಂಬಂಧದಲ್ಲಿ ಅವರಿಗೆ ಒಂದು ವಿಶಿಷ್ಟವಾದ ಪ್ರಯೋಜನವನ್ನು ತಂದುಕೊಡುತ್ತಿತ್ತು. ಹಾಗು ಅವರು ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಂಥದ್ದು ಮತ್ತು ಇತರರ ವಿಷಯವಾಗಿ ಅವರು ತೋರಿದ ಅನುಕಂಪ ಹಾಗು ತಮ್ಮ ಹೊರೆಯನ್ನು ಹೊತ್ತು–ಕೊಳ್ಳಲು ಇತರರಿಗೆ ಅವರು ಮಾಡಿದ ಸಹಾಯವು ಎಂಥಾ ಒಂದು ಮನೋಸ್ಥಿತಿಗೆ ಅವರನ್ನು ತರುತ್ತಿತ್ತೆಂದರೆ ಇವುಗಳು ಅವರು ಸುವಾರ್ತೆಯನ್ನು ಅಂಗೀಕರಿಸಿಕೊಳ್ಳುವಂತಾಗಲು ಸಿದ್ಧಗೊಳಿಸುತ್ತಿದ್ದವು; ಮತ್ತು ಇವರು ಆವರೆಗೂ ಪಾಪಿಗಳೆಂದು ಉದಾಸೀನಮಾಡಿ ಅವರಿಂದ ತಮ್ಮನ್ನು ಪ್ರತ್ಯೇಕಪಡಿಸಿಕೊಂಡಿದ್ದ ಆ ಕೆಳವರ್ಗದವರು ಇವರ ಬಗ್ಗೆ ಕರುಣಾಭಾವವನ್ನು ಹೊಂದಿರು ತ್ತಿದ್ದರು ಅಲ್ಲದೆ ಇದರ ಪರಿಣಾಮವಾಗಿ ಇವರ ಮೇಲೆ ಬಂದ ಆ ಸಂಕಷ್ಟ ಕಾಲದಲ್ಲಿ ಅಂದರೆ ಇವರ ಆಡಳಿತವ್ಯವಸ್ಥೆಯು ಉಚ್ಚಾಟನೆಗೊಂಡಾಗ ಪಾಪಿಗಳೆನಿಸಿಕೊಂಡ ಈ ಕೆಳವರ್ಗ–ದವರು ಕನಿಷ್ಠಪಕ್ಷದಲ್ಲಿ ಒಂದು ಪ್ರಮಾಣದ ಅನುಕಂಪವನ್ನು ಇವರ ವಿಷಯದಲ್ಲಿ ಇಟ್ಟುಕೊಳ್ಳುತ್ತಿದ್ದರು.

ಆದರೆ ಶಾಸ್ತ್ರಿಗಳು ಮತ್ತು ಫರಿಸಾಯರು ಇಂಥಾ ಯಾವುದೇ ವಿಧಾನವನ್ನು ಅನುಸರಿಸಿದ್ದರೇ? ಯಾವ ವಿಧದಲ್ಲಿಯೂ ಇಲ್ಲ. ಬದಲಿಗೆ ಅವರು ಡಂಭಾಚಾರದವರಾಗಿ ಜ್ಞಾಪಕಪಟ್ಟಿಗಳನ್ನು ಅಗಲಮಾಡಿಕೊಂಡು ತಮ್ಮ ಹೃದಯ ಹಾಗು ಜೀವಿತದಲ್ಲಿ ತಾವು ಪರಿಪೂರ್ಣವಾಗಿರುವದರ ಬಗ್ಗೆ ಇನ್ನೂ ದೊಡ್ಡದಾಗಿ ಹೇಳಿಕೊಳ್ಳುವವರಾಗಿ ಇತರರನ್ನು ಮೋಸಗೊಳಿಸುವದಕ್ಕಿಂತಲೂ

ಅಧಿಕವಾಗಿ ಬಹುಶಃ ತಮ್ಮನ್ನೇ ಮೋಸಪಡಿಸಿಕೊಂಡವ–ರಾಗಿದ್ದರು. ದೇವರ ವಿವಿಧ ಕೃಪೆಯ ವಿಷಯದಲ್ಲಿ ಅವರು ಮನೇವಾರ್ತೆಯ ಕೆಲಸವನ್ನು ನಿರಂತರವಾಗಿ ಮುಂದುವರಿಸಿ–ಕೊಂಡು ಹೋಗುವೆವೆಂದು ಕೊಚ್ಚಿಕೊಳ್ಳುತ್ತಿದ್ದರು; ಮತ್ತು ನಮ್ಮ ಕರ್ತನು ಸಾರಿ ಹೇಳಿರುವಂತೆ, ಧರ್ಮಶಾಸ್ತ್ರವಿಧಿಗಳನ್ನು ಪರಿಪೂರ್ಣವಾಗಿ ಕೈಗೊಂಡು ನಡೆಯುವದರಲ್ಲಿ ತಾವು ಅಸಮರ್ಥರಾಗಿದ್ದೇವೆಂಬುದನ್ನು ಪ್ರಾಮಾಣಿಕವಾಗಿ ಅರಿಕೆ–ಮಾಡಿಕೊಂಡಂಥ ಜನರ ಹೆಗಲಿನ ಮೇಲಿನಿಂದ ಭಾರವಾದ ಹೊರೆಯನ್ನು ಹಾಗು ಧರ್ಮಶಾಸ್ತ್ರದಿಂದಾದ ಖಂಡನೆಯನ್ನು ತೆಗೆದುಹಾಕುವದಕ್ಕೆ ಬದಲಾಗಿ ಈ ಶಾಸ್ತ್ರಿಗಳು ಮತ್ತು ಫರಿಸಾಯರು ಭಾರವಾದ ಹೊರೆಗಳನ್ನು ಜನರ ಮೇಲೆ ಹಾಕಿ ಅದನ್ನು ಎತ್ತಿಹಾಕಲು ಅವರಿಗೆ ತಮ್ಮ ಕಿರುಬೆರಳಿನಿಂದಲೂ ಸಹಾಯ ಮಾಡದವರಾಗಿದ್ದರು. – ಮತ್ತಾಯ 23:1–4

ಹೀಗೆ ಮಾಡುತ್ತಾ ಅವರು ಹೆಚ್ಚುಹೆಚ್ಚಾಗಿ ಕಪಟಿಗಳಾಗಿ ಅವರ ವಿಷಯವನ್ನು ಎಷ್ಟು ಕಠಿಣಮಾಡಿಕೊಂಡು ಬಂದಿದ್ದರೆಂದರೆ ನಮ್ಮ ಕರ್ತನು ಅನಂತರದಲ್ಲಿ ಅವರನ್ನು ವರ್ಣಿಸುತ್ತಾ ಅವರನ್ನು ಹೀಗೆ ಸುಣ್ಣ ಹಚ್ಚಿದ ಸಮಾಧಿಗಳೆಂದು ಸಾರಿ ಹೇಳಿದ್ದನು. ಅದು ಹೊರಗೆ ಅಂದವಾಗಿ ಕಂಡು ಒಳಗೆ ಸಂಪೂರ್ಣವಾಗಿ ಭ್ರಷ್ಟತೆಯೂ ಅಪ್ರಾಮಾಣಿಕತನವೂ ಕಪಟವೂ ಆದವುಗಳಿಂದ ತುಂಬಿರುವದು; ತಾವೇ ನ್ಯಾಯವಿಧಿಗಳನ್ನು ಭಂಗಗೊಳಿಸುವವರೆಂಬುದನ್ನು ತಿಳಿದವರಾದರೂ ಹೊರಗೆ ಪರಿಪೂರ್ಣರೆಂದು ಹೇಳಿಕೊಂಡು ಹೊಗಳಿಕೊಳ್ಳುತ್ತಿದ್ದರು. ಇದನ್ನು ಕೇವಲ ಫರಿಸಾಯರಿಗೆ ಮಾತ್ರವಲ್ಲದೆ ಶಿಷ್ಯರಿಗೂ "ಸಹ" ಹೇಳಿದ್ದಾಗಿತ್ತು. ಅವರು (ಶಿಷ್ಯರು) ಈ ಸಾಮ್ಯವು ಎಷ್ಟು ಸರಿಹೊಂದಿರುವದೆಂಬುದನ್ನು ಮತ್ತು ಈ ಮನೇವಾರ್ತೆಯ ವರ್ಗವು ಎಷ್ಟು ಬುದ್ಧಿಯಿಲ್ಲದವರಾಗಿ ವರ್ತಿಸುತ್ತಿರು–ವರೆಂಬುದನ್ನು ಗಮನಿಸಬೇಕೆಂಬದು ಇಲ್ಲಿ ಅಡಕವಾಗಿತ್ತು. ಆ ಭೋಜನದ ಮೇಜಿನಲ್ಲಿಯೂ ಸಹ ಕನಿಷ್ಠದಲ್ಲಿ ಕೆಲವು ಮಟ್ಟಿಗೆ ಆ ಸಾಮ್ಯದ ಭಾವವನ್ನು ಅರಿತುಕೊಂಡ ಫರಿಸಾಯರು ಹಣದಾಸೆಯುಳ್ಳವರಾಗಿ "ಪರಿಹಾಸ್ಯ" ಮಾಡಿದ್ದರು. ಆದರೆ ನಮ್ಮ ಕರ್ತನು ಪಾಠವನ್ನು ಅವರಿಗೆ ಮನದಟ್ಟಾಗುವಂತೆ ಮಾಡಿ ಹೀಗೆ ಹೇಳಿದ್ದನು, "ಮನುಷ್ಯರ ಮುಂದೆ ನೀತಿವಂತರೆಂದು ತೋರ್ಪಡಿಸಿಕೊಳ್ಳುವವರು ನೀವು; ಆದರೆ ದೇವರು ನಿಮ್ಮ ಹೃದಯಗಳನ್ನು ತಿಳಿದುಕೊಂಡಿದ್ದಾನೆ." ನೀವು ಅನ್ಯಾಯಗಾರರಾದ ಮನೇವಾರ್ತೆಯವರು ಮತ್ತು ನೀವು ತಳ್ಳಲ್ಪಟ್ಟಿರುವದನ್ನು ಶೀಘ್ರದಲ್ಲೇ ಎಲ್ಲರೂ ಸಾಕ್ಷಿಯಾಗಿ ನೋಡುವರು. "ಧರ್ಮಶಾಸ್ತ್ರವೂ ಪ್ರವಾದಿಗಳೂ (ದೇವರಿಂದ ಮನ್ನಣೆ ಪಡೆದಿರುವದು) (ಸ್ನಾನಿಕನಾದ) ಯೋಹಾನನ ತನಕವೇ. ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ಅದರಲ್ಲಿ ಸಕಲರೂ ಬಲಾತ್ಕಾರವಾಗಿ ನುಗ್ಗುತ್ತಾರೆ. (ವಚನ 14–16) ಹೇಗೂ, ಜನನಾಯಕರುಗಳಾದ "ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗ–ಗೊಡಿಸುವದಿಲ್ಲ." (ಮತ್ತಾಯ 23:13). ಒಬ್ಬ ಹೆಂಡತಿಯು ತಾನು ಜೀವದಿಂದಿರುವವರೆಗೂ ತನ್ನ ಗಂಡನಿಗೆ ಬದ್ಧಳಾಗಿರುವಂತೆ ನಿಮ್ಮ ಧರ್ಮಸಂಸ್ಥೆಯು ಮೋಶೆಗೂ ಮತ್ತು ಧರ್ಮಶಾಸ್ತ್ರಕ್ಕೂ ಬದ್ಧವಾಗಿರುವದೆಂಬುದನ್ನು ನೀವು ಕಾಣಬೇಕಿತ್ತು. ಆದುದರಿಂದ ನೀವು ಪ್ರತಿನಿಧಿಸುವ ಧರ್ಮಶಾಸ್ತ್ರವು ಗತಿಸಿಹೋಗುವದು ಅಗತ್ಯ–ವಿರುವದು. ಹೀಗಾಗಿ ಇಸ್ರಾಯೇಲು ಇದರಿಂದ ವಿಮುಕ್ತರಾಗಿ ಒಂದು ಹೊಸದಾದ ಒಡಂಬಡಿಕೆಯ ಮೂಲಕವಾಗಿ ಮೆಸ್ಸೀಯನೊಂದಿಗೆ (ವಿವಾಹವಾಗಿ) ಕೂಡಿಕೊಳ್ಳಲು ಸಿದ್ಧವಾಗುವದು. – ವಚನ 17,18; ರೋಮಾ 7:1–4.

ಈ ಸಾಮ್ಯವು ಸುವಾರ್ತಾಯುಗದ ಅಂತ್ಯ ಕಾಲದಲ್ಲಿ ವಿಶೇಷವಾಗಿ ಅನ್ವಯವಾಗುವಂಥದೆಂದು ನಮಗೆ ತಿಳಿಸಲಾಗಿಲ್ಲ. ಆದರೆ ಸತ್ಯವೇದದ ಇತರ ವಚನಗಳ ಮೂಲಕವಾಗಿ ನಾವು ತಿಳಿದಿರುವದೇನಂದರೆ, ಶಾರೀರಿಕ ಸಂಬಂಧದ ಇಸ್ರಾಯೇಲ್ಯರು ಮತ್ತು ಅವರ ಸುಗ್ಗಿಕಾಲವು ಈ (ಸುವಾರ್ತಾ) ಯುಗದ ಆತ್ಮಿಕ ಇಸ್ರಾಯೇಲ್ಯರಿಗೆ ಒಂದು ಮಾದರಿ ಅಥವಾ ನಿದರ್ಶನವಾಗಿದ್ದು, ಈ ಮೂಲಕವಾಗಿ ನಮ್ಮ ಕರ್ತನ ದಿನದಲ್ಲಿನ ಅನ್ಯಾಯಗಾರನಾದ ಆ ಮನೇವಾರ್ತೆಯವನ ಪರಿಸ್ಥಿತಿಗೂ ಮತ್ತು ಈ ಕಾಲದಲ್ಲಿ ಇಂಥದೇ ಆದ ಒಂದು ವರ್ಗದವರ ಪರಿಸ್ಥಿತಿಗೂ ಹೋಲಿಕೆ ಗಳಿರುವದನ್ನು ಹುಡುಕಿ ನೋಡುವದರಲ್ಲಿ ನಮ್ಮನ್ನು ಸಮರ್ಥಿಸಿಕೊಳ್ಳುವವರಾಗಿದ್ದೇವೆ. ಈ ದಿನಗಳಲ್ಲಿ ಮೋಶೆಯ ಪೀಠದಲ್ಲಿ ಕುಳಿತುಕೊಂಡಿರುವವರಿಗೆ ಹೋಲುವಂಥ ಒಂದು ವರ್ಗವರಿಗಾಗಿ ನಮ್ಮ ಸುತ್ತಲೂ ಹುಡುಕಿ ನೋಡಿದಾಗ ಈ ದಿನಗಳಲ್ಲಿ ಸುವಾರ್ತಾಯುಗದ ಸಭೆಯ ಸಂಬಂಧವಾಗಿ ಕ್ರಿಸ್ತನ ಪೀಠದಲ್ಲಿ (ಸ್ಥಾನದಲ್ಲಿ) ಕುಳಿತಿರುವ ಒಂದು ವರ್ಗವಿರುವದು ನಮಗೆ ಕಂಡುಬರುತ್ತದೆ. ಈ ವರ್ಗವು ಸಭಾಹಿರಿಯರು, ಭಾನುವಾರಶಾಲಾ ಬೋಧಕರು ಮತ್ತು ಸಭಾಧ್ಯಕ್ಷರುಗಳು ಸಭಾಸೇವಕರು ಬಿಷೋಪರು ಹಾಗು ಮುಖ್ಯ ಬಿಷೋಪರು ಮುಂತಾದವರಿಂದ ರಚಿತಗೊಂಡಿರುವದು. ಇವರೆಲ್ಲರೂ ಒಟ್ಟಾಗಿ ಈ ದಿನದಲ್ಲಿ ದೇವಜನರು ಹೊಂದಿರುವ ದೈವಾನುಗ್ರಹಗಳ ಸಂಬಂಧದಲ್ಲಿ ವಿಶೇಷವಾದ ಮನೇವಾರ್ತೆಯವರಾಗಿ ಪ್ರತಿನಿಧಿ–ಸಲ್ಪಟ್ಟಿರುವರು. ದೈವಿಕವ್ಯವಸ್ಥೆಯ ಬದಲಾವಣೆಯು ತಮಗೆ ಸನ್ನಿಹಿತವಾಗಿರುವದನ್ನೂ, ಅಲ್ಲದೆ ಹಿಂದಿನ ಕಾಲದಿಂದ ಬಂದ ತಮ್ಮ ನಂಬಿಕೆಯ ಸೂತ್ರಗಳ ಹಾಗು ಸಂಪ್ರದಾಯಗಳ ಔಚಿತ್ಯ ವನ್ನು ಪ್ರಶ್ನಿಸಲಾಗುತ್ತಿದ್ದು ತಮ್ಮಿಂದ ಈ ಸಂಬಂಧವಾಗಿ ಲೆಕ್ಕವನ್ನು ಒಪ್ಪಿಸಲು ಕೇಳಲ್ಪಡುತ್ತಿರುವದನ್ನು ಅವರು ಅರಿತಿರುವರು. ಆ ಲೆಕ್ಕದ ವಿವರಗಳು ತಮಗೆ ಬಹು ಹೊಗಳಿಕೆ ತರುವಂಥದಲ್ಲ ವೆಂದೂ, ದೇವರಿಗೆ ತಿಳಿದಿರುವ ರೀತಿಯಲ್ಲಿ ಆ ಸತ್ಯಾಂಶ–ಗಳೆಲ್ಲವನ್ನು ಜನರಿಗೆ ತಿಳಿಸಲ್ಪಟ್ಟಲ್ಲಿ ತಮ್ಮ ಮನೇವಾರ್ತೆಯ ಸಂಬಂಧವಾಗಿ ಅನೇಕ ರೀತಿಯಲ್ಲಿ ಲೋಪವುಳ್ಳವರೂ ಅಪನಂಬಿಗಸ್ತರೂ ಆಗಿ ಕಂಡುಬರುವೆವೆಂಬುದನ್ನು ಅವರು ಅರಿತಿರುವರು. ಈ ಸಂದಿಗ್ಧ ಪರಿಸ್ಥಿತಿಯ ಬಗ್ಗೆ ಭಯಪಡುವ–ವರಾಗಿ ಲೆಕ್ಕ ಒಪ್ಪಿಸುವದನ್ನು ಸಾಧ್ಯವಾದಷ್ಟೂ ಮುಂದೂಡುತ್ತಿರು–ವರು; ಅವರು ಜನರ ಗುಣಗುಟ್ಟುವಿಕೆಗಳನ್ನೂ ಹಾಗು ನಂಬಿ –ಕೆಯ ಸೂತ್ರಗಳ ಸಂಬಂಧವಾಗಿ ಅವರು ಕೇಳುವ ಪ್ರಶ್ನೆಗಳನ್ನು ಅದುಮಿಡುತ್ತಿರುವರು, ಮತ್ತು ನಮ್ಮ ಕರ್ತನು ತನ್ನ ದಿನದ ಮನೆ ವಾರ್ತೆಯವರ ಬಗ್ಗೆ ಹೇಳಿರುವಂಥದು ಇವರ ವಿಷಯದಲ್ಲೂ ನಿಜವಾಗಿರುವದು, ಅದೇನಂದರೆ "ಮನುಷ್ಯರಲ್ಲಿ ಶ್ರೇಷ್ಠವೆನಿಸಿಕೊ–ಳ್ಳುವಂಥದು ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದೆ."–ವಚನ 15

ದೇವಜನ ಸಮೂಹದ ಬಗ್ಗೆ ಮನೇವಾರ್ತೆಯ ಸ್ಥಾನವನ್ನು ಪಡೆದಿರುವ ಹೆಸರಿನ ಕ್ರೈಸ್ತಸಭೆಯ ಈ ಪ್ರತಿನಿಧಿಗಳು ತಮ್ಮ ಮೂಲರೂಪದಲ್ಲಿನ ಫರಿಸಾಯರು ಮಾಡಿದ್ದಂತೆ ಸತ್ಯಾಂಶವನ್ನು ಒಪ್ಪಿಕೊಳ್ಳುವ ಬದಲಿಗೆ ವಿಷಯವನ್ನು ದೊಡ್ಡದಾಗಿ ಮಾಡಿ ಇದನ್ನು ಪ್ರತಿಭಟಿಸಿ ಎದುರಿಸುವಂಥ ಪ್ರವೃತ್ತಿಯುಳ್ಳವರಾಗಿ–ರುವರು. ಉದಾಹರಣೆಗೆ ಹೇಳುವದಾದರೆ, ವೆಸ್ಟ್ ಮಿನಿಸ್ಟರ್ ಅಬ್ಬೆ ಸಭೆಯ ವಿಶ್ವಾಸ ಸೂತ್ರದ ವಿಷಯದಲ್ಲಿ ಪರಿಷ್ಕರಣೆಯನ್ನು ಮೊದಲಲ್ಲಿ ಒತ್ತಾಯ ಮಾಡಿದಂಥವರಲ್ಲಿ ಅನೇಕರೂ ಸಹ ಈಗ ತೀರ್ಮಾನಕ್ಕೆ ಬಂದಿರುವದೇನಂದರೆ ಹೀಗೆ ಮಾಡುವದರಿಂದ ನಾವು ಹೇಡಿಗಳಂತಾಗಿ ಹಿಂದೆ ತಪ್ಪುಮಾಡಿದ್ದೇವೆಂಬುದನ್ನು ಒಪ್ಪಿಕೊಂಡು ದೇವರ ವಾಕ್ಯವನ್ನು ವ್ಯಾಖ್ಯಾನ ಮಾಡುವಲ್ಲಿ ತಾವು ದೋಷಪೂರ್ಣರಾಗಿ ಕಂಡುಬಂದಿದ್ದು ಹಾಗಾಗಿ ಜನರಲ್ಲಿ ತಮಗೆ ಇದು ಅಪಕೀರ್ತಿ ತರುವಂತಾಗುವದೆಂಬದೇ. ಅಲ್ಲದೆ ಈಗ ಆ ಅಲೆಯು ವೇಗವಾಗಿ ತಿರುಗಿಕೊಳ್ಳುತ್ತಿದ್ದು ಪರಿಷ್ಕರಣೆ ಬೇಕೆನ್ನುತ್ತಿದ್ದವರೇ ಇದಕ್ಕೆ ವಿರೋಧವಾಗಿ ತಿರುಗಿಕೊಂಡು ಈ ನಂಬಿಕೆಯ ಸೂತ್ರವು ಸೂಕ್ತವಾಗಿದ್ದು ತಮಗೆ ಇದು ಪೂರ್ಣವಾಗಿ ಸಂತೃಪ್ತಿಕರವಾಗಿರಲು ಅದರಲ್ಲಿ ಏನನ್ನೂ ಬದಲಾಯಿಸಲಾಗದು ಎನ್ನುತ್ತಿರುವರು. ಜನರಲ್ಲಿ ತಾವು ಬಹು ಶ್ರೇಷ್ಠರೆಂದು ಎಣಿಸಲ್ಪಡಲು ಕಾತುರವುಳ್ಳವರಾಗಿದ್ದು ತಾವು ಯಾವಾತನಿಂದ ಮನೇವಾರ್ತೆಯ ಕೆಲಸವನ್ನು ಪಡೆದಿರುವೆವೆಂಬುದನ್ನು ಮತ್ತು ಆತನು ಇದನ್ನು ತಮ್ಮಿಂದ ತೆಗೆಯಲಿರುವನೆಂಬುದನ್ನು ಅವರು ಮರೆತಂತೆ ಕಾಣುವದು.

ಸುವಾರ್ತಾಯುಗದಲ್ಲಿನ ಮನೇವಾರ್ತೆಯ ಈ ವರ್ಗದ–ವರಿಗೆ ಸೂಕ್ತವಾದ ಮಾರ್ಗವು ಯಾವದು? ನಮ್ಮ ಉತ್ತರ: ಅವರಿಗೆ ಇರುವ ಸೂಕ್ತವಾದ ಮಾರ್ಗವೆಂದರೆ ಅದು ನಮ್ಮ ಕರ್ತನು ಯೆಹೂದ್ಯರ ಮನೇವಾರ್ತೆಯವರಿಗೆ ಶಿಫಾರಸ್ಸು ಮಾಡಿರುವಂಥದೇ. ಅದೇನಂದರೆ ಅವರು ನಂಬಿಕೆಯ ಸೂತ್ರಗಳಲ್ಲಿರುವ ತಪ್ಪುಗಳನ್ನು ಹಾಗು ದೇವವಾಕ್ಯಗಳನ್ನು ಪ್ರತಿಪಾದಿಸುವ ಪ್ರಯತ್ನದಲ್ಲಿ ತಮ್ಮದೇ ಆದ ಲೋಪದೋಷ–ಗಳನ್ನೂ ಅಲ್ಲದೆ ಹಿಂದೆ ದೈವೋಕ್ತಿಗಳನ್ನು ಸರಿಯಾಗಿ ಬಳಸುವಲ್ಲಿಯೂ ಮತ್ತು (ದೇವರ ಗುಣಾತಿಶಯಗಳಿಂದ) ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನ–ಗಳನ್ನು ಸೂಕ್ತವಾಗಿ ಅನ್ವಯಿಸುವಲ್ಲಿಯೂ ತಾವು ವಿಫಲಗೊಂಡಿ–ರುವದನ್ನೂ ಜನರ ಎದುರಿನಲ್ಲಿ ಅವರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವದೇ. ಹಾಗು ಅವರು ತಮ್ಮ ತಪ್ಪುದೋಷಗಳನ್ನು ಅಂಗೀಕರಿಸಿಕೊಳ್ಳುವಾಗ ಜನರು ಈ ಬಗ್ಗೆ ಮಂಡಿಸಿದ ಬೇಡಿಕೆಗಳ ವಿಷಯವಾಗಿ ತಾವು ಮಾರ್ಪಾಡು ಮಾಡಿಕೊಂಡು ತಮ್ಮ ಸಾಮರ್ಥ್ಯಾನುಸಾರವಾಗಿ ಅವುಗಳನ್ನು ಸರಿಹೊಂದಿಸಿ–ಕೊಳ್ಳಬೇಕು. ದೃಷ್ಟಾಂತವಾಗಿ ಹೇಳುವದಾದರೆ, ಜನರಿಗೆ ಅವರು ದೇವರಿಗೆ ಎಷ್ಟು ಋಣಿಗಳೆಂಬದನ್ನು ನಾವು ಹೇಳಿದ್ದೇವೆಂದೂ ಹಾಗು ಎಂಥಾ ಶಿಕ್ಷೆಯು ನಿಮಗೆ ವಿಧಿಸಲಾಗುವೆಂದು ನಾವು ಹೇಳಿದ್ದೆವೆನ್ನುವದನ್ನೂ ಅವರಿಗೆ ತಿಳಿಸಬೇಕು. ನೀವು ನಿತ್ಯಯಾತನೆಯ ಶಿಕ್ಷೆಯನ್ನು ಹೊಂದುವಿರೆಂದು ನಾವು ಏನಾದರೂ ಹೇಳಿದ್ದಲ್ಲಿ ಈಗ ಅದು ತಪಾಗಿತ್ತೆಂದು ಎಣಿಸಿ ಅದಕ್ಕೆ ಬದಲಾಗಿ "ನ್ಯಾಯುವಾದ ಒಂದು ಬಹುಮಾನವು ಪ್ರತಿಫಲವಾಗಿರುವದೆಂದು" ಬರೆದು ತಿಳಿಸಬೇಕು. ನೀವು ದಶಾಜ್ಞೆಗಳಲ್ಲಿ ಸೂಚಿತವಾದ ಯೆಹೂದ್ಯರ ಧರ್ಮಶಾಸ್ತ್ರವನ್ನು ಅನುಸರಿಸುವ ಹಂಗಿನಲ್ಲಿದ್ದೀರೆಂದೂ ಹಾಗು ಇವುಗಳನ್ನು ಪರಿಪೂರ್ಣವಾದ ರೀತಿಯಲ್ಲಿ ಅಂದರೆ ಅವುಗಳನ್ನು ಅಕ್ಷರಶಃ ಮತ್ತು ಒಳಾರ್ಥಗಳ ಅನುಸಾರವಾಗಿ ಕೈಗೊಂಡು ನಡೆಯದಿದ್ದಲ್ಲಿ ನಿಮಗೆ ನಿತ್ಯಜೀವದ ನಿರೀಕ್ಷೆಯಿರುವದಿಲ್ಲವೆಂದೂ ನಾವು ಬೋಧಿಸಿದ್ದಲ್ಲಿ ಅದನ್ನು ಬದಲಾಯಿಸಿಕೊಂಡು ನಿಮ್ಮ ವಿಶ್ವಾಸ ಸೂತ್ರಕ್ಕೆ ತಿದ್ದುಪಾಟಿಮಾಡಿ ಇದಕ್ಕೆ ಬದಲಾಗಿ ಹೊಸ ಒಡಂಬಡಿಕೆಯ ಅನುಸಾರವಾಗಿ ದೇವರು ತನಗೆ ಪ್ರತಿಷ್ಠಿತರಾದ ವರು ನಡೆಸಿದ ಬಹು ಅಪರಿಪೂರ್ಣವಾದ ಕೃತ್ಯಗಳನ್ನೂ ಅಂಗೀಕರಿಸಿಕೊಂಡು ಅವುಗಳು ಅವರು ಅರ್ಪಿಸಬಹುದಾದ ಉತ್ತಮವಾದ ಕೃತ್ಯಗಳೆಂದು ಪರಿಗಣಿಸಿ ಅವುಗಳನ್ನು ಅವರು ತಮ್ಮನ್ನು ಪ್ರೀತಿಸಿದಾತನೂ ಹಾಗು ತಮ್ಮನ್ನು ತನ್ನ ಸ್ವಂತ ರಕ್ತದಿಂದ ಕೊಂಡುಕೊಂಡಾತನು (ಕ್ರಿಸ್ತನು) ಮಾಡಿದ ಯಜ್ಞದ ಫಲದ ಮೂಲಕವಾಗಿ ಮತ್ತು ಆತನ ಹೆಸರಿನಲ್ಲಿ ಅರ್ಪಿತವಾದವು –ಗಳೆಂದು ಪರಿಗಣಿಸುವನೆಂದು ತಿಳಿಸಬೇಕು.

ಈಗಿನ ಕಾಲದ ಮನೇವಾರ್ತೆಯವರು ಇಂಥಾ ಒಂದು ಮಾರ್ಗವನ್ನು ಅನುಸರಿಸುವದೇ ಆದಲ್ಲಿ ಅವರು ನಿಸ್ಸಂದೇಹ–ವಾಗಿ ಮುಂಬರುವ ಕಾಲದಲ್ಲಿ ಗೌರವಿಸಲ್ಪಡುವರು, ಆದರೆ ತಮ್ಮ ಈಗಿನ ಮಾರ್ಗವನ್ನು ಅನುಸರಿಸುವದು ಅವರನ್ನು ಕಪಟಿಗಳು ಮತ್ತು ದಾರಿತೋರಿಸುವ ಕುರುಡರು ಎಂದು ಎಣಿಸಿ ಅವರನ್ನು ನಿರಾಕರಿಸಲ್ಪಡುವ ಸಮಯವು ಖಂಡಿತವಾಗಿ ಬರುವದು. ಅವರು ತಮ್ಮಲ್ಲಿ ವಿಶ್ವಾಸಹೊಂದಿರುವ ಹಿಂಡನ್ನು ದಾರಿತಪ್ಪುವಂತೆಮಾಡಿ ಅದು (ದೇವರ ಬಗ್ಗೆ) ಸಂದೇಹಪಡುವ ಸ್ವಭಾವವೆಂಬ ಕಂದಕಕ್ಕೆ ಹಾಗು ಮಹಾಸಂಕಟದ ಕಾಲಕ್ಕೆ ಸೇರಮಾಡುವರು.

ಈ ಸಾಮ್ಯವು ಎಂಟನೇ ವಾಕ್ಯದೊಡನೆ ಮುಕ್ತಾಯ–ವಾಗುವದೆಂದು ಪರಿಗಣಿಸಬಹುದು. ಇದನ್ನು ಅನುಸರಿಸಿ ಬಂದಿರುವ ಆದೇಶವು ಬೇರೊಂದು ರೀತಿಯದಾಗಿ ವಿಭಿನ್ನವೂ ವಿಶಿಷ್ಟವೂ ಆಗಿದ್ದು, ನಮ್ಮ ಕರ್ತನ ಬೋಧನೆಯನ್ನು ಅಂಗೀಕರಿ–ಸಿರುವ ಆತನ ಶಿಷ್ಯರಿಗೆ ವಿಶೇಷವಾಗಿ ಸಂಬೋಧಿಸಲ್ಪಟ್ಟಿರುವದು.

## "ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ."

ಆನಂತರದಲ್ಲಿನ ಈ ಪಾಠವು ದೇವರೂ ಮತ್ತು ಮಮೋನನೆಂದು ಕರೆಯಲ್ಪಡುವ (ಲೌಕಿಕ ಧನವೆಂಬ) ಇಬ್ಬರು ಯಜಮಾನರನ್ನು ಹೊಂದಿರುವ ಅಸಾಧ್ಯವಿಷಯದ ಸಂಬಂಧವಾದದ್ದು. ಮಮೋನನು ಲೌಕಿಕ ಸಂಪತ್ತನ್ನು ಸೂಚಿಸುವದು, ಇದು ಹಣಕಾಸಿನ ಸಂಪತ್ತು ಮಾತ್ರವಲ್ಲದೆ ಜನರಿಂದ ಗೌರವಪಡೆಯುವದು ಮುಂತಾದವುಗಳನ್ನೂ ಸೂಚಿಸುವದು. ಈ ಸಂಗತಿಯೇ ಫರಿಸಾಯರನ್ನು ತಾವು ಸೂಕ್ತಮಾರ್ಗವನ್ನು ತೆಗೆದುಕೊಂಡು ತಮ್ಮ ತಪ್ಪನ್ನು ಅಂಗೀಕರಿಸಿಕೊಂಡವರಾಗಿ ಕರುಣೆಯನ್ನು ಬಯಸಿ ಅದನ್ನು ಹೊಂದಿಕೊಳ್ಳುವದಕ್ಕೆ ವಿಶೇಷವಾಗಿ ಅವರಿಗೆ ಅಡ್ಡಿಪಡಿಸುತ್ತಿತ್ತು.

ಮಮೋನನೆಂಬುದು ಕರ್ತನ ಶಿಷ್ಯರಾಗ ಬಯಸುವವರೆಲ್ಲರನ್ನು ಈಗಲೂ ಅಡ್ಡಿಪಡಿಸುತ್ತಿರುವದು. ಯಾರಾರು ಮಮೋನನ್ನು ಆರಾಧಿಸುವವರೋ–ಅದು ತಮ್ಮ ವಿಷಯವಾಗಿಯೋ ಅಥವಾ ಸಂಪತ್ತಿನ ವಿಷಯವಾಗಿಯೋ ಇಲ್ಲವೇ ಕೀರ್ತಿಯೋ ಅಥವಾ ಜನರಿಂದ ಗೌರವ ಪಡೆಯುವದೋ ಆಗಿರಬಹುದು–ಅವರು ಅದೇ ಸಮಯದಲ್ಲಿ ಸತ್ಯದೇವರನ್ನು ಆರಾಧಿಸುವವರಾಗಿ ಕ್ರಿಸ್ತನ ನಿಜವಾದ ಹಿಂಬಾಲಕರಾಗಿರಲು ಅವರಿಗೆ ಸಾಧ್ಯವಾಗದು; ಯಾಕಂದರೆ ದೇವರು ಹಾಗು ಮಮೋನನು (ಲೌಕಿಕ ಸಂಪತ್ತು) ನಮ್ಮ ಹೃದಯದಲ್ಲಿ ಪ್ರತಿಸ್ಪರ್ಧಿಗಳಾಗಿರುವರು. ನಾವು ನಮ್ಮ ಪ್ರೀತಿಗಮನಗಳನ್ನು ವಿಭಾಗಿಸಿ ಒಂದು ಭಾಗವನ್ನು ದೇವರ ಮತ್ತು ಆತನ ಸೇವೆಗೂ ಹಾಗೂ ಒಂದು ಭಾಗವನ್ನು ಮಮೋನನಿಗೂ ಕೊಡಲು ಪ್ರಯತ್ನಿಸಿದ್ದಲ್ಲಿ ಇದರ ಪರಿಣಾಮವು ದೇವರಿಗೆ ಅತೃಪ್ತಿಕರವಾಗುವದು, ಮಮೋನನಿಗೆ ಅತೃಪ್ತಿಕರವಾಗುವದು ಹಾಗೂ ನಮಗೂ ಅತೃಪ್ತಿಕರವಾಗುವದು.

ಆದುದರಿಂದ ನಾವು ನಮಗಾಗಲಿ ಮತ್ತು ಲೌಕಿಕ ಸಂಗತಿಗಳಿಗಾಗಲೀ ಜೀವಿಸುವದನ್ನು ಇಲ್ಲವೇ ಇವುಗಳೆಲ್ಲವನ್ನು ತ್ಯಜಿಸಿ ದೇವರ ಮತ್ತು ಪರಲೋಕದ ಸಂಗತಿಗಳ ಪರವಾಗಿ ಇವುಗಳನ್ನು ಯಜ್ಞಾರ್ಪಣೆಮಾಡಿಕೊಳ್ಳಲು ನಿರ್ಧರಿಸಿ ಕೊಳ್ಳಬೇಕು. ಈ ಜೀವಿ–ತದಲ್ಲಿ ಮನೋನನ್ನು ಆರಾಧಿಸುವವರಿಗೆ ಲೌಕಿಕ ಸಮೃದ್ಧಿಯ ವಿಷಯಗಳಲ್ಲಿ ಕೆಲವು ಪ್ರಯೋಜನ ಗಳಿರಬಹುದು, ಆದರೆ ಮಮೋನನಿಗೆ ನಿತ್ಯಜೀವವನ್ನು ಕೊಡಲು ಸಾಧ್ಯವಾಗುವದಿಲ್ಲ. ಅದು ದೇವರ ವರವೇ, ಅಲ್ಲದೆ ದೇವರ ವರವನ್ನು ಹೊಂದಿದ ವರು ದೇವರಿಗೆ ಸ್ನೇಹಿತರೂ, ದೇವರ ಮಕ್ಕಳೂ ಆಗಬೇಕು; ಇಂಥವರು ಮಮೋನನನ್ನು ತೊರೆದು ತನ್ನ ಪರವಾಗಿ ಪ್ರೀತಿ ಶ್ರದ್ಧಾಭಕ್ತಿಗಳನ್ನು ತೋರ್ಪಡಿಸಬೇಕೆಂಬುದನ್ನು ಆತನು (ದೇವರು) ಬಯಸುತ್ತಾನೆ. ಇಂಥವರು ದೇವರ ಪ್ರೀತಿ ಅನುಗ್ರಹಗಳು, ಆತನ ಕೃಪಾಐಶ್ವರ್ಯಗಳು ಹಾಗು ಮುಂದಿನ ಜೀವಿತದಲ್ಲಿ ದೇವರು ನೀಡುವದಾಗಿ ವಾಗ್ದಾನಮಾಡಿರುವ ಉತ್ಕೃಷ್ಟವೂ ಅಮೂಲ್ಯವೂ ಆದ ಸಂಗತಿಗಳ ಬಗ್ಗೆ ತಾವು ಉತ್ತಮವಾದ ರೀತಿಯಲ್ಲಿ ಗ್ರಹಿಸಿಕೊಂಡಿರುವದನ್ನು ತಮ್ಮ ಲೌಕಿಕ ಸಂಬಂಧವಾದ ಹೆಸರು ಕೀರ್ತಿ ಸ್ನೇಹಸೌಹಾರ್ದತೆ ಹಿತಾಸಕ್ತಿಗ ಳನ್ನು ಸಂತೊಷವಾಗಿ ತ್ಯಜಿಸುವದರ ಮೂಲಕವಾಗಿ ತೋರ್ಪಡಿಸುವರು.

ಇವುಗಳು–"ನಿಮಗಾಗಿ ಸ್ನೇಹಿತರನ್ನು ಮಾಡಿಕೊಳ್ಳಿರಿ" ಎಂಬುದನ್ನು ಸೂಚಿಸುತ್ತದೆ, ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ಅನ್ಯಾಯದ ಧನವನ್ನು (ಮಮೋನನನ್ನು) ತ್ಯಾಗಮಾಡುವದರ ಮೂಲಕವಾಗಿ ಪರಲೋಕದಲ್ಲಿ ಗಂಟು ಮಾಡಿಟ್ಟುಕೊಳ್ಳಿರಿ ಎಂಬುದನ್ನು ಸೂಚಿಸುವದು; ಅದೇನಂದರೆ, ಅನೀತಿ ತುಂಬಿದ ಈಗಿನ ಕಾಲದ, ಅಂದರೆ ಈಗಿನ ದುಷ್ಟಯುಗದ, ಹಲವಾರು ಪ್ರಯೋಜನಕಾರಿಯಾದಂಥ –ವುಗಳನ್ನು ತ್ಯಜಿಸುವದರ ಮೂಲಕವಾಗಿ ಪರಲೋಕದಲ್ಲಿ ಗಂಟು ಮಾಡಿಟ್ಟುಕೊಳ್ಳಿರಿ ಎಂಬುದನ್ನು ಸೂಚಿಸುವದು.

ಕೆಲವರಿಗೆ ತ್ಯಾಗಮಾಡಲು ತಮ್ಮ ವಶದಲ್ಲಿ ಬಹು ಸ್ವಲ್ಪ ಧನವನ್ನು (ಮಮೋನನನ್ನು) ಉಳ್ಳವರಾಗಿರಬಹುದು; ಆದರೆ ಕರ್ತನು ನಮ್ಮೆಲ್ಲರನ್ನು ಉತ್ತೇಜಿಸಿ ಹೀಗೆ ಹೇಳಿರುವನು: ಸ್ವಲ್ಪವಾದವುಗಳಲ್ಲಿ ನಂಬಿಗಸ್ತನಾಗಿರುವವನು ಆ ಮೂಲಕವಾಗಿ ಬಹಳವಾದುದರಲ್ಲಿಯೂ ನಂಬಿಗಸ್ತನಾಗುವನೆಂಬುದಕ್ಕೆ ಪ್ರಮಾಣವಾಗಿರುವನು; ಅಲ್ಲದೆ ನಮ್ಮ ಶಕ್ತ್ಯಾನುಸಾರ ನಾವು ಮಾಡುವ ಅಲ್ಪ ಸಂಗತಿಗಳ ವಿಷಯವಾದ ತ್ಯಾಗವನ್ನು ಕರ್ತನು ಬಹು ದೊಡ್ಡದೆಂದು ಅಂಗೀಕರಿಸುವನು. "ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ." ಇದು ಕರ್ತನ ಸೇವೆಯಲ್ಲಿ ಈಗ ಇರುವ ಸದವಕಾಶಗಳನ್ನು ಉಪಯೋಗಮಾಡಿಕೊಂಡ ಬಗ್ಗೆ ನೀಡಲಾದ ಅತ್ಯತ್ತಮವಾದ ಸಾಕ್ಷಿ. ಅದು ಅಲ್ಪ ಹಣವಾಗಿರ – ಬಹುದು ಇಲ್ಲವೇ ಲಕ್ಷಾಂತರ ಹಣದ ವಿಷಯವಾಗಿರಬಹುದು ಅಥವಾ ಒಂದು ಅಲ್ಪ ಪರಿಣಾಮಕಾರಿಯಾದ ಸಂಗತಿಯಾಗಿರ– ಬಹುದು ಇಲ್ಲವೇ ಒಂದು ದೊಡ್ಡ ಸಂಗತಿಯಾಗಿರಬಹುದು. ಹಣದ ಮೊತ್ತವನ್ನಲ್ಲ ದೇವರು ಬಯಸುತ್ತಿರುವದು ಆದರೆ ಅದು ಗುಣಸ್ವಭಾವವನ್ನು ಒಳಗೊಂಡ ವಿಷಯವಾದದ್ದು, ಹೃದಯದ ಮನೋಭಾವಕ್ಕೆ ಸಂಬಂಧಪಟ್ಟದ್ದು. ಯಾರು ಸರಿಯಾದ ಹೃದಯಮನೋಭಾವದಿಂದ ತಮ್ಮದೆಲ್ಲದರ ಮೂಲಕವಾಗಿ ದೇವರ ಸೇವೆಮಾಡುವಂಥವರಾಗಿ ಜೀವಿತದ ಅಲ್ಪ ವಿಷಯಗಳಲ್ಲಿಯೂ ಜಾಗರೂಕತೆಯುಳ್ಳವರಾಗಿರುವರೋ ಅಂಥವರ ವಶಕ್ಕೆ ನಿಜವಾದ ಸಂಪತ್ತುಗಳನ್ನು ಅಂದರೆ ಪರಲೋಕದ ಸಂಪತ್ತುಗಳನ್ನು ಒಪ್ಪಿಸಲಾಗುವದು. ಆತನು ಕೇವಲ ಪರಲೋಕ ರಾಜ್ಯದ ಮಹಿಮೆಯಲ್ಲಿ ಸೇರುವದನ್ನು ಅಪೇಕ್ಷಿಸುವದಲ್ಲ ಆದರೆ ಆತನು ಈಗಿನ ಜೀವಿತದಲ್ಲಿಯೇ ತನ್ನ ಸ್ವಂತ ಹೃದಯದಲ್ಲಿ ಅಂದರೆ ತನ್ನ ಸ್ವಂತ ಜೀವಿತಾನುಭವಗಳಲ್ಲಿ ಆ ಸಂಪತ್ತಿನ ಪ್ರಥಮ ಫಲಗಳನ್ನು ಪಡೆಯಲು ಆರಂಭಿಸುವನು; ದೇವರೊಂದಿಗೆ ಸೂಕ್ತವಾದ ಸಂಬಂಧವುಳ್ಳವರಾಗಿ ನಂಬಿಗಸ್ತಿಕೆ–ಯಿಂದ ಓಟವನ್ನು ಓಡುತ್ತಿರುವವರು ಆ ರಾಜ್ಯಪ್ರಭಾವಕ್ಕೆ ಬಾಧ್ಯರಾಗಿ ಓಟದ ಕಡೆಯಲ್ಲಿ ಬಹುಮಾನವನ್ನು ಪಡೆಯುವದು ಮಾತ್ರವಲ್ಲದೆ ಈ ಲೊಕವು ಕೊಡಲಾರದಂಥ ಅಥವಾ ತೆಗೆಯಲಾರದಂಥ ರೀತಿಯ ಆಶೀರ್ವಾದಗಳನ್ನು ಈಗಾಗಲೇ ಹೊಂದಿರುವರೆಂಬುದು ನಿಸ್ಸಂದೇಹವಾದ ಸಂಗತಿ. ಅಂದರೆ ಧಣಿಯ ಸೌಭಾಗ್ಯದಲ್ಲಿ ಸೇರಿದವರಾಗಿ, ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯನ್ನು ತಮ್ಮ ಹೃದಯಗಳಲ್ಲಿ ಹೊಂದಿರುವರು; ಹೀಗಾಗಿ ಅವರು ತಮ್ಮ ಪ್ರವಾಸದ ಮನೆಯಲ್ಲಿಯೂ, ಅಂದರೆ ಈಗಿನ ಕಾಲದ ದೇಹವೆಂಬ ಗುಡಾರದಲ್ಲಿನ ಅತೃಪ್ತಿಕರವಾದ ಪರಿಸ್ಥಿತಿಯಲ್ಲಿಯೂ, ನಾವು ಸಹ ಇದರಲ್ಲಿ ಬಲಹೀನತೆಯೆಂಬ ಭಾರವನ್ನು ಹೊತ್ತುಕೊಂಡವರಾಗಿ ನರಳುವವರಾದರೂ, ಸಂತೋಷದಿಂದ ಹಾಡುವಂಥಾಗಲು ನಮಗೆ ಸಾಧ್ಯವಾಗುವದು.

ಆದರೆ ನಮ್ಮದ್ದಲ್ಲವೆಂದು ನಾವು ಒಪ್ಪಿಕೊಂಡಂಥ ಹಾಗು ಕೇವಲ ಅದು ನಮ್ಮ ಮನೆವಾರ್ತೆಯ ವಶಕ್ಕೆ ನೀಡಲಾದಂಥ ಅಲ್ಪವಾದವುಗಳಲ್ಲಿಯೂ ನಾವು ನಂಬಿಗಸ್ತರಲ್ಲದವರಾದಲ್ಲಿ, ಅಂದರೆ ಕರ್ತನಿಂದ ಕೇವಲ ಮನೆವಾರ್ತೆಯಾಗಿ ನಮ್ಮ ಅಧೀನಕ್ಕೆ ಒಪ್ಪಿಸಲಾದ ಸಂಗತಿಗಳು ಸದವಕಾಶಗಳು ತಲಾಂತುಪ್ರತಿಭೆಗಳು ಇವುಗಳ ವಿಷಯವಾಗಿ ನಾವು ನಂಬಿಗಸ್ತರಲ್ಲದವರಾದರೆ, ಹಾಗು

ಇವುಗಳನ್ನು ಕೇವಲ ಕರ್ತನ ಮಹಿಮೆ ಪಡಿಸುವ ಒಂದೇ ಒಂದು ದೃಷ್ಟಿಯಿಂದ ಬಳಸುವದರಲ್ಲಿ ನಾವು ನಂಬಿಗಸ್ತರಲ್ಲದವರಾದರೆ ಆತನು ಎಂದಾದರೂ ನಿಜವಾದ ಕೃಪಾಐಶ್ವರ್ಯಗಳನ್ನು ಮುಂದಿನ ಕಾಲದಲ್ಲಿ ಇಲ್ಲವೇ ಈಗಿನ ಜೀವಿತದಲ್ಲಿಯಾದರೂ ನಮಗೆ ನೀಡುವನೆಂಬುದನ್ನು ಅಪೇಕ್ಷಿಸಲು ನಮಗೆ ಹೇಗೆ ತಾನೇ ಸಾಧ್ಯ.

ಹೀಗಾಗಿ ಆ ಶಿಷ್ಯರಿಗೆ ಒಟ್ಟಾರೆ ನೀಡಲಾದ ಪಾಠವು ಏನಂದರೆ, ಯಾವ ಮನುಷ್ಯನೂ ಪರಸ್ಪರ ವಿರೋಧವಾದ ಹಿತಾಸಕ್ತಿಯುಳ್ಳ ಇಬ್ಬರು ಯಜಮಾನರಿಗೆ ಸೇವಮಾಡಿ ಅವರಿಬ್ಬರನ್ನೂ ತೃಪ್ತಿಪಡಿಸಿ ಅವರಿಬ್ಬರಿಗೂ ನ್ಯಾಯವಾಗಿ ನಡಕೊಳ್ಳಲು ಶಕ್ತನಲ್ಲವಾದ್ದರಿಂದ ನಾವು ಸಹ ದೇವರಿಗೂ ನೀತಿಗೂ ಸೇವೆಮಾಡುವಂಥವರಾಗಿದ್ದು ಅದೇ ಸಮಯದಲ್ಲಿ "ಇಹಲೋಕದ ಅಧಿಪತಿಯಾದ" ವಿರೋಧಿಯಾಗಿರುವ ಸೈತಾನನಿಗೂ ಮತ್ತು ಆತನೊಡನೆ ಹೊಂದಿಕೆಮಾಡಿಕೊಂಡ-ವರಿಗೂ ಮೆಚ್ಚಿಗೆಯಾಗಿ ಮತ್ತು ಒಪ್ಪಿತವಾಗಿ ಇರಲು ಎಂದೂ ಸಾಧ್ಯವಿರದು. ಪರಲೋಕದಲ್ಲಿ ಗಂಟುಮಾಡಿಟ್ಟುಕೊಂಡು ದೇವರ ವಿಷಯದಲ್ಲಿ ಐಶ್ವರ್ಯವುಳ್ಳವರಾಗುವಂಥವರಾಗುವ ದೇವರ ಪ್ರತಿಷ್ಠಿತ ಜನರೆಲ್ಲರೂ, ಈಗಿನ ಜೀವಿತದಲ್ಲಿ ಯಾವುದೇ ವೃತ್ತಿಯುಲ್ಲಿದ್ದು ಸ್ವಾರ್ಥಭಾವದಿಂದ ನಿಜರೂಪದಲ್ಲಿ ಮಮೋನನನ್ನು (ಧನವನ್ನು) ಸೇವಿಸುವಂಥವರಾಗಿ ಪರಲೋಕರಾಜ್ಯವನ್ನು ಪಡಕೊಳ್ಳಲು ಈ ವಿಷಯಗಳನ್ನು ತ್ಯಾಗಮಾಡಲೊಲದವರಾಗಿ (ದೇವರಿಗೆ) ಪ್ರತಿಷ್ಠಿತರಾಗದಂಥವರ ಮಧ್ಯದಲ್ಲಿ ಅವರು ಒಳ್ಳೆಯ ಹೆಸರನ್ನು ಪಡಕೊಳ್ಳುವಂಥದನ್ನು ಇಚ್ಛಿಸಬಾರದು.

*****

# ಐಶ್ವರ್ಯವಂತನು ನರಕಕ್ಕೆ – ಬಡವನು ಪರಲೋಕಕ್ಕೆ

**ರೀಪ್ರಿಂಟ್ಸ್ ಪುಟ 5444**

## ಲೂಕ 16:19–31

**"ಬಡವನ ಮೊರೆಗೆ ಕಿವಿಮುಚ್ಚಿಕೊಳ್ಳುವವನು ತಾನೇ ಮೊರೆಯಿಡುವಾಗ ಯಾರೂ ಉತ್ತರಕೊಡರು."–ಜ್ಞಾನೋಕ್ತಿ 21:13**

ಐಶ್ವರ್ಯವಂತರಾದ ಪುರುಷರೆಲ್ಲರೂ ಹಾಗೂ ಐಶ್ವರ್ಯ-ವಂತೆಯರಾದ ಸ್ತ್ರೀಯರೆಲ್ಲರೂ ಪ್ರತಿದಿನವೂ ಸಕಲಾತಿನಯವಾದ ನಾರುಮಡಿ ವಸ್ತ್ರಗಳನ್ನು ತೊಟ್ಟುಕೊಂಡು ಪುಷ್ಕಳವಾದ ಭೋಜನವನ್ನು ಮಾಡುತ್ತಿರುವ ಕಾರಣ ನಿರಂತರವಾಗಿ ಯಾತನೆಸಂಕಟದಲ್ಲಿ ಕಳೆಯಬೇಕಾಗುತ್ತದೆ ಎಂಬುದು ನಮ್ಮ ಕರ್ತನ ಮಾತಿನ ಅರ್ಥವಾಗಿತ್ತೇ? ಪರಲೋಕದಲ್ಲಿ ಸೇರಸಲುವಾಗಿ ನಾವು ಹುಣ್ಣುಗಳಿಂದ ಕೂಡಿದವರಾಗಿ ನಾಯಿಗಳಿಂದ ಅವುಗಳನ್ನು ನೆಕ್ಕುವಂತೆ ಮಾಡಿಕೊಂಡು ಐಶ್ವರ್ಯವಂತರ ಮೇಜಿನಿಂದ ಬೀಳುವ ರೊಟ್ಟಿಯ ತುಂಡುಗಳನ್ನು ತಿನ್ನುವ ಬಡಬಿಕ್ಷುಕರಾಗಿರಬೇಕೆಂಬದು ನಿಜವಾಗಿರಲು ಸಾಧ್ಯವೇ? ಗುಣಸ್ವಭಾವಗಳು ಮುಂದಿನ ಕಾಲದಲ್ಲಿ ದೊರೆಯುವ ಪ್ರತಿಫಲಗಳು ಇಲ್ಲವೇ ದಂಡನೆಗಳಿಗೆ ಯಾವ ಸಂಬಂಧವೂ ಹೊಂದಿರುವದಿಲ್ಲವೇ? ಮತ್ತೆ ಹೇಳುವದಾದರೆ, ಐಶ್ವರ್ಯವಂತರು ಬೆಂಕಿಯಲ್ಲಿ ನಿರಂತರವಾಗಿ ಯಾತನೆಪಡುವವರಾಗಿ ಬಡವರು ಸಂತೋಷಪಡುತ್ತಿರು-ವದನ್ನು ನೋಡುವರೆಂಬದು ಹಾಗು ಸನ್ಮಾನಿತನಾದ ಆ ಬಡವನು ಐಶ್ವರ್ಯವಂತರು ನಿತ್ಯಯಾತೆಯಲ್ಲಿರುವದನ್ನು ನೋಡುವ-ರೆಂಬದು ಉಂಟೇ? ಇದು ಆದಿಯಲ್ಲೇ ಅಂತ್ಯವನ್ನು ತಿಳಿದವ-ನಾಗಿರುವ ಸಕಲ ಜ್ಞಾನಸಂಪನ್ನನೂ ಪ್ರೀತಿಯಲ್ಲಿ ಪರಿಪೂರ್ಣನೂ ಆದ ಸೃಷ್ಟಿಕರ್ತನ ಏರ್ಪಾಡಾಗಿರಲು ಸಾಧ್ಯವೇ?

ಈ ಸಾಮ್ಯವು ಹಲವಾರು ವರ್ಷಗಳ ಕಾಲದವರೆಗೆ ದೇವಜನರಲ್ಲಿ ಅಧಿಕ ಭಕ್ತಿಯುಳ್ಳವರ ಮನಸ್ಸನ್ನು ಕಂಗೆಡಿಸಿ ಅವರ ಹೃದಯ ಮನಸ್ಸುಗಳನ್ನೆಲ್ಲವನ್ನೂ ತಿರುಗಿಬೀಳುವಂತೆ ಮಾಡಿರುವದು; ಅಬ್ರಹಾಮನು ಬಹು ಐಶ್ವರ್ಯವುಳ್ಳವ-ನಾಗಿದ್ದನೆಂಬುದನ್ನೂ ಅದರಂತೆಯೇ ಇಸಾಕ ಯಾಕೋಬ ಅರಸನಾದ ದಾವೀದ ಅರಸನಾದ ಸೊಲೊಮೋನ ಮುಂತಾದ-ವರೂ ಸಹ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿರುವೆವು. ದೇವರು ಸ್ವತಃ ಬಹು ಐಶ್ವರ್ಯವುಳ್ಳವನೆಂಬುದನ್ನು ನಾವು ನೆನಪಿಸಿಕೊಳ್ಳುವೆವು. ನಂತರ ಈ ವಿಷಯವಾಗಿ ನಾವು ಇಬ್ರೀಯ ಹಾಗೂ ಗ್ರೀಕ್ ಭಾಷಾಮೂಲದಲ್ಲಿ ಹುಡುಕಿ ನೋಡಲಾಗಿ ಅಬ್ರಹಾಮನು ಗೆಹನ್ನಾ ಎಂಬ ನಿರೀಕ್ಷಾಹೀನವಾದ ಎರಡನೇ ಮರಣಕ್ಕೆ ಹೋಗಲಿಲ್ಲವೆಂದೂ ಆದರೆ ಶೀಯೋಲ್, ಹೇಡ್ಸ್ ಎಂಬ ಬೆಂಕಿಯಿಲ್ಲದಂಥ ಮರಣದ ಸ್ಥಿತಿಗೆ ಸೇರಿ ಸಮಾದಿಯಲ್ಲಿ, ಗೋರಿಯಲ್ಲಿ ಇರುವರೆಂಬುದನ್ನು ಕಂಡುಕೊಂಡವರಾಗಿದ್ದೇವೆ.

ಹೆಚ್ಚುತ್ತಿರುವ ನಮ್ಮ ಜ್ಞಾನವು ಮರ್ಮಗಳನ್ನೂ ಅಧಿಕ-ಗೊಳಿಸಿರುವದು: ಕಾರಣ ಶೀಯೋಲ್, ಹೇಡ್ಸ್, ಸಮಾಧಿಗಳು ನಾಶವಾಗಲಿದ್ದು ಅದರಲ್ಲಿರುವವರೆಲ್ಲರನ್ನೂ ಪುನರುತ್ಥಾನದಲ್ಲಿ ಹೊರತರಲಾಗುವದೆಂದು ಸತ್ಯವೇದವು ಪ್ರಕಟಿಸಿರುವದು. ಇತರ ಯಾವುದೇ ವಾಕ್ಯಭಾಗಗಳು ಈ ಸಾಮ್ಯದೊಂದಿಗೆ

ಒಪ್ಪಿಗೆಯಾಗುವದಿಲ್ಲವೆಂದು ತೋರುತ್ತದೆ. ಸಾಂಕೇತಿಕವಾದ ಮೃಗ ಹಾಗು ಸುಳ್ಳು ಪ್ರವಾದಿಯು ಯಾತನೆಯಲ್ಲಿರುವರೆಂಬು–ದನ್ನು ಹೇಳುವ ಪ್ರಕಟನಾ ಗ್ರಂಥದಲ್ಲಿನ ಒಂದು ವಾಕ್ಯಭಾಗವನ್ನು ಇದಕ್ಕೆ ಆದಾರವಾಗಿ ಬಳಸಿಕೊಳ್ಳುವದನ್ನು ಹೊರತು ಪಡಿಸಿದರೆ ಇದು ಸ್ವತಃ ಒಂದು ಪ್ರತ್ಯೇಕವಾದ ವರ್ಗಕ್ಕೆ ಸೇರಲ್ಪಟ್ಟದ್ದಾಗಿ ನಿಲ್ಲುತ್ತದೆ. ಹೀಗೆ ಈ ಪಾಠದಲ್ಲಿನ ಕಥೆಯು ಸಭೆಯಲ್ಲಿನ ಆಲೋಚನಾ ಪರರಾದ ಜನರನ್ನು ಎಡವಿಬೀಳುವಂತೆ ಮಾಡಿ ಅವರನ್ನ ಗೊಂದಲಕ್ಕೀಡು ಮಾಡಿದೆ.

## ಈಗ ಎಲ್ಲವೂ ಸ್ಪಷ್ಟವಾಗಿದ್ದು ಸರಳವಾಗಿರುತ್ತದೆ.

ಈಗ ನಮ್ಮ ಪಾಠವು ಒಂದು ಸಾಮ್ಯವಾಗಿರುವದೆಂಬುದನ್ನು ನಾವು ನೋಡುತ್ತೇವೆ. "ನೀವು ಮನುಷ್ಯ ಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ;" ಮತ್ತೆ "ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು;... ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು;" ಇಂಥಾ ನಮ್ಮ ರಕ್ಷಕನ ಇತರ ಸಾಮ್ಯಗಳು ಹಾಗು ಒಗಟುನುಡಿಗಳಿಗಿಂತ ಹೆಚ್ಚಾಗಿ ಇದನ್ನು ಅಕ್ಷರಾರ್ಥದಲ್ಲಿ ತೆಗೆದುಕೊಳ್ಳುವ ಹಾಗಿಲ್ಲ; ವಾಸ್ತವದಲ್ಲಿ ನಮ್ಮ ಕರ್ತನು ಜನರಿಗೆ ಕೇವಲ ಸಾಮ್ಯದ ಮೂಲಕವಾಗಿ ನುಡಿಯುತ್ತಿದ್ದನೆಂಬುದನ್ನು ನಾವು ಕಂಡುಕೊಂಡಿದ್ದೇವೆ. (ಮತ್ತಾಯ 13:34) ಪಂಚಾಶತ್ತಮ ದಿನದವರೆಗೂ, ಪವಿತ್ರಾತ್ಮನು ಗ್ರಹಿಸಲರ್ಹರನ್ನಾಗಿ ಮಾಡಲಾರಂಭಿಸುವದಕ್ಕೆ ಮೊದಲು ಆತನ (ಕ್ರಿಸ್ತನ) ಬೋಧನೆಯ ಆಳವನ್ನು ಗ್ರಹಿಸಲು ಯಾರೂ ಸಿದ್ಧರಿರಲಿಲ್ಲ.

ಎಲ್ಲವೂ ಈಗ ಎಷ್ಟು ಸರಳ! ಎಷ್ಟು ಸೊಗಸು! ಸತ್ಯವೇದ ಗ್ರಹಿಸುವಿಕೆಯೆಂಬ ಈಗಿನ ಬೆಳಕಿನಲ್ಲಿ ದೇವಜನರಲ್ಲಿ ಅನೇಕರು ಆನಂದಿಸುತ್ತಿರುವರು. ದೇವರ ಗುಣಗಳು ಪ್ರಜ್ವಲಿಸುತ್ತಿದ್ದು, ಅವುಗಳಲ್ಲಿ ದೇವರ ನೀತಿನ್ಯಾಯ ಜ್ಞಾನ ಪ್ರೀತಿ ಮತ್ತು ಶಕ್ತಿಗಳು ಸುಂದರವಾಗಿ ಕಾಣಬರುತ್ತಿವೆ.

ನಮ್ಮ ಪಾಠವು ಒಂದು ಸಾಮ್ಯವೆಂಬುದನ್ನು ಅರ್ಥಮಾಡಿ–ಕೊಳ್ಳಲು ನಮಗೆ ಕಷ್ಟವಾಗುವದಿಲ್ಲ. ನಾವು ನೋಡಿರುವಂತೆ, ಇದನ್ನು ಅಕ್ಷರಾರ್ಥದಲ್ಲಿ ತೆಗೆದುಕೊಂಡಾಗ ಬಿಕ್ಷುಕರೆಲ್ಲರೂ ಪರಲೋಕಕ್ಕೆ ಹೋಗುವರೆಂದು ಹಾಗು ಐಶ್ವರ್ಯವಂತರೆಲ್ಲರೂ ನರಕಕ್ಕೆ ಹೋಗುವರೆಂದು ನಾವು ವ್ಯರ್ಥಕಲ್ಪನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವದು. ಯಾಕಂದರೆ ಗುಣಗಳ ಬಗ್ಗೆ ಈ ಸಾಮ್ಯವು ಏನೂ ಹೇಳುವದಿಲ್ಲ. ಅಂದರೆ ಆ ಬಡಮನುಷ್ಯನು ಒಳ್ಳೆಯವನೆಂದಾಗಲಿ ಇಲ್ಲವೇ ಆ ಐಶ್ವರ್ಯವಂತ ಮನುಷ್ಯನು ಕೆಟ್ಟವನೆಂದಾಗಲಿ ಇದು ಹೇಳುವದಿಲ್ಲ. ಒಂದು ಸಾಮ್ಯವಾಗಿ ನೋಡಿದಾಗ, ಹೇಳಲ್ಪಟ್ಟ ಸಂಗತಿಗಳು ಅದೇ ಅರ್ಥಗಳನ್ನು ಹೊಂದಿರುವದಿಲ್ಲವೆಂಬುದನ್ನು ಕಾಣುತ್ತೇವೆ. ಹೀಗೆಯೇ ಇತರ ಸಾಮ್ಯಗಳಲ್ಲಿ, ಗೋದಿ ಮತ್ತು ಕುರಿಯು ದೇವರ ಮಕ್ಕಳನ್ನು ಸೂಚಿಸುತ್ತವೆ; ಹಣಜಿ ಮತ್ತು ಹೋತವು ಈ ಪ್ರಪಂಚದ ದೇವರಾದ ವಿರೋಧಿಯಾಗಿರುವ ಸೈತಾನನ ಅಧೀನದಲ್ಲಿರುವವರನ್ನು ಸೂಚಿಸುವವು.

## ಈ ಸಾಮ್ಯದ ಐಶ್ವರ್ಯವಂತ ಮನುಷ್ಯನು

ಪರಿಗಣನೆಮಾಡುತ್ತಿರುವ ಸಾಮ್ಯದಲ್ಲಿ, ಐಶ್ವರ್ಯವಂತನಾದ ಆ ಮನುಷ್ಯನು ಒಂದು ವರ್ಗವನ್ನು ಪ್ರತಿನಿಧಿಸುವನು, ಆ ಬಡಮನುಷ್ಯನಾದ ಲಾಜರನು ಮತ್ತೊಂದು ವರ್ಗವನ್ನು ಪ್ರತಿನಿಧಿಸುವನು. ಅದನ್ನು ನಾವು ನೋಡೋಣ: ಆ ಐಶ್ವರ್ಯವಂತನಾದ ಮನುಷ್ಯನು ಹದಿನಾರು ಶತಮಾನಗಳಿ–ಗಿಂತಲೂ ಹೆಚ್ಚಾಗಿ ದೇವರ ಅನುಗ್ರಹವನ್ನು ಹೊಂದಿದ್ದ ಯೆಹೂದ್ಯ ಜನಾಂಗವಾಗಿತ್ತು. ಯಹೂದ್ಯರಿಗೆ ವಾಗ್ದಾನಗಳು, ಪ್ರವಾದಿಗಳು, ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯ ಮೂಲಕವಾದ ಸೌಭಾಗ್ಯಾಶೀರ್ವಾದಗಳು ಕೊಡಲ್ಪಟ್ಟಿದ್ದವು. ಇವುಗಳು ಸಾಂಕೇತಿಕವಾಗಿ ಅವರ ಸಕಲಾತಿ, ನಾರುಮಡಿ ಹಾಗು ಪುಷ್ಕಳ ಭೋಜನಗಳಾಗಿದ್ದವು. ಅವರ ನಯವಾದ ನಾರು–ಮಡಿಯು ಅವರು ಛಾಯಾರೂಪ ಯಜ್ಞದ ಮೂಲಕವಾಗಿ ಛಾಯಾರೂಪದಲ್ಲಿ ನೀತಿವಂತರೆಂಬ ನಿರ್ಣಯಿಸಲ್ಪಡು–ತ್ತಿದ್ದುದನ್ನು ಸೂಚಿಸುವದು. ಅವರ ಸಕಲಾತಿ (ನೇರಳೆಬಣ್ಣದ ವಸ್ತ್ರಗಳು) ಅವರು ರಾಜಮನೆತನದವರೆಂಬುದನ್ನು ಸೂಚಿಸು–ವದು; ಯಾಕೆಂದರೆ ಅವರು ಛಾಯಾರೂಪದಲ್ಲಿನ ರಾಜ್ಯವಾ–ಗಿದ್ದರು. ಭಕ್ತನಾದ ಪೌಲನ ಮಾತುಗಳು ಸೂಚಿಸುವಂತೆ, ಅವರ ಪುಷ್ಕಳವಾದ ಭೋಜನವು ದೇವರ ವಾಗ್ದಾನಗಳನ್ನು ಪ್ರತಿನಿಧಿಸುತ್ತಿತ್ತು. – ರೋಮಾ 11:9

ಯೇಸುವಿನ ದಿನದಲ್ಲಿ ಯೆಹೂದ್ಯರ ದೇವಾನುಗ್ರಹವು ಕ್ಷೀಣಿಸಲು ಆರಂಭವಾಗಿತ್ತು. ಯೆಹೂದ್ಯರೇ ಒಪ್ಪಿಕೊಳ್ಳುವಂತೆ, ಕ್ರಿ.ಶ. 70ರಲ್ಲಿ ಅವರು ಸಂಪೂರ್ಣವಾಗಿ ಹೊರಹಾಕಲ್ಪಟ್ಟಿದ್ದರು. ನಾಲ್ವತ್ತು ವರುಷಗಳ ನಡುವಣ ಕಾಲದಲ್ಲಿ ಆ ಯೆಹೂದ್ಯ ಜನಾಂಗವೆಂಬ ಐಶ್ವರ್ಯವಂತ ಮನುಷ್ಯನು ಅಸ್ವಸ್ಥನಾಗಿ ಸತ್ತು ಹೂಣಲ್ಪಟ್ಟಿದ್ದನು. ಜನಾಂಗವಾಗಿ ಅವರು ಹೇಡ್ಸ್ ಎಂಬ ಸಮಾಧೀ ಸ್ಥಿತಿಗೆ ತೆರಳಿದ್ದರು; ಜಿಯೋನಿಸಂ (Zionism) ಎಂಬ ಚಳುವಳಿಯು ಅವರನ್ನು ಪುನರುತ್ಥಾನಗೊಳಿಸಲು ಆರಂಭ ಮಾಡಿದ್ದರೂ, ಅದು ಇನ್ನೂ ಪೂರ್ಣಗೊಂಡಿರುವದಿಲ್ಲ.

ಆದರೆ ಜನಾಂಗವಾಗಿ ಸತ್ತುಹೂಣಲ್ಪಟ್ಟವರಾದರೂ, ಕಳೆದ ಹತ್ತೊಂಬತ್ತು ಶತಮಾನಗಳಲ್ಲಿ ಯೆಹೂದ್ಯರು ವೈಯುಕ್ತಿಕವಾಗಿ ಬಹುತೇಕ ಜೀವವುಳ್ಳವರಾಗಿರುವರು. ಹಿಂಸೆಪಟ್ಟವರಾಗಿ ಅವರ ಪ್ರಾಣವು ವ್ಯಥೆಪಟ್ಟಿತ್ತು. ಅಯ್ಯೋ ಕೆಲವು ಸಮಯಗಳಲ್ಲಿ ಅವರು ಯೇಸುವಿನ ಹೆಸರನ್ನು ಹೇಳಿಕೊಳ್ಳುವವರಾದರೂ ಅನುಷ್ಠಾನದಲ್ಲಿ ಆತನನ್ನು ಅಲ್ಲಗಳೆಯುವ ಮೂಲಕ ಹಿಂಸೆಯನ್ನು ಹೊಂದಿದ–ವರಾಗಿದ್ದರು. ಈ ಎಲ್ಲಾ ಶತಮಾನಗಳಲ್ಲಿಯೂ ಸಾಮ್ಯದಲ್ಲಿ ನಂಬಿಗಸ್ತರಿಗೆ ಮೂಲ ತಂದೆಯಾದ ಅಬ್ರಹಾಮನಿಂದ ಸೂಚಿತ–ನಾದ ದೇವರಿಗೆ ಯೆಹೂದ್ಯರು ಕೂಗಿ ಮೊರೆಯಿಡುತ್ತಿರುವರು.

ಅವರು ಪಡೆದಿದ್ದ ಕೇವಲ ಒಂದೇ ಒಂದು ಉತ್ತರವೆಂದರೆ ಅವರ ಮತ್ತು ದೇವರ ಮಧ್ಯೆ ಬೇರ್ಪಡಿಸುವ ಒಂದು ಡೊಂಗರವಿರುವ–ದೆಂಬದು. ಈ ಪರಿಸ್ಥಿತಿಯು ಹೀಗೆ ಮುಂದುವರೆಯಲು ಸಾಧ್ಯವಾಗದೆಂಬದಕ್ಕೆ ದೇವರಿಗೆ ಸ್ತೋತ್ರ! ಹೊಸ ದೈವಿಕ ವ್ಯವಸ್ಥೆಯು ಉದಯವಾಗುವದು ಅದರಲ್ಲಿ ಆ ಐಶ್ವರ್ಯವಂತ–ನಾದ ಮನುಷ್ಯನು ಸಮಾಧಿಯ ಸ್ಥಿತಿಯಿಂದ ಹಿಂದಿರುಗಿ ಬರುವನು. ಇಸ್ರಾಯೇಲು ಜನಾಂಗವಾಗಿ ಪುನಃಸ್ಥಾಪಿತವಾಗು–ವದು, ಹಾಗು ಅವರಲ್ಲಿ ಅಗತ್ಯವಾದ ಪಾಠವನ್ನು ಕಲಿತು ಕೊಳ್ಳುವಂಥವರಿಗೆ ದೇವಾನುಗ್ರಹವು ಮತ್ತೆ ಉಂಟಾಗುವದು.

## ಸಾಮ್ಯದಲ್ಲಿನ ಬಡಮನುಷ್ಯನು

ಸಾಮ್ಯದಲ್ಲಿನ ಬಡಮನುಷ್ಯನು ಬಹಿಷ್ಕೃತವಾದ ಒಂದು ವರ್ಗವನ್ನು ಸೂಚಿಸುವನು. ಅದು ದೇವಾನುಗ್ರಹದಿಂದ ತಮ್ಮನ್ನು ಅಗಲಿಸಿಕೊಂಡವರಾದ ಸುಂಕದವರು ಹಾಗು ಪಾಪಿಗಳನ್ನು ಒಳಗೊಂಡಿರುವದು. ಅದು ದೇವಾನುಗ್ರಹವನ್ನು ಎಂದೂ ಹೊಂದಿರದ ಅನ್ಯಜನರನ್ನೂ ಸಹ ಒಳಗೊಂಡಿರುವದು. “ಇಸ್ರಾಯೇಲ್ಯರ ಹಕ್ಕಿನಲ್ಲಿ ಪಾಲಿಲ್ಲದವರು” (ಎಫೆಸ 2:12). ಇವರಿಗೆ ನೀತಿವಂತರೆಂದು ನಿರ್ಣಯಿಸುವದನ್ನು ಸೂಚಿಸುವಂಥ ನಯವಾದ ನಾರುಮಡಿ ಇರಲಿಲ್ಲ, ಆತನ (ದೇವರ) ರಾಜ್ಯದಲ್ಲಿ ಒಂದು ಭಾಗವಾಗಿ ದೇವಾನುಗ್ರಹದಲ್ಲಿ ಪಾಲುಹೊಂದುವದನ್ನು ಸೂಚಿಸುವಂಥ ಸಕಲಾತಿಯು ಇರಲಿಲ್ಲ. ಯಾವ ವಾಗ್ದಾನಗಳಿಗೂ ಅವರು ಸೇರಿರರಲಿಲ್ಲ. ಅವರಿಗೆ ಪಡಕೊಳ್ಳಲು ಸಾಧ್ಯವಾಗಿದ್ದೆಲ್ಲವೂ ಏನಂದರೆ ಅದು ಕೇವಲ ಆ ಐಶ್ವರ್ಯವಂತ ಮನುಷ್ಯನ ಮೇಜಿನಿಂದ ಬೀಳುವಂಥ ರೊಟ್ಟಿಯ ತುಂಡುಗಳೇ.

ಈ ವರ್ಗಕ್ಕೆ ಯೇಸುವು ನೀಡಿದ ಇಂಥಾ ಎರಡು ರೊಟ್ಟಿಯ ತುಣುಕಗಳ ನಿದರ್ಶನವನ್ನು ಸತ್ಯವೇದವು ಕೊಡುತ್ತದೆ. ಆತನು ರೋಮಾಯ ಶತಾಧಿಪತಿಯ ಆಳನ್ನು ಸ್ವಸ್ಥಪಡಿಸಿದಾಗ ಅದು ಯಹೂದ್ಯರ ಕೋರಿಕೆಯ ಮೇರೆಗೆ ನೀಡಲಾದ ಒಂದು ವಿನಾಯಿತಿಯಾಗಿತ್ತು. ಆ ಮನುಷ್ಯನು ಅವರಿಗೆ ಮಿತ್ರನಂತಿದ್ದು ಸಭಾಮಂದಿರವನ್ನು ಕಟ್ಟಿಸುವದು ಮುಂತಾದವುಗಳ ಮೂಲಕವಾಗಿ ತಮಗೆ ಒಳ್ಳೆಯದನ್ನು ಮಾಡಿರುವನೆಂದು ಯೆಹೂದ್ಯರು ಪ್ರಕಟಿಸಿ ಹೇಳಿದ್ದರು. ಆ ಆಳನ್ನು ಸ್ವಸ್ಥಪಡಿದಿಸಿದ್ದು ಒಂದು ರೊಟ್ಟಿಯ ತುಣುಕಾಗಿತ್ತು. ಇದರಂತೆಯೇ, ಫೋಯಿನಿಕೆ ದೇಶದ ಸ್ತ್ರೀಯು ಯೇಸುವಿನ ಬಳಿಗೆ ಬಂದು ದೆವ್ವ ಹಿಡಿದ ತನ್ನ ಮಗಳನ್ನು ಸ್ವಸ್ಥಪಡಿಸಲು ಬೇಡಿಕೊಳ್ಳುವದರ ಮೂಲಕವಾಗಿ ಒಂದು ರೊಟ್ಟಿಯ ತುಣುಕನ್ನು ಪಡೆದುಕೊಂಡಿದ್ದಳು. ಗುರುವು ಉತ್ತರಿಸಿದ್ದು: “ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವದು ಸರಿಯಲ್ಲ...” ಇಲ್ಲಿ ಆತನು ಯೆಹೂದ್ಯರು ಅನ್ಯಜನರ ಬಗ್ಗೆ ವಾಡಿಕೆಯಾಗಿ ಹೇಳುವ ನುಡಿಗಟ್ಟನ್ನು ಬಳಸಿ ಅವರನ್ನು ಅನ್ಯಜನರಾದ ನಾಯಿಗಳು ಎಂದು ಹೇಳಿದ್ದನು. ಆ ಫೊಯಿನಿಕೆ ದೇಶದ ಸ್ತ್ರೀಯು ಯೆಹೂದ್ಯಳಾಗಿರಲಿಲ್ಲ ಹಾಗು ದೇವರ ಅನುಗ್ರಹವನ್ನು ಪಡೆಯುವಲ್ಲಿ ಆಕೆಗೆ ಯಾವ ಹಕ್ಕೂ ಇರಲಿಲ್ಲವಾದರೂ ಅಕೆ ಉತ್ತರಿಸಿದ್ದು: “ಸ್ವಾಮೀ, ಆ ಮಾತು ನಿಜವೇ; ನಾಯಿಮರಿ–ಗಳಂತೂ ತಮ್ಮ ಯಜಮಾನರ ಮೇಜಿನಿಂದ ಬೀಳುವ ರೊಟ್ಟಿಯ ತುಣುಕುಗಳನ್ನು ತಿನ್ನುತ್ತವಲ್ಲಾ..” ಯೇಸುವು ಆಕೆಯಲ್ಲಿದ್ದ ನಂಬಿಕೆಯನ್ನು ಗಮನಿಸಿ ಆಕೆಯು ಬಯಸಿದಂಥ ರೊಟ್ಟಿಯ ತುಣುಕನ್ನು ಕೊಟ್ಟಿದ್ದನು.

ಯೆಹೂದ್ಯರು ತಾವು ದೇವಾನುಗ್ರಹವನ್ನು ಹೊಂದುವ ವಿಷಯದಲ್ಲಿ ಸತ್ತವರಾದ ಪ್ರಕಾರವೇ ಬಹಿಷ್ಕೃತರಾದ ಸುಂಕದವರು ಪಾಪಿಗಳು ಹಾಗು ಅನ್ಯಜನರು ದೇವಾನುಗ್ರಹ–ವಿಲ್ಲದಂಥ ತಮ್ಮ ಸ್ಥಿತಿಗೆ ಸತ್ತವರಾಗಿದ್ದರು; ದೇವಾನುಗ್ರಹವನ್ನು ಬಯಸಿದಂಥವರಾಗಿ ಆತನ ವಾಗ್ದಾನ ಸಂಬಂಧವಾದ ವಾಕ್ಯಗಳಿಗೆ ಹಸಿದು ಬಯಾರಿದವರು ಆತನಿಂದ ಅಂಗೀಕರಿ–ಸಲ್ಪಟ್ಟವರಾಗಿದ್ದರು. ಆದಿಸಭೆಯು ಈ ಲಾಜರನ ವರ್ಗದಿಂದ ಕೂಡಿದ್ದಾಗಿದ್ದು, ಸುಂಕದವರು ಪಾಪಿಗಳು ಹಾಗೂ ಅನ್ಯಜನರು ಫರಿಸಾಯರಿಂದ ನಿರಾಕರಿಸಲ್ಪಟ್ಟಿದ್ದರು. ಇನ್ನು ಮೇಲೆ ದೇವರಿಗೆ ಅನ್ಯರಾಗಿರುವದಕ್ಕೆ ಬದಲಾಗಿ ಅವರು ದೇವರ ಮಕ್ಕಳಾಗಿ ಆತನ ವಾಗ್ದಾನಗಳಿಗೆ ಬಾಧ್ಯರೂ ಆಗಿದ್ದರು. ಸಾಮ್ಯದಲ್ಲಿ ಅವರು ಅಬ್ರಹಾಮನ ಮಕ್ಕಳಾಗಿ ಸೂಚಿತವಾಗಿದ್ದು ಆತನ ಎದೆಗೆ ಒರಗಿಸಲ್ಪಟ್ಟವರಾಗಿದ್ದರು. ಛಾಯಾರೂಪದಲ್ಲಿ ಇಸಾಕನು ವಾಸ್ತವದಲ್ಲಿನ ಅಬ್ರಹಾಮನಿಗೆ ಪ್ರಿಯ ಮಗನಾಗಿದ್ದು, ವಾಗ್ದಾನದ ಸಂಬಂಧವಾಗಿ ಹುಟ್ಟಿದವನಾಗಿದ್ದನು. ನಿಜರೂಪದಲ್ಲಿ ಯೇಸು ಮತ್ತು ಆತನ ಹಿಂಬಾಲಕರು ಆತ್ಮಿಕ ರೀತಿಯಲ್ಲಿ ಅಬ್ರಹಾಮನ ಸಂತತಿಯಾಗಿ, ದೇವರ ಎದೆಗೆ ಹಾಗು ಆತನ ಅನುಗ್ರಹಕ್ಕೆ ಅಂಗೀಕರಿಸಲ್ಪಟ್ಟಿರುವರು. ಭಕ್ತನಾದ ಪೌಲನು ಹೀಗೆ ಹೇಳಿರುವನು: “ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ (ಅಬ್ರಹಾಮನಿಗೆ ಮಾಡಿದ) ವಾಗ್ದಾನಕ್ಕನು–ಸಾರವಾಗಿ ಬಾಧ್ಯರೂ ಆಗಿದ್ದೀರಿ. – ಗಲಾತ್ಯ 3:29

## “ದೊಡ್ಡದೊಂದು ಡೊಂಗರವು ಸ್ಥಾಪಿಸಿಯದೆ”

ಹದಿನೆಂಟು ಶತಮಾನಗಳಿಗೂ ಮಿಗಿಲಾಗಿ ಯೆಹೂದೀ ಧರ್ಮ ಹಾಗು ಕ್ರೈಸ್ತತ್ವಗಳ ನಡುವೆ ದೊಡ್ಡದಾದ ಒಂದು ಡೊಂಗರವು ಸ್ಥಾಪಿತವಾಗಿರುವದು. ಈ ಕಾಲಾವಧಿಯಲ್ಲಿ ಯಾವ ಯೆಹೂದ್ಯನೂ ದೇವರ ಬಳಿಗೆ ಬರುವದಕ್ಕೆ ಬಿಡಲಾಗಿಲ್ಲ, ಹಾಗು ಯಾವ ಅನ್ಯಜನಾಂಗದವರೂ ಯೆಹೂದ್ಯರ ಸ್ಥಾನವನ್ನು ತೆಗೆದುಕೊಳ್ಳುವದಕ್ಕಾಗಲಿ ಇಲ್ಲವೆ ಕ್ರಿಸ್ತನ ಹೊರತಾಗಿ ಯಾವ ರೀತಿಯಲ್ಲಿಯೂ ದೇವಾನುಗ್ರಹಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಬಿಡಲಾಗಿಲ್ಲ. ದೇವರ ಯೋಜನೆಯಲ್ಲಿ ಆ ಡೊಂಗರವನ್ನು ಮಾರ್ಪಡಿಸಲಾಗದ ರೀತಿಯಲ್ಲಿ ಸ್ಥಾಪಿಸ ಲಾಗಿರುವದು. “ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ...” ಅಂದರೆ ಈ ಮೂಲಕವಾಗಿ ನಾವು ದೇವರೊಂದಿಗೆ ಹೃದಯದಲ್ಲಿ ನಿಕಟವಾದ ಸಂಬಂಧಕ್ಕೆ ಬರಬಹುದು. ಕ್ರಿಸ್ತನು ಬಂದು ತನ್ನನ್ನು ಇಸ್ರಾಯೇಲ್ಯರಿಗೆ ಅರ್ಪಿಸಿಕೊಂಡವನಾಗಿ ಅವರಿಂದ ನಿರಾಕರಿಸಲ್ಪಟ್ಟು ಶಿಲುಬೆಯ ಮರಣ ಹೊಂದಿದ ದಿನದಿಂದ ಈ ಡೊಂಗರವಿರುವದು.

ಕ್ರಿಸ್ತನ ಎರಡನೇ ಬರುವಿಕೆಯಲ್ಲಿ ದೈವೀಕವ್ಯವಸ್ಥೆಯಲ್ಲಿ ಮತ್ತೊಂದು ಬದಲಾವಣೆಯಾಗುವದನ್ನು ದೇವರವಾಕ್ಯವು

ನಮಗೆ ತೋರಿಸಿಕೊಟ್ಟಿರುವದಕ್ಕಾಗಿ ದೇವರಿಗೆ ಸ್ತೋತ್ರ. ಈ ನಂಬಿಕೆಯ ಮೂಲಕವಾಗಿ ದೇವರ ಮಕ್ಕಳಾಗಿರುವ ಲಾಜರನ ವರ್ಗದವರು ಆಗ ತೆರೆಯ ಆಚೆಯ ಕಡೆಯಲ್ಲಿ ನಿಜರೀತಿಯಲ್ಲಿ ದೇವರ ಮಹಿಮೆಯುಳ್ಳ ಮಕ್ಕಳಾಗುವರು. ತಮ್ಮ ಒಡೆಯನಾದ ಯೇಸುವಿನ ಜೊತೆಗೂಡಿ ಅವರು ಲೋಕವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವರು; ಯಾಕಂದರೆ ಅವರು ಆ ರಾಜ್ಯದಲ್ಲಿ ಆತನ (ಕ್ರಿಸ್ತನ) ಮದಲಗಿತ್ತಿಯೂ ಹಾಗು ಸಹಬಾಧ್ಯರೂ ಅಗಿರುವರು. ಆನಂತರ ಆ ಐಶ್ವರ್ಯವಂತ ಮನುಷ್ಯನಿಗೆ ಏನಾಗುವದು? ಆಹಾ! ಆತನಿಗೆ ಹೇಡ್ಸ್‌ನಿಂದ (ಮರಣಾವಸ್ಥೆಯಿಂದ) ಎದ್ದು ಬರಬೇಕಿರುವದು! ದೇವರ ರಾಜ್ಯದ ಆತ್ಮಿಕ ಸ್ತರದಲ್ಲಿರುವವರನ್ನು ಲಾಜರನ ವರ್ಗವರು ಪ್ರತಿನಿಧಿಸುವಲ್ಲಿ, ಆ ರಾಜ್ಯದ ಭೂಲೋಕ ಸ್ತರದಲ್ಲಿರುವವರನ್ನು ಬೇರೊಂದು ವರ್ಗವು ಪ್ರತಿನಿಧಿಸುವದು; ಅದು ಯೆಹೂದ್ಯರದಾಗಿರುವದು. ಯೇಸುವನ್ನು ಶಿಲುಬೆಗೆ ಹಾಕಿದ ಯೆಹೂದ್ಯರು ಮೆಸ್ಸೀಯನ ಆತ್ಮಿಕ ರಾಜ್ಯದೊಂದಿಗೆ ಕೂಡಿದವರಾಗಿ ಭೂಲೋಕದಲ್ಲಿ ಅಧಿಪತಿಗಳನ್ನಾಗಿ ಮಾಡಲಾಗುವದಿಲ್ಲ. ಆದರೆ ಅವರ ಸಹೋದರರಲ್ಲಿ ಕೆಲವರು ಅಂದರೆ ಅವರು ತಂದೆಗಳೆಂದು ಕರೆಯುವ ವಾಡಿಕೆಯಲ್ಲಿರುವ –ವರನ್ನು ಅಧಿಪತಿಗಳನ್ನಾಗಿ ಮಾಡಲಾಗುವದು. ಇವರನ್ನು ಸತ್ಯವೇದದಲ್ಲಿ ಆತ್ಮಿಕ ರೀತಿಯಲ್ಲಿ ಹೀಗೆ ತಿಳಿಯಪಡಿಸಲಾಗಿರು–ವದು: "ಅಬ್ರಹಾಮ, ಇಸಾಕ, ಯಾಕೋಬ ಹಾಗು ಎಲ್ಲಾ ಪ್ರವಾದಿಗಳು," ಅಲ್ಲದೆ ಯೆಹೂದ್ಯರ (ಧರ್ಮಶಾಸ್ತ್ರದ ಒಡಂಬಡಿಕೆಯ) ಕಾಲದಲ್ಲಿ ದೇವರಿಗೆ ನಿಷ್ಠಾವಂತಿಕೆಯಿಂದ ನಂಬಿಗಸ್ತರಾಗಿ ತಮ್ಮನ್ನು ಪ್ರಮಾಣೀಕರಿಸಿಕೊಂಡವರೆಲ್ಲರೂ ಇರುವರು. ಭಕ್ತನಾದ ಪೌಲನು ಇವರನ್ನು ಇಬ್ರೀಯ 11:32–40 ವಾಕ್ಯಗಳಲ್ಲಿ ವರ್ಣನೆ ಮಾಡಿರುವನು.

ಯೆಹೂದ್ಯರು ದೇವಕೃಪಾನುಗ್ರಹಕ್ಕೆ ಮತ್ತೆ ಹಿಂದಿರುಗುವ –ದನ್ನು ಭಕ್ತನಾದ ಪೌಲನು ರೋಮಾ. 11:25–33ರಲ್ಲಿ ಉಲ್ಲೇಖಿಸಿರುವನು. ಅಲ್ಲಿ ಆತನು ತೋರಿಸಿಕೊಟ್ಟಿರುವದೇ –ನಂದರೆ, ಈಗ ದೇವಜನರಾಗಿರುವ ನಾವು ಹಿಂದೆ ಎಂದೂ ಹೀಗಿರಲಿಲ್ಲ, ಆದರೆ ಇಸ್ರಾಯೇಲ್ಯರು ದೇವಾನುಗ್ರಹದಿಂದ ಕಡಿದುಹಾಕಲ್ಪಟ್ಟಾಗ ನಾವು ದೇವಕೃಪಾನುಗ್ರಹಕ್ಕೆ ಅಂಗೀಕರಿ–ಸಲ್ಪಟ್ಟೆವು. ಹೀಗಾಗಿ ನಿಗದಿತ ಕಾಲದಲ್ಲಿ ದೇವಾನುಗ್ರಹದಿಂದ ಹೊರ ಹಾಕಲ್ಪಟ್ಟ ಇಸ್ರಾಯೇಲ್ಯರು ನಮುಗುಂಟಾದ ದೇವಕೃಪಾನುಗ್ರಹದ ಮೂಲಕವಾಗಿ ಅವರೂ ಅನುಗ್ರಹವನ್ನು ಹೊಂದುವರು. ಹೇಗಂದರೆ, ಕ್ರೈಸ್ತಸಭೆಯು ಆತ್ಮಿಕ ಇಸ್ರಾಯೇಲ್ಯರಾಗಿ ಪ್ರಭಾವ ಮಾನ ನಿರ್ಲಯತ್ವಗಳನ್ನು ಬಹುಮಾನವಾಗಿ ಪಡಕೊಂಡಾಗ, ಶಾರೀರಿಕ ಸಂಬಂಧದ ಇಸ್ರಾಯೇಲ್ಯರಿಗೂ ಹಾಗೂ ದೇವರ ಕೃಪಾನುಗ್ರಹಕ್ಕೂ ನಡುವೆ ಇರುವ ಡೊಂಗರವು ಇಲ್ಲದಂತಾಗುವದು. ಆಗ ಶಾರೀರಿಕ ಸಂಬಂಧದ ಇಸ್ರಾಯೇಲ್ಯರಿಗೆ ಕೃಪಾನುಗ್ರಹವನ್ನು ಹಿಂದಿರುಗಿಸಲಾಗುವದು. ಮಹಿಮಾ ಪದವಿಗೆ ಸೇರಿದ ಆತ್ಮಿಕ ಇಸ್ರಾಯೇಲ್ಯರ ಮೂಲಕವಾಗಿ ಅವರಿಗೆ ಬಂದಿರುವ ಕೃಪಾನುಗ್ರಹವು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಅವರ ಮೂಲಕವಾಗಿ ಮಾನವರ ಸಕಲ ಜನಾಂಗ ಪ್ರಜೆ ಕುಲ ಭಾಷೆಯವರಿಗೆ ವಿಸ್ತರಿಸಲಾಗುವದು.

ಇದು ದೇವರ ವಾಗ್ದಾನ, "ನಿನ್ನ ಸಂತತಿಯ ಮೂಲಕ–ವಾಗಿ ಭೂಲೋಕದ ಎಲ್ಲಾ ಕುಲಗಳು ಆಶೀರ್ವದಿಸಲ್ಪಡುವರು." ಅಬ್ರಹಾಮನ ಆತ್ಮಿಕ ಸಂತತಿಯಾದ ಕ್ರೈಸ್ತಸಭೆಯು ಈ ವಾಗ್ದಾನ ದಲ್ಲಿ ಮೊದಲ ಪಾಲನ್ನು ಪಡೆಯುವದು, ಮತ್ತು ಅಬ್ರಹಾಮನ ಶಾರೀರಿಕ ಸಂಬಂಧದ ಸಂತತಿಯು ಎರಡನೆಯ ಪಾಲನ್ನು ಪಡೆಯುವದು; ಆದರೆ ಶಾಪವನ್ನು ತೆಗೆದುಹಾಕಿ ಅದರ ಬದಲಾಗಿ ಮಾನವರಲ್ಲಿ ಯಾರಾರು ಅವುಗಳನ್ನು ಅಂಗೀಕರಿಸಿಕೊಳ್ಳುವರೋ ಅವರಿಗೆ ದೇವಾನುಗ್ರಹ ಮತ್ತು ಆಶೀರ್ವಾದಗಳನ್ನು ನೀಡಲು ಕರ್ತನು ಇವರಿಬ್ಬರನ್ನೂ ಒಟ್ಟಾಗಿ ಬಳಸಿಕೊಳ್ಳುವನು.

## ಐಶ್ವರ್ಯವಂತನ ಐದು ಮಂದಿ ಸಹೋದರರು

ಈ ಸಾಮ್ಯವು ಐಶ್ವರ್ಯವಂತನು ಒಂದು ಹನಿ ತಣ್ಣೀರನ್ನು ಒಣಗಿಹೋದ ತನ್ನ ನಾಲಿಗೆಗೆ ಮುಟ್ಟಿಸಬೇಕೆಂದು ಪ್ರಾರ್ಥಿಸುವ–ವನಾಗಿ ಪ್ರತಿನಿಧಿಸಿರುವದು. ಸಾಂಕೇತಿವಾಗಿಯೂ ಹಾಗೂ ಸಾಮ್ಯರೂಪವಾಗಿಯೂ, ಇದು ಯೆಹೂದ್ಯ ಜನರು ಮಹಾ ಸಂಕಟದಲ್ಲಿದ್ದವರಾಗಿ ತಮ್ಮ ಕಷ್ಟದಲ್ಲಿ ಕ್ರೈಸ್ತರನ್ನು ಸ್ವಲ್ಪ ಸಹಾಯುಮಾಡಲು ಅವಕಾಶನೀಡಬೇಕೆಂದು ದೇವರಿಗೆ ಕೇಳಿಕೊಳ್ಳುವದನ್ನು ಸೂಚಿಸುವದು. ಯಹೂದ್ಯರು ಎಂದಾದರೂ ದೇವರಿಗೆ ಸಹಾಯಕ್ಕಾಗಿ ಮನವಿಮಾಡಿಕೊಂಡಿರುವರೇ? ಹಿಂದೆ ಅವರ ಮೇಲೆ ಬಂದಿದ್ದ ಹಿಂಸೆಯಿಂದ ಹಾಗೂ ಕೆಲವು ಮಟ್ಟಿಗೆ ಈಗಲೂ ರಷ್ಯಾದೇಶದಲ್ಲಿ ಮುಂದುವರೆಯುತ್ತಿರುವ ಹಿಂಸೆಯಿಂದ ಉಪಶಮನಕ್ಕಾಗಿ ಅವರು ಪ್ರಾರ್ಥಿಸಿರುವರೇ? ಖಂಡಿತವಾಗಿಯೂ ಅವರು ಮಾಡಿರುತ್ತಾರೆ! ಮಿಗಿಲಾಗಿ, ಅವರು ಲಾಜರನ ವರ್ಗವನ್ನು ಸೂಚಿಸುವ ಕ್ರೈಸ್ತ ಪ್ರತಿನಿಧಿಗಳ ಮೂಲಕವಾಗಿ ತಮಗೆ ಬಿಡುಗಡೆಯಾಗಿ ಇವರಿಂದ ತಮಗೆ ಪರಿಹಾರ ಒದಗಬೇಕೆಂಬುದನ್ನು ಬಯಸುವಂಥವರಾಗಿ ವಿನಂತಿಸಿರುವರು.

ಯೆಹೂದ್ಯರು ಅಧ್ಯಕ್ಷರಾದ ರೂಸವೆಲ್ಟ್‌ರವರನ್ನು ವಿನಂತಿಸಿ –ಕೊಂಡು ಅತನು ತನ್ನ ಪ್ರಭಾವವನ್ನು ಬಳಸಿಕೊಂಡು ಯೆಹೂದ್ಯರಿಗಾಗುತ್ತಿರುವ ಹಿಂಸೆಯು ಸುಧಾರಿಸುವಂತಾಗಲು ರಷ್ಯಾದೇಶದ ಸರಕಾರವನ್ನು ಪ್ರಾರ್ಥಿಸಿರುವ ಈ ಒಂದು ನಿದರ್ಶನವು ನಮ್ಮ ದಿನಗಳಲ್ಲಿರುವದು. ಅವರು ನೀರಿನ ಹನಿಯನ್ನು ಪಡೆದಿದ್ದರೇ? ಇಲ್ಲ! ರಾಷ್ಟ್ರಗಳ ಒಕ್ಕೂಟವು ತನ್ನ ಮಿತ್ರ ರಾಷ್ಟ್ರವು ಇಂಥಾ ಒಂದು (ವಿಷಯಕ್ಕಾಗಿ ರಷ್ಯಾದೇಶವನ್ನು) ಸಂಪರ್ಕ ಮಾಡುವದಕ್ಕೆ ಬಿಡುವದಿಲ್ಲವೆಂದು ಶ್ರೀ ರೂಸವೆಲ್ಟರು ಉತ್ತರಿಸಿದ್ದರು.

ಸಾಮ್ಯವು ಮುಂದೆ ಸಾಗಿ, ಐಶ್ವರ್ಯವಂತನಾದ ಆ ಮನುಷ್ಯನು ಐದು ಮಂದಿ ಸಹೋದರರನ್ನು ಹೊಂದಿದ್ದು ಅವರು ತನ್ನ ಮೇಲೆ ಬಂದಿರುವ ಸಂಕಷ್ಟದಲ್ಲಿ ಸೇರುವ ಅಪಾಯದಲ್ಲಿರುವರೆಂಬ ಅಂಶವನ್ನು ಸ್ಪಷ್ಟಪಡಿಸಿ ಹೇಳಿರುವದು. ಆತನ ಐದು ಮಂದಿ ಸಹೋದರರು ಯಾರಾಗಿದ್ದರು? ನಾವು ಉತ್ತರಿಸುವದೇನಂದರೆ, ಯೇಸುವಿನ ದಿನದಲ್ಲಿ ಪಾಲೆಸ್ತೀನದ

ಯೇಹೂದ್ಯರು ಮುಖ್ಯವಾಗಿ ಬೆನ್ಯಮೀನ್ ಹಾಗು ಯೆಹೂದ ಕುಲಗಳನ್ನು ಪ್ರತಿನಿಧಿಸಿದ್ದು, ಬಹು ಪಾಲು ಹತ್ತು ಕುಲಗಳು ಹಲವಾರು ದೇಶಗಳಲ್ಲಿ ಚದುರಿಸಲ್ಪಟ್ಟಿದ್ದರೆಂಬದು. ಪ್ರಶ್ನೆ ಎದ್ದದ್ದೇನಂದರೆ, ಈ ಪರಿಶೋಧನಾನುನುಭವು ಕೇವಲ ದೇವಾನುಗ್ರಹಗಳಲ್ಲಿ ಅಧಿಕವಾದುದನ್ನು ಅನುಭವಿಸಿದ್ದ ಪಾಲೆಸ್ತೀನಾದ ಯೆಹೂದ್ಯರಿಗೆ ಬಾಧಿಸಿದ್ದವೋ, ಇಲ್ಲವೇ ಇದು ಹೊರ ದೇಶಗಳಲ್ಲಿ ಚದುರಿಸಲ್ಪಟ್ಟಿದ್ದ ಯೆಹೂದ್ಯರನ್ನೂ ಒಳಗೊಂಡಿತ್ತೋ? ಈ ಸಾಮ್ಯದಲ್ಲಿ ಉತ್ತರವನ್ನು ಕೊಡಲಾಗಿರು–ವದು, "ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥವೂ ಅವರಲ್ಲಿವೆ; ಅವುಗಳನ್ನು ಕೇಳಲಿ.." ಯೆಹೂದ್ಯರು ಮಾತ್ರವೇ ಉಲ್ಲೇಖಿಸಲ್ಪಟ್ಟಿರುವರೆಂದು ಇದು ಸಾಬೀತು ಪಡಿಸುತ್ತದೆ; ಯಾಕೆಂದರೆ ಯಾವ ಅನ್ಯಜನಾಂಗವೂ ಮೋಶೆಯ ಧರ್ಮಶಾಸ್ತ್ರವನ್ನೂ ಪ್ರವಾದಿಗಳ ಗ್ರಂಥವನ್ನೂ ಹೊಂದಿದ್ದಿಲ್ಲ. ಐದು ಎಂಬ ಸಂಖ್ಯೆಯು ಇದಕ್ಕೆ ಸಂಪೂರ್ಣವಾಗಿ ಸರಿಹೊಂದುತ್ತದೆ, ಸಹ. ಯೆಹೂದ ಮತ್ತು ಬೆನ್ಯಮೀನ್ ಎಂಬ ಎರಡು ಕುಲಗಳು ಅ ಒಬ್ಬ ಐಶ್ವರ್ಯವಂತ ಮನುಷ್ಯನಲ್ಲಿ ಪ್ರತಿನಿಧಿಸಿದ್ದಾದರೆ, ಇದೇ ಪ್ರಮಾಣದಲ್ಲಿ ಹತ್ತು ಕುಲಗಳು ಐದು ಮಂದಿ ಸಹೋದರರಲ್ಲಿ ಪ್ರತಿನಿಧಿಸಲ್ಪಡುತ್ತವೆ.

ಮತ್ತು ಅದು ಹೀಗೆಯೇ ಇತ್ತು. ಪಾಲಿಸ್ತೇನಾ ದೇಶದಲ್ಲಿದ್ದ ಯೆಹೂದ್ಯರಲ್ಲಿ ಆರಂಭವಾದ ಈ ಸುವಾರ್ತಾ ಸಂದೇಶದ ಪ್ರಚಾರವು ಎಲ್ಲಾ ದೇಶಗಳಿಗೂ ವಿಸ್ತರಿಸಲ್ಪಟ್ಟಿತ್ತು; ಅಲ್ಲದೆ ಅಪೋಸ್ತಲನಾದ ಪೌಲನು ಅನ್ಯಜನರ ಯಾವುದೇ ಪಟ್ಟಣಗಳಿಗೆ ಹೋಗುವಾಗ ಮೊದಲು ಅವನು ಯೆಹೂದ್ಯರಿಗೆ ಹೀಗೆ ಸಾರಿ ಹೇಳುತ್ತಿದ್ದನು: ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು; ಆದರೆ ನೀವು ಅದನ್ನು ತಳ್ಳಿಬಿಟ್ಟು ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರೆಂದು ತೀರ್ಪುಮಾಡಿ–ಕೊಂಡದ್ದರಿಂದ ಇಗೋ, ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ. (ಅ.ಕೃ. 13:46–47) ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ಇಸ್ರಾಯೇಲ್ಯರೆಲ್ಲರಿಗೂ ಉಂಟಾದ ಪರೀಕ್ಷೆಯು ಒಂದೇ ರೀತಿಯದ್ದಾಗಿತ್ತು.

ಹೀಗೆ ನಾವು ಕನಸಿನಲ್ಲಿಯಾದರೂ ಎಂದೂ ನೆನಸದ ರೀತಿಯಲ್ಲಿ ಯೇಸುವಿನ ಬೋಧನೆಗಳಲ್ಲಿ ತೋರಿಬಂದ ಜ್ಞಾನದ ಆಳವನ್ನು ಕಂಡುಕೊಳ್ಳುತ್ತಿದ್ದೇವೆ. ನಾವು ಮತ್ತೂ ಕಂಡು–ಕೊಳ್ಳುತ್ತಿರುವದೇನಂದರೆ, ಘೋರ ದುಃಸ್ವಪ್ನದಂತೆ ಭಯಾನಕ–ವಾದ ಜ್ಞಾನಾಂಧಕಾರ ಕಾಲಗಳ (ಡಾರ್ಕ್ ಏಜಸ್) ಬೋಧನೆಗಳು ನಮ್ಮ ಅಭಿಪ್ರಾಯಭಾವನೆಗಳನ್ನು ಕಲುಷಿತ–ಗೊಳಿಸಿ ನಮ್ಮ ಆತ್ಮಿಕ ನೇತ್ರಗಳನ್ನು ದಾಟಿಹೋಗಿ ಕರ್ತನ ವಾಕ್ಯದ ಸೊಗಸನ್ನು ಕಾಣದಂತೆ ಅಡ್ಡಿಪಡಿಸಿರುವದೆಂಬದೇ. ಈ ನೂತನ ದಿನಕ್ಕಾಗಿ ಹಾಗು ಇದು ಸತ್ಯವೇದದ ಮೇಲೆ ಚೆಲ್ಲುತ್ತಿರುವ ಬೆಳಕಿಗಾಗಿ ದೇವರಿಗೆ ಸ್ತೋತ್ರ!

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ತಪ್ಪನ್ನು ಕ್ಷಮಿಸುವಿಕೆ ಮತ್ತು ನಂಬಿಕೆಯ ಮಹತ್ವ; ಅಪ್ರಯೋಜಕರಾದ ಆಳುಗಳು | -- | -- | 17:1–10 | -- |

# ಲೂಕ 17:1–10

ಆತನು ತನ್ನ ಶಿಷ್ಯರಿಗೆ–ತೊಡಕುಗಳು ಬಾರದೆ ಇರಲಾರವು; ಆದರೂ ಅವು ಯಾವನಿಂದ ಬರುತ್ತವೆಯೋ ಅವನ ಗತಿಯನ್ನು ಏನು ಹೇಳಲಿ? ಅವನು ಈ ಚಿಕ್ಕವರಲ್ಲಿ ಒಬ್ಬನಿಗೆ ತೊಡಕನ್ನೊ–ಡ್ಡುವದಕ್ಕಿಂತ ತನ್ನ ಕುತ್ತಿಗೆಗೆ ಬೀಸುವ ಕಲ್ಲನ್ನು ಕಟ್ಟಿಸಿಕೊಂಡು ಸಮುದ್ರದಲ್ಲಿ ಹಾಕಿಸಿಕೊಳ್ಳುವದೇ ಲೇಸು. ನಿಮ್ಮ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ. ನಿನ್ನ ಸಹೋದರನು ತಪ್ಪು ಮಾಡಿದರೆ ಅವನನ್ನು ಗದರಿಸು; ಅವನು ಪಶ್ಚಾತಾಪಪಟ್ಟರೆ ಅವನ ತಪ್ಪನ್ನು ಕ್ಷಮಿಸಿ ಬಿಡು. ಅವನು ದಿನಕ್ಕೆ ಏಳು ಸಾರಿ ನಿನಗೆ ತಪ್ಪುಮಾಡಿ ಏಳು ಸಾರಿಯೂ ನಿನ್ನ ಕಡೆಗೆ ತಿರುಗಿಕೊಂಡು ನನಗೆ ಪಶ್ಚಾತಾಪವಾಯಿತು ಎಂದು ಹೇಳಿದರೆ ಅವನಿಗೆ ಕ್ಷಮಿಸು ಎಂದು ಹೇಳಿದನು.

ಅಪೋಸ್ತಲರು ಸ್ವಾಮಿಗೆ–ನಮ್ಮ ನಂಬಿಕೆಯನ್ನು ಹೆಚ್ಚಿಸು ಎಂದು ಹೇಳಲು ಸ್ವಾಮಿಯು–ಸಾಸಿವೇ ಕಾಳಷ್ಟು ನಂಬಿಕೆ ನಿಮಗಿದ್ದರೆ ನೀವು ಈ ಅತ್ತೀ ಮರಕ್ಕೆ–ನೀನು ಬೇರು ಸಹಿತ ಕಿತ್ತುಕೊಂಡುಹೋಗಿ ಸಮುದ್ರದಲ್ಲಿ ನಾಟಿಕೋ ಎಂದು ಹೇಳಿದರೂ ಅದು ನಿಮ್ಮ ಮಾತನ್ನು ಕೇಳುವದು.

ನಿಮ್ಮಲ್ಲಿ ಯಾವನಿಗಾದರೂ ಉಳುವ ಅಥವಾ ಕುರಿಮೇಯಿಸುವ ಆಳಿರಲಾಗಿ ಅವನು ಹೊಲದಿಂದ ಮನೆಗೆ ಬಂದ ಆ ಆಳಿಗೆ–ನೀನು ತಟ್ಟನೆ ಬಂದು ಊಟಕ್ಕೆ ಕೂತುಕೋ ಎಂದು ಹೇಳಾನೇ? ಹಾಗೆ ಹೇಳದೆ ನೀನು ನನ್ನ ಊಟಕ್ಕೇನಾ–ದರೂ ಸಿದ್ಧಮಾಡು, ನಾನು ಊಟಮಾಡಿ ಕುಡಿಯುವ ತನಕ ನಡುಕಟ್ಟಿಕೊಂಡು ನನಗೆ ಸೇವೆಮಾಡು; ಆ ಮೇಲೆ ನೀನು ಊಟಮಾಡಿ ಕುಡಿ ಎಂದು ಹೇಳುವನಲ್ಲವೇ? ತನ್ನ ಅಪ್ಪಣೆಯಂತೆ ನಡೆದ ಆ ಆಳಿಗೆ–ನಿನ್ನಿಂದ ಉಪಕಾರ–ವಾಯಿತೆಂದು ಅವನಿಗೆ ಹೇಳುವನೇ? ಇದರಂತೆಯೇ ನಿಮ್ಮ ಸಂಗತಿ. ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ ಎಂದು ಹೇಳಿದನು.

*****

# ನಾವು ಪ್ರಯೋಜನವಿಲ್ಲದ ಆಳುಗಳು

**ರೀಪ್ರಿಂಟ್ಸ್ ಪುಟ 5445**

## ಲೂಕ 17:1-10

**"ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ" - 1 ಕೊರಿಂಥ 1:31**

ಈ ದಿನದ ಪಾಠವು ನಾಲ್ಕು ವಿಭಾಗಗಳಲ್ಲಿದ್ದು, ಪ್ರತಿಯೊಂದೂ ವಿಭಿನ್ನವಾಗಿಯೂ ಪ್ರತ್ಯೇಕವಾಗಿಯೂ ಸ್ಪಷ್ಟವಾಗಿರುವದು. ಈ ವಚನಗಳನ್ನು ನುಡಿಯುವಾಗ ಇವುಗಳು ಯಾವ ಸಂಬಂಧವಾಗಿರುವದೆಂಬುದನ್ನು ಸಹ ನೀಡಲಾಗಿಲ್ಲ. ಹೇಗೂ ಅದು ಮೇಲಣಿಂದ ಬಂದ ಜ್ಞಾನವನ್ನು ತೋರ್ಪಡಿಸುವದು. ನಾವು ಅವುಗಳನ್ನು ಅದರ ಕ್ರಮಾನುಸಾರವಾಗಿ ಪರಿಗಣನೆಮಾಡುವೆವು.

"ತೊಡಕುಗಳು (ವಿಘ್ನಗಳು) ಬಾರದೆ ಇರಲಾರವು." ತೊಡಕುಗಳು ಎಂಬ ಮಾತು ಹೆಚ್ಚು ನಿರ್ದಿಷ್ಟವಾಗಿ ಅಡ್ಡಿಪಡಿಸು-ವದನ್ನು ಸೂಚಿಸುವದು, ಅಥವಾ ಇನ್ನೂ ಹೆಚ್ಚು ಅಕ್ಷರಾರ್ಥದಲ್ಲಿ ಹೇಳುವದಾದರೆ, ಅದು ಆಮಿಷ ಒಡ್ಡುವದನ್ನು ಸೂಚಿಸುವದು. ಯೇಸುವಿನ ಪ್ರತಿಷ್ಠಿತರಾದ ಹಿಂಬಾಲಕರನ್ನು ಚಿಕ್ಕವರುಗಳೆಂದು ಕರೆಯಲಾಗಿರುವದು, ಯಾಕೆಂದರೆ ಅವರು ನೂತನ ಸೃಷ್ಟಿಗಳಾಗಿ ಕೇವಲ ಆಗತಾನೇ ದೇವರ ಚಿತ್ತಕ್ಕೆ ತಮ್ಮನ್ನು ಪೂರ್ಣವಾಗಿ ಪ್ರತಿಷ್ಠಿಸಿಕೊಂಡವರಾಗಿ ನೂತನ ಮಾರ್ಗದಲ್ಲಿ ನಡೆಯಲು ಆರಂಭಿಸಿರುವರು. "ಕ್ರಿಸ್ತನಲ್ಲಿರುವ ಶಿಶುಗಳು" ಎಂಬ ಶೈಲಿಯಲ್ಲಿ ಭಕ್ತನಾದ ಪೌಲನು ಹೇಳಿರುವನು. (1 ಕೊರಿಂಥ 3:1) "ಮಕ್ಕಳಿರಾ" ಎಂದು ಭಕ್ತನಾದ ಯೋಹಾನನು ಬರೆದಿರುವನು. ಹೇಗಿದ್ದರೂ, ಈ ಬಾಲ್ಯಾವಸ್ಥೆಯು ಮುಂದುವರೆಯಬಾರದು. ಕೃಪೆಯಲ್ಲಿ ಜ್ಞಾನದಲ್ಲಿ ಪ್ರೀತಿಯಲ್ಲಿ ಬೆಳೆಯುತ್ತಿರಬೇಕು. ಗುಣಗಳಲ್ಲಿನ ಪ್ರಾಬಲ್ಯತೆಯನ್ನು ಪಡಕೊಳ್ಳಬೇಕು; ಅದು ವಿವೇಕವುಳ್ಳದ್ದು ಮಾತ್ರವಲ್ಲದೆ ಅದು ದೃಢವಾಗಿದ್ದು ಆಮಿಷಕ್ಕೊಳಗಾಗಲು ಇದರಿಂದ ಕಷ್ಟಕರವಾಗುವದು, ಹಾಗು ಇದರಿಂದ ಅಲ್ಪವಾಗಿ ಬೆಳೆದವರಿಗೆ ಸಹಾಯ ಮಾಡಲು ಶಕ್ತವಾಗುವದು.

ಕ್ರೈಸ್ತಸಭೆಯಲ್ಲಿ ಹೀಗೆ ಅಧಿಕವಾಗಿ ಅಭಿವೃದ್ಧಿಯಾದವರನ್ನು ಹಿರಿಯರೆಂಬ ಶೈಲಿಯಲ್ಲಿ, ಅಂದರೆ ಅಕ್ಷರಾರ್ಥದಲ್ಲಿ ಹಿರಿಯ ಸಹೋದರರೆಂದು ಕರೆಯಲಾಗಿರುವದು. ಇಂಥವರು ಸಹೋದರರ ಮಧ್ಯದಲ್ಲಿ ಹೆಚ್ಚು ನಿರ್ದಿಷ್ಟವಾಗಿ ಕರ್ತನನ್ನು ಪ್ರತಿನಿಧಿಸುವರು; ಆಗಾಗ್ಗೆ ಪರಲೋಕದಿಂದ ಉಂಟಾಗುವ ಆಧರಣೆ ಬುದ್ಧಿಮಾತು ಗದರಿಕೆ ಮುಂತಾದವುಗಳು ಇವರ ಮೂಲಕವಾಗಿ ತಮ್ಮ ಕಿರಿಯ ಅನುಯಾಯಿಗಳಿಗೆ ನೀಡಬಹುದಾಗಿರುವವು. ಸೈತಾನನು ಈ ಲೋಕದ ಅಧಿಪತಿ-ಯಾಗಿರುವ ಕಾರಣ ಮತ್ತು ಮನುಷ್ಯರಲ್ಲಿ ಬಹು ಪಾಲು ಇವನ ಪ್ರಭಾವಕ್ಕೆ ಒಳಗಾಗಿರುವ ಕಾರಣ ಅಂದರೆ ತಪ್ಪುಗಳು ಮೂಢನಂಬಿಕೆ ಪಾಪ ಮುಂತಾದವುಗಳ ಮೂಲಕ ಅವರನ್ನು ಮಂಕುಮಾಡಿರುವ ಕಾರಣ ಅವರು ಆಮಿಷಕ್ಕೊಳಗಾಗುವ ಅಪಾಯಗಳು ಉಂಟಾಗಿರುವದು. "ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು." (2 ಕೊರಿಂಥ 4:4) ಯೇಸುವು ಶಿಶುಗಳನ್ನು ಉಲ್ಲೇಖಿಸಿ-ರುವದಿಲ್ಲವೆಂಬುದು ಈ ಮಾತಿನಲ್ಲಿ ತೋರ್ಪಡಿಸಲಾಗಿರುವದು: "ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ..."

ತನ್ನವರಾದ ಚಿಕ್ಕವರುಗಳನ್ನು ಅಂದರೆ ತನ್ನ ಹಿಂಬಾಲಕರನ್ನು ಯಾರಾದರೂ ತಿಳಿಯದೇಯೇ ಅಥವಾ ಉದ್ದೇಶವಿಲ್ಲ-ದೆಯೇ ಅಡ್ಡಿಪಡಸುವಂಥವರಿಗೆ ಯೇಸುವು ಅನ್ಯಾಯವಾಗಿ ಖಂಡಿಸುವದಾಗಲೀ ಅಥವಾ ಶಿಕ್ಷಿಸುವದಾಗಲಿ ಮಾಡುವನೆಂದು ನಾವು ಕಲ್ಪಿಸಿಕೊಳ್ಳಬಹುದಾಗಿಲ್ಲ. ಹಿಂಬಾಲಕರಾದ ತನ್ನ ಚಿಕ್ಕವರುಗಳನ್ನು ಉದ್ದೇಶಪೂರ್ವಕವಾಗಿ ಮೋಸಗೊಳಿಸಲು ಆಶಾಪಾಶಕ್ಕೆ ಸಿಕ್ಕಿಸಲು ದಾರಿತಪ್ಪಿಸಲು ಅಧೈರ್ಯಪಡಿಸಲು ಪ್ರಯತ್ನಿಸುವವರನ್ನು ಎಂಬದು ಆತನ ಮಾತಿನ ಅರ್ಥವಾಗಿತ್ತೆಂದು ನಾವು ಕಲ್ಪಿಸಿಕೊಳ್ಳಬೇಕು. ಕರ್ತನ ಹಿಂಬಾಲಕರನ್ನು ಉದ್ದೇಶಪೂರ್ವಕವಾಗಿ ಬುದ್ಧಿವಂತಿಕೆಯಿಂದ ಸಂಚಿನಲ್ಲಿ ಸಿಕ್ಕಿಸಿರುವ ನಿದರ್ಶನಗಳು ನಮ್ಮಲ್ಲಿರುವದು; ಇದು ಎಷ್ಟರ ಮಟ್ಟಿಗೆ ಜಯಸಾಧಿಸಿದ್ದರೂ ಇವು ಸೈತಾನನ ಮನೋಭಾವವನ್ನು ಸೂಚಿಸುತ್ತವೆ.

ಕೆಲವು ಸಮಯಗಳಲ್ಲಿ ದೇವರ ನಿಜವಾದ ಜನರೂ ಹೀಗೆ ಸೈತಾನನ್ನು ಸೇವಿಸುವ ಪಾಶಕ್ಕೆ ಸಿಕ್ಕಿಬಿದ್ದಿರುವರು; ಇದನ್ನು ದೇವರ ವಾಕ್ಯದಲ್ಲಿ ಹೀಗೆ ತಿಳಿಸಿರುವದು: "ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುವಿರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ?" ತಾರ್ಸದ ಸೌಲನು ಸಹ ಒಂದು ಕಾಲಕ್ಕೆ ವಿರೋಧಿಯಾದ ಸೈತಾನನ ಪಾಶಕ್ಕೆ ಸಿಲುಕಿ ಆತನಿಂದ ಬಳಸಿಕೊಳ್ಳಲ್ಪಟ್ಟಿದ್ದನು; ಆತನು ವಿವರಿಸಿ ಹೇಳಿರುವದೇನಂದರೆ, ತಾನು ಇದನ್ನು ತಿಳಿಯದೆ ಮಾಡಿದ್ದರಿಂದ ದೇವರು ಆತನನ್ನು ಕರುಣಿಸಿದ್ದನೆಂಬದು. ಆತನು ಇದನ್ನು ಮನಃಪೂರ್ವಕವಾಗಿ ಬುದ್ಧಿವಂತಿಕೆಯಿಂದ ಮಾಡಿದ್ದಲ್ಲಿ ದೇವರು ಅವನನ್ನು ಅದ್ಭುತವಾಗಿ ರಕ್ಷಿಸುವಷ್ಟು ಕರುಣೆಯನ್ನು ತೋರಿಸುತ್ತಿರಲಿಲ್ಲ, ಆದರೆ ಆತನು ಬುದ್ಧಿಪೂರ್ವಕವಾಗಿ ತನ್ನ ದುಷ್ಟಮಾರ್ಗದಲ್ಲಿ ಮುಂದುವರೆಯುವಂತಾಗಿ, ಬೀಸುವ ಕಲ್ಲನ್ನು ತನ್ನ ಕೊರಳಿಗೆ ಕಟ್ಟಿಸಿಕೊಂಡು ಸಮುದ್ರದಲ್ಲಿ ಹಾಕಿಸಿಕೊಳ್ಳುವದು ಆತನಿಗೆ ಉತ್ತಮವಾಗಿರುತ್ತಿತ್ತು.

ಇದು ಹೀಗಾಗುವದಕ್ಕೆ ಕಾರಣವೆಂದರೆ ಸಮುದ್ರದಲ್ಲಿ ಹೀಗೆ ಮುಳುಗಿಸಿಕೊಳ್ಳುವ ವ್ಯಕ್ತಿಯು ಕೇವಲ ಈಗಿನ ಜೀವಿತವನ್ನು ಕಳೆದುಕೊಳ್ಳುವನು, ಮರಣವೆಂಬ ನಿದ್ರೆಯಿಂದ ಎಬ್ಬಿಸಲ್ಪಟ್ಟವನಾಗಿ

ಮುಂದೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ದೊರೆಯುವ ಜೀವಿತವನ್ನಲ್ಲ. ಆಗ ಅವನು ಜ್ಞಾನಪ್ರಕಾಶವನ್ನು ಪಡೆದು ವಿಧೇಯನಾಗುವದರ ಮೂಲಕವಾಗಿ ಪಾಪ ಮತ್ತು ಮರಣ – ಗಳಿಂದ ಬಿಡುಗಡೆಯಾಗಿ ಪುನರುದ್ಧಾರವಾಗುವ ಪೂರ್ಣವಾದ ಸದವಕಾಶವನ್ನು ಪಡೆಯುವನು. ಆದರೆ ಯಾರು ಬುದ್ಧಿಪೂರ್ವಕವಾಗಿ ಯೇಸುವಿನ ಹಿಂಬಾಲಕರನ್ನು ಹಿಂಸೆಪಡಿಸಿ ನೀತಿ ಮಾರ್ಗದಿಂದ ಅವರನ್ನು ತಿರುಗಿಕೊಳ್ಳಲು ಪ್ರಯತ್ನಿಸು–ವರೋ ಅವರು ತಮ್ಮ ಮನಸ್ಸಾಕ್ಷಿಯನ್ನು ತಪ್ಪಾದ ಮಾರ್ಗಕ್ಕೆ ಎಳೆದುಕೊಂಡು ಹೋಗುವವರಾಗಿ ತಮ್ಮನ್ನು ಹೀನ ಸ್ಥಿತಿಗೆ ತಂದುಕೊಳ್ಳುವರು. ಹೀಗಾಗಿ ಅವರಿಗೆ ಸಮಾಧಿಯ ಆಚೆಯಲ್ಲಿ ಏರ್ಪಡುವ ನೂತನ ದೈವೀಕವ್ಯವಸ್ಥೆಯ ಸನ್ನಿವೇಶಗಳಿಗೆ ತಮ್ಮನ್ನು ಹೊಂದಿಸಿಕೊಳ್ಳಲು ಕಷ್ಟವಾಗುವದು. ಒಂದೇ ಮಾತಿನಲ್ಲಿ ಹೇಳುವದಾದರೆ, ಯಾರು ಆ ಕಾಲದಲ್ಲಿ ಲಭ್ಯವಾಗುವ ಬೆಳಕು ಹಾಗು ಜ್ಞಾನಗಳಿಗೆ ವಿರುದ್ಧವಾಗಿ ಪಾಪವನ್ನು ಮಾಡುವರೋ ಅಂಥವರು ನಿತ್ಯಜೀವವನ್ನು ಪಡೆಯುವ ಅವಕಾಶವನ್ನು ಕಳೆದುಕೊಳ್ಳುವ ಅಪಾಯಕ್ಕೆ ಗುರಿಯಾಗುವರು.

## ಕ್ಷಮಾಭಾವದ ಅವಶ್ಯಕತೆ

3 ಮತ್ತು 4ನೇ ವಚಗಳು ಸ್ಪಷ್ಟವಾಗಿ ಮತ್ತಾಯ 18:15–22ರಲ್ಲಿ ನೀಡಲಾದ ಬೋಧನೆಯ ಒಂದು ಭಾಗವಾಗಿರುವದು. ಅದರಲ್ಲಿನ ಪಾಠವು ಯೇಸುವಿನ ಹಿಂಬಾಲಕರಿಗೆ ಸಂಬೋಧಿ–ಸಲ್ಪಟ್ಟಿರುವದು, ಲೋಕಕ್ಕಲ್ಲ. ಅದು ಮೊದಲನೆಯದಾಗಿ ಕ್ರಿಸ್ತನಂಬಿಕೆಯುಳ್ಳವರ ಮನೆತನಕ್ಕೆ ಸೇರಿದ ಸಹೋದರರ ಕರ್ತವ್ಯಗಳಿಗೆ ಸಂಬಂಧಿಸಿರುವುದು; ಆದರೆ ಎರಡನೆಯದಾಗಿ ಅದು ಒಂದು ವಿಶಾಲಾರ್ಥದಲ್ಲಿ ಅನ್ವಯವಾಗುವದು. ಆಗಾಗ್ಗೆ ಇದನ್ನು ವಿಶಾಲಾರ್ಥದಲ್ಲಿ ಕೊಡಲಾಗಿರುವದು. ಹೇಗಂದರೆ ಮತ್ತಾಯ 18ನೇ ಅಧ್ಯಾಯದಲ್ಲಿ ಹೇಳಿರುವಂತೆ ಸಹೋದರರ ಸಮಾಲೋಚನೆಗಾಗಿ ವಿಷಯಯನ್ನು ತರುವದು ಹಾಗು ಅವಶ್ಯವಾದಲ್ಲಿ ವಿಷಯುವನ್ನು ಅಂತಿಮವಾಗಿ ಸಭೆಯ ಎದುರಿನಲ್ಲಿ ಮಂಡಿಸುವ ಆದೇಶವು ಈ ಸಂಗತಿಯು ವಾಸ್ತವದಲ್ಲಿ ಸಭೆಗೆ ಉದ್ದೇಶಿತವಾಗಿರುವದು ಆದರೆ ಇತರರಿಗಾಗಿಯಲ್ಲವೆಂಬುದನ್ನು ಸಾಬೀತುಪಡಿಸುತ್ತದೆ.

ಈ ಪಾಠವು ಕರುಣೆಯ ವಿಷಯವಾಗಿರುವದು, ಅಂದರೆ ಮಿತಿಯಿಲ್ಲದಂಥ ಕರುಣೆ. ಎಲ್ಲರಿಗೂ ಕರುಣೆ ಅಂದರೆ ದೈವಿಕ ಕರುಣೆ ಅಗತ್ಯ, ಕಾರಣ ಎಲ್ಲರೂ ದೋಷಪೂರಿತರಾಗಿರುವರು ಎಂಭ ಅಂಶವು ಈ ತರ್ಕವಿಚಾರಕ್ಕೆ ಆಧಾರವಾಗಿರುವದು; ಈ ಕೃಪಾವರ ಬೆಳೆಸಿಕೊಳ್ಳಲು ಸಹಾಯಮಾಡ ಸಲುವಾಗಿ ಕರ್ತನು ಮಾಡಿರುವ ಏರ್ಪಾಡೇನಂದರೆ, ನಮಗೆ ಕರ್ತನಿಂದ ದೊರೆಯುವ ಆತನ ಆಶೀರ್ವಾದ ಅಂದರೆ ಆತನ ಕೃಪಾನುಗ್ರಹವು ನಾವು ಈ ದೈವಿಕಗುಣವನ್ನು ಪ್ರಯೋಗಿಸುವ ಪ್ರಯತ್ನದ ಪ್ರಮಾಣಕ್ಕೆ ಅನುಗುಣವಾಗಿರುತ್ತದೆಂಬದು. "ನಿಮ್ಮ ತಂದೆಯು ಕರುಣವುಳ್ಳವನಾಗಿರುವ ಪ್ರಕಾರವೇ ನೀವೂ ಕರುಣವುಳ್ಳವರಾಗಿರ್ರಿ; ಆತನಂತೂ ಉಪಕಾರ ನೆನಸದವರಿಗೂ ಕೆಟ್ಟರಿಗೂ ಉಪಕಾರಿಯಾಗಿದ್ದಾನೆ."

"ದೆವ್ವಗಳ ಬೋಧನೆಗಳು" (1 ತಿಮೋಥೆ 4:1) ಎಂಬ ಶೈಲಿಯಲ್ಲಿ ಅಪೋಸ್ತಲನಾದ ಪೌಲನು ಸೂಚಿಸಿರುವ ಸುಳ್ಳು–ಬೋಧನೆಗಳ ಮೂಲಕವಾಗಿ ನಾವು ಹಾಗು ನಮ್ಮ ಪಿತೃಗಳು ಎಷ್ಟೋ ಮೋಸಹೋಗಿರುವದು ನಮಗೆ ವಿಚಿತ್ರವಾಗಿ ತೋರುತ್ತದೆ. ಮಾನವರಾದ ತನ್ನ ಸೃಷ್ಟಿಗಳು ಪಾಪಮಾಡಿರುವ ಕಾರಣದಿಂದ ಪರಲೋಕದಲ್ಲಿರುವ ನಮ್ಮ ತಂದೆಯು ಅವರ ಪಾಪಗಳನ್ನು ಕ್ಷಮಿಸುವದಕ್ಕೆ ಬದಲಾಗಿ ಅವರನ್ನು ಪೂರ್ಣವಾಗಿ ಹಗೆಮಾಡಿ ಅವರನ್ನು ಸಂಪೂರ್ಣವಾಗಿ ಕ್ಷಮಿಸುವಂಥವ–ನಲ್ಲವೆಂದು ಒಮ್ಮೆ ನಾವು ನೆನಸಿದ್ದೆವು. ಪಾಪದ ಸಂಬಳ ಅಥವಾ ಶಿಕ್ಷೆಯು ನಿತ್ಯಯಾತನೆ, ಅದೂ ನಿರಂತರವಾಗಿರಬೇಕೆಂದು ನಾವು ಒತ್ತಾಯವಾಡಿ ಹೇಳುತ್ತಿದ್ದೆವು. ಕೃಪಾಪೂರ್ಣನಾದ ದೇವರಾಗಿರುವ ಕರುಣಾಮಯನಾದ ತಂದೆಯ ನಿಜವಾದ ಗುಣಗಳನ್ನು ಎಷ್ಟೋ ಅಲ್ಪವಾಗಿ ನಾವು ಅರ್ಥೈಸಿಕೊಂಡಿದ್ದೆವು.

ಎಲ್ಲಾ ಒಳ್ಳೆಯತನ ಕರುಣೆ ಮತ್ತು ಪ್ರೀತಿ ಇವುಗಳನ್ನು ದೇವರು ಸ್ವತಃ ಉಳ್ಳವನಾದರೂ ತನ್ನ ಸೃಷ್ಟಿಗಳನ್ನು ಹಿಂಸಿಸಲು ಒತ್ತಾಯಿಸುವ ಕಠೋರವಾದ ಆಜ್ಞಾವಿಧಿಗಳನ್ನು ತನ್ನ ಹಿಂಬದಿಯಲ್ಲಿ ಇಟ್ಟುಕೊಂಡಿರುವನೆಂಬುದನ್ನು ಕಲ್ಪಿಸಿಕೊಳ್ಳು–ವದರ ಮೂಲಕವಾಗಿ ತಮ್ಮ ತಪ್ಪುಗಳನ್ನು ಸಮರ್ಥಿಸಿಕೊಳ್ಳಲು ಬಹುಶಃ ನಮ್ಮಲ್ಲಿ ಕೆಲವರು ಪ್ರಯತ್ನಿಸಿದ್ದೆವು. ಈ ಒಂದು ಆಜ್ಞಾವಿಧಿಗಳಿಂದ ತನಗೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದಾಗಿದ್ದು ಹಾಗೂ ಮನುಷ್ಯರು ನಡೆಸುವ ಇಂಥದೇ ಸಂಗತಿಗಳನ್ನು ಖಂಡಿಸುವಂಥ ಸ್ವತಃ ತನ್ನ ಆಜ್ಞಾವಿಧಿಗಳ ಪ್ರಕಾರ ತಾನು ಕಾರ್ಯ ನಿರ್ವಹಿಸುವ ಕಟ್ಟುಪಾಡಿನಲ್ಲಿರುವನೆಂಬ ತಪ್ಪು ಕಲ್ಪನೆ ಮಾಡಿಕೊಂಡಿದ್ದೆವು.

ಮಾನವರೆಲ್ಲರೂ ಜನನ ಮರಣದ ನಡುವೆ ಒಂದು ಸಮಯದಲ್ಲಿ ಪಾಪದಿಂದ ನೀತಿಯ ಕಡೆಗೆ ತಿರಿಗಿಕೊಂಡು ಹಾಗೂ ಭಕ್ತರಾಗುವ ಪೂರ್ಣ ಅವಕಾಶವನ್ನು ಪಡೆದಿರುವರೆಂದು ಆಲೋಚಿಸಿಕೊಂಡು ನಮ್ಮಲ್ಲಿ ಇತರರು ತಮ್ಮನ್ನು ಮರುಳು ಗೊಳಿಸಿಕೊಂಡಿರುವರು. ಈ ಅಭಿಪ್ರಾಯವು ಎಷ್ಟು ನಿರರ್ಥಕ ವಾದದ್ದೆಂದು ಕೇವಲ ಈಚಿನ ವರ್ಷಗಳಲ್ಲಿ ಸತ್ಯವೇದ ವಿಧ್ಯಾರ್ಥಿಗಳು ಅರಿತುಕೊಳ್ಳಲು ಆರಂಭಿಸಿರುವರು. ಈಗ ನಾವು ಗ್ರಹಿಸಿಕೊಂಡಿರುವದೇನಂದರೆ, ನಾಲ್ಕು ಸಾವಿರ ವರುಷಗಳಲ್ಲಿ ಕೇವಲ ಒಂದು ಚಿಕ್ಕ ಜನಾಂಗವಾದ ಯೆಹೂದ್ಯರು ಮಾತ್ರ ದೇವರ ವಿಷಯವಾಗಿ ಯಾವುದೇ ಬಗೆಯ ತಿಳುವಳಿಕೆಯನ್ನೂ ಅಥವಾ ತಮಗೆ ನಿತ್ಯಜೀವದ ವಿಷಯವಾದ ಯಾವುದೇ ವಾಗ್ದಾನವನ್ನು ಕೊಡಲಾಗಿದೆಯೆಂಬುದನ್ನೂ, ಇಲ್ಲವೇ ಪಾಪ ಮತ್ತು ಅದರ ಶಿಕ್ಷೆಯ ವಿಷಯವಾದ ಯಾವುದೇ ಆದೇಶಗಳನ್ನು ಪಡೆದಿದ್ದರೆಂಬದೇ. ತಮಗೆ ಧರ್ಮಶಾಸ್ತ್ರವನ್ನು ಕೊಡಲ್ಪಟ್ಟಿದ್ದ ಯೆಹೂದ್ಯರೂ ಸಹ ಸೈತಾನನಿಂದ ಮಂಕುಮಾಡಲ್ಪಟ್ಟಿದ್ದರೆಂದು ಯೇಸುವು ಮತ್ತು ಆತನ ಅಪೋಸ್ತಲರು ಸಾರಿ ಹೇಳಿದ್ದರು. ತನ್ನ ಅಪೋಸ್ತಲರನ್ನು ಸಂಬೋಧಿಸುವವನಾಗಿ ಯೇಸುವು ಹೀಗೆ ಹೇಳಿರುವನು: "ನಿಮ್ಮ ಕಣ್ಣು ಕಾಣುತ್ತವೆ; ನಿಮ್ಮ ಕಿವಿ ಕೇಳುತ್ತವೆ; ಆದದರಿಂದ ನೀವು ಧನ್ಯರು." ಆ ಮಹಾ ಜನಾಂಗವಾದ ಯೆಹೂದ್ಯರಿಗೆ ಕಣ್ಣು ಕಾಣುತ್ತಿರಲಿಲ್ಲ ಇಲ್ಲವೇ ಕಿವಿ ಕೇಳುತ್ತಿರಲಿಲ್ಲ.

ಕ್ರೈಸ್ತಸಮೂಹದಲ್ಲಿನ ಹತ್ತರಲ್ಲಿ ಒಂಭತ್ತು ಭಾಗದವರ ವಿಷಯದಲ್ಲಿ ಇದೇ ಸಂಗತಿಯು ನಿಜವಾಗಿರುವದು; ಕ್ರೈಸ್ತೇತರ ಸಮೂಹದ ವಿಷಯವಾಗಿ ಹೇಳಲೇಬೇಕಿಲ್ಲ.

ಸತ್ಯವೇದ ಸ್ವಲ್ಪವೂ ಸಮರ್ಥಿಸದಿದ್ದರೂ ಸತ್ಯವೇದಕ್ಕೆ ವಿರೋಧವಾಗಿ ನಮ್ಮಲ್ಲಿ ಅನೇಕರು, ಈ ಜೀವಿತ ಕಾಲದಲ್ಲಿ ಕ್ರಿಸ್ತನ ವಿಷಯವಾಗಿ ಕೇಳದೇ ಇರುವವರು ಹಾಗೂ ಆತನ ಹೆಜ್ಜೆಯ ಜಾಡಿನಲ್ಲಿ ನಡೆಯದೇ ಇರುವ ಆತನ ಭಕ್ತ ಹಿಂಬಾಲಕರೂ ಸಹ ನಿರಂತರವಾಗಿ ದೆವ್ವಗಳ ಕೈಯಿಂದ ಯಾತನೆಯನ್ನು ಅನುಭವಿಸುವರೆಂಬ ಭಯಾನಕವಾದ ತತ್ವವನ್ನು ಅನುಮೋದಿಸುವವರಾಗಿದ್ದೆವು. ಈಗ ಕೇಳುವ ಕಿವಿ ಹಾಗು ಕಾಣುವ ಕಣ್ಣುಳ್ಳವರಾಗಿ ಮತ್ತು ಕ್ರಿಸ್ತನ ಮೂಲಕವಾಗಿ ದೇವರೊಂದಿಗೆ ಒಡಂಬಡಿಕೆಯ ಸಂಬಂಧಕ್ಕೆ ಸೇರಿ ಯೇಸುವಿನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಸಾಧ್ಯವಿರುವವರನ್ನು ಹೋಲಿಸಿ ನೋಡಿದಲ್ಲಿ ಅದು ಕೇವಲ ಒಂದು ಚಿಕ್ಕ ವರ್ಗವೆಂದು ಸತ್ಯವೇದವು ಬೋಧಿಸುವದಾಗಿ ನಾವು ಈಗ ನೋಡುತ್ತೇವೆ. ಕೇವಲ ಇವರಿಗೆ ಮಾತ್ರವೇ ಈ ಜೀವಿತ ಕಾಲದಲ್ಲಿ ನಿತ್ಯಜೀವ ಪಡೆಯುವ ಎಲ್ಲಾ ಅವಕಾಶಗಳು ಕೊನೆಗೊಳ್ಳುವವು. ಮಾನವರಲ್ಲಿ ಉಳಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದರ ಮೂಲಕವಾಗಿ ಮುಂದೆ ಒಂದು ಜೀವಿತವನ್ನು ನೀಡಲು ದೇವರು ಉದ್ದೇಶಿಸಿರುವನು.

ಪುನರುತ್ಥಾನವು ಕೇವಲ ಕ್ರೈಸ್ತಸಭೆಗೆ ಮಾತ್ರವಾಗಿರುವದಿಲ್ಲ; ಕ್ರೈಸ್ತಸಭೆಗೆ ಪ್ರಥಮ ಅಥವಾ ಪ್ರಮುಖವಾದ ಪುನರುತ್ಥಾನ –ವಿರುವದಾದರೂ, "ನೀತಿವಂತರಿಗೂ ಅನೀತಿವಂತರಿಗೂ" ಪುನರುತ್ಥಾನವಿರುವದು. (ಅ. ಕೃ. 24:15) ಕ್ರೈಸ್ತಸಭೆಯು ಪ್ರಭಾವಮಾನ ನಿರ್ಣಯತ್ವಗಳನ್ನು ಹೊಂದಲು ಎದ್ದು ಬರುವದು. ಅನೀತಿವಂತರು ನ್ಯಾಯತೀರ್ಪು, ನೀತಿಶಿಕ್ಷಣ, ಪ್ರತಿಫಲ ಮತ್ತು ದಂಡನೆಗಳನ್ನು ಹೊಂದಲಿಕ್ಕಾಗಿ ಸಮಾಧಿಯಿಂದ ಎದ್ದು ಹೊರಬರುವರು. ಇವರಿಗೆ ನಿತ್ಯಜೀವ ಹೊಂದಲು ಒಂದು ನ್ಯಾಯತೀರ್ಪಿನ ಅವಕಾಶ ನೀಡುವ ಸಲುವಾಗಿ ಮೆಸ್ಸೀಯನ ರಾಜ್ಯವು ಪ್ರತಿಷ್ಠಾಪನೆಯಾಗುವದು; ಅಲ್ಲದೆ ಜನರಿಗೆ ಸಹಾಯ ನೀಡಿ ಅವರಿಗೆ ನೀತಿಯಿಂದ ಪ್ರತಿಫಲಗಳನ್ನು ಮತ್ತು ದಂಡನೆಯನ್ನು ನೀಡುವ ಸಲುವಾಗಿ ಸೂಕ್ತ ನ್ಯಾಯಾಧಿ –ಪತಿಗಳನ್ನು ನೇಮಿಸಲು ಆತನು (ಕ್ರಿಸ್ತನು) ಈಗ (ಮಾನವ) ಶರೀರದಲ್ಲಿರುವ ಸಭೆಯನ್ನು ಕರೆಯುತ್ತಿರುವನು. "ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬುದು ನಿಮಗೆ ತಿಳಿಯದೋ?" – 1 ಕೊರಿಂಥ 6:2

## (ವೈಚಾರಿಕ) ನಂಬಿಕೆಯ ಬಲ–ಅವೈಚಾರಿಕ ನಂಬಿಕೆಯ ಬಲ

ನಂಬಿಕೆಯ ಬಗ್ಗೆ ಒಂದು ದೊಡ್ಡ ವೈಚಾರಿಕತೆಯೇ ನಡೆದು ಹೋಗುತ್ತದೆ; ಆದರೆ ಅದು ವಿಚಾರಮಾಡದೆಯೇ ನಂಬುವ ಸಂಗತಿಯಾಗಿರುತ್ತದೆ. ಯಾರಾದರೂ ಒಬ್ಬರು ಚಂದ್ರನು ಹಸಿರು ಬೆಣ್ಣೆಯಿಂದ ಮಾಡಲ್ಪಟ್ಟಿರುವನೆಂದು ಪ್ರಮಾಣಮಾಡಿ ಹೇಳಿದ್ದಲ್ಲಿ ಆತನನ್ನು ನಂಬುವದು ಅವೈಚಾರಿಕ ನಂಬಿಕೆಯಾಗಿರುತ್ತದೆ, (ವೈಚಾರಿಕ) ನಂಬಿಕೆಯಲ್ಲ. "ಈ ಸಂಗತಿಯನ್ನು ಹೇಳುವವನು ಯಾರು ಹಾಗೂ ಆ ವಿಷಯವಾಗಿ ನಮಗೆ ತಿಳಿದಿರಬಹು–ದಾದುದಕ್ಕಿಂತಲೂ ಅವನಿಗೆ ಏನು ಹೆಚ್ಚು ತಿಳಿದಿರುವದು?" ಎಂಬುದನ್ನು ನಾವು ವಿಚಾರಮಾಡಬೇಕು. ಸತ್ಯವೇದದಲ್ಲಿ ಶಿಫಾರಸ್ಸು ಮಾಡಿ ಹೇಳಿರುವ ನಂಬಿಕೆಯು ದೇವರು ವಾಗ್ದಾನಮಾಡಿರುವ ಸಂಗತಿಗಳಿಗೆ ಸಂಬಂಧಿಸಿರುತ್ತದೆ. ನಾವು ದೇವರಲ್ಲಿ ಇಂಥಾ ಪೂರ್ಣವಾದ ನಂಬಿಕೆಯುಳ್ಳವರಾಗಿರಲು ಪ್ರೋತ್ಸಾಹಿಸಲ್ಪಟ್ಟಿದ್ದೇವೆ, ಸಂದೇಹಪಡುವದಕ್ಕಲ್ಲ, ತನ್ನ ಎಲ್ಲಾ ಒಳ್ಳೆಯ ವಾಗ್ದಾನಗಳನ್ನು ನೆರವೇರಿಸಲು ಆತನು (ದೇವರು) ಶಕ್ತನೆಂಬುದನ್ನು ಪ್ರಶ್ನಿಸುವಂತಿಲ್ಲ.

ನಮ್ಮ ಮೂಲ ಪಿತೃಗಳು ಮನುಷ್ಯರಲ್ಲಿ ಅತಿಯಾದ ಭರವಸೆ ಹೊಂದಿದವರಾಗಿದ್ದರು. ಅವರು ಆಲೋಚಿಸಿಕೊಂಡದ್ದೇ–ನಂದರೆ, ನಂಬಿಕೆ ಎಂಬುದು ಕೇವಲ ಅವೈಚಾರಿಕವಾದದ್ದು ಎಂಬುದು. ಅವರು ಜ್ಞಾನಾಂಧಕಾರ ಯುಗದ (ಡಾರ್ಕ್ ಏಜಸ್) ನಂಬಿಕೆಯ ಸೂತ್ರಗಳನ್ನು ಸುಲಭವಾಗಿ ಒಪ್ಪಿಕೊಂಡಿದ್ದರು; ಆ ಪ್ರತಿಪಾದನೆಯು ಹೆಚ್ಚು ಅಸಂಗತವಾದಷ್ಟೂ ಹೆಚ್ಚಾದ ನಂಬಿಕೆಯನ್ನು ಹೊಂದಿದ್ದೇವೆಂದು ಅವರು ನೆನಸಿದ್ದರು. ಬದಲಾಗಿ ಅವರು "ಇದಕ್ಕೆ ಪ್ರಮಾಣವೆಲ್ಲಿ? ಇಂಥಾ ಸಂಗತಿಗಳನ್ನು ದೇವರು ಎಲ್ಲಿ ಪ್ರಕಟಮಾಡಿರುವನು?" ಎಂದು ಕೇಳಬೇಕಿತ್ತು. ಈ ನಂಬಿಕೆಯ ಸೂತ್ರಗಳನ್ನು ಪ್ರತಿಪಾದಿಸಿದವರು ಸ್ವಸ್ಥವಾದ ನಂಬಿಕೆಗೆ ವಿರೋಧವಾಗಿ ಅವೈಚಾರಿಕವಾಗಿ ಬೊಬ್ಬೆಹಾಕಿ, ಅದನ್ನು ಪಾಶಾಂಡ ಬೋಧನೆಯೆಂದು ಮುದ್ರೆ ಹಾಕಿ, ಅನೇಕ ವೇಳೆ ನಿಜವಾಗಿ ನಂಬಿಗಸ್ತರಾದವರನ್ನು ಸುಟ್ಟು ಹಾಕಿದ್ದರು. ಇಲ್ಲಿರುವ ಪಾಠವೆಂದರೆ, ದೇವರು ತನ್ನ ವಾಕ್ಯದಲ್ಲಿ ನಮಗೆ ಭರವಸೆನೀಡಿ ಹೇಳಿರುವದನ್ನು ಮಾತ್ರ ನಂಬಿಕೆ ಎಂದು ಅಂಗೀಕರಿಸಿಕೊಳ್ಳಬೇಕು; ಇದರ ಅರ್ಥವೇನಂದರೆ, ನಾವು ದೇವರ ಶುದ್ಧವಾದ ವಾಕ್ಯಗಳನ್ನು ಹೊಂದಿರುವ ಸಂಬಂದದಲ್ಲಿ ವಿಶೇಷವಾದ ಜಾಗರೂಕತೆಯುಳ್ಳವರಾಗಿ, ತಪ್ಪು ಭಾಷಾಂತರದ ಹಾಗು ಪ್ರಕ್ಷೇಪಣ (Interpolation ನಡುವೆ ಸೇರಿಸಿರುವ) ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳನ್ನು ಬೇರ್ಪಡಿಸಬೇಕು.

ನಮ್ಮ ಪಾಠದಲ್ಲಿ, ಯೇಸುವಿನ ಶಿಷ್ಯರು ಆತನ ಬೋಧನೆ–ಯಲ್ಲಿನ ಭವ್ಯತೆಯ ಬಗ್ಗೆ ಮತ್ತು ಧರ್ಮಶಾಸ್ತ್ರದಲ್ಲಿ, ಪ್ರವಾಧಿಗಳ ಗ್ರಂಥದಲ್ಲಿ ಲಿಖಿತವಾದ ಭವ್ಯವಾದ ಸಂಗತಿಗಳೆಲ್ಲವನ್ನು ನೆರವೇರಿಸುವ ಹಾದಿಯಲ್ಲಿ ಸಂಭವಿಸಬೇಕಿರುವ ಸಂಕಷ್ಟಗಳ ಬಗ್ಗೆ ಹಾಗು ಯೇಸುವು ಮೆಸ್ಸೀಯನಾಗಿ ತನ್ನ ಸಾವಿರ ವರುಷದ ಆಳ್ವಿಕೆ ಮುಂತಾದ ವಿಷಯವಾಗಿ ನುಡಿದಿದ್ದ ಸಂಗತಿಗಳ ಬಗ್ಗೆ ಪ್ರಭಾವಿತರಾಗಿದ್ದುದು ಸ್ಪಷ್ಟವಾಗಿತ್ತು. ಆದುದರಿಂದ ಅವರು ತಮ್ಮ ನಂಬಿಕೆಯನ್ನು ಹೆಚ್ಚಿಸಬೇಕೆಂದು ಕರ್ತನನ್ನು ಕೇಳಿ–ಕೊಂಡಿದ್ದರು. ಯೇಸುವು ಉತ್ತರವಾಗಿ ಹೇಳಿದ ಮಾತುಗಳನ್ನು ನಮ್ಮ ದಿನಗಳಲ್ಲಿ ಬಹು ವಿಶೇಷ ರೀತಿಯಲ್ಲಿ ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿ–ರುವದು. ಆತನು ಹೇಳಿದ್ದು; "ಸಾಸಿವೇ ಕಾಳಷ್ಟು ನಂಬಿಕೆ ನಿಮಗಿದ್ದರೆ ನೀವು ಈ ಅತ್ತೀ ಮರಕ್ಕೆ–ನೀನು ಬೇರು ಸಹಿತ

ಕಿತ್ತುಕೊಂಡುಹೋಗಿ ಸಮುದ್ರದಲ್ಲಿ ನಾಟಿಕೋ ಎಂದು ಹೇಳಿದರೂ ಅದು ನಿಮ್ಮ ಮಾತನ್ನು ಕೇಳುವದು." ಇತರ ಎರಡು ಸಂದರ್ಭಗಳಲ್ಲಿ ಯೇಸುವು ಇಂಥದ್ದೇ ಹೇಳಿಕೆಯನ್ನು ಬೆಟ್ಟಗಳ ವಿಷಯವಾಗಿ ಸಾಂಕೇತಿಕವಾಗಿ ಹೇಳಿರುವನು; ಅತನು ಹೇಳಿರುವ –ದೇನಂದರೆ, ಬೆಟ್ಟವನ್ನು ಸಮುದ್ರದ ಮಧ್ಯದಲ್ಲಿ ನಾಟಿಕೊಳ್ಳಲು ನಂಬಿಕೆಯಿಂದ ಹೇಳಿದ ಮಾತಷ್ಟೇ ಸಾಕಾಗುವದೆಂಬದು.

## ಆತನ (ಮಾತಿನ) ಅರ್ಥವೇನಾಗಿತ್ತು?

ಆ ಒಡೆಯನು ಯೆಹೂದ್ಯರಿಗೆ ಬೆಟ್ಟವನ್ನು ಸಮುದ್ರದಲ್ಲಿ ಬೀಳುವಂತೆ ಅಪ್ಪಣೆಕೊಡುವಂತೆ ಪ್ರಯತ್ನಿಸಲು ಪ್ರೋತ್ಸಾಹಿ–ಸಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು; ಆದರೆ ಅವರು ದೇವರ ಶಕ್ತಿಯಲ್ಲಿ ಸರಿಯಾದ ನಂಬಿಕೆ ಇದ್ದದ್ದೇಯಾದರೆ ಹಾಗು ಬೆಟ್ಟವನ್ನು ಸಮುದ್ರದಲ್ಲಿ ಬೀಳುವಂತೆ ದೇವರಿಂದ ಆದೇಶವನ್ನು ಪಡಕೊಂಡದ್ದೇ ಆದಲ್ಲಿ ಹಾಗೂ ನಂಬಿಕೆಯಿಂದ ಹಾಗೆ ಅಪ್ಪಣೆ–ಕೊಟ್ಟಲ್ಲಿ ಅದರ ಫಲಿತಾಂಶವು ಅನುಸರಿಸಿ ಬರುವದೆಂಬುದನ್ನು ಅವರು ಮನನಮಾಡಿಕೊಳ್ಳಬೇಕೆಂದು ಆತನು ಆಶಿಸಿದ್ದನು. ಆದರೆ ದೇವರು ಬೆಟ್ಟಗಳ ವಿಷಯದಲ್ಲಿಯಾಗಲೀ ಇಲ್ಲವೇ ಮರದ ವಿಷಯದಲ್ಲಿಯಾಗಲೀ ಇಂಥಾ ಅಪ್ಪಣೆಯನ್ನು ನೀಡಿರಲಿಲ್ಲ. ಹೀಗಾಗಿ ಇಂಥಾ ವಿಷಯಗಳಲ್ಲಿ ಕಾರ್ಯ ನಿರ್ವಹಿಸಲು ನಂಬಿಕೆಗೆ ಯಾವುದೇ ಆಧಾರವಿರುತ್ತಿದ್ದಿಲ್ಲ.

ವರ್ಣೀಯನಾದ ಸಹೋದರನು ಸೂಕ್ತವಾದ ಅಭಿಪ್ರಾಯವನ್ನು ಹೊಂದಿದ್ದನು. ದೇವರು ಅವನಿಗೆ ಕಲ್ಲಿನ ಗೋಡೆಯ ಮೂಲಕವಾಗಿ ಹಾರುವದಕ್ಕೆ ಹೇಳಿದ್ದಾದರೆ ಅತನು ಏನು ಮಾಡುವನೆಂದು ಕೇಳಿದಾಗ ಆತನು ಉತ್ತರಿಸಿದ್ದು, "ನಾನು ಅಲ್ಲಿಂದ ಹಾರುವೆನು." ಒಂದು ಮಾತಿನಲ್ಲಿ ಹೇಳುವದಾದರೆ, ನಾವು ದೇವರ ವಾಕ್ಯದಲ್ಲಿ ಸಂಪೂರ್ಣವಾದ ಭರವಸವಿಟ್ಟು–ಕೊಳ್ಳಬೇಕು, ಕೇವಲ ಆತನ ಸಂದೇಶವನ್ನು ಕೇಳಿ ಅದನ್ನು ಗ್ರಹಿಸಿಕೊಂಡಿರುವೆವೆಂಬುದನ್ನು ಖಚಿತಪಡಿಸಿಕೊಳ್ಳುವದಲ್ಲ. ಆಗ ನಾವು ಬೆಟ್ಟವನ್ನು ಚಲಿಸುವಂತೆ ಮಾಡುವ ನಂಬಿಕೆಯೊಡನೆ ಮುಂದೆಸಾಗಿ ಆತನ ಆಜ್ಞೆಗಳನ್ನು ನೆರವೇರಿಸಬಹುದು. ಆದರೆ ದೇವರು ಬುದ್ಧಿಯಿಲ್ಲದಂಥಾ ಅಥವಾ ಅನವಶ್ಯವಾದಂಥಾ ಬದಲಾವಣೆಗಳನ್ನು ಆಜ್ಞಾಪಿಸುವದಿಲ್ಲ. ಆತನು ಮರಗಳನ್ನು ಉರುಳಿಸಲು ಮತ್ತು ಬೆಟ್ಟಗಳಲ್ಲಿ ಸುರಂಗಗಳನ್ನು ಕೊರೆಯಲು ಅವುಗಳನ್ನು ಮಾನವರ ಜಾಣ್ಮೆಕೌಶಲ್ಯಗಳಿಗೆ ಬಿಟ್ಟಿರುವನು, ಈ ರೀತಿಯ ಆಜ್ಞೆಯನ್ನು ಎಂದೂ ನೀಡುವದಿಲ್ಲ. ಅಲ್ಲದೆ ಯಾವ ಮಾನವ ಜೀವಿಯು ನಮಗೆ ಈ ವಿಧವಾಗಿ ಏನನ್ನಾದೂ ಹೇಳಿದ್ದೇಯಾದಲ್ಲಿ, ನಾವು ಆತನನ್ನು ನಂಬಿದ್ದೇಯಾದಲ್ಲಿ ಆಗ ನಾವು ವಿಚಾರ ಶೂನ್ಯರಾಗುತ್ತೇವೆ. ದೇವರು ಆ ವಿಧವಾಗಿ ಕಾರ್ಯನಡೆಸುವವನಲ್ಲ.

## ನಮ್ಮ ಒಡೆಯನಿಗೆ ಪ್ರಯೋಜನವಾಗದೆ ಇರುವದು

ಕೆಲವು ವೇಳೆ ಸಹಜವಾಗಿ ಅಭಿವೃದ್ಧಿಯಾದಂಥ ಕ್ರಿಸ್ತನ ಹಿಂಬಾಲಕರಲ್ಲಿ ಕೆಲವರು ಅತಿ ಆಕ್ರಮಣಕಾರಿಗಳಾಗಿಯೂ, ಸ್ವಪ್ರತಿಷ್ಠೆಯುಳ್ಳವರಾಗಿಯೂ ಇರುವರು. ಆತನ ಶಿಷ್ಯರಾಗುವ–ದರಿಂದ ಈ ಸ್ವಭಾವಗಳು ತಕ್ಷಣದಲ್ಲಿ ಬದಲಾಗುವದಿಲ್ಲ. ಹಳೆಯ ಸ್ವಭಾವಗಳು ನಿಧಾನವಾಗಿ ಗತಿಸಿಹೋಗಿ ಅದರ ಜಾಗವನ್ನು ನೂತನ ಸ್ವಭಾವವು ತೆಗೆದುಕೊಳ್ಳುವದು. ಆತನ ಶಿಷ್ಯರೆಲ್ಲರಿಗೂ, ಅಂದರೆ ಇಲ್ಲಿ ತಿಳಿಸಲಾದ ವರ್ಗಗಳಿಗೂ ವಿಶೇಷವಾಗಿ ನೆನಪಿನಲ್ಲಿಟ್ಟುಕೊಳ್ಳಲಿರುವ ಪ್ರಭಲವಾದ ಒಂದು ಪಾಠವನ್ನು ಈ ಅಧ್ಯಯನದಲ್ಲಿ ಬೋಧಿಸಲಾಗಿರುವದು. ಅವರು ಒಳಗಾಗಿರುವ ದೇವರ ಕೃಪಾಕಾರ್ಯವು ಆತನಿಂದ ಅವರಿಗಾದ ಅನುಗ್ರಹವೆಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು; ಅಲ್ಲದೆ ಆತನ ಆಜ್ಞೆಗಳಿಗೆ ಅವರು ವಿಧೇಯರಾಗುವದು ಮೊದಲಿಗೆ ತಮ್ಮ ತಿದ್ದುಪಾಟಿಗಾಗಿ ಹಾಗು ಅಭಿವೃದ್ಧಿಗಾಗಿ ಮತ್ತು ಮುಂದಿನ ಆಶೀರ್ವಾದಕರವಾದ ಜೀವಿತಕ್ಕಾಗಿ ಇರುವದು. ಅವರು ನೆನಪಿನಲ್ಲಿಟ್ಟುಕೊಳ್ಳಬೇಕಾದುದೇನಂದರೆ, ದೇವರಿಗಾಗಿ ಅವರು ಮಾಡುವ ಸೇವೆಯೂ ಸಹ ಅವರಿಗೆ ದೊರಕಿರುವ ಒಂದು ಸೌಭಾಗ್ಯ, ಅವರ ಸೇವೆಗಳ ಮೂಲಕವಾಗಿ ದೇವರಿಗೆ ಪ್ರಯೋಜನವೇನೂ ಆಗುವದಿಲ್ಲ.

ನಾವಿಲ್ಲದೆಯೇ ಕಾರ್ಯನಿರ್ವಹಿಸಲು ದೇವರಿಗೆ ಅಷ್ಟೇ ಸುಲಭ ಸಾಧ್ಯವೆಂಬ ಅರ್ಥದಲ್ಲಿ ನಾವೆಲ್ಲರೂ ಪ್ರಯೋಜನವಿಲ್ಲದ ಸೇವಕರು, ನಿಜವಾಗಿಯೂ ನಮ್ಮ ಹೊರತಾಗಿ ತನ್ನ ಕಾರ್ಯ–ಗಳನ್ನು ಇನ್ನೊಂದು ರೀತಿಯಲ್ಲಿ ಇನ್ನೂ ಸುಲಭವಾಗಿ ನಡೆಸಲು ಆತನಿಗೆ ಸಾಧ್ಯ. ದೇವದೂತರನ್ನು ಅಥವಾ ಜೀವಿತದಲ್ಲಿನ (ದೈವಾನುಗ್ರಹದ ಮೂಲಕವಾಗಿ ನಡೆಯುವ) ಸಂಗತಿಗಳನ್ನು ತನ್ನ ಸಂದೇಶ ವಾಹಕರನ್ನಾಗಿ ಬಳಸಿಕೊಳ್ಳಲು ಆತನಿಗೆ ಸಾಧ್ಯ ನಮ್ಮಲ್ಲಿ ಯಾರೂ ಆತನು ನಡೆಸುವ ಕ್ರಿಯೆಗಳಿಗೆ, ಆತನ ಮಹಿಮೆಗಾಗಿ ಅತ್ಯಗತ್ಯವಾದವರಲ್ಲ. ಪ್ರತಿಯಾಗಿ, ಕರ್ತನ ದ್ರಾಕ್ಷೀತೋಟದಲ್ಲಿ ಸೇರಿ ಅದರಲ್ಲಿ ಕೆಲಸ ಮಾಡುವದು ಮುಖ್ಯವಾಗಿ ನಮ್ಮ ಸ್ವಪ್ರಯೋಜನಕ್ಕಾಗಿರುವದು. ಈ ಸೇವೆಯು ನಮಗೆ ಬೇರೆ ವಿಧದಲ್ಲಿ ದೊರೆಯಲಾರದಂಥ ಕೆಲವು ಸಂತೋಷಸೌಭಾಗ್ಯಗಳನ್ನು ತಂದುಕೊಡುತ್ತದೆ. ತೆರೆಯ ಆಚೆ ಕಡೆಯಲ್ಲಿನ ಉನ್ನತವಾದ ಸೇವೆಗಳಿಗೆ ನಾವು ಅರ್ಹರಾಗಲು ಹಾಗು ನಮ್ಮ ಸ್ವಂತ ಏಳಿಗೆಗಾಗಿ ಅವಶ್ಯವಾದ ಕೆಲವು ಅನುಭವಗಳನ್ನು ನಮಗೆ ಅದು ತಂದು ಕೊಡುತ್ತದೆ.

ಅಪೋಸ್ತಲನು ಸಾರಿ ಹೇಳಿರುವಂತೆ: "ನಂಬಿಕೆಯ ಮೂಲಕ ಕೃಪೆಯಿಂದಲೇ (ದೇವಾನುಗ್ರಹದಿಂದಲೇ) ರಕ್ಷಣೆ ಹೊಂದಿದವರಾಗಿದ್ದೀರಿ." ಕೆಲವು ಮಟ್ಟಿಗೆ, ನಂಬಿಕೆಯು ನಾವು ಸ್ವತಃ ಬೆಳೆಸಿಕೊಳ್ಳುವಂಥ ಸಂಗತಿಯಾಗಿರುವದು. ಹೀಗಿದ್ದರೂ ಅಪೋಸ್ತಲನು ಅವಸರದಿಂದ ಸೇರಿಸಿ ಹೇಳಿರುವದೇನಂದರೆ, ಅದು ನಮ್ಮಿಂದಾದುದಲ್ಲ, ಅದು ಸಹ ದೇವರ ವರವೇ. ನಮ್ಮ ನಂಬಿಕೆಯ ವಿಷಯದಲ್ಲಿ ಹೆಚ್ಚಳ ಪಡುವ ಅವಕಾಶವೂ ನಮಗಿರುವದಿಲ್ಲ. ದೇವರಿಂದ ಹೊಂದದಿರುವಂಥದ್ದು ನಿನ್ನಲ್ಲಿ ಒಂದಾದರೂ ಉಂಟೋ? ನಂಬಿಕೆಯು ಮೂಲವು ದೈವಾನುಗ್ರಹದ ಮೂಲಕವಾಗಿ ನಮಗೆ ನೀಡಲಾದ ಕೆಲವು ಮಟ್ಟಿನ ತಿಳುವಳಿಕೆಯನ್ನು ಆಧಾರಗೊಂಡಿರುತ್ತದೆ. ಅಲ್ಲದೆ ನಾವು ಒಂದು ಅನುಕೂಲಕರವಾದ ವಂಶವಾಹಿನಿಯ ಮೂಲಕವೂ ಸಿದ್ಧತೆಹೊಂದಿರುವ ಸಾಧ್ಯತೆಯಿರುವದು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬೇಥಾನ್ಯ | ಲಾಜರನನ್ನು ಯೇಸುವು ಮರಣದಿಂದ ಎಬ್ಬಿಸಿದ್ದು | -- | -- | -- | 11:1–45 |
| | ಯೆರೂಸಲೇಮ್, ಎಫ್ರಾಯಿಮ್ | ಯೇಸುವಿನ ವಿರೋಧವಾಗಿ ಕಾಯಫನ ಸಮಾಲೋಚನೆ; ಯೇಸುವು ಹಿಂದೆಗೆದುಕೊಂಡದ್ದು. | -- | -- | -- | 11:47–54 |

# ಯೋಹಾನ 11:1–54

ಬೇಥಾನ್ಯದ ಲಾಜರನೆಂಬವನೊಬ್ಬನು ಅಸ್ವಸ್ಥನಾಗಿದ್ದನು. ಅದು ಮಾರ್ಥಳು ಮರಿಯಳು ಎಂಬ ಅಕ್ಕತಂಗಿಯರು ಇದ್ದ ಊರು. ಈ ಮರಿಯಳು ಯೇಸು ಸ್ವಾಮಿಗೆ ತೈಲವನ್ನು ಹಚ್ಚಿ ಆತನ ಪಾದಗಳನ್ನು ತನ್ನ ತಲೇಕೂದಲಿನಿಂದ ಒರಸಿದವಳು. ಈಕೆಯ ತಮ್ಮನಾದ ಲಾಜರನೇ ಅಸ್ವಸ್ಥನಾಗಿದ್ದನು. ಹೀಗಿರಲಾಗಿ ಅವನ ಅಕ್ಕಂದಿರು–ಸ್ವಾಮೀ, ನಿನ್ನ ಪ್ರಿಯ ಮಿತ್ರನು ಅಸ್ವಸ್ಥನಾಗಿದ್ದಾನೆ ಎಂಬದಾಗಿ ಯೇಸುವಿನ ಬಳಿಗೆ ಹೇಳಿ ಕಳುಹಿಸಿದರು. ಯೇಸು ಅದನ್ನು ಕೇಳಿ–ಈ ರೋಗವು ಮರಣಕ್ಕಾಗಿ ಬಂದದ್ದಲ್ಲ; ಇದರಿಂದ ದೇವಕುಮಾರನಿಗೆ ಮಹಿಮೆ ಉಂಟಾಗುವಂತೆ ದೇವರ ಮಹಿಮೆಗೋಸ್ಕರ ಬಂದದ್ದು ಅಂದನು. ಮಾರ್ಥಳಲ್ಲಿಯೂ ಆಕೆಯ ತಂಗಿಯಲ್ಲಿಯೂ ಲಾಜರನಲ್ಲಿಯೂ ಯೇಸುವಿಗೆ ಪ್ರೀತಿಯಿತ್ತು. ಆದರೂ ಲಾಜರನು ಅಸ್ವಸ್ಥನಾಗಿದ್ದಾನೆಂದು ಆತನು ಕೇಳಿದ ಮೇಲೆ ಎರಡು ದಿನ ತಾನಿದ್ದ ಸ್ಥಳದಲ್ಲೇ ನಿಂತನು. ಬಳಿಕ ಶಿಷ್ಯರಿಗೆ–ತಿರಿಗಿ ಯೂದಾಯಕ್ಕೆ ಹೋಗೋಣ ಎಂದು ಹೇಳಿದನು. ಶಿಷ್ಯರು–ಗುರುವೇ, ಯೆಹೂದ್ಯರು ಆಗಲೇ ನಿನ್ನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು; ತಿರಿಗಿ ಅಲ್ಲಿಗೆ ಹೋಗುತ್ತೀಯಾ? ಅನ್ನಲು ಯೇಸು–ಹಗಲಿಗೆ ಹನ್ನೆರಡು ತಾಸು ಉಂಟಲ್ಲವೇ. ಒಬ್ಬನು ಹಗಲಲ್ಲಿ ತಿರುಗಾಡಿದರೆ ಈ ಲೋಕದ ಬೆಳಕು ಕಾಣಿಸುವದರಿಂದ ಅವನು ಎಡವುವದಿಲ್ಲ; ರಾತ್ರಿಯಲ್ಲಿ ತಿರುಗಾಡಿದರೆ ಅವನಿಗೆ ಬೆಳಕಿಲ್ಲದ್ದರಿಂದ ಎಡವುವನು ಎಂದು ಉತ್ತರಕೊಟ್ಟನು. ಈ ಮಾತುಗಳನ್ನು ಹೇಳಿದ ಮೇಲೆ ಅವರಿಗೆ–ನಮ್ಮ ಮಿತ್ರನಾದ ಲಾಜರನು ನಿದ್ರೆಮಾಡುತ್ತಾನೆ; ನಾನು ಅವನನ್ನು ನಿದ್ರೆಯಿಂದ ಎಬ್ಬಿಸುವದಕ್ಕಾಗಿ ಹೋಗುತ್ತೇನೆ ಎಂದು ಹೇಳಿದನು. ಅದಕ್ಕೆ ಶಿಷ್ಯರು–ಸ್ವಾಮೀ, ಅವನು ನಿದ್ರೆಮಾಡುತ್ತಿದ್ದರೆ ಸ್ವಸ್ಥನಾಗುವನು ಅಂದರು. ಯೇಸು ಅವನ ಮರಣವನ್ನು ಸೂಚಿಸಿ ಅದನ್ನು ಹೇಳಿದ್ದನು; ಆದರೆ ಅವರು ನಿದ್ರೆಯ ವಿಶ್ರಾಂತಿಯನ್ನು ಕುರಿತು ಹೇಳುತ್ತಾನೆಂದು ನೆನಸಿದರು. ಆಗ ಯೇಸು ಸ್ಪಷ್ಟವಾಗಿ ಅವರಿಗೆ–ಲಾಜರನು ಸತ್ತುಹೋದನು; ಮತ್ತು ನಾನು ಅಲ್ಲಿ ಇಲ್ಲದೆ ಇದ್ದದ್ದಕ್ಕೆ ನಿಮ್ಮ ನಿಮಿತ್ತವಾಗಿ ಸಂತೋಷಪಡುತ್ತೇನೆ, ಯಾಕೆಂದರೆ ಅದರಿಂದ ನೀವು ನಂಬುವದಕ್ಕೆ ಮಾರ್ಗವಾಯಿತು; ಆದರೆ ಅವನ ಬಳಿಗೆ ಹೋಗೋಣ ಎಂದು ಹೇಳಿದನು. ಆಗ ದಿದುಮನೆಂಬ ತೋಮನು ಜೊತೇ ಶಿಷ್ಯರಿಗೆ–ನಾವೂ ಸಹ ಹೋಗಿ ಆತನೊಡನೆ ಸಾಯೋಣ ಎಂದು ಹೇಳಿದನು.

ಯೇಸು ಬಂದಾಗ ಲಾಜರನನ್ನು ಸಮಾಧಿಯಲ್ಲಿಟ್ಟು ನಾಲ್ಕು ದಿವಸವಾಯಿತೆಂದು ಆತನಿಗೆ ತಿಳಿದುಬಂತು. ಬೇಥಾನ್ಯವು ಯೆರೂಸಲೇಮಿಗೆ ಸಮೀಪವಾಗಿತ್ತು; ಇದಕ್ಕೂ ಅದಕ್ಕೂ ಹೆಚ್ಚು ಕಡಿಮೆ ಒಂದು ಹರದಾರಿ ಅಂತರ. ಆದದರಿಂದ ಯೆಹೂದ್ಯರಲ್ಲಿ ಅನೇಕರು ಮಾರ್ಥಳ ಮತ್ತು ಮರಿಯಳ ಬಳಿಗೆ ಅವರನ್ನು ತಮ್ಮನ ವಿಷಯವಾಗಿ ಸಂತೈಸಬೇಕೆಂದು ಬಂದಿದ್ದರು. ಹೀಗಿರುವಲ್ಲಿ ಮಾರ್ಥಳು ಯೇಸು ಬರುತ್ತಾನೆಂದು ಕೇಳಿ ಆತನನ್ನು ಎದುರುಗೊಳ್ಳುವದಕ್ಕೆ ಹೋದಳು; ಆದರೆ ಮರಿಯಳು ಮನೆಯಲ್ಲೇ ಕೂತುಕೊಂಡಿದ್ದಳು. ಮತ್ತು ಮಾರ್ಥಳು ಯೇಸುವಿಗೆ–ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ; ಈಗಲಾದರೂ ದೇವರನ್ನು ಏನು ಬೇಡಿ–ಕೊಳ್ಳುತ್ತೀಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು ಎಂದು ಹೇಳಿದಳು. ಯೇಸು ಆಕೆಗೆ–ನಿನ್ನ ತಮ್ಮನು ಎದ್ದು ಬರುವನೆಂದು ಹೇಳಿದನು. ಮಾರ್ಥಳು–ಸತ್ತವರಿಗೆ ಕಡೇ ದಿನದಲ್ಲಿ ಪುನರುತ್ಥಾನವಾಗುವಾಗ ಅವನೂ ಎದ್ದು ಬರುವನೆಂದು ನಾನು ಬಲ್ಲೆನು ಅಂದಳು. ಯೇಸು ಆಕೆಗೆ–ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ; ಇದನ್ನು ನಂಬುತ್ತೀಯಾ? ಎಂದು ಹೇಳಿದನು. ಆಕೆ–ಹೌದು, ಸ್ವಾಮೀ, ಲೋಕಕ್ಕೆ ಬರಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ ಅಂದಳು.

ಇದನ್ನು ಹೇಳಿ ಆಕೆ ಹೋಗಿ ತನ್ನ ತಂಗಿಯಾದ ಮರಿಯಳನ್ನು ಗುಪ್ತವಾಗಿ ಕರೆದು–ಗುರುವು ಬಂದಿದ್ದಾನೆ, ನಿನ್ನನ್ನು ಕರೆಯುತ್ತಾನೆ ಅಂದಳು. ಮರಿಯಳು ಇದನ್ನು ಕೇಳುತ್ತಲೇ ತಟ್ಟನೆ ಎದ್ದು ಆತನ ಬಳಿಗೆ ಹೋದಳು. ಯೇಸು ಇನ್ನೂ ಊರೊಳಗೆ ಬಾರದೆ ಮಾರ್ಥಳು ಆತನಿಗೆದುರಾಗಿ ಬಂದ ಸ್ಥಳದಲ್ಲೇ ಇದ್ದನು. ಮರಿಯಳ ಕೂಡ ಮನೆಯಲ್ಲಿ ಇದ್ದುಕೊಂಡು ಆಕೆಯನ್ನು ಸಂತೈಸುತ್ತಿದ್ದ ಯೆಹೂದ್ಯರು–ಆಕೆ ತಟ್ಟನೆ ಎದ್ದು ಹೊರಗೆ ಹೋಗುವದನ್ನು ಕಂಡು ಈಕೆ ಅಳುವದಕ್ಕಾಗಿ ಸಮಾಧಿಗೆ ಹೋಗುತ್ತಾಳೆಂದು ನೆನಸಿ ಆಕೆಯ ಹಿಂದೆ ಹೋದರು. ಮರಿಯಳು ಯೇಸು ಇದ್ದಲ್ಲಿಗೆ ಬಂದು ಆತನನ್ನು ಕಂಡು ಆತನ ಪಾದಕ್ಕೆ ಬಿದ್ದು–ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ ಅಂದಳು. ಆಕೆ ಗೋಳಾಡುವದನ್ನೂ ಆಕೆಯ ಸಂಗಡ ಬಂದ ಯೆಹೂದ್ಯರು ಗೋಳಾಡುವದನ್ನೂ ಯೇಸು ಕಂಡಾಗ ಆತ್ಮದಲ್ಲಿ ನೊಂದುಕೊಂಡು ತತ್ತರಿಸಿ–ಅವನನ್ನು ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿದನು. ಅವರು–ಸ್ವಾಮೀ, ಬಂದು ನೋಡು ಅಂದರು. ಯೇಸು ಕಣ್ಣೀರು ಬಿಟ್ಟನು. ಯೆಹೂದ್ಯರು ನೋಡಿ–

ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು ಅಂದುಕೊಂಡರು. ಅವರಲ್ಲಿ ಕೆಲವರು–ಈತನು ಆ ಕುರುಡನಿಗೆ ಕಣ್ಣುಕೊಟ್ಟನಲ್ಲಾ; ಈ ಮನುಷ್ಯನನ್ನು ಸಾಯದ ಹಾಗೆ ಮಾಡಲಾರದೆ ಇದ್ದನೇ? ಅಂದರು. ಯೇಸು ತನ್ನಲ್ಲಿ ತಿರಿಗಿ ನೊಂದುಕೊಳ್ಳುತ್ತಾ ಸಮಾಧಿಯ ಬಳಿಗೆ ಬಂದನು. ಅದು ಗವಿಯಾಗಿತ್ತು, ಅದರ ಬಾಯಿಗೆ ಒಂದು ಕಲ್ಲು ಆನಿಸಿತ್ತು. ಯೇಸು –ಆ ಕಲ್ಲನ್ನು ತೆಗೆದು ಹಾಕಿರಿ ಅನ್ನಲು ತೀರಿಹೋದವನ ಅಕ್ಕನಾದ ಮಾರ್ಥಳು–ಸ್ವಾಮೀ, ಅವನು ಸತ್ತು ನಾಲ್ಕು ದಿವಸವಾಯಿತು; ಈಗ ನಾತಹುಟ್ಟಿದೆ ಅಂದಳು. ಯೇಸು ಆಕೆಗೆ–ನೀನು ನಂಬಿದರೆ, ದೇವರ ಮಹಿಮೆಯನ್ನು ಕಾಣುವಿ ಎಂದು ನಾನು ನಿನಗೆ ಹೇಳಲಿಲ್ಲವೇ ಎಂದು ಉತ್ತರ ಕೊಟ್ಟನು. ಆಗ ಕಲ್ಲನ್ನು ತೆಗೆದು ಹಾಕಿದರು. ಮತ್ತು ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ–ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಅದರೂ ನೀನೇ ನನ್ನನ್ನು ಕಳುಹಿಸಿಕೊಟ್ಟೀ ಎಂದು ಸುತ್ತಲೂ ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದೆನೆಂದು ಹೇಳಿದನು. ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ–ಲಾಜರನೇ, ಹೊರಗೆ ಬಾ ಎಂದು ಕೂಗಿದನು. ಸತ್ತಿದ್ದವನು ಹೊರಗೆ ಬಂದನು; ಅವನ ಕೈಕಾಲುಗಳು ಬಟ್ಟೆಗಳಿಂದ ಕಟ್ಟಿದ್ದವು. ಅವನ ಮುಖವು ಕೈಪಾವುಡದಿಂದ ಸುತ್ತಿತ್ತು. ಯೇಸು ಅವರಿಗೆ–ಅವನನ್ನು ಬಿಚ್ಚಿರಿ, ಹೋಗಲೀ ಎಂದು ಹೇಳಿದನು.

ಮರಿಯಳ ಬಳಿಗೆ ಬಂದ ಯೆಹೂದ್ಯರು ಆತನು ಮಾಡಿದ ಕಾರ್ಯವನ್ನು ನೋಡಿದಾಗ ಅವರಲ್ಲಿ ಅನೇಕರು ಆತನನ್ನು ನಂಬಿದರು; ಆದರೆ ಕೆಲವರು ಫರಿಸಾಯರ ಬಳಿಗೆ ಹೋಗಿ ಯೇಸು ಮಾಡಿದ್ದನ್ನು ಅವರಿಗೆ ತಿಳಿಸಿದರು.

ಆಗ ಮಹಾಯಾಜಕರೂ ಫರಿಸಾಯರೂ ಹಿರಿಸಭೆಯನ್ನು ಕೂಡಿಸಿ–ನಾವು ಮಾಡುವದು ಇದೇನು? ಈ ಮನುಷ್ಯನು ಬಹು ಸೂಚಕಕಾರ್ಯಗಳನ್ನು ಮಾಡುತ್ತಾನಲ್ಲಾ; ನಾವು ಅವನನ್ನು ಹೀಗೆಯೇ ಬಿಟ್ಟರೆ ಎಲ್ಲರೂ ಅವನನ್ನು ನಂಬಾರು; ಮತ್ತು ರೋಮ್ ರಾಜ್ಯದವರು ಬಂದು ನಮ್ಮ ಸ್ಥಾನವನ್ನೂ ಜನವನ್ನೂ ಸೆಳಕೊಂಡಾರು ಅಂದರು. ಆದರೆ ಅವರಲ್ಲಿ ಕಾಯಫ–ನೆಂಬವನೊಬ್ಬನು ಈ ವರುಷಕ್ಕೆ ಮಹಾಯಾಜಕನಾಗಿದ್ದು ಅವರಿಗೆ–ನಿಮಗೇನೂ ತಿಳಿಯುವದಿಲ್ಲ; ಜನವೆಲ್ಲಾ ನಾಶವಾಗುವ–ದಕ್ಕಿಂತ ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವದು ನಿಮಗೆ ಹಿತವೆಂದು ನೀವು ಅಲೋಚಿಸುವದೂ ಇಲ್ಲ ಎಂಬದಾಗಿ ಹೇಳಿದನು. ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದುದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನಕ್ಕೋಸ್ಕರ ಸಾಯುವದಕ್ಕಿದ್ದನೆಂದು ಹೇಳಿದನು. ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು. ಆ ದಿನದಿಂದ ಆತನನ್ನು ಕೊಲ್ಲುವದಕ್ಕೆ ಆಲೋಚಿಸುತ್ತಿದ್ದರು.

ಹೀಗಿರಲಾಗಿ ಯೇಸು ಇನ್ನು ಯೆಹೂದ್ಯರೊಳಗೆ ಬಹಿರಂಗವಾಗಿ ತಿರುಗಾಡದೆ ಅಲ್ಲಿಂದ ಅಡವಿಯ ಹತ್ತಿರದ ಪ್ರದೇಶಕ್ಕೆ ಹೋಗಿ ಎಫ್ರಾಯಿಮ್ ಎಂಬ ಊರಲ್ಲಿ ಶಿಷ್ಯರ ಸಂಗಡ ಇದ್ದನು.

*****

# "ನಾನು ಅವನನ್ನು ಎಬ್ಬಿಸುವದಕ್ಕೆ ಹೋಗುತ್ತೇನೆ"

**ರೀಪ್ರಿಂಟ್ಸ್ ಪುಟ 4160**

## ಯೋಹಾನ 11:1–57

**"ನಾನೇ ಜೀವವೂ ಪುನರುತ್ಥಾನವೂ ಆಗಿದ್ದೇನೆ" – ಯೋಹಾನ 11:25**

ನಮ್ಮ ಕರ್ತನ ಸೇವೆಯು ಕೊನೆಗೊಳ್ಳುವದಕ್ಕಿರುವಾಗ ಯೆಹೂದ್ಯರ ಸಭೆಯ ಅಧಿಕಾರಿಗಳ ವಿರೋಧವು ಬಹು ಕಟುವಾಗುತ್ತಾ ಬಂದು ಯೇಸುವನ್ನು ಯೂದಾಯವನ್ನು ಬಿಟ್ಟು ಬೇರೆಯ ಪ್ರಾಂತ್ಯಕ್ಕೆ ತೆರಳುವ ಹಾಗೆ ಮಾಡಿತ್ತು. ಆತನು ಸ್ವಲ್ಪ ಕಾಲ ತಾನು ಸ್ನಾನದೀಕ್ಷೆ ಹೊಂದಿದ ಸಮಯದಲ್ಲಿ (ಸ್ನಾನಿಕನಾದ) ಯೋಹಾನನು ಉಪದೇಶ ಮಾಡುತ್ತಿದ್ದ ಸ್ಥಳದಲ್ಲಿದ್ದನು. ಆತನು ಅಲ್ಲಿರುವಾಗ ಬೇಥಾನ್ಯದಲ್ಲಿದ್ದ ಮಾರ್ಥಳು ಮತ್ತು ಮರಿಯಳರುಗಳಿಂದ–"ಸ್ವಾಮೀ, ನಿನ್ನ ಪ್ರಿಯ ಮಿತ್ರನು ಅಸ್ವಸ್ಥನಾಗಿದ್ದಾನೆ" ಎಂಬ ಸುದ್ದಿಯನ್ನು ಕೇಳಿದ್ದನು. ಇದರಿಂದ ಅವರ ತಮ್ಮನಾದ ಲಾಜರನು ಯೇಸುವಿಗೆ ಬಹು ಪ್ರಿಯನಾದ ಮಿತ್ರನಾಗಿದ್ದನೆಂದು ನಮಗೆ ತಿಳಿಯುತ್ತದೆ. ಸುದ್ದಿಯು ಸಂಕ್ಷೇಪವಾಗಿತ್ತು; ಅದು ಆತನು ಅಲ್ಲಿಗೆ ಬರಲು ಇಲ್ಲವೇ ಅದ್ಭುತ ರೀತಿಯಲ್ಲಿ ಅಲ್ಲಿ ಹಸ್ತಕ್ಷೇಪ ಮಾಡುವಂತೆ ಆತನನ್ನು ಒತ್ತಾಯಿಸಿರಲಿಲ್ಲ; ಅದು ಕೇವಲ ವಾಸ್ತವದ ಸಂಗತಿಯನ್ನು ಹೇಳುವದಾಗಿತ್ತು.

ಕೆಲವು ವಿಧದಲ್ಲಿ ಇದು ಕ್ರೈಸ್ತರು ಮಾಡುವ ಪ್ರಾರ್ಥನೆಗೆ ಒಂದು ಭವ್ಯವಾದ ಮಾದರಿಯಾಗಿತ್ತು. ದೇವ ಜನರು ತಮ್ಮ ಜೀವಿತದ ಎಲ್ಲಾ ಲೌಕೀಕ ಹಾಗು ಆತ್ಮಿಕ ಸಂಗತಿಗಳ ವಿಷಯವಾಗಿ ಆತನ ಅನುಕಂಪ ಹಾಗೂ ಅತನು ತೋರುವ ಪ್ರೀತಿಪೂರ್ಣವಾದ ಆಸಕ್ತಿಯ ಬಗ್ಗೆ ಪೂರ್ಣ ಭರವಸೆಯುಳ್ಳವರಾಗಿ ಯಾವಾಗಲೂ ಆತನ ಬಳಿಗೆ ಹೋಗಬಹುದು. ಮೊದಲಿಗೆ ಅವರು ತಮ್ಮ ಸ್ವಂತ

ಚಿತ್ತವು ಪರಲೋಕದಲ್ಲಿ ಇಲ್ಲದಿದ್ದರೂ ಭೂಲೋಕದಲ್ಲಿ-ಯಾದರೂ ನೆರವೇರಬೇಕೆಂಬದಾಗಿ ಬಯಸುವ ಪ್ರವೃತ್ತಿಯುಳ್ಳ-ವರಾಗಿರಬಹುದು. ಆದರೆ ನಂತರದಲ್ಲಿ ತಮ್ಮ ಪ್ರತಿಷ್ಠಾ ಮನೋಭಾವ ಹಾಗು ಕೃಪೆಯಲ್ಲಿ ಅಭಿವೃದ್ಧಿಯಾಗುವಿಕೆಯು ಮುಂದುವರೆದಲ್ಲಿ ಅವರು ಮರಿಯಳು ಹಾಗು ಮಾರ್ಥಳ ಹಾಗೆ ತಮ್ಮ ಸಂಕಷ್ಟವನ್ನು ಹೇಳಿಕೊಂಡು ಆತನು ಏನನ್ನು ಅನುಗ್ರಹಿಸಲು ಸಂತೋಷಿಸುವನೋ ಅದನ್ನು ಆತನು ತನ್ನ ಅತ್ಯುತ್ತಮವಾದ ವಿವೇಕದ ಮೂಲಕವಾಗಿ ದಯಪಾಲಿಸಿದ್ದೆಂದು ಅಂಗೀಕರಿಸಿಕೊಂಡು ತೃಪ್ತರಾಗುವಂಥ ಸ್ಥಿತಿಗೆ ಅವರು ತಲುಪುವರು.

ಆಗ ಯೇಸುವು ಈ ಸುದ್ದಿಯನ್ನು ತಂದವರು ಇದನ್ನು ಕೇಳಿಸಿಕೊಂಡು ಮಾರ್ಥಳು ಮತ್ತು ಮರಿಯಳಿಗೆ ತಿಳಿಸುವಂತೆ ಹೀಗೆ ಹೇಳಿದ್ದನು, "ಈ ರೋಗವು ಮರಣಕ್ಕಾಗಿ ಬಂದದ್ದಲ್ಲ; ಇದರಿಂದ ದೇವಕುಮಾರನಿಗೆ ಮಹಿಮೆ ಉಂಟಾಗುವಂತೆ ದೇವರ ಮಹಿಮೆಗೋಸ್ಕರ ಬಂದದ್ದು." ಲಾಜರನು ಸಾಯಲಾರನೆಂದು ನಿರೀಕ್ಷಿಸಿಕೊಂಡು ನಮ್ಮ ಕರ್ತನು ತಪ್ಪಾಗಿ ಅರ್ಥಮಾಡಿಕೊಂಡಿದ್ದನೆಂದು ನಾವು ಭಾವಿಸುವ ಹಾಗಿಲ್ಲ; ವಾಸ್ತವದಲ್ಲಿ ಅವನನ್ನು ಎಬ್ಬಿಸುವೆನೆಂಬುದು ತನಗೆ ತಿಳಿದಿದ್ದರಿಂದ ಅಸ್ವಸ್ಥತೆಯ ಪರಿಣಾಮವಾದ ಆ ಮರಣವು ನಿರಂತರವಾಗಿ ಮುಂದುವರೆಯುವಂಥದ್ದಲ್ಲವೆಂದು ಹೇಳಿದ್ದನೆಂಬದಾಗಿ ನಾವು ಕಲ್ಪಿಸಿಕೊಳ್ಳಬೇಕು. ಎರಡು ದಿನಗಳ ನಂತರ ಯೇಸುವು ಯೂದಾಯದ ಬೇಥಾನ್ಯಕ್ಕೆ ಹೋಗುವ ಪ್ರಸ್ತಾಪಮಾಡಿದಾಗ ಶಿಷ್ಯರು ಭಯಭರಿತರಾಗಿದ್ದರು. ನಮ್ಮ ಕರ್ತನು ಅಲ್ಲಿ ಯಾವುದೇ ವಿಶೇಷವಾದ ಅಪಾಯವಿರುವದಿಲ್ಲವೆಂಬುದನ್ನು ಸೂಚಿಸಿದ್ದನು. ಆತನು ಅಲ್ಲಿನ ಸನ್ನಿವೇಶಗಳೆಲ್ಲವನ್ನು ಮುಂದಾಗಿಯೇ ತಿಳಿದಿದ್ದನು ಅಲ್ಲದೆ ತಾನು ಮಾಡಲು ಉದ್ದೇಶಿಸಿರುವ ಅದ್ಭುತಕಾರ್ಯವು ತನ್ನ ಶತ್ರುಗಳನ್ನು ಸ್ಥೈರ್ಯಗೆಡಿಸಿ ಸ್ವಲ್ಪ ಸಮಯದ ನಂತರ ಅವರು ತನ್ನನ್ನು ಬೆರೀಯ ಪ್ರಾಂತ್ಯಕ್ಕೆ ಹಿಂದಿರುಗುವಂತೆ ಮಾಡುವರೆಂಬುದನ್ನು ಗ್ರಹಿಸಿಕೊಂಡಿದ್ದನು. ತಾನು ಭೇಟಿ ನೀಡಲಿರುವ ಕಾರಣವನ್ನು ಅವರಿಗೆ ವಿವರಿಸಿ ಹೀಗೆ ಹೇಳಿದ್ದನು: "ನಮ್ಮ ಮಿತ್ರನಾದ ಲಾಜರನು ನಿದ್ರೆಮಾಡುತ್ತಾನೆ ಮತ್ತು ನಾನು ಅವನನ್ನು ನಿದ್ರೆಯಿಂದ ಎಬ್ಬಿಸುವದಕ್ಕೆ ಹೋಗುತ್ತೇನೆ." ನಂತರದಲ್ಲಿ ತನ್ನ ಹೇಳಿಕೆಯನ್ನು ಅವರು ಗ್ರಹಿಸಿಕೊಳ್ಳಲಾಗುವಂತೆ ಅವರಿಗೆ–ಲಾಜರನು ಸತ್ತುಹೋಗಿರುವ-ನೆಂದು ಸರಳವಾಗಿ ಹೇಳಿದನು.

ಅತನು ಹೇಳಿದ ದೃಷ್ಟಿಯಿಂದ ನೋಡಿದಾಗ ಪ್ರತಿಯೊಂದ-ರಲ್ಲಿಯೂ ಬಹು ಹೆಚ್ಚಿನ ವಿಷಯಗಳಿರುತ್ತವೆ. ವಾಸ್ತವಾಂಶದ ದೃಷ್ಟಿಯಿಂದ ಕರುಣೆ ಹಾಗು ಮತ್ತೆ ಬದುಕಿಸುವದರ ವಿಷಯದಲ್ಲಿನ ದೈವೀಕ ಉದ್ದೇಶವನ್ನು ಹೊರತುಪಡಿಸಿದಲ್ಲಿ ಒಂದು ಮೃಗವು ಸತ್ತುಹೋಗಿರುವದೆಂಬ ಅರ್ಥದಲ್ಲಿ ಲಾಜರನು ಸತ್ತುಹೋಗಿರುವನೆಂದು ಹೇಳುವದು ಉಚಿತವಾಗಿರುವದು. ಆದರೆ ದೇವರಲ್ಲಿನ ಹಾಗು ತನ್ನ ಸಂತತಿಯ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳು ಆಶೀರ್ವದಿಸಲ್ಪಡಬೇಕೆಂದು ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನದ ಮೇಲಿನ ನಂಬಿಕೆಯ ದೃಷ್ಟಿಯಿಂದ ಲಾಜರನು ಮೃಗಪಶುಗಳಂತೆ ಸತ್ತುಹೋಗಿರುವದಿಲ್ಲ ಆದರೆ ಕೇವಲ ಕೆಲವು ಕಾಲ ನಿರ್ಜೀವಿಯಾಗಿದ್ದು, ಕರ್ತನು ನಿಗದಿ ಮಾಡಿರುವ ಒಂದು ಕಾಲದಲ್ಲಿ ಅವನು ಪುನಃ ಜೀವಪಡೆಯಲು ಮರಣವೆಂಬ ನಿದ್ರೆಯಿಂದ ಎಬ್ಬಿಸಲ್ಪಟ್ಟು ಹೊರಬರುವಂತೆ ತನ್ನನ್ನು ಕರೆಯಲ್ಪಡುವದಕ್ಕಾಗಿ ಕರ್ತನು ನಿಗದಿಪಡಿಸಿರುವ ಒಂದು ಕಾಲದವರೆಗೆ ಕಾದುಕೊಂಡಿರುವನು. ಇದನ್ನು ಮತ್ತೊಂದು ಸಂದರ್ಭದಲ್ಲಿ ಪುನರುತ್ಥಾನವನ್ನು ಹಾಗು ಮುಂದಿನ ಜೀವಿತವನ್ನು ಅಲ್ಲಗಳೆಯುತ್ತಿದ್ದವರಾದ ಸದ್ದುಕಾಯರಿಗೆ ನಮ್ಮ ಕರ್ತನು ಹೀಗೆ ಹೇಳಿದ್ದನು: "ಸತ್ತವರು ಬದುಕಿ ಏಳುವರೆಂಬುದನ್ನು ಮೋಶೆಯೂ ಸೂಚಿಸಿದ್ದಾನೆ. ಅವನು ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಕರ್ತನನ್ನು ಅಬ್ರಹಾಮನ ದೇವರು ಇಸಾಕನ ದೇವರು ಯಾಕೋಬನ ದೇವರು ಎಂದು ಹೇಳಿದ್ದಾನೆ." (ಲೂಕ 20:37) ಈ ವಿಷಯದ ಮೇಲಿನ ನಮ್ಮ ಕರ್ತನ ವಾದವೇನಂದರೆ ಒಂದು ಮೃಗವು ಪುನರುತ್ಥಾನದ ಅಂದರೆ ಮತ್ತೆ ಜೀವದಿಂದ ಎಬ್ಬಿಸಲ್ಪಡುವದೆಂಬ ನಿರೀಕ್ಷೆಯಿಲ್ಲದೆ ಸತ್ತುಹೋಗಿರುವದೆಂಬ ಅರ್ಥದಲ್ಲಿ ಅಬ್ರಹಾಮ ಇಸಾಕ ಯಾಕೋಬರು ಸತ್ತುಹೋಗಿದ್ದರೆ ಆತನು ತನ್ನನ್ನು ಅವರ ದೇವರೆಂದು ಕರೆದುಕೊಳ್ಳುತ್ತಿರಲಿಲ್ಲ. ದೇವರ ದೃಷ್ಟಿಯಲ್ಲಿ ತನಗೆ ಎಲ್ಲರೂ ಜೀವಿತರೆಂದು ಹೇಳುವದರ ಮೂಲಕವಾಗಿ ನಮ್ಮ ಕರ್ತನು ತನ್ನ ವಾದವನ್ನು ಮುಗಿಸಿರುವನು.

ಅಲ್ಲದೆ ನಮ್ಮ ದೃಷ್ಟಿಕೋನವೂ ದೈವಿಕದೃಷ್ಟಿಕೋನವೇ ಆಗಿರಬೇಕು; ಈ ದೈವಿಕ ಸಾಕ್ಷಿಪ್ರಮಾಣದ ಅನುಸಾರವಾಗಿಯೇ ನಾವು ಆಲೋಚಿಸುವದನ್ನು ಕಲಿತುಕೊಳ್ಳಬೇಕು. ಹೀಗಾಗಿ ನಾವು ನಿರೀಕ್ಷೆಯನ್ನು ಹೊಂದಿರುವೆವು, ಅದು ಕ್ರಿಸ್ತನಲ್ಲಿ ಸತ್ತುಹೋಗಿರುವ ಭಕ್ತರಾದ ಕ್ರೈಸ್ತರ ವಿಷಯದಲ್ಲಿ ಮಾತ್ರವಲ್ಲದೆ "ಕ್ರಿಸ್ತನಲ್ಲಿ ನಿದ್ರೆಹೋಗಿರುವ" ಮಾನವಕುಲದವರ ವಿಷಯವಾಗಿಯೂ ನಾವು ನಿರೀಕ್ಷೆ ಹೊಂದಿರುವೆವು. ದೇವರು ಅವರಿಗೆ ಕ್ರಿಸ್ತನಲ್ಲಿ ಮತ್ತೆ ಬದುಕುವದಕ್ಕೆ ಏರ್ಪಾಡುಮಾಡದಿದ್ದಲ್ಲಿ ಅವರ ಸ್ಥಿತಿಯು ವಾಸ್ತವದಲ್ಲಿ ಮೃಗಪಶುಗಳಿಗಿರುವಂತೆಯೇ ನಿಜವಾದ ಮರಣವಾಗಿರುವದು. ಆದರೆ ಇಂಥಾ ಏರ್ಪಾಡು ಮಾಡಿರು-ವದರಿಂದ ಮಾನವ ಕುಲವು ನಿರ್ನಾಮವಾಗಿರುವದೆಂದು ಆಲೋಚಿಸಬೇಕಿಲ್ಲ, ಆದರೆ ಕೇವಲ ನಿದ್ರೆಯಲ್ಲಿರುವರೆಂದು ಆಲೋಚಿಸಿಕೊಳ್ಳಬೇಕು. ಆದುದರಿಂದ ದೇವವಾಕ್ಯದ ಈ ಬೋಧನೆಯನ್ನು ಅಂಗೀಕರಿಸುವವರೆಲ್ಲರೂ ನಿರೀಕ್ಷೆಯಿಲ್ಲದೆ ಇತರರಂತೆ (ಸತ್ತುಹೋದವರ ಬಗ್ಗೆ) ದುಃಖಿಸುವದಿಲ್ಲ: "ನಿದ್ರೆಹೋಗುವವರ ಗತಿ ಏನೆಂದು ನೀವು ತಿಳಿಯದೆ ಇದ್ದು ನಿರೀಕ್ಷೆಯಿಲ್ಲದವರಾದ ಇತರರಂತೆ ದುಃಖಿಸುವುದು ನಮ್ಮ ಮನಸ್ಸಿಗೆ ಒಪ್ಪುವದಿಲ್ಲ. ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರನ್ನು (ಆತನ ಯಜ್ಞಾರ್ಪಣೆಯಿಂದುಟಾದ ಫಲದಲ್ಲಿ [ಪ್ರಯೋಜನಕ್ಕೆ] ಒಳಗೊಂಡಿರುವಂಥವರೆಲ್ಲರನ್ನು ಅಂದರೆ ಆತನ ಅಮೂಲ್ಯ ರಕ್ತದಿಂದ ವಿಮೋಚಿಸಲ್ಪಟ್ಟ ಆದಾಮನ ಕುಲದವರೆಲ್ಲರನ್ನು) ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು ನಂಬಬೇಕಲ್ಲವೇ." (1 ಥೆಸಲೋನಿಕ 4;13,14) ಆತನಲ್ಲಿ ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲುಗಾರರಾಗುವ

ಕ್ರೈಸ್ತಸಭೆಯು ಆತನ ಮೂಲಕವಾಗಿ ಆತನ (ಕ್ರಿಸ್ತನ) ಪುನರುತ್ಥಾನದಲ್ಲಿ ಪಾಲುಹೊಂದಲು ಮೊದಲನೆಯದಾಗಿ ಎಬ್ಬಿಸಲ್ಪಡುವರು; ಅದು ಪ್ರಥಮ ಪುನರುತ್ಥಾನ ಅಥವಾ ಪ್ರಮುಖವಾದ ಪುನರುತ್ಥಾನವಾಗಿರುವದು. ಆನಂತರ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಆತನ (ಕ್ರಿಸ್ತನ) ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳವರು ಎಬ್ಬಿಸಲ್ಪಡುವರು. ಅವರನ್ನು ಶೀಯೋಲ್‌ನಿಂದ, ಹೇಡ್ಸ್‌ನಿಂದ ಹೊರತಂದು ಸತ್ಯದ ಪರಿಜ್ಞಾನವನ್ನು ಪಡೆಯುವಂತಾಗಲು ನಡೆಸಲಾಗುವದು. ಹೌದು, ಅವರು ಆ ಸಂದೇಶವನ್ನು ಒಳ್ಳೆಯ ಹಾಗು ಪ್ರಾಮಾಣಿಕವಾದ ಹೃದಯದಲ್ಲಿ ಸ್ವೀಕರಿಸಿಕೊಂಡದ್ದೇಯಾದರೆ ಅವರನ್ನು ಪಾಪ ಹಾಗು ಮರಣದ ಸ್ಥಿತಿಯಿಂದ ಸಂಪೂರ್ಣವಾಗಿ ಎತ್ತಲ್ಪಟ್ಟು ಆತನ (ಕ್ರಿಸ್ತನ) ಮೂಲಕವಾಗಿ ಪೂರ್ಣವಾದ ಪರಿಪೂರ್ಣತೆಯ ಸ್ಥಿತಿಗೆ ಪುನಃಸ್ಥಾಪನೆಗೊಳಿಸಿ ನಿತ್ಯಜೀವಕ್ಕೆ ನಡೆಸಲ್ಪಡಲಾಗುವದು. ಒಳ್ಳೆಯದು, ನಿಜವಾಗಿ ಯೇಸುವಿನಲ್ಲಿ ಭರವಸವಿಡುವವರೆಲ್ಲರೂ ಆತನಲ್ಲಿ ಉಲ್ಲಾಸಿಸುವರು ಅಲ್ಲದೆ ಇತರರಂತೆ ಅವರು ಮರಣದ ಸಮ್ಮುಖದಲ್ಲಿ ದುಃಖಿಸುವದಿಲ್ಲ.

## "ಮಿತ್ರರು ದುಃಖಿಸುವಲ್ಲಿ ಯೇಸುವು ಸಂತೋಷಿಸುವದು"

ಪ್ರಖ್ಯಾತರಾದ ಚಾರ್ಲ್ಸ್ ಸ್ಪರ್ಜನ್‌ರವರು ಈ ವಿಷಯವಾಗಿ ಉಪದೇಶಮಾಡುವದಕ್ಕಾಗಿ ಇದೇ ವಾಕ್ಯಭಾಗವನ್ನು ಶೀರ್ಷಿಕೆ – ಯನ್ನಾಗಿ ತೆಗೆದುಕೊಂಡಿದ್ದರು, "ನಾನು ಅಲ್ಲಿ ಇಲ್ಲದೆ ಇದ್ದದ್ದಕ್ಕೆ ನಿಮ್ಮ ನಿಮಿತ್ತವಾಗಿ ಸಂತೋಷಪಡುತ್ತೇನೆ, ಯಾಕೆಂದರೆ ಅದರಿಂದ ನೀವು ನಂಬುವದಕ್ಕೆ ಮಾರ್ಗವಾಯಿತು; ಆದರೆ ಅವನ ಬಳಿಗೆ ಹೋಗೋಣ..." ಕರ್ತನ ಏರ್ಪಾಡಿನಲ್ಲಿ ತಮ್ಮ ಕಷ್ಟಕಣ್ಣೀರುಗಳು ಒಂದು ದೊಡ್ಡ ಆಶೀರ್ವಾದವಾಗಿ ಮಾಡಲ್ಪಡುವದೆಂಬುದನ್ನು ನೆನಪಿನಲ್ಲಿಟ್ಟುಕೊಂಡವರಾಗಿ, ತಮ್ಮ ಶ್ರಮಸಂಕಟ ರೋಗ ದುಃಖನೋವುಗಳ ಸಮಯದಲ್ಲಿ ಕರ್ತನನ್ನು ನಂಬಿಕೆಯೊಡನೆ ನೋಡುವುದು ದೇವಜನರಿಗೆ ಒಳ್ಳೆಯದು. ಈ ಪಾಠದಲ್ಲಿ ನಮಗೆ ಒಂದು ನಿದರ್ಶನವಿರುವದು: ಮಾರ್ಥಳು ಮತ್ತು ಮರಿಯಳು ಅಸ್ವಸ್ಥನಾದ ತಮ್ಮ ಸಹೋದರನಿಗೆ ಸೇವೆಮಾಡುವಾಗ ಕರ್ತನು ಈತನನ್ನು ಎಷ್ಟು ಪ್ರೀತಿಸಿದ್ದನೆಂಬುದನ್ನು ಆಲೋಚಿಸಿಕೊಂಡು ಲಾಜರನ ಸ್ಥಿತಿಯ ಬಗ್ಗೆ ಒಂದು ಸಂದೇಶವನ್ನು ಕಳುಹಿಸಿದ್ದರು. ಕರ್ತನ ಜ್ಞಾನ ಕೃಪೆಯ ಬಗ್ಗೆ ಭರವಸವುಳ್ಳವರಾಗಿ ಸಂಗತಿಯನ್ನು ಆತನ ಹಸ್ತಕ್ಕೆ ಒಪ್ಪಿಸಿದ್ದಾಗ್ಯೂ ಸಹ ಸಮಾಧಿಯ ಕರಾಳ ಛಾಯೆಯ ಕಡೆಗೆ ತಲುಪಲು ವಿಷಯವನ್ನು ಬಿಡಲಾಗಿತ್ತು. ಆ ಸಹೋದರನು ಸತ್ತು ಹೂಣಲ್ಪಟ್ಟಿದ್ದನು. ಹೌದು ಮೆಸ್ಸೀಯನೆಂದು ಅವರು ಭರವಸೆಯಿಟ್ಟಿದ್ದ ಗುರುವು ಆ ರೋಗವನ್ನು ಕಡಿಮೆಮಾಡಿ ಸಾಯದಂತೆ ತಡೆದಿರಲಿಲ್ಲ; ಅವರಿಗೆ ಒಂದು ಸಂದೇಶವ–ನ್ನಾದರೂ ಸಹ ನೀಡದೆ ಹಲವಾರು ದಿನಗಳು ಕಳೆಯುವಂತೆ ಬಿಟ್ಟಿದ್ದನು; ಅಲ್ಲದೆ ಇದೆಲ್ಲವನ್ನು ಹೇಳಿ ಯೇಸುವು ತಿಳಿಸಿದ್ದು, "ನಾನು ಸಂತೋಷಪಡುತ್ತೇನೆ." ನಾವು ಇದನ್ನು ಹೇಗೆ ಅರ್ಥಮಾಡಿಕೊಳ್ಳುವದು? ಇನ್ನೂ ವಿವರವಾಗಿ ಹೇಳುತ್ತಾ ನಮ್ಮ ಕರ್ತನು ಮತ್ತೂ ನುಡಿದದ್ದೇನಂದರೆ, "ನಿಮ್ಮ ನಿಮಿತ್ತವಾಗಿ ಸಂತೋಷಪಡುತ್ತೇನೆ." ನಮ್ಮ ವಿಷಯದಲ್ಲಿಯೂ ಹೀಗೆಯೇ ಇರಬಹುದು; ನಾವು ಬೇರೆ ಯಾವುದೇ ವಿಧದಲ್ಲಿಯೂ ಚೆನ್ನಾಗಿ ಕಲಿತುಕೊಳ್ಳಲು ಸಾಧ್ಯವಾಗದಂಥ ಕೆಲವು ಮುಖ್ಯವಾದ ಪಾಠಗಳನ್ನು ಪಡೆಯುವ ಸಲುವಾಗಿ ಪರಿಶೋಧನೆ ದುಃಖ ಕಣ್ಣೀರು ಸಂಕಷ್ಟಗಳನ್ನು ನಮಗೋಸ್ಕರವಾಗಿ ಬರಮಾಡುವದಕ್ಕೆ ನಮ್ಮ ಕರ್ತನು ಸಂತೋಷಿಸುವನು. ನಮಗಿರುವ ಪಾಠಗಳಲ್ಲಿ ಒಂದು ಯಾವುದೆಂದರೆ, "ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು (ಸಂಗತಿಗಳು) ಅನುಕೂಲವಾಗುತ್ತದೆ." ಎಂಬ ವಾಗ್ದಾನವನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವ ಸಲುವಾಗಿ ಕರ್ತನ ಇರುವಿಕೆಯ ಕುರುಹು ನಮಗೆ ದೊರೆಯದಿರುವಲ್ಲಿಯೂ ನಾವು ಆತನಲ್ಲಿ ಭರವಸವುಳ್ಳವರಾಗಿರಬೇಕೆಂಬದೇ. ಪರಿಗಣನೆ ಮಾಡುತ್ತಿರುವ ಸಂಗತಿಯಲ್ಲಿ ಆ ಒಬ್ಬ ಸಹೋದರನಿಗೆ ಸಂಭವಿ–ಸಿದ ರೋಗಮರಣಗಳು 'ಎಲ್ಲಾ ಕಾರ್ಯಗಳ (ಸಂಗತಿಗಳ)' ಭಾಗವಾಗಿದ್ದು ನಿಸ್ಸಂದೇಹವಾಗಿ ಆ ಇಬ್ಬರು ಸಹೋದರಿಯರಿಗೆ ಅದು ಅರಿಯಲಾಗದ ದೇವಾನುಗ್ರಹವಾಗಿತ್ತು. ಹೀಗಾಗಿ ಈ ಬಗೆಯ ಅನುಭವವು ನಿಸ್ಸಂಶಯವಾಗಿ ಅಮೂಲ್ಯವಾದ ಪಾಠವನ್ನು ಕಲಿಯುವಂತಾಗಲು ಸಹಾಯಮಾಡಿತ್ತು. ಅಲ್ಲದೆ ಅದು ನಿಸ್ಸಂದೇಹವಾಗಿಯೂ ಕರ್ತನೊಂದಿಗೆ ನಿಕಟವಾದ ಅನ್ಯೋನ್ಯತೆಗೆ ಹಾಗು ನಿತ್ಯವಾಗಿರುವ ಸಂಗತಿಗಳಿಗೆ ಸಿದ್ಧಗೊಳಿಸುವದಾಗಿತ್ತು.

ಕರ್ತನ ಶಿಷ್ಯರಲ್ಲಿದ್ದ ಪ್ರಸಂಶನಾರ್ಹವಾದ ಶ್ರದ್ಧಾಭಕ್ತಿಯು ಅವರಲ್ಲೊಬ್ಬನ ಮಾತುಗಳಲ್ಲಿ ಚೆನ್ನಾಗಿ ನಿದರ್ಶಿತವಾಗಿರುವದು: ತನ್ನ ಜೊತೇ ಶಿಷ್ಯರನ್ನು ಸಂಭೋದಿಸುತ್ತಾ ತೋಮನು ತಾವು ಒಡೆಯನನ್ನು ತೊರೆದುಹೋಗಬಾರದೆಂದು ಒತ್ತಾಯ ಪಡಿಸಿದ್ದನು; ಹೇಗಂದರೆ ಆತನು ಯೂದಾಯಕ್ಕೆ ಹೋಗಲು ಉದ್ದೇಶಿಸಿದ್ದಲ್ಲಿ ತಾವೂ ಆತನೊಡನೆ ಹೋಗಬೇಕೆಂಬುದನ್ನು ಹೀಗೆ ಹೇಳಿದ್ದನು: "ನಾವು ಸಹ ಹೋಗಿ ಆತನೊಡನೆ ಸಾಯೋಣ..." ಅವರು ಕರ್ತನ ಸಂಗಡ ಹೊರಟಾಗ ಇದು ಆ ಹನ್ನೆರಡು ಮಂದಿಯು ಆತನೊಡನೆ ಹಂಚಿಕೊಂಡಂಥ ಧೈರ್ಯಭಾವವಾಗಿತ್ತು. ಅಲ್ಲದೆ ಇದು ಆತನನ್ನು ಹಿಡುಕೊಟ್ಟ ರಾತ್ರಿಯಲ್ಲಿ ಅವರಲ್ಲಿ ತೋರಿಬಂದ ಹೇಡಿತನದ ವಿಷಯವಾಗಿ ಬಗೆಹರಿಸಿಕೊಳ್ಳಲು ನಮಗೆ ಸಹಾಯಮಾಡುತ್ತದೆ. ಇದು ಕರ್ತನು ಸಹಾಯವನ್ನು ಪಡೆಯಲು ತಾನು ನಿರಾಕರಿಸಿದಾಗ ಅವರಲ್ಲಿ ಉದ್ಭವವಾದ ಒಂದು ಬಗೆಯ ಹೇಡಿತನವಾಗಿತ್ತು. ತಮಗೆ ಮರಣ ಸಂಭವಿಸಬಹುದೆಂದು ಭಾವಿಸಿಕೊಂಡವರಾಗಿ ಆ ಅಪ್ರಸಿದ್ಧನಾದ ಪ್ರವಾದಿಯ ಜೊತೆಯಲ್ಲಿ ಹೋಗಿ ತಮ್ಮ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಂಡು ಆ ನಂತರದಲ್ಲಿ ಆತನನ್ನು ತೊರೆದು ಓಡಿಹೋದಂಥ ಮನುಷ್ಯರು ಇವರಾಗಿದ್ದರು. ಈ ಸಂಬಂಧವಾಗಿ ನಮಗಿರುವ ಪಾಠವೇನಂದರೆ ಕರ್ತನ ವಿಷಯವಾಗಿಯೂ ಆತನ ಕಾರ್ಯೋದ್ದೇಶಗಳ ಬಗ್ಗೆ ಧೈರ್ಯವುಳ್ಳವರಾಗಿ ಈ ಕಾರಣಕ್ಕಾಗಿ ಮರಣಹೊಂದಲೂ ಸಿದ್ಧರಾಗಿರುವ ನಮ್ಮಲ್ಲಿನ ಕೆಲವರಿಗೆ ನಿಜವಾಗಿಯೂ ತಾವು ಈ ಮನೋಭಾವವನ್ನು ಕಾಪಾಡಿಕೊಂಡವರಾಗಿ ಹೃದಯಭಾರವಾದ ಗಳಿಗೆಯಲ್ಲಿ ಸೋತುಹೋಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸುತ್ತಿರುವ ಅಗತ್ಯವಿರುವದೆಂಬದು.

## ಯೆಹೂದ್ಯರು ಗೋಳಾಡಿದರು, ಯೇಸುವು ಅತ್ತನು.

ಆ ಕಾಲದಲ್ಲಿ ಅಂತ್ಯಕ್ರಿಯೆಯ ಸಂಸ್ಕಾರವಾಗಿ ಏಳು ದಿನಗಳು ಶೋಕಿಸುವದು ವಾಡಿಕೆಯಾಗಿತ್ತು. ಮಾರ್ಥಳು ಮರಿಯಳು ಹಾಗು ಲಾಜರನು ಒಂದು ಪ್ರಭಾವೀ ಐಶ್ವರ್ಯವಂತ ಕುಟುಂಬಕ್ಕೆ ಸೇರಿದವರೆಂಬುದು ಹಾಗು ಸಾವಿನಿಂದ ನೊಂದ ಆ ದುಃಖದ ಸಮಯದಲ್ಲಿ ಹಲವಾರು ಮಿತ್ರರು ಅವರೊಡನೆ ಶೋಕಿಸಿ ಅವರನ್ನು ಸಂತೈಸಲು ಬಂದಿದ್ದರೆಂಬುದು ಸ್ಪಷ್ಟವಾಗಿತ್ತು. ಶೋಕಿಸುವವರಿಂದ ತುಂಬಿರುವದೆಂದು ತಾನು ತಿಳಿದಿದ್ದ ಆ ಮನೆಗೆ ಹೋಗಿ ಆನಂತರದಲ್ಲಿ ಸಮಾಧಿಗೆ ಹೋಗುವದು ವಿವೇಕಕರವಲ್ಲವೆಂದು ಯೇಸುವು ಎಣಿಸಿಕೊಂಡವನಾಗಿ ತಾನು ಬೇಥಾನ್ಯಕ್ಕೆ ಸ್ವಲ್ಪ ದೂರದಲ್ಲಿ ಉಳಿದುಕೊಂಡು ಅವರಿಗೆ ಹೇಳಿಕಳುಹಿಸಿದ್ದನು. ಯೇಸುವು ಸಮೀಸುತ್ತಿರುವನೆಂಬ ಸುದ್ದಿ ಬಂದಾಗ ಮಾರ್ಥಳು ಆತನನ್ನು ಸಂಧಿಸಲು ಹೊರಟಳು; ಆದರೆ ಮರಿಯಳು ದುಃಖಭಾರದಿಂದ ಸೊರಗಿದವಳಾಗಿ ಬಹುಶಃ "ಈ ರೋಗವು ಮರಣಕ್ಕಾಗಿ ಬಂದದ್ದಲ್ಲ; ಇದರಿಂದ ದೇವ–ಕುಮಾರನಿಗೆ ಮಹಿಮೆ ಉಂಟಾಗುವಂತೆ ದೇವರ ಮಹಿಮೆ–ಗೋಸ್ಕರ ಬಂದದ್ದು" ಎಂಬ ಯೇಸುವಿನ ಈ ಮಾತನ್ನು ಕೇಳಿ ನಿರಾಶಳಾಗಿ ಸೋತುಹೋದಂತೆ ಕಾಣುವವಳಾಗಿ ಮನೆಯಲ್ಲೇ ಕೂತುಕೊಂಡಿದ್ದು ಆತನನ್ನು ಸಂಧಿಸುವದಕ್ಕೆ ಹೋಗಿರಲಿಲ್ಲ. ಆಕೆಯ ನಡೆಯು ಹೀಗೆ ಹೇಳುವಂತ್ತಿತ್ತು: "ನಾವು ಕಡೇವರೆಗೂ ಬಹುವಾಗಿ ನಿರೀಕ್ಷಿಸಿದ್ದೆವು, ಸ್ವಾಮೀ, ಆದರೆ ಈಗ ಅತಿ ವಿಳಂಬ–ವಾಗಿರುವದು; ಅನುಕೂಲಕರವಾದ ಒಂದು ಅವಕಾಶವನ್ನು ನೀನು ಕಳೆದುಹೋಗಲು ಬಿಟ್ಟಿದ್ದೀ. ನಾವು ದುಃಖದ ನಡುವಿನಲ್ಲಿದ್ದೇವೆ. ನಮಗೆ ಈಗ ಏನು ಪ್ರಯೋಜನವಾಗಲು ಸಾಧ್ಯ? ಲಾಜರನು ಸತ್ತುಹೋಗಿರುವನು." ಕರ್ತನ ಬಳಿಗೆ ಬಂದಾಗ ಮಾರ್ಥಳ ಅಭಿನಂದನೆಯು ಇದಾಗಿತ್ತು: "ಸ್ವಾಮೀ, ನೀನು ಇಲ್ಲಿರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ; ಈಗಲಾದರೋ ದೇವರನ್ನು ಏನು ಬೇಡಿಕೊಳ್ಳುತ್ತೀಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು..." ಈ ಟೀಕೆಯಲ್ಲಿ ಸಲಹೆರೂಪವಾಗಿ ಕೆಲವೊಂದು ಗದರಿಕೆಯಿತ್ತು. ಅದು ಆಕೆಯು ಹೀಗೆ ಹೇಳಿದಂತ್ತಿತ್ತು; ನೀನು ಯಾಕೆ ಬರಲಿಲ್ಲ, ಆದರೆ ಈಗಲೂ ನಿನ್ನ ಮೇಲೆ ನನಗೆ ನಂಬಿಕೆ ಇದೆ, ನೀನು ಮೆಸ್ಸೀಯನೆಂಬುದನ್ನು ನಾನು ಗ್ರಹಿಸಿಕೊಂಡಿದ್ದೇನೆ. ನಮ್ಮ ಕರ್ತನ ಉತ್ತರವು ಇದಾಗಿತ್ತು:

## "ನಿನ್ನ ತಮ್ಮನು ಬದುಕುವನು"

ನಮ್ಮ ಕರ್ತನು–ನಿನ್ನ ತಮ್ಮನು ನಿದ್ರಿಸುತ್ತಿಲ್ಲವೆಂದಾಗಲೀ, ನಿನ್ನ ತಮ್ಮನು ಸತ್ತಿಲ್ಲವೆಂದಾಗಲಿ ಹೇಳದೆ ಆಕೆಯ ಮನಸ್ಸಿಗೆ ಪುನರುತ್ಥಾನವನ್ನು ಸೂಚಿಸಿದ್ದನೆಂಬುದನ್ನು ಗಮನಿಸಬೇಕು. ನಾವು ಆತನಿಗಿಂತಲೂ ವಿವೇಕಿಗಳೇ? ಆತನ ಶಿಷ್ಯರಾಗಿ ನಾವು ಆತನು ಹೇಳಿದ್ದಕ್ಕಿಂತಲೂ ಏನಾದರೂ ಭಿನ್ನವಾಗಿ ಅಥವಾ ಅದಕ್ಕೆ ವಿರೋಧವಾಗಿ ಬೋಧಿಸಬಹುದೇ? ಮಾರ್ಥಳ ಉತ್ತರವು ಆಕೆಯು ಆತನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಳೆಂದು ಹಾಗು ಆ ಸಮಯದಲ್ಲಿ ನಂಬುವವರಾದ ಯೆಹೂದ್ಯರೆಲ್ಲರೂ ಸಾಧಾರಣವಾಗಿ ಹೊಂದಿದ್ದ ಅಭಿಪ್ರಾಯವನ್ನೇ ಆಕೆಯೂ ಹೊಂದಿದ್ದಳೆಂದು ತೋರಿಸಿಕೊಡುತ್ತದೆ; ಅದೇನಂದರೆ, ಏಳು ಸಾವಿರ ವರುಷಗಳ ವಾರದ ಕಡೇ ದಿನ ಅಂದರೆ ಏಳನೇ ದಿನವು ಆರಂಭವಾಗುವಾಗ ನೀತಿವಂತರೂ ಹಾಗು ಅನೀತಿವಂತರಿಬ್ಬ–ರಿಗೂ ಪುನರುತ್ಥಾನವಾಗುವದೆಂಬ ನಿರೀಕ್ಷೆಯನ್ನು ಆಕೆಯು ಹೊಂದಿದ್ದಳು. ನಮ್ಮ ಕರ್ತನು ಆಕೆಯ ಅಭಿಪ್ರಾಯವನ್ನು ವಿರೋಧಿಸಿರಲಿಲ್ಲ, ಆದರೆ ಆಕೆ ನಿಧಾನವಾಗಿ ಆ ಸಂದರ್ಭದಲ್ಲಿ ತಾನು ಏನು ಮಾಡಲು ಬಯಸಿರುವನೆಂಬುದನ್ನು ಗ್ರಹಿಸಿಕೊಳ್ಳುವಂತೆ ಕರ್ತನು ಆಕೆಯನ್ನು ನಡೆಸಿದ್ದನು. ಮತ್ತು ಹೀಗಾಗಿ ನಿಗದಿತವಾದ ಕಾಲದಲ್ಲಿ ಸತ್ತವರೆಲ್ಲರನ್ನು ಎಬ್ಬಿಸುವಂಥ ಪುನರುತ್ಥಾನದ ಶಕ್ತಿಯು ತನ್ನಲ್ಲಿ ಉಂಟೆಂಬುದನ್ನು ವಿವರಿಸಿ ಹೀಗೆ ಹೇಳಿದ್ದನು–"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ." ತನ್ನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನೂ ಅವನು ಸತ್ತರೂ ಬದುಕುವನು ಹಾಗು ಬದುಕುತ್ತಾ ನಂಬುವವನು ಎಂದಿಗೂ ಸಾಯುವದಿಲ್ಲ. ಮಾರ್ಥಳಿಗೆ ತನ್ನಲ್ಲಿರುವ ಶಕ್ತಿಯ ಬಗ್ಗೆ ಹಾಗೂ ಮುಂದೆ ನಿರ್ವಹಿಸುವ ಕಾರ್ಯದ ವಿಷಯವಾದ ಈ ಅಭಿಪ್ರಾಯವನ್ನು ನಂಬುವಳೋ ಎಂಬುದನ್ನು ವಿಚಾರಿಸಿದ್ದನು. ತನಗೆ ನಂಬಿಕೆ ಇರುವದಾಗಿಯೂ ಮತ್ತು ಆತನು ಬರಬೇಕಾದ ದೇವಕುಮಾರನಾದ ಮೆಸ್ಸೀಯನೆಂದು ಅಂಗೀಕರಿಸಿರುವದಾಗಿ ಆಕೆಯು ಉತ್ತರಿಸಿದ್ದಳು. ಆನಂತರ ಆಕೆಯು ತನ್ನ ಸಹೋದರಿಯಾದ ಮರಿಯಳ ಬಳಿಗೆ ಗುಪ್ತವಾಗಿ ತೆರಳಿ–"ಗುರುವು ಬಂದಿದ್ದಾನೆ, ನಿನ್ನನ್ನು ಕರೆಯುತ್ತಾನೆ" ಎಂದು ಹೇಳಿದಳು.

ತಮ್ಮ ವಿಷಯದಲ್ಲಿ ನಮ್ಮ ಕರ್ತನು ತೋರಿದಂಥ ಉದಾಸೀನತೆ ಹಾಗೂ ಅಜಾಗರೂಕತೆಯನ್ನು ವಿರೋಧಿಸುವದರ ಬಗ್ಗೆ ಮರಿಯಳು ಎಂಥದೇ ಮನೋಭಾವವುಳ್ಳವಳಾದರೂ ಗುರುವು ತನ್ನನ್ನು ಕರೆಯುತ್ತಾನೆಂಬುದನ್ನು ಕೇಳಿದಾಗ ಇವುಗಳೆಲ್ಲವೂ ಆಗ ಕಣ್ಮರೆಯಾಗಿದ್ದವು. ಆಕೆಯು ಆತನಿದ್ದ ಸ್ಥಳಕ್ಕೆ ಹೋದಳು, ಅದು ಸಮಾಧಿಗೆ ಹೋಗುವ ಮಾರ್ಗದಲ್ಲಿತ್ತೆಂಬುದು ಸ್ಪಷ್ಟವಾಗಿತ್ತು; ಯಾಕೆಂದರೆ ಮನೆಯಲ್ಲಿ ಆಕೆಯೊಡನೆ ಶೋಕಿಸುತ್ತಿದ್ದ ಯೆಹೂದ್ಯರು ಅಕೆಯನ್ನು ಹಿಂಬಾಲಿಸಿ ಹೋಗಿ ಹೀಗೆ ಹೇಳಿದ್ದರು–"ಈಕೆ ಬಹುಶಃ ಅಳುವದಕ್ಕಾಗಿ ಸಮಾಧಿಗೆ ಹೋಗುತ್ತಾಳೆ." ಮತ್ತು ಆನಂತರದಲ್ಲಿ ನಮ್ಮ ಕರ್ತನು ಹೀಗೆ, "ಆತನನ್ನು ಎಲ್ಲಿ ಇಟ್ಟಿದ್ದೀರಿ?" ಎಂದು ವಿಚಾರಿಸಿದಾಗ ಆತನಿಗೆ ಅದು ತಿಳಿದಿರಲಿಲ್ಲವೆಂದು ನಾವು ತೆಗೆದುಕೊಳ್ಳುವ ಹಾಗಿಲ್ಲ, ಅದರೆ ವಾಸ್ತವದಲ್ಲಿ ಅದು–ನಾವು ಈಗ ಸಮಾಧಿಗೆ ಹೋಗೋಣವೇ? ದಾರಿ ನಡೆಸಿರಿ ಎಂದು ಸೌಜನ್ಯದಿಂದ ಆತನು ಹೇಳಿದ ಬಗೆಯಾಗಿತ್ತು. ನಿಜವಾಗಿಯೂ ಯಾವಾತನು ಅತ್ತಿಮರದ ಕೆಳಗೆ ನತಾನಯೇಲನನ್ನು ನೋಡಿದ್ದನೋ ಆತನಿಗೆ ಲಾಜರನು ಸತ್ತು ನಾಲ್ಕು ದಿನಗಳಾಗಿತ್ತೆಂಬದು ತಿಳಿದದ್ದು ಮಾತ್ರವಲ್ಲದೆ ಆತನನ್ನು ಎಲ್ಲಿ ಹೂಣಲಾಗಿರುವದೆಂಬದೂ ಸಹ ತಿಳಿದಿತ್ತು. "ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ

ಅವಶ್ಯವಿರಲಿಲ್ಲ" ಹೀಗಾಗಿ ಆತನಿಗೆ ಖಂಡಿತವಾಗಿಯೂ ಅಲ್ಪ-ವಾದ ಸಂಗತಿಗಳನ್ನೂ ಬಹು ಸುಲಭವಾಗಿ ಗ್ರಹಿಸಿಕೊಳ್ಳುವದು ತಿಳಿದಿತ್ತು.

ಮರಿಯಳು ಕರ್ತನನ್ನು ಕಂಡಾಗ ಆಕೆಯ ಮುನಿಸೆಲ್ಲವೂ ಪಲಾಯನ ಮಾಡಿತ್ತು: ಆಕೆಯು ಆತನ ಪಾದಗಳಿಗೆ ಬಿದ್ದು ಅದನ್ನು ಅಪ್ಪಿಕೊಂಡು ತನ್ನ ಕಣ್ಣೀರಿನೊಡನೆ ಕೇವಲ ನುಡಿದದ್ದು, "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ." ಆ ಸನ್ನಿವೇಶವು ಮನಃಕಲಕುವಂತ್ತಿತ್ತು. ಹೇಗಂದರೆ ನಮ್ಮ ಕರ್ತನ ಪ್ರಿಯ ಮಿತ್ರಳು ಕಣ್ಣೀರಿಡುತ್ತಾ ಆತನ ಪಾದಗಳ ಬಳಿಯಲ್ಲಿದ್ದಳು, ಅನೇಕ ಮಂದಿ ಯೆಹೂದ್ಯರೂ ಆಕೆಯೊಡನೆ ಅಳುತ್ತಿದ್ದರು, ಇಲ್ಲವೇ ಗ್ರೀಕ್ ಭಾಷಾಮೂಲದ ಪ್ರಕಾರ, ಗೋಳಾಡುತ್ತಿದ್ದರು. ನಮ್ಮ ಕರ್ತನ ಮೇಲೆ ಇದು ಎಂಥಾ ಪರಿಣಾಮ ಬೀರಿದ್ದಾಗಿತ್ತು? ಆತನು ತಣ್ಣಗಿದ್ದನೇ, ಕಠಿಣನಾಗಿದ್ದನೇ, ಬೆದರಿಸಿದ್ದನೇ? ಇಲ್ಲ! ಬರೆದಿರುವದು ನಿಜವಾಗಿರುವಂತೆ, ಆತನು "ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ." (ಇಬ್ರೀಯ 4:15) ಆತನು ಸಂಪೂರ್ಣವಾಗಿ ಅನುಕಂಪವುಳ್ಳವನಾಗಿದ್ದನು, ಆತನು ಮರಣವೆಂಬುದರ ನಿಜವಾದ ಅರ್ಥವನ್ನು ಸಂಪೂರ್ಣವಾಗಿ ಅರಿತಿದ್ದನು. ಅಂದರೆ ಅದು ನಮ್ಮ ಮನುಕಲದ ಮೇಲಿರುವ ಒಂದು ಶಾಪ, ಒಂದು ಭಯಾನಕವಾದ ಶಾಪವೆಂಬುದನ್ನು ಆತನು ಅರಿತಿದ್ದನು. ಆತನು ಮರಿಯಳಿಗೆ ಲಾಜರನು ಪರಲೋಕದಲ್ಲಿ ಇದ್ದನೆಂಬಂತೆ ಭರವಸೆಯಾಗಿ ಏನನ್ನೂ ಹೇಳಿರಲಿಲ್ಲ, ಯಾಕೆಂದರೆ ಆತನು ಸತ್ಯವನ್ನೇ ಹೇಳಿದ್ದನು. ಬೇರೊಂದು ಸಂದರ್ಭದಲ್ಲಿ ಆತನು ಸಾರಿ ಹೇಳಿದ್ದೇನಂದರೆ, "ಪರಲೋಕದಿಂದ ಇಳಿದು ಬಂದವನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವನಲ್ಲ." – ಯೋಹಾನ 3:13

ಬದಲಾಗಿ ಮಾನವ ಕುಲದ ಮೇಲಿನ ನೋವುನರಳಾಟ-ದೊಳಗೆ ಗಾಢವಾಗಿ ಸೇರಿದವನಾಗಿ ನಮ್ಮ ಕರ್ತನು ಅತ್ತಿದ್ದನು. ಇದನ್ನು ಅಪೊಸ್ತಲನು ಹೀಗೆ ಹೇಳಿರುವನು: "ಜಗತ್ತೆಲ್ಲಾ ಇಂದಿನ ವರೆಗೂ ನರಳುತ್ತಾ ಇರುವದು." "ಯೇಸು ಅತ್ತನು" ಎಂಬ ಮಾತು ಸತ್ಯವೇದದಲ್ಲೇ ಅತಿ ಚಿಕ್ಕ ವಾಕ್ಯವಾಗಿದ್ದು, ನಮ್ಮ ಕರ್ತನು ಅನುತಾಪವುಳ್ಳವನು, ಆತನು ನಮ್ಮ ಪ್ರಕೃತಿಯನ್ನು ಬಲ್ಲನು, ನಾವು ಧೂಳಿಯಾಗಿದ್ದೇವೆಂಬುದನ್ನು ಆತನು ನೆನಪುಮಾಡಿ-ಕೊಳ್ಳುತ್ತಾನೆ ಎಂಬ ಸಮೃದ್ಧವಾದ ಆಶ್ವಾಸನೆಯನ್ನು ನಮಗೆ ತಂದುಕೊಡುತ್ತದೆ; ನಾವು ಆತನವರಾಗಿದ್ದಲ್ಲಿ ಹಾಗು ಈ ಆಶ್ವಾಸನೆಗಳನ್ನು ಸೂಕ್ತವಾಗಿ ಬಳಸಿಕೊಂಡಲ್ಲಿ, ನಮಗುಂಟಾ-ಗುವ ಕಷ್ಟಪರಿಶೋಧನೆಗಳು ನಮಗೆ ಅನುಕುಲಕರವಾಗಿ ಪರಿಣಮಿಸುತ್ತವೆ ಎಂಬ ಹೇಳಿಕೆಯಲ್ಲಿ ಆತನು ವಾಗ್ದಾನ ಮಾಡಿರುವಂಥ ಎಲ್ಲವುಗಳ ಬೆಲೆಯನ್ನು ತಾನು ಅರಿತಿರುವ-ನೆಂಬದು ಆತನು ನೀಡಿರುವ ಅತ್ಯುತ್ತಮವಾದ ಭರವಸೆಗಳಲ್ಲಿ ಒಂದಾಗಿ ಪರಿಣಮಿಸುವದು. ಇತರರು ಅಳುತ್ತಿದ್ದರು ಎಂಬುದರ ಸಂಬಂಧವಾಗಿ ಗ್ರೀಕ್ ಮೂಲದಲ್ಲಿ ಬಳಸಲಾಗಿರುವ ಶಬ್ದವು ಗೋಳಾಡುತ್ತಿದ್ದರು ಎನ್ನುವದನ್ನು ಸೂಚಿಸುತ್ತದಾದರೂ ನಮ್ಮ ಕರ್ತನು ಅತ್ತನು ಎಂಬುದನ್ನು ಉಲ್ಲೇಖಿಸುವ ಶಬ್ದವು ಹೀಗಿರುವದಲ್ಲವೆಂಬುದನ್ನು ಗಮನಿಸುವದು ಸೂಕ್ತವಾಗಿರುವದು; ಆತನು ಕಣ್ಣೀರನ್ನು ಬಿಟ್ಟಿದ್ದನು, ಆದರೆ ಅಳುವಿನ ಧ್ವನಿಯನ್ನು ಎತ್ತಿರಲಿಲ್ಲ. ಆತನು ಆತ್ಮದಲ್ಲಿ ನೊಂದುಕೊಂಡು ಸಂಕಟದಿಂದ ನಿಟ್ಟುಸಿರು ಬಿಡುತ್ತಾ ಆತನ ಮಿತ್ರರ ದುಃಖದಲ್ಲಿ ಸಂಪೂರ್ಣವಾಗಿ ಸೇರಿದವನಾಗಿದ್ದನು. ಅಳುವವರ ಸಂಗಡ ಅಳಿರಿ ಸಂತೋಷ ಪಡುವವರ ಸಂಗಡ ಸಂತೋಷಪಡಿರಿ ಎಂಬದನ್ನು ಸೂಕ್ತವಾಗಿ ಅನುಸರಿಸಲು ಆತನ ಹಿಂಬಾಲಕರಾದ ನಮ್ಮೆಲ್ಲರಿಗೆ ಇದು ಒಂದು ಸರಿಯಾದ ಪಾಠವಾಗಿರುವದಲ್ಲವೇ?

ಯೇಸುವಿನ ಜೊತೆಯಲ್ಲಿದ್ದ ಯೆಹೂದ್ಯರು ಇದನ್ನು ಗಮನಿಸಿ ಆತನ ಅನುಕಂಪದ ಬಗ್ಗೆ ಹೀಗೆ ವ್ಯಾಖ್ಯಾನಿಸಿದ್ದರು, "ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು.." ಆದರೆ ಇತರರು ಆತನಿಗೆ ಟೀಕೆಮಾಡಿ ಹೀಗೆ ಹೇಳಿದರು: ಈತನು ಅದ್ಭುತವನ್ನು ಮಾಡುವವನು. ಅವನ ಮೇಲೆ ಇವನಿಗೆ ನಿಜವಾದ ಪ್ರೀತಿ ಇದ್ದಿದ್ದರೆ ತನ್ನ ಮಿತ್ರನಿಗೆ ಸಹಾಯಮಾಡದೆ ಇರಲು ಸಾಧ್ಯವೇ?

ಹೀಗೆ ಅಸ್ವಸ್ಥತೆ ದುಃಖ ಸಾವು ಸಂಭವಿಸಲು ಬಿಡಲಾಗಿರುವದಕ್ಕೆ ಕರ್ತನನ್ನು ಟೀಕಿಸುವ ಪ್ರವೃತ್ತಿಯುಳ್ಳ ಕೆಲವರು ಈ ದಿನದಲ್ಲೂ ಇರುವರು; ಅವರು ವಿಚಾರಿಸುವದೇನಂದರೆ ದೇವರ ಶಕ್ತಿಯಲ್ಲಿ ಕೊರತೆಯಿರುವದೇ ಅಥವಾ ಆತನು ಇವುಗಳನ್ನೆಲ್ಲಾ ತೆಗೆದುಹಾಕಲು, ಮಾನವ ಕುಲವನ್ನು ಬಾಧಿಸುತ್ತಿರುವ ಈ ಪ್ರತಿಕೂಲ ಪ್ರಭಾವಗಳನ್ನು ತಡೆಹಿಡಿಯಲು ದೇವರಿಗೆ ಇಚ್ಛೆಯ ಕೊರತೆಯಿರುವದೇ ಎಂಬುದು. ನಂಬಿಕೆಯೆಂಬ ಭಾಷೆಯು ನುಡಿಯುವದೇನಂದರೆ–

ದುರ್ಬಲ ಗ್ರಹಣ ಶಕ್ತಿಯಿಂದ ದೇವರ ಬಗ್ಗೆ
ತೀರ್ಪುಮಾಡಬೇಡಿರಿ,
ಆದರೆ ಆತನ ಕೃಪೆಗಾಗಿ ಆತನಲ್ಲಿ ಭರವಸವಿಡಿರಿ;
ಹುಬ್ಬನ್ನೇರಿಸುವಂತೆ ಮಾಡುವ ಒಂದು ದೇವಕೃಪೆಯ ಹಿಂದೆ
ಒಂದು ನಗುಮುಖವನ್ನು ಆತನು ಅಡಗಿಸಿರುವನು.

ಸಮಾಧಿಯು ಒಂದು ಗವಿಯಾಗಿದ್ದು ಅದರ ಬಾಯಿಗೆ ಒಂದು ಕಲ್ಲನ್ನು ಮುಚ್ಚಲಾಗಿತ್ತು ಮತ್ತು ಯೇಸುವು ಆ ಕಲ್ಲನ್ನು ಉರುಳಿಸುವಂತೆ ಅಪ್ಪಣೆಮಾಡಿದ್ದನು. ಸತ್ತವನನ್ನು ಎಬ್ಬಿಸಲು ಸಾಧ್ಯವಿದ್ದಂಥ ಆ ಶಕ್ತಿಗೆ ಕಲ್ಲನ್ನು ಸಹ ಉರುಳಿಸುವಂತೆ ಮಾಡುವ ಶಕ್ತಿಯಿರುವದು ಸಹಜವೇ ಆದರೆ ಮಾನವ ಸಾಧನದ ಮೂಲಕವಾಗಿ ನಡೆಸಬಹುದಾದ ಯಾವದೇ ಕಾರ್ಯಕ್ಕೆ ಅದ್ಭುತ ಶಕ್ತಿಯನ್ನು ಬಳಸದಿರುವದು ನಮ್ಮ ಕರ್ತನ ಒಂದು ನಿಯಮವಾಗಿತ್ತೆಂದು ತೋರುತ್ತದೆ. ನಾವು ಈ ಪಾಠವನ್ನು ಜೀವಿತದ ಸಂಗತಿಗಳ ವಿಷಯವಾಗಿ ಪ್ರಯೋಜನಕಾರಿಯಾಗಿ ಅನ್ವಯ ಮಾಡಿಕೊಳ್ಳಬಹುದು. ಮತ್ತು ಇದರ ಅನುಸಾರವಾಗಿ ನಾವು ನಮ್ಮ ದುಃಖ ಸಂಕಷ್ಟ ದಿಗ್ಭ್ರಾಂತಿಗಳನ್ನು ತೆಗೆದುಕೊಂಡು ನಮ್ಮ ಕರ್ತನ ಬಳಿಗೆ ಬಂದಾಗ ನಮಗೆ ಸಾಧ್ಯವಿರುವ ಸಂಗತಿಗಳ ಬಗ್ಗೆ ಆತನು ವಿಶೇಷವಾಗಿ ಮಧ್ಯಪ್ರವೇಶಿಸಿ ಅವುಗಳನ್ನು ಆಶೀರ್ವಾದಕರವಾಗುವಂತೆ ಮಾರ್ಪಡಿಸುವದನ್ನು ನಿರೀಕ್ಷಿಸ ಬಾರದು. ಹೀಗೆ ಮಾಡುವದರಿಂದ ನಿಜವಾಗಿಯೂ ನಾವು ಆಶೀರ್ವಾದವನ್ನು ಕಳಕೊಳ್ಳುವದರಲ್ಲಿ ಸಂದೇಹವಿಲ್ಲ.

ಸಮಾಧಿಯ ಬಾಯಿಗೆ ಆನಿಸಿದ ಕಲ್ಲನ್ನು ಉರುಳಿಸಿದ ಮನುಷ್ಯರಿಗೆ ನಂತರದಲ್ಲಿ ಆ ಸಂಗತಿಯನ್ನು ಅವರು ಆಲೋಚಿಸಿಕೊಳ್ಳುವಾಗ ಇಲ್ಲವೇ ಇತರರಿಗೆ ತಾವೇ ಆ ಕಲ್ಲನ್ನು ಉರುಳಿಸಿದೆವೆಂಬುದನ್ನು ತಿಳಿಸಿದಾಗ ಆ ಸಂಬಂಧದಲ್ಲಿ ಒಂದು ಆಶೀರ್ವಾದ ಹೊಂದಿದ್ದರೆನ್ನುವದರಲ್ಲಿ ಯಾರು ತಾನೇ ಸಂದೇಹ ಪಡಲು ಸಾಧ್ಯ! ಆ ಅದ್ಭುತಕಾರ್ಯದ ಮಹತ್ವವನ್ನು ಮನದಟ್ಟು ಮಾಡಿಕೊಳ್ಳಲು ಸಹಾಯ ಮಾಡಿತ್ತೆಂಬುದನ್ನು ಯಾರಿಗೆ ಸಂಶಯಪಡಲು ಸಾಧ್ಯ! ಹೀಗಿರಲು ನಮಗೆ ಸಾಧ್ಯವಿರು-ವದನ್ನೆಲ್ಲಾ ನಾವು ಮಾಡಿದ ನಂತರ ಯಾವ ಸಂಗತಿಗಳನ್ನು ನೆರವೇರಿಸಲು ನಮ್ಮ ಹಸ್ತವು ಬಹು ಸಂಕುಚಿತವಾಗಿರುದೋ ಆ ಸಂಗತಿಗಳ ಬಗ್ಗೆ ಕರ್ತನ ಸಹಾಯಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿರೋಣ.

## "ಅವನು ಸತ್ತು ನಾಲ್ಕು ದಿವಸವಾಯಿತು"

ಈಗಲಾದರೋ ನೀನು ದೇವರನ್ನು ಏನು ಬೇಡಿಕೊಳ್ಳು-ವೆಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು ಎಂದು ಸ್ವಲ್ಪ ಸಮಯದ ಹಿಂದೆ ಹೇಳಿದ ಮಾರ್ಥಳೇ ಸಮಾಧಿಯ ಬಾಯಿಗೆ ಹಾಕಿದ ಕಲ್ಲನ್ನು ಉರುಳಿಸಲು ಪ್ರತಿರೋಧಿಸುವವಳಾಗಿ ಹೀಗೆ ಹೇಳಿದಳು, "ಸ್ವಾಮೀ, ಅವನು ಸತ್ತು ನಾಲ್ಕು ದಿವಸವಾಯಿತು, ಈಗ ನಾತ ಹುಟ್ಟಿದೆ.." ಯಾಯಿರನ ಮಗಳನ್ನು ಹಾಗು ನಾಯಿನ್‌ನ ವಿಧವೆಯ ಮಗನನ್ನು ಕರ್ತನು ಎಬ್ಬಿಸಿದ್ದನ್ನು ಆಕೆಗೆ ತಿಳಿದಿರುವ ಸಂಭವವಿತ್ತು, ಆದರೆ ಆ ಸಂಗತಿಗಳಲ್ಲಿ ಜೀವಚೈತನ್ಯವು ನಿಂತುಹೋಗಿ ಒಂದು ಕೊಂಚ ಕಾಲವೇ ಆಗಿತ್ತು. ಈ ಸಂಗತಿಯಲ್ಲಿ ಕೊಳೆಯುವಿಕೆಯು ಆರಂಭವಾದ ನಂತರ ಕಲ್ಪಿಸಿಕೊಳ್ಳ ಬಲ್ಲ ಯಾವ ಶಕ್ತಿಯಾದರೂ ಮರಣಾವಸ್ಥೆಯಿಂದ ಪುನಃ ಹಿಂದಿರುಗಿ ಬರಲು ಸಾಧ್ಯವೆಂಬುದನ್ನು ಆಕೆಗೆ ಇಲ್ಲವೇ ಇತರರಿಗೆ ನಿರೀಕ್ಷಿಸಲಾಗುತ್ತಿರಲಿಲ್ಲ. ನಮ್ಮ ಕರ್ತನು ನಿಸ್ಸಂದೇಹವಾಗಿ ಈ ದೃಷ್ಟಿಯಿಂದಲೇ ಮುಂದಾಗಿಯೇ ಹೀಗೆ ಹೇಳಿದ್ದನು: "ಮತ್ತು ನಾನು ಅಲ್ಲಿ ಇಲ್ಲದೆ ಇದ್ದದ್ದಕ್ಕೆ ನಿಮ್ಮ ನಿಮಿತ್ತವಾಗಿ ಸಂತೋಷಪಡುತ್ತೇನೆ, ಯಾಕಂದರೆ ಅದರಿಂದ ನೀವು ನಂಬುವದಕ್ಕೆ ಮಾರ್ಗವಾಯಿತು;" ಇದು ಆತನ ಪ್ರಿಯ ಮಿತ್ರರಾಗಿದ್ದ ಮಾರ್ಥಳು ಮತ್ತು ಮರಿಯಳಿಗೆ ಮಾತ್ರವಲ್ಲದೆ ಆತನ ಪ್ರಿಯ ಶಿಷ್ಯರಿಗೂ ಅಲ್ಲದೆ ಇದಕ್ಕೂ ಹೆಚ್ಚಾಗಿ, ಆತನ ಮಾತಿನ ಮೂಲಕವಾಗಿ ನಂಬುವವರೆಲ್ಲರಿಗೂ ಒಂದು ವಿಶೇಷವಾದ ಪಾಠವಾಗುವದರಲ್ಲಿತ್ತು. ಅದು ಬಹು ಆಶ್ಚರ್ಯಕರವಾದ ಒಂದು ಭಾರೀ ಅದ್ಭುತಕಾರ್ಯವಾಗಿತ್ತು.

ಲಾಜರನನ್ನು ಹೊರಗೆ ಬರಲು ಆಜ್ಞಾಪಿಸುವದಕ್ಕೆ ಮೊದಲು ನಮ್ಮ ಕರ್ತನು ತನ್ನ ಶಿಷ್ಯರ ಎದುರಿನಲ್ಲಿ ಮತ್ತು ಶೋಖಿತ ಜನಸಮೂಹದ ಎದುರಿನಲ್ಲಿ ಎಲ್ಲರಿಗೂ ಕೇಳಿಸುವಂತೆ ಪ್ರಾರ್ಥಿಸಿದ್ದನು. ಇಲ್ಲಿ ನಮ್ಮ ಕರ್ತನು ಬಹಿರಂಗವಾಗಿ ಮಾಡುವ ಪ್ರಾರ್ಥನೆಗೆ ಮನ್ನಣೆ ನೀಡಿದ್ದಾನೆ. ಫರಿಸಾಯರೂ ಶಾಸ್ತ್ರಿಗಳೂ ಬೀದಿಯ ಮೂಲೆಗಳಲ್ಲಿ ಪ್ರಾರ್ಥಿಸುವದಕ್ಕೆ ತಾನು ಆಕ್ಷೇಪಿಸಿದ್ದು ಅವರು ಮಾಡುತ್ತಿದ್ದ ಸಮಯ ಮತ್ತು ಸ್ಥಳ ಮುಂತಾದವುಗಳು ಸೂಕ್ತವಾಗಿರಲಿಲ್ಲ; ಏಕೆಂದರೆ ಅವರು ಜನರು ನೋಡಲಿ ಎಂದು ಹಾಗೆ ಮಾಡುತ್ತಿದ್ದರೆಂಬುದನ್ನು ತೋರಿಸಿಕೊಡುವದಕ್ಕಾಗಿತ್ತು. ಆದರೆ ತನ್ನ ವಿಷಯದಲ್ಲಿ ತಾನು ಈ ಅದ್ಭುತಕಾರ್ಯವನ್ನು ಮಾಡಿದ್ದು ತನ್ನ ಸ್ವಂತ ಶಕ್ತಿಯಿಂದಲ್ಲ ಆದರೆ ತಂದೆಯ ಶಕ್ತಿಯ ಮೂಲಕವಾಗಿ ಅಂದರೆ ದೇವರ ಹಸ್ತವಾಗಿ ಎಂಬುದನ್ನು ತನ್ನ ಸುತ್ತಲೂ ನಿಂತಿದ್ದವರೆಲ್ಲರೂ ತಿಳುಕೊಳ್ಳುವಂತೆ ತಂದೆಯ ಶಕ್ತಿಯನ್ನು ಒಪ್ಪಿಕೊಂಡವನಾಗಿ ಹೀಗೆ ಮಾಡಿದ್ದನು.

"ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವ-ನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೇ ನನ್ನನ್ನು ಕಳುಹಿಸಿಕೊಟ್ಟಿ ಎಂದು ಸುತ್ತಲೂ ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದೆ..." ಈ ಸಂಕ್ಷೇಪವಾದ ಪ್ರಾರ್ಥನೆಯ ನಂತರ ಆತನು ದೊಡ್ಡ ಶಬ್ಧದಿಂದ ಕೂಗಿ ಅಥವಾ ಗುಪ್ತವಾಗಿ ಗೊಣಗುಟ್ಟದೇ, ಮಂತ್ರೋಚ್ಚಾರ ಮಾಡದೇ, ಕೈಚಳಕ ತೋರಿಸದೇ, ಇವುಗಳಿಗೆ ಪ್ರತಿಯಾಗಿ, ಗಟ್ಟಿಯಾದ ಧ್ವನಿಯಿಂದ ಆಜ್ಞಾಪಿಸುತ್ತಾ ಹೀಗೆ ಹೇಳಿದನು: "ಲಾಜರನೇ, ಹೊರಗೆ ಬಾ." ಈ ಅದ್ಭುತಕಾರ್ಯವು ಹಲವು ವಿಧದಲ್ಲಿ ನಮ್ಮ ಕರ್ತನು ಮಹಿಮೆಯುಳ್ಳ ತನ್ನ ಸಭೆಯ ಜೊತೆಗೂಡಿ ಮಾಡುವ ವೈಭವಯುತವಾದ ಮುಂದಿನ ಕಾರ್ಯಗಳಿಗೆ ಮುಂಛಾಯೆಗಳಾಗಿದ್ದವು; ಅದೇನಂದರೆ ತಮ್ಮ ಸಮಾಧಿಗಳಲ್ಲಿರುವರೆಲ್ಲರಿಗೆ ಮೇಲಣಿಂದ ಬರುವ ಸಂದೇಶ-ವೇನಂದರೆ, "ಹೊರಗೆ ಬಾ" (ಯೋಹಾನ 5:28) ಆಗ ಲಾಜರನು ತನ್ನ ಕೈಕಾಲುಗಳನ್ನು ನಾರುಮಡಿ ಬಟ್ಟೆಯಿಂದ ಸುತ್ತಲ್ಪಟ್ಟವನಾಗಿ ಹೊರಗೆ ಬಂದನು. ಅಲ್ಲಿ ಸುತ್ತಲೂ ನಿಂತಿದ್ದವರಿಗಾದ ವಿಸ್ಮಯವನ್ನು ನಾವು ವರ್ಣಿಸುವದಕ್ಕಿಂತಲೂ ಉತ್ತಮವಾಗಿ ಕಲ್ಪಿಸಿಕೊಳ್ಳಲು ಸಾಧ್ಯ. "ಬಿಚ್ಚಿರಿ ಅವನು ಹೋಗಲಿ" ಎಂದು ಹೇಳುವದರ ಮೂಲಕವಾಗಿ ಅವರೆಲ್ಲರೂ ತಮಗೆ ದೊರೆಯುವ ಸೌಭಾಗ್ಯದ ವಿಷಯವಾಗಿ ಅರಿತುಕೊಳ್ಳುವಂತೆ ಮಾಡುವದು ಯೇಸುವಿಗೆ ಅಗತ್ಯವಾಗಿತ್ತು. ಯಾಕೆಂದರೆ ಆತನನ್ನು ಹೂಣಿಡುವಾಗ ಅವನ ದವಡೆಯು ಕಟ್ಟಲ್ಪಟ್ಟಿತ್ತು ಆತನ ಕೈಕಾಲುಗಳನ್ನು ಬಟ್ಟೆಯಿಂದ ಸುತ್ತಲಾಗಿತ್ತು. ಆ ಅದ್ಭುತಕಾರ್ಯದ ಸಮಯವನ್ನು ಚೆನ್ನಾಗಿ ನಿಗಧಿಮಾಡಲಾಗಿತ್ತು, ಅದು ಆ ದುಃಖಿತರಾಗಿದ್ದ ಆ ಸಹೋದರಿಯರ ಪ್ರಯೋಜನಾರ್ಥವಾಗಿ ಮಾತ್ರವಲ್ಲದೆ ಯೆಹೂದ್ಯರಾದ ಅವರ ಮಿತ್ರರೆಲ್ಲರ ಪ್ರಯೋಜನಾರ್ಥವಾಗಿಯೂ ಸಹ ಆಗಿತ್ತು, ಅವರಲ್ಲಿ ಅನೇಕರು ಆ ಅದ್ಭುತವನ್ನು ಕಂಡು ಆತನನ್ನು ನಂಬುವರಾಗಿದ್ದರು; ಅದು ಅಪೋಸ್ತಲರ ಪ್ರಯೋಜನಾರ್ಥವಾಗಿಯೂ ಸಹ ಆಗಿತ್ತು. ಹೇಗಂದರೆ, ಆ ಮೂಲಕವಾಗಿ ಅವರನ್ನು ನಮ್ಮ ಕರ್ತನ ಶಿಲುಬೆಯ ಮರಣದ ಸಂಬಂಧವಾಗಿ ಅವರ ಮೇಲೆ ಬರಲಿರುವ ಪರೀಕ್ಷೆಗೆ ಅವರನ್ನು ಉತ್ತಮ ರೀತಿಯಲ್ಲಿ ಸಿದ್ಧಪಡಿಸುವ ಸಲುವಾಗಿಯೂ ಸಹ ಆಗಿತ್ತು.

ಈ ಮಧ್ಯೆ ಅದನ್ನು ನೋಡಿದವರಲ್ಲಿ ಕೆಲವರು ಫರಿಸಾಯರ ಬಳಿಗೆ ಹೋಗಿ ಅದನ್ನು ಹೇಳಿದ್ದರು. ಪರಿಣಾಮವಾಗಿ ಅವರು ಎಲ್ಲಕ್ಕಿಂತಲೂ ಮಿಗಿಲಾಗಿ ನಮ್ಮ ಕರ್ತನು ಸಾಯಲೇಬೇಕೆಂಬ ನಿರ್ಧಾರಕ್ಕೆ ಬಂದಿದ್ದರು; ಅದು ಆತನು ಕೆಟ್ಟಕಾರ್ಯವನ್ನು

ಮಾಡುವನೆಂಬ ಕಾರಣಕ್ಕಾಗಿರಲಿಲ್ಲ, ಅವರು ಆತನನ್ನು ಒಬ್ಬ ಕೆಟ್ಟಮನುಷ್ಯನೆಂದು ನಂಬಿದ್ದರಿಂದಲೂ ಅಲ್ಲ, ಆದರೆ ಅವರು ಸಂಪೂರ್ಣವಾಗಿ ತಮ್ಮ ಜನಾಂಗದವರ ವಿಷಯವಾಗಿ ತಮ್ಮದೇ ಆದ ಯೋಜನೆ ಹಾಗು ಉದ್ದೇಶಗಳಿಂದ ಬಹುವಾಗಿ ಆವರಿಸಿಕೊಳ್ಳಲ್ಪಟ್ಟ ಕಾರಣಕ್ಕಾಗಿತ್ತು. ಅವರ ವಾದವೇನಾಗಿತ್ತೆಂದರೆ ಯೇಸುವು ತನ್ನ ಕಾರ್ಯದಲ್ಲಿ ಮುಂದುವರೆದಲ್ಲಿ ಜನಸಮೂಹವೆಲ್ಲವೂ ಆತನ ಬಳಿಗೆ ಸೇರಿಕೊಳ್ಳಲು ಸಿದ್ಧವಾಗ ತೊಡಗುವ ಪರಿಣಾಮವಾಗಿ ಪರಿಸ್ಥಿತಿಯು ಕೈಮೀರಿ ತಮ್ಮ ಜನಾಂಗ ಮತ್ತು ಅದರ ಧಾರ್ಮಿಕ ಸಂಗತಿಗಳನ್ನು ನಿಯಂತ್ರಿಸುವ ವಿಷಯವಾಗಿ ಹೆಚ್ಚಾದ ಸ್ವಾತಂತ್ರ್ಯವನ್ನು ನೀಡಿದ್ದ ರೋಮ್ ಸರಕಾರದವರು ಬೇಗನೆ ಅವುಗಳನ್ನು ಸಂಪೂರ್ಣವಾಗಿ ತೆಗೆದುಹಾಕಿ ಹೀಗೆ ಅವರು ತಿರುಗಿ ಬೀಳುವವರೆಂದು ಅವರ ಅಧಿಕಾರವನ್ನು ಸಂಪೂರ್ಣವಾಗಿ ರದ್ದುಪಡಿಸುವಂತಾಗಲು ಬಹು ಕಾಲ ಹಿಡಿಸುವದಿಲ್ಲದೆಂಬದು. ಅವರಿಗೆ ಅದು ತುರ್ತು-ಪರಿಸ್ಥಿತಿಯೆಂತೆ ತೋರಿಬಂದು ಈ ವಿಷಯದಲ್ಲಿ ಅವರಿಗೆ ಕಠಿಣ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವಿರುವದೆಂದು ಕಂಡುಬಂದಿತ್ತು. ಈ ಸುವಾರ್ತಾ ಸುಗ್ಗಿಯ ಕಾಲದಲ್ಲಿ ಸ್ವಲ್ಪ ಸಮಯದ ನಂತರ ಕ್ರಿಸ್ತನ ದೇಹದ ಕೊನೆಯ ಸದಸ್ಯರ ವಿಷಯುವಾಗಿ ಕ್ರೈಸ್ತಮತದ ಅಧಿಕಾರ ವರ್ಗದವರ ಮನೋಭಾವವು ಇದೇ ರೀತಿಯಾಗಿರುವದೆಂಬುದು ನಮ್ಮ ನಂಬಿಕೆ. ಅಲ್ಲಿ ಯೇಸುವನ್ನು ವಿರೋಧಿಸಲು ನಿರ್ಧರಿಸುವಲ್ಲಿ ಯೆಹೂದ್ಯರ ಹಿರೀಸಭೆಯವರು ಏನನ್ನು ಮಾಡಿದ್ದರೋ ಕ್ರೈಸ್ತಸಭೆಯ ಒಕ್ಕೂಟವು ಸಂಪೂರ್ಣವಾಗಿ ಸಂಘಟಿತವಾಗಿ ಚೈತನ್ಯಗೊಂಡಾಗ "ಪ್ರಸ್ತುತ ಸತ್ಯವನ್ನು" ವಿರೋಧಿಸುವಲ್ಲಿ ಇದನ್ನೇ ಮಾಡುವ ಸಂಭವವಿರುವದು. (ಪ್ರಕಟನೆ 13:15) ತಮ್ಮ ಧ್ಯೇಯೋದ್ದೇಶಗಳ ಸಂರಕ್ಷಣೆಗಾಗಿ ನಾವು ಇದನ್ನು ಮಾಡಬೇಕೆಂಬದು ಅವರ ವಾದವಾಗಿತ್ತು. ಅವರಲ್ಲಿದ್ದ ತಪ್ಪೇನೆಂದರೆ ಅತಿಯಾಗಿದ್ದ ಅವರ ಆತ್ಮವಿಶ್ವಾಶ, ಪರಲೋಕ-ರಾಜ್ಯದ ಸ್ಥಾಪನೆಯು ಹೇಗೆ ಆಗಬೇಕೆಂಬುದರ ಬಗ್ಗೆ ತಮ್ಮದೇ ಆದ ತತ್ವಗಳ ಮೇಲಿನ ಅತಿಯಾದ ಅವಲಂಬನೆಗಳು. ನಮ್ಮ ದಿನಗಳಲ್ಲಿನ ಸನ್‌ಹದ್ರೀನ್ ಸಭೆಯವರು ಮಾಡುವ ತಪ್ಪುಗಳು ಇದೇ ರೀತಿಯಲ್ಲಿರುವದು. "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಎಂದು ಶತಮಾನಗಳಿಂದಲೂ ಪ್ರಾರ್ಥಿಸುತ್ತಿರುವ-ರಾದರೂ ಅವರು ಈ ಮಾತುಗಳ ಅರ್ಥವನ್ನು ಸಂಪೂರ್ಣವಾಗಿ ಅಪಾರ್ಥಮಾಡಿಕೊಂಡವರಾಗಿದ್ದು ಹೀಗಾಗಿ ಆ ರಾಜ್ಯದ ಪೀಠಿಕೆಯು ಅವರಿಗೆ ಒಂದಕ್ಕೊಂದು ಹೊಂದಿಕೆಯಿಲ್ಲದಂತೆ ತೋರಿಬಂದು ಅವರಿಗೆ ಅದು ವಿನಾಶವನ್ನು ಉಂಟು ಮಾಡುವದು.

## ಲಾಜರನು ಇದ್ದನೆಲ್ಲಿ?

ಲಾಜರನು ಪರಲೋಕದಲ್ಲಿ ಇರಲಿಲ್ಲವೆಂಬುದಕ್ಕೆ ನಮ್ಮ ಕರ್ತನು ಹೇಳಿದ್ದ ಮಾತು ನಮಲ್ಲಿರುವದು, ಏಕೆಂದರೆ ಆತನು ಹೇಳಿದ್ದು: "ಯಾರೂ ಪರಲೋಕಕ್ಕೆ ಏರಿಹೋದವನಲ್ಲ." ಇದೇ ಅಭಿಪ್ರಾಯದಲ್ಲಿ ಪೇತ್ರನು ಪರೋಕ್ಷವಾಗಿ ಹೇಳಿರುವ ಸಾಕ್ಷಿಯೂ ನಮಗಿರುವದು, ಅದೇನಂದರೆ ಪ್ರವಾದಿಯಾದ ದಾವೀದನ ವಿಷಯವಾಗಿ ಆತನು ಹೀಗೆ ಪ್ರಕಟಮಾಡಿ ಹೇಳಿರುವನು: "ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ." (ಅ.ಕೃ. 2:34) ಲಾಜರನು ಇದ್ದನೆಲ್ಲಿ? ತನ್ನ ಬಗ್ಗೆ ಆತನು ಯಾವ ವಿವರಣೆಯನ್ನು ನೀಡಿದ್ದನು? ಈ ವಿಷಯವಾಗಿ ಒಂದು ಮಾತೂ ಅಲ್ಲಿ ಬರೆಯಲ್ಪಟ್ಟಿಲ್ಲ. ತನ್ನ ಬಗ್ಗೆ ಹೇಳಲು ಅವನ ಬಳಿಯಲ್ಲಿ ಯಾವ ವಿವರಣೆಯೂ ಇರಲಿಲ್ಲ; ಅವನು ಎಲ್ಲಿಯೂ ಇರಲಿಲ್ಲ; ಆವನು ಸತ್ತಿದ್ದನು. ನಮ್ಮ ಕರ್ತನು ಪರಲೋಕದಲ್ಲಿರುವ ತಂದೆಯನ್ನು ಸಂಬೋಧಿಸುವಾಗಿ ತನ್ನ ಕಣ್ಣುಗಳನ್ನು ಎತ್ತಿದ್ದನು, ಆದರೆ ಆನಂತರದಲ್ಲಿ, ಲಾಜರನಿಗೆ ನುಡಿಯುವಾಗ ಆತನು ಸಮಾಧಿಗೆ ಸಂಬೋಧಿಸಿ ಹೀಗೆ ಹೇಳಿದ್ದನು: "ಲಾಜರನೇ, ಹೊರಗೆ ಬಾ." ಸತ್ತಿದ್ದವನು ಹೊರಗೆ ಬಂದಿದ್ದನು. ನಾವು ತಿಳಿದು ಕೊಂಡಿರುವಂತೆ, ಇದು ಕಡೆಯಲ್ಲಿ ಲೋಕದವರೆಲ್ಲರ ಕಡೆಗೆ ಬಳಸಲಾಗುವ ಪುನರುತ್ಥಾನದ ಶಕ್ತಿಯ ಬಗ್ಗೆ ನಮ್ಮ ಕರ್ತನು ನೀಡಿದ್ದ ಒಂದು ಸಚಿತ್ರ ಪ್ರದರ್ಶನವಾಗಿತ್ತು. ಅಲ್ಲದೆ ಆತನು ಮುಂದೆ ಈ ಶಕ್ತಿಯನ್ನು ಪ್ರಯೋಗಿಸುವ ವಿಧಾನವು ಸಾಧಾರಣವಾಗಿ ಇದೇ ರೀತಿಯಲ್ಲಿರುವದೆಂದು ಹೀಗೆ ವರ್ಣಿಸಿ ಹೇಳಿದ್ದನು: "ಅದಕ್ಕೆ ಆಶ್ಚರ್ಯ ಪಡಬೇಡಿರಿ; ಸಮಾಧಿಗಳಲ್ಲಿ-ರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ." (ಯೋಹಾನ 5:28), ಕೆಲವರು ಮೊದಲನೇ ಪುನರುತ್ಥಾನದಲ್ಲಿ ಸಂಪೂರ್ಣವಾಗಿ ಪರಿಪೂರ್ಣತೆಗೆ ಬರುವರು, ಉಳಿದವರು ಲಾಜರನಂತೆ ಕೇವಲ ಎಚ್ಚರವಾಗುವರು, ಆದರೆ ಅದು ಆತನ ವಿಷಯದಲ್ಲಿದ್ದಂತೆ ಆಗಿರದೆ, ಆಗ ಅವರಿಗೆ ಅನಸ್ತಾಸಿಸ್ (anastasis) ಎಂಬ ಅವಕಾಶವನ್ನು ಅನುಗ್ರಹಿಸ-ಲಾಗುವದು, ಅಂದರೆ ಪಾಪ ಮತ್ತು ಮರಣಾವಸ್ಥೆಯಿಂದ ಸಂಪೂರ್ಣವಾಗಿ ಹೊರಬಂದು ಮಾನವ ಸ್ವಭಾವದಲ್ಲಿನ ಸಂಪೂರ್ಣವಾದ ಪರಿಪೂರ್ಣತೆಗೆ ಎಬ್ಬಿಸಲ್ಪಡುವರು; ಅದು ನ್ಯಾಯತೀರ್ಪು ಇಲ್ಲವೆ ಶಿಸ್ತುಶಿಕ್ಷಣವೆಂಬ ಪ್ರತಿಫಲ ಹಾಗು ದಂಡನೆಗಳಿಗೋಸ್ಕರವಾಗಿರುವ ಒಂದು ಪುನರುತ್ಥಾನ-ವಾಗಿರುವದು.

ಕ್ರೈಸ್ತ ಸಮೂಹದವರಲ್ಲಿ ಬಹು ಪ್ರಚಲಿತವಾಗಿರುವಂಥ ತಪ್ಪಾದ ಅಭಿಪ್ರಾಯದ ಪ್ರಕಾರ ಯೇಸುವಿನ ವಿಶೇಷವಾದ ಸ್ನೇಹಿತನಾಗಿ ಆತನಿಂದ ಪ್ರೀತಿಲ್ಪಟ್ಟಿದ್ದ ಲಾಜರನು ಪರ್ಗಟೋರಿ-ಯೆಂಬ ಪಾಪವಿಸರ್ಜಿಸಿಕೊಳ್ಳುವ ಸ್ಥಳದಲ್ಲಿಯಾಗಲಿ ಅಥವಾ ನರಕದಲ್ಲಿಯಾಗಲಿ ಇರದೆ ಪರಲೋಕದಲ್ಲಿ ಇದ್ದಿರಬೇಕೆಂಬದು. ಆದರೆ ಆತನು ಪರಲೋಕದಲ್ಲಿದ್ದು ಹಲವು ದಿನಗಳಾದ ನಂತರ ಯೇಸುವು ಆತನನ್ನು ಭೂಲೋಕದ ಜೀವಿತಕ್ಕೆ ಹಿಂದಕ್ಕೆ ಕರೆತರುವ ಅಹಿತಕರವಾದ ಕಾರ್ಯಮಾಡಿದ್ದು ಈಗ ಅದು ಎಷ್ಟು ವಿಚಿತ್ರವಾಗುವದು. ಅಲ್ಲದೆ ಆತನು ಎಷ್ಟು ಅವಸರದಿಂದ ತನ್ನ ಕಿರೀಟ ಅಥವಾ ಖರ್ಜೂರದ ಗರಿ ಇಲ್ಲವೇ ಕಿನ್ನರಿಯನ್ನು ಬದಿಗೆ ಇಟ್ಟು ಆತನು ಹಿಂದಿರುಗಿ ಬಂದಿರಬೇಕು. ಇಲ್ಲವೇ ಇಲ್ಲಾ! ಇವೆಲ್ಲವೂ ಬುದ್ಧಿಯಿಲ್ಲದ ಕಲ್ಪನೆಗಳಾಗಿದ್ದು ಯೇಸುವು ಪುನರುತ್ಥಾನವೂ ಜೀವವೂ ಆಗಿರುವನೆಂಬ ಈ ಪಾಠದ ಸುವರ್ಣಮಯವಾದ ಅಮೂಲ್ಯ ಪಠ್ಯಭಾಗಕ್ಕೆ ಸಂಪೂರ್ಣವಾಗಿ ಸರಿಬೀಳುವಂಥದಲ್ಲ. ತನ್ನ ಮರಣದ ಮೂಲಕವಾಗಿ ಆತನು

(ಕ್ರಿಸ್ತನು) ಆದಾಮನ ಮತ್ತು ಆತನ ಸಂತತಿಯನ್ನು ಮತ್ತೆ ಜೀವಿಸುವಂತೆ ಮಾಡುವ ಹಕ್ಕನ್ನು ಗಳಿಸಿಕೊಂಡಿರುವನು. ಪುನರುತ್ಥಾನದ ಶಕ್ತಿಯ ಮೂಲಕವಾಗಿ ಆತನು ಮಾನವ ಕುಲವನ್ನು ಮರಣದ ಆಳ್ವಿಕೆಯಿಂದ ಹೊರತರುವದು. ಲಾಜರನು ತನ್ನ ಅಸ್ವಸ್ಥತೆಯಿಂದ ಸಾಯುವ ಸಮಯದಲ್ಲಿ ಪ್ರಜ್ಞೆಯನ್ನು ಕಳಕೊಂಡಿದ್ದನು ಮತ್ತು ತನ್ನನ್ನು ಎಬ್ಬಿಸುವಂಥ ಸಮಯದಲ್ಲಿ ಪ್ರಜ್ಞೆಯನ್ನು ಮರಳಿ ಪಡೆದಿದ್ದನು. "ನಮ್ಮ ಮಿತ್ರನಾದ ಲಾಜರನು ನಿದ್ರೆಮಾಡುತ್ತಾನೆ" ಎಂದು ಯೇಸುವು ಹೇಳಿದ್ದಂತೆ, ಈ ಮಧ್ಯೆಯ ನಾಲ್ಕು ದಿನಗಳಲ್ಲಿ ಆತನು ಮರಣವೆಂಬ ನಿದ್ರೆಯಲ್ಲಿದ್ದನು; ಆತನು ಬೇರೆ ಯಾವ ಅರ್ಥದಲ್ಲಿಯೂ ಎಚ್ಚರವಾಗಿರಲಿಲ್ಲ; ಯೇಸುವು ಸಾಕ್ಷಿಯಾಗಿ ಹೇಳಿದಂತೆ, "ನಾನು ಅವನನ್ನು ಎಬ್ಬಿಸಲು ಹೋಗುತ್ತೇನೆ" ಹಾಗು ಸತ್ಯವೇದದಲ್ಲಿ ಬೇರೊಂದೆಡೆ ಪ್ರಕಟಮಾಡಿರುವಂತೆ "ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ;" "ನೀನು ಸೇರಬೇಕಾದ ಪಾತಾಳದಲ್ಲಿ (ಶೀಯೋಲ್, ಹೇಡ್ಸ್ ಅಂದರೆ ಸಮಾಧಿ, ಮರಣವೆಂಬ ನಿದ್ರಾಸ್ಥಿತಿ) ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವುದಿಲ್ಲ." – ಪ್ರಸಂಗಿ 9:5,10

ಸಮಸ್ತ ಲೋಕದವರನ್ನು ಎಬ್ಬಿಸುವಂಥದನ್ನು ನಾವು ಊಹಿಸಿಕೊಳ್ಳಲು ಸಾಧ್ಯ. ಒಬ್ಬೊಬ್ಬರಾಗಿ ಎಲ್ಲರೂ ಮರಣವೆಂಬ ಮಹಾ ಸೆರೆಮನೆಯೊಳಗಿಂದ ಹೊರಬರುವದು ಹಾಗೂ ತಮ್ಮ ಸ್ನೇಹಿತರುಗಳಿಂದ ಆಮಂತ್ರಿಸಲ್ಪಟ್ಟು ಸ್ವೀಕರಿಸಿಕೊಳ್ಳುವದು ಅಲ್ಲದೆ ಭೂಮಿಯ ಬಹು ದೊಡ್ಡ ರೀತಿಯಲ್ಲಿ ಪುನರುದ್ಧಾರದ ಆಶೀರ್ವಾದಗಳನ್ನು ಹೊಂದುತ್ತಾ ಕ್ರಮೇಣ ಏದೇನಿನಲ್ಲಿದ್ದಂಥಾ ಸಂಪೂರ್ಣವಾದ ಪರಿಪೂರ್ಣತೆಯ ಸ್ಥಿತಿಗೆ ಮುಂದುವರೆಯುತ್ತಾ ಸಾಗುವದು ಮತ್ತು ತಮ್ಮ ಮಿತ್ರರು ಪರಿಪೂರ್ಣತೆಯ ಸ್ಥಿತಿಯಲ್ಲಿ ಮುಂದುವರೆಯುತ್ತಾ ಬಂದಿರುವದನ್ನು ಅಲ್ಲದೆ ತಾವೇ ಆ ರಾಜ್ಯವು ನೀಡುವ ಆಶೀರ್ವಾದವುಳ್ಳ ಸೌಭಾಗ್ಯಕರವಾದ ಸದವ–ಕಾಶಗಳಿಂದ ಸುತ್ತುವರೆಯಲ್ಲಪಟ್ಟು ದೇವರ ವಿಷಯವಾದ ಜ್ಞಾನದ ಬೆಳಕು ಸಮಸ್ತ ಭೂಲೋಕವನ್ನು ಪ್ರವಾಹದಂತೆ ಆವರಿಸಿಕೊಂಡಿರುವದು ಎಂಥಾ ಸಂತೋಷಭರಿತವಾದ ಸನ್ನಿವೇಶ! ಆಹಾ, ಅನ್ಯಜಾತಿಯವರಿಗೆ ಬೋಧಿಸಲ್ಪಟ್ಟ ಸಂಗತಿಗಳ ಅನುಸಾರವಾಗಿ ಸ್ಟೈಕ್ಸ್ (Styx) ನದಿಯ ದಾಟುವಿಕೆ ಇಲ್ಲವೇ ಅವರು ಬೇರೆ ವಿಧವಾದ ಪ್ರಾಣಿಯ ಜೀವಿತದಲ್ಲಿ ಪುರ್ನಜನ್ಮ–ಪಡೆಯುವದನ್ನು ಊಹಿಸಿಕೊಳ್ಳುವದಕ್ಕಿಂತಲೂ ಇದು ಎಷ್ಟು ಭಿನ್ನವಾಗಿರುವದು! ಆಹಾ, ನಿತ್ಯಯಾತನೆಯ ಇಲ್ಲವೇ ಪರ್ಗಟೋರಿ ಎಂಬ ಪಾಪವರ್ಜಿಸುವ ಸ್ಥಳದ ವಿಷಯವಾದ ತಪ್ಪಾದ ಬೋಧನೆಯನ್ನು ಕೇಳಿದವರಾಗಿ ಮತ್ತು ಇಂಥಾ ಸಂಗತಿಯು ತಮ್ಮ ಪಾಲಿಗೆ ಬರಬಾರದೆಂಬ ಭೀತಿದಿಂದ ಸತ್ತುಹೋಗಿರುವಂಥ ಅನೇಕರಿಗೆ ಈ ವಿಷಯವು ಅದೆಷ್ಟು ಭಿನ್ನವಾಗಿರುವದು! ಅವರು ದೇವರ ಬಗ್ಗೆ ಎಂಥಾ ಕೃತಜ್ಞತಾ–ಪೂರ್ವಕವಾದ ಹೃದಯವುಳ್ಳವರಾಗುವರು! ಸೈತಾನನು ಹೇಳಿರುವ ಅಸತ್ಯಗಳು ಕ್ರಮೇಣ ದೇವರ ಮಹಿಮೆಗೆ ಸಹಾಯಕ–ವಾಗುವದು ಅಲ್ಲದೆ ದೇವರು ಬಹುಶಃ ಈ ಕಾರಣಕ್ಕಾಗಿಯೇ ಈವರೆಗೂ ತನ್ನ ಪರಿಶುದ್ಧ ನಾಮವು ಕೆಡಿಸಲ್ಪಟ್ಟು ತೆಗಳುವಂತಾಗಿ ಆತನ ಗುಣಗಳು ಬಹು ನಿಂದನೆಗೊಳಗಾಗಲು ಬಿಟ್ಟಿರಬಹುದು.

## "ಪುನರುತ್ಥಾನ ಹಾಗೂ ಜೀವ"

ನಮ್ಮ ಸುವರ್ಣಮಯ ಪಠ್ಯಭಾಗಕ್ಕೆ ಇನ್ನೂ ಆಳವಾದ ಒಂದು ಅರ್ಥವನ್ನು ಸೇರಿಸಲಾಗಿರುವದು; ಅದನ್ನು ನಾವು ಬಿಟ್ಟು ಹಾಗೇ ಮುಂದುವರೆಯಬಾರದು. ಅದು ಹೀಗಿರುವದು: ಈಗ ಕರ್ತನಲ್ಲಿ ನಂಬಿಕೆಯಿಟ್ಟಿರುವ ನಾವು ಆತನ ರಕ್ತದ ಮೂಲಕವಾಗಿ ನಂಬಿಕೆಯಿಂದ ನೀತಿವಂತರೆಂಬ ನಿರ್ಣಯ ಹೊಂದಿದವರಾಗಿ, ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಲು ಕರೆಯಲ್ಪಟ್ಟಿರು–ವದು ಅಲ್ಲದೆ ನಮ್ಮನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವದರ ಮೂಲಕವಾಗಿ ಇವುಗಳನ್ನು ಅಂಗೀಕರಿಸಿಕೊಂಡವರಾಗಿರಲು, ಈಗಾಗಲೇ ಪುನತ್ಥಾನ ಹೊಂದಿ ನೂತನ ಜೀವವನ್ನು ಪಡೆದವರಾಗಿ ಈ ಮೂಲಕವಾಗಿ ಈಗಾಗಲೇ ಮರಣದಿಂದ ಪಾರಾಗಿ ಜೀವಕ್ಕೆ ಸೇರಿದವರಾಗಿದ್ದೇವೆಂದು ಕೆಲವು ಸಾರಿ ಹೇಳಲ್ಪಟ್ಟಿದ್ದೇವೆ. ಸಹಜವಾಗಿ ಇಲ್ಲಿ ಪುನರುತ್ಥಾನ ಮತ್ತು ಜೀವವೆಂಬ ಶಬ್ಧಗಳನ್ನು ಒಂದು ಸಾಂಕೇತಿಕ ರೀತಿಯಲ್ಲಿ ಬಳಸಲಾಗಿರುವದು. ನಾವು ಹಳೇ ಸ್ವಭಾವವನ್ನು ತೊರೆದು ಪವಿತ್ರಾತ್ಮನಿಂದ ಹುಟ್ಟುವದರ ಮೂಲಕವಾಗಿ ಕರ್ತನಿಂದ ನೂತನ ಸ್ವಭಾವವನ್ನು ಪಡೆದವರಾಗಿರುವೆವೆಂದು ಎಣಿಸಲ್ಪಟ್ಟಿರುವೆವು. ಮತ್ತು ಈ ನೂತನ ಸ್ವಭಾವವೇ ಮೊದಲನೇ ಪುನರುತ್ಥಾನದಲ್ಲಿ ಪರಿಪೂರ್ಣತೆಗೆ ಬರಬೇಕಿರುವದು. ಅಲ್ಲದೆ ನಾವು ಪವಿತ್ರಾತ್ಮನ ಮೂಲಕವಾಗಿ ಹುಟ್ಟಿದಂದಿನಿಂದ ನಮ್ಮ ಹಳೇ ಸ್ವಭಾವವು ಸತ್ತದ್ದಾಗಿರುವದೆಂದು ಎಣಿಸಲ್ಪಟ್ಟಿರಲಾಗಿ ಸತ್ಯವೇದವು ನಮ್ಮ ಈಗಿನ ಸ್ಥಿತಿಯನ್ನು ಪುನರುತ್ಥಾನ ಹೊಂದಿದ ಸ್ಥಿತಿಯೆಂದು ಹೇಳಿರುವಂಥದು ಬಹು ವಿವೇಚನೆಯುಳ್ಳದ್ದೂ ಸೂಕ್ತವೂ ಆಗಿರುವದು; ಹೀಗಿರಲಾಗಿ ನಾವು ಹಳೆಯ ಜೀವಿತದ ಕ್ರಮ ನಿರೀಕ್ಷೆ ಧ್ಯೇಯಗಳಿಂದ ನೂತನ ಸ್ಥಿತಿಗೆ ಎಬ್ಬಿಸಲ್ಪಟ್ಟವರಾಗಿದ್ದೇವೆ; ನಾವು ನೂತನವಾದ ಮಾರ್ಗದಲ್ಲಿ ನಡೆಯಲು ಆರಂಭಿಸಿರು–ವೆವು; ನಮ್ಮ ಈಗಿನ ಜೀವಿತಾನುಭವಗಳು ಪರಿವರ್ತನಾ ರೂಪವಾಗಿದ್ದು, ಈ ಎಲ್ಲಾ ಪರಿವರ್ತನೆಗಳು ನಾವು ನಿರ್ಬಲಾವಸ್ಥೆ –ಯಿಂದ ಬಲಾವಸ್ಥೆಗೂ, ಪ್ರಾಕೃತ ದೇಹದಿಂದ ಆತ್ಮಿಕ ದೇಹಕ್ಕೂ, ಹೀನಾವಸ್ಥೆಯಿಂದ ಮಹಿಮಾವಸ್ಥೆಗೂ ನಿಜವಾಗಿಯೂ ಮಾರ್ಪಟ್ಟವರಾಗಿ ನಮ್ಮ ಕರ್ತನ ಪುನರುತ್ಥಾನ–ದಲ್ಲಿನ ಪ್ರಭಾವಯುಕ್ತವಾದ ಮಾರ್ಪಡುವಿಕೆಯಲ್ಲಿ ನಾವು ನಿಜವಾಗಿ ಪಾಲನ್ನು ಹೊಂದಿದಾಗ ಇವುಗಳು ಭವ್ಯವಾದ ರೀತಿಯಲ್ಲಿ ಪೂರ್ಣಗೊಳ್ಳುವವು.

ನಾವು ಈ ವಿಶ್ರಾಂತಿಗೆ, ಈ ಆಶೀರ್ವಾದಕ್ಕೆ ಸೇರಲು ಪರಿಶ್ರಮಿಸೋಣ! ನಮ್ಮನ್ನು ಉನ್ನತವಾದ ಒಂದು ಸ್ಥಾನಕ್ಕೆ ಹಾಗು ಸೌಭಾಗ್ಯಗಳಿಗೆ ಕರೆದಾತನು ನಂಬಿಗಸ್ತನು, ಆತನು ತನ್ನ ಕೃಪಾಐಶ್ವರ್ಯದ ಅನುಸಾರವಾಗಿ ನಾವು ಬೇಡುವದಕ್ಕಿಂತಲೂ ಆಲೋಚಿಸುವದಕ್ಕಿಂತಲೂ ಉತ್ಕೃಷ್ಟವೂ ಉತ್ತಮವೂ ಆಗಿರುವ ಸಮೃದ್ಧ ರೀತಿಯಲ್ಲಿ ಸಹ ನಮಗಾಗಿ ನಿರ್ವಹಿಸುವನು. "ಸಮಸ್ತವೂ ನಿಮ್ಮದು... ನೀವಂತೂ ಕ್ರಿಸ್ತನವರು, ಕ್ರಿಸ್ತನು ದೇವರವನು." (1 ಕೊರಿಂಥ 3:21,23) ಈ ಮಧ್ಯೆ ಸಾಂಕೇತಿಕ–ವಾಗಿರುವ ಈ ಪುನರುತ್ಥಾನದ ಜೀವಿತಲ್ಲಿ ಜೀವಿಸುತ್ತಿರುವ ನಮಗೆ ಅಪೋಸ್ತಲನ ಈ ಮುಂದಿನ ಮಾತುಗಳು ಅನ್ವಯವಾಗುತ್ತವೆ:

ನನಗಂತೂ ಬದುಕುವದೆಂದರೆ ಕ್ರಿಸ್ತನು ಜೀವಿಸುತ್ತಿರುವಂತೆ ಆಗುವದಕ್ಕಾಗಿಯೇ, ಯಾಕೆಂದರೆ ಆತನು ನಮ್ಮಲ್ಲಿ ಪ್ರತಿನಿಧಿಸಲ್ಪಟ್ಟಿರುವನು; ನಾವು ಆತನ ರಾಯಭಾರಿಗಳು. ಈ ಮಧ್ಯೆ ನಾವು ಸಹ ನೆನಪಿನಲ್ಲಿಟ್ಟುಕೊಳ್ಳಬೇಕಾದುದೆಂದರೆ ನಮ್ಮ ಪುನರುತ್ಥಾನದ ನಿರೀಕ್ಷೆಗಳು ಇರುವದು ಆತನಲ್ಲಿಯೇ; ಬರೆಯಲ್ಪಟ್ಟಿರುವಂತೆ "ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ." ಮತ್ತು "ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಾವೂ ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷವಾಗುವೆವು."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಸಮಾರ್ಯ; ಗಲಿಲಾಯ | ಸಮಾರ್ಯದ ಮೂಲಕವಾಗಿ ಗಲಿಲಾಯಕ್ಕೆ ಹೋಗುವ ದಾರಿಯಲ್ಲಿ ಸ್ವಸ್ಥಮಾಡಿದ್ದು ಹಾಗೂ ಬೋಧಿಸಿದ್ದು. | -- | -- | 17:11-37 | -- |

# ಲೂಕ 17:11-37

ಆತನು ಯೆರೂಸಲೇಮಿಗೆ ಪ್ರಯಾಣ ಮಾಡುವಾಗ ಸಮಾರ್ಯ ಗಲಿಲಾಯ ಸೀಮೆಗಳ ನಡುವೆ ಹಾದು ಹೋದನು. ಒಂದು ಹಳ್ಳಿಗೆ ಬಂದಾಗ ಹತ್ತು ಮಂದಿ ಕುಷ್ಠರೋಗಿಗಳು ಆತನ ಎದುರಿಗೆ ಬಂದು ದೂರದಲ್ಲಿ ನಿಂತು–ಯೇಸುವೇ, ಗುರುವೇ, ನಮ್ಮ ಮೇಲೆ ದಯವಿಡು ಎಂದು ಕೂಗಿ ಹೇಳಿದರು. ಆತನು ಅವರನ್ನು ನೋಡಿ–ನೀವು ಹೋಗಿ ಯಾಜಕರಿಗೆ ಮೈ ತೋರಿಸಿಕೊಳ್ಳಿರಿ ಎಂದು ಹೇಳಿದನು. ಅವರು ಹೋಗುತ್ತಿರು–ವಾಗಲೇ ಶುದ್ಧರಾದರು. ಅವರಲ್ಲಿ ಒಬ್ಬನು ತನಗೆ ಗುಣವಾದದ್ದನ್ನು ನೋಡಿ ಮಹಾ ಶಬ್ದದಿಂದ ದೇವರನ್ನು ಕೊಂಡಾಡುತ್ತಾ ಹಿಂತಿರುಗಿ ಬಂದು ಯೇಸುವಿನ ಪಾದಗಳಿಗೆ ಅಡ್ಡ ಬಿದ್ದು ಆತನಿಗೆ ಉಪಕಾರಸ್ತುತಿಮಾಡಿದನು. ಅವನು ಸಮಾರ್ಯದವನು. ಯೇಸು ಇದನ್ನು ನೋಡಿ–ಹತ್ತು ಮಂದಿ ಶುದ್ಧರಾದರಲ್ಲವೇ, ಮಿಕ್ಕ ಒಂಭತ್ತು ಮಂದಿ ಎಲ್ಲಿ? ದೇವರನ್ನು ಸ್ತುತಿಸುವದಕ್ಕೆ ಈ ಅನ್ಯ ದೇಶದವನೇ ಹೊರತು ಇನ್ನಾರೂ ಹಿಂತಿರುಗಿ ಬರಲಿಲ್ಲವೇ ಎಂದು ಹೇಳಿ ಅವನಿಗೆ–ಎದ್ದು ಹೋಗು. ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥ ಮಾಡಿಯದೆ ಎಂದು ಹೇಳಿದನು.

ದೇವರ ರಾಜ್ಯವು ಯಾವಾಗ ಬರುವದೆಂದು ಫರಿಸಾಯರು ಆತನನ್ನು ಕೇಳಿದಾಗ ಆತನು ಅವರಿಗೆ–ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ. ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವದಕ್ಕಾಗದು; ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ ಎಂದು ಉತ್ತರಕೊಟ್ಟನು.

ಮತ್ತು ಆತನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ–ಒಂದು ಕಾಲ ಬರುತ್ತದೆ, ಅದರಲ್ಲಿ ನೀವು ಮನುಷ್ಯಕುಮಾರನ ದಿವಸಗಳೊಳಗೆ ಒಂದು ದಿನವನ್ನು ನೋಡಬೇಕೆಂದು ಅಪೇಕ್ಷಿಸಿದರೂ ಅದನ್ನು ನೋಡದೆ ಇರುವಿರಿ. ಜನರು ನಿಮಗೆ–ಅಗೋ ಅಲ್ಲಿದ್ದಾನೆ, ಇಗೋ ಇಲ್ಲಿದ್ದಾನೆ ಎಂದು ಹೇಳಿದರೆ ನೀವು ಹೊರಟುಹೋಗ ಬೇಡಿರಿ. ಅವರನ್ನು ಹಿಂಬಾಲಿಸಲೂ ಬೇಡಿರಿ. ಯಾಕಂದರೆ ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯುವರೆಗೂ ಹೇಗೆ ಹೊಳೆಯುವದೋ ಹಾಗೆಯೇ ಮನುಷ್ಯಕುಮಾರನು ತನ್ನ ದಿನದಲ್ಲಿರುವನು. ಆದರೆ ಮೊದಲು ಆತನು ಬಹು ಕಷ್ಟಗಳನ್ನನು–ಭವಿಸಿ ಈಗಿನ ಕಾಲದ ಜನರಿಂದ ನಿರಾಕರಿಸಲ್ಪಡಬೇಕು. ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಮನುಷ್ಯಕುಮಾರನ ದಿವಸಗಳಲ್ಲಿಯೂ ನಡೆಯುವದು. ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಊಟಮಾಡುತ್ತಿದ್ದರು, ಕುಡಿಯುತಿದ್ದರು, ಮದುವೆಮಾಡಿಕೊಳ್ಳುತ್ತಿದ್ದರು, ಮದುವೆ ಮಾಡಿಕೊಡುತಿದ್ದರು. ಆಗ ಜಲಪ್ರಲಯವು ಬಂದು ಎಲ್ಲರನ್ನು ನಾಶಮಾಡಿತು. ಮತ್ತು ಲೋಟನ ದಿವಸಗಳಲ್ಲಿ ನಡೆದ ಪ್ರಕಾರ ನಡೆಯುವದು. ಅವರು ಊಟಮಾಡುತ್ತಿದ್ದರು, ಕುಡಿಯುತ್ತಿದ್ದರು, ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು. ಆದರೆ ಲೋಟನು ಸೊದೋಮ್ ಊರನ್ನು ಬಿಟ್ಟುಹೋದ ದಿವಸದಲ್ಲಿ ಆಕಾಶದಿಂದ ಬೆಂಕಿ ಗಂಧಕಗಳು ಸುರಿದು ಅವರೆಲ್ಲರನ್ನು ನಾಶಮಾಡಿದವು. ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ ಅದೇ ರೀತಿಯಾಗಿ ಇರುವದು. ಆ ದಿನದಲ್ಲಿ ಮಾಳಿಗೆಯ ಮೇಲೆ ಇರುವವನು ಮನೆಯೊಳಗಿರುವ ತನ್ನ ವಸ್ತುಗಳನ್ನು ತೆಗೆದುಕೊಳ್ಳುವದಕ್ಕೆ ಇಳಿದು ಬರಬಾರದು; ಅದೇ ಪ್ರಕಾರ ಹೊಲದಲ್ಲಿರುವವನು ಸಹ ತಿರಿಗಿ ಹಿಂದಕ್ಕೆ ಹೋಗ–ಬಾರದು. ಲೋಟನ ಹೆಂಡತಿಯನ್ನು ನೆನಪಿಗೆ ತಂದು ಕೊಳ್ಳಿರಿ. ತನ್ನ ಪ್ರಾಣವನ್ನು ದೊರಕಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಪ್ರಾಣವನ್ನು ಕಳಕೊಂಡವನು ಅದನ್ನು ರಕ್ಷಿಸಿಕೊಳ್ಳುವನು. ಆ ರಾತ್ರಿಯಲ್ಲಿ ಒಂದೇ ಮಂಚದ ಮೇಲೆ ಇಬ್ಬರಿರುವರು; ಒಬ್ಬನು ತೆಗೆದುಕೊಳ್ಳಲ್ಪಡುವನು, ಮತ್ತೊಬ್ಬನು ಬಿಡಲ್ಪಡುವನು. ಇಬ್ಬರು ಹೆಂಗಸರು ಒಂದೇ ಕಲ್ಲಲ್ಲಿ ಬೀಸುತ್ತಿರುವರು; ಒಬ್ಬಳು ತೆಗೆದುಕೊಳ್ಳಲ್ಪಡುವಳು, ಮತ್ತೊಬ್ಬಳು ಬಿಡಲ್ಪಡುವಳು ಅಂದನು. ಈ ಮಾತಿಗೆ ಶಿಷ್ಯರು–ಸ್ವಾಮೀ, ಅದು ಎಲ್ಲಿ ಆಗುವದು ಎಂದು ಕೇಳಲು ಆತನು ಅವರಿಗೆ–ಹೆಣ ಎಲ್ಲಿಯೋ ಅಲ್ಲಿಯೇ ಹದ್ದುಗಳು ಕೂಡುವವು ಎಂದು ಉತ್ತರ ಕೊಟ್ಟನು.

*****

# “ಒಂಬತ್ತು ಮಂದಿ ಎಲ್ಲಿ?”

### ರೀಪ್ರಿಂಟ್ಸ್ ಪುಟ 5453

## ಲೂಕ 17:11-19

**ಮಿಕ್ಕ ಒಂಭತ್ತು ಮಂದಿ ಎಲ್ಲಿ? ದೇವರನ್ನು ಸ್ತುತಿಸುವದಕ್ಕೆ ಈ ಅನ್ಯ ದೇಶದವನೇ ಹೊರತು ಇನ್ನಾರೂ ಹಿಂತಿರುಗಿ ಬರಲಿಲ್ಲವೇ” – ಲೂಕ 17:18**

ನಮ್ಮ ಇಂದಿನ ಪಾಠದ ಸಾರಾಂಶವು ಕೃತಘ್ಞತಾಭಾವ. ಇದು ಒಂದು (ಮಾನವನ) ಗುಣದ ಬಹು ವಿವೇಚನಾಪೂರ್ಣವಾದ ವಿಶಿಷ್ಟ ಲಕ್ಷಣವಾಗಿರುವದು ಮತ್ತು ಇದು ಅಗಾಗ್ಗೆ ಮೃಗಜೀವಿಗಳಲ್ಲಿಯೂ ಸಹ ಕಂಡುಬರುವದು. ಈ ಗುಣವಿಲ್ಲದೆ ಪರಿಪೂರ್ಣವಾದ ಮಾನವರಾಗಲೀ ದೇವದೂತರಾಗಲೀ ದೇವರಿಗೆ ಅಂಗೀಕೃತರಾಗುವದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗದು. ನಾವು ದೇವರಿಗೆ ಅಂಗೀಕೃತವಾಗುವ ಪ್ರಮಾಣವನ್ನು ನಮ್ಮಲ್ಲಿರುವ ಕೃತಘ್ಞತಾಭಾವದ ಮಟ್ಟದ ಮೂಲಕವಾಗಿ ಅಳೆಯಲಾಗುವದೆಂದು ನಾವು ಬಹುಮಟ್ಟಿಗೆ ಹೇಳಬಹುದು. ನಾವು ಇದನ್ನು ಗ್ರಹಿಸಿಕೊಂಡಿರಲಿ ಇಲ್ಲವೇ ಗ್ರಹಿಸದಿರಲಿ, ನಮ್ಮನ್ನು ಇದು ದೇವರ ಆಜ್ಞಾವಿಧಿಗಳಿಗೆ ವಿಧೇರಾಗುವ ಎಡೆಗೆ ನಡೆಸುವವು. ಇದು ನಾವು ನಮ್ಮನ್ನೇ ತ್ಯಾಗಮಾಡಿಕೊಂಡು ದೇವರ ಸೇವೆಗೆ ಪರಿಶಮಿಸುವಂತಾಗಲು ನಮ್ಮನ್ನು ನಡೆಸುವದು ಅಲ್ಲದೆ ದೇವರ ಒಂದು ಸ್ವಯಂ–ಚಾಲಿತವಾದ ಏರ್ಪಾಟಿನ ಪ್ರಕಾರ ಇದು ತನ್ನದೇಯಾದ ಆಶೀರ್ವಾದಗಳನ್ನು ಪಡೆದಿರುವದು.

ನಮ್ಮ ರಕ್ಷಕನು ಗಲಿಲಾಯ ಸಮಾರ್ಯದ ಮೂಲಕವಾಗಿ ಯೆರೂಸಲೇಮಿಗೆ ಸಮೀಪಿಸುತ್ತಿದ್ದನೆಂದು ನಮ್ಮ ಪಾಠವು ನಮಗೆ ತಿಳಿಸುವದು. ಇದನ್ನು ತನ್ನ ಮರಣದಲ್ಲಿ ಅಂತ್ಯವಾದ ಯೆರೂಸಲೇಮಿನೆಡೆಯ ಆತನ ಕಡೆಯ ಪ್ರಯಾಣವೆಂದು ಭಾವಿಸಲಾಗಿರುವದು. ಆತನ ಪ್ರಸಿದ್ಧಿಯು ಎಲ್ಲಾ ಕಡೆಗೂ ಹಬ್ಬಿತ್ತು; ಹಾಗು ರಸ್ತೆಯ ಬದಿಯಲ್ಲಿ ಕುಳಿತಿದ್ದ ಹತ್ತು ಮಂದಿ ಕುಷ್ಠರೋಗಿಗಳು ನಜರೇತಿನ ಯೇಸುವು ಅಲ್ಲಿ ಹಾದು ಹೋಗುತ್ತಿರುವದಾಗಿ ಕೇಳಿದ್ದರು. ಕೂಡಲೇ ಅವರು ತಮ್ಮ ವ್ಯಾಧಿಯ ಕಾರಣದಿಂದಾದ ಕರ್ಕಶ ಸ್ವರದಿಂದ ಧ್ವನಿಯೆತ್ತಿ ಕೂಗಿಕೊಂಡರು. ಸಾಧಾರಣವಾಗಿ ಅವರು ವಿನಂತಿಸಿಕೊಳ್ಳುವುದು ಹಣಕ್ಕಾಗಿ; ಆದರೆ ಈ ಸಂದರ್ಭದಲ್ಲಿ ಅದು, “ಗುರುವೇ, ನಮ್ಮ ಮೇಲೆ ದಯವಿಡು” ಎಂದಾಗಿತ್ತು!

ಕುಷ್ಠರೋಗಿಗಳು ಬಹುವಾಗಿ ಕನಿಕರಿಸಲ್ಪಡಬೇಕಾದ ಒಂದು ವರ್ಗವಾಗಿರುವದು. ಅವರ ಖಾಯಿಲೆಯು ಗುಣವಾಗದೆಂದು ಬಹು ಹಿಂದಿನಿಂದಲೂ ಪರಿಗಣಿಸಲಾಗಿರುವದು, ಹೀಗಾಗಿ ಸತ್ಯವೇದದಲ್ಲಿ ಅದನ್ನು ಸಾಂಕೇತಿಕವಾಗಿ ಪಾಪವನ್ನು ಸೂಚಿಸುವದಕ್ಕಾಗಿ ಬಳಸಲಾಗಿರುವದು. ಅದು ರಕ್ತವನ್ನು ಕಲುಷಿತಗೊಳಿಸುವ ಒಂದು ಅಂಟು ಜಾಡ್ಯವಾಗಿರುವದು. ಮೂಳೆಯ ಕೀಲುಗಳು ತಿರುಚಿಕೊಳ್ಳುವಂತಾಗಿ ಕೊಳೆಯುವಿಕೆ ಹಾಗು ಚರ್ಮದ ಪೊರೆಯ ಕಳಚುವಿಕೆಗಳು ಉಂಟಾಗುವವು. ನಮ್ಮ ಪಾಠದಲ್ಲಿನ ಸಂಗತಿಗಳು ನಡೆಯುವ ಕಾಲದಲ್ಲಿ ಪ್ರಚಲಿತವಾಗಿದ್ದ ನಿಯಮಗಳ ಪ್ರಕಾರ ಕುಷ್ಠರೋಗಿಗಳು ಪಟ್ಟಣಗಳಿಗೆ ಪ್ರವೇಶಿಸುವದನ್ನು ಮೂವತ್ತೊಂಭತ್ತು ಬೆತ್ತದ ಏಟುಗಳ ಶಿಕ್ಷೆಯ ಮೂಲಕವಾಗಿ ನಿರ್ಭಂಧಿಸಲಾಗಿತ್ತು. ಜೀವನೋಪಾಯಕ್ಕಾಗಿ ಹಣ ಸಂಪಾದನೆ ಮಾಡುವ ಯಾವ ವಿಧಾನವೂ ಅವರಿಗೆ ಇರುತ್ತಿರಲಿಲ್ಲ, ಅವರು ಯಾವಾಗಲೂ ತಮ್ಮ ಮಿತ್ರರ ಇಲ್ಲವೇ ಜನರ ದಾನಧರ್ಮಗಳ ಮೇಲೆ ಅವಲಂಭಿತ–ರಾಗಿರಬೇಕಿತ್ತು. ಇಲ್ಲವೇ ಸೋಂಕು ಹರಡುವ ಭಯದ ಕಾರಣಕ್ಕಾಗಿ ಅವರು ಇತರರನ್ನು ಸುಮಾರು ನೂರೈವತ್ತು ಅಡಿಯ ಅಂತರಕ್ಕಿಂತಲೂ ಸಮೀಪಿಸಲು ಬಿಡಲಾಗುತ್ತಿರಲಿಲ್ಲ. ಅವರದು ಒಂದು ಜೀವಂತ ಮರಣವಾಗಿತ್ತು.

ಈ ಪಾಠದಲ್ಲಿ ಪ್ರಸ್ತಾಪಿಸಲಾದ ಹತ್ತು ಮಂದಿಯಲ್ಲಿದ್ದ ಸಾಮಾನ್ಯವಾದ ಸಂಕಷ್ಟವು ಯೆಹೂದ್ಯರ ಹಾಗು ಸಮಾರ್ಯ–ದವರ ಜನಾಂಗೀಯ ಪ್ರತಿಬಂಧನೆಯನ್ನು ನಿರ್ಲಕ್ಷಿಸಿ ಅವರು ಒಂದಿಗಿರುವಂತೆ ಅವರನ್ನು ಎಳೆದು ತಂದಿತ್ತು. ಸಹಾಯಕ್ಕಾಗಿ ಅವರು ಮಾಡಿದ ಕೂಗಿಗೆ ಉತ್ತರವಾಗಿ ಯೇಸುವು ಪೂರ್ಣವಾಗಿ ಕನಿಕರವುಳ್ಳವನಾದರೂ ಅವರ ಬೇಡಿಕೆಗೆ ಉದಾಸೀನನಾಗಿ ವರ್ತಿಸಿದಂತೆ ತೋರುತ್ತದೆ. ಆತನು ಅವರಿಗೆ ಕೇವಲ ಹೀಗಂದಿದ್ದನು: “ನೀವು ಹೋಗಿ ಯಾಜಕರಿಗೆ ಮೈತೋರಿಸಿ–ಕೊಳ್ಳಿರಿ.” ಧರ್ಮಶಾಸ್ತ್ರದ ಒಡಂಬಡಿಕೆಯ ಮೂಲಕವಾಗಿ ಯೆಹೂದ್ಯರೊಡನೆ ದೇವರು ಮಾಡಿದ ಏರ್ಪಾಡಿನ ಪ್ರಕಾರ ಇವುಗಳು ಪಾಪವನ್ನು ಸೂಚಿಸುವದರ ಹೊರತಾಗಿ ಅವರಿಗೆ ಇನ್ನಾವ ವ್ಯಾಧಿಯೂ ಇರಲಿಲ್ಲ, ಅಲ್ಲದೆ ಕುಷ್ಠದ ವಿಷಯದಲ್ಲಿ ಯಾಜಕರು ಈ ವ್ಯಾಧಿಯು ನಿಜವಾಗಿಯೂ ಕುಷ್ಠವೋ ಅಥವಾ ಇಲ್ಲವೋ ಎಂಬ ತೀರ್ಪನ್ನು ನೀಡಬೇಕಾಗಿರುತ್ತಿತ್ತು. ಆ ಕುಷ್ಠರೋಗಿಗಳು ಯಾಜಕರ ಬಳಿಗೆ ಹೋಗಲು ನಮ್ಮ ಕರ್ತನು ನೀಡಿದ್ದ ಆದೇಶದಲ್ಲಿ ರೋಗನಿವಾರಣೆಯು ಒಳಗೊಂಡಿತ್ತು, ಮತ್ತು ಅದು ಅವರು ಯಾಜಕರ ಬಳಿಗೆ ತಲುಪಬೇಕಾದ ಸಮಯಕ್ಕೆ ಅವರು ಶುದ್ಧರೆಂದು ಘೋಷಿಸಲ್ಪಡಲು ಸಿದ್ಧರಾಗಿರುವರೆಂಬ ಸಲಹೆಯಾಗಿತ್ತು.

ಆ ಕುಷ್ಠರೋಗಿಗಳಿಗೆ ಯೇಸುವಿನಲ್ಲಿದ್ದ ಶಕ್ತಿಯ ಬಗ್ಗೆ ಮಹತ್ತಾದ ತಿಳುವಳಿಕೆಯಿದ್ದಿರಬೇಕು, ಮತ್ತು ಅವರು ದೊಡ್ಡ ನಂಬಿಕೆಯನ್ನು ಬಳಸಿದ್ದಿರಬೇಕು; ಏಕೆಂದರೆ ಅವರು ತಕ್ಷಣದಲ್ಲಿ ಗುಣವಾಗುವದಕ್ಕಾಗಿ ಬೇಡಿಕೊಳ್ಳುವ ಬದಲು ಆತನ ಆದೇಶ–ವನ್ನು ಅನುಸರಿಸಿ ಯಾಜಕನ ಬಳಿಗೆ ತಾವು ಪರೀಕ್ಷಿಸಲ್ಪಡು–ವದಕ್ಕಾಗಿ ಹೋಗಲಾರಂಭಿಸಿದ್ದರು. ನಿಸ್ಸಂದೇಹವಾಗಿ ಅವರು

ಆತನ (ಯಾಜಕನ) ಬಳಿಗೆ ತಲಪುವ ಸಮುಯಕ್ಕೆ ಗುಣಹೊಂದಿರಬೇಕೆಂದೂ ಹಾಗೂ ಆರೋಗ್ಯವಂತರೆಂದು ಪ್ರಕಟಮಾಡಿದ ಪತ್ರವನ್ನು ಪಡೆದುಕೊಳ್ಳುವೆವೆಂಬುದನ್ನೂ ನಿರೀಕ್ಷಿಸಿದ್ದರು. ಅವರು ಸ್ವಲ್ಪ ದೂರ ಹೋಗುವದರಲ್ಲೇ ತಾವು ಸ್ವಸ್ಥರಾಗಿರುವದು ಅವರಿಗೆ ಕಂಡುಬಂದಿತ್ತು. ಅವರು ಯಾಜಕನಿಂದ (ಸ್ವಸ್ಥರೆಂದು) ಅಂಗೀಕರಿಸಲ್ಪಟ್ಟವರಾಗಿ ತಮ್ಮ ಮನೆಗಳಿಗೆ ತೆರಳಿ ತಮ್ಮ ಎಂದಿನ ವ್ಯವಹಾರ ಮುಂತಾದವುಗಳಲ್ಲಿ ತೊಡಗುವಂತಾಗಲು ಎಂಥಾ ಸಂತೋಷದಿಂದ ಅವಸರವಾಗಿ ಹೋಗಿರಬಹುದೆಂಬುದನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಲು ಸಾಧ್ಯ. ನಿರ್ಮಲವಾದ ರಕ್ತವು ತಮ್ಮಲ್ಲಿ ಹುರುಪುತಂದಿರುವದನ್ನು ಅರಿತವರಾಗಿದ್ದ ಅವರು ಬಹಪಾಲು ಓಡಿಹೋಗಿದ್ದರೆಂಬುದು ಖಚಿತವಾಗಿತ್ತು! ಆದರೆ ಅವರಲ್ಲಿ ಒಬ್ಬನು ನಿಧಾನಿಸಿದವನಾಗಿ ಹಿಂದೆ ತಿರುಗಿಕೊಂಡಿದ್ದನು; ಇತರರು ತಮಗಾದ ಅತಿ ಸಂತೋಷದಿಂದ ಇದನ್ನು ಗಮನಿಸಲಾರದೆ ಹೋಗಿರುವ ಸಂಭವವಿತ್ತು. ಆತನು ಹಿಂದಿರುಗಿ ಬಂದು ಯೇಸುವಿಗೆ ಕೃತಜ್ಞತೆಯನ್ನು ಸಲ್ಲಿಸುವವನಾಗಿ ಆತನ ಪಾದಗಳಿಗೆ ಬಿದ್ದನು. ಆತನದು ಒಂದು ಕೃತಜ್ಞತಾಪೂರ್ವಕವಾದ ಹೃದಯವಾಗಿತ್ತು. ಆಗ ಅಲ್ಲದಿದ್ದರೂ ನಂತರದಲ್ಲಿ ಆತನು ಒಂದು ಆಶೀರ್ವಾದ–ವನ್ನು ಅಂತಿಮವಾಗಿ ಪಡೆದಿದ್ದನೆಂಬುದರಲ್ಲಿ ನಾವು ಸಂದೇಹ ಪಡಲು ಸಾಧ್ಯವಿಲ್ಲ, ಏಕೆಂದರೆ ಅವನು ಪರದೇಶದವನೂ ಇಸ್ರಾಯೇಲ್ಯರ ಬಾಧ್ಯತೆಯಲ್ಲಿ ಪಾಲಿಲ್ಲದ ಅನ್ಯನೂ ಆಗಿದ್ದನು.

## ಅನುಗ್ರಹವೆಂಬ ರೊಟ್ಟಿಯ ಮತ್ತೊಂದು ತುಣುಕು

ಆತನ ವಿಷಯದಲ್ಲಿ ಸ್ವಸ್ಥತೆ ಹೊಂದಿದುದು "ಮಕ್ಕಳ ಮೇಜಿನಿಂದ ಬಿದ್ದ ರೊಟ್ಟಿಯ ಒಂದು ತುಂಡಾಗಿತ್ತು;" ಕಾರಣ ಆ ಐಶ್ವರ್ಯವಂತನು ಇನ್ನೂ ಮರಣಹೊಂದಿರಲಿಲ್ಲ–ಅಂದರೆ ದೇವಾನುಗ್ರಹವು ಇನ್ನೂ ಇಸ್ರಾಯೇಲ್ಯರನ್ನು ಬಿಟ್ಟುಹೋಗಿರಲಿಲ್ಲ. ಯೇಸುವು–"ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" ಎಂಬ ದುರ್ವಿಧಿಯ ಮಾತನ್ನು ಇನ್ನೂ ನುಡಿದಿರಲಿಲ್ಲ. ಇಲ್ಲ! ಅವರ ಮನೆಯು ಬರಿದಾಗಿ ಬಿಟ್ಟಂದಿನಿಂದ ಮೂರುವರೆ ವರ್ಷಗಳ ವರೆಗೆ ದೇವಾನುಗ್ರಹವು ಇಸ್ರಾಯೇಲ್ಯರಿಗೆ ವೈಯುಕ್ತಿಕವಾದ ಅನುಗ್ರಹವಾಗಿ ಮುಂದುವರೆದಿತ್ತು. ಯೇಸುವಿನ ಮರಣದ ನಂತರ ಯೆಹೂದ್ಯರಿಗಾದ ಅನುಗ್ರಹವು ಮುಕ್ತಾಯಗೊಂಡು ಅನ್ಯಜನರಿಗೆ ಸುವಾರ್ತೆಯು ತಲುಪುವಂತೆ ಮಾಡಲು ಮೂರುವರೆ ವರ್ಷಗಳು ಹಿಡಿದಿದ್ದವು. ಕೊರ್ನೇಲ್ಯನು ದೇವರ ಅನ್ಯೋನ್ಯತೆಗೆ ಅಂಗಿಕರಿಸಲ್ಪಟ್ಟವರಲ್ಲಿ ಮೊದಲಿಗನಾಗಿದ್ದನು. –ಅಪೋಸ್ತಲರ ಕೃತ್ಯಗಳು 10ನೇ ಅಧ್ಯಾಯ.

ಹಿಂದಿರುಗಿ ಬಂದವನು ಸಮಾರ್ಯದವನಾಗಿರುವದಕ್ಕೆ ಬದಲಾಗಿ ಯೆಹೂದ್ಯನಾಗಿದ್ದಲ್ಲಿ ಯೇಸುವು–"ಬಾ, ನಿನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನನ್ನು ಹಿಂಬಾಲಿಸು." ಎಂದು ಹೇಳಿ ತನ್ನ ಶಿಷ್ಯರಲ್ಲಿ ಒಬ್ಬನಾಗುವದಕ್ಕೆ ಆತನನ್ನು ಆಹ್ವಾನಿಸುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ! ಆದರೆ ಆತನು ಒಬ್ಬ ಸಮಾರ್ಯದವನಾಗಿದ್ದ ಕಾರಣ ಯೇಸುವು ಕೇವಲ ಹೀಗೆ ಹೇಳಿದ್ದನು, "ಹೋಗು, ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥಮಾಡಿ–ಯದೆ." ಹೇಗೂ ಕೃತಜ್ಞತೆಯುಳ್ಳ ಈ ಸಮಾರ್ಯದವನನ್ನು ಕರ್ತನ ಅನುಗ್ರಹವು ಹಿಂಬಾಲಿಸಿ ಹೋಗಿತ್ತೆಂಬುದರಲ್ಲಿ ಸಂದೇಹ ಪಡಲು ನಮಗೆ ಸಾಧ್ಯವಿಲ್ಲ; ಮತ್ತು ಅನ್ಯಜನರಿಗೆ ದೇವರರಾಜ್ಯದ ಬಾಗಿಲು ತೆರೆಯಲ್ಪಡುವಾಗ (ಸುವಾರ್ತೆಯ) ಸಂದೇಶವನ್ನು ಸಂತೋಷದಿಂದ ಅಂಗೀಕರಿಸಿದವರಲ್ಲಿ ಈತನು ಒಬ್ಬನಾಗಿದ್ದು ದೇವರಿಗೆ ಬಾಧ್ಯನಾಗಿ ಹಾಗು ನಮ್ಮ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸಹಬಾಧ್ಯತೆಯನ್ನು ಹೊಂದಸಲುವಾಗಿ ಪ್ರತಿಷ್ಠೆ ಮಾಡಿಕೊಂಡು ಪರಲೋಕದ ಸ್ವಾಸ್ಥ್ಯಕ್ಕೆ ಸೇರಿದವನಾಗಿ–ರುತ್ತಿದ್ದನು.

"ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಪಡಿಸಿಯದೆ" ಎಂಬ ನಮ್ಮ ಕರ್ತನ ಈ ಮಾತುಗಳನ್ನು ದೈವಶಕ್ತಿಗೆ ಬದಲಾಗಿ ಆ ಮನುಷ್ಯನ ನಂಬಿಕೆಯು ಅವನನ್ನು ಸ್ವಸ್ಥಪಡಿಸಿರುವದೆಂದು ನಾವು ಅರ್ಥಮಾಡಿಕೊಳ್ಳುವದಿಲ್ಲ, ಆದರೆ ನಿಜವಾಗಿಯೂ ಅದು ಸ್ವಾಮಿಯು ಆ ವ್ಯಕ್ತಿಯ ನಂಬಿಕೆಯ ಸಂಬಂಧದಲ್ಲಿ ಬಳಸಲಾದ ದೈವೀಕ ಶಕ್ತಿಯಾಗಿತ್ತು. ದೇವರ ಶಕ್ತಿ ಹಾಗೂ ಆ ಮನುಷ್ಯನ ನಂಬಿಕೆಗಳು ಆತನನ್ನು ಗುಣಪಡಿಸಲು ಸಹಕರಿಸಿದ್ದವು. ಗುಣ ಹೊಂದಿದ ಆ ಒಂಭತ್ತು ಮಂದಿಯ ವಿಷಯದಲ್ಲಿಯೂ ಇವು ಹೀಗೆಯೇ ಮಾಡಿದ್ದವು. ಅವರೂ ಸಹ ನಂಬಿಕೆಯನ್ನು ಹೊಂದಿದ್ದವರಾಗಿ ಸ್ವಸ್ಥರಾಗಿದ್ದರು, ತಾವು ಯೆಹೂದ್ಯರಾಗಿ ಪಾಪಕ್ಷಮೆ ಹಾಗು ಸ್ವಸ್ಥತೆಯನ್ನು ಕೇಳಿಕೊಳ್ಳಲು ಆ ಸಮಾರ್ಯದವನಿಗಿಂತಲೂ ಅವರಿಗೆ ಹೆಚ್ಚು ಆಧಾರಗಳಿದ್ದವು.

## ಹತ್ತು ಮಂದಿ ಶುದ್ಧರಾದರಲ್ಲಾ, ಮಿಕ್ಕ ಒಂಬತ್ತು ಮಂದಿ ಎಲ್ಲಿ?

ಹತ್ತು ಮಂದಿ ಶುದ್ಧರಾದರೂ ಕೇವಲ ಒಬ್ಬನು ಮಾತ್ರ ದೇವರನ್ನು ಮಹಿಮೆಪಡಿಸಲು ಹಿಂದಿರುಗಿದ್ದನ್ನು ಯೇಸುವು ಜನರ ಗಮನಕ್ಕೆ ತಂದಿದ್ದನು. ಅವರು ಹಿಂದಿರುಗಿಬಂದು ಸ್ತೋತ್ರವನ್ನು ಸಲ್ಲಿಸಿ ತನ್ನ ಮೂಲಕವಾಗಿ ದೇವರ ಶಕ್ತಿಯು ಕಾರ್ಯಸಾಧಿಸಿತ್ತೆಂಬುದನ್ನು ಅಂಗೀಕರಿಸಿಕೊಳ್ಳಲು ಅವರನ್ನು ಆತನು ಕೇಳಿಕೊಂಡಿರಲಿಲ್ಲವೆಂಬುದು ನಿಜವೇ! ತಮಗೆ ಏನು ಮಾಡಲು ಆತನು ಹೇಳಿದ್ದನೋ ಅದನ್ನು ಅವರು ಮಾಡಿ ಯಾಜಕನಿಗೆ ತಮ್ಮನ್ನು ತೋರಿಸಿಕೊಳ್ಳಲು ಹೋಗಿದ್ದರಲ್ಲದೆ, ಮತ್ತೇನೂ ಅಲ್ಲ, ಅಂದರೆ ತಮ್ಮ ಕೆಲಸದ ವಿಷಯವಾಗಿ ಹೋಗಿರಲಿಲ್ಲವೆನ್ನುವದೂ ನಿಜ.

ನಿನ್ನನ್ನು ಗುಣಪಡಿಸಿದರೆ ನಿನ್ನ ಜೀವಿತವನ್ನು ಪ್ರತಿಷ್ಠೆ ಮಾಡಿಕೊಂಡು ನನ್ನ ಶಿಷ್ಯನಾಗುವೆಯಾ? ಎಂದು ಆತನನ್ನು ಸ್ವಸ್ಥಪಡಿಸುವ ಮೊದಲು ಯೇಸುವು ಹೇಳಿ ಅವರೊಂದಿಗೆ ಏಕೆ ಆತನು ಚೌಕಾಶಿ ಮಾಡಲಿಲ್ಲ? ನಿಸ್ಸಂಶಯವಾಗಿಯೂ ಅವರು ಈ ಏರ್ಪಾಡನ್ನು ಒಪ್ಪಿಕೊಳ್ಳುತ್ತಿದ್ದರು. ಅಸಹ್ಯಕರವೂ ಸ್ವಸ್ಥವಾಗ–ದಂತದ್ದೂ ಆದ ವ್ಯಾಧಿಯನ್ನು ತೊಲಗಿಸಿಕೊಳ್ಳಲು ಯಾರು ತಾನೇ ಯಾವ ಷರತ್ತುವಿಧಿಗಳನ್ನಾದರೂ ಒಪ್ಪಿಕೊಳ್ಳುವದಿಲ್ಲ? ತನ್ನ ಶಿಷ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಯೇಸುವು ಈ

ವಿಧಾನವನ್ನು ಯಾಕೆ ಅನುಸರಿಸಲಿಲ್ಲ? ನಿಸ್ಸಂದೇಹವಾಗಿ ಉತ್ತರವೇನಾಗಿರಬೇಕೆಂದರೆ ಆತನು ತನ್ನ ತಂದೆಯ ಕಾರ್ಯ – ನಿರ್ವಹಣಾ ಮನೋಭಾವವನ್ನು ಅನುಸರಿಸುತ್ತಿದ್ದನೆಂಬದು; ಇದನ್ನು ಆತನು ಈ ಮಾತಿನಲ್ಲಿ ವ್ಯಕ್ತಪಡಿಸಿದ್ದನು: "ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾ–ನಲ್ಲವೇ; ಆತನನ್ನು ಆರಾಧಿಸುವವರು ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ ಆರಾಧಿಸಬೇಕು." ತಂದೆಯು ಬೇರೆ ಯಾರನ್ನೂ ಬಯಸದಂತೆಯೇ ಮಗನೂ ಸಹ ಬೇರೆ ಯಾರನ್ನೂ ಬಯಸುವದಿಲ್ಲ.

ಈ ವಿಧವಾಗಿ ಯೇಸುವಿನ ಮತ್ತು ಅಪೋಸ್ತಲರ ಉಪದೇಶ ಗಳು ಸುವಾರ್ತಿಕರ ಹಾಗೂ ಭಕ್ತಿಸಂಜೀವನ ಮುಂತಾದ ಹಲವು ಉಪದೇಶಗಳಿಗಿಂತಲೂ ಬಹು ಭಿನ್ನವಾಗಿದ್ದವು. ಯೇಸು ಇಲ್ಲವೇ ಅಪೋಸ್ತಲರು ಪ್ರಾಪಂಚಿಕವಾಗಿ ಎಂದೂ ಜನರನ್ನು ಕ್ರಿಸ್ತನ ಶಿಷ್ಯರಾಗಲು ಒತ್ತಾಯಿಸಿರಲಿಲ್ಲ. ಅವರು ಕೇವಲ ಕೆಲವು ಮಹತ್ವದ ಸತ್ಯಾಂಶಗಳನ್ನು ಉಪದೇಶಿಸಿದ್ದರು ಅಥವಾ ಪ್ರಕಟನೆಮಾಡಿದ್ದರು ಮತ್ತು ಯಾರು ಅವರು ಪ್ರಸ್ತಾಪಿಸಿದ ಮಹತ್ತಾದ ಸತ್ಯಾಂಶಗಳಿಂದ ಪ್ರಭಾವಿತರಾಗಿ ಆ ವಿಧವಾದ ಉಪದೇಶಗಳಿಗೆ ಅಧೀನರಾಗಿ ಬಂದಿದ್ದರೋ ಅಂಥವರನ್ನು ಅವರು ಅಂಗೀಕರಿಸಿಕೊಂಡಿದ್ದರು. ಅವರು ಪಾಪ ನೀತಿ ಮತ್ತು ಮುಂಬರಲಿರುವ ನ್ಯಾಯತೀರ್ಪಿನ ಅಥವಾ ನ್ಯಾಯವಿಚಾರಣೆಯ ವಿಷಯಗಳನ್ನು ಪ್ರತಿಪಾದನೆ ಮಾಡಿ ಆ ಸಂಗತಿಗಳನ್ನು ವ್ಯಕ್ತಿಗಳ ಮನಃಸಾಕ್ಷೀ/ತೀರ್ಮಾನಗಳಿಗೆ ಬಿಟ್ಟಿದ್ದರು. ಯಾರು ಪಾಪವನ್ನು ತ್ಯಜಿಸಿ ದೇವರ ಕಡೆಗೆ ತಿರುಗಿಕೊಳ್ಳುವರೋ ಅವರು ಪಾಪಕ್ಷಮೆಯನ್ನು ಹೊಂದಿ ಕ್ರಿಸ್ತನ ರಕ್ತದಲ್ಲಿರುವ ಯಜ್ಞಫಲದ ಮೂಲಕವಾಗಿ ದೇವರೊಂದಿಗೆ ಹೊಂದಾಣಿಕೆಗೆ ಬರಬಹುದೆಂಬುದನ್ನು ತಿಳಿಸಿದ್ದರು. ಪಾಪಗಳಿಗೆ ಪಶ್ಚಾತಾಪಪಟ್ಟು ತಮ್ಮ ಜೀವಿತವನ್ನು ಸಂಪೂರ್ಣವಾಗಿ ದೇವರ, ಸತ್ಯದ ಹಾಗು ನೀತಿಯ ವಿಷಯವಾದ ಸೇವೆಗೆ ಪ್ರತಿಷ್ಠೆ ಪಡಿಸಿಕೊಂಡು, ಒಳ್ಳೆಯ ಸೈನಿಕರಾಗಿ ಶ್ರಮೆಯನ್ನು ಅನುಭವಿಸಲು ಇಚ್ಛಿಸುವವರೆಲ್ಲರಿಗೂ ಉನ್ನತ ಸ್ಥಾನದ ಅಥವಾ ಪರಲೋಕದ ಬಾಧ್ಯತೆ ಹೊಂದುವ ಸಲುವಾದ ಕರೆಯ ವಿಷಯವಾಗಿ ತಿಳಿಸಿದ್ದರು.

ಒಂದು ಸಂದರ್ಭದಲ್ಲಿ ಯೇಸುವು ಶಾಂತಭಾವದಿಂದ ನಿರ್ಣಯಗಳನ್ನು ತೆಗೆದುಕೊಳ್ಳುವದನ್ನು ಮಸಕು ಮಾಡ–ಬಹುದಾದಂಥ ಉತ್ಸಾಹದ ವಿಷಯದಲ್ಲಿ ಸ್ಪಷ್ಟವಾಗಿ ಗದರಿಸಿ ಹೀಗೆ ಹೇಳಿರುವದನ್ನು ಸಹ ನಾವು ನೆನಪಿನಲ್ಲಿಟ್ಟುಕೊಂಡಿ–ರುವೆವು: "ಕುಳಿತುಕೊಂಡು ಲೆಕ್ಕಾಚಾರ ಹಾಕುವದು." (ಲೂಕ 14:28) ಸತ್ಯದ ವಿಷಯವಾಗಿ ಉಪದೇಶಿಸುವದರ ಮೂಲಕವಾಗಿ ತನ್ನ ಮಗನೊಂದಿಗೆ ಸಹ–ಬಾಧ್ಯರಾಗುವಂತೆ ಒಂದು ಗುಂಪಿಗೆ ಕರೆನೀಡುವದು ದೇವರಿಗೆ ಮೆಚ್ಚಿಗೆಯಾಗಿತ್ತು. ಅವರನ್ನು ದೇವರ ಮನೆತನವಾಗಲು ಕರತರುವದು ಪ್ರಾರ್ಥನೆಯ ಅಥವಾ ಭಾವೋದ್ವೇಗದ ಮೂಲಕವಾಗಿರದೆ ದೇವರು ಹಾಕಿರುವ ಶರತ್ತುವಿಧಿಗಳನ್ನು ಪ್ರಕಟಮಾಡಿ ಹೇಳುವದರ ಮೂಲಕವಾಗಿತ್ತು. ದೇವರ ಕೃಪೆಯನ್ನು ಅಂಗೀಕರಿಸುವಂಥವರಿಗೆ ತುರ್ತಾಗಿ ನೀಡಲಾದ ಸಂದೇಶವೇನಂದರೆ ಅವರು ತಾವು ಹೊಂದಿರುವಂಥದನ್ನು ವ್ಯರ್ಥಮಾಡಿಕೊಳ್ಳಬಾರದೆಂಬದು; ಹೇಗಂದರೆ ನೇಗಿಲಿನ ಮೇಲೆ ಕೈಹಾಕಿದ ಮೇಲೆ ಹಿಂತಿರುಗಿ ನೋಡಬಾರದೆಂಬುದು; ಅಂದರೆ ಕ್ರಿಸ್ತನ ಶಿಲುಬೆಯ ಒಳ್ಳೆಯ ಸೈನಿಕನಾಗಿ ಅವರು ಶ್ರಮೆಯನ್ನು ಅನುಭವಿಸುವವರಾಗಿ ಯಜ್ಞಾರ್ಪಣೆಯ ಸಂಬಂಧವಾದ ಸೇವೆಯ ಸೌಭಾಗ್ಯವನ್ನು ಪಡೆದ ವಿಷಯವಾಗಿ ಸಂತೋಷವುಳ್ಳವರಾಗಬೇಕೆಂಬದು.

ನಾವು ಪ್ರತಿಪಾದಿಸುತ್ತಿರುವ ಅಂಶವೇನಂದರೆ ಸತ್ಯವೇದದ ಅನುಸಾರವಾಗಿ ಕರ್ತನ ಸೈನ್ಯಕ್ಕೆ ಉದ್ಗಾರಘೋಷಣೆಗಳ ಮೂಲಕವಾಗಿ ಸೇರಿಸಿಕೊಳ್ಳಲಾಗುವಂಥ ಯಾವ ಪ್ರಯತ್ನವನ್ನು ಯೇಸುವಾಗಲೀ ಆತನ ಶಿಷ್ಯರಾಗಲೀ ಮಾಡಿರಲಿಲ್ಲವೆಂಬದು. ಇದರಲ್ಲಿ ನಾವು ಇತರರನ್ನು ಟೀಕೆಮಾಡದೆ ಕೇವಲ ದೇವಜನರಿಗೆ ಮಾರ್ಗದರ್ಶನ ನೀಡಿ ಅವರು ಆತನ ಚಿತ್ತವನ್ನು ನೆರವೇರಿಸುವ ಬಗ್ಗೆ ಬಹುವಾಗಿ ಸಂಬಂಧಿಸಿರುವ ಅಂಶಗಳನ್ನು ಅವರ ಗಮನಕ್ಕೆ ತರುವವರಾಗಿದ್ದೇವೆ.

## ಇತರ ಹತ್ತು ಮಂದಿ, ನೂರು ಮಂದಿ, ಸಾವಿರ ಮಂದಿಗಳು

ನಮ್ಮ ಪಾಠದಲ್ಲಿ ಹೇಳಲಾದ ಘಟನೆಯನ್ನು ಸಾಂಕೇತಿಕ ದೃಷ್ಟಿಯಿಂದ ನೋಡೋಣ. ಆ ಕುಷ್ಠರೋಗಿಗಳು ತಾವು ಅಶುದ್ಧರೆಂಬುದನ್ನು ಮನಗಂಡ ಪಾಪಿಗಳನ್ನು ಸೂಚಿಸುವಂತಾ–ಗಲಿ. ಅವರು ಕೇವಲ ತನ್ನಲ್ಲಿಯೇ ಪಾಪಕ್ಷಮೆಯನ್ನು ಹೊಂದಿರುವ ದೇವಕುಮಾರನಾದ ಕರ್ತನ ಶ್ರೇಷ್ಠತೆ ಹಾಗು ಶಕ್ತಿಸಾಮರ್ಥ್ಯಗಳನ್ನು ಪರೋಕ್ಷವಾಗಿ ಒಪ್ಪಿಕೊಂಡು ಆ ಮೂಲಕ ವಾಗಿ ಶುದ್ಧರಾಗುವದಕ್ಕಾಗಿ ಆತನಿಗೆ ಘಟ್ಟಿಯಾದ ಧ್ವನಿಯಿಂದ ಕೂಗಿಕೊಂಡಿದ್ದರು. ಅವರು ಆತನ ಹಿಂಬಾಲಕರಾಗಿ, ಆತನ ಶಿಷ್ಯರಾಗಬೇಕೆಂಬುದನ್ನು ಪರೋಕ್ಷವಾಗಿ ಪ್ರಕಟಿಸುವವರಾಗಿದ್ದು, ಪಾಪವು ಹಾನಿಕರವೆಂಬುದನ್ನು ಮನಗಂಡವರಾಗಿ ನಂತರದಲ್ಲಿ ಕರ್ತನ ಹೆಜ್ಜೆಯ ಜಾಡಿನಲ್ಲಿ ನಡೆಯುವವರಾಗಿ ತಮ್ಮಲ್ಲಿ ಅಲ್ಲದೆ ಎಲ್ಲೆಡೆ ಇರುವ ಪಾಪಕ್ಕೆ ವಿರೋಧವಾಗಿ ಹೋರಾಡಲು ನಿರ್ಧರಿಸಿರುವರು. ಆ ಹತ್ತು, ನೂರು, ಸಾವಿರ ಮಂದಿಯ ಎಷ್ಟು ಜನರ ಶ್ರದ್ಧೆಭಕ್ತಿ ಹಾಗು ನಂಬಿಕೆಗಳನ್ನು ನಮ್ಮ ಕರ್ತನು ಅಂಗೀಕರಿ –ಸಿರುವನು? ಅಂದರೆ ಆತನು ಗುಣಪಡಿಸಿ, ಕ್ಷಮಿಸಿ ಹಾಗು ತಮ್ಮ ಶಿಷ್ಯವೃತ್ತಿಯನ್ನು ಅಂಗೀಕರಿಸಿಕೊಂಡವರಲ್ಲಿ ಎಷ್ಟು ಮಂದಿ ವಾಸ್ತವದಲ್ಲಿ ಆತನ ನಿಜವಾದ ಹಿಂಬಾಲಕರಾಗಿರುವರು?

ಕರ್ತನಿಗೆ ತಮ್ಮ ದುಃಖವನ್ನು ಹೇಳಿಕೊಂಡು ಪಾಪಕ್ಷಮೆ ಹೊಂದಲು ತಮ್ಮಲ್ಲಿರುವ ಬಯಕೆಯನ್ನು ತಿಳಿಸಿ ಅಲ್ಲದೆ ಆತನ ಅನುಗ್ರಹಕ್ಕಾಗಿ ತಾವು ಆಜೀವಪರ್ಯಂತರ ಕೃತಜ್ಞತೆ ಹಾಗೂ ಶ್ರದ್ಧಾಭಕ್ತಿಯುಳ್ಳವರಾಗಿರಲು ಮಾತುಕೊಟ್ಟವರಲ್ಲಿ ಎಷ್ಟು ಮಂದಿ ತಮಗೆ ನೀಡಲಾದ ಸೌಭಾಗ್ಯ ಸವಲತ್ತುಗಳನ್ನು ಮರೆತು ಹೋಗಿರುವರು; ಅಲ್ಲದೆ ಎಷ್ಟು ಮಂದಿ ಆಶೀರ್ವಾದವನ್ನು ಪಡೆದ ನಂತರದಲ್ಲಿ ಒಬ್ಬನು ತನ್ನ ಹೊಲಕ್ಕೆ, ಒಬ್ಬನು ತನ್ನ ವ್ಯಾಪಾರಕ್ಕೆ, ಮತ್ತೊಬ್ಬನು ಸಂಭ್ರಮಿಸುವದಕ್ಕೆ, ಇನ್ನೊಬ್ಬನು ಸಂಪ್ರದಾಯ ಶಿಷ್ಟಾಚಾರಗಳಿಗೆ ಹಿಂತಿರುಗಿ ಹೋಗಿರುವರು. ಅದೆಷ್ಟು ಸ್ವಲ್ಪವೇ

ಮಂದಿ, ಕರುಣೆಗಾಗಿ ತಾವು ಮಾಡಿದ ಪ್ರಾರ್ಥನೆಯನ್ನೂ, ತಮ್ಮ ಪ್ರಾರ್ಥನೆಗೆ ಉತ್ತರ ದೊರೆತ ನಂತರದಲ್ಲಿ ತಾವು ಏನು ಮಾಡುವೆವೆಂಬುದಕ್ಕಾಗಿ ತೆಗೆದುಕೊಂಡ ತಮ್ಮ ನಿರ್ಧಾರಗಳನ್ನು ನೆನಪಿನಲ್ಲಿಟ್ಟುಕೊಂಡಿರುವವರು!

## ಪುನರುಜ್ಜೀವನವು ಕ್ರಮಬದ್ಧವಾಗಿರುವದು

ದೇವರೊಡನೆ ಒಡಂಬಡಿಕೆ ಮಾಡಿಕೊಂಡಂಥವರ ವಿಷಯದಲ್ಲಿ ನಿರ್ಣಾಯಕವಾದ ಪರೀಕ್ಷೆಯು ನಡೆಯುತ್ತಿರುವ ಕಾಲದಲ್ಲಿ ನಾವು ಜೀವಿಸುತ್ತಿರುವೆವೆಂಬ ಅಭಿಪ್ರಾಯವು ಹಲವು ಕ್ರೈಸ್ತರಲ್ಲಿ ಹೆಚ್ಚುತ್ತಾ ಬಂದಿರುವದು. ಅವರು ನಂಬಿರುವ-ದೇನಂದರೆ ಕ್ರಿಸ್ತನ ದೇಹವಾದ ಸಭೆಯು ಪುನರುತ್ಥಾನದಲ್ಲಿ ಉಂಟಾಗುವ ಮಾರ್ಪಾಟಿನ ಮೂಲಕವಾಗಿ ತನ್ನ ಮದಲಗಿತ್ತಿಯಾಗಲು ಕರ್ತನಿಂದ ಅಂಗೀಕರಿಸಲ್ಪಡುವ ಕಾಲಕ್ಕೆ ನಾವು ಸಮೀಪಿಸುತ್ತಿರುವೆವೆಂಬದು. ಅಪೋಸ್ತಲನು ಬರೆದು ತಿಳಿಸಿರುವಂತೆ, "ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆ ಬಡೆಯುವಷ್ಟರೊಳಗಾಗಿ ಮಾರ್ಪಡುವೆವು." ಕಾರಣ "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು;" ಈ ಸುವಾರ್ತಾ ಯುಗದಲ್ಲಿ ನೀಡಲಾಗಿರುವ ಕರೆಯು ಮದಲಗಿತ್ತಿಯ ವರ್ಗದವರಾಗಿ ಯೇಸುವಿನ ರಾಜ್ಯದಲ್ಲಿ ಆತನಿಗೆ ಸಹಕಾರಿಗಳಾಗಿ ರೂಪುಗೊಳ್ಳುವವರನ್ನು ಕಂಡುಕೊಳ್ಳುವ ಸಲುವಾಗಿರುದು.

ಯಹೂದ್ಯರ ವಿಷಯವಾಗಿ ಅವರ ಕಾಲದ ಅಂತ್ಯದಲ್ಲಿ ಸಂಭವಿಸುವ ಪರೀಕ್ಷೆಯ ಸಮಯದಲ್ಲಿ "ದೇವರು ನಿನಗೆ ದರ್ಶನಕೊಟ್ಟ ಸಮಯವನ್ನು ನೀನು ತಿಳುಕೊಳ್ಳಲಿಲ್ಲ" ಎಂದು ಯೇಸುವು ಯೆಹೂದ್ಯರ ವಿಷಯವಾಗಿ ಹೇಳಿದ್ದನು. ಹೋಲಿಸಿ ನೋಡಿದ್ದಲ್ಲಿ ಕೇವಲ ಕೆಲವರು ಮಾತ್ರವೇ ದೇವರಿಗೆ ಸಮೀಪಸ್ಥರಾಗಿರುವ ಮನೋಸ್ಥಿತಿಯಲ್ಲಿದ್ದವರಾಗಿ ಅದು ಅವರನ್ನು ತಾವು ಜೀವಿಸುತ್ತಿರುವ ಕಾಲಗಳ ಲಕ್ಷಣಗಳನ್ನು ಹಾಗು ಬದಲಾವಣಾಕಾರ್ಯವು ಪ್ರಗತಿಯಲ್ಲಿರುವದನ್ನು ಗ್ರಹಿಸಿಕೊಳ್ಳಲು ಸಮರ್ಥರನ್ನಾಗಿ ಮಾಡಿತ್ತು. ಇದರ ಅಭಿಪ್ರಾಯವೇನಂದರೆ ಇದೇ ರೀತಿಯ ಬದಲಾವಣೆಗಳು ಈಗ ನಮ್ಮ ಮೇಲೆ ಬಂದಿದ್ದು ಯಾರ ಮನೋನೇತ್ರಗಳು ತೆರೆಯಲ್ಪಟ್ಟಿರುವವೋ ಅವರಿಂದ ಅವುಗಳನ್ನು ಗ್ರಹಿಸಿಕೊಳ್ಳಲಾಗುತ್ತಿರುವದೆಂಬದು.

ನಮ್ಮ ಪಾಠದಲ್ಲಿನ ಸಮಾರ್ಯದವನು ತಮ್ಮ ನಡೆನುಡಿ ಆಲೋಚನೆಗಳಲ್ಲಿ ಕರ್ತನನ್ನು ಮಹಿಮೆ ಪಡಿಸಲು ಕೃತಜ್ಞತಾ-ಪೂರ್ವಕವಾಗಿ ಪರಿಶ್ರಮಿಸುವವರಾಗಿ ಆತನನ್ನು ಹಿಂಬಾಲಿಸುತ್ತಿರುವ ಒಂದು ವರ್ಗದವರನ್ನು ಪ್ರತಿನಿಧಿಸಿರುವನು; ಆದರೆ ದೇವಾನುಗ್ರಹವನ್ನು ಇದೇ ವಿಧವಾಗಿ ಅಂಗೀಕರಿಸಿ ಕೊಂಡವರಲ್ಲಿ ಬಹುಪಾಲು ಜನರು ಈಗಿನ ಜೀವಿತದ ಮಹತ್ವಾ-ಕಾಂಕ್ಷೆ ಮತ್ತು ಹರ್ಷೋಲ್ಲಾಸಗಳನ್ನು ಹಿಂಬಾಲಿಸಿಕೊಂಡು ಹೋಗುವ ಪ್ರವೃತ್ತಿಯಲ್ಲಿರುವರು. ಈ ಒಡೆಯನು ನಡೆದು ಬಂದ ದಾರಿಯಲ್ಲಿ ನಡೆಯುವದನ್ನು ನಿರ್ಲಕ್ಷಿಸುವವರಾಗಿ ಅವರು ನಮ್ಮ ಕರ್ತನು ಪಡಕೊಂಡ ಪ್ರಭಾವ ಮಾನ ನಿರ್ಲಯತ್ವಗಳನ್ನು ಪಡಕೊಳ್ಳುವ ಸ್ಥಿತಿಗೆ ತಲುಪಲಾರರು. ಕೆಳಮಟ್ಟದ ಒಂದು ಸ್ಥಾನವು ಅವರಿಗಾಗಿ ಇರಬೇಕು. ಸತ್ಯವೇದದ ಅನುಸಾರವಾಗಿ ಇನ್ನು ಸ್ವಲ್ಪ ಸಮಯದಲ್ಲೇ ಆ ರಾಜ್ಯದ ಪ್ರಭಾವಮಹಿಮೆಗಳು ವಿಸ್ಮಯಚಕಿತರಾದ ಲೋಕದವರಿಗೆ ತೋರ್ಪಡಿಸಲಾಗುವದು ಆಗ ಈಗಿನ ಕಾಲದಲ್ಲಿನ ಸಂಗತಿಗಳ ಮಹಿಮಾ ವೈಭವಗಳು ನಿರಂತರವಾಗಿ ಕಾಣದಂತಾಗುವದು.

ಮೇಲಿನಿಂದ ಬರುವ ನಿಜವಾದ ಜ್ಞಾನವು ನಮ್ಮ ರಕ್ಷಕನಲ್ಲಿ ತೋರ್ಪಡಲಾಗಿತ್ತು. ಆತನು ತನ್ನ ಜೀವವನ್ನು ಅಮೂಲ್ಯವೆಂದು ಎಣಿಸದೆ ತಂದೆಯ ಚಿತ್ತವನ್ನು ನೆರವೇರಿಸುವ ಸಲುವಾಗಿ ತನ್ನನ್ನು ಬರಿದು ಮಾಡಿಕೊಂಡ ಫಲವಾಗಿ ಈಗ ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿರುವನು. ಭಕ್ತನಾದ ಪೌಲನು ಇದೇ ಅಂಶವನ್ನು-ತಾನು ಕ್ರಿಸ್ತನ ದೇಹದಲ್ಲಿ ಅಂದರೆ ತೆರೆಯ ಆಚೆಯ ಕಡೆಯಲ್ಲಿರುವ ಮಹಿಮೆಯುಳ್ಳ ಸಭೆಯಲ್ಲಿ ಒಂದು ಸ್ಥಾನವನ್ನು ಸಂಪಾದಿಸಿ ಕೊಳ್ಳುವ ಸಲುವಾಗಿ ಎಲ್ಲವನ್ನು ಕಳಕೊಂಡು ಅದನ್ನು ಕಸವೆಂದು ಎಣಿಸುವೆನೆಂದು ಹೇಳಿರುವನು. ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಲೋಕದವರಿಗೆ ಉಂಟಾಗುವ ಆಶೀರ್ವಾದವು ಮಹತ್ವವುಳ್ಳದ್ದಾಗಿರುವದು, ಕ್ರೈಸ್ತ ಸಭೆಯು ಹೊಂದುವ ಆಶೀರ್ವಾದವು ಗ್ರಹಿಸಲಶಕ್ಯವಾಗಿ ಉನ್ನತವಾಗಿರುವದು.

*****

# ಮೆಸ್ಸೀಯನ ರಾಜ್ಯವು ಅಗೋಚರವಾಗಲಿರುವದು

**ರೀಪ್ರಿಂಟ್ಸ್ ಪುಟ 5455**

## ಲೂಕ 17:20-37

**"ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ" - ಲೂಕ 17:21**

ನಮ್ಮ ಗ್ರಹಿಕೆಗೆ ಬಂದಿರುವ ಸಂಗತಿಯೇನಂದರೆ ಒಡೆಯನ ನುಡಿಗಳು ಬಹುತೇಕ ನಾವು ನೋಡುತ್ತಿರುವ ಆತನಿದ್ದ ಸನ್ನಿವೇಶದ ಮೇಲೆ ಅವಲಂಬಿತವಾಗಿರುತ್ತದೆಂಬದು. ಸ್ನಾನಿಕನಾದ ಯೋಹಾನನು ಯೇಸುವಿಗೆ ಮುಂದಾಗಿ ಬಂದು ಆಗ ಸಮೀಪವಾಗಿದ್ದ ದೇವರ ರಾಜ್ಯದ ವಿಷಯವಾಗಿ ಉಪದೇಶ ಮಾಡಿದ್ದನು. ಕ್ಲುಪ್ತಕಾಲದಲ್ಲಿ ಆತನು ಯೇಸುವನ್ನು ತೋರಿಸಿ-ಕೊಡುವವನಾಗಿ-ಬರಬೇಕಾದ ಕ್ರಿಸ್ತನು, ದೇವರು ನೇಮಿಸಿದ ಯಜ್ಞದ ಕುರಿಮರಿ ಎಂದು ಹೇಳಿದ್ದನು. ಯೇಸುವು ಭೂಲೋಕದ ರಾಜನಾಗಿ ಸ್ಥಾಪಿತನಾಗುವದಕ್ಕಾಗಿ ತಿಂಗಳುಗಳ ಮಟ್ಟಿಗೆ ಕಾದುಕೊಂಡಿದ್ದ ನಂತರದಲ್ಲಿ ಇದಕ್ಕೆ ಪ್ರತಿಯಾಗಿ ಹೆರೋದನಿಂದ

ಸೆರೆಗೆ ಹಾಕಲ್ಪಟ್ಟು ತನ್ನ ಕೆಲಸವು ಮುಗಿಯುತ್ತಾ ಬರುತ್ತಿರುವ-ದೆಂಬುದನ್ನು ಕಂಡುಕೊಂಡಿದ್ದನು. ಆನಂತರ ಯೋಹಾನನು ಯೇಸುವಿಗೆ-ಬರಬೇಕಾದವನು ನೀನೋ ಅಥವಾ ನಾವು ಬೇರೊಬ್ಬನನ್ನು ನೋಡಬೇಕೋ ಎಂದು ಹೇಳಿ ಕಳುಹಿಸಿದ್ದನು. ತಾನು ನಿರೀಕ್ಷಿಸಿದ್ದಂತೆ ರಾಜ್ಯದ ಸ್ಥಾಪನೆಯ ಸಾಕ್ಷ್ಯಾಧಾರಗಳು ಕಾಣಲಿಲ್ಲವಾದ್ದರಿಂದ ಆತನು ನಿರಾಶನಾಗಿದ್ದನು.

ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವು ತಾನು ಬಹು ಕಾಲದಿಂದ ವಾಗ್ದಾನಿತನಾಗಿದ್ದ ಅರಸನೆಂದು ಹೇಳಿಕೊಳ್ಳುವದನ್ನು ಕೇಳಿ ಆತನಿಗೆ ಪರಿಹಾಸ್ಯಮಾಡಿದ್ದರು. ಬಗೆಬಗೆಯ ಜನರಾದ ಆತನ ಹಿಂಬಾಲಕರ ಗುಂಪನ್ನು ಅಂದರೆ ಸುಂಕದವರು ಹಾಗು ಪಾಪಿಗಳ ಸಹಿತವಾಗಿ ಘನವಂತರಾದ ಜನರನ್ನು ನೋಡಿದ್ದರು; ಆದರೆ ವಿಶೇಷ ಅಧಿಕಾರಸ್ಥಾನದಲ್ಲಿರುವವರು, ಪ್ರಭಾವಿತರು ಅಥವಾ ಧನಿಕರು ಯಾರೂ ಇರಲಿಲ್ಲ. ಅವರು ಯೇಸುವನ್ನು ಮೋಸಗಾರನೆಂತಲೂ ಹಾಗು ಆತನ ಹಿಂಬಾಲಕರನ್ನು ಮೋಸ ಹೋದವರೆಂದು ಎಣಿಸಿದ್ದರು. ತಾವು ಎಣಿಸಿಕೊಂಡಿದ್ದ ಯೇಸುವಿನ ವಂಚನೆಯನ್ನು ಹಾಗು ಆತನ ಹಿಂಬಾಲಕರ ಭ್ರಾಂತಿಯನ್ನು ಹೊರಗೆಡವಲು  ಅವರು ಹೇಗೆ ಪ್ರಯತ್ನಿಸಿದ್ದ-ರೆಂಬುದನ್ನು ನಮ್ಮ ಪಾಠವು ತಿಳಿಸುತ್ತದೆ. ಆದುದರಿಂದ ಅವರು ಆತನನ್ನು ಸಾರ್ವಜನಿಕರ ಎದುರಿನಲ್ಲಿ ದೇವರ ರಾಜ್ಯವು ಯಾವಾಗ ಬರುವದು? ನೀನು ಅದನ್ನು ಸ್ಥಾಪಿಸುವದಕ್ಕೆ ಮೊದಲು ಎಷ್ಟು ಸಮಯ ಹಿಡಿಯುವದು? ಎಂದು ಬಹಿರಂಗ-ವಾಗಿ ಪ್ರಶ್ನೆಮಾಡಿದ್ದರು.

ನಿಸ್ಸಂದೇಹವಾಗಿ ಅವರು ಯೇಸುವನ್ನು ಸಿಕ್ಕಿಬೀಳಿಸಲು ಉದ್ದೇಶಿದ್ದರು; ಹೇಗೆಂದರೆ ಬಹುಕಾಲ ಹಿಡಿಯುವದೆಂದು ಆತನು ಹೇಳಿದ್ದೇಯಾದಲ್ಲಿ ಆತನ ಹಿಂಬಾಲಕರು ಹತಾಶ-ರಾಗುತ್ತಿದ್ದರು; ಸ್ವಲ್ಪಕಾಲವೆಂದು ಹೇಳಿದ್ದೇಯಾದಲ್ಲಿ ಅವರು-ನಿನ್ನ ಸೈನ್ಯವನ್ನು ಎಲ್ಲಿಂದ ತರುತ್ತೀ? ನಿನ್ನ ಸೈನಿಕರಿಗೆ ಹೇಗೆ ಸಂಬಳ ನೀಡುತ್ತೀ? ಅವರಿಗೆ ಆಹಾರವನ್ನು ಹೇಗೆ ಒದಗಿಸುತ್ತೀ? ಇಡೀ ನಮ್ಮ ದೇಶವು ನಿನ್ನೊಡನೆ ಸಹಕರಿಸಲು ಅಸಮರ್ಥವಾಗಿರು-ವದು; ನೀನು ರೋಮ್ ಪಟ್ಟಣಕ್ಕೆ ಹೋಗಿ ಅಲ್ಲಿ ಅಧಿಕಾರಸ್ಥರ ವಿರುದ್ಧವಾಗಿ ಹೋರಾಡುವೆಯೋ? ಮುಂತಾದ ಪ್ರಶ್ನೆಗಳನ್ನು ಹಾಕಲು ಮುಂದಾಗುತ್ತಿದ್ದರು.

ಆದರೆ ಫರಿಸಾಯರು ಕೇವಲ ತಮ್ಮ ಮೊದಲನೇ ಪ್ರಶ್ನೆಗೆ ಉತ್ತರವನ್ನಷ್ಟೇ ಪಡಕೊಂಡಿದ್ದರು, ಕಾರಣ ಆ ಉತ್ತರವು ಅವರನ್ನು ತಪ್ಪಿತಸ್ಥರನ್ನಾಗಿ ಮಾಡಿ ಅವರನ್ನು ಕಂಗೆಡಿಸಿದ್ದರಲ್ಲಿ ಸಂದೇಹವಿರಲಿಲ್ಲ. ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂತ ದ್ದಲ್ಲವೆಂದು ಯೇಸುವು ಉತ್ತರಿಸಿದ್ದನು; ಹೇಗಂದರೆ ಆ ರಾಜ್ಯವು ಬಂದಾಗ ಜನರು ಅದನ್ನು ನೋಡುವದಿಲ್ಲವೆಂಬದು. ಯೇಸುವು ಮುಂದುವರೆದವನಾಗಿ-ದೇವರ ರಾಜ್ಯವು ಸ್ಥಾಪನೆಗೊಂಡಾಗ ಅದು ಇಲ್ಲಿರುವದು ಅಥವಾ ಅಲ್ಲಿರುವದೆಂದು ಜನರು ನೋಡುವದಕ್ಕಾಗದು; ಯಾಕೆಂದರೆ ದೇವರ ರಾಜ್ಯವೆಂಬದು ಜನರ ಮಧ್ಯದಲ್ಲಿ ದೇವರ ಶಕ್ತಿಯಾಗಿ ಎಲ್ಲಾ ಕಡೆಯಲ್ಲಿಯೂ ಪ್ರಯೋಗಿಸಲ್ಪಡುವದೆಂದು ವಿವರಿಸಿ ಹೇಳಿದ್ದನು.

"ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ" ಎಂದು ಓದಲ್ಪಡುವ ನಮ್ಮ ಭಾಷಾಂತರವು ದೋಷಪೂರಿತ-ವಾಗಿರುವದು; ಆದರೂ ಅದು ಉದ್ದೇಶಪೂರಿತವಲ್ಲವೆಂಬದೂ ಸ್ಪಷ್ಟವಾಗಿರುವುದು. ಭಾಷಾಂತರಕಾರರು ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದೇಯಾದಲ್ಲಿ ಯೇಸುವು ಕಪಟಿಗಳೂ ಸುಣ್ಣಹಚ್ಚಿದ ಸಮಾಧಿಗಳೂ, ಮುಂತಾದವರೆಂದು ಹೇಳಿದ್ದ ಫರಿಸಾಯರ ಮಧ್ಯದಲ್ಲಿ ದೇವರ ರಾಜ್ಯವಿರುವದೆಂದು ಹೇಳದಂತೆ ಜಾಗರೂಕತೆವಹಿಸುತ್ತಿದ್ದರು. ಮೂಲಭಾಷೆಯನ್ನು ಅವರು ಸೂಕ್ಷವಾಗಿ ಪರಿಶೀಲಿಸಿದ್ದಲ್ಲಿ, ಆ ವಚನಭಾಗವು ಅವರಿಗೆ-"ದೇವರ ರಾಜ್ಯವು ನಿಮ್ಮ ಮಧ್ಯದಲ್ಲಿರುವದು" ಎಂದು ಉತ್ತಮ ರೀತಿಯಲ್ಲಿ ಭಾಷಾಂತರಿಸಲು ಅವರಿಗೆ ತೋರಿಸಿಕೊಡುತ್ತಿತ್ತು.

ಒಂದು ರಾಜ್ಯವು ಯಾವಾಗಲೂ ಅದರ ರಾಜನ ಮೂಲಕವಾಗಿ ಪ್ರತಿನಿಧಿಸಲ್ಪಡುವದು. ಯೇಸುವು ರಾಜನಾಗಿ ಅವರ ಮಧ್ಯದಲ್ಲಿ ಉಪಸ್ಥಿತನಾಗಿದ್ದನು, ಆದರೆ ಅವರು ಆತನ ಗುರುತುಹಿಡಿದಿರಲಿಲ್ಲ. "ಆದರೆ ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ:" ಇದರಂತೆಯೇ ಸುವಾರ್ತಾಯುಗದ ಪರ್ಯಂತರ "ಆತನ (ಕ್ರಿಸ್ತನ) ದೇಹವಾದ" ಕ್ರೈಸ್ತಸಭೆಯನ್ನು ಲೋಕವು ತಿಳುಕೊಳ್ಳದೇ ಹೋಗಿರುವದು. "ಲೋಕವು ನಮ್ಮನ್ನು ತಿಳುಕೊಳ್ಳುವದಿಲ್ಲ ಅದು ಆತನನ್ನೂ ತಿಳುಕೊಳ್ಳಲಿಲ್ಲವಲ್ಲಾ." ಈ ಅರ್ಥದಲ್ಲಿ ಇದು ಹದಿನೆಂಟು ಶತಮಾನಗಳ ಪರ್ಯಂತರವೂ ಸತ್ಯವಾಗಿತ್ತು; ಆದರೆ ಸಂಪೂರ್ಣವಾಗಿ ಸೂಕ್ತವಾಗಿರುವ ಒಂದು ಅರ್ಥದಲ್ಲಿ ಕ್ರಿಸ್ತನು ಹಾಗು ಶರೀರದಲ್ಲಿರುವ ಸಭೆಯು ಸತ್ಯವೇದದಲ್ಲಿ ವಾಗ್ದಾನ ಮಾಡಲ್ಪಟ್ಟಿರುವಂತೆ ಬಲದಿಂದಲೂ ಮಹಾ ಮಹಿಮೆಯಿಂದಲೂ ಕೂಡಿರುವ ದೇವರ ರಾಜ್ಯವಾಗಿರುವದಿಲ್ಲ. ಕ್ರಿಸ್ತನು ಹಾಗು ಸಭೆಯು ಕೇವಲ ಆರಂಭಿಕವಾದ ಅಂದರೆ ಗರ್ಭಾವಸ್ಥೆ-ಯಲ್ಲಿರುವ ಒಂದು ರಾಜ್ಯವಾಗಿರುವದು; ನಾವು ನಂಬಿರುವಂತೆ ಈಗ ಸಮೀಪಿಸುತ್ತಿರುವ ಆ ರಾಜ್ಯದ ವರ್ಗದವರಾದ ಸಭೆಯು ಅಧಿಕಾರವನ್ನು ಸ್ವೀಕರಿಸಲು ಸಿದ್ಧವಾಗುತ್ತಿರುವದು.

ಆ ರಾಜ್ಯವು ಒಂದು ಆತ್ಮಿಕರೂಪವಾಗಿ ಇರಬೇಕಾದು-ದರಿಂದ ಅದರ ಅಧಿಕಾರಸ್ಥರು,  ದೇವದೂತರುಗಳು ಮತ್ತು ಪರಲೋಕದ ತಂದೆಯು ಇರುವಂತೆ, ಅಗೋಚರವಾಗಿರುವರು. ಯೇಸುವು ತಿಳಿಸಿದ್ದು, "ಇನ್ನು ಸ್ವಲ್ಪಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ." ಯಾವುದು ಶಿರಸ್ಸಾದವನ ವಿಷಯ -ದಲ್ಲಿ ಸತ್ಯವಾಗಿರುವದೋ ಕ್ರಿಸ್ತನ ದೇಹವಾದ ಆರಿಸಲ್ಪಟ್ಟ ಸಭೆಯ ವಿಷಯದಲ್ಲಿಯೂ ಅದೇ ಸತ್ಯವಾಗಿರುವದು. "ರೆಪ್ಪೆ ಬಡಿಯುವಷ್ಟ-ರೊಳಗಾಗಿ ಮಾರ್ಪಡುವೆವು," ಲೋಕವು ಅವರನ್ನು ಇನ್ನು ಮೇಲೆ ನೋಡುವದಿಲ್ಲ; "ರಕ್ತಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು;" ರಕ್ತಮಾಂಸವು ಆತ್ಮಿಕವಾದುದನ್ನು ಕಾಣಲು ಸಾಧ್ಯವಾಗದು.

ಸಾವಿರ ವರುಷದ ಕಾಲದಲ್ಲಿ ರಾಜ್ಯಾಧಿಕಾರ ಮತ್ತು ದೇವರ ಶಕ್ತಿಯನ್ನು ಕ್ರಿಸ್ತನು ಹಾಗೂ ಸಭೆಯ ಮೂಲಕವಾಗಿ ಜನರ ಮಧ್ಯದಲ್ಲಿ ಪ್ರಯೋಗಿಸಲಾಗುವದು; ಆದರೂ ಅವರು ಅದನ್ನು

ಶಾರೀರಿಕ ಕಣ್ಣಿನ ಮೂಲಕವಾಗಿ ನೋಡಲಾಗದು, ಆದರೆ ಕೇವಲ ಅವರ ಮನೋನೇತ್ರಗಳ ಮೂಲಕವಾಗಿ ನೋಡಲಾಗುವದು. ಎಲ್ಲರ ಕುರುಡಾದ ಕಣ್ಣುಗಳು ತೆರೆಯಲ್ಪಡುವವು. ಹೀಗೆ ಪ್ರತಿಯೊಬ್ಬರ ಕಣ್ಣುಗಳು ಆ ರಾಜ್ಯವು ಸ್ಥಾಪನೆಯಾಗಿರುವದನ್ನು ಕಾಣುವವು; ಬಾಧೆಗೊಳಗಾಗಿದ್ದ ಆತನು ತನ್ನ ಮಹಿಮೆಗೆ ಸೇರಿರುವದನ್ನೂ, ಆತನ ಮದಲಗಿತ್ತಿಯಾದ ಸಭೆಯು ಆತನೊಡನೆ ಮಹಿಮೆಗೆ ಸೇರಿರುವದನ್ನು ಹಾಗು ಇವರ ಮೂಲಕ ವಾಗಿ ಸಾವಿರ ವರುಷದಲ್ಲಿನ ಆಶೀರ್ವಾದಗಳು ಹೊರಟು ಬರುವ ದೆಂಬುದನ್ನು ಎಲ್ಲರೂ ಗ್ರಹಿಸಿಕೊಳ್ಳುವರು – ಪ್ರಕಟನೆ 20:6

## "ಮನುಷ್ಯಕುಮಾರನ ದಿನಗಳು"

ನಿರುತ್ತರಗೊಂಡ ಫರಿಸಾಯರ ಕಡೆಯಿಂದ ತನ್ನ ಶಿಷ್ಯರ ಕಡೆಗೆ ತಿರುಗಿಕೊಂಡವನಾಗಿ ಯೇಸುವು ಹೇಳಿದ್ದು, "ಒಂದು ಕಾಲ ಬರುತ್ತದೆ, ಅದರಲ್ಲಿ ನೀವು ಮನುಷ್ಯಕುಮಾರನ ದಿವಸ ಗಳೊಳಗೆ ಒಂದು ದಿನವನ್ನು ನೋಡಬೇಕೆಂದು ಅಪೇಕ್ಷಿಸಿದರೂ ಅದನ್ನು ನೋಡದೆ ಇರುವಿರಿ." ಆತನಲ್ಲಿ ನಂಬಿಗಸ್ತರಾಗಿದ್ದವರಿಗೆ ಇದು ಒಂದು ವಿಸ್ಮಯದ ಸುದ್ದಿಯಾಗಿತ್ತು. ಹೀಗಿದ್ದರೂ ತಮಗೆ ಗ್ರಹಿಸಲಾಗದ ವಿಷಯಗಳನ್ನು ಗುರುವಿನಿಂದ ಕೇಳುತ್ತಿದ್ದುದು ಅವರಿಗೆ ವಾಡಿಕೆಯಾಗಿತ್ತು; ಅಂದರೆ ಅವರು ಆತನ ಮಾಂಸ – ವನ್ನು ತಿಂದು ಆತನ ರಕ್ತವನ್ನು ಕುಡಿಯುವದು, ಆತನು ಶಿಲುಬೆಗೆ ಹಾಕಲ್ಪಡಬೇಕಾಗಿರುವದು ಮುಂತಾದವುಗಳನ್ನು ಕೇಳುತ್ತಿದ್ದುದು ಅವರಿಗೆ ವಾಡಿಕೆಯಾಗಿತ್ತು. ಈ ಎಲ್ಲಾ ಸಂಗತಿಗಳನ್ನು ಅವರು ಸಾಂಕೇತಿಕವಾಗಿ ತೆಗೆದುಕೊಂಡವರಾಗಿ ಅವುಗಳ ನಿಜವಾದ ಅರ್ಥವಿವರಣೆಗಳು ಏನಾಗಿರಬಹುದೆಂದು ಆಶ್ಚರ್ಯಪಡುತ್ತಿ – ದ್ದರು. ತಾವು ನಿರೀಕ್ಷಿಸಿದ ರೀತಿಯಲ್ಲಿ ಆವರೆಗೂ ಅವರು ಆತನನ್ನೂ ಆತನ ದಿನಗಳನ್ನೂ ನೋಡಲಾಗದಿರಲು ಯೇಸುವು ಆ ದೊಡ್ಡ ಅರಸನಾಗಿರಲು ಹೇಗೆ ಸಾಧ್ಯವೆಂಬ ವಿಷಯದಲ್ಲಿ ಆಶ್ಚರ್ಯಪಡುತ್ತಿದ್ದರು.

ಯೇಸುವು ಈ ನಿಗೂಢವಾದ ವಿಚಾರಗಳ ಸಂಭಾಷಣೆ ಯನ್ನು ಮುಂದುವರೆಸುತ್ತಾ ಹೀಗೆ ಹೇಳಿದ್ದನು: (ಜನರು ನಿಮಗೆ) "ಅಗೋ ಅಲ್ಲಿದ್ದಾನೆ, ಇಗೋ ಇಲ್ಲಿದ್ದಾನೆ ಎಂದು ಹೇಳಿದರೆ ನೀವು ಹೊರಟುಹೋಗಬೇಡಿರಿ, ಅವರನ್ನು ಹಿಂಬಾಲಿಸಲೂ ಬೇಡಿರಿ." ಒಂದೆ ಮಾತಿನಲ್ಲಿ ಹೇಳುವದಾದರೆ, ತನ್ನ ಎರಡನೇ ಬರೋಣದ ವಿಷಯವಾಗಿ ಯಾರಾದರೂ ಹೀಗೆ ಹೇಳಿದರೆ ಅವರನ್ನು ನಂಬಬೇಡಿರಿ; ಇಂಥಾ ಯಾವುದೇ ರೀತಿಯಲ್ಲಿ ನಾನು ಬರುವನೆಂಬುದನ್ನು ನಂಬಿ ಮೋಸ ಹೋಗಬೇಡಿರಿ. ನಾನು ಹೇಗೆ ಬರುವೆನೆಂಬುದನ್ನು ನಿಮಗೆ ಹೇಳುತ್ತೇನೆ: "...ಮಿಂಚು ಮಿಂಚುತ್ತಾ ಆಕಾಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೇಗೆ ಹೊಳೆಯುವದೋ ಹಾಗೆಯೇ ಮನುಷ್ಯಕುಮಾರನು ತನ್ನ ದಿನದಲ್ಲಿರುವನು,"

ಈ ದಿಗ್ಭ್ರಮೆಗೊಳಿಸುವ ಹೇಳಿಕೆಯನ್ನು ನಾವು ಗ್ರೀಕ್ ಭಾಷೆಯ 'ಆಸ್ಟ್ರಾಪ್' (astrape) ಎಂಬ ನಾಮಪದವನ್ನು "ಮಿಂಚು" ಎನ್ನುವದಕ್ಕೆ ಬದಲಾಗಿ "ಹೊಳೆಯುವದು" ಎಂದು ಭಾಷಾಂತರಿಸಿದಲ್ಲಿ ಇದು ಉತ್ತಮ ರೀತಿಯಲ್ಲಿ ಅರ್ಥವಾಗು– ವದು; ಯಾಕೆಂದರೆ ಇದು ಸ್ಪಷ್ಟವಾಗಿ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವ ಅಂದರೆ ಆಕಾಶದ ಒಂದು ಭಾಗದಿಂದ ಇನ್ನೊಂದು ಭಾಗದವರೆಗೂ ಹೊಳೆಯುವ ಸೂರ್ಯನನ್ನು ಉಲ್ಲೇಖಿಸುತ್ತದೆ. ಆದರೆ ಇದು ತನ್ನ ದಿನದಲ್ಲಿ ಇರುವ ಮನುಷ್ಯಕುಮಾರನನ್ನು ಹೇಗೆ ಪ್ರತಿನಿಧಿಸುವದು? ಅವನು ಹೇಗೆ ಸೂರ್ಯನಂತಿರುವನು? ನಮ್ಮ ಉತ್ತರವೆಂದರೆ, ಕ್ರಿಸ್ತನ ದಿನವು ಸಹಸ್ರವರುಷಗಳ ಕಾಲ (ಮಿಲೇನಿಯಮ್, Millennium) ಅಂದರೆ ಒಂದು ಸಾವಿರ ವರುಷಗಳ ಒಂದು ದಿನ; ಅಲ್ಲದೆ ನಮ್ಮ ಕರ್ತನ ಈ ಹೇಳಿಕೆಯು ತನ್ನ "ಒಗಟು ನುಡಿಗಳಲ್ಲಿ" ಒಂದಾಗಿದ್ದು ಇದರ ಬಗ್ಗೆ ಯೇಸು, "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ." ಎಂದು ಹೇಳಿ ಕ್ಲುಪ್ತಕಾಲದಲ್ಲಿ ಪ್ರವಿತ್ರಾತ್ಮನು ಅವರಿಗೆ ತನ್ನ (ಯೇಸುವಿನ) ಎಲ್ಲಾ ನುಡಿಗಳನ್ನು ಅರ್ಥಮಾಡಿಕೊಳ್ಳುವ ಹಾಗೆ ತಿಳಿಯಪಡಿಸು ವನೆಂದು ವಾಗ್ದಾನಮಾಡಿದ್ದನು. ಈ ಅಂಶವನ್ನು ಅರ್ಥಮಾಡಿ – ಕೊಳ್ಳಲು ಇದು ನಿಗದಿತ ಕಾಲವಾಗಿರುವದರಿಂದ ಆತ್ಮಿಕ ಸಂಗತಿ– ಗಳನ್ನು ಗ್ರಹಿಸುವವರಿಗೆ ಇದು ಸ್ಪಷ್ಟವಾಗುತ್ತಾ ಬರುತ್ತಿರುವದು.

ಆಗ ಅವರು ಕ್ರಮೇಣ ಈ ಸಂಗತಿಗಳು ಒಂದು ದೂರದ ಕಾಲಕ್ಕೆ ಸಂಬಂಧಿಸಿದುದೆಂಬುದನ್ನು ತಿಳುಕೊಳ್ಳಲಾಗುವಂತೆ, ಯೇಸುವು ತಾನು ಮೊದಲು ಬಹು ಕಷ್ಟಗಳನ್ನನುಭವಿಸಿ ಆ ಜನರಿಂದ ನಿರಾಕರಿಸಲ್ಪಡಬೇಕೆಂಬುದನ್ನು ವಿವರಿಸಿ ಹೇಳಿದ್ದನು. ಆತನ ಪ್ರತ್ಯಕ್ಷತೆಯ ಸೂಚನೆಗಳೇನೆಂಬುದರ ವಿಷಯಗಳಿಗೆ ಹಿಂತಿರುಗಿದವನಾಗಿ ಮತ್ತಾಯನು ಬರೆದ ಸುವಾರ್ತೆಯ 24ನೇ ಅಧ್ಯಾಯದಲ್ಲಿ ಲಿಖಿತವಾಗಿರುವಂತೆ ಅವರ ಪ್ರಶ್ನೆಗೆ ಉತ್ತರವಾಗಿ ಆತನು ಹೀಗೆ ಪ್ರಕಟಮಾಡಿ ಹೇಳಿದ್ದನು: "ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಮನುಷ್ಯಕುಮಾರನ ದಿವಸಗಳಲ್ಲಿಯೂ ನಡೆಯುವದು."

ಇಲ್ಲಿ ಕೆಲವು ಸ್ಪಷ್ಟವೂ ನಿರ್ದಿಷ್ಟವೂ ಆದ ಸಂಗತಿಗಳನ್ನು ನಾವು ಹೊಂದಿದ್ದೇವೆ. ಆ ರಾಜ್ಯವು ಸ್ಥಾಪನೆಗೊಳ್ಳಲು ನಿಗದಿತವಾದ ಸಮಯವು ಬಂದಾಗ ಅಂದರೆ ನೀತಿ ಸೂರ್ಯನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಹೊಳೆಯಲು ಆರಂಭಿಸುವಾಗ ನಾವು ಏನನ್ನು ಎದುರು ನೋಡಬೇಕೆಂದುದನ್ನು ತಿಳಿದಿದ್ದೇವೆ. ಆ ಕಾಲಗಳ ಸೂಚನೆಗಳು ಪ್ರಪಂಚದ ಬಾಹ್ಯ ಸ್ಥಿತಿಗತಿಗಳ ವಿಷಯವಾಗಿರುವದಿಲ್ಲ; ಯಾಕೆಂದರೆ, ಇದಕ್ಕೆ ಪ್ರತಿಯಾಗಿ, ಪ್ರತಿಯೊಂದು ಸಂಗತಿಗಳೂ ಸ್ವಲ್ಪಮಟ್ಟಿಗೆ ಎಂದಿನಂತೆಯೇ ಕ್ರಮವಾಗಿಯೇ ನಡೆಯುತ್ತಿರುವದು ಅಂದರೆ ಜಲಪ್ರಳಯವು ಬರುವದಕ್ಕೆ ಮೊದಲು ನೋಹನ ದಿನಗಳಲ್ಲಿದ್ದಂತೆ ಹಾಗೂ ಸೊದೋಮ್ ಪಟ್ಟಣವು ನಾಶವಾಗುವ –ದಕ್ಕೆ ಮೊದಲು ಜನರು ಎಂದಿನಂತೆ ತಿನ್ನುತ್ತಿದ್ದರು ಕುಡಿಯುತ್ತಿ – ದ್ದರು ಮದುವೆ ಮಾಡುತ್ತಿದ್ದರು ಕಟ್ಟುತ್ತಿದ್ದರು ಕೊಳ್ಳುತ್ತಿದ್ದರು ಬಿತ್ತುತ್ತಿದ್ದರು ನೆಡುತ್ತಿದ್ದರು. ಈ ಸಂಗತಿಗಳು ಕೆಟ್ಟತನದ ಸೂಚನೆಗಳಾಗಿರುವದಿಲ್ಲ, ಆದರೆ ಕ್ರಿಸ್ತನ ಎರಡನೇ ಪ್ರತ್ಯಕ್ಷತೆಯ ಕಾಲವು ಅಂದರೆ ಆತನು ಲೋಕದವರೊಡನೆ ವ್ಯವಹರಿಸಲು ಆರಂಭಿಸಿ ತನ್ನ ರಾಜ್ಯವನ್ನು ಸ್ಥಾಪಿಸುವಾಗ ಲೋಕಕ್ಕೆ ತೋರಿಸಿಕೊಡಲು ಯಾವ ಬಾಹ್ಯ ಸೂಚನೆಗಳೂ ಇರುವದಿಲ್ಲ.

## ಜಲಪ್ರಳಯ ಹಾಗು ಸೊದೋಮಿನ ನಾಶನ

ಮೆಸ್ಸೀಯನ ರಾಜ್ಯದ ಸ್ಥಾಪನೆಯ ಸಂಬಂಧದ ಪ್ರಸ್ತಾವನೆಯಲ್ಲಿ ಜಲಪ್ರಳಯ ಹಾಗು ಸೊದೋಮಿನ ನಾಶನವೆಂಬ ಈ ಎರಡು ಚಿತ್ರಣಗಳನ್ನು ಪರಿಚಯಿಸುತ್ತಿರುವದು ಏಕೆ? ಇದಕ್ಕೆ ಉತ್ತರವೆಂದರೆ ಸತ್ಯವೇದದಲ್ಲಿ ಎಲ್ಲೆಡೆ ಮುಂತಿಳಿಸಿರುವ ಪ್ರಕಾರ ಮೆಸ್ಸೀಯನ ರಾಜ್ಯವೆಂಬದು (ಮಾನವರ ಮೇಲಿರುವ) ಶಾಪವನ್ನು ತೆಗೆದುಹಾಕಿ ಲೋಕಾದ್ಯಂತ ಆಶೀರ್ವಾದವನ್ನು ತರುವ ದೇವರ ಒಂದು ಅತ್ಯುನ್ನತವಾದ ಏರ್ಪಾಟಾಗಿದ್ದಾಗ್ಯೂ ಅದು ಶಿಥಿಲಗೊಂಡ ನಮ್ಮ ಈಗಿನ ವ್ಯವಸ್ಥೆಗಳ ಮೇಲೆ ಸ್ಥಾಪನೆ–ಗೊಳ್ಳಲಿರುವದು. ಅಲ್ಲದೆ ಅದು ಈಗಿನ ಕಾಲದ ಈ ಸಮಾಜ ಅರ್ಥವ್ಯವಸ್ಥೆ ರಾಜಕೀಯ ಮತ್ತು ಧಾರ್ಮಿಕ ಸಂಸ್ಥೆಗಳು ಶಿಥಿಲಗೊಳ್ಳುವದನ್ನು ಯೇಸುವು ಜಲಪ್ರಳಯ ಮತ್ತು ಸೋದೊಮಿನ ನಾಶನದ ದೃಷ್ಟಾಂತಗಳ ಮೂಲಕವಾಗಿ ವಿವರಿಸಿ ಹೇಳಿರುವನು. ಈ ಸಂಕಟ ಕಾಲಗಳಿಗೆ ಮೊದಲು ತಾನು ಪ್ರತ್ಯಕ್ಷನಾಗಿರುವಂಥದ್ದು ನಿಸ್ಸಂಶಯಸ್ಥರಾದ ಹಾಗೂ ನಂಬಿಕೆ–ಯಿಲ್ಲದ ಲೋಕದವರಿಗೆ ಆ ಸಂಕಟವು ಪ್ರಳಯದಂತೆ ಹಠಾತ್ತಾಗಿ ಆವರಿಸಿಕೊಳ್ಳುವವರೆಗೂ ಅವರಿಗೆ ತಿಳಿಯದೆ ಇರುವದು.

ಇದು ಒಂದು ಆಕರ್ಷಕವಾದ ಚಿತ್ರಣವಾಗಿರುವದಿಲ್ಲ. ನಾವು ಇದರಿಂದ ತಿರಿಗಿಕೊಂಡು ಕೇಡೆಂಬ ಮೋಡದ ಅಂಚಿನಲ್ಲಿರುವ ಬೆಳ್ಳಿಗೆರೆಗಳೆಂಬ (ಉತ್ತಮ ಕಾಲಗಳ) ಭರವಸವನ್ನು ಅಂದರೆ ಮಾನವ ವೈಫಲ್ಯತೆಯ ಅವಶೇಷಗಳ ಮೇಲೆ ಸ್ಥಾಪನೆಗೊಳ್ಳುವ ಆ ರಾಜ್ಯದಲ್ಲಿನ ಭವ್ಯವಾದ ಆಶೀರ್ವಾದಗಳು ಶೀಘ್ರವಾಗಿ ಇವುಗ–ಳನ್ನು ಹಿಂಬಾಲಿಸಿ ಬರುವದನ್ನು ಗಮನಿಸುವವರಾಗಿರುವೆವು.

ಲೋಕವನ್ನು ಹಠಾತ್ತಾಗಿ ಆವರಿಸಿಕೊಳ್ಳುವ ಕೇಡು–ವಿಪತ್ತುಗಳ ತೀಕ್ಷ್ಣತೆಯ ಬಗ್ಗೆ ಒತ್ತುಕೊಟ್ಟು ಯೇಸುವು ಲೋಟನು ಸೊದೋಮನ್ನು ಬಿಟ್ಟು ಹೋದ ದಿನವೇ ಬೆಂಕಿ ಗಂಧಕಗಳು ಆಕಾಶದಿಂದ ಬಿದ್ದಿದ್ದ ವಿಷಯವನ್ನು ಹೇಳಿದ್ದನು; ಮನುಷ್ಯ ಕುಮಾರನು ಪ್ರಕಟಮಾಡಿಕೊಳ್ಳುವ ದಿನದಲ್ಲಿಯೂ ಹೀಗೆಯೇ ಇರುವದೆಂದು ಸಾರಿ ಹೇಳಿದ್ದನು. ಸಂಕಟದ ಕಾಲದ ಮೊದಲು ಉಂಟಾಗುವ ಪರೂಶಿಯಾ (Parousia) ಅಥವಾ ಕ್ರಿಸ್ತನ ಪ್ರತ್ಯಕ್ಷತೆ ಹಾಗೂ ನಂತರದಲ್ಲಿ ಉಂಟಾಗುವ ಎಪಿಫಾನಿಯ (Epiphania) ಅಥವಾ ಪ್ರಕಟಮಾಡಿಕೊಳ್ಳುವಿಕೆ ಎಂಬ ಗ್ರೀಕ್ ಭಾಷಾಮೂಲದ ಶಬ್ದಗಳಲ್ಲಿ ಒಂದು ವ್ಯತ್ಯಾಸವಿರುವದು.

ಕ್ರಿಸ್ತನು ತನ್ನನ್ನು ಪ್ರಕಟಮಾಡಿಕೊಳ್ಳುವದನ್ನು ಈ ಶಬ್ದಗಳಲ್ಲಿ ವರ್ಣಿಸಲಾಗಿರುವದು: ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವನು (2 ಥೆಸಲೋನಿಕ 1:7–8). ವಾಸ್ತವವಾಗಿ ಆ ಸಂಕಟದ ಕಾಲವನ್ನು ಸತ್ಯವೇದದಲ್ಲಿ ಆಗಾಗ್ಗೆ ಸಾಂಕೇತಿಕವಾಗಿ ಲೋಕವು (ಬೆಂಕಿ ಹತ್ತಿಕೊಂಡು) ಉರಿಯುವದೆಂದು ವರ್ಣಿಸಲಾಗಿರುವದು. ಹೀಗೆಯೇ ಕ್ರೈಸ್ತಸಮೂಹದಲ್ಲಿರುವ ನಂಬಿಕೆಯ ಸೂತ್ರಗಳು ಭೂಮಿಯು "ಸುಟ್ಟು ಹೋಗುವದು" ಎಂಬ ಅಂಶವನ್ನು ವ್ಯಕ್ತಪಡಿಸಿರುವದು. ಅವರು ಆಕಾಶವೂ ಸಹ "ಸುಟ್ಟುಹೋಗುವದು" ಎಂಬ ಅಂಶವನ್ನು ನಿರ್ಲಕ್ಷಿಸಿರುವರು.

ಸತ್ಯವೇದದ ಸಾಂಕೇತಿಕ ಭಾಷೆಯ ಬಳಕೆಯಲ್ಲಿ, ಭೂಮಿಯು ಮಾನವರ ಸಾಮಾಜಿಕ ವ್ಯವಸ್ಥಾಕ್ರಮಗಳನ್ನು ಸೂಚಿಸುವದು; ಸಮುದ್ರವು ಸಮಾಧಾನವಾಗದ ಅತೃಪ್ತ ಜನ – ಸಮೂಹವನ್ನು ಸೂಚಿಸುವದು; ಆಕಾಶವು ಮತ ಹಾಗೂ ಧಾರ್ಮಿಕ ಸಂಸ್ಥಾಧಿಕಾರಗಳನ್ನು ಸೂಚಿಸುವದು. ಭಕ್ತನಾದ ಪೇತ್ರನು ಇವೆಲ್ಲವುಗಳು ಮಹಾಘೋಷದಿಂದ ಇಲ್ಲದೆ ಹೋಗುವ –ದೆಂದೂ ಮತ್ತು ಅದಕ್ಕೆ ಬದಲಾಗಿ ನೂತನ ಆಕಾಶ ಹಾಗು ನೂನತ ಭೂಮಂಡಲವು ಉಂಟಾಗುವದನ್ನು ದೇವರು ವಾಗ್ದಾನಮಾಡಿರುವನೆಂದು ಹೇಳಿರುವನು. (2 ಪೇತ್ರ 3:10–13) ನೂತನ ಆಕಾಶಮಂಡಲವು ನೂತನವಾದ ಧಾರ್ಮಿಕ ವ್ಯವಸ್ಥಾ ಕ್ರಮಗಳಾಗಿರುತ್ತದೆ. ಅದು ಕ್ರಿಸ್ತನ ರಾಜ್ಯದಲ್ಲಿ ಆತನಿಗೆ ಸಹಬಾಧ್ಯರಾಗಿರುವ ಮಹಿಮೆಯುಳ್ಳ ಸಭೆಯಾಗಿರುತ್ತದೆ. ನೂತನ ಭೂಮಂಡಲವು ಮೆಸ್ಸೀಯನ ರಾಜ್ಯವು ಸ್ಥಾಪನೆಮಾಡುವ ನೂತನವಾದ ಸಾಮಾಜಿಕ ವ್ಯವಸ್ಥಾಕ್ರಮಗಳಾಗಿರುತ್ತದೆ.

## ಮಾಳಿಗೆಯ ಮೇಲಿರುವ ಭಕ್ತರು

"ಉರಿಯುವ ಬೆಂಕಿಯಲ್ಲಿ" ತನ್ನನ್ನು ಪ್ರಕಟಮಾಡಿಕೊಳ್ಳುವ ಕಾಲಕ್ಕೆ ಮೊದಲು ತಾನು ಪ್ರತ್ಯಕ್ಷನಾಗಿರುವ ಸಮಯದ ಬಗ್ಗೆ ಮತ್ತೆ ಮತ್ತೆ ಉಲ್ಲೇಖಿಸುವನಾಗಿ ಕರ್ತನು ನಮಗೆ ಭರವಸೆ ನೀಡಿ ಹೇಳಿರುವಂತೆ ತೋರುದೇನಂದರೆ, ಸಾಂಕೇತಿಕ ಅಗ್ನಿಯಾದ ಮಹಾ ಸಂಕಟದ ಕಾಲವು ಈಗಿನ ಕಾಲದ ವ್ಯವಸ್ಥಾಪನೆಗಳೆಲ್ಲ–ವನ್ನು ನಾಶಪಡಿಸುವದಕ್ಕೆ ಮೊದಲು ನಂಬಿಗಸ್ತರಾದ ತನ್ನವ–ರೆಲ್ಲರೂ ಮರಣಹೊಂದಿ ಆ ಕ್ಷಣದಲ್ಲೇ ಮಾರ್ಪಾಟಾಗುವ–ರೆಂಬದು. ಸಾಂಕೇತಿಕ ಭಾಷೆಯಲ್ಲಿ ಆತನು ಹೇಳಿರುವದೇನಂದರೆ, ಆ ದಿನದಲ್ಲಿ {ಅಂದರೆ ತಾನು ಪ್ರಕಟಮಾಡಿಕೊಳ್ಳವದಕ್ಕೆ [Ephiphania] ಮೊದಲು ತನ್ನ ಪ್ರತ್ಯಕ್ಷತೆಯ [Parousia] ದಿನದಲ್ಲಿ} ಮಾಳಿಗೆಯ ಮೇಲಿರುವವರು ಮನೆಯಲ್ಲಿರುವ ತಮ್ಮ ವಸ್ತುಗಳನ್ನು ತೆಗೆದುಕೊಳ್ಳುವದಕ್ಕೆ ಇಳಿದು ಬರಬಾರದು. ಇದು ಇಲ್ಲಿ ಯಾವ ಅರ್ಥವನ್ನು ಸೂಚಿಸುವದು?

ಸಂಕ್ಷೇಪವಾಗಿ ಹೇಳುವದಾದರೆ, ಮನೆ ಎಂಬದು ದೇವರ ಮನೆಯನ್ನು ಹಾಗು ಮಾಳಿಗೆಯ ಮೇಲಿರುವವರು ದೇವ ಜನರಲ್ಲಿ ಅತಿ ಭಕ್ತಿಯುಳ್ಳವರನ್ನು ಸೂಚಿಸುವದೆಂಬುದು ನಮ್ಮ ನಂಬಿಕೆ. ಆ ಸಮಯದಲ್ಲಿ ಅಂಥವರು ಓಡಿಹೋಗುವ ಅಗತ್ಯತೆಯಿರುವದೆಂಬುದನ್ನು ಅರಿತುಕೊಳ್ಳುವರು; ಮತ್ತು ಇಲ್ಲಿ ಉದ್ಭವಿಸುವ ಪ್ರಶ್ನೆಯೇನಂದರೆ, ತಮ್ಮ ಸರಕುಸಾಮಾಗ್ರಿ ಹಾಗು ಅಮೂಲ್ಯವಾದ ವಸ್ತುಗಳಲ್ಲಿ ಎಷ್ಟನ್ನು ಅವರು ಉಳಿಸಿಕೊಳ್ಳಲು ಯತ್ನಿಸಬೇಕೆಂಬದು. ಯಾವುದೇ ವಸ್ತುಗಳನ್ನು ಉಳಿಸಿಕೊಳ್ಳಲು ಪರಿಶ್ರಮಿಸಬಾರದೆಂಬ ಎಚ್ಚರಿಕೆಯನ್ನು ಅವರಿಗೆ ನೀಡಲಾಗಿ–ರುವದು. ಅಂದರೆ ಸಾಮಾಜಿಕ ಸ್ಥಾನಮಾನಗಳು ಜನರು ನೀಡುವ ಗೌರವಗಳು ಕೆಲವು ಸಮಯದಲ್ಲಿ ಸಣ್ಣ ಕಾರ್ಯಸ್ಥಾನದ ಬಿರುದುಗಳು ಅಂದರೆ ಆಲಯದ ಕೊಠಡಿ–ಪಾಲಕರು ಸಭಾಸೇವಕರು ಸಭಾಹಿರಿಯರು ದೀಕ್ಷಿತರುಗಳು ಮುಂತಾದ ಈ ಯಾವದನ್ನೂ ಉಳಿಸಿಕೊಳ್ಳಲು ಪರಿಶ್ರಮಿಸಬಾರದೆಂಬ ಎಚ್ಚರಿಕೆಯನ್ನು ಅವರಿಗೆ ನೀಡಲಾಗಿರುವದು. ಈ ಸಂಗತಿಗಳಲ್ಲಿ

ಯಾವುದನ್ನಾದರೂ ಉಳಿಸಿಕೊಳ್ಳಲು ಮಾಡುವ ಪ್ರಯತ್ನವು ನಿರಾಶೆ ಉಂಟುಮಾಡುವದೆಂಬ ಅರ್ಥಕೊಡುವದು. ಎಲ್ಲವನ್ನು ಕಳಕೊಳ್ಳಲೇಬೇಕು, ಇಲ್ಲವೇ ಆ ಸಮಯದಲ್ಲಿ ಉಂಟಾಗುವ ಪರೀಕ್ಷೆಯನ್ನು ಯಶಸ್ವಿಯಾಗಿ ದಾಟಿಹೋಗಲು ಆಗಲಾರದು.

ಇದರಂತೆಯೇ, ಹೊಲದಲ್ಲಿರುವ ಯಾವನಾದರೂ ಹಿಂದಕ್ಕೆ ತಿರುಗಿಕೊಂಡು ಬರಬಾರದು. ಹೊಲವೆಂಬದು ಲೋಕವನ್ನು ಸೂಚಿಸುತ್ತದೆ. ಹೆಸರಿನ ಕ್ರೈಸ್ತಸಭೆಯನ್ನು ತೊರೆದು ಲೋಕದೊಳಗೆ ಹೋದ ಕರ್ತನ ಜನರಲ್ಲಿ ಯಾರೇ ಆದರೂ ಹಿಂದಿರುಗಿ ಬರಬಾರದು; ಆದರೆ ಆ ಸನ್ನಿವೇಶದ ಬಗ್ಗೆ ಸತ್ಯಾಂಶಗಳನ್ನು ತಿಳುಕೊಂಡವರಾದ ಅವರು ಹೊಲದಿಂದ ಕರ್ತನ ಬಳಿಗೆ ಓಡಿ ಹೋಗಬೇಕು.

ಮತ್ತಾಯನು ನೀಡಿರುವ ವಿವರಣೆಯು ಮೊಲೆಕೂಸಿರುವ ಹೆಂಗಸರಿಗೆ ಉಂಟಾಗು ವಿಶೇಷ ಸಂಕಟಗಳ ವಿಷಯವಾಗಿ ಹೇಳುತ್ತದೆ. ಇದು ಲೋಕವನ್ನು ಪರಿವರ್ತನೆ ಮಾಡಲು ಹಾಗು (ಸಭೆಯ) ಆರಂಭಿಕ ಸದಸ್ಯರಿಗೆ ಬೋಧನೆ ಮಾಡಲು ಪರಿಶ್ರಮಿಸುತ್ತಿರುವ ಕ್ರೈಸ್ತರನ್ನು ಸಾಂಕೇತಿಕವಾಗಿ ಸೂಚಿಸುವ–ದೆಂಬದು ನಮ್ಮ ನಂಬಿಕೆ. ಬದಲಾಗುತ್ತಿರುವ ವ್ಯವಸ್ಥಾಕ್ರಮಗಳು ಹಾಗು "ನನ್ನ ಪ್ರಜೆಗಳೇ, ಅವರನ್ನು ಬಿಟ್ಟು ಬನ್ನಿರಿ." ಎಂಬ ಕರೆಯು ಉಂಟಾಗಿರುವ ಕಾರಣ ಇವರ ಆತ್ಮಗಳು ವಿಶೇಷವಾದ ಶ್ರಮಸಂಕಟಗಳಿಗೆ ಒಳಗಾಗುವವು. ಅಂಥವರಿಗೆ ಈ ಕರೆಯನ್ನು ಕೇಳಿ ಅದಕ್ಕೆ ವಿಧೇಯರಾಗಲು ವಿಶೇಷವಾಗಿ ಕಷ್ಟಕರವಾಗುವದು.

ಸೋದೋಮಿನಿಂದ ಓಡಿಹೋಗುವಲ್ಲಿ ಲೋಟನು ಮತ್ತು ಅವನ ಕುಟುಂಬದವರಿಗೆ ತ್ವರೆಯಾಗಿ ಓಡಿಹೋಗಬೇಕು ನಾಶವಾಗಲಿರುವ ಯಾವುದನ್ನೂ ಹಿಂದಿರುಗಿ ನೋಡಲೂ ಕೂಡದೆಂಬ ಎಚ್ಚರಿಕೆಯ ಮಾತನ್ನು ಸಹ ನೀಡಲಾಗಿತ್ತು. ಹೀಗೆಯೇ ಕರ್ತನ ಜನರೂ ನಾಶವಾಗಲಿರುವ ಸಂಗತಿಗಳನ್ನು ಹಿಂದಿರುಗಿ ನೋಡಬಾರದು. ಅವುಗಳ ವಿಷಯವಾಗಿ ಆಲೋಚಿಸಲೂಕೂಡದು. "ಬಾಬೇಲಿನೊಳಗಿಂದ ಓಡಿಹೋಗಿ" "ನಿಮ್ಮ ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿರಿ!" ಲೋಟನ ಹೆಂಡತಿಯು ಅವಿಧೇಯಳಾಗಿ ಹಿಂದಕ್ಕೆ ತಿರುಗಿ ನೋಡಿ ನಾಶವಾಗಲಿರುವ ಸಂಗತಿಗಳ ವಿಷಯವಾಗಿ ಆಶಿಸುವವಳಾಗಿ (ನಾಶನದಿಂದ) ತಪ್ಪಿಸಿಕೊಳ್ಳಲು ವಿಫಲಳಾಗಿದ್ದಳು. ಈ ನಿದರ್ಶನವನ್ನು ಕರ್ತನು ತನ್ನ ಜನರಿಗೆ ಅನ್ವಯಮಾಡಿ ಅವರ ಪಲಾಯನವು ಈಗಿನ ಕಾಲದ ಸಂಗತಿಗಳೆಲ್ಲವನ್ನೂ ಪೂರ್ಣವಾಗಿ ಪರಿತ್ಯಾಗ ಮಾಡುವದರ ಮೂಲಕವಾಗಿರಬೇಕೆಂದು ಉತ್ತಾಯಿಸಿ ಹೇಳಿದ್ದಾನೆ. ತನ್ನ ಪ್ರಾಣವನ್ನು ದೊರಕಿಸಿಕೊಳ್ಳಬೇಕೆಂದಿರು–ವವನು ಅದನ್ನು ಕಳಕೊಳ್ಳಬೇಕು; ತನ್ನ ಪ್ರಾಣವನ್ನು ಕಳಕೊಂಡವನು ನಿತ್ಯಜೀವವನ್ನು ಸಂಪಾದಿಸಿಕೊಂಡವನಾಗಿ ಅದನ್ನು ರಕ್ಷಿಸಿಕೊಳ್ಳುವನು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಸಮಾರ್ಯ; ಇಲ್ಲವೇ ಗಲಿಲಾಯ | ನಿದರ್ಶನಗಳು: ನ್ಯಾಯಕ್ಕಾಗಿ ಸತತವಾಗಿ ಬೇಡಿಕೊಳ್ಳುವ ವಿಧವೆ, ಫರಿಸಾಯನು ಹಾಗು ಸುಂಕದವನು | -- | -- | 18:1–14 | -- |

# ಲೂಕ 18:1–14

ಬೇಸರಕೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬುದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ–ಒಂದಾನೊಂದು ಊರಿನಲ್ಲಿ ಒಬ್ಬ ನ್ಯಾಯಾಧಿಪತಿ ಇದ್ದನು; ಅವನು ದೇವರಿಗೆ ಹೆದರದೆ ಮನುಷ್ಯರನ್ನು ಲಕ್ಷ್ಯಮಾಡದೆ ಇದ್ದವನು. ಅದೇ ಊರಿನಲ್ಲಿ ಒಬ್ಬ ವಿಧವೆ ಇದ್ದಳು. ಆಕೆಯು ಅವನ ಬಳಿಗೆ ಬಂದು–ನ್ಯಾಯವಿಚಾರಣೆ ಮಾಡಿ ನನ್ನ ವಿರೋಧಿಯಿಂದ ನನ್ನನ್ನು ಬಿಡಿಸು ಎಂದು ಹೇಳಿಕೊಳ್ಳುತ್ತಿದ್ದಳು. ಅವನು ಸ್ವಲ್ಪ ಕಾಲ ಮನಸ್ಸುಕೊಡಲಿಲ್ಲ. ಆ ಮೇಲೆ ಅವನು–ನಾನು ದೇವರಿಗೆ ಹೆದರುವವನಲ್ಲ, ಮನುಷ್ಯರನ್ನು ಲಕ್ಷ್ಯಮಾಡುವ–ವನಲ್ಲ; ಆದರೂ ಈ ವಿಧವೆ ನನ್ನನ್ನು ಕಾಡುತ್ತಾ ಬರುವದರಿಂದ ಈಕೆಯ ನ್ಯಾಯವನ್ನು ವಿಚಾರಿಸಿ ತೀರ್ಪುಮಾಡುವೆನು; ಇಲ್ಲವಾದರೆ ಈಕೆಯು ಬಂದು ಬಂದು ಕಡೆಗೆ ನನ್ನನ್ನು ದಣಿಸಾಳು ಎಂದು ತನ್ನೊಳಗೆ ಅಂದುಕೊಂಡನು. ಸ್ವಾಮಿಯು ಈ ಸಾಮ್ಯವನ್ನು ಹೇಳಿದ ಮೇಲೆ–ಅನ್ಯಾಯಗಾರನಾದ ಈ ನ್ಯಾಯಾಧಿಪತಿ ಅಂದುಕೊಂಡದ್ದನ್ನು ಆಲೋಚಿಸಿಕೊಳ್ಳಿರಿ. ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯ ತೀರಿಸುವನೆಂದು ನಿಮಗೆ ಹೇಳುತ್ತೇನೆ. ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆ ಕಾಣುವನೋ? ಅಂದನು.

ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸ – ವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ– ಪ್ರಾರ್ಥನೆ ಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ– ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ. ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ;

ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದುಕೊಂಡನು. ಆದರೆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ-ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. ಇವನು ನೀತಿವಂತನೆಂದು ನಿರ್ಣಯಿಸ-ಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ.

*****

# ದೀನಭಾವದಿಂದ ಎಡೆಬಿಡದೆ ಪ್ರಾರ್ಥಿಸಿರಿ

**ರೀಪ್ರಿಂಟ್ಸ್ ಪುಟ 3841**

## ಲೂಕ 18:1-14

**"ದೇವರೇ, ಪಾಪಿಯಾದ ನನ್ನನ್ನು ಕರುಣಿಸು."**

ಮತ್ತೆ ಪ್ರಾರ್ಥನೆಯ ವಿಷಯವಾಗಿ ಅನೇಕ ದೃಷ್ಟಿಯಿಂದ ಕೂಡಿದ ಒಂದು ಪಾಠವನ್ನು ನಾವು ಹೊಂದಿದ್ದೇವೆ. ಶಿಷ್ಯರಿಗೆ ಪ್ರಾರ್ಥನೆಯ ವಿಷಯವಾಗಿ ಖಚಿತವಾದ ಪಾಠಗಳನ್ನು ಕಲಿತುಕೊಳ್ಳುವ ಅಗತ್ಯವಿತ್ತು ಮತ್ತು ನಮ್ಮ ಕರ್ತನು ಎರಡು ಕುತೂಹಲಕಾರಿಯಾದ ಸಾಮ್ಯಗಳ ಮೂಲಕವಾಗಿ ಬೋಧನೆ ಮಾಡಿದ್ದನು. ಮೊದಲನೆಯ ಪಾಠವು ಸತತವಾಗಿ ಪ್ರಾರ್ಥಿಸುವ-ದರ ವಿಷಯವಾಗಿತ್ತು, ಅಂದರೆ ಅವರು ಯಾವಾಗಲೂ ಬೇಸರಗೊಳ್ಳದೆ ಪ್ರಾರ್ಥಿಸುವದನ್ನು ಮುಂದುವರೆಸುತ್ತಿರಬೇಕು, ಇಲ್ಲವೇ ಉತ್ತರವು ವಿಳಂಬವಾಗುವ ಕಾರಣಕ್ಕಾಗಿ ನಿರುತ್ಸಾಹಿ-ಗಳಾಗಿ ಧೈರ್ಯಗೆಡಬಾರದು. ನಮ್ಮ ದೇವರ ನಿಜವಾದ ಗುಣದ ವಿಷಯವಾಗಿಯೂ ಅವರ ಪ್ರಾರ್ಥನೆಗಳನ್ನು ಕೇಳಲು ಆತನು ಇಚ್ಛೆಯುಳ್ಳವನಾಗಿದ್ದು ಅವರಿಗೆ ಅಗತ್ಯವಿರುವ ಎಲ್ಲಾ ಒಳ್ಳೆಯ ಸಂಗತಿಗಳನ್ನು ಸೂಕ್ತವಾದ ರೀತಿಯಲ್ಲಿ ಸೂಕ್ತವಾದ ಕಾಲದಲ್ಲಿ ನೀಡುವನೆಂಬ ಭರವಸೆಯುಳ್ಳವರಾಗ ಮಾಡಬೇಕಿತ್ತು.

### ಅನ್ಯಾಯಗಾರನಾದ ನ್ಯಾಯಾಧಿಪತಿ

ಈ ಸಾಮ್ಯವು ಇದನ್ನು ನಿದರ್ಶಿಸುತ್ತಾ ದೇವರಿಗಾಗಲಿ ಇಲ್ಲವೇ ಮನುಷ್ಯರಿಗಾಗಲಿ ಭಯಪಡದಂಥ ಹಾಗೂ ತನ್ನ ಸ್ವಾರ್ಥದ ಉದ್ದೇಶಗಳಿಗಾಗಿ ದೈವಾಜ್ಞೆಗಳನ್ನು ಉಲ್ಲಂಘಿಸುವ-ವನಾಗಿ ಜನಾಭಿಪ್ರಾಯವನ್ನು ಗೌರವಿಸದಂಥ ಪೌರಾತ್ಯ ದೇಶದಲ್ಲಿನ ಒಬ್ಬ ನ್ಯಾಯಾಧಿಪತಿಯನ್ನು ನಿರೂಪಿಸುತ್ತದೆ. ಕ್ರೈಸ್ತರ ನಾಡಿನಲ್ಲಿನ ನ್ಯಾಯಾಧಿಪತಿಗಳು ಗೌರವಾನ್ವಿತರಾಗಿಯೂ ವಿಶ್ವಾಸ ಪಾತ್ರರಾಗಿಯೂ ಇರಬೇಕೆಂಬುದು ನಮ್ಮ ನಂಬಿಕೆ. ಇದನ್ನು ನಾವು ನಿಯಮವೆಂದೂ ಮತ್ತು ಉಳಿದ ಎಲ್ಲವುಗಳು ಇದಕ್ಕೆ ಹೊರತಾದವುಗಳೆಂದು ಗ್ರಹಿಸಿಕೊಂಡಿದ್ದೇವೆ. ಆದರೆ ಪೌರಾತ್ಯ ದೇಶಗಳಲ್ಲಿ ಅನೇಕ ಸಾರಿ ಈ ನ್ಯಾಯಾಧಿಕಾರಿಗಳು ಎಲ್ಲಾ ವಿಧವಾದ ಅಕ್ರಮ ಸಂಪಾದನೆಯಲ್ಲಿ ನಿರತರಾಗಿರುವದು ರೂಢಿಯಾಗಿರುವದೆಂದೂ ಈ ನ್ಯಾಯಸ್ಥಾನದಲ್ಲಿರುವವರು ತಮ್ಮ ವೈಯುಕ್ತಿಕ ಪ್ರಯೋಜನ ಹಾಗು ಲಾಭಗಳಿಗಾಗಿ ಇರುವವರೆಂದು ಎಣಿಸಲ್ಪಟ್ಟಿರುವದು. ಹಿಂದಿನ ಕಾಲದ ಬಗ್ಗೆ ನಿಜವಾಗಿ ಹೇಳುವ-ದಾದರೆ, ಕಳೆದ ಶತಮಾನದವರೆಗೂ ನ್ಯಾಯಾಧಿಪತಿಗಳು ಬಹು ಮಟ್ಟಿಗೆ ಕಾನೂನುಗಳನ್ನು ಮಾಡುವವರು ಅಲ್ಲದೆ ಅದನ್ನು ಅನುಷ್ಠಾನಕ್ಕೆ ತರುವ ಕಾರ್ಯನಿರ್ವಾಹಕರೂ ಆಗಿದ್ದರು. ಇಂದಿನ ನಾಗರಿಕ ದೇಶಗಳಲ್ಲಿ ಈ ಕಾರ್ಯಗಳು ಪ್ರತ್ಯೇಕಿಸಲ್ಪಟ್ಟಿರುವದು ಅಂದರೆ ಕಾನೂನು ಮಾಡುವ ಶಾಸಕಾಂಗವು ಸರಕಾರದ ನ್ಯಾಯಾಂಗ ಮತ್ತು ಕಾರ್ಯಾಂಗ ಇವುಗಳಿಂದ ಪೂರ್ಣವಾಗಿ ಪ್ರತ್ಯೇಕಗೊಂಡಿದ್ದು ಈ ಮೂಲಕವಾಗಿ ಸಾರ್ವಜನಿಕರಿಗೆ ಪ್ರಯೋಜನಕರವೂ ಮತ್ತು ನ್ಯಾಯೋದ್ದೇಶಗಳ ಮುನ್ನಡೆಗೆ ಅನುಕೂಲಕರವೂ ಆಗಿರುವದು.

ಸಾಮ್ಯದಲ್ಲಿನ ಅನ್ಯಾಯಗಾರನಾದ ನ್ಯಾಯಾಧಿಪತಿಯ ಮುಂದೆ ಒಬ್ಬ ವಿಧವೆಯು ಬಂದಿದ್ದಳು. ಆಕೆಯು ಅಪಮಾನ ಅನ್ಯಾಯಗಳಿಂದ ಬಾಧಿತಳಾಗಿದ್ದು ನ್ಯಾಯಾಧಿಪತಿಯ ಮೂಲಕ ವಾಗಿ ಇದರಿಂದ ಬಿಡುಗೆಯಾಗ ಬಯಸಿದ್ದಳು. ಆಕೆಯು ಐಶ್ವರ್ಯವಂತೆಯಲ್ಲದ ಮತ್ತು ನ್ಯಾಯಾಧಿಪತಿಗೆ ಲಂಚ ನೀಡಲು ಸಾಧ್ಯವಾಗದ ಕಾರಣದಿಂದ ಆಕೆಗೆ ಯಾವ ಪ್ರಭಾವವೂ ಇಲ್ಲದ್ದರಿಂದ ನ್ಯಾಯ ದೊರಕಿಸಿಕೊಂಡು ಪರಿಹಾರ ಪಡೆಯ ಸಲುವಾದ ಆಕೆಯ ಬೇಡಿಕೆಯು ನಿರ್ಲಕ್ಷಿಸಲ್ಪಟ್ಟಿತ್ತು. ಹೇಗೂ ಆಕೆಯ ಸತತ ಪ್ರಯತ್ನದಿಂದ ಕಡೆಯಲ್ಲಿ ಆ ನ್ಯಾಯಾಧಿಪತಿಯು ತಾನು ನ್ಯಾಯದ ಮೇಲಿಯ ಪ್ರೀತಿಯ ದೆಸೆಯಿಂದಲ್ಲದಿದ್ದರೂ ಕೇವಲ ಆಕೆಯು ಕೊಡುವ ತೊಂದರೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆಕೆಯ ವಿಷಯವನ್ನು ತೆಗೆದುಕೊಂಡು ಆಕೆಗೆ ಅಗತ್ಯವಿದ್ದ ಸಹಾಯಮಾಡಿ ನ್ಯಾಯದೊರಕಿಸಿಕೊಟ್ಟಿದ್ದನು.

### ದೇವರು ತಡ ಮಾಡಿದರೂ ಅನ್ಯಾಯಸ್ಥನಾಗಿರುವದಿಲ್ಲ

ಸಾಮ್ಯವು ಈ ಅನ್ಯಾಯಗಾರನಾದ ನ್ಯಾಯಾಧಿಪತಿಯನ್ನು ನಮ್ಮ ಪರಲೋಕದ ತಂದೆಗೆ ಹೋಲಿಸಿ ಆತನನ್ನು ಅನ್ಯಾಯ -ಗಾರನಾದ ನ್ಯಾಯಾಧಿಪತಿಯೆಂದು ಪರೋಕ್ಷವಾಗಿ ಸೂಚಿಸಿ ಹೇಳುವದಿಲ್ಲ. ಪ್ರತಿಯಾಗಿ ಅದು ಈ ಇಬ್ಬರಲ್ಲಿನ ವ್ಯತ್ಯಾಸವನ್ನು ತೋರಿಸಿಕೊಟ್ಟು ನಮಗೆ ಒಂದು ಪಾಠವನ್ನು ಅಂದರೆ ಒಬ್ಬ ಅನ್ಯಾಯಗಾರನಾದ ನ್ಯಾಯಾಧಿಪತಿಯೂ ಸಹ ಕಡೆಯಲ್ಲಿ ಸ್ವಾರ್ಥಪರ ಉದ್ದೇಶದಿಂದ ಪರಿಹಾರವನ್ನು ದೊರಕಿಸಿ ಕೊಡುವದಾದರೆ ಅನ್ಯಾಯಸ್ಥನೂ ಇಲ್ಲವೇ ಪ್ರೀತಿಯಿಲ್ಲದವನೂ ಆಗಿರದ ಹಾಗೂ ತನ್ನ ಜನರ ಹಿತಾಸಕ್ತಿಯ ಬಗ್ಗೆ ಕಾಳಜಿ ಹೊಂದಿರುವ ಪರಲೋಕದ ನಮ್ಮ ತಂದೆಯು ಅವರ ಪ್ರಾರ್ಥನೆಗೆ ಖಂಡಿತವಾಗಿಯೂ ಲಕ್ಷ್ಯಕೊಡುವನೆಂಬ ಅಂಶವನ್ನು ನಮಗೆ

ತಿಳಿಸಿಕೊಡುತ್ತದೆ. ಹೀಗಿರಲು ನಮ್ಮ ಅಭಿಪ್ರಾಯದಲ್ಲಿ ಈ ಒಂದು ಸಂಗತಿಯು ಸತತವಾಗಿ ನಮ್ಮ ಪ್ರಾಮಾಣಿಕ ಪ್ರಾರ್ಥನೆಯನ್ನು ಬಯಸುವಂಥದಾಗಿದ್ದು ಈ ಪ್ರಾರ್ಥನೆಗೆ ಉತ್ತರವು ಶೀಘ್ರವಾಗಿ ದೊರೆಯದಿದ್ದರೂ ನಾವು ದೇವರಿಗೆ ಲಂಚವನ್ನು ನೀಡಲು ಸಾಧ್ಯವಿಲ್ಲದ ಇಲ್ಲವೇ ನಾವು ಆತನಿಗೆ ಬೇರಾವ ವಿಧದಲ್ಲಿಯೂ ಪ್ರಯೋಜನಕ್ಕೆ ಬಾರದ ಕಾರಣದಿಂದ ಆತನು ನಮ್ಮ ವಿಷಯದಲ್ಲಿ ಕಾಳಜಿಯಿಲ್ಲದ ಅನ್ಯಾಯುಗಾರನಾದ ನ್ಯಾಯಾಧಿಪತಿ–ಯಾಗುವನೆಂದು ತೀರ್ಮಾನಿಸಬಾರದು; ಇಲ್ಲವೇ ನಾವು ದೇವರನ್ನು ಕಾಡದ ಹೊರತು ಆತನು ಸ್ವಾರ್ಥಪರನಾಗಿ ನಮ್ಮ ಹಿತಾಸಕ್ತಿಗಳ ವಿಷಯಕ್ಕೆ ಲಕ್ಷ್ಯನೀಡದಂಥವನೆಂದು ಆತನ ಬಗ್ಗೆ ಆಲೋಚಿಸಲೂ ಬಾರದು; ಆದರೆ ನಾವು ಆತನನ್ನು ಪ್ರೀತಿಮಯನಾದ ಪರಲೋಕದಲ್ಲಿರುವ ನಮ್ಮ ತಂದೆಯೆಂದೂ ಆತನ ಕೈಗಳು ನಮಗೆ ಸಹಾಯ ನೀಡದಷ್ಟು ಸಂಕುಚಿತ ವಾದವುಗಳಲ್ಲವೆಂದೂ, ನಮ್ಮ ಮೇಲಿರುವ ಆತನ ಪ್ರೀತಿಯು ಕೊರತೆಯುಳ್ಳದಲ್ಲ ಆದರೆ ಗಾಢವಾದ್ದೆಂದು ಯೋಚಿಸಬೇಕು. ಒಬ್ಬ ತಂದೆ ತನ್ನ ಮಕ್ಕಳನ್ನು ಕನಿಕರಿಸುವಂತೆ ಆತನು ನಮ್ಮನ್ನು ಪ್ರೀತಿಸುತ್ತಾನೆ. ಮತ್ತು ದೇವರ ಗುಣಾತಿಶಯಗಳ ವಿಷಯವಾದ ನಮಗಿರುವ ಪರಿಜ್ಞಾನ ಹಾಗೂ ಆತನ ನಂಬಿಗಸ್ತಿಕೆಯಲ್ಲಿ ನಮ್ಮಲ್ಲಿರುವ ಭರವಸೆಯ ಮೂಲಕವಾಗಿ ನಾವು ತಾಳ್ಮೆಹೊಂದಿ ದವರಾಗಿ ನಮ್ಮ ಬೇಡಿಕೆಗಳು ಆತನ ಜ್ಞಾನವಿವೇಕ ಪ್ರೀತಿಕರುಣೆ ಬಲಾಧಿಕಾರ ತಿಳುವಳಿಕೆಗಳ ಅನುಸಾರವಾಗಿ ಈಡೇರಿಸಲ್ಪಡುವ ದೆನ್ನುವದರಲ್ಲಿ ಭರವಸವುಳ್ಳವ ರಾಗಿರಬೇಕು. ದೇವರ ಚಿತ್ತಾನುಸಾರವಾಗಿ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಸಂಗತಿಗಳು ಅನುಕೂಲಕರವಾಗುತ್ತವೆ ಎಂಬುದನ್ನು ತಿಳಿಯಬೇಕು.

ನಮ್ಮ ಕರ್ತನು ಸಾಮ್ಯವನ್ನು ಅನ್ವಯಮಾಡಿ ಹೀಗೆ ಹೇಳಿರುವನು: “ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ನ್ಯಾಯವನ್ನು ತೀರಿಸದೆ ಇರುವನೇ?” ಆ ಸಂಗತಿಯಲ್ಲಿ ಆತನು ವಿಶೇಷವಾಗಿ ಯಾವ ಆತುರವನ್ನು ತೋರದಿದ್ದರೂ ಅವರಿಗೆ ಬೇಗನೆ ಉತ್ತರಕೊಡುವನು. ಇಲ್ಲಿರುವ ಪಾಠವೇನಂದರೆ ನಾವು ದೇವರಲ್ಲಿಯೂ ಹಾಗು ಕಡೆಯಲ್ಲಿ ನೀತಿಗೆ ಜಯಲಭಿಸುವದೆಂಬ ಆತನ ವಾಗ್ದಾನಗಳಲ್ಲಿಯೂ ಭರವಸವುಳ್ಳವರಾಗಿರಬೇಕೆಂಬುದು. ಈ ಭರವಸೆಯ ಪ್ರಮಾಣವು ನಾವು ವಾಗ್ದಾನಗಳನ್ನು ಭದ್ರವಾಗಿ ಹಿಡಿದುಕೊಂಡು ಎಂದೂ ಸಂದೇಹಪಡದೆ ಅದಕ್ಕಾಗಿ ಕೇವಲ ಕಾದುಕೊಂಡಿರುವಂಥ ನಮ್ಮ ಪೂರ್ಣವಾದ ನಂಬಿಕೆಯ ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಯಾರು ಹೀಗೆ ನಂಬಿಕೆ ಹಾಗೂ ಭರವಸೆಗಳ ಮೂಲಕವಾಗಿ ದೇವರ ಬಳಿಗೆ ಬರುವರೋ ಅವರು ಪದೇಪದೇ ಆತನ ಬಳಿಗೆ ಬಂದು, ಪ್ರತಿ ಬರುವಿಕೆಯುಲ್ಲಿಯೂ ಪುನಶ್ಚೇತನ ಪಡೆಯುಬಹುದು. ಯಾಕೆಂದರೆ ಅವರು ಸರ್ವಶಕ್ತನನ್ನು ಪರಿವರ್ತನೆಗೊಳಿಸಿ ಸಂಪೂರ್ಣವಾಗಿ ನೀತಿಯುಳ್ಳವುಗಳೆಂದು ಗುರುತಿಸಿಕೊಂಡಿರುವ ಆತನ ಯೋಜನೆ ಮತ್ತು ಏರ್ಪಾಡುಗಳನ್ನು ಪರಿವರ್ತಿಸುವ ನಿರೀಕ್ಷೆಯಿಂದ ಕೂಡಿದವರಾಗಿ ಆತನ ಬಳಿಗೆ ಬರುವದಿಲ್ಲ; ಪ್ರತಿಯಾಗಿ ಅವರು ಬರುವ ಕಾರಣ: ಅವರು ದೇವರ ವಾಗ್ದಾನಗಳನ್ನು ನಂಬಿದವರಾಗಿ ಆತನೊಂದಿಗೆ ಅನ್ಯೋನ್ಯತೆಗೆ ಬಂದು ತಮ್ಮ ಹೃದಯಗಳನ್ನು ವಿಶ್ರಮಗೊಳಿಸಿ ಹಾಗು ಆ ಮೂಲಕವಾಗಿ ಆದರಣೆ ಹೊಂದುವ ಸಲುವಾಗಿ ಬರುವವ–ರಾಗಿರುವರು. ತಂದೆಯು ತಾನೇ ತಮ್ಮನ್ನು ಪ್ರೀತಿಸುವನೆಂತಲೂ ಹಾಗು ಆತನು ಒಂದು ನಿಗದಿತ ಸಮಯದಲ್ಲಿ ಪಾಪ ಮರಣವೆಂಬ ವಿರೋಧಿಯ ಬಂಧನದಿಂದ ತನ್ನವರನ್ನು ಬಿಡುಗಡೆ ಮಾಡುವ ನೆಂಬುದನ್ನು ತಮ್ಮ ಹೃದಯಗಳಿಗೆ ಪ್ರಾರ್ಥನೆಗಳ ಮೂಲಕವಾಗಿ ಆಶ್ವಾಸನೆ ನೀಡಿಕೊಳ್ಳುವರು. ಇದಕ್ಕೆ ಬಹು ಕಾಲ ಹಿಡಿಸುವದೆಂದು ತೋರಬಹುದು ಆದರೆ ಸೂಕ್ತವಾದ ನಂಬಿಕೆಯನ್ನು ಪ್ರಯೋಗಿಸಿದ್ದಲ್ಲಿ ಪ್ರತಿಯೊಂದು ವಿಳಂಬದ ಹಂತಗಳಲ್ಲಿಯೂ ಅವರಿಗೆ ಒಂದು ಆಶೀರ್ವಾದವು ಲಭಿಸುವದು ಹಾಗು ಅದರಿಂದ ಉಂಟಾದ ಆಶೀರ್ವಾದವು ಬಹು ಫಲಕಾರಿಯಾಗಿರುವದು.

ನಮ್ಮ ಕರ್ತನು ಹೀಗೆ ಹೇಳಿ ಈ ಸಾಮ್ಯವನ್ನು ಮುಕ್ತಾಯ ಗೊಳಿಸಿರುವನು: “ಅವರಿಗೆ ಬೇಗ ನ್ಯಾಯ ತೀರಿಸುವನೆಂದು ನಿಮಗೆ ಹೇಳುತ್ತೇನೆ.” ಇದರ ಅರ್ಥವೇನಿರಬಹುದೆಂದರೆ: ತನ್ನ ಜನರನ್ನು ಬಿಡುಗಡೆಮಾಡುವ ಸಮಯ ಬಂದಾಗ ಕರ್ತನು ಇಹ ಲೋಕಾಧಿಪತಿಯ ಅಧೀನದಲ್ಲಿರುವ ಎಲ್ಲಾ ಅನೀತಿ ವ್ಯವಸ್ಥೆಗಳ ವಿರುದ್ಧದ ತನ್ನ ಕಾರ್ಯವನ್ನು ಮೊಟಕುಮಾಡಿ ಅದನ್ನು ಪೂರ್ಣಗೊಳಿಸುವನು. ಇವುಗಳು ಆ ಮಹಾ ವಿರೋಧಿಯ ಅಧೀನದಲ್ಲಿದ್ದು ಸತ್ಯನೀತಿ ಮುಂತಾದವುಗಳನ್ನು ವಿರೋಧಿಸು – ವಂಥವುಗಳಾಗಿ ಜೀವಿತದ ಆಗುಹೋಗುಗಳಲ್ಲಿ ಅವು ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿರುವವು. ಅಥವಾ ಬೇರೊಂದು ರೀತಿಯಲ್ಲಿ ಹೇಳುವದಾದರೆ, ತನ್ನ ನೀತಿರಾಜ್ಯವನ್ನು ಬರಮಾಡಲು ಕರ್ತನು ನಿಜವಾಗಿಯೂ ಬಹು ವಿಳಂಬ ಮಾಡುವದಿಲ್ಲವೆಂಬುದು. ಮನುಷ್ಯರ ದೃಷ್ಟಿಯಲ್ಲಿ ಕರ್ತನು ಲೋಕವನ್ನು ವಿಮೋಚಿಸಿದ ಕಾಲದಿಂದ ಈವರೆಗೆ ಅಂದರೆ ತನ್ನ ರಾಜ್ಯವನ್ನು ಸ್ಥಾಪಿಸುವ ಸಮಯದವರೆಗಿನ ಹದಿನೆಂಟು ಶತಮಾನಗಳು ಒಂದು ದೀರ್ಘಕಾಲವಾಗಿ ಕಾಣಬಹುದು: ಇದು “ತ್ವರಿತವಾಗಿರುದು” ಎಂದು ಹೇಗೆ ಹೇಳಲು ಸಾಧ್ಯ? ನಮ್ಮ ಉತ್ತರವೆಂದರೆ “ಕರ್ತನ ಎಣಿಕೆಯಲ್ಲಿ ಒಂದು ಸಾವಿರ ವರುಷಗಳು ಒಂದು ದಿನದಂತಿರುವದು”: ಹೀಗಾಗಿ ಈ ದೃಷ್ಟಿಯಿಂದ ಈ ಸಂಪೂರ್ಣ ಅವಧಿಯು ಎರಡು ದಿನಗಳಿಗಿಂತಲೂ ಕಡಿಮೆಯಾಗಿರುವದು. ಇಂದು ನಮಗೆ ಅಗತ್ಯವಾದುದೆಂದರೆ, ಈ ಸಂಗತಿಯನ್ನು ನೋಡುವಾಗ ನಾವು ಕರ್ತನ ದೃಷ್ಟಿಕೋನದ ಮೂಲಕವಾಗಿ ನೋಡಬೇಕೆಂಬುದೇ. ಎರಡೂ ಅಭಿಪ್ರಾಯಗಳು ಸತ್ಯವೇದದ ಅನುಸಾರವಾಗಿರು–ವಂಥವುಗಳೇ, ಆದುದರಿಂದ ಇದರಲ್ಲಿ ಯಾವದು ಕರ್ತನು ಉದ್ದೇಶಿಸಿರುವಂಥದೆನ್ನುವ ಬಗ್ಗೆ ನಾವು ವಿವಾದಿಸುವ ಅಗತ್ಯವಿರುವದಿಲ್ಲ. ನಾವು ಎರಡನ್ನೂ ತೆಗೆದುಕೊಳ್ಳಬೇಕೆನ್ನುವದು ಕರ್ತನ ಅರ್ಥವಾಗಿರುವ ಸಂಭವವಿರುವದು.

## ಆತನು ನಂಬಿಕೆಯನ್ನು ಕಾಣುವನೋ?

ಸಾಮ್ಯದಿಂದ ಭಿನ್ನವಾಗಿಯೂ ಸ್ಪಷ್ಟವಾಗಿಯೂ ಇರುವ ಹೇಳಿಕೆಯನ್ನು ಮಧ್ಯೆ ಸೇರಿಸಿ ನಮ್ಮ ಕರ್ತನು ಹೀಗೆಂದಿರುವನು: “ಹೀಗಿದ್ದರೂ ಮನುಷ್ಯಕುಮಾರನು ಬಂದಾಗ ಭೂಮಿಯ ಮೇಲೆ

ನಂಬಿಕೆಯನ್ನು ಕಾಣುವನೋ?" ಇಲ್ಲಿ ತಿಳಿಸಿರುವದೇನಂದರೆ, ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕಾಗಿ ನಮ್ಮ ಕರ್ತನು ಎರಡನೇ ಸಾರಿ ಬರುವಾಗ ನಿಜವಾದ ನಂಬಿಕೆಯ ಕೊರತೆಯು ಗಂಭೀರ–ವಾಗಿರುವದೆಂಬದು ಅಂದರೆ ವಿನಾಶದ ಅಂಚಿನಲ್ಲಿರುವ–ದೆಂಬದು. ಆತನ ಮೊದಲನೇ ಬರುವಿಕೆಯ ಸಮಯದ ವಿಷಯ ದಲ್ಲಿಯೂ ಸಹ ನಾವು ಹೀಗೆ ಓದುವೆವು: "ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು. ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ." ಹೀಗೆಯೇ ಈ (ಸುವಾರ್ತಾ) ಯುಗದ ಅಂತ್ಯದಲ್ಲಿಯೂ ಸಹ ನಮ್ಮ ಕರ್ತನ ಎರಡನೇ ಪ್ರತ್ಯಕ್ಷತೆಯು ಹೆಸರಿಗಾಗಿರುವ ಆತ್ಮಿಕ ಇಸ್ರಾಯೇಲ್ಯರನ್ನು ಪರೀಕ್ಷಿಸಿ ಪರಿಶೋಧಿಸುವದು. ಮತ್ತೆ ಆತನು ತನ್ನ ಸ್ವಾಸ್ಥ್ಯಕ್ಕೆ ಬರುವನು ಮತ್ತು ಆತನವರು ಅವನನ್ನು ಅಂಗೀಕರಿಸುವದಿಲ್ಲ ಅಂದರೆ ಭೂಮಿಯ ಮೇಲೆ ಅವಶ್ಯವಾದ ನಂಬಿಕೆಯನ್ನು ಆತನು ಕಾಣುವದಿಲ್ಲ. ಹೇಗೂ ಮೊದಲನೇ ಬರುವಿಕೆಯ ವಿಷಯವಾಗಿ ನಾವು ಓದುವದು: "ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ – ಕೊಟ್ಟನು." ಮುಂತಾದವುಗಳು. ಇದರಂತೆಯೇ, ಎರಡನೇ ಬರುವಿಕೆಯಲ್ಲಿಯೂ ಯಾರಾರು ನಂಬಿದವರಾಗಿ ಆತನನ್ನು ಅಂಗೀಕರಿಸಿದರೋ ಅವರಿಗೂ ಸಹ ಹೀಗೆಯೇ ಆತನು ಒಂದು ವಿಶೇಷವಾದ ಆಶೀರ್ವಾದವನ್ನು ಅನುಗ್ರಹಿಸುವನು.

ಈ ಮಾತುಗಳನ್ನು ಮೇಲೆ ಹೇಳಿರುವ ಸಾಮ್ಯದೊಂದಿಗೆ ಒಟ್ಟುಗೂಡಿಸಿದಲ್ಲಿ ಸೂಚಿತವಾಗುವ ಸಂಗತಿಯೆಂದರೆ, ಆಯಲ್ಪಟ್ಟಿರುವ ಚಿಕ್ಕ ಹಿಂಡಾದ ಕ್ರೈಸ್ತಸಭೆಯು ಸುವಾರ್ತಾ ಯುಗದ ಪರ್ಯಂತರ ತಾವು ಸಹಾಯ ಪಡೆದು ಬಿಡುಗಡೆ ಹೊಂದಲು ಸತತವಾಗಿ ಕರ್ತನನ್ನು ಎದುರು ನೋಡುವದನ್ನು ನಿರೀಕ್ಷಿಸಲಾಗುವದೆಂಬದು; ಆದರೆ ಒಡೆಯನು ತನ್ನ ರಾಜ್ಯ ಸ್ಥಾಪನೆಗಾಗಿ ಎರಡನೆಯ ಸಾರಿ ಬರುವಾಗ ಸಂಭವಿಸುವ ಮೊದಲನೆಯ ಪುನರುತ್ಥಾನದ ಸಮಯದವರೆಗೂ ಅವರು ನಿಜವಾಗಿಯೂ ಯಾವ ಸಹಾಯವಾಗಲಿ ಇಲ್ಲವೇ ಬಿಡುಗಡೆ–ಯಾಗಲಿ ಹೊಂದಲಾಗುವದಿಲ್ಲ. ಇದಕ್ಕೆ ಅನುಸಾರವಾಗಿಯೇ ಅಪೋಸ್ತಲನು ನಮಗೆ ಬುದ್ಧಿವಾತಾಗಿ ಹೇಳಿರುವದು: "ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ." (ರೋಮಾ 12:19) ಹೀಗೆ ಸತ್ಯವೇದದ ಪರ್ಯಂತರ ಸ್ಪಷ್ಟವಾಗಿ ಸೂಚಿತವಾಗಿರುವದೆಂದರೆ ನಮ್ಮ ಕರ್ತನ ಬರುವಿಕೆಯು ಸಾಧಾರಣವಾಗಿ ಲೋಕಕ್ಕೆ ಸಂಕಷ್ಟದ ಕಾಲವಾಗಿಯೂ ಮುಯ್ಯಿ ತೀರಿಸುವ ದಿನವಾಗಿಯೂ ಜನರ ತಪ್ಪುಗಳನ್ನು ತಿದ್ದಿ ಸರಿಪಡಿಸುವ ದಿನವಾಗಿಯೂ ಇರುವದೆಂಬದು. ಹೀಗೆಯೇ ಕರ್ತನು ಪ್ರವಾದಿಗಳ ಮುಖಾಂತ–ರವಾಗಿ ಪ್ರಕಟಮಾಡಿ ಹೇಳಿರುದೇನಂದರೆ: "ಏಕೆಂದರೆ ಮುಯ್ಯಿ ತೀರಿಸುವ ದಿನವು ನನ್ನ ಹೃದಯದಲ್ಲಿ ಸಿದ್ಧವಾಗಿತ್ತು, ತನ್ನ ಜನರನ್ನು ವಿಮೋಚಿಸುವ ವರುಷವು ಒದಗಿತ್ತು." ಅಲ್ಲದೆ ಮತ್ತೆ "ಏಕೆಂದರೆ ಯೆಹೋವನು ಮುಯ್ಯಿತೀರಿಸುವ ದಿನವು ಬಂದಿದೆ; ಚಿಯೋನಿನ ವ್ಯಾಜ್ಯದಲ್ಲಿ [ಎದೋಮಿಗೆ] ದಂಡನೆ ವಿಧಿಸತಕ್ಕ ವರುಷವು ಒದಗಿದೆ." ಯೆಶಾಯ 63:4; 34:8.

ಒಟ್ಟಾರೆ ತೆಗೆದುಕೊಂಡಾಗ, ಈ ಸಾಮ್ಯದ ಮೂಲಕವಾಗಿ ಕರ್ತನ ಜನರಿಗೆ ಇರುವ ಪಾಠವೇನಂದರೆ ನಾವು ತಾಳ್ಮೆಯುಳ್ಳವ ರಾಗಿದ್ದು ನಮ್ಮನ್ನು ವಿರೋಧಿಸುವವರಿಗೆ ಪ್ರತಿಕಾರ ಮಾಡಲು ಯತ್ನಿಸದೆ ನಮ್ಮ ವೈರಿಗಳನ್ನು ಪ್ರೀತಿಸಿ ನಮ್ಮನ್ನು ಹಗೆ – ಮಾಡುವವರಿಗೆ ಉಪಕಾರ ಮಾಡುವವರಾಗಿ ನಮಗೆ ಸೂಕ್ತವಾದ ಉಪಶಮನವನ್ನು ಒದಗಿಸಲು ಕರ್ತನನ್ನು ಎದುರು ನೋಡಬೇಕೆಂಬುದು; ಪೂರ್ಣ ಪ್ರಮಾಣದ ಉಪಶಮನವನ್ನು ಹೊಂದಲು ಬಹು ತಡೆಯುಂಟಾದಾಗ್ಯೂ ನಾವು "ನಿನ್ನ ನಂಬಿಕೆಯಂತೆಯೇ ನಿನಗಾಗಲಿ." ಎಂಬ ಕೃಪಾಪೂರ್ಣವಾದ ವಾಗ್ದಾನಗಳೆಲ್ಲವೂ ಹೇರಳವಾಗಿ ನೆರವೇರಿಸಲ್ಪಡುವ ಸಮಯವು ಬರುತ್ತಿರುವದೆಂಬ ನಂಬಿಕೆಯ ಮೂಲಕವಾಗಿ ವಿಶ್ರಮಿಸಿ ಕೊಂಡವರಾಗಿ ಪುನಶ್ಚೇತನಗೊಳ್ಳಬೇಕು.

ಯಾರು ಕರ್ತನ ವಾಗ್ದಾನಗಳನ್ನು ಸ್ವಲ್ಪವಾಗಿ ನಂಬುವರೋ, ಯಾರು ಅಲ್ಪವಾದ ಭರವಸೆಯುಳ್ಳವರೋ, ಯಾರು ಆತನಿಗೆ ಸ್ವಲ್ಪವಾಗಿ ಪ್ರಾರ್ಥಿಸುವರೋ, ಅವರು ಅಲ್ಪನಂಬಿಕೆಯನ್ನು ತೋರಿಸುವರು, ಪರಿಣಾಮವಾಗಿ ಅಲ್ಪವಾದ ಸಂತೋಷ ಆಶೀರ್ವಾದಗಳನ್ನು ಹೊಂದುವರು. ಪ್ರತಿಯಾಗಿ, ಯಾರಿಗೆ ನಂಬಿಕೆಯಿರುವದೋ, ಮತ್ತು ಯಾರು ಸತತವಾಗಿ ಕೃಪಾಸನದ ಬಳಿಗೆ ಹೋಗಿ ತಮ್ಮ ಪ್ರಾರ್ಥನೆ ಪರಿಶ್ರಮಗಳು ಭವ್ಯವಾಗಿ ನೆರವೇರುವ ವಿಷಯದಲ್ಲಿ ಕರ್ತನನ್ನು ಅರಿತವರಾಗಿ ಆತನಲ್ಲಿ ಭರವಸೆಯಿಡುವರೋ, ಅವರು ಈಗ ಸಂತೋಷವನ್ನು ಪಡೆಯುವರು ಅಲ್ಲದೆ ಕಡೆಯಲ್ಲಿ ಪರಿಪೂರ್ಣವಾದ ಸಂತೋಷವನ್ನು ಹೊಂದುವರು.

## ಸ್ವನೀತಿಪೂರ್ಣ ಪ್ರಾರ್ಥನೆ ಅಂಗೀಕೃತವಲ್ಲ.

ಯಹೂದ್ಯರಲ್ಲಿ ಫರಿಸಾಯರು ಬಹು ನೀತಿಯುಳ್ಳ ಒಂದು ಗುಂಪಾಗಿದ್ದರು. ಕರ್ತನು ನಮಗೆ ಹೇಳಿರುವಂತೆ ಅವರು ಆಂತರ್ಯದಲ್ಲಿ ನೀತಿನಿಯಮಗಳಿಗೆ ಬಹು ದೂರವಾಗಿದ್ದಾಗ್ಯೂ ಕನಿಷ್ಠ ಪಕ್ಷದಲ್ಲಿ ಹೊರಗಣ ಶ್ರದ್ಧಾಭಕ್ತಿಯುಳ್ಳವರಾಗಿ ತೋರಿಕೆಗೆ ಕಡು ನಿಷ್ಠೆಹೊಂದಿದ್ದು, ಕರ್ತನು ನಮಗೆ ಹೇಳಿರುವಂತೆ, ಆಂತರ್ಯದಲ್ಲಿ ನೀತಿಗೆ ದೂರವಾಗಿದ್ದರು. ಅವರು ಹೊರಗೆ ಸುಣ್ಣಾ ಹಚ್ಚಿದ ಅಂದವಾದ ಸಮಾಧಿಗಳಂತ್ತಿದ್ದು ಒಳಗೆ ಪೂರ್ಣವಾಗಿ ಕೆಟ್ಟತನದಿಂದ ತುಂಬಿದವರಾಗಿರುವದೆಂದು ಘೋರವಾಗಿ ಆರೋಪವಾಡಿ ಹೇಳಲು ಆತನೊಬ್ಬನೇ ಸಮರ್ಥನಾಗಿದ್ದನು. ಈ ದಿನದ ಕ್ರೈಸ್ತಸಮುದಾಯದಲ್ಲಿಯೂ ಇದೇ ರೀತಿಯ ಒಂದು ವರ್ಗವು ಇರುವದು; ಅವರು ಹೊರಗೆ ನೀತಿಯುಳ್ಳವರೂ ಬಹು ನಿರ್ದಿಷ್ಟಿತರೂ ನಿಕೃಷ್ಟರೂ ಸೂಕ್ಷ್ಮತೆ–ಯುಳ್ಳವರಾದೂ ಕರ್ತನಿಗೆ ಮೆಚ್ಚಿಗೆಯುಳ್ಳವರಾಗಿರಲಿಲ್ಲ. ಅವರು ತಮ್ಮ ನೀತಿಯ ವಿಷಯದಲ್ಲಿ ಹೆಚ್ಚಳಪಡುವವರು ಆಗಿದ್ದಲ್ಲದೆ ಸಹಜವಾಗಿ ಇತರರಿಗಿಂತಲೂ ಕಡಿಮೆ ನೀತಿಭ್ರಷ್ಟತೆಯುಳ್ಳವ–ರಾಗಿದ್ದು ತಮಗೆ ಹೊಗಳಿಕೊಳ್ಳಲು ಏನೂ ಇರುವದಿಲ್ಲ–ವೆಂಬುದನ್ನು ಗ್ರಹಿಸುವರಲ್ಲಿ ವಿಫಲರಾಗಿದ್ದರು; ಯಾಕೆಂದರೆ ನಿಜವಾಗಿಯೂ ಪರಿಪೂರ್ಣತೆ ಹೊಂದುವಲ್ಲಿ ಅವರು ಇನ್ನೂ ಬಹು ದೂರವಾಗಿದ್ದರು. ಬಹು ಹೀನಸ್ಥಿತಿಗೆ ಬಂದ ಮನುಷ್ಯನು

ತಾನು ನೈತಿಕವಾಗಿ ಉತ್ತಮನಾಗಿದ್ದು ದೀನತೆಯಲ್ಲಿ ಕೊರತೆಯುಳ್ಳವಾಗಿರುವದಕ್ಕೆ ಬದಲು ಅಧಿಕ ಶ್ರದ್ಧೆಯುಳ್ಳವನೂ ಅಧಿಕ ದೀನನೂ ಆಗಿದ್ದಲ್ಲಿ ದೇವರು ಆತನ ವಿಷಯವಾಗಿ ಬಹು ಸಹಾನುಭೂತಿಯಿಂದಲೂ ಬಹು ಅನುತಾಪದಿಂದಲೂ ನೋಡುವನು ಎಂಬುದನ್ನು ತೋರಿಸುವದು ಈ ಸಾಮ್ಯದ ಉದ್ದೇಶವಾಗಿದೆ.

ಇಬ್ಬರು ಮನುಷ್ಯರು ಯೆಹೂದ್ಯರ ಸಂಪ್ರದಾಯದ ಪ್ರಕಾರ ಪ್ರಾರ್ಥಿಸುವದಕ್ಕಾಗಿ ದೇವಾಲಯಕ್ಕೆ ಹೋಗುವದನ್ನು ಸಾಮ್ಯವು ಚಿತ್ರಿಸುತ್ತದೆ. ಒಬ್ಬನು ಸ್ವನೀತಿಯುಳ್ಳ ಫರಿಸಾಯನು. ಅವನು ನೀತಿವಂತನಾಗಿದ್ದು ಹಲವಾರು ವಿಧದಲ್ಲಿ ಒಬ್ಬ ಒಳ್ಳೆಯವನಾಗಿ–ರುವನಾದರೂ ತನ್ನ ನೀತಿ ಕಾರ್ಯಗಳ ಬಗ್ಗೆ ಹಾಗೂ ದೈವನಿಯಮಗಳ ಕಾಟಾಚಾರದ ಅನುಸರಣೆಯ ಬಗ್ಗೆ ಅತಿ ಜಾಗ್ರತೆಯುಳ್ಳವನಾಗಿರುವನು; ಇನ್ನೊಬ್ಬನು ಕೀಳು ವರ್ಗದವನೂ ಕೀಳು ಜಾತಿಯವನೂ ಆಗಿದ್ದನು. ಅವನು ಅಧಿಕ ದೋಷ ಬಲಹೀನತೆಯುಳ್ಳವನಾಗಿದ್ದು ತನ್ನ ಸ್ಥಿತಿಯನ್ನು ಅರಿತವ –ನಾಗಿದ್ದನು. ನಮಗೆ ತಿಳಿಸಲ್ಪಟ್ಟಂತೆ, ಫರಿಸಾಯನು ನಿಂತುಕೊಂಡ –ವನಾಗಿ ತನ್ನಲ್ಲೇ ಪ್ರಾರ್ಥಿಸಿಕೊಂಡನು: ಆತನ ಪ್ರಾರ್ಥನೆಯು ಕರ್ತನ ಬಳಿಗೆ ಏರಿಹೋಗದಿದ್ದುದು ಸ್ಪಷ್ಟವಾಗಿತ್ತು; ಹೀಗಾಗಿ ಆತನು ತನ್ನಲ್ಲೇ ಪ್ರಾರ್ಥಿಸಿ, ತನ್ನ ವಿಷಯವಾಗಿ ಪ್ರಾರ್ಥಿಸಿದ್ದನ್ನು ತಾನೇ ಆಲಿಸಿಕೊಂಡವನಾಗಿ, ಆ ಪ್ರಾರ್ಥನೆಯಲ್ಲಿ ತನ್ನನ್ನೇ ಅಭಿನಂದಿಸಿಕೊಂಡು, ಸಾಮಾನ್ಯವಾಗಿ ತನ್ನ ಬಗ್ಗೆ ತನಗಿರುವ ಅರಿವಿನ ವಿಷಯದಲ್ಲಿ ಸಂತೋಷಿಸಿದ್ದುದು ನಿಖರ ಸತ್ಯವಾಗಿರು –ವದು. ಆತನ ಪ್ರಾರ್ಥನೆಯು ತಂದೆಯು ಬಯಸುವಂಥ ರೀತಿಯಲ್ಲಿ ಇರಲಿಲ್ಲ. ಯಾಕಂದರೆ ತನ್ನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ ಆರಾಧಿಸುವದನ್ನು ತಂದೆಯು ಬಯಸುವನು; ಒಬ್ಬನು ಪ್ರಾರ್ಥನೆಯಲ್ಲಿ ಕರ್ತನ ಸನ್ನಿಧಿಗೆ ಸೂಕ್ತ ರೀತಿಯಲ್ಲಿ ಬಂದು ತನ್ನಲ್ಲಿರುವ ದೋಷ ಬಲಹೀನತೆಗಳನ್ನು ಅರಿತು ಒಪ್ಪಿಕೊಂಡವಾಗಿ ಅವುಗಳನ್ನು ಮರೆಮಾಡಲು ದೇವರು ಏರ್ಪಡಿಸಿರುವಂಥದನ್ನು ಬೇಡಿಕೊಳ್ಳದೇ ಇರುವಂಥದ್ದು ಅಸಾಧ್ಯವೆಂದು ತೋರುವದು.

## ಸ್ವನೀತಿಯುಳ್ಳವನ ಪ್ರಾರ್ಥನೆ

ಫರಿಸಾಯನು ಹೇಳಿದ್ದು: "ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರಮಾಡುತ್ತೇನೆ." ಇಂಥ ಒಂದು ಪ್ರಾರ್ಥನೆಯನ್ನು ಸತ್ಯಭಾವದಿಂದ ನುಡಿಯುವದು ನಾವು ಹೃದಯದಲ್ಲಿನ ಅನುಕಂಪವನ್ನು ಪರೋಕ್ಷವಾಗಿ ಸೂಚಿಸುವದೆಂದೂ ಅದಕ್ಕಾಗಿ ನಾವು ದೇವರಿಗೆ ಕೃತಜ್ಞತೆ ಸಲ್ಲಿಸುವದು ಒಳ್ಳೆಯದಾಗಿರುವ–ದೆನ್ನುವದು ಬಹು ಸತ್ಯವಾದುದು. ಕ್ರೈಸ್ತರೆಲ್ಲರೂ ದೇವರೊಂದಿ–ಗಿರುವ ತಮ್ಮ ಸಂಬಂಧ, ತಮ್ಮ ಪಾಪಗಳು ಮುಚ್ಚಲ್ಪಟ್ಟಿರುವ, ಪವಿತ್ರಾತ್ಮನಿಂದ ಹುಟ್ಟಿರುವ, ತಮ್ಮ ಹೃದಯಗಳಲ್ಲಿ ನಡೆಯುತ್ತಿರುವ ಪರಿವರ್ತನಾ ಕಾರ್ಯ, ಇವುಗಳ ದೆಸೆಯಿಂದ ತಾವು ಬಹು ಪಾಲು ತಮ್ಮ ಸಹಜೀವಿಗಳಿಗಿಂತಲೂ ಭಿನ್ನವಾಗಿರುವದರಿಂದ ದೇವರಿಗೆ ಕೃತಜ್ಞತೆ ಸಲ್ಲಿಸಲು ಸೂಕ್ತವಾದ ಕಾರಣಗಳನ್ನು ಪಡೆದಿರುವರು. ಆದರೆ ಹೊಗಳಿಕೊಳ್ಳಲು ಅವರಿಗೆ ಏನೂ ಇರುವದಿಲ್ಲ. ಈ ವಿಷಯವಾಗಿ ಅಪೋಸ್ತಲನು ಹೇಳುವದು: "ನಿನಗೂ ಇತರರಿಗೂ ತಾರತಮ್ಯ ಮಾಡಿದವ–ರಾರು? ದೇವರಿಂದ ಹೊಂದದಿರುವಂಥದು ನಿನ್ನಲ್ಲಿ ಒಂದಾದರೂ ಉಂಟೋ?" (1 ಕೊರಿಂಥ 4:7) ಆದುದರಿಂದ ನಮ್ಮ ಹಾಗೂ ಇತರರ ನಡುವಿನ ತಾರತಮ್ಯವು ಕರ್ತನ ಮತ್ತು ಆತನ ಕೃಪಾಕಾರ್ಯವು ನಮ್ಮಲ್ಲಿ ಇರುವ ಕಾರಣದಿಂದ ಆಗಿರುವದೆಂದೂ ಅಲ್ಲದೆ ಅದು ನಮ್ಮಿಂದ ಆಗಿರುವದಿಲ್ಲವೆಂಬು–ದನ್ನು ನಾವು ಗ್ರಹಿಸಿಕೊಂಡದ್ದೇಯಾದಲ್ಲಿ, ಇದು ಹೃದಯದ ಸೂಕ್ತವಾದ ಮನೋಭಾವವಾಗಿರುವದು. ಮತ್ತು ಇಂಥಾ ಗ್ರಹಿಕೆ ಹೊಂದಿರುವವರೆಲ್ಲರೂ ಈ ವಿಷಯದಲ್ಲಿ ದೇವರಿಗೆ ಕೃತಜ್ಞತೆ ಸಲ್ಲಿಸುವದು ಬಹು ಸಮಂಜಸವಾಗಿರುವದು. ಯಾಕಂದರೆ ಆತನು ನಮ್ಮನ್ನು ಇತರರಿಂದ ಭಿನ್ನವಾಗಿರುವಂತೆ ಮಾಡಿರುವನು, ಕಾರಣ ನಾವು ಏನಾಗಿರುವೆವೋ ಅದು ಆತನ ಕೃಪೆಯಿಂದಲೇ.

ಸಾಮ್ಯದಲ್ಲಿನ ಫರಿಸಾಯನಲ್ಲಿದ್ದ ಸಮಸ್ಯೆ ಎಂದರೆ ಆತನು ತನಗೋಸ್ಕರವಾಗಿ ಪ್ರಾರ್ಥಿಸಿ, ತನ್ನನ್ನೇ ಅಭಿನಂದಿಸಿಕೊಂಡಿದ್ದು, ಈ ಭಿನ್ನತೆಗಳಿಗಾಗಿ ಕರ್ತನಿಗೆ ಕೃತಜ್ಞತೆ ಸಲ್ಲಿಸುವಂತೆ ತೋರ್ಪಡಿಸಿಕೊಂಡಿದ್ದನು. ತನ್ನನ್ನು ಭಿನ್ನವಾಗಿರುವಂತೆ ಮಾಡಿರುವನೆಂದು ಕರ್ತನಿಗೆ ಆತನು ಕೃತಜ್ಞತೆ ಹೇಳಿರಲಿಲ್ಲ; ಆದರೆ ತಾನು ಭಿನ್ನವಾಗಿರುವಂತೆ ತನ್ನನ್ನು ತಾನೇ ಮಾಡಿಕೊಂಡಿರುವದಕ್ಕಾಗಿ ಕರ್ತನಿಗೆ ಕೃತಜ್ಞತೆ ಹೇಳಿದ್ದನು. ದೇವರಿಗೆ ಎಂದೂ ಮೆಚ್ಚಿಕೆಯಾಗದಂಥ ತನ್ನ ಶರೀರಭಾವದ ಕರ್ಮಗಳಲ್ಲಿ ಆತನು ಭರವಸವಿಟ್ಟಿದ್ದನು. ಹೀಗಾಗಿ ಒಬ್ಬ ಫರಿಸಾಯನಾಗಿ ಆತನು ದೋಷಪರಿಹಾರ ಮಹಾದಿನದ ಯಜ್ಞದ ಮೂಲಕವಾಗಿ ಒದಗಿಸಲಾದ ನೀತಿಯನ್ನು ನಿರಾಕರಿಸಿದ್ದನು. ಆದುದರಿಂದ, ನಾವು ಯಾವುದೇ ವಿಧದಲ್ಲಿ ಅಥವಾ ಹಂತದಲ್ಲಿ ನಮ್ಮನ್ನು ನಾವೇ ಹೊಗಳಿಕೊಂಡಿದ್ದೇ ಆದರೆ ನಮ್ಮ ಸ್ಥಿತಿಯೂ ಹೀಗೆಯೇ ಇರುವದು. ಇಂಥಾ ಒಂದು ಪ್ರಾರ್ಥನೆಯನ್ನು ಸಲ್ಲಿಸುವಂಥವನು ಅದು ದೇವರಿಗೆ ಹೋಗುವಂಥದಲ್ಲವೆಂದೂ ಕೇವಲ ಅದು ತನ್ನನ್ನೇ ಪ್ರಸಂಶಿಸಿ–ಕೊಳ್ಳುವಂಥದೆಂದೂ ಇದರಿಂದ ಯಾವ ಪ್ರಯೋಜನವೂ ಉಂಟಾಗುವದಿಲ್ಲವೆಂಬುದನ್ನು ತಿಳಿಯಬೇಕು. ನಮಗಿರುವ ಸಾಮರ್ಥ್ಯವು ದೇವರಿಂದಲೇ ಉಂಟಾದದ್ದೆಂದೂ, ಆತನೇ ನಮ್ಮನ್ನು ತನ್ನ ಸ್ವಂತ ಬಲದಿಂದ ಕಾಯುತ್ತಾ ನಾವು ಇತರರಿಗಿಂತ ಭಿನ್ನವಾಗಿರುವಂತೆ ಮಾಡಿ ಕ್ರಿಸ್ತನಿಂದ ದೊರೆತ ನೀತಿವಸ್ತ್ರದಿಂದ ಹೊದಿಸಿ ನಮ್ಮನ್ನು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಲು ಸಿದ್ಧಗೊಳಿಸುತ್ತಿರುವನೆಂಬುದನ್ನು ಗ್ರಹಿಸಿಕೊಂಡವ–ರಾದಲ್ಲಿ ನಾವು ಸರಿಯಾದ ಮನೋಭಾವದಲ್ಲಿರುವೆವು. ಆತನು ನೀಡುವ ಪಾಠಗಳು ಮತ್ತು ಮಾರ್ಗದರ್ಶನಗಳಿಗೆ ನಾವು ನಂಬಿಗಸ್ತಿಕೆಯಿಂದ ವಿಧೇಯರಾದಲ್ಲಿ ಆತನು ಇವುಗಳನ್ನು ನಮಗೆ ನೀಡುವ ವಾಗ್ದಾನ ಮಾಡಿರುವನು.

ಕರ್ತನ ಜನರೆಲ್ಲರೂ ಕೃಪಾಸನದ ಮುಂದೆ ತಾವು ಸುಲುಕೊಳ್ಳುವವರೂ ಅನ್ಯಾಯಗಾರರೂ ವ್ಯಭಿಚಾರಿಗಳೂ

ಇಲ್ಲವೇ ಇತರರಂತೆಯೂ ಅಲ್ಲವೆಂಬುದನ್ನು ತಮಗೇ ಭರವಸನೀಡಿಕೊಳ್ಳಲು ಶಕ್ತರಾಗಿರಬೇಕು. ಇದೆಲ್ಲವೂ ನಮ್ಮ ಕರ್ತನು ಪ್ರಕಟಮಾಡಿ ಹೀಗೆ ಹೇಳಿರುವದಕ್ಕೆ ಸರಿಹೊಂದುವದು: "ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ." ಲೋಕದಿಂದ ಪ್ರತ್ಯೇಕಿಸಲ್ಪಟ್ಟಿರುವದರ ಈ ಪ್ರಮಾಣಗಳು ನಮ್ಮಲ್ಲಿ ಕಂಡುಬಂದದ್ದೇಯಾದಲ್ಲಿ ನಾವು ಸಂತೋಷಿಸಬೇಕು; ಆದರೆ ನಾವು ಹೊಗಳಿಕೊಳ್ಳಬಾರದು ಇಲ್ಲವೇ ಇವೆಲ್ಲವೂ ಸ್ವತಃ ನಮ್ಮಿಂದ ಸ್ಥಾಪಿತವಾದವುಗಳೆಂದು ಪರಿಗಣಿಸಬಾರದು ಅಥವಾ ಇವುಗಳಿಂದಾದ ಪ್ರಸಂಶೆಯನ್ನು ನಾವು ತೆಗೆದುಕೊಳ್ಳಬಾರದು. ಈಗಾಗಲೇ ತೋರಿಸಿಕೊಟ್ಟಿರುವಂತೆ, ನಾವು ಏನಾಗಿರುವೆವೋ ಅದು ಕರ್ತನ ಕೃಪೆಯಿಂದಲೇ.

ಫರಿಸಾಯನು ತಾನು ವಾರಕ್ಕೆ ಎರಡಾವರ್ತಿ ಉಪವಾಸ ಮಾಡುವನೆಂದೂ, ಅಲ್ಲದೆ ತನ್ನ ಎಲ್ಲಾ ಸಂಪಾದನೆಯಲ್ಲಿ ಹತ್ತರಲ್ಲೊಂದು ಪಾಲನ್ನು ಕೊಡುವದಾಗಿಯೂ ಇರುವ-ನೆಂಬುದನ್ನು ತನ್ನ ಹೋಗಳಿಕೆಗಾಗಿ ಹೇಳಿಕೊಂಡನು. ಈ ಉಪವಾಸಮಾಡುವದರಲ್ಲಿ ಆತನು ಧರ್ಮಶಾಸ್ತ್ರವು ಬಯಸು-ವಂಥವುಗಳಿಗಿಂತಲೂ ಹೆಚ್ಚಾದುದನ್ನು ಮಾಡುವವನಾಗಿದ್ದು ಈ ಕಾರಣಕ್ಕಾಗಿ ತಾನು ವಿಶೇಷವಾಗಿ ಪ್ರಶಂಸಿಸಲ್ಪಡಬೇಕೆಂದು ಭಾವಿಸಿಕೊಂಡಿದ್ದನೆಂಬದು ನಿಸ್ಸಂದೇಹ. ಆದರೆ ಕರ್ತನ ದೃಷ್ಟಿಯಲ್ಲಿ ಅದು ಹೀಗಿರುವದಿಲ್ಲ. ಕ್ರಿಯೆಗಳು ಎಂದೂ ನಮ್ಮನ್ನು (ನೀತಿವಂತರೆದು) ಸಮರ್ಥಿಸುವದಿಲ್ಲ. ನಾವು ಮರಣ ಪರ್ಯಂತರ ಉಪವಾಸಮಾಡಿದರೂ ಅದು ನಮ್ಮನ್ನು (ನೀತಿವಂತರಾಗಲು) ಅರ್ಹಗೊಳಿಸುವದಿಲ್ಲ. ನಮ್ಮಲ್ಲಿರುವ ನ್ಯೂನ್ಯತೆಗಳನ್ನು ಸೂಕ್ತವಾಗಿ ಅರಿತುಕೊಂಡು ಯೇಸುವನ್ನು ನಂಬುವದರ ಮೂಲಕವಾಗಿ ದೇವರು ದಯಪಾಲಿಸುವ ನೀತಿಯನ್ನು ಅಂಗೀಕರಿಸದ ಹೊರತು ನಮ್ಮ ಯಾವ ಕ್ರಿಯೆಗಳಿಗೂ ಬೆಲೆಯಿರುವದಿಲ್ಲ. ಆ ದಿನದಲ್ಲಿ ಯೆಹೂದ್ಯ ಜನಾಂಗದ ಸದಸ್ಯನನ್ನು ಛಾಯಾರೂಪದ ದೋಷಪರಿಹಾರಕ ಮಹಾದಿನದ ಯಜ್ಞದ ಮೂಲಕವಾಗಿ ನೀತಿವಂತನೆಂದು ನಿರ್ಣಯಿಸಲಾಗುತ್ತಿತ್ತು. ಕರ್ತನ ಜನರ ಉಪವಾಸದ ವಿಷಯ –ವಾಗಿ ಹೇಳುವದಾದರೆ ಈ ದಿನಗಳಲ್ಲಿ ಅವರು ಉಪವಾಸವನ್ನು ಚೆನ್ನಾಗಿ ಮಾಡಸಲುವಾದ ಸಂಗತಿಗಳು ಹೇರಳವಾಗಿರುತ್ತದೆ. ಉಪವಾಸವು ಕೇವಲ ತನ್ನನ್ನು ತಾನು ನಿರಾಕರಿಸಿಕೊಳ್ಳುವದನ್ನು ಸೂಚಿಸುತ್ತದೆ. ಅಲ್ಲದೆ ಆಹಾರ ಸೇವನೆಯ ನಿರಾಕರಣೆಯು ಶ್ರೇಷ್ಠವೆಂದಾಗಲಿ ಇಲ್ಲವೇ ದೇವರ ದೃಷ್ಟಿಯಲ್ಲಿ ಅತ್ಯಮೂಲ್ಯ –ವಾಗಿಯಾಗಲೀ ಇರುವುದಿಲ್ಲವೆಂಬುದನ್ನು ನಾವು ಖಚಿತಪಡಿಸಿ –ಕೊಳ್ಳಬಹುದು. ಕರ್ತನ ನಿಜವಾದ ಹಿಂಬಾಲಕರಿಗೆ ತಾವು ಆತ್ಮಿಕ ಸಂಗತಿಗಳಲ್ಲಿ ಸೂಕ್ತವಾಗಿ ಪೋಷಿತರಾಗಿ ಏಳಿಗೆಹೊಂದಿ ದೃಢವಾಗುವ ಸಲುವಾಗಿ ಶಾರೀರಿಕ ಅಭಿಲಾಷೆಗಳನ್ನು ನಿಯಂತ್ರಿಸಿಕೊಂಡು ಅವುಗಳನ್ನು ಕಡಿಮೆ ಮಾಡಿಕೊಳ್ಳಲು ಉಪವಾಸ ಮಾಡಸಲುವಾದ ಅನೇಕ ಸಂಗತಿಗಳಿರುವದು.

## ದಶಮಾಂಶವನ್ನು ಕೊಡುವ ವಿಷಯವಾಗಿ ಹೊಗಳಿಕೊಳ್ಳುವದು

ದಶಮಾಂಶವನ್ನು ಕೊಡುವದು ಸೂಕ್ತವಾಗಿದೆ. ದನದ ಮಂದೆ ಅಥವಾ ಕುರಿಹಿಂಡು ಇಲ್ಲವೆ ಹೊಲದ ಉತ್ಪತ್ತಿಯಿಂದ ಹತ್ತರಲ್ಲಿ ಒಂದು ಭಾಗವನ್ನು (ಅಥವಾ ದಶಮಾಂಶವನ್ನು) ತನ್ನ ಸೇವೆಗಾಗಿ ಪ್ರತ್ಯೇಕಿಸುವದನ್ನು ದೇವರು ವಿಶಿಷ್ಟವಾಗಿ ತನ್ನ ಮೇಲಿನ ಗೌರವದ ಸಂಕೇತವಾಗಿ (ದಶಾಜ್ಞೆಯಲ್ಲಿ) ಸೇರಿಸಿದ್ದನು. ದೇವರು ಎಲ್ಲಾ ಒಳ್ಳೆಯದನ್ನು ಹೇರಳವಾಗಿ ಕೊಡುವವನಾಗಿ-ರುವಲ್ಲಿ, ಈ ಏರ್ಪಾಡಿಗೆ ವಿಧೇಯರಾಗುವದರಲ್ಲಿ ಹೊಗಳಿಕೊಳ್ಳುವಂಥದ್ದೇನೂ ಇರುವದಿಲ್ಲ. ಹೀಗಿರುವಲ್ಲಿ ಹೆಮ್ಮೆಯಿಂದ ಕೊಚ್ಚಿಕೊಳ್ಳಲು ಅವಕಾಶವಿರುವದೆಲ್ಲಿ? ಇದು ಮಕ್ಕಳ ಮನೆತನದವರ ಸದಸ್ಯರಾಗಿ ಅಂಗೀಕೃತರಾಗುವಂಥವರೆಲ್ಲರಿಗೆ ಅಗತ್ಯವಾಗಿರುವ ಇನ್ನೂ ಹೆಚ್ಚಿನ ರೀತಿಯ ಪ್ರತಿಷ್ಠೆಯನ್ನು ಮಾಡಿಕೊಳ್ಳಲು ಸಿದ್ಧರಲ್ಲದೆ ಇರುವಂಥ ಆತ್ಮತೃಪ್ತಿಯುಳ್ಳ ಮನೋಸ್ಥಿತಿಯನ್ನು ತೋರಿಸಿಕೊಡುವದು. ತಮ್ಮದೆಲ್ಲವನ್ನೂ ಕರ್ತನಿಗೆ ಪ್ರತಿಷ್ಠೆಮಾಡಿಕೊಳ್ಳುವದನ್ನು ನಿರೀಕ್ಷಿಸಲಾಗುವಂಥ ಯೇಸುವಿನ ಹಿಂಬಾಲಕರು (ತಮ್ಮನ್ನು ಪ್ರತಿಷ್ಠಿಸಿಕೊಂಡು) ಆನಂತರದಲ್ಲಿ ಮನೆವಾರ್ತೆಯುವರಂತೆ ಕಾರ್ಯ ನಿರ್ವಹಿಸುವವರಾಗಿ ತಮ್ಮಲ್ಲಿರುವ ಪ್ರತಿ ಹಣದ ಪ್ರತಿಯೊಂದು ಪ್ರತಿಭೆಯ ದೊರೆತ ಪ್ರತಿಯೊಂದು ಅವಕಾಶದ ವಿಷಯವಾಗಿ ಲೆಕ್ಕವನ್ನು ಒಪ್ಪಿಸಲು ಸಿದ್ಧರಾಗುವರು. ಭಕ್ತರು ತಮ್ಮ ಸ್ವಾರ್ಥತ್ಯಾಗದ ಇಲ್ಲವೇ ಸೇವೆಯ ವಿಷಯವಾಗಿ ಹೊಗಳಿ-ಕೊಳ್ಳುವರೇ? ಅಂಥವರು ಈ ಸಂಗತಿಯನ್ನು ಎಚ್ಚರಿಕೆಯಿಂದ ಪರಿಗಣನೆಮಾಡಿದವರಾಗಿ ಅತಿ ಸಾಮರ್ಥ್ಯವುಳ್ಳಂಥವರೂ ಎಷ್ಟು ಅಲ್ಪವಾಗಿ ಕಾರ್ಯಸಾಧಿಸ- ಶಕ್ತರಾಗಿರುವರೆಂಬುದನ್ನು ಕಾಣುವಂಥವರಾಗಲಿ; ಆನಂತರದಲ್ಲಿ ತಾವು ಕಾರ್ಯಸಾಧಿಸಲು ಬಯಸಿದಂಥವುಗಳಲ್ಲಿ ಎಷ್ಟು ಅಲ್ಪವಾಗಿ ಕರ್ತನಿಗೆ ಸಲ್ಲಿಸಶಕ್ತರಾ-ದೆವೆಂದು ಅನೇಕರು ನಾಚಿಕೆಯಿಂದ ಅರಿಕೆಮಾಡುವ-ರೆಂಬುದನ್ನು ಕಾಣುವಂಥವರಾಗಲಿ.

## "ದೇವರೇ, ಪಾಪಿಯಾದ ನನ್ನನ್ನು ಕರುಣಿಸು"

ದೊಡ್ಡ ಅನುಕಂಪವನ್ನು ತೋರಿಸುವಲ್ಲಿ ಯಾವ ನಟನೆಯನ್ನು ಮಾಡದಿರುವದಕ್ಕೆ ಸುಂಕದವನು ಒಂದು ಮಾದರಿಯಾಗಿದ್ದನು. ದೀನ ಮನಸ್ಸಿನ ಜನರು ಪರಿಪೂರ್ಣವಾದ ದೇವರ ಆಜ್ಞೆಯು ಅತ್ಯುತ್ತಮವಾಗಿ ಬಯಸುವಂಥ ಮಟ್ಟದಲ್ಲಿ ಜೀವಿಸಲು ಆಗುವದಿಲ್ಲವೆಂಬುದನ್ನು ಅರಿತವರಾಗಿರುವದು ಅಲ್ಲದೆ ಫರಿಸಾಯರು ತಾವು ವಿಧೇಯರಾಗಿ ಆ ಮಟ್ಟದಲ್ಲಿ ಜೀವಿಸಲು ಸಾಧ್ಯವಾಗಿತ್ತೆಂದು ಪ್ರತಿಪಾಧಿಸಿಕೊಳ್ಳುವದನ್ನು ಇವರು ನೋಡುವಾಗ ಧೈರ್ಯಗೆಡುವರು; ಅಲ್ಲದೆ ಇದರ ಪರಿಣಾಮ –ವಾಗಿ ಕೆಲವರು ಅಜಾಗರೂಕತೆಯಿಂದ ಪಾಪಮಯವಾದ ಹಿಂದಿನ ಜೀವಿತಕ್ಕೆ ತಿರುಗಿಕೊಳ್ಳುವರು. ಸಾಮ್ಯದಲ್ಲಿ ಸುಂಕದವನು ದೂರದಲ್ಲಿ ನಿಂತಿರುವನು; ಆತನು ದೇವಾಲಯದ ಪರಿಶುದ್ಧ ಪ್ರಾಕಾರದ ಸಮೀಪಕ್ಕೆ ಬರಲಿಲ್ಲ; ಆತನು ಸಾಕಷ್ಟು ದೂರದಲ್ಲಿ ನಿಂತಿದ್ದನು; ಆತನು ದೇವರಲ್ಲಿನ ಪರಿಪೂರ್ಣತೆ ಹಾಗು

ವೈಯುಕ್ತಿಕವಾಗಿ ತನ್ನಲ್ಲಿರುವಂಥ ಅಯೋಗ್ಯತೆ ಅಪರಿಪೂರ್ಣತೆ ಮತ್ತು ಪಾಪ-ಪೂರ್ಣತೆಗಳ ನಡುವೆ ಇರುವ ದೊಡ್ಡ ವ್ಯತ್ಯಾಸವನ್ನು ಮನಗಂಡವನಾಗಿದ್ದನು. ಆತನು ದೈವೀಕ ತೀರ್ಪಾದ ಮರಣ ದಂಡನೆಯನ್ನೂ ತಾನು ಅದಕ್ಕೆ ತಕ್ಕವನು ಅಂದರೆ ಮರಣಪಾತ್ರನು ಎಂಬುದನ್ನು ಒಪ್ಪಿಕೊಂಡವನಂತೆ ತನ್ನ ಎದೆಯ ಅಂದರೆ ಹೃದಯದ ಮೇಲೆ ಬಡಿದುಕೊಂಡಾಗ್ಯೂ ಆತನು ಕರುಣೆಗಾಗಿ ಹೀಗೆ ಬೇಡಿಕೊಂಡಿದ್ದನು: ದೇವರೇ, ಪಾಪಿಯಾದ ನನ್ನನ್ನು ಕರುಣಿಸು. ಮನುಷ್ಯರ ಯಾವ ದೃಷ್ಟಿಯಲ್ಲಿಯೂ ಆ ಇನ್ನೊಬ್ಬ ಮನುಷ್ಯನಂತೆ (ಫರಿಸಾಯನಂತೆ) ಈತನು ತೋರಿಕೆಯಲ್ಲಿ ನೀತಿಯುಳ್ಳ ಅಥವಾ ಒಳ್ಳೆಯ ಮನುಷ್ಯನಲ್ಲದಿದ್ದರೂ ದೇವರ ದೃಷ್ಟಿಯಲ್ಲಿ ಈ ಇಬ್ಬರಲ್ಲಿ ಇವನು ಹೃದಯದಲ್ಲಿ ಉತ್ತಮವಾದ ಸ್ಥಿತಿಯಲ್ಲಿದ್ದು ಹೆಚ್ಚು ನಿರೀಕ್ಷೆಯುಳ್ಳವನಾಗಿದ್ದನು. ಆತನು ತನ್ನಲ್ಲಿ ಭರವಸವಿಟ್ಟುಕೊಳ್ಳದೆ ಒಂದು ಉತ್ತಮವಾದ ಸ್ಥಿತಿಯಲ್ಲಿದ್ದನು; ಹೀಗಾಗಿ ದೇವರ ಕೃಪೆಯನ್ನು ಪಡೆಯಲು ಇರುವ ಒಂದೇ ಒಂದು ಷರತ್ತಾಗಿರುವ ದೀನತೆಯುಳ್ಳ ನಂಬಿಕೆಯನ್ನು ಹೊಂದಿದ್ದನು. ನಮ್ಮ ಕರ್ತನು ಈ ಇಬ್ಬರಲ್ಲಿ ಈತನು ಹೊರಗಿನ ತೋರಿಕೆಯಲ್ಲಿ ಅಲ್ಪ ಘನತೆಯುಳ್ಳವನೂ ಅಲ್ಪ ನೀತಿಯುಳ್ಳವನೂ ಆಗಿದ್ದು ಆಂತರ್ಯದಲ್ಲಿ ತಂದೆಗೆ (ದೇವರಿಗೆ) ಹೆಚ್ಚು ಅಂಗೀಕೃತನಾಗಿ ವಾಸ್ತವದಲ್ಲಿ ಆ ಫರಿಸಾಯನಿಗಿಂತಲೂ ನೀತಿವಂತನೆಂದು ಎಣಿಸಲ್ಪಟ್ಟಿದ್ದನೆಂಬುದನ್ನು ಸೂಚಿಸಿದ್ದನು.

## "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನೂ ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವ ಪ್ರತಿಯೊಬ್ಬನೂ ಹೆಚ್ಚಿಸಲ್ಪಡುವನು"

ಸತ್ಯವೇದದ ಪರ್ಯಂತರವಾಗಿ ನಮ್ಮ ಕರ್ತನು ದೀನತೆಯ ಬಗ್ಗೆ ವಿಶೇಷವಾದ ಅವಶ್ಯಕತೆಯಿರುವದೆಂಬದನ್ನು ಪದೇ ಪದೇ ಗಮನಕ್ಕೆ ತಂದವನಾಗಿ, ಇದು ಇಲ್ಲದಿದ್ದಲ್ಲಿ ನಮ್ಮ ಪರಿಸ್ಥಿತಿ ನಮ್ಮ ಅರ್ಹತೆಗಳು ಏನೇ ಇದ್ದರೂ ನಾವು ಯಾವ ವಿಧದಲ್ಲಿಯೂ ಆ ರಾಜ್ಯಕ್ಕೆ ಸೇರಲಾಗದೆಂದು ನಮಗೆ ಭರವಸೆಯಾಗಿ ಹೇಳಿರುವದು ಗಮನಾರ್ಹವಲ್ಲವೇ; ಈ ಸಾಮ್ಯದಲ್ಲಿ ದೀನತೆಯೆಂಬ ಈ ಸ್ವಭಾವವು ಸುಂಕದವನಲ್ಲಿ ನಿದರ್ಶನಗೊಂಡಿದ್ದು ಆ ಫರಿಸಾಯನಲ್ಲಿ ಇದರ ಕೊರತೆಯಿತ್ತೆಂಬುದನ್ನು ಈಗ ತಾನೇ ಪರಿಗಣನೆ ಮಾಡಿದ್ದೆವು. ಈ ಅಂಶವನ್ನು ಪ್ರತಿಪಾದಿಸಿ ಹೇಳುವದಾದರೆ, ಕೇವಲ ದೀನ ಮನಸ್ಸಿನವರು ತಾವು ಪಾಪಿಗಳೆಂಬುದನ್ನೂ ಅಲ್ಲದೆ ದೇವಾನುಗ್ರಹ ಪ್ರೀತಿಗಳನ್ನು ಹೊಂದಲು ಅನರ್ಹರೆಂಬುದನ್ನೂ, ಕ್ರಿಸ್ತನಲ್ಲಿ ನಮಗೆ ಏರ್ಪಡಿಸ-ಲಾಗಿರುವ ನೀತಿ ನಿರ್ಣಯ ಪಾಪಕ್ಷಮೆಯ ಅಗತ್ಯವಿರುವದೆಂದು ಅರಿಕೆಮಾಡಲು ಸಿದ್ಧರಾಗಿರಲು ಸಾಧ್ಯವೆಂಬುದನ್ನು ನಾವು ನೋಡಬಹುದು. ಹೀಗಿರುವದು ಮಾತ್ರವಲ್ಲದೆ, ಇಂಥಾ ದೀನತೆಯನ್ನು ಅಭ್ಯಾಸಮಾಡಿ ಕರ್ತನ ಬಳಿಗೆ ಬಂದು ಆತನಿಂದ ಅಂಗೀಕರಿಸಲ್ಪಟ್ಟವರಾದ ನಂತರವೂ ಸಹ ದೀನತೆಯನ್ನು ಕಳೆದುಕೊಂಡದ್ದೇಯಾದಲ್ಲಿ ಕ್ರಿಸ್ತನಲ್ಲಿ ನಮಗೆ ದೊರೆತಿರುವ ಕೃಪಾಪೂರ್ಣವಾದ ಸ್ಥಾನವು ರದ್ದಾಗಿ-ಹೋಗುವದು. ಹೆಮ್ಮೆಯು ಆತ್ಮತೃಪ್ತಿಯನ್ನು ಸೂಚಿಸುವದು ಹಾಗೂ ನಮ್ಮ ಮಹಿಮೆಯುಳ್ಳ ಶಿರಸ್ಸಾದವನಲ್ಲಿ (ನಮ್ಮ ನ್ಯೂನ್ಯತೆಗಳನ್ನು) ಸರಿಹೊಂದಿಸಲು ದೊರೆಯುವ ಅರ್ಹತೆಗಳೆಲ್ಲವನ್ನು ಅಲಕ್ಷ್ಯಮಾಡಿದಂತಾಗುವದು. ಕ್ರಿಸ್ತನು ನಮಗೆ ಹೇಳಿರುವದು: "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿ." – ಯೋಹಾನ 15:15

ಅಯ್ಯೋ, ದೇವರ ಹಾಗು ಆತನ ಯೋಜನೆಗಳ ಬಗ್ಗೆ ಪರಿಜ್ಞಾನವಿರುವ ಹಲವಾರು ಜನರು ಸೂಕ್ತ ರೀತಿಯಲ್ಲಿ ಅವುಗಳನ್ನು (ಅಂದರೆ ತಮಗೆ ಲಭಿಸಿರುವ ಅರ್ಹ ಸ್ಥಾನ ಮಾನಗಳನ್ನು) ಬಿಗಿಯಾಗಿ ಹಿಡಿದುಕೊಂಡಿರುವಂತಾಗಲು ದೀನಭಾವದ ಹಾಗು ತಮ್ಮ ತಪ್ಪುಗಳನ್ನು ಕಂಡುಕೊಂಡು ಅವುಗಳನ್ನು ಒಪ್ಪಿಕೊಂಡವರಾಗಿ ದೇವರ ಕನಿಕರ ಕೃಪೆಯನ್ನು ಅಂಗೀಕರಿಸಿಕೊಳ್ಳುವದರ ವಿಷಯದಲ್ಲಿ ಕೊರತೆಯುಳ್ಳವರಾಗಿ ತಮಗೆ ಅಡ್ಡಿಯನ್ನು ಉಂಟು ಮಾಡಿಕೊಂಡಿರುವರು! ಅಯ್ಯೋ, ಅನೇಕ ಜನರು ನಂಬಿಕೆಯ ಮೂಲಕವಾಗಿ ತಮ್ಮ ಹಳೆಯ ಪಾಪಗಳನ್ನು ತೊಳೆದುಕೊಂಡ ನಂತರವೂ ದೀನಭಾವದ ಕೊರತೆಯಿಂದಾಗಿ ಅಹಂಕಾರ ಸ್ವಪ್ರತಿಷ್ಠೆಯೆಡೆಗೆ ನಡೆಸಲ್ಪಟ್ಟಿರುವರು. ಒಂದಲ್ಲಾ ಒಂದು ರೀತಿಯಲ್ಲಿ ಇವು ಹೊಸ ಸೃಷ್ಟಿಗಳಾಗಿರುವ ನಮಗೆ ಹಾನಿಯನ್ನು ಉಂಟುಮಾಡಿ ದೇವರ ರಾಜ್ಯದಲ್ಲಿ ಪಾಲನ್ನು ಹೊಂದುವ ಸಂಭವವನ್ನು ಛಿದ್ರಗೊಳಿಸುವವು; ಅಲ್ಲಿ ಕೇವಲ ತಮ್ಮನ್ನು ತಗ್ಗಿಸಿಕೊಳ್ಳುವರು ಮಾತ್ರ ಹೆಚ್ಚಿಸಲ್ಪಡುವರು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಪೆರೀಯ | ಪೆರೀಯ ಮೂಲಕವಾಗಿ ಹಾದು ಹೋದುದು; ವಿವಾಹ ವಿಚ್ಛೇದನ ಬಗ್ಗೆ ಬೋಧಿಸಿದುದು | 19:1–12 | 10:1–12 | -- | -- |
| | ಪೆರೀಯ | ಚಿಕ್ಕಮಕ್ಕಳನ್ನು ಅಂಗೀಕರಿಸಿಕೊಂಡು ಅವುಗಳನ್ನು ಆಶೀರ್ವದಿಸಿದುದು | 19:13–15 | 10:13–16 | 18:15–17 | -- |
| | ಪೆರೀಯ | ಐಶ್ವರ್ಯವಂತನಾದ ಯೌವನಸ್ಥನು | 19:16–20:16 | 10:17–31 | 18:18–30 | -- |

# ಮತ್ತಾಯ 19:1–30

ಯೇಸು ಈ ಮಾತುಗಳನ್ನು ಮುಗಿಸಿದ ಮೇಲೆ ಗಲಿಲಾಯವನ್ನು ಬಿಟ್ಟು ಯೋರ್ದನ್ ಹೊಳೆಯ ಆಚೆ ಪ್ರಯಾಣ ಮಾಡಿ ಯೂದಾಯ ಪ್ರಾಂತ್ಯಕ್ಕೆ ಬಂದನು. ಬಹುಜನರು ಆತನ ಹಿಂದೆ ಗುಂಪುಗುಂಪಾಗಿ ಹೋದರು; ಆತನು ಅವರನ್ನು ಅಲ್ಲಿಯೇ ಸ್ವಸ್ಥಮಾಡಿದನು.

ಆಗ ಫರಿಸಾಯರು ಆತನ ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ–ಒಬ್ಬನು ಯಾವುದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟುಬಿಡುವದು ಧರ್ಮವೋ ಹೇಗೆ ಎಂದು ಕೇಳಿದ್ದಕ್ಕೆ ಆತನು–ಮನುಷ್ಯರನ್ನು ನಿರ್ಮಾಣ ಮಾಡಿದವನು ಆದಿಯಿಂದಲೇ ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ–ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಸಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು ಎಂದು ಹೇಳಿದನೆಂಬದಾಗಿ ನೀವು ಓದಲಿಲ್ಲವೋ? ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ; ಒಂದೇ ಶರೀರವಾಗಿದ್ದಾರೆ. ಆದದರಿಂದ ದೇವರು ಕೂಡಿಸಿದ್ದನು ಮನುಷ್ಯರು ಅಗಲಿಸಬಾರದು ಅಂದನು.

ಅವರು ಆತನನ್ನು–ಹಾಗಾದರೆ ತ್ಯಾಗಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಯಾಕೆ ಆಜ್ಞೆಕೊಟ್ಟನು ಎಂದು ಕೇಳಲು ಆತನು–ಮೋಶೆಯು ನಿಮ್ಮ ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು ಬಿಟ್ಟುಬಿಡುವದಕ್ಕೆ ಅಪ್ಪಣೆಕೊಟ್ಟನು; ಆದರೆ ಆದಿಯಿಂದಲೇ ಹಾಗೆ ಇರಲಿಲ್ಲ. ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು. ಅದಕ್ಕೆ ಶಿಷ್ಯರು ಹೆಂಡತಿಯ ವಿಷಯವಾಗಿ ಗಂಡನ ಧರ್ಮ ಹೀಗಿದ್ದರೆ ಮದುವೆಯಾಗುವದು ಒಳ್ಳೇದಲ್ಲ ಅಂದಾಗ ಆತನು ಅವರಿಗೆ–ಈ ಮಾತನ್ನು ಅಂಗೀಕರಿಸುವ ವರವನ್ನು ಹೊಂದಿದ–ವರೇ ಹೊರತು ಮತ್ತಾರೂ ಅದನ್ನು ಅಂಗೀಕರಿಸುವದಿಲ್ಲ. ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ. ಅಂಗೀಕರಿಸಬಲ್ಲವನು ಅಂಗಿಕರಿಸಲಿ ಎಂದು ಹೇಳಿದನು.

ಆಗ ಕೆಲವರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನ ಬಳಿಗೆ ತಂದು ಆತನು ಅವುಗಳ ಮೇಲೆ ಕೈಯಿಟ್ಟು ಪ್ರಾರ್ಥನೆ ಮಾಡಬೇಕೆಂದು ಕೇಳಲು ಶಿಷ್ಯರು ಅವರನ್ನು ಗದರಿಸಿದರು. ಆದರೆ ಯೇಸು–ಮಕ್ಕಳನ್ನು ಬಿಡಿರಿ; ನನ್ನ ಹತ್ತರ ಬರುವದಕ್ಕೆ ಅವುಗಳಿಗೆ ಅಡ್ಡಿಮಾಡ ಬೇಡಿರಿ; ಪರಲೋಕರಾಜ್ಯವು ಇಂಥವರದೇ ಎಂದು ಹೇಳಿ ಅವುಗಳ ಮೇಲೆಕೈಯಿಟ್ಟು, ಅಲ್ಲಿಂದ ಹೊರಟು ಹೋದನು.

ಆಗ ಒಬ್ಬನು ಬಂದು ಆತನನ್ನು–ಬೋಧಕನೇ, ನಾನು ನಿತ್ಯಜೀವವನ್ನು ಪಡೆಯಬೇಕಾದರೆ ಏನು ಒಳ್ಳೆಯ ಕಾರ್ಯವನ್ನು ಮಾಡಬೇಕು ಎಂದು ಕೇಳಲಾಗಿ ಆತನು ಅವನಿಗೆ–ಒಳ್ಳೆಯದನ್ನು ಕುರಿತು ನನ್ನನ್ನು ಯಾಕೆ ಕೇಳುತ್ತೀ? ಒಳ್ಳೆಯವನು ಒಬ್ಬನೇ. ಆದರೆ ಆ ಜೀವದಲ್ಲಿ ಸೇರಬೇಕೆಂದಿದ್ದರೆ ದೇವರಾಜ್ಞೆಗಳಿಗೆ ಸರಿಯಾಗಿ ನಡೆದುಕೋ ಎಂದು ಹೇಳಿದ್ದಕ್ಕೆ ಅವನು–ಅವು ಯಾವವು ಎಂದು ಕೇಳಲು ಯೇಸು–ನರಹತ್ಯ ಮಾಡಬಾರದು; ವ್ಯಭಿಚಾರ–ಮಾಡಬಾರದು; ಕದಿಯಬಾರದು; ಸುಳ್ಳು ಸಾಕ್ಷಿಹೇಳಬಾರದು; ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ಮತ್ತು ನಿನ್ನ ಹಾಗೆಯೇ ನಿನ್ನ ನೆರೆಯವನನ್ನು ಪ್ರೀತಿಮಾಡಬೇಕು ಎಂಬಿವುಗಳೇ ಅಂದನು. ಆ ಯವ್ವನಸ್ಥನು ಆತನನ್ನು–ಇವೆಲ್ಲಕ್ಕೂ ಸರಿಯಾಗಿ ನಡೆದು – ಕೊಂಡಿದ್ದೇನೆ; ಇನ್ನೇನು ಕಡಿಮೆಯಾಗಿರಬಹುದು? ಎಂದು ಕೇಳಲು, ಯೇಸು ಅವನಿಗೆ–ನೀನು ಸಂಪೂರ್ಣನಾಗ–ಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಆ ಯವ್ವನಸ್ಥನು ಬಹಳ ಆಸ್ತಿಯುಳ್ಳವನಾಗಿದ್ದುದರಿಂದ ಈ ಮಾತನ್ನು ಕೇಳಿ ದುಃಖದಿಂದ ಹೊರಟಹೋದನು.

ಆಗ ಯೇಸು ತನ್ನ ಶಿಷ್ಯರನ್ನು ನೋಡಿ–ನಿಮಗೆ ಸತ್ಯವಾಗಿ ಹೇಳುತ್ತೇನೆ, ಐಶ್ವರ್ಯವಂತನು ಪರಲೋಕರಾಜ್ಯದಲ್ಲಿ ಸೇರುವದು ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಚಿಯ ಕಣ್ಣಿನಲ್ಲಿ ನುಗ್ಗುವದು ಸುಲಭ ಎಂದು ನಿಮಗೆ ತಿರಿಗಿ ಹೇಳುತ್ತೇನೆ ಅಂದನು. ಶಿಷ್ಯರು ಇದನ್ನು ಕೇಳಿ ಅತ್ಯಾಶ್ಚರ್ಯಪಟ್ಟು–ಹೀಗಿದ್ದರೆ ಯಾರಿಗೆ ರಕ್ಷಣೆಯಾದೀತು ಎಂದು ಕೇಳಲು ಯೇಸು ಅವರನ್ನು ದೃಷ್ಟಿಸಿ ನೋಡಿ–ಇದು ಮನುಷ್ಯರಿಗೆ ಅಸಾಧ್ಯ; ಆದರೆ ದೇವರಿಗೆ ಎಲ್ಲವೂ ಸಾಧ್ಯವೇ ಅಂದನು.

ಆಗ ಪೇತ್ರನು ಆತನನ್ನು–ಇಗೋ, ನಾವು ಎಲ್ಲಾ ಬಿಟ್ಟುಬಿಟ್ಟು ನಿನ್ನನ್ನು ಹಿಂಬಾಲಿಸಿದೆವು; ನಮಗೆ ಏನು ದೊರಕುವದು ಎಂದು ಕೇಳಲು ಯೇಸು ಅವರಿಗೆ–ನಿಮಗೆ ಸತ್ಯವಾಗಿ ಹೇಳುತ್ತೇನೆ, ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ ನನ್ನನ್ನು ಹಿಂಬಾಲಿಸಿರುವ ನೀವು ಸಹ ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ. ಮತ್ತು ನನ್ನ ಹೆಸರಿನ ನಿಮಿತ್ತ ಮನೆಗಳನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ಅಕ್ಕತಂಗಿ–ಯರನ್ನಾಗಲಿ ತಂದೆಯನ್ನಾಗಲಿ ತಾಯಿಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟುಬಿಟ್ಟಿರುವವರೆಲ್ಲರಿಗೆ ಅನೇಕ ಪಾಲು ಹೆಚ್ಚಾಗಿ ಸಿಕ್ಕುವದು; ಮತ್ತು ಅವರು ನಿತ್ಯಜೀವಕ್ಕೆ ಬಾಧ್ಯರಾಗುವರು. ಆದರೆ ಬಹು ಮಂದಿ ಮೊದಲಿನವರು ಕಡೆಯವರಾಗುವರು, ಕಡೆಯವರು ಮೊದಲಿನವರಾಗುವರು.

# ಮತ್ತಾಯ 20:1–16

ಅದು ಹೇಗಂದರೆ–ಪರಲೋಕರಾಜ್ಯವು ಒಬ್ಬ ಮನೆಯ ಯಜಮಾನನಿಗೆ ಹೋಲಿಕೆಯಾಗಿದೆ. ಅವನು ತನ್ನ ದ್ರಾಕ್ಷೆತೋಟಕ್ಕೆ ಕೂಲಿ ಆಳುಗಳನ್ನು ಕರೆಯುವದಕ್ಕೆ ಬೆಳಿಗ್ಗೆ ಹೊರಟನು. ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತುಮಾಡಿ ಅವರನ್ನು

ದ್ರಾಕ್ಷೇ ತೋಟಕ್ಕೆ ಕಳುಹಿಸಿದನು. ತರುವಾಯ ಹೆಚ್ಚುಕಡಿಮೆ ಒಂಭತ್ತು ಗಂಟೆಗೆ ಹೋಗಿ ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನೂ ಕೆಲವರನ್ನು ಕಂಡು–ನೀವೂ ಸಹ ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ; ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ ಅನ್ನಲು ಅವರು ತೋಟಕ್ಕೆ ಹೋದರು. ಅವನು ತಿರಿಗಿ ಹೆಚ್ಚುಕಡಿಮೆ ಹನ್ನೆರಡು ಗಂಟೆಗೆ ಮತ್ತು ಮೂರು ಗಂಟೆಗೆ ಹೋಗಿ ಅದೇ ಪ್ರಕಾರ ಮಾಡಿದನು. ತಿರಿಗಿ ಹೆಚ್ಚುಕಡಿಮೆ ಸಾಯಂಕಾಲ ಐದು ಗಂಟೆಗೆ ಹೋಗಿ ಬೇರೆ ಕೆಲವರು ನಿಂತಿರುವದನ್ನು ಕಂಡು ಅವರನ್ನು–ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೆ ನಿಂತಿದ್ದೀರಿ ಎಂದು ಕೇಳಲು ಅವರು–ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು–ನೀವೂ ಸಹ ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ ಅಂದನು. ಸಂಜೆಹೊತ್ತಿಗೆ ದ್ರಾಕ್ಷೇತೋಟದ ಯಜಮಾನನು ತನ್ನ ಪಾರುಪತ್ಯಗಾರನಿಗೆ–ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು ಎಂದು ಹೇಳಿದನು. ಆಗ ಸಾಯಂಕಾಲ ಐದು ಗಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು. ತರುವಾಯ ಮೊದಲಿನವರು ಬಂದು ತಮಗೆ ಹೆಚ್ಚು ದೊರೆಯುವದೆಂದು ನೆನಸಿದರು; ಆದರೆ ಇವರಿಗೆ ಸಹ ಒಂದೊಂದು ಪಾವಲಿಯೇ ಸಿಕ್ಕಿತು. ಅದನ್ನು ತೆಗೆದುಕೊಂಡು ಮನೆಯ ಯಜಮಾನನ ಮೇಲೆ ಗುಣಗುಟ್ಟಿ–ಕಡೆಗೆ ಬಂದ ಇವರು ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ; ನಾವು ದಿನವೆಲ್ಲಾ ಬಿಸಿಲಿನಲ್ಲಿ ಕೆಲಸ ಮಾಡಿ ಕಷ್ಟಪಟ್ಟಿದ್ದೇವೆ; ಇವರನ್ನು ನಮಗೆ ಸಮಾನ ಮಾಡಿದ್ದೀಯೆ ಅಂದರು. ಅದಕ್ಕೆ ಅವನು ಅವರಲ್ಲಿ ಒಬ್ಬನಿಗೆ–ಏನಪ್ಪಾ ನಾನು ನಿನಗೆ ಅನ್ಯಾಯ ಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ ಒಡಂಬಟ್ಟಿಯಲ್ಲಾ; ನಿನ್ನ ಕೂಲಿ ತಕ್ಕೊಂಡು ಹೋಗು; ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ ಕೊಡುವ ಮನಸ್ಸುಂಟು. ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ? ನಾನು ಒಳ್ಳೆಯವನಾಗಿರುವದು ನಿನ್ನ ಕಣ್ಣನ್ನು ಒತ್ತುತ್ತದೋ ಎಂದು ಹೇಳಿದನು. ಈ ಪ್ರಕಾರ ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು.

## ಮಾರ್ಕ 10:1–31

ಅಲ್ಲಿಂದ ಆತನು ಎದ್ದು ಯೂದಾಯ ಪ್ರಾಂತ್ಯಕ್ಕೂ ಯೋರ್ದನ್ ಹೊಳೆಯ ಆಚೆಯ ಸೀಮೆಗೂ ಬಂದನು. ಅಲ್ಲಿ ಜನರು ತಿರಿಗಿ ಗುಂಪುಗುಂಪಾಗಿ ಆತನ ಬಳಿಗೆ ಕೂಡಿ ಬರಲು ಆತನು ತಿರಿಗಿ ಎಂದಿನಂತೆ ಅವರಿಗೆ ಉಪದೇಶಮಾಡುತ್ತಿದ್ದನು. ಆಗ ಫರಿಸಾಯರು ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ–ಒಬ್ಬನು ಹೆಂಡತಿಯನ್ನು ಬಿಟ್ಟುಬಿಡುವದು ಧರ್ಮವೋ ಹೇಗೆ ಎಂದು ಕೇಳಿದರು. ಅದಕ್ಕೆ ಆತನು ಮೋಶೆ ನಿಮಗೆ ಏನು ಆಜ್ಞೆಕೊಟ್ಟನು ಅನ್ನಲಾಗಿ ಅವರು–ತ್ಯಾಗಪತ್ರವನ್ನು ಬರೆದುಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಅಪ್ಪಣೆಕೊಟ್ಟನು ಅಂದರು. ಆದರೆ ಯೇಸು ಅವರಿಗೆ–ಅವನು ನಿಮ್ಮ ಮೊಂಡತನವನ್ನು ನೋಡಿ ನಿಮಗೆ ಇಂಥಾ ಆಜ್ಞೆಯನ್ನು ಬರೆದಿಟ್ಟನು. ದೇವರಾದರೋ ಸೃಷ್ಟಿಯ ಮೊದಲಿನಿಂದಲೇ ಮನುಷ್ಯರನ್ನು ಗಂಡುಹೆಣ್ಣಾಗಿ ನಿರ್ಮಿಸಿದನೆಂತಲೂ ಈ ಕಾರಣದಿಂದ ಪುರುಷನು ತನ್ನ ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಂಡು ಅವರಿಬ್ಬರೂ ಒಂದೇ ಶರೀರವಾಗಿರುವರೆಂತಲೂ ಬರೆದದೆ. ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ. ಅದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಎಂದು ಹೇಳಿದನು. ಮನೆಯಲ್ಲಿ ಆತನ ಶಿಷ್ಯರು ಈ ವಿಷಯದಲ್ಲಿ ಆತನನ್ನು ತಿರಿಗಿ ಕೇಳಿದಾಗ ಆತನು ಅವರಿಗೆ–ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ತನ್ನ ಹೆಂಡತಿಗೆ ದ್ರೋಹಿಯಾಗಿ ವ್ಯಭಿಚಾರ ಮಾಡಿದವನಾಗಿದ್ದಾನೆ; ಮತ್ತು ಹೆಂಡತಿಯು ತನ್ನ ಗಂಡನನ್ನು ಬಿಟ್ಟು ಬೇರೊಬ್ಬನನ್ನು ಮದುವೆಮಾಡಿಕೊಂಡರೆ ಅವಳು ವ್ಯಭಿಚಾರ ಮಾಡಿದವಳಾಗಿ–ದ್ದಾಳೆ ಎಂದು ಹೇಳಿದನು.

ಬಳಿಕ ಕೆಲವರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನಿಂದ ಮುಟ್ಟಿಸಬೇಕೆಂದು ಆತನ ಬಳಿಗೆ ತರಲು ಶಿಷ್ಯರು ಅವರನ್ನು ಗದರಿಸಿದರು. ಆದರೆ ಯೇಸು ಅದನ್ನು ಕಂಡು ಕೋಪಗೊಂಡು ಅವರಿಗೆ–ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವದಿಲ್ಲವೋ ಅವನು ಅದರಲ್ಲಿ ಸೇರುವದೇ ಇಲ್ಲ ಎಂದು ಹೇಳಿ ಅವುಗಳನ್ನು ಅಪ್ಪಿಕೊಂಡು ಅವುಗಳ ಮೇಲೆ ಕೈಯಿಟ್ಟು ಆಶೀರ್ವದಿಸಿದನು.

ಆತನು ಹೊರಟು ದಾರೀ ಹಿಡಿದು ಹೋಗುವಾಗ ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣಕಾಲೂರಿ–ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ ಯೇಸು ಅವನಿಗೆ–ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ. ನರಹತ್ಯಮಾಡಬಾರದು; ವ್ಯಭಿಚಾರಮಾಡಬಾರದು; ಕದಿಯಬಾರದು; ಸುಳ್ಳುಸಾಕ್ಷಿ ಹೇಳಬಾರದು; ಮೋಸಮಾಡಬಾರದು; ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು ಎಂಬ ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೇ ಎಂದು ಹೇಳಿದನು. ಅವನು ಆತನಿಗೆ–ಬೋಧಕನೇ, ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಲು ಯೇಸು ಅವನನ್ನು ದೃಷ್ಟಿಸಿನೋಡಿ ಪ್ರೀತಿಸಿ ಅವನಿಗೆ–ನಿನಗೆ ಒಂದು ಕಡಿಮೆಯಾಗಿದೆ; ಹೋಗು, ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಆದರೆ ಅವನು ಬಹಳ ಆಸ್ತಿಯುಳ್ಳವನಾಗಿದ್ದದರಿಂದ ಈ ಮಾತಿಗೆ ಮೋರೆ ಬಾಡಿದವನಾಗಿ ದುಃಖದಿಂದ ಹೊರಟು ಹೋದನು.

ಆಗ ಯೇಸು ಸುತ್ತಲೂ ನೋಡಿ ತನ್ನ ಶಿಷ್ಯರಿಗೆ–ಧನವಂತರು ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ ಎಂದು ಹೇಳಿದನು. ಶಿಷ್ಯರು ಆತನ ಮಾತುಗಳನ್ನು ಕೇಳಿ

ಬೆರಗಾದರು. ಯೇಸು ತಿರಿಗಿ ಅವರಿಗೆ–ಮಕ್ಕಳಿರಾ ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ. ಐಶ್ವರ್ಯವಂತನು ದೇವರರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿ ಕಣ್ಣಿನಲ್ಲಿ ನುಗ್ಗಿಹೋಗುವದು ಸುಲಭ ಎಂದು ಹೇಳಿದನು. ಈ ಮಾತಿಗೆ ಅವರು ಇನ್ನಷ್ಟಾಶ್ಚರ್ಯ ಪಟ್ಟು – (ಹೀಗಿದ್ದರೆ) ಯಾರಿಗೆ ರಕ್ಷಣೆಯಾದೀತು ಎಂದು ತಮ್ಮ ತಮ್ಮೊಳಗೆ ಹೇಳಿಕೊಳ್ಳಲು ಯೇಸು ಅವರನ್ನು ದೃಷ್ಟಿಸಿ ನೋಡಿ–ಇದು ಮನುಷ್ಯರಿಗೆ ಅಸಾದ್ಯ; ದೇವರಿಗೆ ಅಸಾಧ್ಯವಲ್ಲ; ದೇವರಿಗೆ ಎಲ್ಲವೂ ಸಾಧ್ಯವೇ ಅಂದನು. ಪೇತ್ರನು ಆತನಿಗೆ–ಇಗೋ, ನಾವು ಎಲ್ಲಾ ಬಿಟ್ಟುಬಿಟ್ಟು ನಿನ್ನನ್ನು ಹಿಂಬಾಲಿಸಿದ್ದೇವೆ ಎಂದು ಹೇಳುವದಕ್ಕೆ ಪ್ರಾರಂಭಿಸಲು ಯೇಸು–ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ಅಕ್ಕತಂಗಿಯರನ್ನಾಗಲಿ ತಾಯಿಯನ್ನಾಗಲಿ ತಂದೆಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟುಬಿಟ್ಟಿರುವನೋ ಅವನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣತಮ್ಮ ಅಕ್ಕತಂಗಿ ತಾಯಿ ಮಕ್ಕಳು ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇಸಿಕ್ಕುತ್ತವೆ; ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವದು. ಆದರೆ ಬಹು ಮಂದಿ ಮೊದಲಿನವರು ಕಡೆಯವರಾಗುವರು, ಕಡೆಯವರು ಮೊದಲಿನವರಾಗುವರು ಎಂದು ಹೇಳಿದನು.

## ಲೂಕ 18:15–30

ಕೆಲವರು ತಮ್ಮ ಕೂಸುಗಳನ್ನು ಸಹ ಯೇಸುವಿನಿಂದ ಮುಟ್ಟಿಸಬೇಕೆಂದು ಆತನ ಬಳಿಗೆ ತರಲು ಶಿಷ್ಯರು ಕಂಡು ಅವರನ್ನು ಗದರಿಸಿದರು. ಆದರೆ ಯೇಸು ಆ ಕೂಸುಗಳನ್ನು ತನ್ನ ಬಳಿಗೆ ಕರತರಿಸಿ–ಮ್ಕಕಳನ್ನು ನನ್ನ ಹತ್ತರಕ್ಕೆ ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ, ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವದಿಲ್ಲವೋ ಅವನು ಅದರಲ್ಲಿ ಸೇರುವದೇ ಇಲ್ಲ ಅಂದನು.

ಒಬ್ಬ ಅಧಿಕಾರಿಯು ಬಂದು–ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು ಎಂದು ಆತನನ್ನು ಕೇಳಲಾಗಿ ಯೇಸು ಅವನಿಗೆ–ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ. ವ್ಯಭಿಚಾರ ಮಾಡಬಾರದು; ನರಹತ್ಯ ಮಾಡಬಾರದು; ಕದಿಯಬಾರದು; ಸುಳ್ಳುಸಾಕ್ಷಿ ಹೇಳಬಾರದು; ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು ಎಂಬ ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೆ ಎಂದು ಹೇಳಿದನು. ಅದಕ್ಕವನು–ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಲು ಯೇಸು ಅದನ್ನು ಕೇಳಿ ಅವನಿಗೆ–ಇನ್ನೂ ನಿನಗೆ ಒಂದು ಕಡಿಮೆಯಾಗಿದೆ; ನಿನ್ನ ಬದಕನ್ನೆಲ್ಲಾ ಮಾರಿ ಬಡವರಿಗೆ ಹಂಚಿಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಅವನು ಬಹಳ ಐಶ್ವರ್ಯವಂತನಾಗಿದ್ದರಿಂದ ಇದನ್ನು ಕೇಳಿ ಬಹಳ ವ್ಯಸನಗೊಂಡನು. ಆಗ ಯೇಸು ಅವನನ್ನು ನೋಡಿ–ಧನವಂತರು ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ, ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜೀಕಣ್ಣಿನಲ್ಲಿ ನುಗ್ಗುವದು ಸುಲಭ ಅಂದನು. ಈ ಮಾತನ್ನು ಕೇಳಿದವರು–[ಹೀಗಿದ್ದರೆ] ಯಾರಿಗೆ ರಕ್ಷಣೆಯಾದೀತು ಎಂದು ಕೇಳಲು ಆತನು–ಮನುಷ್ಯರಿಗೆ ಅಸಾಧ್ಯವಾದ ಕಾರ್ಯಗಳು ದೇವರಿಗೆ ಸಾಧ್ಯವಾಗಿದೆ ಅಂದನು. ಆಗ ಪೇತ್ರನು–ಇಗೋ, ನಾವು ನಮ್ಮ ನಮ್ಮ ಮನೆ ಮಾರುಗಳನ್ನು ಬಿಟ್ಟು ನಿನ್ನ ಹಿಂದೆ ಬಂದೆವು ಎಂದು ಹೇಳಲು ಆತನು ಅವರಿಗೆ–ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ದೇವರ ರಾಜ್ಯದ ನಿಮಿತ್ತ ಮನೆಯನ್ನಾಗಲಿ ಹೆಂಡತಿಯನ್ನಾಗಲಿ ಅಣ್ಣತಮ್ಮಂದಿರನ್ನಾಗಲಿ ತಂದೆತಾಯಿಗಳನ್ನಾಗಲಿ ಮಕ್ಕಳನ್ನಾಗಲಿ ಬಿಟ್ಟುಬಿಟ್ಟಿರುವವನೋ ಅವನಿಗೆ ಈಗಿನ ಕಾಲದಲ್ಲಿ ಅನೇಕ ಪಾಲು ಹೆಚ್ಚಾದವುಗಳು ಸಿಕ್ಕೇ ಸಿಕ್ಕುತ್ತವೆ; ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವದು ಎಂದು ಹೇಳಿದನು.

*****

# ಒಂಟೆ ಮತ್ತು ಸೂಜೀ ಕಣ್ಣು

**ರೀಪ್ರಿಂಟ್ಸ್ ಪುಟ 4658**

## ಮತ್ತಾಯ 19:13–26

**“ಯೇಸು ಅಂದದ್ದು–ಮ್ಕಕಳನ್ನು ನನ್ನ ಹತ್ತರಕ್ಕೆ ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ,”**

ಯೆರೂಸಲೇಮಿನ ಕಡೆಗೆ ಹೋಗುವ ಮಾರ್ಗದಲ್ಲಿ ತಾಯಂದಿರು ತಮ್ಮ ಚಿಕ್ಕ ಮಕ್ಕಳಿಗೆ ಗುರುವಿನಿಂದ ಆಶೀರ್ವಾದವನ್ನು ಪಡೆಯಬೇಕೆಂಬ ಬಯಕೆಯಿಂದ ಆತನನ್ನು ಭೇಟಿಯಾಗಿದ್ದರು. ತಮ್ಮ ಗುರುವಿನ ಹಿರಿಮೆಯನ್ನು ಹಾಗು ಆತನ ಸಮಯದ ಪ್ರಾಮುಖ್ಯತೆಯನ್ನು ಅರಿತವರಾಗಿದ್ದ ಶಿಷ್ಯರು ಇದಕ್ಕೆ ಅಡ್ಡಿಮಾಡಿ ಆ ತಾಯಂದಿರನ್ನು ಗದರಿಸಿದ್ದರು. ಯೇಸುವು ಇದನ್ನು ಕೇಳಿದಾಗ ಅವರನ್ನು ಕರೆದು ಹೀಗೆ ಹೇಳಿದ್ದನು: “ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯ ಇಂಥವರದೇ.” ಮತ್ತು ಆತನು ತನ್ನ ಕೈಯನ್ನು ಅವುಗಳ ಮೇಲಿಟ್ಟು ಆಶೀರ್ವದಿಸಿದನು.

ದೇವರ ರಾಜ್ಯವು ಚಿಕ್ಕಮಕ್ಕಳಿಂದ ಕೂಡಿರುತ್ತದೆಂದು ಇದರಿಂದ ನಾವು ತಿಳುಕೊಳ್ಳಬಾರದು. ಈ ತಪ್ಪಾದ ಆಲೋಚನೆಯು ಎಲ್ಲೆಡೆಯಲ್ಲಿ ಪ್ರಚುರಗೊಂಡು ದೇವರ ರಾಜ್ಯದ

ಬಗ್ಗೆ ಇಂಥಾ ಒಂದು ಅಭಿಪ್ರಾಯವು ಹೀಗೆ ಪರಿಣಮಿಸಿರುವದು. ಪ್ರತಿಯಾಗಿ ಹೇಳುವದಾದರೆ, ಯಾವ ಚಿಕ್ಕಮಕ್ಕಳೂ ದೇವರ ರಾಜ್ಯದಲ್ಲಿ ಸೇರಲು ಸಾಧ್ಯವಿಲ್ಲ. ಕೇವಲ ನಂಬಿಕೆಯ ವಿಷಯವಾಗಿ ಕೇಳಿದವರು ಮಾತ್ರ ಆ ರಾಜ್ಯಪ್ರಭಾವಗಳಿಗೆ "ಕರೆಯಲ್ಪಡುವರು." ನಮ್ಮ ಕರ್ತನು ಚಿಕ್ಕಮಕ್ಕಳಿಗೆ ಮಾಡಿದ ಆಶೀರ್ವಾದವು ಕೇವಲ ಅವುಗಳ ಮೇಲೆ ತನಗಿರುವ ಅನುಕಂಪ ಪ್ರೀತಿ ಹಾಗು ಬಾಲ್ಯದಲ್ಲಿನ ನಿರ್ಮಲತೆ ಮತ್ತು ಮುಗ್ಧತೆಗಳ ವಿಷಯವಾದ ಪ್ರಸಂಶೆಯನ್ನು ಸೂಚಿಸಿತ್ತು. ಯಾರು ದೇವರ ರಾಜ್ಯದವರಾಗುವರೋ ಅವರು ಚಿಕ್ಕಮಕ್ಕಳಂತೆ ಆಗಬೇಕು; ಅಂದರೆ (ಚಿಕ್ಕಮಕ್ಕಳಲ್ಲಿರುವ) ಸತ್ಯಪ್ರಾಮಾಣಿಕತೆಯುಳ್ಳ ಸರಳ ಹೃದಯ ಹಾಗೂ ಪರಲೋಕದಲ್ಲಿರುವ ತಮ್ಮ ತಂದೆಯ ಬಗ್ಗೆ ಭರವಸಪೂರ್ಣತೆ ಎಂಬ ಅರ್ಥದಲ್ಲಿರುವದು; ಅಂಥವರು ದೇವರ ರಾಜ್ಯದಲ್ಲಿ ಬಾದ್ಯತೆ ಹೊಂದುವರು.

ಇನ್ನೊಂದು ವಿವರವು ನಮಗೆ ಯೇಸುವಿನ ಮುಂದಿನ ಮಾತುಗಳನ್ನು ತಿಳಿಸುತ್ತದೆ: ತನಗೆ ಶಿಷ್ಯರಾಗುವವರು ಚಿಕ್ಕ ಮಕ್ಕಳಂತಾಗಬೇಕು ಅಂದರೆ ನಿಷ್ಕಪಟ ವಿಶ್ವಾಸ ಮುಂತಾದವು – ಗಳಲ್ಲಿ ಚಿಕ್ಕ ಮಕ್ಕಳಂತಿರಬೇಕೆಂಬುದು. ಆದರೆ ದೇವರ ರಾಜ್ಯಕ್ಕೆ ಬಾಧ್ಯರಾಗುವವರೆಲ್ಲರೂ "ಜಯಶಾಲಿಗಳೂ" ಆಗಿರಲೇ ಬೇಕು. ಅಂಥವರು ತಮ್ಮ ಶಿಲುಬೆಯನ್ನು ತೆಗೆದುಕೊಂಡು ಕರ್ತನನ್ನು ಹಿಂಬಾಲಿಸಿ ಆತನು ಎಲ್ಲಿಗೆ ನಡೆಸುವನೋ ಅಲ್ಲಿಗೆ ಹೋಗುವರು. ಹೇಗೆ ನಮ್ಮ ಕರ್ತನಿಗೆ ತಾನು ಒಂಭತ್ತು ವರುಷದ ಹುಡುಗನಾಗಿರುವಾಗ ತನ್ನ ಶಿಲುಬೆಯನ್ನು ಹೊತ್ತುಕೊಂಡು ನಡೆಯಲು ಸಾಧ್ಯವಿಲ್ಲದಾಗಿತ್ತೋ ಹಾಗೆಯೇ ಚಿಕ್ಕ ಮಕ್ಕಳು ಸತ್ಯವೇದದ ಅರ್ಥದಲ್ಲಿ ವಿವೇಚನೆಮಾಡುವ ವಯಸ್ಸಿಗೆ ತಲಪುವವರೆಗೂ ಕ್ರಿಸ್ತನ ಹಿಂಬಾಲಕರಾಗಲು ಅವರಿಗೆ ಸಾಧ್ಯವಾಗದು. ಕೆಲವರಿಗೆ ಇದು ಇತರರಿಗಿಂತಲೂ ಬೇಗನೆ ಸಂಭವಿಸಬಹುದು. ಹನ್ನೆರಡನೆ ವಯಸ್ಸಿನ ಮಕ್ಕಳು ಅಥವಾ ಇದರ ಆಸುಪಾಸಿನಲ್ಲಿರುವವರು ನಂಬಿಕೆ, ವಿಧೇಯತೆಗಳಿಗೆ ಅತ್ಯುತ್ತಮವಾದ ಪ್ರಮಾಣ ನೀಡಿರುವುದಲ್ಲದೆ ಕರ್ತನ ಚಿತ್ತಕ್ಕೆ ತಮ್ಮನ್ನು ಪ್ರತಿಷ್ಠೆಮಾಡಿಕೊಂಡು ಪವಿತ್ರಾತ್ಮನಿಂದ ಹುಟ್ಟಿದವರಾಗಿರುವದಕ್ಕೆ ಸಾಕ್ಷ್ಯಾಧಾರಗಳನ್ನು ನೀಡಿರುವ ಸಂಗತಿಗಳನ್ನು ನಾವು ತಿಳಿದಿದ್ದೇವೆ. ವಾಸ್ತವದಲ್ಲಿ ಇಂಥವರಲ್ಲದೆ ಬೇರೆ ಯಾವ ಮಕ್ಕಳೂ ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಪಾಲುಗಾರರಾಗುವ ನಿರೀಕ್ಷೆಯನ್ನು ಹೊಂದಿರಲು ಸಾಧ್ಯವಾಗದು.

## ಘನವಂತ ಯೌವ್ವನಸ್ಥನಿಗಾದ ಪರೀಕ್ಷೆ

ನಮ್ಮ ಕರ್ತನು ಪ್ರಯಾಣಮಾಡುವಾಗ ಒಬ್ಬನು ಹೀಗೆ ಹೇಳಿಕೊಂಡಿರುವದನ್ನು ಕೇಳಿದ್ದನು: "ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು?" ಆತನು ಸರಿಯಾದ ಕಲ್ಪನೆಯುಳ್ಳವನಾಗಿದ್ದನು, ಅದೇನಂದರೆ, ನಿತ್ಯಜೀವವು ಮಾನವ ಕುಲದ ಮುಂದಿರುವ ಎಲ್ಲಾ ಭವ್ಯವಾದ ನಿರೀಕ್ಷೆಗಳಲ್ಲಿ ಅತ್ಯುನ್ನವಾಗಿ ಅವಶ್ಯವಿರುವ ನಿರೀಕ್ಷೆಯೆಂಬುದು. ಈ ಪ್ರಶ್ನೆಯ ಬಗ್ಗೆ ನಾವು ಹರ್ಷವುಳ್ಳವರಾಗಿದ್ದೇವೆ ಕಾರಣ ಅದು ಸ್ಫೂರ್ತಿದಾಯಕವಾದ ಉತ್ತರವನ್ನು ಹೊರಗೆಡಹುತ್ತದೆ; ಅದರಲ್ಲಿ ಪ್ರತಿಯೊಬ್ಬನೂ ಆಸಕ್ತನಾಗಿರುವನು. ಈ ಪ್ರಸ್ತುತ ಜೀವಿತವು ನಿತ್ಯಜೀವದ ಮಾರ್ಗಕ್ಕೆ ನಡೆಸುವದೆಂಬದನ್ನು ಹೊರತು– ಪಡಿಸಿದಲ್ಲಿ ಅದಕ್ಕೆ ಇರುವ ಬೆಲೆಯೇನು? ಮರಣವು ನಮ್ಮನ್ನು ನಿರಂತರವಾಗಿ ಅಳಿಸಿಹಾಕುವದೆಂಬುದು ಖಚಿತವಾದಲ್ಲಿ ನಾವು ಎಷ್ಟು ತೀವ್ರವಾಗಿ ನಷ್ಟಪಟ್ಟವರಾಗುವೆವೆಂಬುದು ನಮಗೆ ಅನ್ನಿಸಬೇಕು. ಈ ಜೀವಿತದಲ್ಲಿ ನಾವು ಪರಿಗಣನೆ ಮಾಡಲು ಅರ್ಹವಾದುದು ಅದೆಷ್ಟು ಅಲ್ಪವಾಗಿರುವದು! ನಿತ್ಯಜೀವಕ್ಕಾಗಿ ಹಾತೊರೆಯುವ ನಮ್ಮ ಹೃದಯದ ಹಂಬಲಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಇದು ಬಹು ಅಲ್ಪದ್ದಾಗಿರುವದು.

ಈ ಯೌವ್ವನಸ್ಥನ ಮನಸ್ಸಿನಲ್ಲಿರುವದನ್ನು ಹೊರಗೆಡವಿ ಅವನನ್ನು ಕಟ್ಟುಪಾಡಿಗೆ ತರಲು ನಮ್ಮ ಕರ್ತನು ಈ ಪ್ರಶ್ನೆಯನ್ನು ಬುದ್ಧಿವಂತಿಕೆಯಿಂದ ನಿರ್ವಹಿಸುವವನಾಗಿ ಹೀಗೆ ಹೇಳಿದ್ದನು: "ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ?" ನನ್ನನ್ನು ಒಳ್ಳೇ ಬೋಧಕನೆಂದು ಯಾಕೆ ಗುರುತಿಸಿ ಹೇಳುತ್ತೀ? ನಾನು ಹೇಳಿಕೊಳ್ಳುವಂತೆ ಆ ಮೆಸ್ಸೀಯನಾಗಿರುವೆನು ಇಲ್ಲವಾದಲ್ಲಿ ಒಬ್ಬ ಸೋಗುಗಾರನಾಗಿದ್ದು ಒಳ್ಳೆಯವನಾಗಿರುವದಿಲ್ಲ. ನನ್ನನ್ನು ಮೆಸ್ಸೀಯನೆಂದು ಒಪ್ಪಿಕೊಳ್ಳುವೆಯೋ? ನೀನು ಒಪ್ಪಿಕೊಳ್ಳದಿದ್ದಲ್ಲಿ, ನನ್ನನ್ನು ಒಳ್ಳೆಯವನೆಂದು ಹೇಳಲು ಅಥವಾ ಎಲ್ಲಾ ಒಳ್ಳೆಯ ತನದ ಚಿಲುಮೆಯಾಗಿರುವ ದೇವರಿಂದ ಯಾವ ಒಳ್ಳೆಯದೂ ಹೊರಟುಬರುವದಿಲ್ಲವೆಂದು ಒಪ್ಪಿಕೊಂಡು ಹೇಳಲು ನಿನಗೆ ಹೇಗೆ ಸಾಧ್ಯ? ಆದರೆ ನೀನು ನಿತ್ಯಜೀವಕ್ಕೆ ಸೇರಬೇಕೆಂದಿದ್ದರೆ, ದೇವರಾಜ್ಞೆಗಳಿಗೆ ಸರಿಯಾಗಿ ನಡೆದುಕೋ ಎಂದು ಅವನಿಗೆ ಉತ್ತರವಾಗಿ ಹೇಳಿದನು. ಆ ಯೌವ್ವನಸ್ಥನು ಉತ್ತರವಾಗಿ–ಅವು ಯಾವವು? ಎಂದಿದ್ದನು. ಗುರುವು–"ನರಹತ್ಯಮಾಡಬಾರದು; ವ್ಯಭಿಚಾರವಮಾಡಬಾರದು; ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ಮತ್ತು ನಿನ್ನ ಹಾಗೆಯೇ ನಿನ್ನ ನೆರೆಯವನನ್ನು ಪ್ರೀತಿ ಮಾಡಬೇಕು ಎಂಬಿವುಗಳೇ" ಎಂದು ಹೇಳಿದ್ದನು. ಆ ಯೌವ್ವನಸ್ಥನು ಉತ್ತರವಾಗಿ–"ಇವೆಲ್ಲಕ್ಕೂ ಸರಿಯಾಗಿ ನಡಕೊಂಡಿದ್ದೇನೆ; ಇನ್ನೇನು ಕಡಿಮೆಯಾಗಿರಬಹುದು?" ಎಂದು ಕೇಳಿದ್ದನು.

ಆತನು ಒಬ್ಬ ಆದರ್ಶ ಯುವಕನಾಗಿದ್ದು ಯೇಸು ಅವನನ್ನು ಪ್ರೀತಿಸಿದ್ದನು. ಆತನು ಯೆಹೂದ್ಯರ ನಿಯಮ ವಿಧಿಗಳನ್ನು ತನ್ನ ತಿಳುವಳಿಕೆ ಸಾಮರ್ಥ್ಯಗಳಿಗನುಸಾರವಾಗಿ ಕೈಗೊಂಡಿದ್ದನೆಂಬದು ಸ್ಪಷ್ಟವಾಗಿತ್ತು. ತಾನು ತನ್ನ ನೆರೆಯವನನ್ನು ಪ್ರೀತಿಸುತ್ತಿದ್ದೇನೆಂದು ನೆನಸಿದ್ದನು; ಆದರೆ ಇದು ತಪ್ಪೆಂದು ಕರ್ತನು ಅವನಿಗೆ ಮುಂದಿನ ಸಲಹೆಯನ್ನು ಕೊಡುವದರ ಮೂಲಕವಾಗಿ ತೋರಿಸಿಕೊಟ್ಟಿದ್ದನು: "ನೀನು ಸಂಪೂರ್ಣನಾಗ –ಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು; (ಭೂಲೋಕದಲ್ಲಿರು – ವದಕ್ಕೆ ಬದಲಾಗಿ) ಪರಲೋಕದಲ್ಲಿ ನಿನಗೆ ಸಂಪತ್ತಿರುವದು; (ಲೋಕದಲ್ಲಿ ನಿನಗಿರುವ ಕೀರ್ತಿ ಘನತೆಗಳನ್ನು ತ್ಯಜಿಸಿ) ನೀನು ಬಂದು ನನ್ನನ್ನು ಹಿಂಬಾಲಿಸು."

ಆಹಾ, ವ್ಯಥೆಯಿಂದ ನೊಂದ ಸ್ಥಳದ ಮೇಲೆ ಹೇಗೆ ಕೈ ಇಡಬೇಕೆಂಬದು ಕರ್ತನಿಗೆ ತಿಳಿದಿತ್ತು! ಆ ಯೌವ್ವನಸ್ಥನು ಕರ್ತನ

ಬಳಿಗೆ ತನ್ನನ್ನು ಕೊಚ್ಚಿಕೊಳ್ಳುವವನಾಗಿ ಬಂದಿದ್ದನು; ಯಾರಾದರೂ ಲೋಕದಲ್ಲಿ ದೈವಿಕ ಏರ್ಪಾಡುಗಳಿಗೆ ಹೊಂದಿ–ಕೊಂಡು ನಡೆಯಲು ಯತ್ನಿಸುವವನಾಗಿದ್ದರೆ ಅದು ತಾನೇ ಎಂಬದು ಅವನಿಗೆ ಬಹು ಖಚಿತವಾಗಿತ್ತು. ಗುರುವಿನ ಸಮ್ಮತಿಯನ್ನು ಪಡೆದವನಾಗಿ ಆತನು ತನಗೆ "ನೀನು ಈ ಒಂದು ನಿಯಮಕ್ಕೆ ಹೊರತಾಗಿರುವಿ." ಎಂದು ಹೇಳುವದನ್ನು ಕೇಳಿಸಿಕೊಳ್ಳಬಹುದೆಂದು ತಿಳಿದಿದ್ದನು. ಆದರೆ ಗುರುವು–"ನೀನು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಿದ್ದಲ್ಲಿ ಕನಿಷ್ಠ ಪಕ್ಷದಲ್ಲಿ ನೀನು ಸುಖವಾಗಿರುವಂತೆಯೂ ಆ ನೆರೆಯುವನು ಸುಖವಾಗಿರುವಂತೆಯೂ ಪರಿಶ್ರಮಿಸುತ್ತಿದ್ದೀ." ಎಂದು ಹೇಳಿರಲಿಲ್ಲ, ಆತನು ಬಹು ಐಶ್ವರ್ಯದಿಂದ ಸಂತೃಪ್ತನಾಗಿ–ರುವಲ್ಲಿ ತನ್ನಂತೆಯೇ ಪ್ರೀತಿಸುತ್ತಿರುವದಾಗಿ ನೆನಸಿದ್ದ ತನ್ನ ನೆರೆಯವರಲ್ಲಿ ಕೆಲವರು ಕಡು ಬಡವರಾಗಿ ಅತಿ ದುಃಖಿತರೂ ಸಹ ಆಗಿದ್ದರು. ತನ್ನ ಪರಿಸ್ಥಿತಿಯಲ್ಲಿನ ತೊಡಕನ್ನು ತಾನು ಕಂಡುಕೊಳ್ಳುವಂತೆ ಯೇಸುವು ಮಾಡಿದಾಗ ಆತನು ಆ ಕ್ಷಣವೇ ಅದನ್ನು ಗ್ರಹಿಸಿಕೊಂಡಿದ್ದನು. ಆತನು ಹಿಂದೆಂದೂ ಇಲ್ಲದ ರೀತಿಯಲ್ಲಿ ತನ್ನನ್ನು ತಾನು ಕಂಡುಕೊಂಡಿದ್ದನು. ಆತನಿಗೆ ಇದು ಒಂದು ಹೊಸ ಪರೀಕ್ಷೆಯಾಗಿ ಒದಗಿ ಬಂದಿತ್ತು. ಇದರಂತೆಯೇ ನಮ್ಮೆಲ್ಲರ ವಿಷಯವೂ ಇರುವದು. ದೇವರ ರಾಜ್ಯವು ಬಹು ಬೆಲೆಯುಳ್ಳ ಒಂದು ಮುತ್ತಾಗಿಯೂ, ಒಂದು ನಿಧಿಯಾಗಿಯೂ ಇದ್ದು ಅದಕ್ಕೆ ಒಂದು ದೊಡ್ಡ ಬೆಲೆಯಿರುವದೆಂದೂ, ಅದನ್ನು ಪಡಕೊಳ್ಳಲು ನಮ್ಮದೆಲ್ಲವನ್ನೂ ತೆರಬೇಕಾಗುವುದೆಂದೂ ಹಿಂದಿನ ಒಂದು ಪಾಠವು ನಮಗೆ ತೋರಿಸಿಕೊಟ್ಟಿತ್ತು. ಈ ಪಾಠವೂ ಅದೇ ಅಂಶವನ್ನು ತೋರಿಸಿಕೊಡುತ್ತದೆ.

ಇತರರು ಮಾಡುವಂಥ ತಪ್ಪನ್ನು ನಾವೂ ಮಾಡಿದವರಾಗಿ, ಆ ಯೌವ್ವನಸ್ಥನು ಒಂದು ಗೌರವಾನ್ವಿತವಾದ ಜೀವಿತವನ್ನು ನಡೆಸಿ ಪರಲೋಕವನ್ನು ಪಡೆಯುವದರಲ್ಲಿ ವಿಫಲನಾಗಿದ್ದು ಕರ್ತನ ಶಿಷ್ಯನಾಗಲು ತನಗಿರುವದೆಲ್ಲವನ್ನು ಬಿಟ್ಟುಬಿಡದ ಕಾರಣ ನಿತ್ಯಯಾತನೆಗೆ ದೂಡಲ್ಪಡುವನೆಂದು ಭಾವಿಸದೇ ಇರೋಣ. ಆತನಿಗೆ ಆ ರಾಜ್ಯವನ್ನು ಕಳಕೊಂಡಂಥದ್ದೇ ಮುಂದೆ ನಿತ್ಯಯಾತನಾ ನರಳುವಿಕೆ ಇಲ್ಲದೆಯೇ ಇದು ಸಾಕಷ್ಟಾದ ದಂಡನೆ –ಯಾಗಿತ್ತು. ಮಾನವ ಕುಲದಲ್ಲಿನ ಇಂಥಾ ಸದಸ್ಯರು ಸಾವಿರ ವರುಷದ (ಆಳ್ವಿಕೆಯ) ರಾಜ್ಯದಲ್ಲಿನ ಆಶೀರ್ವಾದಕರವಾದ ಸನ್ನಿವೇಶಗಳಲ್ಲಿ ನಿಸ್ಸಂದೇಹವಾಗಿಯೂ ಬಹು ಶೀಘ್ರವಾಗಿ ಅಭಿವೃದ್ಧಿ ಹೊಂದಿದವರಾಗಿ, (ಕ್ರಿಸ್ತನಲ್ಲಿ) ಆಯಲ್ಪಟ್ಟವರಿಗೆ ಮಾತ್ರವಿರುವ ರಾಜ್ಯಪ್ರಭಾವವನ್ನು ಹೊಂದಲು ಯೋಗ್ಯರಲ್ಲದವ –ರಾದರೂ, ಮನುಷ್ಯಸ್ವಭಾವದಲ್ಲಿನ ಪರಿಪೂರ್ಣತೆಯನ್ನು ಪಡೆದುಕೊಳ್ಳುವರು. ಹಾಗು (ಕ್ರಿಸ್ತನಲ್ಲಿ) ಆಯಲ್ಪಡುವವರು ಯಾರೆಂದರೆ ಆ ವಿಶೇಷ ಬಹುಮಾನವನ್ನು ಹೊಂದಸಲುವಾಗಿ ತಮ್ಮ ಜೀವಿತ ಹಾಗೂ ತಮ್ಮದೆಲ್ಲವನ್ನು ಸಂತೋಷದಿಂದ ತ್ಯಾಗಮಾಡುವಂಥವರೇ.

## ಸೂಜೀಕಣ್ಣಿನ ಮೂಲಕವಾಗಿ ದಾಟಿಹೋಗುವದು.

ನಮ್ಮ ಕರ್ತನು ತನ್ನ ಶಿಷ್ಯರಿಗೆ ಈ ವಿಷಯದ ಬಗ್ಗೆ ವ್ಯಾಖ್ಯಾನಿಸುತ್ತಾ ಐಶ್ವರ್ಯವಂತರು ಆ ರಾಜ್ಯವನ್ನು ಪ್ರವೇಶಿಸುವ ಸಂಬಂಧವಾಗಿ ಮಾಡುವ ಪ್ರಯತ್ನದಲ್ಲಿ ಬಹು ಕಷ್ಟವನ್ನು ಎದುರಿಸಬೇಕಾಗುವದೆಂಬುದನ್ನು ಸೇರಿಸಿ ಹೇಳಿದ್ದನು. ಆತನು ಖಂಡನಾ ರೀತಿಯಲ್ಲದೆ ವಾಸ್ತವದಲ್ಲಿ ಸಾಹಾನುಭೂತಿ–ಪೂರ್ಣನಾಗಿ ಹೀಗೆ ಹೇಳಿದ್ದನು: "ಧನವಂತರು ದೇವರ ರಾಜ್ಯದಲ್ಲಿ ಸೇರುವದು ಎಷ್ಟೋ ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜೀಕಣ್ಣಿನಲ್ಲಿ ನುಗ್ಗುವದು ಸಲಭ." ಇದು ವಿಶೇಷವಾಗಿ ಶಿಷ್ಯರನ್ನು ಅತ್ಯಂತ ಚಕಿತರನ್ನಾಗಿ ಮಾಡಿತ್ತು. ಯಾಕಂದರೆ ತಮ್ಮ ದಿನದಲ್ಲಿನ ಧಾರ್ಮಿಕರಲ್ಲಿ ಬಹು ಪಾಲಿನವರು ಐಶ್ವರ್ಯವಂತ ವರ್ಗಕ್ಕೆ ಸೇರಿದವರಾದ ಶಾಸ್ತ್ರಿಗಳು ಮತ್ತು ಫರಿಸಾಯರೆಂಬದು ಅವರಿಗೆ ತಿಳಿದಿತ್ತು. ಆವರು ಉತ್ತರವಾಗಿ ಕೇಳಿದ್ದು: "ಇವರಿಗೆ ಸಾಧ್ಯವಾಗದಿದ್ದಲ್ಲಿ ಮತ್ತೆ ಯಾರಿಗೆ ದೇವರ ರಾಜ್ಯದಲ್ಲಿ ಸೇರಲುಸಾಧ್ಯ?" "ಮನುಷ್ಯರಿಗೆ ಅಸಾಧ್ಯವಾದ ಕಾರ್ಯಗಳು ದೇವರಿಗೆ ಸಾಧ್ಯವಾಗಿದೆ." ಎಂಬುದು ನಮ್ಮ ಕರ್ತನ ಉತ್ತರವಾಗಿತ್ತು. ದೇವರು ಧನಿಕರನ್ನು ನಿರಾಕರಿಸಿದ್ದೇಯಾದಲ್ಲಿ ಆ ರಾಜ್ಯಕ್ಕೆ ಸೇರಿಸಿಕೊಳ್ಳಲು ಆತನಿಗೆ ಒಬ್ಬನಾದರೂ ಸಿಗಲು ಸಾಧ್ಯವೇ ಇಲ್ಲವೆಂದು ಮನುಷ್ಯರು ಹೇಳುವ ಪ್ರವೃತ್ತಿಯುಳ್ಳವ–ರಾಗುವರು.

ಒಂದೇ ಮಾತಿನಲ್ಲಿ ಹೇಳುವದಾದರೆ, ಐಶ್ವರ್ಯವಂತ –ನಾದ ಯಾವ ಮನುಷ್ಯನೂ ದೇವರ ರಾಜ್ಯಕ್ಕೆ ಸೇರಲು ಸಾಧ್ಯವಿಲ್ಲ. ಅವನು ತನಗಿರುವದೆಲ್ಲವನ್ನೂ ಕರ್ತನಿಗೆ ಕೊಟ್ಟುಬಿಡಬೇಕು ಇಲ್ಲವಾದಲ್ಲಿ ಆ ರಾಜ್ಯದಲ್ಲಿ ಒಂದು ಸ್ಥಾನವನ್ನು ಪಡೆಯಲು ನಿರಾಕೃತರಾಗುವನು. (ದೇವರ ರಾಜ್ಯಕ್ಕೆ) ಅಂಗೀಕೃತರಾಗುವದಕ್ಕೆ ಇರುವ ಷರತ್ತುವಿಧಿಗಳು ಬಡವರಿಗಿರುವಂತೆ ಐಶ್ವರ್ಯ–ವಂತರಿಗೂ ಒಂದೇ ಆಗಿರುವದು. ಯಾವಾತನು "ಬಹು ಬೆಲೆಯುಳ್ಳ ಮುತ್ತನ್ನು" ಹೊಂದಲಿರುವನೋ ಅವನು ಅದನ್ನು ಪಡಕೊಳ್ಳುವದಕ್ಕಾಗಿ ತನಗಿರುವದೆಲ್ಲವನ್ನೂ ಮಾರಿಬಿಡಬೇಕು. ಐಶ್ವರ್ಯವಂತರು ಕರ್ತನಿಗಾಗಿ ಎಲ್ಲವನ್ನು ಬಿಟ್ಟುಕೊಡಬೇಕು; ಆನಂತರ ತಮ್ಮ ಆ ಧನದ ವಿಷಯದಲ್ಲಿ ಅವರು ಮನೆವಾರ್ತೆಯವರಾಗಿ ತಮ್ಮ ಆ ಧನದ ಮನೆವಾರ್ತೆಯ ವಿಷಯದಲ್ಲಿ ಹೊಣೆಗಾರರಾಗುವರು.

ಮುಂದಿನ ಒಂದು ಚಿಕ್ಕ ಕವಿತೆಯು ಸೂಜೀಕಣ್ಣನ್ನು ಅಥವಾ ವಿಶಾಲವಾದ ಬಾಗಿಲಿನ ಪಕ್ಕದಲ್ಲಿರುವ ಸಣ್ಣ ಬಾಗಿಲ ಬಗ್ಗೆ ವರ್ಣನೆಮಾಡುವದು; ಇದರ ಮೂಲಕವಾಗಿ ಗೋಡೆಯಿರುವ ಊರಿನೊಳಗೆ ಸೂರ್ಯನು ಮುಳುಗಿದ ನಂತರ ಯಾವುದೇ ಹೊರೆಯಿಲ್ಲದೆ ಒಂಟೆಗಳು ದಾಟಿಹೋಗಬಹುದು. ಹೀಗೆ ಧನಿಕರು ತಮ್ಮ ಧನದ ಹೊರೆಯನ್ನು ಕೆಳಗಿಳಿಸಿ ಬಡವರಾಗಿ (ದೇವರ) ರಾಜ್ಯದಲ್ಲಿ ಸೇರಬಹುದು.

## ಸೂಜೀಕಣ್ಣಿನ ಮೂಲಕವಾಗಿ

"ಎತ್ತರವಿತ್ತು ನನ್ನ ಒಂಟೆಯು ಅಲ್ಲದೆ ಹೊರೆಯೂ ಇತ್ತು ಎತ್ತರ,
ಮತ್ತು ಚಿಕ್ಕದಿತ್ತು ಬಾಗಿಲು ಸೂಜೀಕಣ್ಣಿನಂತೆ."

"ಬಹು ರಮ್ಯವಿತ್ತು ಒಳಗಿನ ಪಟ್ಟಣವು,
ನಾನು ನನ್ನ ಒಂಟೆಯೂ ಅಲ್ಲಿ ಸೇರುವೆವು.

ದ್ವಾರಪಾಲಕನು ಕೂಗಿದ್ದು-'ಕೆಳಗಿಳಿಸಬೇಕು ನೀವು ಹೊರೆಯ'
'ಬಿಸಾಟಬೇಕು ನಿಮ್ಮ ಹೆಮ್ಮೆಯೆಂಬ ಆ ಕಟ್ಟನ್ನು'

'ಮಾಡಿದೆನು ನಾನು ಇದನ್ನು, ಆದರೆ ದೊಡ್ಡದಾಗಿತ್ತು ಹೊರೆಯು,
ಅತಿ ವಿಶಾಲವಾಗಿತ್ತು ಅದು ಇಕ್ಕಟ್ಟಾದ ಬಾಗಿಲಿಗೆ'

'ದ್ವಾರಪಾಲಕನು ಹೇಳಿದ್ದು, 'ಕಡಿಮೆಮಾಡು ಈಗ ಅದನ್ನು,
ತೆಗೆದಿಡು ಅಡ್ಡಿಮಾಡುವ ಸ್ವಾರ್ಥವ'

"ವಿಧೇಯನಾದೆ ನಾನು, ಅದೂ ಬಹು ಸಡಗರವಾಗಿ
ನಾನಾಗಲಿ ಒಂಟೆಯಾಗಲಿ ಇಷ್ಟಾದರೂ ದಾಟಿ ಹೋಗಲಾಗಲಿಲ್ಲ.

"ಆಹಾ" ದ್ವಾರಪಾಲಕನು ಅಂದದ್ದು
'ಹೊತ್ತಿರಬೇಕು ನಿನ್ನ ಹೊರೆಯು ಚಿನ್ನದಲ್ಲಿ
ಭರವಸೆಯೆಂಬ ಕೆಲವು ಚಿಕ್ಕ ಪೊಟ್ಟಣಗಳ'

"ಇದ್ದದ್ದೆಲ್ಲಾ ನನ್ನಲ್ಲಿ ಕೇವಲ ಕೈಹಿಡಿಯಷ್ಟೇ,
ದ್ವಾರಪಾಲಕನು ಕೇಳಿಕೊಂಡದ್ದು,
'ಬಿಸಾಟುಬಿಡು ಆದರೂ ಅದನ್ನು'

"ಇಗೋ, ಆಗ ಒಂದು ಅಚ್ಚರಿ!
ಕುಗ್ಗಿತ್ತು ಎತ್ತರದ ಒಂಟೆ ಸಣ್ಣ ದ್ವಾರದ ಗಾತ್ರಕ್ಕೆ

ಅಲ್ಲದೆ ದಾಟಿಹೋಗಿದ್ದವು ಸರಾಗವಾಗಿ ಇಕ್ಕಟ್ಟಾದ ಬಾಗಲಿನಿಂದ
ಎಲ್ಲಾ ನನ್ನ ಧನೈಶ್ವರ್ಯ, ಅಗಾಧ ಆಸ್ತಿಅಂತಸ್ತು.

*****

# ದ್ರಾಕ್ಷೇತೋಟದ ಕೆಲಸಗಾರರು

**ರೀಪ್ರಿಂಟ್ಸ್ ಪುಟ 5473**

## ಮತ್ತಾಯ 20:1-16

**'ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ.' - ಮತ್ತಾಯ 5:45**

ಈ ಸಾಮ್ಯದ ಎಲ್ಲಾ ಅಂಶಗಳ ಅರ್ಥವನ್ನು ವಿವರಿಸಿ ಅದು ನೆರವೇರಿದುದರ ಬಗ್ಗೆ ವರ್ಣನೆಮಾಡುವದು ಕಷ್ಟಕರವಾದದ್ದು. ಆ ದಿವ್ಯ ಬೋಧಕನು ಅದನ್ನು ಪರಲೋಕರಾಜ್ಯದ ವಿಷಯ - ವಾಗಿರುವ ಒಂದು ಸಾಮ್ಯದ ರೂಪದಲ್ಲಿ ತಿಳಿಸಿಕೊಟ್ಟಿದ್ದನು; ಹೀಗಾಗಿ ಅದು ಈ ಸುವಾರ್ತಾಯುಗದಲ್ಲಿನ ಕ್ರೈಸ್ತಸಭೆಯ ಸಭಾಜೀವಿತದ ಅನುಭವಗಳಿಗೆ ಅನ್ವಯವಾಗುವದೆಂದು ನಾವು ತಿಳಿದಿದ್ದೇವೆ. ನಾವೇನಾದರೂ ಇದನ್ನು ಈ ಸುವಾರ್ತಾ-ಯುಗದಲ್ಲಿನ ವಿವಿಧ ಕಾಲಮಾನಗಳ ನಡುವಿನ ಮಧ್ಯಂತರದ ಕಾಲಗಳಿಗೆ ಅನ್ವಯಮಾಡಿದ್ದೇಯಾದಲ್ಲಿ ನಾವು ತೊಂದರೆ - ಗೊಳಗಾಗುತ್ತೇವೆ. ಯಾಕಂದರೆ ಈ ಸುವಾರ್ತಾಯುಗದ ಆದಿಯಲ್ಲಿ ಕರೆಯಲ್ಪಟ್ಟ ಅಪೋಸ್ತಲರು ಹಾಗು ಇತರರು ಈ ಕಾಲಾವಧಿಯ ಪೂರ್ಣವಾಗಿ ಜೀವಿಸಿ ದುಡಿಮೆಮಾಡಿರಲಿಲ್ಲ. ಅಲ್ಲದೆ, ಇದನ್ನು ಹೀಗೆ ಅನ್ವಯಮಾಡಿದ್ದೇಯಾದಲ್ಲಿ ನಮಗೆ ಈ ಸುವಾರ್ತಾಕಾಲದ ಪ್ರಾರಂಭದಲ್ಲಿದ್ದವರಿಗೆ ಮಾತ್ರ ಪ್ರತಿಫಲದ ವಿಷಯುವಾಗಿ ಖಚಿತವಾದ ವಾಗ್ದಾನವಮಾಡಲ್ಪಟ್ಟಿದ್ದು ಇತರರೆಲ್ಲರಿಗೂ ಕೇವಲ ತಮಗೆ ಸರಿಯಾದುದನ್ನು ಪಡಕೊಳ್ಳುವರೆಂಬ ಭರವಸೆ ಮಾತ್ರ ಕೊಡಲ್ಪಟ್ಟಿತ್ತೆಂಬ ಪ್ರಸ್ತಾವನೆಯು ನಮಗೆ ಎದುರಾಗುತ್ತದೆ.

ಈ ಸಾಮ್ಯದ ಅರ್ಥವಿವರಣೆ ಮಾಡುವಲ್ಲಿ ಬರುವ ಮತ್ತೊಂದು ಸಮಸ್ಯೆಯೆಂದರೆ, ಮೊದಲು ಕರೆಯಲ್ಪಟ್ಟು ಕಡೆಯಲ್ಲಿ ಕೂಲಿ ಪಡೆದವರ ಗುಣಗುಟ್ಟುವಿಕೆಯನ್ನು ಹೇಗೆ ಅನ್ವಯಮಾಡಿ ವ್ಯಾಖ್ಯಾನಿಸಬಹುದೆಂಬದು. ಸುವಾರ್ತಾ ಯುಗದಲ್ಲಿ ಮೊದಲು ಕರೆಯಲ್ಪಟ್ಟ ಅಪೋಸ್ತಲರು ಹಾಗು ಇತರರು ಕ್ರಿಸ್ತನ ಎರಡನೆಯ ಬರುವಿಕೆಯ ಸಮಯದಲ್ಲಿ ಜೀವಿಸುತ್ತಿರುವವರಿಗಿಂತ ಮೊದಲು ಪುನರುತ್ಥಾನದಲ್ಲಿ ಮಾರ್ಪಡುವರೆಂಬುದನ್ನು ಸತ್ಯವೇದದ ಇತರ ವಾಕ್ಯಭಾಗಗಳು ನಮಗೆ ತೋರಿಸಿಕೊಡುತ್ತವೆ. ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದುಬರುವರೆಂದು ಮತ್ತು ನಂತರದಲ್ಲಿ ಜೀವದಿಂದಿರುವ ನಾವು ಮಾರ್ಪಡುವೆವೆಂದು ಭಕ್ತನಾದ ಪೌಲನು ಪ್ರಕಟಮಾಡಿ ಹೇಳಿರುತ್ತಾನೆ. ಇನ್ನೂ ಮುಂದುವರಿದು ಹೇಳುವದಾದರೆ, ಅಪೋಸ್ತಲರು ಹಾಗು ಆದಿಸಭೆಯ ಇತರರು ತಮಗೆ ನೀಡಲಾದ ಪ್ರತಿಫಲದ ವಿಷಯವಾಗಿ ಗುಣಗುಟ್ಟುವರೆಂಬುದನ್ನು ನಮಗೆ ನೆನಸಲೂ ಸಾಧ್ಯವಾಗದು.

ಈ ಸಾಮ್ಯದಲ್ಲಿರುವ ತೊಡಕುಗಳೆಲ್ಲವುಗಳಿಗೆ ಪರಿಹಾರ-ವನ್ನು ಕಂಡುಹಿಡಿದು ಅವುಗಳನ್ನು ಸುವಾರ್ತಾಯುಗದ ಪರ್ಯಂತರವಾದ ಸಂಪೂರ್ಣ ಸಭೆಯ ಅನುಭವಗಳಿಗೆ ಸೂಕ್ತವಾಗಿ ಸರಿಹೊಂದಿಸಲು ಯತ್ನಿಸುವಾಗ ಈ ಸಮಸ್ಯೆಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ದೇವಜನರ ವೈಯುಕ್ತಿಕ ಅನುಭವಗಳಿಗೆ ಈ ಸಾಮ್ಯವನ್ನು ನಾವು ಅನ್ವಯಮಾಡಲು ಯತ್ನಿಸುವದಾದರೂ ಸಹ ನಮಗೆ ಸಮಸ್ಯೆ ಎದುರಾಗುತ್ತದೆ. ಇದನ್ನು ಹೀಗೆ ಅನ್ವಯಮಾಡಿ

ಹೇಳಬಹುದು: ತಮ್ಮ ಜೀವಿತದ ಆರಂಭದಲ್ಲೇ ಕ್ರಿಸ್ತೀಯ ಜೀವನವನ್ನು ಪ್ರಾರಂಭಮಾಡಿ ತಮ್ಮ ಜೀವನದ ಮುಸ್ಸಂಜೆಯ ಹೊತ್ತಿನ (ಇಳಿವಯಸ್ಸಿನ) ವರೆಗೂ ನಂಬಿಗಸ್ತರಾಗಿ ಕಂಡುಬಂದವರಿಗೆ ಮೊದಲನೆಯದಾಗಿ ಕರೆಯಲ್ಪಟ್ಟು ಪ್ರತಿಫಲವನ್ನು ವಾಗ್ದಾನ ಮಾಡಲ್ಪಟ್ಟವಂಥವರಾಗಿರುವರು. ಇತರರು ತಮ್ಮ ಜೀವಿತಾವಧಿಯ ನಂತರದ ಕಾಲದಲ್ಲಿ ಬಂದವರಾಗಿ ಕರ್ತನ ಧ್ಯೇಯೋದ್ದೇಶಗಳ ವಿಷಯವಾದ ಸೇವೆಯಲ್ಲಿ ತಮ್ಮ ಸಮಯ ಶಕ್ತಿಸಾಮರ್ಥ್ಯ ಪ್ರತಿಭೆಯ ಕೇವಲ ಒಂದು ಭಾಗವನ್ನು ಮಾತ್ರ ತೊಡಗಿಸಿಕೊಂಡಂಥವರಿಗೆ ಸರಿಬೀಳುವರು ಅಂದರೆ ಇವರು ನಂತರದಲ್ಲಿ ಕರೆಯಲ್ಪಟ್ಟವರು ಮತ್ತು ಹನ್ನೊಂದನೇ ಗಂಟೆಯಲ್ಲಿಯೂ (ಅಂದರೆ ಸಂಜೆ ಐದು ಗಂಟೆಯ ಸಮಯದಲ್ಲಿಯೂ) ಸಹ ಕರೆಯಲ್ಪಟ್ಟಂಥ – ವರಾಗಿರುವರು. ಇವರೆಲ್ಲರಿಗೂ ಒಡೆಯನ ಸೇವೆಯಲ್ಲಿ ಕಳೆದ ಸಮಯವನ್ನು ಪರಿಗಣನೆಮಾಡಲ್ಪಡದೆಯೇ ಒಂದೇ ರೀತಿಯ ಪ್ರತಿಫಲವನ್ನು ಹೊಂದುವರೆಂಬುದು ಈ ಸಾಮ್ಯದ ಅರ್ಥವೆಂದು ವ್ಯಾಖ್ಯಾನಿಸಿದಲ್ಲಿಯೂ ಸಹ ನಮಗೆ ಕಂಡುಬರುವ ತೊಡಕೆಂದರೆ ಮೊದಲು ಕರೆಯಲ್ಪಟ್ಟವರು ಅಸಂತೃಪ್ತರಾಗಿ ಗುಣಗುಟ್ಟಿ ದೂರುಹೇಳಿದರೆಂಬದು.

ಇದಕ್ಕೆ ಪ್ರತಿಯಾಗಿ ನಮಗೆ ದೃಡವಾಗಿ ಮನದಟ್ಟಾಗಿರುವ ಸಂಗತಿಯೆಂದರೆ, ಯಾವನಾದರೂ ಕರ್ತನ ಚಿತ್ತಕ್ಕೂ ತನ್ನ ಜನರಿಗಾಗಿರುವ ಆತನ ನೀತಿಪೂರ್ಣವೂ ಪ್ರೀತಿಮಯವೂ ಆದ ಏರ್ಪಾಟುಗಳಿಗೂ ವಿರೋಧವಾಗಿ ಗುಣಗುಟ್ಟುವನೋ ಅವನು ಎಂದೂ ತೆರೆಯ ಆಚೆಯಲ್ಲಿ ದೊರೆಯುವ ದೇವರರಾಜ್ಯದ ಪ್ರತಿಫಲವನ್ನು ಹೊಂದಲಾರನೆಂಬದು. ಯಾರು "ಭಲಾ, ಒಳ್ಳೆಯ ಆಳು ನೀನು," ಎಂದು ಗುರುವಿನಿಂದ ಪ್ರಸಂಶೆ ಪಡೆದು ಕೊಂಡವನಾಗಿ ಪುನರುತ್ಥಾನದಲ್ಲಿ ಮಾರ್ಪಡುವಿಕೆಯನ್ನು ಹೊಂದುವನೋ ಅವನು ಗುಣಗುಟ್ಟುವುದರಿಂದ ದೂರವಿರು – ವನು. ಅವರು ಹರ್ಷದಿಂದ ಆನಂದಭರಿತರಾಗಿ ತಾವು ಮಾಡಿದ ಪ್ರತಿಯೊಂದು ಅಲ್ಪವಾದ ಸೇವೆ ಹಾಗು ತ್ಯಾಗಗಳಿಗೆ ದೊರೆತ ಪ್ರತಿಫಲವು ಬಹು ದೊಡ್ಡದಾಗಿರುವದೆಂದು ಭಾವಿಸುವರು. ದೇವರ ರಾಜ್ಯಕ್ಕೆ ಸೇರುವ ವರ್ಗದವರಿಗೆ ದೊರೆಯುವ ಪ್ರತಿಫಲದ ವಿಷಯವಾಗಿ ಸತ್ಯವೇದದ ಇತರ ವಾಕ್ಯಭಾಗಗಳಿಗೆ ಹೊಂದಿಕೊಂಡಂತೆ ಈ ಸಾಮ್ಯವನ್ನು ನಾವು ಹೇಗೆ ಸಮಂಜಸವಾಗಿ ಅನ್ವಯಮಾಡಬಹುದು? ನಾವು ಕೇವಲ ಒಂದೇ ಒಂದು ರೀತಿಯಲ್ಲಿ ಯೋಚಿಸಲು ಸಾಧ್ಯ; ಹೇಗಂದರೆ ಸಾಮ್ಯವನ್ನು ಸಂಪೂರ್ಣವಾಗಿ ದೇವರರಾಜ್ಯದಲ್ಲಿ ಸೇರುವ ಗುಂಪಿನವರ, ಅದರಲ್ಲಿಯೂ ವಿಶೇಷವಾಗಿ ಈ ಸುವಾರ್ತಾ ಯುಗದ ಮುಕ್ತಾಯದ ಸಮಯದಲ್ಲಿ ಇರುವಂಥವರ, ಸಭಾಜೀವಿತಾನುಭವಗಳಿಗೆ ಅನ್ವಯ ಮಾಡುವದು.

## ಯೆಹೂದ್ಯರಿಗೆ ಭಾಗಶಃ ಅನ್ವಯವಾಗುವಿಕೆ

ಹದಿನಾರು ಶತಮಾನಗಳಿಗೂ ಮಿಗಿಲಾಗಿ ಯೆಹೂದ್ಯರು ಮೆಸ್ಸೀಯನ ಮೊದಲನೇ ಬರುವಿಕೆಗಾಗಿ ಕಾಯುತ್ತಿದ್ದರು; ಆನಂತರ ಆ ಭಾಗ್ಯಕರವಾದ ಆಶೀರ್ವಾದಗಳು ಬರುವದಿತ್ತು. ತನ್ನ ಸೇವಾಕಾರ್ಯವನ್ನು ಆರಂಭಮಾಡಿದಾಗ ಯೇಸುವು– "ಪರಲೋಕ ರಾಜ್ಯವು ಸಮೀಪವಾಗಿರುವದು" ಎಂದು ಉಪದೇಶ ಮಾಡಿ ಯೇಹೂದ್ಯರಿಗೆ ಅದರಲ್ಲಿ ಪ್ರವೇಶಿಸುವ ಸೌಭಾಗ್ಯವನ್ನು ದೊರಕಿಸಿಕೊಟ್ಟಿದ್ದನು. ಆ ಸೌಭಾಗ್ಯವು ಯಾವುದೆಂದರೆ ಒಂದು "ಮೊಹರಿ" ಅಥವಾ ತಮ್ಮ ತಮ್ಮ ಜೀವಿತಗಳಲ್ಲಿ ಧರ್ಮಶಾಸ್ತ್ರದ ವಿಧಿನಿಯಮಗಳನ್ನು ಅನುಸರಿಸಲು ಮಾಡಿದ ನಂಬಿಗಸ್ತಿಕೆಪೂರ್ಣವಾದ ಪರಿಶ್ರಮಗಳಿಗೆ ದೊರೆತ ಒಂದು ಪ್ರತಿಫಲ. ಆದರೆ ದೇವರ ರಾಜ್ಯದ ಪ್ರಸ್ತಾಪವು ಘೋಷಣೆಯಾದಾಗ ಸುಂಕದವರು ಹಾಗು ಪಾಪಿಗಳಲ್ಲಿ ಕೆಲವರು ಅದಕ್ಕೆ ಆಕರ್ಷಿತರಾಗಿದ್ದರು. ಅವರಲ್ಲಿ ಕೆಲವರು ಆ ಹಿಂದೆ ದ್ರಾಕ್ಷೇತೋಟದಲ್ಲಿನ ದೇವರ ಸೇವೆ ಮತ್ತು ಪರಿಶ್ರಮಗಳನ್ನು ಅಲಕ್ಷ್ಯಮಾಡಿದವರಾಗಿದ್ದರು. ಹೊಸಬರಾದ ಈ ಕೆಲಸಗಾರರಿಗೆ ಕರ್ತನಾದ ಯೇಸುವಿನಿಂದ ತನ್ನ ಶಿಷ್ಯರಾಗುವ ಒಂದು ಅವಕಾಶವನ್ನು ನೀಡಲಾಗಿತ್ತು.

ಶಿಷ್ಯರಾಗುವಂಥಾ ಸೌಭಾಗ್ಯವು ಒಂದು ಮೊಹರಿ ಅಥವಾ ಪ್ರತಿಫಲವಾಗಿತ್ತು. ತಮ್ಮ ಜೀವನ ಪರ್ಯಂತರವಾಗಿ ದೇವರಾದ ಕರ್ತನಿಗೆ ನಂಬಿಗಸ್ತರಾಗಿದ್ದ ಶಾಸ್ತ್ರಿಗಳು ಮತ್ತು ಫರಿಸಾಯರು ತಮಗೆ ಸುಂಕದವರು ಮತ್ತು ಪಾಪಿಗಳಿಗಿಂತಲೂ ಮೇಲಾದ ಅಥವಾ ಹೆಚ್ಚಾದ ಆದ್ಯತೆಯನ್ನು ನೀಡಬೇಕೆಂದು ಎಣಿಸಿದ್ದರು; ದೇವರ ರಾಜ್ಯದವರಾಗುವ ಮೊದಲ ಅವಕಾಶವನ್ನು ತಮಗೆ ನೀಡಲಾಗದ ಯಾವುದೇ ವ್ಯವಸ್ಥೆಏರ್ಪಾಟುಗಳು ನ್ಯಾಯವಾದು–ದಲ್ಲವೆಂದು ಹೇಳಿ ಅವರು ಗುಣಗುಟ್ಟುತ್ತಿದ್ದರು. ಸುಂಕದವರು ಮತ್ತು ಪಾಪಿಗಳು ಮೆಸ್ಸೀಯನ ಶಿಷ್ಯರಾಗುವ ಸೌಭಾಗ್ಯವನ್ನು ಪಡಕೊಂಡದ್ದೇಯಾದರೆ ಆಗ ಖಂಡಿತವಾಗಿ ತಮಗೆ ಇನ್ನೂ ಉನ್ನತವಾದ ಸೌಭಾಗ್ಯವು ಲಭಿಸುವಂತಾಗಬೇಕೆಂದು ಅವರು ಭಾವಿಸಿಕೊಂಡಿದ್ದರು. ಯೇಸುವು ಸುಂಕದವರು ಮತ್ತು ಪಾಪಿಗಳನ್ನು ಸ್ವೀಕರಿಸಿಕೊಂಡು ಅವರೊಂದಿಗೆ ಊಟ ಮಾಡಿದಾಗ ಅವರು ಗುಣಗುಟ್ಟಿದ್ದರು.

ಗುರುವಿನ ಸಾಮ್ಯಗಳಲ್ಲಿ ಒಂದು ಫರಿಸಾಯರಿಗೆ ಈ ನಿಟ್ಟಿನಲ್ಲಿ ವಿಶೇಷವಾದ ತಿದ್ದುಪಾಟಿಗಾಗಿ ಉದ್ದೇಶಿಸಲ್ಪಟ್ಟಿತ್ತು. ತಪ್ಪಿಹೋದ ಮಗನು ತಮ್ಮ ಸೌಭಾಗ್ಯಸವಲತ್ತುಗಳಿಗೆ ಸರಿಯಾಗಿ ಜೀವಿಸದ ಯೆಹೂದ್ಯರ ಒಂದು ಗುಂಪಿಗೆ ಸೂಚಿತನಾಗಿದ್ದು ಅದರಲ್ಲಿನ ಹಿರೀ ಮಗನು ತಂದೆಯ ಕಾರ್ಯಭಾರದಲ್ಲಿ ಕ್ರೀಯಾಶೀಲರಾಗಿ ಶ್ರದ್ಧೆಯಿಂದ ಸತತವಾಗಿ ನಿರತರಾಗಿರು – ವವರನ್ನು ಸೂಚಿಸುವದು. ತಪ್ಪಿಹೋದ ಮಗನಲ್ಲಿ ಸೂಚಿತವಾದ ಗುಂಪಿನವರಲ್ಲಿ ಕೆಲವರು ಯೇಸುವಿನ ಹಾಗೂ ಆತನ ಶಿಷ್ಯರ ಬಾಯಿಂದ ಬಂದ ದೇವರ ಪ್ರೀತಿಯು ವಿಷಯವಾದ ಸಂದೇಶವನ್ನು ಅಂಗೀಕರಿಸಿಕೊಂಡು ತಂದೆಯ ಮನೆಗೆ ಹಿಂದಿರುಗಿ ಬಂದವರಾಗಿ ಅಲ್ಲಿ ಕೃಪಾಪೂರ್ಣತೆಯಿಂದ ಭಾವಿಸಲ್ಪಟ್ಟಿದ್ದರು. ಅವರಿಗೆ ದಾರಿತಪ್ಪದೆ ನಂಬಿಗಸ್ತನಾಗಿ ಶ್ರಮಿಸುವ ಮಗನಿಗೆ ದೊರೆಯತಕ್ಕ ಅದೇ ಸವಲತ್ತು ಸೌಭಾಗ್ಯಗಳನ್ನು ನೀಡಲಾಗಿತ್ತು. ಹಿರೀ ಮಗನ ವರ್ಗದವರು ಇದಕ್ಕೆ ಅಸಮದಾನಪಟ್ಟು ಸಿಟ್ಟುಗೊಂಡು ಗುಣಗುಟ್ಟುವವರಾಗಿ ಆ ಔತಣಸಂಭ್ರಮದಲ್ಲಿ ಭಾಗವಹಿಸಲು ನಿರಾಕರಿಸಿದ್ದರು. ಹೀಗೆ ಕೆಲವರು ಅವಕಾಶಗಳನ್ನು ಪಡೆಯುವದರಲ್ಲಿ ಮೊದಲಿಗ–

ರಾದರೂ ಆಶೀರ್ವಾದವನ್ನು ಹೊಂದುವದರಲ್ಲಿ ಕಡೆಯವ–ರಾಗುವರು, ಆದರೆ ಅವಕಾಶಗಳನ್ನು ಪಡೆಯುವದರಲ್ಲಿ ಕಡೆಯವರೂ ಕನಿಷ್ಠರೂ ಆದ ಇತರರು ಶೀಘ್ರವಾಗಿ ದೇವಾಶೀರ್ವಾದಗಳನ್ನು ಹೊಂದಿ ಬಹು ಪರಿಣಾಮಕಾರಿಗಳಾಗುವರು.

## ಕ್ರೈಸ್ತರಿಗೂ ಸಹ ಅನ್ವಯವಾಗುವಿಕೆ

ದೇವರು ಅನುಗ್ರಹಿಸಿಕೊಡುವಂಥದೆಲ್ಲವೂ ಒಂದು ವರದಾನವಾಗಿರುತ್ತದೆಂಬ ಅಂಶವನ್ನು ನಾವು ಮನಗಂಡವ–ರಾಗಿರಬೇಕೆಂಬದು ಈ ಸಾಮ್ಯದಲ್ಲಿ ಸಾಮಾನ್ಯವಾಗಿರುವ ಪಾಠವೆಂದು ತೋರುವದು. ನಾವು ನೀತಿತತ್ವಗಳಿಗೆ ಪ್ರೀತಿಪೂರ್ವಕವಾದ ಶ್ರದ್ಧೆಯಿಂದ ಕೂಡಿದವರಾಗಿ ಆತನ ಸೇವೆಗೆ ಸೇರಬೇಕು. ನಾವು ಅನೇಕ ವರುಷಗಳು ಸೇವೆಮಾಡಬೇಕಾದರೆ ಆ ಸೇವಾಸೌಭಾಗ್ಯಗಳನ್ನು ಶ್ರೇಷ್ಠವೆಂದು ಎಣಿಸುವಂಥವರಾಗ–ಬೇಕು; ಅಲ್ಲದೆ ಕರ್ತನ ಧ್ಯೇಯೋದ್ದೇಶಗಳಲ್ಲಿ ನಮಗಿರುವ ಆಸಕ್ತಿಯು ನಮಗೆ ಸಂತೋಷವನ್ನುಂಟುಮಾಡಬೇಕು. ಕರ್ತನ ಸೇವಾಸೌಭಾಗ್ಯವನ್ನು ಇಂಥಾ ಒಂದು ದೃಷ್ಟಿಯಿಂದ ಪ್ರಸಂಶಿಸುವವರಾಗಿ ಕರ್ತನ ಕಾರ್ಯಗಳು ಮುಂದುವರೆಯು–ವದನ್ನು ನೋಡಲು ನಾವು ಸಂತೋಷವುಳ್ಳವರಾಗಬೇಕು; ಇತರರೂ ಈ ಸೇವೆಯಲ್ಲಿ ಸೇರುವದನ್ನೂ ಹಾಗು ನಾವು ನಿರೀಕ್ಷಿಸುವಂಥ ಪ್ರತಿಫಲಗಳನ್ನು ಇತರರೂ ಹೊಂದುವದನ್ನು ಕಾಣಲು ನಾವು ಸಂತೋಷಿಸುವವರಾಗಬೇಕು. ಕೇವಲ ಇಂಥಾ ಒಂದು ಮನೋವಿಶಾಲತೆಯುಳ್ಳವರು ಮಾತ್ರವೇ, ದ್ರಾಕ್ಷೇತೋಟದಲ್ಲಿ ಶ್ರಮಿಸಲು ದೊರೆಯುವ ಸೌಭಾಗ್ಯವನ್ನು ಕೇವಲ ಈ ರೀತಿಯಲ್ಲಿ ಪ್ರಸಂಶಿಸುವರು ಮಾತ್ರವೇ, "ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ" ಇಂಥಾ ಅನುಕಂಪವುಳ್ಳವರು ಮಾತ್ರವೇ  ಆ ದೇವರರಾಜ್ಯಕ್ಕೆ ಸೇರಲು ಸೂಕ್ತವಾಗಿ ಅರ್ಹರಾಗಿದ್ದು, ದೇವರ ರಾಜ್ಯವು ಘೋಷಿಸಲ್ಪಡಲು ಅಣಿಗೊಂಡಾಗ ಆ ರಾಜ್ಯದಲ್ಲಿನ ವಿಶೇಷ ಸೌಭಾಗ್ಯ ಪರಿಜ್ಞಾನ ಅವಕಾಶಗಳನ್ನು ಪಡಕೊಳ್ಳಲು ಸಿದ್ಧರಿರುವರು.

ಯೇಸುವಿನ ದಿನದಲ್ಲಿನ ಯೆಹೂದ್ಯರಿಗೆ ಛಾಯಾರೂಪದ (ದೇವರ) ರಾಜ್ಯದ ಪ್ರಸ್ತಾವನೆಯನ್ನು ನೀಡಿದಂತೆಯೇ ಅಲ್ಲದೆ ದೇವರ ಸೇವೆಯಲ್ಲಿ ಸುದೀರ್ಘವಾಗಿ ತೊಡಗಿಸಿಕೊಂಡವರ ಜೊತೆಯಲ್ಲಿಯೇ ಅದಕ್ಕೆ ಹೊಸಬರಾದವರಿಗೂ ಆ ರಾಜ್ಯದಲ್ಲಿ ಪಾಲು ಹೊಂದುವ ಅದೇ ಅವಕಾಶಗಳನ್ನು ನೀಡಲಾಗಿ–ದ್ದಂತೆಯೇ  ಸುವಾರ್ತಾಯುಗದ ಅಂತ್ಯದಲ್ಲಿ ಅಂದರೆ ಸುಗ್ಗಿಯ (ಬೆಳೆಯನ್ನು ಕೊಯ್ಯುವ) ಕಾಲದಲ್ಲಿಯೂ ನಡೆಯಬೇಕೆಂಬುದು ಸ್ಪಷ್ಟವಾಗಿರುವದು. ತಮ್ಮ ಜೀವನ ಪೂರ್ತಿಯಾಗಿ ಕರ್ತನಿಗೆ ನಂಬಿಗಸ್ತರಾಗಿ ಆತನ ಧ್ಯೇಯೋದ್ದೇಶಗಳ ನೆರವೇರಿಕೆಯ ಸೇವೆಯಲ್ಲಿ ಪರಿಶ್ರಮಿಸುತ್ತಿರುವವರು ತಾವು ಅಷ್ಟೇ ಹೆಚ್ಚಿನ ಸೌಭಾಗ್ಯಾಶೀರ್ವಾದಗಳನ್ನು ಪಡೆದಿರುವರೆಂಬುದನ್ನು ನೆನಪಿನಲ್ಲಿ–ಟ್ಟುಕೊಳ್ಳಬೇಕು. ಯಾರಾದರೂ ನಂತರದ ಕಾಲದಲ್ಲಿ ದೇವರ ಸೇವೆಯಲ್ಲಿ ಸೇರಿದವರಾದರೆ ಅವರನ್ನು ತಮ್ಮ ಜೊತೆ–ಸೇವಕರೆಂದು ಭಾವಿಸಿ ಅವರ ವಿಷಯದಲ್ಲಿ ಸಂತೋಷಿಸುವವ–ರಾಗಬೇಕು.

ಕರ್ತನ ವಾಕ್ಯದ ಅನುಸಾರ ನಿಜವಾಗಿಯೂ ಸೇವಕರಾಗಿ–ರುವವರೆಲ್ಲರೂ (ಹೊಸದಾಗಿ) ಬಂದವರ ಬಗ್ಗೆ ಅಸೂಯೆ–ಗೊಳ್ಳುವದಕ್ಕೆ ಬದಲಾಗಿ ದ್ರಾಕ್ಷೇತೋಟಕ್ಕೆ ಬೇರೆ ಕೆಲಸಗಾರರನ್ನೂ ಕಳುಹಿಸಿಕೊಡಬೇಕೆಂದು ಒಡೆಯನಿಗೆ ಪ್ರಾರ್ಥಿಸಬೇಕು. ಕರ್ತನ ದ್ರಾಕ್ಷೇತೋಟದಲ್ಲಿ ಪರಿಶ್ರಮಿಸುತ್ತಿರುವವರೆಲ್ಲರಿಗೆ ಪ್ರಸ್ತುತ ಕಾಲದಲ್ಲಿನ ಸತ್ಯಾರ್ಥಗಳ ವಿಷಯವಾದ ಹೆಚ್ಚಿನ ಜ್ಞಾನವು ಈಗ ಒಂದು ಬಹುಮಾನವಾಗಿ ಲಭಿಸುತ್ತಿರುವದು. ಇತ್ತೀಚಿನ ಸಮಯಗಳಲ್ಲಿ ಬಂದವರಿಗೂ ಮತ್ತು ಕರ್ತನ ಸೇವೆಯಲ್ಲಿ ಸುದೀರ್ಘ ಕಾಲದಿಂದಲೂ ಇರುವವರಿಗೂ ಇದು ಸಮನಾಗಿ ಹಂಚಿಕೆಯಾದಲ್ಲಿ ಅದಕ್ಕೆ ನಾವು ಆಶ್ಚರ್ಯಪಡದೆ ಇರೋಣ.

ಕರ್ತನು ಅನುಸರಿಸುತ್ತಿರುವ ವಿಧಾನಗಳಲ್ಲಿ ನಾವು ಆನಂದಿಸುವವರಾಗೋಣ. ದೇವರ ಸೇವೆಗೆ ಐದು ಗಂಟೆಯಲ್ಲಿ (ಕಡೆಯ ಗಳಿಗೆಯಲ್ಲಿ) ಬರುವವರಿಗೆ ಆತನು ಕೃಪಾಪೂರ್ಣನಾ–ಗಿರುವ ಬಗ್ಗೆ ನಮ್ಮ ಮನಸ್ಸುಗಳು ಕೋಪಗೊಳ್ಳದಿರಲಿ. ಅವರೂ ಸಹೋದರರಲ್ಲವೇ? ಸುವರ್ಣಾವಕಾಶದ ವಿಧಿನಿಯಮಗಳ ಪ್ರಕಾರ ನಮಗೆ ಲಭಿಸುಸುತ್ತಿರುವ ಅದೇ ಆಶೀರ್ವಾದಗಳು ಅವರಿಗೂ ಉಂಟಾಗುವಂತೆ ನಾವು ಬಯಸುವಂಥವರಾಗಬೇಕಲ್ಲವೇ? ಕರ್ತನ ಸೇವೆಯಲ್ಲಿ ಸುದೀರ್ಘ ಕಾಲದಲ್ಲಿರುವವರು ತಾವು ಪ್ರತ್ಯೇಕವಾದವರೆಂದು ತಮ್ಮನ್ನು ಎಣಿಸಿಕೊಂಡದ್ದೇಯಾದಲ್ಲಿ, ಅಂಥವರು ತಮ್ಮಲ್ಲಿ ಈಗ ದೇವರ ಕೃಪಾನುಗ್ರಹಗಳು ಹೆಚ್ಚಾಗಿ ತೋರ್ಪಡಬೇಕೆಂದು ಭಾವಿಸಿದ್ದೇಯಾದಲ್ಲಿ, ಅದು ಅನುಚಿತ–ವೆಂಬದು ಸ್ಪಷ್ಟ. ನಾವು ಪೂರ್ಣವಾಗಿ ತನ್ನಂತೆಯೇ ಇರಬೇಕೆಂದು ಕರ್ತನು ಇಚ್ಛಿಸುವನು. ಅಲ್ಲದೆ ಇದು ಈ ಸುವರ್ಣಖಚಿತ ಪಠ್ಯಭಾಗವನ್ನು ಈ ಒಂದು ಪಾಠಕ್ಕೆ (ಶೀರ್ಷಿಕೆಯನ್ನಾಗಿ) ಆರಿಸಿಕೊಂಡವರ ಸಲಹೆಯೂ ಆಗಿರುವದು. "ಅತನು ಒಳ್ಳೆಯವರ ಮೇಲೆಯೂ ಕೆಟ್ಟವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆ ಮಳೆಸುರಿಸುತ್ತಾನೆ." – ಮತ್ತಾಯ 5:45

## ಸುವರ್ಣಮಯ ಪಠ್ಯಭಾಗದಲ್ಲಿನ ಬುದ್ಧಿಪಾಠಗಳು

ನಮ್ಮ ಪೂರ್ವಜರು ಜ್ಞಾನಾಂಧಕಾರದ ಯುಗದಲ್ಲಿ (ಡಾರ್ಕ್ ಏಜಸ್) ದೇವರ ಗುಣಲಕ್ಷಣ ಮತ್ತು ಮಾನವರ ರಕ್ಷಣಾರ್ಥ–ವಾದ ಆತನ ಯೋಜನೆಗಳ ವಿಷಯವಾಗಿರುವ ಸೂಕ್ತವಾದ ಗ್ರಹಿಕೆ–ಇವುಗಳನ್ನು, ಒಂದು ಬಹು ವಿಶಾಲವಾದ ಹಾಗು ಮುಖ್ಯವಾದ ಅರ್ಥದಲ್ಲಿ, ಕಳೆದುಕೊಂಡವರಾಗಿದ್ದರೆಂಬುದನ್ನು ನಾವು ಹೆಚ್ಚೆಚ್ಚಾಗಿ ಕಲಿತುಕೊಳ್ಳುತ್ತಿದ್ದೇವೆ. ವಿಶ್ವಾಸ ಸೂತ್ರಗಳಲ್ಲಿ ಆತನನ್ನು ಪ್ರೀತಿಮಯನು ಹಾಗು ಕೃಪಾಪೂರ್ಣನನ್ನಾಗಿ ಚಿತ್ರಿಸುವದಕ್ಕೆ ಬದಲಾಗಿ ಆತನ ಭಾವಚಿತ್ರವನ್ನು ಬಹು ಭಿನ್ನವಾದ ಬಣ್ಣಗಳಲ್ಲಿ ಅವರು ವರ್ಣಿಸಿರುವರು. ಜ್ಞಾನಾಂಧಕಾರ ಯುಗದಲ್ಲಿ ರೂಪುಗೊಂಡ ವಿಶ್ವಾಸ ಸೂತ್ರವನ್ನು–ಸತ್ಯವೇದದ ಬೋಧನೆಗಳ ವಿಷಯವಾಗಿ ಪೂರ್ಣಪ್ರಾಮಾಣಿಕವಲ್ಲದ ಹಾಗೂ ವಿರೂಪ–ಗೊಳಿಸಿದ ಅಭಿಪ್ರಾಯಗಳಿಂದ ಕೂಡಿದಂಥವುಗಳನ್ನಾಗಿ ನಮಗೆ

ನೀಡಲಾಗಿರುವದು. ಕೇವಲ ಇತ್ತೀಚಿನ ವರ್ಷಗಳಲ್ಲಿ ಸತ್ಯವೇದ ವಿಧ್ಯಾರ್ಥಿಗಳು ಈ ಸತ್ಯಾಂಶವನ್ನು ಗ್ರಹಿಸಿಕೊಳ್ಳಲು ಆರಂಭಿಸಿರುವರು. ಬಹುತೇಕ ವಿಚಾರವಂತರೆಲ್ಲರೂ ಈಗ ವಿಶ್ವಾಸ ಸೂತ್ರಗಳಲ್ಲಿನ ಬೋಧನೆಗಳ ವಿಚಾರಶೈಲಿಯನ್ನು ಅಂದರೆ ದೇವರು ಪ್ರಾರಂಭದಿಂದಲೂ ತನ್ನ ಬಹುತೇಕ (ಕೋಟ್ಯಾಂತರ) ಮಾನವಸೃಷ್ಟಿಗಳಿಗೆ ಅಗ್ನಿನರಕ ಹಾಗು ನಿತ್ಯಯಾತನೆಗಳನ್ನು ಉದ್ದೇಶಿಸಿ, ಕೇವಲ ಬೆರಳೆಣಿಕೆಯಷ್ಟಿರುವ ಆಯಲ್ಪಟ್ಟವರಾದ ಕೆಲವು ಭಕ್ತರಿಗೆ ಮಾತ್ರ ಪರದೈಸಿನ (ಪರಲೋಕದ) ಹರ್ಷಾನಂದಗಳನ್ನು ಅನುಗ್ರಹಿಸುವನೆಂಬುದು ವಿಚಾರಹೀನವಾದುದೆಂದು ತಳ್ಳಿಹಾಕಿರುವರು.

ಆದರೆ ಅಯ್ಯೋ, ನಮ್ಮ ವಿಶ್ವಾಸ ಸೂತ್ರಗಳಲ್ಲಿರುವ ತಪ್ಪು ಕಲ್ಪನೆಗಳ ವಿಷಯವಾಗಿ ಅರ್ಥಮಾಡಿಕೊಂಡವರಾಗಿ ಅವುಗಳನ್ನು ನಾವು ಬಿಟ್ಟುಬಿಡುತ್ತಿರುವಲ್ಲಿ, ನಮ್ಮಲ್ಲಿ ಅನೇಕರು ಇವುಗಳ ಬೋಧನೆಗಳು ಸತ್ಯವೇದದ ಬೋಧನೆಗಳಿಗಿಂತ ಎಷ್ಟು ವಿಭಿನ್ನವಾಗಿರುವದೆಂಬುದನ್ನು ಗಮನಿಸುವಲ್ಲಿ ವಿಫಲರಾಗಿರು–ವರು! ಆದರೆ ಸತ್ಯವೇದವನ್ನು ಮತ್ತೆ ಅನ್ವೇಷಣೆ ಮಾಡಲಾಗುತ್ತಿದ್ದು, ಸತ್ಯವೇದದ ವಿಷಯವಾದ ನಮ್ಮ ಅಭಿಪ್ರಾಯಗಳನ್ನು ವಿರೂಪಗೊಳಿಸಿರುವ ಪ್ರಾಮಾಣಿಕಪೂರ್ಣ ವಲ್ಲದ ವಿಶ್ವಾಸ ಸೂತ್ರಗಳೆಂಬ ಕನ್ನಡಕವನ್ನು ಚೂರುಚೂರು ಮಾಡಲಾಗುತ್ತಿರುವದು. ಸತ್ಯವೇದವನ್ನು ಅದರದೇ ಆದ ಸ್ವಷ್ಟ ಬೆಳಕಿನಲ್ಲಿ ಓದುವದನ್ನು ನಾವು ಕಲಿತುಕೊಳ್ಳುತ್ತಿದ್ದು, ಅದೇ ಪ್ರಮಾಣದಲ್ಲಿನ ಒಂದು ಆಶೀರ್ವಾದವು ನಮಗೆ ಒದಗಿ ಬರುತ್ತಿರುವದು.

ದೃಷ್ಟಾಂತವಾಗಿ ಈ ಪಠ್ಯಭಾಗವನ್ನು ಗಮನಿಸಿ: "ಹೀಗೆ ಮಾಡಿದರೆ, ಪರಲೋಕದಲ್ಲಿರುವ ನಿಮ್ಮ ತಂದೆಯ ಮಕ್ಕಳಾಗುವಿರಿ.." ಜ್ಞಾನಾಂಧಕಾರ ಯುಗದಲ್ಲಿ, ಸಹೋದರ ಕಲ್ವಿನ್ ಹಾಗು ರಕ್ತಪಿಪಾಸಿಯಾದ ಮೇರಿ ಅಲ್ಲದೆ ಇತರ ಸಾವಿರಾರು ಮಂದಿ ಧರ್ಮದ ಹೆಸರಿನಲ್ಲಿ, ಯೇಸುವಿನ ಹೆಸರಿನಲ್ಲಿ, ತಂದೆಯ ಹೆಸರಿನಲ್ಲಿ, ಪರಲೋಕದಲ್ಲಿರುವ ತಮ್ಮ ತಂದೆಯಂತೆ ಇರುವವರಾಗಿ ದೇವರನ್ನು ಅನುಕರಣೆ ಮಾಡುತ್ತಿರುವುದಾಗಿ ತಾವು ನೆನಸಿ ಘೋರ ಅಮಾನವೀಯ ಕೃತ್ಯಗಳನ್ನು ಎಸಗಿರುವರು. ಅಯ್ಯೋ, ಅವರು ಆತನನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಳ್ಳಲಿಲ್ಲವಲ್ಲಾ! ಅವರು ದೆವ್ವಗಳು ರಚಿಸಿದ ಅತಿ ಪೈಶಾಚಿಕ ಶೈಲಿಯ ಬೋಧನೆಗಳನ್ನು ಅನುಸರಿಸುತ್ತಿದ್ದರು. ಆವುಗಳು ಸರ್ವಶಕ್ತನೂ, ಕೃಪಾಪೂರ್ಣನೂ ಕನಿಕರವುಳ್ಳ ತಂದೆಯೂ ಆಗಿರುವ ದೇವರು–ತನ್ನ ಸೃಷ್ಟಿಗಳಾದ ಮಾನವರ ವಿಷಯವಾಗಿ ಬಹು ಪೈಶಾಚಿಕವಾದ ಯೋಜನೆಗಳನ್ನೂ ಏರ್ಪಾಡುಗಳನ್ನೂ ಮಾಡಿರುವ ದೇವರೆಂಬುದನ್ನು ಸೂಚಿಸುತ್ತಿದ್ದವು. "ಹೀಗೆ ಮಾಡಿದರೆ, ಪರಲೋಕದಲ್ಲಿರುವ ನಿಮ್ಮ ತಂದೆಯ ಮಕ್ಕಳಾಗುವಿರಿ.." ಎಂದು ಯೇಸುವು ಹೇಳಿದಾಗ ಆತನ ಮಾತಿನ ನಿಜವಾದ ಅರ್ಥವು ಏನಾಗಿತ್ತೆಂಬುದನ್ನು ಈಗ ನಾವು ನೋಡುತ್ತಿದ್ದೇವೆ. ನಾವು ಈಗ ಆತನ ಹೇಳಿಕೆಯಲ್ಲಿನ ಉಳಿದ ಈ ಮುಂದಿನ ಭಾಗವನ್ನು ಸೇರಿಸಿಕೊಳ್ಳುವವರಾಗಿದ್ದೇವೆ" "ಆತನು ಉಪಕಾರ ನೆನಸದವರಿಗೂ ಕೆಟ್ಟವರಿಗೂ ಉಪಕಾರಿಯಾಗಿದ್ದಾನೆ;" ಹಾಗೂ "ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ."

ಕೆಲವು ಕಾಲಗಳು ವೈಯುಕ್ತಿಕವಾಗಿ ಯೇಸುವಿನೊಡನೆ ಆತನ ಶಿಷ್ಯರಲ್ಲಿ ಅತಿ ಘನವಂತರಾಗಿದ್ದ ಇಬ್ಬರು ಇದ್ದಾಗ್ಯೂ ಈ ತಪ್ಪು ಕಲ್ಪನೆ ಮಾಡಿಕೊಂಡಿದ್ದರು. ಸತ್ಯವೇದದ ಅಧ್ಯಯನವು ಅಲಕ್ಷಿಸಲ್ಪಟ್ಟು ಪ್ರಬಲವಾದ ವಿಶ್ವಾಸ ಸೂತ್ರಗಳು ಸಿದ್ಧಗೊಳ್ಳುತ್ತಿದ್ದ ಕಾಲದಲ್ಲಿ, ದೈವೀಕ ಗುಣಲಕ್ಷಣಗಳ ಸೂಕ್ತವಾದ ಪರಿಕಲ್ಪನೆ –ಗಳೆಲ್ಲವೂ ಕಳೆದುಹೋಗಿದ್ದವೆಂಬುದಕ್ಕೆ ಅವುಗಳನ್ನು ಸಿದ್ಧಪಡಿಸಿದವರ ವಿಷಯದಲ್ಲಿ ನಾವು ಎಷ್ಟೋ ಹೆಚ್ಚಾಗಿ ಕ್ಷಮಾಪೂರ್ಣರಾಗಿರಬೇಕಲ್ಲವೇ!

ಉಲ್ಲೇಖಿಸಲ್ಪಟ್ಟಂಥ ಇಬ್ಬರು ಶಿಷ್ಯರು ಜೆಬೆದಾಯನ ಮಕ್ಕಳಾದ ಯಾಕೋಬ ಮತ್ತು ಯೋಹಾನರಾಗಿದ್ದರು. ಕರ್ತನ ಶಿಷ್ಯರಿಗೆ ಆಹಾರದ ಕೊರತೆಯುಂಟಾದಾಗ ಯಾಕೋಬ ಯೋಹಾನರು ರೊಟ್ಟಿಯನ್ನು ಕೊಂಡುಕೊಳ್ಳುವದಕ್ಕಾಗಿ ಸಮಾರ್ಯದ ಒಂದು ಪಟ್ಟಣಕ್ಕೆ ಹೋಗಿದ್ದರು. – ಸಮಾರ್ಯರು ಸಹಿತವಾಗಿ ಯಹೂದ್ಯರಲ್ಲಿನ ಅಸ್ವಸ್ಥರನ್ನು ಗುಣಪಡಿಸಲು ಯೇಸುವು ತಮ್ಮ ಪಟ್ಟಣಕ್ಕೆ ಏಕೆ ಬರಲಿಲ್ಲವೆಂದು ಆ ಸಮಾರ್ಯದವರು ವಿಚಾರಿಸಿದರು. ಆ ಕಾಲಕ್ಕೆ ಆತನ ಸೇವಾಕಾರ್ಯಭಾರವು ಕೇವಲ ಯೆಹೂದ್ಯರ ಪರವಾಗಿರುವದೆಂಬುದು ಅವರಿಗೆ ತಿಳಿದು ಬಂದಾಗ ಅವರು ಅಸಂತೋಷಗೊಂಡವರಾಗಿ ಹೇಳಿದ್ದು–ಹಾಗಿದ್ದಲ್ಲಿ ಯೆಹೂದ್ಯರಿಂದಲೇ ರೊಟ್ಟಿಯನ್ನು ಕೊಂಡುಕೊಳ್ಳಿರಿ; ನಾವು ಏನನ್ನೂ ನಿಮಗೆ ಮಾರುವದಿಲ್ಲ. ಆಗ ಯಾಕೋಬ ಯೋಹಾನರು, ಸಮಸ್ತಕ್ಕೂ ಬಾಧ್ಯನಾಗಿರುವ ತಮ್ಮ ಗುರುವು ಹೀಗೆ ಅಪಮಾನಹೊಂದಿದುದಕ್ಕಾಗಿ ರೋಷಗೊಂಡವರಾಗಿ, ಸಮಾರ್ಯದವರ ಮೇಲೆ ಬೆಂಕಿ ಬಿದ್ದು ಅವರ ಪಟ್ಟಣವು ನಾಶವಾಗುವಂತಾಗಲು ಯೇಸುವಿನಿಂದ ಅಪ್ಪಣೆಯನ್ನು ಕೇಳಿಕೊಂಡರು. ಈ ಶಿಷ್ಯರು ತಮ್ಮಲ್ಲಿ ದೇವರ ಆತ್ಮವಿರುವದೆಂದು ಭಾವಿಸಿದ್ದರು. ಆದರೆ ಯೇಸು ಹೇಳಿದ್ದು–"ನೀವೆಂಥಾ ಆತ್ಮಕ್ಕೆ ಅಧೀನರಾದಿರೆಂಬದು ನಿಮಗೆ ತಿಳಿಯದು; ಮನುಷ್ಯಕುಮಾರನು ಮನುಷ್ಯರ ಪ್ರಾಣಗಳನ್ನು ನಾಶಮಾಡುವದಕ್ಕೆ ಬಂದವನಲ್ಲ, ರಕ್ಷಿಸುವಕ್ಕೆ ಬಂದವನು..."

ಪ್ರಿಯರಾದ ಈ ಇಬ್ಬರು ಶಿಷ್ಯರಿಗೆ–ಅವರು ಸಮಾರ್ಯ–ದವರನ್ನು ನಾಶಪಡಿಸಲು ಬಯಸುವಲ್ಲಿ ತಾವು ತಪ್ಪಾದ ಆತ್ಮವನ್ನು (ಮನೋಭಾವವನ್ನು) ಹೊಂದಿರುವರಾಗಿರುವರೆಂದು ತೋರಿಸಿಕೊಟ್ಟು ಅವರಿಗೆ ತಿದ್ದುಪಾಟಿಮಾಡುವದು ಅಗತ್ಯ–ವೆಂದಾದರೆ, ದೇವರ ಹೆಸರಿನಲ್ಲಿ ವಿರೋಧಿಗಳೆಲ್ಲರನ್ನು ನಿತ್ಯಯಾತನೆಗೆ ದೂಡುವಂಥವರಿಗೆ ಯೇಸುವಿನ ಗದರಿಕೆಯು ಇನ್ನೂ ಎಷ್ಟೋ ಹೆಚ್ಚಾಗಿ ಅವಶ್ಯವಿರುವದು!

ಆದರೆ ನಮ್ಮಲ್ಲಿ ಕೆಲವರು ಅಂಥವರಾಗಿದ್ದು ತಪ್ಪಾದ ಬೋಧನೆಯೆಂಬ ದ್ರಾಕ್ಷಾರಸವನ್ನು ಕುಡಿದ ಫಲವಾಗಿ ನಾವು ಅಜ್ಞಾನ ಮೂಢ ನಂಬಿಕೆಗಳಿಂದ ಕೂಡಿದ ವಿಶ್ವಾಸ ಸೂತ್ರದ ಅಮಲಿನಲ್ಲಿದ್ದೆವು. (ಪ್ರಕಟನೆ 17:1–5; 1:13) ಇದರಿಂದ ಬಿಡುಗಡೆ ಹೊಂದಿದುದಕ್ಕಾಗಿ ದೇವರಿಗೆ ಕೃತಜ್ಞತೆಗಳು! ಆತನ ಜನರಿಗೆ

ಸ್ವಸ್ಥಚಿತ್ತದಿಂದ ಕೂಡಿದ ಮನೋಭಾವವು ಬರುತ್ತಿರುವದಕ್ಕಾಗಿ ದೇವರಿಗೆ ಸ್ತೋತ್ರ! ಉದಯವಾಗುತ್ತಿರುವ ನೂತನ ವ್ಯವಸ್ಥೆಯು ಜ್ಞಾನಪ್ರಕಾಶವನ್ನು ಹೊತ್ತುತರುತ್ತಿರುವದು. ನೀತಿ ಸೂರ್ಯನು ಉದಯಿಸುತ್ತಿರುವನು; ಪ್ರಜ್ವಲಿಸುತ್ತಿರುವ ಅದರ ಕಿರಣಗಳ ಎದುರಿನಲ್ಲಿ ಹಿಂದಿನ ಕಾಲದ ಪೈಶಾಚಿಕ ತತ್ವಗಳು ಪಲಾಯನ ಮಾಡುತ್ತಿರುವವು. "ಜಗತ್ತಿಗೆಲ್ಲಾ ಈ ಸುವಾರ್ತೆಯನ್ನು ಸಾರಿರಿ."

## ನಮ್ಮ ದೇವರ ಮಹಿಮಾಪೂರ್ಣವಾದ ಗುಣಲಕ್ಷಣಗಳು

ನಾವು ಈಗ ನಮ್ಮ ಸುವರ್ಣಮಯ ಪಠ್ಯಭಾಗವನ್ನು ಓದುವಾಗ ನಾವು ನೋಡುವದೇನಂದರೆ ನಮ್ಮ ದೇವರು ಕೃತಜ್ಞತೆಯಿಲ್ಲದವರಿಗೂ ಅನೀತಿವಂತರಿಗೂ ಪಾಪಿಗಳಿಗೂ ಕೃಪಾಪೂರ್ಣನೂ ಪ್ರೀತಿಮಯನೂ ಕನಿಕರವೂ ದಯೆಯುಳ್ಳವನೂ ಆಗಿರುವ ಪ್ರಕಾರವೇ ನಮಗೆ ಅವಕಾಶ ದೊರೆತಂತೆಲ್ಲಾ ನಾವೂ ಎಲ್ಲಾ ಮನುಷ್ಯರ ವಿಶೇಷವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರ ಬಗ್ಗೆ ದಯೆಯುಳ್ಳವರೂ ಔದಾರ್ಯವಂತರೂ ಪ್ರೀತಿಪೂರ್ಣರೂ ಉಪಕಾರಿಗಳೂ ಆಗಿರಬೇಕೆಂದು ಅದು ನಮಗೆ ತಿಳಿಸುವದೆಂಬುದು. ದೇವರು ನೋಡುವ ಈ ಒಂದು ದೃಷ್ಟಿಕೋನವು ನಮ್ಮ ಹೃದಯಗಳನ್ನು ತಟ್ಟುವದು. ನಾವು ದೇವರ ಪ್ರೀತಿಯ ವಿಷಯವಾಗಿ ಹೆಚ್ಚು ಅಧ್ಯಯನ ಮಾಡಿದಷ್ಟೂ ಆತನೊಬ್ಬನೇ ಪ್ರೀತಿಮಯನಾದ ನಿಜ ದೇವರು ಅಲ್ಲದೆ ಆತನ ವಿಷಯವಾಗಿದ್ದ ನಮ್ಮ ಹಿಂದಿನ ಕಲ್ಪನೆಗಳೆಲ್ಲವೂ ನಿಜವಲ್ಲದವುಗಳೂ ಪ್ರೀತಿರಹಿತವೂ ಅಸತ್ಯವೂ ಆಗಿದ್ದು ಅವೆಲ್ಲವೂ ಸ್ವತಃ ನಾವೇ ನಿರ್ಮಿಸಿಕೊಂಡಂಥವುಗಳೆಂಬುದನ್ನು ಗ್ರಹಿಸಿಕೊಳ್ಳುತ್ತೇವೆ. ಅಲ್ಲದೆ ಅನ್ಯಜನಗಳು ಕಬ್ಬಿಣ ಕಲ್ಲು ತಾಮ್ರ ಅಥವಾ ಜೇಡಿಮಣ್ಣಿನಿಂದ ಮಾಡಿಕೊಂಡ ತಮ್ಮ ವಿಗ್ರಹಗಳಿಗಿಂತಲೂ ನಾಗರಿಕತೆಯುಳ್ಳ ದೇಶಗಳವರು ತಮ್ಮ ಲೇಖನಿ ಮುದ್ರಣ ಶಾಯಿ ಮತ್ತು ಕಾಗದ ಮೂಲಕವಾಗಿ ವಿಶ್ವಾಸ ಸೂತ್ರಗಳೆಂಬ ಅತಿ ಭಯಾನಕವಾದ ಪ್ರತಿಮೆಗಳನ್ನು ಮಾಡಿಕೊಂಡಿರುವರೆಂಬುದನ್ನು ನಾವು ಕಾಣುತ್ತಿರುವೆವು.

"ಅವನು (ಮನುಷ್ಯನು) ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ." ತನ್ನ ಹೃದಯದ ಆದರ್ಶವು ಅಂದರೆ ತಾನು ಆರಾಧಿಸುವ ದೇವರು ಕ್ರೂರಿಯೂ ಪ್ರತಿಕಾರ ಮಾಡುವವನೂ ಹಗೆಯುಳ್ಳವನೂ ಪೈಶಾಚಿಕತೆಯುಳ್ಳವನೂ ಆಗಿದ್ದಲ್ಲಿ ಇಂಥಾ ಸುಳ್ಳು ದೇವರನ್ನು ಆರಾಧಿಸುವ ಆ ಪುರುಷ ಅಥವಾ ಸ್ತ್ರೀಯು ಹೆಚ್ಚುಕಡಿಮೆ ಮಲಿನಗೊಂಡು ದುರಾಲೋಚನೆ ಮಾಡಿ ದುಷ್ಕಾರ್ಯ ನಡೆಸದಿದ್ದರೆ ಅದು ಒಂದು ಅದ್ಭುತವೇ ಸರಿ. ಆದರೆ ನಮ್ಮ ಮನೋನೇತ್ರಗಳ ಎದುರಿನಲ್ಲಿ ಪ್ರೀತಿಮಯನಾದ ನಿಜದೇವರನ್ನು ನಮ್ಮ ಆದರ್ಶವನ್ನಾಗಿಸಿಕೊಂಡಲ್ಲಿ ನಾವು ಹೆಚ್ಚೆಚ್ಚಾಗಿ ಮಾರ್ಪಟ್ಟು ಮಾನಸಾಂತರಗೊಂಡು ಅಂತ್ಯದಲ್ಲಿ ನಮ್ಮ ನಿರ್ಮಾಣಿಕನ ಕೃಪಾಪೂರ್ಣವಾದ ಗುಣವನ್ನು ನಮ್ಮಲ್ಲಿ ಕಾಣುವಂಥವರಾಗುವೆವು. ನಮಗೆ ಅರಿವಿಲ್ಲದಂತೆಯೇ ಈ ಉನ್ನತವಾದ ಆದರ್ಶವನ್ನು ಅನುಸರಿಸುವಂಥವರಾಗಿ ನಮ್ಮ ಮನಸ್ಸನ್ನು ನವೀಕರಿಸಿಕೊಳ್ಳುವದರ ಮೂಲಕ ಅಧಿಕಾಧಿಕವಾಗಿ ಮಾನಸಾಂತರಗೊಂಡು ನಮ್ಮ ಅನುದಿನದ ಜೀವಿತದಲ್ಲಿ ದೇವರ ಚಿತ್ತದಲ್ಲಿ ಮೆಚ್ಚಿಗೆಯಾದದ್ದೂ ಉತ್ತಮವಾದದ್ದೂ ದೋಷವಿಲ್ಲದ್ದೂ ಆಗಿರುವಂಥದನ್ನು ಸಾಧಿಸುವವರಾಗುತ್ತೇವೆ.

ನಾವು ಒಳ್ಳೆಯದನ್ನು ಅಂದರೆ ದೃಢವಾದ ದೇವರ ವಾಕ್ಯವನ್ನು ಭದ್ರವಾಗಿ ಹಿಡಿದುಕೊಳ್ಳೋಣ. ದೇವಸಂದೇಶವನ್ನು ಅತಿ ಘೋರವಾಗಿ ನಿರೂಪಿಸಲಾಗಿರುವ ಜ್ಞಾನಾಂಧಕಾರ ಕಾಲದ ಮಾನವ ಕಲ್ಪಿತ ತತ್ವಗಳನ್ನು ತೊಡೆದುಹಾಕೋಣ. ಹೀಗೆ ಮಾಡಿದಲ್ಲಿ ನಾವು ಒಡೆಯನ ಈ ಮಾತುಗಳಿಗೆ ಲಕ್ಷ್ಯಕೊಡುವವರಾಗುವೆವು: "ನೀವು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು."

"ಭರವಸವಿಡುವರೋ ಯಾರು ಆ ವಾಕ್ಯದಲ್ಲಿ ಪಡೆವರು
ಅವರು ಜೀವನದಲ್ಲಿ ಸುನಿರೀಕ್ಷೆಯ,
ಕಡೆಗಾಣಿಸುವದದು ಗೊಂದಲ ತಪ್ಪು ಕಲಹವ
ಸತ್ಯವನ್ನು ಅನ್ವೇಶಿಸುವ ಆತ್ಮಕ್ಕೆ, ನಮ್ರತೆಯಿಂದ
ಅಧೀನರಾಗುವ ಅದರ ನೀತಿಪೂರ್ಣ ಹಿಡಿತಕ್ಕೆ
ಕೊಂಡುತರುವದು ಅದು ಕೃಪೆಯ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಪೆರೀಯ | ಯೇಸುವು ತನ್ನ ಮರಣ ಪುನರುತ್ಥಾನಗಳನ್ನು ಮೂರನೆಯ ಸಾರಿ ಮುಂತಿಳಿಸಿದುದು | 20:17–19 | 10:32–34 | 18:31–34 | -- |
| | ಪೆರೀಯ | ಯಾಕೋಬ ಯೋಹಾನರಿಗೆ ದೇವರ ರಾಜ್ಯದಲ್ಲಿ ಕುಳಿತುಕೊಳ್ಳುವ ಸ್ಥಾನಕ್ಕಾಗಿ ವಿನಂತಿಸುವದು | 20:20–28 | 10:35–45 | -- | -- |
| | ಯೆರಿಕೋ | ಯೆರಿಕೋವನ್ನು ದಾಟಿಹೋಗುವಾಗ ಇಬ್ಬರು ಕುರುಡರನ್ನು ಸ್ವಸ್ಥಪಡಿಸಿದುದು, ಜಕ್ಕಾಯನ ಮನೆಗೆ ಭೇಟಿ; ಮೊಹರಿಗಳ ಸಾಮ್ಯ | 20:29–34 | 10:46–52 | 18:35–19:28 | -- |

## ಮತ್ತಾಯ 20:17-34

ಯೇಸು ಯೆರೂಸಲೇಮಿಗೆ ಹೋಗುತ್ತಿರುವಾಗ ಹನ್ನೆರಡು ಮಂದಿ ಶಿಷ್ಯರನ್ನು ಒತ್ತಟ್ಟಿಗೆ ಕರೆದುಕೊಂಡು ದಾರಿಯಲ್ಲಿ ಅವರಿಗೆ-ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು ಮನುಷ್ಯಕುಮಾರನನ್ನು ಮಹಾಯಾಜಕರ ಮತ್ತು ಶಾಸ್ತ್ರಿಗಳ ಕೈಗೆ ಒಪ್ಪಿಸಿಕೊಡುವರು. ಅವರು ಅವನಿಗೆ ಮರಣದಂಡನೆಯನ್ನು ವಿಧಿಸಿ ಅವನನ್ನು ಅಪಹಾಸ್ಯ ಮಾಡುವದಕ್ಕೂ ಕೊರಡೆಗಳಿಂದ ಹೊಡೆಯುವದಕ್ಕೂ ಶಿಲುಬೆಗೆ ಹಾಕುವದಕ್ಕೂ ಅನ್ಯರ ಕೈಗೆ ಒಪ್ಪಿಸುವರು; ಅವನು ಸತ್ತ ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡುವನು ಎಂದು ಹೇಳಿದನು.

ಆಗ ಜೆಬೆದಾಯನ ಮಕ್ಕಳ ತಾಯಿ ಆತನಿಂದ ಏನೋ ಒಂದು ಬೇಡಿಕೊಳ್ಳಬೇಕೆಂದು ತನ್ನ ಮಕ್ಕಳನ್ನು ಕರಕೊಂಡು ಬಂದು ಆತನಿಗೆ ಅಡ್ಡಬಿದ್ದಳು. ಆತನು ಆಕೆಯನ್ನು-ನಿನಗೇನು ಬೇಕಮ್ಮಾ ಎಂದು ಕೇಳಲು ಆಕೆ-ನಿನ್ನ ರಾಜ್ಯದಲ್ಲಿ ನನ್ನ ಈ ಇಬ್ಬರು ಮಕ್ಕಳಲ್ಲಿ ಒಬ್ಬನು ನಿನ್ನ ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವದಕ್ಕೆ ಅಪ್ಪಣೆಯಾಗಬೇಕು ಅಂದಳು. ಅದಕ್ಕೆ ಯೇಸು-ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು. ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದೀತೇ ಎಂದು ಕೇಳಲು ಅವರು-ಆಗುವದು ಅಂದರು. ಆಗ ಆತನು ಅವರಿಗೆ-ನನ್ನ ಪಾತ್ರೆಯಲ್ಲಿ ನೀವು ಕುಡಿಯುವಿರಿ ಸರಿ; ಆದರೆ ನನ್ನ ಎಡಬಲಗಡೆಗಳಲ್ಲಿ ಕೂತುಕೊಳ್ಳುವಂತೆ ಅನುಗ್ರಹಮಾಡುವದು ನನ್ನದಲ್ಲ; ನನ್ನ ತಂದೆಯಿಂದ ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೇ ಸಿಕ್ಕುವದು ಎಂದು ಹೇಳಿದನು.

ಉಳಿದ ಹತ್ತು ಮಂದಿ ಶಿಷ್ಯರು ಇದನ್ನು ಕೇಳಿ ಆ ಇಬ್ಬರು ಅಣ್ಣತಮ್ಮಂದಿರ ಮೇಲೆ ಸಿಟ್ಟುಗೊಂಡರು. ಆದರೆ ಯೇಸು ಅವರನ್ನು ಹತ್ತಿರಕ್ಕೆ ಕರೆದು ಅವರಿಗೆ-ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು ದೊಡ್ಡವರು ಬಲಾತ್ಕಾರದಿಂದ ಅಧಿಕಾರನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ. ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. ಹಾಗೆಯೇ ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು.

ಅವರು ಯೆರಿಕೋವಿನಿಂದ ಹೊರಟುಹೋಗುತ್ತಿರುವಾಗ ಜನರ ದೊಡ್ಡ ಗುಂಪು ಆತನ ಹಿಂದೆ ಹೋಯಿತು. ಆಗ ದಾರಿಯ ಮಗ್ಗುಲಲ್ಲಿ ಕೂತಿದ್ದ ಇಬ್ಬರು ಕುರುಡರು, ಯೇಸು ಆ ಮಾರ್ಗವಾಗಿ ಹೋಗುತ್ತಿದ್ದಾನೆಂದು ಕೇಳಿ-ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು. ಆ ಗುಂಪಿನವರು-ಸುಮ್ಮನಿರಿ ಎಂದು ಅವರನ್ನು ಗದರಿಸಲು ಅವರು-ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಹೆಚ್ಚಾಗಿ ಕೂಗಿಕೊಂಡರು. ಆಗ ಯೇಸು ನಿಂತು ಅವರನ್ನು ಕರೆದು-ನಾನು ನಿಮಗೆ ಏನು ಮಾಡಬೇಕೆಂದು ಕೋರುತ್ತೀರಿ ಎಂದು ಕೇಳಲು ಅವರು-ನಮ್ಮ ಕಣ್ಣುಗಳು ತೆರೆಯಲ್ಪಡಬೇಕು, ಸ್ವಾಮೀ ಅಂದರು. ಆಗ ಯೇಸು ಕನಿಕರಪಟ್ಟು ಅವರ ಕಣ್ಣುಗಳನ್ನು ಮುಟ್ಟಿದನು. ಕೂಡಲೇ ಅವರಿಗೆ ಕಣ್ಣು ಬಂದವು, ಅವರು ಆತನ ಹಿಂದೆ ಹೋದರು.

## ಮಾರ್ಕ 10:32-52

ಅವರು ಯೆರೂಸಲೇಮಿನ ದಾರಿಯನ್ನು ಹಿಡಿದು ಹೋಗುತ್ತಿರುವಾಗ ಯೇಸು ಅವರ ಮುಂದೆ ಮುಂದೆ ಹೋಗುತ್ತಿದ್ದನು. ಅವರು {ನೋಡಿ} ಬೆರಗಾದರು; ಆತನ ಹಿಂದೆ ಬರುವವರು ಭಯಪಡುವವರಾದರು. ಆಗ ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ತಿರಿಗಿ ಕರೆದುಕೊಂಡು ಮುಂದೆ ತನಗಾಗುವದನ್ನು ಹೇಳುವದಕ್ಕೆ ತೊಡಗಿ ಅವರಿಗೆ-ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ. ಮತ್ತು ಮನುಷ್ಯಕುಮಾರನನ್ನು ಮಹಾಯಾಜಕರ ಮತ್ತು ಶಾಸ್ತ್ರಿಗಳ ಕೈಗೆ ಹಿಡಿದುಕೊಡುವರು. ಅವರು ಅವನಿಗೆ ಮರಣದಂಡನೆಯನ್ನು ವಿಧಿಸಿ ಅವನನ್ನು ಅನ್ಯರ ಕೈಗೆ ಒಪ್ಪಿಸುವರು. ಇವರು ಅವನನ್ನು ಅಪಹಾಸ್ಯಮಾಡುವರು, ಅವನ ಮೇಲೆ ಉಗುಳುವರು, ಅವನನ್ನು ಕೊರಡೆಗಳಿಂದ ಹೊಡೆಯುವರು, ಕೊಂದುಹಾಕುವರು. ಅವನು ಮೂರು ದಿನದ ಮೇಲೆ ಜೀವಿತನಾಗಿ ಎದ್ದುಬರುವನು ಎಂದು ಹೇಳಿದನು.

ಆಗ ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರು ಆತನ ಬಳಿಗೆ ಬಂದು ಆತನಿಗೆ-ಗುರುವೇ, ನಾವು ಒಂದನ್ನು ಕೇಳಿಕೊಳ್ಳುತ್ತೇವೆ; ಅದನ್ನು ನಮಗೋಸ್ಕರ ನಡಿಸಿಕೊಡಬೇಕೆಂದು ಹೇಳಿದರು. ಆತನು ಅವರನ್ನು-ನಿಮಗೇನು ನಡಿಸಿಕೊಡಬೇಕು ಎಂದು ಕೇಳಲು ಅವರು-ನಿನಗೆ ಮಹಾ ಪದವಿಬಂದಾಗ ನಮ್ಮಲ್ಲಿ ಒಬ್ಬನು ನಿನ್ನ ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವಂತೆ ನಮಗೆ ಅನುಗ್ರಹಮಾಡಬೇಕು ಅಂದರು. ಆದರೆ ಯೇಸು ಅವರನ್ನು-ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು; ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವದು ನಿಮ್ಮಿಂದಾದೀತೇ? ನನಗಾಗುವ ದೀಕ್ಷಾಸ್ನಾನ - ವನ್ನು ಹೊಂದುವದು ನಿಮ್ಮಿಂದಾದೀತೇ ಎಂದು ಕೇಳಲು ಅವರು-ಆಗುವದು ಅಂದರು. ಆಗ ಯೇಸು ಅವರಿಗೆ-ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿರಿ; ನನಗಾಗುವ ಸ್ನಾನವು ನಿಮಗಾಗುವದು; ಆದರೆ ನನ್ನ ಬಲಗಡೆಯಲ್ಲಾದರೂ ಎಡಗಡೆಯಲ್ಲಾದರೂ ಕೂತುಕೊಳ್ಳುವಂತೆ ಅನುಗ್ರಹ ಮಾಡುವದು ನನ್ನದಲ್ಲ; ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೇ ಸಿಕ್ಕುವದು ಎಂದು ಹೇಳಿದನು. ಉಳಿದ ಹತ್ತು ಮಂದಿ ಶಿಷ್ಯರು ಇದನ್ನು ಕೇಳಿ ಯಾಕೋಬ ಯೋಹಾನರ ಮೇಲೆ ಸಿಟ್ಟಿಗೆದ್ದರು. ಯೇಸು ಅವರನ್ನು ಹತ್ತರಕ್ಕೆ ಕರೆದು ಅವರಿಗೆ-ಜನಗಳನ್ನಾಳುವವರೆನಿಸಿಕೊಳ್ಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ; ಮತ್ತು ಅವರಲ್ಲಿ ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂದು ನೀವು ಬಲ್ಲಿರಷ್ಟೇ; ಆದರೆ ನಿಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಿರಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹ ಸೇವೆಮಾಡಿಸಿ-

ಕೊಳ್ಳುವದಕ್ಕೆ ಬರಲಿಲ್ಲ. ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು.

ಆ ಮೇಲೆ ಅವರು ಯೆರಿಕೋವಿಗೆ ಬಂದರು. ಆತನೂ ಆತನ ಶಿಷ್ಯರೂ ಬಹು ಜನರ ಗುಂಪೂ ಆ ಊರಿನಿಂದ ಹೊರಟು ಹೋಗುತ್ತಿರುವಾಗ ತಿಮಾಯನ ಮಗನಾದ ಬಾರ್ತಿಮಾಯನು ದಾರಿಯ ಮಗ್ಗುಲಲ್ಲಿ ಕೂತಿದ್ದನು. ಅವನು ಕುರುಡ ಬಿಕ್ಷಗಾರನು. ಈ ಮಾರ್ಗವಾಗಿ ಹೋಗುವವನು ನಜರೇತಿನ ಯೇಸುವೆಂದು ಅವನು ಕೇಳಿ–ದಾವೀದನ ಕುಮಾರನೇ, ಯೇಸುವೇ, ನನ್ನನ್ನು ಕರುಣಿಸು ಎಂದು ಕೂಗಿಕೊಳ್ಳುವದಕ್ಕೆ ಪ್ರಾರಂಭಿಸಿದನು. ಅನೇಕರು–ಸುಮ್ಮನಿರು ಎಂದು ಅವನನ್ನು ಗದರಿಸಲು ಅವನು–ದಾವೀದನ ಕುಮಾರನೇ, ನನ್ನನ್ನು ಕರುಣಿಸು ಎಂದು ಮತ್ತಷ್ಟು ಕೂಗಿಕೊಂಡನು. ಆಗ ಯೇಸು ನಿಂತು–ಅವನನ್ನು ಕರೆಯಿರಿ ಅನ್ನಲು ಅವರು ಆ ಕುರುಡನನ್ನು ಕರೆದು–ಧೈರ್ಯವಿರಲಿ, ಏಳು, ನಿನ್ನನ್ನು ಕರೆಯುತ್ತಾನೆ ಅಂದರು. ಅವನು ತನ್ನ ಹೊದಿಕೆಯನ್ನು ತೆಗೆದುಹಾಕಿ ತಟ್ಟನೆ ಎದ್ದು ಯೇಸುವಿನ ಬಳಿಗೆ ಬಂದನು. ಯೇಸು ಅವನನ್ನು–ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತೀ ಎಂದು ಕೇಳಲು ಆ ಕುರುಡನು–ನನಗೆ ಕಣ್ಣು ಬರುವಂತೆ ಮಾಡಬೇಕು, ಗುರುವೇ, ಅಂದನು. ಯೇಸು ಅವನಿಗೆ–ಹೋಗು ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ ಅದೆ ಎಂದು ಹೇಳಿದನು; ಕೂಡಲೇ ಅವನಿಗೆ ಕಣ್ಣುಬಂದವು; ಅವನು ಆ ದಾರಿಯಲ್ಲಿ ಆತನ ಹಿಂದೆ ಹೋದನು.

## ಲೂಕ 18:31–43

ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದುಕೊಂಡು ಅವರಿಗೆ–ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು ಮನುಷ್ಯಕುಮಾರನ ವಿಷಯದಲ್ಲಿ ಪ್ರವಾದಿಗಳು ಬರೆದದ್ದೆಲ್ಲಾ ಅವನಲ್ಲಿ ನೆರವೇರುವದು. ಹೇಗಂದರೆ–ಅವನನ್ನು ಅನ್ಯರ ಕೈಗೆ ಒಪ್ಪಿಸುವರು, ಇವರು ಅವನನ್ನು ಅಪಹಾಸ್ಯ ಮಾಡುವರು, ಬೈಯುವರು, ಉಗುಳುವರು, ಕೊರಡೆಗಳಿಂದ ಹೊಡೆಯುವರು, ಕೊಂದುಹಾಕುವರು; ಮತ್ತು ಮೂರನೆಯ ದಿನದಲ್ಲಿ ಅವನು ಜೀವಿತನಾಗಿ ಎದ್ದು ಬರುವನು ಎಂದು ಹೇಳಿದನು. ಅವರು ಈ ಸಂಗತಿಗಳಲ್ಲಿ ಒಂದನ್ನಾದರೂ ಗ್ರಹಿಸಲಿಲ್ಲ, ಈ ಮಾತುಗಳು ಅವರಿಗೆ ಮರೆಯಾಗಿದ್ದವು, ಅವುಗಳ ಅರ್ಥ ಅವರಿಗೆ ಗೊತ್ತಾಗಲಿಲ್ಲ.

ಆತನು ಯೆರಿಕೋವಿನ ಸಮೀಪಕ್ಕೆ ಬಂದಾಗ ದಾರಿಯ ಮಗ್ಗುಲಲ್ಲಿ ಕೂತು ಬಿಕ್ಷೆಬೇಡುತ್ತಿದ್ದ ಒಬ್ಬ ಕುರುಡನು ಗುಂಪಾಗಿ ಹೋಗುತ್ತಿದ್ದ ಜನರ ಶಬ್ದವನ್ನು ಕೇಳಿ ಇದೇನು ಎಂದು ವಿಚಾರಿಸಿದನು. ಅವರು ಅವನಿಗೆ–ನಜರೇತಿನ ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ತಿಳಿಸಿದಾಗ ಅವನು–ಯೇಸುವೇ, ದಾವೀದನ ಕುಮಾರನೇ, ನನ್ನನ್ನು ಕರುಣಿಸು ಎಂದು ಕೂಗಿ ಕೇಳಿಕೊಂಡನು. ಮುಂದೆ ಹೋಗುತ್ತಿದ್ದವರು ಸುಮ್ಮನಿರು ಎಂದು ಅವನನ್ನು ಗದರಿಸಲು ಅವನು–ದಾವೀದನ ಕುಮಾರನೇ, ನನ್ನನ್ನು ಕರುಣಿಸು ಎಂದು ಮತ್ತಷ್ಟು ಕೂಗಿಕೊಂಡನು. ಆಗ ಯೇಸು ನಿಂತು ಅವನನ್ನು ತನ್ನ ಬಳಿಗೆ ಕರತರುವದಕ್ಕೆ ಅಪ್ಪಣೆಕೊಟ್ಟನು. ಅವನು ಹತ್ತಿರಕ್ಕೆ ಬಂದನು. ಆತನು ಅವನನ್ನು–ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತೀ ಎಂದು ಕೇಳಲು ಅವನು–ನನಗೆ ಕಣ್ಣುಬರುವಂತೆ ಮಾಡಬೇಕು ಸ್ವಾಮೀ ಅಂದನು. ಯೇಸು ಅವನಿಗೆ–ನಿನಗೆ ಕಣ್ಣು ಬರಲಿ; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ ಅದೆ ಎಂದು ಹೇಳಿದನು. ತಕ್ಷಣವೇ ಅವನಿಗೆ ಕಣ್ಣುಬಂದವು; ಅವನು ದೇವರನ್ನು ಕೊಂಡಾಡುತ್ತಾ ಆತನ ಹಿಂದೆ ಹೋದನು. ಜನರೆಲ್ಲರೂ ನಡೆದ ಸಂಗತಿಯನ್ನು ನೋಡಿ ದೇವರನ್ನು ಸ್ತುತಿಸಿದರು.

## ಲೂಕ 19:1–28

ಆತನು ಯೆರಿಕೋ ಊರನ್ನು ಹೊಕ್ಕು ದಾಟಿ ಹೋಗುತ್ತಿದ್ದನು. ಅಲ್ಲಿ ಜಕ್ಕಾಯನೆಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು; ಅವನು ಸುಂಕದ ಗುತ್ತಿಗೆದಾರನು ಮತ್ತು ಐಶ್ವರ್ಯವಂತನು. ಅವನು ಯೇಸು ಎಂಥವನೆಂದು ನೋಡಲಪೇಕ್ಷಿಸಿದರೂ ತಾನು ಗಿಡ್ಡನಾಗಿದ್ದದರಿಂದ ಜನರ ಗುಂಪಿನ ನಿಮಿತ್ತ ನೋಡಲಾರದೆ ಹೋದನು. ಆದಕಾರಣ ಆತನನ್ನು ನೋಡುವದಕ್ಕಾಗಿ ಮುಂದೆ ಓಡಿಹೋಗಿ ಆತನು ಬರುತ್ತಿರುವ ಮಾರ್ಗದಲ್ಲಿದ್ದ ಆಲದಮರವನ್ನು ಹತ್ತಿದನು. ಯೇಸು ಅಲ್ಲಿಗೆ ಬಂದು ಮೇಲಕ್ಕೆ ನೋಡಿ–ಜಕ್ಕಾಯನೇ, ತಟ್ಟನೆ ಇಳಿದು ಬಾ, ನಾನು ಈಹೊತ್ತು ನಿನ್ನ ಮನೆಯಲ್ಲಿ ಇಳುಕೊಳ್ಳಬೇಕು ಎಂದು ಅವನಿಗೆ ಹೇಳಲು ಅವನು ತಟ್ಟನೆ ಇಳಿದು ಬಂದು ಆತನನ್ನು ಸಂತೋಷದಿಂದ ಸೇರಿಸಿಕೊಂಡನು. ಇದನ್ನು ನೋಡಿದವರೆಲ್ಲರು–ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಹೋಗಿದ್ದಾನೆ ಎಂದು ಗುಣುಗುಟ್ಟಿದರು. ಆದರೆ ಜಕ್ಕಾಯನು ನಿಂತುಕೊಂಡು ಸ್ವಾಮಿಗೆ–ಸ್ವಾಮೀ, ನೋಡು, ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ; ಮತ್ತು ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳಕೊಂಡಿದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ ಎಂದು ಹೇಳಿದನು. ಇದನ್ನು ಕೇಳಿ ಯೇಸು–ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು; ಇವನು ಸಹ ಅಬ್ರಹಾಮನ ವಂಶಿಕನಲ್ಲವೇ. ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು.

ಅವರು ಈ ಮಾತುಗಳನ್ನು ಕೇಳುತ್ತಿರಲಾಗಿ ಯೇಸು ಯೆರುಸಲೇಮಿಗೆ ಸಮೀಪವಾಗಿದ್ದದರಿಂದಲೂ ದೇವರ ರಾಜ್ಯವು ಕೂಡಲೇ ಪ್ರತ್ಯಕ್ಷವಾಗುವ ಹಾಗಿದೆ ಎಂದು ಅವರು ಭಾವಿಸಿದ್ದದರಿಂದಲೂ ಇನ್ನೂ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ–ಶ್ರೀಮಂತನಾದ ಒಬ್ಬಾನೊಬ್ಬ ಮನುಷ್ಯನು ತಾನು ರಾಜ್ಯಾಧಿಕಾರವನ್ನು ಪಡೆದುಕೊಂಡು ಹಿಂತಿರುಗಿ ಬರಬೇಕೆಂದು ದೂರ ದೇಶಕ್ಕೆ ಹೊರಟನು. ಹೊರಡುವಾಗ ತನ್ನ ಆಳುಗಳಲ್ಲಿ ಹತ್ತು ಮಂದಿಯನ್ನು ಕರೆದು ಅವರಿಗೆ ಹತ್ತು ಮೊಹರಿಗಳನ್ನು ಕೊಟ್ಟು–ನಾನು ಬರುವ ತನಕ ವ್ಯಾಪಾರಮಾಡಿಕೊಂಡಿರ್ರಿ ಎಂದು ಹೇಳಿಹೋದನು. ಆದರೆ ಅವನ ಪಟ್ಟಣದ ನಿವಾಸಿಗಳು ಅವನನ್ನು ದ್ವೇಷಿಸಿ ಅವನ ಹಿಂದೆ ರಾಯಭಾರಿಗಳನ್ನು ಕಳುಹಿಸಿ ಇವನು ನಮ್ಮ ಮೇಲೆ ದೊರೆತನಮಾಡುವದು ನಮಗೆ ಇಷ್ಟವಿಲ್ಲ ಎಂದು ಹೇಳಿಸಿದರು. ಆ ಮೇಲೆ ಅವನು ರಾಜ್ಯಾಧಿಕಾರವನ್ನು ಪಡಕೊಂಡು ಹಿಂತಿರುಗಿ ಬಂದು ತಾನು ಹಣವನ್ನು ಕೊಟ್ಟಿದ್ದ

ಆಳುಗಳು ವ್ಯಾಪಾರದಿಂದ ಎಷ್ಟೆಷ್ಟು ಲಾಭ ಸಂಪಾದಿಸಿ –ಕೊಂಡಿದ್ದಾರೆಂದು ತಿಳುಕೊಳ್ಳುವದಕ್ಕಾಗಿ ಅವರನ್ನು ತನ್ನ ಬಳಿಗೆ ಕರಿಸಿದನು. ಮೊದಲನೆಯವನು ಆತನ ಮುಂದೆ ಬಂದು–ದೊರೆಯೇ, ನೀನು ಕೊಟ್ಟ ಮೊಹರಿಯಿಂದ ಹತ್ತು ಮೊಹರಿಗಳು ಸಂಪಾದನೆಯಾದವು ಅನ್ನಲು ಅವನು ಅವನಿಗೆ–ಭಲಾ! ನೀನು ಒಳ್ಳೇ ಆಳು; ನೀನು ಬಹು ಸ್ವಲ್ಪವಾದುದರಲ್ಲಿ ನಂಬಿಕೆಯುಳ್ಳವ–ನಾಗಿದ್ದುದರಿಂದ ಹತ್ತು ಗ್ರಾಮಗಳ ಮೇಲೆ ಅಧಿಕಾರಿಯಾಗಿರು ಎಂದು ಹೇಳಿದನು. ಎರಡನೆಯವನು ಬಂದು–ದೊರೆಯೇ, ನೀನು ಕೊಟ್ಟ ಮೊಹರಿಯಿಂದ ಐದು ಮೊಹರಿಗಳು ದೊರಕಿದವು ಅನ್ನಲು ಅವನು ಇವನಿಗೆ–ನೀನು ಸಹ ಐದು ಗ್ರಾಮಗಳ ಮೇಲಿರು ಎಂದು ಹೇಳಿದನು. ಬಳಿಕ ಮತ್ತೊಬ್ಬನು ಬಂದು–ದೊರೆಯೇ, ಇಗೋ ನೀನು ಕೊಟ್ಟ ಮೊಹರಿ. ನೀನು ಇಡದೇ ಇರುವದನ್ನು ಎತ್ತಿಕೊಂಡು ಹೋಗುವ ಬಿತ್ತದೆಯಿರುವದನ್ನು ಕೊಯ್ಯುವ ಕಠಿಣ ಮನುಷ್ಯನು ಎಂದು ನಿನಗೆ ಹೆದರಿಕೊಂಡು ಇದನ್ನು ವಸ್ತ್ರದಲ್ಲಿ ಕಟ್ಟಿ ಇಟ್ಟುಕೊಂಡೆನು ಅಂದನು. ಅದಕ್ಕೆ ಅವನು–ನೀನು ಕೆಟ್ಟ ಆಳು, ನಿನ್ನ ಮಾತಿನ ಮೇಲೆಯೇ ನಿನಗೆ ತೀರ್ಪುಮಾಡುತ್ತೇನೆ. ನಾನು ಇಡದೇ ಇರುವದನ್ನು ಎತ್ತಿಕೊಂಡು ಹೋಗುವ ಬಿತ್ತದೆಯಿರುವದನ್ನು ಕೊಯ್ಯುವ ಕಠಿಣ ಮನುಷ್ಯನು ಎಂದು ತಿಳಿದಿಯಾ? ಹಾಗಾದರೆ ನೀನು ನನ್ನ ಹಣವನ್ನು ಸಾಹುಕಾರನ ಕೈಯಲ್ಲಿ ಯಾಕೆ ಕೊಡಲಿಲ್ಲ? ಆ ಮೇಲೆ ನಾನು ಬಂದು ಅದನ್ನು ಬಡ್ಡಿ ಸಹಿತ ತೆಗೆದುಕೊಳ್ಳುತ್ತಿದ್ದೆನು ಎಂದು ಹೇಳಿ ಹತ್ತಿರ ನಿಂತಿದ್ದವರಿಗೆ–ಆ ಮೊಹರಿಯನ್ನು ಇವನಿಂದ ತೆಗೆದುಕೊಂಡು ಹತ್ತು ಮೊಹರಿಗಳುಳ್ಳವನಿಗೆ ಕೊಡಿರಿ ಎಂದು ಹೇಳಿದನು. ಅವರು–ದೊರೆಯೇ, ಹತ್ತು ಮೊಹರಿಗಳು ಅವನಲ್ಲಿ ಅವೆಯಲ್ಲಾ ಎಂದು ಅವನಿಗೆ ಹೇಳಿದರು. ಅದಕ್ಕವನು–ಇದ್ದವರಿಗೆಲ್ಲಾ ಕೊಡಲ್ಪಡುವದು, ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು ಎಂದು ನಾನು ನಿಮಗೆ ಹೇಳುತ್ತೇನೆ; ಮತ್ತು ತಮ್ಮ ಮೇಲೆ ನಾನು ದೊರೆತನ ಮಾಡುವದು ಇಷ್ಟವಿಲ್ಲವೆಂದು ಹೇಳಿದ ಆ ನನ್ನ ವೈರಿಗಳನ್ನು ಇಲ್ಲಿಗೆ ತಂದು ನನ್ನ ಮುಂದೆ ಸಂಹಾರಮಾಡಬೇಕು ಅಂದನು. ಆತನು ಈ ಮಾತುಗಳನ್ನು ಹೇಳಿದ ಮೇಲೆ ಗಟ್ಟಾಹತ್ತಿ ಯೆರೂಸಲೇಮಿಗೆ ಮುಂದೆ ಮುಂದೆ ಹೋದನು.

*****

# ಹೆಚ್ಚಿನವನಾದ ಆ ಸೇವಕನು

**ರೀಪ್ರಿಂಟ್ಸ್ ಪುಟ 4668**

## ಮತ್ತಾಯ 20:17–34

**"ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವದಕ್ಕಾಗಿ ಬರಲಿಲ್ಲ ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು"**

ಮಹತ್ವಾಕಾಂಕ್ಷೆಗಳು, ಅದರಲ್ಲೂ ಸ್ವಾರ್ಥಾಕಾಂಕ್ಷೆಗಳು, ಲೋಕಕ್ಕೆ ಚಾಲನೆಯನ್ನು ಕೊಡುತ್ತವೆ. ಒಂದು ವಿಧವಾದ ಆಕಾಂಕ್ಷೆಗಳು ಅಂದರೆ ದೇವರನ್ನು ಮೆಚ್ಚಿಸಿ ಆತನಿಂದ ಪ್ರತಿಫಲ ಪಡಕೊಳ್ಳುವಂಥವುಗಳನ್ನು ಅಮೂಲ್ಯವೂ ಉತ್ಕೃಷ್ಟವೂ ಆದ ದೇವರ ವಾಕ್ಯದಲ್ಲಿರುವ ವಾಗ್ದಾನಗಳ ಮೂಲಕವಾಗಿ ಪ್ರೋತ್ಸಾಹಿಸಲಾಗಿರುವದು. ತಮ್ಮನ್ನು ತ್ಯಾಗಮಾಡಿಕೊಂಡು ಪ್ರತಿಷ್ಠಿತರಾಗಿರುವ ಕ್ರಿಸ್ತನ ಹಿಂಬಾಲಕರಿಗೆ ನೀಡಲಾಗುವ ವಾಗ್ದಾನವನ್ನು ಅಂದರೆ ಅವರು ಮರಣ ಪರ್ಯಂತರವಾಗಿ ನಂಬಿಗಸ್ತರಾದಲ್ಲಿ ಜೀವವೆಂಬ ಜಯಮಾಲೆಯನ್ನು ಅಂದರೆ ಅಮರತ್ವವನ್ನು ಪಡಕೊಂಡವರಾಗಿ ಕ್ರಿಸ್ತನ ರಾಜ್ಯದಲ್ಲಿ ಭಾಗಿಗಳಾಗಿ ಪ್ರಭಾವ ಮಾನಗಳನ್ನು ಹೊಂದಿ ತಮ್ಮ ಒಡೆಯನೊಡನೆ ಆತನ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಒಂದು ಸ್ಥಾನವನ್ನು ಹೊಂದುವರೆನ್ನುವಂಥ ವಾಗ್ದಾನದ ವಿಷಯವಾಗಿ ಆಲೋಚಿಸಿರಿ! ಕೇಳುವಂಥ ಕಿವಿಯುಳ್ಳವರಿಗೆ ನಂಬಿಕೆಯ ಬಗ್ಗೆ ಮಹತ್ವಾಕಾಂಕ್ಷೆ ಹೊಂದುವ ವಿಷಯವಾಗಿ ಸೃಷ್ಟಿಕರ್ತನಿಂದ ಮಾಡಲಾಗಿರುವ ಮನವಿಗಳಲ್ಲಿ ಇದಕ್ಕಿಂತಲೂ ಬಲವಾದುದು ಭೂಲೋಕದಲ್ಲಿ ಬೇರೊಂದಿಲ್ಲ. ಹೀಗಿದ್ದರೂ ಈ ವಾಗ್ದಾನಗಳ ಮೂಲಕವಾಗಿ ಜಾಗೃತಿಗೊಂಡ ಮಹತ್ವಾಕಾಂಕ್ಷೆಗಳು ನಮಗೆ ಉರುಳಾಗಬಹುದೆಂಬ ಎಚ್ಚರಿಕೆಯ ಮಾತನ್ನೂ ನೀಡಲಾಗಿರು–ವದು. ಅವಮಾನ ತಿರಸ್ಕಾರ ಅಪಾರ್ಥ ಮಾಡಿಕೊಳ್ಳಲ್ಪಡುವಂಥ–ದನ್ನು ನಂಬಿಗಸ್ತಿಕೆಯಿಂದ ಸಹಿಸಿಕೊಳ್ಳುವದು ಹಾಗೂ ದೀನತೆ ಯನ್ನು ಕಡೆಯವರೆಗೂ ತೋರ್ಪಡಿಸುವದೂ ಅಲ್ಲದೆ ದೇವರಲ್ಲಿ ಅಪರಿಮಿತವಾದ ಶ್ರದ್ಧೆಯುಳ್ಳವರಾಗಿ ಹಾಗೂ ಆತನ ಏರ್ಪಾಟು–ಗಳನ್ನು ಅನಿವಾರ್ಯವೆಂದು ಒಪ್ಪಿಕೊಳ್ಳುವದು ಆ ರಾಜ್ಯವನ್ನು ಪಡೆದುಕೊಳ್ಳಲು ಮಾಡಲಾದ ಷರತ್ತಾಗಿರುವದು. "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಎಂದು ನಾವು ಪ್ರಾರ್ಥಿಸುತ್ತಿದ್ದು ಸಮೀಪಿಸುತ್ತಿರುವ ಆ ಮೆಸ್ಸೀಯನ ರಾಜ್ಯದಲ್ಲಿ ಯಾರು ಆತನೊಡನೆ ಆಳ್ವಿಕೆಮಾಡಲಿರುವರೋ ಅವರು ಕ್ಲುಪ್ತಕಾಲದಲ್ಲಿ ಮೇಲಕ್ಕೆ ಎತ್ತಲ್ಪಡುವಂತಾಗಲು ದೇವರ ತ್ರಾಣವುಳ್ಳ ಹಸ್ತದ ಕೆಳಗೆ ತಮ್ಮನ್ನು ತಗ್ಗಿಸಿಕೊಳ್ಳಬೇಕು. –1 ಪೇತ್ರ 5:6.

ಯೇಸುವು ತನ್ನ ಅವಮಾನಕರವಾದ ಹಿಂಸಾಮರಣ –ಗಳನ್ನು ಮುಂದಾಗಿ ತಿಳಿಸುತ್ತಿದ್ದಾಗಲೂ ದೇವರ ರಾಜ್ಯದ ಭರವಸೆನಿರೀಕ್ಷೆಗಳು ಅಪೊಸ್ತಲರ ಮನಸ್ಸಿನಲ್ಲಿ ಪ್ರಜ್ವಲಿಸುತ್ತಿದ್ದವು; ಹೀಗಾಗಿ ಯೇಸುವಿನ ಹಿಂಬಾಲಕರಲ್ಲಿ ಪ್ರೀಯರಾದ ಇಬ್ಬರು ಅಂದರೆ ಯಾಕೋಬ ಯೋಹಾನರು ದೇವರ ರಾಜ್ಯವು ಸ್ಥಾಪನೆಯಾಗುವಾಗ ಆ ದೊಡ್ಡ ಅರಸನ ಬಲಗಡೆಯಲ್ಲಿ ಒಬ್ಬನು ಕುಳಿತುಕೊಳ್ಳುವಂತಾಗಲು ಮತ್ತೊಬ್ಬನು ಆತನ ಎಡಗಡೆಯಲ್ಲಿ ಕುಳಿತುಕೊಳ್ಳುವಂತಾಗ ಮಾಡಲು ವಾಗ್ದಾನನೀಡಬೇಕೆಂಬದಾಗಿ ತಮ್ಮ ತಾಯಿಯ ಮೂಲಕವಾಗಿ ವಿನಂತಿಸಿಕೊಂಡಿದ್ದರು.

ಈ ಬೇಡಿಕೆಯು ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಪ್ರಿಯರಾದ ತನ್ನ ಶಿಷ್ಯರಿಗೆ ಬಹುಶಃ ತಾವು ಇಂಥಾ ಉನ್ನತ ಸ್ಥಾನಕ್ಕೆ ಏರುವಂತಾಗಲು ಸಂಭವಿಸಲಿರುವ ಕಷ್ಟನಷ್ಟಗಳ ಲೆಕ್ಕಾಚಾರವನ್ನು ಸಂಪೂರ್ಣವಾಗಿ ಮಾಡಿರುವದಿಲ್ಲವೆಂಬ

ಸಲಹೆಯನ್ನು ನೀಡುವಂತೆ ಆ ಮಹಾ ಬೋಧಕನನ್ನು ನಡೆಸಿತ್ತು. ತಾನು ಕುಡಿಯುವ ನಿಂದನೆ ಅಪಮಾನಕರವಾದ ಪಾತ್ರೆಯಲ್ಲಿ ಕುಡಿಯುವದು, ಲೌಕೀಕ ಹಿತಾಸಕ್ತಿಗಳನ್ನು ತ್ಯಾಗಮಾಡಿ ತಾನು ಹೊಂದುವ ಮರಣವೆಂಬ ಸ್ನಾನದೀಕ್ಷೆಯನ್ನು ಅವರೂ ಹೊಂದಲು ಇಚ್ಛಿಸುವರೋ ಎಂದು ವಿಚಾರಿಸಿದ್ದನು. ಅವರು ಆ ಕಷ್ಟನಷ್ಟಗಳ ಲೆಕ್ಕಾಚಾರವನ್ನು ಹಾಕಿದ್ದು ತಮ್ಮ ಇಚ್ಛೆಯ ಬಗ್ಗೆ ತಕ್ಷಣವೇ ಸ್ಪಂದಿಸುವರಾಗಿ ಉತ್ತರಿಸಿದ್ದರು. ಅವರು ಆ ಮಹಾ ಬೋಧಕನು ನೀಡಿದ ಪಾಠಗಳನ್ನು ಚೆನ್ನಾಗಿ ಕಲಿತುಕೊಂಡಿದ್ದರು. ಈ ವಿಧವಾದ ಮನೋಇಚ್ಛೆಯ ಫಲವಾಗಿ ಆತನ ನಿಂದನೆ ಅಪಮಾನಕರವಾದ ಮರಣದಲ್ಲಿ ಪಾಲುಹೊಂದುವ ಹಾಗು ಆತನ ಸಿಂಹಾಸನದಲ್ಲಿ ಆತನೊಡನೆ ಕುಳಿತುಕೊಳ್ಳುವ ಸೌಭಾಗ್ಯವು ಅವರದಾಗುವದು ಎಂದು ಆತನು ಅವರಿಗೆ ಭರವಸೆಯಾಗಿ ಹೇಳಿದ್ದನು. ಆದರೆ ಮುಖ್ಯಸ್ಥಾನದ ವಿಷಯವಾಗಿ ಅದು ತನ್ನ ಅಧೀನದಲ್ಲಿರುವದಿಲ್ಲ. ತನ್ನ ಜನರಿಗಾಗುವ ಪರೀಕ್ಷಾರ್ಥವಾದ ಕಷ್ಟಪರಿಶೋಧನೆಗಳು ಪೂರ್ಣಗೊಂಡಾಗ ತನ್ನ ಪಕ್ಕದಲ್ಲಿ ಕುಳಿತುಕೊಳ್ಳುವಂಥ ಆ ಉನ್ನತವಾದ ಗೌರವಸ್ಥಾನಗಳು ತಂದೆಯು ಸಿದ್ಧಮಾಡಿ ಸ್ಥಾಪಿಸಿರುವ ನೀತಿನ್ಯಾಯಗಳ ಗುಣಮಟ್ಟದ ಅನುಸಾರವಾಗಿರುವದು. ಅಪೋಸ್ತಲರೊಂದಿಗೆ ಅವರು ಮಾಡಿಕೊಂಡ ಸಂಪೂರ್ಣವಾದ ಪ್ರತಿಷ್ಠೆ ಹಾಗು ಆ ಒಡೆಯನ ಭರವಸೆಗಳಲ್ಲಿ ಆನಂದಿಸಲು ನಮಗೆ ಹೇಗೆ ಸಾಧ್ಯ! ಅಲ್ಲದೆ ಒಡೆಯನೊಂದಿಗೆ ಆತನ ಸಿಂಹಾಸನದಲ್ಲಿ ಒಂದು ಸ್ಥಾನವನ್ನು ಗಳಿಸಿಕೊಳ್ಳಲು ಆತನ ದೇಹದ ಅಂಗಗಳಾಗಿರುವ ಸಭೆಯಾದ ನಾವು ಸಹ ಪರಿಶ್ರಮಿಸಬೇಕು.

ಯಾಕೋಬ ಯೋಹಾನರಲ್ಲಿದ್ದ ಮಹತ್ವಾಕಾಂಕ್ಷೆಯು ಕರ್ತನ ಬಳಿಯಲ್ಲಿ ವಿಶೇಷವಾದ ಸನಿಹ ಸ್ಥಾನವನ್ನು ಬಯಸುವದರಲ್ಲಿ ತೋರಿಬಂದಿತ್ತು. ಯೇಸುವು ಅವರನ್ನು ನಿರ್ದಿಷ್ಟವಾದ ರೀತಿಯಲ್ಲಿ ಖಂಡಿಸಿರಲಿಲ್ಲ, ಆದರೆ ಪರೋಕ್ಷವಾಗಿ ಅದನ್ನು ಮಾಡಿದ್ದನು. ಆ ಮುಖ್ಯವಾದ ಗೌರವಸ್ಥಾನಗಳನ್ನು ಪಡೆಯಲು ಈ ಇಬ್ಬರು ವಿನಂತಿಸಿಕೊಂಡದ್ದನ್ನು ಇತರ ಹತ್ತು ಮಂದಿ ಕೇಳಿದಾಗ ಅವರು ಸಿಟ್ಟಾಗಿದ್ದರು. ಒಡೆಯನು ಈ ಘಟನೆಯ ಲಾಭವನ್ನು ಪಡಕೊಂಡವನಾಗಿ ದೇವರ ನ್ಯಾಯ ನಿರ್ಣಯಗಳು ಮನುಷ್ಯರವುಗಳಿಗಿಂತ ಎಷ್ಟು ಭಿನ್ನವೆಂಬುದನ್ನು ತೋರಿಸಿಕೊಟ್ಟಿದ್ದನು. ಮನುಷ್ಯರಲ್ಲಿ ಬಲಾತ್ಕಾರಿಗಳು ಮತ್ತು ಬಲಿಷ್ಠರು ಇತರರ ಮೇಲೆ ದೊರೆತನ ಆಧಿಪತ್ಯಗಳನ್ನು ಹೊಂದಿರುವರು; ಆದರೆ ದೇವರ ಏರ್ಪಾಡುಗಳಲ್ಲಿ ಈ ಕ್ರಮವು ಹಿಂದುಮುಂದಾಗಿರುವದು. ದೇವರು ದೀನರು ವಿಧೇಯರು ಹಾಗು ಸಾತ್ವಿಕರುಗಳನ್ನು ಹೆಚ್ಚಾಗಿ ಗೌರವಿಸುವವನಾಗಿ ಅವರನ್ನು ಅತ್ಯುನ್ನತಸ್ಥಾನದಲ್ಲಿ ಇರಿಸುವನು. ಈ ಘಟನೆಯನ್ನು ಆಧಾರವಾಡಿಕೊಂಡು ಕರ್ತನು ತನ್ನ ಹಿಂಬಾಲಕರಿಗೆ ದೀನಸ್ವಭಾವದ ಅಗತ್ಯತೆಯ ವಿಷಯವಾಗಿ ಸರ್ವರಿಗೂ ಅನ್ವಯವಾಗುವ ಒಂದು ಬುದ್ಧಿಪಾಠವನ್ನು ನೀಡಿದ್ದನು. ದೇವರು ದೃಷ್ಟಿಸುವ ರೀತಿಯನ್ನು ಅನುಸರಿಸುವವರಾಗಿ ನಾವು ಸಭೆಯಲ್ಲಿ ಹೆಚ್ಚು ಹೆಚ್ಚಾಗಿ ಸೇವೆಮಾಡುವಂಥವರನ್ನು ಅತ್ಯಧಿಕವಾಗಿ ಗೌರವಿಸಬೇಕಿರುವದು, ತಮ್ಮನ್ನು ಹೆಚ್ಚಿಸಿಕೊಳ್ಳುವವರನ್ನು ಹಾಗೂ ಸೇವಾಗೌರವಗಳನ್ನು ಬಯಸುವಂಥವರನ್ನಲ್ಲ. ನಮ್ಮ ಕರ್ತನು ತನ್ನ ವಿಧಾನವನ್ನೇ ಒಂದು ನಿದರ್ಶನವನ್ನಾಗಿ ತೋರಿಸಿ ಕೊಟ್ಟಿದ್ದನು: ಅವರು ಆತನನ್ನು ತಮ್ಮ ಗುರುವನ್ನಾಗಿ ಅಂಗೀಕರಿಸಿಕೊಂಡಿದ್ದರು, ಆದರೂ ಆತನು ಅವರಿಗೆ ಸೇವೆ ಮಾಡಿದಷ್ಟು ಯಾರೂ ಮಾಡಿರಲಿಲ್ಲ. ನಿಜವಾಗಿಯೂ ಆತನು ಸೇವೆಮಾಡಿಸಿಕೊಳ್ಳುವದಕ್ಕಾಗಿ ಲೋಕಕ್ಕೆ ಬರಲಿಲ್ಲ ಆದರೆ ಇತರರಿಗೆ ಸೇವೆಮಾಡಿ ಅನೇಕರಿಗಾಗಿ ಅಂದರೆ ಲೋಕಕ್ಕಾಗಿ ತನ್ನ ಜೀವವನ್ನು ಈಡುಕೊಡಲು ಬಂದಿದ್ದನು; ಆ ಈಡನ್ನು ದೇವರ ನಿಗದಿತ ಕಾಲದಲ್ಲಿ ಅಂದರೆ ಮೆಸ್ಸೀಯನ ರಾಜ್ಯದಲ್ಲಿ ಅವರನ್ನು ಪಾಪಮರಣಗಳಿಂದ ಬಿಡಿಸಲು ಅನ್ವಯ ಮಾಡಲಾಗುವದು.

## ಕುರುಡರನ್ನು ಮತ್ತು ಬಡವರನ್ನು ಆಶೀರ್ವದಿಸುವದು

ಪ್ರಯಾಣಮಾಡುವಾಗ ಒಡೆಯನಿಗೆ ತನ್ನ ಸ್ಥಾನಮಾನವು ಒಬ್ಬ ಸೇವಕನಂತೆಂಬುದನ್ನು ನಿದರ್ಶಿಸುವಂಥ ಒಂದು ಅವಕಾಶವು ದೊರೆತ್ತಿತ್ತು. ಆತನು ಹಾದುಹೋಗುತ್ತಿರುವದನ್ನು ತಿಳುಕೊಂಡು ಇಬ್ಬರು ಕುರುಡರು ಅತನನ್ನು ದಾವೀದನ ಕುಮಾರನಾದ ಮೆಸ್ಸೀಯನೆಂದು ಅಭಿನಂದಿಸುವವರಾಗಿ ಆತನಿಂದ ದಯೆ ಸಹಾಯ ಉಪಶಮನ ಹೊಂದುವದಕ್ಕಾಗಿ ವಿನಂತಿಸಿಕೊಂಡಿದ್ದರು. ಹೇಗಿದ್ದರೂ ನೀವು ಕೇವಲ ಕುರುಡ ರಾದ ಬಿಕ್ಷುಕರು ಎಂದು ಹೇಳಿ ಅವರನ್ನು ದಾಟಹೋಗುವದರ ಬದಲಾಗಿ ಒಡೆಯನು ನಿಂತುಕೊಂಡವನಾಗಿ ಅವರನ್ನು ತನ್ನ ಬಳಿಗೆ ಕರೆದು ಅವರ ಬೇಡಿಕೆಗೆ ಸ್ಪಂದಿಸುವವನಾಗಿ ಅವರ ಕಣ್ಣುಗಳನ್ನು ಮುಟ್ಟಿದ್ದನು ಹಾಗೂ ಕೂಡಲೇ ಅವರು ದೃಷ್ಟಿಯನ್ನು ಪಡಕೊಂಡಿದ್ದರು. ಈ ಮಹಾ ಬೋಧಕನು ಮಾಡುತ್ತಿದ್ದ ಅದ್ಭುತಗಳು ಆತನಿಗೆ ಶಕ್ತಿನಷ್ಟವಾಗದೆ ನಡೆಸಲ್ಪಡುತ್ತಿರಲಿಲ್ಲವೆಂಬು –ದನ್ನು ಇತರ ಸತ್ಯವೇದಭಾಗಗಳು ಸೂಚಿಸುತ್ತವೆ. "...ಆತನಿಂದ ಶಕ್ತಿ ಹೊರಟು ಎಲ್ಲರನ್ನು ವಾಸಿ ಮಾಡುತ್ತಿದ್ದರಿಂದ..." – ಲೂಕ 6:19

ತಾನು ಐಶ್ವರ್ಯವಂತನಾಗಿದ್ದು ನಮಗೋಸ್ಕರ ಬಡವನಾಗಿ ಅತಿ ದೀನರಿಗೆ, ನತದೃಷ್ಟರಾದ ಕಡುಬಡವರಿಗೆ ಸೇವೆಮಾಡ ಸಲುವಾಗಿ ತನ್ನನ್ನು ತಗ್ಗಿಸಿಕೊಂಡಿದ್ದನು! ನಮ್ಮ ಹೃದಯದಲ್ಲಿ ಇರಲೇಬೇಕಾದ ಅಲ್ಲದೆ ಆ ಮಹಾ ಬೋಧಕನ ನಿಜವಾದ ಹಿಂಬಾಲಕರಾದ ಶಿಷ್ಯರೆಲ್ಲರ ಜೀವನವನ್ನು ಕೆಲ ಮಟ್ಟಿನಲ್ಲಿ ನಿಯಂತ್ರಿಸುವ ಸಾತ್ವಿಕಭಾವವೆಂಬ ಸೇವಾಭಾವದ ಗುಣಲಕ್ಷಣಗಳ ಒಂದು ನಿದರ್ಶನವು ಇಲ್ಲಿ ನಮಗಿರುವದು. ಶಾರೀರಿಕವಾದ ಕಣ್ಣುಗಳನ್ನು ತೆರೆಯಮಾಡುವದು ನಮ್ಮ ಅಧಿಕಾರದಲ್ಲಿ ಇಲ್ಲದಿದ್ದಾಗ್ಯೂ ದೇವರಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಒಂದು ಸ್ಪಷ್ಟವಾದ ಒಳನೋಟವನ್ನು ಪಡೆದುಕೊಳ್ಳಲು ಸಹಾಯ ಮಾಡುವದು ನಮ್ಮ ಅಧಿಕಾರದಲ್ಲಿರುವದು. ಆ ಸಂಗತಿಗಳನ್ನು ಅಂದರೆ ದೇವರನ್ನು ಪ್ರೀತಿಸುವಂಥವರಿಗಾಗಿ ಮತ್ತು ಆತನನ್ನು ಪ್ರೀತಿಸುವವರಾಗಿ ಯೇಸುವಿನ ಹೆಜ್ಜೆಯು ಜಾಡಿನಲ್ಲಿ ನಡೆಯುವಂಥವರಿಗಾಗಿ ದೇವರು ಸಿದ್ಧಮಾಡಿರುವಂಥ ದ್ದೆಲ್ಲವನ್ನು (ಶಾರೀರಿಕ) ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ. (1 ಕೊರಿಂಥ 2:9) ಹೀಗಿರುವಲ್ಲಿ ನಾವು ನಿಜವಾದ ಅಂದರೆ ದೇವರಿಂದ ಕೊಡಲ್ಪಡುವಂಥ ಮಹತ್ವಾಕಾಂಕ್ಷೆಯನ್ನು ಪಡೆಯ ಬಯಸುವರಾಗೋಣ; ಆದರಲ್ಲೂ ವಿಶೇಷವಾಗಿ ನಾವು ಪರಲೋಕದಲ್ಲಿರುವ ನಮ್ಮ ತಂದೆಯ ಚಿತ್ತವನ್ನು ತಿಳಿದು ಅದನ್ನು ನೆರವೇರಿಸುವಂಥವರಾಗೋಣ.



**ಯೇಸುವು ಗೇತ್ಸಮೆನೆ ತೋಟದಲ್ಲಿ ಪ್ರಾರ್ಥಿಸುತ್ತಿರುವದು**

"...ಸ್ವಲ್ಪ ಮುಂದೆ ಹೋಗಿ ಬೋರಲ ಬಿದ್ದು–ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು."

## ಯೆರೂಸಲೇಮಿನಲ್ಲಿ ಯೇಸುವು ಮಾಡಿದ ಅಂತಿಮ ಸೇವಾಕಾರ್ಯ

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 8 | ಬೇಥಾನ್ಯ | ಪಸ್ಕ ಹಬ್ಬಕ್ಕೆ ಆರು ದಿನಗಳಿಗೆ ಮೊದಲು ಬೇಥಾನ್ಯಕ್ಕೆ ಆಗಮಿಸಿದುದು | -- | -- | -- | 11:55–12:1 |
| ನಿಸಾನ್ 9 | ಬೇಥಾನ್ಯ | ಕುಷ್ಠರೋಗಿಯಾಗಿದ್ದ ಸೀಮೋನನ ಮನೆಯಲ್ಲಿ ಔತಣ; ಮರಿಯಳು ಯೇಸುವಿಗೆ ಎಣ್ಣೆಯಿಂದ ಅಭಿಷೇಕ ಮಾಡಿದುದು; ಯೆಹೂದ್ಯರು ಯೇಸುವನ್ನು ಹಾಗು ಲಾಜರನನ್ನು ನೋಡಲು ಬಂದುದು | 26:6–13 | 14:3–9 | -- | 12:2–11 |
| ನಿಸಾನ್ 9 | ಬೇಥಾನ್ಯ–ಯೆರೂಸಲೇಮ್ | ಕ್ರಿಸ್ತನು ಅರಸನಂತೆ ಯೆರೂಸಲೇಮನ್ನು ಪ್ರವೇಶಿಸಿದುದು | 21:1–11, 14–17 | 11:1–11 | 19:29–44 | 12:12–19 |
| ನಿಸಾನ್ 10 | ಬೇಥಾನ್ಯ–ಯೆರೂಸಲೇಮ್ | ಫಲವಿಲ್ಲದ ಅಂಜೂರದ ಮರಕ್ಕೆ ಶಾಪಕೊಟ್ಟಿದ್ದು; ದೇವಾಲಯವನ್ನು ಎರಡನೆಯ ಸಾರಿ ಶುದ್ಧಿಗೊಳಿಸಿದುದು | 21:18–19, 12–13 | 11:12–17 | 19:45–46 | -- |
| | ಯೆರೂಸಲೇಮ್ | ಯೇಸುವನ್ನು ನಾಶಪಡಿಸಲು ಮಹಾಯಾಜಕರ ಹಾಗು ಶಾಸ್ತ್ರಿಗಳ ಸಂಚು | -- | 11:18–19 | 19:47–48 | -- |
| | ಯೆರೂಸಲೇಮ್ | ಗ್ರೀಕರೊಂದಿಗೆ ಸಂವಾದ; ಯೆಹೂದ್ಯರ ಅಪನಂಬಿಕೆ | -- | -- | -- | 12:20–50 |
| ನಿಸಾನ್ 11 | ಬೇಥಾನ್ಯ–ಯೆರೂಸಲೇಮ್ | ಫಲವಿಲ್ಲದ ಅಂಜೂರದ ಮರವು ಒಣಗಿಹೋದುದಾಗಿ ಕಂಡುಬಂದುದು | 21:19–22 | 11:20–25 | -- | -- |
| | ಯೆರೂಸಲೇಮ್, ದೇವಾಲಯ | ಕ್ರಿಸ್ತನ ಅಧಿಕಾರವನ್ನು ಪ್ರಶ್ನಿಸಿದುದು; ಇಬ್ಬರು ಮಕ್ಕಳ ವಿಷಯವಾದ ನಿದರ್ಶನ | 21:23–32 | 11:27–33 | 20:1–8 | -- |
| | ಯೆರೂಸಲೇಮ್, ದೇವಾಲಯ | ಕೆಟ್ಟ ಒಕ್ಕಲಿಗರ ನಿದರ್ಶನ; ಮದುವೆಯ ಔತಣ | 21:33–22:14 | 12:1–12 | 20:9–18 | -- |
| | ಯೆರೂಸಲೇಮ್, ದೇವಾಲಯ | ತೆರಿಗೆಯ ಬಗ್ಗೆ ಪ್ರಶ್ನೆಮಾಡಿ ಹಿಡಿದುಕೊಂಡುದುದು, ಪುನರುತ್ಥಾನ, ಆಜ್ಞೆಗಳು | 22:15–40 | 12:13–34 | 20:20–40 | -- |
| | ಯೆರೂಸಲೇಮ್, ದೇವಾಲಯ | ಮೆಸ್ಸೀಯನ ವಂಶಾವಳಿಯ ಬಗ್ಗೆ ಯೇಸುವು ಪ್ರಶ್ನೆಹಾಕಿ ಉತ್ತರವಿಲ್ಲದಂತಾಗ ಮಾಡಿದುದು | 22:41–46 | 12:35–37 | 20:41–44 | -- |
| | ಯೆರೂಸಲೇಮ್, ದೇವಾಲಯ | ಶಾಸ್ತ್ರಿಗಳು ಮತ್ತು ಫರಿಸಾಯರನ್ನು ಕಟುವಾಗಿ ಖಂಡಿಸಿದುದು | 23:1–39 | 12:38–40 | 20:45–47 | -- |
| | ಯೆರೂಸಲೇಮ್, ದೇವಾಲಯ | ವಿಧವೆಯ ಎರಡು ಕಾಸು | -- | 12:41–44 | 21:1–4 | -- |
| | ಎಣ್ಣೆಮರಗಳ ಗುಡ್ಡ | ಯೆರೂಸಲೇಮಿನ ಪತನವನ್ನು ಮುಂತಿಳಿಸಿದುದು; ಯೇಸುವಿನ ಪ್ರತ್ಯಕ್ಷತೆ; ಯುಗಾಂತ್ಯ | 24:1–51 | 13:1–37 | 21:5–38 | -- |
| | ಎಣ್ಣೆಮರಗಳ ಗುಡ್ಡ | ನಿದರ್ಶನಗಳು: ಹತ್ತು ಕನ್ಯೆಯರು, ತಲಾಂತುಗಳು, ಕುರಿ/ಆಡುಗಳು | 25:1–46 | -- | -- | -- |
| ನಿಸಾನ್12 | ಯೆರೂಸಲೇಮ್ | ಧಾರ್ಮಿಕ ನಾಯಕರು ಯೇಸುವಿನ ಸಾವಿಗಾಗಿ ಒಳಸಂಚುಮಾಡಿದುದು | 26:1–5 | 14:1–2 | 22:1–2 | -- |
| | ಯೆರೂಸಲೇಮ್ | ಯೇಸುವನ್ನು ಹಿಡುಕೊಡಲು ಯೂದನು ಮಹಾಯಾಜಕರೊಂದಿಗೆ ಚೌಕಾಶಿಮಾಡಿದ್ದು | 26:14–16 | 14:10–11 | 22:3–6 | -- |
| ನಿಸಾನ್13 | ಯೆರೂಸಲೇಮಿನ ಸಮೀಪ, ಮತ್ತು ಅದರಲ್ಲಿ | ಪಸ್ಕಹಬ್ಬಕ್ಕೆ ಏರ್ಪಾಡು ಮಾಡಿದುದು | 26:17–19 | 14:12–16 | 22:7–13 | -- |

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 14 | ಯೆರೂಸಲೇಮ್ | ಹನ್ನೆರಡು ಮಂದಿಯೊಂದಿಗೆ ಪಸ್ಕಭೋಜನ ಮಾಡಿದುದು | 26:20–21 | 14:17–18 | 22:14–18 | –– |
| | ಯೆರೂಸಲೇಮ್ | ಯೇಸುವು ಅಪೋಸ್ತಲರ ಕಾಲುಗಳನ್ನು ತೊಳೆದುದು | –– | –– | –– | 13:1–20 |
| | ಯೆರೂಸಲೇಮ್ | ಯೂದನು ಗುರುದ್ರೋಹಿಯೆಂದು ಗುರುತುಹಿಡಿದುದು ಮತ್ತು ಅವನನ್ನು ತಳ್ಳಿಹಾಕಿದುದು | 26:21–25 | 14:18–21 | 22:21–23 | 13:21–30 |
| | ಯೆರೂಸಲೇಮ್ | ಹನ್ನೊಂದು ಮಂದಿಯೊಂದಿಗೆ ಸ್ಮರಣ ಭೋಜನದ ಆಚಾರವನ್ನು ಸ್ಥಾಪಿಸಿದುದು | 26:26–29 | 14:22–25 | 22:19–20, 24–30 | 1 ಕೊರಿಂಥ 11:23–25 |
| | ಯೆರೂಸಲೇಮ್ | ಯೇಸುವನ್ನು ಪೇತ್ರನು ಅಲ್ಲಗಳೆಯುವುದನ್ನು ಮತ್ತು ಅಪೋಸ್ತಲರು ಚದುರಿಹೋಗುವದನ್ನು ಮುಂತಿಳಿಸಿದುದು | 26:31–35 | 14;27–31 | 22:31–38 | 13:31–38 |
| | ಯೆರೂಸಲೇಮ್ | ಸಹಾಯಕನು, ಪರಸ್ಪರ ಪ್ರೀತಿ, ಕಷ್ಟಪರಿಶೋಧನೆ, ಯೇಸುವಿನ ಪ್ರಾರ್ಥನೆ | –– | –– | –– | 14:1–17:26 |
| | ಗೆತ್ಸೇಮನೆ | ತೋಟದಲ್ಲಿ ವ್ಯಥೆಪಟ್ಟದ್ದು; ಯೇಸುವನ್ನು ಹಿಡುಕೊಟ್ಟದ್ದು ಮತ್ತು ಆತನ ಬಂಧನವಾದುದು | 26:30, 36–56 | 14:26, 32–52 | 22:39–53 | 18:1–12 |
| | ಯೆರೂಸಲೇಮ್ | ಅನ್ನ, ಕಾಯಫ, ಸನ್ಹೆದ್ರೀನ್ ಸಭೆ – ಇವರಿಂದ ವಿಚಾರಣೆ | 26:57–27:1 | 14:53–15:1 | 22:54–71 | 18:13–27 |
| | ಯೆರೂಸಲೇಮ್ | ದ್ರೋಹಿಯಾದ ಯೂದನು ಉರುಲು ಹಾಕಿಕೊಂಡದ್ದು | 27:3–10 | –– | [ಅ. ಕೃ 1:18–19] | –– |
| | ಯೆರೂಸಲೇಮ್ | ಪಿಲಾತ, ಆನಂತರ ಹೆರೋದನ ಮತ್ತು ಹಿಂದಿರುಗಿ ಪಿಲಾತನ ಎದುರಿನಲ್ಲಿ | 27:2,11–14 | 15:1–5 | 23:1–12 | 18:28–38 |
| | ಯೆರೂಸಲೇಮ್ | ಪಿಲಾತನು ಯೇಸುವನ್ನು ಬಿಡಿಸಲು ಯತ್ನಿಸಿದ ನಂತರ ಆತನನ್ನು ಮರಣಕ್ಕೆ ಒಪ್ಪಿಸಿದುದು | 27:15–30 | 15:6–19 | 23:13–25 | 18:39–19:16 |
| ಶುಕ್ರವಾರ ಮಧ್ಯಾಹ್ನ 3 ಗಂಟೆ | ಗೊಲ್ಗೊಥಾ, ಯೆರೂಸಲೇಮ್ | ಶಿಲುಬೆಯ ಮೇಲೆ ಯೇಸುವು ಸತ್ತದ್ದು ಮತ್ತು ಅದರ ಆ ಸಂಬಂಧದ ಘಟನೆಗಳು | 27:31–56 | 15:20–41 | 23:26–49 | 19:16–30 |
| | ಯೆರೂಸಲೇಮ್ | ಯೇಸುವಿನ ದೇಹವನ್ನು ಶಿಲುಬೆಯಿಂದ ಇಳಿಸಿದುದು ಮತ್ತು ಹೂಣುವಿಕೆ | 27:57–61 | 15:42–47 | 23:50–56 | 19:31–42 |
| ನಿಸಾನ್ 15 | ಯೆರೂಸಲೇಮ್ | ಯಾಜಕರು ಮತ್ತು ಫರಿಸಾಯರು ಸಮಾಧಿಗೆ ಕಾವಲುಗಾರರನ್ನು ಪಡಕೊಂಡದ್ದು | 27:62–66 | –– | –– | –– |
| ನಿಸಾನ್ 16 | ಯೆರೂಸಲೇಮ್ ಅಕ್ಕಪಕ್ಕ | ಯೇಸುವಿನ ಪುನರುತ್ಥಾನ ಮತ್ತು ಆ ದಿನದ ಘಟನೆಗಳು | 28:1–15 | 16:1–8 | 24:1–49 | 20:1–25 |
| | ಯೆರೂಸಲೇಮ್ ಗಲಿಲಾಯ | ಯೇಸು ಕ್ರಿಸ್ತನ ಆನಂತರದ ಕಾಣಿಸಿಕೊಳ್ಳುವಿಕೆ | 28:16–20 | [1 ಕೊರಿ. 15:5–7] | [ಅ.ಕೃ 1:3–8] | 20:26–21:25 |
| ಐಯ್ಯಾರ್ | ಬೇಥಾನ್ಯದ ಸಮೀಪದಲ್ಲಿನ ಎಣ್ಣೆಮರಗಳ ಗುಡ್ಡ | ಯೇಸುವು ಪುನರುತ್ಥಾನವಾದ ನಂತರದ ನಾಲ್ವತ್ತನೇ ದಿನದಲ್ಲಿ ದಿವಾರೋಹಣವಾದುದು | [ಅ.ಕೃ 1:9–12] | –– | 24:50–53 | –– |

## ಯೋಹಾನ 11:55 ರಿಂದ 12:11

ಆಗ ಯೆಹೂದ್ಯರ ಪಸ್ಕಹಬ್ಬ ಹತ್ತಿರವಾಗಿರಲಾಗಿ ಬಹು ಜನರು ತಮ್ಮನ್ನು ಶುದ್ಧಿಮಾಡಿಕೊಳ್ಳುವದಕ್ಕಾಗಿ ಹಬ್ಬಕ್ಕಿಂತ ಮುಂಚೆ ಹಳ್ಳಿಗಳಿಂದ ಯೆರೂಸಲೇಮಿಗೆ ಬಂದರು. ಅವರು ಯೇಸುವನ್ನು ಹುಡುಕುತ್ತಾ ದೇವಾಲಯದಲ್ಲಿ ನಿಂತುಕೊಂಡು–ಅವನು ಹಬ್ಬಕ್ಕೆ ಬಾರದೆ ಇದ್ದಾನೋ? ನಿಮಗೆ ಹೇಗೆ ಕಾಣುತ್ತದೆ ಎಂದು ತಮ್ಮಲ್ಲಿ ಮಾತಾಡಿಕೊಳ್ಳುತ್ತಾ ಇದ್ದರು. ಆದರೆ ಮಹಾಯಾಜಕರೂ ಫರಿಸಾಯರೂ ಆತನನ್ನು ಹಿಡಿಯಬೇಕೆಂಬದಾಗಿ ಯೋಚಿಸಿ–ಅವನಿರುವ ಸ್ಥಳವು ಯಾರಿಗಾದರೂ ತಿಳಿದರೆ ಅದನ್ನು ತಮಗೆ ತಿಳಿಸಬೇಕೆಂದು ಅಪ್ಪಣೆಕೊಟ್ಟಿದ್ದರು. ಪಸ್ಕಹಬ್ಬವು ಇನ್ನು ಆರು ದಿವಸ ಮುಂದೆ ಇರಲಾಗಿ ಯೇಸು ಬೇಥಾನ್ಯಕ್ಕೆ ಬಂದನು. ಯೇಸುವು ಸತ್ತವರೊಳಗಿಂದ ಎಬ್ಬಿಸಿದ ಲಾಜರನು ಅಲ್ಲಿದ್ದನು. ಯೇಸುವಿಗೆ ಅಲ್ಲಿ ಔತಣಮಾಡಿಸಲು ಮಾರ್ಥಳು ನೆರವಾಗಿದ್ದಳು; ಲಾಜರನು ಆತನ ಸಂಗಡ ಊಟಕ್ಕೆ ಕೂತವರಲ್ಲಿ ಒಬ್ಬನು. ಆಗ ಮರಿಯಳು ಬಹು ಬೆಲೆಯುಳ್ಳ ಅಚ್ಚಜಟಮಾಂಸಿ ತೈಲವನ್ನು ಒಂದು ಸೇರಷ್ಟು ತಂದು ಯೇಸುವಿನ ಪಾದಕ್ಕೆ ಹಚ್ಚಿ ತನ್ನ ತಲೇಕೂದಲಿನಿಂದ ಆತನ ಪಾದಗಳನ್ನು ಒರೆಸಿದಳು. ಆ ತೈಲದ ಪರಿಮಳವು ಮನೆಯಲ್ಲೆಲ್ಲಾ ತುಂಬಿಕೊಂಡಿತ್ತು. ಆದರೆ ಆತನ ಶಿಷ್ಯರಲ್ಲಿ ಒಬ್ಬನು, ಅಂದರೆ ಆತನನ್ನು ಹಿಡುಕೊಡುವದಕ್ಕಿದ್ದ ಇಸ್ಕರಿಯೋತ ಯೂದನೆಂಬುವನು–ಯಾಕೆ ಈ ತೈಲವನ್ನು ಮುನ್ನೂರು ಹಣಕ್ಕೆ ಮಾರಿ ಬಡವರಿಗೆ ಕೊಡಲಿಲ್ಲ ಅಂದನು. ಅವನು ಬಡವರಿಗೋಸ್ಕರ ಚಿಂತಿಸಿ ಇದನ್ನು ಹೇಳಲಿಲ್ಲ; ಅವನು ಕಳ್ಳನಾಗಿದ್ದು ತನ್ನ ವಶದಲ್ಲಿದ್ದ ಅವರ ಹಣದ ಚೀಲದಲ್ಲಿ ಹಾಕಿದ್ದನ್ನು ತಕ್ಕೊಳ್ಳುವವನಾಗಿದ್ದರಿಂದಲೇ ಹೇಳಿದನು. ಆಗ ಯೇಸು–ಈಕೆಯನ್ನು ಬಿಡು; ನನ್ನನ್ನು ಹೂಣಿಡುವ ದಿವಸಕ್ಕಾಗಿ ಇಟ್ಟುಕೊಳ್ಳಲಿ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ, ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವದಿಲ್ಲ ಅಂದನು. ಯೆಹೂದ್ಯರ ಜನಸಮೂಹವು ಆತನು ಅಲ್ಲಿ ಇದ್ದಾನೆಂದು ತಿಳಿದು ಯೇಸುವನ್ನು ನೋಡುವದಕ್ಕಾಗಿ ಮಾತ್ರವಲ್ಲದೆ ಆತನು ಸತ್ತವರೊಳಗಿಂದ ಎಬ್ಬಿಸಿದ ಲಾಜರನನ್ನು ಸಹ ನೋಡಬೇಕೆಂಬದಾಗಿ ಬಂದರು. ಆದರೆ ಮಹಾಯಾಜಕರು ಲಾಜರನನ್ನೂ ಕೊಲ್ಲಬೇಕೆಂದು ಆಲೋಚಿಸಿದರು. ಯಾಕಂದರೆ ಅವನ ದೆಸೆಯಿಂದ ಯಹೂದ್ಯರಲ್ಲಿ ಅನೇಕರು ಹೋಗಿ ಯೇಸುವನ್ನು ನಂಬುವವರಾದರು.

## ಮತ್ತಾಯ 26:6–13

ಯೇಸು ಬೇಥಾನ್ಯದಲ್ಲಿ ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿದ್ದಾಗ ಒಬ್ಬ ಸ್ತ್ರೀಯು ಬಹು ಬೆಲೆಯುಳ್ಳ ಸುಗಂಧ ತೈಲದ ಭರಣಿಯನ್ನು ತೆಗೆದುಕೊಂಡು ಆತನ ಬಳಿಗೆ ಬಂದು ಆತನು ಊಟಕ್ಕೆ ಕೂತಿರುವಾಗ ಆ ತೈಲವನ್ನು ಆತನ ತಲೆಯ ಮೇಲೆ ಹೊಯಿದಳು. ಶಿಷ್ಯರು ಇದನ್ನು ಕಂಡು ಕೋಪಗೊಂಡು–ಈ ನಷ್ಟ ಯಾತಕ್ಕೆ? ಈ ತೈಲವನ್ನು ಬಹಳ ಹಣಕ್ಕೆ ಮಾರಿ ಬಡವರಿಗೆ ಕೊಡಬಹುದಾಗಿತ್ತಲ್ಲಾ ಅಂದರು. ಯೇಸು ಅದನ್ನು ತಿಳಿದು ಅವರಿಗೆ–ಈ ಸ್ತ್ರೀಗೆ ಯಾಕೆ ತೊಂದರೆ ಕೊಡುತ್ತೀರಿ? ಈಕೆ ನನಗೆ ಒಳ್ಳೇ ಕಾರ್ಯವನ್ನು ಮಾಡಿದ್ದಾಳೆ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ, ಆದರೆ ನಾನು ನಿಮ್ಮಲ್ಲಿ ಯಾವಾಗಲೂ ಇರುವದಿಲ್ಲ. ಈಕೆಯು ಈ ತೈಲವನ್ನು ನನ್ನ ದೇಹದ ಮೇಲೆ ಹೊಯಿದದ್ದು ನನ್ನ ಉತ್ತರ ಕ್ರಿಯೆಗಾಗಿಯೇ. ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಎಂದು ಹೇಳಿದನು.

## ಮಾರ್ಕ 14:3–9

ಆತನು ಬೇಥಾನ್ಯದಲ್ಲಿ ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಇದ್ದು ಊಟಕ್ಕೆ ಕೂತಿದ್ದಾಗ ಒಬ್ಬ ಸ್ತ್ರೀಯು ಬಹು ಬೆಲೆಯುಳ್ಳ ಅಚ್ಚಜಟಮಾಂಸಿ ತೈಲದ ಭರಣಿಯನ್ನು ತೆಗೆದುಕೊಂಡು ಬಂದು ಆ ಭರಣಿಯನ್ನು ಒಡೆದು ತೈಲವನ್ನು ಆತನ ತಲೆಯ ಮೇಲೆ ಹೊಯಿದಳು. ಆದರೆ ಕೆಲವರು ತಮ್ಮೊಳಗೆ ಕೋಪಗೊಂಡು–ಈ ತೈಲವನ್ನು ನಷ್ಟಮಾಡಿದ್ದೇಕೆ? ಇದನ್ನು ಮುನ್ನೂರು ಹಣಕ್ಕಿಂತ ಹೆಚ್ಚು ಬೆಲೆಗೆ ಮಾರಿ ಬಡವರಿಗೆ ಕೊಡಬಹುದಾಗಿತ್ತಲ್ಲಾ ಎಂದು ಹೇಳಿ ಆಕೆಗೆ ಛೀ ಹಾಕಿದರು. ಆದರೆ ಯೇಸು–ಈಕೆಯನ್ನು ಬಿಡಿರಿ. ಈಕೆಗೆ ಯಾಕೆ ತೊಂದರೆ ಕೊಡುತ್ತೀರಿ. ಈಕೆ ನನಗೆ ಒಳ್ಳೆಯ ಕಾರ್ಯವನ್ನು ಮಾಡಿದ್ದಾಳೆ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ; ನಿಮಗೆ ಮನಸ್ಸು ಬಂದಾಗ ಅವರಿಗೆ ಉಪಕಾರ ಮಾಡಬಹುದು; ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವದಿಲ್ಲ. ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ; ಈಕೆಯು ಮುಂದಾಗಿ ನನ್ನ ಉತ್ತರಕ್ರಿಯೆಗೋಸ್ಕರ ನನ್ನ ದೇಹಕ್ಕೆ ಈ ತೈಲವನ್ನು ಹಚ್ಚಿದ್ದಾಳೆ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಸಹ ಈಕೆಯ ನೆನಪಿಗಾಗಿ ಹೇಳುವರೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು.

*****

# ಸುಗಂಧತೈಲ ಬಹು ಅಮೂಲ್ಯ

**ರೀಪ್ರಿಂಟ್ಸ್ ಪುಟ 3534**

## ಯೋಹಾನ 12:1–11

**'ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ' – ಮಾರ್ಕ 14:8**[?]

ಅಂದು ಶನಿವಾರದ ರಾತ್ರಿಯಾಗಿತ್ತು. ನಾವು ಲೆಕ್ಕಾಚಾರ ಮಾಡಿದಂತೆ ಯೆಹೂದ್ಯರ ಸಬ್ಬತ್ ದಿನದ ಮುಂದಿನ ಸಾಯಂಕಾಲ ಅಂದರೆ ಸಂಜೆ 6 ಗಂಟೆಯ ನಂತರದ ಸಮಯ –ವಾಗಿದ್ದು ಯೇಸುವೂ ಮತ್ತು ಆತನ ಶಿಷ್ಯರು ಅಲ್ಲದೆ ಆ ಹಿಂದೆ ಮರಣವೆಂಬ ನಿದ್ರೆಯಿಂದ ಎಬ್ಬಿಸಲಾಗಿದ್ದ ಲಾಜರನು ಅವನ ಜೊತೆಯಲ್ಲಿ ಆತನ ಕುಟುಂಬದ ಕೆಲವು ಮಿತ್ರರು ಯೇಸುವಿನ ಗೌರವಾರ್ಥವಾಗಿ ಸಿದ್ಧಪಡಿಸಿದ್ದ ಔತಣಕೂಟದಲ್ಲಿ ಕುಳಿತು–ಕೊಂಡಿದ್ದರು. ದಾಖಲೆಗಳು ತೋರಿಸಿಕೊಟ್ಟಿರುವಂತೆ ಅಲ್ಲಿ ಯೇಸುವನ್ನು ಯಾವಾಗಲೂ ಆದರದಿಂದ ಬರಮಾಡಿ–ಕೊಳ್ಳಲಾಗುತ್ತಿದ್ದು ಯೇಸುವೂ ತನ್ನ ಸೇವೆಯ ಕಾಲದಲ್ಲಿ ಬೇರೆ ಯಾರ ಮನೆಗಳಿಗಿಂತಲೂ ಹೆಚ್ಚಾಗಿ ಅಲ್ಲಿ ಇಳಿದುಕೊಳ್ಳುತ್ತಿದ್ದನು. ಅದು ಬೇಥಾನ್ಯದಲ್ಲಿರುವ ಲಾಜರನು ಮಾರ್ಥಳು ಮತ್ತು ಮರಿಯಳ ಮನೆಯಾಗಿತ್ತು. ಅದನ್ನು ಕುಷ್ಠರೋಗಿಯಾದ ಸೀಮೋನನ ಮನೆಯೆಂದು ಕರೆಯಲಾಗುತ್ತಿತ್ತು. ಸೀಮೋನನು ಆ ಕುಟುಂಬದಲ್ಲಿ ತಂದೆಯಾಗಿದ್ದನೆಂಬುದು ಒಂದು ಸಲಹೆ–ಯಾಗಿರುವದು. ಇನ್ನೊಂದು ಸಲಹೆಯು ಏನಂದರೆ ಆತನು ಮಾರ್ಥಳ ಗಂಡನಾಗಿದ್ದನೆಂಬದು. ಮಾರ್ಥಳು ಆ ಸಮಯದಲ್ಲಿ ವಿಧವೆಯಾಗಿದ್ದಳು.

ನಮ್ಮ ಕರ್ತನು ಹಾಗು ಆತನ ಶಿಷ್ಯರು ಯೆರೂಸಲೇಮಿಗೆ ಹೋಗುತ್ತಿದ್ದು ಅಲ್ಲದೆ ಬೇಥಾನ್ಯವು ಆ ದಾರಿಯಲ್ಲಿದ್ದು (ಯೆರೂಸಲೇಮಿನ) ಹೊರವಲಯವಾಗಿತ್ತು. ಅವರು ಬಹುಶಃ ನಮ್ಮ ಲೆಕ್ಕಾಚಾರದ ಶುಕ್ರವಾರಕ್ಕೆ ಸರಿಬೀಳುವ ಅಥವಾ ಯೆಹೂದ್ಯರ ಲೆಕ್ಕಾಚಾರದ ವಾರದ ಆರನೆಯ ದಿನದಂದು ಬಂದಿದ್ದರು. ಅವರನ್ನು ನಿರೀಕ್ಷಿಸುತ್ತಿದ್ದ ಮಾರ್ಥಳು ಮತ್ತು ಮರಿಯಳು ಪುಷ್ಕಳವಾದ ಒಂದು ಭೋಜನಕೂಟವನ್ನು ಏರ್ಪಡಿಸಿದ್ದರು. ಹಾಗು ಯಹೂದ್ಯರ ನೇಮದ ಪ್ರಕಾರ ಇಂಥಾ ಸಂದರ್ಭಗಳಿಗಾಗಿರುವ ಭೋಜನ ಪದಾರ್ಥಗಳನ್ನು ಮುಂದಾಗಿ ಸಿದ್ಧಗೊಳಿಸಲಾಗಿತ್ತು. ಯಾಕಂದರೆ ಸಬ್ಬತ್ತಿನಲ್ಲಿ ಕೆಲಸ ಮಾಡುವದನ್ನು ನಿಷೇಧಿಸಲಾಗಿತ್ತು. ಬೇಥಾನ್ಯದಲ್ಲಿ ಸಬ್ಬತ್ ದಿನ ಕಳೆದ ಬಗ್ಗೆ ವಿವರಣೆಯಿಲ್ಲದಿದ್ದರೂ ಆ ಪ್ರಿಯ ಕುಟುಂಬದವರ ಹಾಗೂ ಕರ್ತನ ಮತ್ತು ಆತನು ಆದುಕೊಂಡ ಅಪೊಸ್ತಲರ ನಡುವಿನ ಸಾಮಾಜಿಕ ಸಂಬಂಧದ ಹರ್ಷಾನಂದಗಳನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಲು ಸಾಧ್ಯ.

### ಸಾಮಾಜಿಕ ಜೀವಿತದಲ್ಲಿನ ಯೇಸು

ಒಡೆಯನು ಆಡಿದ ಜ್ಞಾನಪೂರ್ಣವಾದ ಹಾಗು ಪ್ರೀತಿಮಯವಾದ ಮಾತುಗಳು ಲಿಖಿತವಾಗಿರುವದಿಲ್ಲವಾದರೂ ಉತ್ತಮವಾದ ಬರಹಗಾರರ ಆಧಾರದ ಮೂಲಕವಾಗಿ ನಮಗೆ ತಿಳಿದು ಬರುವದೇನಂದರೆ ಒಬ್ಬ ಒಳ್ಳೆಯ ಮನುಷ್ಯನು ತನ್ನ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ಪದಾರ್ಥಗಳನ್ನು ತರುವನೆಂಬದು ಮತ್ತು ಹೃದಯದಲ್ಲಿ ತುಂಬಿರುವದೇ ಬಾಯಿಂದ ಹೊರಡುವದೆಂಬದು. ಆದುದರಿಂದ ನಾವು ತಿಳಿಯಬಹುದಾದುದು ಏನಂದರೆ ಆ ದಿನವನ್ನು ಹರಟೆಯ ಮಾತುಗಳಿಂದಲೂ ವರ್ತನೆಗಳಿಂದಲೂ ಕಳೆಯದೆ ಅದರಲ್ಲಿ ವಿಶ್ರಮಿಸಿಕೊಂಡವರಾಗಿ ಸೂಕ್ತಮನೋಭಾವದ ಹೃದಯಕ್ಕೆ ಅನುಸಾರವಾದ ಆತ್ಮಸಂಬಂಧವಾದ ಹರ್ಷಾನಂದಗಳಿಂದ ಆ ದಿನವನ್ನು ಕಳೆದಿರಬಹುದೆಂಬದು. ಇದೇ ನಿಯಮವು ಕರ್ತನ ಹಿಂಬಾಲಕರೆಲ್ಲರಿಗೂ ಅನ್ವಯವಾಗುವದು; ಅವರು ಎಲ್ಲೇ ಇರಬಹುದು, ಅವರ ವೃತ್ತಿ ಅಥವಾ ಸನ್ನಿವೇಶಗಳು ಎಂಥದ್ದೇ ಆಗಿರಬಹುದು. ತಮ್ಮ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ಸಂಗತಿಗಳನ್ನು ಹೊರಗೆ ತರಲು ಸಾಧ್ಯವೇ ಹೊರತು ಬೇರೇನೂ ತರಲು ಸಾಧ್ಯವಾಗದು; ಅಲ್ಲದೆ ಯಾವನಾದರೂ ಇನ್ನಾವದೇ ಮನಸ್ಸುಳ್ಳವನಾಗಿದ್ದಲ್ಲಿ ಅವನು ಎಚ್ಚರಿಕೆಯಿಂದಿದ್ದು ತಲೆಯಲ್ಲಿರುವ ತೊಡಕನ್ನು ಮಾತ್ರವಲ್ಲದೆ ಹೃದಯದಲ್ಲಿನ ತೊಡಕನ್ನೂ ತಿದ್ದಿಸರಿಪಡಿಸಿಕೊಳ್ಳಲಿ.

ಲಾಜರನಿಗೂ ಮತ್ತು ಆತನ ಅಕ್ಕಂದಿರಿಗೂ ಯೇಸುವಿನ ಕಡೆಗಿದ್ದ ಪ್ರೀತಿಪೂರ್ಣವಾದ ಮನೋಭಾವವನ್ನು ನಾವು ವಿವರಿಸಿ ಹೇಳುವದಕ್ಕಿಂತಲೂ ಉತ್ತಮವಾಗಿ ಕಲ್ಪಿಸಿಕೊಳ್ಳಲು ಸಾಧ್ಯ. ಲಾಜರನನ್ನು ಸಮಾಧಿಯಿಂದ ಹೊರಗೆ ಬರುವಂತೆ ಮಾಡಿದಾತನನ್ನು ಅವರು ಅತ್ಯುತ್ತಮನೆಂದು ಎಣಿಸಿ ಗೌರವಿಸಿದ್ದರು. ಆತನು ತನ್ನ ಮೇಸ್ಸೀಯನ ಗುಣಸ್ವಭಾವವನ್ನು ತೋರ್ಪಡಿಸಿ ತನ್ನಲ್ಲಿ ಪುನರುತ್ಥಾನದ ಹಾಗು ಉಜ್ಜೀಸುವಂತೆ ಮಾಡುವ ಶಕ್ತಿಯಿರುವದೆಂಬದನ್ನು ಪ್ರದರ್ಶಿಸಿದ್ದನು. ಇದು ಬಹುಶಃ ಆ ಮಹಾ ಘಟನೆಯ ನಂತರ ಕರ್ತನು ಬೇಥಾನ್ಯದ ಮನೆಗೆ ನೀಡಿದ ಮೊದಲನೇ ಭೇಟಿಯಾಗಿರುವ ಸಂಭವವಾಗಿತ್ತು.

ನಮ್ಮ ಕರ್ತನಿಗೆ ಹಲವು ಜೀವನೋಪಾಯಗಳನ್ನು ಅನುಸರಿಸುತ್ತಿದ್ದ ಸ್ನೇಹಿತರಿದ್ದುದು ಸ್ಪಷ್ಟ. ಕೆಲವರು ಐಶ್ವರ್ಯ–ವಂತರಿದ್ದರು, ಕೆಲವರು ಬಡವರಿದ್ದರು, ಕೆಲವರು ಮಧ್ಯಮ–ವರ್ಗದ ಸನ್ನಿವೇಶಗಳಲ್ಲಿದ್ದರು. ಬೇಥಾನ್ಯದ ಮನೆಯವರು ಸುಖಸೌಲಭ್ಯಗಳುಳ್ಳ ಶ್ರೇಣಿಗೆ ಸೇರಿದವರಾಗಿದ್ದರೆಂಬುದು–ಅದು ಅವರ ಸ್ವಂತ ಮನೆಯಾಗಿತ್ತೆಂಬ ಅಂಶದಿಂದ, ಅವರಿಗೆ ಸ್ವಂತ ಸಮಾಧಿಯಿತ್ತೆಂಬ ಅಂಶದ ಮೂಲಕವಾಗಿ ಹಾಗು ಮರಿಯಳು ಆ ಸಂದರ್ಭದಲ್ಲಿ ಬಹು ಅಮೂಲ್ಯವಾದ ಜಟಮಾಂಸೀ ಸುಗಂಧ

ತೈಲದಿಂದ ಕರ್ತನಿಗೆ ಅಭಿಷೇಕಿಸುವದಕ್ಕಾಗಿ ಖರ್ಚುಮಾಡಲು ಇಚ್ಛಿಸಿದ್ದಳೆಂಬ ಅಂಶಗಳಿಂದ ಸ್ಪಷ್ಟವಾಗಿತ್ತು. ಇದು ಪೂರ್ವ–ಕಾಲದ ಒಂದು ಪ್ರಾರ್ಥನೆಯನ್ನು ನಮ್ಮ ನೆನಪಿಗೆ ತರುತ್ತದೆ; ಅದೇನಂದರೆ "ನನಗೆ... ಬಡತನವನ್ನಾಗಲಿ ಐಶ್ವರ್ಯವನ್ನಾಗಲಿ ಕೊಡದೆ..." ಐಶ್ವರ್ಯವು ಹಲವರಿಗೆ ದೊಡ್ಡ ಉರುಳು, ಅಲ್ಲದೆ ಐಶ್ವರ್ಯವಂತರಲ್ಲಿ ಬಹು ಮಂದಿ ದೇವರ ರಾಜ್ಯಕ್ಕೆ ಸೇರಲಾರರು ಎಂಬ ಕರ್ತನ ಮಾತುಗಳು ನಮಗೆ ಇದನ್ನು ಖಚಿತಪಡಿಸುತ್ತವೆ. ಈಗಿನ ಜೀವಿತದಲ್ಲಿನ ಆಕರ್ಷಣೆಗಳು ಅತಿ ಬಲವುಳ್ಳವುಗಳಾಗಿ ಅವರಿಗೆ ಪರಿಣಮಿಸಿ ತಾವು ಪ್ರತಿಷ್ಠೆ ಮಾಡಿಕೊಂಡ ಸಮಯದಲ್ಲಿ ತೆಗೆದುಕೊಂಡ ಪ್ರತಿಜ್ಞೆಗಳನ್ನು ನೆರವೇರಿಸಲು ಅಡ್ಡಿಪಡಿಸುವವು; ಹೇಗಂದರೆ ತಮ್ಮದೆಲ್ಲವನ್ನು ತ್ಯಾಗಮಾಡಿ, ಸಮಸ್ತವನ್ನೂ ಯೇಸುವಿನ ಪಾದಗಳ ಬಳಿಯಲ್ಲಿ ಅರ್ಪಿಸಿ, ತಮಗಿರುವ ಲೌಕೀಕವಾದ ಅವಕಾಶಗಳು ಆಶೀರ್ವಾದಗಳ ವಿಷಯದಲ್ಲಿ ಕೇವಲ ಆತನ ಮನೇವಾರ್ತೆ– ಯವರಾಗಿ, ಅವುಗಳನ್ನು ಆತನ ಸೇವೆಯಲ್ಲಿ ವಿವೇಕಯುಕ್ತವಾಗಿ ವಿನಿಯೋಗಿಸಿ, ಅವುಗಳನ್ನು ತಾವು ಪ್ರೀತಿ ನಿಷ್ಠೆಗಳನ್ನು ಪ್ರತಿಪಾದಿಸಿ ತೋರ್ಪಡಿಸುವಂಥ ರೀತಿಯಲ್ಲಿ ಬಳಸುವಂತಾಗಲು ಅಡ್ಡಿಪಡಿಸುವವು.

ಜೀವಿತದಲ್ಲಿ ಮಿತವಾದ ಬಳಕೆ ಸಾಮರ್ಥ್ಯವನ್ನು ಹೊಂದಿರುವದು ಅನೇಕ ವಿಧದಲ್ಲಿ ಬಹು ಅಪೇಕ್ಷಣೀಯ. ಅದು ಇತರರ ಬಗ್ಗೆ ಬಹು ಔದಾರ್ಯವುಳ್ಳದ್ದಾಗಿ ಹೆಚ್ಚಿನ ರೀತಿಯ ಅತಿಥಿಸತ್ಕಾರ ಮುಂತಾದವುಗಳಿಗೆ ಅನುವು ಮಾಡಿಕೊಡುತ್ತದೆ; ಹೀಗಿದ್ದರೂ ಮಿತವಾದ ಸಮೃದ್ಧಿಯೂ ಸಹ ಬಹು ಪಾಲಿನ ಜನರಿಗೆ ನಂಬಿಗಸ್ತರಾಗಿ ನಡೆಯುವದಕ್ಕೆ ಬಹು ಅಧಿಕವೆಂದು ತೋರುತ್ತದೆ. ಪರಿಣಾಮವಾಗಿ ಆ ರಾಜ್ಯಕ್ಕೆ ಬಾಧ್ಯಸ್ಥರಾಗುವವರು ಪ್ರಾಮುಖ್ಯವಾಗಿ ಈ ಲೋಕದ ಬಡವರಾಗಿರುವರೆಂದೂ, ಮುಖ್ಯವಾಗಿ ಏನೂ ಇಲ್ಲದಂಥವರಾಗಿರುವರೆಂದು ನಮ್ಮ ಕರ್ತನು ಪ್ರಕಟಮಾಡಿ ಹೇಳಿರುವದನ್ನು ನಾವು ವಾಸ್ತವದಲ್ಲಿ ಕಂಡುಕೊಳ್ಳುತ್ತೇವೆ. ಇಂಥವರು ಅಧಿಕವಾದುದನ್ನು ಪಡಕೊಳ್ಳುವ ಯಾವ ನಿರೀಕ್ಷೆಯೂ ಇಲ್ಲದವರಾಗಿರುವ ಪರಿಣಾಮವಾಗಿ ತನ್ನನ್ನು ಉತ್ಕೃಷ್ಟವಾಗಿ ಪ್ರೀತಿಸುವವರಿಗಾಗಿ ಕರ್ತನು ವಾಗ್ದಾನಮಾಡಿರುವ ಪರಲೋಕದ ಸಂಗತಿಗಳ ಕಡೆಗೆ ತಮ್ಮ ಮನಸ್ಸುಗಳನ್ನು ತಿರುಗಿಸಿಕೊಳ್ಳಲು ಹೆಚ್ಚು ಸಿದ್ಧರಿರುವರು.

ಆದುದರಿಂದ ನಾವು ಎಷ್ಟರ ಮಟ್ಟಿಗೆ ಅನುಕೂಲಕರವಾದ ಪರಿಸರವನ್ನು ಹೊಂದಿರುವೆವೋ ಅಂದರೆ ಬೇಥಾನ್ಯದ ಮನೆಯವರು ಹೊಂದಿರುವಂಥದನ್ನು ಪಡೆದಿರುವೆವೋ, ಎಷ್ಟರ ಮಟ್ಟಿಗೆ ಈಗಿನ ಜೀವಿತದ ಒಳ್ಳೆಯ ಸಂಗತಿಗಳನ್ನು ಪಡೆದಿರುವೆವೋ ಅಷ್ಟರ ಮಟ್ಟಿಗೆ ನಮಗೆ ಪ್ರಪಂಚದ ಚಿಂತೆಗಳ ವಿಷಯವಾಗಿ ಐಶ್ವರ್ಯದಿಂದ ಉಂಟಾಗುವ ಮೋಸಗಳ ವಿಷಯವಾಗಿ ಪ್ರಾಪಂಚಿಕವಾದ ನಿರೀಕ್ಷೆ ಗುರಿಗಳ ವಿಷಯವಾಗಿ ವಿಶೇಷವಾದ ಎಚ್ಚರಿಕೆಯಿಂದ ಇರಬೇಕಾದ ಅಗತ್ಯವಿರುವದು. ಇಲ್ಲವಾದಲ್ಲಿ ಇವುಗಳು ಪೂರ್ಣವಾದ ನಂಬಿಕೆ ಮತ್ತು ಭರವಸೆಗಳನ್ನು ಪ್ರೇರೇಪಿಸುವ ಹಾಗೂ ಅವುಗಳನ್ನು ಉಳಿಸಿಕೊಳ್ಳುವ ಸಂಗತಿಗಳಾದ ನಮ್ಮ ಕರ್ತನ ವಿಷಯವಾದ ಶ್ರದ್ಧೆ ಭಕ್ತಿ ಆತನ ಧ್ಯೇಯೋದ್ದೇಶಗಳ ಕಡೆಯಿಂದ ದೂರ ನಡೆಸುವ ಅಪಾಯವಿರುವದು. ಬಡತನದಲ್ಲಿ ನಿಜವಾಗಿಯೂ ಇರದೆಯೇ ಆತ್ಮದಲ್ಲಿ ಬಡವರಾಗಿರಲು ಸಾಧ್ಯವೆಂಬುದು ಸ್ಪಷ್ಟ. ಆದರೆ ಲೌಕೀಕ ಸಮೃದ್ಧಿಯು ಅಧಿಕವಾದಷ್ಟು ಇಕ್ಕಟ್ಟಾದ ಮಾರ್ಗದಲ್ಲಿ ನಾವು ನಡೆಯುವದನ್ನು ಕಾಪಾಡಿಕೊಳ್ಳಲು ನಮಗೆ ಅಧಿಕವಾದ ಕೃಪೆಯು ಅವಶ್ಯವಾಗುವದೆಂಬುದು ಸ್ಪಷ್ಟ.

## "ಸುಗಂಧ ತೈಲವು ಬಹು ಅಮೂಲ್ಯ"

ಆ ಇಬ್ಬರು ಸಹೋದರಿಯರು ತಮ್ಮ (ಪಾತ್ರದ) ವಿಷಯ–ವಾಗಿ ತಮ್ಮಲ್ಲಿ ಮುಂದಾಗಿ ಯೋಜನೆಮಾಡಿಕೊಂಡಂಥದ್ದು ಸ್ಪಷ್ಟವಾಗಿತ್ತು; ಮಾರ್ಥಳು ಭೋಜನದ ಮೇಜಿನ ಬಳಿಯ ಸೇವೆಯನ್ನು ಮಾಡುವವಳಾಗಿದ್ದಳು ಮತ್ತು ಮರಿಯಳು ಆ ಸುಗಂಧ ತೈಲದ ಮೂಲಕವಾಗಿ ಒಂದು ವಿಶೇಷ ರೀತಿಯ ಸೇವೆಮಾಡುವವಳಾಗಿದ್ದಳು. ಪೌರಾತ್ಯ ದೇಶಗಳ ಭೋಜನ ಕೂಟದಲ್ಲಿ ಮೇಜು ಹಾಗು ಒರಗು ಮಂಚಗಳಿದ್ದು ಅತಿಥಿಗಳು ಊಟಣದಲ್ಲಿ ಒರಗಿಕೊಳ್ಳುತ್ತಿದ್ದರೆಂಬುದನ್ನು ಸೂಕ್ತವಾಗಿ ವರ್ಣಿಸಲಾಗಿರುವದು. ದೇಹದ ಮುಂಭಾಗವನ್ನು ಒಂದು ಮೊಣಕೈಯ ಮೇಲೆ ಊರಿಕೊಂಡು ಮತ್ತೊಂದು ಕೈಯಿಂದ ಆಹಾರವನ್ನು ಬಾಯಿಗೆ ಹಾಕಿಕೊಳ್ಳುವದಕ್ಕೆ ಉಪಯೋಗಿಸುವದು ವಾಡಿಕೆಯಾಗಿತ್ತು. ನಮ್ಮ ಕರ್ತನು ಹೀಗೆ ಒರಗಿಕೊಂಡದ್ದು ಆತನ ತಲೆ ಹಾಗು ಕಾಲುಗಳು ಎರಡೂ ಮರಿಯಳಿಗೆ ಬಹು ಸರಾಗವಾಗಿ ತಲಪುವಂತಿತ್ತು. ಆಕೆಯು ಮೊದಲು ಆತನ ತಲೆಗೆ ಲೇಪನವನ್ನು ಹಚ್ಚಿ ಆನಂತರ ಆತನ ಕಾಲುಗಳಿಗೆ ಹಚ್ಚಲು ಮುಂದಾಗಿದ್ದಳು.

ಲೇಪನವೆಂಬ ಶಬ್ದವು ನಿಜವಾಗಿಯೂ ಒಂದು ತಪ್ಪು ಅಭಿಪ್ರಾಯವನ್ನು ನೀಡುವದು; ಸುಗಂಧವೆಂಬ ಶಬ್ದವು ಬಹುತೇಕ ಉಪಯೋಗಿಸಿದಂಥ ತೈಲದ ಬಗ್ಗೆ ವರ್ಣನೆ ನೀಡುವದು. ಅದರ ಬೆಲೆಯು ಆ ಸಂದರ್ಭದಲ್ಲಿ ಮುನ್ನೂರು ಹಣಕ್ಕಿಂತಲೂ ಹೆಚ್ಚಾಗಿರುವದೆಂದು ತಿಳಿಸಲಾಗಿರುವದು. (ವಚನ 5) ಈ ಬೆಳ್ಳಿ ನಾಣ್ಯಗಳು ಹದಿನಾರು ಪೆನ್ಸ್‌ಗಳ (ಅಮೇರಿಕದ ನಾಣ್ಯ) ಬೆಲೆಯನ್ನು ಸೂಚಿಸುವದು; ಹೀಗೆ ಆ ಸುಗಂಧ ತೈಲದ ಭರಣಿಯು ನಾಲ್ವತ್ತೆಂಟು ಡಾಲರ್‌ಗಳ ಬೆಲೆಯದ್ದಾಗಿತ್ತು. ಆದರೆ ಆ ಪ್ರತಿಯೊಂದು ಹಣವು ಅಥವಾ ದಿನಾರಿ ಎಂಬದು ಆ ಕಾಲದಲ್ಲಿ ಒಂದು ದಿನದ ಸಂಬಳವಾಗಿದ್ದು, (ಮತ್ತಾಯ 20:2) ಮುನ್ನೂರು ಹಣವು ಒಬ್ಬ ಕೂಲಿ ಕೆಲಸಗಾರನ ಒಂದು ವರುಷದ ಸಂಬಳಕ್ಕೆ ಸಮನಾಗಿದುವದು ಅಥವಾ ನಮ್ಮ ದಿನಕ್ಕೆ ಹೋಲಿಸಿದಾಗ ಅದು ಸುಮಾರು ಮುನ್ನೂರರಿಂದ ಆರುನೂರು ಡಾಲರ್‌ಗಳ ಬೆಲೆಗೆ ಸಮನಾಗಿರುವದು.

ಯಾವ ವಿಧದಲ್ಲಿ ಪರಿಗಣಿಸಿದರೂ ಇದು ನಿಜವಾಗಿಯೂ ಒಂದು ಬಹು ಅಮೂಲ್ಯವಾದ ಸುಗಂಧ ತೈಲವಾಗಿತ್ತು. ಆದರೂ ಈ ಹೇಳಿಕೆಯು ಉತ್ಪ್ರೇಕ್ಷೆಯಲ್ಲವೆಂಬುದು ಪೂರ್ವಕಾಲದ ಸಾಹಿತ್ಯಬರಹಗಳ ಅನುಸಾರ ಖಚಿತ ಮಾಡಲ್ಪಟ್ಟಿರುವದು. ದೃಷ್ಟಾಂತವಾಗಿ ಹೇಳುವದಾದರೆ, ಹೋರೇಸ್ ಎಂಬಾತನು ದ್ರಾಕ್ಷಾರಸದ ಒಂದು ಪೀಪಾಯಿಯನ್ನು ಬಹು ಚಿಕ್ಕದಾದ ಒಂದು (ತಪಸ್ಸಿನಿ ಗಿಡದ) ಸುಗಂಧಲೇಪನದ ಪೆಟ್ಟಿಗೆಗೆ (ಬದಲಿ)

ಕೊಡುವದಾಗಿ ಹೇಳಿದ್ದನೆಂದು ನಮಗೆ ತಿಳಿಸಲಾಗಿರುವದು. ಗುಲಾಬಿ ಹೂವಿನಿಂದ ಮಾಡಿದ ನಮ್ಮ ದಿನದ ಸುಗಂಧತೈಲದ ಒಂದು ಔನ್ಸಿನ (ಅಂದರೆ ಪೌಂಡಿನ ಹದಿನಾರನೇ ಒಂದು ಭಾಗ) ಬೆಲೆಯು ನೂರು ಡಾಲರ್‌ಗಳಷ್ಟು ಅಧಿಕವಾಗಿರುವದು. ಈ ಒಂದು ಕ್ರಯದ ಪ್ರಕಾರ ಮರಿಯಳು ನೀಡಿದ "ಪೌಂಡಿನ" ಬೆಲೆಯು ಸಾವಿರದ ಇನ್ನೂರು ಡಾಲರ್‌ಗಳಷ್ಟಿರುವದು.

## "ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ"

ಇಂಥಾ ಬೆಲೆಯುಳ್ಳ ಸುಗಂಧ ತೈಲವನ್ನು ಬಳಸುವದು ಬಹು ಅಪರೂಪವಾಗಿತ್ತು: ನಿಜವಾಗಿಯೂ ಚಕ್ರವರ್ತಿಗಳೂ ಸಹ ಇದನ್ನು ಮಿತವಾಗಿ ಬಳಸುತ್ತಿದ್ದರು, ಆದರೆ ಇದನ್ನು ಉಪಯೋಗಿಸುವಾಗ ಸಾಮಾನ್ಯವಾಗಿ ತಲೆಯ ಮೇಲೆ ಹೊಯ್ಯಲಾಗುತ್ತಿತ್ತು. ಮತ್ತಾಯನು ಮತ್ತು ಮಾರ್ಕನು ಇದನ್ನು ಸ್ಮರಿಸಿಕೊಂಡು ವಿವರಿಸಿರುವಂತೆ ಮರಿಯಳು ಈ ಪದ್ಧತಿಯನ್ನು ಅನುಸರಿಸಿ ಕರ್ತನ ತಲೆಯ ಮೇಲೆ ಅದನ್ನು ಸುರಿದಿದ್ದಳು; ಆದರೆ ಇದನ್ನು ಮಾಡಿದ ನಂತರ ಆತನ ಪಾದಗಳ ಬಳಿಗೆ ತೆರಳಿ ಅವುಗಳನ್ನು ಸುಗಂಧತೈಲದಿಂದ ಅಭಿಷೇಕಿಸಿದ್ದಳು, ಅಲ್ಲದೆ ಆನಂತರ ಆತನ ಪಾದಗಳನ್ನು ತನ್ನ ಉದ್ದನೆಯ ಕೂದಲಿನಿಂದ ಒರೆಸಿದ್ದಳು. ಎಂಥಾ ಪ್ರೀತಿಪೂರ್ಣವಾದ ಭಕ್ತಿಯ ಒಂದು ಚಿತ್ರಣವು ಇಲ್ಲಿ ನಮಗೆ ಕೊಡಲಾಗಿದೆ! ಪಾದಗಳನ್ನು ಯಾವಾಗಲೂ ಮಾನವ ದೇಹದ ಅಂಗರಚನೆಯಲ್ಲಿನ ಅತಿ ದೀನವಾದ ಹಾಗು ಕೆಳದರ್ಜೆಯ ಅಂಗಗಳೆಂದು ಗುರುತಿಸ–ಲಾಗಿರುವದು; ತಲೆಯ ಕೂದಲನ್ನು, ವಿಶೇಷವಾಗಿ ಹೆಂಗಸಿನ ತಲೆಕೂದಲನ್ನು ಯಾವಾಗಲೂ ಒಂದು ವಿಶೇಷವಾದ ಸಂಪತ್ತಾಗಿರುವದೆಂದು ಮತ್ತು ಅದು ಆಕೆಗೆ ಪ್ರಭಾವ ತರುವಂಥದೆಂದು ಗುರುತಿಸಲಾಗಿರುವದು. ಇವೆಲ್ಲವನ್ನೂ ಹೀಗೆ ಒಂದು ರೀತಿಯಲ್ಲಿ ಒಟ್ಟುಗೂಡಿಸಿ ಮರಿಯಳು ತನ್ನ ಕರ್ತನೂ ಗುರುವೂ ಆಗಿರುವಾತನು ತನಗಿಂತಲೂ ಅಪರಿಮಿತವಾಗಿ ಉನ್ನತನೂ, ತನ್ನನ್ನು ಮೀರಿದವನೆಂದು ಪರಿಗಣಿಸಿದ್ದಳೆಂಬು–ದನ್ನು ಸೂಚಿಸಿಲಾಗಿರುವದು. ಆಕೆಯು ಮೊದಲು ಆತನನ್ನು ಅತಿ ಅದ್ಭುತವಾದ ಮನುಷ್ಯನೂ ಯಾವ ಮನುಷ್ಯನೂ ಮಾತನಾಡಲಾರದ ರೀತಿಯಲ್ಲಿ ಮಾತಾಡುವವನೆಂದು ಗುರುತಿಸಿಕೊಂಡಿದ್ದಳು; ಆನಂತರದಲ್ಲಿ ಆಕೆಯು ಆತನನ್ನು ಒಂದು ವಿಶೇಷವಾದ ಕಾಲದಲ್ಲಿ ವಿಶೇಷವಾದ ರೀತಿಯಲ್ಲಿ ಕಳುಹಿಸಲ್ಪಟ್ಟಿರುವ ಒಬ್ಬ ಮಹಾ ಬೋಧಕನೆಂಬುದನ್ನು ಅರ್ಥಮಾಡಿಕೊಳ್ಳುತ್ತಾ ಬಂದಿದ್ದಳು; ಅಲ್ಲದೆ ಕಡೆಯದಾಗಿ, ಲಾಜರನನ್ನು ಮರಣ ನಿದ್ರೆಯಿಂದ ಎಬ್ಬಿಸಿದುದರ ಮೂಲಕವಾಗಿ ಆತನಲ್ಲಿ ಸರ್ವಶಕ್ತನಾದ ದೇವರ ಶಕ್ತಿಯಿರುವದೆಂದೂ ಆತನು ದೇವಕುಮಾರನಲ್ಲದೆ ಬೇರೆ ಯಾರೂ ಅಲ್ಲವೆಂಬುದಕ್ಕೆ ಸಾಕ್ಷಿಪ್ರಮಾಣವನ್ನು ಪಡೆದುಕೊಂಡಿದ್ದಳು, ಮತ್ತು ಆತನ ಅತ್ಯುನ್ನತ ಸ್ಥಾನಕ್ಕೆ ತಕ್ಕ ಭಯಭಕ್ತಿಯನ್ನು ಆತನಿಗೆ ಸೂಕ್ತವಾಗಿ ನೀಡಿದ್ದಳು.

ಅವಳು ಆತನನ್ನು (ಯೇಸುವನ್ನು) ಭೂಲೋಕ ಸಂಬಂಧದ ಸಿಂಹಾಸನದಲ್ಲಿ ಇರಿಸಿರಲಿಲ್ಲವಾದರೂ ತಾನು ನಿರಂತರವಾಗಿ ಆತನಿಗೆ ಶ್ರದ್ಧೆಯುಳ್ಳ ಸೇವಕಳೆಂಬುದನ್ನು ತೋರಿಸಿಕೊಟ್ಟಿರುವಳು; ಆಕೆಯು ಆತನನ್ನು ಇಸ್ರಾಯೇಲ್ ಜನರೆಲ್ಲರ ಮುಂದೆ ಮಹಿಮೆ ಪಡಿಸಿರಲಿಲ್ಲವಾದರೂ ತನ್ನ ಸ್ವಂತ ಮನೆಯಲ್ಲಿ ಆತನನ್ನು ಗೌರವಿಸಿ ಮಹಿಮೆಪಡಿಸಿದ್ದಳು; ಅಕೆಯು ಆತನ ಗುಣಾತಿಶಯಗಳನ್ನು ಸ್ತುತಿಸಿ ಆತನ ಗುಣಗಾನ ಮಾಡಿರಲಿಲ್ಲವಾದರೂ ತನ್ನ ಸ್ವಂತ ಹೃದಯದಲ್ಲಿ ಮಧುರವಾಗಿ ಗುಣಗಾನವಮಾಡಿ ಆತನ ಮೇಲೆ ಸುಗಂಧ ತೈಲವನ್ನು ಸುರಿದಿದ್ದಳು; ಆ ಪರಿಮಳದ ಕಂಪು ಆಕೆಯ ಮನೆಯನ್ನು ತುಂಬಿಕೊಡ್ಡದ್ದು ಮಾತ್ರವಲ್ಲದೆ ಸಾಧಾರಣವಾಗಿ ಸ್ತ್ರೀಯರ ಗೌರವಾರ್ಥವಾಗಿ ಆಕೆಯ ದಿನದಿಂದ ಈ ಕಾಲದವರೆಗೂ ಆ ಪರಿಮಳದ ಮಾಧುರ್ಯವು ಫಲಿಸುತ್ತಿರುವದು. "ಈಕೆಯು ತನ್ನ ಕೈಲಾಗುವಷ್ಟು ಮಾಡಿದ್ದಾಳೆ," ಎಂದು ಕರ್ತನು ಹೇಳಿದ್ದನು; ಆಕೆಯು ತನ್ನ ಕೈಯಲ್ಲಿ ಸಾಧ್ಯವಾಗುವಷ್ಟರ ಮಟ್ಟಿಗೆ ಅತ್ಯುತ್ತಮವಾದ ರೀತಿಯಲ್ಲಿ ತನ್ನ ಶ್ರದ್ಧಾಭಕ್ತಿಯನ್ನು ತೋರಿಸಿ–ರುವಳು. ಈ ವಿಷಯದಲ್ಲಿ ನಮ್ಮ ಕರ್ತನು ನುಡಿದ ಪ್ರವಾದನೆಯಲ್ಲಿನ ಮಿಕ್ಕ ಈ ಭಾಗವು ಎಷ್ಟು ಸತ್ಯವಾಗಿರುವದು– "ಈ ಸುವಾರ್ತೆಯು ಎಲ್ಲೆಲ್ಲಿ ಸಾರಲಾಗುವದೋ ಅಲ್ಲಲ್ಲಿ ಈಕೆ ಮಾಡಿದ್ದನ್ನು ಈಕೆಯ ನೆನಪಿಗಾಗಿ ಹೇಳುವರೆಂದು ನಿನಗೆ ಸತ್ಯವಾಗಿ ಹೇಳುತ್ತೇನೆ..." ಇದು ಮಧುರ ಗುಣದಿಂದ ಕೂಡಿದ ಒಂದು ಪ್ರೀತಿಮಯ ಹೃದಯದ ಒಂದು ಸವಿನೆನಪಾಗಿರುವದು. ಈ ಸುವಾರ್ತಾಯುಗ ಪರ್ಯಂತರವಾಗಿರುವ ಕರ್ತನ ಜನರ ಮೇಲೆ ಇದು ಉಂಟುಮಾಡಿರುವ ಕಂಪು ಆಶೀರ್ವಾದ ಪುನಃಶ್ಚೇತನಗಳ ಬೆಳಕಿನಲ್ಲಿ ಇದನ್ನು ಪರಿಗಣಿಸಿದಾಗ ಬಹು ಬೆಲೆಯುಳ್ಳದ್ದೂ ಅತ್ಯಮೂಲ್ಯವೂ ಆದ ಮರಿಯಳ ಸುಗಂಧ ತೈಲದ ಭರಣಿಯೂ ಸಹ ಅತಿ ಅಗ್ಗವಾದುದಾಗಿ ಸಾಬೀತಾಗಿರುವದು.

## "...ಬಡವರಿಗೆ ಕೊಡಬಹುದಿತ್ತಲ್ಲಾ."

ಇಂಥಾ ಒಂದು ರೀತಿಯ ಹಣದ ನಷ್ಟವನ್ನು ಯೂದನು ವಿರೋಧಿಸಿದ್ದನೆಂದು ನಮ್ಮ ಪಾಠವು ಹೇಳುತ್ತದೆ; ಅಲ್ಲದೆ ಈ ಬಗ್ಗೆ ವಿವರಿಸಿ ಹೇಳಿರುವದೇನಂದರೆ ಆತನು ಬಡವರಿಗಾಗಿ ಅಷ್ಟು ಚಿಂತಿಸಿದ್ದನೆಂಬ ಕಾರಣದಿಂದಲ್ಲವೆಂದೂ, ಆತನು ಒಬ್ಬ ಕಳ್ಳನಾಗಿದ್ದು ಸುಗಂಧ ತೈಲಕ್ಕಾಗಿ ಖರ್ಚುಮಾಡಿದ ಆ ಹಣವನ್ನು ತನಗೆ ಕೊಡಲಿಲ್ಲವೆಂಬುದಕ್ಕೆ ವಿಷಾದಿಸಿದ್ದ–ನೆಂಬದು; ಆತನು ಆ ಶಿಷ್ಯರ ಗುಂಪಿನಲ್ಲಿ (ಖಜಾಂಜಿಯಾಗಿ) ಹಣದ ಚೀಲವನ್ನು ಇಟ್ಟುಕೊಂಡವನಾಗಿದ್ದು ಆ ಹಣವನ್ನು ತನಗಾಗಿ ಬಳಸಿಕೊಂಡು ದುರುಪಯೋಗ ಮಾಡಿಕೊಳ್ಳಬಹುದಿತ್ತಲ್ಲಾ ಎಂದುಕೊಂಡಿದ್ದನು. ಈ ಅಂಶವನ್ನು ರಿವೈಸ್ಡ್ ವರ್ಷನ್ ಸತ್ಯವೇದದ ಭಾಷಾಂತರದಲ್ಲಿ ಹೆಚ್ಚು ನಿರ್ದಿಷ್ಟವಾಗಿ ತೋರಿಸಲಾಗಿದ್ದು ಅದು ಹೀಗಿರುವದು: "ಆತನು ಒಬ್ಬ ಕಳ್ಳನಾಗಿದ್ದು (ಹಣದ) ಚೀಲವನ್ನು ಇಟ್ಟುಕೊಂಡು ಅದರಲ್ಲಿ ಹಾಕಿದ್ದನ್ನು ತೆಗೆದುಕೊಳ್ಳುತ್ತಿದ್ದನು." ಮತ್ತಾಯನು: "ಆ ಶಿಷ್ಯರು" ಎಂದು – ಮಾರ್ಕನು: "ಅಲ್ಲಿ ಕೆಲವರು ಇದ್ದರು" ಎಂದು ಹೇಳಿರುವನು–ಆದರೆ ಮರಿಯಳು ಹೀಗೆ ಕರ್ತನಿಗೆ ಮಾಡಿದ ಸೇವಾಕಾರ್ಯಕ್ಕೆ ತಗುಲಿದ ಖರ್ಚಿನ ವಿಷಯವಾಗಿ

ಕೇವಲ ಯೂದನು ಗುಣಗುಟ್ಟಿದ್ದನೆಂದು ಯೋಹಾನು ತಿಳಿಸಿರುವನು. ಈ ವಿವರಣೆಯು ಸರಿಯಾಗಿರುವ ಸಂಭವವು ಅಧಿಕವಾಗಿರುವದು. ನಿಸ್ಸಂದೇಹವಾಗಿ ಯೂದನು ಗುಣಗುಟ್ಟುವಿಕೆಗೆ ಪ್ರಚೋಧಿಸಿದ್ದು ಕೆಲವರು ಅತಿ ಶೀಘ್ರವಾಗಿ ಆತನ ಮನೋಭಾವವನ್ನು ಇನ್ನೂ ಪೂರ್ಣವಾಗಿ ಹಂಚಿಕೊಂಡಿದ್ದರು ಅಲ್ಲದೆ ಅಪೋಸ್ತಲರಲ್ಲಿ ಉಳಿದವರು ಬಹುಶಃ ಹೆಚ್ಚು ಪಾಲಿನ ಜನರಿಂದ ಪ್ರಭಾವಿತರಾಗಿ ಇದಕ್ಕೆ ಮಣಿದು ಈ ದುಂದುಗಾರಿಕೆಯು ತಪ್ಪೆಂದು ಒಪ್ಪಿಕೊಳ್ಳ ಪ್ರವೃತ್ತರಾಗಿದ್ದರು. ಆದರೆ ಯೇಸು ಕೆಲವೇ ಮಾತಿನಲ್ಲಿ ಈ ವಿಷಯವನ್ನು ಅಂತ್ಯಗೊಳಿಸುವವನಾಗಿ ಹೀಗೆ ಹೇಳಿದ್ದನು: "ಈಕೆಯನ್ನು ಬಿಡು; ನನ್ನನ್ನು ಹೂಣಿಡುವ ದಿವಸಕ್ಕಾಗಿ ಇಟ್ಟುಕೊಳ್ಳಲಿ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ, ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವದಿಲ್ಲ."

ಈ ದಿನದ ಕರ್ತನ ಸೇವಕರಲ್ಲಿ ಹಲವರಿಗೆ ಮಿತವ್ಯಯದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಪುನರ್ರಚಿಸಿಕೊಳ್ಳುವ ಅಗತ್ಯವಿರುವದು. ನಿಜ, ನಮಗೆ ಮುಂದಾಗಿ ಏರ್ಪಾಡು ಮಾಡಿಕೊಳ್ಳುವ ಅಗತ್ಯವಿರುವದು, ಹಾಳುಮಾಡಿಕೊಳ್ಳುವದಲ. ಅಲ್ಲದೆ ಮಿತವ್ಯಯಿಗಳಾಗುವ ಅಗತ್ಯವಿರುವದು, ದುಂದುಗಾರ – ರಾಗುವದಕ್ಕಲ್ಲ. ನಮ್ಮ ಕರ್ತನು ಅಗಾಗ್ಗೆ ಈ ಪಾಠಕ್ಕೆ ಒತ್ತುಕೊಟ್ಟು ಹೇಳಿರುವನು. ದೃಷ್ಟಾಂತವಾಗಿ ಹೇಳುವದಾದರೆ, ಜನರ ದೊಡ್ಡ ಗುಂಪಿಗೆ ಆಹಾರವನ್ನು ಒದಗಿಸಿದ ನಂತರ ಮಿಕ್ಕ ರೊಟ್ಟಿ ತುಂಡುಗಳನ್ನು ಕೂಡಿಸಿಡಲು ಆಜ್ಞಾಪಿಸಿದುದು. ಆದರೆ ಇದಕ್ಕೆ ಇತಿಮಿತಿ ಕಲ್ಪಿಸುವದಕ್ಕೆ ಸೂಕ್ತವಾದ ಸನ್ನಿವೇಶವೂ ಇರುವದು. ಒಬ್ಬ ವ್ಯಕ್ತಿಗೆ ಕರ್ತನೊಡನೆ ಬಳಕೆಯಾಗಿರುವದರಲ್ಲಿ ಮಿತವ್ಯಯಿ–ಯಾಗಿರುವದು ಮತ್ತು ಕಡು ಬಡವನಾಗಿರುವದು ಆತನಿಗೆ ನಷ್ಟವನ್ನುಂಟುಮಾಡುವದೆಂಬದು ಖಚಿತ. ಸತ್ಯವೇದವು ಹೀಗೆ ಪ್ರಕಟಿಸಿ ಹೇಳುವದು, "ಉದಾರಿಯು ಪುಷ್ಟನಾಗುವನು," ಹಾಗೂ ಮತ್ತೆ "ಒಬ್ಬನು ತನ್ನ ಧನವನ್ನು ಚೆಲ್ಲಿದರೂ ಅವನಿಗೆ ವೃದ್ಧಿ; ಮತ್ತೊಬ್ಬನು ನ್ಯಾಯವಾದದ್ದನ್ನು ಬಿಗಿಹಿಡಿದರೂ ಅವನಿಗೆ ಬಡತನ."

ಕರ್ತನ ಮತ್ತು ಆತನ ಸೇವೆಗೆ ಸಂಬಂಧಿಸಿದ ವಿಷಯ – ಗಳಲ್ಲಿ ದುಂದುಗಾರಿಕೆ ಎನ್ನಿಸಿಕೊಳ್ಳುವಷ್ಟರ ಮಟ್ಟಿಗೆ ಧಾರಾಳರಾಗಿದ್ದು ನಮ್ಮ ಸ್ವಂತ ವಿಷಯಗಳಲ್ಲಿ ವಿತವ್ಯಯ ಮಾಡುವದನ್ನು ಕಲಿತುಕೊಳ್ಳುವದು ಒಂದು ಬೇರೆಯೇ ಸಂಗತಿಯಾಗಿರುವದು. ಕೆಲವು ಸಾರಿ ನಾವು ಹೀಗೆ ಹಾಡುವೆವು: "ನೀನು ರಾಜನ ಬಳಿಗೆ ಬರುತ್ತಿರುವಿ, ನಿನ್ನೊಂದಿಗೆ ದೊಡ್ಡ ಮನವಿಗಳನ್ನು ನೀನು ತೆಗೆದುಕೊಂಡು ಬಾ." ಆದರೆ ಯಾವಾತನು ಕೃಪಾಸನದ ಮುಂದೆ ದೊಡ್ಡ ಮನವಿಗಳನ್ನು ಕೊಂಡುತರುವನೋ ಅವನು ತನ್ನೊಡನೆ ದೊಡ್ಡ ಸುಗಂಧ ತೈಲದ ಭರಣಿಯನ್ನೂ ಸಹ ಕರ್ತನಿಗಾಗಿ ಕೊಂಡು ತರಬೇಕೆಂಬದನ್ನೂ ಖಚಿತಪಡಿಸಿಕೊಂಡಿರಬೇಕು. ಈ ಮೂಲಕವಾಗಿ ಕರ್ತನಿಂದ ಅನುಗ್ರಹವನ್ನು ಹೊಂದಲು ಅರ್ಹನಾಗುವನೆಂಬುದನ್ನು ನಿರೀಕ್ಷಿಸದೆ ಇರುವವನಾಗಿದ್ದು ಇಲ್ಲವೇ ತನ್ನ ಮನವಿಗೆ ಸುಗಂಧ ಲೇಪನವನ್ನು ಮಾಡದೆ ಇರುವವನಾಗಿ, ತಾನು ಈಗಾಗಲೇ ಪಡೆದಿರುವ ಆಶೀರ್ವಾದಗಳ ವಿಷಯವಾಗಿ ಮನನಮಾಡಿಕೊಂಡಿರುವದಕ್ಕೆ ಗುರುತಾಗಿ ಹೀಗೆ ಇದನ್ನು ಮಾಡಬೇಕು. ಕೃತಜ್ಞತಾಸ್ತುತಿಗಳೆಂಬ ಸುಗಂಧ ತೈಲದ ಭರಣಿಯನ್ನು ತರುವಂಥವರಿಗೆ ಕೇಳಿಕೊಳ್ಳಲು ಸಾಮಾನ್ಯವಾಗಿ ಏನೂ ಇರುವದಿಲ್ಲ. ವಾಸ್ತವದಲ್ಲಿ ತಾವು ದೇವಾನುಗ್ರಹಗಳನ್ನು ಸೂಕ್ತವಾದ ರೀತಿಯಲ್ಲಿ ಮನವರಿಕೆ ಮಾಡಿಕೊಂಡಿರುವದನ್ನು ತೋರ್ಪಡಿಸಿಕೊಳ್ಳಲು ತಮಗೆ ಎಂದೂ ಸಾಧ್ಯವಾಗದು ಎನ್ನುವಷ್ಟರ ಮಟ್ಟಿಗೆ ತಾವು ಋಣಿಗಳೆಂಬುದನ್ನು ಅವರು ಈಗಾಗಲೇ ಮನಗೊಂಡಿರುವರು. ತಾವು ಬೇಡಿಕೊಳ್ಳಲು ಮತ್ತು ಬಯಸಲು ಸಾಧ್ಯವಾದುದಕ್ಕಿಂತಲೂ ಹೆಚ್ಚು ಉತ್ಕೃಷ್ಟವೂ ಹೇರಳವೂ ಆದುದನ್ನು ಕರ್ತನ ಕೈಗಳಿಂದ ಅನುದಿನವೂ ಸ್ವೀಕರಿಸುತ್ತಿರುವೆವೆಂಬುದನ್ನು ಅವರು ಸೂಕ್ತವಾಗಿ ಗುರುತಿಸಿ–ಕೊಂಡಿರುವರು. ಅಲ್ಲದೆ ಕೇವಲ ಆತ್ಮಿಕ ರೂಪದ ಆಶೀರ್ವಾದ–ಗಳಲ್ಲಿ ಮಾತ್ರ ತಾವು ಹಾತೊರೆಯುತ್ತಿರುವಂಥವುಗಳಲ್ಲಿ ಬೇರೆ ಯಾವ ಸಂಗತಿಗಳಿಂದಲೂ ದೊರೆಯಲಾಗದಂಥ ರೀತಿಯಲ್ಲಿ ಅವರು ತೃಪ್ತಿಯನ್ನು ಹೊಂದುತ್ತಿರುವರು. ಇಂಥವರು ಮರಿಯಳು ಅನುಸರಿಸಿದ ವಿಧಾನವನ್ನು ಹೆಚ್ಚು ನಿಕಟವಾಗಿ ಅನುಸರಿಸುವವರಾಗಿ ತಮ್ಮ ಹೃದಯದ ಮೂಲಕ ಕೃತಜ್ಞತಾಸ್ತುತಿಪ್ರಾರ್ಥನೆಗಳೆಂಬ ಸುಗಂಧತೈಲ ಭರಣಿಗಳನ್ನು ಕರ್ತನ ಬಳಿಗೆ ತರುವಂಥವರಾಗಿ, ಬೇರೆ ಏನನ್ನೂ ಕೇಳಿಕೊಳ್ಳದೆ ಸರ್ವ ವಿಷಯಗಳಿಗಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿರುವರು; ಅವರು ಕರ್ತನಿಂದ ಎಂಥಾ ಒಂದು ಆಶೀರ್ವಾದವನ್ನು ಪಡೆಯುತ್ತಿರುವರೆಂದರೆ ಅದನ್ನು ಹಿಡಿದಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲವೆಂಬದೇ.

ಈ ಸಂಗತಿಯನ್ನು ಸೂಕ್ತವಾದ ರೀತಿಯಲ್ಲಿ ದೃಷ್ಟಿಸುವಂಥವರೆಲ್ಲರಿಗೆ–ತಮ್ಮಲ್ಲಿ ಯಾರಿಗೂ ಕರ್ತನಿಗೆ ಅರ್ಪಿಸಲು ಯೋಗ್ಯವಾದಂಥ ಯಾವ ಒಂದು ಸಂಗತಿಯೂ ಇರುವದಿಲ್ಲವೆಂದು ಅನ್ನಿಸಬೇಕು; ನಮ್ಮ ಅತ್ಯುತ್ತಮ ಹಾಗು ಅತ್ಯಮೂಲ್ಯ ಉಡುಗೊರೆಗಳು ಇಲ್ಲವೇ ಯಜ್ಞಾರ್ಪಣೆಗಳು ಆತನಿಗೆ (ದೇವರಿಗೆ) ಯೋಗ್ಯವಲ್ಲದಂಥವುಗಳಾದರೂ ಅವುಗಳು ಒಂದು ದುರ್ಬಲವಾದ ರೀತಿಯಲ್ಲಿ ನಮ್ಮ ಹೃದಯದಲ್ಲಿನ ನಿಜವಾದ ಮನೋಭಾವವನ್ನು ವ್ಯಕ್ತಗೊಳಿಸುತ್ತಿರುವದು. ನಮ್ಮ ದೈನ್ಯ ಪರಿಶ್ರಮಗಳು ಕರ್ತನಿಗೆ ಅಂಗೀಕಾರವಾಗುವದೇ ಆದಲ್ಲಿ ನಮಗೆ ಎಂಥಾ ಆನಂದವಾಗುವದು, ಅಲ್ಲದೆ ನಮ್ಮ ವಿಷಯವಾಗಿ ಅದೇ ಮಧುರ ಸ್ವರವು ಕಟ್ಟಕಡೆಯಲ್ಲಿ ಹೀಗೆ ಹೇಳುವದನ್ನು ಕೇಳುವಂತಾಗಲು ಎಂಥಾ ನಿರೀಕ್ಷೆಯಿಂದಿರುವೆವು ನಾವು – "ಈತನು ತನ್ನ ಕೈಲಾಗುವಷ್ಟನ್ನು ಮಾಡಿದ್ದಾನೆ," "ಈಕೆಯು ತನ್ನ ಕೈಲಾಗುವಷ್ಟನ್ನು ಮಾಡಿದ್ದಾಳೆ".

ಟೆನ್ನಿಸನ್ ಎಂಬ ಕವಿಯು ನಾವು ವಿವೇಚಿಸುತ್ತಿರುವ ದೃಶ್ಯವನ್ನು ಈ ಮುಂದಿನ ಸಾಲುಗಳಲ್ಲಿ ಸೊಗಸಾಗಿ ಚಿತ್ರಿಸಿರುವನು–

"ಆಕೆಯ ಕಣ್ಣುಗಳು ಮೌನ ಪ್ರಾರ್ಥನೆಯ ನೆಲೆಯಾಗಿರುವವು,
ಇಲ್ಲವೇ ಇತರ ಆಲೋಚನೆಗಳನ್ನು ಅಕೆಯ ಮನಸ್ಸು
ಅಂಗೀಕರಿಸಲಾರದು
ಆದರೆ, ಆತನು ಸತ್ತಿದ್ದನು, ಹಾಗು (ಈಗ) ಆತನು ಅಲ್ಲಿ
ಕುಳಿತಿರುವನು,
ಅಲ್ಲದೆ ಆತನನ್ನು ಹಿಂದಕ್ಕೆ ಕರತಂದವನೂ ಅಲ್ಲಿರುವನು.

ಆಗ ಗಾಢವಾದ ಪ್ರೀತಿಯೊಂದು ಎಲ್ಲವನ್ನು ಹಿಂದಕ್ಕೆ
ಸರಿಸುವದು
ಅಕೆಯ ಉತ್ಸುಕ ದೃಷ್ಟಿಯು
ಜೀವಿತನಾದ ತನ್ನ ಸಹೋದರನ ಮುಖದಿಂದ ತೆರಳಿ
ನಿಜವಾಗಿ ಜೀವವುಳ್ಳಾತನ ಮೇಲೆ ನಿಂತಾಗ

"ಜಟಿಲ ಆಲೋಚನೆ, ಕೌತುಕಮಯ ಆತಂಕಗಳೆಲ್ಲವನ್ನೂ
ಅತಿ ಪರಿಪೂರ್ಣ ಆನಂದವು ಹಿಂದೆ ಸರಿಸಿತ್ತು.
ಆಕೆಯು ಬಗ್ಗಿ, ಮಿಂದಳು ರಕ್ಷಕನ ಪಾದವ
ಅಮೂಲ್ಯ ಸುಗಂಧ ಕಣ್ಣೀರುಗಳೊಂದಿಗೆ."

## ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ

ಈ ಸುವಾರ್ತಾ ಯುಗದ ಪರ್ಯಂತರವಾಗಿ ಬಡವರ ಇರುವಿಕೆಯು ಮುಂದುವರಿಯುವದೆಂಬ ನಮ್ಮ ಕರ್ತನ ಪ್ರವಾದನೆಯು ವಿಪುಲವಾಗಿ ನೆರವೇರಿರುವದು. ಭವಿಷ್ಯತ್ತನ್ನು ಮುಂದಾಗಿ ನೋಡಿ ದೇವರ ಆ ರಾಜ್ಯದ ಆಳ್ವಿಕೆಯಲ್ಲಿ ಯಾವ ಬಡವರೂ, ಯಾವ ದುಃಖವೂ ಯಾವ ಕೊರತೆಯೂ ಇರುವದಿಲ್ಲವೆಂಬುದನ್ನು ತಿಳಿದುಕೊಳ್ಳಲು ಹರ್ಷಿಸುತ್ತೇವೆ. "ಪ್ರತಿಯೊಬ್ಬನೂ ತನ್ನ ತನ್ನ ದ್ರಾಕ್ಷೇಗಿಡದ ಕೆಳಗೆ ತನ್ನ ತನ್ನ ಅಂಜೂರ ಮರದ ಕೆಳಗೆ ಕೂತುಕೊಳ್ಳುವನು; ಅವರನ್ನು ಯಾರೂ ಬೆದರಿಸರು ಯಾರೂ ಹೆದರಿಸರು." ಆ ಮಾರ್ಪಾಟಿನ ಸ್ಥಿತಿಯು ಮನುಷ್ಯನ ವಿಕಾಸವಾದ, ಮಾನವ ಸಿದ್ಧಾಂತ, ಸಂಘಸಂಸ್ಥೆ, ಸಹಕಾರಸಂಘ, ವಿಶ್ವಸ್ತಮಂಡಳಿ, ಈ ಮುಂತಾದವುಗಳ ಪರಿಶ್ರಮದ ಫಲವಾಗಿರುವದಿಲ್ಲ. ಎಲ್ಲರನ್ನು ಶ್ರೀಮಂತರನ್ನಾಗಿಸಿ ಸುಖಸಂತೋಷವುಳ್ಳವರನ್ನಾಗಿ ಮಾಡುವ ಈ ಸಂಜೀವಿನಿ ಸಂಸ್ಥೆಗಳು ಹಿಂದೆ ವಿಫಲಗೊಂಡಿದ್ದವು ಅಲ್ಲದೆ ಮುಂದೆಯೂ ಅವು ಖಂಡಿತವಾಗಿ ವೈಪಲ್ಯದಲ್ಲಿಯೇ ಮುಂದುವರೆಯಲಿರುವವು. ಪಾಪವು ಮಾನವ ಸಂತತಿಯ ನರತಂತುಗಳನ್ನೆಲ್ಲವನ್ನೂ ಸ್ವಾರ್ಥಭಾವದ ಮೂಲಕವಾಗಿ ವಿರೂಪಗೊಳಿಸಿ ತಿರುಚಿ ಹಾಕಿರುವ ಕಾರಣ ಹಾಗೂ ಆಸೆಆಕಾಂಕ್ಷೆಗಳು ಈ ವಿರೂಪಗೊಂಡು ತಿರುಚಿಹಾಕಲಾದ ಮಾನವ ಸಂಘಟನೆಯ ಮೂಲದಲ್ಲಿ ಕಾರ್ಯವೆಸಗುತ್ತಿರುವ ಕಾರಣ ಪಾಪವಿರುವವರೆಗೂ ನೋವು ನರಳಾಟ ಕೊರತೆ ಬಿಕ್ಕಟ್ಟುಗಳು ಖಂಡಿತವಾಗಿ ಮುಂದುವರೆಯುತ್ತಿರುವವು. ಆ ದಿವ್ಯ ಮೆಸ್ಸೀಯನು ತನ್ನ ಮಹಾಧಿಕಾರ ಪಡಕೊಂಡು ರಾಜ್ಯಭಾರ ವಹಿಸಿಕೊಂಡವನಾಗಿ ಪಾಪವನ್ನು ಮಾತ್ರವಲ್ಲದೆ ನೀತಿಸತ್ಯತೆಗಳಿಗೆ ವಿರುದ್ಧವಾಗಿರುವದೆಲ್ಲವನ್ನು ದಮನಮಾಡಿ ಭೂಮಿಯ ಮೇಲೆ ನೀತಿಸತ್ಯತೆಗಳನ್ನು ಸ್ಥಾಪಿಸುವವರೆಗೂ ಪಾಪವು ಮುಂದು–ವರೆಯುವದು ಖಚಿತ.

ಆ ಭವ್ಯವಾದ ದಿನವು ಬರುವವರೆಗೂ, ಗೋಳಾಟವೆಂಬ ರಾತ್ರಿಕಾಲದ ಪರ್ಯಂತರ, ಈಗ ಅದು ಹದಿನೆಂಟು ಶತಮಾನಗಳಿಗೂ ಮಿಗಿಲಾಗಿದ್ದು, ಬಡವರು ನಮ್ಮೊಂದಿಗಿರುವರು ಅಲ್ಲದೆ ಅವರಲ್ಲಿ ಅನೇಕರು ಕರ್ತನಿಗೆ ಅಮೂಲ್ಯರೂ ಆಗಿರುವರು. ಈಗಿನ ಸನ್ನಿವೇಶಗಳಲ್ಲಿ ಬಡತನವು ಅನೇಕ ಅರ್ಥಗಳಲ್ಲಿ ಹಾಗು ಹಲವು ವಿಧದಲ್ಲಿ ಒಂದು ಆಶೀರ್ವಾದವಾಗಿರುವದೆಂಬದು ಸಾಬೀತಾಗಿರುವದು. ಬಡತನವೆಂಬ ಸಂಗತಿಯು ಹಾಗು ಬಡತನದ ಬಗ್ಗೆ ಇರುವ ಭಯವು ಅನೇಕರನ್ನು ಅದಕ್ಕೆ ಹೊಂದಿಕೊಂಡವರಾಗಿ ಜೀವನದ ಹೋರಾಟದಲ್ಲಿ ಕ್ರೀಯಾಶೀಲರನ್ನಾಗಿಸಿ ಅವರನ್ನು ಜಯಶಾಲಿಗಳನ್ನಾಗಿ ಮಾಡುವದು ಮಾತ್ರವಲ್ಲದೆ ಇನ್ನೊಂದು ವಿಧದಲ್ಲಿ ಬಡತನವಿರುವದೆಂಬ ಸಂಗತಿಯು, ನಮ್ಮ ಸಹಾಯವನ್ನು ಬಯಸುವಂಥ ಸ್ನೇಹಿತರು ಹಾಗೂ ನೆರೆಹೊರೆಯವರು ಇರುವರೆಂಬ ವಿಷಯವು ಹೆಚ್ಚು ಅನುಕೂಲಕರ ಸನ್ನಿವೇಶಗಳಲ್ಲಿ ಇರುವವರಿಗೆ ಆಶೀರ್ವಾದಕರ–ವಾಗಿದ್ದು ಈ ಮೂಲಕವಾಗಿ ಅವರಲ್ಲಿ ಸಹಾನುಭೂತಿ, ತಾಳ್ಮೆ, ಪ್ರೀತಿ, ಉಪಕಾರಿಗಳಾಗುವ ಬಯಕೆ, ಸಹಾಯಮಾಡುವ ಬಯಕೆ ಇವುಗಳನ್ನು ಅಭಿವೃದ್ಧಿಪಡಿಸುವದು. ಬಡವರಿಗೆ ದಯೆತೋರಿಸು–ವವನು ದೇವರಿಗೆ ಸಾಲ ಕೊಡುವನು; ದೇವರೇ ಅವನಿಗೆ ಪ್ರತ್ಯುಪಕಾರ ಮಾಡುವನು. ಈ ವಾಗ್ದಾನವು ಬಹು ಸಮೃದ್ಧಿ–ಯುಳ್ಳದ್ದಾಗಿದ್ದು ಅತಿ ಸರಳವಾಗಿ ಹೇಳಲ್ಪಟ್ಟಿರುವದು; ಇಲ್ಲಿರುವ ವಿಸ್ಮಯಕಾರೀ ಸಂಗತಿಯೆಂದರೆ ದೇವರು ಮರುಪಾವತಿ ಮಾಡುವದು ಮಾತ್ರವಲ್ಲದೆ ದೊಡ್ಡ ಮೊತ್ತದ ಬಡ್ಡಿಯನ್ನು ಕೊಡುವನೆಂಬುದನ್ನು ಗ್ರಹಿಸಿಕೊಂಡವರಾಗಿದ್ದು ಇದಕ್ಕನುಸಾರ–ವಾಗಿ ಈ ಅಂಶವನ್ನು ಬಂಡವಾಳವನ್ನಾಗಿ ತೊಡಗಿಸಿಕೊಳ್ಳಲು ಇಚ್ಛಿಸುವವರು ಬಹು ಮಂದಿಯಿರುವದಿಲ್ಲವೆಂಬದು.

## "ನಾನು ಯಾವಾಗಲೂ ನಿಮ್ಮೊಂದಿಗಿರುವದಿಲ್ಲ"

ಕರ್ತನನ್ನು ಗೌರವಿಸುವ ಅವಕಾಶವು ಸೀಮಿತಗೊಂಡಿತ್ತು–ಅಂದರೆ ಸ್ವಲ್ಪ ಸಮಯದ ನಂತರ ಆತನ ಶ್ರಮಸಂಕಟಗಳು ಕೊನೆಗೊಂಡು ಆತನು ಮಹಿಮೆ ಹೊಂದುವವನಿದ್ದನು; ಆ ಮಹಿಮೆಯು ಕೇಡುವಿಪತ್ತುಗಳಿಗೆ ಹೊರತಾಗಿದ್ದು ಮಾನವನ ಗ್ರಹಿಕೆಗೆ ಮೀರಿದ್ದಾಗಿತ್ತು. ಸೂಕ್ತ ಮನೋಭಾವದಿಂದ ನೋಡಿದಾಗ ಮರಿಯಳು ತನ್ನ ಕರ್ತನ ಮೇಲೆ ಒಂದು ದೊಡ್ಡ ಮೊತ್ತವನ್ನು ಖರ್ಚುಮಾಡಿದ್ದು ಸಮಂಜಸವಾಗಿತ್ತು. ಅಂದರೆ ಆ ದಿನದ ಯಾಜಕರ ಮತ್ತು ಶಾಸ್ತ್ರಿಗಳ ದೂಷಣೆ ಅಪಚಾರಗಳು ಆತನ ತಲೆಯ ಮೇಲೆ ಬಂದಿದ್ದು ಮತ್ತು ಸ್ವಲ್ಪ ಸಮಯದಲ್ಲೇ ಅದರ ಮೇಲೆ ಮುಳ್ಳಿನ ಕಿರೀಟವು ಇಡಲಾಗುತ್ತಿರಲು, ಆತನ ನೈಜ ಯೋಗ್ಯತೆಯನ್ನು, ಆತನ ನೈಜ ವೈಭವವನ್ನು, ಆತನ ಅರಸುತನವನ್ನು, ಅಂದರೆ ಆತನು ನಿಜವಾಗಿಯೂ ದೇವಕುಮಾರ –ನೆಂಬುದನ್ನು ಅರಿತುಕೊಂಡಿದ್ದವಳಿಂದ ಗೌರವಿಸಲ್ಪಡುವದು ಬಹು ಸೂಕ್ತವಾಗಿತ್ತು. ಪಾಲೆಸ್ತೀನಾ ದೇಶದ ತಗ್ಗುಬೆಟ್ಟಗಳನ್ನು ತುಳಿದಾಡಿ ಆ ಸಮಯದಲ್ಲಿ ಬಹುವಾಗಿ ಸೊರಗಿಹೋಗಿದ್ದು,

ಇಕ್ಕಟ್ಟಾದ ಒರಟು ದಾರಿಯನ್ನು ತುಳಿದಾಡುವ ಪ್ರತಿಷ್ಠಿತರ ಕಾಲುಗಳನ್ನು ಸೂಚಿಸಲ್ಪಡುವ ಕಾಲುಗಳನ್ನು ಅಲ್ಲದೆ ಶೀಘ್ರದಲ್ಲೇ ಶಿಲುಬೆಯ ಮೇಲೆ ಮೊಳೆಗಳಿಂದ ತಿವಿಸಿಕೊಳ್ಳಲ್ಪಡುವದರಲ್ಲಿದ್ದ ಕಾಲುಗಳನ್ನು ಅಂದು ಆತನನ್ನು ಅರಿತುಕೊಂಡು ಆತನಲ್ಲಿ ಭರವಸವಿಟ್ಟಿದ್ದಂಥ ಒಬ್ಬರಿಂದ ಗೌರವಿಸಲ್ಪಡುವದು ಸಹ ಬಹು ಸೂಕ್ತವಾಗಿತ್ತು. ಅವರು ಒಡೆಯನನ್ನು ಪ್ರೀತಿಸಿ ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಬಯಸುತ್ತಿದ್ದರು.

ನಡೆದ ಸಂಗತಿಯ ಬಗ್ಗೆ ಸೂಕ್ತವಾದ ಮನೋಭಾವವನ್ನು ಪಡೆದಾಗ ಕರ್ತನು ವ್ಯಕ್ತಪಡಿಸಿದ ವಿಷಯವಾಗಿ ನಿಜವಾಗಿಯೂ ನಮಗೆ ಅನುಕಂಪವುಳ್ಳವರಾಗಲು ಸಾಧ್ಯ. “ಈಕೆಯನ್ನು ಬಿಡು,” ಈಕೆಗೆ ತೊಂದರೆ ಕೊಡಬೇಡ, ಅದನ್ನು ಈಕೆಯಿಂದ ಕಿತ್ತುಕೊಳ್ಳಬೇಡ. ಮೊದಲ ಯತ್ನವಾಗಿ ಆ ಜಟಮಾಂಸಿ ಸುಗಂಧ ತೈಲವನ್ನು ಬಳಸಲು ಮುಂದಾದಾಗ ಅಪೋಸ್ತಲರು ಅದನ್ನು ಉಳಿಸಿಕೊಂಡು ಮಾರುವ ಬಯಕೆಯುಳ್ಳವರಾಗಿದ್ದಂತಿತ್ತು ಮತ್ತು ನಮ್ಮ ಕರ್ತನು ಅವರಿಗೆ–ಆಕೆಯನ್ನು ಬಿಡಿರಿ ಅವಳಿಗೆ ಅಡ್ಡಿಮಾಡ ಬೇಡಿರಿ ಎಂದು ಹೇಳಿ ಅವರಿಗೆ ಅಡ್ಡಿಪಡಿಸಿ ಆ ಉದ್ದೇಶಕ್ಕಾಗಿ ಅದನ್ನು ಬಳಸಿಕೊಳ್ಳದಂತೆ ಅವರ ಮನವೊಲಿಸಿದಂತಿತ್ತು.

ಸುಗಂಧ ತೈಲವನ್ನು ಕೊಂಡುತಂದಿದ್ದ ಮರಿಯಳು ಆ ದಿನದಿಂದ ಈಗಿನ ವರೆಗೂ ಕರ್ತನ ಜನರಲ್ಲಿನ ಕ್ರಿಸ್ತೀಯ ಗುಣದ ಒಂದು ಸೊಗಸಾದ ಅಂಶವನ್ನು ಪ್ರತಿನಿಧಿಸಿರುವಳು. ಯೇಸುವು ಹಾಗು ಅಪೋಸ್ತಲರೂ ಸಹ ವ್ಯಕ್ತಪಡಿಸಿದಂತೆ ಒಂದು ವಿಶಾಲ ಅರ್ಥದಲ್ಲಿ ಕ್ರಿಸ್ತನ ಸಭೆಯು “ಕ್ರಿಸ್ತನ ದೇಹವಾಗಿರುವದು.” ಮರಿಯಳನ್ನು ಸೂಚಿಸುವ ವರ್ಗದವರು ಸುಗಂದ ತೈಲವನ್ನು ನಿಜವಾಗಿಯೂ ಒಂದು ದೊಡ್ಡ ಮೊತ್ತದ ಹಣದ ಮೂಲಕವಾಗಿ ಕೊಂಡು ತಂದವರಾಗಿದ್ದು ಅದನ್ನು ತಮಗಾಗಿ ಬಳಸಿಕೊಳ್ಳದೆ ಕ್ರಿಸ್ತನ ದೇಹವಾದ ಅಭಿಷಕ್ತ ಸಭೆಯು ಸೇವೆಗಾಗಿ ಬಳಸುವಂಥವರಾದ ಇವರು ಈಗಲೂ ನಮ್ಮೊಂದಿಗಿರುವರು ಅಲ್ಲದೆ ಹದಿನೆಂಟು ಶತಮಾನಗಳಿಂದಲೂ ಸಭೆಯಲ್ಲಿ ಇರುವರು. ಕೇವಲ ಆ ದೇಹದ ಶಿರಸ್ಸು ಮಾತ್ರ ಸುಗಂಧ ತೈಲದಿಂದ ಅಭಿಷೇಕಹೊಂದಿ ಗೌರವಿಸಲ್ಪಟ್ಟು ಆದರಣೆಹೊಂದಿ ಹರ್ಷ–ಗೊಂಡಿರುವದಲ್ಲದೆ ಅಂದಿನಿಂದ (ಕ್ರಿಸ್ತನ) ಅಂಗಗಳೆಲ್ಲರೂ ಈ ಸುಗಂಧ ತೈಲದ ಮರಿಯಳ ವರ್ಗದವರ ಮೂಲಕವಾಗಿ ಆಶೀರ್ವಾದವನ್ನು ಪಡೆಯುತ್ತಲಿರುವರು. ಈ ವರ್ಗದವರು ಯಾವಾಗಲೂ ವಾಗ್ಮಿಗಳು ಧನಿಕರು ಅಥವಾ ಜ್ಞಾನಿಗಳನ್ನು ಒಳಗೊಂಡಿರುವದಿಲ್ಲ. ಅದರ ಸೇವೆಯು ಡಂಭಾಚಾರ–ವಿಲ್ಲದ್ದಾಗಿದ್ದು ಲೋಕದವರಿಗೆ ಅದು ಬುದ್ಧಿಯಿಲ್ಲದಂತೆಯೂ ಉಪಯೋಗವಿಲ್ಲದಂತೆಯೂ ತೋರುವದು. ಆದರೆ ಕರ್ತನು ಇದನ್ನು ಪ್ರಸಂಶಿಸಿರುವನು ಅಲ್ಲದೆ ಆತನ ದೇಹಕ್ಕೆ ಸೇರಿದವರೂ ಆ ಮೂಲಕವಾಗಿ ಆದರಣೆಹೊಂದಿ ಪುನಶ್ಚೇತನಗೊಂಡವ–ರಾಗಿರುವರು. ಈ ಮರಿಯಳ ವರ್ಗಕ್ಕೆ ಸೇರಿದವರ ಮೇಲೆ ಆಶೀರ್ವಾದವಿರಲಿ!

## ದೇಹದ ಅಂಗಗಳನ್ನು ಗೌರವಿಸುವದು ಶಿರಸ್ಸನ್ನೂ ಗೌರವಿಸಿದಂತಾಗುವದು.

ಈ ವಿಧವಾಗಿ ಆಧರಣೆಹೊಂದಿರುವ ದೇಹದ ಅಂಗಗಳು ಅಂದಿನಿಂದ ಈವರೆಗೂ ಇರುವದಾದರೆ ಈ ಸುವಾರ್ತಾಯುಗದ ಅಂತ್ಯದಲ್ಲಿ ಅದೇ ವಿಧವಾದ ವಿಶೇಷ ಆಶೀರ್ವಾದವು “ಪಾದದ” ಅಂಗಗಳಿಗೂ ಇರುವದೆಂಬುದನ್ನು ನಾವು ಅಪೇಕ್ಷಿಸಬೇಕಲ್ಲವೇ? ನಮ್ಮ ಗ್ರಹಿಕೆಗೆ ಅನುಸಾರವಾಗಿ ನಾವು ಈಗ ಈ ಸುವಾರ್ತಾ ಯುಗದ ಮುಕ್ತಾಯದಲ್ಲಿದ್ದು, ಶಿರಸ್ಸು ಮಹಿಮೆಹೊಂದಿದ್ದು, ಈ ದೇಹದ ಅನೇಕ ಅಂಗಗಳು ತೆರೆಯ ಆಚೆಗೆ ದಾಟಿಹೋಗಿರಲಾಗಿ ಕೇವಲ ಪಾದದ ಅಂಗಗಳು ಇಲ್ಲಿರುವದು. ಬಹುಶಃ ಮರಿಯಳು ನಮ್ಮ ಕರ್ತನ ತಲೆಯು ಸಹಿತವಾಗಿ ಪಾದಗಳಿಗೆ ತೈಲದ ಅಭಿಷೇಕಮಾಡಿದ ಚಿತ್ರಣವು ನಾವು ಈಗಿನ ಕಾಲದಲ್ಲಿ ಅಪೇಕ್ಷಿಸಬಹುದಾದ ಒಂದು ಚಿತ್ರಣದ ಮಾದರಿಯನ್ನು ಒಳಗೊಂಡಿರಬಹುದು. ಅಲ್ಲದೆ ಇಲ್ಲಿ ದೇವರ ಏರ್ಪಾಟಿನಲ್ಲಿರುವ ಒಂದು ಸುಂದರವಾದ ಗುಣಲಕ್ಷಣವು ಕಂಡುಬರುವದು; ಅದೇನಂದರೆ ನಾವೆಲ್ಲರೂ ಮರಿಯಳ ವರ್ಗದವರೂ ಹಾಗು ಪಾದದ ಅಂಗಗಳೂ ಆಗಿರಬಹುದು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ ಮರಿಯಳು ಯೇಸುವಿನ ಪಾದಗಳಿಗೆ ಸೇವೆ ಮಾಡಿದಂತೆ ಕ್ರಿಸ್ತನ ದೇಹದ ಅಂಗವಾಗಿರುವ ಪ್ರತಿಯೊಬ್ಬನೂ ಕೆಲವು ವಿಧದಲ್ಲಿ ಅದೇ ದೇಹದ ಅಂಗಗಳಾಗಿ ಜೊತೆಗಾರ – ರಾಗಿರುವ ಪಾದದ ಅಂಗಗಳಿಗೆ ಸೇವೆಮಾಡಬಹುದು.

ನಿಜವಾದ ಕರ್ತನ ಜನರಲ್ಲಿನ ಪ್ರತಿಯೊಬ್ಬನೂ ಈ ವಿಷಯವನ್ನು ಅಧ್ಯಯನ ಮಾಡಿದವನಾಗಿ ದೇವರ ಕೃಪೆಯಿಂದ ತಾನು ಮರಿಯಳ ವರ್ಗಕ್ಕೆ ಸೇರಿದವನಾಗಿ ಬಹು ಬೆಲೆಯುಳ್ಳ ಸುಗಂಧ ತೈಲವನ್ನು ಕೊಂಡುಕೊಂಡು ಬಂದು ಅದನ್ನು ಸಭೆಯೆಂಬ ಕ್ರಿಸ್ತನ ದೇಹದ ನಿಜವಾದ ಪಾದದ ಅಂಗಗಳಿಗೆ ಯಥೇಚ್ಛವಾಗಿ ಹಚ್ಚಲಿ. ಇದು ಪ್ರೀತಿ ಸಹಾನುಭೂತಿ ಕರುಣೆ ವಿನಯ ತಾಳ್ಮೆ ಉಪಕಾರ ಮತ್ತು ಆದರಣೆ ತೋರುವದು ಎಂಬ ಅರ್ಥವನ್ನು ಕೊಡುತ್ತದೆ. ಇದು ಪವಿತ್ರಾತ್ಮನ ಫಲಗಳು ಹಾಗು ಕೃಪಾವರಗಳೆಲ್ಲವು ವಿಫುಲವಾಗಿ ಬೆಳೆದು ವೃದ್ಧಿಯಾಗುವದೆಂಬ ಅರ್ಥವನ್ನು ಕೊಡುತ್ತದೆ. ಇವುಗಳೆಲ್ಲವನ್ನು ಜತೆಗೂಡಿಸಿದಾಗ ಇದರ ಹೆಸರು ಪ್ರೀತಿ ಎಂದಾಗುವದು.

ಪ್ರಿಯ ಒದುಗರೇ, ಈ ಪಾಠದಲ್ಲಿ ಮರಿಯಳು ಮಾಡಿದಂತೆ ಮಾಡುವದು ನಮಗೆ ಅಸಾಧ್ಯವಾದಾಗ್ಯೂ ಪ್ರತಿಯೊಬ್ಬನಿಗೂ ಒಬ್ಬರಿಗೊಬ್ಬರು ಇದಕ್ಕಿಂತಲೂ ಹೆಚ್ಚು ಮುಖ್ಯವಾದ ಸಂಗತಿಗಳನ್ನು ಮಾಡುವ ಸೌಭಾಗ್ಯವಿರುವದು. ಯಾಕಂದರೆ ಕ್ರಿಸ್ತನ ಸಹೋದರರು ಈ ಲೋಕದಲ್ಲಿದ್ದು ಆತನವರಾಗಿ ದೇಹದಲ್ಲಿನ ಪಾದದ ಅಂಗಗಳಾಗಿರುವರು. ಆಕೆಯದು ಅಕ್ಷರಶಃ ಸುಗಂಧ ತೈಲವಾಗಿತ್ತು; ಕಾಲಾನಂತರದಲ್ಲಿ ಅದರ ಉತ್ಕೃಷ್ಟತೆಯನ್ನು ಅದು ಕಳೆದುಕೊಂಡಿರುವದು; ಆದರೆ ನಾವು ಒಬ್ಬರಿಗೊಬ್ಬರು ತೋರಿಸಬಹುದಾದ ಕರುಣೆ ಹಾಗು ಉಪಕಾರದ ಸಣ್ಣಸಣ್ಣ ಕಾರ್ಯಗಳು ಕರ್ತನ ಎಣಿಕೆಯಲ್ಲಿ ಎಂದೂ ಅದರ

ಫಲವನ್ನು ಕಳಕೊಳ್ಳಲಾರದು ಮತ್ತು ಪ್ರತಿಯೊಬ್ಬನ ಎಣಿಕೆ-ಯಲ್ಲಿಯೂ ಎಂದೂ ಅದರ ಪರಿಮಳವನ್ನು ನಿರಂತರವಾಗಿ ಕಳಕೊಳ್ಳಲಾರದು. ಜೀವನದ ಅಲ್ಪ ಸಂಗತಿಗಳು, ಸಣ್ಣಸಣ್ಣ ಮಾತುಗಳು, ಸಣ್ಣಸಣ್ಣ ಸಾಂಕೇತಿಕವಾದ ಕಾರ್ಯಗಳು, ದಯಾಪೂರಿತವಾದ ನೋಟಗಳು, ಸಣ್ಣಸಣ್ಣ ಸಹಾಯಗಳು ಇವುಗಳೇ ನಮಗೆ ಸಾಧ್ಯವಾಗುವಂಥವುಗಳು, ಅಂದರೆ ನಾವು ಒಬ್ಬರಿಗೊಬ್ಬರು ಹಚ್ಚುವ ನಮ್ಮ ಸುಗಂಧ ದ್ರವ್ಯಗಳು.

## "ಒಬ್ಬನ ಕಾಲುಗಳನ್ನು ಮತ್ತೊಬ್ಬನು ತೊಳೆಯುವದು"

ಪೌರಾತ್ಯ ದೇಶಗಳಲ್ಲಿ ಹಿಂದಿನ ಕಾಲದಲ್ಲಿ ಕಾಲುಗಳನ್ನು ತೊಳೆಯುವದು ಆದರಿಸುವ ದೃಷ್ಟಿಯಿಂದ ಬಹು ಅವಶ್ಯವಾಗಿತ್ತು. ಹೀಗಾಗಿ ಒಬ್ಬರ ಕಾಲನ್ನು ಒಬ್ಬರು ತೊಳೆಯುವದು ಅತಿ ಕೀಳಾದ ಕೆಲಸದಲ್ಲಿಯೂ ಒಬ್ಬರನ್ನೊಬ್ಬರು ಆದರಿಸಿ ಪುನಶ್ಚೇತನ ಗೊಳಿಸುವದನ್ನು ಸೂಚಿಸುವದು. ಇದು ನಮ್ಮ ಕರ್ತನು ನಮಗಾಗಿ ನೀಡಿದ ಪಾಠದ ಸಾರಾಂಶವಾಗಿದೆ; ಅದೇನಂದರೆ ಒಬ್ಬರಿಗೊಬ್ಬರು ಸೇವೆಮಾಡಿ ಒಬ್ಬರನ್ನೊಬ್ಬರು ಆದರಿಸುವದರ ಮೂಲಕ ಒಬ್ಬರಿಗೊಬ್ಬರು ಸಹಾಯ ಮಾಡುವಂಥ ಎಂಥಾ ಕನಿಷ್ಠವಾದ ಸೇವೆಗೆ ಸಂಬಂದಿಸಿದ ಯಾವುದೇ ಅವಕಾಶ-ವನ್ನಾದರೂ ಪಡೆಯಲು ನಾವು ಹರ್ಷವುಳ್ಳವರಾಗಬೇಕೆಂಬದು. ಈಗ ಇದನ್ನು ನಮ್ಮ ಪಾಠದಲ್ಲಿ ವ್ಯಕ್ತಪಡಿಸಿರುವ ಸಂಗತಿಗೆ ಅನ್ವಯಮಾಡೋಣ. ಮರಿಯಳು ನಮ್ಮ ಕರ್ತನ ಪಾದಗಳನ್ನು ಸುಗಂಧ ತೈಲದಿಂದ ತೊಳೆದಿದ್ದಳು, ಮತ್ತು ಸಭೆಯಲ್ಲಿನ ಅತಿ ಪ್ರೀತಿಪೂರ್ಣರೂ ಶ್ರದ್ಧೆಭಕ್ತಿಯುಳ್ಳವರೂ ಆದ ಮರಿಯಳ ವರ್ಗಕ್ಕೆ ಸೇರಿದವರು ಒಬ್ಬರಿಗೊಬ್ಬರು ಸಹಾಯಮಾಡಿ ಒಬ್ಬರ ಕಾಲನ್ನು ಒಬ್ಬರು ತೊಳೆಯಬೇಕಾಗಿರುವದು; ಅವರು ಹೀಗೆ ಮಾಡಬೇಕಿರುವದು ಕಲ್ಪಿಸಿಕೊಳ್ಳಬಹುದಾದ ಅತಿ ಒರಟಾದ ಇಲ್ಲವೇ ಅತಿ ನಾಜೂಕಿಲ್ಲದ ವಿಧಾನದಲ್ಲಿರಬಾರದು, ಆದರೆ ಒಬ್ಬರಿಗೆ ಮತ್ತೊಬ್ಬರ ಮೇಲಿರುವ ಪ್ರೀತಿಶ್ರದ್ಧಾಭಕ್ತಿಯ ಮೂಲಕ ಪ್ರೇರಿತರಾಗಿ ಒಬ್ಬರ ಕಾಲನ್ನು ಮತ್ತೊಬ್ಬರು ಮರಿಯಳು ಕೊಂಡುತಂದಿದ್ದ ಜಟಮಾಂಸಿ ಸುಗಂಧತೈಲದಿಂದ ಸೂಚಿತವಾದ ಕರುಣೆ ಅನುಪಾಪ ಪ್ರೀತಿ ಶ್ಲಾಘನೆಯ ಮೂಲಕವಾಗಿ ತೊಳೆಯಬೇಕು; ಅವರು ಒಬ್ಬರನ್ನೊಬ್ಬರು ಆದರಿಸುವದು ಪ್ರೀತಿ ಹಾಗು ವಿಜ್ಞಾಪನೆಗಳ ಮೂಲಕವಾಗಬೇಕು. ಇದು ತನ್ನ ಒಡೆಯನ ಪಾದಗಳನ್ನು ಒರೆಸಲು ಮರಿಯಳು ಇಳಿಬಿದ್ದ ತನ್ನ ತಲೆಯ ಗುಂಗುರು ಕೂದಲನ್ನು ಉಪಯೋಗಿಸಿದ್ದರಲ್ಲಿ ಸೂಚಿತವಾಗಿರುವದು.

ನಾವು ಈ ಪ್ರೀತಿಯ ಅಂದರೆ ಈ ಜಟಮಾಂಸಿ ಸುಗಂಧ ತೈಲದ ಮರಿಯಳ ಪ್ರೀತಿ ಅನುಕಂಪಗಳು ಕರ್ತನ ದೇಹದ ಅಂಗಗಳಾದವರಲ್ಲಿ ಬೆಳೆಯುತ್ತಿರುವದರ ಕೆಲವು ಪುರಾವೆಗಳನ್ನು ನೋಡುತ್ತಿದ್ದೇವೆ; ಕರ್ತನ ಅಭಿಷಕ್ತರಿಗೆ ಲೋಕ ಶರೀರ ಹಾಗು ದೇವವಿರೋಧಿಯ ಹಗೆತನವಿರುವದನ್ನು ಅವರು ಅರಿತುಕೊಂಡವರಾಗಿ ಅವರೆಲ್ಲರೂ ಒಬ್ಬರ ವಿಷಯದಲ್ಲಿ ಮತ್ತೊಬ್ಬರು ಅಧಿಕವಾದ ಶ್ರದ್ಧಾಭಕ್ತಿಯುಳ್ಳವರಾಗಿ, ಒಬ್ಬರಿಗೊಬ್ಬರು ಹೆಚ್ಚಾದ ಕಾಳಜಿ ಪ್ರೀತಿ ಅನುಕಂಪ ತೋರುವ, ಹಾಗೂ ಒಬ್ಬರ ಬಗ್ಗೆ ಒಬ್ಬರು ನಡೆನುಡಿಗಳಲ್ಲಿ ಕರುಣೆ ಔದಾರ್ಯ ತೋರುವ ಪ್ರವೃತ್ತಿಯಲ್ಲಿರುವರು. ನಾವು ಈ ವಿಷಯದಲ್ಲಿ ಹರ್ಷಿಸುವವರಾಗಿದ್ದು, ಪ್ರತಿಷ್ಠಿತರು ಕೃಪೆಯಲ್ಲಿ ಬೆಳೆಯುತ್ತಿರುವ-ರೆಂಬುದಕ್ಕೆ ಇದಕ್ಕಿಂತಲೂ ಉತ್ತಮವಾದ ಸಾಕ್ಷ್ಯಾಧಾರಗಳು ಇರುವದು ನಮಗೆ ತಿಳಿದಿರುವದಿಲ್ಲ. ಮನೆಯಲ್ಲೆಲ್ಲಾ ಪ್ರೀತಿಯೆಂಬ ಪರಿಮಳವನ್ನು ನಾವು ತುಂಬಿಸುವವರೆಗೂ ಸತ್ಕಾರ್ಯಗಳು ಮುಂದುವರೆಯುತ್ತಿರಲಿ; ಕ್ರೈಸ್ತರು ಒಬ್ಬರನ್ನೊಬ್ಬರು ಹೇಗೆ ಪ್ರೀತಿಸುತ್ತಿರುವರೆಂಬುದನ್ನು ಲೋಕವೆಲ್ಲಾ ತಿಳಿದುಕೊಳ್ಳುವ-ವರೆಗೂ ಇದು ಮುಂದುವರೆಯಲಿ; ಅಂದರೆ ಇದು ಒಂದು ಸಂಕುಚಿತ ಇಲ್ಲವೇ ಪಕ್ಷಪಾತ ಮನೋಭಾವದಿಂದ ನಡೆಯ-ಕೂಡದು, ಆದರೆ ಒಂದು ವಿಶಾಲಾರ್ಥದಲ್ಲಿ ತಂದೆಯನ್ನು ಪ್ರೀತಿಸಿ ಆತನ ಮಾರ್ಗಗಳಲ್ಲಿ ನಡೆಯಲು ಪರಿಶ್ರಮಿಸುತ್ತಿರುವವರೆಲ್ಲರನ್ನು ಕ್ರಿಸ್ತನು ಪ್ರೀತಿಸುತ್ತಿರುವನೆಂಬುದು ತೋರ್ಪಡಬೇಕು.

## ನಾವು ಈಗಲೇ ಇದನ್ನು ಮಾಡೋಣ

ಮರಿಯಳು ಏನಾದರೂ ಮತ್ತೊಂದು ವಾರದ ವರೆಗೆ ಕಾದುಕೊಂಡಿದ್ದಲ್ಲಿ ಆಕೆಯು ಆ ಸುಗಂಧ ತೈಲವನ್ನು ತನ್ನ ಮೇಲೆಯೇ ಹಾಕಿಕೊಳ್ಳಬೇಕಾಗುತ್ತಿತ್ತು, ಕರ್ತನ ಮೇಲೆಯಲ್ಲ. ಈ ಸಂಗತಿ ನಡೆದ ಒಂದು ವಾರದ ಸಮಯದೊಳಗೆ ನಮ್ಮ ಕರ್ತನು ಹೂಣಲ್ಪಟ್ಟಿದ್ದನು, ಸಮಾಧಿಗೆ ಮುದ್ರೆ ಹಾಕಲ್ಪಟ್ಟಿತ್ತು, ರೋಮಾಯರ ಸಿಪಾಯಿಗಳು ಅದರ ಮುಂದೆ (ಕಾಯುತ್ತಾ) ನಿಂತುಕೊಂಡಿದ್ದರು; ಆಗ ಆತನ ಮೃತ ದೇಹದ ಮೇಲೆಯಾದರೂ ಅದನ್ನು ಹೊಯ್ಯುವ ಅವಕಾಶವಿರುತ್ತಿರಲಿಲ್ಲ; ಆಕೆಯು ಆ ಅವಕಾಶವನ್ನು ಎಷ್ಟು ಉತ್ತಮವಾಗಿ ಬಳಸಿ - ಕೊಂಡಿದ್ದಳೆಂದರೆ ಆತನು ಇನ್ನೂ ತನ್ನ ಅತಿಥಿಯಾಗಿರು - ವಾಗಲೇ ಆಕೆಯು ಕರ್ತನಿಗೆ ತನ್ನ ಶ್ರದ್ಧೆಭಕ್ತಿಯನ್ನು ತೋರಿಸಿದ್ದಳು. ಇದರ ಸಮಾನಾರ್ಥವು ಇಲ್ಲಿರುವದು: ಕ್ರಿಸ್ತನ ದೇಹದ ಅಂಗಗಳಾದವರೆಲ್ಲರೂ ತಮ್ಮ ಪಾಲಿನ ಶ್ರಮಸಂಕಟಗಳ ಅನುಭವವನ್ನು ಪೂರ್ಣಗೊಳಿಸಿ ಮಾರ್ಪಟ್ಟು ತೆರೆಯ ಆಚೆಯ ಕಡೆಗೆ ದಾಟಿಹೋಗುವಂತಾಗಲು ಇನ್ನು ಬಹು ಕಾಲವಿರುವದಿಲ್ಲ.

ನಮ್ಮ ಸುಗಂಧ ತೈಲದ ಭರಣಿಯನ್ನು ತಂದು ಅದರಲ್ಲಿರುವದನ್ನು ಕ್ರಿಸ್ತನ ದೇಹದ ಅಂಗಗಳಾದ ನಮ್ಮ ಪ್ರಿಯರ ಅಂದರೆ ಕ್ರಿಸ್ತನ ಪಾದದ ಅಂಗಗಳಾದವರ ಮೇಲೆ ಸುರಿಯಲು ವಿಳಂಬ ಮಾಡಬಾರದೆಂದು ಜ್ಞಾನವು ನಮಗೆ ಹೇಳುವದು. ಅವರು ನಮ್ಮನ್ನು ಗಮನಿಸದಿದ್ದರೆ ಇಲ್ಲವೇ ನಮ್ಮ ಬಗ್ಗೆ ಯೋಚಿಸದಿದ್ದರೆ ಅಥವಾ ಪಾದದ ಅಂಗಗಳಾದ ನಮ್ಮ ಮೇಲೆ ಯಾವದನ್ನಾದರೂ ಸುರಿಯದಿದ್ದರೆ ಚಿಂತೆಯಿಲ್ಲ; ನಾವು ನಮ್ಮ ಪಾತ್ರವನ್ನು ನಿರ್ವಹಿಸುವವರಾಗೋಣ, ನಾವು ಮರಿಯಳ ವರ್ಗದವರಾಗಿರೋಣ, ಕೆಲವು ಮಂದಿ ಶಿಷ್ಯರು ನಮ್ಮ ಪ್ರೀತಿ ಹಾಗು ನಮ್ಮ ಶ್ರದ್ಧೆಭಕ್ತಿಯ ವಿಷಯವಾಗಿ ತಪ್ಪಾಗಿ ತಿಳಿದು ನಮ್ಮನ್ನು ದುಂದುಗಾರರೆಂದು ಆಕ್ಷೇಪಿಸಿದರೂ ಸರಿ ನಾವು ಸುಗಂಧ ತೈಲವನ್ನು ಇತರರ ಮೇಲೆ ಸುರಿದು ಕರ್ತನ

ಸಭೆಯೆಂಬ ಮನೆಯು ಸುಗಂಧ ಪರಿಮಳದಿಂದ ತುಂಬಿಸೋಣ; ಒಡೆಯನು ಅಂತಿಮವಾಗಿ "ಈಕೆಯನ್ನು ಬಿಡು, ಈಕೆ ತನ್ನ ಕೈಲಾಗುವಷ್ಟು ಮಾಡಿದ್ದಾಳೆ" ಎಂದು ಮತ್ತೆ ಹೇಳುವನೆಂಬು-ವದನ್ನು ಅವರು ಅರ್ಥಮಾಡಿಕೊಳ್ಳದೆ ಹೋಗಿರುವರು. ನಮ್ಮ ಕರ್ತನ ಎಣಿಕೆಯಲ್ಲಿ ಈ ಜಟಮಾಂಸಿ ಸುಗಂಧ ತೈಲ ಹಾಗು ಅಭಿಷೇಕವು ಏನಂದರೆ ನಾವು ಮಾಡಲು ಸಾಧ್ಯವಿರುವದು ಇದೇ; ಇದಕ್ಕಿಂತಲೂ ಹೆಚ್ಚಿನದು ಅಥವಾ ಉತ್ತಮವು ಯಾವದೂ ಇರುವುದಿಲ್ಲ. ಅದು ಪ್ರೀತಿಯನ್ನು, ಅಂದರೆ ಮಹಾ ಪ್ರೀತಿಯನ್ನು ಸೂಚಿಸುತ್ತದೆ-ಹಾಗೂ "ಪ್ರೀತಿಯಿಂದಲೇ ಧರ್ಮಶಾಸ್ತ್ರವೆಲ್ಲಾ ನೆರವೇರುತ್ತದೆ."

"ನಾವು ಪರಸ್ಪರ ಹಿತಚಿಂತಕರಾಗಿರೋಣವೆಂದು ಅಪೋಸ್ತಲನು ಹೇಳಿದ್ದಾನೆ. ಅಂದರೆ ಒಬ್ಬನು ಮತ್ತೊಬ್ಬನ ಬಲಹೀನತೆಯನ್ನು ಪರಿಗಣನೆಗೆ ತೆಗೆಯೋಣವಾಗಲಿ, ಒಬ್ಬನು ಮತ್ತೊಬ್ಬನಿಗಿರುವ ಶೋಧನಾಪರೀಕ್ಷೆಗಳನ್ನು ಪರಿಗಣನೆಗೆ ತೆಗೆದುಕೊಳ್ಳೋಣವಾಗಲಿ, ಒಬ್ಬರು ಮತ್ತೊಬ್ಬರಿಗಿರುವ ಆಮಿಷ ಆಕರ್ಷಣೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಿ; ಮತ್ತೊಬ್ಬನು ಲೋಕ ಶರೀರ ಹಾಗೂ ದೇವವಿರೋಧಿಗೆ ವಿರುದ್ಧವಾಗಿ ಮಾಡುತ್ತಿರುವ ಒಳ್ಳೆಯ ಹೋರಾಟವನ್ನು ಪರಿಗಣನೆಗೆ ತೆಗೆದುಕೊಳ್ಳಲಿ, ಮತ್ತೊಬ್ಬನು ಇಕ್ಕಟ್ಟಾದ ಮಾರ್ಗದಲ್ಲಿ ಅನುಭವಿಸುತ್ತಿರುವ ಕಷ್ಟಗಳನ್ನು, ಆತನಿಗೆ ಒಳಗೂ ಹೊರಗೂ ಇರುವ ಹೋರಾಟವನ್ನು ಪರಿಗಣನೆಗೆ ತೆಗೆದುಕೊಳ್ಳಲಿ; ನಾವು ಹೀಗೆ ಮಾಡುವಾಗ ಇದು ನಮ್ಮ ಹೃದಯಗಳಲ್ಲಿ ಅನುಕಂಪವನ್ನು ಅಂದರೆ ಒಂದೇ ದೇಹದ ಅಂಗಗಳಾದ ನಮ್ಮ ಜೊತೆಗಾರರೆಲ್ಲರ ಮೇಲೆ ಶುದ್ಧವೂ ಉತ್ತಮವೂ ಆದ ಬಹು ಬೆಲೆಯುಳ್ಳ ಸುಗಂಧ ತೈಲವನ್ನು ಸುರಿಯುವುದರಲ್ಲಿ ದೊರೆಯುವ ಉಲ್ಲಾಸವನ್ನು, ಉಂಟುಮಾಡುವ ಅನುಕಂಪವನ್ನು ಪರಿಗಣನೆಗೆ ತೆಗೆದುಕೊಳ್ಳೋಣ.

ಯಾರೋ ಒಬ್ಬನು "ಉತ್ತೇಜಕರ ಸಮಾಜ" (ಸೊಸೈಟಿ ಆಫ್ ಎನ್ಕರೇಜರ್ಸ್) ಎಂಬ ದೊಡ್ಡ ಸಮಾಜದ ವಿಷಯವಾಗಿ ಮಾತನಾಡಿರುವನು. ಈ ಸಮಾಜದವರು ಜೀವನದ ಹಾದಿಯಲ್ಲಿ ನಡೆದು ಕಾಲೊತ್ತಿನ ಗಾಯದಿಂದ ಬಳಲಿದವರಿಗೆ ಬಹುವಾಗಿ ಸಹಾಯಮಾಡಿ ಅವರನ್ನು ಉತ್ತೇಜಿಸಿ ಮೇಲಕ್ಕೆತ್ತಿರುವರು. ಇದರ ಸದಸ್ಯರನ್ನು ನೋಡಿದಾಗ ಇದೇನೂ ಒಂದು ವಿಶೇಷವಾದ ಸಮಾಜವಾಗಿರುವದಿಲ್ಲ; ಆದರೆ ಇದು ಕರ್ತನ ದೃಷ್ಟಿಯಲ್ಲಿ ಹಾಗು ಇದರಿಂದ ಸಹಾಯ ಪಡೆದು ಉತ್ತೇಜಿತರಾದವರ ದೃಷ್ಟಿಯಲ್ಲಿ ಇದು ಒಂದು ಭವ್ಯವಾದ ಸಮಾಜವಾಗಿರುತ್ತದೆ. ಜಟಮಾಂಸಿ ಸುಗಂಧ ತೈಲದ ಮರಿಯಳು ಈ ಉತ್ತೇಜಕರ ಸಮಾಜದ ಒಬ್ಬ ಪ್ರಾಮುಖ್ಯ ಸದಸ್ಯಳಾಗಿರುತ್ತಿದ್ದಳೆಂದು ಹೇಳಬಹುದು. ನಮ್ಮ ಪ್ರಿಯ ಕರ್ತನು ಆಗಲೇ ಪ್ರಾರಂಭವಾಗಿದ್ದ ವಾರದ ದಿನಗಳಲ್ಲಿ ಶಿಲುಬೆಯ ಮರಣದಿಂದ ಕೂಡಿದ ಕಠಿಣವಾದ ನ್ಯಾಯ ವಿಚಾರಣೆಯನ್ನು ಎದುರಿಸಲು ಯೋಚಿಸುತ್ತಿದ್ದದ್ದನ್ನೂ ಹಾಗೂ ಮರಿಯಳು ತೋರ್ಪಡಿಸಿದ ಪ್ರೀತಿ ಶ್ರದ್ಧೆಭಕ್ತಿಯು ಆತನಿಗೆ ಒಂದು ವಿಶೇಷ ಉತ್ತೇಜನಕರವಾಗಿಯೂ ಮತ್ತು ಪುನಶ್ಚೇತನಕರ-ವಾಗಿಯೂ ಇತ್ತೆಂಬುದನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಲು ಸಾಧ್ಯ. ಆತನನ್ನು ಅರ್ಥಮಾಡಿಕೊಂಡಿದ್ದವರು ಬಹು ಅಲ್ಪ ಮಂದಿಯೆಂದು ತೋರುತ್ತದೆ! ಆತನ ಶಿಷ್ಯರೂ ಸಹ ಆ ಸನ್ನಿವೇಶವನ್ನು ಅರಿತುಕೊಂಡಿರಲಿಲ್ಲ. ಕನಿಷ್ಠಪಕ್ಷ ಇಲ್ಲಿ ಆತನನ್ನು ಪ್ರೀತಿಸುವ ಒಬ್ಬರಿದ್ದು ಅವರು ಆತನಲ್ಲಿ ಭರವಸವಿಟ್ಟಿದ್ದರು. ಇದು ಆತನಿಗೆ ತನ್ನ ಪ್ರಯಾಣದ ಉಳಿದ ದಿನಗಳಿಗೆ ಧೈರ್ಯಸ್ಥೈರ್ಯ-ಗಳನ್ನು ತಂದುಕೊಟ್ಟಿತ್ತೆಂಬುದರಲ್ಲಿ ಸಂದೇಹವಿಲ್ಲ.

## ಸತ್ಯವನ್ನು ಒರಟಾಗಿ ಹೇಳಿರುವದು

ಒಬ್ಬರನ್ನೊಬ್ಬರು ಆದರಿಸಿ ಉತ್ತೇಜನಗೊಳಿಸಲು ಬಳಸಿ ಕೊಳ್ಳುವಂಥ ಅವಕಾಶದ ಬಗ್ಗೆ ಒಬ್ಬ ಲೇಖಕನು ಮನತಟ್ಟುವಂತೆ ಹೀಗೆ ಹೇಳಿರುವನು: "ನಿನ್ನ ಪ್ರೀತಿ ಕೋಮಲತೆಯೆಂಬ ಸುಗಂಧ ತೈಲ ಭರಣಿಯನ್ನು ನಿಮ್ಮ ಮಿತ್ರರು ಸಾಯುವವರೆಗೂ ಮುಚ್ಚಿಡಬೇಡಿರಿ. ಅವರ ಜೀವನವನ್ನು ಹರ್ಷದಿಂದ ತುಂಬಿಸಿರಿ. ಅವರು ಕೇಳಲು ಸಾಧ್ಯವಿರುವವರೆಗೂ ಉತ್ತೇಜನಕರವಾದ ಮೆಚ್ಚುಗೆಯ ಮಾತುಗಳನ್ನಾಡಿರಿ... ನನ್ನ ತಲೆಯ ಮೇಲೆ ಸುರಿಯಲು ಪ್ರೀತಿ ಅನುಕಂಪವೆಂಬ ಪರಿಮಳ ತುಂಬಿರುವ ಸುಗಂಧ ತೈಲದ ಭರಣಿಯನ್ನು ನನ್ನ ಮಿತ್ರರು ಹಾಗೆಯೇ ಇಟ್ಟುಕೊಂಡದ್ದೇ ಆದಲ್ಲಿ ಅದು ನನಗೆ ಅಗತ್ಯವಾದಲ್ಲಿ ನಾನು ಕಷ್ಟದಿಂದ ಸೊರಗಿಹೋದ ಗಳಿಗೆಯಲ್ಲಿ ಅವರು ಅದನ್ನು ಹೊರತಂದು ಅದನ್ನು ತೆರೆದು ನಾನು ಅದರ ಮೂಲಕವಾಗಿ ಪುನಶ್ಚೇತನಗೊಂಡು ಹರ್ಷವುಳ್ಳವನಾಗಲು ಇಚ್ಛಿಸುತ್ತೇನೆ. ಪ್ರೀತಿ ಅನುಕಂಪಗಳ ಮಧುರತೆಯಿಲ್ಲದ ಜೀವನಕ್ಕೆ ಬದಲಾಗಿ ನಾನು ನಿಜವಾಗಿಯೂ ಹೂವುಗಳಿಲ್ಲದ ಒಂದು ಸರಳವಾದ ಶವಪೆಟ್ಟಿಗೆಯಲ್ಲಿ ಹೊಗಳಿಕೆ ಗುಣಗಾನಗಳಿಲ್ಲದ ಅಂತ್ಯ-ಸಂಸ್ಕಾರವನ್ನು ಪಡೆಯಲು ಬಯಸುವೆನು. ಶವಪೆಟ್ಟಿಗೆಯ ಮೇಲಿರುವ ಹೂವುಗಳು (ಜೀವಿತದ) ಹಿಂದಿನ ಮಾರ್ಗಕ್ಕೆ ಕಂಪನ್ನು ಬೀರುವದಿಲ್ಲ."

ಶ್ರೀಮತಿ ಪ್ರೆಟ್ಸನ್ ರವರ "ಆಂಟೀ ಮಾರ್ಟೆಮ್" ಎಂಬ ಕವಿತೆಯು ಇದೇ ಅಂಶವನ್ನು ಹೀಗೆ ವ್ಯಕ್ತಪಡಿಸಿರುವದು-

"ನಾನು ಏನಾದರೂ ಒಂದು ಶ್ಲಾಘನಾ ಧ್ವನಿ,<br>
ಒಂದು ಉತ್ತೇಜನಕಾರೀ ನುಡಿ<br>
ಧೈರ್ಯದಾಯಕವಾದ ಒಂದು ಕೂಗನ್ನಾದರೂ<br>
ಜೀವ ಮರಣಗಳನ್ನು ತೂಗುವ<br>
ಜೀವಿತದ ಹೋರಾಟದ ನಡುವೆ ನಾನು ಕೇಳಿದ್ದೇಯಾದಲ್ಲಿ,<br>
ಮುಂದೆ ಎದ್ದು ಬರಲಿರುವ ಸುಳಿಗಾಳಿಯ ಪರ್ಯಂತರ<br>
ಆಯಾಸಗೊಂಡ ನನ್ನ ಪ್ರಾಣವನ್ನು ಅದು ಹೇಗೆ<br>
ಉತ್ಸಾಹಗೊಳಿಸುತ್ತಿತ್ತು."

## ಸುಗಂಧ ವಾಸನೆಯುಳ್ಳ ಯಜ್ಞಾರ್ಪಣೆ

ಅಪೋಸ್ತಲನು ಒಬ್ಬರಿಗೊಬ್ಬರು ಮಾಡುವ ಸಭಾಸೇವೆಯ ವಿಷಯವಾಗಿ ಮಾತಾಡುವವನಾಗಿ ನಮ್ಮದು ದೇವರಿಗೆ ಒಂದು ಸುಗಂಧ ವಾಸನೆಯ ಯಜ್ಞವಾಗಿರುವದೆಂದು ಹೇಳಿರುವನು,

ಆದರೆ ಆತನು ಇನ್ನೂ ಸೇರಿಸಿ ಹೇಳಿರುವದೆಂದರೆ ಉಲ್ಲೇಖಿಸಿರುವ ಸುವಾರ್ತೆಯು ಕೆಲವರಿಗೆ ಜೀವದಿಂದ ಹುಟ್ಟಿದ ಜೀವವಾಗಿಯೂ ಮತ್ತು ಇತರರಿಗೆ ಮರಣದಿಂದ ಹುಟ್ಟಿದ ಮರಣವಾಗಿರುವದೆಂಬದು. ಇದನ್ನು ಹೇಳಬೇಕಾದರೆ, ಶ್ಲಾಘನೆಯ ಮನೋಭಾವದ ಸೂಕ್ತ ಹೃದಯವುಳ್ಳವರು ಸತ್ಕಾರ್ಯಗಳು, ಕರುಣೆಯುಳ್ಳ ನುಡಿ ಮತ್ತು ಪರಿಶ್ರಮಗಳನ್ನು ಶ್ಲಾಘಿಸುವರು, ಬದಲಾಗಿ ಇದೇ ಸತ್ಕಾರ್ಯಗಳು ತಪ್ಪಾದ ಹೃದಯದ ಸ್ಥಿತಿಯುಳ್ಳವರಲ್ಲಿ ಅಘಾತವನ್ನು ಉಂಟುಮಾಡಿ ಒಂದು ದುರ್ವಾಸನೆಯನ್ನು ಬೀರುವದು. ಇದು ಹೀಗಿರುವದನ್ನು ಅದೆಷ್ಟು ಸಾರಿ ನೋಡಿರುವೆವು ನಾವು. ಕ್ರಿಸ್ತನ ಪಾದದ ಅಂಗಗಳಾದವರಿಗೆ ಸೇವೆಮಾಡಲು ನಾವು ಮಾಡುವ ಅತ್ಯುತ್ತಮವಾದ ಪರಿಶ್ರಮಗಳ ಮೂಲಕವಾಗಿ ಕೆಲವರು ಆದರಣೆಹೊಂದಿ ಪುನಶ್ಚೇತನಗೊಳ್ಳುವರು, ಇತರರು ಕೋಪಿಸಿಕೊಂಡಿರುವರು. ಅಂದರೆ ಒಬ್ಬರಿಗೆ ಈ ಪರಿಶ್ರಮಗಳು ಒಂದು ಸುಗಂಧ ಪರಿಮಳವಾಗಿರುವದು, ಕರ್ತನ ಹಾಗು ಆತನ ದೇಹವಾದವರ ವಿಷಯವಾಗಿ ತಮ್ಮ ಹೃದಯದಲ್ಲಿ ಇರುವ ತಪ್ಪಾದ ಮನೋಭಾವದ ಕಾರಣ ಇತರರಿಗೆ ಅದು ಅಘಾತವನ್ನು ಉಂಟುಮಾಡುವ ಪರಿಮಳವಾಗಿತ್ತು; ಬಹುಶಃ ಇದು ಅವರ ಆಕಾಂಕ್ಷೆ ಇಲ್ಲವೇ ಯಾವುದೇ ಇದ್ದರೂ ಅವು ಇವುಗಳ ಮಧ್ಯೆ ಪ್ರವೇಶಿಸಿದ್ದ ಕಾರಣದಿಂದಾಗಿತ್ತು.

ಇದು ಬೆಥಾನ್ಯದಲ್ಲಿಯೂ ಹೀಗೆಯೇ ಇತ್ತು: ಮನೆಯನ್ನು ತುಂಬಿದ ಪರಿಮಳ, ಹಾಗು ಈ ಸೇವೆಯ ಸಂಬಂಧವಾಗಿ ಮರಿಯಳಿಗೆ ಬಂದ ಆಶೀರ್ವಾದ ಹಾಗೂ ಪುನಶ್ಚೇತನವು ಯೂದನ ಮೇಲೆ ಭಿನ್ನವಾದ ಪರಿಣಾಮವನ್ನು ಉಂಟು ಮಾಡಿತ್ತು. ಆತನು ಕೋಪಿಸಿಕೊಂಡಿದ್ದನು, ಆತನಲ್ಲಿದ್ದ ಸ್ವಾರ್ಥವು ಕರ್ತನಿಗೆ ಮಾಡಲಾದ ಸನ್ಮಾನವನ್ನು ಶ್ಲಾಘಿಸಲು ಅಡ್ಡಿಯನ್ನುಂಟುಮಾಡಿತ್ತು; ಆತನು ಕೇವಲ ತನ್ನ ವಿಷಯವಾಗಿ ಯೋಚಿಸಲು ಸಾಧ್ಯವಾಗಿದ್ದು ಅಲ್ಲದೆ ನಡೆದಿದ್ದ ಘಟನೆಯ ಮೂಲಕವಾಗಿ ತಾನು ಹೇಗೆ ಯಾವ ಲಾಭವನ್ನಾದರೂ ಪಡೆದುಕೊಳ್ಳಬಹುದೆಂದು ನಿರೀಕ್ಷಿಸಿಕೊಂಡವನಾಗಿದ್ದು ಈ ಸಂಗತಿಯು ಆತನಿಗೆ ಸಂಪೂರ್ಣವಾಗಿ ಒಂದು ನಷ್ಟಕರವಾಗಿತ್ತು. ತನ್ನ ಹೃದಯದಲ್ಲಿನ ತಪ್ಪು ಮನೋಭಾವದ ದೆಸೆಯಿಂದಾಗಿ ತನ್ನ ಹೃದಯದಲ್ಲಿ ಮೂಡಿದ್ದ ಕೆಟ್ಟತನವು ಆತನ ವಿಷಯವಾಗಿ ನೀಡಲಾದ ಸಾಕ್ಷಿಯ ಮೂಲಕವಾಗಿ ಸೂಚಿಸಲ್ಪಟ್ಟಿರುವದು; ಅದೇನಂದರೆ ಆತನು ನೇರವಾಗಿ ಮಹಾಯಾಜಕರ ಬಳಿಗೆ ಹೋಗಿ ಯೇಸುವನ್ನು ಹಿಡುಕೊಡುವ ಬಗ್ಗೆ ಅವರೊಡನೆ ವ್ಯವಹರಿಸಿದ್ದನು. ಹೀಗಿರುವಲ್ಲಿ, ಪ್ರಿಯ ಸಹೋದರರೇ, ನಮ್ಮ ಹೃದಯವು ಕರ್ತನ ಕಡೆಗೆ ಪ್ರೀತಿಪೂರ್ಣವಾದ ಮನೋಭಾವ–ವುಳ್ಳದ್ದಾಗಿದ್ದು ಸ್ವಾರ್ಥಭಾವದಿಂದ ಕೂಡಿರದಂತೆ ನಾವು ನೋಡಿಕೊಳ್ಳೋಣ; ಹೀಗಾಗಿ ಆತನ (ಕರ್ತನ) ಹೆಸರಿನಲ್ಲಿ ಆತನ ದೇಹವಾದವರಿಗಾಗಿ ಮಾಡಿದ್ದೆಲ್ಲವನ್ನು ಪ್ರಸಂಶಿಸುವರಾಗಿ ಸ್ವಾರ್ಥಲಾಭನ್ನು ಅಪೇಕ್ಷಿಸದೇ ಇರೋಣ. ಇಲ್ಲವಾದಲ್ಲಿ ನಮ್ಮಲ್ಲಿ ಉಂಟಾಗುವ ಪರಿಣಾಮವು ಯೂದನ ವಿಷಯದಲ್ಲಿದ್ದಂತೆ ಮರಣದಿಂದ ಹುಟ್ಟಿ ಮರಣವನ್ನು ಹುಟ್ಟಿಸುವ ವಾಸನೆಯಾಗುವದು.

ಇದು ನಮ್ಮ ಪಾಠವನ್ನು ಪೂರ್ಣಗೊಳಿಸುವದು. ಬಹುಶಃ ಮರುದಿನ ಯೆಹೂದ್ಯರು ಯೇಸುವನ್ನು ಮತ್ತು ಲಾಜರನನ್ನು ನೋಡಲು ಗಣನೀಯವಾದ ಸಂಖ್ಯೆಯಲ್ಲಿ ಕೂಡಿ ಬರಲಾರಂಭಿಸಿದ್ದು ಹಾಗು "ಒಳ್ಳೆಯ ಕಾರಣದ ನಿಮಿತ್ತವಾಗಿ" ಅವರನ್ನು ಕೊಲ್ಲುವ ಆಲೋಚನೆ ಮಾಡಿಕೊಂಡಿದ್ದರು. ಅಲ್ಲದೆ, ಮೊದಲಿನಿಂದ ಕಡೆಯವರೆಗೂ ಬಹುತೇಕ ಯಾವಾಗಲೂ ಈ "ಒಳ್ಳೆಯ ಕಾರಣದ ನಿಮಿತ್ತವೇ" ಸತ್ಯಕ್ಕೆ ವಿರೋಧವಾದ ಪ್ರತಿಯೊಂದು ಕೆಟ್ಟ ಹಾಗೂ ಹೇಯ ಕೃತ್ಯಗಳಿಗೆ ಮೂಲವಾಗಿರು–ವದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ಇಂಥಾ ಪಂಗಡಾಭಿಮಾನದ ಭಾವನೆಗಳ ಬಗ್ಗೆ ನಾವು ಎಚ್ಚರಿಕೆಯಿಂದ ಇರೋಣ; ಕರ್ತನ ಮತ್ತು ಆತನ ಸಹೋದರ ವಿಷಯವಾದ ನಮ್ಮ ಪ್ರೀತಿಯು ಪ್ರಾಮಾಣಿಕವಾಗಿರುವಂತೆಯೂ ಹಾಗೂ ಅದು ವೈಯುಕ್ತಿಕವಾಗಿ ನಮ್ಮ ವಿಷಯುಕ್ಕಾಗಿರದೆ ಅಥವಾ ಸ್ವಾರ್ಥಪರವಾಗಿ ಕೆಲವು ಕ್ರೈಸ್ತಪಂಗಡದ ವಿಷಯಕ್ಕಾಗಿರದಂತೆ ನೋಡಿಕೊಳ್ಳೋಣ; ಇಲ್ಲವಾದಲ್ಲಿ ನಾವು ಯಾವ ರೀತಿಯ ಕೆಟ್ಟತನಕ್ಕೆ ನಡೆಸಲ್ಪಡುವೆವೆಂಬುದು ನಮಗೇ ಅರಿವಾಗದು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 9 | ಬೇಥಾನ್ಯ ಯೆರೂಸಲೇಮ್ | ಯೇಸು ಅರಸನಂತೆ ಯೆರೂಸಲೇಮನ್ನು ಪ್ರವೇಶಿಸಿದುದು | 21:1-11, 14–17 | 11:1–11 | 19:29–44 | 12:12–19 |
| ನಿಸಾನ್10 | ಬೇಥಾನ್ಯ ಯೆರೂಸಲೇಮ್ | ಬರಡಾದ ಅಂಜೂರ ಮರವು ಒಣಗಿ ಹೋದುದು; ದೇವಾಲಯವನ್ನು ಎರಡನೆಯ ಸಾರಿ ಶುದ್ಧಿಮಾಡಿದುದು | 21:18,19, 12,13 | 11:12–17 | 19:45,46 | -- |
| | ಯೆರೂಸಲೇಮ್ | ಮಹಾಯಾಜಕರು ಮತ್ತು ಶಾಸ್ತ್ರಿಗಳು ಯೇಸುವನ್ನು ಕೊಲ್ಲಲು ನಡೆಸಿದ ಒಳಸಂಚು | -- | 11:18–19 | 19:47–48 | -- |

## ಮತ್ತಾಯ 21:1–19

ಅವರು ಯೆರೂಸಲೇಮಿಗೆ ಸಮೀಪಿಸಿ ಎಣ್ಣೆಯ ಮರಗಳ ಗುಡ್ಡದ ಬಳಿಯಲ್ಲಿರುವ ಬೆತ್ಫಗೆಗೆ ಬಂದಾಗ ಯೇಸು ಇಬ್ಬರು ಶಿಷ್ಯರನ್ನು ಕರೆದು–ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಹೋದ ಕೂಡಲೇ ಅಲ್ಲಿ ಕಟ್ಟಿರುವ ಕತ್ತೆಯನ್ನೂ ಅದರ ಕೂಡ ಇರುವ ಮರಿಯನ್ನೂ ಕಾಣುವಿರಿ; ಅವುಗಳನ್ನು ಬಿಚ್ಚಿ ನನ್ನ ಹತ್ತರಕ್ಕೆ ಹಿಡುಕೊಂಡು ಬನ್ನಿರಿ. ಯಾವನಾದರೂ ನಿಮಗೆ ಏನಾದರೂ ಹೇಳಿದರೆ, ಇವು ಸ್ವಾಮಿಯವರಿಗೆ ಬೇಕಾಗಿವೆ ಅನ್ನಿರಿ; ಕೂಡಲೇ ಅವುಗಳನ್ನು ಬಿಟ್ಟುಕೊಡುವನು ಎಂದು ಹೇಳಿ ಕಳುಹಿಸಿದನು. ಒಬ್ಬ ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದು ಆಯಿತು; ಆ ಮಾತು ಏನಂದರೆ–ಚಿಯೋನ್ ನಗರಿಯೇ–ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ಶಾಂತ ಗುಣವುಳ್ಳವನಾಗಿಯೂ ಕತ್ತೆಯನ್ನು, ಹೌದು ಪ್ರಾಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆಂದು ಹೇಳಿರಿ ಎಂಬುದು.

ಆಗ ಶಿಷ್ಯರು ಹೋಗಿ ಯೇಸು ತಮಗೆ ಅಪ್ಪಣೆ ಕೊಟ್ಟಂತೆಯೇ ಕತ್ತೆಯನ್ನೂ ಮರಿಯನ್ನೂ ತಂದು ಅವುಗಳ ಮೇಲೆ ತಮ್ಮ ಬಟ್ಟೆಗಳನ್ನು ಹಾಕಲು ಆತನು ಹತ್ತಿ ಕೂತುಕೊಂಡನು. ಆಗ ಜನರ ಗುಂಪಿನಲ್ಲಿ ಬಹಳ ಮಂದಿ ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿದರು; ಬೇರೆ ಕೆಲವರು ಮರಗಳಿಂದ ಚಿಗುರುಗಳನ್ನು ಕೊಯ್ದು ದಾರಿಯಲ್ಲಿ ಹರಡುತ್ತಿದ್ದರು. ಆತನ ಹಿಂದೆಯೂ ಮುಂದೆಯೂ ಗುಂಪಾಗಿ ಹೋಗುತ್ತಿದ್ದ ಜನರು–ದಾವೀದನ ಕುಮಾರನಿಗೆ ಜಯ! ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ! ಮೇಲಣ ಲೋಕಗಳಲ್ಲಿ ಜಯ! ಎಂದು ಆರ್ಭಟಿಸಿದರು. ಆತನು ಯೆರೂಸಲೇಮನ್ನು ಸೇರಲು ಪಟ್ಟಣವೆಲ್ಲಾ ಗದ್ದಲವಾಗಿ, ಈತನು ಯಾರು? ಅಂದರು. ಅದಕ್ಕೆ ಆ ಜನರ ಗುಂಪಿನವರು–ಈತನು ಆ ಪ್ರವಾದಿ, ಗಲಿಲಾಯದ ನಜರೇತಿನ ಯೇಸು ಅಂದರು.

ಬಳಿಕ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿ ಅವರಿಗೆ–ನನ್ನ ಆಲಯವು ಪ್ರಾರ್ಥನಾಲಯವೆನಿಸಿ–ಕೊಳ್ಳುವುದು ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿಮಾಡುತ್ತೀರಿ ಎಂದು ಹೇಳಿದನು. ಆಗ ಕುರುಡರೂ ಕುಂಟರೂ ದೇವಾಲಯದಲ್ಲಿ ಆತನ ಬಳಿಗೆ ಬರಲು ಅವರನ್ನು ಸ್ವಸ್ಥಮಾಡಿದನು. ಆದರೆ ಮಹಾಯಾಜಕರೂ ಶಾಸ್ತ್ರಿಗಳೂ ಆತನು ಮಾಡಿದ ಆಶ್ಚರ್ಯಕರವಾದ ಕಾರ್ಯಗಳನ್ನೂ ದಾವೀದನ ಕುಮಾರನಿಗೆ ಜಯವೆಂದು ದೇವಾಲಯದಲ್ಲಿ ಕೂಗುತ್ತಿರುವ ಹುಡುಗರನ್ನೂ ನೋಡಿ ಸಿಟ್ಟುಗೊಂಡು ಆತನಿಗೆ–ಇವರು ಹೇಳುವದನ್ನು ಕೇಳುತ್ತೀಯಾ ಎಂದು ಹೇಳಲು ಯೇಸು–ಹೌದು, ಕೇಳುತ್ತೇನೆ, ಸಣ್ಣ ಮಕ್ಕಳ ಬಾಯಿಂದಲೂ ಮೊಲೇ ಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ನೀವು ಎಂದಾದರೂ ಓದಲಿಲ್ಲವೋ? ಅಂದನು. ಬಳಿಕ ಅವರನ್ನು ಬಿಟ್ಟು ಪಟ್ಟಣದಿಂದ ಹೊರಟು ಬೇಥಾನ್ಯಕ್ಕೆ ಬಂದು ಅಲ್ಲಿ ರಾತ್ರಿ ಇಳುಕೊಂಡನು.

ಬೆಳಿಗ್ಗೆ ಆತನು ಪಟ್ಟಣಕ್ಕೆ ತಿರಿಗಿ ಹೋಗುತ್ತಿರುವಾಗ ಹಸಿದನು. ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ–ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆಹೋಗಲಿ ಎಂದು ಹೇಳಿದನು. ಆಕ್ಷಣವೇ ಅಂಜೂರದ ಮರವು ಒಣಗಿಹೋಯಿತು.

## ಮಾರ್ಕ 11:1–19

ಅವರು ಯೆರೂಸಲೇಮಿಗೆ ಸಮೀಪಿಸಿ ಎಣ್ಣೇಮರಗಳ ಗುಡ್ಡದ ಬಳಿಯಲ್ಲಿರುವ ಬೇತ್ಫಗೆಗೂ ಬೇಥಾನ್ಯಕ್ಕೂ ಬಂದಾಗ ಆತನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು–ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಅದರೊಳಗೆ ಸೇರುತ್ತಿರುವಾಗಲೇ ಅಲ್ಲಿ ಕಟ್ಟಿರುವ ಒಂದು ಕತ್ತೇಮರಿಯನ್ನು ಕಾಣುವಿರಿ; ಇದುವರೆಗೆ ಅದರ ಮೇಲೆ ಯಾರೂ ಹತ್ತಿಲ್ಲ; ಅದನ್ನು ಬಿಚ್ಚಿ ಹಿಡುಕೊಂಡು ಬನ್ನಿರಿ. ಯಾವನಾದರೂ ನಿಮ್ಮನ್ನು–ಏನು ಹೀಗೆ ಮಾಡುವದು ಎಂದು ಕೇಳಿದರೆ–ಇದು ಸ್ವಾಮಿಯವರಿಗೆ ಬೇಕಾಗಿದೆ, ಅವರು ತಡಮಾಡದೆ ತಿರಿಗಿ ಇಲ್ಲಿಗೆ ಕಳುಹಿಸಿಕೊಡುವರು ಅನ್ನಿರಿ ಎಂದು ಹೇಳಿ ಕಳುಹಿಸಿದನು. ಆ ಶಿಷ್ಯರು ಹೋಗಿ ಬೀದಿಯಲ್ಲಿ ಹೊರಗೆ ಬಾಗಿಲಿನ ಹತ್ತಿರ ಒಂದು ಕತ್ತೇಮರಿ ಕಟ್ಟಿರುವದನ್ನು ಕಂಡು ಅದನ್ನು ಬಿಚ್ಚಿದರು. ಅಲ್ಲಿ ನಿಂತಿದ್ದವರಲ್ಲಿ ಕೆಲವರು–ಈ ಮರಿಯನ್ನು ಬಿಚ್ಚಿ, ಏನು ಮಾಡುತ್ತೀರಿ? ಎಂದು ಅವರನ್ನು ಕೇಳಿದ್ದಕ್ಕೆ ಯೇಸು ಹೇಳಿದಂತೆಯೇ ಅವರು ಹೇಳಿದಾಗ ಆ ಜನರು ತೆಗೆದುಕೊಂಡು ಹೋಗಗೊಡಿಸಿದರು. ಶಿಷ್ಯರು ಆ ಮರಿಯನ್ನು ಯೇಸುವಿನ ಬಳಿಗೆ ತಂದು ತಮ್ಮ ಬಟ್ಟೆಗಳನ್ನು ಅದರ ಮೇಲೆ ಹಾಕಲು ಆತನು ಅದನ್ನು ಹತ್ತಿ ಕೂತುಕೊಂಡನು. ಆಗ ಅನೇಕರು ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿದರು. ಬೇರೆ ಕೆಲವರು ತೋಟಗಳಿಂದ ಚಿಗುರುಗಳನ್ನು ಕೊಯ್ದು ತಂದು ಹಾಸಿದರು. ಆತನ ಹಿಂದೆಯೂ ಮುಂದೆಯೂ ಹೋಗುತ್ತಿದ್ದವರು–ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ನಮ್ಮ ಪಿತೃವಾದ ದಾವೀದನ ರಾಜ್ಯವು ಬರುತ್ತದೆ, ಅದಕ್ಕೆ ಆಶೀರ್ವಾದ; ಮೇಲಣ ಲೋಕಗಳಲ್ಲಿ ಜಯ ಎಂದು ಆರ್ಭಟಿಸಿದರು.

ತರುವಾಯ ಯೇಸು ಯೆರೂಸಲೇಮನ್ನು ಸೇರಿ ದೇವಾಲಯಕ್ಕೆ ಹೋಗಿ ಸುತ್ತಲೂ ಎಲ್ಲಾ ನೋಡಿಕೊಂಡು ಅಷ್ಟರಲ್ಲಿ ಸಂಜೆಯಾದುದರಿಂದ ಹನ್ನೆರಡು ಮಂದಿ ಶಿಷ್ಯರನ್ನು ಕರಕೊಂಡು ಬೇಥಾನ್ಯಕ್ಕೆ ಹೊರಟುಹೋದನು.

ಮರುದಿನ ಅವರು ಬೇಥಾನ್ಯವನ್ನು ಬಿಟ್ಟು ಬರುತ್ತಿರುವಾಗ ಆತನು ಹಸಿದನು. ಮತ್ತು ಎಲೆಬಿಟ್ಟಿದ್ದ ಒಂದು ಅಂಜೂರದ ಮರವನ್ನು ದೂರದಲ್ಲಿ ಕಂಡು ಅದರಲ್ಲಿ ತನಗೇನಾದರೂ ಹಣ್ಣು

ಸಿಕ್ಕೀತೆಂದು ಅಲ್ಲಿಗೆ ಹೋದನು. ಅದರ ಹತ್ತಿರಕ್ಕೆ ಬಂದಾಗ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣಲಿಲ್ಲ; ಅದು ಅಂಜೂರದ ಹಣ್ಣಿನ ಕಾಲವಲ್ಲ. ಆಗ ಯೇಸು ಆ ಮರಕ್ಕೆ– ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣನ್ನು ಎಂದೆಂದಿಗೂ ತಿನ್ನದ ಹಾಗಾಗಲಿ ಎಂದು ಹೇಳಿದನು. ಆತನ ಶಿಷ್ಯರು ಅದನ್ನು ಕೇಳಿದರು.

ಅವರು ಯೆರೂಸಲೇಮಿಗೆ ಬಂದಾಗ ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವವರನ್ನೂ ಕೊಳ್ಳುವವರನ್ನೂ ಹೊರಡಿಸಿ ಬಿಡುವದಕ್ಕೆ ಪ್ರಾರಂಭಿಸಿ ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿದನು; ಒಬ್ಬನನ್ನಾದರೂ ಸಾಮಾನು ಹೊತ್ತುಕೊಂಡು ದೇವಾಲಯ ದೊಳಗೆ ಹಾದುಹೋಗಗೊಡಿಸಲಿಲ್ಲ. ಮತ್ತು ಆತನು ಉಪದೇಶ ಮಾಡಿ – ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾ–ಲಯವೆನಿಸಿಕೊಳ್ಳುವದು ಎಂದು ಬರೆದಿದೆಯಲ್ಲಾ? ಆದರೆ ನೀವು ಅದನ್ನು ಕಳ್ಳರ ಗವಿಮಾಡಿದ್ದೀರಿ ಎಂದು ಹೇಳಿದನು. ಅದನ್ನು ಮಹಾಯಾಜಕರೂ ಶಾಸ್ತ್ರಿಗಳೂ ಕೇಳಿ ಅವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಸಂದರ್ಭ ನೋಡುತ್ತಿದ್ದರು; ಯಾಕಂದರೆ ಜನವೆಲ್ಲಾ ಆತನ ಉಪದೇಶವನ್ನು ಕೇಳಿ ಅತ್ಯಾಶ್ಚರ್ಯಪಟ್ಟದ್ದರಿಂದ ಅವರು ಆತನಿಗೆ ಹೆದರುತ್ತಿದ್ದರು.

ಪ್ರತಿ ಸಾಯಂಕಾಲ ಯೇಸುವೂ ಆತನ ಶಿಷ್ಯರೂ ಪಟ್ಟಣವನ್ನು ಬಿಟ್ಟು ಹೊರಗೆ ಹೋಗುತ್ತಿದ್ದರು.

## ಲೂಕ 19:29–48

ಆ ಮೇಲೆ ಆತನು ಎಣ್ಣೇಮರಗಳ ಗುಡ್ಡ ಎನಿಸಿಕೊಳ್ಳುವ ಗುಡ್ಡದ ಬಳಿಯಲ್ಲಿರುವ ಬೇತ್ಫಗೆಗೂ ಬೇಥಾನ್ಯಕ್ಕೂ ಸಮೀಪಿಸಿದಾಗ ಶಿಷ್ಯರಲ್ಲಿ ಇಬ್ಬರನ್ನು ಕರೆದು–ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಅದರೊಳಗೆ ಸೇರುತ್ತಿರುವಾಗಲೇ ಅಲ್ಲಿ ಕಟ್ಟಿರುವ ಒಂದು ಕತ್ತೇಮರಿಯನ್ನು ಕಾಣುವಿರಿ; ಇದುವರೆಗೂ ಅದರ ಮೇಲೆ ಯಾರೂ ಹತ್ತಿಲ್ಲ; ಅದನ್ನು ಬಿಚ್ಚಿ ಹಿಡುಕೊಂಡು ಬನ್ನಿರಿ; ಯಾವನಾದರೂ ನಿಮ್ಮನ್ನು–ಯಾಕೆ ಬಿಚ್ಚುತ್ತೀರಿ ಎಂದು ಕೇಳಿದರೆ ಇದು ಸ್ವಾಮಿಯವರಿಗೆ ಬೇಕಾಗಿದೆ ಅನ್ನಿರಿ ಎಂದು ಹೇಳಿಕಳುಹಿಸಿದನು. ಕಳುಹಿಸಲ್ಪಟ್ಟವರು ಹೋಗಿ ಆತನು ತಮಗೆ ಹೇಳಿದಂತೆಯೇ ಕಂಡರು. ಅವರು ಆ ಕತ್ತೇ ಮರಿಯನ್ನು ಬಿಚ್ಚುತ್ತಿರುವಾಗ ಅದರ ಯಜಮಾನರು–ಈ ಮರಿಯನ್ನು ಯಾಕೆ ಬಿಚ್ಚುತ್ತೀರಿ ಎಂದು ಅವರನ್ನು ಕೇಳಿದ್ದಕ್ಕೆ ಅವರು–ಇದು ಸ್ವಾಮಿಯವರಿಗೆ ಬೇಕಾಗಿದೆ ಎಂದು ಹೇಳಿದರು. ಅದನ್ನು ಯೇಸುವಿನ ಬಳಿಗೆ ತಂದು ತಮ್ಮ ಬಟ್ಟೆಗಳನ್ನು ಆ ಕತ್ತೇಮರಿಯ ಮೇಲೆ ಹಾಕಿ ಯೇಸುವನ್ನು ಕೂಡ್ರಿಸಿದರು. ಆತನು ಹೋಗುತ್ತಿರುವಾಗ ಅವರು ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿದರು. ಆತನು ಪಟ್ಟಣವನ್ನು ಸಮೀಪಿಸಿ ಎಣ್ಣೇಮರಗಳ ಗುಡ್ಡದಿಂದ ಇಳಿಯುವ ಸ್ಥಳಕ್ಕೆ ಬಂದಾಗ ಶಿಷ್ಯಮಂಡಲಿಯ – ವರಲ್ಲೆಲ್ಲಾ ಸಂತೋಷಪಡುತ್ತಾ ತಾವು ಕಂಡಿದ್ದ ಎಲ್ಲಾ ಮಹತ್ಕಾರ್ಯಗಳ ವಿಷಯದಲ್ಲಿ–ಕರ್ತನ ಹೆಸರಿನಲ್ಲಿ ಬರುವ ಅರಸನಿಗೆ ಆಶೀರ್ವಾದ, ಪರಲೋಕದಲ್ಲಿ ಮಂಗಳ ಮೇಲಣ ಲೋಕಗಳಲ್ಲಿ ಮಹಿಮೆ ಎಂದು ಮಹಾ ಶಬ್ದದಿಂದ ದೇವರನ್ನು ಕೊಂಡಾಡುವದಕ್ಕೆ ತೊಡಗಿದರು. ಜನರ ಗುಂಪಿನೊಳಗಿದ್ದ ಫರಿಸಾಯರಲ್ಲಿ ಕೆಲವರು ಆತನಿಗೆ–ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು ಎಂದು ಹೇಳಿದಕ್ಕೆ ಆತನು–ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವವು ಎಂದು ಹೇಳುತ್ತೇನೆ ಅಂದನು.

ತರುವಾಯ ಆತನು ಸಮೀಪಕ್ಕೆ ಬಂದಾಗ ಪಟ್ಟಣವನ್ನು ನೋಡಿ ಅದರ ವಿಷಯವಾಗಿ ಅತ್ತು–ನೀನಾದರೂ ಸಮಾಧಾನಕ್ಕೆ ಬೇಕಾದುದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೇದು. ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ. ದೇವರು ನಿನಗೆ ದರ್ಶನಕೊಟ್ಟ ಸಮಯವನ್ನು ನೀನು ತಿಳುಕೊಳ್ಳಲಿಲ್ಲವಾದುದರಿಂದ ನಿನ್ನ ವೈರಿಗಳು ಒಡ್ಡು ಕಟ್ಟಿ ನಿನ್ನ ಸುತ್ತಲೂ ಮುತ್ತಿಗೆ ಹಾಕಿ ಎಲ್ಲಾ ಕಡೆಗಳಲ್ಲಿಯೂ ನಿನ್ನನ್ನು ಬಂದು ಮಾಡಿ ನಿನ್ನನ್ನು ನಿನ್ನೊಳಗಿರುವ ಜನರನ್ನು ನಿರ್ಮೂಲಮಾಡಿ ನಿನ್ನಲ್ಲಿ ಕಲ್ಲಿನ ಮೇಲೆ ಕಲ್ಲು ನಿಲ್ಲದಂತೆ ಮಾಡುವ ದಿವಸಗಳು ನಿನ್ನ ಮೇಲೆ ಬರುವವು ಅಂದನು.

ಬಳಿಕ ಆತನು ದೇವಾಲಯಕ್ಕೆ ಹೋಗಿ ಮಾರುವವರನ್ನು ಹೊರಡಿಸಿಬಿಡುವದಕ್ಕೆ ಪ್ರಾರಂಭಿಸಿ ಅವರಿಗೆ–ನನ್ನ ಆಲಯವು ಪ್ರಾರ್ಥನಾಲಯವಾಗಿರುವದು ಎಂದು ಬರೆದದೆಯಲ್ಲಾ ಆದರೆ ನೀವು ಅದನ್ನು ಕಳ್ಳರ ಗವಿ ಮಾಡಿದ್ದೀರಿ ಎಂದು ಹೇಳಿದನು.

ಮತ್ತು ಆತನು ದಿನಾಲೂ ದೇವಾಲಯದಲ್ಲಿ ಉಪದೇಶ ಮಾಡುತ್ತಿದ್ದನು. ಅಷ್ಟರಲ್ಲಿ ಮಹಾಯಾಜಕರೂ ಶಾಸ್ತ್ರಿಗಳೂ ಪ್ರಜೆಗಳಲ್ಲಿ ಮುಖ್ಯಸ್ಥರೂ ಆತನನ್ನು ಕೊಲ್ಲುವದಕ್ಕೆ ಸಂದರ್ಭನೋಡುತ್ತಿದ್ದರು. ಆದರೆ ಜನರೆಲ್ಲರೂ ಆತನನ್ನು ಅಂಟಿಕೊಂಡು ಉಪದೇಶವನ್ನು ಗಮನಿಸಿ ಕೇಳುತ್ತಿದ್ದುದರಿಂದ ಏನು ಮಾಡಬೇಕೋ ತೋರಲಿಲ್ಲ.

## ಯೋಹಾನ 12:12–19

ಮರು ದಿವಸ ಜಾತ್ರೆಗೆ ಬಂದಿದ್ದ ಜನಸಮೂಹವು ಯೇಸು ಯರೂಸಲೇಮಿಗೆ ಬರುತ್ತಾನೆಂದು ಕೇಳಿ ಖರ್ಜೂರದ ಗರಿಗಳನ್ನು ತಕ್ಕೊಂಡು ಆತನನ್ನು ಎದುರುಗೊಳ್ಳುವದಕ್ಕೆ ಹೊರಗೆ ಬಂದು–ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ಇಸ್ರಾಯೇಲಿನ ಅರಸನಿಗೆ ಆಶೀರ್ವಾದ ಎಂದು ಆರ್ಭಟಿಸಿದರು. ಮತ್ತು ಯೇಸು ಕತ್ತೇಮರಿಯನ್ನು ತರಿಸಿಕೊಂಡು ಅದರ ಮೇಲೆ ಕೂತುಕೊಂಡನು. ಇದರಿಂದ–ಚೀಯೋನ್ ನಗರಿಯೇ, ಹೆದರ ಬೇಡ; ಇಗೋ, ನಿನ್ನ ಅರಸನು ಕತ್ತೇಮರಿಯ ಮೇಲೆ ಕೂತುಕೊಂಡು ಬರುತ್ತಾನೆ ಎಂಬ ಶಾಸ್ತ್ರದ ಮಾತು ನೆರವೇರಿತು. ಇದು ಆತನ ಶಿಷ್ಯರಿಗೆ ಮೊದಲು ತಿಳಿದಿರಲಿಲ್ಲ. ಆದರೆ ಯೇಸು ತನ್ನ ಮಹಿಮಾ ಪದವಿಗೆ ಬಂದ ಮೇಲೆ ಇದು ಆತನ ವಿಷಯವಾಗಿ ಬರೆದದೆ ಎಂದು ಆತನಿಗೆ ನಾವು ಅದನ್ನೆಲ್ಲಾ ಮಾಡಿದೆವೆಂದು ಅವರ ನೆನಪಿಗೆ ಬಂತು. ಇದಲ್ಲದೆ ಆತನು ಲಾಜರನನ್ನೂ ಸಮಾಧಿಯೊಳಗಿಂದ ಕರೆದು ಬದುಕಿಸಿದ

ವೇಳೆಯಲ್ಲಿ ಆತನ ಸಂಗಡ ಇದ್ದ ಜನರು ಅದನ್ನು ಸಾರುತ್ತಿದ್ದರು. ಆತನು ಈ ಸೂಚಕಕಾರ್ಯವನ್ನು ಮಾಡಿದನೆಂದು ಕೇಳಿದ ಕಾರಣದಿಂದಲೂ ಜನರು ಆತನನ್ನು ಎದುರುಗೊಳ್ಳುವದಕ್ಕೆ ಹೋಗಿದ್ದರು. ಹೀಗಿರಲಾಗಿ ಫರಿಸಾಯರು–ನಮ್ಮ ಯತ್ನವೇನೂ ಸಾಗಲಿಲ್ಲ, ನೋಡಿರಿ; ಲೋಕವೆಲ್ಲಾ ಆತನ ಹಿಂದೆ ಹೋಯಿತಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡರು.

*****

# ನಮ್ಮ ಕರ್ತನ ಮಾದರೀ ಗೆಲುವು

**ರೀಪ್ರಿಂಟ್ಸ್ ಪುಟ 1794**

## ಮತ್ತಾಯ 21:1–7; ಲೂಕ 19:29–48
## ಯೋಹಾನ 12:12–19; ಮಾರ್ಕ 11:1–11

**"ಹೊಸನ್ನ: ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ"**

ಈ ತ್ರೈಮಾಸಿಕ (ಪತ್ರಿಕೆಯ) ಪಾಠವು ಶಿಲುಬೆಯ ಮರಣದಲ್ಲಿ ಮುಕ್ತಾಯಗೊಂಡ ಶರೀರಧಾರಿಯಾದ ನಮ್ಮ ಕರ್ತನ ಜೀವಿತದ ಕಡೇ ದಿನಗಳ ಸಂಕಟಮಯವಾದ ದೃಶ್ಯಗಳ ಮೂಲಕ ನಮ್ಮ ಮನಸ್ಸುಗಳನ್ನು ಹಂತ ಹಂತವಾಗಿ ಕೊಂಡೊಯ್ದು ಮತ್ತು ಆನಂತರದಲ್ಲಿ ಮರಣ ಪಾತಾಳದ ಬೀಗದ ಕೈಗಳನ್ನು ಉಳ್ಳವನಾಗಿ ಎದ್ದು ಬಂದು ರಕ್ಷಿಸ ಸಮರ್ಥನಾಗಿರುವ ಕರ್ತನನ್ನು ಪರಿಚಯಿಸಿಕೊಡುತ್ತದೆ. ಕಳೆದ ತ್ರೈಮಾಸಿಕ (ಪತ್ರಿಕೆಯ) ಅವಧಿಯಲ್ಲಿ ನಾವು ಆತನು ಮಾಡಿದ ಅದ್ಭುತಕಾರ್ಯಗಳಿಂದ ಆಕರ್ಷಿತರಾಗಿ, ಆತನ ಬೋಧನೆಗಳಲ್ಲಿ ಮೋಹಗೊಂಡಿದ್ದ ಸಾಮಾನ್ಯ ಜನರಲ್ಲಿ ಆತನ ಜನಪ್ರಿಯತೆಯು ವೃದ್ಧಿಯಾಗುತ್ತಿರುವದನ್ನು ನೋಡಿದವರಾಗಿದ್ದೆವು; ಅಲ್ಲದೆ ನಾವೂ ಅವರೊಡನೆ ಆತನ ಬಾಯಿಂದ ಹೊರಟ ಇಂಪಾದ ಮಾತುಗಳಿಗೆ ಬೆರಗಾಗಿ, ಆತನ ನುಡಿಗಳನ್ನು ಭದ್ರವಾಗಿ ಹಿಡುಕೊಂಡವರಾಗಿ, ನಮ್ಮ ಹೃದಯಗಳು ಕುದಿಯ ತೊಡಗಿದ್ದು, ದೇವರ ಆತ್ಮನ ಮೂಲಕವಾಗಿ ಆತನ ಹಿತೋಪದೇಶವೆಂಬ ಔಷಧಿಲೇಪನವನ್ನು ನಾವು ಸಹ ಹಚ್ಚಿಕೊಂಡವರಾಗಿದ್ದೆವು. ಅಲ್ಲದೆ ಈಗ ನಾವು ಮಾನಸಿಕವಾಗಿ ಆತನು ಮನುಷ್ಯನಾಗಿ ಜೀವಿಸಿದ ಕಡೆಯ ಕೆಲವು ದಿನಗಳ ಮೂಲಕವಾಗಿ ಆತನೊಂದಿಗೆ ಸಾಗುವಾಗ ನಮ್ಮ ಮೇಲಿನ ತನ್ನ ಪ್ರೀತಿ ಕೃಪಾತಿಶಯಗಳ ಸಲುವಾಗಿ ಆತನು ಮಾಡಿದ ತ್ಯಾಗದ ವಿಷಯವಾದ ಎಲ್ಲಾ ಸಂಗತಿಗಳ ದೃಶ್ಯಗಳು ನಮ್ಮ ಹೃದಯಗಳನ್ನು ಆತನೊಡನೆ ಇನ್ನೂ ನಿಕಟವಾದ ಅನ್ಯೋನ್ಯತೆ ಮತ್ತು ಸಹಾನುಭೂತಿಗಳ ಕಡೆಗೆ ನಡೆಸುವಂತಾಗಲಿ.

ಮೂರುವರೆ ವರ್ಷಗಳ ಕಾಲ ಬಹಿರಂಗವಾಗಿ ಮಾಡಿದ ಬೋಧನೆಗಳು ಹಾಗು ನಡೆಸಿದ ಕಾರ್ಯಗಳು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಿದುದರಲ್ಲಿ ಮುಕ್ತಾಯಗೊಂಡು ತಾನು ಮೆಸ್ಸೀಯನೆಂದು ಹೇಳಿಕೊಳ್ಳುವ ಸತ್ಯಾಂಶಕ್ಕೆ ಸಾಕ್ಷಿಯಾಗಿತ್ತು. ವಿಜಯೋತ್ಸವದಂತೆ ತೋರಿಬಂದ ಆತನ ಈ ಕಾರ್ಯವು ಮೆಸ್ಸೀಯನು ನಿಜವಾಗಿಯೂ ಬಂದಿರುವನೆಂದೂ, ಪ್ರವಾದಿಗಳು ಮುಂದಾಗಿ ತಿಳಿಸಿದ ಇಸ್ರಾಯೆಲ್ಯರ ಮಹಿಮೆಯು ಶೀಘ್ರವಾಗಿ ಕೈಗೂಡಿ ಬರುವದೆಂಬ ಆತನ ಶಿಷ್ಯರ ಹಾಗು ಇಸ್ರಾಯೇಲಿನಲ್ಲಿದ್ದ ಹಲವರ ನಿರೀಕ್ಷೆಯನ್ನು ಉತ್ತುಂಗಕ್ಕೆ ಏರಿಸಿತ್ತು. ಸಾರ್ವಜನಿಕ – ರಲ್ಲಿದ್ದ ಈ ಮನೋಭಾವದ ಮೂಲಕವಾಗಿ ತನಗೆ ಜೆಕರ್ಯ 9:9ರ ಪ್ರವಾದನೆಯನ್ನು ನೆರವೇರಿಸುವ ಅವಕಾಶವಿದ್ದುದನ್ನು ಕರ್ತನು ಕಂಡವನಾಗಿ ರಾಜನ ಕಾರ್ಯಭಾರ ವಹಿಸಿಕೊಳ್ಳುವ – ದನ್ನು ಹೀಗೆ ಬಹಿರಂಗವಾದ ರೀತಿಯಲ್ಲಿ ಪ್ರಯತ್ನಿಸಿದ್ದನು. ಅಲ್ಲದೆ ಸನ್ನಿವೇಶಗಳು ಮುಂತಿಳಿಸಲಾಗಿದ್ದ ಪ್ರಕಾರ ಅನುಕೂಲಕರ – ವಾಗಿದ್ದುದು ಮಾತ್ರವಲ್ಲದೆ ಹಾಗೆಯೇ ಅದಕ್ಕೆ ಸಮಯವೂ ಕೂಡಿಬಂದಿತ್ತು.

ತಮ್ಮ ಪಿತೃಗಳೊಂದಿಗೆ ಮಾಡಿಕೊಂಡಿದ್ದ ದೇವರ ಒಡಂಬಡಿಕೆಯ ಅನುಸಾರವಾಗಿ (ಅ.ಕೃ. 3:25,26) ದೇವರ ರಾಜ್ಯದ ಸುವಾರ್ತೆಯು ಮೊದಲನೆಯದಾಗಿ ಯೆಹೂದ್ಯರಿ–ಗಾಗಿತ್ತು. ಆದರೂ ಅವರು ಒಂದು ಜನಾಂಗವಾಗಿ ಅದನ್ನು ಅರಿತುಕೊಳ್ಳಲಾರರು ಇಲ್ಲವೇ ಒಪ್ಪಿಕೊಳ್ಳಲಾರರೆಂಬುದು ದೇವರಿಗೆ ಮುಂದಾಗಿ ತಿಳಿದಿದ್ದು ಆ ಜನಾಂಗದವರಲ್ಲಿ ಕೇವಲ ಉಳಿದ ಒಂದು ಅಂಶ ಮಾತ್ರ ಒಡಂಬಡಿಕೆಯ ಮೂಲಕವಾಗಿ ದೊರೆಯುವ ಕೃಪಾನುಗ್ರಹಗಳಿಗೆ ಯೋಗ್ಯರೆಂದು ಪ್ರಮಾಣೀಕರಿಸುವರೆಂದೂ ಉಳಿದವರು (ತಾವು ಮೊದಲೇ ಕಲ್ಪಿಸಿಕೊಂಡ ಅಭಿಪ್ರಾಯಗಳ ಹಾಗು ತಮ್ಮ ಹೃದಯದ ಕಾಠಿಣ್ಯತೆಯ ನಿಮಿತ್ತವಾಗಿ) ಆತನು ಇವುಗಳನ್ನು ಕಾಣದಂತಾಗಿರುವರೆಂದೂ ತನ್ನ ಪ್ರವಾದಿಯ ಮೂಲಕವಾಗಿ ಮುಂತಿಳಿಸಿದ್ದನು. ಹೀಗಿರುವಲ್ಲಿ ಈ ಮಹಾ ಒಡಂಬಡಿಕೆಯ ಆಶೀರ್ವಾದಗಳನ್ನು ಅನ್ಯಜನಾಂಗದಲ್ಲಿನ ಕೆಲವರು ಅಂಗೀಕರಿಸಿಕೊಂಡು ಮನನ–ಮಾಡಿಕೊಳ್ಳುವವರಾಗಿ ಅಬ್ರಹಾಮನ ಸಂತಾನದವರೆಂದು ಎಣಿಸಲ್ಪಡುವರು ಅಲ್ಲದೆ ಈ ವಾಗ್ದಾನಗಳು ಅವರಿಗಾಗಿಯೇ ಇರುವದು. ಅವರು ಶಾರೀರಿಕ ಅನುಸಾರವಾದ ಮಕ್ಕಳಾಗಿರದೆ ಆತ್ಮ ಸಂಬಂಧವಾದ ಮಕ್ಕಳಾಗಿ ಅಬ್ರಹಾಮನಲ್ಲಿದ್ದ ನಂಬಿಕೆ–ಯನ್ನು ಹೊಂದಿದವರಾಗಿರುವರು. ಯಾಕಂದರೆ ಯೇಸುವು ಹೇಳಿರುವಂತೆ ದೇವರು ಅಬ್ರಹಾಮನಿಗೆ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲವನಾಗಿದ್ದನು. – ರೋಮಾ 9:27; ಯೆಶಾಯ 10:22–23; ರೋಮಾ 11:7,11–12; ಅ.ಕೃ 13:46; ಗಲಾತ್ಯ 3:9,16,28–29; ಮತ್ತಾಯ 3:8,9 ಇವುಗಳನ್ನು ನೋಡಿ.

ದೇವರು ತಮ್ಮ ಪಿತೃಗಳೊಂದಿಗೆ ಮಾಡಿಕೊಂಡ ಆ ಒಡಂಬಡಿಕೆಯ ಮತ್ತು ಇತರ ಪ್ರವಾದನೆಗಳ ಅನುಸಾರ –ವಾಗಿಯೇ ಯೇಸುವು ಶಿಕ್ಷಿತನಾಗಿ ಶಾರೀರಿಕ ಸಂಬಂಧವಾದ ಇಸ್ರಾಯೇಲ್ಯರಿಗೆ ಅರಸನನ್ನಾಗಿ ತನ್ನನ್ನು ಅರ್ಪಿಸಿಕೊಂಡಿದ್ದನು; ಆದರೂ ದೊಡ್ಡ ಸಮೂಹವು ಅತನನ್ನು ರಾಜನಂತೆ ಬರಮಾಡಿ–ಕೊಂಡು ಹೊಸನ್ನ ಎಂದು ಆತನ ಬಗ್ಗೆ ಆರ್ಭಟಿಸಿದ್ದರೂ ತಮ್ಮ ಸುಳ್ಳು ಬೋಧಕರ ಮೂಲಕವಾಗಿ ಉಬ್ಬಿಹೋದ ತಮ್ಮ ಅಸ್ಥಿರವಾದ ಚಂಚಲ ಮನಸ್ಸುಗಳು ಹಾಗು ವಿರೋಧಗಳ ನಡುವೆ ತಮ್ಮ ನಿಶ್ಚಿತಾಭಿಪ್ರಾಯಗಳ ಅನುಸಾರವಾಗಿ ನಡೆದುಕೊಳ್ಳುವ ಮನಸ್ಸಿಲ್ಲದೆ ಕೇವಲ ಕೆಲವು ದಿನಗಳ ನಂತರ ಶಿಲುಬೆಗೆ ಹಾಕಿಸು! ಶಿಲುಬೆಗೆ ಹಾಕಿಸು! ಎಂದು ಅವರು ಕೂಗಿಕೊಳ್ಳುವರೆಂಬುದನ್ನು ಆತನು ತಿಳಿದಿದ್ದನು. – ಯೋಹಾನ 12:1,12,–13; 19:6–7, 14–15.

ಹೀಗಿರುವಲ್ಲಿ ಇದು ಹೇಗೆ ಪರಿಣಮಿಸುವದೆಂಬುದು ತನಗೆ ತಿಳಿದಿದ್ದರೂ ಯೇಸುವು ರಾಜನಂತೆ ಅಧಿಕಾರವನ್ನು ವಹಿಸಿ –ಕೊಳ್ಳಲು ಈ ವಿಧವಾದ ಕ್ರಮವನ್ನು ಅನುಸರಿಸಿದ್ದು ಏಕೆ? ಎಂದು ಕೇಳಲಾಗುವದು. ನಾವು ಉತ್ತರಿಸುವದು ಏನಂದರೆ ಅಪೋಸ್ತಲರ ಬೋಧನೆಯ ಅನುಸಾರವಾಗಿ ಮುಂದೆ ಬರಲಿರುವ ಒಳ್ಳೆಯ ಸಂಗತಿಗಳ ಛಾಯಾರೂಪವಾದ ಆ ದೊಡ್ಡ ವ್ಯವಸ್ಥೆಗಳ ಒಂದು ಅಂಶವಾಗಿ ಈ ಕಾರ್ಯವನ್ನು ನಿರ್ವಹಿಸಿದ್ದನು.

ಯೆರೂಸಲೇಮಿಗೆ ಆತನು ಅರಸನಂತೆ ಪ್ರವೇಶಿಸಿದ್ದುದು ಹಾಗು ಅದರ ಜೊತೆಗೆ ಅಲ್ಲಿ ಕಾಲಾನುಕ್ರಮವಾಗಿ ನಡೆದ ಘಟನೆಗಳು ಈ ಸುವಾರ್ತಾ ಯುಗದ ಅಂತ್ಯದಲ್ಲಿ ಕ್ರಿಸ್ತನು ರಾಜನಾಗಿ ಬರುವದರ ಮುನ್ಸೂಚನೆಯಾಗಿದ್ದು, ಸುವಾರ್ತಾ ಯುಗವು ಯೆಹೂದ್ಯರ ಯುಗದ ನಿಜರೂಪವಾಗಿ ಈ ಎರಡೂ ಕಾಲಗಳು ಹಾಗು ಸನ್ನಿವೇಶಗಳು ಸಮನಾಂತರವಾಗಿ ಕರಾರುವಕ್ಕಾದ ಹೋಲಿಕೆ –ಯಲ್ಲಿರುವದು. (ಸ್ಟಡಿಸ್ ಇನ್ ದ ಸ್ಕ್ರಿಪ್ಚರ್ಸ್ ಗ್ರಂಥದ ವಾಲ್ಯುಮ್ 2 ಮತ್ತು 3 ನೋಡಿ) ಈ ಒಂದು ಅಸಾಧಾರಣ ಸಮಾನಾಂತರ –ದಲ್ಲಿನ ಕಾಲಾನುಕ್ರಮದ ಘಟನೆಗಳ ಹೋಲಿಕೆಗಳ ಪ್ರಕಾರವಾಗಿ ಕ್ರಿ.ಶ. 1878ನೇ ವರುಷವು ಸತ್ತವರೊಳಗಿಂದ ಎದ್ದು ಬಂದಿರುವ ನಮ್ಮ ಕರ್ತನು ಈ (ಸುವಾರ್ತಾ) ಯುಗದಲ್ಲಿ ನಿಜವಾಗಿಯೂ ತನ್ನ ಮಹಾ ಅಧಿಕಾರವನ್ನು ವಹಿಸಿಕೊಂಡವನಾಗಿ ತನ್ನ ಆಳ್ವಿಕೆಯನ್ನು ಆರಂಭ ಮಾಡಲು ನಿಶ್ಚಯವಾದ ವರುಷವಾಗಿರುವದೆಂಬುದನ್ನು ತೋರಿಸಿಕೊಡುವದು.

ಇದು ಒಂದು ನೆರವೇರಲ್ಪಟ್ಟಿರುವ ಸತ್ಯಾಂಶವೆಂದು ಹೇಳಲು ನಾವು ಹಿಂಜರಿಯಲಾರೆವು. ಭೂಲೋಕದಲ್ಲಿ ದೇವರ ರಾಜ್ಯವು ತನ್ನ ಅಭಿಷಕ್ತರ ಅಂದರೆ ಕ್ರೈಸ್ತಸಭೆಯ ನಿಯಂತ್ರಣದಲ್ಲಿ ಸ್ಥಾಪಿತವಾಗುವ ಸಮಯವು ಸಮೀಪಿಸಿರುವದೆಂಬುದಕ್ಕೆ ನಮಗೆ ಖಂಡಿತವಾಗಿರುವ ಪ್ರವಾದನಾ ವಾಕ್ಯಗಳಲ್ಲಿ ಹೇರಳವಾದ ಸಾಕ್ಷಿಪುರಾವೆಗಳನ್ನು ಹೊಂದಿದ್ದೇವೆ. ಈ ವಾಸ್ತವಾಂಶದ ಸುತ್ತಲು ಗಂಭೀರ ಕ್ಷಣಗಳ ಗೊಂಚಲುಗೊಂಚಲುಗಳುಳ್ಳ ಸತ್ಯಾರ್ಥ–ಗಳಿರುವದು. ಇದು ಕೇವಲ ಕ್ರೈಸ್ತರಿಗೆ ಮಾತ್ರವಲ್ಲದೆ ಇಡೀ ಲೋಕಕ್ಕೆ ಅಂದರೆ ಅವರು ಇದನ್ನು ಆಲಿಸಿ ಅದಕ್ಕೆ ಕೇವಲ ಗಮನಕೊಡುವಷ್ಟು ಬುದ್ಧಿವಂತರಾಗಿದ್ದಲ್ಲಿ, ಇದು ಅವರಿಗಾಗಿಯೂ ಇರುವದು.

ಕರ್ತನ ಪ್ರತ್ಯಕ್ಷತೆಯ ವಿಷಯವಾದ ಸತ್ಯಾಂಶವನ್ನು ಹಲವರು ಕಾಣದಾಗಿರುವರೆಂಬದು ಆತನು ಬರುವ ರೀತಿಯ ಬಗ್ಗೆ ಅವರಲ್ಲಿ ಇರುವ ತಪ್ಪು ಗ್ರಹಿಕೆಯ ಮೂಲಕವಾಗಿ ತಿಳಿದು ಬರುವದೆಂದು ಸತ್ಯವೇದದಲ್ಲಿ ಬಹು ಸ್ಪಷ್ಟವಾಗಿ ತೋರಿಸ –ಲಾಗಿರುವದು. ಆತನನ್ನು ಶಾರೀರಿಕವಾಗಿ ನೋಡುವೆವೆಂಬುದನ್ನು ಹಾಗೂ ತುತೂರಿಯ ಧ್ವನಿಯ ಘೋಷದೊಡನೆ ಆತನು ಬರುವದನ್ನು ಪ್ರಕಟಿಸಲಾಗುವದೆಂಬುದನ್ನು ಅಲ್ಲದೆ ಅಕ್ಷರಶಃ ಮೋಡದಲ್ಲಿ ಇರುವದನ್ನು ಸಹಜವಾದ ಕಣ್ಣಿನಿಂದ ನೋಡಲು ಸಾಧ್ಯವಾಗುವದೆಂಬುದನ್ನು ನಿರೀಕ್ಷಿಸುವವರಾಗಿದ್ದು ಅವರು ಆತನು ಬಂದು ಈಗ ಪ್ರತ್ಯಕ್ಷನಾಗಿರುವದನ್ನು ಕಾಣದವರಾಗಿ ಆತನ ಗುರುತನ್ನು ಹಿಡಿಯಲು ಅಸಮರ್ಥರಾಗಿರುವರು. ಆತನು ಬಂದಿರುವದು ಶಾರೀರಿಕವಾಗಿ ಅಲ್ಲ ಆದರೆ ಆತ್ಮಿಕ ಜೀವಿಯಾಗಿ ಸಹಜವಾದ ಕಣ್ಣಿಗೆ ಅಗೋಚರವಾಗಿರುವದೆಂಬದು ನಂಬಿಕೆಯ ಮುಖಾಂತರವಾದ ದೃಷ್ಟಿಗೆ ದೃಢವಾದ ಪ್ರವಾದನಾ ವಾಕ್ಯಗಳ ಮೂಲಕವಾಗಿ ಸ್ಪಷ್ಟವಾಗಿ ರುಜುವಾತು ಪಡಿಸಲಾಗಿರುವ –ದೆಂಬುದನ್ನು ಹಾಗು ಕಷ್ಟಸಂಕಟಗಳೆಂಬ ಮೋಡಗಳ ನಡುವಿನ ಆತನ ಪ್ರತ್ಯಕ್ಷತೆ ಹಾಗು ಆತನ ಶಕ್ತಿಯನ್ನು ಗ್ರಹಿಸಲು ಅವರು ಅಸಮರ್ಥರಾಗಿರುವರು. ಈ ಕಷ್ಟಸಂಕಟಗಳೆಂಬ ಮೋಡಗಳು ಈಗ ಇಡೀ ಲೋಕದ ಮೇಲೆ ತನ್ನ ಕರಾಳ ಛಾಯೆಯನ್ನು ಚಾಚುತ್ತಿರುವದು. ಹೀಗಿದ್ದರೂ ಇವುಗಳು ವಿಶೇಷವಾಗಿ ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವವರೆಲ್ಲರಿಗೆ ವಾಸ್ತವಾಂಶವಾಗಿದ್ದು ಅತಿ ಮಹತ್ವ ಪೂರ್ಣವಾದ ಸೂಚನೆಯಾಗಿರುವದು. ನಂಬಿಗಸ್ತರಾದ ನಿಮ್ಮೆಲ್ಲರಿಗೆ ಇವು ಹೀಗೆಂದು ಆಜ್ಞಾಪಿಸುತ್ತವೆ–'ಇವು ಸಂಭವಿಸುವದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆ ಸಮೀಪವಾಗಿದೆ.' (ಲೂಕ 21:28) ಹೀಗಿರುವಲ್ಲಿ ಕ್ರೈಸ್ತರೆಂದು ಹೇಳಿಕೊಂಡು ಉಗುರು ಬೆಚ್ಚಗಾಗಿ ತಟಸ್ಥರಾಗಿರುವ ನಿಮಗೂ ಹಾಗು ಲೌಕೀಕರಾಗಿ ಪ್ರಾಪಂಚಿಕ ಸುಖದ ಮೂಲಕವಾಗಿ ತಮ್ಮ ಆತ್ಮದ ಅಭಿಲಾಷೆಗಳನ್ನು ತಣಿಸಿಕೊಳ್ಳುವವರಾದ ನಿಮ್ಮೆಲ್ಲರಿಗೂ, ಶೋಷಣೆಗೊಳಗಾದವರ ಆಕ್ರಂದನಗಳಿಗೆ ಹಾಗು ಕಷ್ಟಪೀಡಿತರ ವ್ಯಥೆಗೆ ಲಕ್ಷ್ಯಕೊಡದ ನಿಮ್ಮೆಲ್ಲರಿಗೂ ಇವುಗಳು ಹೀಗೆಂದು ಎಚ್ಚರಿಸುತ್ತವೆ–"ಮೊಟ್ಟ ಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂತ ಸಂಕಟವು ಸಂಭವಿಸುವದು" – ಆ ಸಂಕಟವು ಈಗಾಗಲೇ ಸನ್ನಿಹಿತವಾಗಿರುವದು. – ದಾನಿಯೇಲ 12:1

ದೇವಾಲಯದಲ್ಲಿ ಚಿನಿವಾರರ ಮೇಜುಗಳನ್ನು ಕೆಡವಿಹಾಕಿ, "ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ" (ಮತ್ತಾಯ 21:12,13) ಎಂದು ಹೇಳಿದ ನಮ್ಮ ಕರ್ತನ ಅಧಿಕಾರಯುಕ್ತವಾದ ರೀತಿಯು ಒಂದು ಸೂಚಕ ಕಾರ್ಯವಾಗಿ ಇನ್ನೊಂದೆಡೆಯಲ್ಲಿ ಸಹ ಈ (ಸುವಾರ್ತಾ) ಯುಗದ ಅಂತ್ಯದಲ್ಲಿ ನ್ಯಾಯವಿಚಾರಣೆಯು ದೇವರ ಆಲಯವೆಂದು ತೋರಿಕೆಗಾಗಿ

ಹೇಳಿಕೊಳ್ಳುವಲ್ಲಿಂದ (1 ಪೇತ್ರ 4:17) ಪ್ರಾರಂಭವಾಗುವದೆಂದೂ ಆತನ ತೀವ್ರವಾದ ಅಸಮಾಧಾನವು ಸತ್ಯವನ್ನು ಬಂಡವಾಳವಾಗಿ ಮಾಡಿಕೊಳ್ಳುವವರ ವಿರುದ್ಧವಾಗಿ ತೋರಿಬರುವದೆಂದು ತಿಳಿಸಲಾಗಿರುವದು.

ಆನಂತರ ಆ ಆಲಯದಲ್ಲಿ ಆತನ ಬಳಿಗೆ ಬಂದ ಕುಂಟರ ಹಾಗು ಕುರುಡರ ಸ್ವಸ್ಥಪಡಿಸುವಿಕೆಯು ನಡೆದಿದ್ದು, (ಮತ್ತಾಯ 21:14) ಇದು ಸಭೆಯಲ್ಲಿ ಆತ್ಮಿಕವಾಗಿ ಕುಂಟುವವರು ಹಾಗು ಕುರುಡಾದವರು ಸಹ ಹೇಗೆ ಆತನ ಗುಣಕಾರೀ ಹಸ್ತಸ್ಪರ್ಷದ ಮೂಲಕವಾಗಿ ಆಶೀರ್ವಾದ ಹೊಂದಬಹುದೆಂಬುದನ್ನು ತೋರಿಸುವದು – ಪ್ರಕಟನೆ 3:18,19.

ಮತ್ತು ಮಹಾಯಾಜಕರು ನೂತನ ಅರಸನನ್ನು ಕೊಂಡಾಡಿದವರ ವಿರೋಧವಾಗಿ ತಮ್ಮ ಅಸಮಾಧಾನವನ್ನು ತೋರಿಸಿದಾಗ (ಆ ಮಹಾಯಾಜಕರಂತೆ ಕ್ರೈಸ್ತದೇವಾಲಯ–ದಲ್ಲಿನ ಬೋಧಕೋದ್ಯೋಗದವರೂ ಕರ್ತನಿಂದ ತಮ್ಮ ಕುರುಡು ಹಾಗು ಕುಂಟುತನಗಳನ್ನು ಹೋಗಲಾಡಿಸಿಕೊಂಡವರ ಬಗ್ಗೆ ನಡೆದುಕೊಳ್ಳುವರು) ಯೇಸುವು–ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವವು ಎಂದು ಹೇಳಿದ್ದನು. ಯಾಕೆಂದರೆ ಪ್ರವಾದಿಯಾದ ಜೆಕರ್ಯನು–"ಚೀಯೋನ್ ನಗರಿಯೇ, ಬಹು ಸಂತೋಷಪಡು; ಯೆರೂಸಲೇಮ್ ಪುರಿಯೇ, ಹರ್ಷಧ್ವನಿಗೈ! ನೋಡು ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ (9:9) ಎಂದು ಹರ್ಷಧ್ವನಿಗೈದು ಸಂತೋಷಪಡುವದನ್ನು ಮುಂದಾಗಿ ಹೇಳಿದ್ದು ಆಗ ಆ ಸಮಯವು ಬಂದಿರಲಾಗಿ ಈ ಪ್ರವಾದನೆಯು ನಿಶ್ಚಯವಾಗಿ ನೆರವೇರಲ್ಪಡುವದಾಗಿತ್ತು. ಹೀಗೆಯೇ ಅಂದು ಆ ಛಾಯಾರೂಪದ ಸಂಗತಿಯಾಗಿತ್ತು; ಮತ್ತು ಅದರಂತೆಯೇ ಇಂದು ನಿಜರೂಪದ ಸಂಗತಿಯಲ್ಲಿಯೂ ಇರುವದು. ಅಂದು ಹರ್ಷಧ್ವನಿ ಹಾಗು ಸಂತೋಷಸಂಭ್ರಮಗಳು ನಿಜವಾಗಿಯೂ ಅಲ್ಲದೆ ಅವಶ್ಯಕವಾಗಿಯೂ ಇದ್ದಂತೆಯೇ ಈಗಲೂ ಇರುವದು, ಹಾಗು ಇದು ಅಗತ್ಯವಾಗಿಯೂ ಇರುವದು. ಭಕ್ತರು ಈ ರಾಜನ ಗುರುತು ಹಿಡಿಯುತ್ತಿದ್ದಂತೆಯೇ ಅವರ ಸಂತೋಷ ಸಂಭ್ರಮಗಳು ವಿಶೇಷವಾಗಿಯೂ ಇರುವದು; ಹಾಗು ಆತನ ಪ್ರತ್ಯಕ್ಷತೆ ಮತ್ತು ಆ ರಾಜ್ಯದ ವಿಷಯವಾಗಿ ಮಾಡಿದ ಅವರ ಪ್ರಕಟನೆಯು, ಅದನ್ನು ನಂಬಲಾಗದಿದ್ದರೂ, ಅದು ಕೇಳಲಾದ "ಹರ್ಷಧ್ವನಿ" ಆಗಿರುವದು; ಅಲ್ಲದೆ–ಹೌದು, ಕೇಳುತ್ತೇನೆ, ಸಣ್ಣ ಮಕ್ಕಳ ಬಾಯಿಂದಲೂ ಮೊಲೇಕೂಸುಗಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬುದನ್ನು ನೀವು ಎಂದಾದರೂ ಓದಲಿಲ್ಲವೋ? ಎಂದು ಯೇಸು ಹೇಳಿದ್ದನು. ಹೀಗೆಯೇ ಇರುವದು ಆ ದಿನದ ಸಂಗತಿಗಳ ನಿಜರೂಪವಾಗಿರುವ ಈಗಿನ ಸಂಗತಿಗಳೂ ಸಹ; ಯಾಕಂದರೆ ಈಗ ಪ್ರತ್ಯಕ್ಷನಾಗಿರುವ ಅರಸನ ಗುರುತು ಹಿಡಿದು 'ಹೊಸಾನ್ನ' ಎಂಬ ಧ್ವನಿ ಏಳುವದು ಈ ದಿನಗಳ ಮಹಾಯಾಜಕರುಗಳಾದ ಕ್ರೈಸ್ತಸಭಾ ಬೋಧಕವರ್ಗದ ಮೂಲಕವಾಗಿಯಲ್ಲ ಆದರೆ ಜನಸಾಮಾನ್ಯರ ಬಾಯಿಂದ, ಅಂದರೆ ಸಣ್ಣ ಮಕ್ಕಳು ಮತ್ತು ಮೊಲೆಕೂಸುಗಳ ಮೂಲಕವಾಗಿ ಸ್ತುತಿ ಹಾಗು ಜೂಬಿಲಿ ಸಂವತ್ಸರದ ಗಾನಧ್ವನಿಯು ಕೇಳಲ್ಪಡಲಾಗುವದು. ಅದೇನಂದರೆ ಈಗ ಆಳ್ವಿಕೆಮಾಡಲು ಬಂದವನಾಗಿದ್ದು ತನ್ನ ರಾಜ್ಯವನ್ನು ಸ್ಥಾಪನೆ ಮಾಡುತ್ತಿರುವ "ದಾವೀದನ ಕುಮಾರನಿಗೆ ಜಯ (ಹೊಸಾನ್ನ)" ಎಂಬುದೇ.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 10 | ಯೆರೂಸಲೇಮ್ | ಗ್ರೀಕರೊಡನೆ ಮಾಡಿದ ಸಂಭಾಷಣೆ, ಯೆಹೂದ್ಯರ ಅಪನಂಬಿಕೆ | -- | -- | -- | 12:20–50 |

## ಯೋಹಾನ 12:20–50

ಇದಲ್ಲದೆ ದೇವಾರಾಧನೆ ಮಾಡಬೇಕೆಂದು ಜಾತ್ರೆಗೆ ಬಂದವರಲ್ಲಿ ಕೆಲವು ಮಂದಿ ಗ್ರೀಕರಿದ್ದರು. ಇವರು ಗಲಿಲಾಯದಲ್ಲಿರುವ ಬೆತ್ಸಾಯಿದ ಊರಿನ ಫಿಲಿಪ್ಪನ ಬಳಿಗೆ ಬಂದು–ಅಯ್ಯಾ, ಯೇಸುವನ್ನು ನೋಡಬೇಕೆಂದಿದ್ದೇವೆಂದು ಅವರನ್ನು ಬೇಡಿಕೊಂಡರು. ಫಿಲಿಪ್ಪನು ಬಂದು ಅಂದ್ರೆಯನಿಗೆ ಹೇಳಿದನು; ಅಂದ್ರೆಯನೂ ಫಿಲಿಪ್ಪನೂ ಯೇಸುವಿಗೆ ಹೇಳಿದರು. ಆಗ ಯೇಸು ಅವರಿಗೆ ಉತ್ತರಕೊಟ್ಟು ಹೇಳಿದ್ದೇನಂದರೆ– ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಸಮಯ ಬಂದದೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲಕೊಡುವದು. ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿ–ಕೊಳ್ಳುವನು. ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ; ಮತ್ತು ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು. ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ತಂದೆಯು ಅವನಿಗೆ ಬಹುಮಾನ ಮಾಡುವನು. ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನು ಏನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು, ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು. ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ ಅಂದನು. ಅದಕ್ಕೆ–ಮಹಿಮೆಪಡಿಸಿದ್ದೇನೆ, ತಿರಿಗಿ ಮಹಿಮೆ ಪಡಿಸುವೆನು ಎಂದು ಆಕಾಶವಾಣಿಯಾಯಿತ್ತು. ಅಲ್ಲಿ

ನಿಂತುಕೊಂಡಿದ್ದ ಜನರು ಅದನ್ನು ಕೇಳಿ–ಗುಡುಗಿತು ಅಂದರು. ಇನ್ನು ಕೆಲವರು–ದೇವದೂತನು ಈತನ ಸಂಗಡ ಮಾತಾಡಿದನು ಅಂದರು. ಆದರೆ ಯೇಸು ಅವರಿಗೆ ಈ ಆಕಾಶವಾಣಿ ನನಗಾಗಿ ಆಗಲಿಲ್ಲ; ನಿಮಗಾಗಿ ಆಯಿತು. ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು. ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು. ಈ ಮಾತಿನಿಂದ ತಾನು ಇಂಥ ಸಾವು ಸಾಯತಕ್ಕವನೆಂದು ಸೂಚಿಸಿದನು. ಅದಕ್ಕೆ ಆ ಜನರು–ಕ್ರಿಸ್ತನು ಸದಾಕಾಲವೂ ಇರುತ್ತಾನೆಂದು ಧರ್ಮಶಾಸ್ತ್ರದಲ್ಲಿ ಕೇಳಿದ್ದೇವೆ; ಹಾಗಾದರೆ ಮನುಷ್ಯಕುಮಾರನು ಮೇಲಕ್ಕೆ ಎತ್ತಲ್ಪಡಬೇಕೆಂದು ನೀನು ಹೇಳುವದು ಹೇಗೆ? ಆ ಮನುಷ್ಯಕುಮಾರನು ಯಾರು? ಅಂದರು. ಯೇಸು ಅವರಿಗೆ–ಇನ್ನು ಸ್ವಲ್ಪಕಾಲವೇ ಬೆಳಕು ನಿಮ್ಮಲ್ಲಿ ಇರುತ್ತದೆ; ಕತ್ತಲೆಯು ನಿಮ್ಮನ್ನು ಮುಸುಕಿಕೊಳ್ಳದಂತೆ ಬೆಳಕು ನಿಮಗೆ ಇರುವಾಗಲೇ ಸಂಚಾರಮಾಡಿರಿ. ಕತ್ತಲೆಯಲ್ಲಿ ಸಂಚಾರಮಾಡುವವನಿಗೆ ತಾನು ಎಲ್ಲಿ ಹೋಗುತ್ತೇನೆಂದು ತಿಳಿಯದು. ನಿಮಗೆ ಬೆಳಕು ಇರುವಾಗಲೇ ಬೆಳಕನ್ನು ನಂಬಿರಿ; ನಂಬಿದರೆ ನೀವು ಬೆಳಕಿನವರಾಗುವಿರಿ ಎಂದು ಹೇಳಿದನು. ಇದನ್ನು ಯೇಸು ಹೇಳಿದ ಮೇಲೆ ಅವರನ್ನು ಬಿಟ್ಟು ಹೋಗಿ ಅಡಗಿಕೊಂಡನು.

ಆತನು ಅವರ ಮುಂದೆ ಅಷ್ಟು ಸೂಕಕಾರ್ಯಗಳನ್ನು ಮಾಡಿದರೂ ಅವರು ಆತನನ್ನು ನಂಬಲಿಲ್ಲ. ಇದರಿಂದ ಪ್ರವಾದಿಯಾದ ಯೆಶಾಯನು ನುಡಿದ ಮಾತು ನೆರವೇರಿತು; ಅದೇನಂದರೆ–ಕರ್ತನೇ, ನಮ್ಮ ಉಪದೇಶವನ್ನು ಯಾರು ನಂಬಿದರು? ಕರ್ತನ ಬಾಹುವು ಯಾರಿಗೆ ಗೋಚರವಾಯಿತು? ಎಂಬದು. ಅವರು ನಂಬಲಾರದೆ ಹೋದದ್ದಕ್ಕೆ ಯೆಶಾಯನು ಮತ್ತೊಂದು ಮಾತಿನಲ್ಲಿ ಕಾರಣವನ್ನು ಸೂಚಿಸಿದ್ದಾನೆ; ಅದೇನಂದರೆ–ಅವರು ಕಣ್ಣಿನಿಂದ ಕಾಣದೆ, ಹೃದಯದಿಂದ ಗ್ರಹಿಸದೆ ತಿರುಗಿಕೊಳ್ಳದೆ ತನ್ನಿಂದ ಸ್ವಸ್ಥತೆಯನ್ನು ಹೊಂದದೆ ಇರುವಂತೆ ಆತನು ಅವರ ಕಣ್ಣುಗಳನ್ನು ಕುರುಡುಮಾಡಿ ಅವರ ಹೃದಯವನ್ನು ಕಠಿಣಮಾಡಿದನು ಎಂಬದೇ. ಯೆಶಾಯನು ಆತನ ಮಹಿಮೆಯನ್ನು ನೋಡಿದ್ದರಿಂದ ಆತನ ವಿಷಯದಲ್ಲಿ ಮಾತಾಡುತ್ತಿರುವಾಗ ಆ ಮಾತನ್ನು ನುಡಿದನು. ಆದರೂ ಹಿರೀಸಭೆಯವರಲ್ಲಿಯೂ ಅನೇಕರು ಆತನನ್ನು ನಂಬಿದರು. ಆದರೆ ತಮಗೆ ಸಭೆಯಿಂದ ಬಹಿಷ್ಕಾರವಾದೀತೆಂದು ಫರಿಸಾಯರಿಗೆ ಅಂಜಿಕೊಂಡು ಅದನ್ನು ಜನರ ಮುಂದೆ ಹೇಳಲಿಲ್ಲ. ಯಾಕಂದರೆ ದೇವರಿಂದ ಬರುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವೇ ಅವರಿಗೆ ಇಷ್ಟವಾಗಿತ್ತು.

ಯೇಸು ಕೂಗಿ ಹೇಳಿದ ಮಾತು ಏನಂದರೆ–ನನ್ನನ್ನು ನಂಬಿದವನು ನನ್ನನ್ನೇ ನಂಬುವವನಲ್ಲ; ನನ್ನನ್ನು ಕಳುಹಿಸಿ –ಕೊಟ್ಟಾತನನ್ನು ನಂಬುವವನಾಗಿದ್ದಾನೆ. ಮತ್ತು ನನ್ನನ್ನು ನೋಡುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ನೋಡುವವ –ನಾಗಿದ್ದಾನೆ. ನನ್ನನ್ನು ನಂಬುವ ಒಬ್ಬನಾದರೂ ಕತ್ತಲೆಯಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ. ಯಾವನಾದರೂ ನನ್ನ ಮಾತುಗಳನ್ನು ಕೇಳಿದರೂ ಕೈಕೊಂಡು ನಡೆಯದೆ ಹೋದರೆ ನಾನೇ ಅವನಿಗೆ ತೀರ್ಪುಮಾಡುವದಿಲ್ಲ; ಲೋಕಕ್ಕೆ ತೀರ್ಪುಮಾಡುವದಕ್ಕಾಗಿ ನಾನು ಬಂದಿಲ್ಲ; ಲೋಕವನ್ನು ರಕ್ಷಿಸುವದಕ್ಕಾಗಿ ಬಂದಿದ್ದೇನೆ. ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ, ಅದು ಯಾವದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವದು. ಯಾಕಂದರೆ ನನ್ನಷ್ಟಕ್ಕೆ ನಾನೇ ಮಾತಾಡಿದವನಲ್ಲ; ನನ್ನನ್ನು ಕಳುಹಿಸಿಕೊಟ್ಟ ತಂದೆಯೇ–ನೀನು ಇಂಥಿಂಥದನ್ನು ಹೇಳಬೇಕು, ಹೀಗೆ ಹೀಗೆ ಮಾತಾಡಬೇಕು ಎಂಬದಾಗಿ ನನಗೆ ಆಜ್ಞೆಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು. ಆದದರಿಂದ ನಾನು ಮಾತಾಡುವದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ ಅಂದನು.

*****

# ಆಕರ್ಷಕನಾದ ಕ್ರಿಸ್ತನು–ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು

**ರೀಪ್ರಿಂಟ್ಸ್ ಪುಟ 2757**

## ಯೋಹಾನ 12:20–33

**"ಯೇಸುವನ್ನು ನೋಡಬೇಕೆಂದಿದ್ದೇವೆ"**

ವಿಜಯೋತ್ಸವದೊಡನೆ ಕತ್ತೆಯ ಮೇಲೆ ಯೆರೂಸಲೇಮಿಗೆ ಸೇರಿದ ನಮ್ಮ ಕರ್ತನು ಅನುದಿನವೂ ದೇವಾಲಯದಲ್ಲಿ ಬೋಧಿಸುತ್ತಿದ್ದನು. ತಾನು ಬಂಧಿತನಾಗಿ ಶಿಲುಬೆಯ ಮರಣವನ್ನು ಹೊಂದುವದಕ್ಕೆ ಮೊದಲು ಕೆಲವು ದಿನಗಳ ಕಾಲ ರಾತ್ರಿಯಲ್ಲಿ ಬೇಥಾನ್ಯಕ್ಕೆ ಹೋಗುತ್ತಿದ್ದು ಪ್ರತಿ ಬೆಳಿಗ್ಗೆ ದೇವಾಲಯಕ್ಕೆ ಹಿಂದಿಗಿ ಬರುತ್ತಿದ್ದನು. ಈ ಸಮಯದಲ್ಲೇ ಕೆಲವು ಮಂದಿ ಗ್ರೀಕರು ಯೇಸುವನ್ನು ಸಂದರ್ಶಿಸಲು ಯತ್ನಿಸಿ ತಮ್ಮ ಬಯಕೆಯನ್ನು ಅಂದ್ರೇಯ ಹಾಗು ಫಿಲಿಪ್ಪನ ಮೂಲಕವಾಗಿ ತಿಳಿಯಪಡಿಸಿದ್ದರು. ಬಹುಶಃ ಈ ಇಬ್ಬರು ಶಿಷ್ಯರೇ ಗ್ರೀಕ್ ಭಾಷೆಯನ್ನು ಮಾತನಾಡಲು ಬಲ್ಲವರಾಗಿದ್ದು, ಅವರು ಗ್ರೀಕ್ ಭಾಷೆಯನ್ನು ಬಹು ಮಟ್ಟಿಗೆ ಬಳಸಲಾಗುತ್ತಿದ್ದ ಪಟ್ಟಣದಿಂದ (ಬೇತ್ಸಾಯಿದ) ಬಂದವರಾಗಿದ್ದರು; ಅಲ್ಲದೆ ಅವರ ಹೆಸರುಗಳೂ ಗ್ರೀಕ್ ಭಾಷಾಮೂಲದವುಗಳಾಗಿದ್ದವು. ಆದುದರಿಂದ ಈ ಇಬ್ಬರು (ಶಿಷ್ಯರು) ಆ ಸಂದರ್ಶನಕಾರರಿಗೆ ಬಾಯಂತಿದ್ದು ಅವರ ಬಯಕೆಯನ್ನು

ಕರ್ತನಿಗೆ ತಿಳಿಸಿದ್ದು ಅತಿ ಸಹಜವೇ ಆಗಿತ್ತು. ನಿಸ್ಸಂದೇಹವಾಗಿ ಅವರು ಕೇಳಿಕೊಂಡದ್ದರ ಕಾರಣವೇನಂದರೆ ಆ ಸಮಯದಲ್ಲಿ ನಮ್ಮ ಕರ್ತನು ಇರುತ್ತಿದ್ದ ದೇವಾಲಯದ ಭಾಗಕ್ಕೆ ಹುಟ್ಟಿದಂದಿನಿಂದ ಯೆಹೂದ್ಯರಾದವರೇ ಹೊರತು ಬೇರೆ ಯಾರೂ ಬರುವಂತೆ ಇಲ್ಲದಿರಲು, ಈ ಗ್ರೀಕರು ಯೆಹೂದ್ಯ ಮತಾವಲಂಬಿಗಳಾಗಿದ್ದು ದೇವಾಲಯದಲ್ಲಿನ ಅನ್ಯಜನಗಳ ಅಂಗಳದ ನಂತರ ಯಾವ ಪರಿಶುದ್ಧ ಸ್ಥಳಗಳ ಬಳಿಗೂ ಬರಲು ಅಂಥವರಿಗೆ ಅಪ್ಪಣೆಯಿರಲಿಲ್ಲ. ಹೀಗಿರಲಾಗಿ ಯೇಸುವು ಸಂದರ್ಶನ ನೀಡಲು ಹೊರಗೆ ಬಂದು ಅವರಿದ್ದಲ್ಲಿಗೆ ಬರಬೇಕೆಂಬುದು ಅವರ ಕೋರಿಕೆಯ ಅರ್ಥವಾಗಿತ್ತು.

ಅವರ ಭೇಟಿಯ ಉದ್ದೇಶ ಏನಾಗಿರಬಹುದೆಂಬುದು ನಮಗೆ ತಿಳಿಸಲಾಗಿಲ್ಲ; ಇಲ್ಲವೇ ನಮ್ಮ ಪಾಠದಲ್ಲಿ ಮುಂದೆ ಉಲ್ಲೇಖವಾಗಿರುವ ನಮ್ಮ ಕರ್ತನ ಮಾತುಗಳು ಗ್ರೀಕರಿಗೆ ಸಂಬೋಧಿಸಿದ್ದೆಂದು ನಾವು ಕಲ್ಪಿಸಿಕೊಳ್ಳಬೇಕಿಲ್ಲ; ಆದರೆ ವಾಸ್ತವದಲ್ಲಿ ಘಟನೆಯ ನಿರೂಪಣೆಯಲ್ಲಿ ಒಂದು ಒಡಕು ಕಾಣಿಸಿಕೊಂಡಿರುವದು. ತಮಗೆ ಸಂದರ್ಶನ ನೀಡಬೇಕೆಂಬ ಅವರ ಕೋರಿಕೆಗೆ ನಮ್ಮ ಕರ್ತನು ನಿಸ್ಸಂದೇಹವಾಗಿ ಸ್ಪಂದಿಸಿದ್ದನು; ಆದರೆ ಅವರು ಮಾಡಿದ ಸಂಭಾಷಣೆಯ ಸಾರಾಂಶವು ಸಭೆಗೆ ಅಗತ್ಯವಿಲ್ಲವೆಂಬದಾಗಿ ಪರಿಗಣಿಸಿ, ಆ ಕಾರಣದಿಂದ ಅದನ್ನು ದಾಖಲಿಸಲಾಗಿಲ್ಲ. ಹೀಗಿದ್ದರೂ ಆದಿಸಭೆಯ ಚರಿತ್ರಾಕಾರನಾದ ಏಸೂಬಿಯಸ್ ಎಂಬಾತನು ಹೇಳುವಂತೆ ಸಿರಿಯಾದೇಶದ ಎದೆಸ್ಸಾ ಪಟ್ಟಣದ ರಾಜನು ಯೇಸುವಿನ ಬಳಿಗೆ ದೂತರನ್ನು ಕಳುಹಿಸಿ ಆತನನ್ನು ತನ್ನೊಡನೆ ಇರುವಂತೆಯೂ ಅಲ್ಲದೆ ಅವನು ಯೇಸುವಿಗೆ ರಾಜಮರ್ಯಾದೆಯ ಅನುಸಾರವಾಗಿ ಬರಮಾಡಿಕೊಳ್ಳುವೆನೆಂದು ವಾಗ್ದಾನಮಾಡಿದ್ದನೆಂಬುದನ್ನು ಇಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸುವದು ಅನುಚಿತವಲ್ಲದಿರಬಹುದು. ಈ ಹೇಳಿಕೆಯಲ್ಲಿ ಸತ್ಯಾಂಶವಿತ್ತು ಎನ್ನುವದರಲ್ಲಿ ಆಶ್ಚರ್ಯವಿಲ್ಲ; ಆದರೆ ನಮ್ಮ ಕರ್ತನು ಇಂಥಾ ಸ್ನೇಹಾಭಿಲಾಷೆಯನ್ನು ತಳ್ಳಿಹಾಕುವನೆಂಬುದು ನಮಗೆ ಚೆನ್ನಾಗಿ ತಿಳಿದಿರುವದು. ಕಾರಣ ಆತನು ತನ್ನ ಶಿಷ್ಯರನ್ನು (ಸುವಾರ್ತೆ ಸಾರಲು) ಕಳುಹಿಸಿಕೊಡುವಾಗ ತಾನೇ ಪ್ರಕಟಮಾಡಿ ಹೇಳಿದ್ದೇನಂದರೆ –"ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ..."

ದೇವರು ತನ್ನ ಬಂಢಾರದಲ್ಲಿ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದಗಳನ್ನು ಇಟ್ಟುಕೊಂಡಿದ್ದನು; ಆದರೆ ಆಗಲೇ ಅಲ್ಲ, ಅಲ್ಲದೆ ಆ ರೀತಿಯಲ್ಲಿಯೂ ಆಗಿರಲಿಲ್ಲ. ಎಲ್ಲಾ ಸಂಗತಿಗಳೂ ದೇವರ ಯೋಜನೆಯ ಅನುಸಾರ ದೈವೀಕ ಕ್ರಮದಲ್ಲಿ ನಡೆಯಲ್ಪಡಬೇಕು. ಆ ಯೋಜನೆಯಲ್ಲಿ ಲೋಕಕ್ಕಾಗಿರುವ ಸಾಮಾನ್ಯ ಆಶೀರ್ವಾದ ಬರುವದಕ್ಕೆ ಮೊದಲೇ ಅಬ್ರಹಾಮನ ಸಂತತಿಯ ಆಯ್ಕೆಯು (ಗಲಾತ್ಯ 3:16, 29) ನಡೆಯಬೇಕೆಂದು ಏರ್ಪಾಡು ಮಾಡಲಾಗಿತ್ತು; ಅಲ್ಲದೆ ಅಬ್ರಹಾಮನ ಈ ಸಂತತಿಯ ಸದಸ್ಯರಾಗುವ ಪ್ರಸ್ತಾವನೆಯು ದೇವರ ಏರ್ಪಾಡಿನ ಅನುಸಾರವಾಗಿ ಯಹೂದ್ಯರಿಗೆ ಮೊದಲು ನೀಡಬೇಕಾಗಿತ್ತು.

ಗ್ರೀಕರೊಡನೆ ಮಾಡಿದ ಸಂದರ್ಶನವು ಮುಕ್ತಾಯವಾದ ನಂತರದಲ್ಲಿ ಹಾಗೂ ಕಡೆಯಲ್ಲಿ ಲೋಕವು ತಮ್ಮ ಒಡೆಯನನ್ನು ಸೂಕ್ತವಾದ ಬೆಳಕಿನಲ್ಲಿ ಗುರುತಿಸಿ ಸ್ತುತಿಸಲು ಎಚ್ಚೆತ್ತುಕೊಳ್ಳುತ್ತಿರುವದಾಗಿಯೂ ಹಾಗೂ ಶೀಘ್ರದಲ್ಲಿಯೇ ಮೆಸ್ಸೀಯನಿಗೆ ಮುಂದಾಗಿ ಹೇಳಿರುವ ಉನ್ನತ ಸ್ಥಾನಕ್ಕೆ ಆತನನ್ನು ಏರಿಸುವರೆಂಬ ನಿರೀಕ್ಷೆಯ ದೆಸೆಯಿಂದ ಅಪೊಸ್ತಲರ ಹೃದಯದ ಮಿಡಿತವು ಹೆಚ್ಚಾಗುತ್ತಿರು–ವಾಗ ಅಲ್ಲದೆ ತಾವು ಆತನೊಂದಿಗೆ (ಯೇಸುವಿನೊಂದಿಗೆ) ಆ ರಾಜ್ಯದಲ್ಲಿ ಸಹ–ಬಾಧ್ಯರಾಗುವೆವೆಂಬ ತಮ್ಮ ನಿರೀಕ್ಷೆಯು ಉನ್ನತವಾಗಿ ಸುಳಿದಾಡುತ್ತಿರುವಾಗಲೇ ಯೇಸುವು ನಮ್ಮ ಪಾಠದಲ್ಲಿನ ಉಳಿದ ಭಾಗವಾಗಿ ರಚನೆಗೊಂಡ ಮಾತುಗಳನ್ನು ನುಡಿದಿದ್ದನು. ಮುಂದೆ ಸನಿಹದಲ್ಲಿರುವ ಕಾಲದಲ್ಲಿ ಸಂಭವಿಸಲಿರುವ ತನ್ನ ಶ್ರಮಸಂಕಟಗಳ ಆಧಾರದ ಮೇಲೆಯೇ ಮುಂಬರಲಿರುವ ಆತನ ಮಹಿಮೆಯು ಅವಲಂಬಿಸಿರುವ –ದೆಂಬುದನ್ನು ತನ್ನ ಶಿಷ್ಯರಿಗೆ ತೋರಿಸಕೊಡಲು ಆತನಿಗೆ ಇದು ಒಂದು ಸದವಕಾಶವಾಗಿತ್ತು. ತನಗೆ ನಂಬಿಗಸ್ತರಾದ ಕೆಲವರಲ್ಲಿ ಅವರು ತನ್ನ ಮರಣದ ಬಗ್ಗೆ ಮೊದಲೇ ತಿಳಿಸಿರುವ ಸಂಗತಿಯು ಅಕ್ಷರಶಃ ಹೇಗೆ ನೆರವೇರುವದೆಂಬುದನ್ನು ಮನಗಂಡಾಗ ಅದು ಅವರಲ್ಲಿ ಎಂಥಾ ಕಠೋರವಾದ ನಿರಾಶೆಯನ್ನು ಹಾಗು ಹೃದಯದಲ್ಲಿ ವೇದನೆಯನ್ನು ಉಂಟುಮಾಡುವದೆಂಬುದು ಆತನಿಗೆ ಚೆನ್ನಾಗಿ ತಿಳಿದಿತ್ತು. ಆತನು ಅವರಿಗೆ ಕೆಲವು ಸಲಹೆಗಳನ್ನು ಕೊಡುವನು; ಇವು ನಂತರದಲ್ಲಿ ಅವರಿಗೆ ಸಹಾಯಕಾರಿಯಾಗಿ ಅವರನ್ನು ಆತನ ಶ್ರಮಸಂಕಟಗಳ ಮೂಲಕವಾಗಿ, ನಂಬಿಕೆಯೆಂಬ ಕಣ್ಣುಗಳ ಮುಖಾಂತರವೇ ಹೊರತು ಕಾಣಲಾಗದಂಥ, ಕಾದಿರಿಸಲಾಗಿದ್ದ ಆ ಮಹಿಮೆಯನ್ನು ನೋಡಲು ಸಮರ್ಥರನ್ನಾಗಿ ಮಾಡುವದಿತ್ತು.

ಈ ಅಂಶವನ್ನೇ ಮನಸ್ಸಿನಲ್ಲಿಕೊಟ್ಟುಕೊಂಡವನಾಗಿ ನಮ್ಮ ಕರ್ತನು–"ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಸಮಯ ಬಂದದೆ" ಎಂದು ಪ್ರಕಟಿಸಿ ಹೇಳಿದ್ದನೆಂಬುದು ನಮ್ಮ ನಂಬಿಕೆ. ಆತನು ಭೂಲೋಕದಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಡುವನೆಂಬುದನ್ನು ತಿಳಿಸುತ್ತಿರುವನೆಂದು ಶಿಷ್ಯರು ಮೊದಲಿಗೆ ಇದನ್ನು ತಿಳಿದುಕೊಂಡಿದ್ದರು; ಆದರೆ ತಾನು ಮಹಿಮೆಹೊಂದುವದರ ಆರಂಭವು ಹತ್ತಿರವಾಗಿದ್ದರೂ ಇದಕ್ಕೆ ಮೊದಲು ಶ್ರಮಮರಣಗಳು ಅನುಭವಿಸಲ್ಪಡಬೇಕೆಂಬ ಅಂಶಕ್ಕೆ ಅವರ ಗಮನವನ್ನು ಆತನು ಶೀಘ್ರವಾಗಿ ಸೆಳೆದಿದ್ದನು. ಅಪೊಸ್ತಲನು ವಿವರಿಸಿ ಹೇಳಿರುವಂತೆ ಆತನ ಮಹಿಮೆಯು ಸತ್ತವರೊಳಗಿಂದ ಪುನರುತ್ಥಾನಗೊಂಡ ನಂತರದಲ್ಲಿ ಅಂದರೆ ಆತನು "ಬದುಕಿಸುವ ಆತ್ಮವಾಗಿ" ನಿರ್ಲಯಾವಸ್ಥೆ–ಬಲದಿಂದ ಕೂಡಿ ಪ್ರಭಾವವುಳ್ಳ ಆತ್ಮಿಕ ದೇಹದಲ್ಲಿ ಎದ್ದುಬರುವಲ್ಲಿ ಆರಂಭಗೊಂಡಿತ್ತು (1 ಕೊರಿಂಥ 15:42–45). ಈ ಮಹಿಮಾ ಪ್ರಭಾವವು ತಂದೆಯ ಬಳಿಯಲ್ಲಿನ ಪ್ರಭಾವಸ್ಥಾನಕ್ಕೆ ಆತನು ಸೇರಿಸಲ್ಪಡುವಾಗ ಅಧಿಕಗೊಂಡಿತ್ತು. ಅಲ್ಲಿಗೆ ಆತನು ಬಲದಿಂದ ಕೂಡಿದ ದೇವರ ಸನ್ನಿಧಾನದ ಬಲಗಡೆಯಲ್ಲಿನ ಪ್ರಭಾವಸ್ಥಾನದಲ್ಲಿ ನಮಗೋಸ್ಕರವಾಗಿ ಕಾಣಿಸಿಕೊಂಡವನಾಗಿ ತನ್ನ ಮಹಾಧಿ–ಕಾರವನ್ನು ವಹಿಸಿಕೊಂಡು ಭೂಮಿಯ ಮೇಲೆ ಅರಸನಾಗಿ ಆಳ್ವಿಕೆಮಾಡಬೇಕಾಗಿರುವ ಕ್ಲುಪ್ತ ಸಮಯವು ಬರುವವರೆಗೂ

ಕಾದುಕೊಂಡಿರುವನು. ಇವೆಲ್ಲವುಗಳನ್ನು ಆತನು ತನ್ನ ಅಮೂಲ್ಯ ರಕ್ತದ ಮೂಲಕವಾಗಿ ವಿಮೋಚಿಸಿಕೊಂಡಿರುವನು.

## "ಆ ಗಳಿಗೆ ಬಂದಿತ್ತು!"

"ಆ ಗಳಿಗೆ ಬಂದಿತ್ತು" ಎಂದು ವ್ಯಕ್ತವಾಗಿರುವದರಲ್ಲಿ ಇದು ಅರವತ್ತು ನಿಮಿಷಗಳನ್ನು ಸೂಚಿಸುವದೆಂದು ಅರ್ಥಮಾಡಿ–ಕೊಳ್ಳಬೇಕೆಂಬ ಅಗತ್ಯವಿರುವುದಿಲ್ಲ; "ದಿನ" ಎಂಬ ಶಬ್ಧವು ಯಾವಾಗಲೂ ಕೇವಲ ಇಪ್ಪತ್ತನಾಲ್ಕು ಗಂಟೆಗಳನ್ನು ಸೂಚಿಸುವದಿಲ್ಲ ಆದರೆ ಹೋಲಿಸಿದಾಗ ಅದು ಇನ್ನೂ ಒಂದು ಅಲ್ಪವಾದ ಸಮಯ ಅಥವಾ (ದೊಡ್ಡ) ಯುಗವನ್ನು ಸೂಚಿಸುವದು, ಉದಾಹರಣೆಯಾಗಿ ಹೇಳುವದಾದರೆ "ನೋಹನ ದಿನಗಳು', "ಮೋಶೆಯ ದಿನಗಳು', "ಯೇಸುವಿನ ದಿನಗಳು", ಇತ್ಯಾದಿ. ಯೇಸುವಿನ ದಿನಗಳಿಗೆ ಹೋಲಿಸಿದಾಗ ಉಲ್ಲೇಖಿಸಿರುವ ಘಟನಾನುಭವಗಳು ಆ "ಗಳಿಗೆಯಲ್ಲಿ" ಅಥವಾ ಅಲ್ಪಾವಧಿಯ ಸಮಯದಲ್ಲಿ ಸಂಭವಿಸಿರುವದೆಂದು ಸೂಕ್ತವಾಗಿ ಹೇಳಬಹುದು.

ಹೀಗೆ ತಾನು ಮಹಿಮೆಹೊಂದುವದು ಮುಂದೆ ಬಹು ದೂರದಲ್ಲಿ ಇರದೆಂಬುದನ್ನು ಅವರಿಗೆ ಖಚಿತವಾಗಿ ಹೇಳಿದ ನಂತರ ನಮ್ಮ ಕರ್ತನು ತನ್ನ ಮರಣದ ಅಗತ್ಯತೆಯು ಮನಸ್ಸಿಗೆ ಬಹುವಾಗಿ ನಾಟುವಂತೆ "ನಿಜನಿಜವಾಗಿ" ಎಂದು ಹೇಳಿದ್ದನು. ಅಂದರೆ ನಿಜವಾಗಿಯೂ ಬಹು ಖಚಿತವಾಗಿ, ಮಹತ್ವ ಪೂರ್ಣವಾಗಿ, ನಿಮಗೆ ನಾನು ಪ್ರಭಾವಹೊಂದುವದರ ಒಂದು ನಿದರ್ಶನವನ್ನು ಕೊಡುವೆನು, ದೇವರ ಏರ್ಪಾಟಿನ ಪ್ರಕಾರವಾಗಿ ಅದು ನನ್ನ ಮರಣದ ಮೂಲಕವಾಗಿ ಸಂಭವಿಸುವದು. (ಹೇಗಂದರೆ) ಗೋದಿಯ ಕಾಳನ್ನು ನೆಡದೇಹೋದಲ್ಲಿ ಅದು ಕಾಳಾಗಿಯೇ ಉಳಿಯುವದು, ಅಲ್ಲದೆ ಒಂದು ಕಾಳು ಸಾಯುವದರ ಮೂಲಕವಾಗಿ ಅನೇಕ ಕಾಳುಗಳಿಗೆ ಅದು ಜೀವ ಹಾಗು ಕಾಳಾಗಿರುವಿಕೆಯನ್ನು ಕೊಡುವದು. ನಮ್ಮ ಕರ್ತನು ಈ ರೀತಿ ಮಾಡುವದನ್ನು ಆದುಕೊಂಡಿದ್ದಲ್ಲಿ ಅಂದರೆ ಆತನು ನಮ್ಮ ಪರವಾಗಿ ಮರಣ ಹೊಂದದೆ ಹೋದಲ್ಲಿ ಆ ಒಂದು ಕಾಲದಲ್ಲಿ ಒಬ್ಬೊಂಟಿಗನಾಗಿಯೇ ಉಳಿದುಕೊಳ್ಳುವ ಸವಲತ್ತನ್ನು ಹೊಂದಿರುತ್ತಿದ್ದನು. ಆತನು ಈ ವಿಧಾನವನ್ನು ಅನುಸರಿಸಿದ್ದೇ ಯಾದಲ್ಲಿ ನಾವು ಇಂದಿಗೂ ವಿಮೋಚಿಸಲ್ಪಡದೇ ಹೋಗುತ್ತಿದ್ದೆವು ಅಲ್ಲದೆ ಫಲಗಳನ್ನು ಹೊರತರಲು ಆತನಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಆತನು ತನ್ನ ಜೀವವನ್ನು ಪ್ರತಿಷ್ಠಿಸಿಕೊಂಡಿದ್ದನು; ಆತನು ಸ್ವತಃ ತಾನಾಗಿಯೇ ತಂದೆಯ ಚಿತ್ತವನ್ನು ಅನುಸರಿಸುವವನಾಗಿ ತನ್ನ ಜೀವವನ್ನು ಆದಾಮನ ಹಾಗು ಆತನ ಸಂತತಿಯ ಪರವಾಗಿ ಯಜ್ಞವಾಗಿ ಸಮರ್ಪಿಸಿಕೊಳ್ಳಲು ಗೊತ್ತುಮಾಡಿಕೊಂಡಿದ್ದನು. ಹೀಗಾಗಿ ತಾನು ತನ್ನ ಜೀವವನ್ನು ಪ್ರೀತಿಸಿಕೊಂಡಿದ್ದೇಯಾದಲ್ಲಿ ತಾನು ಅದನ್ನು ಕಳಕೊಳ್ಳುವೆನೆಂದೂ, ಆದರೆ ತನ್ನನ್ನು ರಕ್ಷಿಸಿಕೊಳ್ಳಲು ಯುತ್ನಿಸುವದಕ್ಕೆ ಬದಲಾಗಿ ಮರಣ ಪರ್ಯಂತರವಾದ ತನ್ನ ವಿಧೇಯತೆಯ ಪ್ರತಿಫಲವಾಗಿ ತಂದೆಯು ತನಗೆ ವಾಗ್ದಾನಮಾಡಿರುವ ಮುಂದಿನ ನಿತ್ಯವಾಗಿರುವ ಜೀವಕ್ಕೆ ತನ್ನ ಈಗಿನ ಜೀವಿತವನ್ನು ಹೋಲಿಸಿಕೊಂಡವನಾಗಿ ಅದನ್ನು ನಿಜವಾಗಿಯೂ ಹಗೆಮಾಡಿಕೊಳ್ಳ ಅಥವಾ ನಿರಾಕರಿಸಿ–ಕೊಳ್ಳಬೇಕಿರುವದೆಂಬುದನ್ನೂ ಸಾರಿಹೇಳಿದ್ದನು.

ಇದನ್ನು ಹೀಗೆ ಅರ್ಥಮಾಡಿಕೊಂಡಾಗ, ಈ 25ನೇ ವಚನವು ನಮ್ಮ ಕರ್ತನಿಗೆ ಮಾತ್ರ ಪ್ರತ್ಯೇಕವಾಗಿ ಅನ್ವಯ–ವಾಗುವದೆಂಬುದನ್ನು ಗಮನಿಸಲಾಗುವದು, ಅಲ್ಲದೆ ಅದು ಆತನ ಹಿಂಬಾಲಕರಿಗೆ ಅಲ್ಲ, ಯಾಕಂದರೆ ಅವರಿಗೆ ಕಳೆದುಕೊಳ್ಳಲು (ಯಾವುದೆ) ಜೀವವಿರಲಿಲ್ಲ; ಅವರುಗಳು ಹಾಗು ಸಮಸ್ತ ಲೋಕವೆಲ್ಲಾ ತಂದೆಯಾದ ಆದಾಮನ ಅಪರಾಧದ ಫಲವಾದ ಮರಣದಂಡನೆಯ ಮೂಲಕವಾಗಿ ಸತ್ತವರಾಗಿದ್ದರು. ಕೇವಲ ನಮ್ಮ ಕರ್ತನು ಮಾತ್ರವೇ ಜೀವವುಳ್ಳವನಾಗಿದ್ದನು; ತಾನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವ ಸಲುವಾಗಿ (ಮರಣದಲ್ಲಿ) ಅದನ್ನು ನೀಡುವ ಇಲ್ಲವೇ ಬದಲುಕೊಡುವ ಹಕ್ಕನ್ನು ಹೊಂದಿದವನಾಗಿದ್ದನು. ಯೇಸುವು ತನ್ನ ಜೀವವನ್ನು "ಎಲ್ಲರ ವಿಮೋಚನಾರ್ಥವಾಗಿ (ಈಡಾಗಿ) ಒಪ್ಪಿಸಿಕೊಡುವದಕ್ಕೆ ಮೊದಲು ಇಂಥಾ ಸವಲತ್ತುಗಳು ಆತನ ಶಿಷ್ಯರಿಗೆ ಬಂದಿರಲಿಲ್ಲ. ಆನಂತರದಲ್ಲಿ, ಈಡನ್ನು ನೀಡುವಂತಾಗಿ ಹಾಗು ಅದು ತಂದೆಯಿಂದ ಅಂಗೀಕಾರಗೊಂಡ ಕೂಡಲೇ ಆ ವಿಮೋಚಿತರು (ತಮ್ಮ ನಂಬಿಕೆಯ ಮೂಲಕವಾಗಿ ನೀತಿವಂತರೆಂಬ ನಿರ್ಣಯ–ವನ್ನು ಹೊಂದಿವರು) ಜೀವದ ಹಕ್ಕನ್ನು ಪಡೆಯುವರೆಂದು ಪರಿಗಣಿಸಲು ಸಾಧ್ಯವಾಗಿತ್ತು. ಅದನ್ನು ಅವರು ಕರ್ತನ ಯಜ್ಞವೇದಿಯ ಮೇಲೆ ಪ್ರತಿಷ್ಠೆಮಾಡಿಕೊಂಡು ಯೇಸುವಿನ ಹೆಜ್ಜೆಯ ಜಾಡನ್ನು ಅನುಸರಿಸುವವರಾಗಿ ಅದನ್ನು ಪರಲೋಕದ ಜೀವಕ್ಕೆ ಬದಲುಮಾಡಿಕೊಳ್ಳುವ ಸೌಭಾಗ್ಯವನ್ನು ಪಡೆದ–ವರಾಗುವರು.

ಮತ್ತು ಈ ವ್ಯಾಖ್ಯಾನುಸಾರವಾಗಿಯೇ ಮುಂದಿನ ವಚನವು ಸಂಪೂರ್ಣವಾಗಿ ಯೇಸುವಿನ ಹಿಂಬಾಲಕರ ವಿಷಯವಾಗಿ ವಿಭಿನ್ನವಾದ ರೀತಿಯಲ್ಲಿ ಹೇಳಿರುವದು. ಅದೇನಂದರೆ, ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ನನ್ನ ಹಿಂದೆ ಬರಲಿ; ಮತ್ತು ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು. ಅಂದರೆ ಈ ಅನುಭವ ಪಡೆಯುವದರಲ್ಲಿ ಆತನನ್ನು ಹಿಂಬಾಲಿಸುವದೆಂಬದು. ಈ ಮಾರ್ಗದಲ್ಲಿ ಆತನು ಮುಂದಾಗಿ ಓಡುವವನಾಗಿ ಅದನ್ನು ಆಗಲೇ ದಾಟಿಹೋಗುತ್ತಾ ಇದ್ದನು; ಹೇಗಂದರೆ ತನ್ನನ್ನು ಪ್ರತಿಷ್ಠೆಮಾಡಿಕೊಂಡು ಆ ನಂತರ ವಾಗ್ದಾನ ಮಾಡಲಾದ ಆತ್ಮಿಕ ಜೀವಿತ ಹಾಗು ಪರಲೊಕವೈಭವವನ್ನು ತಾನು ಹೋಲಿಸಿಕೊಂಡ–ವನಾಗಿ ಭೂಲೋಕ ಜೀವಿತದಲ್ಲಿ ತನಗಿರುವದನ್ನು ನಿರಾಕರಿಸಿಕೊಂಡವನಾಗಿದ್ದುದು.

ರಕ್ಷಣೆಹೊಂದಿದವರಲ್ಲಿ–ಪೂರ್ಣಜಯಶಾಲಿಗಳು, ಮಹಾ ಸಮೂಹ ಹಾಗು ಪುನರುದ್ಧಾರಿತರು ಎಂಬ ಅನೇಕ ವಿಭಿನ್ನ ವರ್ಗಗಳಿರುವದೆಂಬುದನ್ನು ಗ್ರಹಿಸಲು ಕ್ರೈಸ್ತರಲ್ಲಿ ಸಾಮಾನ್ಯವಾಗಿ ಎಲ್ಲರೂ ವಿಫಲರಾಗಿರುವಂಥದ್ದು ಅವರಿಗೆ ಬಹು ಹಾನಿಕರ –ವಾಗಿರುವದು. ಕೇವಲ ಯೇಸುವಿನ ಹೆಜ್ಜೆಯ ಜಾಡನ್ನು ಅನುಸರಿಸುತ್ತಿರುವಂಥವರು ಮಾತ್ರವೇ ಎಂದಾದರೂ

ಆತನೊಂದಿಗಿದ್ದು ತಂದೆಯಿಂದ ಸನ್ಮಾನಿಸಲ್ಪಡುವರು ಎಂಬ ಅಂಶವು ತಮಗಿರುವ ಭೂಸಂಬಂಧವಾದವುಗಳನ್ನು ನಿರಾಕರಿಸಿ ಕೊಂಡು ಅವುಗಳನ್ನು ತ್ಯಜಿಸಿದವರಾಗಿ ಯೇಸುವಿನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಯತ್ನಿಸುತ್ತಿರುವ ಸುಸ್ಥಿತಿಯಲ್ಲಿರುವವರನ್ನು ಹಾಗು ವಾಗ್ದಾನಮಾಡಲ್ಪಟ್ಟ ಮುಂದಿನ ಜೀವಿತಕ್ಕೆ ತಮ್ಮನ್ನು ಹೋಲಿಸಿಕೊಂಡವರಾಗಿ ಈಗಿನ ಜೀವಿತವನ್ನು ನಿರಾಕರಿಸಿ ಕೊಳ್ಳಲು ಪರಿಶ್ರಮಿಸುತ್ತಿರುವವರನ್ನು ಸಂತೋಷ ಸಮಾದಾನ ಸಂತೃಸುವಿಕೆಗಳಿಂದ ಬಹು ವಂಚಿತರನ್ನಾಗಿ ಮಾಡಿರುವವದು. ಕಾರಣ ಇಂಥಾ ಸೇವಕರುಗಳೇ ನಿಜವಾಗಿಯೂ "ಚಿಕ್ಕ ಹಿಂಡು" ಎಂಬ ವರ್ಗವಾಗಿ ರಚಿತಗೊಳ್ಳುವರೆಂದು ಅವರು ತಿಳಿದು ಕೊಂಡಿರುವದೇ. ಚಿಕ್ಕ ಹಿಂಡನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ ನಿತ್ಯವಾದ ಯಾತನೆಗೆ ಹೋಗುವರು ಎನ್ನುವದು ದೇವರ ಯೋಜನೆಯೆಂದು ಅವರು ನಂಬಿ–ಕೊಂಡಿದ್ದು ಇಂಥಾ ಯೋಜನೆಯಲ್ಲಿ ವ್ಯಕ್ತವಾಗಿರುವ ದೇವರಂತೆಯೇ ತಾವೂ ಹೆಚ್ಚೆಚ್ಚಾಗಿ ಆಗಬೇಕೆಂದು ಅವರು ಪರಿಶ್ರಮಿಸುತ್ತಿರುವರು. ದೇವರ ಯೋಜನೆಯ ಬಗ್ಗೆ ಅವರಿಗಿರುವ ಈ ಅಜ್ಞಾನದ ಪರಿಣಾಮವು ಅನೇಕರಲ್ಲಿ ಅವರ ಹೃದಯವನ್ನು ಕಠಿಣಗೊಳಿಸಿರುವದು. ಬದಲಿಗೆ ಇತರರು ಯೇಸುವಿನೊಡನೆ ಸಹಕಾರಿಗಳಾಗಿ ದೇವರಿಂದ ಪ್ರಭಾವವನ್ನು ಹೊಂದುವ ಮಾರ್ಗವು ಬಹು ಇಕ್ಕಟ್ಟೆಂಬುದನ್ನು ನಂಬಲೊಲ್ಲದೆ ಅದರಲ್ಲಿ ತಮ್ಮ ಸ್ನೇಹಿತರು ತಮ್ಮ ಕುಟುಂಬದವರು ತಮ್ಮ ನೆರೆಹೊರೆಯವರು ಅನ್ಯಜನರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಸೇರಿಸಿಕೊಳ್ಳುವ ಸಲುವಾಗಿ ಆ ಮಾರ್ಗವನ್ನು ಅಧಿಕಾಧಿಕವಾಗಿ ವಿಶಾಲಗೊಳಿಸುವಂಥಾ ಉದಾರಭಾವ ತಮ್ಮಲ್ಲಿ ಬೆಳಸಿಕೊಂಡಿ–ರುವರು; ಮತ್ತು ಹೀಗೆ ಬಹುಶಃ ತಮಗೆ ಅರಿಯದಂತೆಯೇ ಅವರು ಇತರರಿಗೆ ಮಾತ್ರವಲ್ಲದೆ ತಮಗೋಸ್ಕರವೂ ನಿಜವಾದ ಶಿಷ್ಯತನದ ಗುಣಮಟ್ಟವನ್ನು ಖಚಿತ ರೀತಿಯಲ್ಲಿ ಹಂತಹಂತವಾಗಿ ತಗ್ಗಿಸುತ್ತಿರುವರು. ಅವರು ಸಂಪ್ರದಾಯಿಕ ಬಹಿರಾಚಾರಗಳು ಅಲ್ಲದೆ ನುಡಿಆಡಂಬರಗಳು ತೋರಿಕೆಯ ನೀತಿವಂತಿಕೆಗಳು ಇವುಗಳಲ್ಲಿ ಸಂತೃಪ್ತರಾಗುತ್ತಿರುವರು; ಅಲ್ಲದೆ ತನ್ನ ಜೊತೆಗಾರರಾಗಿ ತಂದೆಯಿಂದ ಸನ್ಮಾನ ಹೊಂದಲಿರುವರು ತಮ್ಮ ಶಿಲುಬೆಯನ್ನು ಹೊತ್ತುಕೊಂಡು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯುವವರಾಗಬೇಕೆಂಬ ನಮ್ಮ ರಕ್ಷಕನ ಮಾತಿಗನುಸಾರವಾಗಿ ಕಲ್ಪನೆ ಮಾಡಿಕೊಳ್ಳುವಲ್ಲಿ ಅವರು ತಮ್ಮ ಹಿಂದಿನ ಅಭಿಪ್ರಾಯಗಳು ಸರಿಯಾದವುಗಳಲ್ಲವೆಂಬುದನ್ನು ಹೆಚ್ಚುಹೆಚ್ಚಾಗಿ ವಿವೇಚನೆಗೆ ತೆಗೆದುಕೊಳ್ಳುತ್ತಾ ಬರುತ್ತಿರುವರು.

ದೇವವಾಕ್ಯದ ಹಾಗು ಯೋಜನೆಯ ಮೇಲೆ ಈಗ ಹೊಳೆಯುತ್ತಿರುವ ಈ ಸುಗ್ಗೀಕಾಲದ ಬೆಳಕು ತನ್ನ ಕರ್ತನೊಡನೆ ಆತನ ಮಹಿಮೆಯಲ್ಲಿ ಸಹಬಾಧ್ಯರಾಗುವದಕ್ಕೆ "ಆಯಲ್ಪಟ್ಟ" ಸಭೆಗೆ ಕೊಟ್ಟ ಕರೆಯ ಎತ್ತರವನ್ನು ಮಾತ್ರವಲ್ಲದೆ ಮುಂದೆ ಆ ಮಹಿಮೆಯಲ್ಲಿ ಪಾಲುಗಾರರಾಗುವವರು ಈಗಿನ ಕಾಲದ ಜೀವಿತದಲ್ಲಿ ಹಿಂಸೆಯನ್ನು ತಾಳಿಕೊಳ್ಳಬೇಕೆಂಬುದನ್ನು ನಮಗೆ ಸ್ಪಷ್ಟಪಡಿಸುತ್ತಿರುವದು. ಅಂದರೆ ಪಾಪದ ಪಾಲಿಗೆ ತಮ್ಮ ಪಾಲಿಗೆ ಹಾಗು ಲೋಕದ ಪಾಲಿಗೆ (ತಮ್ಮನ್ನು) ಶಿಲುಬೆಗೆ ಹಾಕಿಸಿಕೊಂಡವರಾಗಿ; ಯೇಸು ಕ್ರಿಸ್ತನಲ್ಲಿ ನೂತನವಾಗಿ ಜೀವಿಸುವಂಥವರಾಗಬೇಕೆಂಬುದೇ. ಹೀಗೆ ಈಗ ಈ ಸಂಗತಿಗಳಲ್ಲಿ ತಮ್ಮನ್ನು ಎಣಿಸಿಕೊಂಡು ನಂಬಿಗಸ್ತರಾಗಿ ನಡೆದಲ್ಲಿ ಪುನರುತ್ಥಾನದಲ್ಲಿ ನಿಜವಾಗಿಯೂ ಅವುಗಳನ್ನು ಹೊಂದುವಂಥ –ವರಾಗುವರು. ಆದರೆ ಈ ಸುಗ್ಗಿಕಾಲದ ಬೆಳಕು ನಮಗೆ ಮತ್ತೂ ಸ್ಪಷ್ಟಪಡಿಸುವದೇನಂದರೆ ತನ್ನ ಮಗನೊಂದಿಗೆ ಮಹಿಮೆಯಲ್ಲಿ ಸಹಬಾಧ್ಯರಾಗಲು ಈಗ ಕರೆಯಲ್ಪಟ್ಟಿರುವ ವರ್ಗವು ತನ್ನ ಮಗನೊಂದಿಗೆ ತಮ್ಮನ್ನು ತ್ಯಾಗಮಾಡಿಕೊಳ್ಳುವವರಾಗಬೇಕೆಂದು ತಂದೆಯು ಉದ್ದೇಶಿಸಿರುವನೆಂಬದು; ಇವರೆಲ್ಲರೂ ಒಟ್ಟಾಗಿ ಮಾನವ ಕುಲದ ಒಂದು ಸಣ್ಣ ಅಂಶವಾಗಿರುವರು, ಅಲ್ಲದೆ ಈ ಉನ್ನತಸ್ಥಾನಕ್ಕೆ ಆಗಿರುವ ಕರೆಯನ್ನು ಸ್ವೀಕರಿಸದೇ ಇರುವವರು (ಕ್ರಿಸ್ತನ) ಸಾವಿರ ವರುಷದ ಆಳ್ವಿಕೆಯ ಕಾಲದ ಒಂದು ನಿಗದಿತ ಸಮಯದಲ್ಲಿ ಪ್ರಭಾವಹೊಂದಿದ ಯೇಸುವಿನ ಹಾಗು ಆತನ ಮದಲಗಿತ್ತಿಯಾದ ಮಹಿಮಾಪ್ರಭಾವಕ್ಕೆ ಸೇರಿದ ಸಭೆಯ ಮೂಲಕವಾಗಿ ಇನ್ನೊಂದು ರೀತಿಯ ಆಶೀರ್ವಾದವನ್ನು ಹೊಂದುವರು.

ಯಾರು ಈ ಬೆಳಕನ್ನು ಹೊಂದಿದವರಾಗಿ ಅದರ ವಿಷಯದಲ್ಲಿ ಮನಗೊಂಡಿರುವರೋ ಅವರು ಇತರರಲ್ಲಿ ಸಾಮಾನ್ಯವಾಗಿರುವ ಹಿಂಜರಿಕೆಯಿಂದ ಪಾರಾಗುವರು. ಇಂಥ ಬಹು ಉನ್ನತವಾದ ಒಂದು ಸ್ಥಾನಕ್ಕೆ ಕರೆಯಲ್ಪಟ್ಟಿರುವವರಿಗೆ ಅದರ ಮಾರ್ಗವು ಬಹು ಇಕ್ಕಟ್ಟಾಗಿ ಮಾಡಿರುವದರ ಔಚಿತ್ಯವನ್ನು ಕಾಣಲು ಸಾಧ್ಯವಾಗುವದು. ಯಾರು ಈ ಮಾರ್ಗದ ಆರಂಭದಲ್ಲಿಯೇ ಕ್ರಿಸ್ತನ ಮೇಲಿನ ನಂಬಿಕೆಯ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟು ದೇವರನ್ನು ಮೆಚ್ಚಿಸು –ವವರಾಗಿ ಸೇವಿಸಬಯಸುವರೋ ಕೇವಲ ಅಂಥವರನ್ನು ಅದರಲ್ಲಿ ಸೇರಿಸಿಕೊಳ್ಳಲಾಗುವದು. ಹಾಗೂ ಯಾರು ಈಗಿನ ಕಾಲದ ಕಷ್ಟಾನುಭವಗಳನ್ನು ನಂಬಿಗಸ್ತಿಕೆಯಿಂದ ದಾಟುವವರಾಗಿ ತಮ್ಮ ಹೃದಯ ಮತ್ತು ಗುಣಗಳಲ್ಲಿ ದೇವರ ಪ್ರಿಯ ಮಗನ ಪ್ರತಿರೂಪವನ್ನು ಪಡೆಯುವರೊ ಅಂಥವರನ್ನು ಕಟ್ಟಕಡೆಯಲ್ಲಿ ಮಹಿಮೆಗೆ ಸೇರಿಸಿಕೊಳ್ಳಲಾಗುವದು. – ರೋಮಾ 8:29

"ಈಗ ನನ್ನ ಪ್ರಾಣವು ತತ್ತರಿಸುತ್ತದೆ"–ನನ್ನ ಭಾವನೆಗಳು ಗೊಂದಲಮಯವಾಗಿವೆ; ನಾನು ಕೋಲಾಹಲಮಯವಾಗಿದ್ದೇನೆ. ತಂದೆಯೇ ಈ ಕಾಲದೊಳಗಿಂದ ನನ್ನನ್ನು ತಪ್ಪಿಸು ಎಂದು ಪ್ರಾಥಿಸಲೋ? ಇದರಿಂದ ನನ್ನನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುವ ಬದಲು ನಾನು ಇದನ್ನು ಮನಪೂರ್ವಕವಾಗಿ ಸಹಿಸಿಕೊಳ್ಳಬೇಕೆಂಬ ಕಾರಣಕ್ಕಾಗಿಯೇ ಈ ಕಾಲವನ್ನು ಸೇರಿದೆನೆಂಬುದನ್ನು ನಾನು ಜ್ಞಾಪಿಸಿಕೊಳ್ಳಬೇಕಲ್ಲವೇ? ತಂದೆಯ ಚಿತ್ತಕ್ಕೆ ವಿಧೇಯನಾಗಿ ನನ್ನ ಜೀವವನ್ನು ಕೊಡಲು ಮಾಡಿಕೊಂಡ ಒಪ್ಪಂದವನ್ನು ಅನೂರ್ಜಿತಗೊಳಿಸದೆಯೇ ಒಂದು ರೀತಿಯ ಬಿಡುಗಡೆಗಾಗಿ ತಂದೆಯನ್ನು ಕೇಳಿಕೊಳ್ಳಲು ಸಾಧ್ಯವಿತ್ತೇ? ನನಗೆ ಮರಣಕರವಾಗಿ ಪರಿಣಮಿಸುವ ಯಾವುದಾದರೂ ಒಂದು ವಿಪತ್ತು ನನ್ನ ಮೇಲೆ ಬರುವಂತೆಮಾಡಿ ಅದು ಹೀಗೆ ನನ್ನನ್ನು ಘೋರ ಅಪರಾಧಿಯನ್ನಾಗಿ ಮಾಡಿ ಶಿಕ್ಷಿಸುವಂಥಾ ವಿಶಿಷ್ಟವಾದ ವಿಚಾರಣೆ ಹಾಗೂ ಅವಮಾನಕರ ಸನ್ನಿವೇಶದಿಂದ ಅಂದರೆ ಪರಲೋಕದಲ್ಲಿರುವ ನನ್ನ ತಂದೆಯ ದೂಷಕನನ್ನಾಗಿಸುವ

ಪರಿಸ್ಥಿಯಿಂದ ತಪ್ಪಿಸುವಂತೆ ತಂದೆಯನ್ನು ಕೇಳಿಕೊಳ್ಳ – ಬಹುದೋ? ಇಂಥಾ ಒಂದು ಅನ್ಯವಿಧಾನವು ಅನುಚಿತವಾದ ರಿಯಾಯಿತಿ ಎಂದು ಎಲ್ಲಾ ವಿಷಯಗಳಲ್ಲಿಯೂ ತನ್ನ ತಂದೆಯ ಚಿತ್ತಕ್ಕೆ ನಂಬಿಗಸ್ತಿಕೆಯನ್ನು ತೋರಿಸುವಂಥವನಾದ ನನಗೆ ಅನ್ನಿಸುವದಿಲ್ಲ. ಅಲ್ಲದೆ ಹೀಗಿದ್ದರೂ ನಾನು ಈ ರಿಯಾಯಿತಿ ಯನ್ನೂ ಕೇಳಿಕೊಳ್ಳುವದಿಲ್ಲ. ಬದಲಾಗಿ ನನ್ನ ಚಿತ್ತವನ್ನು ತಂದೆಯ ಚಿತ್ತಕ್ಕೆ ಸಂಪೂರ್ಣವಾಗಿ ಅಧೀನಮಾಡಿಕೊಂಡವನಾಗಿ ನನ್ನ ಒಡಂಬಡಿಕೆಯನ್ನು ಅದರ ಭಾವಾರ್ಥದಲ್ಲಿಯೂ ಹಾಗು ಅಕ್ಷರಾರ್ಥವಾಗಿಯೂ ಒಂದು ಅಂಶವನ್ನೂ ಬಿಡದೆ ಎಲ್ಲವನ್ನೂ ನೆರವೇರಿಸುವೆನು. ತಂದೆಯ ಚಿತ್ತವು ಬಹು ನಿರ್ಧಿಷ್ಟವಾಗಿ ನೆರವೇರುವಂತಾಗಲಿ; ಅದು ಅತಿ ವಿವೇಕಪೂರ್ಣವೂ ಅತ್ಯುತ್ತಮವೂ ಆಗಿರಬೇಕು ಇಲ್ಲವಾದಲ್ಲಿ ಅದು ಆತನ (ದೇವರ) ಯೋಜನೆಯಾಗಿರುವದಿಲ್ಲ. ಈ ಉದ್ದೇಶಕ್ಕಾಗಿಯೇ ಅಂದರೆ ತಂದೆಗೆ ನನ್ನ ಶ್ರದ್ಧಾಭಕ್ತಿ, ಆತನ ಚಿತ್ತಕ್ಕೆ ನನ್ನ ಯಥಾವತ್ತಾದ ವಿಧೇಯತೆಯನ್ನು ವ್ಯಕ್ತಪಡಿಸಿ ಅದನ್ನು ರುಜುವಾತುಗೊಳಿಸುವ ಸಲುವಾಗಿಯೇ ನಾನು ಈ ಕಾಲದೊಳಗೆ ಸೇರಿದೆನು. ಮುಂದುವರಿಯುವನಾಗು ತಂದೆಯೇ! ನನಗೆ ಏನೇ ನಷ್ಟವಾದರೂ ನಿನ್ನ ಸ್ವನಾಮವನ್ನು ನಿನ್ನ ವಿಧಾನದಲ್ಲಿಯೇ ಮಹಿಮೆಪಡಿಸಿಕೋ!

ಆಗ ಒಂದು ವಾಣಿಯು ಕೇಳಲ್ಪಟ್ಟಿತ್ತು, ಆ ವಾಣಿಯನ್ನು ಕೆಲವರು ಅರ್ಥಮಾಡಿಕೊಂಡಿದ್ದರು ಅದನ್ನು ಇತರರು ಅಪಾರ್ಥ ಮಾಡಿಕೊಂಡಿದ್ದರು. ಅಲ್ಲದೆ ಇತರರು ಅಪಾರ್ಥಮಾಡಿ – ಕೊಳ್ಳುವದು ಯಾವಾಗಲೂ ದೇವರ ಸ್ವರದ ವಿಷಯವಾಗಿಯೇ. ಲೋಕವು ಯಾವ ಸಂದೇಶವನ್ನೂ ಕೇಳಿಸಿಕೊಳ್ಳುವದಿಲ್ಲ; ನಂಬುವಂಥವರು ಭಾಗಶಃ ಆ ಸಂದೇಶವನ್ನು ಕೇಳಿಸಿ–ಕೊಳ್ಳುವರು; ಆದರೆ (ದೇವರಿಂದ) ಹುಟ್ಟಿದಂಥ ಮಕ್ಕಳು ತಂದೆಯೊಡನೆ ಪೂರ್ಣವಾದ ಹೊಂದಾಣಿಕೆಯಲ್ಲಿ ಇದ್ದವರಾಗಿ ಅದನ್ನು ಕೇಳಿ ಪೂರ್ಣವಾಗಿ ಅರ್ಥಮಾಡಿಕೊಳ್ಳುವರು. ನಮ್ಮ ಕರ್ತನು ತಂದೆಯಿಂದ ಬಂದ ಸಂದೇಶದ ಮೂಲಕವಾಗಿ ಒಂದು ಆಶೀರ್ವಾದವನ್ನು ಹೊಂದಿದ್ದನೆಂಬುದರಲ್ಲಿ ಸಂದೇಹವಿಲ್ಲ, ಆದರೂ ಇದು ಆತನಿಗೆ ವಿಶೇಷವಾಗಿ ಕಳುಹಿಸಲ್ಪಟ್ಟಿರಲಿಲ್ಲ–ವೆಂದೂ ಆದರೆ ಈ ವಾಣಿಯು ವಾಸ್ತವದಲ್ಲಿ ಶಿಷ್ಯರ ಪ್ರಯೋಜನಾರ್ಥವಾಗಿ ಅಂದರೆ ತನ್ನ ಬೋಧನೆಗೆ ದೇವರು ಸಾಕ್ಷಿನೀಡಿ ಅದನ್ನು ಹೀಗೆ ಪ್ರಮಾಣೀಕರಿಸಿರುವನೆಂಬುದನ್ನು ಗಮನಿಸಬೇಕೆಂಬದಾಗಿ ನಮಗೆ ಆಶ್ವಾಸನೆಯಾಗಿ ಹೇಳಿರುವನು. ಈ ದಿನದಲ್ಲಿ ದೇವರು ತನ್ನ ಜನರೊಡನೆ ಕಿವಿಗೆ ಕೇಳಿಸುವಂಥಾ ಧ್ವನಿಯ ರೂಪದಲ್ಲಿ ಮಾತನಾಡುವದಿಲ್ಲ; ಆದಾಗ್ಯೂ ಆತನು ತನ್ನ ವಾಕ್ಯದ ಮೂಲಕವಾಗಿ ಹಾಗು ತನ್ನ ಅನುಗ್ರಹಗಳ ಮೂಲಕ ಶಕ್ತಿಯುತವಾಗಿ ಮಾತನಾಡುವನು. ಆದರೆ ಅಂದಿನಂತೆ ಈಗಲೂ ಕೆಲವರು ಇತರರಿಗಿಂತಲೂ ಅಧಿಕವಾಗಿ ಅದನ್ನು ಕೇಳಿ ಮನನಮಾಡಿಕೊಳ್ಳುವರು. ತಮ್ಮ ಕೈಯಲ್ಲಿ ದೇವರ ವಾಕ್ಯವನ್ನು ಹೊಂದಿರುವ ಕೆಲವರು ಅದನ್ನು ಕೇವಲ ಮತ್ತೊಂದು ಪುಸ್ತಕವಾಗಿ ಮನನಮಾಡಿಕೊಳ್ಳುವರು, ಮತ್ತು ಅದರಂತೆಯೇ ದೇವಜನರ (ಜೀವಿತದ) ಆಗುಹೋಗುಗಳಲ್ಲಿ ದೇವರ ಅನುಗ್ರಹವಿರುವದನ್ನು ಗ್ರಹಿಸಲಾರದೆ ಹೋಗುವರು. ಇತರರು ಕರ್ತನ ವಾಕ್ಯದಲ್ಲಿ ಒಂದು ಸಂದೇಶವನ್ನು ಅಂದರೆ ಒಂದು ಒಳ್ಳೆಯ ಸಂದೇಶವನ್ನು ಕಂಡವರಾಗಿ ಆ ಗ್ರಂಥದ ಬಗ್ಗೆ ಭಯಭಕ್ತಿಯುಳ್ಳವರಾಗಿ ದೇವರ ಅನುಗ್ರಹಗಳಲ್ಲಿ ಕ್ರಿಸ್ತನ ದೇಹದ ಅಂಗಗಳಾಗಿರುವವರ ವಿಷಯವಾಗಿ ದೇವರ ಪರಿಪಾಲನೆ ಮತ್ತು ಮುಂದಾಗಿ ಮಾಡಿರುವ ಆತನ ಏರ್ಪಾಟುಗಳ ಕೆಲವು ಅಂಶವನ್ನು ಕಾಣುವರು. ಆದರೆ ಕೇವಲ ಪವಿತ್ರಾತ್ಮನಿಂದ ಹುಟ್ಟಿದ ಮಕ್ಕಳು ಅಂದರೆ ಕ್ರಿಸ್ತನ ದೇಹವಾಗಿರುವವರು ಮಾತ್ರವೇ, ಹದಿನೆಂಟು ಶತಮಾನಗಳ ಹಿಂದೆ (ತಮ್ಮ) ಆ ಶಿರಸ್ಸಿನ (ಕ್ರಿಸ್ತನ) ವಿಷಯದಲ್ಲಿ ಇದ್ದಂತೆಯೇ, ತಂದೆಯ ಮಾತನ್ನು ನಿರ್ದಿಷ್ಟತೆಯಿಂದ ಸ್ಪಷ್ಟವಾಗಿ ಕೇಳಿ ಅರ್ಥಮಾಡಿಕೊಳ್ಳುವರು. ಇವರೂ ಸಹ ದೇವಾನುಗ್ರಹಗಳನ್ನು ಗಮನಿಸುವವರಾಗಿ ಅವುಗಳಲ್ಲಿ ಆನಂದಿಸಲು ಸಮರ್ಥರಾಗುವರು; ಅಲ್ಲದೆ ತಾವು ದೇವರನ್ನು ಪ್ರೀತಿಸುವವರಾಗಿರುವದರಿಂದ ಎಲ್ಲಾ ಸಂಗತಿಗಳೂ ತಮ್ಮ ಹಿತಕ್ಕಾಗಿ ಪರಿಣಮಿಸುವದೆಂಬುದನ್ನು ಗ್ರಹಿಸಿಕೊಂಡವರಾಗಿ ತಾವು ಆತನ ಚಿತ್ತದ ಅನುಸಾರವಾಗಿ ಕರೆಯಲ್ಪಟ್ಟಿರುವೆವೆಂದೂ ಹಾಗು ಆ ಕರೆಗೆ ಸ್ಪಂದಿಸುತ್ತಿರುವವರಾಗಿ ತಾವು ಕರೆಯಲ್ಪಟ್ಟಿರುವದನ್ನೂ ಆಯಲ್ಪಟ್ಟಿರುವದನ್ನು ದೃಢಪಡಿಸಿ ಕೊಳ್ಳಲು ಪರಿಶ್ರಮಿಸುತ್ತಿರುವರು.

## ಈ ಲೋಕಾಧಿಪತಿ

"ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು." ಎಂದು ನಮ್ಮ ಕರ್ತನು ಹೇಳಿದಾಗ "ಈಗ" ಎನ್ನುವದು ಹಿಂದೆ ತಾನು "ಸಮಯ ಬಂದದೆ" ಎಂದು ವ್ಯಕ್ತಪಡಿಸಿದ್ದರ ಅರ್ಥವೇ ಆಗಿತ್ತೆಂಬದು ಸ್ಪಷ್ಟವಾಗಿತ್ತು. ಆದರೆ ಈ ಸಂಗತಿಗಳು ನೆರವೇರುವ ಮೊದಲು "ಈಗ" ಎನ್ನುವ ಒಂದು ಸಣ್ಣ ಅವಧಿಯ ಕಾಲವು ನಡುವೆ ಪ್ರವೇಶಮಾಡಿತ್ತು. ಇದನ್ನು ಹೇಳುವದಾದರೆ, ಈ ಲೋಕಕ್ಕಾಗುವ ನ್ಯಾಯತೀರ್ಪು ಎನ್ನುವ ಒಂದು ಸಮಯವು ಇನ್ನೂ ಸಂಭವಿಸಬೇಕಿದ್ದು ಅದು ಶೀಘ್ರವಾಗಿ ನಿರ್ಣಯಿಸಲ್ಪಡುವ –ದರಲ್ಲಿತ್ತು. ಮೊದಲನೇ ನ್ಯಾಯವಿಚಾರಣೆಯು ಏದೇನಿನಲ್ಲಿ ನಡೆಯಲಾಗಿದ್ದು, ತಂದೆಯಾದ ಆದಾಮನು ನ್ಯಾಯವಿಚಾರಣೆಗೆ ಒಳಪಟ್ಟಿದ್ದನು; ಅಲ್ಲದೆ ಮಾನವಕುಲವು ಇನ್ನೂ (ತಾತ್ವಿಕವಾಗಿ) ಆತನ ಹೊಟ್ಟೆಯಲ್ಲಿದ್ದು ಒಂದು ಅರ್ಥದಲ್ಲಿ ಆತನೊಡನೆ (ತಕ್ಕಡಿಯಲ್ಲಿ ತೂಗುವಿಕೆಯೆಂಬ) ನ್ಯಾಯವಿಚಾರಣೆಗೆ ಒಳಪಟ್ಟಿತ್ತು. ನಮಗೆ ತಿಳಿದಿರುವಂತೆ ಆ ನ್ಯಾಯವಿಚಾರಣೆಯು ಆದಾಮನು ಹಾಗೂ ಆತನ ಸಂತತಿಗೆ ವಿನಾಶಕರವಾಗಿ ಪರಿಣಮಿಸಿತ್ತು. "ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ (ಪಾರಂಪರ್ಯವಾಗಿ ಬಂದ ಬಲಹೀನತೆಯ ಮೂಲಕವಾಗಿ) ಎಲ್ಲರಲ್ಲಿಯೂ ವ್ಯಾಪಿಸಿತು." (ರೋಮಾ 5:12) ಲೋಕಕ್ಕಾದ ಆ ನ್ಯಾಯವಿಚಾರಣೆಯು (ನ್ಯಾಯವಿಚಾರಿಸುವಿಕೆ ಹಾಗೂ ನ್ಯಾಯತೀರ್ಪು) ಮಾರಣಾಂತಿಕ –ವಾಗಿದ್ದು ಆದಾಮನಿಂದ ಉಂಟಾದ ಮರಣವು ನಮ್ಮ ಕರ್ತನು ಇದನ್ನು ನುಡಿದಂದಿನವರೆಗೂ ಅಂದರೆ 4161 ವರುಷಗಳ ಪರ್ಯಂತರ ಆಳ್ವಿಕೆಮಾಡುತ್ತಿತ್ತು. ಆದರೆ ಈಗ ದೇವರು

ಮುಂದಾಗಿ ಮಾಡಿದ ಏರ್ಪಾಟಿನ ಅನುಸಾರ ದೇವರ ಕೃಪೆಯ ಮೂಲಕವಾಗಿ ಒಬ್ಬ ಬದಲಿಯನ್ನು (ಮನುಷ್ಯನನ್ನು) ಈಡಾಗಿ ಕಂಡುಕೊಳ್ಳಲಾಗಿದ್ದು ಅವನು ಆದಾಮನು ಮತ್ತು ಆತನ ಸಂತತಿಯವರಿಗೆ ತನ್ನ ಜೀವವನ್ನು ಕೊಡಲು ಇಚ್ಛಿಸುವವನಾಗಿ ಅದು ದೇವರಿಂದ ಅಂಗೀಕೃವಾಗಿತ್ತು. ಈ ಒಬ್ಬಾತನು ಆಗ ನ್ಯಾಯವಿಚಾರಣೆಗೆ ಒಳಪಟ್ಟಿದ್ದು ಹಾಗು ಸಮಸ್ತ ಲೋಕವು ತಕ್ಕಡಿಯಲ್ಲಿ ತೂಗಲ್ಪಟ್ಟು ಅದರ ಮುಂದಿನ ಸ್ಥಿತಿಗತಿಯು ಈತನ ಯಶಸ್ಸಿನ ಮೇಲೆ ಅವಲಂಬಿತವಾಗಿತ್ತು. ಹೀಗಾಗಿ ನಮ್ಮ ಕರ್ತನು–ಈಗ ಲೋಕಕ್ಕೆ ತೀರ್ಪು ಅಥವಾ ನ್ಯಾಯವಿಚಾರಣೆ ಯಾಗುತ್ತದೆ ಎಂದು ವ್ಯಕ್ತಪಡಿಸಿ ಹೇಳಿದಾಗ ಅದು ತನ್ನ ಅತಿ ಮುಖ್ಯವಾದ ಹಂತವನ್ನು ತಲುಪಿತ್ತು, ಹಾಗು ತಂದೆಯ ಚಿತ್ತಕ್ಕೆ ನಂಬಿಗಸ್ತನಾಗಿರುವ ತನ್ನ ತೀರ್ಮಾನವು, ಮತ್ತು ಆ ಚಿತ್ತಕ್ಕೆ ವಿಧೇಯನಾಗಿ ಈಗಿನ ಜೀವಿತವನ್ನು ನಿರಾಕರಿಸಿಕೊಳ್ಳುವಂಥದು ಲೋಕಕ್ಕೆ ಸಹಾಯಕರವಾಗಿರುವದೆಂದು ನಿರ್ಣಯಿಸಿ ಕೊಂಡಿದ್ದನು. ಯಾಕಂದರೆ ಅಪೋಸ್ತಲನು ಪ್ರಕಟಮಾಡಿ ಹೇಳಿರು –ವಂತೆ ಹೇಗೆ ಆದಾಮನ ಮೂಲಕವಾಗಿ ಲೋಕದವರೆಲ್ಲರೂ ಮರಣದಂಡನೆಗೊಳಗಾದರೋ ಅದೇ ಪ್ರಕಾರ ಕ್ರಿಸ್ತನ ಮೂಲಕವಾಗಿ ಲೋಕದವರೆಲ್ಲರೂ ನೀತಿವಂತರಾಗಿ ಜೀವಿಸು – ವವರಾಗುವರು. ದೇವರ ನಿಯಮಾನುಸಾರವಾಗಿ ಹೇಳುವದಾ– ದರೆ ಯೇಸುವು ಸಮಸ್ತ ಲೋಕದ ಪರವಾಗಿ ದಂಡನೆಯನ್ನು ಪೂರ್ಣವಾಗಿ ಅನುಭವಿಸಿದ್ದನು. ಹೀಗಾಗಿ ಆತನು ತನ್ನ ಪುನರುತ್ಥಾನದ ಮೂಲಕವಾಗಿ ಮನುಕುಲದವರನ್ನು ಸಮಾಧಿಯಿಂದ ರಕ್ಷಿಸುವದು ಮಾತ್ರಲ್ಲದೆ ತನ್ನ ಕೃಪಾನುಗ್ರಹವನ್ನು ಅಂಗೀಕಾರಮಾಡುವ ಪ್ರತಿಯೊಬ್ಬನನ್ನು ಸಾವಿರ ವರುಷದ ಆಳ್ವಿಕೆಯ ಪರ್ಯಂತರ ಪಾಪಮರಣಗಳಿಂದ ಸಂಪೂರ್ಣವಾಗಿ ಮೇಲಕ್ಕೆತ್ತಿ ಆ ಸಾವಿರ ವರುಷದ ಆಳ್ವಿಕೆಯ ಕಾಲದ ಅಂತ್ಯದಲ್ಲಿ ಅವರನ್ನು ಪರಿಪೂರ್ಣತೆಗೆ ತಂದು ದೇವರೊಂದಿಗೆ ಹೊಂದಾಣಿಕೆಗೆ ತರುವನು. – ರೋಮಾ 5:18–19

ನಮ್ಮ ಕರ್ತನ ಇತರ ಹೇಳಿಕೆಗಳು ಈ ಮುಂದಿನ ಮಾತಿಗೆ ಪೂರ್ಣವಾಗಿ ಸರಿಬೀಳುತ್ತದೆ: "ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು." ಹೇಗಂದರೆ ನ್ಯಾಯವಿಚಾರಣೆಯು ಈಗ ಸ್ವತಃ ನನ್ನಲ್ಲಿಯೇ ಮುಂದುವರೆಯುತ್ತಿದ್ದು ಅದು ಮಾನವರ ಮೇಲಿರುವ ಮರಣದಂಡನೆಯೆಂಬ ದೇವರ ತೀರ್ಪು ಹಿಂದೆಗೆಯಲ್ಪಟ್ಟು ಅದನ್ನು ರದ್ದುಗೊಳಿಸುವದಾಗಿ ಪರಿಣಮಿಸುವದು ಮಾತ್ರವಲ್ಲದೆ ಅದು ಇಹಲೋಕಾಧಿಕಾರಿ – ಯಾದ ಸೈತಾನನ ಅಧೀನದಲ್ಲಿರುವ ಈಗಿನ ದುಷ್ಟತನದ ಆಡಳಿತವನ್ನು ತೆಗೆದು ಹಾಕುವದರಲ್ಲಿಯೂ ಸಹ ಪರಿಣಮಿಸು – ವದು. ಆತನು ಹೊರಗೆ ಹಾಕಲ್ಪಡುವನು; ಆತನು ನನ್ನ ಸಾವಿರ ವರುಷದ ಆಳ್ವಿಕೆಯ ಪರ್ಯಂತರ ಸಂಕೋಲೆಯಿಂದ ಬಂದಿಸಲ್ಪಟ್ಟು ಆ ನಂತರದಲ್ಲಿ ನಾಶಮಾಡಲ್ಪಡುವನು. ಲೋಕದ ನ್ಯಾಯತೀರ್ಪಿನ ವಿಚಾರವೆಲ್ಲವೂ ಹಾಗೂ ಪಾಪದ ಮೂಲಕವಾಗಿ ಲೋಕವನ್ನು (ಸೆರೆಯಲ್ಲಿ) ಬಂಧಿಸಿರುವಾತನನ್ನು ತೆಗೆದು ಹಾಕಲ್ಪಡುವ ವಿಷಯವು ನಮ್ಮ ಕರ್ತನ ಯಶಸ್ಸಿನ ಮೇಲೆ ಅವಲಂಭಿತವಾಗಿರುವದರಿಂದ ಆತನು ಅದರ ಪರಿಣಾಮವಾಗಿ ಬರುವಂಥ "ಆ ಗಳಿಗೆ" ಎಂಬುದರ ಕಾಲಾವಧಿಯನ್ನು ಸೂಚಿಸುವದು ಬಹು ಸೂಕ್ತವಾಗಿರುವದು. ಈ ಸಂಗತಿಗಳು ಅಂದರೆ ಸೈತಾನನ ಬಂಧಿಸುವಿಕೆ, ಸಾವಿರ ವರುಷದ ರಾಜ್ಯದ ಆಳ್ವಿಕೆಯ ಮೂಲಕವಾಗಿ (ಕ್ರಿಸ್ತನು ಹಾಗು ಮಹಿಮೆಹೊಂದಿದ ಸಭೆ) ಮನುಕುಲವನ್ನು ಆದಾಮನಿಂದ ಉಂಟಾದ ಮರಣದಿಂದ ಬಿಡುಗಡೆಯಾಗಿ ದೇವಪುತ್ರರ ಮಹಿಮೆಯಲ್ಲಿ (ಅವರ ಪ್ರಭಾವಸ್ಥಾನವು ಎಂಥದೇಯಾದರೂ) ಪಾಲುಹೊಂದುವದು, ಇವುಗಳು ಪೂರ್ಣಗೊಳ್ಳುವದಕ್ಕೆ ಶತಮಾನಗಳು ಹಿಡಿಸುವ– ದೆಂಬ ಅಂಶವು ಒಳಗೊಂಡಿದ್ದರೂ ಸಹ ಇದರ ಕಾಲಾವದಿ– ಯನ್ನು ಸೂಚಿಸುವದು ಸಮಂಜಸವಾಗಿರುವದು. ಪರಲೋಕ– ದಿಂದಾದ ಕರುಣೆ ಕೃಪಾಸೌಭಾಗ್ಯಗಳನ್ನು ಮಾನವ ರೆಲ್ಲರೂ ಪಡಕೊಳ್ಳುವರೆಂಬುದನ್ನು ನಾವು ಕಲ್ಪಿಸಿಕೊಳ್ಳಬೇಕೆಂದೇನೂ ಇರುವದಿಲ್ಲ, ಆದರೆ ಹೀಗೆ ಮಾಡಲು ಎಲ್ಲರಿಗೂ ಪೂರ್ಣವಾದ ಅವಕಾಶ ಮಾಡಿಕೊಡಲಾಗುವದು. ಹೀಗಾಗಿ ಯಾರು ಎರಡನೇ ಮರಣದಲ್ಲಿ ಸಾಯುವರೋ ಅವರು ತಮ್ಮ ಸ್ವಂತ ಪಾಪಗಳಿಗಾಗಿ ಸಾಯುವರೇ ಹೊರತು ಪಾರಂಪರ್ಯವಾಗಿ ಬಂದ ಅಪೂರ್ಣತೆಗಳ ಕಾರಣದಿಂದಲ್ಲ; ಹೇಗಂದರೆ ತಂದೆಗಳು ಹುಳಿದ್ರಾಕ್ಷೆಯೆಂಬ ಪಾಪವನ್ನು ತಿಂದರೆಂಬ ಕಾರಣದಿಂದಾ– ಗುವದಿಲ್ಲ – ಯೆರೆಮೀಯ 31:29–30; 1 ಯೋಹಾನ 5:16.

## ಕ್ರಿಸ್ತನು ಎಲ್ಲರನ್ನೂ ತನ್ನ ಬಳಿಗೆ ಎಳಕೊಳ್ಳುವಾಗ

ಮುಂದಿನ ವಚನದಲ್ಲಿ ನೀಡಲಾದ ವಿವರಣೆಯು ಇದರೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ: 'ನಾನು ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ (ಕಡೆಗೆ) ಎಳಕೊಳ್ಳುವೆನು.' ಇದರ ವರ್ಣನಾಕಾರನು ಬರೆದಿರುವಂತೆ, ಈ ಮಾತುಗಳು ಯೇಸುವು ಎಂಥಾ ಮರಣವನ್ನು ಅನುಭವಿಸು – ವನೆಂಬುದನ್ನು ಅಂದರೆ ಶಿಲುಬೆಯ ಮೇಲೆ ಎತ್ತಲ್ಪಡುವ– ದೆಂಬುದನ್ನು ಸೂಚಿಸುವದಾದರೂ ಇದಕ್ಕಿಂತಲೂ ಹೆಚ್ಚಿನ ಅರ್ಥವನ್ನು ಇದು ಕೊಡುವದು. ಅವುಗಳು ಈ ಅರ್ಥವನ್ನೂ ಸಹ ಕೊಡುವವು: ಅದೇನಂದರೆ ನಾನು ಮಾಡಿಕೊಂಡ ಒಡಂಬಡಿಕೆಯು ಅನುಸಾರವಾಗಿ ನನ್ನ ಜೀವವನ್ನು ನಂಬಿಗಸ್ತನಾಗಿ ನೀಡಿ ಪರಲೋಕದಲ್ಲಿರುವ ತಂದೆಯಿಂದ ಉನ್ನತ ಸ್ಥಾನವನ್ನು ಪಡೆದಾಗ ಅಥವಾ ಆತನು ವಾಗ್ದಾನಮಾಡಿದ ಹಾಗೆ ಮೇಲಕ್ಕೆ ಎತ್ತಲ್ಪಟ್ಟಾಗ, ದೊರೆಯುವ ಆ ಉನ್ನತ ಸ್ಥಾನವು ತನ್ನೊಡನೆ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವ ಅಧಿಕಾರವನ್ನೂ ಕೊಂಡುತರುವದು; ಮೊದಲನೆಯದಾಗಿ, ತಂದೆಯ ಚಿತ್ತಾನುಸಾರ ಹಾಗೂ ಮುಂದಾಗಿ ಮಾಡಿದ ಏರ್ಪಾಡಿನ ಪ್ರಕಾರ, ಆತನು (ತಂದೆಯು) ತಾನೇ ನನ್ನ ಬಳಿಗೆ ಒಂದು ಸಭೆ ಅಥವಾ ಮದಲಗಿತ್ತಿಯನ್ನು ಎಳೆದುಕೊಡುವನು; ನಾನೇ ಇವರನ್ನು ಎಳೆದುಕೊಳ್ಳುವದಿಲ್ಲ ಆದರೆ ತಂದೆಯು ಎಳೆದುಕೊಡುವನು: "ತಂದೆಯು ಎಳೆದ ಹೊರತು ಯಾರೂ ನನ್ನ ಬಳಿಗೆ [ಪ್ರಸ್ತುತ ಕಾಲದಲ್ಲಿ, ಇಕ್ಕಟ್ಟಾದ ಮಾರ್ಗದಲ್ಲಿ] ಬರಲಾರರು ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಅಂದರೆ ಸಾವಿರ ವರುಷದ ಆಳ್ವಿಕೆಯ ದಿನದಲ್ಲಿ, ಆ ದಿನದ "ಮುಂಜಾನೆ

ಸಮಯದಲ್ಲಿ" ಎಬ್ಬಿಸುವೆನು (ಉನ್ನತ ಸ್ಥಾನಕ್ಕೆ ಏರಿಸುವೆನು). – ಯೋಹಾನ 6:44; ಕೀರ್ತನೆ 46:5

ಮತ್ತು ಇವರು ಹೀಗೆ ನನ್ನ ದೇಹದ ಅಂಗಗಳಾಗಿ ಉನ್ನತ ಸ್ಥಾನಕ್ಕೆ ಏರಿಸಲ್ಪಡುವಾಗ, ಅಂದರೆ ನನ್ನ ಜೊತೆಯಲ್ಲಿ ಮೊದಲನೇ ಪುನರುತ್ಥಾನದಲ್ಲಿ ಪಾಲುಗಾರರಾದ ನಂತರದಲ್ಲಿ, ನಾನು ಎಳೆದುಕೊಳ್ಳುವ ಕಾರ್ಯವನ್ನು ಪ್ರಾರಂಭಿಸುವೆನು; ಅದು ತಂದೆಯು ಎಳೆಯುವಂಥಾ ರಾಜವಂಶದ ಯಾಜಕತ್ವವೆಂಬ ವಿಶೇಷವಾದ ಒಂದು ವರ್ಗಕ್ಕೆ ಸೀಮಿತವಾಗಿರುವದಿಲ್ಲ. ನನ್ನದು (ಎಲ್ಲರಿಗೂ) ಸಾಮಾನ್ಯವಾಗಿರುವ ಒಂದು ಎಳೆಯುವಿಕೆ: ನಾನು ಎಲ್ಲಾ ಮನುಷ್ಯರನ್ನು ಎಳಕೊಳ್ಳುವೆನು. ಅದು ತಂದೆಯ ಪ್ರತಿನಿಧಿಯಾದ ನನ್ನ ಬಳಿಗೆ ಬಂದು ನನ್ನಿಂದ (ಜೀವವನ್ನು) ಪಡಕೊಳ್ಳುವ ಒಂದು ಸಾರ್ವತ್ರಿಕ ಅವಕಾಶವಾಗಿರುವದು. ಆವರು ನನ್ನ ಬಳಿಗೆ ಬಂದು (ತಮ್ಮ) ಹಿಂದಿನ ಪಾಪಗಳಿಗೆ ಸಂಪೂರ್ಣವಾಗಿ ಪರಿಹಾರವನ್ನು ಹೊಂದಿಕೊಳ್ಳಬಹುದು. ಅಲ್ಲದೆ ಅವರು ಆದಾಮನು ಮಾಡಿದ ಅಪರಾಧದ ಮೂಲಕವಾಗಿ ಕಳೆದುಹೋಗಿರುವಂಥ ಮಾನವ ಪರಿಪೂರ್ಣತೆಯೆಂಬ ಮಹಿಮಾ ಸ್ಥಿತಿಗೆ ಏರಿಸುವ ಪ್ರವೃತ್ತಿಯುಳ್ಳ ನೀತಿಬೋಧೆ, ನೀತಿಶಿಕ್ಷೆ, ಅನುಭವ, ನ್ಯಾಯತೀರ್ಪು ಇವುಗಳನ್ನು ಹೊಂದಿಕೊಳ್ಳಬಹುದು. ಹಾಗು ನನ್ನ ಭೂಸಂಬಂಧವಾದ ಜೀವವನ್ನು ನನಗೆ ಅಮೂಲ್ಯವೆಂದು ನಾನು ಎಣಿಸಿಕೊಳ್ಳದೇ (ಅದನ್ನು ತ್ಯಜಿಸುವದರ ಮೂಲಕವಾಗಿ) ನಾನು ಅವರಿಗೋಸ್ಕ ಸಂಪಾದಿಸಿಕೊಂಡ ಜೀವದಲ್ಲಿ ಪುನಃಸ್ಥಾಪಿತಗೊಳ್ಳುವಂಥ ಹಕ್ಕನ್ನು ಅವರು ಪಡೆದುಕೊಳ್ಳಬಹುದು. ನಾನು ನನ್ನ ಜೀವವನ್ನು ತಿರಸ್ಕರಿಸಿಕೊಳ್ಳುವದಕ್ಕೆ ಬದಲಾಗಿ ಅದರಿಂದ ಮನುಷ್ಯರನ್ನು ವಿಮೋಚಿಸುವದರ ಮೂಲಕವಾಗಿ, ಪರಲೋಕದಲ್ಲಿನ ಈ ಉನ್ನತವಾದ ಪದವಿಯನ್ನು ಪಡಕೊಳ್ಳಲು ನಾನು ಅದನ್ನು ವಿನಿಯೋಗಿಸಿರುವೆನು. ದೈವಿಕ ಏರ್ಪಾಟಿನ ಅನುಸಾರವಾಗಿ ಪರಲೋಕದಲ್ಲಿನ ಆ ಮಹಿಮಾಸ್ಥಿತಿಯಲ್ಲಿ ನನ್ನೊಡನೆ ನನ್ನ ಸೇವಕರು ಇರುವರು. ಅವರನ್ನು ಸಹ ತಂದೆಯು ಸನ್ಮಾನಿಸುವನು ಹಾಗು ನಾನು ಅವರನ್ನು ನನ್ನ ಮದಲಗಿತ್ತಿಯೆಂದು, ಸಹೋದರರೆಂದು, ಮತ್ತು ಸಹಬಾಧ್ಯರೆಂದು ಕರೆಯುವೆನು. ಅಲ್ಲದೆ ನಾವು ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವೆವು. – ಪ್ರಕಟನೆ 22:17; ರೋಮಾ 8:17; ಗಲಾತ್ಯ 3:16,29.

*****

| ದಿನಾಂಕ ಕ್ರಿ.ಶ. 32 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 11 | ಬೇಥಾನ್ಯ–ಯೆರೂಸಲೇಮ್ | ಫಲವಿಲ್ಲದ ಅಂಜೂರದ ಮರವು ಒಣಗಿಹೋದ್ದು | 21:19–22 | 11:20–25 | –– | –– |
| | ಯೆರೂಸಲೇಮಿನ ದೇವಾಲಯ | ಕ್ರಿಸ್ತನ ಅಧಿಕಾರವನ್ನು ಪ್ರಶ್ನಿಸಿದುದು; ಇಬ್ಬರು ಮಕ್ಕಳ ದೃಷ್ಟಾಂತ | 21:23–32 | 11:27–33 | 20:1–8 | –– |
| | ಯೆರೂಸಲೇಮಿನ ದೇವಾಲಯ | ಕೆಟ್ಟ ಒಕ್ಕಲಿಗರ ದೃಷ್ಟಾಂತ, ಮದುವೆಯ ಔತಣ | 21:33–22:14 | 12:1–12 | 20:9–19 | –– |

# ಮತ್ತಾಯ 21:19–46

ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ–ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆಹೋಗಲಿ ಎಂದು ಹೇಳಿದನು. ಆ ಕ್ಷಣವೇ ಆ ಅಂಜೂರದ ಮರವು ಒಣಗಿಹೋಯಿತು. ಶಿಷ್ಯರು ಅದನ್ನು ನೋಡಿ ಬೆರಗಾಗಿ– ಈ ಅಂಜೂರದ ಮರವು ಒಂದು ಕ್ಷಣದಲ್ಲೇ ಒಣಗಿ ಹೋಯಿತಲ್ಲಾ; ಅದು ಹೇಗೆ? ಅಂದರು. ಅದಕ್ಕೆ ಯೇಸು–ನಿಮಗೆ ಸತ್ಯವಾಗಿ ಹೇಳುತ್ತೇನೆ ನೀವು ಸಂಶಯ ಪಡದೆ ನಂಬಿದರೆ ನಾನು ಅಂಜೂರದ ಮರಕ್ಕೆ ಮಾಡಿದಂಥದನ್ನು ನೀವು ಮಾಡುವಿರಿ. ಇದು ಮಾತ್ರವಲ್ಲದೆ ಈ ಬೆಟ್ಟಕ್ಕೆ–ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಅದೂ ಆಗುವದು. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು.

ತರುವಾಯ ಆತನು ದೇವಾಲಯಕ್ಕೆ ಬಂದು ಬೋಧಿಸುತ್ತಿರಲಾಗಿ ಮಹಾಯಾಜಕರೂ ಪ್ರಜೆಯ ಹಿರಿಯರೂ ಆತನ ಬಳಿಗೆ ಬಂದು–ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು ಎಂದು ಕೇಳಲು ಯೇಸು ಅವರಿಗೆ ಹೇಳಿದ್ದೇನಂದರೆ–ನಾನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ; ಅದನ್ನು ನೀವು ನನಗೆ ಹೇಳಿದರೆ ನಾನೂ ಯಾವ ಅಧಿಕಾರದಿಂದ ಇದನ್ನು ಮಾಡುತ್ತೇನೆಂಬದನ್ನು ನಿಮಗೆ ಹೇಳುತ್ತೇನೆ. ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಎಲ್ಲಿಂದ ಬಂತು? ಪರಲೋಕದಿಂದಲೋ? ಮನುಷ್ಯರಿಂದಲೋ ಅಂದನು. ಆಗ ಅವರು–ಪರಲೋಕದಿಂದ ಬಂತೆಂದು ನಾವು ಹೇಳಿದರೆ ಹಾಗಾದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಎಂದು ನಮಗೆ ಹೇಳಾನು; ಮನುಷ್ಯರಿಂದ ಬಂತೆಂದು ಹೇಳಿದರೆ ನಮಗೆ ಜನರ ಭಯವದೆ; ಯೋಹಾನನು ಪ್ರವಾದಿಯೆಂದು ಎಲ್ಲರೂ

ಎಣಿಸಿದ್ದಾರಲ್ಲಾ ಎಂಬದಾಗಿ ತಮ್ಮತಮ್ಮೊಳಗೆ ಮಾತಾಡಿ-ಕೊಳ್ಳುತ್ತಿದ್ದರು. ಕಡೆಗೆ ಅವರು-ನಾವರಿಯೆವು ಎಂದು ಯೇಸುವಿಗೆ ಉತ್ತರ ಕೊಟ್ಟರು. ಆಗ ಆತನು ಅವರಿಗೆ-ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೇನೋ ಅದನ್ನು ನಾನೂ ನಿಮಗೆ ಹೇಳುವದಿಲ್ಲ.

ಆದರೆ ನಿಮಗೆ ಹೇಗೆ ತೋರುತ್ತದೆ? ಒಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಅವನು ಮೊದಲನೆಯವನ ಬಳಿಗೆ ಬಂದು-ಮಗನೇ, ಹೋಗಿ ಈ ಹೊತ್ತು ದ್ರಾಕ್ಷೇತೋಟದಲ್ಲಿ ಕೆಲಸಮಾಡು ಅಂದಾಗ ಅವನು-ನಾನು ಹೋಗುವದಿಲ್ಲವೆಂದು ಹೇಳಿದಾಗ್ಯೂ ತರುವಾಯ ಪಶ್ಚಾತಾಪಪಟ್ಟು ತೋಟಕ್ಕೆ ಹೋದನು. ಆ ಮೇಲೆ ಎರಡನೆಯವನ ಬಳಿಗೆ ಬಂದು ಅದೇ ಮಾತನ್ನು ಹೇಳಿದಾಗ ಅವನು-ಹೋಗುತ್ತೇನಪ್ಪಾ ಅಂದಾಗ್ಯೂ ಹೋಗಲೇ ಇಲ್ಲ. ಅವರಿಬ್ಬರಲ್ಲಿ ತಂದೆಯ ಚಿತ್ತದಂತೆ ನಡೆದವನು ಯಾರು ಎಂದು ಕೇಳಿದ್ದಕ್ಕೆ ಅವರು-ಮೊದಲನೆಯವನೇ ಅಂದರು. ಆಗ ಯೇಸು ಅವರಿಗೆ-ಭ್ರಷ್ಟರೂ ಸೂಳೆಯರೂ ನಿಮಗಿಂತ ಮೊದಲು ದೇವರ ರಾಜ್ಯವನ್ನು ಸೇರುವರು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಯೋಹಾನನು ಧರ್ಮಮಾರ್ಗವನ್ನು ಬೋಧಿಸುವವನಾಗಿ ನಿಮ್ಮ ಬಳಿಗೆ ಬಂದನು, ನೀವು ಅವನನ್ನು ನಂಬಲಿಲ್ಲ; ಭ್ರಷ್ಟರೂ ಸೂಳೆಯರೂ ಅವನನ್ನು ನಂಬಿದರು; ನೀವು ಇದನ್ನು ನೋಡಿದಾಗ್ಯೂ ಪ್ರಶ್ಚಾತಾಪಪಡಲಿಲ್ಲ, ಅವನನ್ನು ನಂಬಲಿಲ್ಲ.

ಮತ್ತೊಂದು ಸಾಮ್ಯವನ್ನು ಕೇಳಿರಿ-ಒಬ್ಬ ಮನೆಯ ಯಜಮಾನನಿದ್ದನು. ಅವನು ಒಂದು ದ್ರಾಕ್ಷೇತೋಟವನ್ನು ಮಾಡಿ ಅದರ ಸುತ್ತಲೂ ಬೇಲಿಹಾಕಿಸಿ ಅದರಲ್ಲಿ ದ್ರಾಕ್ಷೆಯ ಆಲೆಯನ್ನು ಮಾಡಿಸಿ ಹೂಡೆಯನ್ನು ಕಟ್ಟಿಸಿ ಒಕ್ಕಲಿಗರಿಗೆ ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋದನು. ಫಲಕಾಲ ಹತ್ತರವಾದಾಗ ತನಗೆ ಬರಬೇಕಾದ ಹಣ್ಣುಗಳನ್ನು ತೆಗೆದುಕೊಂಡು ಬರುವದಕ್ಕಾಗಿ ಆ ಒಕ್ಕಲಿಗರ ಬಳಿಗೆ ತನ್ನ ಆಳುಗಳನ್ನು ಕಳುಹಿಸಲು ಒಕ್ಕಲಿಗರು ಅವನ ಆಳುಗಳನ್ನು ಹಿಡುಕೊಂಡು ಒಬ್ಬನನ್ನು ಹೊಡೆದರು, ಒಬ್ಬನನ್ನು ಕಡಿದು ಹಾಕಿದರು, ಒಬ್ಬನನ್ನು ಕಲ್ಲೆಸೆದು ಕೊಂದರು. ಪುನಃ ಮೊದಲಿನವರಿಗಿಂತ ಹೆಚ್ಚು ಮಂದಿ ಆಳುಗಳನ್ನು ಕಳುಹಿಸಿದನು, ಅವರಿಗೂ ಹಾಗೆಯೇ ಮಾಡಿದರು. ಕಡೆಯಲ್ಲಿ ನನ್ನ ಮಗನಿಗಾದರೂ ಮರ್ಯಾದೆ ತೋರಿಸಾರು ಅಂದುಕೊಂಡು ತನ್ನ ಮಗನನ್ನು ಅವರ ಬಳಿಗೆ ಕಳುಹಿಸಿದನು. ಆದರೆ ಆ ಒಕ್ಕಲಿಗರು ಅವನ ಮಗನನ್ನು ಕಂಡು-ಇವನೇ ಬಾಧ್ಯಸ್ಥನು, ಬನ್ನಿ ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ತ್ಯವನ್ನು ನಾವೇ ತೆಗೆದುಕೊಳ್ಳೋಣ ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡು ಅವನನ್ನು ಹಿಡಿದು ದ್ರಾಕ್ಷೇತೋಟದಿಂದ ಹೊರಕ್ಕೆ ದೊಬ್ಬಿ ಕೊಂದುಹಾಕಿದರು. ಹಾಗಾದರೆ ದ್ರಾಕ್ಷೇತೋಟದ ಧಣಿಯು ಬಂದಾಗ ಆ ಒಕ್ಕಲಿಗರಿಗೆ ಏನು ಮಾಡುವನು ಅಂದನು. ಅವರು ಆತನಿಗೆ-ಆ ಕೆಡುಕರನ್ನು ಕ್ರೂರವಾಗಿ ಸಂಹರಿಸಿ ಕಾಲಕಾಲಕ್ಕೆ ಹಣ್ಣುಗಳನ್ನು ತನಗೆ ಸಲ್ಲಿಸುವಂಥ ಬೇರೆ ಒಕ್ಕಲಿಗರಿಗೆ ತನ್ನ ತೋಟವನ್ನು ವಾರಕ್ಕೆ ಕೊಡುವನು ಎಂದು ಹೇಳಿದರು. ಯೇಸು ಅವರಿಗೆ-ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು; ಇದು ಕರ್ತನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ ಎಂಬುವ ಮಾತನ್ನು ನೀವು ಶಾಸ್ತ್ರದಲ್ಲಿ ಎಂದಾದರೂ ಓದಲಿಲ್ಲವೋ? ಆದದರಿಂದ ದೇವರರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು. ಈ ಕಲ್ಲಿನ ಮೇಲೆ ಬೀಳುವವನು ತುಂಡುತುಂಡಾಗುವನು; ಇದು ಯಾರ ಮೇಲೆ ಬೀಳುತ್ತದೋ ಅವನನ್ನು ಪುಡಿಪುಡಿಮಾಡುವದು ಎಂದು ಹೇಳಿದನು. ಮಹಾಯಾಜಕರೂ ಫರಿಸಾಯರೂ ಆತನ ಸಾಮ್ಯಗಳನ್ನು ಕೇಳಿ ತಮ್ಮನ್ನೇ ಕುರಿತು ಮಾತಾಡುತ್ತಾನೆಂದು ತಿಳುಕೊಂಡು ಆತನನ್ನು ಹಿಡಿಯುವದಕ್ಕೆ ಸಂದರ್ಭನೋಡುತ್ತಿದ್ದರು; ಆದರೆ ಜನರು ಆತನನ್ನು ಪ್ರವಾದಿಯೆಂದು ಎಣಿಸಿದ್ದರಿಂದ ಅವರಿಗೆ ಭಯಪಟ್ಟರು.

## ಮತ್ತಾಯ 22:1-14

ಯೇಸು ಬೋಧನೆಮಾಡುತ್ತಾ ಇನ್ನೂ ಸಾಮ್ಯರೂಪವಾಗಿ ಅವರಿಗೆ ಹೇಳೀದ್ದೇನಂದರೆ-ಪರಲೋಕರಾಜ್ಯವು ಮಗನಿಗೆ ಮದುವೆಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. ಅವನು ಮದುವೆಗೆ ಹೇಳಿಸಿಕೊಂಡವರನ್ನು ಕರೆಯುವದಕ್ಕೆ ತನ್ನ ಆಳುಗಳನ್ನು ಕಳುಹಿಸಲು ಬರುವದಕ್ಕೆ ಅವರಿಗೆ ಮನಸ್ಸಿರಲಿಲ್ಲ. ತಿರಿಗಿ ಬೇರೆ ಆಳುಗಳನ್ನು ಕರೆದು-ನೀವು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಹೋಗಿ-ಇಗೋ, ಅಡಿಗೆ ಸಿದ್ಧವಾಗಿದೆ; ನನ್ನ ಹೋರಿಗಳನ್ನೂ ಕೊಬ್ಬಿದ ಪಶುಗಳನ್ನೂ ಕೊಯಿಸಿದ್ದೇನೆ; ಎಲ್ಲಾ ಸಿದ್ಧವಾಗಿದೆ; ಮದುವೆಯ ಊಟಕ್ಕೆ ಬನ್ನಿರೆಂಬದಾಗಿ ಅವರಿಗೆ ಹೇಳಿರೆಂದು ಅಪ್ಪಣೆಕೊಟ್ಟು ಕಳುಹಿಸಿದನು. ಆದರೆ ಅವರು ಅಲಕ್ಷ್ಯಮಾಡಿ ಒಬ್ಬನು ತನ್ನ ಹೊಲಕ್ಕೆ ಒಬ್ಬನು ತನ್ನ ವ್ಯಾಪಾರಕ್ಕೆ ಹೋಗಿಬಿಟ್ಟರು; ಉಳಿದವರು ಅವನ ಆಳುಗಳನ್ನು ಹಿಡಿದು ಬೈದು ಕೊಂದುಹಾಕಿದರು. ಅರಸನು ಸಿಟ್ಟುಗೊಂಡು ತನ್ನ ದಂಡುಗಳನ್ನು ಕಳುಹಿಸಿ ಆ ಕೊಲೆಗಾರರನ್ನು ನಾಶಮಾಡಿ ಅವರ ಪಟ್ಟಣವನ್ನು ಸುಟ್ಟುಬಿಟ್ಟನು. ಆಗ ತನ್ನ ಆಳುಗಳಿಗೆ-ಮದುವೆಗೆ ಸಿದ್ಧವಾಗಿದೆ ಸರಿ, ಆದರೆ ಕರೆಯಲ್ಪಟ್ಟವರು ಯೋಗ್ಯರಾಗಿರಲಿಲ್ಲ. ನೀವು ಈಗ ನಾಲ್ಕು ಹಾದಿಗಳು ಕೂಡುವ ಸ್ಥಳಗಳಿಗೆ ಹೋಗಿ ಕಂಡವರನ್ನೆಲ್ಲಾ ಮದುವೆಯ ಊಟಕ್ಕೆ ಕರೆಯಿರಿ ಎಂದು ಹೇಳಿದನು. ಆ ಆಳುಗಳು ಹಾದಿಗೆ ಹೋಗಿ ಕೆಟ್ಟವರು ಒಳ್ಳೆಯವರು ಅನ್ನದೆ ಕಂಡವರನ್ನೆಲ್ಲಾ ಕೂಡಿಸಿ ಕರಕೊಂಡು ಬಂದರು. ಹೀಗೆ ಮನೆತುಂಬ ಊಟಕ್ಕೆ ಕೂತರು. ಅ ಮೇಲೆ ಅರಸನು ಕೂತವರನ್ನು ನೋಡುವದಕ್ಕೆ ಒಳಕ್ಕೆ ಬರಲಾಗಿ ಮದುವೇಬಟ್ಟೆಯನ್ನು ಹಾಕಿಕೊಳ್ಳದ ಒಬ್ಬನನ್ನು ಕಂಡು ಅವನನ್ನು-ಏನಪ್ಪಾ ಮದುವೆಯ ಬಟ್ಟೆ ಇಲ್ಲದೆ ನೀನಿಲ್ಲಿ ಹೇಗೆ ಒಳಕ್ಕೆ ಬಂದಿ ಎಂದು ಕೇಳಲು ಅವನು ಸುಮ್ಮನಿದ್ದನು. ಆ ಮೇಲೆ ಅರಸನು ಸೇವಕರಿಗೆ-ಅವನ ಕೈಕಾಲು ಕಟ್ಟಿ ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಎಂದು ಹೇಳಿದನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು. ಹೀಗೆ ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ ಅಂದನು.

## ಮಾರ್ಕ 11:20-25, 27-30

ಬೆಳಿಗ್ಗೆ ಅವರು ಬರುತ್ತಿರುವಾಗ ಆ ಅಂಜೂರದ ಮರವು ಬುಡದಿಂದಲೂ ಒಣಗಿ ಹೋಗಿರುವದನ್ನು ಕಂಡರು. ಆಗ ಪೇತ್ರನು ಹಿಂದಿನ ದಿನದ ಸಂಗತಿಯನ್ನು ನೆನಸಿಕೊಂಡು ಆತನಿಗೆ-ಗುರುವೇ, ಇಗೋ, ನೀನು ಶಾಪಕೊಟ್ಟ ಅಂಜೂರದ ಮರವು ಒಣಗಿ ಹೋಗಿದೆ ಎಂದು ಹೇಳಿದ್ದಕ್ಕೆ ಯೇಸು ಹೇಳಿದ್ದೇನಂದರೆ-ನಿಮಗೆ ದೇವರಲ್ಲಿ ನಂಬಿಕೆಯಿರಲಿ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ-ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು. ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ಸಿಕ್ಕುವದೆಂದು ನಿಮಗೆ ಹೇಳುತ್ತೇನೆ. ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆ ಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ; ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿಬಿಡುವನು ಅಂದನು.

ಅವರು ತಿರಿಗಿ ಯೆರೂಸಲೇಮಿಗೆ ಬಂದಾಗ ಆತನು ದೇವಾಲಯದಲ್ಲಿ ತಿರುಗಾಡುತ್ತಿರಲಾಗಿ ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ ಆತನ ಬಳಿಗೆ ಬಂದು-ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಇದನ್ನು ಮಾಡುವದಕ್ಕೆ ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು ಎಂದು ಆತನನ್ನು ಕೇಳಿದರು. ಯೇಸು ಅವರಿಗೆ-ನಾನೂ ನಿಮ್ಮನ್ನೂ ಒಂದು ಮಾತು ಕೇಳುತ್ತೇನೆ. ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಪರಲೋಕದಿಂದ ಬಂತೋ? ಮನುಷ್ಯರಿಂದ ಬಂತೊ? ಉತ್ತರ ಕೊಡಿರಿ ಅಂದನು. ಆಗ ಅವರು-ಪರಲೋಕದಿಂದ ಬಂತೆಂದು ನಾವು ಹೇಳಿದರೆ ಹಾಗಾದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಅಂದಾನು; ಮನುಷ್ಯರಿಂದ ಬಂತೆಂದು ಹೇಳಿದರೆ ಏನಾಗುವದೋ ಎಂಬದಾಗಿ ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಯೋಹಾನನು ಪ್ರವಾದಿಯೆಂದು ಜನರೆಲ್ಲರೂ ಅನುಮಾನವಿಲ್ಲದೆ ತಿಳುಕೊಂಡಿದ್ದರಿಂದ ಇವರಿಗೆ ಜನರ ಭಯವಿತ್ತು. ಹೀಗಿರಲಾಗಿ ಅವರು-ನಾವು ಅರಿಯೆವು ಎಂದು ಯೇಸುವಿಗೆ ಉತ್ತರಕೊಟ್ಟರು. ಆಗ ಯೇಸು ಅವರಿಗೆ-ಯಾವ ಅಧಿಕಾರದಿಂದ ಇದನ್ನು ಮಾಡುತ್ತೇನೋ ನಾನೂ ನಿಮಗೆ ಹೇಳುವದಿಲ್ಲ ಅಂದನು.

## ಮಾರ್ಕ 12:1-12

ಆಗ ಯೇಸು ಅವರ ಕೂಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ತೊಡಗಿ-ಒಬ್ಬ ಮನುಷ್ಯನು ಒಂದು ದ್ರಾಕ್ಷೆಯ ತೋಟವನ್ನು ಮಾಡಿ ಸುತ್ತಲು ಬೇಲಿಹಾಕಿಸಿ ದ್ರಾಕ್ಷೆಯ ಆಲೆಗಾಗಿ ಒಂದು ಗುಂಡಿಯನ್ನು ತೆಗಿಸಿ ಹೂಡೆಯನ್ನು ಕಟ್ಟಿಸಿ ಒಕ್ಕಲಿಗರಿಗೆ ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋದನು. ಫಲಕಾಲ ಬಂದಾಗ ದ್ರಾಕ್ಷೆಯ ತೋಟದ ಹಣ್ಣಿನ ಪಾಲನ್ನು ಆ ಒಕ್ಕಲಿಗರಿಂದ ತೆಗೆದುಕೊಂಡು ಬರುವದಕ್ಕಾಗಿ ಒಬ್ಬ ಆಳನ್ನು ಕಳುಹಿಸಿದನು. ಅವರು ಅವನನ್ನು ಹಿಡುಕೊಂಡು ಹೊಡೆದು ಬರಿಗೈಲಿ ಕಳುಹಿಸಿ ಬಿಟ್ಟರು. ಆ ಧಣಿಯು ತಿರಿಗಿ ಮತ್ತೊಬ್ಬ ಆಳನ್ನು ಅವರ ಬಳಿಗೆ ಕಳುಹಿಸಲು ಅವನನ್ನು ಅವರು ತಲೆತಲೆಯ ಮೇಲೆ ಹೊಡೆದು ಅಪಮಾನ ಪಡಿಸಿದರು.  ಆ ಮೇಲೆ ಇನ್ನೊಬ್ಬನನ್ನು ಕಳುಹಿಸಲು ಅವನನ್ನು ಕೊಂದುಹಾಕಿದರು. ಇನ್ನೂ ಅನೇಕರನ್ನು ಕಳುಹಿಸಿ - ದನು. ಅವರಲ್ಲಿ ಕೆಲವರನ್ನು ಹೊಡೆದರು, ಕೆಲವರನ್ನು ಕಡಿದು ಹಾಕಿದರು. ಅವನಿಗೆ ಇನ್ನೂ ಒಬ್ಬನಿದ್ದನು; ಯಾರಂದರೆ ಅವನ ಮುದ್ದು ಮಗನೇ. ನನ್ನ ಮಗನಿಗಾದರೂ ಮರ್ಯಾದೆ ತೋರಿಸಿ ಯಾರೆಂದು ಧಣಿಯು ಕಡೆಯಲ್ಲಿ ಅವನನ್ನು ಅವರ ಬಳಿಗೆ ಕಳುಹಿಸಿದನು. ಆದರೆ ಆ ಒಕ್ಕಲಿಗರು-ಇವನೇ ಬಾಧ್ಯಸ್ಥನು; ಬನ್ನಿ, ಇವನನ್ನು ಕೊಂದುಹಾಕೋಣ; ಆಗ ಸ್ವಾಸ್ತ್ಯವು ನಮ್ಮದಾಗುವದು ಎಂದು ಒಬ್ಬರ ಸಂಗಡಲೊಬ್ಬರು ಮಾತಾಡಿಕೊಂಡು ಅವನನ್ನು ಹಿಡಿದು ಕೊಂದುಹಾಕಿ ದ್ರಾಕ್ಷೆಯ ತೋಟದಿಂದ ಹೊರಕ್ಕೆ ಬಿಸಾಟುಬಿಟ್ಟರು. ಹಾಗಾದರೆ ದ್ರಾಕ್ಷೆಯ ತೋಟದ ಧಣಿಯು ಏನು ಮಾಡುವನು? ಅವನು ಬಂದು ಆ ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು ಬೇರೆ ಜನರಿಗೆ ಮಾಡುವದಕ್ಕೆ ಕೊಡುವನು. ಮನೆಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು. ಇದು ಕರ್ತನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ ಎಂಬುವ ಶಾಸ್ತ್ರವಚನವನ್ನು ನೀವು ಓದಲಿಲ್ಲವೇ ಅಂದನು. ಇವನು ತಮ್ಮನ್ನೇ ಕುರಿತು ಈ ಸಾಮ್ಯವನ್ನು ಹೇಳಿದನು ಎಂದು ಅವರು ತಿಳುಕೊಂಡು ಆತನನ್ನು ಹಿಡಿಯುವದಕ್ಕೆ ಸಂದರ್ಭ ನೋಡುತ್ತಿದ್ದರು. ಆದರೆ ಜನರಿಗೆ ಭಯಪಟ್ಟು ಆತನನ್ನು ಬಿಟ್ಟುಹೋದರು.

## ಲೂಕ 20:1-19

ಆ ದಿವಸಗಳೊಳಗೆ ಒಂದು ದಿನ ಆತನು ದೇವಾಲಯದಲ್ಲಿ ಜನರಿಗೆ ಉಪದೇಶ ಮಾಡುತ್ತಾ ಸುವಾರ್ತೆಯನ್ನು ಸಾರುತ್ತಿರಲಾಗಿ ಮಹಾಯಾಜಕರೂ ಶಾಸ್ತ್ರಿಗಳೂ ಸಭೆಯ ಹಿರಿಯರನ್ನು ಕೂಡಿಕೊಂಡು ಫಕ್ಕನೆ ಬಂದು-ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು, ನಮಗೆ ಹೇಳು ಎಂದು ಆತನನ್ನು ಕೇಳಲು ಆತನು ಅವರಿಗೆ-ನಾನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ, ನನಗೆ ಹೇಳಿರಿ. ದೀಕ್ಷಾಸ್ನಾನಮಾಡಿಸುವ ಅಧಿಕಾರವು ಯೋಹಾನನಿಗೆ ಪರಲೋಕದಿಂದ ಬಂತೋ ಮನುಷ್ಯರಿಂದ ಬಂತೋ ಎಂದು  ಅವರನ್ನು ಕೇಳಿದನು. ಆಗ ಅವರು-ಪರಲೋಕದಿಂದ ಬಂತೆಂದು ನಾವು ಹೇಳಿದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಅಂದಾನು; ಮನುಷ್ಯರಿಂದ ಬಂತೆಂದು ಹೇಳಿದರೆ ಜನರೆಲ್ಲರೂ ಯೋಹಾನನನ್ನು ಪ್ರವಾದಿಯೆಂದು ನಂಬಿರುವದರಿಂದ ಅವರು ನಮ್ಮನ್ನು ಕಲ್ಲೆಸೆದು ಕೊಂದಾರು ಎಂಬದಾಗಿ ತಮ್ಮತಮ್ಮೊಳಗೆ ಮಾತಾಡಿಕೊಂಡು ಅದು ಎಲ್ಲಿಂದ ಬಂತೋ ನಾವರಿಯೆವು ಎಂದು ಉತ್ತರಕೊಟ್ಟರು. ಆಗ ಯೇಸು ಅವರಿಗೆ-ಇದನ್ನೆಲ್ಲಾ ಯಾವ ಅಧಿಕಾರದಿಂದ ಮಾಡುತ್ತೇನೋ ಅದನ್ನು ನಾನೂ ನಿಮಗೆ ಹೇಳುವದಿಲ್ಲ ಎಂದು ಹೇಳಿದನು.

ಆಗ ಆತನು ಜನರಿಗೆ ಒಂದು ಸಾಮ್ಯವನ್ನು ಹೇಳುವದಕ್ಕೆ ತೊಡಗಿದನು. ಅದೇನಂದರೆ–ಒಬ್ಬ ಮನುಷ್ಯನು ಒಂದು ದ್ರಾಕ್ಷೆಯ ತೋಟವನ್ನು ಮಾಡಿ ಅದನ್ನು ಒಕ್ಕಲಿಗರಿಗೆ ವಾರಕ್ಕೆ ಕೊಟ್ಟು ಬೇರೊಂದು ದೇಶಕ್ಕೆ ಹೋಗಿ ಅಲ್ಲಿ ಬಹುಕಾಲ ಇದ್ದನು. ಫಲಕಾಲ ಬಂದಾಗ ದ್ರಾಕ್ಷೆಯ ತೋಟದ ಹುಟ್ಟುವಳಿಯ ಪಾಲನ್ನು ತೆಗೆದುಕೊಳ್ಳುವದಕ್ಕಾಗಿ ಒಬ್ಬ ಆಳನ್ನು ಒಕ್ಕಲಿಗರ ಬಳಿಗೆ ಕಳುಹಿಸಿದನು. ಆದರೆ ಆ ಒಕ್ಕಲಿಗರು ಅವನನ್ನು ಹೊಡೆದು ಬರಿಗೈಲಿ ಕಳುಹಿಸಿಬಿಟ್ಟರು. ಆ ಧಣಿಯು ಬೇರೊಬ್ಬ ಆಳನ್ನು ಕಳುಹಿಸಲಾಗಿ ಅವರು ಅವನನ್ನೂ ಹೊಡೆದು ಅವಮಾನ ಪಡಿಸಿ ಬರಿಗೈಲಿ ಕಳುಹಿಸಿಬಿಟ್ಟರು. ಆ ಮೇಲೆ ಮೂರನೆಯವನನ್ನು ಕಳುಹಿಸಲು ಅವರು ಅವನನ್ನೂ ಗಾಯವಾಗುವಷ್ಟು ಹೊಡೆದು ಹೊರಕ್ಕೆ ಅಟ್ಟಿದರು.  ಆಗ ಆ ದ್ರಾಕ್ಷೆಯ ತೋಟದ ಧಣಿಯು–ನಾನೇನು ಮಾಡಲಿ? ನನ್ನ ಮುದ್ದು ಮಗನನ್ನು ಕಳುಹಿಸುತ್ತೇನೆ, ಒಂದು ವೇಳೆ ಅವನಿಗಾದರೂ ಮರ್ಯಾದೆ ತೋರಿಸಾರು ಅಂದು ಕೊಂಡನು. ಆದರೆ [ಕಳುಹಿಸಿದಾಗ] ಆ ಒಕ್ಕಲಿಗರು ಅವನನ್ನು ಕಂಡು–ಇವನೇ ಬಾಧ್ಯಸ್ಥನು; ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ತ್ಯ ನಮ್ಮದಾಗಲಿ ಎಂದು ಒಬ್ಬರಸಂಗಡಲೊಬ್ಬರು ಮಾತಾಡಿಕೊಂಡು ಅವನನ್ನು ದ್ರಾಕ್ಷೆಯ ತೋಟದ ಹೊರಕ್ಕೆ ದೊಬ್ಬಿ ಕೊಂದುಹಾಕಿದರು. ಹಾಗಾದರೆ ದ್ರಾಕ್ಷೆಯತೋಟದ ಧಣಿಯು ಅವರಿಗೆ ಏನು ಮಾಡುವನು? ಅವನು ಬಂದು ಆ ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು ಬೇರೆ ಜನರಿಗೆ ಮಾಡುವದಕ್ಕೆ ಕೊಡುವನು ಅಂದನು. ಇದನ್ನು ಕೇಳಿ–ಹಾಗಾಗಬಾರದು ಅಂದರು. ಆದರೆ ಆತನು ಅವರನ್ನು ದೃಷ್ಟಿಸಿನೋಡಿ–ಹಾಗಾದರೆ ಮನೇ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು ಎಂದು ಬರೆದಿರುವ ಮಾತೇನು? ಈ ಕಲ್ಲಿನ ಮೇಲೆ ಬೀಳುವ ಪ್ರತಿಯೊಬ್ಬನು ತುಂಡು ತುಂಡಾಗುವನು; ಇದು ಯಾರ ಮೇಲೆ ಬೀಳುವದೋ ಅವನನ್ನು ಪುಡಿಪುಡಿ ಮಾಡುವದು ಅಂದನು.

ಶಾಸ್ತ್ರಿಗಳೂ ಮಹಾಯಾಜಕರೂ ಈ ಮಾತುಗಳನ್ನು ಕೇಳಿ ತಮ್ಮನ್ನೇ ಕುರಿತು ಈ ಸಾಮ್ಯವನ್ನು ಹೇಳಿದನು ಎಂದು ತಿಳುಕೊಂಡು ಅದೇ ಗಳಿಗೆಯಲ್ಲಿ ಆತನನ್ನು ಹಿಡಿಯುವದಕ್ಕೆ ಸಂದರ್ಭ ನೋಡಿದರು; ಆದರೆ ಜನರಿಗೆ ಭಯಪಟ್ಟರು.

*****

# ಉತ್ತಮಪಡಿಸಿಕೊಳ್ಳಲಾಗದ ಅವಕಾಶಗಳು ತೆಗೆದುಹಾಕಲ್ಪಡುವದು

**ರೀಪ್ರಿಂಟ್ಸ್ ಪುಟ 4678**

## ಮತ್ತಾಯ 21:23–46

**“ಆದದರಿಂದ ದೇವರರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು.”**

ಈ ಅಧ್ಯಯನದ ಎರಡು ಸಾಮ್ಯಗಳಲ್ಲಿ ಆ ಮಹಾ ಬೋಧಕನು ತನ್ನ ಕಾಲದಲ್ಲಿನ ಧಾರ್ಮಿಷ್ಠರು ಮಾಡುತ್ತಿದ್ದ ತಪ್ಪುಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವನು. ಈ ಸಾಮ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಇಸ್ರಾಯೇಲ್ಯರು ಒಂದು ಕಾಲಕ್ಕೆ ದೇವಾನುಗ್ರಹದಿಂದ ತಿರಸ್ಕರಿಸಲ್ಪಡುವಂಥ ಸನ್ನಿವೇಶಕ್ಕೆ ನಡೆಸಲ್ಪಟ್ಟದ್ದರ ಕಾರಣದ ಒಂದು ಸ್ಪಷ್ಟವಾದ ಒಳನೋಟವನ್ನು ನೀಡಲಾಗಿರುವದು. ಇದೇ ಸಂದರ್ಭದಲ್ಲಿ ಶಾರೀರಿಕ ಸಂಬಂಧದಲ್ಲಿ  ಹೆಸರಿನ ಇಸ್ರಾಯೇಲ್ಯರು ಹೆಸರಿಗೋಸ್ಕರ ವಾಗಿರುವ ಕ್ರೈಸ್ತ ಸಮುದಾಯದ ಮೂಲರೂಪ ವಾಗಿರುವರೆಂಬುದನ್ನೂ ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಿರುವದು. ಹೀಗಾಗಿ ಈ ಕ್ರಿಸ್ತೀಯ (ಸುವಾರ್ತಾ) ಯುಗದ “ಸುಗ್ಗಿಯ” ಕಾಲದಲ್ಲಿ ಇದೇ ಒಂದು ವಿಧವಾದ ಪರಿಸ್ಥಿತಿ ಇರುವಂಥದ್ದನ್ನು ನಾವು ಎದುರು ನೋಡಬಹುದು.

ಇಲ್ಲಿ ಹಾಗು ಇತರ ಎಲ್ಲೆಡೆ ಕರ್ತನ ಬೋಧನೆಯಲ್ಲಿನ ಪ್ರಾಭಲ್ಯವನ್ನು ಅರಿತುಕೊಳ್ಳಬೇಕೆಂದರೆ ಯೆಹೂದ್ಯರಿಗೆ ದೇವರ ರಾಜ್ಯವು ವಾಗ್ದಾನಮಾಡಲ್ಪಟ್ಟಿದ್ದು, ಇದರಲ್ಲಿ ದಾವೀದನ ರಾಜ್ಯವು ಒಂದು ಸಣ್ಣ ಪ್ರಮಾಣದ ಮಾದರಿಯಾಗಿತ್ತೆಂಬುದನ್ನು ನೆನಪಿನಲ್ಲಿಡುವ ಅಗತ್ಯವಿರುವದು. ಹಲವು ಶತಮಾನಗಳ ಪರ್ಯಂತರ ಅವರು ಮೆಸ್ಸೀಯನೆಂಬ ಒಬ್ಬ ಮಹಾ ಅರಸನನ್ನು ನಿರೀಕ್ಷಿಸುತ್ತಿದ್ದು, ಆತನ ಬರೋಣವು ತಮ್ಮನ್ನು ಉನ್ನತಿಗೆ ತಂದು ತಮಗೆ ದೇವರ ರಾಜ್ಯದಲ್ಲಿ ಪ್ರಾಧಾನ್ಯತೆ ದೊರಕಿಸಿಕೊಡುವ – ದೆಂಬುದನ್ನು ಎದುರು ನೋಡುತ್ತಿದ್ದರು. ಸ್ನಾನಿಕನಾದ ಯೋಹಾನನು ಯೆಹೂದ್ಯರಿಗೆ ಮೆಸ್ಸೀಯನನ್ನು ಪರಿಚಯಿಸಲು ಬಂದಾಗ ಹೇಳಿದ್ದೇನಂದರೆ, ಅವರು ತಮ್ಮ ಶಕ್ತ್ಯಾನುಸಾರವಾಗಿ ದೇವರ ಹಾಗೂ ಧರ್ಮಶಾಸ್ತ್ರವಿಧಿಗಳ ಕಡೆಗೆ ತಿರುಗಿಕೊಂಡು ಮಾನಸಾಂತರವನ್ನು ಹೊಂದದಿದ್ದಲ್ಲಿ ಅವರು ಮೆಸ್ಸೀಯನ ರಾಜ್ಯದಲ್ಲಿ ಪಾಲು ಪಡೆಯುವದನ್ನು ನಿರೀಕ್ಷಿಸುವ ಅಗತ್ಯವಿರುವದಿಲ್ಲವೆಂಬದು. ತಮ್ಮ ನೀತಿಯು ಶಾಸ್ತ್ರಿಗಳ ಹಾಗು ಪರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದಲ್ಲಿ ಅವರು ಬಹು ಕಾಲದಿಂದಲೂ ಕಾದುಕೊಂಡಿದ್ದ ಆ ರಾಜ್ಯಕ್ಕೆ ಹೇಗೂ ಸೇರಲಾರರು ಅಥವಾ ಅದರಲ್ಲಿನ ಅಂಗಗಳಾಗಲಾರರು ಎಂದು ಯೇಸುವು ಜನರಿಗೆ ಹೇಳಿದ್ದನು. (ಮತ್ತಾಯ 5:20) ಈ ಪಾಠದ ಎರಡು ಸಾಮ್ಯಗಳಲ್ಲಿ ಬಹು ಪಾಲು ಜನರ ದಾರಿಗೆ ಅಡ್ಡಲಾಗಿ ಬಂದು ನಿಂತಿದ್ದ ವಿಷಯವು ಯಾವುದೆಂಬುದನ್ನು ನಿದರ್ಶಿಸ–ಲಾಗಿರುವದು.

## ಈದಿನ ನನ್ನ ತೋಟದಲ್ಲಿ ಕೆಲಸಮಾಡು

ಯೆಹೂದ್ಯರು ದೇವಜನರೆಂದು ತಮ್ಮನ್ನು ತೋರ್ಪಡಿಸಿ–ಕೊಂಡವರಾಗಿ ದೇವರಿಗೆ ಸೇವೆ ಮಾಡಲು ಇಚ್ಛಿಸುತ್ತಿದ್ದರು. ಅವರನ್ನು ಕೇವಲ ದಾಸರಂತೆ ನಡೆಸಿಕೊಳ್ಳಲಾಗಿರಲಿಲ್ಲ ಆದರೆ ವಾಸ್ತವದಲ್ಲಿ ಮಕ್ಕಳಂತೆ ನಡೆಸಿಕೊಳ್ಳಲಾಗಿತ್ತು. ಅವರೆಲ್ಲರೂ ದೇವರ ದ್ರಾಕ್ಷೆತೋಟಕ್ಕೆ ಹೋಗಿ ಕೆಲಸಮಾಡಲು ಹೇಳಲಾಗಿತ್ತು. ಹೀಗಾಗಿ ಅವರನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದ್ದು ನಮ್ಮ ಮೊದಲನೇ ಸಾಮ್ಯದಲ್ಲಿ ಇಬ್ಬರು ಮಕ್ಕಳನ್ನಾಗಿ ಅವರನ್ನು ಪ್ರತಿನಿಧಿಸಲಾಗಿತ್ತು. ಬಾಹ್ಯ ರೀತಿಯಲ್ಲಿ ಧರ್ಮಿಷ್ಠನಾಗಿಯೂ ಶ್ರದ್ಧಾಭಕ್ತಿಯುಳ್ಳವನಾಗಿಯೂ ತೋರಿಸಿಕೊಳ್ಳುವವನಾಗಿ ಸೂಚಿತನಾದ ಆ ಇಬ್ಬರು ಮಕ್ಕಳಲ್ಲಿನ ಒಬ್ಬನು–ಹೌದು ನಾವು ದೇವರನ್ನು ಸೇವಿಸುವೆವೆಂದು ಹೇಳಿದ್ದನು. ಹೀಗಿದ್ದರೂ ಅವರು ನಿಜದಲ್ಲಿ ದೇವರಿಗೆ ಸೇವೆಮಾಡುವದನ್ನು ಬಯಸುತ್ತಿರಲಿಲ್ಲ; ಆದರೆ ವಾಸ್ತವದಲ್ಲಿ ತಮ್ಮ ಪಕ್ಷಪಂಗಡಗಳ ಸೇವೆ, ತಮ್ಮ ವೈಯುಕ್ತಿಕ ಗುರಿ ಸ್ವಂತ ಮಾನ ಪ್ರಾಭಲ್ಯ ಇಷ್ಟಗಳನ್ನು ಈಡೇರಿಸಿಕೊಳ್ಳಲು ಪರಿಶ್ರಮಿಸುವವರಾಗಿದ್ದರು. ಸಾಮ್ಯದಲ್ಲಿ ಹೇಳಿರುವ ಮತ್ತೊಬ್ಬ ಮಗನನ್ನು ಸೂಚಿಸುವ ಇನ್ನೊಂದು ವರ್ಗವು ದೇವರನ್ನು ಸೇವಿಸುವದಾಗಿ ನಟಿಸದೆ ಇದ್ದವರಾಗಿದ್ದು, ಅವರನ್ನು ಸುಂಕದವರು ಪಾಪಿಗಳು ಹಾಗು ಸೂಳೆಯರೆಂದು ಗುರುತಿಸಲಾಗಿತ್ತು. ಆದಾಗ್ಯೂ (ಸ್ನಾನಿಕನಾದ) ಯೋಹಾನನ ಸಂದೇಶವು ಹೊರಟು ಯೇಸುವು ಪ್ರತ್ಯಕ್ಷನಾದಾಗ, ಹಾಗು ಆನಂತರದಲ್ಲಿ ಯೇಸುವಿನ ಮತ್ತು ಅಪೋಸ್ತಲರ ಉಪದೇಶಗಳು ಹೊರಬಿದ್ದಾಗ ಇದೇ ಸುಂಕದವರು ಪಾಪಿಗಳು ಸೂಳೆಯರು ಆತನನ್ನು ಸ್ವೀಕರಿಸಲು ಸಿದ್ಧರಿದ್ದು (ಯಹೂದ) ಧರ್ಮಾಸಕ್ತರು ಆತನ ಸಂದೇಶವು ತಮ್ಮ ಬೋಧನೆಗಳಿಗೆ ವಿರೋಧ–ವಾಗಿರುವದನ್ನು ಕಂಡುಕೊಂಡವರಾಗಿ ಆತನನ್ನು ತಿರಸ್ಕರಿಸಿದ್ದರು. ಹೀಗೆ ಯೇಸುವಿನ ವಿರುದ್ಧವಾಗಿ ಮಾಡಿದ ಆರೋಪಗಳಲ್ಲಿ– "ಈತನು ಸುಂಕದವರು ಹಾಗು ಪಾಪಿಗಳನ್ನು ಸೇರಿಸಿಕೊಂಡು ಅವರೊಂದಿಗೆ ತಿನ್ನುತ್ತಾನೆ" ಎಂಬದು ಒಂದಾಗಿತ್ತು.

## "ಪಾಪಿಗಳ ಗೆಳೆಯನು ಎಂಬುದು ಆತನ ಹೆಸರಾಗಿತ್ತು"

ಎರಡನೇ ಸಾಮ್ಯವು ದೇವರನ್ನು ಎಲ್ಲಾ ವಿಷಯಗಳಲ್ಲಿಯೂ ಸುಸಜ್ಜಿತನಾದ ಹಾಗು ತನ್ನ ಉದ್ದೇಶಗಳ ಈಡೇರಿಕೆಗಳ ಬಗ್ಗೆ ಚೆನ್ನಾಗಿ ಅಣಿಮಾಡಿಕೊಂಡಿದ್ದ ಒಂದು ದೊಡ್ಡ ದ್ರಾಕ್ಷೆತೋಟದ ಒಡೆಯನನ್ನಾಗಿ ಪ್ರತಿನಿಧಿಸುತ್ತದೆ. ಆ ದ್ರಾಕ್ಷೆತೋಟವು ಯೆಹೂದೀ ಜನಾಂಗವನ್ನು ಸೂಚಿಸುತ್ತದೆ ಮತ್ತು ಆಜ್ಞಾವಿಧಿಗಳ ಸಂಬಂಧ –ವಾದ ಒಡಂಬಡಿಕೆಯ ಮೂಲಕವಾದ ಏರ್ಪಾಟುಗಳೆಲ್ಲವೂ ಅವರ ಅಭಿವೃದ್ಧಿಗಾಗಿ ಮಾಡಲಾಗಿತ್ತು.. ಈ ದ್ರಾಕ್ಷೆತೋಟವನ್ನು ಒಡೆಯನು ತೋಟಗಾರರಿಗೆ ಗುತ್ತಿಗೆಯ ಮೇಲೆ ನೀಡಿದ್ದನು. ದ್ರಾಕ್ಷೆಗಿಡಗಳನ್ನು ಹಾಗು ಫಲಗಳನ್ನು ನೋಡಿಕೊಳ್ಳುವದು ಅಲ್ಲದೆ ಒಂದು ಪಾಲನ್ನು ತಮಗಾಗಿ ಇಟ್ಟುಕೊಂಡು ಉಳಿದ ಫಲ ಗಳನ್ನೆಲ್ಲಾ ಆ ಒಡೆಯನಿಗೆ ಸಲ್ಲಿಸುವದು ಆ ತೋಟಗಾರರ ಕರ್ತವ್ಯವಾಗಿತ್ತು. ಈ ತೋಟಗಾರರು ಯೆಹೂದ ಧರ್ಮದಲ್ಲಿನ ಪ್ರಮುಖರಾಗಿದ್ದು, ಅವರ ವಿಷಯವಾಗಿ ಯೇಸುವು "ಶಾಸ್ತ್ರಿಗಳು ಹಾಗು ಫರಿಸಾಯರು ಮೋಶೆಯ ಪೀಠದಲ್ಲಿ ಕುಳಿತುಕೊಂಡಿದ್ದಾರೆ ಅದುದರಿಂದ ಅವರು ಹೇಳುವದನ್ನೆಲ್ಲಾ ಕೈಗೊಂಡು ನಡೆಯಿರಿ" ಎಂದು ಹೇಳಿದ್ದನು. (ಮತ್ತಾಯ 23:2,3) ಆ ಒಡೆಯನು ತನ್ನ ತೋಟಜಮೀನಿನ ಫಲಗಳನ್ನು ಕೇಳುವದು ಸೂಕ್ತವಾಗಿದ್ದು ಅದರಲ್ಲಿನ ತನ್ನ ಪಾಲನ್ನು ತೆಗೆದುಕೊಳ್ಳಲು ಆಳುಗಳನ್ನು ಕಳುಹಿಸಿದ್ದನು. ಆದರೆ ಆ ತೋಟಗಾರರು ಅವರ ಒಡೆಯನಿಗೆ ಸಲ್ಲತಕ್ಕದ್ದನ್ನು ಆಳುಗಳಿಗೆ ಕೊಡುವದಕ್ಕೆ ಬದಲಾಗಿ ಅವರನ್ನು ಹೊಡೆದು ಕೊಂದು ಕಲ್ಲೆಸೆಯುವದರ ಮೂಲಕವಾಗಿ ಅವರುಗಳನ್ನು ನಿಂದಿಸಿದ್ದರು.

ಈ ಸೇವಕರುಗಳು ಇಸ್ರಾಯೇಲ್ಯರಿಗೆ ಕಳುಹಿಸಿಕೊಡ –ಲಾಗಿದ್ದ ಹಿಂದಿನ ಕಾಲದ ಪ್ರವಾದಿಗಳಾಗಿದ್ದರು. ಅವರುಗಳು ಅತಿ ಆದರಣಪೂರ್ಣವಾಗಿಯೂ ಮತ್ತು ಸಾಧುತ್ವ ನಯವಿನಯ ತಾಳ್ಮೆ ಮುಂತಾದ ಪವಿತ್ರಾತ್ಮನ ಹೇರಳವಾದ ಫಲಗಳನ್ನು ಕೊಡುವದರ ಮೂಲಕವಾಗಿಯೂ ಸ್ವೀಕರಿಸಲ್ಪಡಬೇಕಿತ್ತು. ಆದರೆ ಅವರು (ಕಳ್ಳತನದಿಂದ) ನುಸುಳಿ ಬಂದವರೆಂದು ಇಸ್ರಾಯೇಲ್ಯರ ಮುಖಂಡರಿಂದ ನಡೆಸಿಕೊಳ್ಳಲ್ಪಟ್ಟಿದ್ದರು. ಕೆಲವರು ಕಲ್ಲೆಸೆದು ಕೊಲ್ಲಲ್ಪಟ್ಟಿದ್ದರು, ಕೆಲವರು ಹೊಡೆಯಲ್ಪಟ್ಟಿದ್ದರು, ಕೆಲವರು ಕೊಲೆ ಮಾಡಲ್ಪಟ್ಟಿದ್ದರು, ಕೆಲವರು ಗರಗಸದಿಂದ ಕೊಯ್ಯಲ್ಪಟ್ಟಿದ್ದರು. ಕೆಲವರು ಕುರಿಮೇಕೆಯ ಚರ್ಮಗಳನ್ನು ಹೊದ್ದುಕೊಂಡವರಾಗಿ ಗವಿ ಹಾಗು ಗುಹೆಗಳಲ್ಲಿ ವಾಸಿಸುವರಾಗಿದ್ದರು. ಯಾಕಂದರೆ ಅವರನ್ನು ಅರಿತುಕೊಳ್ಳಲಾಗಿರಲಿಲ್ಲ. ಅವರನ್ನು ದ್ರಾಕ್ಷೇತೋಟದ ಯಜಮಾನನ ಪ್ರತಿನಿಧಿಗಳಂತೆ ನಡೆಸಿಕೊಳ್ಳಲಿಲ್ಲ. ಕಡೆಯಲ್ಲಿ ಆ ಯಜಮಾನನು "ನನ್ನ ಮಗನಿಗಾದರೂ ಮರ್ಯಾದೆ ತೋರಿಸಿಯಾರು" ಎಂದು ಹೇಳಿ ತನ್ನ ಮಗನನ್ನು ಕಳುಹಿಸಿಕೊಟ್ಟನು. ಆದರೆ ಆ ಇದೇ ತೋಟಗಾರರು ಅಂದರೆ ನಮ್ಮ ಕರ್ತನ ದಿನದಲ್ಲಿನ ಧಾರ್ಮಿಕ ಮುಖಂಡರು ಆತನನ್ನು ಕೊಂದು ಅವನ ಸೊತ್ತನ್ನು ವಶಪಡಿಸಿಕೊಳ್ಳಲು ಆಲೋಚಿಸಿದ್ದರು. ಅವರು ಹೇಗೂ ದೇವರ ಸ್ವಾಸ್ತ್ಯದ ಮೇಲೆ ಅಧಿಕಾರ ನಡೆಸಬಹುದೆಂಬ ಅಭಿಪ್ರಾಯವನ್ನು ಹೊಂದಿದ್ದು ಯಾರಾದರೂ ಅವರಿಗೆ ಬುದ್ಧಿಹೇಳಿದರೆ ಇಲ್ಲವೇ ಅವರ ಕಪಟವನ್ನು ಹೊರಗೆಡವಿದರೆ ಅಥವಾ ಅವರ ಅಧೀನತೆಯಿಂದ ಜನರನ್ನು ಬಿಡಿಸಿದರೆ, ಅಂಥವರು ಯಾರೇ ಆಗಿದ್ದರೂ ಅಂದರೆ ಅದರ ಬಾಧ್ಯಸ್ಥರೇ ಆಗಿದ್ದರೂ, ಅವರನ್ನು ಕೊಲೆಮಾಡುವ ಸ್ವಾತಂತ್ರ್ಯವನ್ನು ಹೊಂದಿರುವದಾಗಿ ಭಾವಿಸಿಕೊಂಡಿದ್ದರು. ಅವರು ಆತನನ್ನು (ಆ ಮಗನನ್ನು) ಶಿಲುಬೆಗೆ ಹಾಕಿ ಕೊಂದಿದ್ದರು.

ದ್ರಾಕ್ಷೇತೋಟದ ಒಡೆತನವನ್ನು ಮರೆತವರಾಗಿ ಅದನ್ನು ಅವರ ಸ್ವಂತ ಸೊತ್ತಿನಂತೆ ಬಳಸಿಕೊಂಡು ತನ್ನ ಸೇವಕರನ್ನು ಅಪಮಾನಗೊಳಿಸಿ ತನ್ನ ಮಗನನ್ನು ಕೊಂದಿದ್ದ ಆ ದುಷ್ಟರಾದ ತೋಟಗಾರರಿಗೆ ದ್ರಾಕ್ಷೇತೋಟದ ಯಜಮಾನನು ಏನು ಮಾಡುವನೆಂದು ನಾವು ಕಲ್ಪಿಸಿಕೊಳ್ಳಬಹುದು? ಆ ದಿವ್ಯ ಬೋಧಕನು ತನ್ನನ್ನು ಆಲಿಸುತ್ತಿದ್ದವರಿಗೆ ಪ್ರಶ್ನೆಹಾಕಿದ್ದನು. ಯಜಮಾನನು ಆ ದುಷ್ಟರನ್ನು ಸಂಹಾರಮಾಡಿ ಆ ದ್ರಾಕ್ಷೇತೋಟವನ್ನು ಅದರ ಫಲಗಳನ್ನು ಸಲ್ಲಿಸುವ ಇತರರಿಗೆ

ಕೊಡುವನೆಂಬ ಪ್ರಾಮಾಣಿಕವಾದ ಉತ್ತರವು ಬಂದಿತ್ತು.

ಅಲ್ಲಿ ನಡೆದದ್ದೂ ಕೇವಲ ಇದೇ. ಸರ್ವಶಕ್ತನನ್ನು ಅಲಕ್ಷ್ಯಮಾಡಿ ದೇವರ ವಾಗ್ದಾನಗಳು ಆಶೀರ್ವಾದಗಳು ಹಾಗು ಅವಕಾಶಗಳು ಇವುಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದ ಶಾಸ್ತ್ರಿಗಳು ಫರಿಸಾಯರು ಹಾಗು ಧರ್ಮಶಾಸ್ತ್ರ ಪಂಡಿತರುಗಳಿಂದ ಇವೆಲ್ಲವುಗಳು ತೆಗೆಯಲ್ಪಟ್ಟಿದ್ದವು. ಅವರ ಆಡಳಿತವು ಕೊನೆಗೊಂಡಿತು ಮತ್ತು ದೇವಾನುಗ್ರಹವನ್ನು ಹೊಂದಿ ದೇವರಿಗೆ ಬಾಯಂತಾಗಿರುವ ಸೌಭಾಗ್ಯವು ಅವರಿಂದ ತೆಗೆಯಲ್ಪಟ್ಟು ಇತರರಿಗೆ ಅಂದರೆ ಅಪೋಸ್ತಲರಿಗೆ ಹಾಗು ಅವರ ಸಹಕಾರಿಗಳಿಗೆ ಈ ಸುವಾರ್ತಾಯುಗದಲ್ಲಿ ಕೊಡಲಾಗಿತ್ತು.

ಹೀಗಾಗಿ ಶಾರೀರಿಕ ಸಂಬಂಧವಾದ ಇಸ್ರಾಯೇಲ್ಯರು ಹೆಸರಿಗಾಗಿರುವ ಆತ್ಮಿಕ ಇಸ್ರಾಯೇಲ್ಯರಿಗೆ ಒಂದು ಮಾದರಿ ಅಥವಾ ಸಂಕೇತವಾಗಿದ್ದು ಅದೇ ಬಗೆಯ ಪರಿಸ್ಥಿತಿಗಳು ಈ ದಿನದಲ್ಲಿಯೂ ಇರುವದೆಂಬುದನ್ನು ಕಂಡುಕೊಳ್ಳಲು ನಾವು ಬಹು ಹಿಂದೆ ನೋಡಬೇಕಿಲ್ಲ. ದೇವರನ್ನು ಮತ್ತು ಆತನ ವಾಕ್ಯಗಳನ್ನು ಪ್ರತಿನಿಧಿಸುವವರಾಗಿ ನುಸುಳಿಬಂದು ಉನ್ನತ ಸ್ಥಾನವನ್ನು ಪಡೆದು ತಮ್ಮ ಸ್ವಂತ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಜನರ ಮೇಲೆ ಅಧಿಕಾರ ಪಡೆಯಲು ತಮ್ಮ ಸ್ಥಾನಮಾನಗಳನ್ನು ಬಳಸುವವರನ್ನು ನಾವು ಈ ದಿನದಲ್ಲೂ ನೋಡುತ್ತೇವೆ. ಇವರು ಕಟುವಾಗಿ ಮಾತನಾಡುವರಾಗಿದ್ದು, ಹೌದು, ಕರ್ತನ ಹೆಸರಿನಲ್ಲಿ ಸಾತ್ವಿಕರಾಗಿ ದೀನತೆಯಿಂದ ಬರುವ ಯಾರನ್ನಾದರೂ ಕೊಲ್ಲುವ ಪ್ರವೃತ್ತಿ – ಯುಳ್ಳವರಾಗಿರುವರು. ಅವರು ಇಂಥವರುಗಳನ್ನು "ಅಕ್ಷರಶಃ" ಕೊಲ್ಲುವದಿಲ್ಲ ಇಲ್ಲವೇ "ಅವರಿಗೆ ಬಾಣಗಳನ್ನು ಎಸೆಯುವದಿಲ್ಲ", ಆದರೆ ಅವರನ್ನು ಬಹಿಷ್ಕರಿಸುವ ಅರ್ಥದಲ್ಲಿ ಅವರ ಶಿರಚ್ಛೇದನ ಮಾಡುವರು. ಹಾಗು ಕಟುವಾದ ಮಾತುಗಳು, ನಿಂದನೆ ಮುಂತಾದ ಬಾಣಗಳನ್ನು ಅವರ ಮೇಲೆ ಎಸೆಯುವರು.

ಇಂಥಾ ಸೇವಕರಿಗೆ ಆ ತೋಟಗಾರನಾದ ಯಜಮಾನನು ಏನು ಮಾಡುವನು? ಉತ್ತರವೇನಂದರೆ ಅವರು ಹೊಂದಿದ ಅವಕಾಶಗಳನ್ನು ಮತ್ತೆ ಅವರಿಂದ ತೆಗೆಯಲಾಗುವದು. ಕಾರ್ಯಕ್ರಮದ ಯೋಜನೆಯ ಮುಂದಿನ ಹಂತವು ಏನಂದರೆ ಆ ರಾಜನ ಕುಮಾರನು ಹಾಗು ಕೆಟ್ಟದಾಗಿ ನಡೆಸಿಕೊಳ್ಳಲ್ಪಟ್ಟಿದ್ದ ಆತನ ಸೇವಕರುಗಳು ನೂತವಾದ "ದೇವರ ಪ್ರಿಯ ಕುಮಾರನ ರಾಜ್ಯವಾಗಿ" "ಭೂಮಂಡಲದಲ್ಲೆಲ್ಲಾ" ರೂಪುಗೊಳ್ಳುವ – ರೆಂಬುದಕ್ಕಾಗಿ ದೇವರಿಗೆ ಕೃತಜ್ಞತೆಗಳು. ಕಾರ್ಯ ಭಾರದ ಸಂಗತಿಗಳನ್ನು ಪರಿಶೋಧಿತರಾಗಿ ಪ್ರಮಾಣೀಕರಿಸಲ್ಪಟ್ಟು ನಂಬಿಗಸ್ತರಾದಂಥವರಿಗೇ ಕೊಡಲಾಗುವದಲ್ಲದೆ ಮತ್ತಾರಿಗೂ ಅಲ್ಲ.

ನಿರಾಕೃತನಾಗಿದ್ದ ಯೇಸುವು ಸಭೆಯೆಂಬ ದೇವರ ಭವ್ಯವಾದ ಆಲಯದ "ಮುಖ್ಯವಾದ ಮೂಲೆಗಲ್ಲಾಗುವನು". ಬ್ರೂಣಾವಸ್ಥೆಯ ಹಂತದಲ್ಲಿರುವ ರಾಜ್ಯವನ್ನು ಯೆಹೂದ್ಯರಿಂದ ತೆಗೆಯಲ್ಪಟ್ಟು ಅದನ್ನು ಕ್ರಿಸ್ತನು ಮತ್ತು ಆತನ ಸಭೆಗೆ ಕೊಡಲಾಗುವದು; ಹೀಗೆಯೇ ಈಗಿನ ಕಾಲದಲ್ಲಿಯೂ ಬ್ರೂಣಾವಸ್ಥೆಯಲ್ಲಿರುವ ಆತನ (ಕ್ರಿಸ್ತನ) ರಾಜ್ಯವನ್ನು ಭೂಮಂಡಲದಿಂದ ಪೂರ್ಣವಾಗಿ ತೆಗೆಯಲಾಗುವದು. ಆತನಿಗೆ ನಂಬಿಗಸ್ತರಾದವರು ಪರಲೋಕದ ಅಂತಸ್ತಿನಲ್ಲಿನ ಬಲಾಧಿಕಾರ ಹಾಗು ಮಹಾ ವೈಭವಗಳಿಗೆ ಸ್ವೀಕರಿಸಿಕೊಳ್ಳಲಾಗುವದು.

ಯಾರಾರು ಯೇಸುವಿನ ವಿಷಯದಲ್ಲಿ ಮುಗ್ಗರಿಸಿಬಿದ್ದರೊ ಅವರು ಒಡೆಯಲ್ಪಟ್ಟವರೆಂಬ ಅರ್ಥದಲ್ಲಿ ನಷ್ಟವನ್ನು ಅನುಭವಿಸಿ– ದರಾದರೂ ಸರಿಪಡಿಸಿಕೊಳ್ಳುವ ಸಾಧ್ಯತೆಯು ಅವರಿಂದ ದೂರವಾಗಿರುವದಿಲ್ಲ. "ಈ ಕಲ್ಲಿನ ಮೇಲೆ ಬೀಳುವವನು ತುಂಡುತುಂಡಾಗುವನು; ಇದು ಯಾರ ಮೇಲೆ ಬೀಳುತ್ತದೋ ಅವನನ್ನು ಪುಡಿಪುಡಿಮಾಡುವದು..."; ಇದು ಎರಡನೇ ಮರಣದ ಮೂಲಕವಾಗಿ ಸಂಭವಿಸುವದು – ಮತ್ತಾಯ 21:44

*****

# ಮದುವೆಯ ಔತಣ

**ರೀಪ್ರಿಂಟ್ಸ್ ಪುಟ 5510**

## ಮತ್ತಾಯ 22:1–14

**"ಯೆರೂಸಲೇಮೇ, ಯೆರೂಸಲೇಮೆ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿನಗೆ ಮನಸ್ಸಿಲ್ಲದೆ ಹೋಯಿತು." ಲೂಕ 13:34**

ಇಲ್ಲಿ ನಮಗಿರುವದು ಪರಲೋಕರಾಜ್ಯದ ವಿಷಯವಾದ ಮತ್ತೊಂದು ಸಾಮ್ಯ. ದೇವರ ವಾಗ್ದಾನಗಳು ಹಾಗು ಧರ್ಮಶಾಸ್ತ್ರದ ಮೂಲಕ ಇಸ್ರಾಯೇಲ್ಯರ ಪರವಾಗಿ ಆತನು ಮುಂದಾಗಿ ಮಾಡಿರುವ ಏರ್ಪಾಡುಗಳೆಲ್ಲವು ಇಸ್ರಾಯೇಲ್ಯರನ್ನು ದೇವರ ಪರಿಶುದ್ಧ ರಾಜ್ಯವನ್ನಾಗಿ ಸಿದ್ಧಪಡಿಸಿ ಅವರನ್ನು ಅದಕ್ಕೆ ಅರ್ಹರನ್ನಾಗಿಸಿ ವಿಶೇಷವಾಗಿ ಕ್ರಿಸ್ತನು ಬರುವಾಗ ಆಯಲ್ಪಟ್ಟ ಸಭೆಯನ್ನಾಗಿ ಅಂದರೆ ಮೆಸ್ಸೀಯನೊಡನೆ ಆ ರಾಜ್ಯದಲ್ಲಿ ಸಹ ಬಾಧ್ಯರಾದ ಆತನ ಮದಲಗಿತ್ತಿಯನ್ನಾಗಿ ಒದಗಿಸ ಸಲುವಾಗಿರುವದೆಂಬುದನ್ನು ಇಂದಿನ ಪಾಠವು ತೋರಿಸಿ ಕೊಡುವದು. ಕೇವಲ ಕೆಲವರು ಮಾತ್ರವೇ "ನಿಜವಾದ

ಇಸ್ರಾಯೇಲ್ಯರು" ಆಗಿದ್ದು ಅವರಲ್ಲಿ ಕಪಟವಿಲ್ಲದವರಾದರೂ ಆ ರಾಜ್ಯದ ವರ್ಗವಾಗಿ ರೂಪುಗೊಳ್ಳಲು ಅವರಲ್ಲಿ ಸಾಕಷ್ಟು ಸಂಖ್ಯೆ ಇರುವದಿಲ್ಲವೆಂಬುದನ್ನು ಈ ಪಾಠವು ತೋರಿಸಿಕೊಡುವದು. ಹೀಗಾಗಿ ಈ ಸುವಾರ್ತಾಯುಗದ ಕರೆಯು ಅನ್ಯಜನರಿಂದ ಸಾಕಷ್ಟು ಸಂಖ್ಯೆಯಲ್ಲಿನ ಭಯಭಕ್ತಿಯುಳ್ಳವರನ್ನು ಯಹೂದ್ಯರಲ್ಲಿ ಉಳಿದವರೊಂದಿಗೆ ಮೆಸ್ಸೀಯನ ರಾಜ್ಯದಲ್ಲಿ ಸಹಬಾಧ್ಯರನ್ನಾಗಿ ಮಾಡಲು ಆಯಲ್ಪಡುತ್ತಿರುವವರ ಸಲುವಾಗಿರುವದೆಂಬುದನ್ನು ಈ ಸಾಮ್ಯವು ತೋರಿಸಿಕೊಡುವದು.

ದೇವರ ರಾಜ್ಯವೆಂದು ಇನ್ನೊಂದು ವಿಧದಲ್ಲಿ ಕರೆಯಲ್ಪಡುವ ಪರಲೋಕರಾಜ್ಯವು ಭೂಲೋಕಕ್ಕೆ ಸಂಬಂಧಿಸಿದ್ದಾಗಿರದೆ ಅದು ಪರಲೋಕ ಸಂಬಂಧವಾಗಿದ್ದು ಮಹಿಮೆಗೆ ಸೇರಿದ ಕ್ರಿಸ್ತನು ಅದರ ಅಧಿಪತಿಯಾಗಿದ್ದು ಆತನು ಭೂಸಂಬಂಧವಾದ ಆಧಿಪತಿ-ಯಾಗಿರದೆ ಪರಲೋಕ ಜೀವಿಯಾಗಿ ಅತ್ಯುನ್ನತ ಪದವಿ-ಯಲ್ಲಿದ್ದು ದೈವೀಕ ಸ್ವಭಾವವುಳ್ಳವನಾಗಿರುವನು. ಈ ರಾಜ್ಯವು ದೇವರು ಹಾಗು ಪರಲೋಕದ ಆಡಳಿತವನ್ನು ಅಥವಾ ಪ್ರಭುತ್ವವನ್ನು ಪ್ರತಿನಿಧಿಸಲ್ಪಟ್ಟಿದ್ದು ಜನರ ಮಧ್ಯದಲ್ಲಿ ಅವರ ಪಾಪಗಳನ್ನು ನಿರ್ಮೂಲಮಾಡುವ ಸಲುವಾಗಿ ಸ್ಥಾಪಿಸಲಾ-ಗುವದು. ಅದರ ಮೊದಲನೇ ಕಾರ್ಯವು "ಇಹಲೋಕಾಧಿಪತಿ" ಆಗಿರುವ ಸೈತಾನನನ್ನು ಬಂಧಿಸುವದು. ಆನಂತರ ಅಂಧಕಾರಕ್ಕೆ ಸಂಬಂಧಿಸಿದ ಕೃತ್ಯಗಳೆಲ್ಲವನ್ನೂ ಕಿತ್ತೊಗೆಯಲಾಗುವದು. ಈ ಕಿತ್ತೊಗೆಯುವ ಕಾರ್ಯವು ಮೊದಲಿಗೆ ಮಹಾ ಸಂಕಟದ ಕಾಲವನ್ನು ಉಂಟುಮಾಡುವದು; ನೀತಿಯುಳ್ಳ ಆಳ್ವಿಕೆಯು ಇದನ್ನು ಹಿಂಬಾಲಿಸಿ ಮುಂದುವರೆಯುತ್ತಾ ಬಂದು ಎಲ್ಲಾ ವಿಧವಾದ ಶಾಪವನ್ನು ನಿವಾರಣೆಮಾಡಿ ಮೆಸ್ಸೀಯನ ರಾಜ್ಯದ ಆಶೀರ್ವಾದಗಳಿಗೆ ದಾರಿ ಮಾಡಿಕೊಡುವದು. ಅದು ಶಾಪವೆಲ್ಲ ವನ್ನು ನಿರ್ಮೂಲಮಾಡಿ ಇನ್ನು ಮೇಲೆ ಯಾವ ನಿಟ್ಟುಸಿರಾಗಲೀ ಗೋಳಾಟವಾಗಲೀ ಮರಣವಾಗಲೀ ಇಲ್ಲದೆ ಹೋಗುವವರೆಗೂ ಮುಂದುವರೆಯುವದು.

ಆದರೆ ಪರಲೋಕ ರಾಜ್ಯವು ಸ್ಥಾಪಿಸಲ್ಪಡುವದಕ್ಕೆ ಮೊದಲು ಮನುಷ್ಯರೊಳಗಿಂದ ಆಯಲ್ಪಟ್ಟ ಮದಲಗಿತ್ತಿಯ ವರ್ಗವು ಇರಬೇಕೆಂಬದು ದೈವಕಟ್ಟಳೆ ಹಾಗು ಏರ್ಪಾಟಿನ ಒಂದು ಭಾಗವಾಗಿರುವದು. ಇವರು ಪವಿತ್ರಾತ್ಮನಿಂದ ಹುಟ್ಟಿದವರೂ ದೇವರ ಕೈಕೆಲಸವೂ ಆಗಿದ್ದು ಆತನು (ದೇವರು) ಇವರ ಪರವಾಗಿ ಸತ್ಯವೇದದಲ್ಲಿನ ಅಮೂಲ್ಯವೂ ಉತ್ಕೃಷ್ಟವೂ ಆದ ವಾಗ್ದಾನ ಹಾಗು ಜೀವನದಲ್ಲಿ ಮಾಡುವ ಮುನ್ನೇರ್ಪಾಡುಗಳ ಮೂಲಕವಾಗಿಯೂ ಕಾರ್ಯಸಾಧಿಸುವನು. ಹೀಗೆ ಅವರು ಮಾನಸಿಕವಾಗಿ ಪರಿವರ್ತನೆಗೊಂಡವರಾಗಿ ಪುನರುತ್ಥಾನದಲ್ಲಿ ಮಹಿಮೆಯಿಂದ ಕೂಡಿದವರಾಗಿ ಜನಿಸಲ್ಪಡಲು ಸಿದ್ಧ ಮಾಡಲ್ಪಡುವರು. ಈ ಮೂಲಕವಾಗಿ ಅವರು ಒಂದು ಕ್ಷಣದಲ್ಲಿ ರೆಪ್ಪೆಬಡಿಯುವಷ್ಟರೊಳಗೆ ಪ್ರಾಕೃತಭಾವದಿಂದ ಪರಲೋಕಭಾವಕ್ಕೆ ಮಾರ್ಪಡುವರು. ಈ ರೀತಿಯಲ್ಲಿ ಅವರು ಆತನ (ಕ್ರಿಸ್ತನ) ಮದಲಗಿತ್ತಿಯಾಗುವದರ ಮೂಲಕವಾಗಿ ಆತನೊಡನೆ ಸಹಬಾಧ್ಯರಾಗಿ ತಮ್ಮ ಕರ್ತನ ಸೌಭಾಗ್ಯದಲ್ಲಿ ಅವರು ಸೇರುವರು.

## ಸಾಮ್ಯದ ಅನ್ವಯಿಸುವಿಕೆ

ಯೇಸುವಿನ ದಿನಗಳು ಮೊದಲುಗೊಂಡು ಈವರೆಗೂ ಲೋಕವು ಆ ದೇವರ ರಾಜ್ಯದ ವರ್ಗವು ಅಭಿವೃದ್ಧಿಯಾಗುವ – ದಕ್ಕಾಗಿ ಕಾದುಕೊಂಡಿರುವದು. ಆ ದಿನದಲ್ಲಿ ಆತನು ತನ್ನ ಮರಣದ ಮೂಲಕವಾಗಿ ಜೀವದ ಒಂದು ಹೊಸ ಮಾರ್ಗವನ್ನು ತೆರೆದು ಆತನ ಶಿಷ್ಯರಾಗಿ ಆತನಿಗೆ ಸಹಬಾಧ್ಯರೂ ಆತನ ಮದಲಗಿತ್ತಿಯೂ ಆಗ ಬಯಸುವವರೆಲ್ಲರ ಪರವಾಗಿ ತಂದೆಯ ಮುಂದೆ ಸಹಾಯಕನಾಗಿರುವನು.

ಈ ದಿನದ ಪಾಠವು ನಮ್ಮ ಕರ್ತನ ಸೇವೆಯ ಕಾಲದಲ್ಲಿ ನಡೆಯಲಾದ ದೇವರ ರಾಜ್ಯದ ಯೋಜನೆಗಳ ವಿಷಯವಾದ ಸಂಗತಿಗಳಿಗೆ ನಮ್ಮನ್ನು ತೆಗೆದುಕೊಂಡು ಹೋಗುತ್ತದೆ. "ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಆತನವರು ಅವನನ್ನು ಅಂಗೀಕರಿಸಲಿಲ್ಲ. ಆದರೆ ಯಾರಾರು ಆತನನ್ನು ಅಂಗೀಕರಿಸಿ-ದರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರವನ್ನು (ಸ್ವಾತಂತ್ರ್ಯ ಇಲ್ಲವೇ ಸೌಭಾಗ್ಯವನ್ನು) ಕೊಟ್ಟನು –ಯೋಹಾನ 1:12

ಯಹೋವನು ತಾನೇ ಆ ಅರಸನಾಗಿ ತನ್ನ ಮಗನ ವಿವಾಹವನ್ನು ನಡೆಸಿದ್ದನು. ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಕೆಲವರು ಸಹಬಾಧ್ಯರಾಗಿ ಇರಬೇಕೆಂಬುದನ್ನು ಆತನು ಜಗದುತ್ಪತ್ತಿಗೆ ಮೊದಲೇ ನಿಷ್ಕರ್ಷೆ ಮಾಡಿದ್ದನು. ಹೇಗೂ ಆ ಅರಸನ ಮಗನು ಲೋಕಕ್ಕೆ ಬಂದು ತನ್ನ ಹಿಂಬಾಲಕರುಗಳಿಗೆ ಮಾರ್ಗವನ್ನು ತೆರೆಯುವಂತೆ ಮಾಡುವುದಲ್ಲದೆ ಹಾಗೂ ಆ ರಾಜ್ಯದಲ್ಲಿ ಆತನೇ ಅರಸನಾಗುವದಕ್ಕೆ ಮೊದಲು ಈ ವಿವಾಹವು ನಡೆಯಲು ಸಾಧ್ಯವಿರಲಿಲ್ಲ.

ನಿಗದಿತ ಸಮಯದಲ್ಲಿ ದೇವರು ವಿವಾಹಕ್ಕೆ ಆಹ್ವಾನಿಸಲ್ಪಟ್ಟ-ವರನ್ನು ಕರೆಯಲು ತನ್ನ ಸೇವಕರನ್ನು ಕಳುಹಿಸಿದನು; ಆದರೆ ಅವರು ಆಗಮಿಸಲಿಲ್ಲ. ಸ್ನಾನಿಕನಾದ ಯೋಹಾನನು ಮತ್ತು ಆತನ ಶಿಷ್ಯರು ಆ ಅರಸನ ಮಗನು ತಮ್ಮ ಮಧ್ಯದಲ್ಲಿ ಇರುವನೆಂಬುದರ ಕಡೆಗೆ ಯೆಹೂದ್ಯರ ಗಮನವನ್ನು ಸೆಳೆಯುವ ಕಾರ್ಯವನ್ನು ಮಾಡಿದ್ದರು. ಆತನು ಹೇಳಿದ್ದು–"ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿರುವನು" (ಯೋಹಾನ 1:26) ಮತ್ತೂ ಆತನು ಹೇಳಿದ್ದು–"ಮದಲಗಿತ್ತಿಯುಳ್ಳಾತನೇ ಮದಲಿಂಗನು; ಅದರೆ ಮದಲಿಂಗನ ಗೆಳೆಯನು ಆತನ ಬಳಿಯಲ್ಲಿ ನಿಂತು ಆತನ ಧ್ವನಿಯನ್ನು ಕೇಳಿ ಸಂತೋಷ-ಪಡುವನು; ಇದು ನನ್ನ ಸಂತೋಷವು, ಅದು ನೆರವೇಲ್ಪಟ್ಟಿತ್ತು. (ಯೋಹಾನ 3:29) ಯೋಹಾನನು ಮದಲಿಂಗನ ಧ್ವನಿಯನ್ನು ಕೇಳಿ ಸಂತೋಷಪಟ್ಟನು. ಮದಲಗಿತ್ತಿಯೆಂಬ ವರ್ಗವು ಕರೆಯಲ್ಪಡುವ ಸಮಯ ಬಂದಿದೆ ಎಂದು ಆತನು ಪ್ರವಾದನೆಯ ರೂಪವಾಗಿ ಹೇಳಿದ್ದನು, ಹೀಗಿದ್ದರೂ ಆತನು ಅದರಲ್ಲಿನ ಅಂಗವಾಗಿರಲು ಆತನಿಗೆ ಸಾಧ್ಯವಾಗಲಿಲ್ಲ.

## ಸಂದೇಶವು ಲಘುವಾಗಿ ಎಣಿಸಲ್ಪಟ್ಟದ್ದು

ಪುನಃ ಸೇವಕರುಗಳು ಕಳುಹಿಸಲ್ಪಟ್ಟಿದ್ದರು. ಯೇಸುವು ತನ್ನ ಶಿಷ್ಯರನ್ನು ಯೆಹೂದ್ಯರ ಬಳಿಗೆ ಕಳುಹಿಸಿ, "ನೀವು ಊಟಕ್ಕೆ ಹೇಳಿಸಿಕೊಂಡವರ ಬಳಿಗೆ ಹೋಗಿ–ಇಗೋ, ಅಡಿಗೆ ಸಿದ್ಧವಾಗಿದೆ; ನನ್ನ ಹೋರಿಗಳನ್ನೂ ಕೊಬ್ಬಿದ ಪಶುಗಳನ್ನೂ ಕೊಯಿಸಿದ್ದೇನೆ; ಎಲ್ಲಾ ಸಿದ್ಧವಾಗಿದೆ; ಮದುವೆಯ ಊಟಕ್ಕೆ (ಔತಣಕ್ಕೆ) ಬನ್ನಿರೆಂಬದಾಗಿ ಅವರಿಗೆ ಹೇಳಿರೆಂದು ಅಪ್ಪಣೆ ಕೊಟ್ಟು ಕಳುಹಿಸಿದನು."

ಆದರೆ ಯೇಸುವಿನ ಸಂದೇಶವು ಹಾಗೂ ಆತನ ಶಿಷ್ಯರು ಸ್ವೀಕರಿಸಲ್ಪಟ್ಟಿದ್ದರೇ? ಇಲ್ಲ! ಆ ಕಾಲದ ಧರ್ಮಶಾಸ್ತ್ರ ಪಂಡಿತರುಗಳಾದ ಶಾಸ್ತ್ರಿಗಳು ಹಾಗು ಫರಿಸಾಯರ ಮಾರ್ಗ–ದರ್ಶನದಲ್ಲಿ ಆ ಸಂದೇಶವನ್ನು ಲಘುವಾಗಿ ಪರಿಗಣಿಸಿ ತಮ್ಮ ತಮ್ಮ ಕೆಲಸಗಳಿಗೆ ಹೋಗಿದ್ದರು ಅಂದರೆ ಒಬ್ಬನು ತನ್ನ ಹೊಲಕ್ಕೆ ಮತ್ತೊಬ್ಬನು ವ್ಯಾಪಾರಕ್ಕೆ ಹೋಗುವದರ ಮೂಲಕವಾಗಿ ಹೀಗೆ ಹೇಳಿದ್ದರು: ನಾವು ದೇವರ ರಾಜ್ಯದ ವಿಷಯವಾದ ಈ ಸಂದೇಶವನ್ನು ನಂಬುವದಿಲ್ಲ. ಕೆಲವರು ಇದಕ್ಕಿಂತಲೂ ಕೆಟ್ಟದ್ದಾಗಿ ನಡೆದುಕೊಂಡಿದ್ದರು. ಅವರು ಆ ಸೇವಕರುಗಳನ್ನು ಅವಮಾನಪಡಿಸಿ ಹಗೆಮಾಡಿ ಅವರನ್ನು ಕಡಿದುಹಾಕಿದ್ದರು. ಮದುವೆಗೆ ಕರೆಯಲಾಗಿದ್ದ ಅಪನಂಬಿಗಸ್ತರಿಂದ ಯೇಸುವು ಕೊಲ್ಲಲ್ಪಟ್ಟದ್ದು ಮಾತ್ರವಲ್ಲದೆ ಆತನ ನಂಬಿಗಸ್ತರಾದ ಶಿಷ್ಯರೂ ಸಹ ಕೆಟ್ಟದ್ದಾಗಿ ನಡೆಸಿಕೊಂಡವರಾಗಿ ಕೊಲ್ಲಲ್ಪಟ್ಟಿದ್ದರು.

ನಾವು ಮತ್ತೊಂದು ಸಾಮ್ಯದಲ್ಲಿ ನೋಡುವಂತೆ, ಆನಂತರದಲ್ಲಿ ಯೆಹೋವನು ಇಸ್ರಾಯೇಲ್ಯರ ವಿಷಯವಾಗಿ ಕೋಪಗೊಂಡವನಾಗಿ ತನ್ನ ಸೈನ್ಯವನ್ನು ಕಳುಹಿಸಿ ಆ ಕೊಲೆಗಾರರನ್ನು ಸಂಹರಿಸಿ ಅವರ ಪಟ್ಟಣವನ್ನು ಸುಟ್ಟು–ಹಾಕಿದ್ದನು. ಕ್ರಿಸ್ತಶಕ 70ರಲ್ಲಿ ಯೆರೂಸಲೇಮನ್ನು ನಾಶಮಾಡಿದ ಟೈಟಸ್ ಎಂಬುವರ ಅಧೀನದಲ್ಲಿನ ರೋಮಾಯರ ಸೈನ್ಯದ ಸಂಗತಿಯು ಯೆಹೋವನ ಸೈನ್ಯಕ್ಕಿಂತಲೂ ಕಡಿಮೆಯಾದು–ದೇನೂ ಆಗಿರಲಿಲ್ಲ. ಯಾಕಂದರೆ ಆತನು ಮನುಷ್ಯರ ಕೋಪವನ್ನು ತನ್ನ ಘನಕ್ಕಾಗಿ ಸಾಧನ ಮಾಡಿಕೊಳ್ಳಲು ಹಾಗು ತನಗೆ ಮೆಚ್ಚಿಗೆಯಾದವರನ್ನು ತನ್ನ ದೂತರನ್ನಾಗಿಯೂ ಅಥವಾ ಸೇವಕರನ್ನಾಗಿಯೂ ಬಳಸಿಕೊಳ್ಳಲು ಸಮರ್ಥನಾಗಿರುವನು.

## ಅನ್ಯಜನರು ವಿವಾಹಕ್ಕೆ ಕರೆಯಲ್ಪಟ್ಟದ್ದು

ಈ ಮಧ್ಯೆ ದೇವರು ತನ್ನ ಸೇವಕರಾದ ಅಪೋಸ್ತಲರಿಗೂ ಹಾಗು ಅವರ ಮೂಲಕವಾಗಿ ಇತರರಿಗೂ ಹೇಳಿದ್ದೇನಂದರೆ ಮದುವೆಯು ಸಿದ್ಧವಾಗಿದೆ, ಆದರೆ ವಿಶೇಷವಾಗಿ ಆಹ್ವಾನಿತರಾದ ಯೆಹೂದ್ಯ ಜನಾಂಗವು ಆ ಗೌರವಕ್ಕೆ ಯೋಗ್ಯರಾಗಿ ಕಂಡುಬರಲಿಲ್ಲ. ಆದುದರಿಂದ ರಾಜಮಾರ್ಗಗಳಿಗೆ ಹೋಗಿ ನಿಮಗೆ ಎಷ್ಟು ಮಂದಿ ಸಿಕ್ಕುವರೋ ಅವರನ್ನೆಲ್ಲಾ ಮದುವೆಯ ಔತಣಕ್ಕೆ ಕರಕೊಂಡು ಬನ್ನಿರಿ. ಅದರಂತೆಯೇ ಆ ಸೇವಕರುಗಳು ರಾಜಮಾರ್ಗಗಳಿಗೆ ಹೋಗಿ ಸಿಕ್ಕವರನ್ನೆಲ್ಲಾ ಕರಕೊಂಡು ಬಂದು ಒಳಗೆ ಕೂಡಿಸಿದರು. ಹೀಗೆ ಮದುವೆಗೆ ಅತಿಥಿಗಳನ್ನು ಒದಗಿಸಲಾಗಿತ್ತು.

ರಾಜಮಾರ್ಗಗಳು ಸಾರ್ವಜನಿಕ ಹೊರಾಂಗಣವನ್ನು ಸೂಚಿಸುತ್ತದೆ. ಕರ್ತನ ದೂತರು ಇನ್ನು ಮುಂದೆ ಯೆಹೂದ್ಯರಲ್ಲಿ ಮಾತ್ರ ತಮ್ಮ ಸೇವೆಯನ್ನು ನಿರ್ಬಂಧಿಸಿಕೊಳ್ಳಬೇಕಿರಲಿಲ್ಲ, ಆದರೆ ಯಜ್ಞದ ಕುರಿಯ ಹಿಂಬಾಲಕರಾಗಿ ಮತ್ತು ಅಂತಿಮವಾಗಿ ವಿಮೋಚಕನೊಂದಿಗೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗುವ ಸಲುವಾಗಿ ನೀತಿಯನ್ನು ಪ್ರೀತಿಸುವಂಥ ವ್ಯವಸ್ಥಿತವಾದ ಒಂದು ಚಿಕ್ಕ ಗುಂಪನ್ನು ದೇವರು ಈಗ ಲೋಕದೊಳಗಿಂದ ಕರೆಯುತ್ತಿ–ದ್ದಾನೆಂಬ ಅಂಶವನ್ನು ಸಮಸ್ತ ಪ್ರಜೆ ಕುಲ ಭಾಷೆಯವರಿಗೂ ತಿಳಿಸಬೇಕಿತ್ತು. ಈ ದೂತರುಗಳು ರಾಜಮಾರ್ಗಗಳಲ್ಲಿ ಎಲ್ಲಾ ಜನರನ್ನು ಅಡ್ಡಗಟ್ಟಬೇಕೆಂಬುದಲ್ಲವೆಂಬುದನ್ನು ಗಮನಿಸ–ಬೇಕಿರುವದು, ಆದರೆ ಕೇವಲ ಅವರು ಹೊರಗೆ ಸಂಧಿಸುವವ–ರೆಲ್ಲರಿಗೆ ಮದುವೆ ಔತಣದ ಬಾಗಿಲು ತೆರೆಯಲಾಗಿರುವಂಥ ಆ ಮಹಾ ಸೌಭಾಗ್ಯದ ವಿಷಯವಾಗಿ ತಿಳಿಸಿ ಅವರನ್ನು ಒಳಬರಲು ಪ್ರೇರೇಪಿಸಬೇಕಿತ್ತು.

ಇವರೆಲ್ಲರೂ ಭಕ್ತಿಯಳ್ಳವರೂ ಒಳ್ಳೆಯವರೂ ಆಗಿರಲಿಲ್ಲ; ಬದಲಾಗಿ ಕೆಲವರು ಕೆಟ್ಟವರಾಗಿದ್ದರು. ಅಪೋಸ್ತಲರು ಇದನ್ನು ಹೀಗೆ ವಿವರಿಸಿ ಹೇಳಿರುವರು, ಏನಂದರೆ ನಿಮ್ಮಲ್ಲಿ ಕುಲೀನರು ಅನೇಕರಿಲ್ಲ, ಐಶ್ವರ್ಯವಂತರು ಅನೇಕರಿಲ್ಲ, ಗಣ್ಯರು ಅನೇಕರಿಲ್ಲ, ಆದರೆ ಮುಖ್ಯವಾಗಿ ಬಡವರು, ಲೋಕದಲ್ಲಿ ಅಸಡ್ಡೆಯಾದವರು–ಇವರನ್ನು ದೇವರು ಆರಿಸಿಕೊಂಡಿದ್ದಾನೆಂಬದೇ. ನಮ್ಮ ಪಾಠದ ವಿಷಯಕ್ಕೆ ಅನುಗುಣವಾಗಿಯೇ ಅಪೋಸ್ತಲನು ದೇವರು ಲೋಕದಿಂದ ಆದುಕೊಳ್ಳುತ್ತಿರುವ ವರ್ಗದ ವಿಷಯವಾಗಿ ಹೇಳಿದ್ದಾನೆ. ಅವರು ಎಷ್ಟೇ ನೀಚರಾದರೂ, ಎಷ್ಟೇ ನೀತಿಭ್ರಷ್ಟರಾದರೂ, ಎಷ್ಟೇ ಹೀನಸ್ಥಿತಿಯುಳ್ಳವರಾದರೂ ಸರಿಯೇ, ದೇವರ ಕೃಪೆಯನ್ನು ಸ್ವೀಕರಿಸಿಕೊಳ್ಳಲು ಇಚ್ಛಿಸುವವರೆಲ್ಲರನ್ನೂ ಮದುವೆಯಲ್ಲಿ ಭಾಗವಹಿಸಲು ಅರ್ಹರನ್ನಾಗಿ ಮಾಡುವ ಸಲುವಾಗಿ ಅವರೆಲ್ಲರಿಗೂ ಕ್ರಿಸ್ತನಿಂದಾದ ನೀತಿಯೆಂಬ ಮದುವೆಯ ವಸ್ತ್ರವನ್ನು ಧರಿಸಿಕೊಳ್ಳಲು ಕೊಡಲಾಗುವದು.

ನಿಜವಾಗಿಯೂ ಅವರು ಸಹಜ ರೀತಿಯಲ್ಲಿ ಎಷ್ಟೇ ಘನವಂತರಾದರೂ ಇಲ್ಲವೇ ಯೋಗ್ಯರಾದರೂ ಅವರೆಲ್ಲರೂ ಇನ್ನೂ ರಾಜನ ಸಮಕ್ಷಮಕ್ಕೆ ಬರಲು ಅರ್ಹರಾಗಿರುವದಿಲ್ಲ. ಈ ಮದುವೆಗೆ ಹಾಜರಾಗುವವರೆಲ್ಲರೂ ಮದುವೇವಸ್ತ್ರವನ್ನು ಅಂದರೆ ಕ್ರಿಸ್ತನಿಂದಾದ ನೀತಿಫಲಗಳನ್ನು ಹೊಂದಿರಬೇಕು. ಹೀಗೆ ಮದುವೆಗೆ ಅತಿಥಿಗಳನ್ನು ಒದಗಿಸಲಾಗಿತ್ತು. ಅರಸನು ಉದ್ದೇಶಿಸಿದ್ದಂತೆಯೇ ಎಲ್ಲಾ ಸ್ಥಳಗಳು ತುಂಬಲ್ಪಟ್ಟಿದ್ದವು. ಆಯಲ್ಪಟ್ಟವರ ಸಂಖ್ಯೆಯು ನಿರ್ದಿಷ್ಟವಾಗಿ ನಿಗದಿಗೊಳಿಸ–ಲಾಗಿರುವದೆಂದು; ಅಲ್ಲದೆ ಆ ವಿಶೇಷವಾದ ಸಂಖ್ಯೆಯು ಕಂಡುಕೊಳ್ಳಲ್ಪಟ್ಟ ನಂತರ ಕರೆಯು ನಿಲ್ಲಿಸಲಾಗುವದೆಂಬುದನ್ನು ಕರ್ತನು ಮತ್ತೊಂದು ರೀತಿಯಲ್ಲಿ ಹೀಗೆ ಸೂಚಿಸಿರುವನು.

## ಅತಿಥಿಗಳನ್ನು ಪರಿಶೀಲಿಸುವದು

ಯಹೂದ್ಯರ ಪದ್ಧತಿಯ ಪ್ರಕಾರ, ನಿಸ್ಸಂಶಯವಾಗಿ ದೈವಿಕ ಮುನ್ನೇರ್ಪಾಟಿನ ಅನುಸಾರ, ಪ್ರತಿಯೊಂದು ಮದುವೆಯ ಔತಣದಲ್ಲಿಯೂ ಪ್ರತಿಯೊಬ್ಬ ಅತಿಥಿಯೂ ತನ್ನ ಉಡುಪಿನ ಮೇಲೆ ಒಂದು ಬಿಳೀ ಮದುವೇ ವಸ್ತ್ರವನ್ನು ಧರಿಸಿಕೊಳ್ಳಬೇಕಿತ್ತು. ಹೀಗೆ ಗೌರವದ ವಿಷಯವಾಗಿ ಮದುವೆಯಲ್ಲಿ ಎಲ್ಲರೂ ಸಮನಾಗಿರುತ್ತಿದ್ದರು, ಏಕಂದರೆ ಅವರು ಅತಿಥೇಯನ (ಅಂದರೆ ಮದುವೆಗೆ ಕರೆದವನ) ಅತಿಥಿಗಳಾಗಿದ್ದರು. ಕ್ರಿಸ್ತನ ಮೂಲಕವಾಗಿ ಏರ್ಪಡಿಸಲಾಗಿರುವ ದೇವರ ಮಹಾ ಔತಣಕ್ಕೆ ಬರುವವರೆಲ್ಲರೂ ಹೀಗೆಯೇ ಬರಬೇಕು: ಅವರು ತಮ್ಮ ಶರೀರ ಸಂಬಂಧವಾದ ಅರ್ಹತೆಗಳ ಮೂಲಕವಾಗಿಯಲ್ಲ; ಆದರೆ ದೇವರಿಂದ ಅಂಗೀಕೃತರಾಗಲು ಸಾಕಷ್ಟು ಯೋಗ್ಯತೆ ತಮಗೆ ಇರುವುದಿಲ್ಲ- ವೆಂಬುದನ್ನು ಒಪ್ಪಿಕೊಂಡವರಾಗಿ, ಈ ಆಹ್ವಾನವನ್ನು ಸ್ವೀಕರಿಸುವ ಗೌರವಕ್ಕೆ ತಮ್ಮನ್ನು ಯೋಗ್ಯರನ್ನಾಗಿ ಮಾಡಿದುದು ಕ್ರಿಸ್ತನ (ಯಜ್ಞಫಲದ) ಮೂಲಕವೆಂಬುದನ್ನು ಅಂಗೀಕರಿಸಿಕೊಳ್ಳಬೇಕು.

(ಔತಣದ) ಮನೆಯನ್ನು ಪ್ರವೇಶಿಸುವ ಪ್ರತಿಯೊಬ್ಬ ಅತಿಥಿಗೆ (ಮದುವೇ) ವಸ್ತ್ರ ಒದಗಿಸಲಾಗುತ್ತಿದ್ದು ಅದನ್ನು ಕೂಡಲೇ ಧರಿಸಿಕೊಳ್ಳಬೇಕೆಂಬುದನ್ನು ನಿರೀಕ್ಷಿಸಲಾಗುತ್ತಿತ್ತು. ಯಾರಾದರೂ ಮದುವೇ ವಸ್ತ್ರವಿಲ್ಲದೆ ಕಾಣಿಸಿಕೊಳ್ಳುವದು ಆ ವಸ್ತ್ರವನ್ನು ಒದಗಿಸಿ ಔತಣಕ್ಕೆ ಕರೆದಂಥವನಿಗೆ ಅಗೌರವ ತೋರಿದಂತಾಗುತ್ತಿತ್ತು. ನಿಜವಾಗಿಯೂ ಆ ಮದುವೆಯಲ್ಲಿ ಯಾರಾದರೂ ಮದುವೇ ವಸ್ತ್ರವಿಲ್ಲದೆ ಕಾಣಿಸಿಕೊಂಡಲ್ಲಿ ಆತನು ಅದನ್ನು ತೆಗೆದು ಹಾಕಿರುವನೆಂಬುದನ್ನು ಸೂಚಿಸುತಿತ್ತು; ಏಕೆಂದರೆ ಮದುವೇ ವಸ್ತ್ರವಿಲ್ಲದೆ ಒಬ್ಬನನ್ನೂ ಒಳಗೆ ಬಿಡಲಾಗುತ್ತಿರಲಿಲ್ಲ. ಇದು ಈ ಸಾಮ್ಯದಲ್ಲಿ ನಮಗೆ ಕೊಡಲಾದಂಥ ಚಿತ್ರಣ. ಮದುವೇ ವಸ್ತ್ರವಿಲ್ಲದೆ ಒಬ್ಬನು ಅಲ್ಲಿ ಕಂಡುಬಂದಿದ್ದಲ್ಲಿ ಆ ಒಬ್ಬನು ತನ್ನನ್ನು ಮದುವೆಗೆ ಕರೆದವನನ್ನು ನಿರ್ಲಕ್ಷಿಸಿ ಹೀಗೆ ಆ ಮದುವೇ ವಸ್ತ್ರವನ್ನು ತೆಗೆದಿಟ್ಟಿರುವನೆಂದಾಗುತ್ತಿತ್ತು; ಆ ಮದುವೇ ವಸ್ತ್ರವನ್ನು ಧರಿಸಿಕೊಳ್ಳುವದು ಆತನನ್ನು ಒಳಗೆ ಸೇರಿಸಿಕೊಳ್ಳುವದಕ್ಕೆ ವಿಧಿಸಲಾದ ಷರತ್ತಾಗಿತ್ತು.

"ಅರಸನು ಒಳಗೆ ಬಂದಾಗ" ಎಂಬ ಮಾತು ಔತಣಕ್ಕೆ ಮೊದಲು ನಡೆಸಲಾಗುವ ಪರಿಶೀಲನೆಯನ್ನು ಸೂಚಿಸುತ್ತದೆ. ಈ ಸಾಮ್ಯದಲ್ಲಿನ ಅರಸನು ಯೆಹೋವನಾದ್ದರಿಂದ ಇದು ತನಗೆ ನಿಷ್ಠೆಯನ್ನು ತೋರ್ಪಡಿಸಿದಾಗ್ಯೂ ಕ್ರಿಸ್ತನ ಮರಣದಿಂದಾದ ಯಜ್ಞಫಲವನ್ನು ನಿರ್ಲಕ್ಷಿಸಿರುವನೆಂಬುದನ್ನು ಗಮನಿಸಿ ದೇವರು ಯಾವುದಾದರೂ ಒಂದು ವಿಧದಲ್ಲಿ ದೈವಿಕ ನ್ಯಾಯವನ್ನು ತೋರ್ಪಡಿಸುವನೆಂಬ ಅರ್ಥಬರುವದೆಂದು ತೋರುತ್ತದೆ. ಅಥವಾ ಈ ಸಂದರ್ಭದಲ್ಲಿ ಕ್ರಿಸ್ತನನ್ನು ಅರಸನನ್ನಾಗಿ ಉಲ್ಲೇಖಿಸಲಾಗಿರುವನೆಂಬುದನ್ನು ಸೂಕ್ತವಾಗಿ ಅರ್ಥಮಾಡಿ- ಕೊಳ್ಳಬಹುದು; ಯಾಕೆಂದರೆ ಆತನು ಬರುವಾಗ ಪರಲೋಕದಲ್ಲಿರುವ ತಂದೆಯಿಂದ ರಾಜ್ಯಾಧಿಕಾರವನ್ನು ಪಡೆದವನಾಗಿ ಬರುವನೆಂಬುದನ್ನು ನಮ್ಮ ಕರ್ತನು ತಾನೇ ಮೊಹರಿಗಳು ಹಾಗು ತಲಾಂತುಗಳ ಸಾಮ್ಯದಲ್ಲಿ ಸೂಚಿಸಿ ಹೇಳಿರುವನು. ಆತನ ಎರಡನೇ ಬರುವಿಕೆಯಲ್ಲಿ ತನಗೆ ನಂಬಿಗಸ್ತರಾದ ಸೇವಕರುಗಳಾಗಿರುವೆವೆಂದು ತೋರಿಸಿ- ಕೊಳ್ಳುವವರನ್ನು ಅಂದರೆ ಮದುವೆಯ ಔತಣದಲ್ಲಿ ಆನಂದಿಸ ಬಯಸುವವರೆಲ್ಲರನ್ನು ಆತನು ತಾನೇ ಪರಿಶೀಲಿಸುವನು.

ಅರಸನ ಸಮುಕ್ಷಮದಲ್ಲಿ ಮದುವೇ ವಸ್ತ್ರವಿಲ್ಲದೆ ಕಾಣಿಸಿಕೊಂಡವನು ಒಂದು ವರ್ಗವನ್ನು ಸೂಚಿಸುವನು, ಕೇವಲ ಒಬ್ಬ ವ್ಯಕ್ತಿಯನ್ನಲ್ಲವೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹೀಗೆ ನಾವು ಈ ದಿನದಲ್ಲಿ ಕೇವಲ ಇಂಥಾ ಒಂದು ವರ್ಗವು ಇರುವದನ್ನು ಕಂಡುಕೊಳ್ಳಬೇಕು. ಅವರು ಕ್ರಿಸ್ತನ ಹಿಂಬಾಲಕ- ರೆಂದೂ ಯಜ್ಞದಕುರಿಯಾದಾತನ ವಿವಾಹಕ್ಕಾಗಿ ಕಾದು ಕೊಂಡಿರುವದಾಗಿಯೂ ತಮ್ಮ ಕರ್ತನ ಸೌಭಾಗ್ಯದಲ್ಲಿ ಸೇರುವುದನ್ನು ನಿರೀಕ್ಷಿಸುವವರಾಗಿಯೂ ಇರುವಂತೆ ತೋರ್ಪಡಿಸಿಕೊಂಡವರಾದಾಗ್ಯೂ ತಂದೆಯ ಬಳಿಯಲ್ಲಿ ತಾವು ನಿಂತಿರುವದು ಕ್ರಿಸ್ತನ ಯಜ್ಞಫಲದಲ್ಲಿ ಭರವಸವಿಟ್ಟಿರುವದರಿಂದ ಏನೂ ಅಲ್ಲವೆಂದು ನಮಗೆ ಹೇಳುವರು. ಇವರು ಯೇಸುವನ್ನು ತಮ್ಮ ರಕ್ಷಕನೆಂಬುದನ್ನು, ತಮ್ಮ ವಿಮೋಚಕನೆಂಬುದನ್ನು (ತಮ್ಮ ಪಾಪಗಳಿಂದ ಬಿಡಿಸಿ) ದೇವರೊಂದಿಗೆ ಸಂಧಾನಪಡಿಸಿ- ದವನೆಂಬುದನ್ನು ಅಲ್ಲಗಳೆಯುವರು. ಅವರು ಆತನನ್ನು ಕೇವಲ ಒಬ್ಬ ಬೋಧಕನನ್ನಾಗಿ ಇಟ್ಟುಕೊಂಡು ಮತ್ತು ಆನಂತರದಲ್ಲಿ ಆತನ ಬೋಧನೆಗಳಲ್ಲಿ ಒಂದು ಭಾಗವನ್ನು ಮಾತ್ರ ಅಂಗೀಕರಿಸಿಕೊಳ್ಳುವರು.

ಇವರು ಕ್ರಿಸ್ತನ ಮದಲಗಿತ್ತಿಯ ವರ್ಗದ ಅಂಗಗಳಾಗುವದಕ್ಕೆ ಯೋಗ್ಯರಲ್ಲವೆಂಬುದನ್ನು ಸ್ಪಷ್ಟಪಡಿಸುವರು. ಕೇವಲ ನಿಷ್ಠಾವಂತರೂ, ಕೇವಲ ನಂಬಿಗಸ್ತರೂ ಮಾತ್ರ ಆ ವರ್ಗದವ- ರಾಗಬೇಕಿರುವದು. ಕ್ರಿಸ್ತನ ಯಜ್ಞಫಲವನ್ನು ನಿರಾಕರಿಸುವ- ವರೆಲ್ಲರೂ ಆ ರಾಜ್ಯಕ್ಕೆ ಸೇರುವ ವರ್ಗದವರಾಗಲು ನಿರಾಕರಿಸಲ್ಪಡುವರು. "ಮದುವೇ ವಸ್ತ್ರವಿಲ್ಲದೆ" ತಾವು ಒಳಗೆ ಬಂದವೆಂಬುದನ್ನು ಹೇಳಲು ಅಸಮರ್ಥರಾಗಿರುವರು; ಏಕೆಂದರೆ ಅವರು ಮದುವೇ ವಸ್ತ್ರವಿಲ್ಲದೆ ಬಂದಿದ್ದವರಲ್ಲ. ಮೊದಲು ತನ್ನ ನ್ಯೂನ್ಯತೆದೊಷವನ್ನು ಮುಚ್ಚಿಕೊಳ್ಳಲು ಕ್ರಿಸ್ತನ ಯಜ್ಞಫಲವೆಂಬ ಮದುವೇ ವಸ್ತ್ರವಿಲ್ಲದೆ ಕ್ರಿಸ್ತನ ಮದಲಗಿತ್ತಿಯಾದ ಕ್ರೈಸ್ತಸಭೆ- ಯೊಡನೆ ಅನ್ಯೋನ್ಯತಾ ಭಾವಕ್ಕೆ ಯಾರನ್ನೂ ಎಂದೂ ಸೇರಿಸಿಕೊಳ್ಳಲಾಗುವದಿಲ್ಲ. ಹೀಗೆ ಒಳಗೆ ಸೇರಿಸಲ್ಪಟ್ಟವರು ಮದುವೇ ವಸ್ತ್ರವನ್ನು ತೆಗೆದುಹಾಕಿದ್ದಲ್ಲಿ ಅವರು ಪೂರ್ಣವಾಗಿ ಹೊರಗೆಹಾಕಲ್ಪಡುವರು. ಅರಸನು ಸೇವಕರಿಗೆ ಹೇಳಿದ್ದು: "ಅವನ ಕೈಕಾಲು ಕಟ್ಟಿ ಅವನನ್ನು ಹೊರಗೆ ಕತ್ತಲೆಗೆ ನೂಕಿರಿ ಎಂದು ಹೇಳಿದನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು."

## ಹೊರಗಿನ ಕತ್ತಲು

ನಮ್ಮ ಮನಸ್ಸುಗಳು ಜ್ಞಾನಾಂಧಕಾರ ಯುಗದಲ್ಲಿನ (ಡಾರ್ಕ್ ಏಜಸ್) ಆಲೋಚನಾಭ್ರಮೆಯಿಂದ ತುಂಬಿಕೊಂಡಿರುವಾಗ ನಾವು ಇದನ್ನು ಹಾಗು ಇತರ ವಾಕ್ಯಭಾಗಗಳನ್ನು ಅವುಗಳಲ್ಲಿ ಒಳಗೊಂಡಿರದಂಥದನ್ನು ಓದಿದ್ದೆವು. ಮದುವೇ ವಸ್ತ್ರವಿಲ್ಲದ

ಮನುಷ್ಯನನ್ನು ಸೂಚಿಸುವ ವರ್ಗವು ನಿತ್ಯಯಾತನೆಗೆ ದೂಡಲ್ಪಡುವದೆಂದು ಕಲ್ಪಿಸಿಕೊಂಡಿದ್ದೆವು. ಆದರೆ ಈಗ ವಾಕ್ಯಭಾಗಗಳನ್ನು ಹೆಚ್ಚು ಜಾಗ್ರತೆಯಿಂದ ಪರಿಶೀಲಿಸಿದಾಗ ಮದುವೆಗೆ ಬಂದಿದ್ದ ಅತಿಥಿಗಳೆಲ್ಲರೂ ಹೊರಗಿನ ಕತ್ತಲೆಯೊಳಗಿಂದ ಮದುವೆಯ ಮಂಟಪದಲ್ಲಿನ ಬೆಳಕಿಗೆ ಬಂದವರೆಂಬುದನ್ನು ಗ್ರಹಿಸಿಕೊಂಡಿರುವೆವು. ಆದಾಗಿ ಅವರಲ್ಲಿ ಒಬ್ಬನನ್ನು ಬೆಳಕಿನಿಂದ ಹೊರಗಿನ ಕತ್ತಲೆಗೆ ದೂಡುವದು ಕೇವಲ ಅಂಥಾ ಒಬ್ಬನಿಂದ ಮದುವೆಯ ಮಂಟಪದ ಬೆಳಕಿನಿಂದ ಸೂಚಿತವಾದ (ದೇವ)ಜ್ಞಾನ ಹಾಗೂ (ಪವಿತ್ರಾತ್ಮನಿಂದಾದ) ಸಂತೋಷಗಳನ್ನು ತೆಗೆದುಹಾಕುವದೆಂಬ ಅರ್ಥಕೊಡುವದು.

ಹೊರಗಿನ ಲೋಕದ ವಿಷಯವಾಗಿ ಹೇಳುವದಾದರೆ ಸಮಸ್ತ ಲೋಕವು ಕತ್ತಲಲ್ಲಿ ಅಂದರೆ "ಕೆಡುಕನ ವಶದಲ್ಲಿ" ಇರುವದೆಂದು ಅಪೊಸ್ತಲನಾದ ಯೋಹಾನು ಪ್ರಕಟಮಾಡಿ ಹೇಳಿರುವನೆಂಬದು ನಮಗೆ ತಿಳಿದದೆ. ಮದಲಗಿತ್ತಿಯೆಂಬ ವರ್ಗವು ಮುಕ್ತಾಯವಾದ ಕೂಡಲೇ ಮಹಾ ಸಂಕಟಗಳ ಕಾಲವು ನಂತರದಲ್ಲಿನ ಮೆಸ್ಸೀಯನ ರಾಜ್ಯದಲ್ಲಿ ಕೊಡಲಾಗುವ ಆಶೀರ್ವಾದಗಳಿಗೆ ಲೋಕವನ್ನು ಸಿದ್ಧಗೊಳಿಸುವದೆಂಬುದನ್ನು ಸಹ ನಾವು ತಿಳಿದುಕೊಂಡಿರುವೆವು. ಆ ಸಂಕಟದಲ್ಲಿ ಕತ್ತಲಲ್ಲಿರುವವರೆಲ್ಲರಿಗೂ ಗೋಳಾಟವೂ ಕಟಕಟನೆ ಹಲ್ಲು-ಕಡಿಯೋಣವೂ ಆಗುವದು. ಅತೃಪ್ತಿ ಸಂಕಟ ನಿರಾಶೆ ಮುಂತಾದವುಗಳಿಗೆ ಸಂಬಂಧಿಸಿದ ಹಲ್ಲುಕಡಿಯೋಣವು ತಪ್ಪಾದವುಗಳ ಮೇಲೆ ಆಧಾರಗೊಂಡ ಮಾನವರ ಅನೇಕ ನಿರೀಕ್ಷೆ ಹಾಗು (ಮುಂದೆ ಸಂಭವಿಸುವವುಗಳ) ಎದುರು ನೋಡುವಿಕೆ-ಯನ್ನು ಕಿತ್ತೊಗೆಯುವದು.

ನಮ್ಮ ಕರ್ತನು ಈ ಮುಂದಿನ ಹೇಳಿಕೆಯೊಂದಿಗೆ ಸಾಮ್ಯವನ್ನು ಮುಕ್ತಾಯಗೊಳಿಸಿದ್ದನು, "ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ..." ನಾವು ಒಮ್ಮೆ ಭಾವಿಸಿದ್ದಂತೆ ಕೇವಲ ಆಯಲ್ಪಟ್ಟ ಸ್ವಲ್ಪ ಮಂದಿ ಮಾತ್ರ ಮುಂದಿನ ಕಾಲದಲ್ಲಿ ದೇವರಿಂದ ಯಾವುದೇ ವಿಧವಾದ ಅನುಗ್ರಹವನ್ನು ಹೊಂದುವರೆನ್ನುವ ಮತ್ತು ಮಾನವಕುಲದಲ್ಲಿ ಉಳಿದವರೆಲ್ಲರೂ ನಿತ್ಯ ಯಾತನೆಯಲ್ಲಿರುವರೆನ್ನುವಂಥಾ ಅರ್ಥವನ್ನು ಇದು ಕೊಡುವದಿಲ್ಲ. ನಾವು ಇದನ್ನು ಇದರ ಸಂದರ್ಭಾನುಸಾರವಾಗಿ ಓದಿಕೊಳ್ಳಬೇಕು. ಯೆಹೂದ್ಯ ಜನಾಂಗದವರು ಮದುವೆಗೆ ಕರೆಯಲ್ಪಟ್ಟಿದ್ದರು ಅಥವಾ ಆಹ್ವಾನಿಸಲ್ಪಟ್ಟಿದ್ದರು ಅಲ್ಲದೆ ಕೆಲವು "ನಿಜವಾದ ಇಸ್ರಾಯೇಲ್ಯರು" ಎನ್ನಿಸಿಕೊಳ್ಳುವವರನ್ನು ಹೊರತು ಪಡಿಸಿ ಅವರು (ಆ ಕರೆಯನ್ನು ಸ್ವೀಕರಿಸಿ ಮದುವೆಯಲ್ಲಿ ಭಾಗವಹಿಸಲು) ವಿಫಲರಾಗಿದ್ದರು. ಹದಿನೆಂಟು ಶತಮಾನ-ಗಳಿಂದ ಈ ಸಂದೇಶವು ರಾಜಮಾರ್ಗಗಳಲ್ಲಿ ಹೊರ-ಬೀಳುತ್ತಿರುವದು. ಇದು ಅನ್ಯಜನರಲ್ಲಿ ಒಂದು ಜನಾಂಗದ ನಂತರ ಮತ್ತೊಂದು ಜನಾಂಗಕ್ಕೆ ಹೊರಟು ಅನೇಕರು ಹೆಚ್ಚು ಕಡಿಮೆ ಸುವಾರ್ತಾಯುಗದ ಕರೆಯನ್ನು ಕೇಳಿಸಿಕೊಳ್ಳುವವರೆಗೂ ನಡೆಯುತ್ತಿರುವದು. ಆದಾಗ್ಯೂ ಇದನ್ನು ಕೇವಲ ಕೆಲವರು ಮಾತ್ರ ಅಂಗೀಕರಿಸಿಕೊಂಡವರಾಗಿ ಆಯಲ್ಪಟ್ಟವರಾಗುವ ಸ್ಥಿತಿಗೆ ತಲುಪಿದ್ದರು. ಅಲ್ಲದೆ ಆಯಲ್ಪಟ್ಟವರ ಸ್ಥಿತಿಗೆ ತಲುಪಿರುವರಲ್ಲಿ ಇನ್ನೂ (ಈ ಕರೆಯನ್ನು) ಸೂಕ್ತವಾಗಿ ಅರಿತುಕೊಳ್ಳದೇ ಇರುವಂಥ ಒಂದು ವರ್ಗವು ಇರುವದು; ಅವರು ಹೊರಗೆಹಾಕಲ್ಪಡುವರು ಇಲ್ಲವೇ ನಿರಾಕರಿಸಲ್ಪಡುವರು.

ಒಡೆಯನು ಮತ್ತೆ ಈ ವಿಷಯವನ್ನು ಗಮನಕ್ಕೆ ತಂದು ಹೀಗೆ ಹೇಳಿರುವನು: "ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವದಕ್ಕೆ ನಿಮ್ಮ ತಂದೆಯು ಸಂತೋಷ-ವುಳ್ಳವನಾಗಿದ್ದಾನೆ." ಯಹೂದ್ಯರು ಹಾಗು ಅನ್ಯಜನರನ್ನು ಒಳಗೊಂಡಿರುವ ಈ ಚಿಕ್ಕ ಹಿಂಡು ತಮ್ಮ ನಂಬಿಗಸ್ತಿಕೆಯ ಮೂಲಕವಾಗಿ ದೇವರಿಂದ ಆಯಲ್ಪಟ್ಟ ಜನರೂ, ಆದುಕೊಳ್ಳ-ಲಾದ ಆತನ ಸಭೆಯೂ, ಕ್ರಿಸ್ತನ ಮದಲಗಿತ್ತಿಯೂ ಆಗುವರು. ಆನಂತರದಲ್ಲಿ ತಮ್ಮ ಕರ್ತನೊಂದಿಗೆ ಅವರು ಆಗ ಆಯಲ್ಪಡದೆ ಇರುವವರೆಲ್ಲರಿಗೂ ಪುನರುದ್ಧಾರ ಪಡೆಯುವಂಥ ಭವ್ಯವಾದ ಅವಕಾಶವನ್ನು ಅಂದರೆ ತಂದೆಯಾದ ಆದಾಮನ ಅವಿಧೇಯತೆಯ ಹಾಗು ಪರಿಪೂರ್ಣತೆಯಿಂದ ಬಿದ್ದುಹೋದು-ದರ ಮೂಲಕವಾಗಿ ಕಳೆದುಕೊಂಡಂಥ ಭೂಸಂಬಂಧದ ಆಶೀರ್ವಾದ ಹಾಗೂ ಒಳ್ಳೆಯ ಸಂಗತಿಗಳನ್ನು ಒದಗಿಸುವಂಥ ಪರಲೋಕದಲ್ಲಿರುವ ತಂದೆಯ ಸಾಧನವಾಗುವರು. "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ."

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 10 | ಯೆರೂಸಲೇಮಿನ ದೇವಾಲಯ | ತೆರಿಗೆ ಪುನರುತ್ಥಾನ ಅಜ್ಞೆ ಇವುಗಳ ವಿಷಯವಾಗಿ ನಿರುತ್ತರ ಪ್ರಶ್ನೆ | 22:15–40 | 12:13–34 | 20:20–40 | -- |

# ಮತ್ತಾಯ 22:15–40

ಆಗ್ಗೆ ಫರಿಸಾಯರು ಹೊರಟು ಆತನನ್ನು ಮಾತಿನಲ್ಲಿ ಹೇಗೆ ಸಿಕ್ಕಿಸುವ ಎಂದು ಕೂಡಿ ಆಲೋಚಿಸಿಕೊಂಡು ಆತನ ಬಳಿಗೆ ತಮ್ಮ ಶಿಷ್ಯರನ್ನು ಹೆರೋದಿಯರ ಕೂಡ ಕಳುಹಿಸಿದರು. ಇವರು ಬಂದು-ಗುರುವೇ, ನೀನು ಸತ್ಯವಂತನು, ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸುವವನು, ಯಾರಿಗೂ ಹೆದರದವನು; ನೀನು ಜನರ ಮುಖದಿಚ್ಚೆಗೆ ಮಾತಾಡುವವನಲ್ಲ ಎಂದು ಬಲ್ಲೆವು. ಹೀಗಿರಲಾಗಿ ಕೈಸರನಿಗೆ ತೆರಿಗೆ ಕೊಡುವದು ಸರಿಯೋ ಸರಿಯಲ್ಲವೋ? ನಿನಗೆ ಹೇಗೆ ತೋರುತ್ತದೆ? ನಮಗೆ ಹೇಳು ಅಂದರು. ಯೇಸು ಅವರ ಕೆಡುಕನ್ನು ಅರಿತುಕೊಂಡವನಾಗಿ-ಕಪಟಿಗಳೇ, ನನ್ನನ್ನು ಯಾಕೆ ಪರೀಕ್ಷೆಮಾಡುತ್ತೀರಿ? ತೆರಿಗೆಗೆ

ಕೊಡುವ ನಾಣ್ಯವನ್ನು ನನಗೆ ತೋರಿಸಿರಿ ಅನ್ನಲು ಅವರು ಆತನಿಗೆ ಒಂದು ಹಣವನ್ನು ತಂದು ಕೊಟ್ಟರು. ಆತನು–ಈ ತಲೆಯೂ ಈ ಮುದ್ರೆಯೂ ಯಾರದು ಎಂದು ಕೇಳಿದ್ದಕ್ಕೆ ಅವರು–ಕೈಸರನದು ಅಂದರು. ಆಗ ಆತನು ಅವರಿಗೆ–ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ ಎಂದು ಹೇಳಿದನು. ಅವರು ಈ ಮಾತನ್ನು ಕೇಳಿ ಆಶ್ಚರ್ಯಪಟ್ಟು ಆತನನ್ನು ಬಿಟ್ಟುಹೋದರು.

ಅದೇ ದಿನದಲ್ಲಿ ಸದ್ದುಕಾಯರೂ ಆತನ ಬಳಿಗೆ ಬಂದರು. ಇವರು ಪುನರುತ್ಥಾನವಿಲ್ಲ ಅನ್ನುವವರು. ಇವರು ಆತನಿಗೆ ಪ್ರಶ್ನೆಮಾಡಿದ್ದೇನಂದರೆ–ಬೋಧಕನೇ, ಒಬ್ಬನು ಮಕ್ಕಳಿಲ್ಲದೆ ಸತ್ತರೆ ಅವನ ಹೆಂಡತಿಯನ್ನು ಅವನ ತಮ್ಮನು ಮದುವೆಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು ಮೋಶೆಯು ಹೇಳಿದನಷ್ಟೆ. ಆದರೆ ನಮ್ಮಲ್ಲಿ ಏಳು ಮಂದಿ ಅಣ್ಣತಮ್ಮಂದಿರಿದ್ದರು. ಮೊದಲನೆಯವನು ಮದುವೆಯಾಗಿ ತೀರಿಹೋದನು. ಅವನಿಗೆ ಸಂತಾನವಿಲ್ಲದ ಕಾರಣ ಹೆಂಡತಿಯನ್ನು ತನ್ನ ತಮ್ಮನಿಗೆ ಬಿಟ್ಟನು; ಅದರಂತೆ ಎರಡನೆಯವನೂ ಮೂರನೆಯವನೂ ಮುಂತಾದ–ವರೂ ಏಳನೆಯವನ ವರೆಗೂ ಮಾಡಿದರು. ಅವರೆಲ್ಲರೂ ಸತ್ತ ಮೇಲೆ ಆ ಹೆಂಗಸೂ ಸತ್ತಳು. ಹಾಗಾದರೆ ಪುನರುತ್ಥಾನದಲ್ಲಿ ಆಕೆ ಆ ಏಳು ಮಂದಿಯಲ್ಲಿ ಯಾರ ಹೆಂಡತಿಯಾಗಿರುವಳು? ಆಕೆಯನ್ನು ಅವರೆಲ್ಲರೂ ಮದುವೆ ಮಾಡಿಕೊಂಡಿದ್ದರಲ್ಲಾ ಅಂದರು. ಅದಕ್ಕೆ ಯೇಸು ಉತ್ತರವಾಗಿ ಅವರಿಗೆ–ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ; ಪುನರುತ್ಥಾನವಾದ ಮೇಲೆ ಮದುವೆ–ಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡುವದೂ ಇಲ್ಲ; ಪರಲೋಕದಲ್ಲಿರುವ ದೇವದೂತರಂತೆ ಇರುತ್ತಾರೆ. ಸತ್ತವರ ಪುನರುತ್ಥಾನದ ವಿಷಯವಾಗಿ ಹೇಳಬೇಕಾದರೆ–ನಾನು ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಎಂದು ದೇವರು ನಿಮಗೆ ನುಡಿದದ್ದನ್ನು ನೀವು ಓದಲಿಲ್ಲವೇ. ಆತನು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ ಎಂದು ಹೇಳಿದನು. ಜನರು ಅದನ್ನು ಕೇಳಿ ಆತನ ಬೋಧನೆಗೆ ಅತ್ಯಾಶ್ಚರ್ಯಪಟ್ಟರು.

ಆತನು ಸದ್ದುಕಾಯರ ಬಾಯಿ ಕಟ್ಟಿದನೆಂದು ಫರಿಸಾಯರು ಕೇಳಿ ಅಲ್ಲಿಗೆ ಕೂಡಿಬಂದರು. ಅವರಲ್ಲಿದ್ದ ಒಬ್ಬ ಧರ್ಮೋಪದೇಶಕನು ಆತನನ್ನು ಪರೀಕ್ಷೆಮಾಡಬೇಕೆಂದು–ಗುರುವೇ, ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು ಎಂದು ಆತನನ್ನು ಕೇಳಿದ್ದಕ್ಕೆ ಆತನು–ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವುದಂದರೆ–ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ ಆಧಾರವಾಗಿವೆ ಎಂದು ಹೇಳಿದನು.

# ಮಾರ್ಕ 12:13–34

ಆ ಮೇಲೆ ಅವರು ಆತನನ್ನು ಮಾತಿನಲ್ಲಿ ಹಿಡಿಯುವದಕ್ಕೆ ಫರಿಸಾಯರಲ್ಲಿಯೂ ಹೆರೋದ್ಯರಲ್ಲಿಯೂ ಕೆಲವರನ್ನು ಆತನ ಬಳಿಗೆ ಕಳುಹಿಸಿದರು. ಇವರು ಬಂದು–ಬೋಧಕನೇ, ನೀನು ಸತ್ಯವಂತನು, ಯಾರಿಗೂ ಹೆದರದವನು; ನೀನು ಜನರ ಮುಖದಿಚ್ಛೆಗೆ ಮಾತನಾಡದೆ ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸುವವನಾಗಿದ್ದೀ ಎಂದು ಬಲ್ಲೆವು. ಕೈಸರನಿಗೆ ತೆರಿಗೆ ಕೊಡುವದು ಸರಿಯೋ ಸರಿಯಲ್ಲವೋ, ಕೊಡಬೇಕೋ ಬೇಡವೋ ಎಂದು ಆತನನ್ನು ಕೇಳಿದರು. ಆತನು ಅವರ ಕಪಟವನ್ನು ತಿಳಿದು–ನನ್ನನ್ನು ಯಾಕೆ ಪರೀಕ್ಷೆಮಾಡುತ್ತೀರಿ? ನನಗೆ ಒಂದು ಹಣವನ್ನು ತಂದು ತೋರಿಸಿರಿ ಅನ್ನಲು ಅವರು ತಂದರು. ಆಗ ಆತನು–ಈ ತಲೆಯೂ ಮುದ್ರೆಯೂ ಯಾರದು ಎಂದು ಕೇಳಿದ್ದಕ್ಕೆ ಅವರು–ಕೈಸರನದು ಅಂದರು. ಯೇಸು–ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ ಎಂದು ಹೇಳಿದನು. ಅವರು ಆತನ ವಿಷಯದಲ್ಲಿ ಬಹು ಆಶ್ಚರ್ಯಪಟ್ಟರು.

ತರುವಾಯ ಸದ್ದುಕಾಯರು ಆತನ ಬಳಿಗೆ ಬಂದರು. ಇವರು ಪುನರುತ್ಥಾನವಿಲ್ಲ ಅನ್ನುವವರು. ಇವರು ಆತನಿಗೆ ಪ್ರಶ್ನೆಮಾಡಿದ್ದೇನಂದರೆ–ಬೋಧಕನೇ, ಅಣ್ಣನಾದವನು ಮಕ್ಕಳಿಲ್ಲದೆ ಹೆಂಡತಿಯನ್ನು ಬಿಟ್ಟು ಸತ್ತರೆ ಆಕೆಯನ್ನು ಅವನ ತಮ್ಮನು ಮದುವೆಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು ಮೋಶೆಯು ನಮಗೆ ಬರೆದಿಟ್ಟನಷ್ಟೆ. ಏಳು ಮಂದಿ ಅಣ್ಣತಮ್ಮಂದಿರಿದ್ದರು. ಮೊದಲನೆಯವನು ಹೆಂಡತಿಯನ್ನು ಮಾಡಿಕೊಂಡು ಸಂತಾನವಿಲ್ಲದೆ ಸತ್ತನು. ಎರಡನೆಯವನು ಆಕೆಯನ್ನು ಮದುವೆಮಾಡಿಕೊಂಡು ಸಂತಾನವಿಲ್ಲದೆ ಸತ್ತನು. ಅದರಂತೆ ಮೂರನೆಯವನು. ಇದೇ ಪ್ರಕಾರ ಏಳು ಮಂದಿಯೂ ಸಂತಾನವಿಲ್ಲದೆ ಹೋದರು. ಕಡೆಯಲ್ಲಿ ಆ ಸ್ತ್ರೀಯೂ ಸತ್ತಳು. ಪುನರುತ್ಥಾನದಲ್ಲಿ ಆಕೆ ಯಾರ ಹೆಂಡತಿಯಾಗಿರುವಳು? ಆಕೆಯನ್ನು ಏಳು ಮಂದಿಯೂ ಮದುವೆಮಾಡಿಕೊಂಡಿದ್ದರಲ್ಲಾ ಅಂದರು. ಯೇಸು ಅವರಿಗೆ–ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯ–ದಿರುವದರಿಂದಲೇ ತಪ್ಪುವವರಾಗಿದ್ದೀರಲ್ಲವೇ. ಸತ್ತವರು ಬದುಕಿ ಎದ್ದ ಮೇಲೆ ಮದುವೆಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡು–ವದೂ ಇಲ್ಲ. ಪರಲೋಕದಲ್ಲಿರುವ ದೇವದೂತರಂತೆ ಇರುತ್ತಾರೆ. ಆದರೆ ಸತ್ತವರು ಬದುಕಿ ಏಳುತ್ತಾರೆಂಬ ವಿಷಯದಲ್ಲಿ ಹೇಳಬೇಕಾದರೆ–ನಾನು ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನ ದೇವರು ಎಂದು ದೇವರು ಮೋಶೆಗೆ ನುಡಿದುದ್ದನ್ನು ನೀವು ಮೋಶೆಯ ಗ್ರಂಥದಲ್ಲಿ ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಓದಲಿಲ್ಲವೋ? ಆತನು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ; ನೀವು ಹಿಡಿದ ಅಭಿಪ್ರಾಯವು ತಪ್ಪಾಗಿದೆ ಎಂದು ಹೇಳಿದನು

ಶಾಸ್ತ್ರಿಗಳಲ್ಲಿ ಒಬ್ಬನು ಅವರ ತರ್ಕವನ್ನು ಕೇಳಿ ಯೇಸು ಅವರಿಗೆ ಒಳ್ಳೆಯ ಉತ್ತರಕೊಟ್ಟನೆಂದು ತಿಳಿದು ಹತ್ತಿರಕ್ಕೆ ಬಂದು–ಎಲ್ಲಾ ಆಜ್ಞೆಗಳಲ್ಲಿ ಮೊದಲನೆಯದು ಯಾವದು ಎಂದು

ಆತನನ್ನು ಕೇಳಿದ್ದಕ್ಕೆ ಯೇಸು–ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ; ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ; ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ ಎಂದು ಉತ್ತರ ಕೊಟ್ಟನು. ಆಗ ಆ ಶಾಸ್ತ್ರಿಯು–ಬೋಧಕನೇ, ಚೆನ್ನಾಗಿ ಹೇಳಿದೆ; ಒಬ್ಬನೇ ದೇವರಿದ್ದಾನೆ, ಆತನ ಹೊರತು ಮತ್ತೊಬ್ಬ ದೇವರಿಲ್ಲ ಎಂದು ನೀನು ಹೇಳಿದ್ದು ಸತ್ಯ. ಆತನನ್ನು ಪೂರ್ಣಮನಸ್ಸಿನಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿಸುವದು ಇವೆರಡೂ ಎಲ್ಲಾ ಸರ್ವಾಂಗಹೋಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನವು ಅಂದನು. ಅವನು ಬುದ್ಧಿಯಿಂದ ಉತ್ತರಕೊಟ್ಟದ್ದನ್ನು ಯೇಸುವು ಕಂಡು–ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ ಅಂದನು. ಅಂದಿನಿಂದ ಆತನನ್ನು ಪ್ರಶ್ನೆಮಾಡುವದಕ್ಕೆ ಯಾರಿಗೂ ಧೈರ್ಯವಿರಲಿಲ್ಲ.

## ಲೂಕ 20:20–40

ಆ ಮೇಲೆ ಅವರು ಯೇಸುವನ್ನು ಅಧಿಪತಿಯ ವಶಕ್ಕೂ ಅಧಿಕಾರಕ್ಕೂ ಒಪ್ಪಿಸಬೇಕೆಂದು ಹೊಂಚಿನೋಡುವವರಾಗಿ ನೀತಿವಂತರಂತೆ ನಟಿಸುತ್ತಿರುವ ಗೂಢಚಾರರನ್ನು ಆತನ ಮಾತಿನಲ್ಲಿ ಏನನ್ನಾದರೂ ಹಿಡಿಯುವದಕ್ಕೆ [ಆತನ ಬಳಿಗೆ] ಕಳುಹಿಸಿದರು. ಇವರು–ಬೋಧಕನೇ, ನೀನು ಸರಿಯಾಗಿ ಮಾತಾಡುತ್ತಾ ಉಪದೇಶಮಾಡುತ್ತೀ, ನೀನು ಮುಖದಾಕ್ಷಿಣ್ಯವಿಲ್ಲದೆ ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸುವವನಾಗಿದ್ದೀ ಎಂದು ಬಲ್ಲೆವು. ಕೈಸರನಿಗೆ ಕಂದಾಯ ಕೊಡುವದು ಸರಿಯೋ ಸರಿಯಲ್ಲವೋ ಎಂದು ಆತನನ್ನು ಕೇಳಿದರು. ಆತನು ಅವರ ಕುಯುಕ್ತಿಯನ್ನು ಕಂಡುಕೊಂಡು ಅವರಿಗೆ–ನನಗೆ ಒಂದು ಹಣವನ್ನು ತೋರಿಸಿರಿ. ಇದರಲ್ಲಿ ಯಾರ ತಲೆಯೂ ಮುದ್ರೆಯೂ ಅದೆ ಎಂದು ಕೇಳಿದ್ದಕ್ಕೆ ಅವರು–ಕೈಸರನದು ಅಂದರು. ಆತನು ಅವರಿಗೆ–ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ ಎಂದು ಹೇಳಿದನು. ಆತನ ಮಾತಿನಲ್ಲಿ ಅವರು ಜನರ ಮುಂದೆ ಏನೂ ಹಿಡಿಯಲಾರದೆ ಆತನು ಕೊಟ್ಟ ಉತ್ತರಕ್ಕೆ ಆಶ್ಚರ್ಯಪಟ್ಟು ಸುಮ್ಮಗಾದರು.

ತರುವಾಯ ಪುನರುತ್ಥಾನವಿಲ್ಲವೆಂದು ಹೇಳುವವರಾದ ಸದ್ದುಕಾಯರಲ್ಲಿ ಕೆಲವರು ಬಂದು ಆತನಿಗೆ ಪ್ರಶ್ನೆಮಾಡಿದ್ದೇನಂದರೆ–ಬೋಧಕನೇ, ಅಣ್ಣನಾದವನು ಹೆಂಡತಿಯುಳ್ಳವನಾಗಿದ್ದು ಮಕ್ಕಳಿಲ್ಲದೆ ಸತ್ತರೆ ಅವನ ತಮ್ಮನು ಆಕೆಯನ್ನು ಮದುವೆ ಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನವನ್ನು ಪಡೆಯಬೇಕೆಂದು ಮೋಶೆಯು ನಮಗೆ ಬರೆದಿಟ್ಟನಷ್ಟೆ. ಒಳ್ಳೆಯದು, ಏಳು ಮಂದಿ ಅಣ್ಣತಮ್ಮಂದಿರಿದ್ದರು. ಮೊದಲನೆಯವನು ಹೆಂಡತಿಯನ್ನು ಮಾಡಿಕೊಂಡು ಮಕ್ಕಳಿಲ್ಲದೆ ಸತ್ತನು. ಎರಡನೆಯವನೂ ಅವನ ತರುವಾಯ ಮೂರನೆಯವನೂ ಆಕೆಯನ್ನು ಮದುವೆಮಾಡಿಕೊಂಡರು. ಇದೇ ರೀತಿಯಾಗಿ ಏಳು ಮಂದಿಯೂ ಮಾಡಿಕೊಂಡು ಮಕ್ಕಳಿಲ್ಲದೆ ಸತ್ತರು. ಕಡೆಯಲ್ಲಿ ಆ ಸ್ತ್ರೀಯೂ ಸತ್ತಳು. ಹಾಗಾದರೆ ಪುನರುತ್ಥಾನದಲ್ಲಿ ಆ ಸ್ತ್ರೀಯು ಅವರೊಳಗೆ ಯಾರ ಹೆಂಡತಿಯಾಗಿರುವಳು? ಆಕೆಯನ್ನು ಆ ಏಳು ಮಂದಿಯೂ ಮದುವೆ ಮಾಡಿಕೊಂಡಿದ್ದರಲ್ಲಾ ಅಂದರು. ಯೇಸು ಅವರಿಗೆ–ಈ ಲೋಕದ ಜನರು ಮದುವೆ ಮಾಡಿಕೊಳ್ಳುತ್ತಾರೆ, ಮದುವೆ ಮಾಡಿಕೊಡುತ್ತಾರೆ; ಆದರೆ ಆ ಲೋಕವನ್ನೂ ಸತ್ತವರೊಳಗಿಂದ ಪುನರುತ್ಥಾನವನ್ನೂ ಪಡೆಯುವದಕ್ಕೆ ಯೋಗ್ಯರೆನಿಸಿಕೊಂಡಿರುವವರು ಮದುವೆ ಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡುವದೂ ಇಲ್ಲ. ಅವರು ಇನ್ನು ಮರಣಕ್ಕೆ ಗುರಿಯಾಗುವದೇ ಇಲ್ಲ. ಪುನರುತ್ಥಾನವನ್ನು ಹೊಂದಿದವರಾಗಿದ್ದು ದೇವದೂತರಿಗೆ ಸರಿಸಮಾನರೂ ದೇವರ ಮಕ್ಕಳೂ ಆಗಿದ್ದಾರೆ. ಸತ್ತವರು ಬದುಕಿ ಏಳುತ್ತಾರೆಂಬದನ್ನು ಮೋಶೆಯೂ ಸೂಚಿಸಿದ್ದಾನೆ. ಅವನು ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಕರ್ತನನ್ನು ಅಬ್ರಹಾಮನ ದೇವರು ಇಸಾಕನ ದೇವರು ಯಾಕೋಬನ ದೇವರು ಎಂದು ಹೇಳಿದ್ದಾನೆ. ದೇವರು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ. ಆತನಿಗೆ ಎಲ್ಲರೂ ಜೀವಿಸುವವರೇ ಎಂದು ಹೇಳಿದನು. ಶಾಸ್ತ್ರಿಗಳಲ್ಲಿ ಕೆಲವರು–ಬೋಧಕನೇ ಚೆನ್ನಾಗಿ ಹೇಳಿದಿ ಅಂದರು. ಆತನನ್ನು ಇನ್ನೇನೂ ಕೇಳುವದಕ್ಕೂ ಅವರಿಗೆ ಧೈರ್ಯವಿಲ್ಲದೆ ಹೋಯಿತು.

# ಮೂರು ಪ್ರಚೋಧನಾಕಾರೀ ಪ್ರಶ್ನೆಗಳು

**ರೀಪ್ರಿಂಟ್ಸ್ ಪುಟ 4686**

## ಮತ್ತಾಯ 22;15–22;34–46

**"ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ."**

ಫರಿಸಾಯರು ಮತ್ತು ಸದ್ದುಕಾಯರು ನಮ್ಮ ಕರ್ತನ ದಿನದಲ್ಲಿನ ಧಾರ್ಮಿಕ ಮುಖಂಡರುಗಳಾಗಿದ್ದರು. ಹೇಳಬೇಕಾದಲ್ಲಿ, ಅವರ ಸಿದ್ಧಾಂತಗಳು ನೇರವಾಗಿ ಪರಸ್ಪರ ವಿರೋಧಿಸುತ್ತಿದ್ದರೂ ಅವರು ಒಂದು ವಿಶ್ವಸ್ತಮಂಡಲಿಯನ್ನು ಅಥವಾ ಒಕ್ಕೂಟವನ್ನು ರೂಪಿಸಿಕೊಂಡವರಾಗಿ ಬಹು ವಿರಳವಾಗಿ ತಮ್ಮಲ್ಲಿ ಆಕ್ರಮಣಗಳನ್ನು ಮಾಡಿಕೊಳ್ಳುತ್ತಿದ್ದರು. ಫರಿಸಾಯರು

ದೇವರನ್ನು ಪ್ರವಾದಿಗಳನ್ನು ಹಾಗು ಧರ್ಮಶಾಸ್ತ್ರವನ್ನು ಸ್ವೀಕರಿಸಿಕೊಂಡವರಾಗಿ ಸತ್ತವರ ಪುನರುತ್ಥಾನದ ಮೂಲಕವಾದ ಮುಂದಿನ ಜೀವಿತವನ್ನು ಹಾಗೂ ತಮ್ಮ ಜನಾಂಗವನ್ನು ಉನ್ನತಸ್ಥಾನಕ್ಕೆ ಏರಿಸಿ ತಮ್ಮ ಮೂಲಕವಾಗಿ ಲೋಕವನ್ನು ಆಶೀರ್ವದಿಸ ಸಲುವಾದ ಮೆಸ್ಸೀಯನ ಬರುವಿಕೆಯನ್ನು ನಂಬುವವರಾಗಿದ್ದರು. ಸದ್ದುಕಾಯರು ಇಂಥ ಯಾವುದನ್ನು ನಂಬದವರಾಗಿದ್ದು, ಅವರು ದೇವರಲ್ಲಿ ನಂಬಿಕೆಯಿಲ್ಲದವರಾಗಿ ಉನ್ನತ ವಿಮರ್ಶಕರಾಗಿದ್ದರು. (ಹೈಯರ್ ಕ್ರಿಟಿಕ್ಸ್) ಮುಂದಿನ ಜೀವಿತದ ಅಸ್ತಿತ್ವದ ವಿಷಯವಾಗಿ ಸಂದೇಹವುಳ್ಳವರಾಗಿ ಈಗಿನ ಜೀವಿತವನ್ನು ಉತ್ತಮವಾದ ರೀತಿಯಲ್ಲಿ ಅವರು ಬಳಸಿಕೊಳ್ಳು-ವವರಾಗಿದ್ದರು. ಫರಿಸಾಯರು ಯೇಸುವನ್ನು ವಿರೋಧಿ-ಸುತ್ತಿದ್ದುದು ಯಾಕೆಂದರೆ ಆತನು ಅವರನ್ನು ಒಪ್ಪಿಕೊಳ್ಳದೆ ಖಂಡಿಸುವವನಾಗಿದ್ದು, ತಾವು ಧರ್ಮಶಾಸ್ತ್ರ ವಿಧಿಗಳನ್ನು ಅನುಸರಿಸಿ ನಡೆಯುವವದರಲ್ಲಿ ಯಾವ ನ್ಯೂನ್ಯತೆಯೂ ಇಲ್ಲದವರೂ ಹಾಗೂ ಪರಿಶುದ್ಧರೂ ಆಗಿರುವೆವೆಂದು ಹೇಳಿಕೊಳ್ಳುವ ಅವರಲ್ಲಿನ ಕಪಟವನ್ನು ತೋರಿಸಿಕೊಟ್ಟವನಾಗಿ, ಅವರು ಬಡವರು ಹಾಗು ನಿರಾಡಂಬರವಾಗಿ ತೋರ್ಪಡಿಸಿಕೊಳ್ಳುವವರ ವಿಷಯದಲ್ಲಿ ಸಹಾನುಭೂತಿಯಿಲ್ಲದೆ ಇರುವದರ ಬಗ್ಗೆ ಅವರನ್ನು ಗದರಿಸುವವನಾಗಿದ್ದನು.

ಸದ್ದುಕಾಯರು ಯೇಸುವನ್ನು ವಿರೋಧಿಸಿದ್ದರು; ಕಾರಣ ತಮ್ಮಲ್ಲಿನ ಅಪನಂಬಿಕೆಯ ದೃಷ್ಟಿಯಿಂದ ಆತನು ಒಬ್ಬ ವಂಚಕನಾಗಿದ್ದನು. ಆತನು ಜನರಲ್ಲಿ ಪ್ರಭಾವ ಗಳಿಸಿಕೊಳ್ಳುತ್ತಿ-ರುವದನ್ನು ಅವರು ಗ್ರಹಿಸಿಕೊಂಡಿದ್ದರೆಂಬ ಸಂಗತಿಯನ್ನು ಹೊರತುಪಡಿಸಿದ್ದಲ್ಲಿ ಆತನು ವಂಚಕನಾಗಿದ್ದರೂ ಅವರು ಆತನನ್ನು ವಿರೋಧಿವಂಥಾ ತೊಂದರೆಯನ್ನು ತೆಗೆದು-ಕೊಳ್ಳುತ್ತಿರಲಿಲ್ಲ. ಅವರು ಭಯಪಡುತ್ತಿದ್ದುದರ ಕಾರಣವೇನಂದರೆ ಆತನು ಗಳಿಸುತ್ತಿದ್ದ ಪ್ರಭಾವವು ಇಂದಲ್ಲಾ ಮುಂದು [ದೇಶದ] ಶಾಂತಿಗೆ ಭಂಗತರುವಂತೆ ನಡೆಸಬಹುದೆಂದೂ ಹಾಗು ಯೆಹೂದ್ಯರ ಬಗ್ಗೆ ರೋಮ್ ಸಾಮ್ರಾಜ್ಯದ ನಡವಳಿಕೆಗಳು [ದೇಶದಲ್ಲಿ] ಪ್ರತಿಕೂಲವಾದ ಪರಿಣಾಮವನ್ನು ಉಂಟು ಮಾಡಬಹುದೆಂಬದೂ ಆಗಿತ್ತು. ಹೀಗಾಗಿ ಸದ್ದುಕಾಯರು ಮತ್ತು ಫರಿಸಾಯರಿಬ್ಬರೂ ಯೇಸುವನ್ನು ವಿರೋಧಿಸಿದ್ದರಾದರೂ ಅವರ ವಿರೋಧವು ವಿಭಿನ್ನ ಕಾರಣಗಳಿಗಾಗಿದ್ದವು.

ಯೇಸುವು ಯೆರೂಸಲೇಮಿಗೆ ವಿಜಯೋತ್ಸವದೊಡನೆ ಪ್ರವೇಶಿಸುವನಾಗಿ ಜನರ ಗುಂಪು "ಹೋಸನ್ನ, ದಾವೀದನ ಕುಮಾರನಿಗೆ [ಆ ಮೆಸ್ಸೀಯನಿಗೆ] ಜಯ" ಎಂದು ಕೂಗುತ್ತಿದ್ದುದು ಫರಿಸಾಯರ ಮನಸ್ಸಿನಲ್ಲಿ ಮತ್ಸರವನ್ನು ಕೆರಳಿಸಿತ್ತು. ಆದರೆ ಸದ್ದುಕಾಯರಲ್ಲಿ ಅದು-ಸಾಮಾನ್ಯ ಜನರು ಎಚ್ಚೆತ್ತುಕೊಂಡವರಾಗಿ ತಮ್ಮ ರಾಜ್ಯವನ್ನು ರೋಮ್ ಸಾಮ್ರಾಜ್ಯದೊಡನೆ ಹೋರಾಟಕ್ಕೆ ಸಿಕ್ಕಿಸುವರೆಂಬ ಭಯವನ್ನು ಉಂಟುಮಾಡಿತ್ತು. ಫರಿಸಾಯರು ಆ ದಿವ್ಯ ಬೋಧಕನ ಮೇಲೆ ಜನರಿಗೆ ಇರುವ ಅನುಕಂಪವನ್ನು ಬೇರೆಡೆಗೆ ತಿರುಗಿಸಲು ಪರಿಶ್ರಮಿಸುತ್ತಿದ್ದರು; ಈ ಉದ್ದೇಶ-ವುಳ್ಳವರಾಗಿ ಅವರು ಆತನಿಗೆ (ಯೇಸುವಿಗೆ) ಪ್ರಶ್ನೆ ಹಾಕುವದರ ಮೂಲಕ ಆತನನ್ನು ಮಾತಿನಲ್ಲಿ ಹಿಡಿಯಲು ಯತ್ನಿಸುತ್ತಿದ್ದರು.

## ತೆರಿಗೆ ಕೊಡುವದು ಸರಿಯೋ?

ಅವರ ವಾದವು ಏನಾಗಿತ್ತೆಂದರೆ ಯೇಸುವು ಏನಾದರೂ ಅದನ್ನು ನ್ಯಾಯಸಮ್ಮತವಲ್ಲವೆಂದು ಹೇಳಿದ್ದಲ್ಲಿ ಆತನನ್ನು ದೇಶದ್ರೋಹಿಯಾದ ಒಬ್ಬ ನಾಯಕನಾಗಿರುವನೆಂದು ಹೇಳಿ ಅವನ್ನು ಬಂಧಿಸಿ ಅವನಿಗೆ ಮರಣ ದಂಡನೆ ವಿಧಿಸುವಂತೆ ಪಿಲಾತನನ್ನು ಒತ್ತಾಯಿಸುವದು ಅವರಿಗೆ ಕಷ್ಟಕರವಾಗುತ್ತಿರಲಿಲ್ಲ. ಅವರು ಮುಂದುವರಿದು ವಾದಿಸಿದ್ದೇನಂದರೆ ಯೇಸುವು ಕೈಸರನಿಗೆ ತೆರಿಗೆ ಕೊಡುವದು ನ್ಯಾಯಸಮ್ಮತವೆಂದು ಹೇಳಿದ್ದೇ ಆದರೆ ಆ ಮೂಲಕವಾಗಿ "ಹೋಸನ್ನಾ" ಎಂದು ಹೇಳಿ ಆತನ ಹಿಂದೆ ಹೋಗಿದ್ದ ಜನಸಮೂಹದ ಅನುಕಂಪದಿಂದ ದೂರಸರಿಯುವನೆಂಬದು. ಯಾಕೆಂದರೆ ಯೆಹೂದ್ಯರು-ತಾವು ದೇವರ ರಾಜ್ಯವಾಗಿರಲಾಗಿ ಯಾವ ಲೌಕೀಕ ರಾಜ್ಯಗಳಿಗೂ ದಶಮಾಂಶವನ್ನು ಕೊಡಬಾರದೆಂದೂ, ಕಡ್ಡಾಯವಾಗಿ ಹೀಗೆ ಮಾಡುವದನ್ನು ಹೊರತುಪಡಿಸಿದ್ದಲ್ಲಿ, ಅದು ಅಸಂಬದ್ಧವಾಗು-ವದೆಂಬ ಅಭಿಪ್ರಾಯವನ್ನು ಬಹುಮಟ್ಟಿನ ತಮ್ಮ ಮೂಢ ನಂಬಿಕೆಯ ವಿಚಾರವಾಗಿ ಹಿಡಿದುಕೊಂಡಿದ್ದರು. ಅವರು-"ಗುರುವೇ, ನೀನು ಸತ್ಯವಂತನೆಂದು ನಾವು ಬಲ್ಲೆವು!" ಎಂದು ಹೇಳಿ ನಮ್ಮ ಒಡೆಯನನ್ನು ಅಭಿನಂದಿಸುವ ಮೂಲಕವಾಗಿ ಆತನ ಸತ್ಯತೆಯ ವಿಷಯದಲ್ಲಿ ಆತನಿಗೆ ಆಮಿಷ ಒಡ್ಡಲು ಬಹು ಕುಯುಕ್ತಿ-ಯಿಂದ ಯತ್ನಿಸಿದ್ದರೆಂಬುದನ್ನು ನಾವು ಗಮನಿಸಿರುವೆವು. ಅಷ್ಟೇ ಅಲ್ಲದೆ, ಏನೇ ಆದರೂ ಆತನು ಸತ್ಯವೆಂಬ ಬೆಳಕಿನ ಬಗ್ಗೆ ಬೋಧಿಸುವವನಾದ ಒಬ್ಬ ಬೋಧಕನಾಗಿರುನೆಂದು ಹೇಳಿ ತಮ್ಮ ಈ ಶ್ಲಾಘನೆಯು ಆತನ ಮೇಲೆ ಪರಿಣಾಮ ಬೀರುವಂತೆ ಮಾಡಲು ಪರಿಶ್ರಮಿಸಿದ್ದರು. ಹೀಗಾಗಿ ಅವರು "ನೀನು ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸುತ್ತೀ" ಎಂದು ಹೇಳಿದ್ದರು. ಅಲ್ಲದೆ ಅವರು ಮುಂದುವರೆದು-"ನೀನು ಮುಖದಾಕ್ಷಿಣ್ಯ ತೋರುವವನಲ್ಲ!" ಎಂದು ಆತನಿಗೆ ಹೇಳುವದರ ಮೂಲಕವಾಗಿ ತಮ್ಮ ನಿಲುವನ್ನು ದೃಢಪಡಿಸಿಕೊಂಡಿದ್ದರು.

ಕುಯುಕ್ತಿಯಿಂದ ಕೂಡಿದ ಅವರ ಅಭಿನಂದನೆಯು ಆತನನ್ನು ಸಿಕ್ಕಿಸಿಕೊಳ್ಳುವಂಥಾ ಉದ್ದೇಶವುಳ್ಳದ್ದಾಗಿದ್ದರೂ ಅತನು ಪ್ರಾಮಾಣಿಕನಾಗಿ ಹೀಗೆ ಉತ್ತರಿಸಿದ್ದನು-"ಕಪಟಿಗಳೇ, ನನ್ನನ್ನು ಯಾಕೆ ಪರೀಕ್ಷಿಸುತ್ತೀರಿ?" ಸತ್ಯದ ಪರವಾಗಿ ಮಾತನಾಡುವದರ ಮೂಲಕವಾಗಿ ನಿಮ್ಮ ನೀಚತನದ ಸಂಚನ್ನು ಏಕೆ ಮುಚ್ಚಿಕೊಳ್ಳುತ್ತೀರಿ? "ನನಗೆ ಒಂದು ಹಣವನ್ನು ತೋರಿಸಿರಿ." ಇದು ಅಕ್ಷರಶಃ ಜನಗಣತಿ ಮಾಡುವಾಗ ಕೊಡಬೇಕಾಗಿದ್ದ ಒಂದು ತೆರಿಗೆಯ [ತಲೆಗಂದಾಯದ] ನಾಣ್ಯವಾಗಿತ್ತು. ಅವರು ಆತನಿಗೆ ಒಂದು ಮೊಹರಿಯನ್ನು [ದಿನಾರಿ] ಆತನ ಕೈಗೆ ಕೊಟ್ಟಿದ್ದರು. ಸಾಮಾನ್ಯವಾಗಿ ಅದು ಒಂದು ದಿನದ ಕೂಲಿಯ ಹಣಕ್ಕೆ ಸಮನಾಗಿತ್ತು. "ಈ ತಲೆಯೂ ಈ ಮುದ್ರೆಯು ಯಾರದು?" ಎಂದು ಯೇಸುವು ಕೇಳಿದ್ದಕ್ಕೆ "ಕೈಸರನದು" ಎಂದು ಅವರು ಉತ್ತರಿಸಿದ್ದರು. "ಕೈಸರನದನ್ನು ಕೈಸರನಿಗೆ ಕೊಡಿರಿ; ದೇವರದನ್ನು ದೇವರಿಗೆ ಕೊಡಿರಿ." ಎಂದು ಯೇಸುವು ಅವರಿಗೆ ಉತ್ತರವಾಗಿ ಹೇಳಿದ್ದನು. ಆ ದುಷ್ಟ ಫರಿಸಾಯರಿಗೆ ತಾವು ಹೇಗೆ ಆತನನ್ನು ಆತನ ಮಾತಿನಲ್ಲಿ ಹಿಡಿಯಬೇಕೆಂಬದು ಕಷ್ಟಕರವಾಗಿತ್ತೆಂಬುದಕ್ಕೆ ಆಶ್ಚರ್ಯಪಡಬೇಕಿಲ್ಲ. ಬದಲಾಗಿ ಅವರೇ ಸಿಕ್ಕಿಹಾಕಿಕೊಂಡಿದ್ದರು.

## ಆಕೆಯು ಯಾರ ಹೆಂಡತಿಯಾಗಿರುವಳು?

ನಂತರ ದೇವರಲ್ಲಿ ನಂಬಿಕೆಯಿಲ್ಲದವರಾದ ಸದ್ದುಕಾಯರು ಬಂದು ಆ ದಿವ್ಯ ಬೋಧಕನನ್ನು ಕ್ಲಿಷ್ಟಕರ ಪ್ರಶ್ನೆಯ ಮೂಲಕವಾಗಿ ಸಿಕ್ಕಿಸಿಕೊಳ್ಳಲು ಯತ್ನಿಸಿದ್ದರು. ಏಳು ಮಂದಿ ಸಹೋದರರು ಒಂದೇ ಸ್ತ್ರೀಯನ್ನು ಒಬ್ಬರಾದ ಮೇಲೆ ಒಬ್ಬರಂತೆ ಮದುವೇ ಮಾಡಿಕೊಂಡವರಾಗಿ ಆಕೆಯು ಸಾಯುವ ಮೊದಲೇ ಅವರೆಲ್ಲರೂ ಸತ್ತುಹೋಗಿದ್ದರು. ಪುನರುತ್ಥಾನದಲ್ಲಿ ಆಕೆಯು ಅವರಲ್ಲಿ ಯಾರ ಹೆಂಡತಿಯಾಗಿರುವಳು? ಪರಲೋಕದಲ್ಲಿ ಅಥವಾ ಶುದ್ಧಿಲೋಕದಲ್ಲಿ [ಪರ್ಗಟೋರಿಯಲ್ಲಿ] ಇಲ್ಲವೇ ನಿತ್ಯ ಯಾತನೆಯಲ್ಲಿ ಅವಳು ಯಾರ ಹೆಂಡತಿಯಾಗಿರುವಳೆಂದು ಅವರು ಕೇಳಿದ್ದಿಲ್ಲ; ಯಾಕಂದರೆ ಯೇಸುವಾಗಲಿ ಇಲ್ಲವೇ ಯೆಹೂದ್ಯರಾಗಲಿ ಇಂಥಾ ಬೋಧನೆಯನ್ನು ಹಿಡಿದುಕೊಂಡಿರಲಿಲ್ಲ. ಫರಿಸಾಯರೂ ಹಾಗು ಯೇಸುವೂ ಸತ್ತವರ ಪುನರುತ್ಥಾನದ ಬಗ್ಗೆ ಬೋಧಿಸುತ್ತಿದ್ದವರಾಗಿದ್ದು ಈ ಬೋಧನೆಯ ವಿರುದ್ಧವಾಗಿಯೇ ಸದ್ದುಕಾಯರು ತಮ್ಮ ವ್ಯಂಗ್ಯ ಪ್ರಶ್ನೆಯನ್ನು ಗುರಿಯಾಗಿಸಿದ್ದರು.

ನಮ್ಮ ಕರ್ತನು ನೀಡಿದ ಉತ್ತರದಲ್ಲಿನ ಗಾಂಭೀರ್ಯ-ವನ್ನು ಗಮನಿಸಿರಿ: "ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದಿರುವದರಿಂದಲೇ ತಪ್ಪುವವರಾಗಿ-ದ್ದೀರಲ್ಲವೇ" ಇಂಥಾ ಪ್ರಶ್ನೆಗಳ ವಿಷಯವಾಗಿ ಸತ್ಯವೇದದ ಬೋಧನೆಯನ್ನು ನೀವು ಅರ್ಥಮಾಡಿಕೊಂಡಿಲ್ಲ, ಅಲ್ಲದೆ ನಿಮ್ಮ ಪ್ರಶ್ನೆಯಲ್ಲಿ ನೀವು ದೇವರ ಮಹಾ ಶಕ್ತಿಯನ್ನು ಅಲಕ್ಷ್ಯಮಾಡಿದ್ದೀರಿ. ಪುನರುತ್ಥಾನದ ಸಮಯದಲ್ಲಿ ದೇವರ ಆ ಮಹಾ ಶಕ್ತಿಯನ್ನು ಬಳಸಿಕೊಂಡು ಆ ಸಂದರ್ಭದಲ್ಲಿ ಬರುವ ಎಲ್ಲಾ ತೊಡಕುಗಳನ್ನು ಸರಾಗಗೊಳಿಸಲಾಗುವದು. ಆನಂತರ ಆ ದಿವ್ಯ ಬೋಧಕನು-ಆ [ಹಂತ ಹಂತವಾದ] ಪುನರುತ್ಥಾನವನ್ನು ಪಡೆಯಲಿರುವಂಥವರು ಪಾಪ ಮರಣದ ಸ್ಥಿತಿಯಿಂದ ಪೂರ್ಣವಾಗಿ ಎತ್ತಲ್ಪಡುವವರಾಗಿದ್ದು "ಅವರು ಮದುವೆ-ಮಾಡಿಕೊಳ್ಳುವದೂ ಇಲ್ಲ, ಮಾಡಿಕೊಡುವದೂ ಇಲ್ಲ" ಅದರೆ ಅವರು ದೇವದೂತರಂತೆ ಲಿಂಗರಹಿತರಾಗಿರುವರೆಂದು ಹೇಳಲು ಮುಂದಾಗಿದ್ದನು. ಹೀಗೆ ಉತ್ತರಿಸಲಾಗದಂಥ ಮಹಾ ಪ್ರಶ್ನೆಯೆಂದು ಸದ್ದುಕಾಯರು ಕಲ್ಪಿಸಿಕೊಂಡಂಥದ್ದು ನೀರಸವಾಗಿ ಬಿದ್ದುಹೋದದ್ದಾಗಿ, ಅವರ ಅಜ್ಞಾನವನ್ನು ತೋರ್ಪಡಿಸಿತ್ತು.

## ಯಾವದು ಮುಖ್ಯವಾದ ಆಜ್ಞೆ?

ಆನಂತರ ಶಾಸ್ತ್ರಿಗಳಲ್ಲಿ ಒಬ್ಬನು ಕರ್ತನನ್ನು ಸಿಕ್ಕಿಸಿಕೊಳ್ಳಲು ಯತ್ನಿಸುವವನಾಗಿ ದೇವಾಜ್ಞೆಗಳಿಗೆ ಸಂಬಂಧಿಸಿದಂತೆ ಮುಖ್ಯವಾದ ಆಜ್ಞೆಯ ಬಗ್ಗೆ ಪ್ರಶ್ನಿಸುವವನಾಗಿ ಆಜ್ಞೆಗಳಲ್ಲೆಲ್ಲಾ ಮುಖ್ಯವಾದುದು ಯಾವದೆಂದು ಯೇಸುವು ಪರಿಗಣಿಸು-ವನೆಂದು ಕೇಳಿದ್ದನು. ಆ ದಿವ್ಯ ಬೋಧಕನು ಒಡನೆಯೇ ಧರ್ಮಶಾಸ್ತ್ರವಿಧಿಗಳ ಅನುಸಾರವಾಗಿ (ಧರ್ಮೋಪದೇಶಕಾಂಡ 6:5) ದಶಾಜ್ಞೆಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ ಹೀಗೆ ಉತ್ತರಿಸಿದ್ದನು: "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು." ಇದು ಮೊದಲನೇ ಹಾಗೂ ಮುಖ್ಯವಾದ ಆಜ್ಞೆ, ಮತ್ತು ಇದಕ್ಕೆ ಸಮನಾಗಿರುವ ಎರಡನೆಯದು-"ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ ಆಧಾರವಾಗಿವೆ." ಧರ್ಮಶಾಸ್ತ್ರನಿಯಮಗಳ ಇಂಥಾ ಒಂದು ತಾತ್ಪರ್ಯದ ಬಗ್ಗೆ ಆ ಶಾಸ್ತ್ರಿಗೆ ಏನನ್ನು ಹೇಳಲು ಸಾಧ್ಯವಿತ್ತು? ಹೇಳಲು ಆತನಿಗೆ ಏನೂ ಉಳಿದಿರಲಿಲ್ಲ. ಹಿಂದೆಂದೂ ಇಲ್ಲದ ರೀತಿಯಲ್ಲಿ ಆತನು ಉತ್ತರಿಸಲ್ಪಟ್ಟಿದ್ದನು.

## ನಂತರ ಯೇಸುವು ಪ್ರಶ್ನಿಸಲು ತಿರುಗಿಕೊಂಡದ್ದು

ದಿವ್ಯ ಬೋಧಕನು ಫರಿಸಾಯನಿಗೆ ಹೀಗೆ ಕೇಳಿದ್ದನು: "ಬರಬೇಕಾದ ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು? ಅವರು ಉತ್ತರಿಸಿದ್ದು: "ದಾವೀದನ ಮಗನು" ಬೋಧಕನು ಆನಂತರ ಹೀಗೆ ಪ್ರಶ್ನಿಸಿದ್ದನು: "ಹಾಗಾದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬ ಮಾತಿನಲ್ಲಿ ದಾವೀದನು ಪ್ರವಿತ್ರಾತ್ಮ ಪ್ರೇರಿತನಾಗಿ [ಪ್ರವಾದನೆಯಾಗಿ] ಆತನನ್ನು ಒಡೆಯನು ಎಂದು ಕರೆದಿರಲು, ಆತನು ಮಗನಾಗುವದು ಹೇಗೆ?"

ಸಹಜವಾಗಿ ಆ ಪ್ರಶ್ನೆಯು ಫರಿಸಾಯರಿಗೆ ಬಹು ಗಾಢವಾಗಿತ್ತು. ಆ ದಿವ್ಯ ಬೋಧಕನಿಗೆ ಅವರ ಪ್ರಶ್ನೆಗಳನ್ನೆಲ್ಲಾ ಉತ್ತರಿಸಲು ಸಾಧ್ಯವಾಗಿತ್ತು, ಆದರೆ ಆತನ ಪ್ರಶ್ನೆಗೆ ಉತ್ತರಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಮೆಸ್ಸೀಯನು ಶಾರೀರಿಕ ಸಂಬಂಧವಾಗಿ ದಾವೀದನ ವಂಶದಲ್ಲಿ ಹುಟ್ಟಿದ್ದನು ಆದರೂ ಶಾರೀರಿಕ ಸಂಬಂಧದಲ್ಲಿನ ಮೆಸ್ಸೀಯನಲ್ಲಿ ದೇವರ ಉದ್ದೇಶಗಳು ಪೂರ್ಣವಾಗಿ ಈಡೇರಿರಲಿಲ್ಲವೆಂಬುದು ಬಹು ಸೊಗಸಾದ ರೀತಿಯಲ್ಲಿ ಸ್ಪಷ್ಟವಾಗಿರುವದನ್ನು ನಾವು ನೋಡುತ್ತೇವೆ. ಅಂದರೆ ಆತನು ತನ್ನ ದೇಹವನ್ನು ಯಜ್ಞವನ್ನಾಗಿ ಅರ್ಪಿಸಿ ಮರಣದಿಂದ ಎಬ್ಬಿಸಲ್ಪಟ್ಟು ದೇವದೂತರಿಗಿಂತಲೂ ಉತ್ತಮನಾಗಿ ಪ್ರಭಾವ ಮಾನ ನಿರ್ಲಯತ್ವಗಳನ್ನು ಅಂದರೆ "ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳನ್ನು" ಹೊಂದಬೇಕಿತ್ತೆಂಬದು. ಆತನು ಶರೀರಧಾರಿಯಾಗಿದ್ದ ದಿನದಲ್ಲಿ ದಾವೀದನ ಮಗನಾಗಿದ್ದು, ಪ್ರಭಾವಕ್ಕೆ ಸೇರಿಸಲ್ಪಟ್ಟಾಗ ಆತನು ದಾವೀದನಿಗೆ ಒಡೆಯನಾಗಿದ್ದನೆಂಬುದನ್ನು ನಾವು ಗ್ರಹಿಸಿಕೊಂಡಿರುವೆವು. ಹೀಗೆ ನಿಗಧಿತ ಕಾಲದಲ್ಲಿ ದಾವೀದನು ಆತನ [ಕ್ರಿಸ್ತನ] ಮೂಲಕವಾಗಿ ಮರಣದಿಂದ ಪುನರುತ್ಥಾನ ಹೊಂದುವದು ಮಾತ್ರವಲ್ಲದೆ ಮೆಸ್ಸೀಯನ ರಾಜ್ಯದಲ್ಲಿ ಭಾಗವಹಿಸುವಂಥಾ ಆಶೀರ್ವಾದವನ್ನು ಸಹ ಪಡೆಯುವನು. ಶಾರೀರಿಕ ಸಂಬಂಧದಲ್ಲಿನ ಮೆಸ್ಸೀಯನಿಗೆ ತಂದೆಯಾಗಿದ್ದವನು ಪ್ರಭಾವ ಹೊಂದಿದ ಮೆಸ್ಸೀಯನಿಗೆ ಹೀಗೆ ಮಗನಾಗುವನು. ಆತನ ಭೂಸಂಬಂಧದ ಜೀವವು

ದಾವೀದನನ್ನು ಒಳಗೊಂಡಂತೆ ಸಮಸ್ತ ಲೋಕವನ್ನು ಪುನರುದ್ಧಾರಗೊಳಿಸುವಂಥದರ ಬೆಲೆಯಾಗಬೇಕಿರುವದು. ಇದನ್ನು ಹೀಗೆ ಬರೆಯಲಾಗಿರುವದು: "[ಅರಸೇ] ವಂಶಪಾರಂಪರ್ಯವಾಗಿ ಬಂದ ಸ್ಥಾನದಲ್ಲಿರುವದಕ್ಕೆ ನಿನಗೆ ಮಕ್ಕಳು ಹುಟ್ಟುವರು; ಅವರನ್ನ ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸುವಿ." ಕೀರ್ತನೆ 45:16.

## ಒಬ್ಬ ರಾಜಕುಮಾರನ ವಿಷಯವಾದ ನಿದರ್ಶನ

ಬರ್ಲಿನ್ನಿನಲ್ಲಿ ನಡೆದ ಜರ್ಮನರ ಒಂದು ಸಮಾರಂಭದಲ್ಲಿ ಒಬ್ಬ ಕರ್ನಲ್ಲನು ತನಗೆ ತಿಳಿಯದಿದ್ದ ಒಬ್ಬ ಯವನಸ್ಥ ಅಧಿಕಾರಿಯನ್ನು ಸಂಧಿಸಿದ್ದನು. ತನಗೆ ತಿಳಿಯದಿದ್ದ ಆ ಯವನಸ್ಥ ಅಧಿಕಾರಿಯು ಧರಿಸಿದ ಒಂದೇ ಒಂದು ಭೂಷಣವೆಂದರೆ ಅದು ಅಗಲವಾದ ಒಂದು ಹೊಳಪಿನ ಪದಕವಾಗಿತ್ತು. ಆ ಕರ್ನಲ್ಲನು ವಿಚಾರಿಸಿದ್ದು: "ಲೆಫ್ಟಿನೆಂಟನೇ, ನೀನು ಧರಿಸಿರುವದೇನು?" ಆ ಯವನಸ್ಥನು ಸೌಮ್ಯವಾಗಿ ಹೇಳಿದ್ದು: "ಒಂದು ಸೇನಾಕ್ರಮದ ಪದಕ, ಕರ್ನಲ್ಲರೇ." ಆ ಕರ್ನಲ್ಲನು ಉತ್ತರಿಸಿದ್ದು: "ಪ್ರಷಿಯಾ ಸೇನಾಕ್ರಮದ ಪದಕವಲ್ಲ; ಇಂಥದು ನನಗೆ ಯಾವುದೂ ತಿಳಿದಿಲ್ಲ." ಆ ಯವನಸ್ಥನು ಹೇಳಿದ್ದು "ಇಂಗ್ಲೀಷ್ ಸೇನಾಕ್ರಮದ ಪದಕ" ಆ ಕರ್ನಲ್ಲನು ಕೇಳಿದ್ದು: "ಮತ್ತು ಇದನ್ನು ಯಾರು ನಿನಗೆ ಕೊಟ್ಟರು?" "ನನ್ನ ಅಜ್ಜಿ." ಎಂಬುದು ಉತ್ತರವಾಗಿತ್ತು. ವಯಸ್ಸಾದ ಆ ಕರ್ನಲ್ಲನು–ಈ ಯವನಸ್ಥನು ತನ್ನೊಂದಿಗೆ ವಿನೋದವಾಡುತ್ತಿರುವನೆಂದು ಭಾವಿಸಿ ಹೀಗೆ ಕೇಳಿದನು: "ಅಂದಹಾಗೆ ನಿನ್ನ ಅಜ್ಜಿ ಯಾರಾಗಿರಬಹುದು?" ಆತನ ತೀವ್ರವಾದ ಆಶ್ಚರ್ಯ ಹಾಗು ನಿರಾಶೆಗಾಗಿ ಈ ಉತ್ತರ ಬಂದಿತ್ತು: "ಇಂಗ್ಲೆಂಡಿನ ರಾಣಿ, ವಿಕ್ಟೋರಿಯ." ವೇಷಮರೆಸಿಕೊಂಡಿದ್ದ ಒಬ್ಬ ರಾಜಕುಮಾರನು ಅಲ್ಲಿದ್ದನು. ಅಲ್ಲದೆ ಹೀಗೆಯೇ ಪ್ರಭಾವವುಳ್ಳ ಮಹಾ ಅರಸನಾದ ಯೇಸುವು ವೇಷಮರೆಸಿಕೊಂಡಿದ್ದನು. "ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ." – ಯೋಹಾನ 1:10

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸಾನ್ 11 | ಯೆರೂಸಲೇಮಿನ ದೇವಾಲಯ | ಮೆಸ್ಸೀಯನ ವಂಶದ ಬಗ್ಗೆ ನಿರುತ್ತರವನ್ನಾಗಿಸುವ ಯೇಸುವಿನ ಪ್ರಶ್ನೆ | 22:41–46 | 12:35–37 | 20:41–44 | –– |
| | ಯೆರೂಸಲೇಮಿನ ದೇವಾಲಯ | ಶಾಸ್ತ್ರಿಗಳು ಹಾಗು ಫರಿಸಾಯರನ್ನು ಉಗ್ರವಾಗಿ ಖಂಡಿಸಿದುದು | 23:1–39 | 12:38–40 | 20:45–47 | –– |
| | ಯೆರೂಸಲೇಮಿನ ದೇವಾಲಯ | ವಿಧವೆಯ ದುಗ್ಗಾಣಿ | –– | 12:41–44 | 21:1–4 | –– |

## ಮತ್ತಾಯ 22:41–46

ಫರಿಸಾಯರು ಕೂಡಿಬಂದಿರುವಾಗ ಯೇಸು ಅವರಿಗೆ–ಬರಬೇಕಾದ ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು? ಎಂದು ಪ್ರಶ್ನೆಹಾಕಿದ್ದಕ್ಕೆ ಅವರು ಆತನಿಗೆ–ದಾವೀದನ ಮಗನು ಎಂದು ಹೇಳಲು ಆತನು–ಹಾಗಾದರೆ ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮ ಪ್ರೇರಿತನಾಗಿ ಆತನನ್ನು ಒಡೆಯನು ಅನ್ನುವದು ಹೇಗೆ? ಅಂದನು. ಅದಕ್ಕೆ ಉತ್ತರವಾಗಿ ಯಾರೂ ಒಂದು ಮಾತಾದರೂ ಆತನಿಗೆ ಹೇಳಲಾರದೆ ಹೋದರು. ಇದಲ್ಲದೆ ಅಂದಿನಿಂದ ಆತನನ್ನು ಇನ್ನೇನಾದರೂ ಕೇಳುವದಕ್ಕೆ ಯಾರಿಗೂ ಧೈರ್ಯ ಹುಟ್ಟಲಿಲ್ಲ.

## ಮತ್ತಾಯ 23:1–39

ತರುವಾಯ ಯೇಸು ಜನರ ಗುಂಪಿಗೂ ತನ್ನ ಶಿಷ್ಯರಿಗೂ ಹೇಳಿದ್ದೇನಂದರೆ–ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಅದದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೇ ಹೊರತು ನಡೆಯುವದಿಲ್ಲ. ಅವರು ಭಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು. ಅವರು ತಮ್ಮ ಕೆಲಸಗಳನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ. ತಾವು ಕಟ್ಟಿಕೊಳ್ಳುವ ಜ್ಞಾಪಕಪಟ್ಟಿಗಳನ್ನು ಅಗಲಮಾಡುತ್ತಾರೆ, ಗೊಂಡೆಗಳನ್ನು ಉದ್ದಮಾಡುತ್ತಾರೆ. ಇದಲ್ಲದೆ ಔತಣಪ್ರಸ್ತಗಳಲ್ಲಿ ಪ್ರಥಮಸ್ಥಾನ,

ಸಭಾಮಂದಿಗಳಲ್ಲಿ ಮುಖ್ಯ ಪೀಠಗಳು, ಅಂಗಡೀ ಬೀದಿಗಳಲ್ಲಿ ನಮಸ್ಕಾರಗಳು, ಜನರಿಂದ ಬೋಧಕರೆನ್ನಿಸಿಕೊಳ್ಳುವದು, ಇವುಗಳೇ ಅವರಿಗೆ ಇಷ್ಟ. ಆದರೆ ನೀವು ಬೋಧಕರನ್ನಿಸಿ–ಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರು ಸಹೋದರರು. ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ; ಪರಲೋಕದಲ್ಲಿರುವಾತನೊಬ್ಬನೇ ನಿಮಗೆ ತಂದೆ. ಮತ್ತು ಗುರುಗಳು ಅನ್ನಿಸಿಕೊಳ್ಳಬೇಡಿರಿ; ಕ್ರಿಸ್ತನೊಬ್ಬನೇ ನಿಮಗೆ ಗುರುವು. ನಿಮ್ಮಲ್ಲಿ ಹೆಚ್ಚಿನವನು ನಿಮ್ಮ ಸೇವಕನಾಗಿರಬೇಕು. ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ಪರಲೋಕರಾಜ್ಯದ ಬಾಗಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ; ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗಗೊಡಿಸುವದಿಲ್ಲ.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಭೂಮಿಯನ್ನೂ ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ; ಅವನು ಸೇರಿದ ಮೇಲೆ ಅವನನ್ನು ನಿಮಗಿಂತ ಎರಡರಷ್ಟಾಗಿ ನರಕ ಪಾತ್ರನಾಗಮಾಡುತ್ತೀರಿ.

ಅಯ್ಯೋ, ದಾರಿತೋರಿಸುವ ಕುರುಡರೇ, ಒಬ್ಬನು ದೇವಾಲಯದ ಮೇಲೆ ಆಣೆಯಿಟ್ಟುಕೊಂಡರೆ ಅದೇನು ಆಣೆಯಲ್ಲ, ಆದರೆ ಒಬ್ಬನು ದೇವಾಲಯದ ಚಿನ್ನದ ಮೇಲೆ ಆಣೆಯಿಟ್ಟುಕೊಂಡರೆ ಅದನ್ನು ನಡಿಸಲೇಬೇಕು ಎಂದು ನೀವು ಹೇಳುತ್ತೀರಿ. ಹುಚ್ಚರೇ, ಕುರುಡರೇ, ಯಾವದು ಹೆಚ್ಚಿನದು? ಚಿನ್ನವೋ, ಚಿನ್ನವನ್ನು ಪಾವನಮಾಡುವ ದೇವಾಲಯವೋ? ಒಬ್ಬನು ಯಜ್ಞವೇದಿಯ ಮೇಲೆ ಆಣೆಯಿಟ್ಟುಕೊಂಡರೆ ಅದೇನೂ ಆಣೆಯಲ್ಲ, ಆದರೆ ಅದರಲ್ಲಿರುವ ಕಾಣಿಕೆಯ ಮೇಲೆ ಆಣೆಯಿಟ್ಟುಕೊಂಡರೆ ಅದನ್ನು ನಡಿಸಲೇಬೇಕು ಎಂದು ಹೇಳುತ್ತೀರಿ. ಕುರುಡರೇ, ಯಾವದು ಹೆಚ್ಚಿನದು? ಕಾಣಿಕೆಯೋ, ಆ ಕಾಣಿಕೆಯನ್ನು ಪಾವನಮಾಡುವ ಯಜ್ಞವೇದಿಯೋ? ಹೀಗಿರುವದರಿಂದ ಯಜ್ಞವೇದಿಯ ಮೇಲೆ ಆಣೆಯಿಟ್ಟುಕೊಂಡರೆ ಅದರ ಮೇಲೆಯೂ ಅದರಲ್ಲಿರುವ ಎಲ್ಲಾದರ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು. ದೇವಾಲಯದ ಮೇಲೆ ಆಣೆಯಿಟ್ಟುಕೊಂಡರೆ ಅದರ ಮೇಲೆಯೂ ಅದರಲ್ಲಿ ವಾಸಮಾಡುವಾತನ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು. ಪರಲೋಕದ ಮೇಲೆ ಆಣೆಯಿಟ್ಟುಕೊಂಡರೆ ದೇವರ ಸಿಂಹಾಸನದ ಮೇಲೆಯೂ ಅದರಲ್ಲಿ ಕೂತಿರುವಾತನ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ. ಇವುಗಳನ್ನು ಮಾಡಬೇಕಿತ್ತು; ಅವುಗಳನ್ನೂ ಬಿಡಬಾರದು. ದಾರಿತೋರಿಸುವ ಕುರುಡರೇ, ನೀವು ಸೊಳ್ಳೇ ಸೋಸುವವರು, ಒಂಟೇ ನುಂಗುವವರು.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪಂಚಪಾತ್ರೆ ಬಟ್ಟಲು ಇವುಗಳ ಹೊರ ಬಾಗವನ್ನು ಶುಚಿಮಾಡುತ್ತೀರಿ; ಅದರೆ ಅವು ಒಳಗೆ ಸುಲುಕೊಂಡವು – ಗಳಿಂದಲೂ ಇಹಭೋಗ ಪದಾರ್ಥಗಳಿಂದಲೂ ತುಂಬಿರುತ್ತವೆ. ಕುರುಡನಾದ ಫರಿಸಾಯನೇ, ಮೊದಲು ಪಂಚಪಾತ್ರೆ ಬಟ್ಟಲುಗಳ ಒಳಭಾಗವನ್ನು ಶುಚಿಮಾಡು. ಆಗ ಅವುಗಳ ಹೊರ ಭಾಗವೂ ಶುಚಿಯಾಗುವದು.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ; ಇವು ಹೊರಗೆ ಚಂದವಾಗಿ ಕಾಣುತ್ತವೆ. ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ. ಹಾಗೆಯೇ ನೀವು ಸಹ ಹೊರಗೆ ಜನರಿಗೆ ಸತ್ಪುರುಷರಂತೆ ಕಾಣಿಸಿಕೊಳ್ಳುತ್ತೀರಿ ಸರಿ, ಆದರೆ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ.

ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪ್ರವಾದಿಗಳ ಸಮಾಧಿಗಳನ್ನು ಕಟ್ಟಿ, ನೀತಿವಂತರ ಗೋರಿಗಳನ್ನು ಅಲಂಕರಿಸಿ–ನಾವು ಹಿರಿಯರ ಕಾಲದಲ್ಲಿ ಇರುತ್ತಿದ್ದರೆ ಪ್ರವಾದಿಗಳನ್ನು ಕೊಂದಪಾಪದಲ್ಲಿ ಪಾಲುಗಾರರಾಗುತ್ತಿರಲಿಲ್ಲ ಅನ್ನುತ್ತೀರಿ. ಹಾಗಾದರೆ ನೀವು ಪ್ರವಾದಿಗಳನ್ನು ಕೊಂದವರ ಮಕ್ಕಳೇ ಹೌದು ಎಂಬದಕ್ಕೆ ನಿಮಗೆ ನೀವೇ ಸಾಕ್ಷಿಗಳಾಗಿದ್ದೀರಿ. ಒಳ್ಳೇದು, ನೀವು ನಿಮ್ಮ ಹಿರಿಯರ ಪಾಪದ ಅಳತೆಯನ್ನು ಪೂರ್ತಿಮಾಡಿರಿ. ಹಾವುಗಳೇ, ಸರ್ಪಜಾತಿಯವರೇ, ನರಕದಂಡನೆಗೆ ಹೇಗೆ ತಪ್ಪಿಸಿಕೊಂಡೀರಿ? ಆದುದರಿಂದ ನೋಡಿರಿ, ನಾನು ನಿಮ್ಮ ಬಳಿಗೆ ಪ್ರವಾದಿಗಳನ್ನೂ ಜ್ಞಾನಿಗಳನ್ನೂ ಶಾಸ್ತ್ರಿಗಳನ್ನೂ ಕಳುಹಿಸುತ್ತೇನೆ; ಅವರಲ್ಲಿ ಕೆಲವರನ್ನು ಕೊಲ್ಲುವಿರಿ, ಶಿಲುಬೆಗೆ ಹಾಕುವಿರಿ; ಕೆಲವರನ್ನು ನಿಮ್ಮ ಸಭಾಮಂದಿರಗಳಲ್ಲಿ ಕೊರಡೆಗಳಿಂದ ಹೊಡೆದು ಊರಿಂದ ಊರಿಗೆ ಅಟ್ಟಿಕೊಂಡು ಹೋಗುವಿರಿ. ಹೀಗೆ ನೀತಿವಂತನಾದ ಹೇಬೆಲನ ರಕ್ತವು ಮೊದಲುಗೊಂಡು ನೀವು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದುಹಾಕಿದ ಬರಕೀಯನ ಮಗನಾದ ಜಕರೀಯನ ರಕ್ತದವರೆಗೂ ಭೂಮಿಯ ಮೇಲೆ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದಿಂದುಂಟಾದ ಅಪರಾಧವು ನಿಮ್ಮ ತಲೆಯ ಮೇಲೆ ಬರುವದು. ಅದೆಲ್ಲಾ ಈ ಸಂತತಿಯವರ ಮೇಲೆ ಬರುವದೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.

ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ

ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ. ಈಗಿನಿಂದ-ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು.

## ಮಾರ್ಕ 12:35-44

ಯೇಸು ದೇವಾಲಯದಲ್ಲಿ ಉಪದೇಶ ಮಾಡುತ್ತಿರಲಾಗಿ ಪ್ರಶ್ನೆಮಾಡಿ-ಶಾಸ್ತ್ರಿಗಳು ಬರಬೇಕಾದ ಕ್ರಿಸ್ತನನ್ನು ದಾವೀದನ ಮಗನೆಂದು ಹೇಳುತ್ತಾರಲ್ಲಾ, ಅದು ಹೇಗಾದೀತು? ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದಾಗಿ ದಾವೀದನೇ ಪವಿತ್ರಾತ್ಮ ಪ್ರೇರಣೆಯಿಂದ ಹೇಳಿದನು. ದಾವೀದನೇ ಆತನನ್ನು ಒಡೆಯನೆಂದು ಹೇಳಿರುವಲ್ಲಿ ಆತನು ಅವನಿಗೆ ಮಗನಾಗುವದು ಹೇಗೆ? ಎಂದು ಕೇಳಿದನು.

ಸಾಧಾರಣ ಜನರು ಆತನ ಮಾತನ್ನು ಸಂತೋಷದಿಂದ ಕೇಳುತ್ತಿದ್ದರು. ಆತನು ಉಪದೇಶಮಾಡಿ ಹೇಳಿದ್ದೇನಂದರೆ-ಶಾಸ್ತ್ರಿಗಳ ವಿಷಯದಲ್ಲಿ ಎಚ್ಚರಿಕೆಯಾಗಿರಿ. ನಿಲುವಂಗಿಗಳನ್ನು ತೊಟ್ಟುಕೊಂಡು ತಿರುಗಾಡುವದು, ಅಂಗಡಿಬೀದಿಗಳಲ್ಲಿ ನಮಸ್ಕಾರಗಳು, ಸಭಾಮಂದಿರಗಳಲ್ಲಿ ಮುಖ್ಯಪೀಠಗಳು, ಔತಣಪ್ರಸ್ತಗಳಲ್ಲಿ ಪ್ರಥಮಸ್ಥಾನಗಳು, ಇವುಗಳಲ್ಲಿಯೇ ಅವರು ಮನಸ್ಸುಳ್ಳವರಾಗಿದ್ದಾರೆ. ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾದ ಇವರು ಹೆಚ್ಚಾದ ದಂಡನೆಯನ್ನು ಹೊಂದುವರು ಅಂದನು.

ಯೇಸು ಬೊಕ್ಕಸದ ಮನೆಗೆ ಎದುರಾಗಿ ಕೂತುಕೊಂಡು ಜನರು ಬೊಕ್ಕಸದಲ್ಲಿ ಹಣ ಹಾಕುವದನ್ನು ನೋಡುತ್ತಿದ್ದನು. ಅನೇಕ ಮಂದಿ ಐಶ್ವರ್ಯವಂತರು ಬಹಳ ಬಹಳ ಹಾಕುತ್ತಿರಲು ಒಬ್ಬ ಬಡ ವಿಧವೆಯು ಬಂದು ಎರಡು ಕಾಸು ಅಂದರೆ ಒಂದು ದುಗ್ಗಾಣಿ ಹಾಕಿದಳು. ಆಗ ಆತನು ತನ್ನ ಶಿಷ್ಯರನ್ನು ಹತ್ತಿರಕ್ಕೆ ಕರೆದು-ನಿಮಗೆ ನಿಜವಾಗಿ ಹೇಳುತ್ತೇನೆ, ಬೊಕ್ಕಸದಲ್ಲಿ ಹಾಕಿದವರೆಲ್ಲರಲ್ಲಿ ಈ ಬಡ ವಿಧವೆ ಹೆಚ್ಚು ಹಾಕಿದ್ದಾಳೆ. ಹೇಗಂದರೆ ಎಲ್ಲರು ತಮಗೆ ಸಾಕಾಗಿ ಮಿಕ್ಕದ್ದರಲ್ಲಿ ಹಾಕಿದರು; ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದದ್ದನ್ನೆಲ್ಲಾ ಹಾಕಿದಳು, ತನ್ನ ಜೀವವನ್ನೇ ಕೊಟ್ಟುಬಿಟ್ಟಳು ಅಂದನು.

## ಲೂಕ 20:41 ರಿಂದ 21:4

ಆಗ ಆತನು-ಬರಬೇಕಾದ ಕ್ರಿಸ್ತನು ದಾವೀದನ ಮಗನೆಂದು ಹೇಳುತ್ತಾರಲ್ಲಾ, ಅದು ಹೇಗಾದೀತು? ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದಾಗಿ ಕೀರ್ತನಗ್ರಂಥದಲ್ಲಿ ದಾವೀದನೇ ಹೇಳುತ್ತಾನಷ್ಟೆ. ದಾವೀದನು ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗನಾಗುವದು ಹೇಗೆ ಎಂದು ಅವರನ್ನು ಕೇಳಿದನು.

ಜನರೆಲ್ಲರು ಕೇಳುತ್ತಿರುವಲ್ಲಿ ಆತನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ-ಶಾಸ್ತ್ರಿಗಳ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ. ಅವರು ನಿಲುವಂಗಿಗಳನ್ನು ತೊಟ್ಟುಕೊಂಡು ತಿರುಗಾಡುವದರಲ್ಲಿ ಮನಸ್ಸುಳ್ಳವರೂ, ಅಂಗಡಿಬೀದಿಗಳಲ್ಲಿ ನಮಸ್ಕಾರಗಳು, ಸಭಾಮಂದಿಗಳಲ್ಲಿ ಮುಖ್ಯ ಪೀಠಗಳು, ಔತಣಪ್ರಸ್ತಗಳಲ್ಲಿ ಪ್ರಥಮಸ್ಥಾನ, ಇವುಗಳಲ್ಲಿ ಇಷ್ಟವುಳ್ಳವರೂ ಆಗಿದ್ದಾರೆ. ಅವರು ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುತ್ತಾರೆ; ಇಂಥವರು ಹೆಚ್ಚಾದ ದಂಡನೆಯನ್ನು ಹೊಂದುವರು ಅಂದನು.

# ಶ್ರೇಷ್ಠವಾದ ಆಜ್ಞೆಗಳು

**ರೀಪ್ರಿಂಟ್ಸ್ ಪುಟ 5521**

## ಮಾರ್ಕ 11:28-44

**"ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನ್ನು ನಿನ್ನಂತೆಯೇ ಪ್ರೀತಿಸಬೇಕು." – ಲೂಕ 10:27**

ಪ್ರಶ್ನೆಗಳನ್ನು ಕೇಳಿದ ದಿನದಲ್ಲಿ ಧರ್ಮಶಾಸ್ತ್ರ ಪಂಡಿತರುಗಳು ನಮ್ಮ ಕರ್ತನನ್ನು ಸಿಕ್ಕಿಸಿಕೊಳ್ಳಲು ಯತ್ನಿಸುವಾಗ ಹಲವು ಪ್ರಶ್ನೆಗಳು ಕೇಳಲ್ಪಟ್ಟಿದ್ದವು. ಒಂದು ವಾರದ ಹಿಂದೆ ನಾವು ಒಂದನ್ನು ಪರಿಗಣಿಸಿದ್ದೆವು. ಕಡೆಯ ಪ್ರಶ್ನೆಯ ವಿಷಯವಾಗಿ ಇಂದಿನ ಪಾಠವು ರಚಿತವಾಗಿರುವದು. ಸಾಮಾನ್ಯರಿಗಿಂತ ಹೆಚ್ಚು ವಿದ್ಯಾಭ್ಯಾಸ ಮಾಡಿರುವ ಒಬ್ಬ ಶಾಸ್ತ್ರಿಯು ಮಂಡಿಸಲಾದ ಹಲವಾರು ಪ್ರಶ್ನೆಗಳನ್ನು ಕೇಳಿದ್ದವನಾಗಿ ನಮ್ಮ ಕರ್ತನು ಅವುಗಳನ್ನು ಎಷ್ಟು ಚೆನ್ನಾಗಿ ಉತ್ತರಿಸಿದ್ದನೆಂಬುದನ್ನು ಗ್ರಹಿಸಿಕೊಂಡಿದ್ದನು. ಆನಂತರ ಒಂದು ಪ್ರಶ್ನೆಯನ್ನು ಕೇಳಲು ಯತ್ನಿಸಿದ್ದನು. ಆತನು ಯೇಸುವನ್ನು ಸಿಕ್ಕಿಸುವ ಉದ್ದೇಶವಿಲ್ಲದೆ, ಸಂಪೂರ್ಣವಾದ ಪ್ರಾಮಾಣಿಕತೆಯಿಂದ ಮಾಡಿರುವ ಸಂಭವವು ಹೆಚ್ಚಾಗಿತ್ತು. ಆತನು ನಿಸ್ಸಂದೇಹವಾಗಿ ದಶಾಜ್ಞೆಗಳನ್ನು

ಉಲ್ಲೇಖಿಸುವವನಾಗಿ ಕೇಳಿದ್ದು, "ಆಜ್ಞೆಗಳಲ್ಲೆಲ್ಲಾ ಮುಖ್ಯ-ವಾದುದು ಯಾವದು?" ಯೇಸುವು ಉತ್ತರವಾಗಿ ಹೇಳಿದ್ದೇನಂದರೆ, ಆಜ್ಞೆಗಳಲ್ಲೆಲ್ಲಾ ಮೊದಲನೆಯದು ಹಾಗು ಮುಖ್ಯವಾದುದು: "ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ."

ನಮ್ಮ ಕರ್ತನು ಇಲ್ಲಿ ಹಳೆ ಒಡಂಬಡಿಕೆಯ ಒಂದು ವಾಕ್ಯಭಾಗವನ್ನು (ಧರ್ಮೋಪದೇಶಕಾಂಡ 6:4,5) ಉಲ್ಲೇಖಿಸಿ ಹೇಳಿದ್ದನು. ಈ ವಿವರಣೆಯು ಎಂಥಾ ವಿಶಾಲ ಅರ್ಥವ್ಯಾಪ್ತಿ-ಯುಳ್ಳದ್ದು! ಈ ದಿನದಲ್ಲೂ, ಅಂದರೆ ನೂರಾರು ವರುಷಗಳ ನಂತರವೂ, ಈ ವಾಕ್ಯಭಾಗದಲ್ಲಿನ ಭವ್ಯವಾದ ಸತ್ಯಾರ್ಥವನ್ನು ಹೆಚ್ಚು ಅರ್ಥಪೂರ್ಣವಾಗಿ ಸಂಕ್ಷೇಪಿಸಿ ಹೇಳಲು ಯಾರಿಗೆ ತಾನೇ ಸಾಧ್ಯ? ಮೊದಲನೇ ಸಾರಿ ಈ ಹೇಳಿಕೆಯು ನೀಡಲ್ಪಟ್ಟಾಗ ಪರಲೋಕದಿಂದಾದ ಜ್ಞಾನವು ತೋರ್ಪಡಲಾಗಿತ್ತು. ನಮ್ಮ ಕರ್ತನು ಇದನ್ನು ಉಲ್ಲೇಖಿಸಿದ್ದರಲ್ಲಿ ಪರಲೋಕದಿಂದಾದ ಅದೇ ಜ್ಞಾನವು ತೋರ್ಪಡಿಸಲಾಗಿರುವದು. ಆತನು ಯಾವುದನ್ನೂ ಕೂಡಿಸಿ ಹೇಳಿರಲ್ಲಿಲ್ಲ, ಯಾಕಂದರೆ ಅದಕ್ಕೆ ಯಾವುದನ್ನು ಕೂಡಿಸಲು ಸಾಧ್ಯವಿರಲಿಲ್ಲ.

ಮೇಲಾಗಿ, ನಾವು ಅನುದಿನವೂ ಈ ವಿವರಣೆಯಲ್ಲಿನ ಪ್ರಭಾವವನ್ನು ಹೆಚ್ಚು ಸ್ಪಷ್ಟವಾಗಿ ಕಾಣುತ್ತಲಿದ್ದೇವೆ; ಅದೇನಂದರೆ ಪ್ರೀತಿಯೇ. ಪ್ರೀತಿಯು ಪ್ರಮುಖವಾದ ಅಂಶ! ಗತಿಸಿಹೋದ ಕಾಲಗಳಲ್ಲಿ ಅನೇಕರು ಪ್ರತಿಪಾದಿಸುತ್ತಿದ್ದ ನಂಬಿಕೆಯ ಸೂತ್ರದ ಅನುಸಾರ ಈ ವಿವರಣೆಯನ್ನು ಮಾರ್ಪಡಿಸಿರಬಹುದು; ಇದರ ಅನುಸಾರವಾಗಿ ನಾವು ಭಯಭೀತಿಯಿಂದ ನಡುಗುವವರಾಗಿ ಇದನ್ನು ಓದಿಕೊಳ್ಳಬೇಕಿತ್ತು. ಕಾರಣ ವಿಶ್ವವನ್ನು ಉಂಟು ಮಾಡಿರುವ ಸರ್ವಶಕ್ತನಾದ ದೇವರ ಬಗ್ಗೆ ನಮಗೆ ಹೇಳಲಾಗಿದ್ದೇನಂದರೆ ಆತನು ಮನುಷ್ಯರನ್ನು ಉಂಟುಮಾಡುವ ಮೊದಲೇ ನರಕವೆಂಬ ಮಹಾ ಯಾತನಾಸ್ಥಳವನ್ನು ಸಿದ್ಧಪಡಿಸಿದ್ದು ಅದರಲ್ಲಿ ಮಾನವಕುಲದ ಬಹು ದೊಡ್ಡಪಾಲಿನ ಜನರು ನಿರಂತರವಾಗಿ ಯಾತನೆಪಡಬೇಕೆಂದು ಉದ್ದೇಶಿಸಿದ್ದನು. ಆದರೆ ಹೀಗೆಂದು ನಂಬಿಕೆಯ ಸೂತ್ರಗಳಲ್ಲಿತ್ತು. ಸತ್ಯವೇದವು ಮಾನುಷ ಕಲ್ಪಿತ ನಂಬಿಕೆಯ ಸೂತ್ರಗಳಿಂದ ಹಾಗೂ ಮೂಢನಂಬಿಕೆಗಳಿಂದ ವಿಭಿನ್ನವಾಗಿದ್ದು ಅದು ನಮಗೆ ಹೇಳುವದೇನಂದರೆ ದೇವರು ಪ್ರೀತಿಸ್ವರೂಪಿ, ಆತನು ಕರುಣೆ ಮತ್ತು ಬೆಳಕಿಗೆ ಮೂಲನು, ಆತನ ಮೂಲಕವಾಗಿಯೇ ಎಲ್ಲಾ ಒಳ್ಳೆಯ ಹಾಗು ಕುಂದಿಲ್ಲದ ವರದಾನಗಳು ಇಳಿದು ಬರುವದೆಂಬದೇ.

ದೇವರು ದಯಪಾಲಿಸುವ ಪಾಪಕ್ಷಮೆಯ ವಿಷಯ-ವಾಗಿಯೂ ಸಹ ಸತ್ಯವೇದವು ನಮಗೆ ತಿಳಿಸುತ್ತದೆ, ಅದನ್ನು ಜಗದುತ್ಪತ್ತಿಗೆ ಮೊದಲೇ ಕ್ರಿಸ್ತನ ಅಮೂಲ್ಯವಾದ ರಕ್ತದ ಮುಖಾಂತರವಾಗಿ ದೇವರಿಂದ ಏರ್ಪಡಿಸಲಾಗಿರುವದು. ಅದು ನಮಗೆ ಇನ್ನೂ ತಿಳಿಸುವದೇನಂದರೆ ಈ ಪಾಪಕ್ಷಮೆಯು ಈಗ ಲೋಕದೊಳಗಿಂದ ಕರೆಯಲ್ಪಡುತ್ತಿರುವ ಕೇವಲ ಬೆರಳೆಣಿಕೆ-ಯಷ್ಟಿರುವ ಕ್ರೈಸ್ತಸಭೆಗೆ ಅಂದರೆ ಆದುಕೊಳ್ಳಲ್ಪಟ್ಟವರಿಗೆ ಮಾತ್ರ ಸೀಮಿತವಾಗಿರುವದಿಲ್ಲ; ಆದರೆ ಅಂತಿಮವಾಗಿ ದೇವರ ಪ್ರೀತಿಯು ಆತನ ಸೃಷ್ಟಿಗಳೆಲ್ಲರಿಗೆ ತೋರ್ಪಡಿಸಲಾಗುವದು. ಅವರು ನಿಗದಿತ ಕಾಲದಲ್ಲಿ ಪ್ರೀತಿಯ ವಿಷಯವಾದ ಪರಿಜ್ಞಾನವನ್ನು ಪಡಕೊಂಡ ವರಾಗಿ ಪಾಪವನ್ನು ತೊಡೆದುಹಾಕಿ ದೇವರು ಮಾಡಿರುವ ಏರ್ಪಾಡುಗಳನ್ನು ಅಂಗೀಕರಿಸಿಕೊಳ್ಳುವದಕ್ಕೆ ಪ್ರತಿಯಾಗಿ ಮೆಸ್ಸೀಯನ ರಾಜ್ಯದ ಮೂಲಕವಾಗಿ ಮೂಲಪಿತೃವಾದ ಆದಾಮನ ಅವಿಧೇಯತೆಯ ದೆಸೆಯಿಂದ ಕಳಕೊಂಡಂಥ ಮಾನಸಿಕ ನೈತಿಕ ಹಾಗು ಶಾರೀರಿಕವಾದ ವಿಶೇಷ ಪುನರುದ್ಧಾರ ಸಂಬಂದದ ಆಶೀರ್ವಾದಗಳನ್ನು ಮತ್ತೆ ಪಡಕೊಳ್ಳುವರು.

## ಎರಡನೇ ಆಜ್ಞೆ

ಯೇಸು ಮುಂದುವರೆದು ನಿಸ್ಸಂದೇಹವಾಗಿ ಪ್ರಕಟಮಾಡಿ ಹೇಳಿದ್ದೇನಂದರೆ ಈ ಮೊದಲನೆಯದಕ್ಕೆ ಸಂಬಂಧಿಸಿದಂತೆ ಎರಡನೆಯ ಆಜ್ಞೆಯೂ ಇರುವದು; ಅದೇನಂದರೆ: "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು." ಎಂಬುದು. ಅತ್ಯಲ್ಪವಾದ ಮಾತಿನಲ್ಲಿ ಎಷ್ಟೊಂದು ವಿಷಯವನ್ನು ಹೇಳಿರುವದಕ್ಕೆ ನಾವೆಲ್ಲರೂ ಮತ್ತೆ ಆಶ್ಚರ್ಯಚಕಿತರಾಗುವೆವು. ಅನೇಕ ಗ್ರಂಥಗಳು ಹಿಡಿಯುವಷ್ಟು ಬರೆಯಲ್ಪಟ್ಟರೂ ಅದೂ ಬಹು ಅಲ್ಪವೇ. ಸತ್ಯವೇದವನ್ನು ಬಿಟ್ಟರೆ ಬೇರೆ ಯಾವ ಧರ್ಮವೂ ತನ್ನ ಸೃಷ್ಟಿಗಳ ಹಿತಕ್ಕಾಗಿ ಪ್ರೀತಿಪೂರ್ವಕವಾದ ಏರ್ಪಾಟುಗಳನ್ನು ಮಾಡಿರುವಂಥ ದಯೆಕರುಣೆಗಳುಳ್ಳ ಇಂಥಾ ಒಬ್ಬ ದೇವರ ವಿಷಯವಾಗಿ ಪ್ರಕಟಮಾಡಿ ಹೇಳುವದಿಲ್ಲ. ಇತರ ಯಾವ ಧರ್ಮವೂ ಪ್ರೀತಿಯ ಪ್ರತಿಫಲದ ಬಗ್ಗೆ ಯಾವ ಸುಳಿವನ್ನೂ ಸಹ ನೀಡುವದಿಲ್ಲ. ಬೇರೆ ಯಾವ ಧರ್ಮವೂ ನಮ್ಮ ಸಹಜೀವಿಗಳಾದ ಮಾನವರೊಡನೆಯ ಅತ್ಯುನ್ನತ ಮಟ್ಟದ ನಡವಳಿಕೆ ಬಗ್ಗೆ ಸಲಹೆಯನ್ನಾದರೂ ನೀಡುವದಿಲ್ಲ.

ಸುಮಾರು ನಾಲ್ಕು ಸಾವಿರ ವರುಷಗಳಷ್ಟು ಹಳೆಯದಾದ ದೇವರ ಈ ನಿಯಮವು ಅನ್ಯಜನಾಂಗ ಹಾಗು ಅನ್ಯಜಾತಿಯ ವರಿಗೆ ಹೆಚ್ಚು ಕಡಿಮೆ ಯೆಹೂದ್ಯರ ಮೂಲಕವಾಗಿಯೇ ತಿಳಿಸಲ್ಪಟ್ಟಿರುವ ಸಂಭವವಿರುವದು. (ಧರ್ಮೋಪದೇಶಕಾಂಡ 4:6-8) ಆದರೆ ಅವರಲ್ಲಿ ಯಾರೂ ಅದರ ನಿಜಾಭಿಪ್ರಾಯವನ್ನು ಗ್ರಹಿಸಿಕೊಂಡಿರುವದಿಲ್ಲ. ಇದಕ್ಕೆ ಅತಿ ಸಮೀಪವಾದ ಭಾವಾರ್ಥವನ್ನು ಕನ್ಫೂಷಿಯಸ್ಸನ ಬರವಣಿಗೆಗಳಲ್ಲಿ ನಾವು ಕಂಡುಕೊಳ್ಳುವ ಸಂಭವವಿರುವದು; ಅದೇನಂದರೆ ಬೇರೆಯವರು ತನಗೆ ಏನು ಮಾಡಬಾರದೆಂದು ತಾನು ಬಯಸುವನೋ ಅದನ್ನು ತಾನು ಬೇರೆಯವರಿಗೂ ಮಾಡಬಾರದೆಂಬದು. ಆದರೆ ಓಹ್! ಅದೆಂಥಾ ವೈವಿಧ್ಯತೆ! ಕೇವಲ ನಕಾರಾತ್ಮಕವಾದ ಒಂದು ಹೇಳಿಕೆ; ಮತ್ತೊಂದು ಸಕಾರಾತ್ಮಕವಾದದ್ದು, ಅದೇನಂದರೆ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು." ಎಂಬುದೇ.

ನಿಜವಾಗಿಯೂ ದೇವರ ವಿಧಿನಿಯಮದ ಬಗ್ಗೆ ಕೆಲವೊಂದು ಸಂಗತಿಗಳಿರುವದು, ಅವುಗಳು ಇದನ್ನು ದೇವರಿಂದುಂಟಾ-ದುದೆಂಬುದನ್ನು ಸಾಬೀತುಪಡಿಸುವದು. ತನ್ನಲ್ಲಿರುವ ಎಲ್ಲಾ

ಬಗೆಯ ಮುಳ್ಳುಗಳು ಮುಳ್ಳುಗಿಡಗಳು ಹಾಗು ಸಂಕಷ್ಟಗಳಿಂದ ಕೂಡಿದ ಲೋಕದಲ್ಲಿ ಮನುಷ್ಯರಲ್ಲಿ ಪ್ರತಿಯೊಬ್ಬನೂ ಪರಲೋಕದ ತಂದೆಯನ್ನು ಉತ್ಕೃಷ್ಟವಾಗಿ ಪ್ರೀತಿಸುವವನಾಗಿ ಆತನನ್ನು ಪೂರ್ಣ ಶಕ್ತಿ ಹಾಗು ಸಾಮರ್ಥ್ಯದಿಂದ ಸೇವೆಮಾಡುವ – ವನಾಗಿದ್ದು ತನ್ನ ನೆರೆಯವನನ್ನು ತನ್ನಂತೆಯೇ ಪ್ರೀತಿಸಿ ತನಗೆ ದೊರೆತ ಸಂದರ್ಭಾನುಸಾರ ಆ ನೆರೆಯವನಿಗೆ ಸೇವೆಮಾಡಲು ಬಯಸಬೇಕೆಂಬ ಕೇವಲ ಈ ಎರಡು ಭವ್ಯವಾದ ಆಜ್ಞೆಗಳ ಅನುಸಾರವಾಗಿ ಜೀವಿಸ ಮನಸ್ಸುಳ್ಳವರೂ ಅದಕ್ಕೆ ಸಮರ್ಥರೂ ಆಗಿದ್ದಲ್ಲಿ ಅದು ಎಷ್ಟೋ ಸೊಗಸಾಗಿರುವದು! ಅದು ಪರದೈಸಾಗುವದು. ಮೆಸ್ಸೀಯನ ರಾಜ್ಯವು ಸ್ಥಾಪನೆಗೊಂಡಾಗ ಲೋಕವು ಇನ್ನು ಮುಂದೆ ಕೇವಲ ಹೀಗೆಯೇ ಇರುವದು ಎಂಬದನ್ನೇ ನಮಗೆ ಭರವಸೆ ನೀಡಲಾಗಿರುವದು. ಇದಕ್ಕಾಗಿ ದೇವರಿಗೆ ಸ್ತೋತ್ರ.

ಆದಾಮನ ಪಾಪವನ್ನು ಸರಿದೂಗಿ ಪರಿಹರಿಸುವದಕ್ಕಾಗಿ ಕ್ರಿಸ್ತನ ಮರಣವನ್ನು ಒದಗಿಸಿರುವ ದೈವೀಕ ಏರ್ಪಾಟು ಪಾಪಮರಣಗಳ ಆಳ್ವಿಕೆಯನ್ನು ಸರಿದೂಗಿ ಕೊನೆಗೊಳಿಸಲು ಕ್ರಿಸ್ತನ ಆಳ್ವಿಕೆಯನ್ನು ಸಹ ಒದಗಿಸಿರುವದು. ಅಲ್ಲದೆ ಅಂತಿಮವಾಗಿ ನೀತಿಸತ್ಯತೆಯನ್ನು ಬಯಸುವವರೆಲ್ಲರೂ ಆಶೀರ್ವದಿಸಲ್ಪಟ್ಟು ಪರಿಪೂರ್ಣರನ್ನಾಗಿಸಿ ಅವರಿಗೆ ನಿತ್ಯಜೀವವನ್ನು ದೊರಕಿಸ ಲಾಗುವದೆಂದು ದೇವರ ವಾಗ್ದಾನವು ನಮಗೆ ಭರವಸೆಯನ್ನು ಸಹ ನೀಡಿರುವದು. ಸಾವಿರ ವರುಷದ ಮೆಸ್ಸೀಯನ ಆಳ್ವಿಕೆಯಲ್ಲಿ ದೇವರ ಪಾದಪೀಠವಾದ ಭೂಲೋಕವು ಮಹಿಮೆಹೊಂದುವಂತೆ ಮಾಡಲಾಗುವದೆಂದು ಅದು ನಮಗೆ ಭರವಸೆ ಸಹ ನೀಡಿರುವದು; ಕಡೆಯಲ್ಲಿ ನೀತಿಯಲ್ಲಿ ಅಭಿವೃದ್ಧಿಯಾಗಲು ನಿರಾಕರಿಸುವಂಥ ಪಾಪಪ್ರಿಯರೆಲ್ಲರನ್ನು ಮನುಷ್ಯರೊಳಗಿಂದ ಎರಡನೇ ಮರಣದಲ್ಲಿ ನಾಶಮಾಡಲಾಗುವದು. ಹೀಗೆ: "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ;" ಎಂದು ನಾವು ಬಹುಕಾಲದಿಂದ ಪ್ರಾರ್ಥಿಸುತ್ತಿರುವ ಸಂತೋಷಪೂರ್ಣವಾದ ದಿನವು ಉದಯಿಸುವದು. ಆಗ ಎಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಅರಿಕೆ–ಮಾಡುವರು." ಎಂಬ ವಾಗ್ದಾನವು ನೆರವೇರಲಾಗುದು. ಅಲ್ಲದೆ ಆನಂತರ ಭೋಲೋಕವೆಲ್ಲಾ ದೇವರ ಮಹಿಮೆಯಿಂದ ತುಂಬಿರುವದು.

## "ದೇವರ ರಾಜ್ಯಕ್ಕೆ ದೂರವಾದವನಲ್ಲ"

ಆ ಶಾಸ್ತ್ರಿಯು ಮನವರಿಕೆಮಾಡಿಕೊಂಡವನಾಗಿ ಯೇಸುವಿನ ಉತ್ತರದಲ್ಲಿನ ಸತ್ಯತೆಯನ್ನು ಒಪ್ಪಿಕೊಂಡಿದ್ದನು. ಆತನು ಹೇಳಿದ್ದು: "ಬೋಧಕನೇ, ಚೆನ್ನಾಗಿ ಹೇಳಿದೆ; ಒಬ್ಬನೇ ಇದ್ದಾನೆ, "ಆತನ ಹೊರತು ಮತ್ತೊಬ್ಬ ದೇವರಿಲ್ಲ ಎಂದು ನೀನು ಹೇಳಿದ್ದು ಸತ್ಯ. ಆತನನ್ನು ಪೂರ್ಣಮನಸ್ಸಿನಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ ನೆರೆಯವನನ್ನು ಪ್ರೀತಿಸುವದು ಇವೆರಡೂ ಎಲ್ಲಾ ಸರ್ವಾಂಗಹೋಮಗಳಿಗಿಂತಲೂ ಎಲ್ಲ ಯಜ್ಞಗಳಿಗಿಂತಲೂ ಹೆಚ್ಚಿನವು ಅಂದನು.

"ಅವನು ಬುದ್ಧಿಯಿಂದ ಉತ್ತರ ಕೊಟ್ಟದ್ದನು ಯೇಸು ಕಂಡು–ನೀನು ದೇವರ ರಾಜ್ಯಕ್ಕೆ ದೂರವಾದವನಲ್ಲ" ಅಂದನು. ಒಡೆಯನ ಈ ಮಾತಿನ ಅರ್ಥವೇನಾಗಿತ್ತೆಂದರೆ ಆ ಶಾಸ್ತ್ರಿಯು ತನ್ನ ಶಿಷ್ಯರಲ್ಲಿ ಒಬ್ಬನಾಗುವದಕ್ಕೆ ಅಂದರೆ ಆ ರಾಜ್ಯವನ್ನು ನಿರೀಕ್ಷಿಸುವನಾಗಿ, ಅದಕ್ಕಾಗಿ ಸಿದ್ಧವಾಗುತ್ತಾ ಕಾದುಕೊಂಡಿರು ವವರಲ್ಲಿ ಒಬ್ಬನಾಗುವದಕ್ಕೆ, ಆತನು ಬಹು ಸಮೀಪದಲ್ಲಿರುವ – ನೆಂಬುದು. ಕಪಟವಿಲ್ಲದವನಾಗಿರುವ ಇಂಥಾ "ನಿಜವಾದ ಇಸ್ರಾಯೇಲ್ಯನನ್ನೇ" ಯೇಸುವು ಯೆಹೂದ್ಯ ಜನರೊಳಗಿಂದ ವಿಶೇಷವಾಗಿ ಆದುಕೊಂಡು ಇವರ ಮೂಲಕವಾಗಿ ಅನ್ಯಜನರಿಗೆ (ದೇವರ) ರಾಜ್ಯದ ಸೌಭಾಗ್ಯಗಳ ಬಾಗಿಲನ್ನು ತೆರೆಯಲು ಸಿದ್ಧತೆಮಾಡಿಕೊಳ್ಳ ಬಯಸುತ್ತಿದ್ದನು. ಮೆಸ್ಸೀಯನು ತಾನು ಬರುವಾಗ ಆ ರಾಜ್ಯಕ್ಕೆ ಸೇರುವಂಥ ಒಂದು ವರ್ಗದ ಜನರನ್ನು ಆದುಕೊಂಡು ಅವರಿಗೆ ದೈವೀಕ ಅಧಿಕಾರಬಲಗಳನ್ನು ದಯಪಾಲಿಸುವನೆಂಬುದನ್ನು ಯೆಹೂದ್ಯರು ಅರ್ಥಮಾಡಿ ಕೊಂಡಿದ್ದರು. ಯೇಸುವು ಮಾಡುತ್ತಿದ್ದುದು ಕೇವಲ ಇದನ್ನೇ. ಆತನ ನುಡಿಗಳು, ಆತನ ಬೋಧನೆಗಳು ಕೆಲವರನ್ನು ಎಳಕೊಳ್ಳುತ್ತಿದ್ದು ಮತ್ತೆ ಇತರರನ್ನು ಹಿಮ್ಮೆಟ್ಟಿಸುತ್ತಿತ್ತು.

ಯಥಾರ್ಥರೆಲ್ಲರೂ, ಪ್ರಾಮಾಣಿಕ ಹೃದಯಿಗಳೆಲ್ಲರೂ ಯವನಸ್ಥನಾದ ಈ ಶಾಸ್ತ್ರಿಯಂತೆ ಆ ರಾಜ್ಯಕ್ಕೆ ಬಹು ದೂರದವರಾಗಿರಲಿಲ್ಲ. ಅವರ ಯಥಾರ್ಥತೆ ಹಾಗೂ ಪ್ರಮಾಣಿಕತೆಗಳು ಅವರನ್ನು ತಂದೆಯ ಚಿತ್ತವನ್ನು ತಿಳಿಕೊಂಡು ಅದನ್ನು ನೆರವೇರಿಸಲು ಆಸಕ್ತರಾಗುವಂತೆ ನಡೆಸಿದ್ದಲ್ಲಿ ಅವರು ಆಶೀರ್ವದಿತರಾಗುವರು; ಏಕೆಂದರೆ "ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತಮಿತ್ರನಂತಿರುವನು; ಅವರಿಗೇ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು."

## ದೇವರು ಹೃದಯವನ್ನು ನೋಡುವನು

ಯೆರೂಸಲೇಮಿನ ದೇವಾಲಯವು ಇನ್ನೂ ಹೊಸದಾಗಿದ್ದು ಅದರ ನಿರ್ವಹಣೆಗೆ ಹಣ ಮುಂತಾದವುಗಳ ಅಗತ್ಯವಿತ್ತು. ಜನರು ಹಣವನ್ನು ವಂತಿಗೆಯಾಗಿ ಕೊಡುವ ಸೌಭಾಗ್ಯವನ್ನು ಪಡೆದಿದ್ದು–ದಲ್ಲದೆ ಮನಸ್ಸೋ ಇಚ್ಛೆಯಿಂದ ಅದನ್ನು ಮಾಡುತ್ತಿದ್ದುದು ಸ್ಪಷ್ಟವಾಗಿತ್ತು. ಹೀಗಿದ್ದರೂ ಹಿರಿಯರು ಹಾಕಿಕೊಟ್ಟ ಸಂಪ್ರದಾಯದ ನಿಮಿತ್ತವಾಗಿ ಇಲ್ಲವೇ, ಮತ್ತೊಂದು ವಿಧದಲ್ಲಿ ಹೇಳುವದಾದರೆ, ತಮ್ಮ ಪೂರ್ವಿಕರ ಬೋಧನೆಯ ದೆಸೆಯಿಂದ ಬಹುತೇಕ ದಾರಿತಪ್ಪಿದವರಾದರೂ, ಹಾಗೂ ಕುರುಡರಾದ ತಮ್ಮ ಧರ್ಮಶಾಸ್ತ್ರ ಪಂಡಿತರುಗಳ ತಪ್ಪಾದ ಮಾರ್ಗದರ್ಶನಗಳ ಕಾರಣದಿಂದ ಎಷ್ಟೇ ಗೊಂದಲಕ್ಕೀಡಾಗಿದ್ದರೂ ಅವರು ದೇವರನ್ನು ಆರಾಧಿಸಿ ಆತನ ಸೇವೆಮಾಡಲು ಬಯಸುತ್ತಿದ್ದರು. ಇದು ಅವರು ತಮ್ಮ ಹಣವನ್ನು ತಂದು ದೇವಾಲಯದ ಬಾಗಲಿನ ಹತ್ತಿರವಿದ್ದ ಕಾಣಿಕೆ ಪೆಟ್ಟಿಗೆಯಲ್ಲಿ ಹಾಕಲು ಸಿದ್ಧವಾಗಿರುವದರ ಮೂಲಕವಾಗಿ ತೋರ್ಪಡಲಾಗುತ್ತಿತ್ತು.

ಯೇಸುವು ಈ ಕಾಣಿಕೆ ಪೆಟ್ಟಿಗೆಗಳ ಎದುರಿನಲ್ಲಿ ಕೂತುಕೊಂಡವನಾಗಿ ಹೇಗೆ ಎಲ್ಲಾ ವರ್ಗದ ಜನರು ಕಾಣಿಕೆ

ಹಾಕುತ್ತಿದ್ದರೆಂಬುದನ್ನು ಅಂದರೆ ಐಶ್ವರ್ಯವಂತರು ತಮಗೆ ಸಾಕಾಗಿ ಮಿಕ್ಕದ್ದರಲ್ಲಿ ಹಾಗು ಬಡವರು ತಮ್ಮ ಕೊರತೆಯಲ್ಲಿಯೂ ಕೊಡುತ್ತಿದ್ದುದ್ದನ್ನು ಗಮನಿಸುತ್ತಿದ್ದನು. ಅಲ್ಲಿಗೆ ಒಬ್ಬ ಬಡ ವಿಧವೆಯು ಬಂದಿದ್ದು ಆಕೆ ಎರಡು ದುಗ್ಗಾಣಿಗಳನ್ನು ಅಂದರೆ ಅಂದು ಚಲಾವಣೆಯಲ್ಲಿದ್ದ ಅತಿ ಸಣ್ಣದಾದ ಎರಡು ತಾಮ್ರದ ನಾಣ್ಯಗಳನ್ನು ಹಾಕಿದ್ದಳು; ಆ ಪ್ರತಿಯೊಂದು ನಾಣ್ಯದ ಬೆಲೆಯು ಸುಮಾರು (ಅಮೇರಿಕ ದೇಶದ) ಒಂದು ಸೆಂಟಿನ ಎಂಟನೇಯ ಒಂದು ಭಾಗವಾಗಿತ್ತು. ಆಕೆಯು ಅವುಗಳನ್ನು ಡಂಬದಿಂದ ಹಾಕಿದ್ದಳೆಂದು ಭಾವಿಸುವ ಅಗತ್ಯವಿರುವದಿಲ್ಲ; ಏಕೆಂದರೆ ಆ ನಾಣ್ಯಗಳು ಬಹು ಸಣ್ಣದಿದ್ದು ಅದರಿಂದ ಹೊಗಳಿಕೊಳ್ಳು-ವಂತಿರಲಿಲ್ಲ. ಯೇಸುವಿಗೆ ದೈವಿಕ ಶಕ್ತಿಯ ಮೂಲಕವಾಗಿ ಆ ಸ್ತ್ರೀಯ ಹಾಗು ಆಕೆಯ ಸನ್ನಿವೇಶಗಳ ಮತ್ತು ಆಕೆಯು ಹಾಕಿದ ಕಾಣಿಕೆಯ ಮೊತ್ತದ ಬಗ್ಗೆ ತಿಳಿದಿತ್ತೆಂಬುದಾಗಿ ನಾವು ಭಾವಿಸುವೆವು. ಆತನು ಇದನ್ನು ಅಪೋಸ್ತಲರಿಗೆ ಒಂದು ಸಣ್ಣ ಉಪದೇಶಮಾಡಲು ಪಠ್ಯವಿಷಯವನ್ನಾಗಿ ಮಾಡಿಕೊಂಡಿದ್ದನು. ಕಾಣುವಷ್ಟು ಹತ್ತಿರದಲ್ಲಿದ್ದ ಆ ಬಡ ವಿಧವೆಯು ದೇವರ ದೃಷ್ಟಿಯಲ್ಲಿ ಅಲ್ಲಿ ಹಣವನ್ನು ಹಾಕಿದ್ದ ಎಲ್ಲರಿಗಿಂತಲೂ ಬಹು ಹೆಚ್ಚು ಹಾಕಿದ್ದಾಳೆಂದು ಪ್ರಕಟಮಾಡಿ ಹೇಳಿದ್ದನು. ಅವರು ಆಶ್ಚರ್ಯಪಡುತ್ತಿರಲು ಆಕೆಯು ಕಾರ್ಯತಃ ತನಗೆ ಇರುವದೆಲ್ಲವನ್ನೂ ಅಂದರೆ ತನ್ನ ಜೀವನವನ್ನೇ ಕೊಟ್ಟುಬಿಟ್ಟಿದ್ದ ಳೆಂಬುದನ್ನು ವಿವರಿಸಿ ಹೇಳಿದ್ದನು. ಇತರರು ತಮಗೆ ಸಾಕಾಗಿ ಮಿಕ್ಕಾದ್ದರಲ್ಲಿ ಕೊಟ್ಟರಲು ಈ ಮೂಲಕವಾಗಿ ತಮಗಾದ ನಷ್ಟದ ಪಾಲು ಗಂಭೀರವಾದುದೆಂಬದು ಬಹುಶಃ ಅವರಿಗೆ ಅನ್ನಿಸಿರಲಾರದು.

ಈ ಸಣ್ಣ ಘಟನೆಯು ಕರ್ತನಿಗೆ ತ್ಯಾಗ ಹಾಗು ಸೇವೆಯ ಬಗ್ಗೆ ಇರುವ ಮೆಚ್ಚುಗೆಯನ್ನು ನಮಗೆ ತೋರಿಸಿಕೊಡುವದು. ನಮ್ಮಲ್ಲಿ ಯಾರಾದರೂ ಮಾಡುವ ಇಲ್ಲವೇ ಮಾಡಲು ಯತ್ನಿಸುವ ದೊಡ್ಡ ಸಂಗತಿಗಳನ್ನಲ್ಲ ಕರ್ತನು ವಿಶೇಷವೆಂದು ಎಣಿಸುವದು. ನಮ್ಮ ಜೀವಿತದಲ್ಲಿನ ಬಹು ಸಣ್ಣ ಘಟನೆ, ಅತ್ಯಲ್ಪವಾದ ತ್ಯಾಗ, ತನ್ನನ್ನು ನಿರಾಕರಿಸಿಕೊಳ್ಳುವದರಲ್ಲಿ ಕಂಡುಬರುವ ಅತಿ ಸಣ್ಣ ಸಂಗತಿಗಳು ಲೋಕದ ದೃಷ್ಟಿಯಲ್ಲಿ ಏನೂ ಅಲ್ಲದಿದ್ದರೂ ಅವು ಕರ್ತನ ಹಾಗು ಆತನ ಕಾರ್ಯೋದ್ದೇಶಗಳ ಬಗ್ಗೆ ಪ್ರೀತಿ ಶ್ರದ್ಧೆ ಹಾಗು ಸ್ವಾರ್ಥ-ತ್ಯಾಗವನ್ನು ಸೂಚಿಸುವದಾದಲ್ಲಿ ಒಡೆಯನ ದೃಷ್ಟಿಯಲ್ಲಿ ಅವು ಮಹತ್ವವುಳ್ಳದ್ದಾಗಿರುವವು.

ಇದಲ್ಲದೆ ಆ ಸ್ತ್ರೀಯು ತನ್ನನ್ನು ತಿರಸ್ಕರಿಸಲಿರುವ ಒಂದು ಸಂಸ್ಥೆಗೆ ಹಣವನ್ನು ಕೊಡುತ್ತಿರುವಳೆಂದೂ ಹಾಗು ಆ ಸಂಸ್ಥೆಯು ಮುಂದುವರೆಯಲು ಯೋಗ್ಯವಲ್ಲದ ಕಾರಣದಿಂದ ಶೀಘ್ರದಲ್ಲೇ ನಾಶಮಾಡಲ್ಪಡುವದೆಂದು ಕರ್ತನು ತಿಳಿದಿದ್ದನು. ಆದರೆ ಇತರರ ಮನೋಸ್ಥಿತಿಯು ಏನೇ ಆಗಿದ್ದರೂ ನಮ್ಮ ಕರ್ತನು ಈ ಕಾಣಿಕೆ ನೀಡಿದಾಕೆಯ ಹೃದಯ ಹಾಗು ಈ ಕಾಣಿಕೆಯ ಉದ್ದೇಶವನ್ನು ನೋಡಿದ್ದನು. ಅದೇನಂದರೆ "ಈಕೆಯು ತನ್ನ ಕೈಲಾದುದನ್ನು ಮಾಡಿದ್ದಾಳೆ." ಈಕೆಯು ಅಂತಿಮವಾಗಿ ಒಬ್ಬ ಶಿಷ್ಯಳಾದಳೆಂಬು ದನ್ನು ನಾವು ತಿಳಿದುಕೊಳ್ಳಬೇಕಲ್ಲವೇ. ಇಂಥಾ ಸ್ವಾರ್ಥ ತ್ಯಾಗದ ಸಂಗತಿಯು ಮೂಲಕವಾಗಿಯೇ ಕರ್ತನು ಶಿಷ್ಯರನ್ನು ಮಾಡಿಕೊಳ್ಳುವದು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| -- | ಎಣ್ಣೆಮರಗಳ ಗುಡ್ಡ | ಯೆರೂಸಲೇಮಿನ ಪತನ, ಯೇಸುವಿನ ಪ್ರತ್ಯಕ್ಷತೆ, ಯುಗಾಂತ್ಯದ ಭವಿಷ್ಯನುಡಿ | 24: 1–51 | 13:1–37 | 21:5–38–44 | -- |
| -- | ಎಣ್ಣೆಮರಗಳ ಗುಡ್ಡ | ಹತ್ತು ಮಂದಿ ಕನ್ಯೆಯರು, ತಲಾಂತು, ಆಡು ಕುರಿಗಳ ನಿದರ್ಶನ | 25:1–46 | -- | -- | -- |

## ಮತ್ತಾಯ 24:1–51

ಆಮೇಲೆ ಯೇಸು ದೇವಾಲಯದಿಂದ ಹೊರಟು ಹೋಗುತ್ತಿರಲು ಆತನ ಶಿಷ್ಯರು ಆತನಿಗೆ ದೇವಾಲಯದ ಕಟ್ಟಣಗಳನ್ನು ತೋರಿಸುವದಕ್ಕೆ ಹತ್ತರಕ್ಕೆ ಬಂದರು. ಆಗ ಆತನು-ಇವುಗಳನ್ನೆಲ್ಲಾ ನೋಡುತ್ತೀರಲ್ಲವೇ, ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ, ಎಲ್ಲಾ ಕೆಡವಲ್ಪಡುವದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು.

ಬಳಿಕ ಆತನು ಎಣ್ಣೆಯ ಮರಗಳ ಗುಡ್ಡದ ಮೇಲೆ ಕೂತಿದ್ದಾಗ ಶಿಷ್ಯರು ಆತನ ಬಳಿಗೆ ಪ್ರತ್ಯೇಕವಾಗಿ ಬಂದು-ಅದು ಯಾವಾಗ ಆಗುವದು? ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ನಮಗೆ ಹೇಳು ಅನ್ನಲು ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನಂದರೆ-ಯಾರಾದರೂ ನಿಮ್ಮನ್ನು ಮೋಸಗೊಳಿಸಾರು ನೋಡಿಕೊಳ್ಳಿರಿ. ಯಾಕಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು-ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. ಇದಲ್ಲದೆ ಯುದ್ಧಗಳಾಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗಿರುವದು. ಕಳವಳಪಡದಂತೆ ನೋಡಿಕೊಳ್ಳಿರಿ; ಯಾಕಂದರೆ ಹಾಗಾಗುವದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ. ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ

ಏಳುವವು; ಮತ್ತು ಅಲ್ಲಲ್ಲಿ ಬರಗಳು ಬರುವವು; ಭೂಕಂಪಗಳು ಆಗುವವು; ಇವೆಲ್ಲಾ {ನೂತನ ಕಾಲವು ಹುಟ್ಟುವ} ಪ್ರಸವವೇದನೆಯ ಪ್ರಾರಂಭ. ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆ ಮಾಡುವರು. ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷಮಾಡುವರು. ಬಹು ಮಂದಿ ಸುಳ್ಳುಪ್ರವಾದಿಗಳು ಸಹ ಎದ್ದು ಅನೇಕರನ್ನು ಮೋಸಗೊಳಿಸುವರು. ಇದಲ್ಲದೆ ಅಧರ್ಮವು ಹೆಚ್ಚಾಗುವದರಿಂದ ಬಹು ಜನರ ಪ್ರೀತಿ ತಣ್ಣಗಾಗಿ ಹೋಗುವದು. ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು. ಇದಲ್ಲದೆ ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕ-ದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.

ಅದದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ; ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗೆ ಇರುವದನ್ನು ತೆಗೆದುಕೊಳ್ಳುವದಕ್ಕೆ ಇಳಿಯದೆ, ಹೊಲಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ. ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ. ಆಗ ಮಹಾ ಸಂಕಟವುಂಟಾಗು-ವದರಿಂದ ನಿಮ್ಮ ಪಲಾಯವು ಚಳಿಗಾಲದಲ್ಲಿಯಾಗಲಿ ಸಬ್ಬತ್ ದಿನದಲ್ಲಿಯಾಗಲೀ ಆಗಬಾರದೆಂದು ಪ್ರಾರ್ಥನೆ ಮಾಡಿರಿ. ಅಂಥಾ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವದಿಲ್ಲ. [ಕರ್ತನು] ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಅದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆಮಾಡುವನು. ಆಗ ಯಾರಾದರೂ ನಿಮಗೆ-ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ. ಸುಳ್ಳುಕ್ರಿಸ್ತರೂ ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದು-ಕೊಂಡವರನ್ನೂ ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. ಇಗೋ ನಿಮಗೆ ಮುಂದಾಗಿ ಹೇಳಿದ್ದೇನೆ. ಆದಕಾರಣ ಯಾರಾದರೂ ನಿಮಗೆ-ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟುಹೋಗಬೇಡಿರಿ; ಇಗೋ ಕೋಣೆಯಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ. ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು. ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು.

ಆ ದಿನಗಳ ಸಂಕಟವು ತೀರಿದಕೂಡಲೇ ಸೂರ್ಯನು ಕತ್ತಲಾಗಿಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯಕುಮಾರನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. ಮತ್ತು ಆತನು ತುತ್ತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯು ವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವರು.

ಅಂಜೂರದ ಮರದ ದೃಷ್ಟಾಂತದಿಂದ ಬುದ್ಧಿ ಕಲಿಯಿರಿ. ಅದರ ಕೊಂಬೆ ಇನ್ನೂ ಎಳೆಯದಾಗಿದ್ದು ಎಲೆ ಬಿಡುವಾಗ ಬೇಸಿಗೆಯು ಹತ್ತಿರವಾಯಿತೆಂದು ತಿಳುಕೊಳ್ಳುತ್ತೀರಲ್ಲಾ. ಹಾಗೆಯೇ ನೀವು ಸಹ ಇದನ್ನೆಲ್ಲಾ ನೋಡುವಾಗ ಆ ದಿನವು ಹತ್ತರವದೆ, ಬಾಗಿಲಲ್ಲೇ ಅದೆ ಎಂದು ತಿಳುಕೊಳ್ಳಿರಿ. ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು ಅಳಿದು ಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ.

ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೇ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು. ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವದು. ಹೇಗಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನು ಬಡಕೊಂಡು ಹೋಗುವ ತನಕ ಏನೂ ತಿಳಿಯದೇ ಇದ್ದರಲ್ಲಾ. ಅದರಂತೆ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವದು. ಆವಾಗ ಇಬ್ಬರು ಹೊಲದಲ್ಲಿರುವರು; ಒಬ್ಬನು ತೆಗೆದುಕೊಳ್ಳಲ್ಪಡುವನು, ಒಬ್ಬನು ಬಿಡಲ್ಪಡುವನು. ಇಬ್ಬರು ಹೆಂಗಸರು ಬೀಸುವ ಕಲ್ಲಿನ ಮುಂದೆ ಕೂತು ಬೀಸುತ್ತಿರುವರು; ಒಬ್ಬಳು ತೆಗೆದುಕೊಳ್ಳಲ್ಪಡುವಳು, ಒಬ್ಬಳು ಬಿಡಲ್ಪಡುವಳು.

ಹೀಗಿರಲಾಗಿ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದುದರಿಂದ ಎಚ್ಚರವಾಗಿರ್ರಿ. ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರವಾಗಿದ್ದು ತನ್ನ ಮನೆಗೆ ಕನ್ನಹಾಕಗೊಡಿಸುತ್ತಿರಲಿಲ್ಲವೆಂದು ತಿಳುಕೊಳ್ಳಿರಿ. ಆದಕಾರಣ ನೀವು ಸಹ ಸಿದ್ಧವಾಗಿರ್ರಿ; ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ. ಹಾಗಾದರೆ ಯಜಮಾನನು ತನ್ನ ಮನೆಯವರಿಗೆ ಹೊತ್ತು ಹೊತ್ತಿಗೆ ಆಹಾರಕೊಡಲಿಕ್ಕೆ ಅವರ ಮೇಲಿಟ್ಟ ನಂಬಿಗಸ್ತನೂ ವಿವೇಕಿಯೂ ಆದಂಥ ಆಳು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವದನ್ನು ಕಾಣುವನೋ ಆ ಆಳು ಧನ್ಯನು. ಅಂಥವನನ್ನು ಅವನು ತನ್ನ

ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ನಿಜವಾಗಿ ಹೇಳುತ್ತೇನೆ. ಆದರೆ ಆ ಕೆಟ್ಟ ಆಳು–ನನ್ನ ಯಜಮಾನನು ತಡಮಾಡುತ್ತಾನೆ ಅಂತ ತನ್ನ ಮನಸ್ಸಿನಲ್ಲಿ ಅಂದುಕೊಂಡು ತನ್ನ ಜೊತೇ ಆಳುಗಳನ್ನು ಹೊಡೆಯುವದಕ್ಕೆ ತೊಡಗಿ ಕುಡಿಕರ ಸಂಗಡ ತಿನ್ನುತ್ತಾ ಕುಡಿಯುತ್ತಾ ಇರುವದಾದರೆ ಅವನು ನೆನಸದ ದಿನದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು ಅವನನ್ನು ಕಠಿಣವಾಗಿ ಹೊಡೆಸಿ ಕಪಟಿಗಳಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು.

## ಮತ್ತಾಯ 25:1–46

ಆಗ ಪರಲೋಕರಾಜ್ಯವು ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳುವದಕ್ಕೆ ಹೊರಟಂಥ ಹತ್ತು ಮಂದಿ ಕನ್ಯೆಯರಿಗೆ ಹೋಲಿಕೆಯಾಗಿರುವದು. ಅವರಲ್ಲಿ ಐದು ಮಂದಿ ಬುದ್ಧಿಯಿಲ್ಲದವರು, ಐದು ಮಂದಿ ಬುದ್ಧಿವಂತೆಯರು. ಬುದ್ಧಿಯಿಲ್ಲದವರು ತಮ್ಮ ಆರತಿಗಳನ್ನು ತಕ್ಕೊಂಡರು, ಆದರೆ ಎಣ್ಣೆ ತಕ್ಕೊಳ್ಳಲಿಲ್ಲ. ಬುದ್ಧಿವಂತೆಯರು ತಮ್ಮ ಆರತಿಗಳ ಕೂಡ ಪಾತ್ರೆಗಳಲ್ಲಿ ಎಣ್ಣೆ ತಕ್ಕೊಂಡರು. ಮದಲಿಂಗನು ಬರುವದಕ್ಕೆ ತಡಮಾಡಲು ಅವರೆಲ್ಲರೂ ತೂಕಡಿಸಿ ಮಲಗಿದರು. ಆದರೆ ಅರ್ಧರಾತ್ರಿಯಲ್ಲಿ–ಇಗೋ, ಮದಲಿಂಗನು! ಅವನನ್ನು ಎದುರುಗೊಳ್ಳುವದಕ್ಕೆ ಹೊರಡಿರಿ ಎಂಬ ಕೂಗಾಯಿತು. ಆಗ ಆ ಕನ್ಯೆಯರೆಲ್ಲರು ಎಚ್ಚೆತ್ತು ತಮ್ಮ ಆರತಿಗಳನ್ನು ನೆಟ್ಟಗೆಮಾಡಿದರು. ಆಗ್ಗೆ ಬುದ್ಧಿಯಿಲ್ಲದವರು ಬುದ್ಧಿವಂತೆಯರಿಗೆ–ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ. ನಮ್ಮ ಆರತಿಗಳು ಆರಿಹೋಗುತ್ತವೆ ಎಂದು ಹೇಳಿದರು. ಅದಕ್ಕೆ ಆ ಬುದ್ಧಿವಂತೆಯರು–ನಿಮಗೆ ಕೊಟ್ಟರೆ ನಮಗೂ ನಿಮಗೂ ಕೂಡ ಸಾಲದೆ ಹೋದೀತು; ನೀವು ಮಾರುವವರ ಬಳಿಗೆ ಹೋಗಿ ಕೊಂಡುಕೊಂಡರೆ ಒಳ್ಳೇದು ಅಂದರು. ಅವರು ಕೊಂಡುಕೊಳ್ಳಲಿಕ್ಕೆ ಹೋದಾಗ ಮದಲಿಂಗನು ಬಂದನು. ಸಿದ್ಧವಾಗಿದ್ದವರು ಅವನ ಸಂಗಡ ಮದುವೆಯ ಮನೆಯೊಳಕ್ಕೆ ಹೋದರು. ಬಾಗಿಲು ಮುಚ್ಚಲಾಯಿತು. ತರುವಾಯ ಉಳಿದ ಕನ್ಯೆಯರು ಸಹ ಬಂದು–ಸ್ವಾಮೀ, ಸ್ವಾಮೀ, ನಮಗೆ ತೆರೆಯಿರಿ ಅಂದರು. ಆತನು–ನಿಮ್ಮನ್ನು ನಾನರಿಯೆನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆದಕಾರಣ ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ.

ದೇಶಾಂತರಕ್ಕೆ ಹೋಗುವ ಒಬ್ಬ ಮನುಷ್ಯನು ತನ್ನ ಆಳುಗಳನ್ನು ಕರೆದು ಅವರಿಗೆ ತನ್ನ ಆಸ್ತಿಯನ್ನು ಒಪ್ಪಿಸಿ ಕೊಟ್ಟಂತಿರುವದು. ಅವನು ಒಬ್ಬನಿಗೆ ಐದು ತಲಾಂತು, ಒಬ್ಬನಿಗೆ ಎರಡು, ಒಬ್ಬನಿಗೆ ಒಂದು, ಹೀಗೆ ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು ಬೇರೊಂದು ದೇಶಕ್ಕೆ ಹೋದನು. ಐದು ತಲಾಂತು ಹೊಂದಿದವನು ಹೋಗಿ ಅದನ್ನು ವ್ಯಾಪಾರಕ್ಕೆ ಹಾಕಿ ಇನ್ನೂ ಐದು ತಲಾಂತು ಗಳಿಸಿಕೊಂಡನು. ಹಾಗೆಯೇ ಎರಡು ತಲಾಂತು ಹೊಂದಿದವನು ಇನ್ನೂ ಎರಡು ಸಂಪಾದಿಸಿ ಕೊಂಡನು. ಆದರೆ ಒಂದು ತಲಾಂತು ಹೊಂದಿದವನು ಹೋಗಿ ಭೂಮಿಯನ್ನು ಅಗೆದು ತನ್ನ ದಣಿಯ ಹಣವನ್ನು ಬಚ್ಚಿಟ್ಟನು. ಬಹುಕಾಲದ ಮೇಲೆ ಆ ಆಳುಗಳ ದಣಿಯು ಬಂದು ಅವರಿಂದ ಲೆಕ್ಕ ತೆಗೆದುಕೊಳ್ಳಲು ಐದು ತಲಾಂತು ಹೊಂದಿದವನು ಮುಂದೆ ಬಂದು ಇನ್ನೂ ಐದು ತಲಾಂತು ತಂದು–ಸ್ವಾಮೀ, ನೀನು ಐದು ತಲಾಂತನ್ನು ನನಗೆ ಕೊಟ್ಟಿದ್ದಿಯಲ್ಲಾ, ಇಗೋ, ಇನ್ನು ಐದು ತಲಾಂತು ಸಂಪಾದಿಸಿದ್ದೇನೆ ಅಂದನು. ಅವನ ದಣಿಯು–ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು; ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಅಂದನು. ಆಗ ಎರಡು ತಲಾಂತು ಹೊಂದಿದವನು ಮುಂದೆಬಂದು–ಸ್ವಾಮೀ, ಎರಡು ತಲಾಂತು ನನಗೆ ಒಪ್ಪಿಸಿದ್ದೀಯಲ್ಲಾ; ಇಗೋ, ಇನ್ನು ಎರಡು ತಲಾಂತು ಸಂಪಾದಿಸಿದ್ದೇನೆ ಅಂದನು. ಅವನ ದಣಿಯು ಅವನಿಗೆ–ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು; ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದೀ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಎಂದು ಹೇಳಿದನು. ತರುವಾಯ ಒಂದೇ ತಲಾಂತು ಹೊಂದಿದವನು ಸಹ ಮುಂದೆಬಂದು–ಸ್ವಾಮೀ ನೀನು ಕಠಿಣ ಮನುಷ್ಯನು, ನೀನು ಬಿತ್ತದಿರುವಲ್ಲಿ ಕೊಯ್ಯುವವನು, ನೀನು ತೂರದಿರುವಲ್ಲಿ ರಾಶಿಮಾಡಿ ಕೊಳ್ಳುವವನು ಎಂದು ತಿಳಿದು ಹೆದರಿಕೊಂಡು ಹೋಗಿ ನಿನ್ನ ತಲಾಂತನ್ನು ಭೂಮಿಯಲ್ಲಿ ಬಚ್ಚಿಟ್ಟೆನು; ಇಗೋ, ನಿನ್ನದು ನಿನಗೆ ಸಂದಿದೆ ಅಂದನು. ಆಗ ಅವನ ದಣಿಯು ಅವನಿಗೆ–ಮೈಗಳ್ಳನಾದ ಕೆಟ್ಟ ಆಳು ನೀನು; ನಾನು ಬಿತ್ತದಿರುವಲ್ಲಿ ಕೊಯ್ಯುವವನು ತೂರದಿರುವಲ್ಲಿ ರಾಶಿಮಾಡಿಕೊಳ್ಳುವವನು ಎಂದು ತಿಳಿದಿಯಾ? ಹಾಗಾದರೆ, ನೀನು ನನ್ನ ಹಣವನ್ನು ಸಾಹುಕಾರರಲ್ಲಿ ಬಡ್ಡಿಗೆ ಹಾಕಬೇಕಾಗಿತ್ತು; ನಾನು ಬಂದು ನನ್ನದನ್ನು ಬಡ್ಡಿಸಹಿತ ಪಡಕೊಳ್ಳುತ್ತಿದ್ದೆನು ಎಂದು ಹೇಳಿ ತನ್ನ ಸೇವಕರಿಗೆ–ಅವನಿಂದ ಆ ತಲಾಂತು ತೆಗೆದು ಹತ್ತು ತಲಾಂತು ಇದ್ದವನಿಗೆ ಕೊಡಿರಿ. ಇದ್ದವರಿಗೆಲ್ಲಾ ಕೊಡಲ್ಪಡುವದು, ಅವರಿಗೆ ಮತ್ತೂ ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು. ಮತ್ತು ಕೆಲಸಕ್ಕೆ ಬಾರದ ಈ ಆಳನ್ನು ಹೊರಗೆ ಕತ್ತಲೆಗೆ ಹಾಕಿಬಿಡಿರಿ ಎಂದು ಹೇಳಿದನು. ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವದು.

ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆಮಾಡುವ ಪ್ರಕಾರ ಆತನು ಅವರನ್ನು ಬೇರೆಬೇರೆಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು. ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ–ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ

ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. ಅದಕ್ಕೆ ನೀತಿವಂತರು–ಸ್ವಾಮೀ, ಯಾವಾಗ ನೀನು ಹಸಿದಿದ್ದನ್ನು ಕಂಡು ನಿನಗೆ ಊಟಕ್ಕೆ ಕೊಟ್ಟೆವು? ಇಲ್ಲವೆ ನೀನು ಬಾಯಾರಿದ್ದನ್ನು ಕಂಡು ಕುಡಿಯುವದಕ್ಕೆ ಕೊಟ್ಟೆವು? ಯಾವಾಗ ನೀನು ಪರದೇಶಿಯಾಗಿರುವದನ್ನು ಕಂಡು ಸೇರಿಸಿಕೊಂಡೆವು? ಇಲ್ಲವೆ ನಿನಗೆ ಬಟ್ಟೆಯಿಲ್ಲದ್ದನ್ನು ಕಂಡು ಉಡುವದಕ್ಕೆ ಕೊಟ್ಟೆವು? ಯಾವಾಗ ನೀನು ರೋಗದಲ್ಲಿ ಬಿದ್ದದ್ದನ್ನು ಅಥವಾ ಸೆರೆಮನೆಯಲ್ಲಿ ಇದ್ದದ್ದನ್ನು ಕಂಡು ನಿನ್ನನ್ನು ನೋಡುವದಕ್ಕೆ ಬಂದೆವು ಎಂದು ಉತ್ತರವಾಗಿ ಹೇಳುವರು. ಅದಕ್ಕೆ ಅರಸನು–ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ–ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ. ನಾನು ಹಸಿದಿದ್ದೆನು, ನೀವು ನನಗೆ ಊಟಕ್ಕೆ ಕೊಡಲಿಲ್ಲ; ನಾನು ಬಾಯಾರಿದ್ದೆನು, ನೀವು ನನಗೆ ಕುಡಿಯುವದಕ್ಕೆ ಕೊಡಲಿಲ್ಲ; ಪರದೇಶಿಯಾಗಿದ್ದೆನು, ನೀವು ನನ್ನನ್ನು ಸೇರಿಸಿಕೊಳ್ಳಲಿಲ್ಲ; ಬಟ್ಟೆಯಿಲ್ಲದವನಾಗಿದ್ದೆನು, ನೀವು ನನಗೆ ಉಡುವದಕ್ಕೆಕೊಡಲಿಲ್ಲ; ರೋಗದಲ್ಲಿ ಬಿದ್ದಿದ್ದೆನು, ಸೆರೆಮನೆಯಲ್ಲಿದ್ದೆನು, ನೀವು ನನ್ನನ್ನು ಆರೈಕೆಮಾಡುವದಕ್ಕೆ ಬರಲಿಲ್ಲವೆಂದು ಹೇಳುವನು. ಅದಕ್ಕೆ ಅವರು ಸಹ–ಸ್ವಾಮೀ, ಯಾವಾಗ ನೀನು ಹಸಿದಿದ್ದನ್ನೂ ನೀನು ಬಾಯಾರಿದ್ದನ್ನೂ ನೀನು ಪರದೇಶಿಯಾದದ್ದನ್ನೂ ಬಟ್ಟೆಯಿಲ್ಲದವನಾಗಿದ್ದದ್ದನ್ನೂ ರೋಗದಲ್ಲಿ ಬಿದ್ದದ್ದನ್ನೂ ಸೆರೆಮನೆಯಲ್ಲಿದ್ದದ್ದನ್ನೂ ಕಂಡು ನಿನಗೆ ಉಪಚಾರಮಾಡದೆ ಹೋದೆವು? ಅನ್ನುವರು. ಆಗ ಆತನು–ನೀವು ಈ ಕೇವಲ ಅಲ್ಪವಾದವರಲ್ಲಿ ಒಬ್ಬನಿಗೆ ಏನೇನು ಮಾಡದೆ ಹೋದಿರೋ ಅದನ್ನು ನನಗೂ ಮಾಡದೆ ಹೋದಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು.

## ಮಾರ್ಕ 13:1–37

ಯೇಸು ದೇವಾಲಯವನ್ನು ಬಿಟ್ಟು ಹೋಗುತ್ತಿರಲು ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ–ಗುರುವೇ, ನೋಡು, ಎಂಥಾ ಕಲ್ಲುಗಳು! ಎಂಥಾ ಕಟ್ಟಣಗಳು! ಎಂದು ಹೇಳಿದನು. ಯೇಸು–ಈ ದೊಡ್ಡ ಕಟ್ಟಣಗಳನ್ನು ನೋಡುತ್ತೀಯಾ? ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ; ಎಲ್ಲಾ ಕೆಡವಲ್ಪಡುವದು ಅಂದನು.

ಬಳಿಕ ಆತನು ಎಣ್ಣೇಮರಗಳ ಗುಡ್ಡದ ಮೇಲೆ ದೇವಾಲಯಕ್ಕೆ ಎದುರಾಗಿ ಕೂತಿದ್ದಾಗ ಪೇತ್ರ ಯಾಕೋಬ ಯೋಹಾನ ಅಂದ್ರೇಯ ಇವರು–ಅದು ಯಾವಾಗ ಆಗುವದು? ಅದೆಲ್ಲಾ ನೆರವೇರುವದಕ್ಕಿರುವಾಗ ಯಾವ ಸೂಚನೆ ತೋರುವದು? ನಮಗೆ ಹೇಳು ಎಂದು ಆತನನ್ನು ಪ್ರತ್ಯೇಕವಾಗಿ ಕೇಳಲು ಯೇಸು ಅವರಿಗೆ ಹೇಳಿದ್ದೇನಂದರೆ–ಯಾರಾದರೂ ನಿಮ್ಮನ್ನು ಮೋಸಗೊಳಿಸಾರು ನೋಡಿಕೊಳ್ಳಿರಿ. ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು–ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. ಇದಲ್ಲದೆ ಯುದ್ಧಗಳಾಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳುವಾಗ ಕಳವಳಪಡಬೇಡಿರಿ. ಹಾಗಾಗುವದು ಅಗತ್ಯ; ಆದರೂ ಇದು ಇನ್ನೂ ಅಂತ್ಯಕಾಲವಲ್ಲ. ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಭೂಕಂಪಗಳು ಅಲ್ಲಲ್ಲಿ ಆಗುವವು; ಬರಗಳು ಬರುವವು; ಇವೆಲ್ಲಾ [ನೂತನ ಕಾಲವು ಹುಟ್ಟುವ] ಪ್ರಸವವೇದನೆಯ ಪ್ರಾರಂಭ.

ಆದರೆ ನಿಮ್ಮ ವಿಷಯದಲ್ಲಿ ನೋಡಿಕೊಳ್ಳಿರಿ. ನಿಮ್ಮನ್ನು ನ್ಯಾಯವಿಚಾರಣೆಯ ಸಭೆಗಳಿಗೆ ಎಳಕೊಂಡುಹೋಗುವರು; ಸಭಾಮಂದಿರಗಳಲ್ಲಿ ನಿಮ್ಮನ್ನು ಹೊಡೆಯುವರು; ನನ್ನ ನಿಮಿತ್ತವಾಗಿ ನಿಮ್ಮನ್ನು ಅಧಿಪತಿಗಳ ಮುಂದೆಯೂ ಅರಸುಗಳ ಮುಂದೆಯೂ ಸಾಕ್ಷಿಗಳಾಗಿ ನಿಲ್ಲಿಸುವರು. ಹೀಗೆ ಅವರಿಗೆ ಸಾಕ್ಷಿಯಾಗುವದು. ಮೊದಲು ಎಲ್ಲಾ ಜನಾಂಗಗಳಿಗೆ ಸುವಾರ್ತೆಯು ಸಾರಲ್ಪಡಬೇಕು. ನಿಮ್ಮನ್ನು ಹಿಡುಕೊಂಡುಹೋಗಿ ಒಪ್ಪಿಸುವಾಗ ಏನು ಹೇಳಬೇಕು ಎಂದು ಮುಂಚಿತವಾಗಿ ಚಿಂತೆಮಾಡಬೇಡಿರಿ; ಆ ಗಳಿಗೆಯಲ್ಲಿ ನಿಮಗೆ ಸೂಚನೆ ಯಾಗುವಂಥ ಮಾತನ್ನೇ ಆಡಿರಿ; ಮಾತಾಡುವವರು ನೀವಲ್ಲ, ಪವಿತ್ರಾತ್ಮನೇ. ಇದಲ್ಲದೆ ಅಣ್ಣನು ತಮ್ಮನನ್ನು ತಂದೆಯು ಮಗನನ್ನು ಮರಣಕ್ಕೆ ಒಪ್ಪಿಸುವರು. ಮಕ್ಕಳು ಹೆತ್ತವರ ಮೇಲೆ ತಿರುಗಿಬಿದ್ದು ಅವರನ್ನು ಕೊಲ್ಲಿಸುವರು. ಮತ್ತು ನನ್ನ ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಎಲ್ಲರೂ ಹಗೆಮಾಡುವರು. ಆದರೆ ಕಡೇವರೆಗೂ ತಾಳುವವನು ರಕ್ಷಣೆ ಹೊಂದುವನು.

ಇದಲ್ಲದೆ ಹಾಳುಮಾಡುವ ಅಸಹ್ಯ ವಸ್ತುವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ. ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿಂದ ಏನಾದರೂ ತೆಗೆದುಕೊಳ್ಳುವದಕ್ಕೆ ಇಳಿಯದೆ ಒಳಕ್ಕೆ ಹೋಗದೆ ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ. ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ! ಆ ದಿವಸಗಳು ಸಂಕಟ ದಿವಸಗಳಾಗಿರುವದರಿಂದ ಇದೆಲ್ಲಾ ಚಳಿಗಾಲದಲ್ಲಿ ಆಗಬಾರ –ದೆಂದು ಪ್ರಾರ್ಥನೆಮಾಡಿರಿ; ಅಂಥ ಸಂಕಟವು ದೇವರು ಮಾಡಿದ ಸೃಷ್ಟಿ ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ; ಇನ್ನು ಮೇಲೆಯೂ ಆಗುವದಿಲ್ಲ; ಕರ್ತನು ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆಮಾಡಿದ್ದಾನೆ. ಆಗ ಯಾರಾದರೂ ನಿಮಗೆ–ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ; ಸುಳ್ಳು ಕ್ರಿಸ್ತರೂ ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನು ಮೋಸಗೊಳಿಸುವದಕ್ಕೋಸ್ಕರ

ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. ನೀವಂತು ನೋಡಿಕೊಳ್ಳಿರಿ; ನಿಮಗೆ ಎಲ್ಲವನ್ನೂ ಮುಂದಾಗಿ ಹೇಳಿದ್ದೇನೆ.

ಇದಲ್ಲದೆ ಆ ದಿನಗಳಲ್ಲಿ ಆ ಸಂಕಟ ತೀರಿದ ಮೇಲೆ ಸೂರ್ಯನು ಕತ್ತಲಾಗಿ ಹೋಗುವನು; ಚಂದ್ರನು ಬೆಳಕುಕೊಡದೆ ಇರುವನು; ನಕ್ಷತ್ರಗಳು ಆಕಾಶದಿಂದ ಉದುರುತ್ತಿರುವವು; ಆಕಾಶದಲ್ಲಿರುವ ಶಕ್ತಿಗಳು ಕದಲುವವು. ಆಗ ಮನುಷ್ಯ–ಕುಮಾರನು ಬಹು ಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ ಬರುವದನ್ನು ಕಾಣುವರು. ಮತ್ತು ಆತನು ತನ್ನ ದೂತರನ್ನು ಕಳುಹಿಸಿ ತಾನು ಆದುಕೊಂಡವರನ್ನು ಭೂಮಿಯ ಕಟ್ಟಕಡೆಯಿಂದ ಆಕಾಶದ ಕಟ್ಟ ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವನು. ಅಂಜೂರದ ಮರದ ದೃಷ್ಟಾಂತದಿಂದ ಬುದ್ಧಿಕಲಿಯಿರಿ; ಅದರ ಕೊಂಬೆ ಇನ್ನೂ ಎಳೇದಾಗಿದ್ದು ಎಲೆಬಿಡುವಾಗ ಬೇಸಿಗೆಯು ಹತ್ತಿರವಾಯಿತೆಂದು ತಿಳುಕೊಳ್ಳುತ್ತೀರಲ್ಲಾ. ಹಾಗೆಯೇ ನೀವು ಸಹ ಇದೆಲ್ಲಾ ಆಗುವದನ್ನು ನೋಡುವಾಗ ಹತ್ತಿರವದೆ, ಬಾಗಿಲಲ್ಲೇ ಅದೆ ಎಂದು ತಿಳುಕೊಳ್ಳಿರಿ. ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ.

ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು; ಮಗನಿಗೂ ತಿಳಿಯದು. ಆ ಕಾಲವು ಯಾವಾಗ ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ, ಜಾಗರೂಕರಾಗಿರಿ. ಒಬ್ಬ ಮನುಷ್ಯನು ತನ್ನ ಮನೆಯನ್ನು ಬಿಟ್ಟು ಬೇರೊಂದು ದೇಶಕ್ಕೆ ಹೋಗುವಾಗ ತನ್ನ ಆಳುಗಳಿಗೆ ಮನೇ ಆಡಳಿತವನ್ನು ಒಪ್ಪಿಸಿಕೊಟ್ಟು ಒಬ್ಬೊಬ್ಬನಿಗೆ ಅವನವನ ಕೆಲಸವನ್ನು ನೇಮಿಸಿ ಬಾಗಿಲುಕಾಯುವವನನ್ನು ಕರೆದು–ನೀನು ಎಚ್ಚರವಾಗಿರಬೇಕೆಂದು ಅಪ್ಪಣೆ ಕೊಡುವ ಪ್ರಕಾರ [ನಾನು ನಿಮಗೆ ಅಪ್ಪಣೆ ಕೊಡುತ್ತೇನೆ]. ಮನೇಯಜಮಾನನು ಸಂಜೆಯಲ್ಲೋ ಸರುಹೊತ್ತಿನಲ್ಲೋ ಕೋಳಿ ಕೂಗುವಾಗಲೋ ಮುಂಜಾನೆಯಲ್ಲೋ ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ; ಅವನು ಏಕಾಏಕಿ ಬಂದು ನೀವು ನಿದ್ದೆಮಾಡುವ–ದನ್ನು ಕಂಡಾನು. ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ, ಎಚ್ಚರವಾಗಿರಿ ಅಂದನು.

## ಲೂಕ 21:5–38

ಕೆಲವರು ದೇವಾಲಯದ ವಿಷಯದಲ್ಲಿ ಅದು ಅಂದವಾದ ಕಲ್ಲುಗಳಿಂದಲೂ ಹರಕೆಯ ಒಡವೆಗಳಿಂದಲೂ ಅಲಂಕಾರವಾಗಿದೆ ಎಂದು ಹೇಳುತ್ತಿರುವಾಗ ಆತನು–ನೀವು ಇವುಗಳನ್ನೆಲ್ಲಾ ನೋಡುತ್ತೀರಲ್ಲಾ, ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯದೆ ಎಲ್ಲಾ ಕೆಡವಲ್ಪಡುವ ದಿವಸಗಳು ಬರುವವು ಅಂದನು. ಅವರು–ಬೋಧಕನೇ, ಅದು ಯಾವಾಗ ಆಗುವದು? ಅದು ಸಂಭವಿಸುವದಕ್ಕಿರುವಾಗ ಯಾವ ಸೂಚನೆ ತೋರುವದು ಎಂದು ಆತನನ್ನು ಕೇಳಲು ಆತನು ಹೇಳಿದ್ದೇನಂದರೆ–ನೀವು ಮೋಸಹೋಗದಂತೆ ನೋಡಿಕೊಳ್ಳಿರಿ. ಯಾಕಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು ನಾನು ಕ್ರಿಸ್ತನು ನಾನು ಕ್ರಿಸ್ತನು ಎಂತಲೂ ಆ ಕಾಲ ಹತ್ತಿರವಾಯಿತು ಎಂತಲೂ ಹೇಳುವರು; ಅವರ ಹಿಂದೆ ಹೋಗಬೇಡಿರಿ. ಇದಲ್ಲದೆ ಯುದ್ಧಗಳೂ ಗಲಿಬಿಲಿಗಳೂ ಆಗುವದನ್ನು ನೀವು ಕೇಳುವಾಗ ದಿಗಿಲು ಪಡಬೇಡಿರಿ; ಯಾಕಂದರೆ ಇದೆಲ್ಲಾ ಮೊದಲು ಆಗುವದು ಅಗತ್ಯ; ಆದರೂ ಕೂಡಲೇ ಅಂತ್ಯ ಬರುವದಿಲ್ಲ ಅಂದನು.

ಆಗ ಆತನು ಅವರಿಗೆ ಹೇಳಿದ್ದೇನಂದರೆ–ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಮಹಾ ಭೂಕಂಪಗಳಾಗುವವು; ಅಲ್ಲಲ್ಲಿ ಬರಗಳೂ ಉಪದ್ರವಗಳೂ ಬರುವವು; ಉತ್ಪಾತಗಳೂ ಆಕಾಶದಲ್ಲಿ ಮಹಾ ಸೂಚನೆಗಳೂ ತೋರುವವು. ಆದರೆ ಇವೆಲ್ಲಾ ನಡೆಯುವದಕ್ಕಿಂತ ಮುಂಚೆ ಅವರು ನಿಮ್ಮನ್ನು ಹಿಡಿದು ಸಭಾಮಂದಿರಗಳ ಮತ್ತು ಸೆರೆಮನೆಗಳ ಅಧಿಕಾರಸ್ಥರ ವಶಕ್ಕೆ ಕೊಟ್ಟು ನನ್ನ ಹೆಸರಿನ ನಿಮಿತ್ತವಾಗಿ ಅರಸುಗಳ ಮುಂದಕ್ಕೂ ಅಧಿಪತಿಗಳ ಮುಂದಕ್ಕೂ ತೆಗೆದುಕೊಂಡುಹೋಗಿ ಹಿಂಸೆಪಡಿಸುವರು. ಇದು ಸಾಕ್ಷಿಹೇಳುವದಕ್ಕೆ ನಿಮಗೆ ಅನುಕೂಲವಾಗು –ವದು. ಆದದರಿಂದ ಏನು ಉತ್ತರ ಕೊಡಬೇಕೆಂಬ ವಿಷಯದಲ್ಲಿ ನಾವು ಮುಂದಾಗಿ ಯೋಚಿಸುವದಿಲ್ಲವೆಂದು ನಿಮ್ಮ ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳಿರಿ. ಯಾಕಂದರೆ ನಿಮ್ಮ ವಿರೋಧಿಗಳೆಲ್ಲರೂ ಎದುರುನಿಲ್ಲುವದಕ್ಕೂ ಎದುರುಮಾತಾಡುವದಕ್ಕೂ ಆಗದಂಥ ಬಾಯನ್ನೂ ಬುದ್ಧಿಯನ್ನೂ ನಾನೇ ನಿಮಗೆ ಕೊಡುತ್ತೇನೆ. ಆದರೆ ತಂದೆತಾಯಿಗಳೂ ಅಣ್ಣತಮ್ಮಂದಿರೂ ಬಂಧುಬಾಂಧವರೂ ಸ್ನೇಹಿತರೂ ನಿಮ್ಮನ್ನು ಒಪ್ಪಿಸಿಕೊಡುವರು; ಮತ್ತು ನಿಮ್ಮಲ್ಲಿ ಕೆಲವರನ್ನು ಕೊಲ್ಲಿಸುವರು. ಇದಲ್ಲದೆ ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆಮಾಡುವರು. ಆದರೂ ನಿಮ್ಮದೊಂದು ತಲೆಕೂದಲಾದರೂ ನಾಶವಾಗುವದಿಲ್ಲ. ನಿಮ್ಮ ಸ್ಥೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ. ಆದರೆ ದಂಡುಗಳು ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿರುವದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ. ಆಗ ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ; ಆ ಪಟ್ಟಣದಲ್ಲಿರುವವರು ಅದರೊಳಗಿಂದ ಹೊರಟುಹೋಗಲಿ; ಹಳ್ಳಿಯವರು ಅದರೊಳಕ್ಕೆ ಹೋಗದಿರಲಿ. ಯಾಕಂದರೆ ಬರೆದಿರುವದೆಲ್ಲಾ ನೆರವೇರುವದಕ್ಕಾಗಿ ಅವು ದಂಡನೆಯ ದಿವಸಗಳಾಗಿವೆ. ಆ ದಿನಗಳಲ್ಲಿ ಬಸುರಿಯರಿಗೂ ಮೊಲೆ ಕೂಸಿರುವ ಹೆಂಗಸರಿಗೂ ಅಗುವ ಕಷ್ಟವನ್ನು ಏನು ಹೇಳಲಿ! ಈ ಸೀಮೆಯ ಮೇಲೆ ಮಹಾವಿಪತ್ತೂ ಈ ಜನರಿಗೆ ಉಗ್ರದಂಡನೆಯೂ ಆಗುವವು. ಅವರು ಕತ್ತಿಯ ಬಾಯಿಗೆ ಬೀಳುವರು; ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು; ಅನ್ಯದೇಶದವರ ಸಮಯಗಳು ಪೂರೈಸುವ ತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವದು. ಇದಲ್ಲದೆ ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಸೂಚನೆಗಳು ತೋರುವವು. ಭೂಮಿಯ ಮೇಲೆ

ಸಮುದ್ರದ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವದು. ಆಕಾಶದ ಶಕ್ತಿಗಳು ಕದಲುವದರಿಂದ ಮನುಷ್ಯರು ಭಯ ಹಿಡಿದವರಾಗಿ ಲೋಕಕ್ಕೆ ಏನು ಬರುವದೋ ಎಂದು ಎದುರು ನೋಡುತ್ತಾ ಪ್ರಾಣಹೋದಂತಾಗುವರು. ಆಗ ಮನುಷ್ಯಕುಮಾರನು ಬಲದಿಂದಲೂ ಬಹುಮಹಿಮೆಯಿಂದಲೂ ಮೇಘದಲ್ಲಿ ಬರುವದನ್ನು ಕಾಣುವರು. ಆದರೆ ಇವು ಸಂಭವಿಸುವದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ ಅಂದನು. ಆತನು ಅವರಿಗೆ ಒಂದು ಸಾಮ್ಯ ಕೊಟ್ಟು ಹೇಳಿದ್ದೇನಂದರೆ–ಅಂಜೂರ ಮುಂತಾದ ಮರಗಳನ್ನೂ ನೋಡಿರಿ. ಅವು ಚಿಗುರಿದ ಕೂಡಲೆ ನೀವು ಅದನ್ನು ಕಂಡು ಈಗ ಬೇಸಿಗೆಯು ಹತ್ತಿರವಾಯಿತೆಂದು ನೀವಾಗಿ ತಿಳುಕೊಳ್ಳುತ್ತೀರಲ್ಲಾ. ಹಾಗೆಯೇ ನೀವು ಸಹ ಇವುಗಳಾಗುವದನ್ನು ನೋಡುವಾಗ ದೇವರ ರಾಜ್ಯವು ಹತ್ತಿರವದೆ ಎಂದು ತಿಳುಕೊಳ್ಳಿರಿ. ಎಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ.

ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ. ಅತಿ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವದು. ಆದರೆ ಬರುವದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ ಅಂದನು.

ಆತನು ಹಗಲು ದೇವಾಲಯದಲ್ಲಿ ಉಪದೇಶಮಾಡುತ್ತಾ ರಾತ್ರಿ ಪಟ್ಟಣದ ಹೊರಗೆ ಹೋಗಿ ಎಣ್ಣೇಮರಗಳ ತೋಪು ಎನಿಸಿಕೊಳ್ಳುವ ಗುಡ್ಡದಲ್ಲಿ ಇಳುಕೊಳ್ಳುತ್ತಾ ಇದ್ದನು. ಜನರೆಲ್ಲರು ಆತನ ಉಪದೇಶವನ್ನು ಕೇಳಬೇಕೆಂದು ಬೆಳಿಗ್ಗೆ ಎದ್ದು ದೇವಾಲಯಕ್ಕೆ ಆತನ ಬಳಿಗೆ ಬರುತ್ತಿದ್ದರು.

# ಬುದ್ಧಿವಂತೆಯರಾದ ಹಾಗು ಬುದ್ಧಿಯಿಲ್ಲದ ಕನ್ಯೆಯರು

**ರೀಪ್ರಿಂಟ್ಸ್ ಪುಟ 3867**

## ಮತ್ತಾಯ 25:1–13

**"ಮನುಷ್ಯಕುಮಾರನು ಬರುವ ದಿನವೂ ಗಳಿಗೆಯೂ ನಿಮಗೆ ತಿಳಿದಿಲ್ಲವಾದ್ದರಿಂದ ಎಚ್ಚರವಾಗಿರ್ರಿ."**

ಮತ್ತಾಯನ ಸುವಾರ್ತೆಯ 25ನೇ ಅಧ್ಯಾಯದಲ್ಲಿ ಬರೆದಿರುವಂತೆ ತನ್ನ ಭೂಲೋಕದಲ್ಲಿನ ಸೇವೆಯ ಕಡೆಯ ಭಾನುವಾರ ದಂದು ನಮ್ಮ ಕರ್ತನು ಯೆರೂಸಲೇಮಿನ ನಾಶನ, ತನ್ನ ಶಿಷ್ಯರ ಚದರುವಿಕೆ, ದೀರ್ಘಾವಧಿಯ ಯುದ್ಧಗಳು, ಯುದ್ಧಗಳಾಗುವ ಸಂಭವ ಮುಂತಾದವುಗಳ ಬಗ್ಗೆ ಮುಂತಿಳಿಸಿರುವ ಸಾಧ್ಯತೆಯಿರು ವದು. ಇಂಥಾ ಸಮಯದಲ್ಲೇ ಈ ಮಾಹಿತಿಯು ಶಿಷ್ಯರಿಗೆ ಬಹು ಸೂಕ್ತವಾಗಿತ್ತು ಕಾರಣ ಅವರ ನಿರೀಕ್ಷೆಯು ಬೇರೊಂದು ದಿಕ್ಕಿನಲ್ಲಿ ಚಲಿಸತೊಡಗಿದ್ದು–ಅವರು ಕರ್ತನು ಮೆಸ್ಸೀಯನಾಗಿ ಉನ್ನತ ಸ್ಥಿತಿಗೆ ಬರುವದನ್ನು ಹಾಗೂ ಯೆರೂಸಲೇಮು ಆತನ ಸಾಮ್ರಾಜ್ಯದ ಅಧಿಕಾರಸ್ಥಾನ–ವಾಗಿರುವದೆಂಬುದನ್ನು ಎದುರು ನೋಡುತ್ತಿದ್ದರು. ಅವರು ಕೇಳಿದ್ದು: ಅದು ಯಾವಾಗ ಆಗುವದು? ಮತ್ತು ನಿನ್ನ ಪ್ರತ್ಯಕ್ಷತೆಗೆ ಸೂಚನೆ ಏನು? ಅಲ್ಲದೆ ಯೇಸುವು ಮತ್ತಾಯನ ಸುವಾರ್ತೆಯ 24ನೇ ಅಧ್ಯಾಯದಲ್ಲಿನ ತನ್ನ ಆ ವಿಶೇಷ ಪ್ರವಾದನೆಯಲ್ಲಿ ಸಂಗತಿಗಳನ್ನು ವಿವರಿಸಿ ಹೇಳುವವನಾಗಿ ಆತನ ಎರಡನೇ ಬರೋಣವು ಕಠಿಣ ಕಾಲದಲ್ಲಿ ಸಂಭವಿಸುವಂಥದಾಗಿದ್ದು ಆಗ ಸಾಧ್ಯವಾದಲ್ಲಿ ದೇವರು ಆದುಕೊಂಡವರನ್ನು ಸಹ ಮೋಸಗೊಳಿಸಲಾಗುವದು. ಆಗ ನೋಹನ ದಿವಸಗಳಲ್ಲಿದ್ದಂತೆ ಮನುಷ್ಯಕುಮಾರನ ದಿವಸಗಳಲ್ಲಿಯೂ ಜನರು ತಿನ್ನುತ್ತಾ ಕುಡಿಯುತ್ತಾ, ನೆಡುತ್ತಾ ಕಟ್ಟುತ್ತಾ ಮದುವೆ ಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಮುಂದೆ ತಮ್ಮ ಮೇಲೆ ಬರುವ ವಿಪತ್ತಿನ ಬಗ್ಗೆ ಹಾಗೂ ನೂತನ ಯುಗದ ಅಂದರೆ ಆತನ ರಾಜ್ಯವು ಪ್ರಾರಂಭವಾಗುವ ಸಲುವಾಗಿ ಈಗಿನ ಯುಗವು ಪೂರ್ಣಗೊಳ್ಳುವದರ ಬಗ್ಗೆ ಏನೂ ತಿಳಿಯದೆ ಇರುವರು.

ಈ ಸಂಗತಿಯನ್ನು ಅವರಿಗೆ ಮನದಟ್ಟುಮಾಡಿಕೊಡುವಕ್ಕಾಗಿ ಆತನು ಹತ್ತು ಮಂದಿ ಕನ್ನಿಕೆಯರ ಸಾಮ್ಯವನ್ನು ಹೇಳಿದ್ದನು; ಅದರಲ್ಲಿ ಐದು ಮಂದಿ ಬುದ್ಧಿವಂತೆಯರು ಹಾಗು ಐದು ಮಂದಿ ಬುದ್ಧಿಯಿಲ್ಲದವರು. ಈ ಹೇಳಿಕೆಯ ಆರಂಭದಲ್ಲಿ ಸೂಚಿತ ವಾಗಿರುವಂತೆ, ಸಾಮ್ಯದ ದೃಶ್ಯವು ಸುವಾರ್ತಾಯುಗವು ಮುಕ್ತಾಯವಾಗುವ ಸಮೀಪದಲ್ಲಿ ಇರುವಂಥದ್ದು, "ಆಗ ಪರಲೋಕರಾಜ್ಯವು ತಮ್ಮ ಆರತಿಗಳನ್ನು ತೆಗೆದುಕೊಂಡು ಮದಲಿಂಗನನ್ನು ಎದುರುಗೊಳ್ಳುವದಕ್ಕೆ ಹೋಗುವ ಹತ್ತು ಮಂದಿ ಕನ್ಯೆಯರಿಗೆ ಹೋಲಿಕೆಯಾಗಿರುವದು." ಈ ಸಾಮ್ಯವು ಸುವಾರ್ತಾಯುಗ ಪೂರ್ಣವಾಗಿ ಅನ್ವಯವಾಗುವಂಥದಲ್ಲ, ಆದರೆ ನಾವು ತಿಳಿದಿರುವಂತೆ ಅದು ಈಗ ಅನ್ವಯವಾಗುವಂಥದ್ದು, ಯಾಕಂದರೆ ನಾವು ಸುವಾರ್ತಾಯುಗದ ಅಂತ್ಯದಲ್ಲಿ ಅಂದರೆ ಮದಲಿಂಗನು ಪ್ರತ್ಯಕ್ಷನಾಗಿ ಬುದ್ಧಿವಂತೆಯರಾದ ಕನ್ಯೆಯರು ಮದುವೆಯ ಮನೆಯೊಳಗೆ ಹೋಗುತ್ತಿರುವ ಹಾಗು ಬುದ್ಧಿಯಿಲ್ಲದ ಕನ್ಯೆಯರು ಹೊರಗಿಡಲ್ಪಡುವ ಕಾಲದಲ್ಲಿ ಜೀವಿಸುತ್ತಿರುವೆವು. ಹೀಗಾಗಿ ಇದು ಈ ಸಾಮ್ಯವನ್ನು ಅರ್ಥಮಾಡಿಕೊಳ್ಳುವ ಕಾಲವಾಗಿದ್ದು ಕರ್ತನ ನಿಜವಾದ

ಹಿಂಬಾಲಕರೆಲ್ಲರಿಗೆ ಇದು ಕ್ಲುಪ್ತಕಾಲದ ಆತ್ಮೀಯ ಆಹಾರವೆಂಬುದನ್ನು ಅರ್ಥಮಾಡಿಕೊಳ್ಳಬೇಕು.

ಸತ್ಯವೇದ ಪರ್ಯಂತರವಾಗಿ ಸಭೆಯು ತನ್ನ ಮದುವೆಗಾಗಿ ಸಿದ್ಧವಾಗುತ್ತಿರುವ ಮದಲಗಿತ್ತಿಯಂತೆ ಸೂಚಿಸಲ್ಪಟ್ಟಿರುವದು. ಕರ್ತನಾದ ಯೇಸುವು ಏಕಪ್ರಕಾರವಾಗಿ ಮದಲಿಂಗನಾಗಿದ್ದು ಸಮಸ್ತಕ್ಕೂ ಬಾಧ್ಯನಾಗಿರುವನು. ಹಾಗು ಈಗಿನ ಕಾಲದಲ್ಲಿ ಕರ್ತನ ಹಿಂಬಾಲಕರಿಗೆ ಅನುಗ್ರಹಿಸಲಾಗಿರುವ ಅವಕಾಶವೆಂದರೆ ಅದು ಆತನ ಮದಲಗಿತ್ತಿಯಾಗಿ ಆತನಿಗೆ ಸಹ–ಬಾಧ್ಯರಾಗುವಂಥದು. ರಾಜಕುಮಾರನ ಐಕ್ಯವನ್ನು ಪಡಕೊಳ್ಳದ ಹೊರತು ಅವರಿಗೆ ಆ ನಿತ್ಯನಾದ ಅರಸನೊಡನೆ ಯಾವ ಸ್ಥಾನಮಾನವಾಗಲಿ ಇಲ್ಲವೇ ಸಂಬಂಧವಾಗಲಿ ಇರುವದಿಲ್ಲ. ಹಳೆ ಒಡಂಡಿಕೆಯಲ್ಲಿ ಇದರ ಒಂದು ಛಾಯಾರೂಪವು ಬಹು ಸೊಗಸಾಗಿರುವದು: ಅಬ್ರಹಾಮನು ಬಹು ಐಶ್ವರ್ಯವುಳ್ಳವನಾಗಿದ್ದು ಪರಲೋಕದಲ್ಲಿರುವ ತಂದೆಗೆ ಛಾಯೆಯಾಗಿರುವನು; ಇಸಾಕನು ವಾಗ್ದತ್ತ ಸಂತತಿಯಾಗಿ ಸಮಸ್ತಕ್ಕೂ ಬಾಧ್ಯನಾಗಿರುವ ನಮ್ಮ ಕರ್ತನಾದ ಯೇಸುವಿಗೆ ಛಾಯೆಯಾಗಿರುವನು; ಇಸಾಕನಿಗೆ ಹೆಂಡತಿಯನ್ನು ತೆಗೆದುಕೊಳ್ಳಲು ಕಳುಹಿಸಲಾದ ಅಬ್ರಹಾಮನ ಸೇವಕನು ಪವಿತ್ರಾತ್ಮನಿಗೆ ಸೊಗಸಾದ ಛಾಯೆಯಾಗಿದ್ದು ಈ ಸುವಾರ್ತಾಯುಗದಲ್ಲಿ ಸಭೆಯನ್ನು ಆದುಕೊಳ್ಳುತ್ತಿರವನು. ಇದರ ವಿಷಯವಾಗಿ ಅಪೋಸ್ತಲನು–ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ನಿಮ್ಮನ್ನು ಶುದ್ಧ ಕನ್ಯೆಯಾಗಿ ನಿಶ್ಚಯಪಡಿಸಿರುವದಾಗಿ ಹೇಳಿರುವನು – 2 ಕೊರಿಂಥ 11:2.

ಸುವಾರ್ತಾಯುಗದ ಪರ್ಯಂತರ ಈ ಸಭೆಯು ಪವಿತ್ರಾತ್ಮನ ನಡೆಸುವಿಕೆ ಹಾಗು ರಕ್ಷಣೆಯಲ್ಲಿ ಅನೇಕ ಬಿಡಾರ ಗಳುಳ್ಳ ಪರಲೋಕ ರಾಜ್ಯವಾದ ತಂದೆಯ ಮನೆಗೆ ಅಂದರೆ ಮದಲಿಂಗನೊಡನೆಯ ಸಹಬಾಧ್ಯತೆಯಲ್ಲಿ ವಾಗ್ದಾನಮಾಡಲ್ಪಟ್ಟ ಮಹಿಮಾಸ್ಥಿತಿಗೆ ಸಮೀಪಿಸುತ್ತಿರುವದು. ಈ ವಿಷಯವನ್ನು ನಾವು ಸರಿಯಾಗಿ ಗ್ರಹಿಸುವದೇ ಆದಲ್ಲಿ, ನಾವು ಈಗ ಪ್ರಯಾಣದ ಅಂತ್ಯಭಾಗದಲ್ಲಿ ಇದ್ದು ರೆಬೆಕ್ಕಳಲ್ಲಿ ಸೂಚಿತವಾದ ಮದಲಗಿತ್ತಿ ವರ್ಗವು ಮುಸುಕನ್ನು ಹಾಕಿಕೊಂಡು ಒಂಟೆಯಿಂದ ಕೆಳಗೆ ಇಳಿಯುತ್ತಿದ್ದು ಪರಲೋಕದ ಮದಲಿಂಗನಿಂದ ಸ್ವೀಕರಿಸಲ್ಪಡು–ತ್ತಿರುವದು. ಈ ಸಂಗತಿಯು ಪೂರ್ಣವಾಗಿ ಸುಮಾರು ಹತ್ತೊಂಬತ್ತು ಶತಮಾನಗಳಷ್ಟು ದೀರ್ಘಕಾಲವನ್ನು ಒಳಗೊಂಡಿರುವಂತೆಯೇ ತೋರಲಿರುವ ಮುಖ್ಯಲಕ್ಷಣಗಳು ನೆರವೇರಲ್ಪಡಲು ಹಲವಾರು ವರ್ಷಗಳೇ ಹಿಡಿಸುವದು. ಶೀಘ್ರದಲ್ಲೇ ಮದಲಗಿತ್ತಿಯು ಮದಲಿಂಗನೊಡನೆ ಅಬ್ರಹಾಮನ ಒಡಂಬಡಿಕೆಯ ಅನುಸಾರ ಸಹಬಾಧ್ಯಳಾಗಿ ಸಾರಳ ಗುಡಾರ ದಲ್ಲಿರುವಳು. ಇದಕ್ಕೆ ಅನುಸಾರವಾಗಿಯೇ ಅಪೋಸ್ತಲನು ನಮಗೆ ಭರವಸೆ ನೀಡಿ ಹೇಳಿರುವದು: "ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯೂ, ವಾಗ್ದಾನಕ್ಕೆ ಅನುಸಾರವಾಗಿ ಬಾಧ್ಯರೂ ಆಗಿದ್ದೀರಿ." ಗಲಾತ್ಯ 3:29

ಕರ್ತನ ಸಾಮ್ಯಗಳಲ್ಲಿ ಹಲವು ಅರಸನ ಮಗನ ಮದುವೆಗೆ ಸಂಬಂಧಿಸಿರುವಂಥವುಗಳು. ಅಲ್ಲದೆ ಸಭೆಗೆ ಆತನು ನೀಡಿದ ಕಡೆಯ ಸಂದೇಶವು ಯಜ್ಞದ ಕುರಿಯಾದಾತನ ಹೆಂಡತಿಯಾದ ಮದಲಗಿತ್ತಿಯು ಹೇಗೆ ಅಂತಿಮವಾಗಿ ಆ ರಾಜ್ಯದಲ್ಲಿ ಪ್ರಜ್ವಲಿಸುವಳೆಂಬುದನ್ನು ನಮಗೆ ತಿಳಿಸುವದು. ಮತ್ತು ಆಕೆಯು ನೂತನ ಯೆರೂಸಲೇಮ್ ಎಂಬುದರಲ್ಲಿ ಸೂಚಿತಳಾಗಿರುವಳು. ಯಜ್ಞದ ಕುರಿಯಾದಾತನ ಹೆಂಡತಿಯಾದ ಆ ಮದಲಗಿತ್ತಿಯು ತನ್ನನ್ನು ಸಿದ್ಧಮಾಡಿಕೊಂಡ ನಂತರ ಯಜ್ಞದ ಕುರಿಯ ಮದುವೆಯ ಔತಣದ ಬಗ್ಗೆ ಪ್ರಕಟನೆಯನ್ನು ಸಹ ಅಲ್ಲಿ ಮಾಡಲಾಗುವದು. (ಪ್ರಕಟನೆ 19:7–9) ಸ್ನಾನಿಕನಾದ ಯೋಹಾನನು ಒಬ್ಬ ಪ್ರವಾದಿಯಾಗಿ ಕ್ರಿಸ್ತನ ಹಾಗು ಸಭೆಯ ನಡುವಿನ ಈ ಸಂಬಂಧವನ್ನು ಉಲ್ಲೇಖಿಸುವವನಾಗಿ ಹೀಗೆ ಹೇಳಿರುವನು: "ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೆ ಮದಲಿಂಗನ ಗೆಳೆಯನು ಆತನ ಸ್ವರವನ್ನು ಕೇಳಿ ಬಹುವಾಗಿ ಸಂತೋಷಿಸುವನಲ್ಲವೇ. ಅದರಂತೆಯೇ ನನಗಿರುವ ಸಂತೋಷವು ಅದು ನೆರವೇರಿತು." ತಾನು ಮದಲಗಿತ್ತಿಯ ವರ್ಗದವನೂ ಅಲ್ಲ ಮದಲಿಂಗನೂ ಅಲ್ಲವೆಂಬುದನ್ನು ಯೋಹಾನನು ಅರಿತುಕೊಂಡಿದ್ದನು. ಯೇಸುವು ಮದಲಿಂಗನೆಂಬುದನ್ನು ಆತನು ಗ್ರಹಿಸಿಕೊಂಡಿದ್ದು ಮದಲಿಂಗ ಹಾಗು ಮದಲಗಿತ್ತಿಯನ್ನು ಪರಿಚಯಿಸಿಕೊಡುವಂಥ ಒಬ್ಬ ಸೇವಕನ ಗೌರವವನ್ನು ದೇವರಿಂದ ಹೊಂದಿಕೊಳ್ಳಲು ಸಂತೋಷಿಸಿದ್ದನು. ಮುಂದೆ ಯೋಹಾನನು ಒಬ್ಬ ನಂಬಿಗಸ್ತನಾದ ಪ್ರವಾದಿಯಾಗಿ ಪಡೆಯಲಿರುವ ಉನ್ನತಸ್ಥಾನದ ವಿಷಯವಾಗಿ ನಮ್ಮ ಕರ್ತನು ಹೇಳುವವನಾಗಿ ಆತನಿಗಿಂತ ದೊಡ್ಡವನು ಯಾರೂ ಇಲ್ಲವೆಂಬುದನ್ನು ಖಚಿತಪಡಿಸಿ ಹೇಳಿದ್ದನು; ಆದರೆ ನಮಗಿರುವ ಕರ್ತನ ಭರವಸೆಯೆಂದರೆ ಈ ಸುವಾರ್ತಾ ಯುಗದಲ್ಲಿನ ಮದಲಗಿತ್ತಿ ವರ್ಗದ ಚಿಕ್ಕವನು ಅಂದರೆ ದೀನಸ್ಥಿಯಲ್ಲಿರುವನು ಸ್ನಾನಿಕನಾದ ಯೋಹಾನನಿಗಿಂತಲೂ ಹೆಚ್ಚಿನವನಾಗಿರುವನೆಂಬದೇ; ಯಾಕಂದರೆ ಇವರು ಆ ರಾಜ್ಯಕ್ಕೆ ಸಹಬಾಧ್ಯರಾಗಿ ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲನ್ನು ಹೊಂದಲಿರುವರು; ಹೀಗಿರಲಾಗಿ ಯೋಹಾನನು ಹಾಗೂ ಪೂರ್ವದಲ್ಲಿ ನಂಬಿಗಸ್ತರಾದವರು ಭೂಲೋಕ ಮಟ್ಟದಲ್ಲಿ ಮನುಷ್ಯರ ಮಧ್ಯದಲ್ಲಿನ ರಾಜ್ಯದಲ್ಲಿ ಅಧಿಕಾರಿಗಳೂ ರಾಯಭಾರಿಗಳೂ ಆಗಿರುವರು – ಮತ್ತಾಯ 11:11; ಇಬ್ರೀಯ 11:39–40; ಕೀರ್ತನೆ 45:16

## ಎರಡು ವರ್ಗದ ಕನ್ಯೆಯರು

ಈ ಸಾಮ್ಯವು ಈಗಿನ ಕಾಲದಲ್ಲಿನ ಎಲ್ಲಿಯಾದರೂ ಒಂದು ಸನ್ನಿವೇಶಕ್ಕೆ ಸಂಬಂಧಿಸಿರುವದೆಂಬುದನ್ನು ನಮ್ಮ ಮನಸ್ಸಿನಲ್ಲಿ ಗುರುತಿಸಿಕೊಂಡವರಾಗಿ ಇದು ಕೇವಲ ಪರಿಶುದ್ಧರಾದ ಕನ್ಯೆಯರ ಬಗ್ಗೆ ಮಾತ್ರ ಪ್ರಸ್ತಾಪಿಸುವದೆಂಬ ಅಂಶವನ್ನು ನಾವು ಗಮನಿಸಿದ್ದೇವೆ. ಈ ಸಾಮ್ಯವು ಲೋಕದ ಬಗ್ಗೆ ಇಲ್ಲವೇ ಹೆಸರಿನ ಕ್ರೈಸ್ತರ ವಿಷಯವಾಗಿಯೂ ಪ್ರಸ್ತಾಪಿಸುವದೇ ಇಲ್ಲ. ಇದರ ಎರಡು ವರ್ಗಗಳು ಆ ರಾಜ್ಯದ ವಿಷಯವಾದ ಸುವಾರ್ತೆಯನ್ನು ಕೇಳಿದವರಾಗಿ ಅದರ ಅರಸನು ಎರಡನೇ ಸಾರಿ ಬರುವದನ್ನು ನಿರೀಕ್ಷಿಸುತ್ತಾ ತಮ್ಮ ದೀಪದ ಮೂಲಕವಾಗಿ ತಿಳುವಳಿಕೆ ಶಿಕ್ಷಣಗಳೆಂಬ ಬೆಳಕನ್ನು ಹೊಂದಿರುವ ಕ್ರೈಸ್ತರನ್ನು ಅಂದರೆ ಪರಲೋಕ ರಾಜ್ಯದ ವರ್ಗದವರೂ, ನಂಬಿಕೆಯುಳ್ಳವರೂ ನಂಬಿದವರಾದ ಪ್ರತಿಷ್ಠಿತರೂ ಆದವರನ್ನು ಪ್ರತಿನಿಧಿಸುವದು.

ನಿರ್ಮಲರಾದ ಈ ಎರಡು ವರ್ಗಗಳು ಲೋಕದಿಂದ ಬೇರ್ಪಟ್ಟವರಾಗಿ ಮದಲಿಂಗನ ಬರುವಿಕೆ ಹಾಗು ಆ ರಾಜ್ಯದ ವಿಷಯವಾಗಿ ತಿಳುವಳಿಕೆಯನ್ನು ಪಡೆದು ಇವುಗಳಿಗಾಗಿ ಕಾಯುತ್ತಿರುವ ಪ್ರತಿಷ್ಠಿತರಾದ ಎರಡು ವರ್ಗಗಳನ್ನು ಅಂದರೆ "ಪೂರ್ಣ ಜಯಶಾಲಿಗಳೂ" "ಆ ಮಹಾ ಸಂಕಟವನ್ನು" ಜಯಿಸಿದವರೂ ಆದ "ಚಿಕ್ಕ ಹಿಂಡು" ಹಾಗೂ "ಮಹಾ ಸಮೂಹವನ್ನು" ಪ್ರತಿನಿಧಿಸುವದು. (ರೋಮಾ 8:37; ಪ್ರಕಟನೆ 7:14) ಇವರು ದೇವದರ್ಶನ ಗುಡಾರದ ಛಾಯಾರೂಪದಲ್ಲಿನ ಎರಡು ಹೋತಗಳಿಂದ ಸೂಚಿತವಾಗುವ ಇದೇ ಈ ಎರಡು ವರ್ಗಗಳನ್ನು ಪ್ರತಿನಿಧಿಸುವರು. ಅದರಲ್ಲಿ ಒಂದು ಯಜ್ಞಾರ್ಪಿತ – ವಾಗುವ ದೋಷಪರಿಹಾರಕ (ಕರ್ತನ) ಹೋತವಾಗುವದು ಹಾಗೂ ಮತ್ತೊಂದು ಹಜಾಯೇಲನ ಹೋತವಾಗುವದು. ಕೇವಲ ಈ ದೇವದರ್ಶನ ಗುಡಾರದ ಛಾಯಾರೂಪದಲ್ಲಿ ಮಾತ್ರ ಈ ಎರಡು ಹೋತಗಳು ಸುವಾರ್ತಾಯುಗ ಪರ್ಯಂತರ – ವಾಗಿಯೂ ಹಾಗು ನಿರ್ದಿಷ್ಟವಾಗಿ ಅದರ ಸಮಾಪ್ತಿ ಸಮಯದಲ್ಲಿ ಕಂಡುಬರುವ ಎರಡು ವರ್ಗಗಳನ್ನು ಸೂಚಿಸುವದು. ಆದರೆ ಈಗ ಪರಿಗಣಿಸಲಾಗುತ್ತಿರುವ ಸಾಮ್ಯದಲ್ಲಿನ ಎರಡು ವರ್ಗಗಳು ಕೇವಲ ಈಗಿನ ಕಾಲದ ಅಂದರೆ ಈ ಸುವಾರ್ತಾಯುಗದ ಅಂತ್ಯದಲ್ಲಿರವ ಸಭೆಯನ್ನು ಸೂಚಿಸುವದು.

ಈ ಸಾಮ್ಯವನ್ನು ನೀಡುವಲ್ಲಿ ನಮ್ಮ ಕರ್ತನಿಗೆ ಎರಡು ಬಗೆಯ ಉದ್ದೇಶವಿರುವದು ಸ್ಪಷ್ಟ; ಮೊದಲನೆಯದಾಗಿ, ಬರಲಿರುವ ಅರಸನನ್ನು ಹಾಗು ಆತನ ರಾಜ್ಯವನ್ನು ಎದುರುನೋಡುತ್ತಾ ಅದಕ್ಕೆ ಸಿದ್ಧರಾಗಿ ಅದರಲ್ಲಿ ಒಂದು ಪಾಲನ್ನು ಪಡೆಯಲು ನಿರಂತರವಾಗಿ ಸಿದ್ಧರಾಗುವ ಸಲುವಾಗಿ ಜಾಗರೂಕತೆಯಿಂದ ಎಚ್ಚರವಾಗಿದ್ದು ಪ್ರಾರ್ಥಿಸುವದರ ಬಗ್ಗೆ ತನ್ನ ಶಿಷ್ಯರಿಗೂ ಹಾಗು ಈ ಸುವಾರ್ತಾಯುಗದಲ್ಲಿನ ಸಮಸ್ತ ಸಭೆಗೂ ಅಭಿನಂದನಾಪೂರ್ಣವಾದ ಒಂದು ಪಾಠವನ್ನು ನೀಡುವದು. ಎರಡನೆಯದಾಗಿ, ಈ ಸಾಮ್ಯವು ವಿಶೇಷವಾಗಿ ಈ ಕಾಲದಲ್ಲಿ ಜೀವಿಸುತ್ತಿರುವ ನಮಗೋಸ್ಕರವಾಗಿ ಉದ್ದೇಶಿತವಾಗಿದ್ದು, ಇದರಲ್ಲಿ ನಾವು ಆ ರಾಜ್ಯವನ್ನು ಎದುರುನೋಡುತ್ತಾ ಪ್ರಾರ್ಥಿಸುವವರಾಗಿ ಕೇವಲ ಒಂದು ಸಾಧಾರಣ ರೀತಿಯಲ್ಲಿ ಮದಲಿಂಗನನ್ನು ನಿರೀಕ್ಷಿಸುವದಷ್ಟೇ ಸಾಲದೆಂದೂ ಆದರೆ ನಾವು ಆ ಸಂದರ್ಭಕ್ಕಾಗಿ ಎಷ್ಟು ಎಚ್ಚರದಿಂದ ಹಾಗು ಎಷ್ಟು ಉತ್ಸಾಹಪೂರ್ಣರಾಗಿ ಇರಬೇಕೆಂದರೆ ಆ ಅಂತಿಮ ಕ್ಷಣದಲ್ಲಿ ನಾವು ನಿರಾಶರಾಗದಂತೆ ಅದು ನಮ್ಮನ್ನು ಸಾಧ್ಯವಾದಷ್ಟು ವಿವೇಕಪೂರ್ಣವಾಗಿ ಸಿದ್ಧತೆಮಾಡಿಕೊಳ್ಳುವಂತೆ ನಡೆಸಬೇಕೆಂಬುದನ್ನು ನಾವು ಕಂಡುಕೊಳ್ಳಬೇಕಿರುವದು.

## ಸಾಮ್ಯದಲ್ಲಿರುವ ಸೆಕೆಂಡ್ ಅಡ್ವೆಂಟಿಸ್ಟ್ ಪಂಗಡ

ಈ ಸಾಮ್ಯದ ಚಿತ್ರಣವು ನಿಜವಾಗುವಂತೆ ಕಳೆದ ಶತಮಾನದಲ್ಲಿ ಕರ್ತನ ಜನರ ಪಂಗಡಗಳೆಲ್ಲವುಗಳ ಮಧ್ಯದೊಳಗಿಂದ ಒಂದು ಆಂದೋಲನವು ಉಂಟಾಗಿ ಅದು ಎರಡನೇ ಬರೋಣದ ಆಂದೋಲನ (ಸೆಕೆಂಡ್ ಅಡ್ವೆಂಟಿಸ್ಟ್ ಮೂವ್‌ಮೆಂಟ್) ಎಂಬ ಹೆಸರನ್ನು ಪಡೆಯುವದರಲ್ಲಿ ಪೂರ್ಣಗೊಂಡಿತ್ತು. ಪ್ರಪಂಚದ ಎಲ್ಲೆಡೆ ಕ್ರೈಸ್ತರಲ್ಲಿ ಇರುವಂಥ ಪರಿಶುದ್ಧರಾದ ಕನ್ಯೆಯರು ಮದಲಿಂಗನ ಬರುವಿಕೆಯು ಹತ್ತಿರವಾಗಿರುವದೆಂಬ ಆಲೋಚನೆಯಿಂದ ಪ್ರೇರಿತರಾದುದರ ಫಲವಾಗಿ ಸಾಮಾನ್ಯವಾದ ಒಂದು ಬಗೆಯ ದೀಪ ಸರಿಪಡಿಸಿಕೊಳ್ಳುವ ಅಂದರೆ ಈ ವಿಷಯದ ಬಗ್ಗೆ ಎಲ್ಲೆಡೆ ಸತ್ಯವೇದದ ವಿಶೇಷ ಪರಿಶೀಲನೆಯು ನಡೆಸಲ್ಪಟ್ಟಿತ್ತು. ಸಾಮ್ಯದ ಸಂಗತಿಯು ನಿಜವಾಗುವಂತೆ ಆ ಪ್ರಿಯರಾದ ಜನರ ನಿರೀಕ್ಷೆಯು ಭಂಗವಾಗಿ ನಿರಾಶೆಯುಂಟಾಯಿತು; ಅಂದರೆ "ಮದಲಿಂಗನು ಬರುವದಕ್ಕೆ ತಡಮಾಡಿದನು" ಅಲ್ಲದೆ ಆತನು ತಡಮಾಡಲು "ಅವರೆಲ್ಲರು ತೂಕಡಿಸಿ ಮಲಗಿದರು." ದೀಪದ ಆರತಿಗಳು ಗಣನೀಯವಾಗಿ ಉಪೇಕ್ಷಿಸಲ್ಪಡುವಂತಾಗಿ ಈ ವರ್ಗದವರೆಲ್ಲರ ಮೇಲೆ ಜಡತ್ವವು ಮೂಡಿ ಬಂದಿತ್ತು. ಕನ್ಯೆಯರಲ್ಲಿ ಅನೇಕರು ನಿದ್ರಿಸುವದು ಮಾತ್ರವಲ್ಲದೆ ಅವರು ಅತಿ ವಿಚಿತ್ರವೂ ಅವಾಸ್ತವವೂ ಅನುಚಿತವೂ ಆಗಿರುವ ಸಂಗತಿಗಳ ವಿಷಯವಾಗಿ ಕನಸನ್ನು ಕಾಣುವವರಾಗಿದ್ದರೆಂಬುದನ್ನು ನಾವು ಸಾಕಷ್ಟು ಸೂಕ್ತವಾಗಿ ಒಪ್ಪಿಕೊಳ್ಳಬಹುದು ಎಂಬದು ನಿಜವೇ. ಆದರೆ ಅಂತಿಮವಾಗಿ ನಡುರಾತ್ರಿಯಲ್ಲಿ ಉಂಟಾಯಿತು "ಇಗೋ, ಮದಲಿಂಗನು!" ಎಂಬ ಕೂಗು.

ಕ್ರಿ.ಶ. 1874ನೇ ಇಸವಿಯಿಂದಲೂ ಈ ಕೂಗುವಿಕೆಯು ಉಂಟಾಗುತ್ತಿರುವದು ಹಾಗು ಇದಕ್ಕೆ ಸ್ಪಂದಿಸುವವರಾಗಿ ಎಲ್ಲೆಡೆ ಇರುವ ಕನ್ಯೆಯರ ವರ್ಗದವರೆಲ್ಲರೂ ಎಚ್ಚೆತ್ತುಕೊಂಡು ದೇವರ ವಾಕ್ಯವನ್ನು ಹೊಸದಾಗಿ ಪರಿಶೀಲಿಸುವದನ್ನು ಮುಂದುವರೆಸು–ತ್ತಿರುವರು ಅಂದರೆ ದೀಪದ ಸರಿಪಡಿಸಿಕೊಳ್ಳುವಿಕೆಯು (ಕುಡಿಕತ್ತರಿಸುವಿಕೆಯು) ನಡೆಸಲ್ಪಡುತ್ತಿರುವದು. ಈ ಪ್ರಕಟನೆ – ಯನ್ನು ಕೇಳಿದವರಲ್ಲಿ ಕೆಲವರು ಇದು ಒಂದು ಸುಳ್ಳಾದ ಕೂಗುವಿಕೆ ಎಂಬುದನ್ನು ಸಾಧಿಸುತ್ತಿರುವರು: ಅವರು ಅತಿಯಾಗಿ ತೂಕಡಿಸುವವರಾಗಿ ಪ್ರಪಂಚದ ಚಿಂತೆಗಳಲ್ಲಿ ಘಾಡವಾಗಿ ಮುಳುಗಿ ಎಷ್ಟು ಸುಖವಾಗಿ ಮಲಗಿರುವರೆಂದರೆ, ಅವರು ಮದಲಿಂಗನನ್ನು ಪ್ರೀತಿಸಿ ಎಲ್ಲದಕ್ಕಿಂತಲೂ ಮಿಗಿಲಾಗಿ ಆತನನ್ನು ಸ್ವೀಕರಿಸಿಕೊಳ್ಳಲು ಸಿದ್ಧರಾಗ ಬಯಸಿದಾಗ್ಯೂ ಅವರು ಸಿದ್ಧರಾಗಿಲ್ಲದೆ (ದೇವವಾಕ್ಯವನ್ನು) ಪರಿಶೋಧಿಸಲು ನಿರಾಕರಿಸುವವರಾಗಿ ಕೇವಲ ತಮ್ಮ ತಮ್ಮೊಳಗೆ ಹೀಗೆ ಪಿಸುಗುಟ್ಟುತ್ತಿರುವರು: "ಹೌದು, ನಾವು ಮದಲಿಂಗನನ್ನು ಪ್ರೀತಿಸುವೆವು, ನಾವು ಖಂಡಿತವಾಗಿಯೂ ಆತನನ್ನು ಸ್ವೀಕರಿಸಿಕೊಳ್ಳಲು ಸಿದ್ಧರಾಗುವೆವು, ನಾವು ಬಹು ಕಾಲದಿಂದಲೂ ಆತನಿಗಾಗಿ ಕಾಯುತ್ತಿರುವೆವು, ಆದರೆ ಅದು ಇನ್ನೂ ಆಗಲಿಲ್ಲ, ಇನ್ನೂ ಆಗಲಿಲ್ಲ. ಆತ್ಮವೇ ನೀನು ನೆಮ್ಮದಿಯಿಂದ ಇರು; ಈ ವಿಷಯದ ಬಗ್ಗೆ ಯಾರಿಗೂ ಏನೂ ತಿಳಿದಿಲ್ಲ; ಮದಲಿಂಗನ (ಬರುವಿಕೆಯ) ಬಗ್ಗೆ ಸಾರಿ ಹೇಳುತ್ತಿರುವವರು ಖಂಡಿತವಾಗಿಯೂ ತಪ್ಪಿದವರಾಗಿರುವರು."

ದಿನಗಳು ವಾರಗಳು ವರುಷಗಳು ಉರುಳಿದಂತೆ ಹೆಚ್ಚು ಹೆಚ್ಚು ಕನ್ಯೆಯರು ಎಚ್ಚೆತ್ತುಕೊಳ್ಳುತ್ತಿರುವರು, ಮತ್ತು ಅವರು ಹೀಗೆ ಮಾಡುತ್ತಿರುವಲ್ಲಿ (ದೇವರ ವಾಕ್ಯಗಳ) ಪರಿಶೋಧನೆಯು ಅಂದರೆ ಆರತಿ ದೀಪದ ಸರಿಪಡಿಸುವಿಕೆಯು ಆರಂಭವಾಗುವದು.

ಆನಂತರ ಕಂಡುಬಂದದ್ದೇನಂದರೆ, ತಮ್ಮ ದಣಿಯ ಸೌಭಾಗ್ಯದಲ್ಲಿ ಸೇರಲು ಸಿದ್ಧರಿರುವದಾಗಿ ಭಾವಿಸಿಕೊಂಡಂಥ ಕೆಲವರು ತಮಗೆ ಪವಿತ್ರಾತ್ಮವನ್ನು ಸೂಚಿಸುವ ಎಣ್ಣೆಯೆಂಬ ಬಹು ಮುಖ್ಯವಾದ ವಿಷಯದಲ್ಲಿ ತಮಗೆ ಕೊರತೆಯಿರುವುದನ್ನು ಕಂಡುಕೊಳ್ಳುವ–ರೆಂಬದು; ಕೇವಲ ಈ ಮೂಲಕವಾಗಿಯೇ ಅವರಿಗೆ ತಿಳುವಳಿಕೆ ಉಂಟಾಗುವದು. ಮದಲಿಂಗನು ಬರುವದಕ್ಕೆ ತಡಮಾಡುವದು ಆತನೊಡನೆ ಮದುವೆಗೆ ಆಹ್ವಾನಿಸಲ್ಪಟ್ಟಿರುವ ಕನ್ಯೆಯರಿಗೆ ಹೀಗೆ ಒಂದು ಪರೀಕ್ಷೆಯಾಗಿ ಮಾರ್ಪಡುವದು; ಈ ವಿಳಂಬವು ಯಾರು ಬುದ್ಧಿವಂತೆಯರು ಯಾರು ಬುದ್ಧಿಯಿಲ್ಲದವರು ಎಂಬುದನ್ನು ಸಾಬೀತುಪಡಿಸಲು ಅನುಕೂಲಿಸುವದು. ಯಾವ ಹಂತದಲ್ಲಿಯಾದರೂ ಕನ್ಯೆಯರೊಡನೆ ಎಣಿಸಲ್ಪಡಬೇಕಾದಲ್ಲಿ ಕೆಲವೊಂದು ಪ್ರಮಾಣದಲ್ಲಿನ ಎಣ್ಣೆ, ಕೆಲವೊಂದು ಪ್ರಮಾಣದಲ್ಲಿನ ಪ್ರತಿಷ್ಠೆ, ಕೆಲವೊಂದು ಪ್ರಮಾಣದ ಪವಿತ್ರಾತ್ಮವು ಅವಶ್ಯವಿರುವದು; ಆದರೆ ಈಗ ಅಂದರೆ ಮದಲಿಂಗನು ನಿಜವಾಗಿ ಪ್ರತ್ಯಕ್ಷನಾಗಿರುವ ಕಾಲದಲ್ಲಿ, ಮದುವೆಯ ಮೆರವಣಿಗೆಯಲ್ಲಿ ನಿಜವಾಗಿ ಸೇರಬೇಕಾದ ಸಮಯದಲ್ಲಿ ಅದು ಇನ್ನೂ ಅಧಿಕ ಪ್ರಮಾಣದ ಅಗತ್ಯವಿರುವದು; ಅಧಿಕವಾದ ಸತ್ಯಾರ್ಥಗಳು ಅಧಿಕವಾದ ಬೆಳಕು ಈಗ ಸನ್ನಿಹಿತವಾಗಿದ್ದು ಇವುಗಳನ್ನು ಮದುವೆಯ ಸಮಾರಂಭಕ್ಕೆ ಹೋಗುವವರು ಪಡಕೊಳ್ಳಲೇಬೇಕು.

ಕನ್ಯೆಯರು ಕೇವಲ ಈ ಕಾಲದಲ್ಲಿರುವ ಕರ್ತನ ಜನರೆಲ್ಲರನ್ನು ಸಾಧಾರಣವಾಗಿ ಪ್ರತಿನಿಧಿಸುವರು; ಹೀಗಾಗಿ ಅವರಲ್ಲಿ ಅನೇಕರಿಗೆ 1844ನೇ ಇಸವಿಯಲ್ಲಿ ನಡೆದ ಅಡ್ವೆಂಟಿಸ್ಟ್ ಮೂವ್‌ಮೆಂಟ್ ಎಂಬ ಜಾಗೃತಿ ಆಂದೋಲನದೊಡನೆ ಯಾವುದೇ ಸಂಬಂಧವಿರುವುದಿಲ್ಲ. ಹೇಗೂ ಅಲ್ಲಿ ಸಾಧಾರಣವಾಗಿ ಇರುತ್ತಿದ್ದ ಅದೇ ಮನೋಭಾವವು ಇಲ್ಲಿಯೂ ಇರಬೇಕು, ಅದೇನಂದರೆ ಮದಲಿಂಗನ ಮೇಲಿನ ಪ್ರೀತಿ, ಆ ರಾಜ್ಯದಲ್ಲಿ ಆತನು ಪ್ರತ್ಯಕ್ಷನಾಗಿರುವದರ ಅಪೇಕ್ಷೆ ಹಾಗೂ ಎಲ್ಲಾದಕ್ಕಿಂತಲೂ ಮಿಗಿಲಾಗಿ ಬಾಗಿಲು ಮುಚ್ಚುವುದರೊಳಗೆ ಆತನೊಡನೆ ಅದರಲ್ಲಿ ಸೇರಲು ಸಿದ್ಧರಾಗಿರಲು ಬಯಸುವದು. ಹಾಗಿದ್ದಲ್ಲಿ ಈಗ ಇರುವ ಪ್ರಶ್ನೆ ಏನಂದರೆ ಯಾರು ಸಾಕಷ್ಟು ಎಣ್ಣೆಯನ್ನು ಬೆಳಕನ್ನು ಪವಿತ್ರಾತ್ಮವನ್ನು ಹೊಂದಿರುವರು? ಎಂಬದು; ಈ ಮೂಲಕವಾಗಿಯೇ ಜ್ಞಾನದ ಬೆಳಕು ಪ್ರಜ್ವಲಿಸುವಂತಾಗಿ ಬಾಗಿಲು ಮುಚ್ಚುವದರೊಳಗೆ ಮದಲಿಂಗನೊಡನೆ ಆ ಮೆರವಣಿಗೆಯಲ್ಲಿ ಸೇರುವ ಆ ಕನ್ಯೆಯರ ಜೊತೆಯಲ್ಲಿ ನಿಲ್ಲಲು ಸಮರ್ಥರಾಗುವದು. ಇದು ಒಂದು ಮುಖ್ಯವಾದ ಪ್ರಶ್ನೆ ಹಾಗು ಇದು ತನ್ನ ಆರತಿಯ ದೀಪವನ್ನು ಬೆಳಗಿಸುತ್ತಿರುವ ಪ್ರತಿಯೊಬ್ಬನನ್ನೂ ಆಕರ್ಶಿಸುವಂಥದ್ದು. ಸಾತ್ವಿಕತ್ವ ತಾಳ್ಮೆ ನಯವಿನಯ ದೀರ್ಘಶಾಂತಿ ಸಹೋದರ ಸ್ನೇಹ ಪ್ರೀತಿಗಳೆಂಬ ಗುಣಗಳಲ್ಲಿ ವ್ಯಕ್ತವಾಗುವ ಕರ್ತನ ಆತ್ಮವೆಂಬ ಎಣ್ಣೆಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರುವಂತೆ ನಾವು ನೋಡಿಕೊಳ್ಳುವದು ಎಷ್ಟು ಅಗತ್ಯ! ಇವುಗಳನ್ನು ನಾವು ಸಾಕಷ್ಟು ಪ್ರಮಾಣದಲ್ಲಿ ಹೊಂದದೇ ಇದ್ದಲ್ಲಿ ನಮ್ಮ ಆರತಿಯ ದೀಪವು ಆರಿಹೋಗುವದೆಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು.

## "ನಿಮ್ಮ ಎಣ್ಣೆಯಲ್ಲಿ ನಮಗೆ ಸ್ವಲ್ಪ ಕೊಡಿರಿ"

ಬುದ್ಧಿವಂತೆಯರಾದ ಕನ್ಯೆಯರೆಲ್ಲರೂ ತಮ್ಮ ದೀಪವನ್ನು ಬೆಳಗಿಸಿ ಮದಲಿಂಗನ ಕೃಪಾಕಟಾಕ್ಷದಲ್ಲಿ ತಾವು ಒಂದು ಸ್ಥಾನವನ್ನು ಪಡೆದು ಮದುವೆಯ ಸಮಾರಂಭದ ಒಳಗೆ ಸೇರುವಂತಾಗಲು ಅವರಿಗೆ ಪವಿತ್ರಾತ್ಮವು ಅಂದರೆ ಪ್ರತಿಷ್ಠಾ ಮನೋಭಾವವು ಪೂರ್ಣ ಪ್ರಮಾಣದಲ್ಲಿರಬೇಕೆಂಬುದನ್ನು ನಿದರ್ಶಿಸಲು ನಮ್ಮ ಕರ್ತನು ಸಾಮ್ಯದಲ್ಲಿ ಬುದ್ಧಿಯಿಲ್ಲದ ಕನ್ಯೆಯರು ಬುದ್ಧಿಯುಳ್ಳ ಕನ್ಯೆಯರಿಗೆ ಅವರ ಎಣ್ಣೆಯಲ್ಲಿ ತಮಗೆ ಸ್ವಲ್ಪ ಕೊಡಲು ಕೇಳಿಕೊಳ್ಳುವದನ್ನೂ ಆನಂತರದಲ್ಲಿ ಹೀಗೆ ಇತರರಿಂದ ಹೊಂದಿಕೊಳ್ಳುವದು ಅಸಾಧ್ಯವೆಂಬುದನ್ನು ಸೂಚಿಸಿ ಹೇಳಿದ್ದಾನೆ. ಪವಿತ್ರಾತ್ಮನ ಫಲವಾಗಲೀ ವರವಾಗಲೀ ಕೇಳಿ ಪಡಕೊಳ್ಳಲು ಸಾಧ್ಯವಾಗದು; ಅದನ್ನು ಜೀವಿತಾನುಭವವೆಂಬ ಮಾರುಕಟ್ಟೆಯಿಂದ ಕೊಂಡುಕೊಳ್ಳಬೇಕಿರುವದು. ಅವುಗಳು ಹಂತಹಂತವಾಗಿ ಅಭಿವೃದ್ಧಿಯಾಗುವಂಥದ್ದಾಗಿದ್ದು ನಡೆನುಡಿ – ಕಾರ್ಯಗಳ ಮೂಲಕವಾಗಿ ಬಹು ಪರಿಶ್ರಮದ ಮೂಲಕವಾಗಿ ವೃದ್ಧಿಪಡಿಸಿಕೊಳ್ಳಬೇಕಾಗುತ್ತದೆ. ಯಾಕಂದರೆ ಪವಿತ್ರಾತ್ಮನ ಈ ಫಲಗಳನ್ನುಗಳಿಸಿಕೊಳ್ಳುವದು ಬಹು ಕಷ್ಟಕರವಾಗಿದ್ದು ಅದು ತನ್ನನ್ನು ತ್ಯಾಗಮಾಡಿಕೊಳ್ಳುವದರ ಮೂಲಕವಾಗಿ ಹಾಗು ಲೋಕದ ಹಿತಾಸಕ್ತಿಗಳನ್ನು ತ್ಯಜಿಸುವದರ ಮೂಲಕವಾಗಿ ಪಡಕೊಳ್ಳುವಂಥದಾಗಿದ್ದು, ಕರ್ತನ ದೃಷ್ಟಿಯಲ್ಲಿ ಇವುಗಳು ಅಮೂಲ್ಯ –ವಾಗಿರುವದು.

ಯಾರಿಗೂ ಈ ಪವಿತ್ರಾತ್ಮವನ್ನು ಅತಿಯಾಗಿ ಪಡೆಯಲು ಸಾಧ್ಯವಾಗದು, ತನಗಿರುವ ಪವಿತ್ರಾತ್ಮನ ಸಮೃದ್ಧಿಯಿಂದ ಇತರ–ರಿಗೆ ಒದಗಿಸಿಕೊಡುವ ಸಲುವಾಗಿ ಯಾರೂ ತನ್ನ ಸ್ವಂತ ಬಳಕೆಗಾಗಿ ಹೆಚ್ಚಾದ ಪ್ರಮಾಣದಲ್ಲಿ ಹೊಂದಿಸಿಕೊಳ್ಳಲು ಸಾಧ್ಯವಾಗದು. ಮದಲಿಂಗನು ಮುಂದಾಗಿಯೇ ಏರ್ಪಾಟುಗಳನ್ನು ಹೇರಳವಾಗಿ ಮಾಡಿದ್ದು ಆ ಮೂಲಕವಾಗಿ ಯಾರು ತನ್ನೊಡನೆ ಮದುವೆಯ ಸಮಾರಂಭದ ಮನೆಯೊಳಗೆ ಹೋಗಲು ಆಹ್ವಾನಿಸಲ್ಪಟ್ಟಿರು – ವರೋ ಅವರು ಕೇವಲ ಮದುವೆಯ ಬಟ್ಟೆ ಹಾಗು ಆರತಿ ದೀಪಗಳಿಂದ ಮಾತ್ರವಲ್ಲದೆ ಎಣ್ಣೆಯನ್ನು ಸಹ ಹೊಂದಿದವರಾಗಿ ಸೂಕ್ತ ರೀತಿಯಲ್ಲಿ ಸಜ್ಜಿತರಾಗಿರುವಂತೆ ಮಾಡಲಾಗಿರುವದು; ಯಾರಾದರೂ ಎಣ್ಣೆಯನ್ನು ಸಂಗ್ರಹಿಸಿಟ್ಟುಕೊಳ್ಳುವದರಲ್ಲಿ ಅಜಾಗರೂಕರಾದಲ್ಲಿ ಆ ಮೂಲಕವಾಗಿ ಅವರು ಬಾಗಿಲು ಮುಚ್ಚುವದರೊಳಗೆ ಮದಲಿಂಗನೊಡನೆ ಒಳಗೆ ಹೋಗವಂಥ ಗುಂಪಿನವರಾಗುವದಕ್ಕೆ ಅನರ್ಹರಾಗಿರುವರು. ಇದು ಈ ಸಾಮ್ಯದ ಮೂಲಕವಾಗಿ ನಮ್ಮ ಕರ್ತನು ನೀಡಿದ ನೀತಿಬೋಧನೆಯ ತಿರುಳು, ಅದೇನಂದರೆ ಯಾರು ಆ ರಾಜ್ಯದಲ್ಲಿ ಸೇರಿ ಅದರ ಮಹಿಮೆಯಲ್ಲಿ ಪಾಲು ಹೊಂದುವದನ್ನು ನಿರೀಕ್ಷಿಸುತ್ತಿರುವರೋ ಅವರು ಮುಂದಾಗಿ ಅದಕ್ಕೆ ಸಿದ್ಧತೆ ಮಾಡಿಕೊಂಡಿಬೇಕೆಂಬುದನ್ನು ಅಪೇಕ್ಷಿಸಲಾಗುವದೆಂಬದು. ಅವರೇನಾದರೂ ಬಾಗಿಲು ಮುಚ್ಚುವವರೆಗೂ ಕಾದುಕೊಂಡಿದ್ದೇಯಾದಲ್ಲಿ ಅವರು ಎಷ್ಟೇ ಇಚ್ಛಿಸುವಂಥವರಾದರೂ, ಎಷ್ಟೇ ಕಾತುರವುಳ್ಳವರಾದರೂ ಅವರು ಸಿದ್ಧರಾಗಲಾರರು; ಸಿದ್ಧತೆಮಾಡಿಕೊಳ್ಳುವದಕ್ಕೆ ಸಮಯ ತಾಳ್ಮೆ ಜಾಗ್ರತೆಗಳು ಅವಶ್ಯ.

ನಿಜ ಕ್ರೈಸ್ತರಾಗಿದ್ದೇವೆಂಬುದಕ್ಕೆ ಸಾಕ್ಷಿಪ್ರಮಾಣವನ್ನು ನೀಡುವ ಅಂದರೆ ಶುದ್ಧವಾದ ಹೃದಯೋದ್ದೇಶವನ್ನು ಪಡೆದ "ಕನ್ಯೆಯರಾಗಿ" ಪರಲೋಕದ ಮದಲಿಂಗನ ಬಗ್ಗೆ, ಮದುವೆಯ ಔತಣಕ್ಕೆ ಕೂಡಿಬರಲು ಗಣನೀಯವಾದ ಆಸಕ್ತಿಯುಳ್ಳವರಾದರೂ ಈ ಕುತೂಹಲಕಾರಿ ಸಂಗತಿಗಳ ಬಗ್ಗೆ ಯಾವ ಜ್ಞಾನಪ್ರಕಾಶವನ್ನೂ ಹೊಂದದೇ ಇರುವಂಥವರನ್ನು ನಾವು ಸತತವಾಗಿ ಸಂಧಿಸು–ತ್ತಿರುತ್ತೇವೆ. ಕೆಲವು ಸಾರಿ ಅವರು ನಮಗೆ: "ನೀವು ಪಡೆದಂಥಾ ಬೆಳಕಿನಲ್ಲಿ ನಮಗೂ ಕೊಡಿರಿ, ಈ ಸಂಗತಿಗಳನ್ನು ಹೇಗೆ ತಿಳಿದು–ಕೊಂಡಿರೆಂಬುದನ್ನು ನಮಗೂ ತಿಳಿಸಿರಿ, ಇತರು ನಿದ್ರಿಸುತ್ತಿರುವಾಗ ನೀವು ಅವುಗಳ ವಿಷಯದಲ್ಲಿ ಅಷ್ಟು ದೃಢವಾಗಿರುವದು ಏಕೆ. ನಾವು ಸಾಕಷ್ಟು ಎಚ್ಚೆತ್ತುಕೊಂಡಿದ್ದೇವಾದರೂ ನಮ್ಮ ದೀಪಗಳು ಬೆಳಕನ್ನು ನೀಡುತ್ತಿಲ್ಲ" ಎಂದು ಹೇಳುವರು. ನಾವು ಉತ್ತರಿಸುವದೇನಂದರೆ ಈ ವಿಷಯಗಳಲ್ಲಿ ನಂಬಿಕೆಯನ್ನು ಮತ್ತೊಬ್ಬರಿಂದ ಅವರಿಗೆ ಕೊಡಿಸುವದು ಅಸಾಧ್ಯವೆಂಬದು; ನಂಬಿಕೆಯನ್ನು ಪಡಕೊಳ್ಳಲು ಒಂದೇ ಒಂದು ಮಾರ್ಗವಿದ್ದು ಅದು ತಾಳ್ಮೆಯಿಂದ ಪವಿತ್ರಾತ್ಮನ ನಡಿಸುವಿಕೆಯ ಮೂಲಕ ಸತತ ಪರಿಶ್ರಮದಿಂದ ದೇವರ ವಾಕ್ಯವನ್ನು ಅಧ್ಯಯನಮಾಡುವದರ ಮುಖಾಂತರವೆಂಬದೇ. ನಾವು ಅವರಿಗೆ ತಿಳಿಸುವದೆಂದರೆ: ಈ ಎಣ್ಣೆಯನ್ನೂ ಹಾಗೂ ಅದರ ಬೆಳಕನ್ನು ಹೊಂದುವ ಸಲುವಾಗಿ ಒಳ್ಳೆಯದನ್ನು ಮಾಡುವದರಲ್ಲಿ, ಸತ್ಯವೇದದ ಅಧ್ಯಯನ ನಡೆಸುವದರಲ್ಲಿ, ಪವಿತ್ರಾತ್ಮನ ವರ ಹಾಗು ಫಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸತತವಾಗಿ ಸಹನೆಯಿಂದ ಪರಿಶ್ರಮಿಸುವದು ಅಗತ್ಯ. ಅವರು ಈ ಬಗ್ಗೆ ವಿಷಾದ ವ್ಯಕ್ತಪಡಿಸುವರು; ಏಕೆಂದರೆ ಅವರು ಈ ಜೀವಿತದಲ್ಲಿನ ಚಿಂತೆಗಳು ಇಲ್ಲವೇ ಐಶ್ವರ್ಯದಿಂದುಂಟಾಗುವ ಮೋಸಗಳು ಇಲ್ಲವೇ ಕುಟುಂಬ ಸಂಬಂಧದ ಹೆಮ್ಮೆ ಅಥವಾ ಇತರ ಯಾವುದೇ ಸಂಗತಿಗಳಲ್ಲಿ ಪೂರ್ಣವಾಗಿ ಮುಳುಗಿಹೋಗಿರುವ ಕಾರಣದಿಂದ ತಮ್ಮ ಆತ್ಮಿಕ ಬೆಳವಣಿಗೆ ಹಾಗು ದೇವರ ವಾಕ್ಯದ ಅಧ್ಯಯನಕ್ಕೆ ಅವರಿಗೆ ಸಮಯವಿಲ್ಲದಿರುವದೇ. ಅಂಥವರ ಬಗ್ಗೆ ನಾವು ವಿಷಾದಿಸುವವರೂ ನಿರಾಶೆಯುಳ್ಳವರೂ ಆಗಿರುವೆವು. ಅವರು ಎಣ್ಣೆಯ ಒಂದು ಒಳ್ಳೆಯ ಪೂರೈಕೆಯುಳ್ಳವರಾಗಿ ಈಗ ಬೆಳಗುತ್ತಿರುವಂಥ ಸ್ಪಷ್ಟವಾದ ಬೆಳಕಿನಲ್ಲಿ ನಮ್ಮೊಡನೆ ಆನಂದಿಸುವಂಥದನ್ನು ಇಚ್ಛಿಸುವೆವು. ಅವರಿಗೆ ಎಲ್ಲಿ ಹಾಗು ಹೇಗೆ ಎಣ್ಣೆಯನ್ನೂ ಬೆಳಕನ್ನೂ ಪಡಕೊಳ್ಳಬೇಕೆಂದು ತಿಳಿಸುವ–ದಕ್ಕಿಂತಲೂ ಹೆಚ್ಚಿನದೇನೂ ಮಾಡಲು ನಮಗೆ ಸಾಧ್ಯವಾಗದು. ನಮ್ಮ ವೈಯುಕ್ತಿಕವಾದ ಸಿದ್ಧತೆಯಲ್ಲಿ ನಾವು ಮುಂದುವರೆದು ಮದಲಿಂಗನನ್ನು ವಂದಿಸುವ ಸಲುವಾಗಿ ನಮ್ಮ ಬೆಳಕಿನ ಆರತಿಯನ್ನು ಎತ್ತಿ ಹಿಡಿಯಲು ತ್ವರೆಪಡುತ್ತಾ ಆತನ ಸನ್ನಿಧಿಯಲ್ಲಿ ಸಂತೋಷವನ್ನು ವ್ಯಕ್ತಪಡಿಸುವವರಾಗಿ ಆತನೊಡನೆ ಮದುವೆಯ ಸಮಾರಂಭದಲ್ಲಿ ಸೇರುವದನ್ನು ಎದುರು ನೋಡಬೇಕು.

## "ಬಾಗಿಲು ಮುಚ್ಚಲಾಯಿತು"

ನಾವು ತಿಳಿದಿರುವ ಪ್ರಕಾರ ಕ್ರಿ.ಶ. 1878ನೇ ಇಸವಿಯ ಶರತ್ಕಾಲದಿಂದ ಬುದ್ಧಿವಂತೆಯರಾದ ಕನ್ಯೆಯರು ಮದುವೆಯ ಸಮಾರಂಭದಲ್ಲಿ ಸೇರುತ್ತಿದ್ದು, ಈಗಲೂ ಅವರು ಸೇರುತ್ತಲಿರು ವರು; ಅಂದರೆ ಒಂದು ಕ್ಷಣದಲ್ಲೇ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಟ್ಟು (1 ಕೊರಿಂಥ 15:52) ತೆರೆಯ ಆಚೆಯ ಕಡೆಗೆ ದಾಟಿಹೋಗುತ್ತಿರುವರು. ಶೀಘ್ರದಲ್ಲೇ ಕಡೆಯ ಸದಸ್ಯನು ಮಾರ್ಪಟ್ಟು ಮೊದಲನೇ ಪುನರುತ್ಥಾನವೆಲ್ಲವೂ ಪೂರ್ಣವಾಗು –ವದು; ಆಗಲಿಂದಲೇ ಬಾಗಿಲು ಮುಚ್ಚಲಾಗುವದು ಹಾಗು ಒಳಗೆ ಸೇರಲು ಇನ್ನು ಯಾರನ್ನೂ ಬಿಡಲಾಗುವದಿಲ್ಲ. ಕರ್ತನಿಗೆ ಪ್ರಿಯರಾದ ಜನರಲ್ಲಿ ಕೆಲವರು ಆಲೋಚಿಸುವಂತೆ ಇದು ಒಂದು ಭಯಾನಕವಾದ ಸ್ಥಿತಿಯನ್ನು ಸೂಚಿಸುವದಿಲ್ಲವೆಂಬುದಕ್ಕೆ ದೇವರಿಗೆ ಸ್ತೋತ್ರ. ನಿರೀಕ್ಷೆಯೆಂಬ ಬಾಗಿಲನ್ನು ಮುಚ್ಚಲ್ಪಡುವ–ದೆಂಬದು ಹೊರಗೆ ಉಳಿದವರೆಲ್ಲರೂ ಅಂದರೆ ಬುದ್ಧಿಯಿಲ್ಲದ ಕನ್ಯೆಯರ ಸಹಿತವಾಗಿ ಲೋಕದವರೆಲ್ಲರೂ ಎರಡನೇ ಮರಣದಲ್ಲಿನ ನಿರೀಕ್ಷಾ ಹೀನವಾದ ಹತಾಶೆಯ ಸ್ಥಿತಿಗೆ ಇಳಿದು ಹೋಗುವದನ್ನು ಸೂಚಿಸುವದೆಂದು ಅರ್ಥೈಸಲಾಗದು. ಹೇಗೂ ಇದು ಮತ್ತೆ ಇನ್ನೆಂದಿಗೂ ತೆರೆಯಲಾಗದಂಥಾ ಮಹತ್ತರವೂ ಭವ್ಯವೂ ಆದ ಅವಕಾಶವು ಮುಕ್ತಾಯಗೊಳ್ಳುವದು ಎನ್ನುವದನ್ನು ಸೂಚಿಸುವದು ಎಂಬ ಅರ್ಥವನ್ನು ಕೊಡುವದು. ಅಂದರೆ ಇದು ಆ ರಾಜ್ಯಕ್ಕೆ ಸೇರುವ ಮದಲಗಿತ್ತಿಯೆಂಬ ವರ್ಗವು ಪೂರ್ಣಗೊಳ್ಳುವದನ್ನು, ಪ್ರಭಾವ ಮಾನ ನಿರ್ಲಯತ್ವಗಳನ್ನು ಹಾಗು ಕ್ರಿಸ್ತನೊಂದಿಗೆ ಸಹಬಾಧ್ಯತೆಯನ್ನು ಪಡೆಯುವದಕ್ಕೆ ನಡೆಸುವಂಥ ಇಕ್ಕಟ್ಟಾದ ಮಾರ್ಗವು ಮುಚ್ಚಲ್ಪಡುವದನ್ನು ಸೂಚಿಸುವದು.

ಬುದ್ಧಿಯಿಲ್ಲದ ಕನ್ಯೆಯರು ಹೋಗಿ ಬಹು ಬೆಲೆಯುಳ್ಳ ಎಣ್ಣೆಯನ್ನು ಕೊಂಡುಕೊಂಡು ತಮ್ಮ ದೀಪಗಳನ್ನು ನೆಟ್ಟಗೆಮಾಡಿ ಅವು ಬೆಳಗುವಂತೆ ಮಾಡುವರಾದರೂ ಅದು ಮದುವೆಯ ಸಮಾರಂಭಕ್ಕೆ ಬಹು ತಡವಾಗುವದು, ಯಜ್ಞದಕುರಿಯಾದಾತನ ಹೆಂಡತಿಯಾಗುವ ಮದಲಗಿತ್ತಿ ಆಗುವವಂಥವರೊಂದಿಗೆ ಇರುವದಕ್ಕೆ ಬಹು ತಡವಾಗುವದು. ಹಾಗು ಇದನ್ನು ಸಾಮ್ಯದಲ್ಲಿ–ಅವರು ಬಾಗಿಲನ್ನು ತಟ್ಟಿದಾಗ ಮದಲಿಂಗನು ಹೀಗೆ ಹೇಳುವನೆಂದು ಸೂಚಿಸಲಾಗಿರುವದು: "ನೀವು ಮದಲಗಿತ್ತಿಯ ವರ್ಗದವರಾಗಿದ್ದೀರೆಂಬದನ್ನು ನಾನು ಮಾನ್ಯಮಾಡುವದಿಲ್ಲ; ನೀವು ಒಳಗೆ ಬರಬಾರದು." ಇತರರೊಡನೆ ದಣಿಯ ಸೌಭಾಗ್ಯದಲ್ಲಿ ಸೇರುವದಕ್ಕೆ ಬದಲಾಗಿ ಕನಿಷ್ಠವೆಂದರೆ ಅವರು ಒಂದು ಸಮಯದ ವರೆಗೆ ಆಗ ಲೋಕವನ್ನೆಲ್ಲಾ ಆವರಿಸಿಕೊಳ್ಳುವ ಮಹಾ ಸಂಕಟದ ಕಾಲದಲ್ಲಿ ತಮ್ಮ ಪಾಲನ್ನು ಹೊಂದಲು ಅವರಿಗೆ ಬಿಡಲಾಗುವದು; ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ದುಃಖ ನಿರಾಶೆ ಕೊರಗು ಬುದ್ಧಿಯಿಲ್ಲದ ಕನ್ನಿಕೆಯರ ಪಾಲಾಗುವದು ಮಾತ್ರವಲ್ಲದೆ ಆ ಸಮಯದಲ್ಲಿ ಭೂಲೋಕದ ಕುಲಗಳೆಲ್ಲವುಗಳ ಪಾಲೂ ಆಗಿರುವದು. ಆ ಸಂಕಟದ ಮಹಾ ದಿನವು ಆಗ ಶೀಘ್ರದಲ್ಲೆ ಉದಯವಾಗುವ ಸಾವಿರ ವರುಷದ (ಆಳ್ವಿಕೆಯ) ರಾಜ್ಯಕ್ಕೆ ಮಾನವ ಕುಲವನ್ನು ಸಿದ್ಧಮಾಡುವ ದೆಂಬುದನ್ನು ತಿಳಿದುಕೊಂಡಿರುವದಕ್ಕೆ ನಮಗೆ ಆನಂದ ವಾಗುವದು. ನೀತಿಸೂರ್ಯನು ಸ್ವಸ್ಥತೆಯ ಕಿರಣಗಳನ್ನು ಉಳ್ಳವನಾಗಿ ಉದಯಿಸುವನು ಅನೇಕ ಜನರು ಹೊರಟುಬಂದು– "ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ

ದಾರಿಯಲ್ಲಿ ನಡೆಯುವೆವು ಎಂದು ಹೇಳುವರು. ಏಕೆಂದರೆ ಚಿಯೋನಿನಿಂದ [ಮಹಿಮೆಹೊಂದಿದ ರಾಜ್ಯ, ಅಂದರೆ ಪರಲೋಕ ರಾಜ್ಯ] ಧರ್ಮೋಪದೇಶವೂ ಯೆರೂಸಲೇಮಿನಿಂದ [ಭೂಮಿಯ ಮೇಲಿರುವ ಪರಲೋಕರಾಜ್ಯದ ಪ್ರತಿನಿಧಿಗಳು] ಯೆಹೋವನ ವಾಕ್ಯವು ಹೊರಡುವವು. – ಮಲಾಕಿ 4:2; ಯೆಶಾಯ 2:3

ಈ ಕನ್ನಿಕೆಯರು ಆ ರಾಜ್ಯಾಶೀರ್ವಾದಗಳಿಂದ ಹೊರಗುಳಿಯುವದು ಮಾತ್ರವಲ್ಲದೆ ಪವಿತ್ರಾತ್ಮವೆಂಬ ಎಣ್ಣೆಯನ್ನು ಪಡಕೊಂಡ ಬಳಿಕವೂ ಅವರು ನಿತ್ಯಯಾತನೆಗೆ ಅಥವಾ ನಷ್ಟಹೊಂದಲು ದೂಡಲಾಗುವದು ಎಂಬ ಅಭಿಪ್ರಾಯವು ಎಷ್ಟೋ ಅಸಮಂಜಸವಾದದ್ದು! ಅದೆಷ್ಟೋ ಅಯುಕ್ತವಾದದ್ದು! ಇದಕ್ಕೆ ಪ್ರತಿಯಾಗಿ, ಇಲ್ಲಿ ನಾವು ಚಿತ್ರಿಸಿರುವಂತೆ ಈ ಸಾಮ್ಯದ ನೆರವೇರಿಕೆಯು ದೇವರ ಸಾಮಾನ್ಯ ಗುಣಲಕ್ಷಣ ಹಾಗು ಯೋಜನಾಕಾರ್ಯಗಳಿಗೆ ಅದೆಷ್ಟು ಹೊಂದಿಕೆಯಾಗಿರುವದು. ಬುದ್ಧಿಯಿಲ್ಲದ ಕನ್ನಿಕೆಯರ ಬಗ್ಗೆ ನಾವು ಅನುಕಂಪವುಳ್ಳವ – ರಾಗಿರಲು ಸಾಧ್ಯವಾದರೂ ಅವರನ್ನು ಹೊಗಳಲು ಸಾಧ್ಯವಾಗದು, ಆದರೆ ಅವರಿಗೆ ತಿದ್ದುಪಾಟು ಮಾಡಬೇಕು. ಪ್ರಕಟನಾ ಗ್ರಂಥದ ಏಳನೇ ಅಧ್ಯಾಯದಲ್ಲಿರುವ (ಯಾರಿಂದಲೂ ಎಣಿಸಲಾಗದ) ಮಹಾಸಮೂಹದವರಾಗಿ ಅವರು ಯಜ್ಞದ ಕುರಿಯಾದಾತನ ರಕ್ತದಿಂದ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿ ಕೊಂಡು ಕೀರ್ತನೆ 45ನೇ ಅಧ್ಯಾಯದಲ್ಲಿ ಸೂಚಿಸಿರುವಂತೆ ಯಜ್ಞದ ಕುರಿಯ ಹಾಗು ಮದಲಗಿತ್ತಿಯ ಸನ್ನಿಧಿಯಲ್ಲಿ [ಸಖಿಯರಾದ] ಕನ್ಯೆಯರೂ ಆ ರಾಜ್ಯದ ಕಾರ್ಯದಲ್ಲಿ ಮದಲಗಿತ್ತಿಯ ಜೊತೆ–ಕೆಲಸದವರೂ ಆಗಿ ಅಂದರೆ ಅವರು ಸಿಂಹಾಸನದ ಮುಂದೆ ಸೇವೆಸಲ್ಲಿಸಲು ಪ್ರವೇಶಿಸುವ ಸಮಯವನ್ನು ಎದುರು ನೋಡಲು ನಮಗೆ ಸಾಧ್ಯ. ಅವರು ಈಗಿನ ಕಾಲಕ್ಕೆ ಸೂಕ್ತವಾದ ಪ್ರೀತಿ ಉತ್ಸಾಹ ಪರಿಜ್ಞಾನಗಳನ್ನು ಹೊಂದುವ ಮೂಲಕವಾಗಿ ಸಿಂಹಾಸನದಲ್ಲಿರುವ ಮದಲಗಿತ್ತಿಯ ವರ್ಗದಲ್ಲಿನ ಅಂಗಗಳಾಗಬಹುದಿತ್ತು.

## “ಆ ದಿನವಾದರೂ ಆ ಗಳಿಗೆಯಾದರೂ ಗೊತ್ತಾಗದು”

ನಮ್ಮ ಕರ್ತನು ಈ ಮುಂದಿನ ಮಾತುಗಳ ಮೂಲಕವಾಗಿ ಸಾಮ್ಯವನ್ನು ಮುಕ್ತಾಯಗೊಳಿಸಿರುವನು: “ಆದಕಾರಣ ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ.” ಸತ್ಯವೇದದ ಪರಿಷ್ಕೃತ ಭಾಷಾಂತರದಲ್ಲಿ (ರಿವೈಸ್ಡ್ ವರ್ಶನ್) 13ನೇ ವಚನದಲ್ಲಿನ “ಮನುಷ್ಯಕುಮಾರನು ಬರುವನೋ” ಎಂಬ ಮಾತುಗಳನ್ನು ಬಿಟ್ಟುಬಿಡಲಾಗಿರುವದು; ಯಾಕಂದರೆ ಇವುಗಳು ಯಾವ ಪುರಾತನ ಗ್ರೀಕ್ ಹಸ್ತಪ್ರತಿಗಳಲ್ಲಿಯೂ ಕಂಡುಬರುವದಿಲ್ಲ. ಹೇಗೂ ಇದರ ಅಭಿಪ್ರಾಯವೂ ಕಾರ್ಯತಃ ಅದೇ ರೀತಿಯದ್ದೇ ಆಗಿರುವದು. ಅದೇನಂದರೆ ಈ ಸಾಮ್ಯವು ನೆರವೇರುವಂಥ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲದಿರುವದರಿಂದ ಎಚ್ಚರವಾಗಿರ–ಬೇಕೆಂಬದೇ. ಎಚ್ಚರವಾಗಿರುವಿಕೆಯು ನಿಸ್ಸಂದೇಹವಾಗಿಯೂ ಸುವಾರ್ತಾ–ಯುಗ ಪರ್ಯಂತರವಾಗಿರುವ ಕರ್ತನ ಜನರಿಗೆ ಪ್ರಯೋಜನಕರ ವಾಗಿರುವದು; ಅಲ್ಲದೆ ಈ ದಿವಸಗಳಲ್ಲಿರುವ ಬುದ್ಧಿವಂತೆಯರಾದ ಕನ್ನಿಕೆಯರಿಗೆ ಇದು ಇನ್ನೂ ಅಧಿಕ ಪ್ರಯೋಜನಕರವಾಗಿರುವದು, ಕಾರಣ ಇವರಿಗೆ ತಾವು ಇರುವ ಸನ್ನಿವೇಶ ಪರಿಸ್ಥಿತಿ ಮುಂತಾದವುಗಳ ಬಗ್ಗೆ ಇದು ವಿವರಿಸಿ ಹೇಳುತ್ತದೆ. ಬುದ್ಧಿವಂತೆ ಯರಾದ ಕನ್ಯೆಯರ ಗುಂಪಿಗೆ ಸೇರಿದವರೆಲ್ಲರೂ ಈ ಸಾಮ್ಯದಲ್ಲಿ ಆಜ್ಞಾಪಿಸಿರುವ ಮನೋಭಾವದಲ್ಲಿರಬೇಕು; ಮದಲಿಂಗನು ಬರುತ್ತಿರುವ–ನೆಂಬುದರ ಪರಿಜ್ಞಾನವನ್ನು ಪಡಕೊಂಡವರಾಗಿರಬೇಕು; ಅವರು ದೀಪಾರತಿಗಳನ್ನು ಹೊಂದಿದವರಾಗಿದ್ದು ಎಣ್ಣೆಯನ್ನು ಪೂರ್ಣವಾಗಿ ಪೂರೈಸಿಕೊಂಡಿರಬೇಕು. ಈ ಸಿದ್ಧತಾ ಸ್ಥಿತಿಯಲ್ಲಿರುವವರು ಈಗ ಹೊರಡಿಸಲಾಗುತ್ತಿರುವ – “ಇಗೋ, ಮದಲಿಂಗನು” ಎಂಬ ಸಂದೇಶವನ್ನು ಕೇಳಿದಾಗ ಭೀತಿಗೊಳ್ಳುವದೂ ಇಲ್ಲ ಇಲ್ಲವೇ ಆಶ್ಚರ್ಯಪಡುವದೂ ಇಲ್ಲ. ನಾವು ಮನುಷ್ಯಕುಮಾರನ ಪ್ರತ್ಯಕ್ಷತೆಯಲ್ಲಿ (ಪರೋಷಿಯಾ) ಜೀವಿಸುತ್ತಿದ್ದೇವೆ; ಬುದ್ಧಿವಂತೆಯರಾದ ಕನ್ಯೆಯರು ಮೆರವಣಿಗೆಯ ಸಾಲಿನಲ್ಲಿ ಸೇರುತ್ತಲಿದ್ದು ಮದುವೆಯ ಸಮಾರಂಭದಲ್ಲಿ ಸೇರುತ್ತಲಿರುವರು; ಶೀಘ್ರದಲ್ಲೇ ಇವರು ಪೂರ್ಣ ಸಂಖ್ಯೆಯಲ್ಲಿ ದೊರಕುವರು ಅಲ್ಲದೆ ಬಾಗಿಲು ಮುಚ್ಚಲಾಗುವದು. ತಮ್ಮ ಹೃದಯಗಳಲ್ಲಿ ಕರ್ತನ ಆತ್ಮವನ್ನು ಪೂರ್ಣ ಪ್ರಮಾಣದಲ್ಲಿ ಹೊಂದಿದವರಾಗಿ ಹೃದಯದಲ್ಲಿನ ಇಂಥಾ ಎಚ್ಚರದ ಮನೋಭಾವವುಳ್ಳರೆಲ್ಲರೂ ಮದಲಿಂಗನು ಪ್ರತ್ಯಕ್ಷನಾಗಿರುವ ಬಗ್ಗೆ ನೀಡಲಾಗುವ ಮೊದಲ ಸೂಚನೆಗೇ ಬಹು ಶೀಘ್ರವಾಗಿ ಆಕರ್ಶಿಸಲ್ಪಡುವರು. ಇವರು ದೀಪಗಳನ್ನು ನೆಟ್ಟಗೆಮಾಡಿಕೊಂಡು ಅಂದರೆ ಸತ್ಯವೇದವನ್ನು ಪರಿಶೀಲಿಸಿ ಪ್ರಕಟನೆಯ ಸತ್ಯಾಂಶವನ್ನು ಬೇಗನೆ ಗ್ರಹಿಸಿಕೊಂಡು ತ್ವರಿತವಾಗಿ ಸಿದ್ಧತೆ ಹೊಂದಿ ಬುದ್ಧಿವಂತೆಯರಾದ ಕನ್ಯೆಯರೊಡನೆ ತಾವು ಒಂದು ಸ್ಥಾನವನ್ನು ಪಡಕೊಳ್ಳುವರು. ಈ ಪ್ರಕಟನೆಯು ಅಂದರೆ ಈ ಸಂಗತಿಯಲ್ಲಿನ ಸತ್ಯಾಂಶವು ನಿಜವಾಗಿಯೂ ಒಂದು ಪರೀಕ್ಷೆಯಾಗಿರುವದು; ಇದು ಕರ್ತನೊಂದಿಗೆ ಇರುವ ಕನ್ಯೆಯರೆಂದು ಹೇಳಿಕೊಳ್ಳುವ – ವರಲ್ಲಿ ಯಾರು ತಮ್ಮ ಪಾತ್ರೆಗಳಲ್ಲಿ ಎಣ್ಣೆಯನ್ನು ಅಂದರೆ ದೀನತೆ ತಾಳ್ಮೆ ಪ್ರೀತಿ ಭಕ್ತಿ ಮದಲಿಂಗನಿಗೆ ಸಂಬಂಧಿಸಿದ ಸಂಗತಿಗಳಲ್ಲಿ ಸೂಕ್ತವಾದ ಮನೋಭಾವವನ್ನು ಹೊಂದಿರುವರೆಂಬುದನ್ನು ಸಾಬೀತುಪಡಿಸುವದು. ಇಂಥವರನ್ನು, ಇಂಥವರನ್ನು ಮಾತ್ರವೇ ಮದಲಿಂಗನು ಬಯಸುವದು ಇಲ್ಲವೇ (ಮದುವೇ ಸಮಾರಂಭದಲ್ಲಿ) ಸೇರಲು ಬಿಡಲಾಗುವದು.

ಈ ದೃಷ್ಟಿಯಿಂದ ಈಗಿನ ಕಾಲದಲ್ಲಿನ ನಮ್ಮ ಕೆಲಸವು ಮದಲಿಂಗನು ಪ್ರತ್ಯಕ್ಷನಾಗಿರುವದನ್ನು ಪ್ರಕಟಿಸುವದು ಮಾತ್ರವಲ್ಲದೆ ತಮ್ಮ ಪಾತ್ರೆಯಲ್ಲಿ ಎಣ್ಣೆಯನ್ನು ಹೊಂದಿರುವವರಿಗೆ ಅವರ ದೀಪಗಳನ್ನು ನೆಟ್ಟಗೆಮಾಡಿಕೊಳ್ಳಲು ಸಹಾಯ ಮಾಡುವದೂ ಆಗಿರುವದೆಂಬುದು ಸ್ಪಷ್ಟ. ಹೋಗಿ ಎಣ್ಣೆಯನ್ನು ಕೊಂಡುಕೊಳ್ಳುವದು ಈಗಾಗಲೇ ಬಹು ತಡವಾಗದಿದ್ದಲ್ಲಿ ಶೀಘ್ರದಲ್ಲೇ ಅದು ತಡವಾದಂತಾಗುವದು. ಹೀಗಾಗಿ ಕರ್ತನ ಆತ್ಮವೆಂಬ ಎಣ್ಣೆಯನ್ನು ಹೊಂದಿದವರಾದಾಗ್ಯೂ ಇನ್ನೂ ನಿದ್ರಿಸುತ್ತಿರುವ ಇಲ್ಲವೇ ತೂಕಡಿಸುತ್ತಿರುವವರ ಬಗ್ಗೆ ನಾವು

ವಿಶೇಷವಾದ ಕಾಳಜಿಯನ್ನು ತೋರಿದವರಾಗಿ ಆತನ (ಕರ್ತನ) ಪ್ರತ್ಯಕ್ಷತೆಯ ವಿಷಯವಾದ ಪ್ರಕಟನೆಯನ್ನು ಕರುಣೆಯಿಂದ ತಾಳ್ಮೆಯುಳ್ಳವರಾಗಿ ನಿರಂತರ ಪರಿಶ್ರಮದ ಮೂಲಕವಾಗಿ ಅವರ ಗಮನಕ್ಕೆ ತರುವವರಾಗಬೇಕು.

ಮದಲಿಂಗನ ಪ್ರತ್ಯಕ್ಷತೆಯನ್ನು ಪ್ರಕಟಿಸುವ ಸಮಯ ಬಂದಾಗ ಕನ್ಯೆಯರು ಅದನ್ನು ತಿಳಿದಿರುವದಿಲ್ಲವೆಂಬುದು ಸಾಮ್ಯದಲ್ಲಿ ಕಲ್ಪಿಸಿಕೊಳ್ಳಲಾದ ಸಂಗತಿಯೇನೂ ಅಲ್ಲ. ಆತನು ಪ್ರತ್ಯಕ್ಷನಾಗಿರುವದರ ಆಶ್ವಾಸನೆಯಿಲ್ಲದೆ ಅವರು ಹೇಗೆ ತಮ್ಮ ದೀಪಗಳನ್ನು ಸಿದ್ಧಪಡಿಸಿಕೊಂಡವರಾಗಿ ಆತನನ್ನು ಸಂಧಿಸಲು ಹೊರಟು ಬಂದು ಆತನೊಡನೆ ಹೋಗಲು ಸಾಧ್ಯ? ಹೀಗಾಗಿ ನಮ್ಮ ಕರ್ತನು ಸಲಹೆಮಾಡಿರುವಂಥ ಎಚ್ಚರವಾಗಿರುವಿಕೆಯು ಆತನ ಪ್ರತ್ಯಕ್ಷತೆಗೆ ಹಿಂದಿನ ಸಮಯವನ್ನು ಸೂಚಿಸುತ್ತದೆ. ಯಾವ ಕನ್ಯೆಯರು ಮದಲಿಂಗನು ಬಂದಿರುವನೆಂಬುದನ್ನು ಅರಿತು ಕೊಂಡಿರುವರೋ, ಯಾರು ತಮ್ಮ ದೀಪಗಳನ್ನು ಸಿದ್ಧಪಡಿಸಿ ಕೊಂಡಿರುವರೋ, ಯಾರು ಮೆರವಣಿಗೆಯಲ್ಲಿ ಸೇರಿಕೊಂಡಿರು–ವರೋ, ಅಂಥವರು ಆತನ ಬರುವಿಕೆಯನ್ನು ಎದುರು ನೋಡುವಂಥವರಾಗಿರದೆ, ಆತನು ಪ್ರತ್ಯಕ್ಷನಾಗಿರುವದನ್ನು ಅರಿತುಕೊಂಡವರಾಗಿರುವರು; ಯಾಕಂದರೆ ಆ ದಿನವೂ ಆ ಗಳಿಗೆಯೂ ಬಂದಿರಲಾಗಿ ಅವರು ಸಾಕಷ್ಟು ಎಣ್ಣೆಯಿಲ್ಲದೆ ಸಿದ್ಧತೆಯನ್ನು ಹೊಂದಿದವರಂತೆ ಕಂಡುಬಂದಿರುವದಿಲ್ಲ.

ಈಗಾಗಲೇ ನಮ್ಮದಾಗಿರುವ ಕರುಣಾಶೀರ್ವಾದಗಳಿಗಾಗಿ ದೇವರನ್ನು ಕೊಂಡಾಡುವವರಾಗಿ ನಮ್ಮ ದೀಪದ ಬೆಳಕಿನಲ್ಲಿ ನಂಬಿಗಸ್ತರಾಗಿ ಉಲ್ಲಾಸಿಸುತ್ತಾ ವೈಭವಯುತವಾದ ಮದುವೆಯ ಔತಣವನ್ನು ಹಾಗು ಮದಲಿಂಗನೊಡನೆ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವಂಥಾ ಆನಂತರದ ಭವ್ಯವಾದ ಕಾರ್ಯವನ್ನು ಎದುರುನೋಡುತ್ತಾ ಮುಂದುವರೆಯೋಣ. ಈ ತಿಳುವಳಿಕೆಯನ್ನು ಹೊಂದಿರುವವನು ಈ ಮೂಲಕವಾಗಿ ಲೋಕ ಹಾಗು ಅದರ ಮನೋಭಾವಗಳಿಂದ ಬೇರ್ಪಟ್ಟು ಮದಲಿಂಗನ ಹೋಲಿಕೆಯಲ್ಲಿ ಪ್ರಭಾವದಿಂದ ಪ್ರಭಾವಕ್ಕೆ ಅಧಿಕಾಧಿಕವಾಗಿ ಕ್ರಮೇಣ ಮಾರ್ಪಡುವನು.

*****

# “ಅವನವನ ಸಾಮರ್ಥ್ಯದ ಪ್ರಕಾರ (ಹಂಚಿಕೊಡಲಾಗುವದು)”

**ರೀಪ್ರಿಂಟ್ಸ್ ಪುಟ 2764**

## ಮತ್ತಾಯ 25:14–30

**‘ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು’ – ರೋಮಾ 14:12**

ನಮ್ಮ ಕರ್ತನು ಯೆರಿಕೋವಿನಿಂದ ಯೆರೂಸಲೇಮಿನ ಕಡೆಗೆ ಹೋಗುವ ಮಾರ್ಗದಲ್ಲಿ ಹತ್ತು ಮಂದಿ ಆಳುಗಳಿಗೆ ಒಂದೊಂದು ಮೊಹರಿಗಳನ್ನು ನೀಡುವ ಹತ್ತು ಮೊಹರಿಗಳ ಸಾಮ್ಯವನ್ನು ಹೇಳಿದ್ದನು. (ಲೂಕ 19:11, 12. ಡಿಸೆಂಬರ್ ತಿಂಗಳಿನ ನಮ್ಮ ಮೊದಲನೆ ಸಂಚಿಕೆಯನ್ನು ನೋಡಿ) ನಾವು ಈಗ ಪರಿಗಣನೆ ಮಾಡುತ್ತಿರುವ ತಲಾಂತುಗಳ ಸಾಮ್ಯವು ಮತ್ತೊಂದನ್ನು ನಿಕಟವಾಗಿ ಹೋಲುವದಾದರೂ ಅನೇಕ ವಿಷಯಗಳಲ್ಲಿ ಇದು ಭಿನ್ನವಾಗಿರುವದು. ಅದು ತಾನು ಶಿಲುಬೆಯ ಮರಣಹೊಂದುವದಕ್ಕೆ ಕೆಲವು ದಿನಗಳ ಹಿಂದೆ, ಅಂದರೆ ಬಹುಶಃ ಅದರ ಹಿಂದಿನ ಮಂಗಳವಾರದ ಸಂಜೆ ಯೆರೂಸಲೇಮಿನಿಂದ ಬೇಥಾನ್ಯಕ್ಕೆ ಪ್ರಯಾಣ ಮಾಡುವಾಗ ನಮ್ಮ ಕರ್ತನು ತನ್ನ ಶಿಷ್ಯರಿಗೆ ನೀಡಿದ ಬೋಧನೆಯ ಭಾಗವಾಗಿತ್ತು. ಈ ಸಾಮ್ಯವು ನಮಗೆ ದೇವಜನರಲ್ಲಿ ತನ್ನ ಸೇವೆಯ ಸಂಬಂಧವಾಗಿರುವ ವಿವಿಧ ಸಾಮರ್ಥ್ಯಗಳನ್ನು ಕುರಿತು ಹಾಗು ಹೇಗೆ ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಾನುಸಾರ ಲೆಕ್ಕವನ್ನು ಒಪ್ಪಿಸುವನಾಗಿರುವನೆಂಬುದನ್ನು ಅಲ್ಲದೆ ಎಲ್ಲರಿಂದಲೂ ಒಂದೇ ವಿಧವಾದ ಫಲಗಳನ್ನು ಅಪೇಕ್ಷಿಸದೆ ಕೇವಲ ತಾನು ಪಡೆದಿರುವ ಸಾಮರ್ಥ್ಯ ಹಾಗು ದೊರೆತ ಅವಕಾಶಗಳನ್ನು ಬಳಸಿಕೊಳ್ಳುವ–ದರಲ್ಲಿ ಹೇಗೆ ನಂಬಿಗಸ್ತನಾಗಿರುವನೆಂದು ನಿರೀಕ್ಷಿಸಲಾಗುವದನ್ನು ನಿದರ್ಶಿಸುವದು.

ಸತ್ಯವೇದದ ಪರಿಷ್ಕೃತ ಭಾಷಾಂತರವು (ಸಾಮ್ಯದ) ಆರಂಭದಲ್ಲಿ ಹೇಳಿರುವ “ಪರಲೋಕರಾಜ್ಯ” ಎಂಬ ಶಬ್ದವು ಪುರಾತನ ಹಸ್ತಪ್ರತಿಗಳಲ್ಲಿ ಸಿಗುವದಿಲ್ಲವೆಂಬ ಅಂಶವನ್ನು ಗಮನಿಸಿ ಹೇಳಿರುವದು. ಆದರೆ ಇದು ಭ್ರೂಣಾವಸ್ಥೆಯಲ್ಲಿರುವ ಪರಲೋಕರಾಜ್ಯದ (ಸಭೆಯ) ಬಗ್ಗೆ ಪ್ರಸ್ತಾಪಿಸಿ ಅದನ್ನು ತಲಾಂತುಗಳನ್ನು ಸ್ವೀಕರಿಸಿಕೊಂಡ ಆಳುಗಳಿಗೆ ಹೋಲಿಸಿರುವ–ದೆಂಬ ವಿಷಯದಲ್ಲಿ ಹಸ್ತಕ್ಷೇಪ ಮಾಡುವದಿಲ್ಲ; ಯಾಕಂದರೆ ಈ ಸಾಮ್ಯವು ಆ ರಾಜ್ಯವನ್ನು ಕುರಿತು ನಿದರ್ಶಿಸುವದೆಂದು ಹೇಳಲಾದ ಹತ್ತು ಮಂದಿ ಕನ್ಯೆಯರ ಸಾಮ್ಯವನ್ನು ಕೂಡಲೇ ಹಿಂಬಾಲಿಸಿಕೊಂಡು ಬಂದಿರುವದೆಂಬುದನ್ನು ನೆನಪಿನಲ್ಲಿಟ್ಟು–ಕೊಳ್ಳಬೇಕು. ಹೀಗಾಗಿ ತಲಾಂತುಗಳ ಸಾಮ್ಯವು ಕೇವಲ ಆ ರಾಜ್ಯಕ್ಕೆ ಸೇರುವ ವರ್ಗದವರ ವಿಷಯದ ಮುಂದುವರಿಕೆ–ಯಾಗಿದ್ದು, ಆ ಬಗ್ಗೆ ಈ ಹೊಸದಾದ ಅಭಿಪ್ರಾಯವನ್ನು ನೀಡಿರುವದು.

ಸೇವಕರು ಅನೇಕ ಸಂಖ್ಯೆಯಲ್ಲಿರುವರೆಂಬದು ಇಲ್ಲಿ ಅನ್ವಯಿಸುವದಾದರೂ, ಕೇವಲ ಮೂರು ಮಂದಿ ಸೇವಕರ ಒಂದು ಮಾದರಿಯನ್ನು ಇಲ್ಲಿ ನೀಡಲಾಗಿದ್ದು, ಈ ವರ್ಗಗಳಲ್ಲಿ ಯಾವದು ಪ್ರಾಬಲ್ಯಹೊಂದುವದೆಂಬ ಅಂಶವನ್ನು ತೋರಿಸಿಕೊಡಲು ಇಲ್ಲವೇ ಬೋಧಿಸಲು ಪ್ರಯತ್ನಿಸದೆ, ಇತರರು

ಹೆಚ್ಚು ಕಡಿಮೆ ವಿಭಿನ್ನವಾಗಿ ಈ ಮೂವರಲ್ಲಿ ಸೂಚಿತರಾಗಿರುವರೆಂಬುದನ್ನು [ನಮಗೆ] ಊಹಿಸಿಕೊಳ್ಳಲು ಬಿಡಲಾಗಿರುವದು; ಈ ರೀತಿಯಲ್ಲಿ ಈ ಸಾಮ್ಯವೂ ಸಹ ಮೊಹರಿಗಳ ಸಾಮ್ಯಕ್ಕೆ ಸರಿಬೀಳುವದು. ಮತ್ತೊಂದರ ಹಾಗೆಯೇ ಈ ಸಾಮ್ಯವು ನಮ್ಮ ಕರ್ತನು ಈಗಿನ ಜೀವಿತದಿಂದ ನಿರ್ಗಮಿಸುವ ವಿಷಯವಾಗಿ ಶಿಷ್ಯರ ಮನಸ್ಸುಗಳನ್ನು ಸಿದ್ಧಗೊಳಿಸುವ ಸಲುವಾಗಿರುವದೆಂಬದು ಸ್ಪಷ್ಟವಾಗಿತ್ತು. ತಾನು ಕಲ್ವಾರಿಯಲ್ಲಿ ಮಾನವ ಕುಲದ ಪರವಾಗಿ ನಿರ್ವಹಿಸಲಿರುವ ಪಾಪ ಪರಿಹಾರ ಯಜ್ಞದ ಫಲವನ್ನು ದೇವರ ಸನ್ನಿಧಾನದಲ್ಲಿ ಸಮರ್ಪಿಸಲು ಕ್ರಿಸ್ತನು “ದೂರ ದೇಶಕ್ಕೆ” ಅಂದರೆ ಸ್ವತಃ ಪರಲೋಕಕ್ಕೇ ಏರಿಹೋಗುವನು; ಇದಕ್ಕೆ ಸಾಂದರ್ಭಿಕವಾಗಿ ಕಿರೀಟ ಹೊಂದುವ ಸಲುವಾಗಿ ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ದೇವದೂತರು ದೊರೆತನ ಅಧಿಕಾರಗಳಿಗಿಂತಲೂ ಮೇಲಾದ ಹೆಸರನ್ನು ಪಡೆದು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸೀನನಾಗಿರುವನು. ಆಕಾಶದ ಕೆಳಗಿರುವ ಸಮಸ್ತವನ್ನೂ ತಾನು ಸ್ವಾಧೀನಪಡಿಸಿಕೊಂಡು ದೇವರ ಆಧಿಪತ್ಯಕ್ಕೆ ಸಂಪೂರ್ಣವಾಗಿ ಅದನ್ನು ಅಧೀನಮಾಡಿ ದೇವರ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರುವಂತಾಗಲು ನಿಗದಿತವಾದ ಸಮಯವು ಬರುವವರೆಗೂ ಅಲ್ಲಿ ಆತನು ಕಾದುಕೊಂಡಿರುವನು.

“ದೂರ ದೇಶ” ಎಂದು ವ್ಯಕ್ತವಾಗಿರುವದರಲ್ಲಿ ಒಡೆಯನು ನಿರ್ಗಮಿಸಿ ತನ್ನ ಸಾವಿರ ವರುಷದ ಆಳ್ವಿಕೆಯ ರಾಜ್ಯವನ್ನು ಸ್ಥಾಪಿಸಲು ಹಿಂದಿರುಗಿ ಬರುವ ಕಾಲದವರೆಗೂ ಗಣನೀಯವಾದ ಸಮಯವು ಹಿಡಿಸುವದೆಂಬ ಅಭಿಪ್ರಾಯವನ್ನು ಕೊಡುವದು. ಈ ಮಧ್ಯೆ ಅಪೊಸ್ತಲರುಗಳು ಆತನು ತನ್ನ ಆಸ್ತಿಯನ್ನು ಒಪ್ಪಿಸಿಕೊಟ್ಟಿರುವ ಆ ಆಳುಗಳು ತಾವೇ ಎಂಬುದನ್ನು ಮತ್ತು ಅವರು ಆತನ ಹಿತಾಸಕ್ತಿಗಳನ್ನು ವ್ಯವಹಾರಗಳನ್ನು ನಂಬಿಗಸ್ತರಾಗಿ ಕಾಪಾಡಿಕೊಂಡವರಾಗಿ ಅದನ್ನು ತಮ್ಮ ಸಾಮರ್ಥ್ಯಾನುಸಾರವಾಗಿ ವ್ಯಾಪಾರದಲ್ಲಿ ತೊಡಗಿಸಿ ವೃದ್ಧಿಪಡಿಸಬೇಕೆಂದು ಆತನು ಅಪೇಕ್ಷಿಸುವನೆಂಬುದನ್ನು ಗ್ರಹಿಸಿಕೊಳ್ಳಬೇಕಿತ್ತು. ಆದರೆ ಈ ಸಾಮ್ಯವು ಹದಿನೆಂಟು ಶತಮಾನಗಳ ದೀರ್ಘಾವಧಿಯನ್ನು ಒಳಗೊಂಡಿದ್ದು ಒಡೆಯನು ಹಿಂದಿರುಗುವ ಕಾಲದಲ್ಲಿ ಜೀವಿಸುತ್ತಿರುವ ಕೆಲವು ಸೇವಕರುಗಳ ಪರ್ಯಂತರವಾಗಿ ದೃಷ್ಟಿ ಹೊಂದಿರುವದೆಂಬ ಕಾರಣದಿಂದ ಅದು ಕೇವಲ ಅಪೊಸ್ತಲರನ್ನು ಮಾತ್ರ ಒಳಗೊಂಡಿರದೆ ನಮ್ಮ ಕರ್ತನು ತನ್ನ ಪ್ರಾರ್ಥನೆಯಲ್ಲಿ ವ್ಯಕ್ತಪಡಿಸಿರುವಂತೆ “ಇವರ ವಾಕ್ಯದಿಂದ ನನ್ನನ್ನು ನಂಬುವರಿಗೋಸ್ಕರವೂ” ಎಂಬುದರಲ್ಲಿ ಅಡಕವಾಗಿರು ವಂಥವರನ್ನೂ ಒಳಗೊಂಡಿರುವ ಉದ್ದೇಶವುಳ್ಳದೆಂಬದು ಸ್ಪಷ್ಟವಾಗಿರುವದು. ಈ ಸಾಮ್ಯವು ಲೋಕಕ್ಕೆ ಸಂಬಂಧಿಸಿರುವುದಿಲ್ಲವೆಂದೂ ಇಲ್ಲವೇ ನಮ್ಮ ಕರ್ತನ ಎರಡನೇ ಬರುವಿಕೆಯಲ್ಲಿ ಲೋಕದಲ್ಲಿ ಸಂಭವಿಸುವ ಸಂಗತಿಗಳ ವಿಷಯವಾದ ನಿರ್ಣಯಗಳನ್ನು ಸೂಚಿಸುವದಿಲ್ಲವೆಂದೂ, ಆದರೆ ಅದು ಕೇವಲ ಸಭೆಯ ಸಂಗತಿಗಳ ವಿಷಯವಾದ ನಿರ್ಣಯಗಳನ್ನು ಸೂಚಿಸುವದೆಂಬುದನ್ನು ನಿರ್ದಿಷ್ಟವಾಗಿ ಗಮನಿಸಬೇಕು. ಇಲ್ಲವೇ ಈ ಸಾಮ್ಯವು “ನಂಬಿಗಸ್ತರ ಮನೆತನದಲ್ಲಿನ” ಸಾಮಾನ್ಯರನ್ನು ಒಳಗೊಂಡಿರದೆ ಸಹಜವಾಗಿ ಕೇವಲ ಕೆಲವು ಹೊಣೆಗಾರಿಕೆಗಳನ್ನು ಒಪ್ಪಿಸಲಾಗಿರುವ ಕರ್ತನ ವಿಶೇಷವಾದ ಪ್ರತಿಷ್ಠಿತರನ್ನು ಅಂದರೆ ಕೇವಲ ಪವಿತ್ರಾತ್ಮನಿಂದ ಹುಟ್ಟಿದವರನ್ನು ಒಳಗೊಂಡಿರುವದೆಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು.

ಆದಿಸಭೆಯಲ್ಲಿ ಪಂಚಾಶತ್ತಮದಿನ ಪವಿತ್ರಾತ್ಮಧಾರೆಯಾದ ನಂತರ ನಂಬಿದವನಾದ ಪ್ರತಿಯೊಬ್ಬ ಪ್ರತಿಷ್ಠಿತನೂ ಒಂದು ವರವನ್ನು ಇಲ್ಲವೆ ತಲಾಂತನ್ನು ಪಡೆದಿದ್ದನು, ಅಲ್ಲದೆ ಕೆಲವರು ಇವುಗಳಲ್ಲಿ ಅನೇಕವರಗಳನ್ನು ಪಡೆದಿರುವರು, ಅಪೋಸ್ತಲನು ಹೇಳಿರುವಂತೆ “...ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು [ಒಂದು ಪಾಲನ್ನು ಅಂದರೆ ಕನಿಷ್ಠ ಒಂದು ತಲಾಂತನ್ನು] ಸರ್ವರ [ಇಲ್ಲಿ, ಈ ಪ್ರತಿಷ್ಠಿತ ಸಭೆಯ] ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿದೆ.” ತಲಾಂತುಗಳನ್ನು ಅಥವಾ ಆತ್ಮನ ವರಗಳನ್ನು ಹೊಂದಿರುವ ಪ್ರತಿಯೊಬ್ಬನಿಗೂ ಅದನ್ನು ಹೊಂದಿರುವ ಪ್ರಮಾಣದ ಮೇರೆಗೆ ಒಂದು ಜವಾಬ್ದಾರಿಯನ್ನು ಪಡೆದಿರುವನು, ಹೀಗಿರುವಲ್ಲಿ ಅಪೋಸ್ತಲನಾದ ಪೌಲನು ಇತರರಿಗಿಂತಲೂ ಹೆಚ್ಚು ಹೊಂದಿದವನಾಗಿ ಅಧಿಕವಾದ ಅವಕಾಶಗಳನ್ನು ಪಡೆದಿದ್ದ ಕಾರಣ ಅಧಿಕ ಜವಾಬ್ದಾರಿಯನ್ನು ಪಡೆದಿದ್ದನು; ಆತನು ಈ ಜವಾಬ್ದಾರಿಗಳನ್ನು ಒಡೆಯನಿಗೆ ಬಹು ಒಪ್ಪಿತವಾದ ರೀತಿಯಲ್ಲಿ ನಿರ್ವಹಿಸಲು ಸಮರ್ಥನಾಗಿದ್ದನೆಂಬುದು ನಮ್ಮ ತೀರ್ಮಾನ. (1 ಕೊರಿಂಥ 14:18) ಆದರೆ ಈ ವರಗಳು ಅಪೋಸ್ತಲರು ಮರಣಹೊಂದಿದ ಕೆಲವೇ ಸಮಯಗಳಲ್ಲಿ ನಿಂತುಹೋಗಿರಬೇಕು, ಯಾಕಂದರೆ ಆತ್ಮನ ವರಗಳು ನಂಬಿದವರಿಗೆ ಕೇವಲ ಅಪೋಸ್ತಲರು ಕೈಗಳನ್ನು ಇಡುವದರ ಮೂಲಕ ಮಾತ್ರ ದೊರಕುತ್ತಿತ್ತೆಂದೂ, ಪ್ರತಿಯೊಬ್ಬನಿಗೂ ಅದು ಅದ್ಭುತವಾದ ರೀತಿಯಲ್ಲಿ ಕೊಡಲಾಗುತ್ತಿರಲಿಲ್ಲವೆಂದೂ, ಅಲ್ಲದೆ ಅಪೋಸ್ತಲರನ್ನು ಹೊರತು ಪಡಿಸಿದರೆ ತಾವಾಗಿಯೇ ಹೊಂದಿರುವ ವರಗಳನ್ನು ಇತರರಿಗೆ ಒಪ್ಪಿಸಿಕೊಡಲು ಸಾಧ್ಯವಾಗುತ್ತಿರಲಿಲ್ಲವೆಂಬುದನ್ನೂ ನಾವು ಬಹು ಸ್ಪಷ್ಟವಾದ ರೀತಿಯಲ್ಲಿ ಕಂಡುಕೊಂಡಿದ್ದೇವೆ.– ಅಪೊಸ್ತಲರ ಕೃತ್ಯಗಳು 8:12–20

ನಾವು ಈಗಾಗಲೇ ನೋಡಿರುವಂತೆ ಆ ವರಗಳನ್ನು ನೀಡಿರುವ ಉದ್ದೇಶವು ಆದಿ ಸಭೆಯನ್ನು ಸ್ಥಾಪಿಸುವದಾಗಿತ್ತು, ಆದರೆ ಅದನ್ನು ಸ್ಥಾಪಿಸಿದ ಒಡನೆಯೇ ಇವುಗಳ ಅಗತ್ಯವು ಇಲ್ಲದೆ ಹೋಯಿತು, ಹೀಗಾಗಿ ವರಗಳು ಆ ರೂಪದಲ್ಲಿ ನಿಂತು ಹೋದವು; ಅಲ್ಲದೆ ಆನಂತರ ಕರ್ತನ ಜನರಲ್ಲಿ ಇದು ಒಂದು ಬಹು ಭಿನ್ನವಾದ ರೀತಿಯಲ್ಲಿ ಮುಂದುವರೆಯುತ್ತಿರುವದು; ಇದನ್ನು ಹೇಳಬೇಕಾದರೆ, ಆನಂತರದಲ್ಲಿ ಪ್ರತಿಯೊಬ್ಬನು ಜನ್ಮಾರಭ್ಯ, ವಿದ್ಯೆಯ ಹಾಗೂ ತರಬೇತಿನ ಮೂಲಕವಾಗಿ ಪಡೆದಿರುವ ಸಹಜವಾದ ವರಗಳು ಅಥವಾ ತಲಾಂತುಗಳು (ಪ್ರತಿಭೆಗಳು) ಇವುಗಳೊಂದಿಗೆ ಪರಿಗಣಿಸಲ್ಪಡುವದು, ಅವನು ಕರ್ತನಿಗೆ ಪ್ರತಿಷ್ಠಿತನಾಗಿ ಆತನಿಂದ ಅಂಗೀಕರಿಸಲ್ಪಟ್ಟಾಗ ಅವುಗಳನ್ನು ಸ್ವಂತದ್ದಾಗಿ ಅಥವಾ ಆತನು ಹೊಸದಾಗಿ ಇಲ್ಲವೇ ಪವಿತ್ರಾತ್ಮನ ಮೂಲಕವಾಗಿ ಪಡೆದುಕೊಂಡದ್ದೆಂದು ಎಣಿಸಲ್ಪಡುವದು; ಮತ್ತು ಹೀಗಾಗಿ ಅವು ಆತನ ವಶಕ್ಕೆ

ಒಪ್ಪಿಸಲಾದ ತಲಾಂತುಗಳು ಅಥವಾ ಸಾಮರ್ಥ್ಯಗಳು ಎಂದು ಪರಿಗಣಿಸಲ್ಪಟ್ಟು ಅದನ್ನು ಉಪಯೋಗಿಸಿ ಫಲಗಳನ್ನು ಗಳಿಸುವ ವಿಷಯದಲ್ಲಿ ಆತನನ್ನು ಹೊಣೆಗಾರನನ್ನಾಗಿ ಮಾಡಲಾಗುವದು. ಆತನು ಲೌಕೀಕನಾಗಿ ಉಳಿದುಕೊಂಡಲ್ಲಿ ಬೇರೆ ಜವಾಬ್ದಾರಿಗಳನ್ನು ಅತನು ಹೊಂದಿರುತ್ತಿದ್ದನು, ಇಂಥವರು ಈ ಪಾಠದಲ್ಲಿ ಅಡಕವಾಗಿರುವದಿಲ್ಲ, ಆದರೆ ಕರ್ತನ ಆತ್ಮಿಕವಾದ ವಿಷಯಗಳನ್ನು ಬಳಸುವದರಲ್ಲಿ ಕೇವಲ ಪ್ರತಿಷ್ಠಿತರಾದ ಸೇವಕರ ಜವಾಬ್ದಾರಿಗಳನ್ನು ಮಾತ್ರ ಇದು ಸೂಚಿಸುವದು.

ಕರ್ತನ ಜನರಲ್ಲಿ ಐದು ತಲಾಂತು ಹೊಂದಿರುವ ಸೇವಕರುಗಳಿರುವದು ಹೋಲಿಸಿದ್ದಲ್ಲಿ ಅತ್ಯಲ್ಪವೆಂಬುದನ್ನು ನಾವು ನಿಸ್ಸಂದೇಹವಾಗಿ ಹೇಳಬಹುದು. ಭಕ್ತರಲ್ಲಿ ಬಹು ಪಾಲು ಒಂದು ಅಥವಾ ಎರಡು ತಲಾಂತುಗಳನ್ನು ಹೊಂದಿರುವ ವರ್ಗದವರು ಇರುವರೆಂದು ಸುರಕ್ಷಿತವಾಗಿ ಭಾವಿಸಿಕೊಳ್ಳಬಹುದು. ಹೇಗೂ ಐದು ತಲಾಂತು ಹೊಂದಿರುವವರು ಲೋಕದಲ್ಲಿ ಅನೇಕರು ಇರುವದಿಲ್ಲ. ಅಲ್ಪ ಸಂಖ್ಯೆಯಲ್ಲಿರುವ ಇವರಿಗೆ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವದು ಬಹು ದುಬಾರಿಯಾಗುವದೆಂದು ಲೋಕ ಶರೀರ ಹಾಗು ಸೈತಾನನು ಸೂಚಿಸುವ ಫಲವಾಗಿ ಕರ್ತನ ಸೇವಕರಾಗಿ ತಮ್ಮ ಐದು ತಲಾಂತುಗಳನ್ನು ಪ್ರತ್ಯೇಕವಾಗಿ ಪೂರ್ಣ ರೀತಿಯಲ್ಲಿ ಕರ್ತನ ಸೇವೆಗೆ ತೊಡಗಿಸಿಕೊಳ್ಳುವವರ ಸಂಖ್ಯೆಯು ಹೋಲಿಸಿ ನೋಡಿದಲ್ಲಿ ಚಿಕ್ಕದೆಂದು ನಮಗೆ ತೋರುತ್ತದೆ. – "ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳು ಅನೇಕರಿಲ್ಲ, ಅಧಿಕಾರಿಗಳು ಅನೇಕರಿಲ್ಲ ಕುಲೀನರು ಅನೇಕರಿಲ್ಲ."

ಕರ್ತನ ಜನರಲ್ಲಿ ಐದು ತಲಾಂತು ಹೊಂದಿರುವವರು ಇತರರೊಡನೆ ತಮ್ಮನ್ನು ಅಳತೆಮಾಡಿಕೊಂಡವರಾಗಿ ನಾನು ಸಾಕಷ್ಟು ಮಾಡಿದ್ದೇನೆ; ಖಂಡಿತವಾಗಿಯೂ ಒಂದು ತಲಾಂತನ್ನು ಪಡೆದಿರುವ 'ಅ' ಎಂಬುವರಿಗಿಂತಲೂ ಹೆಚ್ಚಾಗಿ, ಆದರೆ ಎರಡು ತಲಾಂತನ್ನು ಹೊಂದಿರುವ 'ಆ' ಎಂಬುವವರು ಮಾಡಿರುವದಕ್ಕೆ ಸಮನಾಗಿ ಮಾಡಿದ್ದೇನೆಂದು ಹೇಳಕೂಡದೆಂಬುದನ್ನು ಸಾಮ್ಯವು ತೋರಿಸಿಕೊಡುತ್ತದೆ. ವಾಸ್ತವದಲ್ಲಿ ಪ್ರತಿಯೊಬ್ಬ ಶಿಷ್ಯನೂ ತಾನು ಸಹಜವಾದ ಸಾಮರ್ಥ್ಯದಿಂದ ಕೂಡಿದ ಯಾವ ವರಗಳನ್ನು ಹಾಗು ಅವಕಾಶಗಳನ್ನು ಒಡೆಯನು ತಮ್ಮ ವಶಕ್ಕೆ ಒಪ್ಪಿಸಿರುವನೆಂಬುದನ್ನು ತಿಳಿದುಕೊಳ್ಳಲು ಯಥಾರ್ಥವಾಗಿ ಪ್ರಯತ್ನಿಸಬೇಕು; ಅಲ್ಲದೆ ಇವುಗಳಲ್ಲಿ ಪ್ರತಿಯೊಂದನ್ನು ಸಾಧ್ಯವಾದಷ್ಟೂ ಸಮಗ್ರವಾಗಿ ಪೂರ್ಣ ರೀತಿಯಲ್ಲಿ ನಿರಂತರವಾಗಿ ಬಳಸಲು ಬಯಸಬೇಕು; ಹೀಗಾಗಿ ಕರ್ತನಿಗೆ ಅಧಿಕವಾದ ಫಲ, ಅಧಿಕವಾದ ಸ್ತುತಿ, ಅಧಿಕವಾದ ಸೇವೆ, ಅಧಿಕವಾದ ಗೌರವ ಫಲಿಸುವಂತಾಗಬೇಕು. ಅಲ್ಲದೆ ಈ ಸಾಮ್ಯವು ಐದು ತಲಾಂತು ಗಳನ್ನು ಹೊಂದಿರುವ ಸೇವಕರಿಗೆ ಒಂದು ತಡೆಯಂತ್ತಿದ್ದು ಅವರು ಈ ಸಂಗತಿಗಳ ವಿಷಯದಲ್ಲಿ ಆಲಸ್ಯ ಮನೋಭಾವದವರಾಗಲು ಅವರನ್ನು ಅಡ್ಡಿಪಡಿಸಬೇಕು; ಹಾಗೆ ಇದು ಅತ್ಯಲ್ಪವಾದ ತಲಾಂತು ಹಾಗು ಅವಕಾಶಗಳನ್ನು ಹೊಂದಿರುವವರಿಗೆ ಒಂದು ಪ್ರೋತ್ಸಾಹಕರವಾಗಿಯೂ ಸಹ ಇರುವದು. ಕರ್ತನು ದೊಡ್ಡ ಅವಕಾಶಗಳನ್ನು ಹಾಗು ಸಹಜವಾಗಿಯೇ ವಿಶೇಷ ತಲಾಂತು ಗಳನ್ನು ಹೊಂದಿರುವವರಿಂದ ಅಪೇಕ್ಷಿಸುವಂತೆ ಇಂಥವರಿಂದ ದೊಡ್ಡ ಸಂಗತಿಗಳನ್ನು ಅಪೇಕ್ಷಿಸುವದಿಲ್ಲವೆಂಬುದನ್ನು ತೋರಿಸಿಕೊಡುವದು. ತಮ್ಮ ಕೈಗೆ ಸಿಕ್ಕಿದ ಕೆಲಸಗಳನ್ನು ತಮ್ಮ ಶಕ್ತ್ಯಾನುಸಾರ ಪೂರ್ಣಾಸಕ್ತಿಯಿಂದ ಮಾಡಬೇಕೆಂಬುದನ್ನು ಮತ್ತು ಇಂಥಾ ವಿವೇಕಪೂರ್ಣವಾದ ಸೇವೆಯನ್ನೇ ಕರ್ತನು ಅಪೇಕ್ಷಿಸುವವನಾಗಿದ್ದು ಪ್ರತಿಯೊಬ್ಬನಿಗೂ ಈ ವಿಷಯದಲ್ಲಿಯೇ ಪ್ರತಿಫಲವನ್ನು ಕೊಡುವದಾಗಿ ಪ್ರಸ್ತಾಪಿಸಿರುವನೆಂಬುದನ್ನು ಅರಿತುಕೊಳ್ಳಬೇಕೆಂದು ಇಂಥವರಿಗೆ ಇದು ಬೋಧಿಸುತ್ತದೆ. ಕೇವಲ ಒಂದೇ ಒಂದು ವಿಧವಾದ ಸಾಮರ್ಥ್ಯವೆಂಬ ತಲಾಂತು ಹಾಗು ಅವಕಾಶವನ್ನು ಪಡೆದಿರುವ ಸೇವಕನು ತನ್ನ ಹೊಣೆಗಾರಿಕೆಯನ್ನು [ಹೆಚ್ಚು ತಲಾಂತು ಪಡೆದಿರುವರಿಗೆ] ಸಮಾನವಾಗಿಯೇ ಎಣಿಸಿಕೊಳ್ಳಬೇಕೆಂಬುದನ್ನು ಹಾಗು ತಾನು ನಂಬಿಗಸ್ತನಾಗಿದ್ದಲ್ಲಿ ಕರ್ತನು [ಅದಕ್ಕೆ ಅನುಗುಣವಾಗಿಯೇ] ಅನುಮೋದನೆ ನೀಡುವನೆಂದು ಭಾವಿಸಿಕೊಳ್ಳಬೇಕು. ಇಂಥಾ ಸಂದರ್ಭದಲ್ಲಿ ಒಂದು ತಲಾಂತು ಪಡೆದಿರುವವನು ನಿಸ್ಸಂದೇಹವಾಗಿ ಎರಡನ್ನಾಗಿ ಹೆಚ್ಚಿಸಿಕೊಳ್ಳುವನು.

ಒಂದು ತಲಾಂತು ಪಡೆದಿರುವನು ಹೋಗಿ ಅದನ್ನು ಭೂಮಿಯಲ್ಲಿ ಅಗೆದು ಹೂಣಿಡುವನೆಂಬುದನ್ನು ಕರ್ತನು ಸಾಮ್ಯದಲ್ಲಿ ಸೇರಿಸಿರುವದನ್ನು ಒಂದು ತಾಲಾಂತು ಹೊಂದಿರುವ ಜನರು ಹೆಚ್ಚಿನ ತಲಾಂತುಗಳನ್ನು ಹೊಂದಿರುವ ಕರ್ತನ ಸೇವಕರಿಗಿಂತಲೂ ತಮ್ಮ ತಲಾಂತನ್ನು ಹೀಗೆ ಅಲಕ್ಷಿಸಿ ದುರುಪಯೋಗಮಾಡುವ ಸಂಭವವು ಅಧಿಕವಾಗಿರುವದೆಂದು ಅರ್ಥೈಸಬಾರದು. ಈ ವರೆಗೆ ಗಮನಿಸಿರುವ ಸಂಗತಿಗಳು ಕಲಿಸಿಕೊಟ್ಟಿರುವ ಪ್ರಕಾರ ಭೂಮಿಯನ್ನು ಅಗೆದು ತಮ್ಮ ತಲಾಂತುಗಳನ್ನು ಬಚ್ಚಿಡುವವರ ಪ್ರಮಾಣವು ಒಂದು ತಲಾಂತು ಪಡೆದವರಿಗಿಂತಲೂ ಐದು ತಲಾಂತುಗಳು ಹಾಗು ಎರಡು ತಲಾಂತುಗಳು ಪಡೆದಿರುವವರ ಪ್ರಮಾಣದಷ್ಟೇ ಇರುವದೆಂದು ನಾವು ನಿರ್ಣಯಿಸಬಹುದು. ಅವರು [ಹೆಚ್ಚು ತಲಾಂತು ಪಡೆದಿರುವವರು] ಹೀಗೆ ಮಾಡುವದು ಸಹಜವಾಗಿಯೇ ಒಂದು ತಲಾಂತು ಹೊಂದಿರುವವರಿಗಿಂದಲೂ ಪರಿಮಾಣದಲ್ಲಿ ಹೆಚ್ಚು ನಿಂದನಾರ್ಹರಾಗಿರುವರು. ಹೀಗಿದ್ದಲ್ಲಿ ಒಂದು ತಲಾಂತು ಪಡೆದಿರುವ ಮನುಷ್ಯನ ಸಂಗತಿಯನ್ನು ತಲಾಂತುಗಳ ಬಚ್ಚಿಡುವಿಕೆಗೆ ನಿದರ್ಶನವಾಗಿ ಆದುಕೊಂಡದ್ದು ಏಕೆ? ನಮ್ಮ ಉತ್ತರವೆಂದರೆ, ಅದು ಅಲ್ಪವಾಗಿ ಹೊಂದಿರುವವರ ಜವಾಬ್ದಾರಿಯನ್ನು ತೋರಿಸಿಕೊಡುವ ಸಲುವಾಗಿ ಅಂದರೆ ಪ್ರತಿಷ್ಠಿತರಾದ ತನ್ನ ಜನರಲ್ಲಿ ಅತ್ಯಲ್ಪವಾಗಿ ಹೊಂದಿರುವವನು ಸಹ ತನ್ನ ವಶದಲ್ಲಿರುವ ತಲಾಂತುಗಳನ್ನು ಬಳಸಬೇಕೆಂಬುದನ್ನು ತಿಳಿದಿರಬೇಕೆಂದೂ ಅಲ್ಲದೆ ಕರ್ತನ ಹಾಗೂ ತನ್ನ ಸಹೋದರರ ಮತ್ತು ಆತನ ಸತ್ಯದ ಸೇವೆಯ ವಿಷಯದಲ್ಲಿ ಅತ್ಯಲ್ಪವಾದ ಸಾಮರ್ಥ್ಯವನ್ನು ಪಡೆದಿರುವವನೂ ಸಹ ಅದನ್ನು ಬಳಸಲು ಅಕ್ಷ್ಯಮಾಡಿದರೆ ಅಂಥವನನ್ನು ನಿರ್ದೋಷಿಯೆಂದು ನಮ್ಮ ಕರ್ತನು ಎಣಿಸುವದಿಲ್ಲವೆಂಬುದನ್ನು ತೋರಿಸಿಕೊಡುವ ಸಲುವಾಗಿರುವದು. ತಲಾಂತುಗಳನ್ನು ಹೆಚ್ಚಾದ ಸಂಖ್ಯೆಯಲ್ಲಿ ಹೊಂದಿರುವವರ ಜವಾಬ್ದಾರಿಯು ಹೆಚ್ಚಾಗಿರುವದರಿಂದ ಅವರಿಗೆ ಸಂಭವಿಸುವ ನಷ್ಟವೂ ಅಧಿಕವಾಗಿರುವದು ಮತ್ತು ಹೀಗಾಗಿ ಅವರಿಗಾಗುವ ದಂಡನೆಯು ಬಹು ಕಠಿಣವಾಗಿರುವದು.

"ಬಹುಕಾಲದ ಮೇಲೆ ಆ ಆಳುಗಳ ದಣಿಯು ಬಂದು ಅವರಿಂದ ಲೆಕ್ಕ ತೆಗೆದುಕೊಳ್ಳಲು.." ಈ ಮಾತುಗಳ ಮೂಲಕವಾಗಿ ನಮ್ಮ ಕರ್ತನು ತಾನು ಕೆಲವು ದಿನಗಳಲ್ಲೇ ಇಲ್ಲವೇ ಕೆಲವು ತಿಂಗಳುಗಳಲ್ಲೇ ಅಥವಾ ಕೆಲವು ವರುಷಗಳಲ್ಲೇ ಹಿಂದಿರುಗಿ ಬಂದು ಅವರಿಂದ ಲೆಕ್ಕ ತೆಗೆದುಕೊಳ್ಳುವನೆಂದು ನಿರೀಕ್ಷಿಸಬಾರದೆಂಬ ಸಂಗತಿಯನ್ನು ಸ್ಪಷ್ಟವಾಗಿಯೂ ಆ ಸಮಯಕ್ಕೆ ಸೂಕ್ತವಾಗಿಯೂ ಇರುವ ರೀತಿಯಲ್ಲಿ ತನ್ನ ಶಿಷ್ಯರಿಗೆ ತಿಳಿಸಿಕೊಟ್ಟಿದ್ದನು; ಆದರೆ ಆನಂತರದಲ್ಲಿ (ಆತನು ಬರುವ) ನಿರ್ದಿಷ್ಟವಾದ ಕಾಲದ ಬಗ್ಗೆ ಕೇಳಿದಾಗ ಆತನು–ತಂದೆಯು ತನ್ನ ಸ್ವಂತ ಅಧಿಕಾರದಲ್ಲಿ ಇಟ್ಟುಕೊಂಡಿರುವ ಕಾಲಗಳನ್ನು ಸಮಯಗಳನ್ನು ತಿಳಿದುಕೊಳ್ಳುವದು ನಿಮ್ಮ ಕೆಲಸವಲ್ಲವೆಂದು ಹೇಳಿ ಅದನ್ನು ತಿಳಿಸಲು ನಿರಾಕರಿಸಿದ್ದನು. ಮತ್ತು ಈ ವರೆಗೆ ಹದಿನೆಂಟು ಶತಮಾನಗಳ ಕಾಲ ಈ ವಿಷಯದಲ್ಲಿ ಸ್ಪಷ್ಟವಾದ ತಿಳುವಳಿಕೆಯಿಲ್ಲದಂತೆ ಕರ್ತನ ಜನರನ್ನು ಬಿಡಲಾಗಿರುವದು. ಹೇಗೂ ಇದು ಈ ಕಾಲಗಳ ಹಾಗು ಸಮಯಗಳ ವಿಷಯವಾಗಿ ಒಂದಷ್ಟು ತಿಳಿದುಕೊಳ್ಳುವದು ಈಗ ದೇವಜನರ ಸೌಭಾಗ್ಯ ಎಂಬ ಅಂಶವನ್ನು ವಿರೋಧಿಸುವದಿಲ್ಲ, ಯಾಕೆಂದರೆ ಇವುಗಳನ್ನು ತಿಳಿಸಲು ತಂದೆಯು ಇಚ್ಛಿಸುವದಕ್ಕೆ ಸೂಕ್ತವಾದ ಸಮಯವು ಬಂದಿರುವದು; ಅದೇನಂದರೆ, ನಾವು ಹಿಂದಿನ ಪಾಠದಲ್ಲಿ ನೋಡಿರುವಂತೆ, ಪ್ರವಾದಿಯಾದ ದಾನಿಯೇಲನ ಮೂಲಕವಾಗಿ ತಿಳಿಸಿರುವ ಕಾಲದ ಬಗ್ಗೆ [ನಿಜವಾದ] ಜ್ಞಾನವುಳ್ಳವರು ತಿಳಿದುಕೊಳ್ಳಲು ನಿಗದಿತವಾದ ಸಮಯವು ಬಂದಿರುವದು. – ದಾನಿಯೇಲ 12:10; 1 ಥೆಸಲೋನಿಕ 5:4; ಯೋಹಾನ 16:13.

ಅನೇಕರು ನಂಬಿಕೊಂಡಿರುವಂತೆ, ಶಿಷ್ಯರು ಮರಣಹೊಂದಿ ತಮ್ಮ ಕರ್ತನ ಬಳಿಗೆ ಹೋಗಿ ಲೆಕ್ಕವನ್ನು ಒಪ್ಪಿಸಿ ಆನಂತರ ಪ್ರತಿಫಲವನ್ನು ಪಡೆಯುವರೆನ್ನುವದಕ್ಕೆ ಯಾವ ಸೂಚನೆಯೂ ಈ ಸಾಮ್ಯದಲ್ಲಿ ಇರುವುದಿಲ್ಲ. ಶಾಸ್ತ್ರವಚನಗಳು ಈ ಉಪದೇಶದ ಬಗ್ಗೆ ತಮ್ಮಲ್ಲೇ ಸ್ಥಿರವಾದ ಸಾಮರಸ್ಯವುಳ್ಳಂಥದ್ದಾಗಿದ್ದು: "ದಾವೀದನು ಪರಲೋಕಕ್ಕೆ ಏರಿಹೋಗಲಿಲ್ಲವೆಂದೂ" ಹಾಗೂ ಯೇಸುವನ್ನು ಹೊರತುಪಡಿಸಿ "ಬೇರೆ ಯಾವ ಮನುಷ್ಯನೂ ಪರಲೋಕಕ್ಕೆ ಏರಿ ಹೋದವನಲ್ಲವೆಂದೂ" ಪ್ರಕಟಿಸುವದು ಮಾತ್ರವಲ್ಲದೆ ನಮ್ಮ ಕರ್ತನು ತನ್ನ ಜನರನ್ನು ತನ್ನ ಬಳಿಗೆ ಸೇರಿಸಿಕೊಂಡು ಆನಂತರದಲ್ಲಿ ಅವರಿಗೆ ಪ್ರತಿಫಲವನ್ನು ಕೊಡುವ ಸಲುವಾಗಿ ಎರಡನೆಯ ಸಾರಿ ಬರುವನೆಂಬುದನ್ನು ಸಹ ಸಾರಿ ಹೇಳುವದು. ಈ ಐದು ತಲಾಂತುಗಳನ್ನು ಪಡೆದಿರುವ ಸೇವಕರಲ್ಲಿ ಒಬ್ಬನಾಗಿರುವ ಅಪೋಸ್ತಲನಾದ ಪೌಲನು ತನ್ನ ವಿಷಯವಾಗಿ ಹೀಗೆ ಪ್ರಕಟಮಾಡಿ ಹೇಳಿರುವನು–"ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; [ಮೀಸಲುಪಡಿಸಲಾಗಿದ್ದು ಅದನ್ನು ಕಾದಿರಿಸಲಾಗಿದೆ] ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು." 2 ತಿಮೊಥೆ 4:7–8; ಯೋಹಾನ 3:13; 14:3; ಅಪೋಸ್ತಲರ ಕೃತ್ಯಗಳು 2:34.

ನಾವು ಗ್ರಹಿಸಿಕೊಂಡಿರುವಂತೆ ಈಗ ನಾವು "ಮನುಷ್ಯಕುಮಾರನ ದಿನಗಳಲ್ಲಿ ಜೀವಿಸುತ್ತಿದ್ದೇವೆ," ಹಾಗು ಈಗ ತನ್ನನ್ನು ಪ್ರಕಟಿಸಿಕೊಳ್ಳುತ್ತಿರುವ ದಿನಗಳಲ್ಲಿ ತನ್ನ ಸೇವಕರಿಂದ ಆತನು ಲೆಕ್ಕವನ್ನು ತೆಗೆದುಕೊಳ್ಳುತ್ತಿರುವನು. ಸತ್ಯವೇದದ ಅನುಸಾರವಾಗಿ ನಾವು ನೋಡುವದರ ಮೂಲಕವಾಗಿ ಅಲ್ಲ ನಂಬುವದರ ಮೂಲಕವಾಗಿ ತಿಳಿದುಕೊಂಡಿರುವದೇನಂದರೆ: ಲೆಕ್ಕವನ್ನು ತೆಗೆದುಕೊಳ್ಳುವದು ನಿದ್ರೆಹೋಗಿರುವ ಸೇವಕರಲ್ಲಿ ಆರಂಭವಾಗಬೇಕಿದ್ದು, ಕರ್ತನು ಬರುವ ದಿನದಲ್ಲಿ ಜೀವದಿಂದಿರುವ ನಾವು ಅವರಿಂದ ಅದನ್ನು ತಪ್ಪಿಸಬಾರದು ಅಥವಾ ಅವರಿಗೆ ಅಡ್ಡಿಮಾಡಬಾರದು, ಇಲ್ಲವೇ ಲೆಕ್ಕವನ್ನು ಒಪ್ಪಿಸಿ ಪ್ರತಿಫಲವನ್ನು ಹೊಂದುವ ವಿಷಯದಲ್ಲಿ ನಾವು ಅವರಿಗಿಂತ ಮುಂದಿನವರಾಗಬಾರದು. (1 ಥೆಸ. 4:15–17) ನಮ್ಮ ಗ್ರಹಿಕೆಗೆ ಬಂದಿರುವಂತೆ, ಸತ್ಯವೇದಾಧ್ಯಯನ ಪಾಠಮಾಲಿಕೆಯಲ್ಲಿ (ಸ್ಟಡೀಸ್ ಇನ್ ದ ಸ್ಕ್ರಿಪ್ಚರ್ ಸೀರೀಸ್) ತೋರಿಸಿ ಕೊಟ್ಟಿರುವಂತೆ, ನಮ್ಮ ಕರ್ತನು ರಾಜ್ಯಾಧಿಕಾರವನ್ನು ವಹಿಸಿಕೊಂಡವನಾಗಿ ಮಹಾ ಬಾಬೆಲಿನ ವಿಷಯವಾಗಿ ತನ್ನ ನ್ಯಾಯತೀರ್ಪನ್ನು ನೀಡಿ ಆಕೆಯು "ಬಿದ್ದಳು" ಎಂದು ವರ್ಣಿಸಿ ತನ್ನ ಜನರೆಲ್ಲನ್ನು ಅವಳಿಂದ ಹೊರಬರುವಂತೆ ಕರೆಯುತ್ತಿರುವ ವರುಷವಾಗಿ ಕ್ರಿ.ಶ. 1878ನೇ ಇಸವಿಯನ್ನು ಗುರುತಿಸಲಾಗಿರುವದು: ಹಾಗು ಆ ದಿನಾಂಕವು ಹಿಂದೆ ನಂಬಿಗಸ್ತರಾಗಿ ಪೂರ್ಣ ಜಯಶಾಲಿಗಳಾಗಿದ್ದವರು "ಭಲಾ, ನಂಬಿಗಸ್ತನಾದ ಒಳ್ಳೆಯ ಆಳು ನೀನು" ಎಂಬ ತಮ್ಮ ದಣಿಯ ಪ್ರಸಂಶನಾ ವಚನವನ್ನು ಕೇಳಿ ಆತನ ಸೌಭಾಗ್ಯದಲ್ಲಿ ಸೇರುವ ಸಲುವಾಗಿ ಮೊದಲನೇ ಪುನರುತ್ಥಾನದಲ್ಲಿ ಪಾಲನ್ನು ಹೊಂದಲು ನಿಗದಿಪಡಿಸಲಾಗಿರುವ ವರುಷವೆಂಬುದನ್ನು ಸಹ ನಾವು ಗ್ರಹಿಸಿಕೊಂಡಿದ್ದೇವೆ. ನಮ್ಮ ಗ್ರಹಿಕೆಗೆ ಬಂದಿರುವಂತೆ ಇದರ ಅನುಸಾರವಾಗಿ ಈ ವರ್ಗದವರೆಲ್ಲರೂ ನಂಬಿಗಸ್ತರಾದವರೆಲ್ಲರಿಗೆ ವಾಗ್ದಾನ ಮಾಡಲಾಗಿರುವ ಪ್ರಭಾವ ಮಾನ ನಿರ್ಲಯತ್ವಗಳ ಅನುಭವವನ್ನು ಹೊಂದಿರುವರು. ಸೇವಕರಿಗೆ ನ್ಯಾಯವಿಚಾರಣೆ ಮಾಡುವ ಸಂಗತಿಯು ಲೋಕವನ್ನು ನ್ಯಾಯವಿಚಾರಣೆ ಮಾಡುವದಕ್ಕಿಂತಲೂ ಸಂಪೂರ್ಣವಾಗಿ ಭಿನ್ನವಾಗಿರುವದು ಅಂದರೆ ಲೋಕಕ್ಕೆ ನ್ಯಾಯವಿಚಾರಣೆ ಮಾಡುವದು ಎಲ್ಲಾ ವಿಧದಲ್ಲಿಯೂ ಬಹು ಭಿನ್ನವಾಗಿದ್ದು ಅದು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಸಂಭವಿಸಲಿದ್ದು ಅದನ್ನು ಆಡುಕುರಿಗಳ ಸಾಮ್ಯದಲ್ಲಿ ಸೂಚಿಸಲಾಗಿರುವದು, ಇದನ್ನು "ಮನುಷ್ಯಕುಮಾರನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವಾಗ" ಎಂಬ ದೃಶ್ಯದಲ್ಲಿ ಸೇರಿಸಲಾಗಿದ್ದು, ಪ್ರಸ್ತುತ ಕಾಲದಲ್ಲಿನ ನಂಬಿಗಸ್ತರಾದ ಸೇವಕರ ನ್ಯಾಯವಿಚಾರಣೆಯು ಈ ಸಮಯದಲ್ಲಿ ಮುಂದುವರೆಯುತ್ತಿದ್ದು, ಇವರಿಂದ ಲೆಕ್ಕತೆಗೆದುಕೊಳ್ಳುವದನ್ನು ಹಾಗು ಪ್ರತಿಫಲ ನೀಡುವದನ್ನು ಈ ಪಾಠದಲ್ಲಿನ ಸಾಮ್ಯದಲ್ಲಿ ತೋರಿಸಲಾಗಿರುವದು; ಇವರು ತಮ್ಮ ಕರ್ತನು ವಾಗ್ದಾನ ಮಾಡಿರುವಂತೆ ಆತನ ಸಿಂಹಾಸನದಲ್ಲಿ ಆತನೊಡನೆ ಕುಳಿತುಕೊಳ್ಳುವರು. – ಪ್ರಕಟನೆ 3:21

ಸತ್ಯವೇದದ ಇತರ ವಾಕ್ಯಭಾಗಗಳು ತೋರಿಸಿ ಕೊಡುವಂತೆ "ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು"

ಎಂಬ ಅಂಶವು [ಜೀವದಿಂದಿರುವ ನಮ್ಮನ್ನು] ಅವರಿಗಿಂತ ಮುಂದಾಗುವಂತೆ ಮಾಡಿಕೊಡುವದಿಲ್ಲವಾದರೂ, ಮಹಿಮಾ ಪದವಿಗೆ ಸೇರಿದ ಗುಂಪಿನಿಂದ ಬಿಡಲ್ಪಟ್ಟವರಾಗುವದಿಲ್ಲ. 1878ನೇ ಇಸವಿಯಿಂದ ನಿದ್ರೆಹೋದ ಕರ್ತನ ಸೇವಕರ ಪರಿಶೀಲನೆ ಹಾಗು ಪ್ರತಿಫಲ ನೀಡುವಿಕೆಯು ಆರಂಭವಾಗಿದ್ದು, ಅಂದಿನಿಂದಲೂ ಇವುಗಳನ್ನು ಜೀವದಿಂದುಳಿದಿರುವವರ ವಿಷಯದಲ್ಲಿಯೂ ಮುಂದುವರೆಸಲಾಗುತ್ತಿರುವದು; ಇವರಿಗೆ ತಮ್ಮ ಪತಿಷ್ಠೆಯ ಸಂಬಂಧದ ಒಡಂಬಡಿಕೆಯನ್ನು ಸಂಪೂರ್ಣವಾಗಿ ನೆರವೇರಿ–ಸಲು ಸಮಯೋಚಿತವಾದ ಕಾಲವನ್ನು ಅನುಗ್ರಹಿಸಲಾಗಿರುವದು, ಅಂದರೆ ಮಾಗಿದ "ಗೋದಿ" ಕಾಳಾಗಿ ತಮ್ಮ ಲೆಕ್ಕವನ್ನು ಒಪ್ಪಿಸಲು ಬಿಡಲಾಗಿರುವದು. ಈಗ ಆಯಲ್ಪಟ್ಟವನಾದ ಪ್ರತಿಯೊಬ್ಬನು ತನ್ನ ಜೀವಿತಾವಧಿಯನ್ನು ಪೂರ್ಣಗೊಳಿಸಿದ ಕೂಡಲೇ ವರದಿಯನ್ನು ಒಪ್ಪಿಸುವನಾಗಿದ್ದು ಅವನಿಗೆ ಮರಣದಲ್ಲಿ ನಿದ್ರಿಸುವವನಾಗಿ ಅರಸನ ಬರುವಿಕೆಗೆ ಕಾಯುತ್ತಿರಬೇಕಿಲ್ಲ, ಅದರೆ ಮರಣ ಹೊಂದಿದ ಕ್ಷಣದಲ್ಲಿ, "ಒಂದು ಕ್ಷಣದಲ್ಲಿ, ರೆಪ್ಪೆಬಡಿಯುವಷ್ಟ ರೊಳಗೆ" ಅವರು ಮಾರ್ಪಟ್ಟು ಕೂಡಲೇ ಮೊದಲನೇ ಪುನರುತ್ಥಾನದ ಆಶೀರ್ವಾದಗಳಾದ ಪ್ರಭಾವ ಮಾನ ನಿರ್ಲಯತ್ವಗಳನ್ನು ಪೂರ್ಣವಾಗಿ ಹೊಂದಿ ಅನುಭವಿಸುತ್ತಿರುವರು.

ಈ ದಿನದಲ್ಲಿನ ಕರ್ತನ ಜನರು ಈ ಸಾಮ್ಯದಲ್ಲಿ ಸೂಚಿತರಾಗಿರುವದೆಂಬ ಸಂಗತಿಯನ್ನು ಮನಗಂಡವರಾಗಿರಲು (ಈಹೊತ್ತು ಎಂಬ ಕಾಲವು ಇರುವ ತನಕ) ತನ್ನ ಬಗ್ಗೆ ಸಂಪೂರ್ಣ ರೀತಿಯಲ್ಲಿ ಸುದೀರ್ಘವಾಗಿ ಪರಾಮರ್ಶಿಸಿಕೊಳ್ಳಲು ಪ್ರತಿಷ್ಠಿತನಾದ ಪ್ರತಿಯೊಬ್ಬನನ್ನೂ ಬಿಡಲಾಗಿರುವದು; ತಾನು ಕರ್ತನ ಸೇವೆಗೆ ಬಳಸಲು ಎಷ್ಟರ ಮಟ್ಟಿನ ತಲಾಂತುಗಳು, ಸಾಮರ್ಥ್ಯಗಳು ಸವಲತ್ತುಗಳು ಅವಕಾಶಗಳು ಪಡೆದಿರುವನೆಂಬು–ದನ್ನು ನಿರ್ಧರಿಸಿಕೊಂಡವನಾಗಿ, ತನ್ನ ತಲಾಂತುಗಳನ್ನು ನಂಬಿಗಸ್ತಿಕೆಯಿಂದ ಬಳಸುತ್ತಿರುವನೆಂಬುವದರ ಮೇಲೆ ತನ್ನ ಪ್ರತಿಫಲದ ಪಾಲನ್ನು ಪಡೆಯುವದು ಅವಲಂಬಿಸಿರುವದೆಂಬು ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಐದು ತಲಾಂತು ಹೊಂದಿರುವ–ವನು ತನ್ನ ಐದು ತಲಾಂತುಗಳಲ್ಲಿ ಮೂರು ತಲಾಂತನ್ನು ನಂಬಿಗಸ್ತಿಕೆಯಿಂದ ಉಪಯೋಗಿಸಿಕೊಂಡು ಇತರ ಎರಡು ತಲಾಂತುಗಳನ್ನು ಲೌಕೀಕ ಸಂಗತಿಗಳಲ್ಲಿ ಅಂದರೆ ವ್ಯಾಪಾರ ವಹಿವಾಟುಗಳಲ್ಲಿ ಹಾಗು ಈ ಜೀವಿತದ ಚಿಂತೆಗಳಲ್ಲಿ ಹೂಣಿಟ್ಟ ನಿದರ್ಶನಗಳು ಇರಬಹುದು. ಎರಡು ತಲಾಂತುಗಳನ್ನು ಹೊಂದಿರುವವರು ಒಂದನ್ನು ಕರ್ತನ ಸೇವೆಯಲ್ಲಿ ಉಪಯೋಗಿಸಿ ಮತ್ತೊಂದನ್ನು ಹೂಣಿಟ್ಟ ಸಂಗತಿಗಳಿರಬಹುದು; ಆದರೆ ನಮ್ಮ ಕರ್ತನು ಅಂಥ ನಿದರ್ಶನಗಳನ್ನು ನೀಡಲಿಲ್ಲವೆಂಬ ಅಂಶವು ಅಂಥವುಗಳು ನಡೆಯುವ ಸಂಭವವು ಇರುವದೆನ್ನುವ ಬಗ್ಗೆ ಸಂಶಯಗಳು ಬರುವಂತಾಗಬಹುದು. ಕೆಲವರು ಎರಡು ತಲಾಂತಿನ ಕೆಲವು ಸಂಗತಿಗಳನ್ನು ಪರಲೋಕದ ವಿಷಯಗಳಿಗೂ ಹಾಗು ಮೂರನ್ನು ಭೂಸಂಬಂಧವಾದ ವಿಷಯಗಳಿಗೆ ವಿನಿಯೋಗಿಸುವ ಯೋಜನೆ ಮಾಡಿಕೊಳ್ಳಬಹುದು; ಅಥವಾ ಒಂದನ್ನು ಭೂಸಂಬಂಧದ ಸಂಗತಿಗಳಿಗೂ ಹಾಗು ಮತ್ತೊಂದನ್ನು ಪರಲೋಕದ ಸಂಗತಿಗಳಿಗೂ ಬಳಸಿಕೊಳ್ಳಬಹುದು; ಆದರೆ ಆ ಪರಿಣಾಮವೇನಾಗಬಹುದೆಂದರೆ ಅವನು ಸಂಪೂರ್ಣವಾಗಿ ಭೂಸಂಬಂಧವಾದ ಸಂಗತಿಗಳಲ್ಲಿ ಮುಳುಗಿ–ದವನಾಗಿ ತನ್ನ ತಲಾಂತುಗಳೆಲ್ಲವನ್ನು ಅಲ್ಲಿ ಹೂಣಿಡಬಹುದು, ಇಲ್ಲವೇ ಅವನ ಹೃದಯವು ಕರ್ತನ ಆತ್ಮದಿಂದ ತುಂಬಿಹೋಗಿ ಆತನು ತನ್ನ ತಲಾಂತುಗಳೆಲ್ಲವನ್ನು ಅದಕ್ಕನುಸಾರವಾಗಿಯೇ (ಕರ್ತನ ಸೇವೆಯಲ್ಲಿ) ನಿಯೋಜಿಸಬಹುದು. ಈ ಪ್ರವೃತ್ತಿ ಹಾಗು [ಅದರ] ಪರಿಣಾಮಗಳು ನಮ್ಮ ಕರ್ತನು ಬೇರೊಂದು ಸಂದರ್ಭದಲ್ಲಿ ನೀಡಿದ ಹೇಳಿಕೆಯಲ್ಲಿ ಸೂಚಿತವಾಗಿರುವದು: ಏನೆಂದರೆ "ನೀವು ದೇವರನ್ನು ಧನವನ್ನು ಸೇವಿಸಲಾರಿರಿ." "ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು." [ನಮ್ಮ] ಅನುಭವಗಳು ಹಾಗು [ನಾವು] ಗಮನಿಸಿರುವ ಸಂಗತಿಗಳು ಇದನ್ನು ಸಮರ್ಥಿಸುತ್ತವೆ; ಹೀಗಾಗಿ ಜನರು ಸಾಮಾನ್ಯವಾಗಿ ಆತ್ಮಿಕ ವಿಷಯಗಳಲ್ಲಿ ತಣ್ಣಗೆ ಇಲ್ಲವೆ ಬೆಚ್ಚಗೆ ಇರುವದನ್ನು ನಾವು ಕಂಡುಕೊಂಡಿರುವೆವು. ಇತರ ಎಲ್ಲಾ ಸಂಗತಿಗಳಿಗಿಂತಲೂ ಪರಲೊಕರಾಜ್ಯದ ಸಂಗತಿಗಳಿಗೆ ಪ್ರಥಮ –ವಾಗಿಯೂ ತಮ್ಮಲ್ಲಿರುವ ಎಲ್ಲಾ ಉತ್ತಮವಾದ ಸಮಯ ಸಾಮರ್ಥ್ಯ ಹಾಗು ಪ್ರಭಾವಗಳಿಗೆ ಬೇಡಿಕೆಯುಂಟಾಗಿ ಅದನ್ನು ಈಡೇರಿಸುವಂತಾಗುವದು; ಇಲ್ಲವಾದಲ್ಲಿ ಪರಲೋಕರಾಜ್ಯದ ವಿಷಯಗಳು ಅಲಕ್ಷಿಸಲ್ಪಟ್ಟು ಮರೆತುಹೋಗುವಂತಾಗಿ [ಇರುವ] ಸಮಯ ಪ್ರಭಾವ ಪ್ರಾಬಲ್ಯಗಳನ್ನು ಹಣಗಳಿಸುವದರಲ್ಲಿ ಇಲ್ಲವೇ ಇತರ ಸ್ವಾರ್ಥಪರ ಹಾಗು ತನುಮನಗಳನ್ನು ಭೂಸಂಬಂಧವಾದ ಸಂಗತಿಗಳಲ್ಲಿ ಕಳೆಯುವಂತಾಗುವದು.

ಕರ್ತನ ಪ್ರತಿಷ್ಠಿತ ಜನರಲ್ಲಿ ಪ್ರತಿಯೊಬ್ಬನಿಗೆ ಇದರಲ್ಲಿ ಇರುವ ಪಾಠವು ಸರಳವಾಗಿರುವದು: ನಾವು "ಮೊದಲು [ಮುಖ್ಯವಾಗಿ] ದೇವರ ರಾಜ್ಯಕ್ಕಾಗಿ ತವಕ ಪಡಬೇಕಾಗುವದು." ಇದು ನಮ್ಮ ಮುಖ್ಯ ಆಸಕ್ತ ವಿಷಯವಾಗಿದ್ದು, ನಮ್ಮ ಸಮಯ ಗಮನ ಆಲೋಚನೆ ಶಕ್ತಿ ಪ್ರಭಾವ ಹಾಗು ನಾವು ಹೊಂದಿರುವ ಸಂಪನ್ಮೂಲಗಳು ಇವುಗಳೆಲ್ಲವು ಇದಕ್ಕಾಗಿ ವಿನಿಯೋಗಿಸಲ್ಪಡ –ಬೇಕು. ಪ್ರಸಕ್ತ ಜೀವಿತಕ್ಕೆ ಅಗತ್ಯವಾದ ವಿಷಯಗಳು ಇದರಿಂದ ಹೊರತಾಗಿರುವದೆಂಬದು ಇಲ್ಲಿ ಅರ್ಥೈಸಲಾಗಿರುವದು; ಅಲ್ಲದೆ ಪರಲೋಕ ಸಂಗತಿಗಳ ಪರವಾಗಿ ನಾವು ಇವುಗಳನ್ನು ತ್ಯಜಿಸಲು ಇಚ್ಛಿಸುವ ಪ್ರಮಾಣದಲ್ಲಿ ನಮ್ಮ ಪ್ರೀತಿ ಹಿತಾಸಕ್ತಿಗಳು ತೋರ್ಪಡಲಾಗುವದು.

ನಂಬಿಗಸ್ತರಾದ ಸೇವಕರಿಗೆ ಕೊಡಲಾಗುವ ಪ್ರತಿಫಲವು ಪ್ರತಿಯೊಬ್ಬನ ವಿಷಯದಲ್ಲಿಯೂ ಒಂದೇ ಸಮನಾಗಿರುವದು, ಅದೇನಂದರೆ–ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಎಂಬದು; ಹಾಗು ಪ್ರತಿಯೊಬ್ಬನಿಗೂ ಕೊಡಲಾಗುವ ಆನಂದಮಯವಾದ ಪಾತ್ರೆಯು ಪೂರ್ಣವಾಗಿರುವದೆಂಬುದನ್ನು ನಾವು ವಿವೇಚನಾಯುಕ್ತರಾಗಿ ಅರ್ಥಮಾಡಿಕೊಳ್ಳಬಹುದು. ಇದರಲ್ಲಿಯೂ ಸಹ ನಮ್ಮೆಲ್ಲರಿಗೆ, ವಿಶೇಷವಾಗಿ ಕೇವಲ ಒಂದು ಅಥವಾ ಎರಡು ಅವಕಾಶಗಳು ಮುಂತಾದ ತಲಾಂತನ್ನು ಪಡೆದಿರುವಂಥ ಕರ್ತನ ಜನರಲ್ಲಿನ ಬಹುಶಃ ಬಹುಪಾಲು ಮಂದಿಗೆ, ಒಂದು ಮಹಾ ಉತ್ತೇಜನಕರವಾದ ಸಂಗತಿಯಿರುವದು. ಅವರೆಲ್ಲರಿಗೂ ಐದು ತಲಾಂತು ಅಥವಾ

ಹತ್ತು ತಲಾಂತು ಹೊಂದಿದವರೋ ಎಂಬಂತೆಯೇ ತಮ್ಮ ದಣಿಯ ಸೌಭಾಗ್ಯದಲ್ಲಿ ಸೇರುವ ಸಮನಾದ ಒಳ್ಳೆಯ ಅವಕಾಶಗಳು ಇರುವದು; ಅಲ್ಲದೆ ಆ ಪ್ರತಿಫಲವೇನಂದರೆ, "ಭಲಾ, ನಂಬಿಗಸ್ತನಾದ ಒಳ್ಳೆಯ ಆಳು ನೀನು" ಎಂಬುದೇ. ಇದು ನಿಜವಾಗಿಯೂ ತಮ್ಮದಾಗಿರುವದೆಂಬುದನ್ನು ಎಲ್ಲರೂ ಪೂರ್ಣವಾಗಿ ಮನಗಂಡವರಾಗಿರುವರು.

ಈ ಸೇವಕರಿಗೆ ದೊರಕುವ ಪ್ರತಿಫಲವು ಮೇಲೆ ಅನ್ವಯಿಸಲಾದ ಸಾಮ್ಯದ ವಿಷಯಕ್ಕೆ ಪೂರ್ಣವಾಗಿ ಹೊಂದಾಣಿಕೆಯಲ್ಲಿದ್ದು, ಈ ಸುವಾರ್ತಾಯುಗದಲ್ಲಿ "ಆಯಲ್ಪಟ್ಟ" ನಂಬಿಗಸ್ತರಾದ ಸೇವಕರು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಲೋಕವನ್ನು ಆಳ್ವಿಕೆ ಮಾಡುವವರಾಗಿ ತಮ್ಮ ಒಡೆಯನೊಂದಿಗೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗಿ ಆತನ ಆಡಳಿತಾರೂಢ ಸಿಂಹಾಸನದಲ್ಲಿ ಕುಳಿತುಕೊಳ್ಳುವರು ಎಂಬುದನ್ನು ತೋರಿಸಿಕೊಡುವದು; ಯಾಕಂದರೆ "ನೀನು ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ" ಎಂದು ಪ್ರತಿಫಲದಲ್ಲಿ ನಿರ್ದಿಷ್ಟವಾಗಿ ತೋರಿಸಿರುವದು. ಈ ಸಾಮ್ಯವು ಲೋಕದ ನ್ಯಾಯವಿಚಾರಣೆಯನ್ನು ಸೂಚಿಸುವ ಉದ್ದೇಶವುಳ್ಳದ್ದಾಗಿದ್ದಲ್ಲಿ ಇಂಥಾ ಒಂದು ನಿರ್ಣಯವು ಅಸಮಂಜಸವಾಗಿರುತ್ತಿತ್ತು. ಯಾಕಂದರೆ ಲೋಕದ ನ್ಯಾಯವಿಚಾರಣೆಯು ಪೂರ್ಣಗೊಳ್ಳುವ ಸಮಯದಲ್ಲಿ ಈ ಅರ್ಥದಲ್ಲಿನ ರಾಜ್ಯಾಡಳಿತದ ಅವಶ್ಯಕತೆಯಿರು –ವದಿಲ್ಲ; ಕಾರಣ ಅಪೊಸ್ತಲನು ಪ್ರಕಟಮಾಡಿ ಹೇಳಿರುವಂತೆ ಕ್ರಿಸ್ತನು [ಸಾವಿರ ವರುಷದ ಆಳ್ವಿಕೆಯಲ್ಲಿ] ಎಲ್ಲಾ ಅಧಿಕಾರ ಮುಂತಾದವನ್ನು ನಿವೃತ್ತಿಮಾಡಿ ರಾಜ್ಯವನ್ನು ದೇವರಿಗೆ ಅಂದರೆ ತಂದೆಗೆ ಒಪ್ಪಿಸುವನು. ಕ್ರಿಸ್ತನ ಮಧ್ಯಸ್ಥಿಕೆಯುಳ್ಳ ರಾಜ್ಯದ ಆಡಳಿತವು ಅಥವಾ ನೀತಿಯ ಆಳ್ವಿಕೆಯು ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸ್ಥಾಪನೆಗೊಳ್ಳಬೇಕಿರುವದು; ಹೀಗಾಗಿ ಈಗ ಮನುಷ್ಯರ ನಡುವೆ ಪ್ರಚಲಿತವಾಗಿರುವ ಅನೀತಿಯಳ್ಳ ಆಡಳಿತವನ್ನು ಅದು ಕಿತ್ತೊಗೆದು ಮಾನವ ಕುಲವನ್ನು ಪ್ರಸ್ತುತದಲ್ಲಿ ಸಾಮಾನ್ಯವಾಗಿರುವ ಪಾಪ ಮರಣದ ಸ್ಥಿತಿಯಿಂದ ಮೇಲಕ್ಕೆ ತಂದು ಸೈತಾನನ ಅಧಿಕಾರದಿಂದ ಬಿಡುಗಡೆ ಹೊಂದುವದನ್ನು ಅಂಗೀಕರಿಸಿಕೊಳ್ಳುವವರೆಲ್ಲರನ್ನು ದೇವಪುತ್ರರ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವಂತೆ ಮಾಡಲಾಗುವದು. ಈ ಕಾರ್ಯವು ಪೂರ್ಣಗೊಂಡಾಗ ಇಂಥಾ ಆಳ್ವಿಕೆಯೆಲ್ಲವುಗಳ ಸಮಯವು ಮುಕ್ತಾಯಕ್ಕೆ ತಲುಪುವದು; ಹೀಗಾಗಿ ಈ ಸಾಮ್ಯವು ನಮ್ಮ ಕರ್ತನು ಸಾವಿರ ವರುಷದ ಆಳ್ವಿಕೆಯ ಕಾಲಕ್ಕೆ ಮೊದಲೇ ಬಂದವನಾಗಿ ಆಯಲ್ಪಟ್ಟ ಸಭೆಯಾಗಿ ತನಗೆ ನಂಬಿಗಸ್ತರಾದವ –ರೆಲ್ಲರನ್ನು ಉನ್ನತಪದವಿಗೆ ಏರಿಸುವನೆಂಬುದನ್ನು ಬಲವಾಗಿ ಸಮರ್ಥಿಸುವ ಒಂದು ಪಾಠವಾಗಿರುವದು.

ತನ್ನ ತಲಾಂತನ್ನು ಭೂಮಿಯಲ್ಲಿ ಅಡಗಿಸಿಟ್ಟು ಅದನ್ನು ಉಪಯೋಗಿಸಲು ವಿಫಲನಾದ ಸೇವಕನು ತನ್ನ ಒಡೆಯನು ಬಿತ್ತದಿರುವದನ್ನು ಕೊಯ್ಯುವ ಕಠಿಣ ಮನುಷ್ಯನೆಂದು ದೂಷಿಸುವ ಮೂಲಕ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಯತ್ನಿಸಿರುವನು. ಅಲ್ಲದೆ ಕರ್ತನಿಗೆ ಪ್ರತಿಷ್ಠೆಮಾಡಿಕೊಳ್ಳುವ ಪ್ರತಿಜ್ಞೆಯನ್ನು ತೆಗೆದುಕೊಂಡು ನಂತರದಲ್ಲಿ ಅದನ್ನು ನಡಿಸದೇ ಇರುವ ಹಲವರ ವಿಷಯವೂ ಹೀಗೆಯೇ ಇರುವದು. ಅವರು ತಮ್ಮನ್ನು ದೂಷಿಸಿಕೊಳ್ಳುವ ಬದಲು ಕರ್ತನನ್ನು ದೂಷಿಸುವಂಥಾ ಪ್ರವೃತ್ತಿಯುಳ್ಳವರಾಗಿದ್ದು, ಅವರ ಈ ನಡವಳಿಕೆಯು ತಾವು ನಿಜವಾಗಿಯೂ ಯಾವುದರಲ್ಲಿ ಕೊರತೆಯುಳ್ಳವರಾಗಿರುವ–ರೆಂಬುದನ್ನು ಸೂಚಿಸುವದು. ಆ ಕೊರತೆಯು ಪ್ರೀತಿಯೇ. ಅವರು ಕರ್ತನನ್ನು ಪೂರ್ಣವಾಗಿ ಸತ್ಯತೆಯಿಂದ ಸಾಕಷ್ಟು ಪ್ರಮಾಣದಲ್ಲಿ ಪ್ರೀತಿಮಾಡುವದಿಲ್ಲ, ಅವರು ಅನುಸರಿಸುವ ವಿಧಾನವು ಈ ಅಂಶವನ್ನು ತೋರ್ಪಡಿಸುವದು. ಆವರು ಆತನನ್ನು ಪ್ರೀತಿಸಿದ್ದೇ ಆದಲ್ಲಿ ತಮ್ಮ ಸಾಮರ್ಥ್ಯಾನುಸಾರವಾಗಿ ಆತನ ಚಿತ್ತವನ್ನು ನೆರವೇರಿಸುವದರಲ್ಲಿ ಹರ್ಷವುಳ್ಳವರಾಗಿರುತ್ತಿದ್ದರು; ಮತ್ತು ಇಂಥವರು ಮಾತ್ರವೇ ಪ್ರತಿಫಲದೊಂದಿಗೆ ಆಶೀರ್ವಾದವನ್ನು ಹೊಂದುವರು.

ಸೇವಕರಾಗಿ ತಮ್ಮ ಒಡಂಬಡಿಕೆಯನ್ನು ನಿರ್ವಹಿಸುವದರಲ್ಲಿ ವಿಫಲರಾದವರಿಗಾಗುವ ಅಂದರೆ ಈ ಒಡಂಬಡಿಕೆಯ ಮೂಲಕವಾಗಿ ತಮಗೆ ಒದಗಿಸಲಾದ ತಲಾಂತನ್ನು ಬಳಸಲು ವಿಫಲರಾದವರಿಗಾಗುವವರ ಶಿಕ್ಷೆಯು ಬಹು ದೊಡ್ಡ ನಷ್ಟವೆಂದು ತೋರಿಸಲಾಗಿರುವದು. ಆದರೆ ಆ ನಷ್ಟವು ಪಾಪದ ಸಂಬಳವಾಗಿದ್ದು, ಅದು ನಿತ್ಯಯಾತನೆಯೆಂಬ ಸಿದ್ಧಾಂತದ ಮೂಲಕವಾಗಿ ತಮ್ಮ ಮನಸ್ಸುಗಳನ್ನು ಮಂಕುಮಾಡಿ–ಕೊಂಡವರಾದ ಅನೇಕರು ಭಾವಿಸಿರುವಂತಿರುವದಿಲ್ಲ; ಈ ಸುವಾರ್ತಾಯುಗದಲ್ಲಿ "ಜಯಶಾಲಿಗಳು" ಆದವರನ್ನು ಹೊರತುಪಡಿಸಿ ಉಳಿದವರೆಲ್ಲರ ಮೇಲೆ ಅದು ಎರಗಿ ಬಂದಿರುವದು. ಇಂಥವರು ಕೇಳಿಕೊಳ್ಳುವದು ಆ ಅಪನಂಬಿ–ಗಸ್ತನಾದ ಸೇವಕನು ಸೈತಾನನಿಗೆ ಒಪ್ಪಿಸಲ್ಪಟ್ಟವನಾಗಿ ಅಗ್ನಿಜ್ವಾಲೆಯಲ್ಲಿ ಯಾತನೆ ಪಡಬೇಕೆನ್ನುವದನ್ನು; ಈ ಸಿದ್ಧಾಂತವನ್ನು ಪ್ರತಿಪಾದಿಸುವ ಅನೇಕರು ಎಷ್ಟು ಕುರುಡ–ರಾಗಿರುವರೆಂದರೆ ಇವೆಲ್ಲವುಗಳನ್ನು ಅವರು ನಮ್ಮ ಕರ್ತನು ಈ ಸಾಮ್ಯದಲ್ಲಿ ನೀಡಿದ ಹೇಳಿಕೆಯಲ್ಲಿ ಒಳಪಡಿಸಿಕೊಂಡು ಓದಿಕೊಳ್ಳುವರು; ಆದರೆ ಅಗ್ನಿಜ್ವಾಲೆಗಳನ್ನು ಹೆಸರಿಸುವದಕ್ಕೆ ಬದಲಾಗಿ ನಮ್ಮ ಕರ್ತನು ಕತ್ತಲೆ ಅಂದರೆ "ಹೊರಗಿನ ಕತ್ತಲೆಯು" ಅವರ ಪಾಲಾಗಿರುವದೆಂದು ತಿಳಿಸಿರುವನು. ಖಂಡಿತವಾಗಿಯೂ ಅಗ್ನಿಜ್ವಾಲೆ ಆ ಸ್ಥಳದ ಸನ್ನಿವೇಶವನ್ನು ಹಗುರವನ್ನಾಗಿ ಮಾಡುವದು. ಇಲ್ಲವೇ ಸಾಧಾರಣವಾಗಿ ನಂಬಲಾಗಿರುವಂತೆ ನಮ್ಮ ಕರ್ತನು ದೆವ್ವಗಳು ನೀಡುವ ಚಿತ್ರಹಿಂಸೆಯನ್ನು ತಿಳಿಸಿರುವದಿಲ್ಲ.

ನಮ್ಮ ಕರ್ತನ ಮಾತುಗಳಿಗೆ ನಾವು ಮತ್ತೊಂದು ಅಧಿಕ ವಿವೇಚನಾಯುಕ್ತವಾದ, ಅಧಿಕ ಸಮಂಜಸವಾದ ವ್ಯಾಖ್ಯಾನವನ್ನು ಪ್ರಸ್ತುತಿಪಡಿಸುತ್ತಿದ್ದೇವೆ. ಪ್ರತಿಷ್ಠಿತನಾಗಿ ಸೇವೆಸಲ್ಲಿಸಿ ಹಾಗು ಯಜ್ಞಾರ್ಪಣೆ ಮಾಡಿಕೊಳ್ಳುವ ವಿಷಯದಲ್ಲಿ ಈಗಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವದರಲ್ಲಿ ವಿಫಲನಾದ ಸೇವಕನು ತನ್ನಿಂದ ಅವಕಾಶವನ್ನು ತೆಗೆಯಲ್ಪಟ್ಟಿರುವದನ್ನು ಕಂಡುಕೊಳ್ಳು–ವನು. ಅದನ್ನು ಅವನು ಇನ್ನೆಂದಿಗೂ ಪಡೆಯುವದಿಲ್ಲ; ಇಲ್ಲವೇ ಜಯಶಾಲಿಗಳಿಗೆ ನೀಡಲಾಗುವ ಬಹುಮಾನದಲ್ಲಿ ಅವನು

ಇನ್ನೆಂದಿಗೂ ಪಾಲು ತೆಗೆದುಕೊಳ್ಳುವದಿಲ್ಲ. ಅವನು ಈ ದೊಡ್ಡ ನಷ್ಟವನ್ನು ಅನುಭವಿಸುವನು. ಅವನು "ಹೊರಗಿನ ಕತ್ತಲೆಯೊಳಗೆ" ಹೋಗಿರುವದಾಗಿ ಸೂಚಿತನಾಗಿರುವನು. ಇದು ಆತನು ಈಮೊದಲೇ ದೇವಾನುಗ್ರಹ ಆಶೀರ್ವಾದ ಸೌಭಾಗ್ಯ ದೇವಜ್ಞಾನಗಳೆಂಬ ಬೆಳಕಿನಲ್ಲಿ ಇದ್ದನೆಂಬುದನ್ನೂ ಈ ವಿಧವಾದ ತಿಳುವಳಿಕೆಯನ್ನೂ ಕಳಕೊಳ್ಳುವನೆಂಬುದನ್ನೂ ಆತ್ಮಿಕ ವಿಷಯವಾಗಿ ತಾನು ಪಡೆದಿರುವ ಗ್ರಹಿಕೆಯು ಮಸುಕಾಗು-ವದೆಂಬದನ್ನು ಇಲ್ಲಿ ಸೂಚಿಸಲಾಗಿರುವದು. ಅದು "ಹೊರಗಿನ ಕತ್ತಲು" ಏಕೆಂದರೆ ಅದು ಇಡೀ ಮಾನವ ಜಗತ್ತಿನ ಮೇಲೆ ಸಾಮಾನ್ಯವಾಗಿದ್ದು ಅದು ಎಲ್ಲೆಡೆ ನೆಲೆಸಿರುವದು. ಕೇವಲ ಕರ್ತನಿಗೆ ಪ್ರತಿಷ್ಠಿತರಾಗಿ ಅಂಗೀಕೃತವಾದವರು ಮಾತ್ರ ದೇವರ ವಿಷಯವಾದ ಪರಿಜ್ಞಾನ ಹಾಗು ಈಗ ಪ್ರಜ್ವಲಿಸುತ್ತಿರುವ ಆತನ ಯೋಜನೆಯೆಂಬ ಸ್ಪಷ್ಟವಾದ ಬೆಳಕಿಗೆ ಬರುವಂತೆ ಮಾಡಲಾಗಿರುವದು. ಇವರನ್ನು ಬಿಟ್ಟು ಬೇರೆ ಯಾರಿಗಾದರೂ ಅತಿ ಹೆಚ್ಚೆಂದರೆ ಕೇವಲ ದ್ವಿತೀಯಾರ್ಥದಲಿ ಬೆಳಕು ತಾತ್ಕಾಲಿಕವಾಗಿ ಬಿದ್ದಿರಬಹುದಾಗಿದ್ದು ಅವರು ಆ ವೈಭಯುತವಾದ ಸಂಗತಿಗಳನ್ನು ತಾವಾಗಿಯೇ ನೋಡಲಾರದವರಾಗಿದ್ದು, ಹೇಳಬೇಕಾದರೆ ಕೇವಲ ಅದರಿಂದ ಪ್ರತಿಬಿಂಬಿತವಾದುದನ್ನು ನೋಡಬಹುದಾಗಿರುವದು. ಅಪನಂಬಿಗಸ್ತನಾದ ಸೇವಕನು ಎಲ್ಲಾ ವಿಧವಾದ ಸೌಲಭ್ಯಗಳಿಂದ ಪೂರ್ಣವಾಗಿ ಹೊರಹಾಕಲ್ಪಡುವನು; ಪ್ರತಿಬಿಂಬಿತವಾದ ಬೆಳಕೂ ಸಹ ಆತನ ದೃಷ್ಟಿಗೆ ಮಬ್ಬುಗೊಳಿಸ-ಲಾಗುವದು ಮತ್ತು ಈಗಲ್ಲದಿದ್ದರೂ ಶೀಘ್ರದಲ್ಲೇ ಆತನು ದೇವರ ಯೋಜನೆಯ ವಿಷಯವಾಗಿ ಲೋಕದಲ್ಲಿನ ಕತ್ತಲೆಯಲ್ಲಿ ಇರುವದಾಗಿ ಕಂಡುಕೊಳ್ಳುವನು. ಅಲ್ಲದೆ ಅಲ್ಲಿ ಆತನು ಈ ಕಾಲವು ಮುಕ್ತಾಯಗೊಳ್ಳಲಿರುವ ಮಹಾ ಸಂಕಟದ ಸಮಯದಲ್ಲಿ ಲೋಕದವರೊಂದಿಗೆ ಭಾಗಿಯಾಗುವನು; ಈ ಸಾಮ್ಯದಲ್ಲಿ ಆ ಸಂಕಟದ ಸಮಯವನ್ನು ಗೋಳಾಡುವ ಹಾಗು ಕಟಕಟನೆ ಹಲ್ಲುಕಡಿಯುವ ಸಮಯವೆಂದು ಸೂಕ್ತವಾಗಿ ಚಿತ್ರಿತವಾಗಿರುವದು.

*****

# ಆಡುಕುರಿಗಳ ಸಾಮ್ಯ

**ರೀಪ್ರಿಂಟ್ಸ್ ಪುಟ 2606**

**"ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರೂ ನಿತ್ಯಜೀವಕ್ಕೂ ಹೋಗುವರು" – ಮತ್ತಾಯ 25:31–46**

ನಾವು ತೋರಿಸಿಕೊಟ್ಟಂತೆ ಶಾಸ್ತ್ರವಚನಗಳು ದೇವದೂಷಣಾ ತತ್ವಬೋಧೆಯಾದ ನಿತ್ಯಯಾತನೆ ಎಂಬುದನ್ನು ಬೋಧಿಸುವದಿಲ್ಲ –ವಾದರೂ ದುಷ್ಟರಿಗೆ ಆಗುವ ನಿತ್ಯಶಿಕ್ಷೆಯ ಬಗ್ಗೆ ಅವು ಬಹು ಒತ್ತುಕೊಟ್ಟು ಬೋಧಿಸುತ್ತವೆ; ಈ ವರ್ಗವು ಸಾಮ್ಯದಲ್ಲಿ "ಆಡುಗಳು" ಎಂದು ಸೂಚಿತವಾಗಿರುವದು. ನಾವು ಈ ಸಾಮ್ಯವನ್ನು ಪರಿಶೀಲನೆಮಾಡಿ ಆನಂತರದಲ್ಲಿ ಅದರ ಅಂತ್ಯಭಾಗದಲ್ಲಿ ನೀಡಿರುವ ತೀರ್ಪಿನ ಬಗ್ಗೆ ಪರಿಶೀಲಿಸೋಣ.

"ಕ್ರಮವೆಂಬದು ಪರಲೋಕದ ಮೊದಲ ನಿಯಮ" ಎಂದು ಸತ್ಯಪೂರ್ಣವಾಗಿ ಹೇಳಲಾಗಿರುವದು; ಆದಾಗ್ಯೂ ನಾವು ಯೋಚಿಸುವದು ಏನಂದರೆ ಇದು ಎಷ್ಟು ಮಹತ್ವಪೂರ್ಣವಾದ ಸತ್ಯವೆಂಬುದನ್ನು ಮನಗಂಡಿರುವವರು ಕೆಲವೇ ಮಂದಿ ಎಂಬದು. ದೇವರ ಯುಗಯುಗಾಂತರಗಳ ಯೋಜನೆಯ ಬಗ್ಗೆ ಶೀಘ್ರವಾಗಿ ದೃಷ್ಟಿಹಾಯಿಸಿದಾಗ, ಅದರ ಎಲ್ಲಾ ಭಾಗಗಳಲ್ಲಿಯೂ ಕ್ರಮವು ಇರುವದನ್ನು ಗಮನಿಸಿರುವ ಪ್ರಕಾರವೇ ಇದರ ನಿರ್ದೇಶಕನಾಗಿರುವ ಒಬ್ಬ ದೇವರೂ ಇರುವ ಬಗ್ಗೆ ಇಂಥಾ ನಿರ್ಣಾಯಕವಾದ ಸಾಕ್ಷಿಪ್ರಮಾಣಗಳನ್ನು ನೀಡಿರುವಂಥ ಯಾವ ಅಂಶವೂ ಇರುವದಿಲ್ಲ.

ದೇವರು ತಾನು ನಿರ್ವಹಿಸುವ ಕಾರ್ಯದ ಪ್ರತಿಯೊಂದು ಭಾಗದಲ್ಲಿಯೂ ನಿರ್ದಿಷ್ಟವೂ ಹಾಗು ನಿಗದಿತವೂ ಆದ ಕಾಲ ಸಮಯಗಳನ್ನು ಇಟ್ಟುಕೊಂಡಿರುವನು; ಮತ್ತು ಈ ಕಾಲ ಸಮಯಗಳ ಅಂತ್ಯದಲ್ಲಿ ಆ ಕಾರ್ಯವನ್ನು ಪೂರ್ಣಗೊಳಿಸಿ ಅದರಲ್ಲಿ ಅಸಂಬದ್ಧವಾದವುಗಳನ್ನೆಲ್ಲಾ ತೆಗೆದುಹಾಕಿ ಮುಂದೆ ಬರುವ ಹೊಸ ವ್ಯವಸ್ಥೆಯ ಆರಂಭಕ್ಕೆ ಸಜ್ಜುಗೊಳಿಸುವನು. ಹೀಗೆ ಯೆಹೂದ್ಯರ ಕಾಲಸಮಯದ ಅಂತ್ಯದಲ್ಲಿ ಒಂದು ಕ್ರಮವಿರುವದನ್ನು ಗಮನಿಸಲಾಗಿರುವದು. ಅಂದರೆ ಬೆಳೆಯನ್ನು ಕೊಯ್ದು "ಗೋದಿಕಾಳಿನ" ವರ್ಗದವರನ್ನು "ಹೊಟ್ಟಿನ" ವರ್ಗದವರಿಂದ ಸಂಪೂರ್ಣವಾಗಿ ಬೇರ್ಪಡಿಸಿ ಮತ್ತು ಎರಡನೆಯ [ಅಂದರೆ ಹೊಟ್ಟಿನ] ವರ್ಗದವರನ್ನು ದೇವಾನುಗ್ರಹದಿಂದ ಸಂಪೂರ್ಣವಾಗಿ ತಿರಸ್ಕರಿಸುವದು. ಅದರ ಅಂತ್ಯದಲ್ಲಿ ಯೋಗ್ಯರೆಂದು ನಿರ್ಣಯಿಸಲ್ಪಟ್ಟ ಕೆಲವು ಮಂದಿಯ ಮೂಲಕವಾಗಿ ಒಂದು ಹೊಸ ಕಾಲಸಮಯವು ಅಂದರೆ ಸುವಾರ್ತಾಯುಗವು ಪ್ರಾರಂಭಿಸಲಾದುದು. ಮತ್ತು ಈಗ ನಾವು ಈ ಕಾಲಸಮಯದ [ಸುವಾರ್ತಾಯುಗದ] ಅಂತ್ಯ ಘಟನಾವಳಿಗಳ ನಡುವೆ ಇರುವದಾಗಿ ನಮ್ಮನ್ನು ಕಂಡುಕೊಂಡಿರುವೆವು. ಅಂದರೆ ಈ ಕಾಲಸಮಯದ "ಸುಗ್ಗಿ" ಕಾಲ: ಈ ಕಾಲಸಮಯದಲ್ಲಿ ಒಟ್ಟಿಗೆ ಬೆಳೆದಿರುವ "ಗೋದಿ" ಮತ್ತು "ಹಣಜಿ" ಬೇರ್ಪಡಿಸಲಾಗುತ್ತಿರುವದು. ನಮ್ಮ ಕರ್ತನಾದ ಯೇಸುವು ಮುಖ್ಯಸ್ಥನಾಗಿರುವ ಮೊದಲನೇ ವರ್ಗದವರ ಮೂಲಕವಾಗಿ ಹೊಸದಾದ ಒಂದು ಕಾಲಸಮಯವು ಪ್ರಾರಂಭಗೊಳ್ಳಲಿರುವದು. ಈ ಹೊಸ ವ್ಯವಸ್ಥೆಯಲ್ಲಿ "ಗೋದಿ" ವರ್ಗಕ್ಕೆ ಸೇರಿದವರು ಅರಸರುಗಳಾಗಿ ಮತ್ತು ಯಾಜಕರುಗಳಾಗಿ ಆಳ್ವಿಕೆಮಾಡುವವರಾಗಿರಲು, "ಹಣಜಿ" ವರ್ಗಕ್ಕೆ ಸೇರಿದವರು ಆ ದೇವಾನುಗ್ರಹವನ್ನು ಪಡೆಯಲು ಸಂಪೂರ್ಣವಾಗಿ ಅನರ್ಹರೆಂದು ನಿರ್ಣಯಿಸಲ್ಪಡುವರು.

ಯೆಹೂದ್ಯರ ಕಾಲಸಮಯ ಹಾಗು ಈಗಷ್ಟೇ

ಮುಕ್ತಾಯಗೊಳ್ಳುತ್ತಿರುವ ಕಾಲಸಮಯಗಳ ಸಂಬಂಧಲ್ಲಿಯೂ ಈ ಕ್ರಮವು ಇರುವದನ್ನು ಗಮನಿಸಿದವರಾಗಿ, ಈಗ ಪರಿಗಣಿಸ–ಲಾಗುತ್ತಿರುವ ಈ ಸಾಮ್ಯದ ಮೂಲಕವಾಗಿ ನಮ್ಮ ಕರ್ತನು ತಿಳಿಸಿರುವದೇನಂದರೆ ಈ ಸುವಾರ್ತಾಯುಗವನ್ನು ಅನುಸರಿಸಿ ಬರಲಿರುವ ಕಾಲಸಮಯದಲ್ಲಿಯೂ ಇದೇ ಕ್ರಮವು ಇರುವದನ್ನು ಗಮನಿಸಲಾಗುವದೆಂಬದು.

ಯೆಹೂದ್ಯರ ಕಾಲಸಮಯದಲ್ಲಿನ ಸುಗ್ಗಿಕಾಲವನ್ನು ಗೋದಿ ಹಾಗು ಹೊಟ್ಟನ್ನು ಬೇರ್ಪಡಿಸುವದಕ್ಕೆ ಹೋಲಿಸಲಾಗಿದ್ದು; ಈ ಕಾಲಸಮಯದ ಸುಗ್ಗಿಕಾಲವನ್ನು ಗೋದಿಯನ್ನು ಹಣಜಿಯಿಂದ ಬೇರ್ಪಡಿಸುವದಕ್ಕೆ ಹೋಲಿಕೆಮಾಡಲಾಗಿರಲು; ಸಾವಿರ ವರುಷದ ಆಳ್ವಿಕೆಯ ಸುಗ್ಗಿಕಾಲವನ್ನು ಆಡುಗಳಿಂದ ಕುರಿಗಳನ್ನು ಬೇರ್ಪಡಿಸುವದಕ್ಕೆ ಹೋಲಿಸಲಾಗಿರುವದು.

ಆಡುಕುರಿಗಳ ಸಾಮ್ಯವು ಸಾವಿರ ವರುಷದ ಆಳ್ವಿಕೆಯ ಕಾಲವನ್ನು ಉಲ್ಲೇಖಿಸುವದೆಂಬುದು ವಚನ 31 ಮತ್ತು 32ರಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿರುವದು. – "ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ [ಪರಿಶುದ್ಧ] ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನು ಬೇರೆಬೇರೆಮಾಡಿ... ನಿಲ್ಲಿಸುವನು." ಈಗಿನ ಕಾಲಸಮಯದಲ್ಲಿದ್ದಂತೆ ಪರೀಕ್ಷೆಗೆ ಒಳಗಾಗಿರುವ ಬಹುಪಾಲಿನವರ [ಸಭೆಯ] ಪ್ರತಿಯೊಂದು ಕೃತ್ಯವೂ ಅವರ ಗುಣಸ್ವಭಾವದ ಒಂದು ಭಾಗವಾಗಿ ರೂಪುಗೊಂಡು, ನಿಗದಿತ ಕಾಲದಲ್ಲಿ ಅದು ನಮಗೆ ಸಂಬಂಧಿಸಿದ ನ್ಯಾಯಾಧಿಪತಿಯು ನಮ್ಮ ವಿಷಯದಲ್ಲಿ ಕೊಡುವ ಅಂತಿಮ ತೀರ್ಪಿನ ಬಗ್ಗೆ ನಿರ್ಧರಿಸುವ ರೀತಿಯಲ್ಲೇ [ಮುಂದೆ] ಬರಲಿರುವ ಕಾಲಸಮಯದಲ್ಲಿ ಲೋಕದ ["ಜನಾಂಗಗಳ"] ವಿಷಯವಾಗಿಯೂ ಇರುವದು. ಈ ಕಾಲಸಮಯವು ಅಂತ್ಯವಾಗುವದಕ್ಕೆ ಬಹು ಮೊದಲೇ ಈ ಕಾಲದಲ್ಲಿನ ಸಭೆಯ ಬಹುಪಾಲು ವೈಯುಕ್ತಿಕ ಸದಸ್ಯನ ಗುಣಪರೀಕ್ಷೆಯು ಅಂತ್ಯಗೊಗೊಂಡು ಅವರ [ಗುಣ ಪರೀಕ್ಷೆಯ] ವಿಷಯದಲ್ಲಿ ತೀರ್ಪು ನಿರ್ಧರಿಸಲ್ಪಟ್ಟಿರುವಂತೆಯೇ (2 ತಿಮೋಥೆ 4:7,8) ಸಾವಿರ ವರುಷದ ಆಳ್ವಿಕೆಯಲ್ಲಿ ಕೆಲವು ವ್ಯಕ್ತಿಗಳ ವಿಷಯದಲ್ಲಿ ಆ ಕಾಲಸಮಯವು ಮುಗಿಯುವದಕ್ಕೆ ಬಹು ಕಾಲದ ಮೊದಲೇ ತೀರ್ಪು ಉಂಟಾಗುವದು (ಯೇಶಾಯ 65:20); ಆದರೆ ಪ್ರತಿಯೊಂದು ಕಾಲಸಮಯದಲ್ಲಿನ ಅಂತ್ಯದಲ್ಲಿಯೂ "ಸುಗ್ಗಿ" ಅಥವಾ ಸಾಮಾನ್ಯವಾದ ಬೇರ್ಪಡಿಸುವಿಕೆಯ ಕಾಲವು ಇರುವದು.

ಸಾವಿರ ವರುಷದ ಆಳ್ವಿಕೆಯು ಉದಯವಾಗುವ ಸಮಯದಲ್ಲಿ ಅಂದರೆ "[ಮಹಾ] ಸಂಕಟದ ಕಾಲವು" ಮುಕ್ತಾಯಗೊಂಡ ನಂತರದಲ್ಲಿ ಆಗ ಜೀವಿಸುತ್ತಿರುವ ಜನಾಂಗಗಳೆಲ್ಲವೂ ಕ್ರಿಸ್ತನ [ನ್ಯಾಯಾಸನದ] ಮುಂದೆ ಕೂಡಿಸಲ್ಪಡುವರು, ಅಲ್ಲದೆ ಸತ್ತುಹೋಗಿರುವ ಜನಾಂಗದವರೆಲ್ಲರೂ ತಮಗೆ ನಿಗಧಿತವಾದ ಸಮಯದಲ್ಲಿ ಹಾಗು ಕ್ರಮದಲ್ಲಿ ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿಕೊಳ್ಳಲು ಕರೆಯಲ್ಪಡುವರು–ಆದರೆ ಅದು ಕೂಡಲೇ ನ್ಯಾಯತೀರ್ಪನ್ನು ಹೊಂದುವ ಸಲುವಾಗಿರದೆ ಪ್ರತಿ ವ್ಯಕ್ತಿಗೂ ನ್ಯಾಯವೂ ನಿಷ್ಪಕ್ಷಪಾತವೂ ಆಗಿರುವ ವೈಯುಕ್ತಿವಾದ ಒಂದು [ಗುಣ] ಪರೀಕ್ಷೆಯನ್ನು ಹೊಂದುವ ಸಲುವಾಗಿರುವದು (ಯೆಹೆಜ್ಕೇಲ 18:2–4, 19–20); ಅದು ಬಹು ಸೌಹಾರ್ದತೆಯುಳ್ಳ ಸನ್ನಿವೇಶಗಳಲ್ಲಿ ಜರುಗುವಂಥದ್ದಾಗಿದ್ದು, ಆ ಪರೀಕ್ಷೆಯ ಫಲಿತಾಂಶವು ನಿತ್ಯಜೀವವನ್ನು ಹೊಂದಲು ಯೋಗ್ಯರೋ ಅಥವಾ ಅಯೋಗ್ಯರೋ ಎಂಬುದನ್ನು ನಿರ್ಧರಿಸುವ ಸಲುವಾದ ಅಂತಿಮ ತೀರ್ಪಾಗಿರುವದು.

ಆದುದರಿಂದ ಈ ಸಾಮ್ಯದ ದೃಶ್ಯವನ್ನು [ಮಹಾ] ಸಂಕಟದ ಸಮಯವು ಮುಗಿದ ನಂತರದಲ್ಲಿ ಅಂದರೆ ಜನಾಂಗಗಳೆಲ್ಲವನ್ನೂ ಸ್ವಾಧೀನ ಮಾಡಿಕೊಂಡು, ಸೈತಾನನು ಬಂಧಿತನಾಗಿ (ಪ್ರಕಟನೆ 20:1–2) ಕ್ರಿಸ್ತನ ರಾಜ್ಯದ ಅಧಿಕಾರವು ಸ್ಥಾಪನೆಗೊಳ್ಳುವ ಸಮಯದಲ್ಲಿ ಇರಿಸಲಾಗಿರುವದು. ಇದಕ್ಕೆ ಮೊದಲು ಕ್ರಿಸ್ತನ ಮದಲಗಿತ್ತಿಯು [ಅಂದರೆ ಜಯಶಾಲಿಯಾದ ಸಭೆಯು] ಆತನ ಆತ್ಮಿಕ ಅಧಿಕಾರವೆಂಬ ಸಿಂಹಾಸನದಲ್ಲಿ ಆತನೊಡನೆ ಕುಳಿತು ಕೊಂಡು ಆತನ ಕೋಪದ ಮಹಾದಿನದಲ್ಲಿ ಆಗುವ ನ್ಯಾಯ–ತೀರ್ಪನ್ನು ಅನುಷ್ಠಾನಗೊಳಿಸುವ ಕಾರ್ಯದಲ್ಲಿ ಭಾಗಿಗಳಾಗು–ವರು. ಆಗ ಮನುಷ್ಯಕುಮಾರನು ಮತ್ತು ಪ್ರಭಾವಹೊಂದಿದ ಆತನ ಮದಲಗಿತ್ತಿಯು ತಮ್ಮನ್ನು ಪ್ರಕಟಮಾಡಿಕೊಳ್ಳುವವರಾಗಿ ಎಲ್ಲಾ ಮನುಷ್ಯರ ಮನೋನೇತ್ರಗಳಿಗೆ ಗೋಚರಿಸುವಂತಾಗಿ "ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು." – ಮತ್ತಾಯ 13:43

ಇಲ್ಲಿರುವಂಥದು ಯೋಹಾನನು ನೋಡಿರುವ ಹೊಸ ಯೆರೂಸಲೇಮು (ಪ್ರಕಟನೆ 21) "ಪರಿಶುದ್ಧ ಪಟ್ಟಣವು [ಆಡಳಿತಸ್ಥಾನದ ಸೂಚಕವಾಗಿ] ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವದನ್ನು..." ಸಂಕಟದ ಕಾಲದಲ್ಲಿ, ಅದು ಅಂತ್ಯವಾಗುವದಕ್ಕೆ ಮೊದಲು, ಭೂಮಿಯನ್ನು ತಲುಪುವದು. ಕೈಯಿಲ್ಲದೆ [ಆದರೆ ದೇವರ ಶಕ್ತಿಯ ಮೂಲಕವಾಗಿ] ಒಡೆಯಲ್ಪಟ್ಟು [ಸಿಡಿದು ಬಂದ] ಗುಂಡು ಬಂಡೆಯು ಇದೇ; ಆಗ ಅದು ಒಂದು ದೊಡ್ಡ ಪರ್ವತವಾಗಿ [ರಾಜ್ಯವಾಗಿ] ಲೋಕವನ್ನೆಲ್ಲಾ ತುಂಬಿಕೊಳ್ಳುವದು (ದಾನಿಯೇಲ 2:35). ಅದರ ಆಗಮನವು ಅಂಧಕಾರದ ಅಧಿಪತಿಯ ದುಷ್ಟ ರಾಜ್ಯಗಳನ್ನೆಲ್ಲಾ ಪುಡಿಪುಡಿಯಾಗ ಮಾಡುವದು. – ದಾನಿಯೇಲ 2:34,35.

ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟ ಮಹಿಮೆಯುಳ್ಳ ಪಟ್ಟಣವು [ಆಡಳಿತ ಸ್ಥಾನವು] ಇಲ್ಲಿರುವದು. (ಪ್ರಕಟನೆ 21:2) ಹಾಗು ಸಾವಿರ ವರುಷದ ಆಳ್ವಿಕೆಯ ಮುಂಜಾನೆಯ ನಸುಕಿನ ಬೆಳಕಿನಲ್ಲಿ ಜನಾಂಗಗಳು ಸಂಚರಿಸಲು ಆರಂಭಿಸುವರು (ವಚನ 24). ಇವರು ತಮ್ಮ ವೈಭವ ಹಾಗು ಘನತೆಯನ್ನು ಇಲ್ಲಿಗೆ ಕೊಂಡುತರುವರು. ಇದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ

[ಇದರಲ್ಲಿ ಭಾಗಿಯಾಗುವದಿಲ್ಲ]. (ವಚನ 27) ಇಲ್ಲಿ [ಯಜ್ಞದ ಕುರಿಯಾದಾತನ] ಸಿಂಹಾಸನದ ಮಧ್ಯದೊಳಗಿಂದ ಸ್ಪಟಿಕದಂತಿರುವ ಜೀವಜಲದ ನದಿಯು [ತಪ್ಪಾದುದರಲ್ಲಿ ಮಿಶ್ರಣವಾಗದ ಸತ್ಯಾರ್ಥ] ಹೊರಡುತ್ತದೆ. ಆತ್ಮನೂ ಮದಲಗಿತ್ತಿಯೂ–ಬಾ ಅನ್ನುತ್ತಾರೆ... ಬಂದು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ ಅನ್ನುತ್ತಾರೆ (ಪ್ರಕಟನೆ 22:17) ಇಲ್ಲಿಂದ ಆರಂಭಗೊಳ್ಳುವದು ಲೋಕದ ಪರೀಕ್ಷೆಯ ಕಾಲ, ಅಂದರೆ ಒಂದು ಸಾವಿರ ವರುಷಾವಧಿಯ ಲೋಕದ ನ್ಯಾಯವಿಚಾರಣೆಯ ದಿನ. [ಸತ್ಯವೇದ ಪಾಠಮಾಲೆ ಭಾಗ 1 ಅಧ್ಯಾಯ 8ರಲ್ಲಿನ "ನ್ಯಾಯವಿಚಾರಣೆಯ ದಿನ" ಎಂಬ ಪಾಠವನ್ನು ನೋಡಿ]

ಆದರೂ ಜನಾಂಗಗಳನ್ನು ಆಶೀರ್ವದಿಸಿ ಗುಣಪಡಿಸುವಂಥ ಈ ಅನುಗ್ರಹಿತ ಕಾಲದಲ್ಲಿಯೂ ಅಂದರೆ ಸೈತಾನನನ್ನು ಕಟ್ಟಿಹಾಕಿ ಕೆಟ್ಟದ್ದನ್ನು ನಿರ್ಬಂಧಿಸಿ ಮಾನವರನ್ನು ಮರಣದ ಬಿಗಿಹಿಡಿತದಿಂದ ಬಿಡುಗಡೆಮಾಡುವ ಕಾರ್ಯದಲ್ಲಿ ಮುಂದುವರೆಯು–ವಾಗಲೂ ಅಲ್ಲದೆ ಕರ್ತನ ವಿಷಯವಾದ ಪರಿಜ್ಞಾನವು ಭೂಮಿಯನ್ನು ತುಂಬಿಕೊಂಡಿರುವಾಗಲೂ ಸಹ ಎರಡು ವರ್ಗಗಳು ಬೆಳೆದು ಅಭಿವೃದ್ಧಿಯಾಗುವವು; ನಮ್ಮ ಕರ್ತನು ಅವುಗಳನ್ನು ಆಡು ಮತ್ತು ಕುರಿಗಳಿಗೆ ಹೋಲಿಸಿರುವನು. ಇವುಗಳನ್ನು ಬೇರ್ಪಡಿಸುವನೆಂದು ಆತನು ಹೇಳಿರುವನು. ಕುರಿಗಳಿಗೆ ಸಂಬಂಧಿಸಿದ ವರ್ಗವನ್ನು ಅಂದರೆ ಸಾಧುಸ್ವಭಾವ –ವುಳ್ಳವರಾಗಿ ಕಲಿಕೆ ಮನೋಭಾವದಿಂದ ಕೂಡಿ ಮಾರ್ಗದರ್ಶನ ಪಡೆಯಲು ಇಚ್ಛಿಸುವಂಥವರನ್ನು ಸಾವಿರ ವರುಷದ ಆಳ್ವಿಕೆ ಕಾಲದಲ್ಲಿ ನ್ಯಾಯಾಧಿಪತಿಯ ಮೆಚ್ಚುಗೆ ಅನುಗ್ರಹಗಳಿಗೆ ಸೂಚಕವಾದ ಬಲಭಾಗದಲ್ಲಿ ಕೂಡಿಸಲಾಗುವದು; ಆದರೆ ಆಡುಗಳಿಗೆ ಸೇರಿದ ವರ್ಗವನ್ನು ಅಂದರೆ ಸ್ವಇಚ್ಛೆಯುಳ್ಳವರೂ ಮೊಂಡುತನದವರೂ ಯಾವಾಗಲೂ ಬಂಡೆಯನ್ನು ಹತ್ತುವ –ವರಾಗಿ ಅಂದರೆ ಪ್ರಾಮುಖ್ಯತೆಯನ್ನೂ ಜನರ ಮೆಚ್ಚುಗೆಯನ್ನೂ ಬಯಸುವವರೂ [ಕುರಿಗಳು ಒಳ್ಳೆಯ ಕುರುಬನು ಒದಗಿಸುವಂಥ ಸತ್ಯವೆಂಬ ಸಮೃದ್ಧವಾದ ಹುಲ್ಲುಗಾವಲಿನಲ್ಲಿ ಮೇಯುವಲ್ಲಿ, ಈ ಆಡುಗಳು] ಅನುಪಯುಕ್ತವಾದವುಗಳಿಂದ ಪೋಷಣೆ ಹೊಂದುವವರಾಗಿ ನ್ಯಾಯಾಧಿಪತಿಯ ಎಡಭಾಗದಲ್ಲಿ ಅಂದರೆ ಅನುಗ್ರಹಕ್ಕೆ ವಿರುದ್ಧವಾದ ಸ್ಥಾನದಲ್ಲಿ ಅಂದರೆ ಆತನ ಅಸಮ್ಮತಿ ಹಾಗು ಖಂಡನೆಗೆ ಗುರಿಯಾಗುವಂಥ ಸ್ಥಾನದಲ್ಲಿ ಕೂಡಿಸಲ್ಪಡುವರು.

ಕುರಿಗಳನ್ನು ಆಡುಗಳಿಂದ ಬೇರ್ಪಡಿಸುವ ಈ ಕಾರ್ಯವು ಪೂರ್ಣಗೊಳ್ಳಲು ಸಾವಿರ ವರುಷದ ಆಳ್ವಿಕೆಕಾಲವೆಲ್ಲಾ ಬೇಕಾಗು–ವದು. ಆ ಕಾಲದಲ್ಲಿ ಪ್ರತಿಯೊಬ್ಬನೂ ತಾನು ದೇವರ ಹಾಗು ಆತನ ಚಿತ್ತದ ವಿಷಯವಾದ ಪರಿಜ್ಞಾನಕ್ಕೆ ಹಂತಹಂತವಾಗಿ ಬಂದವನಾಗಿ ತನ್ನ ಸ್ಥಾನವನ್ನು ಅನುಗ್ರಹಿತವಾದ ಬಲಭಾಗದಲ್ಲಿ ಅಥವಾ ಅನುಗ್ರಹ ರಹಿತವಾದ ಎಡಭಾಗದಲ್ಲಿ ಅಂದರೆ ಅವರು ಆ ಸುವರ್ಣಾವಕಾಶದ ಸಮಯದಲ್ಲಿ ತಮಗೆ ದೊರೆತ ಅವಕಾಶವನ್ನು ಉತ್ತಮಪಡಿಸಿಕೊಳ್ಳುವ ಇಲ್ಲವೇ ಅನುತ್ತಮಪಡಿಸಿಕೊಳ್ಳುವ ಪ್ರಕಾರವಾಗಿ ತಮ್ಮ ಸ್ಥಾನವನ್ನು ಪಡಕೊಳ್ಳುವನು. ಆ ಕಾಲದ ಅಂತ್ಯದಲ್ಲಿ ಲೋಕದಲ್ಲಿರುವ ಮಾನವರೆಲ್ಲರೂ ಸಾಮ್ಯದಲ್ಲಿ ತೋರಿಸಿರುವಂತೆ ಎರಡು ವರ್ಗದವರಾಗಿ ಸಜ್ಜುಗೊಳ್ಳುವರು.

ಆ ಕಾಲಸಮಯದ ಅಂತ್ಯವು ಲೋಕದ ನ್ಯಾಯ–ವಿಚಾರಣೆಯ ಅಥವಾ ನ್ಯಾಯತೀರ್ಪಿನ ಅಂತ್ಯವಾಗಿರುವದು ಮತ್ತು ಆನಂತರದಲ್ಲಿ ಎರಡು ವರ್ಗಗಳ ಬಗ್ಗೆ ಅಂತ್ಯವಾಗಿ ಇತ್ಯರ್ಥ ಮಾಡಲಾಗುವದು. ಈ "ಕುರಿಗಳು" ಎಂಬ ವರ್ಗಕ್ಕೆ ನೀಡಲಾಗುವ ಪ್ರತಿಫಲವನ್ನು ಅವರಿಗೆ ಅನುಗ್ರಹಿಸೋಣವಾಗುವ ಕಾರಣವೇನಂದರೆ ನ್ಯಾಯವಿಚಾರಣೆ ಮತ್ತು ನೀತಿಶಿಕ್ಷೆಗಳು ನೀಡಲಾಗುವ ಕಾಲದಲ್ಲಿ ಅವರು ಪ್ರೀತಿಯೆಂಬ ಸೊಗಸಿನ ಗುಣವನ್ನು ಬೆಳೆಸಿಕೊಂಡು ಅದನ್ನು ತೋರ್ಪಡಿಸುವರು. ಈ ಗುಣದಿಂದಲೇ ದೇವರ ಧರ್ಮಪ್ರಮಾಣವು ನೆರವೇರುವದೆಂಬು–ದನ್ನು ಪೌಲನು ವರ್ಣಿಸಿ ಹೇಳಿರುವನು. (ರೋಮಾ. 13:10). ತಮಗೆ ತೀವ್ರ ಅಭಾವವಿರುವ ಸಮಯದಲ್ಲಿ ಇದನ್ನು ಅವರು ಪರಸ್ಪರವಾಗಿ ತೋರ್ಪಡಿಸುವರು. ಅಲ್ಲದೆ ಕರ್ತನು ಅವರೆಲ್ಲರನ್ನು ತನ್ನ ಸಹೋದರರೆಂದು ಎಣಿಸಿ ಅವರು ಒಬ್ಬರಿಗೊಬ್ಬರು ಏನನ್ನು ಮಾಡಿರುತ್ತಾರೋ ಅದನ್ನೆಲ್ಲಾ ತನಗೇ ಮಾಡಿರುವರೆಂದು ಎಣಿಸುವನು; ಕರ್ತನು ದೈವಿಕ ಸ್ವಭಾವದವನಾಗಿರುವಲ್ಲಿ ಇವರು ಮನುಷ್ಯ ಸ್ವಭಾವದಲ್ಲಿದ್ದರೂ ತಾವು ದೇವರ ಮಕ್ಕಳೆಂದು ಎಣಿಸಲ್ಪಡುವರು.

"ಆಡು" ಎಂಬ ವರ್ಗದವರ ಮೇಲೆ ಬರುವ ದಂಡನೆಯು ಅವರಿಗೆ ಪ್ರೀತಿಯ ಮನೋಭಾವದ ಕೊರತೆಯ ಫಲವಾಗಿ ಬರುವದೆಂಬುದನ್ನು ತೋರಿಸಿಕೊಡಲಾಗುವದು. "ಕುರಿಗಳಿಗೆ" ಇರುವ ಅದೇ ಅನುಕೂಲಕರ ಸನ್ನಿವೇಶದಲ್ಲಿ ಕರ್ತನು ನೀಡುವ ನೀತಿಶಿಕ್ಷಣ ಮತ್ತು ರೂಪಿಸುವ ಪ್ರಭಾವವನ್ನು ಇವರು ಇಚ್ಛಾಪೂರ್ವಕವಾಗಿ ಪ್ರತಿರೋಧಿಸಿ ತಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳುವರು. ದೇವರ ಒಳ್ಳೆಯತನವು ಅವರನ್ನು ನಿಜವಾದ ಪಶ್ಚಾತ್ತಾಪಕ್ಕೆ ನಡೆಸುವದಿಲ್ಲ; ಆದರೆ ಅವರು ಫರೋಹನನಂತೆ ಆತನ [ದೇವರ] ಒಳ್ಳೇತನವನ್ನು ಉಪಯೋಗಿಸಿಕೊಂಡು ಕೆಟ್ಟದ್ದನ್ನು ನಡೆಸುವರು. ದೇವರ ಮತ್ತು ಆತನ ರಾಜ್ಯದ ನಿಯಮವಾದ ಪ್ರೀತಿಯೆಂಬ ಆಂಶವನ್ನು ಅಭಿವೃದ್ಧಿಪಡಿಸಿಕೊಳ್ಳದ "ಆಡುಗಳನ್ನು" ನಿತ್ಯಜೀವಕ್ಕೆ ಅನರ್ಹರೆಂದು ಎಣಿಸಲ್ಪಟ್ಟು ಅವರನ್ನು ನಾಶಮಾಡಲಾಗುವದು; ಆದರೆ (ಪ್ರೀತಿಸ್ವರೂಪನಾದ) ದೇವರ ಹೋಲಿಕೆಯನ್ನು ಅಭಿವೃದ್ಧಿಪಡಿಸಿಕೊಂಡು ಅದನ್ನು ತಮ್ಮ ಗುಣಸ್ವಭಾವಗಳಲ್ಲಿ ತೋರ್ಪಡಿಸುವ "ಕುರಿಗಳು" ಮುಂದಿನ ಕಾಲಗಳಲ್ಲಿ ದೇವರ ಕೈಕೆಳಗಿನ ಭೂಲೋಕದ ಅಧಿಪತಿಗಳಾಗಿ ನೆಲೆಗೊಳ್ಳುವರು.

ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಮಾನವಕುಲದ ಆಗುಹೋಗುಗಳನ್ನು ಅಂತಿಮವಾಗಿ ಕ್ರಮಪಡಿಸುತ್ತಾ ಕ್ರಿಸ್ತನು ತನ್ನ ಕುರಿಗಳ ವಿಷಯವಾಗಿ ಹೀಗೆ ಪ್ರಸ್ತಾಪಿಸಿ ಹೇಳುವನು: "ನನ್ನ ತಂದೆಯು ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ."

ಸಾವಿರ ವರುಷದ ಅಂತ್ಯದಲ್ಲಿ "ಕುರಿಗಳು" ಎಂದು ಅಲ್ಲಿ ಸಂಬೋಧಿಸಲಾಗಿದ್ದರೂ ಅದು ಸುವಾರ್ತಾಯುಗಲ್ಲಿನ ಸಭೆಯಾಗಿರುವ ಕುರಿಗಳಲ್ಲ, ಆದರೆ ಅವು ಕರ್ತನು ಯೋಹಾನ 10:16ರಲ್ಲಿ ಉಲ್ಲೇಖ ಮಾಡಿರುವ "ಬೇರೆ ಕುರಿಗಳು" ಎಂಬದು ಸ್ಪಷ್ಟವಾಗಿರುವದು ಮತ್ತು ದೇವರ ಯೋಜನೆಯಲ್ಲಿ ಅವರಿಗಾಗಿ ಸಿದ್ಧಪಡಿಸಲಾದ ರಾಜ್ಯವು ಅಂದರೆ ಲೋಕಾದಿಯಿಂದ ಅವರಿಗಾಗಿ ಸಿದ್ಧವಾಗಿರುವ ರಾಜ್ಯವು ಸುವಾರ್ತಾಯುಗದ ಸಭೆಗಾಗಿ ಸಿದ್ಧಪಡಿಸಿರುವ ರಾಜ್ಯವಾಗಿರುವದಿಲ್ಲ. ಸಭೆಯು ಸಾವಿರ ವರುಷದ ಆಳ್ವಿಕೆ ಆರಂಭದಲ್ಲಿ ತನ್ನ ರಾಜ್ಯವನ್ನು ಪಡೆದುಕೊಳ್ಳುವದು; ಆದರೆ ಈ ರಾಜ್ಯವು ಸಾವಿರ ವರುಷದ ಆಳ್ವಿಕೆಯಲ್ಲಿನ "ಕುರಿಗಳಿಗಾಗಿ" ಸಿದ್ಧಪಡಿಸಲಾಗಿರುವಂಥದ್ದು. ಅವರ ರಾಜ್ಯವು ಆದಾಮನಿಗೆ ಮೊದಲಲ್ಲಿ ಕೊಡಲಾದ ರಾಜ್ಯವಾಗಿದ್ದು, ಆದರೆ ಪಾಪದ ಮೂಲಕವಾಗಿ ಅದು ಕಳೆದುಕೊಳ್ಳಲ್ಪಟ್ಟದ್ದಾಗಿತ್ತು. ಹಾಗು ಅದು ಮತ್ತೆ ಪುನರುದ್ಧರಿ–ಸಲ್ಪಡಬೇಕಿದ್ದು, ಮಾನವನು ಮತ್ತೆ ಪರಿಪೂರ್ಣತೆಗೆ ಬಂದವನಾಗಿ ಆ ರಾಜ್ಯವನ್ನು ಪಡಕೊಂಡು ಅದನ್ನು ಅನುಭವಿಸಲು ಅರ್ಹನನ್ನಾಗಿ ಮಾಡಲ್ಪಟ್ಟಾಗ ಆತನಿಗೆ ಅದನ್ನು ಹಿಂದಿರುಗಿಸಲಾಗುವದು. ಆ ಪ್ರಭುತ್ವವು ಕೆಲವು ಸಂತತಿಯವರು ಇತರರ ಮೇಲೆ ಹೊಂದಿರುವ ಪ್ರಭುತ್ವವಾಗಿರದೆ ಅದು ಒಂದು ಸಹಭಾಗಿತ್ವವುಳ್ಳ ಪ್ರಭುತ್ವವಾಗಿದ್ದು ಅದರಲ್ಲಿ ಪ್ರತಿಯೊಬ್ಬನೂ ಅರಸನಾಗಿರುವನು, ಹಾಗು ಅದರಲ್ಲಿ ಭೂಲೋಕದ ಪ್ರತಿಯೊಂದು ಸಂಗತಿಗಳನ್ನು ಸೂಕ್ತವಾಗಿ ಅನುಭವಿಸುವ ಸಲುವಾಗಿ ಎಲ್ಲರೂ ಸಮನಾದ ಹಕ್ಕುಗಳು ಹಾಗು ಸವಲತ್ತುಗಳನ್ನು ಪಡೆದಿರುವರು. ಅದು ಒಂದು ಪ್ರಜೆಗಳ ಸಾರ್ವಭೌಮತ್ವವಾಗಿರುವದು. ಅಂದರೆ ಅದು ಒಂದು ಭವ್ಯವಾದ ಮಹಾ ಪ್ರಜಾಪ್ರಭುತ್ವವಾಗಿ, ಪರಿಪೂರ್ಣ ನೀತಿಯ ಮೇಲೆ ಆಧಾರಗೊಂಡು, ಅಲ್ಲಿ ಪ್ರತಿಯೊಬ್ಬನ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸಲಾಗುವದು; ಯಾಕಂದರೆ ಸ್ವರ್ಣಖಚಿತವಾದ ನಿಯಮಗಳನ್ನು ಪ್ರತಿಯೊಬ್ಬನ ಹೃದಯದಲ್ಲಿ ಕೆತ್ತಲಾಗಿರಲಾಗಿ, ಪ್ರತಿಯೊಬ್ಬನೂ ತನ್ನ ನೆರೆಯುವನನ್ನು ತನ್ನಂತೆಯೇ ಪ್ರೀತಿಸುವನಾಗಿರುವನು. ಆ ಪ್ರಭುತ್ವ ಹಾಗು ಅದರ ಸಮೃದ್ಧ ಆಶೀರ್ವಾದದ ದಾಸ್ತಾನುಗಳು ಇಡೀ ಭೂಲೋಕದಲ್ಲೆಲ್ಲಾ ಇರುವದು. (ಆದಿಕಾಂಡ 1:28; ಕೀರ್ತನೆ 8:5–8) ಆ ಲೋಕಸಾಮ್ರಾಜ್ಯವನ್ನು ಸಾವಿರ ವರುಷದ ಅಂತ್ಯದಲ್ಲಿ ವಿಮೋಚಿತರಾದ ಮಾನವ ಸಂತತಿಯವರಲ್ಲಿ ಪರಿಪೂರ್ಣರೂ ಯೋಗ್ಯರೂ ಆಗಿ ಮಾಡಲ್ಪಟ್ಟವರಿಗೆ ಕೊಡಬೇಕಿರುವಂಥ–ದೆಂಬುದನ್ನು ಆ ಸಾಮ್ರಾಜ್ಯವು ಲೋಕಾದಿಯಿಂದ ಸಿದ್ಧಮಾಡಲ್ಪಟ್ಟ ರಾಜ್ಯವಾಗಿದ್ದು ಅದು ಇತರ ರಾಜ್ಯಗಳಿಗಿಂತ ಸ್ಪಷ್ಟವಾಗಿ ವಿಭಿನ್ನವಾಗಿರುವದೆಂಬ ಅಂಶದ ಮೂಲಕವಾಗಿ ತೋರಿಸಲಾಗಿರುವದು. ಭೂಮಿಯು [ಆನಂತರ] ಪರಿಪೂರ್ಣ ಮನುಷ್ಯರ ನಿತ್ಯನಿವಾಸ ಹಾಗು ಸಾಮ್ರಾಜ್ಯವಾಗಬೇಕಿರುವದು. ಆದರೆ ತನ್ನೊಡನೆ ಸಹಬಾಧ್ಯರಾಗುವ ಮದಲಗಿತ್ತಿಯೆಂಬ ತನ್ನ ಸಭೆಯನ್ನು ಹೊಂದಿರುವ ಕ್ರಿಸ್ತನಿಗೆ ದಯಪಾಲಿಸುವ ರಾಜ್ಯವು ಒಂದು ಆತ್ಮಿಕ ಸಂಬಂಧವಾದ ರಾಜ್ಯವಾಗಿದ್ದು, ಅದು ದೇವದೂತರುಗಳಿಗಿಂತಲೂ ಹಾಗೂ ಪ್ರಭುತ್ವಾಧಿಕಾರಗಳಿ–ಗಿಂತಲೂ ಮಿಗಿಲಾಗಿರುವದು;" ಅದಕ್ಕೆ ಅಂತ್ಯವು ಇರುವದಿಲ್ಲ; ಅಂತ್ಯವಾಗುವ ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯು ಕೇವಲ ಕ್ರಿಸ್ತನ ಆಡಳಿತಾಧಿಕಾರದ ಆರಂಭ ಮಾತ್ರ. (1 ಕೊರಿಂಥ 15:25–28). ಈ ಅಂತ್ಯವಾಗದಂಥ ಪರಲೋಕದ ಆತ್ಮಿಕರಾಜ್ಯವು ಭೂಲೋಕವು ಉಂಟಾಗುವದಕ್ಕಿಂತ ಬಹು ಮೊದಲೇ ಸ್ಥಾಪಿತಗೊಂಡಿರುವಂಥದಾಗಿದ್ದು. ಅದರ ಆರಂಭವು "ದೇವರ ಸೃಷ್ಟಿಗೆ ಮೂಲನಾಗಿರುವ" ಕ್ರಿಸ್ತನಲ್ಲಿ ಗುರುತಿಸಲಾಗಿರುವದು. ಅದು ಜೇಷ್ಠಪುತ್ರನ ಸ್ಥಾನಹೊಂದಿರುವ ಕ್ರಿಸ್ತ ಯೇಸುವಿಗಾಗಿ ಇರುವ ಉದ್ದೇಶವುಳ್ಳದ್ದಾಗಿತ್ತು; ಆದರೆ ಆತನೊಂದಿಗೆ ಸಹಬಾಧ್ಯತೆ ಹೊಂದಿರುವ ಸಭೆಯೂ ಸಹ ಆತನಲ್ಲಿ ಜಗದುತ್ಪತ್ತಿಗೆ ಮೊದಲೇ ಆಯಲ್ಪಟ್ಟು ಅಥವಾ ರೂಪುಗೊಂಡಿರುವ–ದಾಗಿರುವದು. – ಎಫೆಸ್ಸ 1:4

ಭೂಲೋಕದ ರಾಜ್ಯ ಅಥವಾ ಆಡಳಿತವು ಜಗದುತ್ಪತ್ತಿಗೆ ಮೊದಲೇ ಮಾನವರಿಗಾಗಿ ಸಿದ್ಧತೆಯಲ್ಲಿದ್ದಂಥಾ ರಾಜ್ಯವಾಗಿತ್ತು. ಮಾನವಕುಲವು ಆರು ಸಾವಿರ ವರುಷಗಳ ಪರ್ಯಂತರ ದುಷ್ಟತನದ ಆಧಿಪತ್ಯದಲ್ಲಿ ಬಾಧೆಪಟ್ಟು, ದಾರಿದ್ರ್ಯ ಹಾಗು ಮರಣದ ಪರಿಣಾಮಗಳನ್ನು ಅನಿವಾರ್ಯವಾಗಿ ಕಲಿತುಕೊಂಡು ಇದಕ್ಕೆ ಪ್ರತಿಯಾಗಿ ದೇವರ ಪ್ರೀತಿಯಲ್ಲಿರುವ ನೀತಿನ್ಯಾಯ ಜ್ಞಾನವಿವೇಕ ಒಳ್ಳೆತನಗಳ ವ್ಯತ್ಯಾಸವನ್ನು ಪ್ರಮಾಣಿಕರಿಸಿ ತೋರಿಸಿಕೊಡುವ ಸಲುವಾದ ಒಂದು ಸಾಧನವಾಗಿತ್ತು. ಆನಂತರ ಕ್ರಿಸ್ತನ ಆಳ್ವಿಕೆಯಲ್ಲಿ ಆತನನ್ನು "ಜಗದುತ್ಪತ್ತಿಗೆ ಮೊದಲಿನಿಂದಲೂ ಆತನಿಗಾಗಿ ಸಿದ್ಧಮಾಡಲಾದ ರಾಜ್ಯವನ್ನು" ಬಾಧ್ಯವಾಗಿ ಕೊಡುವ ಸಲುವಾಗಿ ಆತನನ್ನು ಸಾವು ವಿನಾಶಗಳಿಂದ ಪುರುದ್ಧಾರಮಾಡಿ ಪರಿಪೂರ್ಣತೆಗೆ ತಂದು ಯೋಗ್ಯನನ್ನಾಗಿ ಮಾಡುವಂತಾಗಲು ಏಳನೇ ಸಾವಿರ ವರುಷದ ಅವಧಿಯು ಬೇಕಾಗುವದು.

ಆ ರಾಜ್ಯದಲ್ಲಿ ಎಲ್ಲರೂ ಅರಸರುಗಳಾಗಿದ್ದು ಅದು ಒಂದು ಭವ್ಯವಾದ ಸಾರ್ವತ್ರಿಕ ಗಣರಾಜ್ಯವಾಗಿರುವದು; ಅದರಲ್ಲಿನ ಪ್ರತಿಯೊಬ್ಬ ನಾಗರಿಕನಲ್ಲಿರುವ ಪರಿಪೂರ್ಣತೆಯ ಮೂಲಕವಾಗಿ ಅದರ ಸ್ಥಿರತೆಯ ಹಾಗು ಆಶೀರ್ವಾದಕರವಾದ ಪ್ರಭಾವದ ಆಶ್ವಾಸನೆಯು ನೀಡಲಾಗಿರುವದು. ಆ ಪರಿಣಾಮವು ಈಗ ಬಹು ಅಧಿಕವಾಗಿ ಬಯಸುವಂಥದ್ದಾದರೂ ಪಾಪದ ಕಾರಣದಿಂದಾಗಿ ಈಗ ಅದು ಅಸಾಧ್ಯ. ಪ್ರತಿಯಾಗಿ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿನ ಕ್ರಿಸ್ತನ ರಾಜ್ಯವು (ಅಪರಿಪೂರ್ಣತೆ ಹಾಗು ಪುನರುದ್ಧಾರದ ಅವಧಿಯಲ್ಲಿನ) ಒಂದು ದೈವಾಡಳಿತವಾಗಿದ್ದು ಲೋಕವನ್ನು ಅದರ ಸಮ್ಮತಿ ಅನುಮೋದನೆಗಳನ್ನು ಪಡೆಯದೆಯೇ ಆಳ್ವಿಕೆ ಮಾಡುವದು.

ಸುವಾರ್ತಾಯುಗದ ಸಭೆಯ ಸಹೋದರರು ಮಾತ್ರ ಕ್ರಿಸ್ತನ "ಸಹೋದರರು" ಆಗಿರುವದಿಲ್ಲ. ಆ ಸಮಯದಲ್ಲಿ ಪರಿಪೂರ್ಣತೆಯ ಸ್ಥಿತಿಗೆ ಪುನರುದ್ಧಾರಗೊಂಡು ದೇವರ ಪುತ್ರರಾಗಿ ಮಾನ್ಯತೆ ಪಡೆದವರಾಗಿರುವರು. ಅಂದರೆ ಅವರು ಆದಾಮನು ದೇವರ ಮಗನಾಗಿದ್ದನೆಂಬ ಅರ್ಥದಲ್ಲಿಯೇ ಮಕ್ಕಳಾಗಿರುವರು (ಲೂಕ 3:38); ಅವರು ಮಾನವ ವರ್ಗದಲ್ಲಿನ [ದೇವರ] ಮಕ್ಕಳಾಗುವರು. ದೇವರ ಮಕ್ಕಳೆಲ್ಲರೂ–ಅವರು ಮಾನವ ವರ್ಗದವರೇ ಆಗಿರಲಿ, ದೇವದೂತರ ಅಥವಾ

ದೈವಸ್ವಭಾವದ ಮಟ್ಟದಲ್ಲಿರುವರೇ ಆಗಿರಲಿ, ಅವರು ಸಹೋದರರೇ. ಇವರಿಗೆ ಅಂದರೆ ಮಾನವ ಸಹೋದರರಿಗೆ ಇಲ್ಲಿ ನಮ್ಮ ಕರ್ತನ ಪ್ರೀತಿಯು ವ್ಯಕ್ತವಾಗಿರುವದು. ಶೀಘ್ರದಲ್ಲೇ ದೈವೀಕಸ್ವಭಾವದಲ್ಲಿನ ದೇವರ ಮಕ್ಕಳು ಹಾಗು ಕ್ರಿಸ್ತನ ಸಹೋದರರು ಆಗಲಿರುವವರಿಗೆ ಸೇವೆಮಾಡುವಂಥ ಅವಕಾಶವು ಈಗ ಲೋಕಕ್ಕೆ ಇರುವಂತೆಯೇ ಮುಂದೆ ಬರುವ ಕಾಲಸಮಯದಲ್ಲಿ ಅವರಿಗೆ [ಲೋಕದವರಿಗೆ] ಮಾನವ ಸಹೋದರರಿಗೆ (ಒಬ್ಬರಿಗೊಬ್ಬರು) ಸೇವೆಮಾಡುವಂಥ ಯಥೇಚ್ಛವಾದ ಅವಕಾಶವು ಉಂಟಾಗುವದು.

ಮೃತರಾದ ಜನಾಂಗಗಳು ಮತ್ತೆ ಜೀವಾಸ್ಥಿತ್ವಕ್ಕೆ ಬಂದಾಗ ಅವರಿಗೆ ಊಟ ಉಡುಪು ಹಾಗು ವಸತಿಯ ಅಗತ್ಯತೆ ಬರುವದು. ಅವರು ಈಗಿನ ಜೀವಿತದಲ್ಲಿ ಎಂಥಾ ದೊಡ್ಡ ಆಸ್ತಿಸಂಪತ್ತನ್ನು ಪಡೆದಿದ್ದಾಗ್ಯೂ, ಮರಣವೆಂಬದು ಅವರೆಲ್ಲರನ್ನೂ ಒಂದೇ ಸಮನಾದ ಅಂತಸ್ತಿಗೆ ತರುವದು: ಶಿಶು ಮತ್ತು ಪ್ರೌಢವಯಸ್ಕನು, ಲಕ್ಷಾಧಿಪತಿ ಹಾಗು ದರಿದ್ರನು, ವಿದ್ಯೆಯುಳ್ಳವನು ಹಾಗು ವಿದ್ಯೆಯಿಲ್ಲದವನು, ಸುಸಂಸ್ಕೃತ ಹಾಗು ಅಜ್ಞಾನಿ ಅಲ್ಲದೆ ಹೀನಸ್ಥಿತಿಯವನು, ಇವರೆಲ್ಲರೂ ಔದಾರ್ಯತೋರುವ ಸಮೃದ್ಧವಾದ ಒಂದು ಅವಕಾಶವನ್ನು ಪಡೆದವರಾಗಿರುವರು; ಹೀಗೆ ಅವರು ದೇವರ ಜೊತೆ-ಕೆಲಸದವರಾಗುವ ಸೌಭಾಗ್ಯವುಳ್ಳವರಾಗುವರು. ಇಲ್ಲಿ ಲಾಜರನ ಸಂಗತಿಯಲ್ಲಿ ನೀಡಲಾದ ನಿದರ್ಶನವನ್ನು ನಮ್ಮ ನೆನಪಿಗೆ ತರಲಾಗಿರುವದು: ಯೇಸುವು ಅವನನ್ನು ಮಾತ್ರ ಮರಣದಿಂದ ಎಬ್ಬಿಸಿದ್ದನು, ಮತ್ತು ಆನಂತರದಲ್ಲಿ ಆನಂದಭರಿತರಾದ ಮಿತ್ರರಿಗೆ ಅವನಿಗೆ ಸುತ್ತಿದ್ದ ಮರಣವಸ್ತ್ರದ ಕಟ್ಟುಗಳನ್ನು ಬಿಚ್ಚಿ ಅವನಿಗೆ ಊಟವಸ್ತ್ರಗಳನ್ನು ಕೊಡುವಂತೆ ಬಿಡಲಾಯಿತು.

ಅಷ್ಟೇ ಅಲ್ಲದೆ, ಇವರುಗಳನ್ನು ರೋಗಗ್ರಸ್ತರು ಹಾಗೂ ಸೆರೆಯಲ್ಲಿರುವವರು (ಹೆಚ್ಚು ಸೂಕ್ತವಾಗಿ ಹೇಳಬೇಕಾದರೆ, ಪೋಷಣೆ ಪಾಲನೆಯಲ್ಲಿರುವವರು) ಎಂದು ಹೇಳಲಾಗಿರುವದು. ಸಮಾಧಿಯೆಂಬುದು ದೊಡ್ಡ ಸೆರೆಮನೆಯಾಗಿದ್ದು ಅದರಲ್ಲಿ ಲಕ್ಷಾಂತರ ಮಂದಿ ಮಾನವರು ಪ್ರಜ್ಞಾಹೀನ ಸ್ಥಿತಿಯೆಂಬ ಬಂಧನಲ್ಲಿಡಲ್ಪಟ್ಟಿರುವರು; ಆದರೆ ಸಮಾಧಿಯಿಂದ ಬಿಡುಗಡೆ-ಯಾಗಿ ಹೊರಬಂದಾಗ ಅವರನ್ನು ಪರಿಪೂರ್ಣತೆಯ ಸ್ಥಿತಿಗೆ ಪುನರುದ್ಧರಿಸುವದು ಕ್ಷಣಮಾತ್ರದಲ್ಲಿ ನೆರವೇರುವಂಥ ಒಂದು ಕಾರ್ಯವಾಗಬೇಕೇನಿಲ್ಲ. ಇನ್ನೂ ಪರಿಪೂರ್ಣರಾಗದ ಅವರನ್ನು ರೋಗಗ್ರಸ್ತರೆಂದು ಹಾಗು ಪಾಲನೆಯಲ್ಲಿರುವರೆಂದು ಸೂಕ್ತವಾಗಿ ಹೆಸರಿಸಬಹುದು: ಸತ್ತವರಾಗಿರದ ಅವರು ಜೀವನದಲ್ಲಿ ಇನ್ನೂ ಪರಿಪೂರ್ಣತೆಯನ್ನು ಹೊಂದದಿರುವರು; ಈ ಎರಡರ ನಡುವೆ ಇರುವ ಯಾವ ಸ್ಥಿತಿಯನ್ನಾದರೂ ನಾವು ರೋಗಗ್ರಸ್ತತೆಯೆಂದು ಸೂಕ್ತವಾಗಿ ಸೂಚಿಸಿ ಹೇಳಬಹುದು. ಅಲ್ಲದೆ ಅವರನ್ನು ಸ್ವಸ್ಥರನ್ನಾಗಿಸುವವರೆಗೂ ಅಂದರೆ ಶಾರೀರಿಕವಾಗಿ ಮಾನಸಿಕವಾಗಿ ಹಾಗು ನೈತಿಕವಾಗಿ ಪರಿಪೂರ್ಣರನ್ನಾಗಿ-ಸುವವರೆಗೂ ಅವರು ಪೋಷಣೆಪಾಲನೆಯಲ್ಲಿ ಮುಂದುವರೆ-ಯುವರು. ಆ ಸಮಯದಲ್ಲಿ ಪರಸ್ಪರ ಸಹಾಯ ಸಹಾನುಭೂತಿ ಶಿಕ್ಷಣ ಮತ್ತು ಪ್ರೋತ್ಸಾಹ ಪಡಿಸಲು ಹೇರಳವಾದ ಅವಕಾಶಗಳಿರುವವು, ಅಲ್ಲದೆ ಸಹಾಯ ಮಾಡಲು ವಿಫಲವಾದಲ್ಲಿ ಅದನ್ನು ಪ್ರೀತಿಯೆಂಬ ಕರ್ತನ ಮನೋಭಾವಾದ ಕೊರತೆಯೆಂದು ಗುರುತಿಸಲಾಗುವದು.

ಮನುಕುಲದವರೆಲ್ಲರನ್ನು ಒಂದೇ ಸಾರಿ ಎಬ್ಬಿಸಲು ಆಗದಿದ್ದು, ಆದರೆ ಅವರು ಆ ಸಾವಿರ ವರುಷಗಳಲ್ಲಿ ಹಂತಹಂತವಾಗಿ ಎಬ್ಬಿಸಲ್ಪಡಲು, ಪ್ರತಿಯೊಂದು ಹೊಸ ಗುಂಪಿನವರು ತಮಗಿಂತ ಮುಂದಿನವರಾದ ಸಹಾಯಕರ ಒಂದು ಸೈನ್ಯವನ್ನೇ ಕಂಡುಕೊಳ್ಳುವರು. ಆಗ ಮನುಷ್ಯರು ಒಬ್ಬರಿಗೋಸ್ಕರ ವಾಗಿ ಒಬ್ಬರು [ಅಂದರೆ ಕ್ರಿಸ್ತನ ಸಹೋದರರುಗಳು] ತೋರಿದ ಪ್ರೀತಿ-ಔದಾರ್ಯಗಳನ್ನು ಆ ಅರಸನು ತನ್ನ ಪರವಾಗಿ ತೋರಿಸಲಾದುದೆಂದು ಎಣಿಸುವನು. ನೀತಿವಂತರಿಗೆ ಅನುಗ್ರಹಿಸ ಲಾಗುವ ಗೌರವಕ್ಕೆ ಆಧಾರವಾಗುವಂಥ ಯಾವುದೇ ದೊಡ್ಡ ಕಾರ್ಯಗಳನ್ನು ನಿರ್ವಹಣೆಗಾಗಿ ವಹಿಸಿಕೊಡಲಾಗು -ವದಿಲ್ಲ: ಅವರು ಕೇವಲ ಪ್ರೀತಿಯೆಂಬ ದೇವರ ನಿಯಮಕ್ಕೆ ತಮ್ಮನ್ನು ಹೊಂದಿಸಿಕೊಂಡವರಾಗಿ ತಮ್ಮ ಕೃತ್ಯಗಳಿಂದ ಅದನ್ನು ಸಾಬೀತು ಪಡಿಸಬೇಕಿರುವದು. "ಪ್ರೀತಿಯಿಂದಲೇ ಧರ್ಮ ಪ್ರಮಾಣವೆಲ್ಲಾ ನೆರವೇರುವದು" (ರೋಮಾ. 13:10) ಅಲ್ಲದೆ "ದೇವರು ಪ್ರೀತಿಸ್ವರೂಪಿ." ಹೀಗಾಗಿ ಮನುಷ್ಯನು ಮತ್ತೆ ದೇವರ ಸ್ವರೂಪಕ್ಕೆ ಹಿಂದಿರುಗಿಸಲ್ಪಟ್ಟಾಗ-"ಬಹು ಒಳ್ಳೆಯದು" ಎಂದು ಕರೆಯಲಾಗುವದು ಅಂದರೆ ಮಾನವನು ಸಹ ಪ್ರೀತಿ ಅಭಿವ್ಯಕ್ತಗೊಳಿಸುವದಕ್ಕೆ ಒಂದು ಜೀವಂತ ನಿದರ್ಶನವಾಗುವನು.

"...ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ." ಎನ್ನುವದು ದೈವನಿಯಮಗಳಿಗೆ ಹಾಗು ದೇವರ ಸರ್ವೋತ್ಕೃಷ್ಟತೆಗೆ ಅಧೀನವಲ್ಲದ ಪ್ರತ್ಯೇಕ ಆಳ್ವಿಕೆಯನ್ನು ಸೂಚಿಸುವದಿಲ್ಲ. ಯಾಕಂದರೆ ದೇವರು ಆರಂಭದಲ್ಲಿ ಭೂಮಿಯ ಮೇಲಿನ ಪ್ರಭುತ್ವವನ್ನು ಮನುಷ್ಯನಿಗೆ ಕೊಡಲಿಲ್ಲವಾದರೂ, ಅಲ್ಲದೆ ತನ್ನ ಮೇಲೆ ಪೂರ್ಣ ಭರವಸೆಯಿಡುವದಕ್ಕಾಗಿ ಆತನನ್ನು ಸಿದ್ಧಪಡಿಸಿದಾಗ ಅದನ್ನು ಆತನಿಗೆ ಪುನರ್ವಶ ಮಾಡಿಕೊಡಲು ಯೋಚಿಸಿದ್ದನಾದರೂ, ಮನುಷ್ಯನು ತನ್ನ [ದೇವರ] ಉತ್ಕೃಷ್ಟವಾದ ಆಜ್ಞಾವಿಧಿನಿಯಮಗಳಿಗೆ ಅಧೀನನಾಗದೆಯೇ ಅಥವಾ ಹೊಂದಾಣಿಕೆ ಮಾಡಿಕೊಳ್ಳದೆಯೇ ಬೇರೆ ರೀತಿಯಲ್ಲಿ ಆಳ್ವಿಕೆಮಾಡಲು ಉದ್ದೇಶಿಸಲ್ಪಟ್ಟವನಾಗಿದ್ದನೆಂದು ನಾವು ಕಲ್ಪಿಸಿಕೊಳ್ಳಬೇಕಿರುವದಿಲ್ಲ. "ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ," ಎನ್ನುವದು ನಿರಂತರವಾಗಿ ಆ ಆಳ್ವಿಕೆಯ ಮೂಲ-ತತ್ವವಾಗಿರಬೇಕು. ಮಾನವನು ಆನಂತರದಲ್ಲಿ ತನ್ನ ಆಧಿಪತ್ಯದಲ್ಲಿ ಪರಲೋಕದ ನಿಯಮ ವಿಧಿಗಳಿಗೆ ಅನುಸಾರವಾಗಿ ಆಳ್ವಿಕೆ ಮಾಡುವನು ಅಂದರೆ ಆತನ ಚಿತ್ತವನ್ನು ಸತತವಾಗಿ ನೆರವೇರಿಸುವದರಲ್ಲಿ ಹರ್ಷಿಸುವವನಾಗುವನು. "ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಸೌಭಾಗ್ಯವಿದೆ." (ಕೀರ್ತನೆ 16:11) ಆಹಾ! "ಮಹಿಮಾಯುತ ಕಾಲಗಳೇ, ತ್ವರೆಪಡಿರಿ" ಎಂದು ಯಾರು ತಾನೇ ಹೇಳಲಾರರು

ಅಲ್ಲದೆ ಯಾವಾತನ ಪ್ರೀತಿಮಯವಾದ ಸಂಕಲ್ಪಗಳೆಂಬ ಪುಷ್ಪವು ಇಂಥಾ ಆಶೀರ್ವಾದ ಪೂರ್ಣತೆಗೆ ಅರಳುತ್ತಿರುವಾಗ ಯಾರು ತಾನೆ ಪ್ರಭಾವ ಮಾನಗಳನ್ನು ಆತನಿಗೆ ಸಲ್ಲಿಸಲಾರರು?

ಈಗ ನಾವು ಎಡಭಾಗದಲ್ಲಿರುವವರಿಗೆ ನೀಡಲಾದ ಸಂದೇಶವನ್ನು ಅಂದರೆ "ಶಾಪಗ್ರಸ್ತರೇ, [ಖಂಡನೆಗೊಳ-ಗಾದವರೇ, ಅಂದರೆ ಜೀವಮಾನದಲ್ಲಿ ಆಗುವ ಪ್ರಭಾವ ಮಾನಗಳಿಗೆ ಅನರ್ಹರಾದ ಸಾಧನಗಳೇ] ನನ್ನನ್ನು ಬಿಟ್ಟು... ಹೋಗಿರಿ" ಎನ್ನುವದರ ಬಗ್ಗೆ ಪರಿಶೀಲಿಸೋಣ. ಆಕಾರ ನೀಡಿ ರೂಪುಗೊಳಿಸುವ ದೇವರ ಪ್ರೀತಿಯೆಂಬದರ ಪ್ರಭಾವಕ್ಕೆ ಯಾರು ತಾನೇ ಒಳಪಡಲಾರರು. ಈ "ಸಹೋದರರು" ಹಸಿದು ಬಾಯಾರಿದಾಗ ಅಥವಾ ವಸ್ತ್ರವಿಲ್ಲದಿರುವಾಗ, ರೋಗಿಗಳಾಗಿ-ದ್ದಾಗ ಅಲ್ಲದೆ ಸೆರೆಮನೆಯಲ್ಲಿದ್ದಾಗ ನೀವು ಅವರ ಅಗತ್ಯತೆಗಳನ್ನು ಪೂರೈಸಲಿಲ್ಲ, ಹೀಗೆ ನೀವು ಪರಲೋಕದ ಪಟ್ಟಣಕ್ಕೆ (ರಾಜ್ಯಕ್ಕೆ) ಹೊಂದಾಣಿಕೆ ಮಾಡಿಕೊಂಡಿಲ್ಲವೆಂಬುದನ್ನು ಸತತವಾಗಿ ಸಾಬೀತುಪಡಿಸುತ್ತಿದ್ದೀರಿ; ಯಾಕಂದರೆ "ಅದರಲ್ಲಿ ಹೊಲೆಯಾದ -ದ್ದೊಂದೂ ಸೇರುವದಿಲ್ಲ," ಈ ವರ್ಗದವರ ವಿಷಯವಾದ ತೀರ್ಮಾನವು ಅಥವಾ ತೀರ್ಪು ಏನಂದರೆ, "ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಗೆ [ನಾಶನದ ಸೂಚನೆ] ಹೋಗಿರಿ." ಎನ್ನುವದು. ಬೇರೊಂದೆಡೆ ಸಾಂಕೇತಿಕ ಭಾಷೆಯಿಲ್ಲದೆ ನಾವು ಓದುವದು, ಕ್ರಿಸ್ತನು "ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ... [ರಕ್ತಮಾಂಸಧಾರಿಯಾದನು]" ಎಂದು ಹೇಳಿರುವದು.

"ಇವರು [ಅಂದರೆ "ಆಡುಗಳೆಂಬ ವರ್ಗದವರು] ನಿತ್ಯ [ಗ್ರೀಕ್ ಮೂಲ: ಅಯೋನಿಯೋಸ್ aionios ಅಂದರೆ ನಿರಂತರವಾದ] ಶಿಕ್ಷೆಗೂ ಆದರೆ ನೀತಿವಂತರೂ ನಿತ್ಯ [ಗ್ರೀಕ್ ಮೂಲ: ಅಯೋನಿಯೋಸ್ aionios ಅಂದರೆ ನಿರಂತರವಾದ] ಜೀವಕ್ಕೂ ಹೋಗುವರು." ಆ ಶಿಕ್ಷೆಯು [ನೀತಿಗೆ] ಪ್ರತಿಫಲವಾಗಿರುವ ನಿತ್ಯಜೀವದಂತೆ ನಿರಂತವಾಗಿರುವದು. ಎರಡೂ ನಿರಂತರವಾಗಿ ಇರುವಂಥವುಗಳೇ.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 12 | ಯೆರೂಸಲೇಮ್ | ಧಾರ್ಮಿಕ ಮುಖಂಡರುಗಳು ಯೇಸುವಿನ ಮರಣಕ್ಕಾಗಿ ಮಾಡಿದ ಒಳಸಂಚು | 26:1–5 | 14:1,2 | 22:1,2 | –– |
| | ಯೆರೂಸಲೇಮ್ | ಯೇಸುವನ್ನು ಹಿಡುಕೊಡಲು ಮಹಾಯಾಜಕರೊಂದಿಗೆ ಯೂದನು ಮಾಡಿದ ಹಣದ ಅವ್ಯವಹಾರ | 26:14–16 | 14:10–11 | 22:3–6 | –– |
| ನಿಸ್ಸಾನ್ 12 | ಯೆರೂಸಲೇಮ್ ಹಾಗು ಅದರ ಸಮೀಪ | ಪಸ್ಕದ ಹಬ್ಬಕ್ಕಾಗಿ ಮಾಡಿದ ಏರ್ಪಾಟುಗಳು | 26:17–19 | 14:12–16 | 22:7–13 | –– |
| ನಿಸ್ಸಾನ್ 14 | ಯೆರೂಸಲೇಮ್ | ಹನ್ನೆರಡು ಮಂದಿಯೊಡನೆ ಪಸ್ಕಭೋಜನವನ್ನು ಮಾಡಿದ್ದು | 26:20–21 | 14:17–18 | 22:14–16 | –– |
| | ಯೆರೂಸಲೇಮ್ | ಯೇಸು ತನ್ನ ಅಪೋಸ್ತಲರ ಕಾಲುಗಳನ್ನು ತೊಳೆದದ್ದು | –– | –– | –– | 13:1–20 |
| | ಯೆರೂಸಲೇಮ್ | ಯೂದನನ್ನು ದ್ರೋಹಿಯೆಂದು ಗುರುತು ಹಿಡಿದು ಅವನನ್ನು ಹೊರಹಾಕಲಾದುದು | 26:21–25 | 14:18–21 | 22:21–23 | 13:21–30 |
| | ಯೆರೂಸಲೇಮ್ | ರಾತ್ರೀಭೋಜನವು ಹನ್ನೊಂದು ಮಂದಿಯೊಂದಿಗೆ ಸ್ಮರಣೆಗಾಗಿ ಪ್ರತಿಸ್ಥಾಪಿತವಾದದ್ದು | 26:26–29 | 14:22–25 | 22:19–20, 24–30 | [1 ಕೊರಿಂಥ 11:23–25] |

## ಮತ್ತಾಯ 26:1–5, 14–29

ಯೇಸು ಈ ಮಾತುಗಳನ್ನೆಲ್ಲಾ ಆಡಿ ಮುಗಿಸಿದ ಮೇಲೆ ತನ್ನ ಶಿಷ್ಯರಿಗೆ-ಎರಡು ದಿವಸಗಳಾದ ಮೇಲೆ ಪಸ್ಕಹಬ್ಬ ಬರುತ್ತದೆಂದು ಬಲ್ಲಿರಿ; ಆಗ ಮನುಷ್ಯಕುಮಾರನನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿಕೊಡೋಣವಾಗುವದು ಎಂದು ಹೇಳಿದನು.

ಆ ಕಾಲದಲ್ಲಿ ಮಹಾಯಾಜಕರೂ ಪ್ರಜೆಯ ಹಿರಿಯರೂ ಕಾಯಫನೆಂಬ ಮಹಾಯಾಜಕನ ಮಠಕ್ಕೆ ಕೂಡಿಬಂದು ಯೇಸುವನ್ನು ಉಪಾಯದಿಂದ ಹಿಡಿದುಕೊಲ್ಲಬೇಕೆಂಬದಾಗಿ ಆಲೋಚನೆ ಮಾಡಿಕೊಂಡರು. ಆದರೂ-ಹಬ್ಬದಲ್ಲಿ ಹಿಡಿಯಬಾರದು, ನಮ್ಮ ಜನರಲ್ಲಿ ಗದ್ದಲವಾದೀತು ಎಂದು ಮಾತಾಡಿಕೊಂಡರು.

ಆ ಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯೂದನೆಂಬವನು ಮಹಾಯಾಜಕರ ಬಳಿಗೆ

ಹೋಗಿ–ನಾನು ಅವನನ್ನು ನಿಮಗೆ ಹಿಡುಕೊಟ್ಟರೆ ನನಗೆ ಏನು ಕೊಡುತ್ತೀರಿ? ಅಂದನು. ಅವರು ಅವನಿಗೆ ಮೂವತ್ತು ರೂಪಾಯಿ ತೂಗಿಕೊಟ್ಟರು. ಅಂದಿನಿಂದ ಅವನು ಆತನನ್ನು ಹಿಡುಕೊಡುವದಕ್ಕೆ ಅನುಕೂಲವಾದ ಸಮಯವನ್ನು ನೋಡುತ್ತಿದ್ದನು. ಹುಳಿಯಿಲ್ಲದೆ ರೊಟ್ಟಿಯ ಹಬ್ಬದ ಮೊದಲನೆಯ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು–ಪಸ್ಕದ ಊಟಮಾಡುವದಕ್ಕೆ ನಾವು ನಿನಗೆ ಎಲ್ಲಿ ಸಿದ್ಧಮಾಡಬೇಕೆನ್ನುತ್ತೀ ಎಂದು ಕೇಳಲು ಆತನು–ನೀವು ಪಟ್ಟಣದೊಳಕ್ಕೆ ಇಂಥವನ ಬಳಿಗೆ ಹೋಗಿ ಅವನಿಗೆ–ನನ್ನ ಕಾಲ ಸಮೀಪವಾಯಿತು, ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಪಸ್ಕಹಬ್ಬಮಾಡುತ್ತಾನೆಂದು ಬೋಧಕನು ಹೇಳುತ್ತಾನೆ ಎಂಬದಾಗಿ ಹೇಳಿರಿ ಅಂದನು. ಶಿಷ್ಯರು ಯೇಸು ತಮಗೆ ಅಪ್ಪಣೆಕೊಟ್ಟಂತೆ ಮಾಡಿ ಪಸ್ಕಕ್ಕೆ ಸೌರಿಸಿದರು.

ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಊಟಕ್ಕೆ ಕೂತುಕೊಂಡನು. ಅವರು ಊಟಮಾಡುತ್ತಿರುವಾಗ ಆತನು–ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆಗ ಅವರು ಬಹಳ ದುಃಖಪಟ್ಟು – ಸ್ವಾಮೀ, ನಾನಲ್ಲವಲ್ಲಾ ಎಂದು ಪ್ರತಿಯೊಬ್ಬರು ಕೇಳತೊಡಗಿದರು. ಅದಕ್ಕಾತನು–ಬಟ್ಟಲಲ್ಲಿ ನನ್ನ ಸಂಗಡ ಕೈ ಅದ್ದಿದವನೇ ನನ್ನನ್ನು ಹಿಡುಕೊಡುವನು. ಮನುಷ್ಯಕುಮಾರನು ಹೊರಟು ಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಅಂದನು. ಆಗ ಆತನನ್ನು ಹಿಡಕೊಡಬೇಕೆಂದಿದ್ದ ಯೂದನು–ಗುರುವೇ, ನಾನಲ್ಲವಲ್ಲಾ? ಅನ್ನಲಾಗಿ ಯೇಸು ಅವನಿಗೆ–ನೀನೇ ಹೇಳಿದ್ದೀ ಎಂದು ಹೇಳಿದನು. ಅವರು ಊಟಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ ಕೊಟ್ಟು–ತಕ್ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು–ಇದರಲ್ಲಿರುವದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು.

## ಮಾರ್ಕ 14:1–2,10–25

ಪಸ್ಕದ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬಬರುವದಕ್ಕೆ ಇನ್ನೂ ಎರಡು ದಿನಗಳಿದ್ದಾಗ ಮಹಾಯಾಜಕರೂ ಶಾಸ್ತ್ರಿಗಳೂ ಯೇಸುವನ್ನು ಉಪಾಯದಿಂದ ಹಿಡಿದು ಕೊಲ್ಲುವದಕ್ಕೆ ಮಾರ್ಗವನ್ನು ಹುಡುಕುತ್ತಿದ್ದರು. ಯಾಕಂದರೆ–ಹಬ್ಬದಲ್ಲಿ ಹಿಡಿಯಬಾರದು, ನಮ್ಮ ಜನರಲ್ಲಿ ಗದ್ದಲವಾದೀತು ಎಂದು ಮಾತಾಡಿಕೊಂಡರು.

ಆ ಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯೂದನು ಯೇಸುವನ್ನು ಮಹಾಯಾಜಕರಿಗೆ ಹಿಡುಕೊಡಬೇಕೆಂತ ಅವರ ಬಳಿಗೆ ಹೋದನು. ಅವರು ಕೇಳಿ ಸಂತೋಷಪಟ್ಟು–ನಿನಗೆ ಹಣಕೊಡುತ್ತೇವೆಂದು ಮಾತುಕೊಟ್ಟರು. ಅವನು ಆತನನ್ನು ಅನುಕೂಲವಾಗಿ ಹಿಡುಕೊಡುವದು ಹೇಗೆ ಎಂದು ನೋಡುತ್ತಿದ್ದನು. ಹುಳಿಯಿಲ್ಲದ ರೊಟ್ಟಿಯ ಮೊದಲನೆ ದಿವಸ, ಅಂದರೆ ಪಸ್ಕದ ಕುರಿಮರಿಯನ್ನು ಕೊಯ್ಯುವ ದಿವಸ, ಆತನ ಶಿಷ್ಯರು–ನೀನು ಪಸ್ಕದ ಊಟಮಾಡುವಂತೆ ನಾವು ಎಲ್ಲಿ ಹೋಗಿ ಸಿದ್ಧಮಾಡಬೇಕೆನ್ನುತ್ತೀ ಎಂದು ಆತನನ್ನು ಕೇಳಲು ಆತನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು–ನೀವು ಪಟ್ಟಣದೊಳಕ್ಕೆ ಹೋಗಿರಿ; ಅಲ್ಲಿ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು. ನೀವು ಅವನ ಹಿಂದೆ ಹೋಗಿರಿ; ಅವನು ಯಾವ ಮನೆಗೆ ಹೋಗುವನೋ ಆ ಮನೆಯ ಯಜಮಾನನಿಗೆ–ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವದಕ್ಕೆ ತನಗೆ ಭೋಜನಶಾಲೆ ಎಲ್ಲಿ ಎಂದು ಕೇಳುತ್ತಾನೆ ಎಂಬದಾಗಿ ಹೇಳಿರಿ. ಅವನು ತಕ್ಕಸಾಮಾನೆಲ್ಲಾ ಸಿದ್ಧವಾಗಿ ಇಟ್ಟಿರುವ ಮೇಲಂತಸ್ತಿನ ದೊಡ್ಡ ಕೊಠಡಿಯನ್ನು ನಿಮಗೆ ತೋರಿಸುವನು; ಅಲ್ಲಿ ನಮಗೆ ಸಿದ್ಧಮಾಡಿರಿ ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು. ಶಿಷ್ಯರು ಹೊರಟು ಪಟ್ಟಣಕ್ಕೆ ಹೋಗಿ ಆತನು ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು. ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಬಂದನು. ಅವರು ಕೂತುಕೊಂಡು ಊಟಮಾಡುತ್ತಿರುವಾಗ ಯೇಸು–ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನು, ಅವನು ನನ್ನ ಸಂಗಡ ಊಟಮಾಡುವವನೇ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಆಗ ಅವರು ದುಃಖಿತರಾಗಿ–ನಾನಲ್ಲವಲ್ಲಾ, ನಾನಲ್ಲವಲ್ಲಾ ಎಂದು ಒಬ್ಬೊಬ್ಬರೂ ಆತನನ್ನು ಕೇಳತೊಡಗಿದರು. ಆತನು ಅವರಿಗೆ ಅವನು ನನ್ನ ಹನ್ನೆರಡು ಮಂದಿಯಲ್ಲಿ ಒಬ್ಬನು, ನನ್ನ ಸಂಗಡ ಬಟ್ಟಲಲ್ಲಿ ಕೈ ಅದ್ದುವವನೇ. ಮನುಷ್ಯಕುಮಾರನು ಹೊರಟುಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಒಳ್ಳೇದಾಗಿತ್ತು ಎಂದು ಹೇಳಿದನು. ಅವರು ಊಟಮಾಡುತ್ತಿರುವಾಗ ಆತನು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಅವರಿಗೆ ಕೊಟ್ಟು–ತಕ್ಕೊಳ್ಳಿರಿ; ಇದು ನನ್ನ ದೇಹ ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟನು; ಅವರೆಲ್ಲರೂ ಅದರಲ್ಲಿ ಕುಡಿದರು. ಮತ್ತು ಆತನು ಅವರಿಗೆ–ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ; ಇದು ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ನಿಮಗೆ ಸತ್ಯವಾಗಿ ಹೇಳುತ್ತೇನೆ, ನಾನು ದೇವರ ರಾಜ್ಯದಲ್ಲಿ ದ್ರಾಕ್ಷಾರಸವನ್ನು ಹೊಸದಾಗಿ ಕುಡಿಯುವ ದಿನದವರೆಗೂ ಅದನ್ನು ಇನ್ನು ಕುಡಿಯುವದೇ ಇಲ್ಲ ಅಂದನು.

## ಲೂಕ 22:1–30

ಹುಳಿಯಿಲ್ಲದೆ ರೊಟ್ಟಿಯನ್ನು ತಿನ್ನುವ ಪಸ್ಕವೆಂಬ ಹಬ್ಬವು ಹತ್ತಿರವಾದಾಗ ಮಹಾಯಾಜಕರೂ ಶಾಸ್ತ್ರಿಗಳೂ ಯೇಸುವನ್ನು ಕೊಲ್ಲಬೇಕೆಂದಿದ್ದು ಜನರಿಗೆ ಹೆದರಿ ತಕ್ಕ ಮಾರ್ಗವನ್ನು

ಹುಡುಕುತ್ತಿದ್ದರು. ಆಗ ಸೈತಾನನು ಹನ್ನೆರಡು ಮಂದಿ ಶಿಷ್ಯರ ಲೆಕ್ಕದಲ್ಲಿ ಸೇರಿದವನಾದ ಇಸ್ಕರಿಯೋತೆಂಬ ಯೂದನಲ್ಲಿ ಪ್ರವೇಶಿಸಲು ಅವನು ಮಹಾಯಾಜಕರ ಬಳಿಗೂ ಕಾವಲಿನ ದಳವಾಯಿಗಳ ಬಳಿಗೂ ಹೋಗಿ ತಾನು ಯೇಸುವನ್ನು ಹಿಡುಕೊಡುವ ಉಪಾಯವನ್ನು ಕುರಿತು ಅವರ ಸಂಗಡ ಮಾತಾಡಿದನು. ಅವರು ಸಂತೋಷಪಟ್ಟು ನಿನಗೆ ಹಣ ಕೊಡುತ್ತೇವೆಂದು ಒಪ್ಪಂದ ಮಾಡಲು ಅವನು ಒಡಂಬಟ್ಟು ಆತನನ್ನು ಗದ್ದಲವಾಗದಂತೆ ಅವರಿಗೆ ಹಿಡುಕೊಡುವದಕ್ಕೆ ಅನುಕೂಲವಾದ ಸಮಯವನ್ನು ನೋಡುತ್ತಿದ್ದನು.

ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುವ ದಿವಸಗಳಲ್ಲಿ ಪಸ್ಕದ ಕುರಿಮರಿಯನ್ನು ಕೊಯ್ಯತಕ್ಕ ದಿವಸ ಬಂದಾಗ ಯೇಸು ಪೇತ್ರನಿಗೂ ಯೋಹಾನನಿಗೂ–ನೀವು ಹೋಗಿ ನಾವು ಪಸ್ಕದ ಊಟಮಾಡುವಂತೆ ಸಿದ್ಧಮಾಡಿರಿ ಎಂದು ಹೇಳಿ ಅವರನ್ನು ಕಳುಹಿಸಿದನು. ಅವರು–ನಾವು ಎಲ್ಲಿ ಸಿದ್ಧಮಾಡಬೇಕೆನ್ನುತ್ತೀ ಎಂದು ಆತನನ್ನು ಕೇಳಲು ಆತನು ಅವರಿಗೆ–ನೋಡಿರಿ, ನೀವು ಪಟ್ಟಣದೊಳಕ್ಕೆ ಹೋದ ಮೇಲೆ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು. ಅವನು ಹೋಗುವ ಮನೆಗೆ ನೀವು ಅವನ ಹಿಂದೆ ಹೋಗಿ ಆ ಮನೆಯ ಯಜಮಾನನಿಗೆ–ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವದಕ್ಕೆ ಭೋಜನ ಶಾಲೆ ಎಲ್ಲಿ ಎಂದು ನಿನ್ನನ್ನು ಕೇಳುತ್ತಾನೆ ಎಂಬದಾಗಿ ಹೇಳಿರಿ. ಅವನು ತಕ್ಕ ಸಾಮಾನಿಟ್ಟಿರುವ ಮೇಲಂತಸ್ತಿನ ದೊಡ್ಡ ಕೊಠಡಿಯನ್ನು ನಿಮಗೆ ತೋರಿಸುವನು; ಅಲ್ಲಿ ಸಿದ್ಧಮಾಡಿರಿ ಎಂದು ಹೇಳಿ ಕಳುಹಿಸಿದನು. ಅವರು ಹೊರಟು ಆತನು ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು.

ಗಳಿಗೆ ಬಂದಾಗ ಆತನು ತನ್ನ ಹನ್ನೆರಡು ಮಂದಿ ಅಪೋಸ್ತಲರ ಸಂಗಡ ಊಟಕ್ಕೆ ಕೂತುಕೊಂಡನು. ಆಗ ಆತನು ಅವರಿಗೆ–ನಾನು ಶ್ರಮೆ ಅನುಭವಿಸುವದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವದಕ್ಕೆ ಕುತೂಹಲದಿಂದ ಅಪೇಕ್ಷಿಸಿದ್ದೇನೆ. ನಾನು ನಿಮಗೆ ಹೇಳುತ್ತೇನೆ, ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವದೇ ಇಲ್ಲ ಎಂದು ಹೇಳಿದನು. ಆ ಮೇಲೆ ಆತನು [ದ್ರಾಕ್ಷಾರಸದ] ಪಾತ್ರೆಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ–ಇದನ್ನು ತಕ್ಕೊಂಡು ನಿಮ್ಮಲ್ಲಿ ಹಂಚಿಕೊಳ್ಳಿರಿ. ಇಂದಿನಿಂದ ದೇವರ ರಾಜ್ಯವು ಬರುವ ತನಕ ನಾನು ದ್ರಾಕ್ಷಾರಸವನ್ನು ಕುಡಿಯುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು, ಬಳಿಕ ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು–ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು–ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ. ಆದರೂ ನೋಡಿರಿ, ನನ್ನನ್ನು ಹಿಡುಕೊಡುವವನು ನನ್ನೊಡನೆ ಮೇಜಿನ ಮೇಲೆ ಕೈಯಿಟ್ಟು ಊಟಮಾಡುತ್ತಿದ್ದಾನೆ. ಮನುಷ್ಯಕುಮಾರನು ನೇಮಕವಾದ ಪ್ರಕಾರ ಹೊರಟುಹೋಗುತ್ತಾನೆ ಸರಿ; ಆದರೆ ಆತನನ್ನು ಹಿಡುಕೊಡುವ ಮನುಷ್ಯನ ಗತಿಯನ್ನು ಏನು ಹೇಳಲಿ ಅಂದನು. ಇದನ್ನು ಕೇಳಿ ಅವರು–ಇಂಥ ಕೆಲಸವನ್ನು ಮಾಡಬೇಕೆಂದಿರುವವನು ನಮ್ಮಲ್ಲಿ ಯಾವನಾಗಿರಬಹುದು ಎಂದು ಒಬ್ಬರನ್ನೊಬ್ಬರು ಕೇಳತೊಡಗಿದರು.

ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿಕೊಳ್ಳುವವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆಹುಟ್ಟಿತು. ಆಗ ಆತನು ಅವರಿಗೆ–ಅನ್ಯದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ, ಮತ್ತು ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆನಿಸಿಕೊಳ್ಳುತ್ತಾರೆ. ನೀವು ಹಾಗಿರ ಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು; ಊಟಕ್ಕೆ ಕೂತವನೋ ಸೇವೆಮಾಡುವವನೋ? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆಮಾಡುವ–ವನಂತಿದ್ದೇನೆ. ನೀವು ನನ್ನ ಕಷ್ಟಗಳಲ್ಲಿ ನನ್ನ ಸಂಗಡ ಎಡೆಬಿಡದೆ ಇದ್ದವರು. ಆದುದರಿಂದ ನನ್ನ ತಂದೆಯು ನನಗೆ ರಾಜ್ಯವನನ್ನು ನೇಮಿಸಿದ ಪ್ರಕಾರ ನಾನು ನಿಮಗೂ ನೇಮಿಸುತ್ತೇನೆ; ನನ್ನ ರಾಜ್ಯದಲ್ಲಿ ನೀವು ನನ್ನ ಮೇಜಿನ ಮೇಲೆ ಊಟಮಾಡುವಿರಿ, ಕುಡಿಯುವಿರಿ; ಮತ್ತು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯತೀರಿಸುವಿರಿ.

## ಯೋಹಾನ 13:1–30

ಪಸ್ಕಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು. ಅವರು ಊಟಕ್ಕೆ ಕೂತುಕೊಂಡಿದ್ದರು; ಅಷ್ಟರೊಳಗೆ ಸೈತಾನನು ಸೀಮೋನನ ಮಗನಾದ ಇಸ್ಕರಿಯೋತ ಯೂದನ ಮನಸ್ಸಿನಲ್ಲಿ ಯೇಸುವನ್ನು ಹಿಡುಕೊಡಬೇಕೆಂಬ ಅಲೋಚನೆಯನ್ನು ಹುಟ್ಟಿಸಿದ್ದನು. ಯೇಸು ತನ್ನ ಕೈಯಲ್ಲಿ ತಂದೆ ಎಲ್ಲವನ್ನು ಕೊಟ್ಟಿದ್ದಾನೆಂತಲೂ ತಾನು ದೇವರ ಬಳಿಯಿಂದ ಹೊರಟುಬಂದಿದ್ದು ಮತ್ತೆ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳುಕೊಂಡವನಾಗಿ ಊಟವನ್ನು ಬಿಟ್ಟು ಎದ್ದು ಹೊದ್ದಿದ್ದ ಮೇಲ್ಹೊದಿಕೆಯನ್ನು ತೆಗೆದಿಟ್ಟು ಕೈ ಪಾವುಡವನ್ನು ತಕ್ಕೊಂಡು ನಡುವಿಗೆ ಕಟ್ಟಿಕೊಂಡನು. ಆಗ ಬೋಗುಣಿಯಲ್ಲಿ ನೀರು ಹಾಕಿಕೊಂಡು ಶಿಷ್ಯರ ಕಾಲುಗಳನ್ನು ತೊಳೆಯುವದಕ್ಕೂ ನಡುವಿಗೆ ಕಟ್ಟಿಕೊಂಡಿದ್ದ ಕೈಪಾವುಡದಿಂದ ಒರಸುವದಕ್ಕೂ ಪ್ರಾರಂಭಿಸಿದನು. ಹೀಗೆ ಸೀಮೋನ ಪೇತ್ರನ ಬಳಿಗೆ ಬರಲು ಇವನು ಆತನಿಗೆ–ಸ್ವಾಮೀ, ನೀನು ನನ್ನ ಕಾಲುಗಳನ್ನು ತೊಳೆಯಬೇಕೇ? ಎಂದು ಹೇಳಿದನು. ಅದಕ್ಕೆ ಯೇಸು–ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇನ್ನು ಮೇಲೆ ನಿನಗೆ ತಿಳಿಯುವದು ಅಂದನು. ಪೇತ್ರನು–ನೀನು ನನ್ನ ಕಾಲುಗಳನ್ನು ಎಂದಿಗೂ ತೊಳೆಯಬಾರದು ಎಂದು ಹೇಳಿದ್ದಕ್ಕೆ ಯೇಸು–ನಾನು ನಿನ್ನನ್ನು ತೊಳೆಯದಿದ್ದರೆ ನನ್ನ ಸಂಗಡ ನಿನಗೆ ಪಾಲಿಲ್ಲ ಅಂದನು.

ಸೀಮೋನ ಪೇತ್ರನು–ಸ್ವಾಮೀ, ನನ್ನ ಕಾಲುಗಳನ್ನು ಮಾತ್ರವಲ್ಲದೆ ಕೈಗಳನ್ನೂ ತಲೆಯನ್ನೂ ಸಹ ತೊಳೆಯಬೇಕು ಅಂದನು. ಯೇಸು ಅವನಿಗೆ ಸ್ನಾನಮಾಡಿಕೊಂಡವನ ಕಾಲುಗಳನ್ನು ತೊಳೆಯುವ–ದಲ್ಲದೆ ಬೇರೇನೂ ತೊಳೆಯಬೇಕಾಗಿರುವದಿಲ್ಲ, ಅವನ ಮೈಯೆಲ್ಲಾ ಶುದ್ಧವಾಗಿದೆ. ನೀವೂ ಶುದ್ಧರಾಗಿದ್ದೀರಿ; ಆದರೆ ನಿಮ್ಮಲ್ಲಿ ಎಲ್ಲರೂ ಶುದ್ಧರಲ್ಲವೆಂದು ಹೇಳಿದನು. ಯೇಸು ತನ್ನನ್ನು ಹಿಡುಕೊಡುವವನು ಇಂಥವನೇ ಎಂದು ತಿಳಿದಿದ್ದರಿಂದ ನಿಮ್ಮಲ್ಲಿ ಎಲ್ಲರೂ ಶುದ್ಧರಲ್ಲವೆಂದನು.

ಆತನು ಅವರ ಕಾಲುಗಳನ್ನು ತೊಳೆದ ಮೇಲೆ ತನ್ನ ಮೇಲ್ಹೊದಿಕೆಯನ್ನು ಹಾಕಿಕೊಂಡು ತಿರಿಗಿ ಕೂತುಕೊಂಡು ಅವರಿಗೆ ಹೇಳಿದ್ದೇನಂದರೆ–ನಾನು ನಿಮಗೆ ಮಾಡಿದ್ದು ಏನೆಂದು ಗೊತ್ತಾಯಿತೋ? ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವದು ಸರಿ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ. ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ದಣಿಗಿಂತ ಆಳುದೊಡ್ಡವನಲ್ಲಾ, ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ. ನೀವು ಇದನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು. ನಾನು ನಿಮ್ಮೆಲ್ಲರನ್ನು ಕುರಿತು ಈ ಮಾತನ್ನು ಹೇಳಲಿಲ್ಲ; ನಾನು ಆದುಕೊಂಡವರನ್ನು ನಾನು ಬಲ್ಲೆನು; ಆದರೆ–ನನ್ನ ಕೂಡ ಊಟಮಾಡುವವನೇ ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ ಎಂಬ ಶಾಸ್ತ್ರದ ಮಾತು ನೆರವೇರಬೇಕಾಗಿದೆ. ಅದು ನಡೆಯುವಾಗ ನನ್ನನ್ನೇ ಆತನೆಂದು ನೀವು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆ ಅದನ್ನು ಇಂದಿನಿಂದ ನಿಮಗೆ ಹೇಳುತ್ತೇನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ ನಾನು ಕಳುಹಿಸಿಕೊಟ್ಟವವನನ್ನು ಅಂಗೀಕರಿಸು–ವವನು ನನ್ನನ್ನು ಅಂಗೀಕರಿಸುವವನಾಗಿದ್ದಾನೆ; ನನ್ನನ್ನು ಅಂಗೀಕರಿಸುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ಅಂಗೀಕರಿಸುವವನಾಗಿದ್ದಾನೆ.

ಇದನ್ನು ಹೇಳಿ ಯೇಸು ಆತ್ಮದಲ್ಲಿ ತತ್ತರಗೊಂಡು–ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನೆಂದು ಸ್ಪಷ್ಟವಾಗಿ ಹೇಳಿದನು. ಈತನು ಯಾರ ವಿಷಯವಾಗಿ ಈ ಮಾತನ್ನು ಹೇಳುತ್ತಾನೆಂದು ಶಿಷ್ಯರು ಅನುಮಾನಪಟ್ಟು ಒಬ್ಬರನ್ನೊಬ್ಬರು ನೋಡುವವರಾದರು. ಶಿಷ್ಯರೊಳಗೆ ಯೇಸುವಿಗೆ ಪ್ರಿಯನಾಗಿದ್ದ ಒಬ್ಬನು ಆತನ ಎದೆಯ ಹತ್ತರ ಒರಗಿ ಕೊಂಡಿದ್ದನು; ಇವನಿಗೆ ಸೀಮೋನ ಪೇತ್ರನು ಸನ್ನೆ ಮಾಡಿ–ಯಾರನ್ನು ಕುರಿತು ಮಾತಾಡಿದನು, ತಿಳಿಸು ಎಂದು ಹೇಳಿದನು. ಅವನು ಹಾಗೆಯೇ ಯೇಸುವಿನ ಎದೆಯ ಕಡೆಗೆ ಬಾಗಿ–ಸ್ವಾಮೀ, ಅವನು ಯಾರು? ಅಂತ ಕೇಳಿದನು. ಅದಕ್ಕೆ ಯೇಸು–ನಾನು ಈ ತುತ್ತನ್ನು ಅದ್ದಿ ಯಾರಿಗೆ ಕೊಡುತ್ತೇನೋ ಅವನೇ ಎಂದು ಹೇಳಿ ಆ ತುತ್ತನ್ನು ಅದ್ದಿ ತೆಗೆದು ಸೀಮೋನನ ಮಗನಾದ ಇಸ್ಕರಿಯೋತ ಯೂದನಿಗೆ ಕೊಟ್ಟನು. ಅವನು ಆ ತುತ್ತನ್ನು ತೆಗೆದು ಕೊಂಡ ಕೂಡಲೆ ಸೈತಾನನು ಅವನೊಳಗೆ ಹೊಕ್ಕನು. ಆಗ ಯೇಸು ಅವನಿಗೆ–ನೀನು ಮಾಡುವದನ್ನು ಬೇಗನೆ ಮಾಡಿಬಿಡು ಎಂದು ಹೇಳಿದನು. ಆತನು ಅವನಿಗೆ ಇದನ್ನು ಯಾತಕ್ಕಾಗಿ ಹೇಳಿದನೆಂಬುದು ಊಟಕ್ಕೆ ಕೂತವರಲ್ಲಿ ಯಾರಿಗೂ ಗೊತ್ತಾಗಲಿಲ್ಲ; ಅವರಲ್ಲಿ ಕೆಲವರು–ಯೂದನ ವಶದಲ್ಲಿ ಹಣದ ಚೀಲವಿದ್ದದರಿಂದ ಹಬ್ಬಕ್ಕಾಗಿ ನಮಗೆ ಬೇಕಾದದ್ದನ್ನು ಕೊಂಡುಕೋ ಎಂಬದಾಗಿಯೋ ಬಡವರಿಗೆ ಏನಾದರೂ ಕೊಡು ಎಂಬದಾಗಿಯೋ ಯೇಸು ಅವನಿಗೆ ಹೇಳುತ್ತಾನೆ ಎಂದು ನೆನಸಿದರು. ಅವನು ಆ ತುತ್ತನ್ನು ತೆಗೆದುಕೊಂಡ ಕೂಡಲೇ ಹೊರಗೆ ಹೋದನು. ಆಗ ರಾತ್ರಿಯಾಗಿತ್ತು.

## 1 ಕೊರಿಂಥ 11:23–25

ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ–ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು–ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು–ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದ–ಕ್ಕೋಸ್ಕರ ಪಾನ ಮಾಡಿರಿ ಅಂದನು.

# ಕಡೇ ರಾತ್ರಿ ಭೋಜನ

**ರೀಪ್ರಿಂಟ್ಸ್ ಪುಟ 3363**

## ಮತ್ತಾಯ 26:17–30

ಯೇಸು ಮತ್ತು ಅಪೋಸ್ತಲರು ಯೆರೂಸಲೇಮಿನ ಹತ್ತಿರವಿರುವ ಬೇಥಾನ್ಯಕ್ಕೆ ಬಂದರು. ಪರಿಶುದ್ಧ ಪಟ್ಟಣದಲ್ಲಿ ಪಸ್ಕಭೋಜನ ಮಾಡಿ ಆನಂತರ, ನಮ್ಮ ಕರ್ತನು ತನ್ನ ಶಿಷ್ಯರಿಗೆ ಮುಂದಾಗಿ ತಿಳಿಸಿರುವಂತೆ, ತನ್ನ ವಿರೋಧಿಗಳಿಂದ ಬಾಧೆಯನ್ನು ಅನುಭವಿಸಿ, ಹೀಗೆ ತಾನು ಜನರ ಪಾಪಗಳನ್ನು ಪರಿಹರಿಸುವ ಸಲುವಾದ ಸಂಧಾನಕಾರ್ಯವನ್ನು ಪೂರ್ಣಗೊಳಿಸುವದ–ಕ್ಕಿದ್ದನು. ಆತನ ಆಗಮನವು ತನ್ನ ಶಿಲುಬೆಯ ಮರಣವನ್ನು ಅನುಭವಿಸುವದಕ್ಕೆ ಕೇವಲ ಒಂದು ವಾರದಲ್ಲಿತ್ತು. ಮರು ದಿವಸದ ರಾತ್ರಿಯ ಭೋಜನದಲ್ಲಿ ಮರಿಯಳು ಆತನಿಗೆ ಸುಗಂಧತೈಲದ ಅಭಿಷೇಕ ಮಾಡಿದ್ದಳು. ಮಾರಣೇ ದಿನ ಆತನು ಕತ್ತೆಯ ಮೇಲೆ

ಕುಳಿತು ಯೆರೂಸಲೇಮಿಗೆ ಬಂದವನಾಗಿ ಅಲ್ಲಿ ಆತನನ್ನು ಸೇರಿಸಿಕೊಳ್ಳದಿರಲು ಆ ಪಟ್ಟಣದ ವಿಷಯವಾಗಿ ಅತ್ತು ಹೀಗೆ ಹೇಳಿದ್ದನು, "ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ." ಅದರ ಮುಂದಿನ ದಿವಸದಲ್ಲಿ ಆತನು ದೇವಾಲಯಕ್ಕೆ ಭೇಟಿಮಾಡಿ ಹಗ್ಗದಿಂದ ಕೊರಡೆಯನ್ನು ಮಾಡಿ ಚಿನಿವಾರರನ್ನು ಹೊರಡಿಸಿದ್ದನು. ಆನಂತರದ ದಿನದಲ್ಲಿ ತಾನು ಲೋಕಕ್ಕೆ ಬೆಳಕಾಗಿರುವೆನೆಂದು ಪ್ರಕಟಿಸಿಕೊಂಡು ದೇವಾಲಯದಲ್ಲಿ ತನ್ನ ಕಡೇ ಉಪದೇಶವನ್ನು ಮಾಡಿದ್ದನು. ಪ್ರತಿ ರಾತ್ರಿಯಲ್ಲಿ ಆತನು ಬೇಥಾನ್ಯದಲ್ಲಿರುವ ಲಾಜರನು, ಮಾರ್ಥಳು ಮತ್ತು ಮರಿಯಳ ಮನೆಗೆ ಹಿಂದಿರುಗುತ್ತಿದ್ದಂತೆ ತೋರುತ್ತಿತ್ತು. ಆತನು ಮತ್ತು ಅಪೊಸ್ತಲರು ಅದರ ಸಮೀಪದಲ್ಲಿರುವಾಗ ಅದು ಸಹ ಆತನ ಮನೆಯಾಗಿರುತ್ತಿತ್ತು. ಆನಂತರದ ದಿನದಲ್ಲಿ ಅಂದರೆ ಬುಧವಾರದಲ್ಲಿ ಕರ್ತನು ಬೇಥಾನ್ಯದಲ್ಲೇ ಉಳಿದುಕೊಂಡವನಾಗಿ ವಿಶ್ರಮಿಸಿಕೊಂಡಿದ್ದನು, ಮತ್ತು ಗುರುವಾರದಂದು ತನ್ನ ಶಿಷ್ಯರಲ್ಲಿ ಇಬ್ಬರನ್ನು ಪಸ್ಕಭೋಜನಕ್ಕೆ ಸಿದ್ಧಮಾಡುವದಕ್ಕೆ ಕಳುಹಿಸಿ–ಕೊಟ್ಟಿದ್ದನು. ಆ ರಾತ್ರಿ ಅಂದರೆ "ತನ್ನನ್ನು ಹಿಡುಕೊಟ್ಟ ರಾತ್ರಿಯಲ್ಲಿ" ತಾನು ಮತ್ತು ಹನ್ನೆರಡು ಮಂದಿ ಊಟಮಾಡುವದಿತ್ತು.

ಪಸ್ಕಹಬ್ಬವು ಒಂದು ವಾರದ ವರೆಗೆ ನಡೆಯುತ್ತಿದ್ದು ಅದು ಯೆಹೂದ್ಯರ ಪದ್ಧತಿಯಂತೆ ಬಹು ಮುಖ್ಯವಾಗಿ ಆಚರಿಸಲ್ಪಡುವ ಹಬ್ಬಗಳಲ್ಲಿ ಒಂದಾಗಿತ್ತು. ಆ ವಾರದಲ್ಲಿ ಹುಳಿಯೆಂಬುದು ಪಾಪಕ್ಕೆ ಒಂದು ಛಾಯೆಯಾಗಿ ಪ್ರತಿಯೊಂದು ಮನೆಯಿಂದಲೂ ಎಚ್ಚರಿಕೆಯಿಂದ ತೆಗೆದುಹಾಕಲಾಗುತ್ತಿತ್ತು. ಅದು ಶಾರೀರಿಕ ಸಂಬಂಧವಾಗಿ ಛಾಯಾರೂಪದಲ್ಲಿ ಸೂಚಿತವಾದ ಆತ್ಮಿಕ ಇಸ್ರಾಯೇಲ್ಯರಾದ ಕರ್ತನ ಜನರ ಪವಿತ್ರತೆ ಪರಿಶುದ್ಧತೆ ಎಂಬ ಹುಳಿಯಿಲ್ಲದಿರುವಿಕೆಯ ವಿಷಯವಾಗಿ ತಿಳಿಸಲ್ಪಡುವಂಥ–ದ್ದಾಗಿತ್ತು. ದೇವರು ಐಗುಪ್ತದ ದಾಸತ್ವದಿಂದ ಬಿಡುಗಡೆ ಮಾಡಿದುದರ ಕಾರಣದಿಂದಾಗಿ ಇಡೀ ಒಂದು ವಾರವು ಹರ್ಷೋಲ್ಲಾಸದಿಂದ ಕೂಡಿದ ಒಂದು ಹಬ್ಬವಾಗಿತ್ತು. ಯಹೂದ್ಯರ ಲೆಕ್ಕಾಚಾರದ ಪ್ರಕಾರ ಹಬ್ಬದ ವಾರವು ಮೊದಲನೆ ತಿಂಗಳಿನ 15ನೇ ದಿನದಂದು ಆರಂಭವಾಗುತ್ತಿತ್ತು. ಆದರೂ ಅದು ಹಿಂದಿನ 14ನೇ ದಿನವು ಕುರಿಮರಿಯನ್ನು ವಧಿಸಿ ಅದರ ರಕ್ತವನ್ನು ಮನೇ ಬಾಗಲಿನ ನಿಲುವುಪಟ್ಟಿಗಳಿಗೆ ಪ್ರೋಕ್ಷಿಸುವದು ಮತ್ತು ಐಗುಪ್ತದಲ್ಲಿ ಆ ರಾತ್ರಿ ದೇವರು ಆ ರಕ್ತದ ಅಡಿಯಲ್ಲಿದ್ದ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳನ್ನು ಉಳಿಸಿ ಐಗುಪ್ತರ ಚೊಚ್ಚಲು ಮಕ್ಕಳನ್ನು ಸಂಹಾರಮಾಡಿದುದಕ್ಕೆ ಒಂದು ಸ್ಮರಣಾರ್ಥವಾಗಿತ್ತು. ಮತ್ತು ಹೀಗೆ ಐಗುಪ್ತರು ಆತನ ಜನರನ್ನು ಸ್ವತಂತ್ರರನ್ನಾಗಿ ಕಳುಹಿಸಿಕೊಡಲು ಇಚ್ಛಿಸುವಂತೆ ಮಾಡಲಾಗಿತ್ತು. ಪಸ್ಕಹಬ್ಬದ ವಾರವು ಆರಂಭವಾಗುವ ಹಿಂದಿನ ರಾತ್ರಿ ಪಸ್ಕದ ಸ್ಮರಣಾರ್ಥವಾದ ಕುರಿಮರಿಯನ್ನು ತಿನ್ನುವದಕ್ಕಾಗಿಯೇ ನಮ್ಮ ಕರ್ತನು ನಮ್ಮ ಪಾಠದಲ್ಲಿ ವಿವರಿಸಿರುವಂತೆ ತನ್ನ ಶಿಷ್ಯರನ್ನು ಸಿದ್ಧಮಾಡುವ ಸಲುವಾಗಿ ಕಳುಹಿಸಿಕೊಟ್ಟಿದ್ದನು.

ಪೇತ್ರ ಮತ್ತು ಯೋಹಾನರನ್ನು ಈ ಕಾರ್ಯಕ್ಕಾಗಿ ಕಳುಹಿಸಲಾಗಿತ್ತೆಂದು ಲೂಕನು ನಮಗೆ ತಿಳಿಸಿರುವನು, ಮತ್ತು ಅವರು ಯಾವ ಮನುಷ್ಯನ ಮನೆಯಲ್ಲಿ ಹಬ್ಬವನ್ನು ಆಚರಿಸಬೇಕೆಂಬುದನ್ನು ನೀರಿನ ಕೊಡವನ್ನು ಹೊತ್ತುಕೊಂಡು ಬರುವವನ ಮೂಲಕವಾಗಿ ತಿಳಿದುಕೊಳ್ಳಬೇಕಿತ್ತು. ಕೆಲವರಿಂದ ಊಹಿಸಲಾದುದೇನಂದರೆ, ಆ ಮನೆಯು ಮಾರ್ಕನ ತಾಯಿಯಾದ ಮರಿಯಳ ಮನೆಯಾಗಿತ್ತೆಂದೂ ಹೀಗೆ ಬಳಸಲಾದ ಅದರ ಮೇಲುಪ್ಪರಿಗೆಯಲ್ಲೇ ನಂತರದಲ್ಲಿ ಅಪೊಸ್ತಲರು ಭೇಟಿಯಾಗುತ್ತಿದ್ದುದು ಹಾಗು ಪಂಚಾಶತ್ತಮ ದಿನದ ಆಶೀರ್ವಾದವು ಅವರ ಮೇಲೆ ಸುರಿಸಲ್ಪಟ್ಟಿತ್ತೆಂಬದು. ನಾವು ತಿಳಿದಿರುವದೇನಂದರೆ ಈ ಮರಿಯಳ ಮನೆಯಲ್ಲಿಯೇ ಅನೇಕರು ಕೂಡಿಕೊಂಡು ಪೇತ್ರನ ಬಿಡುಗಡೆಗಾಗಿ ಪ್ರಾರ್ಥಿಸುತ್ತಿದ್ದರೆಂಬದು. ಅದು ಒಂದು 'ವಿಶಾಲವಾದ ಮೇಲುಪ್ಪರಿಗೆ' ಆಗಿದ್ದು ಮತ್ತು ಆಗಲೇ ಅದನ್ನು ಸೂಕ್ತವಾದ ಅಳತೆಯ ಊಟದ ಒರಗು ಮಂಚದಿಂದ ಸಿದ್ಧಮಾಡಲ್ಪಟ್ಟಿತ್ತು. ಯೇಸುವು ಈ ಪರೋಕ್ಷವಾದ ವಿಧಾನವನ್ನು ತೆಗೆದುಕೊಂಡ ಕಾರಣವೆಂದರೆ ಅಲ್ಲಿ ಕೂಡಿಬರುವ ಸಮಯದವರೆಗೂ ಯೂದನಿಗೆ ಅದು ತಿಳಿಯದಿರಬಾರದೆಂಬದೇ. ಹೀಗೆ, ಯೋಹಾನ 14:17ರಲ್ಲಿ ಬರೆದಿರುವಂತೆ, ಅಲ್ಲಿ ಹಬ್ಬದ ಆಚರಣೆಗೆ ಹಾಗೂ ನಮ್ಮ ಕರ್ತನು ನಂತರ ಮಾಡಿದ ಬೋಧನೆಗಳಿಗೆ ಆತನ ಬಂಧನವನ್ನು ಬಯಸುತ್ತಿದ್ದವರಿಂದ ಯಾವ ಅಡಚಣೆಯೂ ಇಲ್ಲದಂತೆ ನೋಡಿಕೊಳ್ಳಲಾಗಿತ್ತು. ಪೇತ್ರ ಯೋಹಾನರು ಪಸ್ಕದ ಹಬ್ಬಕ್ಕೆ ಅಂದರೆ ಕುರಿಮರಿ, ಹುಳಿಯಿಲ್ಲದ ರೊಟ್ಟಿ, ಮತ್ತು ಕಹಿ ಕಾಯಿಪಲ್ಯ ಹಾಗು ದ್ರಾಕ್ಷಾರಸ, ಇವುಗಳನ್ನು ಸಿದ್ಧಪಡಿಸಿದ್ದರು ಮತ್ತು ಆ ಸಾಯಂಕಾಲದಲ್ಲಿ [ಹಬ್ಬದ] ಆಚರಣೆಗಾಗಿ ಇಡೀ ತಂಡವು ಕೂಡಿಬಂದಿತ್ತು.

## ದೀನತೆಯ ಒಂದು ಪಾಠ

ಯೋಹಾನನು ಇದನ್ನು (ಅಧ್ಯಾಯ 13) ಅನ್ವಯಿಸಿ ಹೇಳಿದ್ದರೂ, ಲೂಕನು ಮಾತ್ರ (22:24–30) ಈ ಸಂದರ್ಭದಲ್ಲಿ ಅಪೊಸ್ತಲರ ನಡುವೆ ಕಲಹವಾಗಿತ್ತೆಂದು ದಾಖಲಿಸಿ ಹೇಳಿರುವನು. ಅಪೊಸ್ತಲರು ಸಂಪೂರ್ಣವಾಗಿ ಮಹತ್ವಾಕಾಂಕ್ಷೆ ಹಾಗು ಸ್ವಾರ್ಥಭಾವದ ಮೂಲಕವಾಗಿ ಕಾರ್ಯಪ್ರವೃತ್ತ–ರಾಗಿದ್ದರೆಂದು ನಾವು ಭಾವಿಸಬಾರದು. ಆ ಕಲಹವು ಒಡೆಯನ ಹತ್ತಿರದ ಸ್ಥಾನಕ್ಕಾಗಿದ್ದು ಅದು ಅವರು ಆತನ ಮೇಲಿಟ್ಟಿದ್ದ ಪ್ರೀತಿಯು ಕಾರಣಕ್ಕಾಗಿತ್ತೆಂಬುದನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಬಹುದು. ಕರ್ತನು ಆ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಅವರಿಗೆ ಬಹು ಅದ್ಭುತವಾದ ಒಂದು ಬೋಧನೆಯನ್ನು ಮಾಡಲು ಬಳಸಿಕೊಂಡಿದ್ದು, ಅದು ನಿಸ್ಸಂದೇಹವಾಗಿ ಉಳಿದ ಅವರ ಜೀವಮಾನಕಾಲದಲ್ಲೆಲ್ಲಾ ಅವರಲ್ಲಿ ನೆಲೆಯಾಗಿದ್ದಿತ್ತು. ಅವರು ಧೂಳಿನ ರಸ್ತೆಯ ಮೂಲಕವಾಗಿ ಮಧ್ಯಾಹ್ನದ ಕೊನೆಯ ಭಾಗದಲ್ಲಿ ಆಗಮಿಸಿದ್ದು, ತಾವು ಶ್ರೀಮಂತ ವರ್ಗದವರು ಅಲ್ಲದಿರಲಾಗಿ, ಅವರನ್ನು ಬರಮಾಡಿಕೊಂಡು ಕಾಲಿಗೆ ನೀರು ಕೊಡಲು ಯಾವ ಸೇವಕರೂ ಇರಲಿಲ್ಲ; ಪರಸ್ಪರ ಹಿತಕ್ಕಾಗಿ ಅವರು ಒಬ್ಬರಿಗೊಬ್ಬರು ಇದನ್ನು ಮಾಡುವ [ಕಾಲುತೊಳೆಯುವ] ಬದಲು ಅವರು ಮೇಜಿನ ಬಳಿಯಲ್ಲಿ [ಕರ್ತನಿಗೆ] ಸನಿಹದಲ್ಲಿನ ಅನುಗ್ರಹಿತ ಸ್ಥಾನಗಳಿಸಿಕೊಳ್ಳಲು ಕಲಹಮಾಡಿಕೊಂಡಿದ್ದರು. ಯೋಹಾನನು

ಕರ್ತನಿಗೆ ಒಬ್ಬ ಸಂಬಂಧಿಯಾಗಿದ್ದು ಯೇಸುವು ಅವನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದುದು ಮಾತ್ರವಲ್ಲದೆ ಅವನು ಅವರಲ್ಲಿ [ಶಿಷ್ಯರಲ್ಲಿ] ಅತಿ ಕಿರಿಯನಾಗಿದ್ದುದರ ಕಾರಣದಿಂದಾಗಿ ಅವನು ಬಹುವಾಗಿ ಬಯಸುವಂಥ ಒಡೆಯನಿಗೆ ನಂತರದ ಸ್ಥಾನವನ್ನು ಗಳಿಸಿಕೊಂಡಿದ್ದನೆಂಬುದು ಸ್ಪಷ್ಟವಾಗಿತ್ತು. ಈ ಕಾರಣದಿಂದಲೇ ಸಹ ಯೋಹಾನು ಇದನ್ನು ಬರೆದಿರುವ ಸಾಧ್ಯತೆಯಿತ್ತು.

ಹಿಂದಿನ ಕಾಲದಲ್ಲಿದ್ದ ಪದ್ಧತಿಯು ಈಗಿನ ಕಾಲದಲ್ಲಿರು–ವದಕ್ಕಿಂತಲೂ ಹಲವು ವಿಧದಲ್ಲಿ ಭಿನ್ನವಾಗಿರುವದು. ಊಟಮಾಡುವಾಗ ಅವರು ಮೇಜಿನ ಸುತ್ತಲೂ ಇರುವ ಒರಗು ಮಂಚದಲ್ಲಿ ಒರಗಿಕೊಳ್ಳುತ್ತಿದ್ದರು. ಅವರು ತಮ್ಮ ಎಡಭಾಗದ ಮೊಣಕೈ ಮೇಲೆ ಆತುಕೊಂಡು ಬಲಗೈಯನ್ನು ಬಾಯಿಗೆ ಆಹಾರ ತೆಗೆದುಕೊಳ್ಳಲು ಬಳಸುತ್ತಿದ್ದರು. ಹೋಲಿಸಿ ನೋಡಿದಾಗ ಅವರ ತಲೆಗಳು ಹೀಗೆ ಪರಸ್ಪರ ಹತ್ತಿರವಿರುತ್ತಿದ್ದು ಅವರ ಕಾಲುಗಳು ಹಿಂದುಗಡೆಯಲ್ಲಿ ಒರಗು ಮಂಚದಲ್ಲಿ ಚಾಚಿಕೊಂಡಿರುತ್ತಿದ್ದವು. ಕಲಹವನ್ನು ತನ್ನ ದಾರಿಯಲ್ಲಿ ಸಾಗಲು ಬಿಟ್ಟು ಹಾಗು ಭೋಜನವು ಆರಂಭವಾಗಲು ಬಿಟ್ಟವನಾಗಿ ಯೇಸುವು ಎದ್ದು ಅವರ [ಶಿಷ್ಯರ] ಹಿಂದೆ ಹೋಗಿ ಅವರಲ್ಲಿ ಒಬ್ಬರಾದಂತೆ ಮತ್ತೊಬ್ಬರ ಕಾಲನ್ನು ತೊಳೆಯಲು ಆರಂಭಿಸಿದ್ದನು. ಇಂಥಾ ಒಂದು ಸೇವೆಯು ಮಾಡಲ್ಪಟ್ಟದ್ದು ವಾಸ್ತವದಲ್ಲಿ ಅವರಿಗೆ ಒಂದು ತೀವ್ರತರವಾದ ಬುದ್ಧಿಪಾಠವಾಗಿತ್ತು. ಅವರು ಆತನ [ಕರ್ತನ] ಹಾಗು ಪ್ರತಿಯೊಬ್ಬನ ಕಾಲುಗಳನ್ನು ತೊಳೆಯುವ ಬಗ್ಗೆ ಆಲೋಚಿಸಿಕೊಳ್ಳ ಬೇಕಿತ್ತು ಅಲ್ಲದೆ ಹೀಗೆ ಮಾಡಬೇಕಿತ್ತೆಂದು ಆಗ ಅವರು ಬಯಸುತ್ತಿದ್ದರೂ ಆ ಸಮಯದಲ್ಲಿ ತಾವು ಮತ್ತೊಬ್ಬರಿಗಿಂತ ಯಾವ ಸ್ಥಿತಿಯಲ್ಲಿಯೂ ಕೀಳಲ್ಲವೆಂಬ ಅಂಶವನ್ನು ಸ್ಥಾಪಿಸುವ ಉದ್ದೇಶವುಳ್ಳವರಾಗಿದ್ದರು. ಆದರೆ ಅವರು ಸ್ವಲ್ಪ ಸಮಯದ ಹಿಂದೆ ತಮ್ಮಲ್ಲಿ ಹೆಚ್ಚಿನವನಾಗಿ–ರಬೇಕೆಂದಿರುವವನು ಎಲ್ಲರ ಸೇವಕನಾಗಬೇಕೆಂಬುದರ ಪಾಠವನ್ನು ಅತಿ ಶೀಘ್ರವಾಗಿ ಮರೆತು ಹೋಗಿದ್ದರು. ನಮ್ಮ ಕರ್ತನು ಇಲ್ಲಿ ಈ ಸಂಗತಿಯನ್ನೇ ನಿದರ್ಶನವನ್ನಾಗಿ ಮಾಡಿಕೊಳ್ಳುವ ಅವಕಾಶವನ್ನು ಹೊಂದಿದ್ದನು. ಆತನು ಅವರೆಲ್ಲರಿಗೂ ಸೇವೆಮಾಡಲು ಇಚ್ಛಿಸಿದ್ದನು. ಆತ್ಮಿಕ ಸಂಗತಿಗಳ ವಿಷಯವಾಗಿ ಅವರೆಲ್ಲರಿಗೆ ಸತತವಾಗಿ ಸೇವೆ ಮಾಡುತ್ತಿದ್ದನು; ಹೀಗಾಗಿ ಆತನನ್ನು ನಿಜವಾಗಿಯೂ ಮತ್ತು ಸೂಕ್ತವಾಗಿಯೂ ತಮ್ಮ ಗುರುವೆಂದು ಅವರು ಮಾನ್ಯ ಮಾಡಿದ್ದರು; ಆದರೆ ಈಗ ಅವನು ಅತಿ ಕೀಳು ಸ್ಥಾನದಲ್ಲಿ ನಿಂತು ಸಹ ಅವರಿಗೆ ಸೇವೆಮಾಡಲು ಇಚ್ಛಿಸುವದರ ಮೂಲಕವಾಗಿ ಅವರಿಗೆ ತನ್ನ ದೀನಸ್ವಭಾವವನ್ನು ತೋರಿಸಿಕೊಟ್ಟಿದ್ದನು. ಅಮೂಲ್ಯ ಪಾಠ! ಇದು ಕರ್ತನ ನಿಜವಾದ ಹಿಂಬಾಲಕರಲ್ಲಿ ಎಂದೂ ತನ್ನ ಪ್ರಾಮುಖ್ಯತೆಯನ್ನು ಕಳಕೊಳ್ಳದಿರಲಿ. ಹೀಗಾಗಿಯೂ ಕೆಲವರು ಇದನ್ನು ಕರ್ತನ ಭೋಜನ ಹಾಗು ಸ್ನಾನದೀಕ್ಷೆಗಳಿಗೆ ಸಮನಾಗಿರುವ ಒಂದು ಆಚಾರಕ್ರಮ ಅಥವಾ ಆಜ್ಞಾವಿಧಿಯಾಗಿ ಬಂದಿರುವದೆಂದು ಭಾವಿಸಿಕೊಳ್ಳುವ ತಪ್ಪನ್ನು ಮಾಡುತ್ತಿರುವರು: ನಾವು ಗ್ರಹಿಸಿಕೊಂಡಿರುವಂತೆ ಈ ಸಾಂಕೇತಿಕ ಕಾರ್ಯದ ಮೂಲಕವಾಗಿ ತಿಳಿಯಬೇಕಿರುವ ಪಾಠ ಮತ್ತು ಎಲ್ಲಾ ಸಮಯದಲ್ಲಿಯೂ ಅಥವಾ ಎಲ್ಲಾ ಸ್ಥಳಗಳಲ್ಲಿಯೂ ನಮಗೆ ಅನ್ವಯವಾಗುವಂಥ ಸಂಗತಿಯು ಏನಂದರೆ ನಾವು ನಮ್ಮ ಸಹೋದರರಿಗೆ ಉಪಯುಕ್ತವಾದ ಸೇವೆಯನ್ನು ಅದು ಎಂಥಾ ಕೀಳಾದುದಾದರೂ ಅದನ್ನು ಮಾಡಲು ಬಯಸುವಂಥವರಾಗ–ಬೇಕೆಂಬದು ಮತ್ತು ಹೀಗೆ ಮಾಡಲಾದುದನ್ನು ಕರ್ತನಿಂದ ತನಗೆ ಮಾಡಲ್ಪಟ್ಟದೆಂದು ಎಣಿಸಲ್ಪಡುವದೆಂಬದೇ.

## “ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೆಯದಾಗಿತ್ತು”

ಅವರು ಊಟಮಾಡುತ್ತಿರುವಾಗ ಯೇಸುವು ಬಹು ದುಃಖಿತನಾಗಿ ಕಂಡುಬಂದು ತಾನು ಸ್ವತಃ ಆದುಕೊಂಡ ಹನ್ನೆರಡು ಮಂದಿಯಲ್ಲಿ ಒಬ್ಬನು ತನ್ನನ್ನು ಹಿಡುಕೊಟ್ಟು ತನ್ನ ಮರಣಕ್ಕೆ ಸಹಾಯಕನಾಗುವನೆಂದು ಹೇಳಿದ್ದನು; ಅಂದರೆ ತನ್ನೊಡನೆ ಬಟ್ಟಲಲ್ಲಿ ಕೈ ಅದ್ದುವವನಾಗಿ ತನ್ನೊಡನೆ ಅದೇ ಊಟದಲ್ಲಿ  ಅಂದರೆ ಅದೇ ರೊಟ್ಟಿ ಮತ್ತು ಅದೇ ಸುಟ್ಟ ಕುರಿಮರಿಯನ್ನು ತಿನ್ನುವದರಲ್ಲಿ ಭಾಗಿಯಾಗಿರುವವನೇ ತನ್ನ ಮರಣಕ್ಕೆ ಸಹಾಯಕನಾಗುವನೆಂದು ವಿವರಿಸಿ ಹೇಳಿದ್ದನು. ಇದೆಲ್ಲವೂ ಬರೆಯಲ್ಪಟ್ಟಿರುವದಾದರೂ ಮತ್ತು ಹೀಗೆ ದೇವರ ಯೋಜನೆಯುಲ್ಲಿ ಯಾವ ವಾರ್ಪಾಟು ಇರುವದು ಕಂಡುಬರುವದಿಲ್ಲವಾದರೂ ಇದು ಸ್ನೇಹದಲ್ಲಿ ಒಂದು ಬಹು ದೊಡ್ಡ ವಚನಭಂಗವನ್ನು ಸೂಚಿಸುವದೆಂದೂ ಅದನ್ನು ಆಲೋಚಿಸುವಲ್ಲಿ ದುಃಖವಾಗುವದೆಂಬುದನ್ನು ಅನಂತರದಲ್ಲಿ ತೋರಿಸಿಕೊಟ್ಟಿದ್ದನು. ನಮ್ಮ ಕರ್ತನಿಗೆ ತನ್ನ ಉದ್ದೇಶ ಹಾಗು ಪ್ರತಿಷ್ಠೆಯ ಸಂಬಂಧದಲ್ಲಿ ಯಾವ ದ್ರೋಹದ ಕಾರ್ಯವೆಸಗದೇ ಅಧಿಕಾರಸ್ಥರಿಂದ ಬಂಧಿಸಲ್ಪಡುವದಾಗಿರಲೀ, ಇಲ್ಲವೇ ಒಬ್ಬ ಅಪರಿಚಿತನಿಂದ ಅಥವಾ ಶಿಷ್ಯನಿಂದ ಹಿಡುಕೊಡುವದಾಗಿರಲಿ ನಿಜವಾಗಿಯೂ ಅದು ಯಾವ ವ್ಯತ್ಯಾಸವನ್ನೂ ಉಂಟು ಮಾಡಿರಲಿಲ್ಲ: ಆ ಅಂಶವು ದೇವರ ಯೋಜನೆಯಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡುತ್ತಿರಲಿಲ್ಲ; ಆದರೆ ಮಹಾ ದುಃಖವನ್ನು ಉಂಟುಮಾಡುವದಕ್ಕೆ ಕಾರಣವಾಗಿದ್ದ ಸಂಗತಿಯೆಂದರೆ ಅದು ಒಬ್ಬ ಆಪ್ತಮಿತ್ರನಾದ ಶಿಷ್ಯನ ಮೂಲಕವಾಗಬೇಕಿದ್ದುದರಿಂದ ಎಂಬುದೇ.

“ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೆಯದಾಗಿತ್ತು” ಎಂಬ ಮಾತಿನ ಮೂಲಕವಾಗಿ ನಮಗೆ ಅನ್ವಯವಾಗುವ ಸಂಗತಿಯೆಂದರೆ, ಕರ್ತನ ದೃಷ್ಟಿಯಿಂದ, ಯೂದನು ಆಗಲೇ ಒಳ್ಳೆಯ ಸಂಗತಿಗಳ ವಿಷಯವಾಗಿ ಬಹು ದೊಡ್ಡ ಪ್ರಮಾಣದಲ್ಲಿನ ಜ್ಞಾನಾವಕಾಶಗಳ ಬಗ್ಗೆ ಅನುಭವವನ್ನು ಪಡೆದಿರಲಾಗಿ ಆತನು ಮಾಡಿದ ಕೃತ್ಯದ ವಿಷಯವಾಗಿ ಅವನ ಹೊಣೆಗಾರಿಕೆಯು ಸಂಪೂರ್ಣವಾಗಿದ್ದು ಅದು ಆತನಿಗೆ ಭವಿಷ್ಯದ ಯಾವ ಸಮಯದಲ್ಲಿಯೂ ಯಾವ ನಿರೀಕ್ಷೆಯೂ ಇಲ್ಲದಂತೆ ಮಾಡಿತ್ತೆಂಬದೇ. ಕರ್ತನು ಯೂದನನ್ನು ಕ್ಷಮಿಸಿ ಅವನು ತನ್ನ ಗುಣಗಳನ್ನು ತಿದ್ದಿಕೊಳ್ಳಲು ಅವಕಾಶವನ್ನು ಅನುಗ್ರಹಿಸಲು ಕೆಲವು ಕಾರಣವನ್ನು ಕಂಡುಕೊಳ್ಳಬೇಕಿದ್ದಲ್ಲಿ ಅದಕ್ಕೆ ಖಂಡಿತವಾಗಿ ನಮಗೆ ಯಾವ ಆಕ್ಷೇಪಣೆಯೂ ಇರುವದಿಲ್ಲ, ಆದರೆ ಭವಿಷ್ಯದಲ್ಲಿ ಅವನಿಗೆ ಇಂಥಾ ಮತ್ತೊಂದು ಅವಕಾಶವಿರುದೆಂಬುದಕ್ಕೆ

ಸತ್ಯವೇದಾನುಸಾರ ಯಾವ ಕಾರಣವನ್ನೂ ನಾವು ಕಾಣುವದಿಲ್ಲ. ನಮ್ಮ ದೃಷ್ಟಿಯ ಅನುಸಾರವಾಗಿ ಅವನು ವಿಶೇಷವಾದ ಬೆಳಕು, ಅನುಭವ ತಿಳುವಳಿಕೆಗೆ ವಿರುದ್ಧವಾಗಿ ಪಾಪಮಾಡಿರುವನೆಂದು ತೋರುತ್ತದೆ. ಹೇಗಂದರೆ ಪವಿತ್ರಾತ್ಮನ ಬಲದ ಮೂಲಕವಾಗಿ ಹಾಗು ಕರ್ತನ ಸಂಪರ್ಕದಲ್ಲಿ ಇದ್ದವರಲ್ಲಿ ಒಬ್ಬನಾಗಿ ಕರ್ತನ ಹೆಸರಿನಲ್ಲಿ ರೋಗಗಳನ್ನು ಗುಣಪಡಿಸಿ ದೆವ್ವಗಳನ್ನು ಹೊರಡಿಸುವದಲ್ಲದೆ ಆತನ ಪ್ರತಿನಿಧಿಯಾಗಿ ಆತನ ಶಕ್ತಿಯನ್ನು ಬಳಸುವ ಕಾರ್ಯಭಾರವನ್ನು ಹೊಂದಿದವರಲ್ಲಿ ಒಬ್ಬನಾಗಿದ್ದುದರ ಕಾರಣದಿಂದಾಗಿ [ಅವನ ಪಾಪವು ಮನಃಪೂರ್ವಕವಾಗಿತ್ತೆಂಬದು]. ಆತನ ಅಂತ್ಯವು ದುಃಖಕರವಾಗಿತ್ತು: ಹೇಗಂದರೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರತಿಯೊಬ್ಬನೂ ತನ್ನ ಕಾರ್ಯದ ಮೂಲಕವಾಗಿ ತಾನು ಹುಟ್ಟಲೇ ಬಾರದಿತ್ತೆಂದು ಬಯಸಿದ್ದನೆಂಬುದನ್ನು ಒಪ್ಪಿಕೊಂಡಂಥಾಗುವದು.

## "ಸ್ವಾಮೀ, ನಾನಲ್ಲವಲ್ಲಾ?"

ಕಡೆಯದಾಗಿ ಯೂದನು ಸಹಿತವಾಗಿ ಶಿಷ್ಯರಲ್ಲಿ ಪ್ರತಿಯೊಬ್ಬನೂ "ಸ್ವಾಮೀ, ನಾನಲ್ಲವಲ್ಲಾ?" ಎಂದು ಕರ್ತನನ್ನು ವಿಚಾರಿಸತೊಡಗಿದರೆಂದು ಮತ್ತೊಂದು ವಿವರಣೆಯು ನಮಗೆ ತಿಳಿಸಿಕೊಡುತ್ತದೆ. ಇದರಲ್ಲಿ ತಮಗೆ ಯಾವ ಸಂಬಂಧವೂ ಇರುವದಿಲ್ಲವೆಂದು ಇತರರು ದೃಢವಾಗಿ ಭಾವಿಸಿಕೊಂಡವರಾಗಿ ಕರ್ತನಿಂದ ತಮ್ಮ ಮುಗ್ಧತೆಯನ್ನು ಖಚಿತಪಡಿಸಿಕೊಳ್ಳಲು ಬಯಸಿದ್ದರು. ಅಲ್ಲದೆ ಹನ್ನೊಂದು ಮಂದಿ ತಮ್ಮ ಆಪಾದನೆಯ ಸೂಚಿಸುವ ವಿಷಯದಲ್ಲಿ ಕೇಳಿಕೊಂಡವರಾಗಿ ಕರ್ತನಿಂದ ಯಾವ ಪ್ರತಿಕ್ರಿಯೆಯನ್ನು ಪಡೆಯದವರಾಗಿದ್ದರು; ಇದರಲ್ಲಿ ಅಡಕವಾಗಿದ್ದ ಅಂಶವೆಂದರೆ ಆ ಒಬ್ಬ ಅಪರಾಧಿಯಾಗಿದ್ದವನು ಯೂದನೆಂಬದು. ಯೂದನ ಧೈರ್ಯದ ಮನೋಭಾವವು ಎಂಥದ್ದಾಗಿತ್ತೆಂದರೆ ಆತನೂ ಸಹ ಸ್ವಾಮಿಯನ್ನು "ನಾನಲ್ಲವಲ್ಲಾ" ಎಂದು ಕೇಳಿದ್ದನು. ಯೇಸುವು ಅವನಿಗೆ– "ನೀನೇ ಹೇಳಿದ್ದೀ" ಅಥವಾ "ಅದು ನೀನೇ" ಎಂದು ಉತ್ತರಿಸಿದ್ದನು. ಕರ್ತನು ಮಾಡಿದ ಗದರಿಕೆಯು ಎಷ್ಟೋ ಉದಾತ್ತ ಗುಣವುಳ್ಳದ್ದಾಗಿದ್ದು, ಇದಕ್ಕಿಂತಲೂ ಕಡಿಮೆಯಾಗಿರುವದು ವಿರಳವಾಗಿತ್ತು. ಅದು ಒಂದು ಬೆದರಿಕೆ, ನಿಕೃಷ್ಟತೆ ನಿಷ್ಠುರತೆಗಳನ್ನು ತೋರ್ಪಡಿಸುವಂಥದಾಗಿರದೆ ಇದ್ದುದಾದರೂ ಕೇವಲ ಅದು ಕನಿಕರದುಃಖಗಳನ್ನು ವ್ಯಕ್ತಗೊಳಿಸುವಂಥದ್ದಾಗಿತ್ತು. ಎಂಥಾ ಪಾಠವಿರುವದು ಇದರಲ್ಲಿ ನಮಗೆ! ನಮ್ಮ ಶತೃಗಳನ್ನು ನಾವು ಕನಿಕರಿಸಬೇಕು, ಹಗೆಮಾಡಬಾರದು; ನಮಗೆ ಸಾಧ್ಯವಾದಷ್ಟೂ ನಾವು ಅವರನ್ನು ಆಶೀರ್ವದಿಸುವವರಾಗಬೇಕು, ಎಂದೂ ಶಪಿಸುವವರಾಗಬಾರದು. ಯೂದನಲ್ಲಿದ್ದಂಥಾ ಪ್ರವೃತ್ತಿಯುಳ್ಳವರ ಬಗ್ಗೆ ಅಂದರೆ ಒಡೆಯನನ್ನು ಅಥವಾ ಆತನ ಸತ್ಯಾರ್ಥಗಳನ್ನು ಇಲ್ಲವೇ ಆತನ ಸಹೋದರರನ್ನು ಹಣಕ್ಕಾಗಿ ಅಥವಾ ಇನ್ನಾವುದೇ ಪರಿಗಣನೆಗಾಗಿ ಮಾರಿಬಿಡುವಂಥ ಪ್ರವೃತ್ತಿಯುಳ್ಳವರ ಬಗ್ಗೆ ಜಾಗರೂಕರಾಗಿ ತಾವು ಅವರಂತಾಗದೆ ಇರುವಂತೆ ಎಚ್ಚರವಾಗಿದ್ದು ಪ್ರಾರ್ಥಿಸುವದು ಯೇಸುವಿನ ಶಿಷ್ಯರಿಗೆ ಚೆನ್ನಾಗಿರುವದು. ಯೂದನ ವರ್ಗದವರಲ್ಲಿ ಇತರರೂ ಇರುವರೆಂಬುದನ್ನು ತಿಳಿದವರಾಗಿರಲಾಗಿ, ನಾವು ನಮ್ಮ ಹೃದಯುಗಳನ್ನು ಕಾಪಾಡಿಕೊಂಡವರಾಗಿ, "ಕರ್ತನೇ, ನಾನಲ್ಲವಲ್ಲಾ?" ಎಂದು ಕೇಳುವವರಾಗೋಣ.

ಯೆಹೂದ್ಯರ ನೇಮವಿಧಿಯ ಪ್ರಕಾರವಾಗಿ ಅವರು ಪಸ್ಕದ ಊಟವನ್ನು ಮಾಡುತ್ತಿರುವಾಗ ಅಥವಾ ಸರಿಯಾಗಿ ಹೇಳುವದಾದರೆ ನೇಮಿತವಾದ ಭೋಜನವನ್ನು ಮಾಡಿ ಮುಗಿಸಿದ ನಂತರ ಅವರು ಇನ್ನೂ ಮೇಜಿನ ಬಳಿಯಲ್ಲಿರುವಾಗ ಯೇಸುವು ಉಳಿಕೆ ರೊಟ್ಟಿಗಳಲ್ಲಿ ಕೆಲವನ್ನು, ಅಂದರೆ ನಾವು ಈ ದಿನಗಳಲ್ಲಿ ಕರೆಯುವ "ಕ್ರಾಕ್ಸರ್ಸ್" [ಸಪ್ಪೆಯ ಬಿಸ್ಕತ್ತು] ಎಂಬುದಕ್ಕೆ ಆಕಾರದಲ್ಲಿ ಹೆಚ್ಚು ನಿಖರವಾಗಿ ಹೋಲುವಂಥದನ್ನು, ತೆಗೆದುಕೊಂಡು ಆಶೀರ್ವದಿಸಿ ಮುರಿದು ಅದನ್ನು ತನ್ನ ಶಿಷ್ಯರಿಗೆ ಕೊಟ್ಟು–"ತಕ್ಕೊಳ್ಳಿರಿ, ಇದು ನನ್ನ ದೇಹ" ಎಂದು ಹೇಳಿದ್ದನು. ಮತ್ತೊಬ್ಬ ಸೌವಾರ್ತಿಕನು–"ನಿಮಗಾಗಿ ಮುರಿಯಲ್ಪಟ್ಟ" ಎಂಬ ಮಾತನ್ನು ಸೇರಿಸಿ ಹೇಳಿರುವನು. ರೋಮನ್ ಕೆಥೋಲಿಕರು ಹಾಗು ಕೆಲವು ಪ್ರೊಟೆಸ್ಟೆಂಟರು ಹೇಳಿಕೊಳ್ಳುವದೇನಂದರೆ, 'ಇದು ನನ್ನ ದೇಹ,' ಎಂದು ನಿರೂಪಿಸಿ ಮತ್ತು ನಂತರದಲ್ಲಿ 'ಇದು ನನ್ನ ರಕ್ತ' ಎಂದು ನಿರೂಪಿಸಿ ಹೇಳಿರುವಂಥದರ ಪರಿಣಾಮವಾಗಿ ಯಾವುದೇ ಸಂದರ್ಭದಲ್ಲಿ ಈ ಸ್ಮರಣಾರ್ಥವಾದ ರೊಟ್ಟಿ ಹಾಗು ದ್ರಾಕ್ಷೆಯ ಹಣ್ಣಿನ ರಸವು ಪ್ರತಿಷ್ಠಿತವಾದ ನಂತರ ಈ ರೊಟ್ಟಿ ಹಾಗು ದ್ರಾಕ್ಷರಸವು ಕ್ರಿಸ್ತನ ನಿಜವಾದ ದೇಹ ಮತ್ತು ಆತನ ನಿಜವಾದ ರಕ್ತವಾಗಿ ಮಾರ್ಪಡುವದೆಂದು ನಾವು ಅರ್ಥಮಾಡಿಕೊಳ್ಳ –ಬೇಕೆಂಬದೇ. ಇದಕ್ಕೆ ನಾವು ಸಮ್ಮತಿಸದವರಾಗಿ, ಇದು ಬಹು ಅಯುಕ್ತವೂ ಅಸತ್ಯವೂ ಆಗಿರುವದೆಂದು ಹೇಳುವೆವು. ರೊಟ್ಟಿ ಹಾಗು ದ್ರಾಕ್ಷಾರಸವು ನಮ್ಮ ಕರ್ತನ ದೇಹ ಮತ್ತು ರಕ್ತವಾಗಿ ಕೇವಲ ಸಾಂಕೇತಿಕವಾಗಿ ಅಥವಾ ಪ್ರತಿನಿಧಿತವಾಗಿ ಸೂಚಿಸಲ್ಪಟ್ಟಿರುವಂಥವುಗಳು. ಇದಕ್ಕೆ ಪೂರ್ಣ ಸಾಕ್ಷಾಧಾರವಾಗಿ ನಮ್ಮ ಕರ್ತನು ಈ ಮಾತುಗಳನ್ನು ಬಳಸಿದ ಸಮಯದಲ್ಲಿ [ಆತನ ದೇಹವು] ಇನ್ನೂ ಮುರಿಯಲ್ಪಟ್ಟಿರಲಿಲ್ಲ ಮತ್ತು ಆತನ ರಕ್ತವು ಇನ್ನೂ ಸುರಿಸಲ್ಪಟ್ಟಿರಲಿಲ್ಲವೆಂಬ ಅಂಶವನ್ನು ಗಮನಿಸಿ. ಹೀಗಾಗಿ ವ್ಯಕ್ತಪಡಿಸಲಾದ ಈ ನಿರೂಪಣೆಯನ್ನು ನಾವು ಬಳಸುವ ವಿಧಾನದಿಂದಲ್ಲದೆ ಬೇರೆ ಯಾವ ವಿಧಾನದಲ್ಲಿಯಾದರೂ ಬಳಸಿದಲ್ಲಿ ಅಂದರೆ ರೊಟ್ಟಿ ಮತ್ತು ದ್ರಾಕ್ಷಾರಸವು ಆತನ ದೇಹ ಮತ್ತು ಆತನ ರಕ್ತವನ್ನು ಸೂಚಿಸುವದೆಂದು ಅರ್ಥಮಾಡಿಕೊಳ್ಳದೇ ಹೋದಲ್ಲಿ, ಆಗ ಅದು ಸತ್ಯವನ್ನು ತಪ್ಪಾಗಿ ಅಥವಾ ಅಸತ್ಯವನ್ನಾಗಿ ಪ್ರತಿನಿಧಿಸಲ್ಪಟ್ಟಿರುವದೆಂಬ ಅರ್ಥಬರುವದು; ಅಲ್ಲದೆ ಇದು ಹೀಗೆ ಮಾಡಲ್ಪಟ್ಟಿತ್ತೆಂದು ಅಥವಾ ಹೀಗೆ ಮಾಡುವದು ಕರ್ತನು ಹಾಗು ಆತನ ಹಿಂಬಾಲಕರಿಗೆ ಸೂಕ್ತವಾಗಿತ್ತೆಂದು ಗ್ರಹಿಸಿಕೊಳ್ಳವದು ನಮಗೆ ಸಾಧ್ಯವಾಗದಂಥದ್ದು.

ನಮ್ಮ ಕರ್ತನು ವಿವರಿಸಿ ಹೇಳಿರುವಂತೆ ಈ ರೊಟ್ಟಿಯು ಪರಲೋಕದಿಂದ ಇಳಿದು ಬಂದಂಥ ರೊಟ್ಟಿಯನ್ನು ಅಂದರೆ ಲೋಕದ ಪಾಪನಿವಾರಣೆಗಾಗಿ ಯಜ್ಞಾರ್ಪಿತವಾದ ಆತನ ದೇಹವನ್ನು ಸೂಚಿಸುವದು. ಇದನ್ನು ತಿನ್ನಲು ಆತನು ತನ್ನ ಹಿಂಬಾಲಕರೆಲ್ಲರನ್ನು ಆಹ್ವಾನಿಸಿರುವನು. ಅಲ್ಲದೆ ನಾವು ಅದರಿದುಂಟಾದ ಆಶೀರ್ವಾದ, ಕರುಣೆ, ಕೃಪೆಯನ್ನು ನಮ್ಮ ಸ್ವಂತದ್ದಾಗಿ ಅಂಗೀಕರಿಸಿಕೊಳ್ಳುವದರ ಮೂಲಕವಾಗಿ ನಾವು ಆತನ ದೇಹದಲ್ಲಿ ಪಾಲನ್ನು ತೆಗೆದುಕೊಳ್ಳುವವರಾಗಿರುವೆವು. ಹೀಗೆ ನಾವು ಪಾಪ ಪರಿಹಾರವನ್ನು ಗಳಿಸಿಕೊಡುವಂಥ

ಯಜ್ಞಫಲವನ್ನು ನಮಗಾಗಿ ಬಳಸಿಕೊಂಡವರಾಗಿ ತಂದೆಯೊಡನೆ ಸಂಧಾನವಾಗುವೆವು.

## "ಹೊಸ ಒಡಂಬಡಿಕೆಯ ರಕ್ತ"

ಆತನು ಪಾತ್ರೆಯನ್ನು ತೆಗೆದುಕೊಂಡು ದೇವಸ್ತೋತ್ರಮಾಡಿ ಶಿಷ್ಯರಿಗೆ ಕೊಟ್ಟು ಹೀಗೆ ಹೇಳಿದ್ದನು–"ಇದರಲ್ಲಿರುವದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ." ಇದು ನನ್ನ ರಕ್ತವನ್ನು ಸೂಚಿಸುತ್ತದೆ. ನಿಮ್ಮಲ್ಲಿಯೂ ಹಾಗು ಎಲ್ಲಾ ಕಾಲದಲ್ಲಿರುವ ನನ್ನ ಪ್ರಿಯ ಹಿಂಬಾಲಕರೆಲ್ಲರಲ್ಲಿಯೂ ನನ್ನ ರಕ್ತವೆಂದು ಸೂಚಿತವಾಗಿ ಮುಂದುವರೆಯುವದು. ಅಲ್ಲದೆ ಇಂಥಾ ಸಂದರ್ಭದಲ್ಲಿ ಅದು ದೇವರು ಮತ್ತು ಮನುಷ್ಯರ ನಡುವೆ ತಾನು ಶ್ರೇಷ್ಠ ಮಧ್ಯಸ್ಥನಾಗಿ ತನ್ನ ಮರಣದ ಮೂಲಕವಾಗಿ ಪಾಪಿಗಳು ಹಾಗು ದೇವರ ನಡುವೆ ಸ್ಥಾಪಿತವಾದ ಒಡಂಬಡಿಕೆಯ ಜ್ಞಾಪಕಾರ್ಥವಾಗಿರುವದು.

ಕ್ರಿಸ್ತನ ರಕ್ತದಿಂದ ಮುದ್ರಿತವಾದ ಹೊಸ ಒಪ್ಪಂದ ಅಥವಾ ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಯ ಕಾಲದ ಪರ್ಯಂತರವಾಗಿ ಹೆಸರಿಸಲಾಗಿರುವಂಥದೂ ಮತ್ತು ಅಪೋಸ್ತಲನು ಇಬ್ರೀಯರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಹಿಂದೆ ಉಲ್ಲೇಖಿಸಲಾಗಿರುವಂಥದ್ದೂ ಆಗಿರುವದು (8:6–13;10:29; 12:20). ಇದು ನೇಮವಿಧಿಗಳ ಸಂಬಂಧವಾದ ಒಡಂಬಡಿಕೆಯನ್ನು ಹಿಂದೆ ಸರಿಸಿರುವದು. ಈ ಆಜ್ಞಾವಿಧಿ ಸಂಬಂಧವಾದ ಒಡಂಬಡಿಕೆಯು ಮೋಶೆಯ ಮಧ್ಯಸ್ಥಿಕೆಯ ಮೂಲಕವಾಗಿದ್ದು ಯಾವನು ಆ ಆಜ್ಞಾವಿಧಿಗಳನ್ನು ಕೈಗೊಳ್ಳುವನೋ ಅವನು ನಿತ್ಯಜೀವವನ್ನು ಪಡೆಯುವಂತಾಗಲು ಇದನ್ನು ಏರ್ಪಡಿಸಲಾಗಿರುವದು. ಆದರೆ ಹೊಸ ಒಡಂಬಡಿಕೆಯಲ್ಲಿ ಕರುಣೆಯನ್ನು ಏರ್ಪಡಿಸಲಾಗಿದ್ದು [ಪರಿಪೂರ್ಣತೆಯಿಂದ] ಬಿದ್ದುಹೋದ ಸ್ಥಿತಿಯಲ್ಲಿರುವ ನಾವು ಮಾಡಬೇಕೆಂದಿರುವದನ್ನು ಮಾಡಲು ಸಾಧ್ಯವಾಗದೆಂಬ ಅಂಶವನ್ನು ಗುರುತಿಸಿಕೊಂಡವರಾಗಿ, ಈ ಹೊಸ ಒಡಂಬಡಿಕೆಗೆ ಮಧ್ಯಸ್ಥನಾದವನು ಜನರ ಪರವಾಗಿ ಅನುಭವಿಸಿದ ಮರಣದ ಮೂಲಕವಾಗಿ ನೀತಿನ್ಯಾಯವನ್ನು ಸಂಪೂರ್ಣವಾಗಿ ಅನುಸರಿಸಲು ಸಮರ್ಥನಾಗಿದ್ದು ನಮ್ಮ ಕೃತ್ಯಗಳಿಗೆ ಬದಲಾಗಿ ನಮ್ಮ ಉದ್ದೇಶಗಳ ಅನುಸಾರವಾಗಿ ನಮ್ಮೊಡನೆ ವ್ಯವಹರಿಸು ವಂಥವನಾಗಿರುವನು. ಅಲ್ಲದೆ ಈ ಮಧ್ಯೆ ಮನುಕುಲದವರನ್ನು ತಮ್ಮ ಹೀನಾವಸ್ಥೆಯಿಂದ ಮೇಲಕ್ಕೆ ಎತ್ತುವವನಾಗಿ ಅವರನ್ನು ಹೃದಯದಲ್ಲಿನ ಪ್ರಾಮಾಣಿಕವಾದ ಒಳ್ಳೆಯ ಬಯಕೆಗಳನ್ನು ಪರಿಪೂರ್ಣವಾಗಿ ನೆರವೇರಿಸುವಂಥಾ ಸ್ಥಿತಿಗೆ ಅಥವಾ ಹಂತಕ್ಕೆ ತರುವಂಥವನಾಗಿರುವನು.

ಈ ರೊಟ್ಟಿ ಹಾಗು [ದ್ರಾಕ್ಷಾರಸದ] ಪಾತ್ರೆಗೆ ಇನ್ನೂ ಒಂದು ಹೆಚ್ಚಿನ ಮತ್ತು ವಿಶಾಲವಾದ ಮಹತ್ವವಿರುವದೆಂದು ಅಪೋಸ್ತಲನಾದ ಪೌಲನು ನಮಗೆ ತೋರಿಸಿಕೊಟ್ಟಿರುವನು. ಕ್ರಿಸ್ತನು ನಿಮ್ಮೊಳಗಿರುವನು ಎಂಬ "ಮರ್ಮದ" ವಿಷಯವಾಗಿ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿದ್ದವನು ಆತನೇ. ಅದೇನಂದರೆ ನಾವು ಕ್ರಿಸ್ತನೆಂಬ ಮಾರ್ಮಿಕ ದೇಹದ ಅಂಗಗಳಾಗಿದ್ದು ಆತನ ಬಾಧೆಗಳಲ್ಲಿ ಪಾಲುಗಾರರಾಗಿ ನಂಬಿಗಸ್ತರಾಗಿದ್ದಲ್ಲಿ ಆತನ ಮಹಿಮೆಯುಳ್ಳ ದೇಹದ ಅಂಗಗಳಾಗಿ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವವೆಂಬುದೇ. ಈ ದೃಷ್ಟಿಯಿಂದ ಅಪೋಸ್ತಲನು ವಿವರಿಸಿರುವ ಹಾಗೆ ಮುರಿಯಲ್ಪಟ್ಟ ರೊಟ್ಟಿಯು ಕರ್ತನಾದ ಯೇಸುವು ವೈಯುಕ್ತಿವಾಗಿ ಮುರಿಯಲ್ಪಟ್ಟದ್ದನ್ನು ಸೂಚಿಸುವದು ಮಾತ್ರವಲ್ಲದೆ ಈ ಸುವಾರ್ತಾಯುಗದ ಪರ್ಯಂತರವಾಗಿರುವ ಆತನ ಮಾರ್ಮಿಕ (ದೇಹದ) ಅಂಗಗಳೆಲ್ಲವೂ ಅಂದರೆ ಸದಸ್ಯರೆಲ್ಲರೂ ಮುರಿಯಲ್ಪಡುವದನ್ನು ಸಹ ಒಳಗೊಂಡಿರುವದೆಂಬದು; ಹಾಗು ಆ ಪಾತ್ರೆಯಲ್ಲಿ ಕುಡಿಯುವದು ಮನುಕುಲದ ಪರವಾಗಿರುವ ಹೊಸ ಒಡಂಬಡಿಕೆಯನ್ನು ಸ್ವತಃ ಆತನು ತನ್ನ ಮರಣದಲ್ಲಿ ಪಾಲು ತೆಗೆದುಕೊಳ್ಳುವದನ್ನು ಮಾತ್ರವಲ್ಲದೆ ನಮಗೂ ಆತನ ಪಾತ್ರೆಯಲ್ಲಿ ಆತನೊಡನೆ ಪಾಲುತೆಗೆದುಕೊಳ್ಳುವ ಸಲುವಾಗಿ ನಮಗೆ ಆಹ್ವಾನಿಸಿರುವದನ್ನೂ ಸಹ ಸೂಚಿಸುವದು. "ಇದರಲ್ಲಿ ಇರುವದೆಲ್ಲವನ್ನೂ ಕುಡಿಯಿರಿ" ಎನ್ನುವದು ಈ ಕಾಲದಲ್ಲಿ ಆತನೊಡನೆ ಆತನ ಬಾಧೆಯಲ್ಲಿ ಹಾಗು ಮರಣದಲ್ಲಿ ಪಾಲುಗಾರರಾಗಲು ಸಾಧ್ಯವೆಂಬುದು ಅಡಕವಾಗಿರುವದು ಅಲ್ಲದೆ ಸಾವಿರ ವರುಷದ ಆಳ್ವಿಕೆಯ ಸಮಯದಲ್ಲಿ ಆತನೊಡನೆ ಹೊಸ ಒಡಂಬಡಿಕೆಯ ಷರತ್ತುವಿಧಿಗಳನ್ನು ಅನುಷ್ಠಾನಕ್ಕೆ ತಂದು [ಆ ಒಡಂಬಿಕೆಯನ್ನು] ಉದ್ಘಾಟಿಸುವದು ಸಹ ಅಡಕವಾಗಿರುವದು. ಎಷ್ಟು ಭವ್ಯವಾದುದು ಈ ಆಲೋಚನೆ, ಎಷ್ಟು ಗಾಢವೂ ಎಷ್ಟು ವಿಶಾಲವೂ ಆಗಿರುವದು! ಕ್ರಿಸ್ತನ ಬಾಧೆಗಳಲ್ಲಿ ಉಳಿದದ್ದನ್ನು ನಾವು [ನಮ್ಮ ದೇಹದಲ್ಲಿ] ಅನುಭವಿಸಿ ಪೂರ್ಣಗೊಳಿಸಲು ನಮಗೆ ಅನುಮತಿ ನೀಡಿರುವದು ಹಾಗು ಮುಂದೆ ಆತನ ಮಹಿಮೆಯಲ್ಲಿ ಪಾಲುಗಾರರಾಗುವದನ್ನು ಎದುರು ನೋಡವಂಥದ್ದು ಎಂಥಾ ಅದ್ಬುತವಾದ ಸೌಭಾಗ್ಯ. ಈ ದೃಷ್ಟಿಯಿಂದ "ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವದು ನಿಮ್ಮಿಂದಾದೀತೇ? ನನಗಾಗುವ ದೀಕ್ಷಾಸ್ನಾನವನ್ನು ನೀವು ಹೊಂದುವದು ನಿಮ್ಮಿಂದಾದೀತೇ?" ಎಂದು ಅಪೋಸ್ತಲರಿಗೆ ಹೇಳಿದ ತನ್ನ ಮಾತಿನಲ್ಲಿ ಒಂದು ಹೊಸ ಬಲವಿರುವದನ್ನು ನಾವು ನೋಡುತ್ತೇವೆ. ಇಂಥಾ ಪಾಲುಗಾರಿಕೆಗೆ ಆಹ್ವಾನಿಸಲ್ಪಡಲು ಎಲ್ಲರೂ ಯೋಗ್ಯರಲ್ಲದೇ ಇರುವ ಹಾಗೆಯೇ ಆಹ್ವಾನಿಸಲ್ಪಟ್ಟವರೆಲ್ಲರೂ ಈ ಪಾಲುಗಾರಿಕೆ ಹೊಂದುವ ಸೌಭಾಗ್ಯದ ವಿಷಯವಾಗಿ ಸಂತೋಷವಾಗಿಯೂ ಕೃತಜ್ಞರಾಗಿಯೂ ಇರುವದನ್ನು ಅರಿತುಕೊಂಡಿರುವದಿಲ್ಲ. ಯಾಕೋಬನೂ ಯೋಹಾನರೂ ಮಾಡಿದಂತೆ ನಮ್ಮಲ್ಲಿ ಪ್ರತಿಯೊಬ್ಬನೂ "ಆಗುವದು, ಕರ್ತನೇ"– ಅಂದರೆ ನಮಗೆ ಮನಸ್ಸುಂಟು ಎಂದು ಹೇಳಲು ತೀರ್ಮಾನಿಸಿಕೊಳ್ಳೋಣ. ನಿನ್ನ ಸಹಾಯದ ಮೂಲಕವಾಗಿ ನಾವು ಜಯಶಾಲಿಗಳಾಗಿ ಅಲ್ಲದೆ ಪೂರ್ಣಜಯಶಾಲಿಗಳಾಗಿ ಹೊರಬರುವೆವು.

## ಆ ರಾಜ್ಯಸೌಭಾಗ್ಯಗಳೆಂಬ ಹೊಸ ದ್ರಾಕ್ಷಾರಸ

ನಾನು ದೇವರ ರಾಜ್ಯದಲ್ಲಿ ದ್ರಾಕ್ಷಾರಸವನ್ನು ಹೊಸದಾಗಿ ಕುಡಿಯುವವರೆಗೂ ಅದನ್ನು ಇನ್ನು ಕುಡಿಯುವದೇ ಇಲ್ಲವೆಂದು ನಮ್ಮ ಕರ್ತನು ಪ್ರಕಟವಾಡಿ ಹೇಳಿದ್ದನು. ತಾನು

ದೇವರರಾಜ್ಯದಲ್ಲಿ ಅವರೊಂದಿಗೆ ಹೊಸ ಅಥವಾ ಹುಳಿಯಿಲ್ಲದ ದ್ರಾಕ್ಷಾರಸವನ್ನು ಕುಡಿಯುವೆನೆಂದು ಇದರ ಅಭಿಪ್ರಾಯವಲ್ಲ, ಅದರೆ ದ್ರಾಕ್ಷಾರಸದಲ್ಲಿ ಸೂಚಿತವಾದ ನಿಜರೂಪದ ಹೊಸ ಸಂಗತಿಗಳು ದೇವರರಾಜ್ಯದಲ್ಲಿ ನೆರವೇರದ ಹೊರತು ಎಂದಾಗಿರುವದು. ದೇವರರಾಜ್ಯವು ಬಂದಾಗ ಈಗಿನ ಕಾಲದ ಬಾಧೆಕಷ್ಟಗಳು ಮತ್ತು ಪರಿಶೋಧನೆಗಳು ಮುಗಿದು ಹೋಗಿರುವವು, ದ್ರಾಕ್ಷೇತೊಟ್ಟಿಯಲ್ಲಿ ತುಳಿಯುವದು, ದ್ರಾಕ್ಷಾರಸವನ್ನು ಮಾಡುವದು ಇವುಗಳೆಲ್ಲವೂ ಮುಗಿದು ಹೋಗಿರುವವು, ಅಲ್ಲದೆ ಅದಕ್ಕೆ ಬದಲಾಗಿ ಆ ದ್ರಾಕ್ಷಾರಸವು ಹರ್ಷೋಲ್ಲಾಸಗಳಿಗೆ ಸಂಬಂಧಪಟ್ಟದ್ದಾಗಿರುವದು. ಅದು ಈಗಿನ ಕಾಲದಲ್ಲಿ ನಮ್ಮ ವಿಮೋಚಕನೊಂದಿಗೆ ನಿಜವಾಗಿಯೂ ಬಾಧೆಯನ್ನು ಅನುಭವಿಸುವದರಲ್ಲಿ, ಹಾಗು ಮುಂದೆ ಇದನ್ನು ಹಿಂಬಾಲಿಸಿ ಬರಲಿರುವ ಮಹಿಮಾ ಪ್ರಭಾವಗಳಲ್ಲಿಯೂ ಸಹ ಅನ್ಯೋನ್ಯರಾಗಿರುವಂಥವರೆಲ್ಲರ ಪಾಲಾಗಲಿರುವ ಅಂದರೆ ಊಹಿಸಲೂ ಅಥವಾ ವ್ಯಕ್ತಪಡಿಸಲೂ ಮಿಗಿಲಾದ ಹರ್ಷೋಲ್ಲಾಸಗಳನ್ನು ಸೂಚಿಸುವದು. ಆ ರಾಜ್ಯದ [ಸ್ಥಾಪನೆಯ] ಸಮಯವು ಈಗ ಬಹು ಸಮೀಪವಾಗಿರುವದು ಅಂದರೆ 1800 ವರುಷಗಳು ಅಥವಾ ನಮ್ಮ ಕರ್ತನು ಈ ಮಾತುಗಳನ್ನು ಹೇಳಿದ ಸಮಯಕ್ಕಿಂತಲೂ ಹೆಚ್ಚು ಸಮೀಪವಾಗಿದ್ದು ಅದು ಸ್ಥಿರವಾಗಿ ಸ್ಥಾಪನೆಯಾಗುತ್ತಿರುವದರ ಸಾಕ್ಷಿಪ್ರಮಾಣಗಳು ಎಲ್ಲಾ ಕಡೆಯಲ್ಲಿಯೂ ದ್ವಿಗುಣಗೊಳ್ಳುತ್ತಿರುವದು. ನಮ್ಮ ಹೃದಯಗಳು ಇದನ್ನು ಎದುರುನೋಡುವದರ ಪರಿಮಾಣಕ್ಕೆ ಅನುಗುಣವಾಗಿ ಆನಂದಪಡುವಂಥಾಗಬೇಕು ಅಲ್ಲದೆ ನಾವು ಈಗಿನ ಕಾಲದಲ್ಲಿ ಇದರ ಪರಿಮಾಣದಲ್ಲೇ ಶ್ರಮಸಂಕಟ ಅಪಮಾನ ದೂಷಣೆಯೆಂಬ ಪಾತ್ರೆಯಲ್ಲಿರುವದನ್ನು ಕುಡಿಯುವದರಲ್ಲಿಯೂ ನಂಬಿಗಸ್ತರಾಗುವುದರ ಮೂಲಕವಾಗಿ ನಮ್ಮ ಪ್ರೀತಿ ನಿಷ್ಠೆಗಳನ್ನು ಹೀಗೆ ಪ್ರಮಾಣೀಕರಿಸುವಂಥವರಾಗಿ ಇರಬೇಕು.

ಇದನ್ನು ಅನುಸರಿಸಿ ಬಂದಿತ್ತು ಯೋಹಾನನ ಮೂಲಕವಾಗಿ [ಅಧ್ಯಾಯ 15, 16, 17ರಲ್ಲಿ] ಬರೆಯಲ್ಪಟ್ಟಂಥಾ ಹಾಗು ಈ ಮಧ್ಯದಲ್ಲಿನ ಶತಮಾನಗಳಲ್ಲಿ ಕರ್ತನ ಜನರಲ್ಲಿ ಅನೇಕರನ್ನು ಆಶೀರ್ವದಿಸಿದಂಥಾ ಬೋಧನೆ. ಆನಂತರ ಅವರು ಕೀರ್ತನೆ –ಯನ್ನು ಹಾಡಿ ಎಣ್ಣೆಮರಗಳ ಗುಡ್ಡಕ್ಕೆ ಅಂದರೆ ಗೆತ್ಸೇಮನೆ ತೋಟಕ್ಕೆ ಶಿಷ್ಯರೆಲ್ಲರ ಮೇಲೆ ಬರಲಿರುವಂಥಾ ಹೊಸದಾದ ಪರಿಶೋಧನೆಗೆ ಒಳಗಾಗಲು ಹೊರಟು ಹೋದರು. ಹೀಗಾಗಿ ಕರ್ತನ ಸ್ಮರಣ ಭೋಜನವು ಮರುಕಳಿಸುವ ಪ್ರತಿಯೊಂದು ಸಮಯದಲ್ಲಿಯೂ ಮತ್ತು ತಮ್ಮ ಪ್ರತಿಜ್ಞೆಯನ್ನು ಸಾಂಕೇತಿಕವಾಗಿ ಸೂಚಿಸುವಂಥ ಆಚರಣೆಯ ಪ್ರತಿಯೊಂದು ನೂತನ ಸಮಯದಲ್ಲಿಯೂ ಕರ್ತನ ಜನರಿಗೆ ಹೊಸದಾದ ಪರಿಶೋಧನೆ ಪರೀಕ್ಷೆ ಬೇರ್ಪಡಿಸುವಿಕೆಗಳು ಸಂಭವಿಸುವದೆಂದು ನಮಗೆ ತೋರುತ್ತದೆ. ಇದರಲ್ಲಿ ನಿಲ್ಲುವಂಥಾಗಲು ಯಾರು ಸಮರ್ಥರು? ನಾವು ಕರ್ತನಲ್ಲಿ ಸಂತೋಷಿಸುವದನ್ನು ಕಡೆಯವರೆಗೂ ದೃಢವಾಗಿ ಹಿಡಿದುಕೊಂಡಿರುವವರಾಗಿರೋಣ, ನಂಬತಕ್ಕ ವಾಕ್ಯಗಳನ್ನು ದೃಢವಾಗಿ ಹಿಡುಕೊಂಡವರಾಗಿರೋಣ, ಉತ್ಕೃಷ್ಟವಾಗಿಯೂ ಅಮೂಲ್ಯವಾಗಿಯೂ ಇರುವ ವಾಗ್ದಾನಗಳನ್ನು ದೃಢವಾಗಿ ಹಿಡಿದುಕೊಂಡವರಾಗಿರೋಣ, ನಮ್ಮ ಪಸ್ಕದ ಯಜ್ಞದ ಕುರಿಯಾದಾತನೂ ನಮ್ಮನ್ನು ಬಿಡಿಸುವಾತನೂ ಆಗಿರುವಾತನನ್ನು ದೃಢವಾಗಿ ಹಿಡುಕೊಂಡವರಾಗಿರೋಣ!

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 14 | ಯೆರೂಸಲೇಮ್ | ಪೇತ್ರನಿಂದ ಅಲ್ಲಗಳೆಯಲ್ಪಟ್ಟದ್ದು ಹಾಗೂ ಅಪೋಸ್ತಲರು ಚದರಿಹೋಗುವದನ್ನು ಮುಂತಿಳಿಸಲಾದದ್ದು | 26:31–35 | 14:27–31 | 22:31–38 | 13:31–38 |

## ಮತ್ತಾಯ 26:31–35

ಆಗ ಯೇಸು, ಅವರಿಗೆ–ನೀವೆಲ್ಲರೂ ಈರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು; ಹಿಂಡಿನ ಕುರಿಗಳು ಚದರಿಹೋಗುವವು ಎಂದು ಬರೆದದೆಯಲ್ಲಾ. ಆದರೆ ನಾನು ಜೀವಿತನಾಗಿ ಎದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು ಎಂದು ಹೇಳಿದನು. ಪೇತ್ರನು ಆತನಿಗೆ–ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವದಿಲ್ಲ ಎಂದು ಉತ್ತರಕೊಡಲು ಯೇಸು–ನಿನಗೆ ಸತ್ಯವಾಗಿ ಹೇಳುತ್ತೇನೆ. ಇದೇ ರಾತ್ರಿಯಲ್ಲಿ ಕೋಳಿಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ–ಅವನನ್ನು ಅರಿಯೆನೆಂಬದಾಗಿ ಮೂರು ಸಾರಿ ಹೇಳುವಿ ಅಂದನು. ಪೇತ್ರನು ಆತನಿಗೆ–ನಾನು ನಿನ್ನ ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆನೆಂಬದಾಗಿ ಹೇಳುವದೇ ಇಲ್ಲ ಎಂದು ಹೇಳಿದನು. ಅದರಂತೆ ಶಿಷ್ಯರೆಲ್ಲರೂ ಹೇಳಿದರು.

## ಮಾರ್ಕ 14:27–31

ಆಗ ಯೇಸು ಅವರಿಗೆ–ನೀವೆಲ್ಲರೂ ದಿಗಿಲು ಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು, ಕುರಿಗಳು ಚದರಿಹೋಗುವವು ಎಂದು ಬರೆದದೆಯಲ್ಲಾ. ಆದಾಗ್ಯೂ ನಾನು ಜೀವಿತನಾಗಿ ಎದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು ಎಂದು ಹೇಳಿದನು. ಆದರೆ ಪೇತ್ರನು ಆತನಿಗೆ–ಎಲ್ಲರೂ ದಿಗಿಲುಪಟ್ಟು ಹಿಂಜರಿದರೂ ನಾನು ಹಿಂಜರಿಯುವದಿಲ್ಲ ಎಂದು ಹೇಳಲು ಯೇಸು–ನಿನಗೆ ಸತ್ಯವಾಗಿ ಹೇಳುತ್ತೇನೆ, ಈ ಹೊತ್ತು ಈ ರಾತ್ರಿಯಲ್ಲಿಯೇ ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ–ಅವನನ್ನು ಅರಿಯೆನೆಂಬದಾಗಿ ಮೂರು ಸಾರಿ ಹೇಳುವಿ ಅಂದನು. ಆದರೆ ಅವನು–ನಾನು ನಿನ್ನ ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆನೆಂಬದಾಗಿ ಹೇಳುವದೇ ಇಲ್ಲವೆಂದು ಬಹು ಖಂಡಿತವಾಗಿ ಮಾತಾಡಿದನು. ಅದರಂತೆ ಅವರೆಲ್ಲರೂ ಹೇಳಿದರು.

## ಲೂಕ 22:31-38

ಸೀಮೋನನೇ, ಸೀಮೋನನೇ, ನೋಡು, ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿ-ಕೊಂಡನು; ಆದರೆ ನಿನ್ನ ನಂಬಿಕೆ ಕುಂದಿ ಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆ ಮಾಡಿ -ಕೊಂಡೆನು. ನೀನು ತಿರಿಗಿಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು ಎಂದು ಹೇಳಿದನು. ಆದರೆ ಅವನು-ಸ್ವಾಮೀ, ನಿನ್ನ ಸಂಗಡ ಸೆರೆಮನೆಗೆ ಹೋಗುವದಕ್ಕೂ ಸಾಯುವದಕ್ಕೂ ಸಿದ್ಧವಾಗಿದ್ದೇನೆ ಅನ್ನಲು ಆತನು-ಪೇತ್ರನೇ, ನನ್ನ ವಿಷಯದಲ್ಲಿ-ಇವನನ್ನು ಅರಿಯೆನೆಂದು ನೀನು ಮೂರು ಸಾರಿ ಹೇಳುವ ತನಕ ಈಹೊತ್ತು ಕೋಳಿ ಕೂಗುವದಿಲ್ಲವೆಂದು ನಿನಗೆ ಹೇಳುತ್ತೇನೆ ಅಂದನು. ಮತ್ತು ಆತನು-ನಿಮ್ಮನ್ನು ನಾನು ಹಮ್ಮಿಣಿ ಹಸಿಬೆ ಜೋಡುಗಳಿಲ್ಲದೆ ಕಳುಹಿಸಿದಾಗ ನಿಮಗೆ ಏನಾದರೂ ಕೊರತೆಯಾಯಿತೋ ಎಂದು ಕೇಳಲು ಅವರು ಏನೂ ಇಲ್ಲವೆಂದು ಉತ್ತರಕೊಟ್ಟರು. ಅದಕ್ಕೆ ಆತನು-ಈಗಲಾದರೋ ಹಮ್ಮಿಣಿಯಿದ್ದವನು ಅದನ್ನು ತಕ್ಕೊಳಲಿ, ಹಸಿಬೆಯಿದ್ದವನು ಅದನ್ನು ತಕ್ಕೊಳ್ಳಲಿ, ಮತ್ತು ಕತ್ತಿಯಿಲ್ಲದವನು ತನ್ನ ಮೇಲಂಗಿಯನ್ನು ಮಾರಿ ಒಂದು ಕತ್ತಿಯನ್ನು ಕೊಂಡುಕೊಳ್ಳಲಿ. ಯಾಕಂದರೆ-ಆತನು ಅಪರಾಧಿಗಳಲ್ಲಿ ಒಬ್ಬನಂತೆ ಎಣಿಸಲ್ಪಟ್ಟನು ಎಂದು ಬರೆದಿರುವ ಮಾತು ನನ್ನಲ್ಲಿ ನೆರವೇರಬೇಕಾಗಿದೆ ಎಂದು ನಿಮಗೆ ಹೇಳುತ್ತೇನೆ; ನನ್ನ ವಿಷಯವಾದದ್ದು ಕೊನೆಗಾಣಬೇಕು ಎಂದು ಹೇಳಿದನು. ಅವರು-ಸ್ವಾಮೀ, ಇಗೋ ಇಲ್ಲಿ ಎರಡು ಕತ್ತಿಗಳಿವೆ ಅನ್ನಲು ಆತನು ಅವರಿಗೆ-ಅಷ್ಟು ಸಾಕು ಅಂದನು.

## ಯೋಹಾನ 13:31-38

ಅವನು ಹೊರಗೆ ಹೋದ ಮೇಲೆ ಯೇಸು-ಈಗ ಮನುಷ್ಯಕುಮಾರನು ಮಹಿಮೆಪಟ್ಟಿದ್ದಾನೆ, ಮತ್ತು ದೇವರು ಆತನಲ್ಲಿ ಮಹಿಮೆಪಟ್ಟಿದ್ದಾನೆ. ದೇವರು ಆತನಲ್ಲಿ ಮಹಿಮೆಪಟ್ಟಿರ-ಲಾಗಿ ತನ್ನಲ್ಲಿ ದೇವರು ಆತನನ್ನೂ ಮಹಿಮೆಪಡಿಸುವನು, ಕೂಡಲೇ ಮಹಿಮೆ ಪಡಿಸುವನು. ಪ್ರಿಯ ಮಕ್ಕಳೇ, ಇನ್ನು ಸ್ವಲ್ಪಕಾಲವೇ ನಿಮ್ಮ ಸಂಗಡ ಇರುತ್ತೇನೆ. ನನ್ನನ್ನು ಹುಡುಕುವಿರಿ, ಆದರೆ ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಎಂದು ನಾನು ಯೆಹೂದ್ಯರಿಗೆ ಹೇಳಿದಂತೆ ಈಗ ನಿಮಗೂ ಹೇಳುತ್ತೇನೆ. ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೆ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು ಅಂದನು. ಸೀಮೋನ ಪೇತ್ರನು ಆತನನ್ನು-ಸ್ವಾಮೀ, ಎಲ್ಲಿಗೆ ಹೋಗುತ್ತೀ? ಎಂದು ಕೇಳಿದ್ದಕ್ಕೆ ಯೇಸು-ನಾನು ಹೋಗುವಲ್ಲಿಗೆ ನೀನು ಈಗ ನನ್ನ ಹಿಂದೆ ಬರಲಾರಿ, ತರುವಾಯ ನನ್ನ ಹಿಂದೆ ಬರುವಿ ಅಂದನು. ಪೇತ್ರನು ಆತನಿಗೆ-ಸ್ವಾಮೀ, ನಾನು ಯಾಕೆ ಈಗ ನಿನ್ನ ಹಿಂದೆ ಬರಲಾರೆನು? ನಿನಗಾಗಿ ನನ್ನ ಪ್ರಾಣವನ್ನಾದರೂ ಕೊಟ್ಟೇನು ಎಂದು ಹೇಳಲು ಯೇಸು-ನನಗಾಗಿ ಪ್ರಾಣಕೊಟ್ಟೀಯಾ? ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ನನ್ನ ವಿಷಯದಲ್ಲಿ ಅವನನ್ನು ಅರಿಯೆನೆಂದು ಮೂರು ಸಾರಿ ಹೇಳುವ ತನಕ ಕೋಳಿಕೂಗುವದೇ ಇಲ್ಲ ಅಂದನು.

# ಆತ್ಮವಿಶ್ವಾಸ ಒಂದು ಬಲಹೀನತೆ

**ರೀಪ್ರಿಂಟ್ಸ್ ಪುಟ 4711**

## ಮತ್ತಾಯ 26:31-35, 69-75

**'...ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ." – 1 ಕೊರಿಂಥ 10:12**

ಭಕ್ತನಾದ ಪೇತ್ರನು ಕ್ರಿಸ್ತನ ಅಪೋಸ್ತಲರಲ್ಲಿ ಅತಿ ಸಹಾಯಕಾರಿಯಾಗಿದ್ದವರಲ್ಲಿ ಒಬ್ಬನೆಂದು ಸಾಬೀತುಪಡಿಸಿರು-ವನು, ಹಾಗು ಆತನು ಸಹಾಯಕನಾಗಿರುವದರ ಗುಟ್ಟು ಶಾಸ್ತ್ರವಚನಗಳಲ್ಲಿ ಪ್ರಕಟವಾಗಿರುವ ಆತನ ಮಾನುಷ್ಯಸ್ವಭಾವ, ಅದರ ಶಕ್ತಿ ಹಾಗು ಅದರ ಬಲಹೀನತೆಗಳಲ್ಲಿ ಅಡಗಿರುತ್ತದೆ. ಒಡೆಯನನ್ನು ದೇವರಿಂದ ಕಳುಹಿಸಲ್ಪಟ್ಟ ಮೆಸ್ಸೀಯನೆಂದು ಒಪ್ಪಿಕೊಂಡಿರುವ ಹನ್ನೆರಡು ಮಂದಿ ಅಪೋಸ್ತಲರಲ್ಲಿ ಈತನು ಮೊದಲಿಗನಾಗಿದ್ದನು; ಆತನನ್ನು [ಕ್ರಿಸ್ತನನ್ನು] ಅಲ್ಲಗಳೆದ ಹನ್ನೆರಡು ಮಂದಿಯಲ್ಲಿ ಇವನೇ ಮೊದಲನೆಯವನಾಗಿದ್ದನು. ಹನ್ನೆರಡು ಮಂದಿಯಲ್ಲಿ ಒಡೆಯನ ರಕ್ಷಣೆಗಾಗಿ ತನ್ನ ಕತ್ತಿಯನ್ನು ಹಿರಿದವರಲ್ಲಿ ಈತನು ಮೊದಲಿಗನಾಗಿದ್ದು ನಂತರದಲ್ಲಿ ಆತನನ್ನು [ಯೇಸುವನ್ನು] ತಾನು ಎಂದೂ ಅರಿತವನಲ್ಲವೆಂದು ಆಣೆಯಿಟ್ಟುಕೊಂಡು ಹೇಳಿದವನು ಕೇವಲ ಇವನೊಬ್ಬನೇ. ದೇವರು ಮಾಡಿದ ಏರ್ಪಾಟಿನ ಪ್ರಕಾರ ಉನ್ನತ [ಸ್ಥಾನದ] ಕರೆಯೆಂಬ ಬಾಗಿಲನ್ನು ಅಂದರೆ ದೇವರರಾಜ್ಯದ ಬಾಗಿಲನ್ನು ತೆರೆಯುವ ಬೀಗದ ಕೈಗಳನ್ನು ಈತನಿಗೆ ಕೊಡಲಾಗಿತ್ತು. ಪಂಚಾಶತ್ತಮ ದಿನದಂದು ಇವನು ಆ ಬೀಗದಕೈಗಳಲ್ಲಿ ಒಂದನ್ನು ಬಳಸಿಕೊಂಡು ಯೆಹೂದ್ಯರಿಗೆ ಪ್ರಭಾವ ಮಾನ ನಿರ್ಲಯತ್ವಗಳ ಮಾರ್ಗವು ತೆರೆಯಲಾಗುವದನ್ನು ಧೈರ್ಯದಿಂದ ಸಾರಿ ಹೇಳಿದ್ದನು. ಸ್ವಲ್ಪ ಕಾಲದ ನಂತರ, ನಿಗದಿತ ಸಮಯದಲ್ಲಿ ತನ್ನ ಉಪದೇಶದ ಮೂಲಕವಾಗಿ ಅನ್ಯಜನರಿಗೆ ಅದೇ ಉನ್ನತ [ಸ್ಥಾನದ] ಕರೆಯೆಂಬ ಬಾಗಿಲನ್ನು ತೆರೆದಿದ್ದನು. ಆಗ ದೇವರಿಗೆ ಅಂಗೀಕೃತವಾಗತಕ್ಕ ಅನ್ಯಜನರಲ್ಲಿ ಮೊದಲಿಗನಾದ ಕೊರ್ನೇಲ್ಯನು ಅಂಗೀಕರಿಸಲ್ಪಟ್ಟು ಪವಿತ್ರಾತ್ಮನಿಂದ [ಗರ್ಭಾಂಕುರಿಸಲ್ಪಟ್ಟು] ಹುಟ್ಟಿದವನಾಗಿದ್ದನು. ಈ ಅಂಶವು ಹಿಂದೆ ಯೆಹೂದ್ಯರು ಮತ್ತು ಅನ್ಯಜನರನ್ನು ಬೇರ್ಪಡಿಸಲಾಗಿದ್ದ ಅಡ್ಡ

ಗೋಡೆಯನ್ನು ಒಡೆದು ಹಾಕಲ್ಪಟ್ಟಿರುವದಕ್ಕೆ ಸಾಕ್ಷಿಪ್ರಮಾಣಗಳನ್ನು ನೀಡಿತ್ತು. ಆದಾಗ್ಯೂ ಈ ಪರಿಜ್ಞಾನ ಮತ್ತು ವಿಶೇಶವಾದ ಅವಕಾಶಗಳನ್ನು ಹೊಂದಿದ ಮೇಲೂ ಈ ಮಹಾ ಪುರುಷನು ನಂತರದಲ್ಲಿ ಯೆಹೂದ್ಯರು ಹಾಗು ಅನ್ಯಜನರ ನಡುವೆ ಭಿನ್ನಬೇಧಮಾಡಿ ಅವರು ದೇವರ ಎದುರಿನಲ್ಲಿ ಸಮಾನರೆಂಬದನ್ನು ಸೂಚಿಸುವ ದೇವರ ಕೃಪೆಯನ್ನು ನಿರ್ಲಕ್ಷಿಸುವ ಮಟ್ಟಿಗೆ ಕಪಟಿಯಾಗಿ ನಡಕೊಂಡಿದ್ದನು.

ಆದರೆ ಈ ಎಲ್ಲಾ ಅನುಭವಗಳಲ್ಲಿಯೂ ಭಕ್ತನಾದ ಪೇತ್ರನು ತನ್ನ ಹೃದಯದ ಅಂತರಾಳದಲ್ಲಿ ದೇವರು ಸತ್ಯನೀತಿ ಇವುಗಳಿಗೆ ನಿಷ್ಠನಾಗಿದ್ದುದನ್ನು ಹಾಗು ತನ್ನ ಗುಣಸ್ವಭಾವದಲ್ಲಿನ ಬಲಹೀತನೆಗಳು ತಪ್ಪುದೋಷಗಳು ತನ್ನ ಶರೀರಕ್ಕೆ ಸಂಬಂಧ–ವಾದುವೆಂದು ಅವು ನಿಜವಾಗಿಯೂ ಹೃದಯದಲ್ಲಿನ ಉದ್ದೇಶ –ವಾಗಿರಲಿಲ್ಲವೆಂಬುದನ್ನು ತೋರ್ಪಡಿಸಿಕೊಂಡಿದ್ದನು. ತಾನು ತನ್ನ ಗುರುವನ್ನು ಅಲ್ಲಗಳೆದುದಕ್ಕೆ ಬಹುವಾಗಿ ಅತ್ತಿದ್ದನು. ಅಲ್ಲದೆ ತಾನು ಅನ್ಯಜನರಿಗೆ ಮನ್ನಣೆ ನೀಡುವದರಲ್ಲಿ ವಿಫಲನಾಗಿದ್ದುದರ ನಷ್ಟವನ್ನು ಬಹು ನಮ್ರತೆಯಿಂದ ಸರಿಪಡಿಸಿಕೊಂಡಿದ್ದನು. ಪೇತ್ರನನ್ನು ಆಕರ್ಷಕವ್ಯಕ್ತಿಯನ್ನಾಗಿ ಮಾಡಿದ ಅದೇ ಗುಣಸ್ವಭಾವಗಳು ಇಸ್ರಾಯೇಲ್ಯರ ಅರಸನೂ ಪ್ರವಾದಿಯೂ ಆಗಿದ್ದ ದಾವೀದನನ್ನೂ ಆಕರ್ಷಕ ವ್ಯಕ್ತಿಯನ್ನಾಗಿ ಮಾಡಿತ್ತು. ಆತನು ಒಂದು ತಪ್ಪನ್ನೂ ಮಾಡಲು ಸಾಧ್ಯವೇ ಇಲ್ಲದ ರೀತಿಯ ಭಕ್ತನಾಗಿರಲಿಲ್ಲ. ಉಳಿದ ಮಾನವರು ಆತನನ್ನು ತಮ್ಮ ಸಹಜೀವಿಯೆಂದು ಗುರುತಿಸಲಾಗದಂಥಾ ಬಹು ಉನ್ನತ ಮಟ್ಟದವನಾಗಿರಲಿಲ್ಲ. ಹೀಗಿದ್ದರೂ ಆತನು ತಿರಸ್ಕಾರ ಹೊಂದುವಷ್ಟು ಹೀನಸ್ಥಿತಿಯಲ್ಲಿರಲಿಲ್ಲ. ಹೃದಯದಲ್ಲಿ ದೇವರಿಗೆ ಹಾಗು ನೀತಿಗೆ ನಿಷ್ಠೆಯುಳ್ಳನಾಗಿರುವದನ್ನು ಸೂಚಿಸುವಂಥ ಹೇರಳವಾದ ಸಾಕ್ಷಿಪ್ರಮಾಣಗಳು ಆತನ ಬಲಹೀನತೆಗಳನ್ನು ಸಂಪೂರ್ಣವಾಗಿ ಸರಿದೂಗಿಸಲ್ಪಟ್ಟಿದ್ದವು. ಆತನು ಎಡವಿಬಿದ್ದು ಮತ್ತೆ ಚೇತರಿಸಿಕೊಂಡದ್ದರಲ್ಲಿ ಅವನಿಗಾದ ಅನುಭವಗಳು ಎಷ್ಟರ ಮಟ್ಟಿಗೆ ತನ್ನ ಸಂಕೀರ್ತನೆಯಲ್ಲಿ ತುಂಬಿಕೊಂಡಿರುವದೆಂದರೆ ಅವು ಹೆಚ್ಚು ಕಡಿಮೆ ದೇವರಿಗೆ ನಿಷ್ಠೆಯುಳ್ಳ ಹಾಗೂ ತಮ್ಮ ಸ್ವಂತ ಹಾಗು ಇತರರ ಪಾಪಬಲಹೀನತೆಗಳಲ್ಲಿ ಯಾವದೇ ಹಂತದ ಅನುಭವ ಪಡೆದಿರುವಂಥ ಪ್ರತಿಯೊಬ್ಬರ ಹೃದಯದಲ್ಲೂ ಪ್ರತಿಸ್ಪಂದಿಸುವ ಒಂದು ಪರಿಣಾಮನ್ನು ಉಂಟುಮಾಡಿರುವದು.

## ಇತರರು ಪೇತ್ರನನ್ನು ಕಂಡಿದ್ದು ಹೇಗೆ

ಕರ್ತನ ಭೂಯಾತ್ರೆಯ ದಿನಗಳಲ್ಲಿ ತನ್ನ ಸುತ್ತಲಿದ್ದ ಗುಂಪಿನವರಲ್ಲಿ ಪೇತ್ರನು ಈ ದಿನದಲ್ಲಿಯೂ ಸಹ ಅತಿ ಮೋಹಿತನಾಗಿ ಉಳಿದುಕೊಂಡಿರುವನು. ಜಿ. ಸಿ. ಮೋರ್ಗನ್ ಎಂಬುವವರು ಪೇತ್ರನ ಬಗ್ಗೆ ಹೀಗೆ ಹೇಳಿರುವನು: "ಹೊಸ ಒಡಂಬಡಿಕೆಯ ಗ್ರಂಥದಲ್ಲಿ ಪೇತ್ರನು ಒಬ್ಬ ಶ್ರೇಷ್ಠ ಪುರುಷನಾಗಿ ಪ್ರಕಟಗೊಂಡಿರುವನು ಎಂಬುದನ್ನು ನಾನು ಈಗ ಮನವರಿಕೆಮಾಡಿಕೊಂಡಿದ್ದೇನೆ. ತನ್ನ ಸಾಧನೆಯಲ್ಲಿ ಅಥವಾ ತನ್ನಲ್ಲಿನ ಒಂದು ನಿರ್ಧಿಷ್ಟವಾದ ಸಾಮರ್ಥ್ಯದಲ್ಲಿ ಶ್ರೇಷ್ಠ ಪುರುಷನಾಗಿರುವನೆಂದು ನಾನು ಹೇಳುವದಿಲ್ಲ; ಆದರೆ ಮನುಷ್ಯ ಗುಣಸ್ವಭಾವವನ್ನು ಅತಿ ಅಧ್ಭುತ ರೀತಿಯಲ್ಲಿ ಪ್ರಕಟ ಮಾಡಿಕೊಂಡಿರುವನು. ಬುದ್ಧಿಕೌಶಲ್ಯಗಳುಳ್ಳ ಈ ಮನುಷ್ಯನು ನಿರಂತರವಾಗಿ ಪ್ರಮಾದಗಳನ್ನು ಮಾಡುವವನಾಗಿದ್ದನು. ಭಾವಾಪೂರಿತನಾದ ಈ ಮನುಷ್ಯನ ಇಂಥಾ ಉದ್ವೇಗವು ತಾನು ಸಹಾಯಮಾಡ ಬಯಸುವ ಪ್ರತಿ ಕಾರ್ಯದಲ್ಲಿಯೂ ಹಾನಿ ಉಂಟುಮಾಡುವಂಥ ದೋಷಕ್ಕೆ ಒಳಗಾಗಮಾಡುತ್ತಿತ್ತು."

ಭಕ್ತನಾದ ಪೇತ್ರನ ಬಗ್ಗೆ ಸೌತ್‌ಹೌಸ್ ಎಂಬುವವರು ಹೀಗೆ ಹೇಳಿರುತ್ತಾರೆ: "ಪೇತ್ರನು ಒಬ್ಬ ಸಾಧಾರಣ ಮನುಷ್ಯನಾಗಿದ್ದು ಈ ಕಾರಣಕ್ಕಾಗಿ ತನ್ನ ಕೆಲವು ಸಹಪಾಠಿಗಳಿಗಿಂತಲೂ ನಮಗೆ ಸಮೀಪವಾಗುವನು. ಆದರೆ ಸಾಧಾರಣ ಮನುಷ್ಯರು ತಮ್ಮ ಭವ್ಯ ಕ್ಷಣಗಳನ್ನು ಅಂದರೆ ಭಕ್ತನಾದ ಪೇತ್ರನು ನೀರಿನ ಮೇಲೆ ನಡೆಯಲು ಯತ್ನಿಸಿದಂಥ ಕ್ಷಣಗಳನ್ನು ಹೊಂದಿರುವರು, ಯಾಕಂದರೆ ಈ ಕಾರ್ಯದಲ್ಲಿ ಪೇತ್ರನು ತನಗೆ ಸಾಮರ್ಥ್ಯವಿಲ್ಲದಂಥ ಒಂದು ಸಂಗತಿಯನ್ನು ಮಾಡಲು ಯತ್ನಿಸಿದ್ದನು. ತನಗೆ ಅನುಭವವಿಲ್ಲದಂಥ ಕೆಲವೊಂದು ಕಾರ್ಯವನ್ನು ಮಾಡಲು ಮುಂದಾಗಿದ್ದನು. ನಮಗೆ ತಿಳಿದಿರುವಂಥ ಸ್ತ್ರೀಪುರುಷರ ಬಗ್ಗೆ ಶೀಘ್ರವಾಗಿ ದೃಷ್ಟಿ ಹಾಯಿಸಿದಾಗ ತಮಗೆ ಸಾಮರ್ಥ್ಯವುಳ್ಳವರ ವಿಷಯವಾಗಿ ಅವರ ಸಾಧನೆಗಳ ಬಗ್ಗೆ ಮುಂದಾಗಿ ಹೇಳುವದು ಎಂದೂ ಸುರಕ್ಷಿತವಲ್ಲವೆಂಬದನ್ನು ಸಾಬೀತುಪಡಿಸಲು ನಮಗೆ ಸಾಕಷ್ಟು ವಿಷಯಗಳು ದೊರಕುವವು."

ಭಕ್ತನಾದ ಪೇತ್ರನ ಬಗ್ಗೆ ಡಾ. ಡೇವಿಸ್‌ರವರು ಹೀಗೆ ಹೇಳಿರುವರು: "ಪೇತ್ರನು ಬುದ್ಧಿಯುಳ್ಳವನಾಗಿದ್ದನು. ಆತನು ಇತರ ಯಾವ ಅಪೋಸ್ತಲರಿಗಿಂತಲೂ ಹೆಚ್ಚು ಪ್ರಶ್ನೆಗಳನ್ನು ಮಾಡಿದ್ದನು. ಪ್ರಶ್ನೆಮಾಡುವ ಸಾಮರ್ಥ್ಯವು ಬುದ್ಧಿಶಕ್ತಿಯ ಒಂದು ಪ್ರಕಟನೆಯಾಗಿರುವದು. ಅದು ಅಜ್ಞಾನದ ಒಂದು ಪ್ರಕಟನೆಯೂ ಆಗಿರಬಹುದು; ಆದರೆ ಎಂದೂ ಪ್ರಶ್ನೆಮಾಡದ ಮನುಷ್ಯನು ಖಂಡಿತವಾಗಿಯೂ ತನ್ನ ಬುದ್ಧಿಶಕ್ತಿಯಲ್ಲಿ ಕೊರತೆಯುಳ್ಳವನಾಗಿರುವನು. ಪೇತ್ರನು ಹೃದಯವಂತಿಕೆ, ಬಿಕ್ಕಳಿಸಿ ಅಳುವ, ದುಡುಕಿನ ಸ್ವಭಾವವುಳ್ಳ ಒಬ್ಬ ಮನುಷ್ಯನಾಗಿದ್ದನು. ಆತನ ಸದ್ಗುಣ ಹಾಗು ಆತನ ತಪ್ಪುಗಳು ತನ್ನ ಉತ್ಸಾಹ ಪ್ರವೃತ್ತಿಯ ಸಾಧಾರಣ ಮೂಲವಾಗಿತ್ತು. ತೀವ್ರ ದುಡುಕೆಂಬ ಕಳೆಸಸ್ಯದ ನಡುವೆಯೂ ಉಜ್ವಲವಾದ ಪ್ರೀತಿ ಹಾಗು ಸತ್ಯವನ್ನು ಅಂಗೀಕರಿಸಲು ಸಿದ್ಧವಾಗಿರುವಿಕೆಯೆಂಬ ಒಳ್ಳೆಯ ಗಿಡವು ದೃಢವಾಗಿ ಬೆಳೆದುಬಂದದ್ದು ಆತನಿಗೆ ಕೀರ್ತಿ ತರುವಂಥದಾಗಿರುವದು.

## "ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ."

ಒಡೆಯನು ತನ್ನ ಹಿಂಬಾಲಕರಿಗೆ ಬೋಧಿಸಿದ ಶ್ರೇಷ್ಠವಾದ ಪಾಠಗಳಲ್ಲಿ ಒಂದಾದ ಹಾಗು ಕ್ರಿಸ್ತನ ಅನುಭವ ಶಾಲೆಯಲ್ಲಿರುವ–ವರೆಲ್ಲರೂ ಕಲಿತುಕೊಳ್ಳಬೇಕಾದುದೇನಂದರೆ ದೇವರ ಹಾಗು ನೀತಿಯ ವಿಷಯವಾಗಿ ಉಜ್ವಲವಾದ ಪ್ರೀತಿ ಉತ್ಸಾಹಗಳೊಂದಿಗೆ ಸೌಮ್ಯಭಾವವನ್ನು ಸಹ ಅಂದರೆ ಸ್ವಸ್ಥಚಿತ್ತವುಳ್ಳವರಾಗಿರ–ಬೇಕೆಂಬದು. ಕ್ರಿಸ್ತನ ಹಿಂಬಾಲಕರು "ಸರ್ಪಗಳಂತೆ ಜಾಣರೂ

ಪಾರಿವಾಳಗಳಂತೆ ನಿಷ್ಕಪಟಿಗಳೂ" ಆಗಿರಬೇಕೆಂದು ಪ್ರಬೋಧಿಸಲಾಗಿರುವದು. ಅವರ ಜಾಣತನವು ಕೇವಲ ತನ್ನ ಹಿತಾಸಕ್ತಿಗಳನ್ನು ಮಾತ್ರ ನೋಡಿಕೊಳ್ಳುವ ಸ್ವಾರ್ಥಭಾವವುಳ್ಳದ್ದಾಗಿರಬಾರದು, ಆದರೆ ಔದಾರ್ಯತೆಯುಳ್ಳದ್ದಾಗಿದ್ದು ಎಲ್ಲರ ಹಿತಾಸಕ್ತಿಗಳನ್ನು ನೋಡುವಂಥದ್ದಾಗಿರಬೇಕು. ಅಲ್ಲದೆ ನಿಖರವಾಗಿ ಹೇಳುವದಾದರೆ ಅದು ಕರ್ತನ ಕಾರ್ಯೋದ್ದೇಶ ಮತ್ತು ಆತನು ಅದರಲ್ಲಿ ನಮಗೆ ವಹಿಸಿಕೊಡುವ ಯಾವುದೇ ಭಾಗದಲ್ಲಿನ ವಿಷಯವಾಗಿರಬೇಕು.

ತನ್ನ ಉಪದೇಶದ ಅವಧಿಯಲ್ಲಿ ಯೇಸುವು ತನ್ನ ಶಿಷ್ಯರಿಗೆ ತನ್ನನ್ನು ಅಲ್ಲಗಳೆಯುವ ಪರಿಶೋಧನೆಯ ಬಗ್ಗೆ ಹೀಗೆ ಮುಂದಾಗಿ ಹೇಳಿದ್ದನು– "ನೀವೆಲ್ಲರೂ ಈ ರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು; ಹಿಂಡಿನ ಕುರಿಗಳು ಚದರಿಹೋಗುವವು ಎಂದು [ಪ್ರವಾದಿಗಳ ಗ್ರಂಥದಲ್ಲಿ] ಬರೆದದೆಯಲ್ಲಾ. ಆದರೆ ನಾನು ಜೀವಿತನಾಗಿ ಎದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು..." – ಮತ್ತಾಯ 26:31,32.

ಆನಂತರ ದುಡುಕಿನವನಾದ ಪೇತ್ರನು ಹೀಗೆ ನುಡಿದಿದ್ದನು, "ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವದಿಲ್ಲ..." ಅಯ್ಯೋ! ಈ ಧೀರ ಮನುಷ್ಯನು ತನ್ನ ಮೇಲೆ ಕೂಡಲೇ ಎರಗಿ ಬರುವ ಕಷ್ಟಪರಿಶೋಧನೆಗಳ ಸ್ವರೂಪವನ್ನು ಗ್ರಹಿಸಿ–ಕೊಂಡಂಥದ್ದು ಬಹು ಅಲ್ಪವಾಗಿತ್ತು ಅಲ್ಲದೆ ಮನಗಂಡವ–ನಾಗಿದ್ದನು ತನ್ನ ದುಡುಕು ಸ್ವಭಾವದಲ್ಲಿನ ಬಲಹೀನತೆಗಳ. ಹೀಗಿದ್ದರೂ ನಾವು ತನ್ನ ಒಡೆಯನನ್ನು ಅಲ್ಲಗಳೆದ ಬಗ್ಗೆ ನೊಂದುಕೊಂಡಲ್ಲಿ, ಯೇಸುವೇ ಮೆಸ್ಸೀಯನೆಂದು ಆತನು ಒಪ್ಪಿಕೊಂಡದ್ದರಲ್ಲಿ ತೋರಲಾದ ಆತನ ನಂಬಿಕೆ ಪ್ರೀತಿ ಮತ್ತು ಉತ್ಸಾಹಗಳನ್ನು ಹಾಗು ನಂತರದಲ್ಲಿ ಯಾವ ಸಂಗತಿಯೂ ಎಂದೂ ತನ್ನ ನಿಷ್ಠೆಯನ್ನು ಕದಲಿಸಲಾರದೆಂದು ಪ್ರಕಟಮಾಡಿ ಹೇಳಿರುವದನ್ನು ಗಮನಿಸುವಲ್ಲಿ ನಾವು ಹರ್ಷಿಸುವವರಾಗಬೇಕು.

ಹೀಗಾಗಿಯೂ ವಿಶೇಷವಾಗಿ ನಿಷ್ಠೆ ಉತ್ಸುಕತೆಯುಳ್ಳವರನ್ನೇ ಸಿಕ್ಕಿಸಿಕೊಳ್ಳಲು ವಿರೋಧಿಯಾದ ಸೈತಾನನು ಸತತವಾಗಿ ಹುಡುಕುತ್ತಿರುವನು. ಹೀಗೆ ಈ ಸಂದರ್ಭದಲ್ಲಿಯೇ ಯೇಸುವು ಪೇತ್ರನಿಗೆ ಈ ವಿಧವಾಗಿ ವಿವರಿಸಿ ಹೇಳಿದ್ದನು, "ಸೀಮೋನನೇ, ನೋಡು, ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು;" ಆತನು ನಿನ್ನನ್ನು ಕ್ರಿಸ್ತನ ಪರವಾಗಿರುವ ನಿನ್ನ ನಿಷ್ಠೆಯಿಂದ ಬೇರ್ಪಡಿಸಿ, ಶಿಷ್ಯನಾಗಿರುವದಕ್ಕೆ ಅಧೈರ್ಯಪಡಿಸುವವನಾಗಿ ನಿನ್ನನ್ನು ಭಯದಲ್ಲಿಯೂ ಹಾಗು ನಿನ್ನ ಬಲಹೀನತೆಗಳಲ್ಲಿಯೂ ಮುಳುಗಿಹೋಗುವಂತಾಗಲು ಮಾಡುವಲ್ಲಿದ್ದನು. ಒಡೆಯನು ಇದಕ್ಕೆ ಸೇರಿಸಿ ಹೀಗೆ ಹೇಳಿದ್ದನು, "ಆದರೆ ನಿನ್ನ ನಂಬಿಕೆ ಕುಂದಿಹೋಗಬಾರದೆಂದು ನಿನ್ನ ವಿಷಯ–ದಲ್ಲಿ ದೇವರಿಗೆ ವಿಜ್ಞಾಪನೆಮಾಡಿಕೊಂಡೆನು." ಪ್ರೀತಿಮಯನಾದ ಇದೇ ಒಡೆಯನು ಈಗಲೂ ನಿಜವಾಗಿಯೂ ಸ್ನೇಹಪೂರ್ಣರಾದ ತನ್ನ ಶಿಷ್ಯರನ್ನು ಅವರ ವಂಶ ಪಾರಂಪರ್ಯವಾದ ಬಲಹೀನತೆ–ಗಳು ಏನೇ ಇದ್ದರೂ ಅವರಿಗೆ ಸಹಾಯಮಾಡುತ್ತಿರುವನೆಂದು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಅವರು ಪ್ರೀತಿಯಲ್ಲಿ ನೆಲೆಗೊಂಡವರಾಗಿ ಆಸಕ್ತಿಯಿಂದ ಮುಂದುವರೆದಲ್ಲಿ ಅವರೆಲ್ಲರನ್ನು ದೃಢವಾದ ಗುಣಸ್ವಭಾವಗಳಲ್ಲಿ ವೃದ್ಧಿಸುವಂತೆ ಮಾಡಲು ಆತನು ಸಮರ್ಥನಾಗಿರುವನೆಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬಹುದು. ಸಂಗತಿಗಳೆಲ್ಲವೂ ಅವರಿಗೆ ಹಿತವನ್ನುಂಟು ಮಾಡುವಂತೆ ಮಾರ್ಪಡಿಸಲು ಅತನು ಸಮರ್ಥನು. ಪಾರಂಪರ್ಯವಾಗಿ ಬಂದಂಥಾ ಬಲಹೀನತೆ–ಗಳೂ ಸಹ ನಂಬಿಗಸ್ತರಲ್ಲಿ ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ... ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸಿಕೊಡುತ್ತವೆ.

## "ಕೋಳಿಕೂಗುವದಕ್ಕಿಂತ ಮುಂಚೆ"

ಒಡೆಯನು ದುಡುಕಿನವನಾದ ತನ್ನ ಪ್ರಿಯ ಹಿಂಬಾಲಕನಿಂದ (ಮುಂದೆ) ಉಂಟಾಗುವ ಅಪಾಯವನ್ನು ಗ್ರಹಿಸಿಕೊಂಡವನಾಗಿ ಆತನಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳಿದ್ದನು, ಅದೇನಂದರೆ ಕೋಳಿ ಕೂಗುವದಕ್ಕಿಂತ ಮುಂಚೆ ಇವನು ತನ್ನ ಒಡೆಯನನ್ನು ಅಲ್ಲಗಳೆಯುವನೆಂಬದೇ. ಇದು ಎಷ್ಟು ಅಸಂಭವವೆಂದು ಭಕ್ತನಾದ ಪೇತ್ರನಿಗೆ ಕಂಡಿರಬಹುದು! ಇವನು ಎಷ್ಟು ಧೈರ್ಯವಾಗಿ ಹೀಗೆ ಪ್ರಕಟಿಸಿ ಹೇಳಿರಬಹುದು, "ನಾನು ನಿನ್ನ ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆನೆಂಬದಾಗಿ ಹೇಳುವದೇ ಇಲ್ಲ..." ಅಲ್ಲದೆ ಹನ್ನೊಂದು ಮಂದಿಯೂ ಹಾಗೆಯೇ ಹೇಳಿದ್ದರೂ ಅವರ ಹೃದಯವು ಒಳ್ಳೆಯದಾಗಿಯೇ ಇತ್ತು. ನಮ್ಮ ಅಧ್ಯಯನವು ಈಗ ವಚನ 69ಕ್ಕೆ ದಾಟಿಹೋಗುತ್ತದೆ. ಒಡೆಯನು ಬಂಧಿಸಲ್ಪಟ್ಟಿದ್ದನು. ಶಿಷ್ಯರು ಚದರಿಸಲ್ಪಟ್ಟವರಾಗಿ ಓಡಿಹೋಗಿದ್ದರು. ಭಕ್ತನಾದ ಯೋಹಾನನು ಮಹಾಯಾಜಕನ ಕುಟುಂಬದ ಪರಿಚಯವಿದ್ದ ಕಾರಣ ಅಂಗಳದಲ್ಲಿ ನಿಂತಿದ್ದ ಭಕ್ತನಾದ ಪೇತ್ರನಿಗಿಂತಲೂ ಮೊದಲೇ [ಮಹಾಯಾಜಕನ] ಮಠದ ಒಳಗೆ ಪ್ರವೇಶಿಸಿದ್ದನು. ಮಠದಲ್ಲಿನ ಒಬ್ಬ ದಾಸಿಯು ಪೇತ್ರನನ್ನು ಯೇಸುವಿನ ಶಿಷ್ಯರಲ್ಲಿ ಒಬ್ಬನಾಗಿರುವನೆಂದು ಗುರುತುಹಿಡಿದು ಅದನ್ನು ಬಹಿರಂಗವಾಗಿ ಪ್ರಕಟಿಸಿದ್ದಳು. ಒಡೆಯನಿಗೆ ಸಂಭವಿಸುವ ಗತಿಯಲ್ಲಿ ತಾನೂ ಪಾಲುಗಾರನಾಗ–ಬಹುದೆಂದು ಭಯಪಟ್ಟು ನನಗೆ ಏನೂ ಗೊತ್ತಿರುವದಿಲ್ಲವೆಂದು ಹೇಳಿ ಭಕ್ತನಾದ ಪೇತ್ರನು ತನ್ನ ಗುರುತನ್ನು ನಿರಾಕರಿಸಿ–ಕೊಂಡಿದ್ದನು. ಸ್ವಲ್ಪ ಸಮಯದ ನಂತರ ಮತ್ತೊಬ್ಬನು ಹೀಗೇ ಪ್ರಕಟಮಾಡಿದ್ದನು. ಭಕ್ತನಾದ ಪೇತ್ರನು ಯೇಸುವು ತನಗೆ ತಿಳಿದಿರುವುದಿಲ್ಲವೆಂದು ಆಣೆಯಿಟ್ಟುಕೊಂಡು ಹೇಳುವದರ ಮೂಲಕವಾಗಿ ಒತ್ತುಕೊಟ್ಟು ಆತನನ್ನು ಅಲ್ಲಗಳೆದಿದ್ದನು. ನಂತರ ಅಂಗಳದಲ್ಲೆಲ್ಲಾ ವಿಷಯವು ಹಬ್ಬಿಕೊಂಡು ಅನೇಕರು ಅದನ್ನು ತೆಗೆದುಕೊಂಡು ಆ ದಾಸಿ ಹೇಳುವದನ್ನು ನಾವು ನಂಬುತ್ತೇವೆ ಅಲ್ಲದೆ ಹೇಗೂ ಪೇತ್ರನು ಗಲಿಲಾಯದ ಭಾಷಾಶೈಲಿಯುಳ್ಳವ–ನೆಂಬುದನ್ನು ನಂಬುತ್ತೇವೆಂದು ಸಾರಿ ಹೇಳಿದ್ದರು. ತಾನು ಅಲ್ಲಗಳೆದುಕೊಂಡದನ್ನು ಒತ್ತುಕೊಟ್ಟು ಹೇಳಲು ತನ್ನನ್ನು ಶಪಿಸಿ–ಕೊಂಡವನಾಗಿ ಆ ಮನುಷ್ಯನನ್ನು ತಾನು ಅರಿಯೆನೆಂಬುದನ್ನು

ಆಣೆಯಿಟ್ಟುಕೊಂಡು ಹೇಳತೊಡಗಿದನು. ಇದು ಆದ ನಂತರ ಕೋಳಿ ಕೂಗಲು ಆರಂಭವಾಯಿತು. ಆಗ ಪೇತ್ರನು ತನ್ನ ಒಡೆಯನು ಹೇಳಿದ ಈ ಮಾತನ್ನು ನೆನಪಿಸಿಕೊಂಡನು, "ಕೋಳಿ ಕೂಗುವದಕ್ಕೆ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯನೆಂಬದಾಗಿ ಹೇಳುವಿ."

ಅಯ್ಯೋ, ಈತನು ತನ್ನ ಸ್ಥಿರತೆಯ ವಿಷಯವಾಗಿ ಬಹು ಖಚಿತವಮಾಡಿಕೊಂಡಿದ್ದು ತನ್ನ ನಿಷ್ಠೆಯ ಬಗ್ಗೆ ಅತಿ ಆತ್ಮವಿಶ್ವಾಸವುಳ್ಳವನಾಗಿದ್ದನು. ತಾನು ಹೊಗಳಿಕೊಂಡ ವಿಷಯದಲ್ಲಿಯೇ ವಿರೋಧಿಯಾದ ಸೈತಾನನು ಸಿಕ್ಕಿಸಿಕೊಂಡಿದ್ದನು. ಮತ್ತೊಂದು ವಿವರಣೆಯು ಯೇಸುವು ತಿರಿಗಿಕೊಂಡು ಪೇತ್ರನನ್ನು ನೋಡಿದನೆಂದು ಹೇಳುತ್ತದೆ. ಆ ನೋಟವು ಸಾಕಷ್ಟಿತ್ತು. ಅದು ಪೇತ್ರನ ನಿಷ್ಠೆಯುಳ್ಳ ಹೃದಯದ ಬಗ್ಗೆ ಬಹು ವ್ಯಾಪಕವಾದ ತಿಳುವಳಿಕೆಯನ್ನು ನೀಡುತ್ತದೆ. ಅದು ಅಸಡ್ಡೆಯ ನೋಟವಾಗಲೀ, ಇಲ್ಲವೇ ಕೋಪವುಳ್ಳದ್ದಾಗಲೀ ಆಗಿರಲಿಲ್ಲವೆಂಬುದನ್ನು ನಾವು ಖಚಿತ ಮಾಡಿಕೊಳ್ಳಬಹುದು. ಅದು ಪ್ರೀತಿಮಯವಾದ ಅನುತಾಪವುಳ್ಳ ನೋಟವಾಗಿತ್ತು. ಅದು ಪೇತ್ರನ ಹೃದಯವನ್ನು ಕರಗಿಸಿತ್ತು. ಆತನು ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತಿದ್ದನು. ಈದಿನದಲ್ಲಿನ ಕರ್ತನ ಹಿಂಬಾಲಕರು ಬಲಹೀನತೆ ದೌರ್ಬಲ್ಯಗಳು ಹಾಗು ವಿರೋಧಿಯಾದ ಸೈತಾನನ ಶೋಧನೆಗಳಿಂದ ಆವರಿಸಲ್ಪಟ್ಟವರಾಗಿ ಆತ್ಮವಿಶ್ವಾಸವುಳ್ಳವರಾ–ಗಿರುವದಕ್ಕೆ ಬದಲಾಗಿ ಕರ್ತನಲ್ಲಿ ವಿಶ್ವಾಸವಿಟ್ಟು ಸಹಾಯಕ್ಕಾಗಿ ಆತನನ್ನು ಎದುರು ನೋಡುವವರಾಗಬೇಕೆಂಬುದನ್ನು ಪೇತ್ರನ ಅನುಭವದ ಮೂಲಕವಾದ ಪಾಠವನ್ನು ನಾವು ಎಚ್ಚರಿಕೆಯ ಮಾತಾಗಿ ತೆಗೆದುಕೊಳ್ಳಬೇಕು. ಅಲ್ಲದೆ ಈದಿನದಲ್ಲಿ [ಹಿಂಜರಿದು] ವಿಫಲರಾದವರು ಕರ್ತನ ಸಹಾನುಭೂತಿ ಹಾಗು ಕನಿಕರಗಳ ಬಗ್ಗೆ ಪೇತ್ರನಿಗಾದ ಅನುಭವದಲ್ಲಿನ ಒಂದು ಪಾಠವನ್ನು ಪಡೆದಿರುವರು. ತಾವೂ ಸಹ ತಮ್ಮ ಆಜ್ಞೆಮೀರಿದ ವಿಷಯದಲ್ಲಿ ಬಹಳವಾಗಿ ವ್ಯಥೆಪಟ್ಟು ಅತ್ತು ತಮಗಾದ ಅನುಭವಗಳಿಂದ ಪ್ರಯೋಜನವನ್ನು ಹೊಂದಬೇಕು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 14 | ಯೆರೂಸಲೇಮ್ | ಸಹಾಯಕನು, ಪರಸ್ಪರವಾದ ಪ್ರೀತಿ, ಶ್ರಮಸಂಕಟ, ಯೇಸುವಿನ ಪ್ರಾರ್ಥನೆ | -- | -- | -- | 14:1–17:26 |

# ಯೋಹಾನ 14:1–31

ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು. ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದದೆ ಅಂದನು.

ತೋಮನು ಆತನನ್ನು–ಸ್ವಾಮೀ, ನೀನು ಎಲ್ಲಿಗೆ ಹೋಗುತ್ತೀಯೋ ನಮಗೆ ತಿಳಿಯದು; ಮಾರ್ಗವು ಹೇಗೆ ತಿಳಿದೀತು ಎಂದು ಕೇಳಲು ಯೇಸು ಅವನಿಗೆ–ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ. ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನೂ ಅರಿಯುತ್ತಿದ್ದಿರಿ; ಈಗಿನಿಂದ ಆತನನ್ನು ಅರಿತುಕೊಂಡಿದ್ದೀರಿ; ಆತನನ್ನು ನೋಡಿದ್ದೀರಲ್ಲಾ ಎಂದು ಹೇಳಿದನು.

ಫಿಲಿಪ್ಪನು–ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು ಅಂದನು. ಯೇಸು ಅವನಿಗೆ–ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ. ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ. ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀನು ನಂಬುವದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವದಿಲ್ಲ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯೆಗಳನ್ನು ನಡೆಸುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ.

ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವ–ವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡೆಸುವನು. ಯಾಕಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ. ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು.

ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ. ಆಗ ನಾನು ತಂದೆಯನ್ನು

ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು.

ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ. ಇನ್ನು ಸ್ವಲ್ಪಕಾಲವಾದ ಮೇಲೆ ಲೋಕವು ನನ್ನನ್ನು ನೊಡುವದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವದರಿಂದ ನೀವೂ ಬದುಕುವಿರಿ. ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ. ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು.

ಯೂದನು [ಇವನು ಇಸ್ಕರಿಯೋತನಲ್ಲ]–ಸ್ವಾಮೀ, ನೀನು ಲೋಕಕ್ಕೆ ಕಾಣಿಸಿಕೊಳ್ಳದೆ ನಮಗೆ ಮಾತ್ರ ಕಾಣಿಸಿ–ಕೊಳ್ಳುವದಕ್ಕೆ ಏನು ಸಂಭವಿಸಿತು ಎಂದು ಕೇಳಿದ್ದಕ್ಕೆ ಯೇಸು ಅವನಿಗೆ–ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯೂ ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು. ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಕೊಂಡು ನಡೆಯುವದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ.

ಈ ಮಾತುಗಳನ್ನು ನಾನು ಇನ್ನೂ ನಿಮ್ಮ ಬಳಿಯಲ್ಲಿ ಇರುವಾಗ ನಿಮಗೆ ಹೇಳಿದ್ದೇನೆ. ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು.

ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ. ನಾನು ಹೋಗಿ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು ನಿಮಗೆ ಹೇಳಿದ್ದನ್ನು ಕೇಳಿದಿರಿ. ನೀವು ನನ್ನನ್ನು ಪ್ರೀತಿಸುವವರಾಗಿದ್ದರೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷ ಪಡುತ್ತಿದ್ದಿರಿ; ಯಾಕಂದರೆ ತಂದೆಯು ನನಗಿಂತ ದೊಡ್ಡವನು. ಅದೆಲ್ಲಾ ನಡೆಯುವಾಗ ನೀವು ನನ್ನನ್ನು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ. ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವದಿಲ್ಲ, ಯಾಕಂದರೆ ಇಹಲೋಕಾದಿಪತಿಯು ಬರುತ್ತಾನೆ. ಅವನಿಗೆ ಸಂಬಂಧಪಟ್ಟದ್ದು ಯಾವದೊಂದೂ ನನ್ನಲ್ಲಿಲ್ಲ; ಆದರೂ ನಾನು ತಂದೆಯನ್ನು ಪ್ರೀತಿಸುತ್ತೇನೆಂಬದು ಲೋಕಕ್ಕೆ ತಿಳಿದಿರಬೇಕೆಂದು ತಂದೆಯು ನನಗೆ ಕೊಟ್ಟ ಆಜ್ಞೆಯ ಮೇರೆಗೆ ಇದನ್ನು ಮಾಡುತ್ತೇನೆ. ಏಳಿರಿ, ಇಲ್ಲಿಂದ ಹೋಗೋಣ.

## ಯೋಹಾನ 15:1–27

ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲ ಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟುಹೋಗುತ್ತವೆ. ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ.

ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ.

ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನಾನು ಕೊಡುವ ಆಜ್ಞೆಯಾಗಿದೆ. ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ. ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು; ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳನ್ನುವದಿಲ್ಲ; ಯಜಮಾನನು ಮಾಡುವಂಥದು ಆಳಿಗೆ ತಿಳಿಯುವದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ. ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ ನೀವು

ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ. ಹೀಗಿರಲಾಗಿ ನನ್ನ ಹೆಸರಿನಲ್ಲಿ ತಂದೆಯನ್ನು ಏನೇನು ಬೇಡಿಕೊಳ್ಳುವಿರೋ ಅದನ್ನು ಆತನು ನಿಮಗೆ ಕೊಡುವನು.

ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕಂತಲೇ ಇವುಗಳನ್ನು ನಿಮಗೆ ಆಜ್ಞಾಪಿಸುತ್ತೇನೆ. ಲೋಕವು ನಿಮ್ಮ ಮೇಲೆ ದ್ವೇಷ ಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯ ವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು. ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. ಧಣಿಗಿಂತ ಆಳು ದೊಡ್ಡವನಲ್ಲವೆಂಬದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಕೈಕೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು. ಆದರೆ ಅವರು ನನ್ನನ್ನು ಕಳುಹಿಸಿಕೊಟ್ಟಾತನನ್ನು ತಿಳಿಯದವರಾದದರಿಂದ ಇದನ್ನೆಲ್ಲಾ ನನ್ನ ಹೆಸರಿನ ನಿಮಿತ್ತ ನಿಮಗೆ ಮಾಡುವರು. ನಾನು ಬಂದು ಅವರ ಕೂಡ ಮಾತನಾಡದಿದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಅವರು ಮಾಡಿದ ಪಾಪಕ್ಕಾಗಿ ಅವರಿಗೆ ಈಗ ನೆವವಿಲ್ಲ. ನನ್ನ ಮೇಲೆ ದ್ವೇಷ ಮಾಡುವವನು ನನ್ನ ತಂದೆಯ ಮೇಲೆಯೂ ದ್ವೇಷಮಾಡುವವನಾಗಿದ್ದಾನೆ. ಮತ್ತಾರೂ ನಡಿಸದ ಕ್ರಿಯೆಗಳನ್ನು ನಾನು ಅವರಲ್ಲಿ ನಡಸದೆ ಇದ್ದರೆ ಅವರಿಗೆ ಪಾಪವು ಇರುತ್ತಿದ್ದಿಲ್ಲ; ಆದರೆ ಈಗ ಅವರು ನೋಡಿದ್ದಾರೆ, ಆದರೂ ನನ್ನ ಮೇಲೆಯೂ ತನ್ನ ತಂದೆಯ ಮೇಲೆಯೂ ದ್ವೇಷಮಾಡಿದ್ದಾರೆ. ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿಸಿದರು ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು ನೆರವೇರುವಂತೆ ಹೀಗಾಯಿತು.

ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿ ಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿಹೇಳುವನು. ನೀವು ಮೊದಲಿನಿಂದ ನನ್ನ ಸಂಗಡ ಇದ್ದಕಾರಣ ನೀವೂ ಸಾಕ್ಷಿಗಳಾಗಿದ್ದೀರಿ.

## ಯೋಹಾನ 16:1–33

ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ. ಅವರು ತಂದೆಯನ್ನಾದರೂ ನನ್ನನ್ನಾದರೂ ತಿಳಿಯದವರಾಗಿರುವ–ದರಿಂದ ಇಂಥದನ್ನು ನಿಮಗೆ ಮಾಡುವರು. ಆ ಕಾಲ ಬಂದಾಗ ಆತನು ನಮಗೆ ಇಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ.

ನಾನು ನಿಮ್ಮ ಸಂಗಡ ಇದ್ದದರಿಂದ ಮೊದಲು ಇವುಗಳನ್ನು ನಿಮಗೆ ಹೇಳಲಿಲ್ಲ. ಆದರೆ ಈಗ ನಾನು ನನ್ನನ್ನು ಕಳುಹಿಸಿ–ಕೊಟ್ಟಾತನ ಬಳಿಗೆ ಹೋಗುತ್ತೇನೆ. ನೀನು ಎಲ್ಲಿಗೆ ಹೋಗುತ್ತೀ ಎಂದು ನಿಮ್ಮಲ್ಲಿ ಒಬ್ಬನಾದರೂ ನನ್ನನ್ನು ಕೇಳುವದಿಲ್ಲ; ಆದರೆ ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದರಿಂದ ನಿಮ್ಮ ಹೃದಯವು ದುಃಖದಿಂದ ತುಂಬಿಯದೆ. ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆತನು ಬಂದು ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೆ ಇರುವದ–ರಿಂದ ಪಾಪದ ವಿಷಯದಲ್ಲಿಯೂ ನಾನು ತಂದೆಯ ಬಳಿಗೆ ಹೋಗಿ ಇನ್ನು ಮೇಲೆ ನಿಮಗೆ ಕಾಣಿಸದೇ ಇರುವದರಿಂದ ನೀತಿಯ ವಿಷಯದಲ್ಲಿಯೂ ಇಹಲೋಕಾಧಿಪತಿಗೆ ನ್ಯಾಯತೀರ್ವಿಕೆಯಾದದರಿಂದ ನ್ಯಾಯತೀರ್ವಿಕೆಯ ವಿಷಯ ದಲ್ಲಿಯೂ ಲೋಕಕ್ಕೆ ಅರುಹನ್ನು ಹುಟ್ಟಿಸುವನು.

ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯ ದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವದೆಲ್ಲಾ ನನ್ನದು; ಆದದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು. ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ; ಅನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅಂದನು.

ಇದನ್ನು ಕೇಳಿ ಆತನ ಶಿಷ್ಯರಲ್ಲಿ ಕೆಲವರು–ಇದೇನು ಈತನು ಹೇಳುವ ಮಾತು? ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ, ಆನಂತರ ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಅನ್ನುತ್ತಾನೆ; ಮತ್ತು ನಾನು ತಂದೆಯ ಬಳಿಗೆ ಹೋಗುವದರಿಂದ ಅನ್ನುತ್ತಾನೆ ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡು–ಸ್ವಲ್ಪಕಾಲವೆಂದು ಈತನು ಹೇಳುವ ಈ ಮಾತೇನು? ಏನು ಮಾತಾಡುತ್ತಾನೋ ನಮಗೆ ತಿಳಿಯದು ಅಂದುಕೊಳ್ಳುತ್ತಿದ್ದರು. ಯೇಸು ತನ್ನನ್ನು ಕೇಳಬೇಕೆಂದಿ–ದ್ದಾರೆಂದು ತಿಳಿದು ಅವರಿಗೆ–ಸ್ವಲ್ಪಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ, ಇನ್ನು ಸ್ವಲ್ಪಕಾಲವಾದ ಮೇಲೆ ನನ್ನನ್ನು ನೋಡುವಿರಿ ಎಂದು ನಾನು ಹೇಳಿದಕ್ಕೆ ನೀವು ನಿಮ್ಮ ನಿಮ್ಮೊಳಗೆ ವಿಚಾರಿಸಿಕೊಳ್ಳುತ್ತೀರಾ? ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ಅಳುತ್ತಾ ಗೋಳಾಡುತ್ತಾ ಇರುವಿರಿ, ಆದರೆ ಲೋಕವು ಸಂತೋಷಿಸುವದು; ನಿಮಗೆ ದುಃಖವಾಗುವದು, ಆದರೆ ನಿಮ್ಮ ದುಃಖವು ಹೋಗಿ ಆನಂದ ಬರುವದು. ಒಬ್ಬ ಸ್ತ್ರೀ ಹೆರುವಾಗ ತನ್ನ ಬೇನೆಯ ಕಾಲ ಬಂತೆಂದು ಆಕೆಗೆ ದುಃಖವಾಗುತ್ತದೆ; ಆದರೆ

ಕೂಸನ್ನು ಹೆತ್ತ ಮೇಲೆ ಲೋಕದಲ್ಲಿ ಒಬ್ಬ ಮನುಷ್ಯನು ಹುಟ್ಟಿದನೆಂಬ ಆನಂದದಿಂದ ಆ ಬೇನೆಯನ್ನು ನೆನಸುವದಿಲ್ಲ. ಹಾಗೆಯೇ ನಿಮಗೂ ಈಗ ದುಃಖವಿದ್ದರೂ ನಾನು ನಿಮ್ಮನ್ನು ತಿರಿಗಿ ನೋಡುವೆನು, ಆಗ ನಿಮ್ಮ ಹೃದಯಕ್ಕೆ ಆನಂದವಾಗುವದು, ಮತ್ತು ನಿಮ್ಮ ಆನಂದವನ್ನು ಯಾರೂ ನಿಮ್ಮಿಂದ ತೆಗೆಯುವದಿಲ್ಲ. ಆ ದಿನದಲ್ಲಿ ನೀವು ನನಗೆ ಯಾವ ಪ್ರಶ್ನೆಯನ್ನೂ ಮಾಡುವದಿಲ್ಲ.

ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವುದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ ನಿಮಗೆ ಸಿಕ್ಕುವದು, ಆಗ ನಿಮ್ಮ ಆನಂದವು ಪರಿಪೂರ್ಣ – ವಾಗುವದು.

ಈ ಸಂಗತಿಗಳನ್ನು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ; ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮಾತಾಡದೆ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವ ಕಾಲಬರುತ್ತದೆ. ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳುವಿರಿ. ನಾನು ತಂದೆಯನ್ನು ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವದಿಲ್ಲ; ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟು ಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ. ತಂದೆಯ ಬಳಿಯಿಂದ ಹೊರಟು ಈ ಲೋಕಕ್ಕೆ ಬಂದಿದ್ದೇನೆ; ಇನ್ನು ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುತ್ತೇನೆ ಅಂದನು.

ಆದರೆ ಶಿಷ್ಯರು–ನೀನು ಹೇಳುವ ಸಂಗತಿಯನ್ನು ಈಗ ಗೂಢಾರ್ಥವಾಗಿ ಹೇಳದೆ ಸ್ಪಷ್ಟವಾಗಿ ಮಾತಾಡುತ್ತೀಯಲ್ಲಾ; ನೀನು ಸಮಸ್ತವನ್ನು ತಿಳಿದವನೆಂದೂ ನಿನಗೆ ಪ್ರಶ್ನೆಮಾಡಬೇಕಾದ ಅವಶ್ಯವಿಲ್ಲವೆಂದೂ ಈಗ ತಿಳಿಯಿತು; ಇದರಿಂದ ನಿನ್ನನ್ನು ದೇವರ ಬಳಿಯಿಂದ ಬಂದವನೆಂದು ನಂಬುತ್ತೇವೆ ಅಂದದ್ದಕ್ಕೆ ಯೇಸು– ಈಗ ನಂಬುತ್ತೀರೋ? ನೋಡಿರಿ, ನಿಮ್ಮಲ್ಲಿ ಒಬ್ಬೊಬ್ಬನೂ ತನ್ನತನ್ನ ಸ್ಥಳಕ್ಕೆ ಚದರಿ ಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು, ಈಗ ಬಂದಿದೆ. ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ. ನೀವು ನನ್ನಲ್ಲಿದ್ದು ಮನಶ್ಶಾಂತಿಯನ್ನು ಹೊಂದಿದವರಾಗಿರಬೇಕೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರ್‍ರಿ, ನಾನು ಲೋಕವನ್ನು ಜಯಿಸಿದ್ದೇನೆ ಎಂದು ಹೇಳಿದನು.

## ಯೋಹಾನ 17:1–26

ಯೇಸು ಈ ಮಾತುಗಳನ್ನು ಆಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನಂದರೆ–ತಂದೆಯೇ, ಕಾಲ ಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆ ಪಡಿಸುವದಕ್ಕಾಗುವದು. ನೀನು ಅವನಿಗೆ ಯಾರಾರನ್ನು ಕೊಟ್ಟಿದ್ದೀಯೋ ಅವರೆಲ್ಲರಿಗೆ ಅವನು ನಿತ್ಯಜೀವವನ್ನು ಕೊಡಬೇಕೆಂದು ಅವನಿಗೆ ಎಲ್ಲಾ ಮನುಷ್ಯರ ಮೇಲೆ ಅಧಿಕಾರ ವನ್ನು ಕೊಟ್ಟಿಯಲ್ಲಾ. ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು. ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸಿ – ದೆನು. ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು.

ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ ನಿನ್ನ ಹೆಸರನ್ನು ತಿಳಿಯಪಡಿಸಿದೆನು. ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟೆ; ಮತ್ತು ಇವರು ನಿನ್ನ ವಾಕ್ಯವನ್ನು ಕೈಕೊಂಡು ನಡೆದಿದ್ದಾರೆ. ನೀನು ನನಗೆ ಕೊಟ್ಟದ್ದೆಲ್ಲಾ ನಿನ್ನಿಂದಲೇ ಬಂದದೆ ಎಂದು ಈಗ ಇವರು ತಿಳುಕೊಂಡಿದ್ದಾರೆ. ಹೇಗಂದರೆ ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಇವರಿಗೆ ಕೊಟ್ಟಿದ್ದೇನೆ; ಇವರು ಆ ಮಾತುಗಳನ್ನು ಕೈಕೊಂಡು ನನ್ನನ್ನು ನಿನ್ನ ಬಳಿಯಿಂದ ಹೊರಟು ಬಂದವನೆಂದು ನಿಜವಾಗಿ ತಿಳಿದು ನೀನೇ ನನ್ನನ್ನು ಕಳುಹಿಸಿ ಕೊಟ್ಟಿರುವದಾಗಿ ನಂಬಿದ್ದಾರೆ. ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ; ನಿನ್ನವರಾಗಿದ್ದಾರೆ. ನನ್ನದೆಲ್ಲಾ ನಿನ್ನದೇ, ನಿನ್ನದೆಲ್ಲಾ ನನ್ನದೇ; ಮತ್ತು ಇವರಿಂದ ನನಗೆ ಮಹಿಮೆ ಉಂಟಾಗಿದೆ. ಇನ್ನು ನಾನು ಲೋಕದಲ್ಲಿ ಇರುವದಿಲ್ಲ, ಇವರು ಲೋಕದಲ್ಲಿ ಇರುತ್ತಾರೆ, ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ, ನಾವು ಒಂದಾಗಿರುವ ಹಾಗೆಯೇ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು. ನಾನು ಇವರ ಸಂಗಡ ಇದ್ದಾಗ ನೀನು ನನಗೆ ಕೊಟ್ಟಿರುವ ನಿನ್ನ ಹೆಸರಿನಲ್ಲಿ ಇವರನ್ನು ಕಾಯುತ್ತಾ ಬಂದೆನು, ಇವರನ್ನು ಕಾಪಾಡಿದೆನು; ಶಾಸ್ತ್ರದ ಮಾತು ನೆರವೇರುವಂತೆ ನಾಶಕ್ಕೆ ಗುರಿಯಾದ ಆ ಮನುಷ್ಯನೇ ಹೊರತು ಇವರಲ್ಲಿ ಮತ್ತಾರೂ ನಾಶವಾಗಲಿಲ್ಲ. ಆದರೆ ಈಗ ನಿನ್ನ ಬಳಿಗೆ ಬರುವವನಾಗಿದ್ದೇನೆ; ಆದದರಿಂದ ಇವರಲ್ಲಿ ನನ್ನ ಆನಂದವು ಪರಿಪೂರ್ಣವಾಗಿರುವಂತೆ ಲೋಕದಲ್ಲಿದ್ದು ಈ ಮಾತುಗಳನ್ನು ಆಡುತ್ತೇನೆ. ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ; ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ; ಆದಕಾರಣ ಲೋಕವು ಇವರ ಮೇಲೆ ದ್ವೇಷಮಾಡಿ ಅದೆ. ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು. ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನು ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು. ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ.

ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು

ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದು ಬರುವದು. ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ. ನೀತಿಸ್ವರೂಪನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ, ಆದರೆ ನಾನು ನಿನ್ನನ್ನು ತಿಳಿದಿದ್ದೇನೆ; ಮತ್ತು ಇವರು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ತಿಳುಕೊಂಡಿದ್ದಾರೆ. ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ, ಇನ್ನೂ ತಿಳಿಸುವೆನು. ನೀನು ನನ್ನ ಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂದೂ ನಾನೂ ಅವರಲ್ಲಿ ಇರಬೇಕೆಂದೂ ಪ್ರಾರ್ಥಿಸುತ್ತೇನೆ ಅಂದನು.

# ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ

**ರೀಪ್ರಿಂಟ್ಸ್ ಪುಟ 2453**

## ಯೋಹಾನ 14:1–14

ಶಿಷ್ಯರ ಕಾಲುಗಳನ್ನು ತೊಳೆದ ಮೇಲೆ, ಮತ್ತು ತುತ್ತನ್ನು ಅದ್ದಿ ಯೂದನಿಗೆ ಕೊಟ್ಟ ನಂತರದಲ್ಲಿ, ಹಾಗು ಆತನು ಹೊರಗೆ ಹೋದ ನಂತರ; ಅಲ್ಲದೆ ಶಿಷ್ಯರಿಗೆ–ಅವರೆಲ್ಲರೂ ಆ ರಾತ್ರಿ ತನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವರೆಂದು ಹೇಳಿದ ನಂತರ, ಹಾಗೂ ಪೇತ್ರನಿಗೆ ಆತನು ಕೋಳಿ ಕೂಗುವದಕ್ಕಿಂತ ಮೊದಲು ತನ್ನನ್ನು ಅರಿಯನೆಂದು ಮೂರು ಸಾರಿ ಹೇಳುವನೆಂದು ಉತ್ತರಿಸಿದ ಮೇಲೆ ಆ ಹನ್ನೊಂದು ಮಂದಿಯ ಹೃದಯವು ಭಾರವಾಗಿ ವಿಚಲಿತಗೊಂಡು ಅಶುಭ ಸೂಚನೆಯ ದೆಸೆಯಿಂದ ತೊಂದರೆಗೆ ಈಡಾಗಿತ್ತೆಂಬುದನ್ನು ನಾವು ಚೆನ್ನಾಗಿ ಭಾವಿಸಿಕೊಳ್ಳಬಹುದು. ತಾನು ದೇವರ ರಾಜ್ಯಕ್ಕೆ ಬಾಧ್ಯನಾದ ಮೆಸ್ಸೀಯನೆಂದೂ ಶಿಷ್ಯರು ತನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳಬೇಕೆಂದೂ ಹೇಳಿದ್ದಾಗ ಅವರು ನಿಜವಾಗಿಯೂ ಮೋಸಹೋಗಿದ್ದರೋ ಅಥವಾ ತಮ್ಮ ಒಡೆಯನನ್ನು ಅಪಾರ್ಥ ಮಾಡಿಕೊಂಡಿದ್ದರೋ? ಕೇವಲ ಐದು ದಿನಗಳ ಹಿಂದೆ ಆತನು ಕತ್ತೆಯ ಮೇಲೆ ಕುಳಿತುಕೊಂಡು ಬರುವಾಗ ಇಸ್ರಾಯೇಲಿನ ಅರಸನಾದ ದಾವೀದನ ಕುಮಾರನಿಗೆ ಹೊಸನ್ನಾ ಎಂದು ಹೇಳುವದರ ಮುಖಾಂತರವಾಗಿ ಜನರ ಗುಂಪಿನಿಂದ ಸ್ವೀಕರಿಸಲ್ಪಟ್ಟಿದ್ದಾಗ ಆತನ ಮಾತನ್ನು ಅವರು ಹೇಗೆ ವ್ಯಾಖ್ಯಾನಿಸಿರಲು ಸಾಧ್ಯ? ಒಡೆಯನು ಆಗ ಸಾಯುವಷ್ಟು ದುಃಖಕ್ಕೆ ಒಳಗಾಗಿ ತನ್ನನ್ನು ಹಿಡುಕೊಡುವದರ ಹಾಗು ಅವರು ಚದುರಿಸಲ್ಪಡುವದರ ಮತ್ತು ತನ್ನ ಮರಣದ ಬಗ್ಗೆ ಹೇಳುವಾಗ ಅದು ಅವರಿಗೆ ಹೇಗೆ ಅರ್ಥವಾಗಿರಲು ಸಾಧ್ಯವಿತ್ತು?

ಗೊಂದಲಮಯವಾದ ಅವರ ಈ ಆಲೋಚನೆಗಳಿಗೆ ಉತ್ತರವಾಗಿ ನಮ್ಮ ಕರ್ತನು ಯೋಹಾನ ಸುವಾರ್ತೆಯಲ್ಲಿನ ಅಧ್ಯಾಯ 14, 15, 16, ಹಾಗು 17ರಲ್ಲಿರುವ ಆದರಣಾಪೂರ್ವಕವಾದ ಸಂತೈಸುವ ಮಾತನ್ನು ಆರಂಭಿಸಿ ಹೀಗೆ ಹೇಳಿದ್ದು–"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ."

ಅಪೋಸ್ತಲರು ತಾವು ಯೇಸುವಿನೊಡನೆ ಸಂಪರ್ಕಕ್ಕೆ ಬರುವದಕ್ಕೆ ಮೊದಲೇ ದೇವರಿಗೆ ಆತನ ಸೇವಕರಾಗಿ ಪ್ರತಿಷ್ಠಿತರಾಗಿದ್ದರು; ಅವರು ಆಗಲೇ ದೇವರನ್ನು ನಂಬಿ ಆತನಲ್ಲಿ ಭರವಸೆಯಿಟ್ಟು ನಿಜವಾದ ಇಸ್ರಾಯೇಲ್ಯರಾಗಿ ಕಪಟವಿಲ್ಲದ – ವರಾಗಿದ್ದರು. ಮುಂದೆ ಇದು ನಮ್ಮ ಕರ್ತನು ಮಾಡಿದ ಪ್ರಾರ್ಥನೆಯಲ್ಲಿ ಮತ್ತೂ ಪ್ರಮಾಣಗೊಂಡಿರುವದು. ಅದರಲ್ಲಿ ಹೇಳಿರುವದೇನಂದರೆ, "ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟ;" ಅವರ ಹೃದಯವು ಗೊಂದಲವಾಗಿದ್ದುದು ತಮ್ಮ ನಿರೀಕ್ಷೆಗೆ ಆಧಾರವಾಗಿದ್ದ ವಿಷಯದ ಮೇಲಾಗಿರಲಿಲ್ಲ, ಯಾಕಂದರೆ ಇವರೆಲ್ಲರೂ ಸ್ಥಿರವಾಗಿದ್ದರು. ಅವರು ದೇವರನ್ನು ತಿಳಿದುಕೊಂಡು ಆತನಲ್ಲಿ ಭರವಸೆಯುಳ್ಳವರಾಗಿರುವದು ಮಾತ್ರವಲ್ಲದೆ ದೇವರ ರಾಜ್ಯದ ಮತ್ತು ಅದರ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳಿಗೆ ಬರಬೇಕಿರುವ ಆಶೀರ್ವಾದ ಸಂಬಂಧವಾದ ದೇವರ ವಾಗ್ದಾನಗಳ ಬಗ್ಗೆ ಸಹ ಅರಿತವರಾಗಿ ಅವುಗಳಲ್ಲಿ ಬರವಸೆಯಿಟ್ಟಿದ್ದರು. ತಮ್ಮ ಮನಸ್ಸುಗಳ ಮುಂದಿದ್ದ ಇಡೀ ಪ್ರಶ್ನೆ ಏನಂದರೆ ಅದು ಯೇಸುವಿನ ವಿಷಯವಾಗಿ, ಅದೇನಂದರೆ– ಆತನು ನಿಜವಾಗಿಯೂ ಮೆಸ್ಸೀಯನೋ, ಅಥವಾ ಆತನ ಅದ್ಭುತವಾದ ನಡೆನುಡಿಗಳ ಬಗ್ಗೆ ಅವರು ತಪ್ಪಾದ ನಿರೀಕ್ಷೆಯಲ್ಲಿದ್ದರೋ? ಅವರು ನಿರೀಕ್ಷಿಸಿದಂತೆ ಆತನು ಸಮಸ್ತವನ್ನು ತನಗೆ ಅಧೀನಮಾಡಿಕೊಂಡು ದೇವರ ರಾಜ್ಯವನ್ನು ಸ್ಥಾಪಿಸುವದಕ್ಕೆ ಬದಲಾಗಿ ತನ್ನ ಮೂರುವರೆ ವರುಷದ ಸೇವೆಯ ನಂತರ ತನ್ನ ಶತೃಗಳ ಕೈಯಿಂದ ಮರಣವನ್ನು ಹೊಂದಬೇಕಿರುವದೆಂದು ಆಗ ಆತನು ಹೇಳುವಾಗ ಅವರು

ಅದನ್ನು ಹೇಗೆ ಅರ್ಥವಾಡಿಕೊಳ್ಳಬೇಕಿತ್ತು. ತಾನು ಹೊರಟುಹೋಗುವದಾಗಿ ಆತನು ತಿಳಿಸಿ ತಾನು ಹೋಗುವಲ್ಲಿಗೆ ಅವರು ಬರಲು ಸಾಧ್ಯವಾಗದೆಂದು ಹೇಳಿದ್ದನು. ಈ ಸಂಗತಿಗಳನ್ನು ಅವರು ಗ್ರಹಿಸಿಕೊಂಡು ಅವುಗಳನ್ನು ಹೊಂದಾಣಿಸಿಕೊಳ್ಳಬೇಕಿದ್ದರೂ ಅದು ಹೇಗೆ?

ತನ್ನ ಸೇವೆಯ ಆರಂಭದಲ್ಲಿ ನಮ್ಮ ಕರ್ತನು ನಿಕೋದೇಮನಿಗೆ ಸಂಭೋದಿಸಿ ಹೇಳಿದ ಆ ಮಾತಿನ ಅರ್ಥವನ್ನು ಆವರು ಇನ್ನೂ ಕಲಿತುಕೊಂಡಿರಲಿಲ್ಲ, ಅದೇನಂದರೆ – "...ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು..." – "...ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು." (ಯೋಹಾನ 3:3,5) ಆದರೆ ಇವುಗಳು ಆತ್ಮಿಕ ಸತ್ಯಾರ್ಥ ಗಳಾಗಿದ್ದು ಪಂಚಾಶತ್ತಮ ದಿನದಂದು ಅವರಿಗೆ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟು ದೇವರ ಯೋಜನೆಯ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೊಂದಿಗೆ ತಿಳಿದುಕೊಳ್ಳಲು ಅನುಗ್ರಹವಾಗುವವರೆಗೂ ಅವುಗಳನ್ನು ಅರಿತುಕೊಳ್ಳಲು ಅವರಿಗೆ ಸಾಧ್ಯವಿರಲಿಲ್ಲ. ಆದರೆ ಅವರಿಗೆ ಕೆಲವು ಆದರಣೆಯ ಅಗತ್ಯವಿದ್ದು ಒಡೆಯನು ಅವರು ಹೊಂದಲು ಅಶಕ್ಯವಾದ ಅತ್ಯುತ್ತಮವೂ ಬಹು ಧೃಡವೂ ಆದ ಆತ್ಮಿಕ ಆಹಾರ ಅಂದರೆ ತಿಳುವಳಿಕೆ ಶಿಕ್ಷಣಗಳನ್ನು ನೀಡಿದ್ದನು. ಅವರಿಗೆ ಹೇಳುವದಕ್ಕೆ ಆತನಿಗೆ ಇನ್ನೂ ಅನೇಕ ಸಂಗತಿಗಳಿದ್ದವು, ಆದರೆ ಪವಿತ್ರಾತ್ಮನಿಂದ ಅಭಿಷೇಕವಾಗಿ ಅವರ ಹೃದಯಗಳು ಸಿದ್ಧಗೊಳಿಸಲ್ಪಡುವವರೆಗೂ ಅವುಗಳನ್ನು ಹೊರಲು ಅಂದರೆ ಅವುಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಆಗ ಸಾಧ್ಯವಿರಲಿಲ್ಲ.

ತಂದೆಯ ಮೇಲಿನ ಮತ್ತು ಆತನ ಯೋಜನೆಯ ಮೇಲಿನ ಅವರ ನಂಬಿಕೆಯನ್ನು ಪುನಶ್ಚೇತನಗೊಳಿಸಲು ಆರಂಭಿಸುವ–ವನಾಗಿ ನಮ್ಮ ಕರ್ತನು ಹೀಗೆ ಹೇಳಿದ್ದನು–ನೀವು ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ: ತಂದೆಯ ಸಂಕಲ್ಪಗಳೆಲ್ಲವೂ ಪೂರ್ಣಗೊಳ್ಳುವದೆಂಬ ಅಂಶವನ್ನು ಗುರುತಿಸಿಕೊಳ್ಳಿರಿ, ಅಲ್ಲದೆ ನೀವು ನನ್ನ ನಡೆನುಡಿಗಳಲ್ಲಿ ತಂದೆಯ ಕಡೆಗಿರುವ ನನ್ನ ನಿಷ್ಠೆಯನ್ನು ನೋಡಿರುವದರಿಂದ ಹಾಗು ನನ್ನ ಸತ್ಕಾರ್ಯಗಳಲ್ಲಿ ತೋರಿಬಂದ ನನ್ನ ತಂದೆಯ ಶಕ್ತಿಸಾಮರ್ಥ್ಯವನ್ನು ನೀವು ನೋಡಿರುವದರಿಂದಲೂ ನಂಬಿಕೆಯೆಂಬ ಲಂಗರನ್ನು ಭದ್ರವಾಗಿ ಹಿಡಿದುಕೊಂಡವರಾಗಿರ್ರಿ; ನನ್ನಲ್ಲಿ ಬರವಸವಿಡುವದನ್ನು ಮುಂದುವರೆಸಿರಿ, ಆತ್ಮವಿಶ್ವಾಸವುಳ್ಳವರಾಗಿ ಮುಂದೆ ಸಾಗಿರಿ, ಆಗ ನೀವು ಆಶೀರ್ವಾದವನ್ನು ಪಡೆಯುವಿರಿ; ದೇವರ ಯೋಜನೆಯು ಅಭಿವೃದ್ಧಿಯಾಗುವದಕ್ಕೆ ಕಾದುಕೊಂಡಿರ್ರಿ, ಅದು ನಿಮ್ಮ ಅತ್ಯುನ್ನತ ನಿರೀಕ್ಷೆಯನ್ನು ಹೇರಳವಾಗಿ ಸಂತೃಪ್ತಿಪಡಿಸುವದು. ನಾನು ಹೊರಟಹೋಗುತ್ತೇನೆ ಅಂದರೆ ತಂದೆಯ ಬಳಿಗೆ ಹೋಗುತ್ತೇನೆ ಎಂದು ಹೇಳಿದ್ದರಿಂದ ನೀವು ದಿಗ್ಭ್ರಾಂತರಾಗಿರುವಿರಿ. ಆದರೆ ನಾನು ಹೋಗುವದು ನಿಮ್ಮ ಹಿತಾಸಕ್ತಿಯಿಂದಲೇ ಎಂಬುದನ್ನು ನಾನು ವಿವರಿಸಿ ಹೇಳುವವನಾಗಿರುವೆನು. ಅನೇಕ ಬಿಡಾರಗಳಿರುವ ನನ್ನ ತಂದೆಯ ಮನೆಯಲ್ಲಿ ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ನಾನು ಹೋಗುವೆನು. ನಾನು ಅದನ್ನು ಸಿದ್ಧಮಾಡಿ ನಿಶ್ಚಿತಪಡಿಸಿಕೊಂಡ ಮೇಲೆ ನಾನು ತಿರಿಗಿ ಬಂದು ನಿಮ್ಮನ್ನು ನನ್ನ ಬಳಿಗೆ ಸೇರಿಸಿ ಕೊಳ್ಳುವೆನು; ಹೀಗಾಗಿ ಇನ್ನು ಮೇಲೆ ನಾವು ಯಾವಾಗಲೂ ಜೊತೆಯಲ್ಲಿರುವೆವು.

ಹೀಗೆ ಕೆಲವೇ ಮಾತುಗಳಲ್ಲಿ ಒಡೆಯನು ಸುವಾರ್ತಾ ಯುಗದ ಕಾರ್ಯವನ್ನು ಅಂದರೆ ತನ್ನ ಎರಡನೇ ಬರುವಿಕೆಯನ್ನು ಹಾಗು ಈ [ಸುವಾರ್ತಾ] ಯುಗದ ಅಂತ್ಯದಲ್ಲಿ ಕ್ರೈಸ್ತಸಭೆಯು ಮಹಿಮಾ ಪದವಿಗೆ ಸೇರುವದನ್ನು ಪ್ರಕಟಮಾಡಿ ಹೇಳಿದ್ದನು, ಅವರು ದಾಟಿಬರಬೇಕಿರುವ ನಂಬಿಕೆಯ ಹಾಗು ತಾಳ್ಮೆಯ ವಿಷಯದಲ್ಲಿನ ಪರೀಕ್ಷೆಯ ಬಗ್ಗೆ ಸುದೀರ್ಘವಾದ ವಿವರಣೆಯನ್ನು ಇಲ್ಲಿ ನೀಡಲಿಲ್ಲ, ಇದನ್ನು ಆತನು ಮತ್ತೊಂದು ಸಂದರ್ಭದಲ್ಲಿ ಮುನ್ನೆಚ್ಚರಿಕೆಯಾಗಿ ಹೇಳಿ ಜಾಗರೂಕರಾಗಿರು–ವಂತೆ ಮಾಡಿದ್ದನು (ಮತ್ತಾಯ 24ನೇ ಅಧ್ಯಾಯ); ಆಗ ಅವರ ಹೃದಯವು ಗೊಂದಲಕ್ಕೀಡಾಗಿತ್ತು, ಹಾಗು ತಾನು ಹೋಗುವದು ಅಗತ್ಯವಾಗಿರುವದೆಂದೂ, ತನ್ನ ಎರಡನೇ ಬರುವಿಕೆಯು ಖಚಿತವಾಗಿರುವದೆಂದು ಎಲ್ಲರನ್ನು ಸಿದ್ಧಪಡಿಸಲಾದ ಬಿಡಾರ–ಗಳಲ್ಲಿ ತನ್ನೊಡನೆ ನಿತ್ಯವಾದ ಅನ್ಯೋನ್ಯತೆಗೆ ಸೇರಿಸಿಕೊಳ್ಳುವದು ಖಂಡಿತವೆಂದು ಅವರಿಗೆ ಕೇವಲ ಭರವಸೆ ನೀಡುವದರ ಮೂಲಕವಾಗಿ ಅವರನ್ನು ಸಂತೈಸುವನಾಗಿದ್ದನು.

ತಂದೆಯ ಮನೆಯು ನಿಜವಾಗಿಯೂ ಈ ವಿಶ್ವವೇ ಆಗಿದ್ದು, ಸಾಂಕೇತಿಕವಾಗಿ ಹೇಳುವದಾದರೆ ಆಕಾಶವು ಆತನ ಸಿಂಹಾಸನವಾಗಿ ಭೂಮಿಯು ಆತನ ಪಾದಪೀಠವಾಗಿರುವದು. ದೇವರು ಮುಂದಾಗಿಮಾಡಿರುವ ಏರ್ಪಾಟಿನ ಪ್ರಕಾರವಾಗಿ ದೇವರ ಮಕ್ಕಳೆಲ್ಲರಿಗೆ ನಿರಂತರ ಆಶೀರ್ವಾದವುಳ್ಳವುಗಳನ್ನು ಯಥೇಚ್ಛವಾಗಿ ದೊರಕುವಂತೆ ಮಾಡಲಾಗಿರುವದು. ದೈವೀಕ ಮುನ್ನೇರ್ಪಾಟಿನ ಪ್ರಕಾರ ಮಾನವನು [ಪರಿಪೂರ್ಣತೆಯಿಂದ] ಬಿದ್ದುಹೋದುದಕ್ಕೆ ಮೊದಲು ದೇವರೊಂದಿಗೆ ಹೊಂದಾಣಿಕೆ–ಯಲ್ಲಿದ್ದಾಗ ಒಂದು ಏರ್ಪಾಟನ್ನು ಮಾಡಲಾಗಿತ್ತು; ಆದರೆ ಪಾಪದ ಕಾರಣದಿಂದಾಗಿ ನೀತಿವಂತರಿಗಿರುವ ನಿತ್ಯನಿವಾಸದಲ್ಲಿ ಒಂದು ಸ್ಥಾನಹೊಂದುವ ಹಕ್ಕುಗಳೆಲ್ಲವು ರದ್ದಾಗಿಹೋಗಿದ್ದವು. ನಮ್ಮ ಪ್ರಿಯ ವಿಮೋಚಕನು ಸಂದೇಶ ನೀಡಿದ ಸಮಯದಲ್ಲಿ ಮಾನವನನ್ನು ಹಾಗು ಆತನು ಕಳೆದುಕೊಂಡ ಹಕ್ಕುಬಾಧ್ಯತೆ–ಗಳೆಲ್ಲವನ್ನು ವಿಮೋಚಿಸಿ [ಹಿಂದಿರುಗಿಸಿ] ಕೊಡುವ ಉದ್ದೇಶ–ಕ್ಕಾಗಿಯೇ ಲೋಕದಲ್ಲಿದ್ದನು. (ಲೂಕ 19:10; ಎಫೆಸ್ಸ 1:14) ಆ ವಿಮೋಚನೆಯು ಇನ್ನೂ ಪೂರ್ಣಗೊಂಡಿರಲಿಲ್ಲ–ಅಂದರೆ ನಮ್ಮ ಕರ್ತನು ಇದರ ಸಲುವಾದ ಏರ್ಪಾಟುಗಳನ್ನು ಕೆಲವೇ ಗಂಟೆ–ಗಳಲ್ಲಿ ಕಲ್ವಾರಿಯಲ್ಲಿ ಪೂರ್ಣಗೊಳಿಸುವ ಉದ್ದೇಶವುಳ್ಳವನಾಗಿ ದ್ದನು. ಆದರೆ ಇದು ತನ್ನನ್ನೇ ವೆಚ್ಚಮಾಡಿಕೊಂಡು ಯಜ್ಞಾರ್ಪಿಸಿ ಕೊಳ್ಳುವಂತಾಗಿತ್ತು. ಅಂದರೆ ಮನುಷ್ಯನಾದ ಕ್ರಿಸ್ತ ಯೇಸುವು ಒಬ್ಬ ಮನುಷ್ಯನಾಗಿ ತನ್ನನ್ನೇ ಪೂರ್ಣವಾಗಿ ಸಮರ್ಪಿಸಿಕೊಂಡವ –ನಾಗಿದ್ದು ಇನ್ನು ಮೇಲೆ ಒಬ್ಬ ಮನುಷ್ಯನಾಗಿ ಅವರೊಡನೆ ಇರಲು ಸಾಧ್ಯವಿರಲಿಲ್ಲ. ನಿರೀಕ್ಷಿಸಲಾಗಿದ್ದ ಸಂಗತಿ ಏನಂದರೆ, ದೇವರ ಚಿತ್ತಕ್ಕೆ ತಾನು ವಿಧೇಯನಾಗಿ ಆದಾಮ ಮತ್ತು ಆವನ ಸಂತತಿ ಯನ್ನು ವಿಮೋಚಿಸುವದು ಮಾತ್ರವಲ್ಲದೆ ತಾನು ಮನುಷ್ಯನಾದ ಕ್ರಿಸ್ತ ಯೇಸುವಾಗಿ ಯಜ್ಞಾರ್ಪಿತನಾಗುವದರ ಮೂಲಕ ಮರಣದ

ಸ್ಥಿತಿಯಿಂದ ನೂತನ ಸ್ವಭಾವವಾದ ಉನ್ನತ ಸ್ಥಾನಕ್ಕೆ ಎಬ್ಬಿಸಲ್ಪಡುವವನಾಗಿದ್ದನು; ಅದು ದಿವ್ಯಸ್ವಭಾವವಾಗಿರುವದು [ಡಿವೈನ್ ನೇಚರ್]. ಹೀಗೆ ಆತನು ಮನುಷ್ಯನಾದ ಕ್ರಿಸ್ತಯೇಸು–ವಾಗಿ ಅವರಿಂದ ಹೊರಟು ಹೋಗುವದು ಅವಶ್ಯವಾಗಿತ್ತು ಅಲ್ಲದೆ ಅವರು ಇನ್ನು ಮುಂದೆ ಆತನನ್ನು ಮನುಷ್ಯನನ್ನಾಗಿ ನೋಡಬೇಕಾಗಿರಲಿಲ್ಲ, ಆದರೆ ನಿಗದಿತ ಕಾಲದಲ್ಲಿ ತನ್ನ ಎರಡನೇ ಬರುವಿಕೆಯಲ್ಲಿ, ಅವರೂ ಸಹ ಮನುಷ್ಯ ಸ್ವಭಾವದಿಂದ ಆತ್ಮಿಕ ಸ್ವಭಾವಕ್ಕೆ "ಮಾರ್ಪಟ್ಟು" ಹಾಗು "ಆತನಂತಾಗಿ ಆತನಿರು–ವಂತೆಯೇ ಆತನನ್ನು ನೋಡುವರು" – 1 ಯೋಹಾನ 3:2

ಆತನು ತನ್ನ ಜೀವವನ್ನು ಕೊಟ್ಟ ನಂತರ ತಾನು ತಂದೆಯ ಬಳಿಗೆ ಏರಿಹೋಗಿ ಮಾನವನಿಗೆ ಈಡಾಗಿ ನೀಡಿದ ತನ್ನ ಯಜ್ಞಾರ್ಪಣೆಯನ್ನು ಮಾನವರ ಪರವಾಗಿ ಅರ್ಪಿಸುವದು ಸಹ ಅವಶ್ಯವಾಗಿದ್ದು ಅದನ್ನು ಆತನು ನೆರೇರಿಸಿದ್ದನು: ಪಂಚಾಶತ್ತಮ ದಿನದಲ್ಲಿ ಉಂಟಾದ ಆಶೀರ್ವಾದವು ಪಾಪಗಳಿಗೋಸ್ಕರ ಮಾಡಿದ ಆ ಯಜ್ಞಾರ್ಪಣೆಯು ತಂದೆಯಿಂದ ಮಾನವರ ಪರವಾಗಿ ಅಂಗೀಕೃತವಾದುದಕ್ಕೆ ಪ್ರಮಾಣವಾಗಿತ್ತು; ಹೀಗೆ ಇದರ ಫಲವಾಗಿ ಯೇಸುವನ್ನು ತಮ್ಮ ವಿಮೋಚಕನೆಂದು ಅಂಗೀಕರಿಸಿ–ಕೊಂಡವರ ಮೇಲೆ ಆಶೀರ್ವಾದವು ಬಂದಿತ್ತು.

ನಮ್ಮ ಕರ್ತನ ಮರಣ ಹಾಗು ಆತನ ಎರಡನೇ ಬರುವಿಕೆಯ ನಡುವಿನ ಕಾಲವು ನಂಬಿಕೆಯ ವಿಷಯವಾದ ಯಾವ ದೃಷ್ಟಿಯಿಂದಲೂ ಸುದೀರ್ಘವಾದುದಲ್ಲ. (1) ದೇವರ ದೃಷ್ಟಿಯಿಂದ ಇದು ದೀರ್ಘವಾಗಿರುವದಿಲ್ಲ; ಯಾಕಂದರೆ ಅಪೋಸ್ತಲನಾದ ಪೇತ್ರನು ಪ್ರಕಟಿಸಿ ಹೇಳಿರುವಂತೆ, "ಕರ್ತನ ಎಣಿಕೆಯಲ್ಲಿ ಒಂದು ಸಾವಿರ ವರುಷವು ಒಂದು ದಿನದಂತಿರು–ವದು." [2 ಪೇತ್ರ 3:8]. (2) ನಿಜವಾದ ನಂಬಿಕೆಯುಳ್ಳವರ ದೃಷ್ಟಿಯಿಂದಲೂ ಇದು ಸುದೀರ್ಘವಾಗಿರುವದಿಲ್ಲ. ಯಾಕಂದರೆ ಅವರ ಸರಾಸರಿ ಜೀವಿತವು ಐವತ್ತು ವರುಷಗಳಾಗಿದ್ದು, ಯಾರಿಗೂ ಐವತ್ತು ವರುಷಗಳಿಗಿಂತಲೂ ಹೆಚ್ಚು ಕಾಲ ಕಾಯುವಂತಿರುವದಿಲ್ಲ. ಈ ಅವಧಿಯ ಬಗ್ಗೆ ನಾವು ಬಹು ಸುದೀರ್ಘವೂ ಹಾಗು ಅತಿ ಅನುಚಿತವೂ ಆದ ದೃಷ್ಟಿಯನ್ನು ತೆಗೆದುಕೊಳ್ಳಬೇಕಿಲ್ಲ ಅಂದರೆ ನಾವು ಹದಿನೆಂಟು ಶತಮಾನಗಳ ಕಾಲ ನಿರೀಕ್ಷಿಸುತ್ತಾ ಕಾದುಕೊಂಡಿರಬೇಕೆಂದು ಭಾವಿಸಿ–ಕೊಳ್ಳಬೇಕಿಲ್ಲ: "ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು." ಅಲ್ಲದೆ ಪ್ರತಿ ವ್ಯಕ್ತಿಗೂ ಪರೀಕ್ಷೆಪರಿಶೋಧನೆ, ನಯಗೊಳಿಸುವಿಕೆ ಮತ್ತು ಮದಲಿಂಗನ ಬರುವಿಕೆಯಲ್ಲಿ ಆತನನ್ನು ಸ್ವೀಕರಿಸಿಕೊಳ್ಳಲು ಸಿದ್ಧತೆಗಳನ್ನು ಮಾಡಿಕೊಳ್ಳುವದರಲ್ಲಿ ಸ್ವತಃ ತಾನು ಪಾಲುತೆಗೆದು–ಕೊಳ್ಳಲಿರುವದು ಆತನಿಗೆ ಸಾಕಷ್ಟಿರುವದು. ಈ ಮಾತಿನ ಒಂದು ಅರ್ಥದಲ್ಲಿ ಇದು ಸಮಸ್ತ ಸಭೆಗೆ ಸಂಬಂಧಿಸಿದ ಸಂಗತಿ ಯಾಗಿರುವದಾದರೂ, ಇದು ಒಂದು ಮುಖ್ಯವಾದ ಅರ್ಥದಲ್ಲಿ ಕರ್ತನ ಹಿಂಬಾಲಕರಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಂಬಂಧಿಸಿದ ಸಂಗತಿಯಾಗಿರುವದು.

"ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದದೆ..." ಯಾಕಂದರೆ ಮೂರು ವರುಷಗಳಿಂದಲೂ ನಮ್ಮ ಕರ್ತನು ತನ್ನ ಶಿಷ್ಯರಿಗೆ ತನ್ನ ವಿಷಯವಾಗಿ ತಿಳಿಸಿಕೊಡುತ್ತಿದ್ದು ಹಾಗು ತಂದೆಯ ಗುಣಗಳ ಬಗ್ಗೆ ಸಹ ಅವರಿಗೆ ಪರಿಚಯ ಮಾಡಿಕೊಡುತ್ತಿದ್ದನು; ಮತ್ತು ಹೀಗಾಗಿ ತಾನು ತಂದೆಯ ಬಳಿಗೆ ಹೋಗುವದಾಗಿ ಆತನು ಆಗ ತಿಳಿಸಿದಾಗ ಅವರು ಹಿಂದೆಂದಿಗಿಂತಲೂ ತಂದೆಯನ್ನು ಹೆಚ್ಚಾಗಿ ತಿಳಿದುಕೊಂಡಿದ್ದೇವೆಂದು ಭಾವಿಸಿಕೊಂಡವರಾಗಿ, ಹಾಗು ಆತನೇ [ಕ್ರಿಸ್ತನೇ] ಇವುಗಳನ್ನು ಒದಗಿಸಿಕೊಟ್ಟು ಅದು ನೆಲೆಯಾಗಿರುವಂತೆ ಮಾಡುದರಿಂದ ಅಂಥಾ ಒಂದು ನೀತಿನಿವಾಸದ ಬಗ್ಗೆ ಹಾಗೂ ನಿಜವಾದ ಸಂತೋಷದ ಬಗ್ಗೆ ಗ್ರಹಿಸಿಕೊಳ್ಳಲು ಸಾಧ್ಯವಾಗಿರುವುದಾಗಿ ಅವರು ಹಿಂದೆಂದಿ–ಗಿಂತಲೂ ಹೆಚ್ಚಾಗಿ ಕಲ್ಪಿಸಿಕೊಳ್ಳಬೇಕಿತ್ತು. ಇದಕ್ಕಿಂತಲೂ ಹೆಚ್ಚಾಗಿ, ಕರ್ತನೊಡನೆ ತಮಗಾದ ಅನುಭವ ಹಾಗು ಅತನ ಉಪದೇಶ ಮಾರ್ಗದರ್ಶನಗಳ ಮೂಲಕವಾಗಿ ಅವರಿಗೆ ದೇವರ ಮಾರ್ಗದ ಬಗ್ಗೆ ಹೆಚ್ಚು ಪರಿಚಿತರಾಗಿರುವಂತೆ ಮಾಡಿತ್ತು. ಆದುದರಿಂದಲೇ ನಮ್ಮ ಕರ್ತನು–"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ." ಎಂದು ಸಾರಿ ಹೇಳಿದ್ದನು.

ನಮ್ಮ ಕರ್ತನು ಆ "ಮಾರ್ಗವು" ಆಗಿದ್ದನು; ಅದರಲ್ಲಿ ಕೇವಲ "ಈಡುಬಲಿ" ಎಂಬ ಆತನ ಯಜ್ಞದ ಮೂಲಕವಾಗಿ ಅಂದರೆ ಪಾಪಗಳಿಗಾಗಿರುವ ಆತನ ಆ ಯಜ್ಞಫಲವನ್ನು [ಅಂಗೀಕರಿಸಿಕೊಂಡು] ತಮಗೆ ಅನ್ವಯಿಸಿಕೊಂಡವರಾಗಿ ತಂದೆಯ ಬಳಿಯಲ್ಲಿ ಅಂಗೀಕೃತರಾಗುವದಕ್ಕೆ ಅಥವಾ ಆತನೊಡನೆ ಅನ್ಯೋನ್ಯತೆಗೆ ಮತ್ತೆ ಸೇರಿಸಿಕೊಳ್ಳುವದಕ್ಕೆ ಸಾಧ್ಯವಿತ್ತು. ಕೇವಲ ತನ್ನ ವಾಕ್ಯಗಳ, ತನ್ನ ಉಪದೇಶಗಳ, ತನ್ನ ಮಾರ್ಗದರ್ಶನದ ಮೂಲಕವಾಗಿ ದೇವರ ಆತ್ಮ ಅಂದರೆ ಸತ್ಯದ ಆತ್ಮದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರಲು ಸಾಧ್ಯವೆಂಬ ಅರ್ಥದಲ್ಲಿ ಆತನು "ಸತ್ಯವೂ" ಆಗಿದ್ದನು. ಆತನು "ಜೀವವೂ" ಆಗಿದ್ದನು; ಹೇಗಂದರೆ ದೇವರ ದಂಡನೆಯ ತೀರ್ಪಿನ ಪ್ರಕಾರವಾಗಿ ಮಾನವ ಸಂತತಿಯಲ್ಲಿ ಎಲ್ಲರೂ ಸತ್ತವರಾಗಿದ್ದು ಜೀವದ ಹಕ್ಕುಗಳನ್ನು ಕಳೆದುಕೊಂಡಿರಲು, ನಮಗಾಗಿ ಕೊಟ್ಟ ಆತನ [ಕ್ರಿಸ್ತನ] ಜೀವದ ಮೂಲಕವಾಗಿ ಹೊರತು ಯಾರೂ ಜೀವದ ಸ್ಥಿತಿಗೆ ಮತ್ತೆ ಬರಲು ಸಾಧ್ಯವಿರಲಿಲ್ಲ. ಹೀಗೆ ಆತನು ನಮಗೆ ಈಡು ಅಥವಾ ಮಾರ್ಗವೂ ಆಗಿರುವನು; ನಮ್ಮ ಬೋಧಕನೂ ಇಲ್ಲವೇ ನೀತಿಯ, ಸತ್ಯದ ಹಾಗು ನಮಗೆ ಜೀವಕೊಡುವ ವಿಷಯದಲ್ಲಿ ಅತನು ನಮಗೆ ಕಲಿಸಿಕೊಡು–ವವನೂ ಆಗಿದ್ದನು. "ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ..." "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ." ಅಂದರೆ ಬೇರೆ ಯಾವ ಮಾರ್ಗದ ಮೂಲಕ ವಾಗಿಯೂ, ಬೇರೆ ಯಾವ ಸತ್ಯಾರ್ಥದ ಮೂಲಕವಾಗಿಯೂ, ಬೇರೆ ಯಾವ ಜೀವದ ಮೂಲಕವಾಗಿಯೂ ಯಾವ ಮನುಷ್ಯನೂ ತಂದೆಯ ಮನೆಯಲ್ಲಿನ ಬಿಡಾರಗಳಲ್ಲಿ ಯಾವ ಸ್ಥಳವನ್ನಾದರೂ ಪಡೆಯಲು ನಿರೀಕ್ಷಿಸುವದರ ಅಗತ್ಯವಿರುವದಿಲ್ಲ. – ಅಪೋಸ್ತಲರ ಕೃತ್ಯಗಳು 4:12; ಯೋಹಾನ 14:6

ಮತ್ತು ಹೀಗೆಯೇ ಸಹ ಕ್ರಿಸ್ತನು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಲೋಕದ ಮಾನವರೆಲ್ಲರಿಗೆ ಮಾರ್ಗವೂ ಸತ್ಯವೂ ಜೀವವೂ ಆಗಿರುವನು. ಅಲ್ಲದೆ ಕರ್ತನು ತನ್ನ

ಯಜ್ಞಾರ್ಪಣೆಯ ಮೂಲಕವಾಗಿ ತನ್ನ ಮದಲಗಿತ್ತಿಯಾದ ಸುವಾರ್ತಾ[ಯುಗದ] ಸಭೆಗೆ ದೇವರ ಬಿಡಾರ ಅಥವಾ ಮನೆಯ ಪರಲೋಕದ ವಿಭಾಗದಲ್ಲಿ ಒಂದು ವಾಸಸ್ಥಾನವನ್ನು ತೆರೆದಿರುವ ಪ್ರಕಾರವೇ ಆತನು ಅದೇ ಯಜ್ಞದ ಮೂಲಕವಾಗಿ (ತನಗೆ ವಿಧೇಯರಾಗುವ–ಅ.ಕೃ.3:23) ಲೋಕದ ಮಾನವರನ್ನು ವಿಮೋಚಿಸಿ ಅವರನ್ನು ಪುನರುದ್ಧಾರ ಮಾಡಿ ತಂದೆಯ ಮನೆಯ ಭೂಲೋಕದ ವಿಭಾಗಗಳಲ್ಲಿ ಒಂದು ವಾಸಸ್ಥಾನವನ್ನು ನೀಡುವನು; ಆಗ ಅದು ಮತ್ತೆ ದೇವರ ಒಂದು ಪರದೈಸಾಗಿರುವದು.

ಅಪೋಸ್ತಲರು ಒಡೆಯನನ್ನು ಶ್ರೇಷ್ಠನೆಂದು ಎಣಿಸಿದಷ್ಟೂ ಅವರಿಗೆ ಆತನ ಪರಿಪೂರ್ಣತೆಯ ಅಂದರೆ ಆತನು ಶಾರೀರಿಕವಾಗಿ ದೇವರ ಪ್ರತಿರೂಪವೆಂಬ ಅಂಶವನ್ನು ಗ್ರಹಿಸಿಕೊಳ್ಳಲು ಕಷ್ಟಕರವಾಗುತ್ತಿತ್ತು. (1 ತಿಮೋಥೆ 3:16) "ದೇವರು ಆತ್ಮಸ್ವರೂಪನು" ಶರೀರಧಾರಿಯಲ್ಲವೆಂದು ಹೀಗಾಗಿ ಆತನು ಅಗೋಚರನೆಂದು ಆತನು ಹೇಳುತ್ತಿದ್ದುದನ್ನು ಅವರು ಕೇಳಿದ್ದರು ಅಲ್ಲದೆ ವಾಸ್ತವದಲ್ಲಿ ಧರ್ಮಶಾಸ್ತ್ರದ ಮೂಲಕವಾಗಿ ಸಹ ಅವರು ಅದನ್ನು ತಿಳಿದುಕೊಂಡಿದ್ದರು. "ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ... ಆಗಿರುವನೋ... ಆತನೇ ತಿಳಿಯಪಡಿಸಿದನು." ಎಂದು ಆತನು ಹಿಂದೆ ಪ್ರಕಟಿಸಿ ಹೇಳಿದ್ದನ್ನು ಸಹ ಅವರು ಕೇಳಿದ್ದರು (ಯೋಹಾನ 1:18). ಆದರೆ ಯೇಸುವನ್ನು ನೋಡುವಲ್ಲಿ ತಮಗೆ ಸಾಧ್ಯವಾದಷ್ಟು ದೇವರ ಗುಣಗಳು ಅಂದರೆ ಆತನ ಹೋಲಿಕೆ, ಶಾರೀರಿಕವಾದ ಆತನ ಪರಿಪೂರ್ಣ ಸ್ವರೂಪವನ್ನು ತಾವು ಕಂಡಿರುವೆವೆಂಬ ಅಂಶವನ್ನು ಅವರು ಎಂದೂ ಗ್ರಹಿಸಿಕೊಂಡಿರಲಿಲ್ಲ. ಆದುದರಿಂದ ಒಡೆಯನಿಗೆ ಅವರ ಗಮನವನ್ನು ಈ ಅಂಶದ ಕಡೆಗೆ ಸೆಳೆದು–"ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" ಎಂದು ಹೇಳುವ ಅಗತ್ಯವಿತ್ತು. ತಾನೇ ತಂದೆಯಾಗಿರುವೆನೆಂದು ಅವರು ಗ್ರಹಿಸಿಕೊಳ್ಳಬೇಕೆಂಬದು ಆತನ (ಮಾತಿನ) ಅರ್ಥವಾಗಿರಲಿಲ್ಲ, ಯಾಕಂದರೆ ತಂದೆಯು ತನಗಿಂತ ದೊಡ್ಡವನೆಂದೂ ಮತ್ತು ತಾನು ಮಾಡಿದ ಕಾರ್ಯಗಳನ್ನು ತಂದೆಯ ಬಲದಿಂದ ಮಾಡಿರುವದಾಗಿ ಹೇಳುವದರ ಮೂಲಕವಾಗಿ ತನ್ನ ಬಗ್ಗೆ ಪದೇ ಪದೇ ವಿಶೇಷವಾಗಿ ಅಲ್ಲಗಳೆದುಕೊಂಡಿದ್ದನು. (ಯೋಹಾನ 14:28,10) ಇಲ್ಲವೇ ತನ್ನನ್ನು ನೋಡಿರುವವನು ಒಬ್ಬ ಅಗೋಚರ ಜೀವಿಯಾದ ದೇವರನ್ನು ನೋಡಿದ್ದೇನೆಂದು ಅವರು ಗ್ರಹಿಸಿಕೊಳ್ಳಬೇಕೆಂಬದು ಆತನ [ಮಾತಿನ] ಅರ್ಥವಾಗಿರಲಿಲ್ಲ; ಯಾಕಂದರೆ ದೇವರು ಅಗೋಚರನು. ಅಲ್ಲದೆ ತನ್ನ ಗುಣ, ತನ್ನ ಉದ್ದೇಶ, ತನ್ನ ಪ್ರೀತಿ ಇವುಗಳನ್ನು ಕಂಡಿರುವವರು ತಂದೆಯನ್ನು ಪ್ರತಿನಿಧಿಸುವ ಈ ಎಲ್ಲಾ ವಿವರಗಳು ಅತಿ ವಿಶ್ವಾಸಪೂರ್ಣವಾಗಿ ಸೂಚಿತವಾಗಿರುವದೆಂಬುದನ್ನು ಅವರು ಗ್ರಹಿಸಿಕೊಳ್ಳಬೇಕೆಂಬದು ಆತನ ಮಾತಿನ ಅರ್ಥವಾಗಿತ್ತು.

ತಂದೆಯ ಮತ್ತು ತನ್ನ ನಡುವೆ ಇರುವ ಐಕ್ಯತೆಯು ಅಂದರೆ ತನ್ನ ಚಿತ್ತವನ್ನು ತಂದೆಯ ಚಿತ್ತದಲ್ಲಿ ಹುದುಗಿಸಿದ್ದು ತನಗೆ ಇತರ ಯಾವುದೇ ಚಿತ್ತವಿರುವದಿಲ್ಲವೆಂಬುದನ್ನು ಅವರು ಗ್ರಹಿಸಿಕೊಳ್ಳಬೇಕೆಂಬುದನ್ನು ಆತನು ಬಯಸಿದ್ದನು. "ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ." ಆತನು ಬಯಸಿದ್ದೇನಂದರೆ ತಂದೆಯು ತನ್ನ ಬಲದ ಮೂಲಕವಾಗಿ, ತನ್ನ ಆತ್ಮದ ಮೂಲಕವಾಗಿ ಆತನಲ್ಲಿ ವಾಸಿಸುವನೆಂತಲೂ, ಹೀಗಾಗಿ ಆತನ ಮಾತುಗಳು, ಆತನ ಕೃತ್ಯಗಳು ಸಂಪೂರ್ಣ ರೀತಿಯಲ್ಲಿ ಸಮೃದ್ಧವಾಗಿ ತಂದೆಯನ್ನು ಪ್ರತಿನಿಧಿಸುವದೆಂಬುದೇ. ತನ್ನ ಸೇವೆಯಲ್ಲಿ ಅವರು ಸಾಕ್ಷಿಯಾಗಿ ನೋಡಿದ್ದ ಆತನ ಕೃತ್ಯಗಳು ಉನ್ನತೋನ್ನತನ ಶಕ್ತಿಯು ತನ್ನಲ್ಲಿ ನೆಲೆಗೊಂಡಿದ್ದು ಅದು ತನ್ನ ಮೂಲಕವಾಗಿ ಕಾರ್ಯವೆಸಗುತ್ತಿರುವದಕ್ಕೆ ಪ್ರಮಾಣವಾಗಿರುವದೆಂಬುದನ್ನು ಆತನು ಅವರಿಗೆ ಪ್ರಕಟಮಾಡಿ ಹೇಳಿದ್ದನು. ಇದು ಅಪೋಸ್ತಲರನ್ನು ಸಂಪೂರ್ಣವಾಗಿ ತೃಪ್ತಿಗೊಳಿಸಿ ತಮ್ಮ ಹೃದಯಗಳಲ್ಲಿ ನೆಮ್ಮದಿ ತಂದಂತೆ ಕಾಣಬರುತ್ತಿತ್ತು.

ತಾನು ತಂದೆಯ ಬಳಿಗೆ ಹೋಗುವದರ ಅವಶ್ಯಕತೆಯ ಬಗ್ಗೆ ವಿವರಿಸುವದನ್ನು ಮುಂದುವರೆಸುವವನಾಗಿ ನಮ್ಮ ಕರ್ತನು ಪ್ರಕಟಮಾಡಿ ಹೇಳಿದ್ದೇನಂದರೆ ತಾನು ಹೋಗುವದರ ಫಲವಾಗಿ ಆತನ ಹಿಂಬಾಲಕರು ತಾನು ನಡೆಸಿದ ಕ್ರಿಯೆಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸಬೇಕೆಂಬದೇ. ಬಹುಶಃ ಈ "ಮಹತ್ತಾದ ಕ್ರಿಯೆಗಳಲ್ಲಿ" ಕೆಲವು ಅಂದರೆ ಮಾನವ ಕುಲದವರನ್ನು ಮರಣವೆಂಬ ನಿದ್ರೆಯಿಂದ ಎಬ್ಬಿಸಿ ಅವರಲ್ಲಿ ಮನಃಪೂರ್ವಕವಾಗಿ ವಿಧೇಯರಾದವರಿಗೆ ಪೂರ್ಣವಾಗಿ ಮಾನವನ ಜೀವದ ಪರಿಪೂರ್ಣತೆಯ ಸ್ಥಿತಿಗೆ ಮರಳುವಂತೆ ಮಾಡಿ ಅವರನ್ನು ಪುನರುದ್ಧರಿಸುವಂಥ ಮಹತ್ತಾದ ಕಾರ್ಯವು ದೇವರ ರಾಜ್ಯವು ಸ್ಥಾಪನೆಯಾದ ನಂತರ ಸಂಭವಿಸುವದೆಂದು ಆಲೋಚಿಸುವದು ಸೂಕ್ತವೇ. ಅದು ನಿಜವಾಗಿಯೂ ನಮ್ಮ ಕರ್ತನಾದ ಯೇಸುವು ತನ್ನ ಮೊದಲನೇ ಬರುವಿಕೆಯಲ್ಲಿ ನೆರವೇರಿಸಿದ ಕ್ರಿಯೆಗಿಂತಲೂ ಮಹತ್ತಾದ ಕ್ರಿಯೆಯಾಗಿರುವದು, ಯಾಕಂದರೆ ಆಗ [ಅಂದರೆ ಆತನ ಮೊದಲ ಬರುವಿಕೆಯಲ್ಲಿ] ಆತನ ಅತಿ ಮಹತ್ತಾದ ಕಾರ್ಯವು ಮರಣ ನಿದ್ರೆಯಲ್ಲಿದ್ದವರನ್ನು ಮಾನವನ ಜೀವದ ಪರಿಪೂರ್ಣತೆಯ ಸ್ಥಿತಿಗೆ ತಾರದೆಯೇ ಕೇವಲ ಅದು ಅವರನ್ನು [ಅಂದಿನ ಅಪೂರ್ಣತೆಯ ಸ್ಥಿತಿಗೆ] ಎಬ್ಬಿಸುವಂಥದಾಗಿತ್ತು.

ಆದರೆ ನಮ್ಮ ಅಭಿಪ್ರಾಯದಲ್ಲಿ ಕೇವಲ ಈ ಒಂದೇ ಅರ್ಥದಲ್ಲಿ ಕರ್ತನ ಹಿಂಬಾಲಕರು ತಮ್ಮ ಕ್ರಿಯೆಗಳು ತಮ್ಮ ಒಡೆಯನು ಮಾಡಿದ ಕ್ರಿಯೆಗಿಂತಲೂ ಮಹತ್ತಾದ ಕ್ರಿಯೆ ಆಗಿರುವದೆಂದು ತಿಳಿಯಬೇಕೆಂದಿರಲಿಲ್ಲ. ನಮ್ಮ ಕರ್ತನ ಕ್ರಿಯೆಗಳು ಶಾರೀರಿಕವಾಗಿ ಒಂದು ಹಂತದಲ್ಲಿ ಅವಶ್ಯಕವಾದ ಸಂಗತಿಯಾಗಿದ್ದವು. ಆಗ ಇನ್ನೂ ಪವಿತ್ರಾತ್ಮನು ಬಂದಿರಲಿಲ್ಲ; ಅದು ಆತನು [ಕ್ರಿಸ್ತನು] ಈಡುಬೆಲೆಯನ್ನು ತೆತ್ತು ಅದನ್ನು ತಂದೆಗೆ ಅರ್ಪಿಸಿ ಅದು [ತಂದೆಯಿಂದ] ಅಂಗೀಕೃತವಾಗುವ ಕಾಲಕ್ಕೆ ಮೊದಲು ಬರಲು ಸಾಧ್ಯವಿರಲಿಲ್ಲ. ಪರಿಣಾಮವಾಗಿ ಆತನು ಸೇವೆಮಾಡಿದಂಥವರಿಗೆ [ಆತ್ಮನಿಂದ ಹುಟ್ಟದಿದ್ದ ತನ್ನ ಶಿಷ್ಯರಿಗೂ ಸಹ] ಈ ಒಂದು ದೃಷ್ಟಿಯಿಂದ ಉಪದೇಶ ನೀಡಲು ಸಾಧ್ಯವಿರಲಿಲ್ಲ. ಅವರ ಕಿವಿಗಳು ಪ್ರಾಪಂಚಿಕ ಸಂಗತಿಗಳಿಂದ [ತುಂಬಿ] ಭಾರವಾಗಿದ್ದವು, ಆದರೆ ಪರಲೋಕದ ಸಂಗತಿಗಳ ಬಗ್ಗೆ ಅವರಿಗೆ ಏನೂ ಅರ್ಥಮಾಡಿಕೊಳ್ಳಲು ಸಾಧ್ಯವಿರಲಿಲ್ಲ; ಯಾಕಂದರೆ "ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು."

ಪಂಚಾಶತ್ತಮದಿನದಿಂದ "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು [ಆತ್ಮಿಕ ಸಂಗತಿಗಳನ್ನು] ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ." – 1 ಕೊರಿಂಥ 2:10,14; ಯೋಹಾನ 3:12

ಇನ್ನೂ ಪವಿತ್ರಾತ್ಮನಿಂದ ಹುಟ್ಟದಿದ್ದ [ಗರ್ಭಾಂಕುರಿಸದ] ಅಂದರೆ ಮಕ್ಕಳಾಗುವ ಸೌಭಾಗ್ಯವನ್ನು ಇನ್ನೂ ಅನುಗ್ರಹಿಸಲ್ಪಡದ ಸೇವಕರ ಮನೆತನದ ಮಧ್ಯದಲ್ಲಿ (ಯೋಹಾನ 1:12) "ಜನರಿಗೆ ಸಾಮ್ಯ ಹಾಗು ಒಗಟಿನ ರೂಪದಲ್ಲಿ ಉಪದೇಶ ಮಾಡಿ ಹೇಳುವೆನು" ಎಂಬುದನ್ನು ಹೊರತು ಪಡಿಸಿದರೆ ನಮ್ಮ ಕರ್ತನಿಗೆ ಪ್ರಾಪಂಚಿಕ ಸಂಗತಿಗಳಿಗಿಂತ ಹೆಚ್ಚಿನ ಸಂಗತಿಗಳನ್ನು ಹೇಳಲು ಸಾಧ್ಯವಾಗಿರಲಿಲ್ಲ. ಅವುಗಳನ್ನು ನಿಗದಿತ ಕಾಲದಲ್ಲಿ ಕ್ರೈಸ್ತಸಭೆಯು ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಅರ್ಥಮಾಡಿಕೊಳ್ಳುವದು. ಇದರ ಪರಿಣಾಮವಾಗಿಯೇ ನಮ್ಮ ಕರ್ತನು ಮಾಡಿದ ಅದ್ಭುತಕಾರ್ಯಗಳೆಲ್ಲವೂ ಭೌತಿಕ ಮಟ್ಟದವುಗಳಾಗಿದ್ದವು ಹಾಗು ಸರಳವಾಗಿ ಗ್ರಹಿಸಬಲ್ಲ ಆತನ ಉಪದೇಶಗಳೆಲ್ಲವೂ ಪ್ರಾಕೃತ [ಸ್ವಾಭಾವಿಕ] ಮನುಷ್ಯನು ಗ್ರಹಿಸಬಲ್ಲ ಒಂದು ಮಟ್ಟದಲ್ಲಿದ್ದವು.

ಆದರೆ ಪಂಚಾಶತ್ತಮ ದಿನದ ನಂತರ ಪವಿತ್ರಾತ್ಮನು ಬಂದಾಗ ಕರ್ತನ ಜನರು ಆತನ ಹೆಸರಿನಲ್ಲಿ ಹಾಗು ಆತನ ಪ್ರತಿನಿಧಿಗಳಾಗಿ ಆತನು [ಕ್ರಿಸ್ತನು] ನಡೆಸಿದ ಕ್ರಿಯೆಗಳಿಗಿಂತಲೂ ಮಹತ್ತರವಾದ ಹಾಗು ಹೆಚ್ಚು ಅದ್ಭುತ ರೀತಿಯ ಕ್ರಿಯೆಗಳನ್ನು ನಡೆಸಲು ಆರಂಭಿಸಿದ್ದರು. ಕರ್ತನು ಕುರುಡರ ಕಣ್ಣುಗಳನ್ನು ತೆರೆದಿದ್ದನೋ? ಆತನ ಹಿಂಬಾಲಕರು ಮನುಷ್ಯರ ಮನೋನೇತ್ರ ಗಳನ್ನು ತೆರೆಯುವ ಸೌಭಾಗ್ಯವನ್ನು ಪಡೆದಿದ್ದರು. ಕರ್ತನು ಶಾರೀರಿಕವಾಗಿ ಅಸ್ವಸ್ಥರಾಗಿದ್ದವರನ್ನು ಗುಣಪಡಿಸಿದ್ದನೋ? ಆತನ ಶಿಷ್ಯರಿಗೆ ಆತ್ಮಿಕವಾಗಿ ಅಸ್ವಸ್ಥರಾಗಿದ್ದವರನ್ನು ಗುಣಪಡಿಸಲು ಅನುಮತಿ ನೀಡಲಾಗಿತ್ತು. ಕರ್ತನು ಶಾರೀರಿಕವಾಗಿ ಕುಷ್ಠರೋಗಿ–ಗಳಾಗಿದ್ದವರನ್ನು ಗುಣಪಡಿಸಿದ್ದನೋ? ಆತ್ಮಿಕ ಕುಷ್ಠವಾದ ಪಾಪದಿಂದ ಗುಣಪಡಿಸುವದು ಆತನ ಶಿಷ್ಯರ ಸೌಭಾಗ್ಯವಾಗಿತ್ತು. ನಮ್ಮ ಕರ್ತನು ಸತ್ತವರನ್ನು ಪುನಶ್ಚೇತನರನ್ನಾಗಿ ಮಾಡಿದ್ದನೋ? ಬಹು ಉನ್ನತವಾದ ಒಂದು ಅರ್ಥದಲ್ಲಿ, ಆತನ ಶಿಷ್ಯರಿಗೆ ಸುವಾರ್ತೆಯನ್ನು ಸಾರಿ ಆ ಮೂಲಕವಾಗಿ ಅನೇಕರನ್ನು "ಮರಣದಿಂದ ಪಾರಾಗಿ ಜೀವಕ್ಕೆ ಸೇರುವಂತೆ" ಮಾಡುವದು ಒಂದು ಸೌಭಾಗ್ಯವಾಗಿತ್ತು. ಅಲ್ಲದೆ ಇನ್ನೂ ದೊಡ್ಡ ಕಾರ್ಯಗಳನ್ನು ಮಾಡುವಂಥಾ ಸೌಭಾಗ್ಯವು ದೇವಜನರಿಗೆ ಇನ್ನೂ ಉಂಟು. ತಮ್ಮ ದೊಡ್ಡ ಸೌಭಾಗ್ಯಗಳ ವಿಷಯವಾಗಿ ಮನವರಿಕೆ ಮಾಡಿಕೊಂಡವರಾಗಿ ತಂದೆಯ ಮನೆಯ ವಿಷಯವಾದ ಸಂಗತಿಗಳನ್ನು ಉತ್ಸಾಹಭರಿತರಾಗಿ ಚೈತನ್ಯದಿಂದ ನಡೆಸುವವರು ಧನ್ಯರು. ಆದರೆ ಕರ್ತನಿಂದ ತಲಾಂತುಗಳನ್ನು ಹೊಂದಿದವರಾಗಿ ಅವುಗಳನ್ನು ಭೂಮಿಯಲ್ಲಿ ಹುದುಗಿಸುವವರು ಅಂದರೆ ತಮ್ಮ ವ್ಯಾಪಾರ, ವಿನೋದ ವಿಲಾಸ, ಸಾಮಾಜಿಕ ಸಂಗತಿಗಳಲ್ಲಿ ತೊಡಗಿಸಿಕೊಳ್ಳುವವರು ಒಡೆಯನ ಎರಡನೇ ಬರುವಿಕೆಯಲ್ಲಿ ಆತನಿಂದ ಅಂಗೀಕೃತರಾಗುವರೆಂದೂ ಇಲ್ಲವೇ "ಭಲಾ ನಂಬಿಗಸ್ತನಾದ ಒಳ್ಳೆಯ ಆಳು ನೀನು; ನಿನ್ನ ಧಣಿಯ ಸೌಭಾಗ್ಯ – ದಲ್ಲಿ ಸೇರು" ಎಂದು ಹೇಳುವದನ್ನು ಕೇಳುವರೆಂಬುದನ್ನು ನಿರೀಕ್ಷಿಸಲು ಅವರಿಗೆ ಸಾಧ್ಯವಾಗದು.

ಸಭೆಗೆ ಸಂಬಂಧಿಸಿದ ವಿಷಯಗಳೆಲ್ಲವುಗಳಲ್ಲಿ ನಮ್ಮ ಕರ್ತನು ಪೂರ್ಣ ರೀತಿಯಲ್ಲಿ ತಂದೆಯ ಸಕ್ರಿಯ ಪ್ರತಿನಿಧಿಯಾಗಿ ಈಗಲೂ ಹೇಗೆ ಮುಂದುವರೆಯುತ್ತಿರುವನೆಂಬುದನ್ನು ಸೂಚಿಸುವವನಾಗಿ, ನಮ್ಮ ಕರ್ತನು ಭರವಸೆ ನೀಡಿ ಹೇಳಿರುವದೇನಂದರೆ ನಾವು ತಂದೆಯನ್ನು ಕೇಳಿಕೊಳ್ಳುವ ಸಂಗತಿಗಳನ್ನು ಆತನು (ಯೇಸು) ನಮಗಾಗಿ ನೆರವೇರಿಸುವನೆಂದು ಮತ್ತು ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆಯಾಗುವದೆಂಬದು. ತಂದೆಯು ತನ್ನ ಮಗನನ್ನು ಪ್ರೀತಿಸಿ ಎಲ್ಲವನ್ನು ಆತನ ಕೈಯಲ್ಲಿ ಕೊಟ್ಟಿದ್ದಾನೆ; ಹೀಗಿದ್ದರೂ ಎಲ್ಲಾ ಸಂಗತಿಗಳಲ್ಲಿಯೂ ಮಗನು ತಂದೆಯ ಚಿತ್ತವನ್ನು ಅಂಗೀಕರಿಸುವವನಾಗಿ ಆತನ ಹೆಸರಿಗೆ ಮಹಿಮೆ ಸಲ್ಲಿಸುವನು.

*****

# "ಆತನು ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು"

**ರೀಪ್ರಿಂಟ್ಸ್ ಪುಟ 2455**

## ಯೋಹಾನ 14:15–27

ತನ್ನ ಮರಣ ಸ್ಮರಣಾರ್ಥದ ಸಂಸ್ಕಾರವನ್ನು ಏರ್ಪಡಿಸುವ ಸಮಯದಲ್ಲಿ ಗೊಂದಲಮಯರಾದ ತನ್ನ ಶಿಷ್ಯರಿಗೆ ಉಪದೇಶ ಮಾಡುವದನ್ನು ಮುಂದುವರೆಸುವವನಾಗಿ ನಮ್ಮ ಕರ್ತನು ಕ್ಲುಪ್ತಕಾಲದಲ್ಲಿ ಮತ್ತೆ ಬಂದು ತಾನು ಅವರನ್ನು ಸ್ವೀಕರಿಸಿಕೊಳ್ಳುವದು ಮಾತ್ರವಲ್ಲದೆ ಜೊತೆಯಲ್ಲಿ ತಾನು ಇಲ್ಲದಿರುವ ಮಧ್ಯಂತರದ ಕಾಲದಲ್ಲಿ ಆ ಸಹಾಯಕನನ್ನು ಅಂದರೆ ಪವಿತ್ರಾತ್ಮನನ್ನು [ಕಳುಹಿಸಿಕೊಡುವದಾಗಿ] ಅವರಿಗೆ ವಾಗ್ದಾನ ಮಾಡಿದ್ದನು. ತಾನು ಮಾನವನ ಸ್ವಭಾವವನ್ನು ಬಿಟ್ಟುಬಿಡುವವನಾದ್ದರಿಂದ ಆತನು ಇನ್ನು ಮೇಲೆ ಮನುಷ್ಯನಾದ ಕ್ರಿಸ್ತ ಯೇಸುವಾಗಿ ಅವರೊಡನೆ ಇರಲು ಸಾಧ್ಯವಿರಲಿಲ್ಲ; ತಾನು ಪುನರುತ್ಥಾನವಾದ ಸಮಯದಲ್ಲಿ ಮತ್ತೆ [ತನ್ನ] ತಂದೆಯಂತೆ ಒಂದು ಆತ್ಮಿಕ ಜೀವಿಯಾಗಿ ಇನ್ನೆಂದಿಗೂ ತನ್ನ ಶಿಷ್ಯರಿಂದ

ತಂದೆಯನ್ನು ಕಾಣದಂತೆಯೇ ತಾನೂ ಕಾಣಿಸಲ್ಪಡ –ದವನಾಗಿದ್ದನು. ಸಮಸ್ತ ಸಭೆಯು ಪೂರ್ಣಗೊಂಡು "ಮಾರ್ಪಟ್ಟು" ಆತನಿರುವಂತೆ (ತಂದೆಯಿರುವಂತೆಯೇ) ಅವರೂ ಆಗಿ ಆತನನ್ನು ಕಾಣುವವರಾಗಿ ಆತನ ಮಹಿಮೆಯಲ್ಲಿ ಪಾಲನ್ನು ಹೊಂದುವ ಸಮಯವು ಬರುವವರೆಗೂ ಅವನು [ಶಿಷ್ಯರಿಂದ] ಕಾಣಲ್ಪಡದವನಾಗಿದ್ದನು. ಅತನು ಪುನರುತ್ಥಾನದಲ್ಲಿ ಮಾರ್ಪಟ್ಟಂಥದ್ದು ತನ್ನ ಶಿಷ್ಯರನ್ನು ಸುವಾರ್ತಾಯುಗದ ಪರ್ಯಂತರವಾಗಿ ಅವರಿಗೆ ಯಾವ ಸಹಾಯವೂ ಇಲ್ಲದೆ ಒಬ್ಬೊಂಟಿಗರನ್ನಾಗಿ ಬಿಟ್ಟುಬಿಡುವದು ಇಲ್ಲವೇ ಬೇರೊಂದು ವಿಧದಲ್ಲಿ ಆ ಸಹಾಯವನ್ನು ಅನುಗ್ರಹಿಸುವದು ಆತನಿಗೆ ಅವಶ್ಯಕವನ್ನಾಗಿ ಮಾಡಿತ್ತು. ತನ್ನ ಪುನರುತ್ಥಾನದ ನಂತರ ನಮ್ಮ ಕರ್ತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡಿದ್ದ ಕೆಲವು ಸಂದರ್ಭಗಳಲ್ಲಿ ಆ ಕ್ಷಣಕ್ಕೆ ಅವು ಅದ್ಭುತವಾಗಿ ತೋರ್ಪಡಿಸಿಕೊಳ್ಳುವದಾಗಿದ್ದು ಕೇವಲ ಅದು ಶಿಷ್ಯರಿಗೆ ತಾನು ಇನ್ನು ಮುಂದೆ ಸತ್ತವನಾಗಿರು –ವದಿಲ್ಲವೆಂಬುದನ್ನೂ ಖಚಿತಪಡಿಸಿ ತಾನು ಎಬ್ಬಿಸಲ್ಪಟ್ಟ ನಂತರ ಇನ್ನು ಮೇಲೆ ಮಾನವನ ಪರಿಸ್ಥಿತಿಯಲ್ಲಿನ ಕಟ್ಟುಪಾಡುಗಳಿಗೆ [ನಿಯಂತ್ರಣಕ್ಕೆ] ಒಳಗಾಗಿರುವದಿಲ್ಲವೆಂಬುದನ್ನು ತೋರ್ಪಡಿಸುವ ಉದ್ದೇಶಕ್ಕಾಗಿತ್ತು. ಆದುದರಿಂದ ಈ ಪಾಠದ ಒಂದು ಭಾಗವಾಗಿ ತನ್ನನ್ನು ತೋರ್ಪಡಿಸಿಕೊಂಡಿದ್ದ ಶಾರಿಕ ದೇಹಗಳು ಅದ್ಭುತ ರೀತಿಯಾದವುಗಳಾಗಿದ್ದು ಅದೇ ರೀತಿಯಲ್ಲಿ ಕಣ್ಮರೆಯಾಗುತ್ತಾ ಅಂದರೆ ಗಾಳಿಯಂತೆ ಆತನು ಬರುತ್ತಾ ಹೋಗುತ್ತಾ ಇದ್ದನು. – ಯೋಹಾನ 3:8; ಲೂಕ 24:26,31; ಅಪೋಸ್ತಲರ ಕೃತ್ಯಗಳು 1:3,4.

ಪವಿತ್ರಾತ್ಮನು ಮತ್ತೊಬ್ಬ ಸಹಾಯಕನಾಗಿದ್ದು [ಸಂತೈಸುವವನಾಗಿದ್ದು] ಆ ಸಂತೈಸುವಿಕೆಯು ಅದೇ ರೀತಿಯದ್ದಾಗಿತ್ತು. ನಿಜವಾಗಿಯೂ "ಸಹಾಯಕನು [ಸಂತೈಸುವವನು]" ಎಂಬ ಶಬ್ದವು ಆ ಪತ್ಯವಿಷಯದ ಭಾವಾರ್ಥವನ್ನು ಸರಿಯಾದ ರೀತಿಯಲ್ಲಿ ಸೂಚಿಸುವದಿಲ್ಲ. ಅದು ನಿಜವಾಗಿಯೂ ಬಲಪಡಿಸುವಿಕೆ, [ಅಂದರೆ] ಆಸರೆಯಾಗುವಿಕೆ ಎಂದಾಗಿರುವದು: ಪವಿತ್ರಾತ್ಮವೆಂಬವನು ಸಂತೈಸುವವನು ಎಂಬ ನಮ್ಮ ಮಾತಿನ ಅರ್ಥದಲ್ಲಿ ಕೇವಲ ವಿಪತ್ತುವ್ಯಥೆಗಳಲ್ಲಿ ಸಾಂತ್ವನ ನೀಡುವದು, ಅಂದರೆ ಆತಂಕಗಳನ್ನು ಉಪಶಮನ–ಗೊಳಿಸುವದು ಮಾತ್ರವಲ್ಲದೆ ಅದು ತಮ್ಮ ಗ್ರಹಣಶಕ್ತಿಯನ್ನು ಪುನಶ್ಚೇತನಗೊಳಿಸುವದಾಗಿ, ಅವರ ಆಸಕ್ತಿಯನ್ನು ದೃಢಪಡಿಸಿ ದೈವಿಕ ಏರ್ಪಾಟಿನಲ್ಲಿ ಅವರನ್ನು ನೀತಿಯ ವಿಷಯದಲ್ಲಿ ತಿದ್ದುಪಾಟಿ ಮಾಡುವದಕ್ಕಾಗಿ ಮತ್ತು "ಬೆಳಕಿನ ರಾಜ್ಯದಲ್ಲಿ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವಂತೆ" ಅವರ ಮೇಲೆ ಬರಮಾಡಲಾಗುವ ಸಂಗತಿಗಳನ್ನು ಅವರು ನೆರವೇರಿಸುವದನ್ನು ಮತ್ತು ಅದನ್ನು ಸಹಿಸಿಕೊಳ್ಳುವದನ್ನು ಸೂಚಿಸುವದು.

ಸಭೆಯ ಮೇಲೆ ಬಂದು [ಸುವಾರ್ತಾ] ಯುಗದ ಪರ್ಯಂತರವಾಗಿ ಅದರಲ್ಲಿ ನೆಲೆಗೊಂಡು ನಂಬಿಗಸ್ತರ ಹಿತದೃಷ್ಟಿಯಿಂದ [ಅವರ ಮೇಲೆ] ಮೇಲ್ವಿಚಾರಣೆ ನಡೆಸಿ [ಅವರಿಗೆ] ಮಾರ್ಗದರ್ಶನ ಮಾಡಲಿರುವ ಪವಿತ್ರಾತ್ಮ ಅಥವಾ ಪವಿತ್ರ ಪ್ರಭಾವವು ತಂದೆಯ ಮತ್ತು ಮಗನ ಪ್ರತಿನಿಧಿಯೂ ಆಗಬೇಕಿತ್ತು. ಪವಿತ್ರಾತ್ಮವು ಸಭೆಯಲ್ಲಿ ಕರ್ತನಾದ ಯೇಸುವಿನ ಪ್ರತಿನಿಧಿಯೆಂಬ ಅಂಶವು ನಿಜವಾಗಿಯೂ ಎಷ್ಟು ದೃಢವಾಗಿತ್ತೆಂದರೆ ಕೆಲವು ಸಮಯ ಕರ್ತನು ಹಾಗು ಆತನ ಆತ್ಮ ಅಥವಾ ಪ್ರಭಾವವನ್ನು ಪರಸ್ಪರ ಅದಲು ಬದಲು ಮಾಡಿ ಹೇಳಲಾಗುತ್ತದೆ; ದೃಷ್ಟಾಂತವಾಗಿ ಹೇಳುವದಾದರೆ, "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ." (ಮತ್ತಾಯ 28:20) ಎಂದು ಆತನು ಅವರಿಗೆ ಹೇಳಿದ್ದರಲ್ಲಿ ಇದು ವ್ಯಕ್ತವಾಗಿರುತ್ತದೆ. ಅಲ್ಲದೆ ಮತ್ತೆ "ನಾನು ನಿಮ್ಮನ್ನು ಅನಾಥರನ್ನಾಗಿ ಬಿಡುವದಿಲ್ಲ; ನಾನು ನಿಮ್ಮ ಬಳಿಗೆ [ಪವಿತ್ರಾತ್ಮನ ಮೂಲಕವಾಗಿ] ಬರುತ್ತೇನೆ." ಹಾಗು ಪುನಃ "ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು [ಪವಿತ್ರಾತ್ಮನ ಮೂಲಕವಾಗಿ] ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳುಕೊಳ್ಳುವಿರಿ... ನಾನೂ ಅವನನ್ನು ಪ್ರೀತಿಸಿ ಅವನಿಗೆ [ಪವಿತ್ರಾತ್ಮನ ಮೂಲಕವಾಗಿ] ಕಾಣಿಸಿಕೊಳ್ಳುವೆನು... ನಾವಿಬ್ಬರೂ [ತಂದೆ ಮತ್ತು ಮಗನು] ಅವನ ಬಳಿಗೆ ಬಂದು ಅವನ ಬಳಿಯಲ್ಲಿ [ಪವಿತ್ರಾತ್ಮನ ಮೂಲಕವಾಗಿ] ಬಿಡಾರವನ್ನು ಮಾಡಿಕೊಳ್ಳುವೆವು" ವಚನ 18,20,23.

ಹೀಗೆ ಯಾರು ಸತ್ಯದ ಆತ್ಮವೂ, ಪ್ರೀತಿಯ ಆತ್ಮವೂ, ತಂದೆಯ ಆತ್ಮವೂ, ಕ್ರಿಸ್ತನ ಅತ್ಮವೂ ಅಗಿರುವ ಪವಿತ್ರಾತ್ಮವನ್ನು ಸ್ವೀಕರಿಸಿಕೊಳ್ಳುವರೋ ಅವರು ಯೇಸುವನ್ನು ನೋಡಶಕ್ತರಾಗಿ ತಮ್ಮಲ್ಲಿ ಒಂದು ಹೊಸ ಜೀವವು ಆರಂಭಗೊಳ್ಳುವಂತೆ ಮಾಡಿಕೊಳ್ಳುವರು (ವಚನ 19). ಅವರು ತಮ್ಮ ಮನೋನೇತ್ರಗಳ ಮೂಲಕವಾಗಿ ನೋಡುವವರಾಗಿದ್ದು ಕತ್ತಲೆಯಲ್ಲಿ ನಡೆಯುವ–ವರಾಗಿರುವದಿಲ್ಲ. ಅವರು–"ಇದೇ ಮಾರ್ಗ ಇದರಲ್ಲೇ ನಡೆಯಿರಿ.." ಎನ್ನುವ ಕರ್ತನ ಸ್ವರವನ್ನು ಆಲಿಸುವರು. ಅವರು ದೇವರ ಸುವಾಕ್ಯಗಳನ್ನು ಸವಿದು ನೋಡುವವರಾಗಿ ಆತನು ಬಹು ಕೃಪಾಪೂರ್ಣನೆಂಬುದನ್ನು ಮನನಮಾಡಿಕೊಳ್ಳುವರು. ದೇವರ ಪ್ರೀತಿರಸವು ತಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಯಲ್ಪಟ್ಟಿರು –ವದರ ಅನುಭವವನ್ನು ಪಡೆಯುವರು; ಇದು ಅವರಲ್ಲಿ ಸಹೋದರರ ಮೇಲಿನ ಪ್ರೀತಿ ಹಾಗು ಪವಿತ್ರಾತ್ಮನ ಒಳ್ಳೆಯ ಫಲಗಳಾದ ಸಾತ್ವಿಕತ್ವ, ನಯವಿನಯ, ತಾಳ್ಮೆ, ದೀರ್ಘಶಾಂತಿ, ಸಹೋದರ ಸ್ನೇಹ, ಪ್ರೀತಿ, ಇವುಗಳನ್ನು ಉಂಟುಮಾಡುವದು. – ಯೆಶಾಯ 30:21; 1 ಪೇತ್ರ 2:3; ರೋಮಾ 5:5; ಕೊಲೊಸ್ಸೆ 3:12,13.

ಹೇಗೂ, ಈ ಅನುಭವಗಳನ್ನು ಶರತ್ತುಬದ್ಧವಾಗಿ ವಾಗ್ದಾನ ಮಾಡಲಾಗಿರುವದು–ಅಂದರೆ ದೇವರ ಕೃಪೆಯ ಬಗ್ಗೆ ಎಂದೂ ಕೇಳದವರಿಗೆ ಇದು ವಾಗ್ದಾನ ಮಾಡಲ್ಪಟ್ಟಿರುವದಿಲ್ಲ, ಆದರೆ ಅದನ್ನು ಕೇಳಿದಂಥವರಿಗೆ ವಾಗ್ದಾನ ಮಾಡಲ್ಪಟ್ಟಿರುವದು, ಅಂದರೆ "ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವ–ವರೆಲ್ಲರಿಗೆ" ಅಂದರೆ ಯಾರು ಆತನ ಆಜ್ಞಾವಿಧಿಗಳನ್ನು ಕೇಳಿ ಪ್ರೀತಿಯಿಂದ ಸ್ಪಂದಿಸಲ್ಪಟ್ಟವರಾಗಿ ಅವುಗಳನ್ನು ನೆರವೇರಿಸಲು ಪ್ರೇರಿತರಾಗುವರೋ ಅಂಥವರಿಗೆ ಇದು ವಾಗ್ದಾನ ಮಾಡಲ್ಪಟ್ಟಿರುವದು. ಅಂಥವರು ತಂದೆಯ ಪ್ರೀತಿಯನ್ನು

ಹೊಂದಿಕೊಳ್ಳುವರು, ಹಾಗು ಅಂಥವರು ಮಗನ ಪ್ರೀತಿಯನ್ನು ಹೊಂದಿಕೊಳ್ಳುವರು, ಮತ್ತು ಆಂಥವರು ಪವಿತ್ರಾತ್ಮವೆಂಬ ಮಾಧ್ಯಮ ಅಥವಾ ಸಾಧನದ ಮೂಲಕವಾಗಿ ತಂದೆಯ ಮತ್ತು ಮಗನ ಅನ್ಯೋನ್ಯತೆಯನ್ನು ಪಡೆದುಕೊಳ್ಳುವರು. ಇದನ್ನು 15ನೇ ಮತ್ತು 16ನೇ ವಚನಗಳಲ್ಲಿ ಹಾಗು ಮತ್ತೆ 21ನೇ, 23ನೇ ಅಲ್ಲದೆ 24ನೇ ವಚನಗಳಲ್ಲಿ ಪ್ರಕಟಿಸಿರಲಾಗಿರುವದು. ಯಾವನಿಗಾದರೂ ಆತ್ಮನಿಂದ ಹುಟ್ಟಿದವನಾಗುವ [ಅಂದರೆ ಅಂಕುರಿಸಲ್ಪಡುವ] ಸ್ಥಿತಿಗೆ ಬರಲು ಸಾಧ್ಯವಾಗಬೇಕಾದರೆ ಅವನಿಗೆ ಹೃದಯ-ಪೂರ್ವಕವಾದ ನಂಬಿಕೆ ವಿಧೇಯತೆಗಳು ಅವಶ್ಯಕವಾಗಿರುವದು ಮಾತ್ರವಲ್ಲದೆ ಅವನು ಪವಿತ್ರವಾದ ಆತ್ಮದಲ್ಲಿ ಅಥವಾ ಪರಿಶುದ್ಧ ಆತ್ಮದಲ್ಲಿ ಅಂದರೆ ತಂದೆಯೊಂದಿಗೆ ಹಾಗು ಮಗನೊಂದಿಗೆ ಅನ್ಯೋನ್ಯತೆಯುಳ್ಳ ಆತ್ಮದಲ್ಲಿ ಬೆಳೆಯುತ್ತಾ ಮುಂದುವರೆಯ-ಬೇಕಾದರೆ ನಂಬಿಕೆ ವಿಧೇಯತೆಗಳಲ್ಲಿ ಬೆಳೆಯುತ್ತಾ ಮುಂದುವರೆಯುವದೂ ಸಹ ಅಗತ್ಯವಾಗುವದು.

ಪವಿತ್ರಾತ್ಮದಿಂದ ಹುಟ್ಟಿದವರಾಗುವದು [ಅಂಕುರಿಸಲ್ಪಟ್ಟ-ವರಾಗುವದು] ಒಂದು ಸಂಗತಿಯಾದರೆ ಅಪೋಸ್ತಲರು-"ಪವಿತ್ರಾತ್ಮಭರಿತರಾಗಿರಿ" (ಎಫೆಸ್ಸ 5:18) ಎಂದು ಒತ್ತಾಯಿಸಿ ಹೇಳಿರುವ ಸ್ಥಿತಿಯನ್ನು ಪಡಕೊಳ್ಳುವದು ಬೇರೊಂದು ಸಂಗತಿಯಾಗಿರುವದು. ಪವಿತ್ರಾತ್ಮಭರಿತರಾಗಿರುವದರ ಪ್ರಮಾಣವು ನಾವು ಸ್ವಂತ ಚಿತ್ತವೆಂಬ ಭಾವವನ್ನು ಬರಿದುಮಾಡಿಕೊಳ್ಳುವ ಪ್ರಮಾಣಕ್ಕೆ ಅನುಗುಣವಾಗಿರುವದು. ವಿಧೇಯತೆಯೆಂಬುದು ಅನುದಿನದ ಜೀವಿತದಲ್ಲಿ ತೋರ್ಪಡ-ಲಾಗುವದನ್ನು ಬಿಟ್ಟು ಬೇರೆ ಏನನ್ನೂ ಮಾಡಲು ಸಾಧ್ಯವಿಲ್ಲ-ವಾದರೂ ಕರ್ತನು ಪ್ರತಿಷ್ಠಿತರಾದ ತನ್ನ ಜನರಲ್ಲಿ ಮಾನ್ಯಮಾಡುವದು ವಿಧೇಯತೆಯ ಉದ್ದೇಶವನ್ನು, ವಿಧೇಯತೆಯುಳ್ಳ ಇಚ್ಛೆಯನ್ನು, ವಿಧೇಯತೆಯುಳ್ಳ ಹೃದಯವನ್ನು, ಅದು ಕೇವಲ [ದೇಹವೆಂಬ] ಮಣ್ಣಿನ ಘಟವನ್ನು [ಪಾತ್ರೆಯನ್ನು] ನಿಯಂತ್ರಿಸುವಂಥದನ್ನಲ್ಲ. ಹೀಗಾಗಿ ಪೂರ್ಣ ನಿಷ್ಠೆಯುಳ್ಳ ಕೆಲವರ ಹೃದಯಗಳು ತಮ್ಮ ಸಂಪರ್ಕಕ್ಕೆ ಬರುವವರಿಗೆ ಅತಿ ಮೆಚ್ಚಿಗೆಯಾಗದಿದ್ದರೂ ಕರ್ತನಿಗೆ ಅದು ಅತಿ ಮೆಚ್ಚಿಕೆಯಾಗಿರುವದು; ಕೆಲವರು ಹೊರಗಣ ನೈತಿಕತೆಯ ಕಾರಣ "ಮನುಷ್ಯರ ದೃಷ್ಟಿಯಲ್ಲಿ ಶ್ರೇಷ್ಠವೆನಿಸಿಕೊಳ್ಳುವರು" ಅದರೆ ಹೃದಯದ ಕಾಠಿಣ್ಯತೆ ಇಲ್ಲವೇ ಅಪ್ರಾಮಾಣಿಕತೆಯ ನಿಮಿತ್ತ ದೇವರ ದೃಷ್ಟಿಯಲ್ಲಿ ಅವರು "ಅಸಹ್ಯರಾಗಿರುವರು". (ಲೂಕ 16:15) ಹೇಗಿದ್ದರೂ, ತನ್ನಲ್ಲಿ ನೂತನ ನಿರೀಕ್ಷೆಯನ್ನು ಪಡೆದು ಹೊಸ ಭಾವವನ್ನು ಹೊಂದಿರುವವನು ತನ್ನ ಆಲೋಚನೆಯಲ್ಲಿ ಮಾತ್ರವಲ್ಲದೆ ಮಾತುಕೃತ್ಯಗಳು ಹಾಗು ತನ್ನ ಬಾಹ್ಯಾಂತರ್ಯ ವಿಷಯಗಳೆಲ್ಲವುಗಳಲ್ಲಿಯೂ ಶುದ್ಧನನ್ನಾಗಿ ಮಾಡಿಕೊಳ್ಳಲು ಪರಿಶ್ರಮಿಸುವನು. – 1 ಯೋಹಾನ 3:3

ದೇವಾನುಗ್ರಹ ಸಂಬಂಧವಾದ ಇತರ ಎಲ್ಲಾ ಸಂಗತಿಗಳಲ್ಲಿರುವಂತೆಯೇ ಪವಿತ್ರಾತ್ಮವೆಂಬದು ತಂದೆಯಿಂದ ಬರುವಂಥದ್ದಾದರೂ ಇತರ ವರಗಳ ವಿಷಯಗಳಲ್ಲಿರು-ವಂತೆಯೇ ಅದು ನಮಗೆ ಮಗನ ಮೂಲಕವಾಗಿಯೇ ಬರುವದಲ್ಲದೆ ಅದು ತಂದೆಯ ಹಾಗು ನಮ್ಮ ನಡುವೆ ಇರುವ ಬೇರೆ ಯಾವುದೇ ಸಂಬಂಧದ ಮೂಲಕವಾಗಿರುವದಿಲ್ಲ. ನಮ್ಮ ಹಿಂದಿನ ಪಾಠದಲ್ಲಿ ನಾವು ನೋಡಿರುವಂತೆ, ತಂದೆಗೆ ಮಾಡುವ ನಮ್ಮ ಪ್ರಾರ್ಥನೆಗಳೆಲ್ಲವೂ ಮಗನಿಂದ ಉತ್ತರಿಸಲ್ಪಡುವದು – "..ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೊ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು: ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು." ಹೀಗೆ ನಾವು ಈ ಪಾಠದಲ್ಲಿ ನೋಡುವದೇನಂದರೆ ಪವಿತ್ರಾತ್ಮವರವು ನಮಗೆ ಬರುವದು ನಮ್ಮ ಹಾಗು ತಂದೆಯ ನಡುವೆ ಇರುವ ಯಾವುದೇ ನೇರವಾದ ಸಂಬಂಧದ ಕಾರಣದಿಂದಾಗಿರುವದಿಲ್ಲ, ಆದರೆ ನಮ್ಮ ಕರ್ತನಾದ ಯೇಸುವು ನಮಗಾಗಿ ಮಾಡುವ ವಿಜ್ಞಾಪನೆಯ ಮೂಲಕವಾಗಿರುವದು. "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು." (ವಚನ 16) ಇದೇ ಅಭಿಪ್ರಾಯವು ಮತ್ತೆ ವಚನ 26ರಲ್ಲಿ ವ್ಯಕ್ತವಾಗಿರುವದು, "ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿ ಕೊಡುವ ಪವಿತ್ರಾತ್ಮನೇ."

ಇಲ್ಲಿ ನಮಗಿರುವ ಪಾಠವೇನಂದರೆ, ತಂದೆಯ ಬಳಿಯಲ್ಲಿ ಇನ್ನೂ ಇರುವ ನಮ್ಮ ಸ್ಥಾನಮಾನವು ಕ್ರಿಸ್ತನಲ್ಲಿ ಕೇವಲ ಆತನ ದೇಹದ ಅಂಗಗಳಾಗಿ ಪರಿಗಣಿಸಲ್ಪಟ್ಟಂಥದು. ನಮ್ಮ ಕರ್ತನಾದ ಯೇಸುವು ನಮ್ಮ ಪರವಾಗಿ ತಂದೆಯನ್ನು ಪ್ರತಿನಿಧಿಸುವನು ಹಾಗು ತಂದೆಯ ಪರವಾಗಿ ನಮ್ಮನ್ನು ಪ್ರತಿನಿಧಿಸುವನು. ಪವಿತ್ರಾತ್ಮದ ಮೂಲಕವಾಗಿ ನಮಗೆ ದೊರೆತಿರುವ ಆದರಣೆ ಹಾಗು ಶಕ್ತಿಯು ತಂದೆಯಿಂದಾದ ಸತ್ಯದ ಆತ್ಮದ ಮೂಲಕವಾಗಿದ್ದು ಇವೆಲ್ಲವೂ ತಂದೆಯ ಬಳಿಯಿಂದ ಹೊರಟುಬಂದಿರುವಂಥದ್ದು. ಅದು ನಮಗೆ ನೇರವಾಗಿ ದೊರಕುವಂಥದಲ್ಲಾ ಆದರೆ ಅದು ಕೇವಲ ನಮ್ಮ ಕರ್ತನೂ ಶಿರಸ್ಸೂ ಆಗಿರುವ ಯೇಸುವಿನ ಮೂಲಕವಾಗಿರುವದು. ಒಂದೇ ಮಾತಿನಲ್ಲಿ ಹೇಳುವದಾದರೆ, ನಮಗೆ ತಂದೆಯ ಬಳಿಯಲ್ಲಿ ಯಾವ ಸ್ಥಾನಮಾನವೂ ಇರುವದಿಲ್ಲ ಹಾಗೂ ಆತನ ಕೃಪೆಯಿಂದ ನಮ್ಮ ಕರ್ತನಾದ ಯೇಸುವಿನ ಮೂಲಕ ನಾವು "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗಿ" ಮೊದಲನೇ ಪುನರುತ್ಥಾನದಲ್ಲಿ ದೇವರ ಹೋಲಿಕೆಯಾಗಿರುವ ಕ್ರಿಸ್ತನ ಹೋಲಿಕೆಯಲ್ಲಿ ಪರಿಪೂರ್ಣತೆಗೆ "ಮಾರ್ಪಡುವ" ವರೆಗೂ ನಮಗೆ ಯಾವ ಸ್ಥಾನಮಾನವೂ ಇರುವದಿಲ್ಲ. ಆಗ ಮತ್ತು ಆನಂತರದಲ್ಲಿ ನಿಜವಾಗಿಯೂ ಪರಿಪೂರ್ಣರಾಗಿ, ಕೇವಲ ಪರಿಪೂರ್ಣರೆಂದು ಪರಿಗಣಿಸಲ್ಪಡದೆಯೇ, ನಾವು ವೈಯುಕ್ತಿಕ-ವಾಗಿ ತಂದೆಯೊಡನೆ ಸ್ಥಾನಮಾನವನ್ನು ಹೊಂದಿಕೊಳ್ಳುವೆವು, ಆದರೆ ಅದಕ್ಕೆ ಮೊದಲೇ ಅಲ್ಲ.

ಹೀಗಾಗಿ ಯಾವನಾದರೂ ಕ್ರಿಸ್ತನ ಅಮೂಲ್ಯವಾದ ರಕ್ತದಲ್ಲಿ ತನ್ನ ನಂಬಿಕೆಯನ್ನು ಕಳಕೊಳ್ಳುವ ಮೂಲಕ ಕ್ರಿಸ್ತನೊಡನೆ ಇರುವ ತನ್ನ ಸಂಬಂಧವನ್ನು ಕಳೆದುಕೊಂಡಲ್ಲಿ ಅಥವಾ ಇಚ್ಛಾಪೂರ್ವಕವಾಗಿ ಮಾಡಿದ ಪಾಪದ ಮೂಲಕವಾಗಿ ಪವಿತ್ರಾತ್ಮವನ್ನು ಕಳೆದು-ಕೊಂಡಲ್ಲಿ ಅವನು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ

ಯೇಸುವಿನ ಮೂಲಕವಾದ ರಕ್ಷಣೆ, ಪರಿಪಾಲನೆ, ನೀತಿವಸ್ತ್ರದ ಹೊದಿಕೆ ಇವುಗಳಿಂದ ಹೊರಬಂದವನಾಗಿ ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವನು. ಇದರ ಅರ್ಥವೇನಂದರೆ ವಾಸ್ತವಾಂಶದ ಹಾಗು ಕೃತ್ಯಗಳ ಅನುಸಾರ ವಾಗಿ ನಡೆಯುವ ಒಂದು ನ್ಯಾಯತೀರ್ಪು. ಅಪರಿಪೂರ್ಣರಾದ ಸೃಷ್ಟಿಗಳೆಲ್ಲವುಗಳಿಗೆ ಇದರ ಅರ್ಥವು ಮರಣವಾಗಿರುವದು. (ಇಬ್ರೀಯ 10:31) ಅದುದರಿಂದ ಶಾಸ್ತ್ರವಚನದ ಅನುಸಾರವಾಗಿರುವ ಬುದ್ಧಿಮಾತು ಸಹ ಏನಂದರೆ, ನಾವು ಪ್ರೋಕ್ಷಣ ರಕ್ತದ ಅಡಿಯಲ್ಲಿದ್ದವರಾಗಿ ಆತನ ಪ್ರೀತಿಯಲ್ಲಿ ನೆಲೆಗೊಂಡಂಥವರಾಗಿರಲು ಆತನಲ್ಲಿ ನೆಲಗೊಂಡಿರಬೇಕೆಂಬದೇ. – ಯೋಹಾನ 15:4,6,10; 1 ಯೋಹಾನ 2:24–29.

ನಮ್ಮ ಕರ್ತನು ಮನಸ್ಸಿಗೆ ನಾಟುವಂತೆ ಹೇಳಿರುವ – ದೇನಂದರೆ, ಯಾವನಾದರೂ ತನ್ನ [ಕ್ರಿಸ್ತನ] ಮಾತುಗಳನ್ನು ಕೈಗೊಂಡು ನಡೆದು ಆತನಿಗೆ ಮೆಚ್ಚಿಕೆಯಾಗಿರಲು ಪರಿಶ್ರಮಿಸದಿದ್ದರೆ ಆಮೂಲಕವಾಗಿ ಅವನು ಆತನನ್ನು [ಕ್ರಿಸ್ತನನ್ನು] ಪ್ರೀತಿಸುವದಿಲ್ಲವೆಂಬುದನ್ನು ತೋರ್ಪಡಿಸುವನು. (ವಚನ 23, 24) ಖಂಡಿತವಾಗಿಯೂ ಪ್ರೀತಿಯ ವಿಷಯದಲ್ಲಿ ಭಕ್ತಿಗಿಂತಲೂ ಉತ್ತಮವಾದ ಪರೀಕ್ಷೆಯು ಬೇರೊಂದಿರುವದಿಲ್ಲ. ಹಾಗು ಭಕ್ತಿಯ ವಿಷಯದಲ್ಲಿ ವಿದೇಯತೆಗಿಂತಲೂ ಉತ್ತಮ–ವಾದ ಪರೀಕ್ಷೆಯು ಬೇರೊಂದಿರುವದಿಲ್ಲ. ತಿಳುವಳಿಕೆಯುಳ್ಳ ನಮ್ಮ ಮನಸ್ಸಾಕ್ಷಿಯು ಕರ್ತನ ಈ ಮಾತಿಗೆ ಹೃತ್ಪೂರ್ವಕವಾಗಿ ಸಮ್ಮತಿಸಿ ಅಪೋಸ್ತಲನೊಂದಿಗೆ ಉದ್ಗಾರವಾಗಿ ಹೇಳುವದೇನಂದರೆ, "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು." – 2 ಕೊರಿಂಥ 5:14–15.

ಒಡೆಯನು ನಮಗೆ ನಿರ್ದಿಷ್ಟವಾಗಿ ತೋರಿಸಿ ಹೇಳಿರುವ – ದೇನಂದರೆ, ಆತನ ಮಾತುಗಳನ್ನು ಕೈಗೊಂಡು ನಡೆಯುವಲ್ಲಿ ನಾವು ಕೇವಲ ಆತನಿಗೆ ವಿಧೇಯರಾಗಿ ಆತನನ್ನು ಮೆಚ್ಚಿಸುವದು ಮಾತ್ರವಲ್ಲದೆ ಆತನು ಈ ಎಲ್ಲಾ ಸಂಗತಿಗಳಲ್ಲಿ ತಂದೆಯಾದ ಯೆಹೋವನಿಗೆ ಬಾಯಾಗಿರುವದರ ಪರಿಣಾಮವಾಗಿ ನಾವು ಆತನಿಗೆ ವಿಧೇಯರಾಗಿ ಆತನನ್ನು ಮೆಚ್ಚಿಸುವವರಾಗಿರುವಲ್ಲಿ ನಾವು ತಂದೆಗೂ ವಿಧೇಯರಾಗಿ ಆತನನ್ನು ಮೆಚ್ಚಿಸುವ–ವರಾಗಿರುತ್ತೇವೆಂಬದೇ. ಆತನು ಅವರೊಂದಿಗೆ ಇರುವಾಗ ಇಷ್ಟನ್ನೇ ಹೇಳಲು ಸಾಧ್ಯವಿತ್ತು. ಆದರೆ ಆತನು ಅವರಿಗೆ ಇನ್ನೂ ಅನೇಕ ಸಂಗತಿಗಳನ್ನು ತಿಳಿಸಲು ಬಯಸಿದ್ದನು. ಅಲ್ಲದೆ ಅದನ್ನು ತಿಳಿದುಕೊಳ್ಳುವದು ಅವರಿಗೆ ಅಗತ್ಯವಿತ್ತು, ಆದರೆ ಅದನ್ನು ಸ್ವೀಕರಿಸಿಕೊಳ್ಳಲು ಆಗ ಅವರಿಗೆ ಇನ್ನೂ ಸಾಧ್ಯವಿರಲಿಲ್ಲ, ಯಾಕಂದರೆ ಪವಿತ್ರಾತ್ಮವು ಇನ್ನೂ ಅವರ ಮೇಲೆ ಬಂದಿರಲಿಲ್ಲವಷ್ಟೆ, ಅಲ್ಲದೆ ಆತನು ಮೇಲಕ್ಕೆ ಏರಿಹೋದ ನಂತರ ನಮಗಾಗಿ ಆತನು ದೇವರ ಸನ್ನಿಧಿಯಲ್ಲಿ ಕಾಣಿಸಿಕೊಂಡು ಕಲ್ವಾರಿಯಲ್ಲಿ ನೀಡಿದಂಥ ಈಡುಬಲಿಯನ್ನು ಅತಿಪವಿತ್ರ ಸ್ಥಳದಲ್ಲಿ ಅರ್ಪಿಸುವ ವರೆಗೂ ಪವಿತ್ರಾತ್ಮವು ಬರಲು ಸಾಧ್ಯವಿರಲಿಲ್ಲ. – ಯೋಹಾನ 7:39; ಇಬ್ರೀಯ 9:24

ನಮ್ಮ ಕರ್ತನು ಭರವಸೆಯಾಗಿ ಹೇಳಿದ್ದೇನಂದರೆ, ಆ ಸಹಾಯಕನು ಅಥವಾ ಚೈತನ್ಯದಾಯಕನು ಅಂದರೆ ನಮ್ಮ ವಿಮೋಚಕನೂ ಮಧ್ಯಸ್ಥನೂ ಶಿರಸ್ಸೂ ಆದ ಯೇಸುವಿನ ಪರವಾಗಿ ಮತ್ತು ಆತನ ವಿನಂತಿಯ ಮೇರೆಗೆ ಕಳುಹಿಸಲ್ಪಡುವ ತಂದೆಯ ಪವಿತ್ರಾತ್ಮವು ನಮಗೆ ಬೋಧಿಸುವದೆಂಬದೇ. ಆತನು ಅನೇಕ ವಿಧವಾದ ಸಾಧನಗಳನ್ನು ಬಳಸಿಕೊಂಡು ನಮ್ಮನ್ನು ಉಪದೇಶಿಸುವನು. ಅವು ಯಾವುದಂದರೆ ಸತ್ಯವಾಕ್ಯ, ಅಪೋಸ್ತಲರ ಬರವಣಿಗೆಗಳು, ನಮ್ಮ ಕರ್ತನು ಪವಿತ್ರಾತ್ಮನ ಮೂಲಕವಾಗಿ ಹೊಂದಿರುವ ಕಾಲ ಕಾಲಕ್ಕೆ ಅಗತ್ಯವಾದ ಅನೇಕ ವಿಧವಾದ ಸಹಾಯಗಳು ಹಾಗು ಸಂಸ್ಥೆಗಳನ್ನು, ಬಳಸಿಕೊಂಡು ತನ್ನ ಮಂದೆಗೆ ಒದಗಿಸಿಕೊಡುವನು.

ಗೊಂದಲಮಯವಾದ ಅವರ ಹೃದಯಗಳಿಗೆ ಇದು ಎಂಥಾ ಸೊಗಸಾದ ಎಂಥಾ ಸಂತೈಸುವಂಥ ಸಂಗತಿ. ಅಲ್ಲದೆ ನಮ್ಮ ಪ್ರಿಯ ವಿಮೋಚಕನು ವಚನ 27ರಲ್ಲಿ ವ್ಯಕ್ತಪಡಿಸಿರುವ ತನ್ನ ಪ್ರೀತಿಯ ಹಾಗು ಶಾಂತಿಯ ವಿಷಯವಾದ ಪರಂಪರೆಯು ಅಂದರೆ, "ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಲೋಕವು ಕೊಡಲಾರದಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ." ಎಂಬ ಈ ಮಾತು ನಮಗೆ ಎಷ್ಟು ಪುನಶ್ಚೇತನಕರವಾದದ್ದು. ಮಾನುಷ ಗ್ರಹಿಕೆಯೆಲ್ಲವನ್ನೂ ಮೀರುವ ಈ ಪ್ರೀತಿ ಆನಂದಗಳು ಲೋಕಕ್ಕೆ ನೀಡಲಾಗಿರುವದಿಲ್ಲ ಇಲ್ಲವೇ ಹೆಸರಿಗಾಗಿರುವ ಕ್ರೈಸ್ತಪ್ರಾಧ್ಯಾಪಕರಿಗೆ ಇಲ್ಲವೇ ಸಾಂಪ್ರಾದಾಯ–ಸ್ಥರಿಗಾಗಲಿ ಅಥವಾ ಸಂಸ್ಕಾರಾಸಕ್ತರಿಗಾಗಲಿ ಅವರು ಎಷ್ಟೇ ಆಸಕ್ತಿಯುಳ್ಳವರಾಗಿದ್ದರೂ ಅಂಥವರಿಗೆ ಇದನ್ನು ನೀಡಿರಲಿಲ್ಲ. ಅದು ಕೇವಲ ಪವಿತ್ರಾತ್ಮನ ಮೂಲಕವಾಗಿ ಕೃಪಾ ಐಶ್ವರ್ಯಗಳನ್ನು ಹೊಂದುವ ಅಂದರೆ ಎಲ್ಲಾ ಸಂಗತಿಗಳಲ್ಲಿ ತಮ್ಮ ಸಜೀವ ಶಿರಸ್ಸಾಗಿರುವ ಕ್ರಿಸ್ತನಲ್ಲಿ ಸತ್ಯದ ಹಾಗು ಅದರ ಆತ್ಮಕ್ಕೆ ವಿಧೇಯರಾಗಿ ಬೆಳೆಯುತ್ತಿರುವಂಥರಿಗೆ ಉದ್ದೇಶಿತವಾಗಿದ್ದು, ಅವರಿಗೇ ಇವುಗಳನ್ನು ಹೊಂದಲು ಸಾಧ್ಯವಾಗಿರುವದು. ಇಂಥವರೇ ಗಾಢವೂ ನಿರಂತರವೂ ಆದ ಶಾಂತಿಯನ್ನು ಮತ್ತು ನಂಬಿಕೆ ಹಾಗು ವಿಧೇಯತೆಗಳ ಮೂಲಕವಾಗಿ ದೇವಜನ–ರೊಂದಿಗೆ ದೇವಕೃಪಾ ಐಶ್ವರ್ಯಗಳನ್ನು ಪಡಕೊಳ್ಳುವರು. ಅವರು ಅದರ ಉದ್ದ ಅಗಲ ಆಳ ಎತ್ತರಗಳನ್ನು ಗ್ರಹಿಸಿಕೊಳ್ಳು–ವಷ್ಟರ ಪ್ರಮಾಣದಲ್ಲಿ ಅದು ಅವರಲ್ಲಿ ವೃದ್ಧಿಯಾಗುತ್ತಾ ಬರುವದು.

ಇದು ಲೌಕೀಕವಾಗಿ ದೊರೆಯುವಂಥ ಶಾಂತಿಯಾಗಿ–ರುವದಿಲ್ಲ, ಉದಾಸೀನವೂ ನಿರಾಸಕ್ತಿಯೂ ಉಂಟುಮಾಡುವ ಶಾಂತಿಯಲ್ಲ, ಆಲಸ್ಯಕರವಾಗಿರುವಂಥ ಶಾಂತಿಯಾಗಿರುವದಿಲ್ಲ, ಭೋಗಾಸಕ್ತಿಯುಳ್ಳ ಶಾಂತಿಯಲ್ಲ, ಅದೃಷ್ಟವಾದದಿಂದಾದ ಶಾಂತಿಯಲ್ಲ, ಆದರೆ ಕ್ರಿಸ್ತನಿಂದಾದ ಶಾಂತಿ ಅಂದರೆ "ನನ್ನಲ್ಲಿರುವಂಥ ಶಾಂತಿ" ಆಗಿರುವದು. ಹಿಂದಿರುಗಿ

ನೋಡುವದಾದರೆ ನಮ್ಮ ಒಡೆಯನು ದೇವರೊಂದಿಗಿರುವ ತನ್ನ ಶಾಂತಿಯನ್ನು ಎಲ್ಲಾ ಪರಿಸ್ಥಿತಿಗಳಲ್ಲಿಯೂ ಕಾಪಾಡಿಕೊಂಡು ಬಂದಿದ್ದನು. ಅದು ದೇವ ಜ್ಞಾನ, ಪ್ರೀತಿ ನ್ಯಾಯ ಮತ್ತು ಬಲಗಳ ಮೇಲೆ ನಿಸ್ಸಂದೇಹಕರವಾದ ಭರವಸೆಯುಳ್ಳವನಾಗಿರುವದರ ಮೂಲಕವಾಗಿ ದೊರೆಯುಂಥ ಶಾಂತಿಯಾಗಿದ್ದು ಅದು ತನಗೆ ನಂಬಿಗಸ್ತರಾದವರಿಗೆ ಯಾವ ವಿಧದಲ್ಲಿಯೂ ಹಾನಿಮಾಡ-ದಂಥದಾಗಿದ್ದು, ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆಂಬ ವಾಗ್ದಾನವನ್ನು ನೆನೆಯುವದರ ಮೂಲಕವಾಗಿ ದೊರಕುವಂಥ ಶಾಂತಿಯಾಗಿ-ರುವದು. ಈ ಶಾಂತಿಯು ನಂಬಿಕೆಯ ಮೂಲಕವಾಗಿ ದೇವರು ಮಾಡಿರುವ ಏರ್ಪಾಟಿನ ಪ್ರಕಾರವಾಗಿ ಬರಮಾಡುವಂಥ ಯಾವುದೇ ಸಂಗತಿಗಳನ್ನು ಅಂಗೀಕರಿಕೊಂಡು ಒಡೆಯನಿಂದ ವಾಗ್ದಾನ ಮಾಡಲ್ಪಟ್ಟು ಅಂತಿಮವಾಗಿ ಲಭಿಸುವಂಥ ಆಶೀರ್ವಾದಗಳ ನೆರವೇರಿಕೆಯನ್ನು ಆನಂದಪೂರ್ವಕವಾದ ಅಪೇಕ್ಷೆಯಿಂದ ಕಣ್ಣೀರಿನ ಮೂಲಕವಾಗಿ ನಿರೀಕ್ಷಿಸಲು ಸಾಧ್ಯವನ್ನಾಗಿಸುವದು. ಈಗ ಇರುವಂಥ ಶಾಂತಿ ಆನಂದಗಳು ಕೇವಲ ಇವುಗಳ ಪೂರ್ವಾನುಭವಗಳಾಗಿರುವವು.

*****

# ನಿಜವಾದ ದ್ರಾಕ್ಷೇಬಳ್ಳಿ ಹಾಗು ಅದರ ಫಲಗಳು

**ರೀಪ್ರಿಂಟ್ಸ್ ಪುಟ 3544**

## ಯೋಹಾನ 15:1–12

**"ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು," – ಯೋಹಾನ 15:8**

ಸ್ಮರಣಭೋಜನ (ಸಂಸ್ಕಾರವನ್ನು) ಆಚರಿಸಿದ ನಂತರ ಕರ್ತನು ಹಾಗು ಶಿಷ್ಯರು, ಆತನನ್ನು ಹಿಡುಕೊಡಲು ಹೊರಟವನಾದ ಯೂದನನ್ನು ಹೊರತುಪಡಿಸಿ, ಮೇಲುಪ್ಪರಿಗೆ ಯಿಂದ ಗೆತ್ಸೇಮನೆ ತೋಟದ ಕಡೆಗೆ ಹೊರಟಿದ್ದರು. ಕರ್ತನು ತಮಗೆ ಹೇಳಿದ ಹಲವು ಸಂಗತಿಗಳ ಬಗ್ಗೆ ಹಾಗು ಸಂಭವಿಸಲಿರುವ ತನ್ನ ಮರಣದ ವಿಷಯವಾಗಿ ಮಾಡಿದ ಪ್ರಕಟನೆಯ ದೆಸೆಯಿಂದ ಶಿಷ್ಯರು ತಮ್ಮ ಹೃದಯದಲ್ಲಿ ಸಂಕಷ್ಟಕ್ಕೊಳಗಾಗಿರಲು ಅಲ್ಲದೆ ಕರ್ತನೂ ಸಹ ತನ್ನ ಶಿಷ್ಯರಿಂದ ಬೇರ್ಪಡುವ ಹಾಗು ಅವರ ಮುಂದಿನ ಕಷ್ಟಾನುಭವಗಳನ್ನು ಹೃದಯದಲ್ಲಿಟ್ಟುಕೊಂಡವನಾಗಿ ದ್ರಾಕ್ಷಾಲತೆಯ ಸಾಮ್ಯವನ್ನು ಹೇಳಿದ್ದನು. ಕೆಲವರು ಊಹಿಸಿರುವದೇನಂದರೆ ಕರ್ತನ ಇತರ ಸಾಮ್ಯಗಳಂತೆ ಇದು ನಿದರ್ಶನರೂಪದ ಪಾಠ ಅಂದರೆ ಅವರೆಲ್ಲರಿಂದ ಕಾಣಲಾದ ವಸ್ತುಗಳಿಂದ ಸೂಚಿತವಾದುದನ್ನು ಆದರಿಸಿದ ಪಾಠವಾಗಿತ್ತೆಂಬದು. ಕೆಲವರು ಅನುಮಾನಿಸಿರುವಂತೆ ಮಾರ್ಗದಲ್ಲಿನ ದ್ರಾಕ್ಷೇತೋಟಗಳು ಆ ಪ್ರಸ್ತಾವನೆಗೆ ಪ್ರೇರಿಸಿರಬಹುದೆಂಬದೇ. ಹಾಗು ಇತರರು ಸಲಹೆಮಾಡಿರುವಂತೆ ಅವರು ಪ್ರಯಾಣಿಸುವಾಗ ದೇವಾಲಯದ ಚಿನ್ನದ ಬಾಗಿಲನ್ನು ದಾಟಿಹೊಗುವ ಸಂಭವವಿದ್ದು, ಆ ಬಾಗಿಲಿನಲ್ಲಿ ಚಿನ್ನದ ಒಂದು ವಿಶಾಲವಾದ ದ್ರಾಕ್ಷೇಬಳಿಯ ನಕಾಶೆ ಚಿತ್ರವಿತ್ತೆಂಬದು. ಆ ದ್ರಾಕ್ಷೇಗೊಂಚಲು ಒಂದು ಆಳೆತ್ತರದಷ್ಟಿತ್ತೆಂದು ಜೋಸೆಫಸ್ಸನು ವಿವರಿಸಿ ಹೇಳಿರುವನು: ಮತ್ತೊಬ್ಬ ಯೆಹೂದೀ ಬರಹಗಾರನು – "ಎಲೆಗಳು ಮತ್ತು ಹೂವಿನ ಮೊಗ್ಗುಗಳು ಹೊಳೆಯುವ ಕೆಂಪಾದ ಚಿನ್ನದ್ದಾಗಿದ್ದು ಅದರ ಗೊಂಚಲುಗಳು ಹಳದಿ ಬಣ್ಣದ ಚಿನ್ನದಿಂದ ಕೂಡಿದ್ದಾಗಿ ಅದರ ದ್ರಾಕ್ಷೇಹಣ್ಣುಗಳು ಅಮೂಲ್ಯವಾದ ರತ್ನದಿಂದ ಕೂಡಿದ್ದವು" ಎಂದು ವರ್ಣಿಸಿರುವನು. ಯೆಹೂದೀ ವಿದ್ವಾಂಸರ ಪ್ರಕಾರವಾಗಿ, ಈಗ ಕೆಲವರು ದೇವಾಲಯದ ಕಿಟಕಿಗಳನ್ನು ಸ್ಮರಣಾರ್ಥವಾಗಿ ಅರ್ಪಿಸುವ ರೀತಿಯಲ್ಲಿ, ಐಶ್ವರ್ಯವಂತರ ಕೊಡುಗೆಯ ಮೂಲಕವಾಗಿ ಈ ದ್ರಾಕ್ಷೇಬಳ್ಳಿಯ ಎಲೆಗಳು ಅಥವಾ ಗೊಂಚಲು ಇಲ್ಲವೇ ಬಳ್ಳಿಯು ಬೆಳೆಯುತ್ತಾ ಬರುತ್ತಿತ್ತು. ಏನೇ ಇದ್ದರೂ, ಕರ್ತನು ಮತ್ತು ಅಪೋಸ್ತಲರು ಆಗಾಗ್ಗೆ ಈ ಚಿನ್ನದ ದ್ರಾಕ್ಷೇಬಳ್ಳಿಯನ್ನು ನೋಡಿರಲೇಬೇಕು.

ಕರ್ತನು ತಾನೇ ನಿಜವಾದ ದ್ರಾಕ್ಷೇಬಳ್ಳಿಯೆಂದು ಹಾಗು ಆತನ ತಂದೆಯು ಆ ನಿಜವಾದ ದ್ರಾಕ್ಷೇಬಳ್ಳಿಯನ್ನು ನೆಟ್ಟ ನಿಜವಾದ ತೋಟಗಾರನೆಂದು ಅಲ್ಲದೆ ತನ್ನ ಶಿಷ್ಯರು ಆ ಬಳ್ಳಿಯಲ್ಲಿನ ನಿಜವಾದ ಕೊಂಬೆಗಳೆಂದು ಸಾರಿ ಹೇಳಿದ್ದನು. "ನಿಜವಾದ ದ್ರಾಕ್ಷೇಬಳ್ಳಿ" ಎಂದು ವ್ಯಕ್ತವಾಗಿರುವಲ್ಲಿ ಸುಳ್ಳಾದ ಒಂದು ದ್ರಾಕ್ಷೇಬಳ್ಳಿಯು ಇರುವದೆಂಬದು ಸೂಚಿತ-ವಾಗಿರುತ್ತದೆ, ಅಲ್ಲದೆ ಈ ಅಂಶವು ನಮ್ಮ ಕರ್ತನು ತನ್ನ ಜನರಿಗೆ ಪ್ರಕಟನಾ ಗ್ರಂಥದಲ್ಲಿ ಕಡೆಯದಾಗಿ ನೀಡಿಲಾದ ಸಂದೇಶದಲ್ಲಿನ ಸಂಕೇತದಲ್ಲಿಯೂ ಧ್ವನಿತವಾಗಿ ವಿವರಿ-ಸಲ್ಪಟ್ಟಿರುವದು. ಅಲ್ಲಿ ಆತನು "ಭೂಮಿಯ ದ್ರಾಕ್ಷೇಬಳ್ಳಿಯ" ಹಣ್ಣುಗಳನ್ನು ಕೂಡಿಸುವದರ ಬಗ್ಗೆ ಮಾತನಾಡಿದವನಾಗಿ ಅದನ್ನು ಈ [ಸುವಾರ್ತಾ] ಯುಗದ ಅಂತ್ಯದಲ್ಲಿ ದೇವರ ರೌದ್ರವೆಂಬ ದ್ರಾಕ್ಷೇತೊಟ್ಟಿಯಲ್ಲಿ ಹಾಕಲ್ಪಡುವದಾಗಿ ಹೇಳಿರುವನು (ಪ್ರಕಟನೆ 14:19). ಆದುದರಿಂದ "ನಿಜವಾದ ದ್ರಾಕ್ಷೇಬಳ್ಳಿ" ಎನ್ನುವ ನಮ್ಮ ಕರ್ತನ ಮಾತಿನಲ್ಲಿ ಅಪೋಸ್ತಲರು ಆಗ ಇದರಿಂದ ಕಲೆಹಾಕುವದಕ್ಕೆ ಸಾಧ್ಯವಿದ್ದುದಕಿಂತಲೂ ಇನ್ನೂ ಒಂದು ಆಳವಾದ ಅರ್ಥವಿತ್ತು. ತಂದೆಯಿಂದ ನೆಡಲಾದ ನಿಜವಾದ ದ್ರಾಕ್ಷೇಬಳ್ಳಿ ಹಾಗು ಭೂಮಿಯ ದ್ರಾಕ್ಷೇಬಳ್ಳಿ ಇವೆರಡೂ ಬೆಳೆದುಬಂದಿರುವ ಒಂದು ಕಾಲದಲ್ಲಿ ನಾವು ಜೀವಿಸುತ್ತಿದ್ದು ಈ ಎರಡೂ ದ್ರಾಕ್ಷೇಬಳ್ಳಿಗಳನ್ನು ಗಮನಿಸುವಂಥದಲ್ಲದೆ ಭೂಲೋಕದ ದ್ರಾಕ್ಷೇಬಳ್ಳಿಯೆಂಬದು ಪರಲೋಕದ ದ್ರಾಕ್ಷೇಬಳ್ಳಿಯನ್ನು ನಕಲುಮಾಡಿರುವಂಥದ್ದು ಎಂಬುದನ್ನು ಗಮನಿಸುವ ಅವಕಾಶವನ್ನು ಸಹ ಪಡೆದಿದ್ದೇವೆ. ಈ ಸಂಗತಿಯನ್ನು ಸ್ಪಷ್ಟವಾಗಿ ಕಾಣುವಷ್ಟರ ಪ್ರಮಾಣದಲ್ಲಿ ಇದು ನಮಗೆ ಕರ್ತನ ಸಾಮ್ಯವನ್ನು ಅರ್ಥಮಾಡಿಕೊಳ್ಳುವದು ಮಾತ್ರವಲ್ಲದೆ, ಇದನ್ನು ನಮ್ಮ ಅನುದಿನದ ಜೀವಿತದಲ್ಲಿ

ಅನ್ವಯಮಾಡಿಕೊಳ್ಳಲು ಸಹ ನಮಗೆ ಸಹಾಯ ಮಾಡುತ್ತದೆ. ನಾವು ಇದನ್ನು ತಪ್ಪಾಗಿ ತಿಳುಕೊಂಡು, ಅಪಾರ್ಥ ಮಾಡಿಕೊಂಡ –ವರಾಗಿ, ಈ ಸುಳ್ಳಾದ ದ್ರಾಕ್ಷಾಬಳ್ಳಿಯಿಂದ ಅಥವಾ ಸುಳ್ಳಾದ ಅದರ ಕೊಂಬೆಗಳಿಂದ ಇಲ್ಲವೇ ಇದರ ಬೆಳವಣಿಗೆಯ ಬಗ್ಗೆ ಸೂಚಿತವಾದ ತಪ್ಪಾದ ತತ್ವಬೋಧೆಗಳಿಂದ ಮೋಸಹೋಗುವ ಅಪಾಯವೂ ಕಡಿಮೆಯಿರುವದು. ಯಾಕಂದರೆ ಇದು ದೈವಿಕ ತೋಟಗಾರನ ಪರಿಪಾಲನೆಯಲ್ಲಿರುವದಿಲ್ಲ.

## ನಿಜವಾದ ದ್ರಾಕ್ಷೇಬಳ್ಳಿ

ಭೂಮಿಯ ದ್ರಾಕ್ಷೇಬಳ್ಳಿಯು ಭೂಸಂಬಂಧವಾದ ಜ್ಞಾನದ ಮೂಲಕವಾಗಿ ಸ್ಥಾಪಿತವಾದ ಹೆಸರಿಗೋಸ್ಕರವಾಗಿರುವ ಕ್ರಿಸ್ತೀಯ ವ್ಯವಸ್ಥೆಯಾಗಿರುವದು. ಇದರ ಕೊಂಬೆಗಳು ಕ್ರೈಸ್ತಸಮೂಹ –ದಲ್ಲಿರುವ ವಿವಿಧ ಪಂಗಡಗಳು ಹಾಗು ಗುಂಪು ಕೂಟಗಳಾಗಿ–ರುವದು. ಕೆಥೆಡ್ರಲ್‌ಗಳು, ದೇವಸ್ಥಾನ, ಟಾಬರ್ನಾಕಲ್, ಚಾಪೆಲ್, ಅನಾಥಾಶ್ರಮ, ಆಸ್ಪತ್ರೆ ಮುಂತಾದವುಗಳು, ರಾಜಕೀಯ ಬಲ, ಜನರ ಗೌರವಗಳು, ಐಶ್ವರ್ಯ ಹಾಗು ಸಾಮಾಜಿಕ ಸ್ಥಾನಮಾನ –ಗಳು ಇದರ ಫಲಗಳಾಗಿರುವವು. ಇದು ಲೋಕದಲ್ಲಿ ಮಹತ್ವವುಳ್ಳದ್ದಾಗಿದ್ದು ಪ್ರಭಾವ ಹೊಂದಿರುವದು. ಮತ್ತು ತನ್ನ ಕೊಂಬೆಗಳೆಲ್ಲವುಗಳಲ್ಲಿ ಹಾಗು ಇದರ ವ್ಯವಹಾರಗಳ ಆಡಳಿತಗಳಲ್ಲಿ ಲೌಕೀಕಭಾವವು ಹರಿದಾಡುತ್ತಿದ್ದು ಅದರ ಫಲಗಳು ಸಂಪೂರ್ಣವಾಗಿ ಕೆಟ್ಟದ್ದಲ್ಲದಿದ್ದರೂ ಸಂಪೂರ್ಣವಾಗಿ ಭೂಸಂಬಂಧದ್ದಾಗಿದ್ದು ಅದು ಇಷ್ಟವಾದದ್ದೂ ಪ್ರಸಂಶಿಸಲ್ಪಟ್ಟದ್ದೂ ಆಗಿರುವದು. ಯಾಕಂದರೆ ಅದು ಪರಲೋಕ ಸಂಬಂಧದ್ದಾಗಿ –ರದೆ ಭೂಸಂಬಂಧಪಟ್ಟದ್ದೂ ಕಾರ್ಯ ರೂಪವಾದದ್ದೂ ಆಗಿರುವದು. ಈ ದ್ರಾಕ್ಷೇಬಳ್ಳಿಯು ಅದ್ಭುತವಾಗಿ ಬೆಳೆದು ಬಂದಿದ್ದು ಹೆಚ್ಚುಕಡಿಮೆ ಮುನ್ನೂರು ಕೊಂಬೆಗಳನ್ನು ಪಡೆದು ನಾಲ್ಕು ದಶಲಕ್ಷ ಅನುಯಾಯಿಗಳನ್ನು ಹೊಂದಿರುವದಾಗಿ ಹೇಳಿಕೊಂಡಿರುವದು. ಅಲ್ಲದೆ ಅದರ ಅನುಯಾಯಿಗಳ ಹಾಗು ಹೇಳಲಶಕ್ಯವಾದ ತನ್ನ ಸಂಪತ್ತು ಐಶ್ವರ್ಯಗಳ ಮೂಲಕವಾಗಿ ಲೋಕದ ಸಂಪತ್ತನ್ನು ಕಾರ್ಯತಃ ನಿಯಂತ್ರಿಸುತ್ತಿರುವದೆಂದು ಹೇಳಬಹುದು.

ಭೂಮಿಯ ದ್ರಾಕ್ಷಾಲತೆಯು ವಿಶೇಷತೆಯುಳ್ಳದ್ದಾಗಿ ಜನರ ದೃಷ್ಟಿಯಲ್ಲಿ ಅದ್ಭುತವಾಗಿರುವದು. ಆದರೆ ಫಲಕೊಯ್ಯುವ ಸಮಯವು ಈ ಹೆಸರಿನ ಸಂಸ್ಥೆಗಳು ಯೆಹೋವನ ಬಲಗೈ ನೆಟ್ಟ ದ್ರಾಕ್ಷೇ ಬಳ್ಳಿಗಳಲ್ಲವೆಂಬದದನ್ನು ತೋರಿಸಿ ಕೊಡುವದು, (ಯೆಶಾಯ 60:21) ಆದುದರಿಂದ ತಾನು ಈ ಸಂಸ್ಥೆಗಳನ್ನು ಸಂಪೂರ್ಣವಾಗಿ ಬುಡಮೇಲು ಮಾಡಿ ನಾಶಮಾಡುವೆನೆಂದು ಕರ್ತನು ಪ್ರಕಟಮಾಡಿ ಹೇಳಿದ್ದಾನೆ. ಅಲ್ಲದೆ ಇದರ ನಾಶನವನ್ನು ಪ್ರಕಟನಾ ಗ್ರಂಥದಲ್ಲಿ ಬರಹದ ಮೂಲಕವಾಗಿ ಸುಸ್ಪಷ್ಟವಾಗಿ ವರ್ಣಿಸಲಾಗಿರುವದು. ಈಗ ಸಮೀಪಿಸುತ್ತಿರುವ ಮಹಾ ಸಂಕಟದ ಕಾಲದಲ್ಲಿ ದೇವರ ರೌದ್ರವೆಂಬ ದ್ರಾಕ್ಷೇತೊಟ್ಟಿಯಲ್ಲಿರುವ ಬಾಬೇಲೆಂಬ ದ್ರಾಕ್ಷೆಯ ರಕ್ತವು [ರಸವು] ವ್ಯಥೆಸಂಕಟಗಳ ಪ್ರವಾಹವಾಗಿ ಲೋಕಕ್ಕೆ ಪರಿಣಮಿಸುವದು. ಶಾಸ್ತ್ರವಚನಗಳು ಬೋಧಿಸಿರುವಂತೆ ಇನ್ನು ಹತ್ತು ವರ್ಷಗಳಲ್ಲಿ ಅದು ಲೋಕವನ್ನೆಲ್ಲಾ ತುಂಬಿಕೊಂಡಿರುವದೆಂದು ನಾವು ನಂಬಿರುವೆವು. ಹೇಗೂ ಆ ಸಮಯಕ್ಕೆ ನಿಜವಾದ ದ್ರಾಕ್ಷೇಬಳ್ಳಿ ಮತ್ತು ಅದರ ಕೊಂಬೆಗಳು ಮಹಿಮಾಪದವಿಗೆ ಸೇರಿಸಲ್ಪಟ್ಟಿದ್ದು ಅದು ಸೂಕ್ತವಾಗಿ ಫಲಬಿಡುವುದರ ಪರಿಣಾಮವಾಗಿ ಭೂಲೋಕದ ಎಲ್ಲಾ ಕುಲಗಳಿಗೆ ಆಶೀರ್ವಾದ ಉಂಟಾಗುವದೆಂಬ ಅರ್ಥಬರುವದು.

"ನಿಜವಾದ ದ್ರಾಕ್ಷೇಬಳ್ಳಿ" ಹಾಗು ಅದರ ಕೊಂಬೆಗಳಾಗಿ ಅದರೊಂದಿಗಿರುವ ನಮ್ಮ ಸಂಬಂಧವನ್ನು ಹಾಗು ಆ ದಿವ್ಯ ತೋಟಗಾರನು ಅಪೇಕ್ಷಿಸುವ ಅದರ ಫಲದ ಗುಣದ ಬಗ್ಗೆ ನಾವು ಎಚ್ಚರಿಕೆಯಿಂದ ಪರಿಗಣಿಸೋಣ. ಹೇಗಂದರೆ ನಮ್ಮ ಕರ್ತನು ಕಡೆಯದಾಗಿ ಹೇಳಿದ ಈ ಸಾಮ್ಯವು ಉದ್ದೇಶಿಸುವಂತೆ ನಮಗೆ ಅದು ಬಹು ಪ್ರಯೋಜನಕರವಾಗಿ, ನಮ್ಮನ್ನು ಬಲಪಡಿಸಿ, ನಮ್ಮನ್ನು ಪ್ರೋತ್ಸಾಹಗೊಳಸಿ, ನಮಗೆ ಸಹಾಯಕವಾಗುವಂತೆ ನಾವು ಅದನ್ನು ಜಾಗರೂಕತೆಯಿಂದ ಪರಿಗಣನೆ ಮಾಡೋಣ.

## ಭೂಮಿಯ ದ್ರಾಕ್ಷೇಬಳ್ಳಿ

ನಿಜವಾದ ದ್ರಾಕ್ಷೇಬಳ್ಳಿಯಲ್ಲಿನ ಕೊಂಬೆಗಳು [ಕ್ರೈಸ್ತ] ಪಂಗಡಗಳಾಗಲಿ [ಕ್ರೈಸ್ತ ಸಮುದಾಯದ] ಗುಂಪುಪಕ್ಷಗಳಾಗಲಿ ಆಗಿರುವದಿಲ್ಲ. ಅಲ್ಲದೆ ಇದು ಕೇವಲ ವಿರೋಧಿಯಾದ ಸೈತಾನನಿಂದಾದ ಮರುಳುಗೊಳಿಸುವಿಕೆಯಾಗಿದ್ದು ಕೇವಲ ಯಾರು ಕರ್ತನ ಜನರಾಗಿರುವರೋ ಅವರು ಇದು ಮನುಷ್ಯರಿಂದಾದ ಸಂಸ್ಥೆಯೆಂಬುದನ್ನು ಗುರುತಿಸಿಕೊಳ್ಳುವರು. ಅಪೋಸ್ತಲರುಗಳು ಪ್ರೆಸ್ಬಿಟೇರಿಯನ್ನರಾಗಲಿ, ಮೆಥೋಡಿಸ್ಟರಾಗಲಿ, ಲೂಥರನ್ನರಾಗಲಿ, ಮುಂತಾದವುಗಳಾಗಲಿ, ಆಗಿರಲಿಲ್ಲದ ಪ್ರಕಾರವೇ, ಕರ್ತನ ಹಿಂಬಾಲಕರಲ್ಲಿ ಯಾರೂ ಅಂಥವರಾಗಿ–ರಲೂಬಾರದು. ದೇವರ ನಿಜವಾದ ಮಕ್ಕಳು ಇಂಥಾ ತಪ್ಪುಗಳಲ್ಲಿ ಇರುವದಕ್ಕೆ ಕಾರಣವೇನಂದರೆ ಅದು ಕೇವಲ ಅವರು ವಿರೋಧಿಯಾದ ಸೈತಾನನ ತಪ್ಪಾದ ಬೋಧನೆಗಳ ಮೂಲಕ ವಾಗಿ ಮರಳುಗೊಳಿಸಲ್ಪಟ್ಟಿರುವದರಿಂದಲೇ. ಈ ಸಾಮ್ಯವನ್ನು ಮತ್ತು ಇತರ ವಾಕ್ಯೋಪದೇಶಗಳನ್ನು ನಾವು ಹೀಗೆಯೇ ಅರ್ಥಮಾಡಿ ಕೊಂಡಿರುವೆವು. ಅಪೋಸ್ತಲರು ಒಬ್ಬರನ್ನೊಬ್ಬರು ಕೂಡಿಕೊಂಡಿ–ರಲಿಲ್ಲ, ಆದರೆ ಅವರು ಹೃದಯದಲ್ಲಿ, ನಂಬಿಕೆಯಲ್ಲಿ, ನಿರೀಕ್ಷೆಯಲ್ಲಿ, ಪ್ರೀತಿಯಲ್ಲಿ, ಕರ್ತನಿಗೆ ಭಕ್ತಿತೋರುವಲ್ಲಿ ಐಕ್ಯವಾಗಿದ್ದರು. ಮತ್ತು ಹೀಗೆಯೇ ನಾವು ಅಪೋಸ್ತಲರಿಗೆ ಸೇರಿದವರಾಗಿರಬಾರದು, ಇಲ್ಲವೆ ನಾನು ಪೌಲನಿಗೆ ಸೇರಿದವನು, ನಾನು ಪೇತ್ರನಿಗೆ ಸೇರಿದವನು, ಮುಂತಾದವನೆಂದು ಹೇಳಿಕೊಳ್ಳಲೂಬಾರದು, ಆದರೆ ಪ್ರತಿಯೊಬ್ಬನೂ ವೈಯುಕ್ತಿಕವಾಗಿ ಒಬ್ಬ ಸದಸ್ಯನಾಗಿ, ಒಂದು ಕೊಂಬೆಯಾಗಿ, ಕರ್ತನಿಗೆ ಸೇರಿದವನಾಗಿರಬೇಕು; ತಾನು ಫಲಭರಿತನಾಗಬೇಕಿದ್ದಲ್ಲಿ ಈ ದ್ರಾಕ್ಷೇಬಳ್ಳಿಯಿಂದ ಸಾರವನ್ನು ಹೀರಿಕೊಳ್ಳುವವನಾಗಿರಬೇಕು. ಕರ್ತನು ಅಪೇಕ್ಷಿಸುವಂಥ ನಿಜವಾದ ಫಲನೀಡುವ ಸಂಬಂಧದಲ್ಲಿ ಪಂಗಡಗಳಿಂದ ಪಡಕೊಂಡ ಸಾರದಿಂದ ಯಾವ ಪ್ರಯೋಜ ನವೂ ಉಂಟಾಗದೆ; ಕೇವಲ ಅದಕ್ಕೆ ಅಡ್ಡಿಯಾಗಿರುವದು. ಇದರಿಂದ ನಿಜವಾದ

ದ್ರಾಕ್ಷೇಬಳ್ಳಿಯ ಕೊಂಬೆಗಳಲ್ಲಿ ಯಾವದೂ ತಪ್ಪಾದ ಗ್ರಹಿಕೆಯ ಮೂಲಕವಾಗಿ ಭೂಮಿಯ ದ್ರಾಕ್ಷೆಬಳ್ಳಿಯಾದ ಹೆಸರಿನ ಕ್ರೈಸ್ತ ಸಂಸ್ಥೆಗಳಿಗೆ ಸಹಕಾರಿಗಳಾಗುವದಿಲ್ಲವೆಂದು ನಾವು ಅರ್ಥೈಸಿ–ಕೊಳ್ಳುವದಿಲ್ಲ. ಅದು ಹೀಗಿರುವದೆಂಬುದನ್ನು ನಾವು ಕಂಡುಕೊಂಡಿರುವೆವು, ಅಲ್ಲದೆ "ನನ್ನ ಪ್ರಜೆಗಳೇ ಅವಳನ್ನು ಬಿಟ್ಟುಬನ್ನಿರಿ; ಅವಳ ಪಾಪದಲ್ಲಿ ನೀವು ಪಾಲುಗಾರರಾಗಬಾರದು, ಅವಳಿಗಾಗುವ ದಂಡನೆಗೆ ನೀವು ಗುರಿಯಾಗಬಾರದು" ಎಂದು ಕರ್ತನು ಕರೆಯುತ್ತಿರುವ ಧ್ವನಿಯನ್ನೂ ಸಹ ನಾವು ಗುರುತಿಸಿಕೊಂಡಿರುವೆವು. ಮಹಾ ಸಂಕಟವು ಆಕೆಯ ಮೇಲೆ ಅಂದರೆ ತಾಯಿ ಮತ್ತು ಮಗಳ ಮೇಲೆ ಬರುತ್ತಿರುವದು.

ಕೊಂಬೆಗಳು ಕ್ರೈಸ್ತಪಂಗಡಗಳನ್ನಾಗಲಿ, ಪಂಥಗಳನ್ನಾಗಲಿ ಪ್ರತಿನಿಧಿಸುವಂಥದ್ದಾಗಿರದೇ ಅದು ಕರ್ತನಿಗೆ ಸೇರಿದ ವ್ಯಕ್ತಿಗಳನ್ನು ಪ್ರತಿನಿಧಿಸುವಂಥದ್ದಾಗಿರುವದರಿಂದ ಸಾಮ್ಯವು ಬೋಧಿಸುವ–ದೇನಂದರೆ ನಮ್ಮ ಕರ್ತನು ಪಂಗಡಗಳನ್ನಾಗಲಿ ಪಂಥಗಳನ್ನಾಗಲಿ ಶುದ್ಧೀಕರಿಸದೆ ಕ್ರೈಸ್ತ ವ್ಯಕ್ತಿಗಳನ್ನು ಶುದ್ಧೀಕರಿಸುತ್ತಿರುವನೆಂಬುದೇ. ಅವರು ಯಾರೇ ಆಗಲಿ ಅಲ್ಲದೆ ಅವರು ಎಲ್ಲೇ ಇರಲಿ–"ಕರ್ತನು ತನ್ನವರು ಯಾರೆಂಬುದನ್ನು ತಿಳಿದಿರುವನು". ಈ ವಿಷಯವಾಗಿ ನಮ್ಮ ಕರ್ತನು ನುಡಿದಿರುವ–ದೇನಂದರೆ–"ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುವನು; ಹಾಗು ಫಲಕೊಡುವ ಪ್ರತಿಯೊಂದು ಕೊಂಬೆಯನ್ನು ಅದು ಹೆಚ್ಚು ಫಲಕೊಡುವ ಹಾಗೆ ಶುದ್ಧೀಕರಿಸುವನು [ರೆಂಬೆಕತ್ತರಿಸುವನು]." ಸತ್ಯವೇದದಲ್ಲಿನ ಪ್ರತಿಯೊಂದು ಸಂಗತಿಯೂ ಬೋಧಿಸುವದೇನಂದರೆ ನಮ್ಮ ರಕ್ಷಣೆ ಹಾಗು ಕ್ರಿಸ್ತನೊಡನೆ ನಮಗಿರುವ ಸಂಬಂಧವು ವೈಯುಕ್ತಿಕವಾದ ಸಂಗತಿಯಾಗಿರುವದು; ಹೇಗಂದರೆ ನಾವು ಸಭೆಯ ಮೂಲಕವಾಗಲಿ ಪಂಗಡಗಳ ಮೂಲಕವಾಗಲಿ ಪಕ್ಷಗಳ ಮೂಲಕವಾಗಲಿ ಕುಟುಂಬದ ಮೂಲಕವಾಗಲಿ ರಕ್ಷಿಸಲ್ಪಡುವದಿಲ್ಲ; ಆದರೆ ನಾವು ಬಳ್ಳಿಯ ಸಾರವನ್ನು ಹೀರಿಕೊಂಡವರಾಗಿ, ಜೀವವನ್ನು ಪಡಕೊಂಡು, ಕರ್ತನ ದೇಹವಾಗಿರುವ ಸಭೆಯ ಅಂಗಗಳಾಗಿ ಎಣಿಸಲ್ಪಡಬೇಕಾದಲ್ಲಿ ನಾವು ಒಬ್ಬೊಬ್ಬರಾಗಿ ವೈಯುಕ್ತಿಕವಾಗಿ ದ್ರಾಕ್ಷೇಬಳ್ಳಿಯಲ್ಲಿ ಸೇರಿಕೊಂಡಿರುವಂಥವರಾಗಿರಬೇಕು.

## ನಮ್ಮ ಐಕ್ಯತೆಯ ಬಗ್ಗೆ ಇರುವ ಅನೇಕ ನಿದರ್ಶನಗಳು

ಕರ್ತನು ತನಗೂ ಹಾಗು ತನ್ನ ಪ್ರತಿಷ್ಠಿತ ಹಿಂಬಾಲಕರಿಗೂ ಇರುವ ಐಕ್ಯತೆಯನ್ನು ಅನೇಕ ಶ್ರೇಣಿಯ ನಿದರ್ಶನದ ಮೂಲಕವಾಗಿ ಎಷ್ಟು ಪೂರ್ಣವಾಗಿ ವರ್ಣಿಸಿರುವನೆಂಬದು ಗಮನಾರ್ಹವಾದುದು. ಆತನು ಖನಿಜ ಲೋಕದ ನಿದರ್ಶನ ವನ್ನು ಬಳಸಿಕೊಂಡು ನಾವು ಜೀವವುಳ್ಳ ಕಲ್ಲುಗಳಾಗಿ ನಮ್ಮ ದೇವರ ಆಲಯವಾಗುವದಕ್ಕಾಗಿ ಅದರ ಅಸ್ತಿವಾರವೂ ಮುಖ್ಯವಾದ ಮೂಲೆಗಲ್ಲೂ ಆಗಿರುವ ಕರ್ತನೊಂದಿಗೆ ಕಟ್ಟಲ್ಪಡುತ್ತಿದ್ದೇವೆಂದು ಹೇಳಿರುವನು. ಪ್ರಾಣಿಲೋಕದಿಂದ ನಿದರ್ಶನವನ್ನು ತೆಗೆದುಕೊಂಡು ನಮ್ಮ ಕರ್ತನು ತನ್ನನ್ನು ಒಳ್ಳೆಯ ಕುರುಬನಿಗೂ ಹಾಗು ತನ್ನ ನಿಜವಾದ ಹಿಂಬಾಲಕರನ್ನು ತನ್ನ ಪಾಲನೆ ಹಾಗು ತನ್ನ ಅನ್ಯೋನ್ಯತೆಯಲ್ಲಿರುವ ಕುರಿಗಳಿಗೂ ಹೋಲಿಸಿಕೊಂಡು ಈ ಐಕ್ಯತೆಯ ಬಗ್ಗೆ ವಿವರಿಸಿರುವನು. ಸಸ್ಯಲೋಕದಿಂದ ಈ ಪಾಠದ ನಿದರ್ಶನವನ್ನು ತೆಗೆದುಕೊಂಡವ–ನಾಗಿ ತಾನೇ ಆ ದ್ರಾಕ್ಷೇಬಳ್ಳಿ ಹಾಗು ತನ್ನ ನಿಜವಾದ ಹಿಂಬಾಲಕರು ಕೊಂಬೆಗಳಾಗಿರುವರೆಂದು ವಿವರಿಸಿ ಹೇಳಿರುವನು. ಕೌಟುಂಬಿಕ ಸಂಬಂಧದ ಮೂಲಕವಾಗಿ ಒಂದು ನಿದರ್ಶನವನ್ನು ತೆಗೆದುಕೊಂಡು ನಿಜವಾದ ಗಂಡನ ಹಾಗು ನಿಜವಾದ ಹೆಂಡತಿಯ ಹಾಗು ಎಲ್ಲಾ ವಿಷಯ ಹಾಗು ಹಿತಾಸಕ್ತಿಗಳ ಬಗ್ಗೆ ಅವರಲ್ಲಿರುವ ಸಂಪೂರ್ಣವಾದ ಹೃದಯದ ಐಕ್ಯತೆಯನ್ನು ವರ್ಣಿಸಿ ಹೇಳಿರುವನು. ಪುನಃ ಕುಟುಂಬದ ಮತ್ತೊಂದು ನಿದರ್ಶನವನ್ನು ತೆಗೆದುಕೊಂಡು ಸೃಷ್ಟಿಕರ್ತನು ತಂದೆಯಾಗಿಯೂ ಹಾಗು ತಾನು ಹಿರಿಯ ಮಗನಾಗಿಯೂ ಅಲ್ಲದೆ ತನ್ನ ಹಿಂಬಾಲಕರೆಲ್ಲರೂ ಸಹೋದರರಾಗಿಯೂ ಸೂಚಿತವಾಗಿರುವರೆಂದು ತಿಳಿಸಿರುವನು. ಮಾನವ ದೇಹದ ಮೂಲಕವಾಗಿ ನಾವು ಇನ್ನೊಂದು ನಿದರ್ಶನವನ್ನು ಪಡೆದಿದ್ದೇವೆ ಅದೇನಂದರೆ ಯೇಸುವು ತಾನೇ ತನ್ನ ದೇಹವಾದ ಸಭೆಗೆ ಶಿರಸ್ಸಾಗಿರುವ–ನೆಂಬದು ಯಾಕಂದರೆ ಅಪೋಸ್ತಲನು ಪ್ರಕಟಿಸಿ ಹೇಳಿರುವಂತೆ ನಾವು ಕ್ರಿಸ್ತನ ದೇಹದಲ್ಲಿ ನಿರ್ದಿಷ್ಟವಾದ ಅಂಗಗಳಾಗಿರುವೆವು. ಪ್ರಕಟಿಸಲಾದ ಈ ಸಂಗತಿಗಳನ್ನು ನಮ್ಮ ನಂಬಿಕೆಯು ಬಿಗಿಯಾಗಿ ಹಿಡಿದುಕೊಳ್ಳಲು ಸಾಧ್ಯವಿರುವಷ್ಟರ ಪ್ರಮಾಣದಲ್ಲಿ, ಇದರಲ್ಲಿರುವ ಸತ್ಯಾಂಶಗಳನ್ನು ಮನನಮಾಡಿ–ಕೊಂಡಿರುವಷ್ಟರ ಪ್ರಮಾಣದಲ್ಲಿ, ಈ ಒಳ್ಳೆಯ ಕಾರ್ಯವನ್ನು ಪ್ರಾರಂಬಿಸಿದಾತನು ಅದನ್ನು ಪೂರ್ಣಗೊಳಿಸಲು ಸಮರ್ಥನೂ ಇಚ್ಛೆಯುಳ್ಳವನೂ ಆಗಿರುವನೆಂಬ ದೃಢವಾದ ನಂಬಿಕೆಯನ್ನು ಭರವಸವನ್ನು ನಾವು ಪಡಕೊಳ್ಳಬಹುದು. ಯಾರು ನಿಷ್ಠಾಪೂರ್ಣವಾದ ವಿಧೇಯತೆಯ ಹೃದಯವುಳ್ಳವ–ರಾಗಿರುವರೋ ಅವರು ತಮಗೆ ಅಗತ್ಯವಿರುವ ಪ್ರತಿಯೊಂದು ಸಮಯದಲ್ಲಿಯೂ, ಪರಿಶೋಧನೆಯ ಪ್ರತಿಯೊಂದು ಕಾಲದಲ್ಲಿಯೂ, ಸಂಕಷ್ಟದ ಹಾಗು ಗೊಂದಲಮಯವಾದ ಪ್ರತಿಯೊಂದು ಸನ್ನಿವೇಶಗಳಲ್ಲಿಯೂ ಹಾಗು ಜೀವನ ಎಲ್ಲಾ ಸಂಗತಿಗಳಲ್ಲಿಯೂ, ನಂಬಿಕೆಯ ಮೂಲಕವಾಗಿ ಅವರಿಗೆ ಹೀಗೆ ಒದಗಿಸಲಾದ ಶಕ್ತಿಸಾಮರ್ಥ್ಯ ಹಾಗು ಕೃಪೆಯನ್ನು ಉಪಯೋಗಿಸಿಕೊಳ್ಳಲು ಸಾಧ್ಯ. ಇದು ನಮ್ಮ ಜೀವನದ ಎಲ್ಲಾ ಅನುಭವಗಳಲ್ಲಿಯೂ ನಾವು ಪ್ರಯೋಜನವನ್ನು ಹೊಂದುವಂತೆ ಅಂದರೆ ಕಹಿಯಾದ ಹಾಗು ಸಿಹಿಯಾದ ಸನ್ನಿವೇಶಗಳೆಲ್ಲ–ವುಗಳಲ್ಲಿಯೂ ಸಮತೋಲನವನ್ನು ನೀಡುವ [ಕಾಪಾಡುವ] ಕಲ್ಲಿನ ಸ್ತಂಭದಂತಿರುವದು.

ನಮ್ಮ ಕರ್ತನು ಸಾರಿ ಹೇಳಿರುವಂತೆ ತನ್ನ ಶಿಷ್ಯರಲ್ಲಿ ಎಲ್ಲಿ ಇಬ್ಬರು ಅಥವಾ ಮೂವರು ಆತನ ಹೆಸರಿನಲ್ಲಿ ಕೂಡಿಬರುವರೋ ಅವರು ಒಂದು ಸಭೆಯಾಗಿ ಅಥವಾ ಕ್ರಿಸ್ತನ ದೇಹವಾಗಿ ರೂಪುಗೊಂಡು ಆತನು ಶಿರಸ್ಸಾಗಿ ಅವರೊಂದಿಗಿದ್ದು ಅವರ ಹೃದಯಗಳಲ್ಲಿ ಅವರು ಆತನಿಗೆ ನಿಷ್ಠೆಯುಳ್ಳವರಾಗಿ ಆತನ ಮಾರ್ಗದರ್ಶನವನ್ನು ಬಯಸುವಷ್ಟರ ಪ್ರಮಾಣದಲ್ಲಿ ಅವರನ್ನು ಆಶೀರ್ವದಿಸುವನೆಂಬ ಅಂಶವು ಇದರಂತೆಯೇ ಆತನ

ಅಂಗಗಳಾದವರು ಎಲ್ಲಿ ಇಬ್ಬರು ಅಥವಾ ಮೂವರು ಇರುವರೋ ಅಲ್ಲಿ ದ್ರಾಕ್ಷೇಬಳ್ಳಿಯು ಪ್ರತಿನಿಧಿಸಲ್ಪಟ್ಟಿರುವದೆಂದೂ ಹಾಗು ಕೊಂಬೆಗಳಿಗೆ ಉಂಟಾಗುವ ಆಶೀರ್ವಾದಗಳು ಅಲ್ಲದೆ ಫಲಕೊಡುವಂಥ ಎಲ್ಲಾ ಸೌಭಾಗ್ಯಗಳನ್ನು ಅವರು ಪಡೆದಿರುವ–ರೆಂದು ನಾವು ನಿರ್ಣಯಿಸಿಕೊಳ್ಳುವಂತಾಗಲು ನಮ್ಮನ್ನು ನಡೆಸಿರುವದು. ಹೇಗೂ ಕ್ರಿಸ್ತನ ಹೆಸರನ್ನು ಹೇಳಿಕೊಂಡಂಥ ಪ್ರತಿಯೊಂದು ಸಣ್ಣ ಗುಂಪಿನಲ್ಲೂ ನಿಜವಾದ ಕೊಂಬೆಗಳು ಉಳಿಯುವಂತಾಗಲು ಬಹು ತೀವ್ರವಾದ ಶುದ್ಧೀಕರಿಸುವಿಕೆ, ಸಂಪೂರ್ಣವಾದ ಒಂದು ಸುಡಲ್ಪಡುವಿಕೆಯು ಇರುವದೆಂಬ–ದನ್ನು ತಿಳುಕೊಳ್ಳಲು ನಮ್ಮ ಕರ್ತನು ಬಯಸುವದಿಲ್ಲವೆಂಬದು ಬಹು ಸ್ಪಷ್ಟವಾಗಿರುವದು. ಆತನು ತಿಳಿಸಿರುವದೇನಂದರೆ ತಾನು ನಮ್ಮೊಂದಿಗೆ ವೈಯುಕ್ತಿಕವಾಗಿಯೂ ಮಾತ್ರವಲ್ಲದೆ ಸಾಮೂಹಿಕವಾಗಿಯೂ ವ್ಯವಹರಿಸುವನೆಂಬದು ಅಲ್ಲದೆ ನಾವು ಆತನೊಂದಿಗೆ ವೈಯುಕ್ತಿಕವಾಗಿ ನಮ್ಮ ಸಂಬಂಧವನ್ನು ಇಟ್ಟುಕೊಂಡಿರುವದಾದರೆ ಅದು ದ್ರಾಕ್ಷಾಲತೆಯ ಸಾರವನ್ನು ಹೀರಿಕೊಳ್ಳುವದರ ಅಂದರೆ ಪವಿತ್ರಾತ್ಮವನ್ನು ಪಡೆದುಕೊಳ್ಳುವದರ ಮೂಲಕವಾಗಿರುವದು; ಇದು ಆತನೊಂದಿಗೆ ಐಕ್ಯವಾಗಿದ್ದು ಅನ್ಯೋನ್ಯರಾಗಿರುವದರ ಒಂದು ಫಲವಾಗಿರುವದು.

ನಾವು ಪವಿತ್ರಾತ್ಮವನ್ನು ನಮ್ಮ ಒಳ್ಳೆಯ ಹಾಗು ಪ್ರಾಮಾಣಿಕವಾದ ಹೃದಯದಲ್ಲಿ ಸ್ವೀಕರಿಸಿಕೊಂಡಲ್ಲಿ ಅದರ ಪರಿಣಾಮವು ಬಹು ಖಂಡಿತವಾಗಿಯೂ ಫಲದಾಯಕವಾದ ಪ್ರವೃತ್ತಿಯುಳ್ಳದ್ದಾಗಿರುವದು; ಆದರೆ ನಮ್ಮ ಕರ್ತನು ನೀಡಿರುವ ನಿದರ್ಶನವು ಬೋಧಿಸುವದೇನಂದರೆ ಕೆಲವರು ದ್ರಾಕ್ಷೇಬಳ್ಳಿ–ಯಲ್ಲಿನ ನಿಜವಾದ ಕೊಂಬೆಗಳಾಗಬಹುದಾದರೂ ಅದನ್ನು ಅಲಕ್ಷ್ಯಮಾಡುವವರಾಗಿ ಫಲನೀಡುವ ಪ್ರವೃತ್ತಿಯನ್ನು ಹೊಂದದಿರುವರೆಂಬದು. ಕೆಲವು ಸಾರಿ, ಒಳ್ಳೆಯ ಬೇರುಳ್ಳ ಒಂದು ತಳಿಯ ಮೂಲಕವಾಗಿ ಆರೋಗ್ಯಕರ ಹಾಗು ದೃಢವಾಗಿರುವ ಕೊಂಬೆಗಳು ಬೆಳೆದು ಬಂದರೂ ಅವುಗಳಲ್ಲಿ ಫಲನೀಡುವ ಗುಣಗಳಿರುವದಿಲ್ಲ. ತರಬೇತಾದ ದೃಷ್ಟಿಯುಳ್ಳ ತೋಟಗಾರನು ದ್ರಾಕ್ಷೇಗೊಂಚಲುಗಳನ್ನು ಬಿಡುವ ಕುಡಿಮೊಗ್ಗು–ಗಳಿಗೂ ಹಾಗು ಕೇವಲ ಎಲೆಗಳನ್ನು ಬಿಡುವ ಕುಡಿಮೊಗ್ಗುಗಳಿಗೂ ಇರುವ ವ್ಯತ್ಯಾಸವನ್ನು ತಿಳಿದವನಾಗಿರುವನು. ಫಲಗಳನ್ನು ನೀಡದಿರುವ ಕುಡಿಮೊಗ್ಗುಗಳನ್ನು "ಹೀರುಸಸ್ಯಗಳು" ಎಂದು ಹೆಸರಿಸಲಾಗಿರುವದು. ಯಾಕಂದರೆ ಕೇವಲ ಅವು ದ್ರಾಕ್ಷೇಬಳಿಯ ಸಾರವನ್ನು ಹೀರಿಕೊಳ್ಳುತ್ತವಲ್ಲದೆ ತೋಟಗಾರನು ಬಯಸುವಂಥ ಫಲಗಳನ್ನು ನೀಡುವದಿಲ್ಲ. ಹೊರಗಣ ವೈಭವವನ್ನು ಮಾತ್ರ ಹೊಂದಿರುವ ಕೊಂಬೆಗಳ ಮೂಲಕವಾಗಿ ದ್ರಾಕ್ಷೇಲತೆಯ ಸತ್ವವು ನಷ್ಟವಾಗದಂತೆ ನೋಡಿಕೊಳ್ಳುವ ಸಲುವಾಗಿ ಹಾಗು ಅದರಲ್ಲಿನ ಫಲ ನೀಡುವಂಥಾ ಗುಣವನ್ನು ಸಂರಕ್ಷಿಸಿಡುವ ಸಲುವಾಗಿ ಇಂಥಾ ಕುಡಿಯನ್ನು ಶುದ್ಧೀಕರಿಸಲಾಗುವದು ಇಲ್ಲವೇ ಕತ್ತರಿಸಿ ಹಾಕಲಾಗುವದು. ನಿಜವಾದ [ಕೊಂಬೆಗಳಂತೆ] ತೋರ್ಪಡಿಸಿ ಕೊಳ್ಳುವ ಒಂದು ಗುಂಪು ಈ ಹೀರುಸಸ್ಯಗಳನ್ನು ಹೋಲುವವ–ರಾಗಿದ್ದು ಅವರು ಸ್ವಾರ್ಥಪರರಾಗಿ ಸಾಧ್ಯವಾದಷ್ಟು ದ್ರಾಕ್ಷೇಲತೆಯ ನೀತಿಸಾರವನ್ನು ತಮಗಾಗಿ ಹೀರಿಕೊಂಡು ಲೋಕದಲ್ಲಿ ಎಲೆಗಳ ಅಥವಾ ತೋರ್ಪಡಿಸುವಿಕೆಯ ಮೂಲಕವಾಗಿ ಒಂದು ಹೇರಳವಾದ ಬಹಿರಂಗ ಪ್ರದರ್ಶನ ಮಾಡಿಕೊಳ್ಳುವವರಾಗಿದ್ದು ಅವರು ಕರ್ತನು ಬಯಸುವಂಥ ಫಲನೀಡುವ ಆಲೋಚನೆ–ಯನ್ನು ಹೊಂದಿರುವದಿಲ್ಲವೆಂಬದು ಸ್ಪಷ್ಟವಾಗಿ ತೋರುವದು; ಫಲಗಳನ್ನು ಕೇವಲ ತ್ಯಾಗದ ಮೂಲಕವಾಗಿಯೇ ನೀಡಲು ಸಾಧ್ಯ.

## ಕುಡಿಕತ್ತರಿಸುವ ಉದ್ದೇಶ

"ಹೀರುಸಸ್ಯಗಳನ್ನು" ಹೊರತುಪಡಿಸಿ ಕೆಲವು ಕೊಂಬೆ ಗಳಿರುವದು ಅವು ಮೊಗ್ಗುಗಳನ್ನು ಹೊಂದಿರುವದಾದರೂ ಅವುಗಳನ್ನು ತಮ್ಮದೇ ಆದ ರೀತಿಯಲ್ಲಿ ಬೆಳೆಯಲು ಬಿಟ್ಟಲ್ಲಿ ಅದು ಕೊಂಬೆಗಳಾಗಿ ಬೆಳೆಯುವದೇ ಹೊರತು ಫಲಗಳನ್ನು ಚೆನ್ನಾಗಿ ಮಾಗಿಸುವದಿಲ್ಲ. ಹೀಗಾಗಿ ಈ ಕುಡಿಯನ್ನು ಗಮನಿಸಿದ ಬುದ್ಧಿಯುಳ್ಳ ತೋಟಗಾರನು ಅದರ ವಿಷಯದಲ್ಲಿ ಸಂತೋಷವುಳ್ಳವನಾಗಿ ಆ ಕೊಂಬೆಗೆ ಹಾನಿಮಾಡದೆ ಅದು ಹೆಚ್ಚು ಫಲನೀಡುವಂತಾಗಲು ಆ ಲತೆಯ ಮೊಗ್ಗಿನ ಮುಂದಿರುವ ಕುಡಿಗಳನ್ನು ಚಿವುಟಿಹಾಕುವನು. ನಂಬಿಕೆಯ ಹಾಗು ಪ್ರತಿಷ್ಠೆಯ ಮೂಲಕವಾಗಿ ನಮ್ಮ ಕರ್ತನನ್ನು ಸೇರಿಕೊಂಡಿರುವದು ಮಾತ್ರವಲ್ಲದೆ ಕರ್ತನು ಬಯಸುವಂಥ ಒಳ್ಳೆಯ ಫಲಗಳನ್ನು ನೀಡುವ ಕೊಂಬೆಯಾಗಿ, ಒಳ್ಳೆಯ ಫಲಗಳನ್ನು ನೀಡುವ ಬಯಕೆಯುಳ್ಳವರಾಗಿ, ಕರ್ತನಿಂದ ಅಂಗೀಕೃತರಾಗಿರುವ ನಮ್ಮ ವಿಷಯವೂ ಹೀಗೆಯೇ ಇರುವದು. ತೋಟಗಾರನ ಪರಿಪಾಲನೆಯ ಅಗತ್ಯವು ನಮಗಿರುವದು. ಹೀಗಾಗಿ ನಾವು ಅಧಿಕವಾದ ಫಲವನ್ನು ಕೊಡುವವರಾಗಿದ್ದು, ನಾವು ಕೊಡುವ ಫಲವು ಆತನಿಗೆ [ಕರ್ತನಿಗೆ] ಬಹು ಮೆಚ್ಚಿಕೆಯಾದುದಾಗಿ ದೊಡ್ಡ ಫಲವಾಗಿ, ರುಚಿವತ್ತಾಗಿಯೂ ಒಳ್ಳೆಯದಾಗಿಯೂ ಹಾಗು ಅಮೂಲ್ಯವಾಗಿಯೂ ಇರುವ ಫಲವಾಗುವದು. ಕರ್ತನ ಕುಡಿತ್ತರಿಸುವಿಕೆಯ ವಿಧಾನವನ್ನು ಕೊಂಬೆಗಳೆಲ್ಲವು ತಿಳಿದುಕೊಂಡಿರಬೇಕು, ಇಲ್ಲವಾದಲ್ಲಿ ಅವರು ಅಧೈರ್ಯಗೊಂಡು ಜೋಲುಬಿದ್ದವರಾಗಿ ಸೂಕ್ತವಾದ ಫಲವನ್ನು ನೀಡಲು ವಿಫಲವಾಗುವರು.

ಕೆಲವು ಸಾರಿ ಆ ಹಿರಿಯ ತೋಟಗಾರನು ಭೂಲೋಕದ ಸಂಪತ್ತು ಅಥವಾ ಆಸ್ತಿಯನ್ನು ತೆಗೆದುಹಾಕುವದರ ಮೂಲಕವಾಗಿ ಇಲ್ಲವೇ ಕೆಲವು ವೇಳೆ ಪೋಷಿಸಿ ಬೆಳಸಿಕೊಂಡು ಬಂದ ಕಾರ್ಯಕ್ರಮಗಳು ಹಾಗು ಯೋಜನೆಗಳಿಗೆ ಅಡ್ಡಿಗೊಳಿಸುವದರ ಮೂಲಕವಾಗಿ ಕ್ರಿಸ್ತನ ಕೊಂಬೆಗಳಿಗೆ ಕುಡಿಕತ್ತರಿಸುವಿಕೆಯನ್ನು ಮಾಡುವಂತೆ ತೋರುತ್ತದೆ. ಕೆಲವು ಸಾರಿ ನಮ್ಮ ಮೇಲೆ ಹಿಂಸೆಯನ್ನು ಬರಮಾಡಿ ನಮ್ಮ ಹೆಸರಿನ ಮತ್ತು ನಮಗಿರುವ ಪ್ರಖ್ಯಾತಿಗೆ ನಷ್ಟವನ್ನು ಬರಮಾಡುವದರ ಮೂಲಕವಾಗಿ ಅಲ್ಲದೆ ಕೆಲವು ವೇಳೆ ಲೌಕೀಕ ಸ್ನೇಹಸಂಬಂಧಗಳಿಗೆ ನಷ್ಟವುಂಟಾಗುವದರ ಮೂಲಕವಾಗಿ ಕೊಂಬೆಕತ್ತರಿಸುವಿಕೆಯು ನಡೆಸಲ್ಪಡಬಹುದು. ಈ ಮೂಲಕವಾಗಿ ನಮ್ಮ ಹೃದಯವನ್ನು ಸುತ್ತಿಕೊಂಡು ಬಹು ಗಾಢವಾಗಿ ವಿಸ್ತರಿಕೊಂಡದ್ದಾಗಿ ತಾನು ಬಯಸುವಂಥ ಅಧಿಕ ಫಲಗಳನ್ನು ನೀಡಲು ಅಡ್ಡಿಪಡಿಸುವವುಗಳನ್ನು ಕರ್ತನು ತೆಗೆದುಹಾಕುವನು. ಕೆಲವು ಸಾರಿ ನಮ್ಮನ್ನು ಬಾಧಿಸುವ ರೋಗ ಅಸ್ವಸ್ಥತೆಗಳನ್ನು

ಕೊಂಬೆಕತ್ತರಿಸುವ ವಿಧಾನಗಳಲ್ಲಿ ಒಂದನ್ನಾಗಿ ಬರಮಾಡ–ಬಹುದು. ಈ ವಿಷಯವಾಗಿ ಪ್ರವಾದಿಯು ಹೀಗೆ ನುಡಿದಿರುವನು –"ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿಹೋಗುತ್ತಿದ್ದೆನು." ಕರ್ತನ ಜನರಲ್ಲಿ ಇತರ ಹಲವಾರು ಮಂದಿ ಶ್ರಮಸಂಕಟಗಳೆಂಬ ಹಾಸಿಗೆಯ ಮೇಲೆ [ಬಿದ್ದುಕೊಂಡವರಾಗಿ] ತಮಗೆ ಅತ್ಯಮೂಲ್ಯವಾಗಿರುವ ಪಾಠಗಳನ್ನು ಕಂಡುಕೊಂಡಿರುವರು.

ತಾವು ಹೇಗೆ ಅತಿಯಾಗಿ ಕ್ರೀಯಾಶೀಲರಾಗಿದ್ದು, ತಮ್ಮ ಗಮನವನ್ನು ಸೆಳೆಯುವಂತೆ ತೋರುವ ಪ್ರಾಪಂಚಿಕ ಸಂಗತಿ ಹಾಗು ಹಿತಾಸಕ್ತಿಗಳಲ್ಲಿ ಅತಿಯಾಗಿ ತಲ್ಲೀನರಾಗಿರುತ್ತಿದ್ದು, ಹೀಗಾಗಿ ದೇವರ ಯುಗಯುಗಾಂತರಗಳ ಯೋಜನೆಯ ಅಧ್ಯಯನ ಹಾಗು ತಮ್ಮ ಹೃದಯಗಳಲ್ಲಿ ಪವಿತ್ರಾತ್ಮನ ಫಲಗಳನ್ನು ಹೊಂದಸಲುವಾಗಿ ಸೂಕ್ತವಾದ ಸಮಯವನ್ನು ಕೊಡಲು ಆಗದಂತಾಗಿದ್ದೆವೆಂಬುದನ್ನು ಅಲ್ಲದೆ ಕರ್ತನು ಅತ್ಯಂತ ಕನಿಕರವುಳ್ಳವನಾಗಿ ಒಂದು ಕಾಲಕ್ಕೆ ಇಂಥಾ ಸಂಗತಿಗಳನ್ನು ಬದಿಗಿರಿಸಿ ತಾವು ಕೃಪೆಯಲ್ಲಿ ಬೆಳೆಯುವ ಸಲುವಾಗಿ ಅಂದರೆ ಕ್ರಿಸ್ತೀಯ ಬೆಳವಣಿಗೆಗಾಗಿ ಆಲೋಚಿಸುವವರಾಗಲು ಅಗತ್ಯವಾದ ಅವಕಾಶಗಳನ್ನು ತಮಗೆ ನೀಡಿದ ಬಗ್ಗೆ ಕೆಲವರು ನಮಗೆ ಬರೆದು ತಿಳಿಸಿದ್ದಾರೆ. ಹೀಗಾಗಿ ತೋಟಗಾರನು ಕೊಂಬೆಕತ್ತರಿಸುವದು [ತಮಗೆ] ಗಾಯಪಡಿಸಿ ಹಾನಿಗೊಳಿಸುವ ಸಲುವಾಗಿರುವದೆಂದು ಎಣಿಸುವುದಕ್ಕೆ ಬದಲಾಗಿ ದೇವರ ವಾಕ್ಯದಲ್ಲಿನ ಒಳ್ಳೆಯ ವಾಗ್ದಾನದ ಅನುಸಾರವಾಗಿ ಸಂಭವಿಸುವ ಎಲ್ಲಾ ಸಂಗತಿಗಳು ತನ್ನನ್ನು ಪ್ರೀತಿಸುವವರಿಗೆ ಅಂದರೆ ನಿಜವಾದ ಫಲಕೊಡುವ ದ್ರಾಕ್ಷೇಬಳಿಯಲ್ಲಿನ ಕೊಂಬೆಗಳಿಗೆ ಹಿತವನ್ನುಂಟುಮಾಡು ವದೆಂದು ನಿಜವಾದ ಕೊಂಬೆಗಳು ನಿರ್ಣಯಿಸಿಕೊಳ್ಳುವವರಾಗ ಬೇಕು. ಇಂಥಾ ಕೊಂಬೆಕತ್ತರಿಸುವಿಕೆಯು ನಮ್ಮನ್ನು ಅಧೈರ್ಯಪಡಿಸುವದಕ್ಕೆ ಬದಲಾಗಿ, ಸರಿಯಾಗಿ ಗ್ರಹಿಸಿಕೊಂಡವ –ರಾದ ನಮ್ಮಲ್ಲಿ, ಪ್ರೋತ್ಸಾಹಪಡಿಸುವದಕ್ಕೆ ಮೂಲವಾಗುವದು. ನಾವು ಅರಿತುಕೊಂಡಿರುವದೇನಂದರೆ, ಲೋಕವನ್ನು ತನ್ನ ದಾರಿ ಹಿಡಿದುಕೊಂಡು ಹೋಗಲು ಬಿಡಲಾಗಿರುವದು; ಭೂಮಿಯ ದ್ರಾಕ್ಷೇಬಳ್ಳಿಯು ಕರ್ತನಿಂದ ಯಾವ ವಿಶೇಷ ವಾಗ್ದಾನಗಳನ್ನೂ ಪಡೆದಿರುವದಿಲ್ಲ, ಅಲ್ಲದೆ ನಾವು ಈ ವಿಶೇಷವಾಗಿರುವ ಕೊಂಬೆಕತ್ತರಿಸುವಿಕೆಯನ್ನು ಪಡಕೊಳ್ಳುತ್ತಿರುವೆವು ಎಂದಾಗ ಅದು ತಂದೆಯು ತಾನೇ ನಮ್ಮ ಪ್ರೀತಿಸುವವನಾಗಿ ನಮ್ಮ ಅತ್ಯುತ್ತಮ ಹಿತಾಸಕ್ತಿಗಳನ್ನು ಲಕ್ಷಿಸುತ್ತಿರುವನೆಂಬದಕ್ಕೆ ಒಂದು ಪ್ರಮಾಣವಾಗಿರುವದು.

## "ಈಗ ನೀವು ಶುದ್ಧರಾಗಿದ್ದೀರಿ"

ಈ ಪಾಠವನ್ನು ನಮ್ಮ ಕರ್ತನು ತನ್ನ ಶಿಷ್ಯರಿಗೆ ಅನ್ವಯಮಾಡಿ ತಿಳಿಸಿದ್ದೇನಂದರೆ, ಅವರಲ್ಲಿ ಸೂಕ್ತವಾದ ಕೊಂಬೆಕತ್ತರಿಸುವ ಕಾರ್ಯವು ಆ ದಿನದ ವರೆಗೂ ನಡೆದಿದ್ದು ದೇವಾನುಗ್ರಹದ ಪ್ರಕಾರವಾಗಿ ಅವರಿಗೆ ಶುದ್ಧಿಕರಣವಾಗಿ ನಿಷ್ಫಲವಾದ ಕೊಂಬೆಯಾದ ಯೂದನನ್ನು ಕತ್ತರಿಸಿ ಹಾಕಲಾಗಿತ್ತೆಂಬದು. ಆದುದರಿಂದ ಆತನು ಅವರಿಗೆ ಹೀಗೆ ಹೇಳಿದ್ದನು: "ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ." – ಅಂದರೆ ನೀವು ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಿಮ್ಮ ನಂಬಿಕೆ ವಿಧೇಯತೆ ಹಾಗು ನಿಷ್ಠೆಯ ದೆಸೆಯಿಂದ ಅಂಗೀಕರಿಸಲ್ಪಟ್ಟಿರುವಿರಿ. ಈ ಮಾತುಗಳನ್ನು ಕೇಳಿದಾಗ ಆ ಹನ್ನೊಂದು ಮಂದಿಗೆ ಎಂಥಾ ಒಂದು ಸಂತೋಷವಾಗಿರಬೇಕು, ಅಲ್ಲದೆ ಇದೇ ವಾಕ್ಯದ ಸತ್ಯಾರ್ಥಗಳು ನಮಗೂ ಅನ್ವಯವಾಗಿರುವದು ನಮ್ಮ ಗ್ರಹಿಕೆಗೆ ಬಂದಾಗ ನಮಗೂ ಎಂಥಾ ಒಂದು ಸಂತೋಷದ ಅನುಭವವು ಸೂಕ್ತವಾಗಿ ಆಗಿರಬೇಕು. ಕ್ರಿಸ್ತನ ಮೂಲಕವಾದ ದೇವರ ಈ ಮಹಾ ಕೃಪೆಗಾಗಿ ಆತನಿಗೆ ಸ್ತೋತ್ರವಾಗಲಿ. ನಾವು ಆತನಲ್ಲಿ ಪಾಪಗಳ ಪರಿಹಾರವನ್ನು ಹೊಂದಿದವರಾಗಿ ಆತನ ನೀತಿವಸ್ತ್ರದಿಂದ ಹೊದಿಸಲ್ಪಟ್ಟಿರುವದು ಮಾತ್ರವಲ್ಲದೆ ಆತನ ಮೂಲಕವಾಗಿ ನಿಜವಾದ ದ್ರಾಕ್ಷೇಬಳ್ಳಿಯ ಕೊಂಬೆಗಳಾಗಿ ತಂದೆಯಿಂದ ಅಂಗೀಕರಿಸಲ್ಪಟ್ಟು ನಮಗೆ ಕಳುಹಿಸಲ್ಪಟ್ಟ ಸಂದೇಶ ಅಥವಾ ವಾಕ್ಯವನ್ನು ಅಂಗೀಕರಿಸಿಕೊಳ್ಳುವದರ ಮೂಲಕವಾಗಿ ಶುದ್ಧರಾಗಿರುತ್ತೇವೆ. ಆದರೆ ಇದೇ ಎಲ್ಲವೂ ಆಗಿರುವದಿಲ್ಲ, ಕೇವಲ ಇದು ಒಂದು ಆರಂಭ ಮಾತ್ರ. ನಾವು ನೆನಪಿನಲ್ಲಿಡಬೇಕಾದ ಸಂಗತಿಯೇನಂದರೆ, ನಮಗೆ ಅಂತ್ಯವಾಗಿ ಲಭಿಸುವಂಥ ಆಶೀರ್ವಾದ ಹಾಗು ನಾವು ತಂದೆಯಿಂದ ಅಂಗೀಕರಿಸಲ್ಪಡು–ವಂಥದ್ದು ನಾವು ದ್ರಾಕ್ಷೇಬಳ್ಳಿಯಲ್ಲಿನ ಕೊಂಬೆಗಳಾಗಿ ನೆಲೆಗೊಂಡು ಈ ಆಶೀರ್ವಾದಕರವಾದ ನಿಕಟ ಸಂಬಂಧದಲ್ಲಿ ಸತತವಾಗಿ ಮುಂದುವರೆಯುವದರ ಮೇಲೆ ಅವಲಂಬಿಸಿರುತ್ತದೆಂಬದು.

ನಾವು ಫಲಭರಿತರಾಗದಿದ್ದಲ್ಲಿ ಈ ಸಂಬಂಧದಲ್ಲಿ ನಾವು ಉಳಿದುಕೊಂಡಿರಲಾರೆವು; ನಾವು ಫಲಭರಿತರಾಗಿ, ಆ ಆತ್ಮವನ್ನು ಅದರ ಮನೋಭಾವವನ್ನು ನಾವು ಪಡೆದುಕೊಂಡು, ಕರ್ತನ ಕೃಪೆ ಬಲ ಸಹಾಯಗಳನ್ನು ಬಯಸುವರಾದಲ್ಲಿ ಅತನ ಕೃಪೆಯು ಪ್ರತಿಯೊಂದು ಸಮಯದ ಅಗತ್ಯತೆಗಳಿಗೆ ಸಾಕಾಗುವಷ್ಟಿರುವದು ಹಾಗು ನಮ್ಮನ್ನು ಪ್ರೀತಿಸಿ ತನ್ನ ಅಮೂಲ್ಯವಾದ ರಕ್ತದ ಮೂಲಕವಾಗಿ ನಮ್ಮನ್ನು ಕೊಂಡುಕೊಂಡಾತನ ಮೂಲಕವಾಗಿ ನಾವು ಜಯಶಾಲಿಗಳಾಗಿ ಅಂದರೆ ಪೂರ್ಣ ಜಯಶಾಲಿಗಳಾಗಿ ಹೊರಬರುವೆವು. ನಾವು ಕ್ರಿಸ್ತನಿಗೆ ಸೇರಿದವರಾಗಿ ಆತನಲ್ಲಿ ನಮಗಿರುವ ಸಂಬಂಧದ ಮೂಲಕವಾಗಿ ಆತನ ಫಲಗಳು ನಮ್ಮಲ್ಲಿ ಬಿಡುವಂತಾಗಿ, ಆತನ [ಕರ್ತನ] ಆತ್ಮದ ಶಕ್ತಿ ಹಾಗು ಆತನ ವಾಕ್ಯವು ನಮ್ಮಲ್ಲಿ ಕಾರ್ಯವೆಸಗುವಂತಾಗಿ ನಾವು ಆತನ ಸುಚಿತ್ತವನ್ನು ನೆರವೇರಿಸುವವರಾಗದೆ ಇದ್ದಲ್ಲಿ ತಂದೆಯು ಬಯಸುವಂಥಾ ಪಲಗಳನ್ನು ನಾವು ನೀಡಿ ಆತನಿಗೆ ಮೆಚ್ಚಿಕೆಯಾಗಿರಲು ಸಾಧ್ಯವಾಗುವದಿಲ್ಲ. ಭರವಸೆಯಿರುವ–ದೇನಂದರೆ ನಾವು ಆತನಲ್ಲಿ ನೆಲೆಗೊಂಡವರಾಗಿದ್ದರೆ ನಾವು ಅಧಿಕವಾದ ಫಲವನ್ನು ನೀಡುವಂಥವರಾಗುವೆವು ಎಂಬದೇ ಅಲ್ಲದೆ ಆತನಿಲ್ಲದೆ ನಾವು ಏನು ಮಾಡಲೂ ಸಾಧ್ಯವಿಲ್ಲದವರಾಗಿ ತಂದೆಯು ಅಂಗೀಕರಿಸುವಂಥ ಯಾವ ಫಲಗಳನ್ನೂ ಹೊಂದಲಾಗುವದಿಲ್ಲ.

ಫಲಭರಿತರಾಗಿರುವ ಗುಣಲಕ್ಷಣವು ಯಾವದು? ತಂದೆಯು ಅಪೇಕ್ಷಿಸುವಂತ ಫಲಗಳ ಬಗ್ಗೆ ನಾವು ಹೇಗೆ ತಿಳಿದುಕೊಳ್ಳಬಹುದು? ನಮ್ಮ ಉತ್ತರವೇನಂದರೆ, ಅನೇಕರು

ಭೂಮಿಯ ದ್ರಾಕ್ಷೇಬಳ್ಳಿಯಿಂದಾದ ತಪ್ಪು ಮಾರ್ಗದರ್ಶನ ಹಾಗು ತಪ್ಪು ಉದಾಹರಣೆಯ ಮೂಲಕವಾಗಿ ಭೂಲೋಕದಲ್ಲಿನ ಭವ್ಯವಾದ ದೇವಾಲಯ, ಅನಾಥಾಶ್ರಮ, ಮುಂತಾದವುಗಳು ಕರ್ತನು ಚೆನ್ನಾಗಿ ವೃದ್ಧಿಯಾಗುವದನ್ನು ನೋಡಲು ಬಯಸುವಂಥ ಫಲಗಳೆಂದು ಆಲೋಚಿಸುವ ಪ್ರವೃತ್ತಿಯಲ್ಲಿರುವರೆಂಬದು. ಇಲ್ಲ ಎಂಬದು ನಮ್ಮ ಉತ್ತರ. ಇವುಗಳು ಫಲಗಳಾಗಿದ್ದಲ್ಲಿ ಯೇಸುವು ಹಾಗು ಅಪೋಲಸ್ತಲರು ಫಲಭರಿತ – ರಾಗಿರಲಿಲ್ಲ: ಅವರು ಸಭಾಮಂದಿರವನ್ನಾಗಲೀ, ಕೆಥಡ್ರಲ್– ಗಳಾಗಲೀ ಅಥವಾ ದೇವಾಲಯಗಳನ್ನಾಗಲೀ ಕಟ್ಟಿರಲಿಲ್ಲ ಇಲ್ಲವೇ ಅನಾಥಾಶ್ರಮಗಳ್ನನಾಗಲೀ ಅಥವಾ ಆಶ್ರಯಧಾಮಗಳನ್ನಾಗಲೀ [ಅಸ್ಯೆಲಮ್] ಇಲ್ಲವೇ ಆಸ್ಪತ್ರೆಗಳನ್ನಾಗಲಿ ಸ್ಥಾಪಿಸಿರಲಿಲ್ಲ. ಇವು ತಂದೆಯು ಬಯಸುವಂಥಾ ಫಲಗಳಾಗಿದ್ದಲ್ಲಿ ಕರ್ತನು ಹಾಗು ಅಪೋಸ್ತಲರು ಸಂಪೂರ್ಣವಾಗಿ ತಪ್ಪುಮಾಡಿದ್ದರು. ಆದರೆ ನಾವು ಪ್ರತಿಪಾದಿಸುವದೇನಂದರೆ ಅವರು ತಪ್ಪು ಮಾಡಿರಲಿಲ್ಲವೆಂಬದು; ಆದರೆ ತಪ್ಪಾದವುಗಳು ನಿಜವಾಗಿಯೂ ಬಂದದ್ದು ಬೇರೊಂದು ವಿಭಾಗದಿಂದ; ಭೂಮಿಯ ದ್ರಾಕ್ಷೇಬಳ್ಳಿಯು ಲೌಕೀಕ ಆತ್ಮದ ಮೂಲಕವಾಗಿ ನಡೆಸಲ್ಪಟ್ಟು ಪ್ರಯೋಜನವಿಲ್ಲದ ಕಡೆಗೆ ತಿರುಗಿಕೊಂಡು ಲೋಕವು ಮೆಚ್ಚುವಂಥ ಫಲಗಳನ್ನು ಕೊಡುತ್ತಿರುವದು.

## ಲೋಕವು [ಇದರ] ಏರ್ಪಾಡನ್ನು ಮಾಡುವದು

ನಾವು ಆಸ್ಪತ್ರೆ ಆಶ್ರಯಧಾಮ ಮುಂತಾದವುಗಳ ವಿರೋಧವಾಗಿ ಒಂದು ಮಾತನ್ನೂ ಹೇಳುತ್ತಿಲ್ಲ–ಅವುಗಳು ಬಹು ಒಳ್ಳೆಯವುಗಳೂ ಬಹು ಅಪೇಕ್ಷಿತವಾದವುಗಳೂ, ಸಮಾಜ ಹಾಗು ನಾಗರಿಕತೆಗಳಿಗೆ ಬಹು ಸೂಕ್ತವಾಗಿ ಹೊಂದಿಕೆಯಾದವು– ಗಳೆಂಬುದು ನಮ್ಮ ನಂಬಿಕೆ; ಆದರೆ ಇವುಗಳನ್ನು ಒದಗಿಸಲು ಲೋಕವು ಸಂಪೂರ್ಣವಾಗಿ ಸಮರ್ಥವಾಗಿರುವದೆಂದು ಅಲ್ಲದೆ ಲೋಕವು ಇವುಗಳನ್ನು ಒದಗಿಸಲು ಖಂಡಿತವಾಗಿಯೂ ಸಿದ್ಧವಾಗಿರುವದೆಂದು ನಾವು ನಂಬುತ್ತೇವೆ; ಇದರಂತೆಯೇ ಲೋಕವು ನಿಜವಾಗಿಯೂ ಇದಕ್ಕಾಗಿ ಏರ್ಪಾಡುಗಳನ್ನು ಮಾಡುತ್ತಿರುವದನ್ನು ನಾವು ವಾಸ್ತವದಲ್ಲಿ ಕಂಡುಕೊಂಡಿದ್ದೇವೆ. ದೃಷ್ಟಾಂತವಾಗಿ ಹೇಳುವದಾದರೆ, ಸೆಂಟ್ ಫ್ರಾನ್ಸಿಸ್, ಸೆಂಟ್ ಜೇಮ್ಸ್, ಸೆಂಟ್ ಆಗ್ನಿಸ್ ಆಸ್ಪತ್ರೆಗಳು, ಆಶ್ರಯಧಾಮಗಳು, ಮುಂತಾದವುಗಳು; ಪ್ರೊಟೆಸ್ಟೆಂಟ್ ಹಾಗು ಕೆಥೋಲಿಕ್ ಪಂಗಡಗಳೆಲ್ಲವುಗಳು ಇವುಗಳ ನಿರ್ವಹಣೆಯ ಸಲುವಾಗಿ ರಾಜ್ಯಾಡಳಿತದ ಅನುದಾನಗಳ ಸಹಾಯವನ್ನು ಅಪೇಕ್ಷಿಸುವವು – ಗಳಾಗಿದ್ದು ಅವು ಇವುಗಳೆಲ್ಲವನ್ನು ಪಡೆಯುತ್ತಿರುವವು; ಅಲ್ಲದೆ ಈಗಿರುವಂತೆ ರಾಜ್ಯಾಡಳಿತವು ಸಹ ಕೆಲವು ವಿಧಗಳಲ್ಲಿ ಉತ್ತಮ ಸ್ಥಿತಿಯಲ್ಲಿದ್ದು ಇವುಗಳ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಈಗ ಅದಕ್ಕೆ ಸಂಪೂರ್ಣವಾಗಿ ಸಾಧ್ಯವಾಗಿರು– ವದು. ನಿಜವಾದ ದ್ರಾಕ್ಷೇಬಳ್ಳಿಯ ನಿಜವಾದ ಕೊಂಬೆಗಳಲ್ಲಿ ಯಾವದೂ ಈ ಲೌಕೀಕ ಸಂಸ್ಥೆಗಳಿಗೆ ಸಂಬಂಧಿಸಿರುವದಿಲ್ಲ– ವೆಂದು ತಿಳಿಸಲು ನಾವು ಬಯಸುತ್ತಿರುವೆವೆಂದಲ್ಲ; ಆದರೆ ಇವು ನಮ್ಮ ಕರ್ತನ ಸಾಮ್ಯದ ಅನುಸಾರವಾಗಿರುವ ಫಲಗಳಲ್ಲ– ವೆಂಬುದು ನಮ್ಮ ಭಾವನೆ. ಮತ್ತು ಅವರು ಕರ್ತನ ದೇಹದ ಅಂಗಗಳೂ ಜೊತೆಗೆ ಬಾಬೇಲಿನ ಅಂಗಗಳೂ ಆಗಿದ್ದಲ್ಲಿ ಇವರು ತಂದೆಯು ನೆಟ್ಟ ದ್ರಾಕ್ಷೇಬಳ್ಳಿಯು ನೀಡುವ ಫಲವನ್ನು ಕೊಡುವದರ ಜೊತೆಗೆ ಇತರ ಒಳ್ಳೆಯ ಫಲಗಳೊಂದಿಗೂ ತಮ್ಮನ್ನು ಗುರುತಿಕೊಂಡಿರಬೇಕು.

ಕೆಲವು ಸಾರಿ ಸತ್ಯದ ವಿಷಯವಾದ ಸೇವೆಯು ಚಟುವಟಿಕೆಗಳನ್ನು ಪವಿತ್ರಾತ್ಮನಿಂದಾದ ಫಲಗಳೆಂದು ಪರಿಗಣಿಸಿರುವದುಂಟು, ದೃಷ್ಟಾಂತವಾಗಿ ಹೇಳುವದಾದರೆ ಸತ್ಯವನ್ನು ಪ್ರಚಾರಮಾಡುವದು, ಸತ್ಯದ ವಿಷಯವಾಗಿ ಮಾತನಾಡುವದು, ಕೆಲವರನ್ನು ಕತ್ತಲಿನಿಂದ ಹೊರತಂದು ಸತ್ಯದ ಪರಿಜ್ಞಾನವೆಂಬ ಬೆಳಕಿಗೆ ಸೇರಿಸುವದು, ಸತ್ಯವನ್ನು ಪ್ರಕಾಶನಗೊಳಿಸುವದಕ್ಕೆ ಹಣವನ್ನು ವೆಚ್ಚಮಾಡುವದು– ಇವೆಲ್ಲವುಗಳೂ ಕೆಲವು ಸಾರಿ ಕರ್ತನು [ದ್ರಾಕ್ಷೇ] ಕೊಂಬೆಗಳಿಂದ ಅಪೇಕ್ಷಿಸುವಂಥ ಫಲಗಳೆಂಬದಾಗಿ ಪರಿಗಣಿಸಲ್ಪಟ್ಟಿರುವದು. ಅದು ಹೀಗಿರುವದಿಲ್ಲ! ಫಲಗಳು ಕೆಲವು ಸಾರಿ ಇವೆಲ್ಲವುಗಳಿಗಿಂತಲೂ ಇನ್ನೂ ಘನತೆಯುಳ್ಳ ಹಾಗು ಭವ್ಯವಾದ ಸಂಗತಿಗಳಾಗಿದ್ದು ಅದನ್ನು ಅಪೋಸ್ತಲನು ಆತ್ಮದಿಂದಾದ ಫಲಗಳೆಂದು ವರ್ಣಿಸಿರುವನು. ದ್ರಾಕ್ಷೇಬಳ್ಳಿಯಲ್ಲಿನ ಆತ್ಮನ [ಮನೋ]ಭಾವವು ಎಲ್ಲಾ ಕೊಂಬೆಗಳಲ್ಲಿಯೂ ವ್ಯಾಪಿಸಿಕೊಂಡು ದ್ರಾಕ್ಷೇಫಲಗಳು ಪ್ರತಿಯೊಂದು ಕೊಂಬೆಯಲ್ಲಿ ಇರುವಂತಾಗಬೇಕು. ಈ ಮುಂದಿನವುಗಳನ್ನು ಆತ್ಮದ ಫಲಗಳೆಂದು ಎಣಿಸಲಾಗಿರುವದು: ಸಾಧುತ್ವ, ನಯವಿನಯ, ತಾಳ್ಮೆ, ದೀರ್ಘಶಾಂತಿ, ಸಹೋದರ ಸ್ನೇಹ, ಪ್ರೀತಿ; ಇವು ನಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಮ್ಮ ರಕ್ಷಕನಾದ ಕರ್ತನ ಪರಿಜ್ಞಾನವನ್ನು ಹೊಂದುವಲ್ಲಿ ನಮ್ಮನ್ನು ಬರಡಾದವರೂ ಇಲ್ಲವೇ ನಿಷ್ಫಲರೂ ಆಗದಂತೆ ಮಾಡುತ್ತವೆ.

ಈ ಫಲಗಳೆಲ್ಲವೂ ಕೆಲವು ವಿಧಗಳಲ್ಲಿ ಒಂದೇ ಆಗಿರುತ್ತದೆ: ಹೇಳಬೇಕೆಂದರೆ ಸರಿಯಾದ ರೀತಿಯ ಕ್ರಿಸ್ತೀಯ ತಾಳ್ಮೆಯ ತಿರುಳು ಪ್ರೀತಿಯಾಗಿರುತ್ತದೆ; ನಂಬಿಕೆ ನಿರೀಕ್ಷೆ ಸಂತೋಷಗಳ ಸಾರಾಂಶವು ನಮ್ಮ ತಂದೆಯ ಮೇಲಿರುವ ಪ್ರೀತಿ, ಹಾಗು ನಮಗೆ ನೀಡಿರುವ ವಾಗ್ದಾನದಲ್ಲಿ ವ್ಯಕ್ತವಾಗಿರುವಂಥ ಆತನ ಪ್ರೀತಿಯ ಮೇಲೆ ನಮಗಿರುವ ಭರವಸೆ. ಹೀಗಾಗಿ ಆತ್ಮನ ಈ ಎಲ್ಲಾ ಫಲಗಳ ಹಾಗು ವರಗಳ ಹೆಸರು ಒಂದೇ ಶಬ್ದದಲ್ಲಿ ವ್ಯಕ್ತವಾಗಿರುವದು, ಅದು ಯಾವುದಂದರೆ ಪ್ರೀತಿ. ಕೊಂಬೆಗಳು ಅಂತಿಮವಾಗಿ ಮಹಿಮಾ ಪದವಿಯನ್ನು ಹೊಂದಿದ ದ್ರಾಕ್ಷೇಬಳ್ಳಿಯಲ್ಲಿ ಸೇರಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳಬೇಕಾದರೆ ಇವು ಪ್ರತಿಯೊಂದು ಕೊಂಬೆಯಲ್ಲಿಯೂ ಇರಬೇಕಾದ ಫಲಗಳು. ಇತರ ಸಂಗತಿಗಳು ಕಾರ್ಯವೆಸಗುತ್ತವೆ, ಹೀಗಾಗಿ ಇವುಗಳ ಹೊರತಾಗಿ ನಾವು ದೇವರು ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆಹೊಂದಬಹುದೆಂದು ಯೋಚಿಸುವದರ ಮೂಲಕವಾಗಿ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳದೇ ಇರೋಣ. ನಮ್ಮ ಹೃದಯಗಳಲ್ಲಿ ಈ ಆತ್ಮನ ಮೂಲಕವಾಗಿರುವ ಫಲಗಳಾಗಿರುವಷ್ಟರ ಪ್ರಮಾಣದಲ್ಲಿ ಮಾತ್ರವೇ ಈ ಇತರ ಸಂಗತಿಗಳಾದ ಸತ್ಕಾರ್ಯಗಳು ಸತ್ಯಾನ್ವೇಶಣೆ ಕ್ರೈಸ್ತಸಾಹಿತ್ಯಗಳ ಹಂಚುವಿಕೆ ಮುಂತಾದವುಗಳು ತಂದೆಯಿಂದ ಅಂಗೀಕಾರವಾಗಲಿರುವಂಥವುಗಳು. ನನಗಿರುವ–

ದೆಲ್ಲವನ್ನು ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವದಿಲ್ಲವೆಂಬ ಈ ಮಾತುಗಳನ್ನು ಹೇಳುವಾಗ ಅಪೋಸ್ತಲನು ಇದನ್ನು ಬಲವಾದ ರೀತಿಯಲ್ಲಿ ವ್ಯಕ್ತಗೊಳಿಸಿರುವನು.

ಇದೇ ಅಭಿಪ್ರಾಯವು ಕರ್ತನ ಸೇವೆಗೆ ಸಂಬಂಧಿಸಿದ ವಿಷಯದಲ್ಲಿ ಸತ್ಯವಾಗಿರುವದು: ನಾವು ಸುವಾರ್ತಾಸುಗ್ಗಿಯ ಕಾರ್ಯದಲ್ಲಿ ಪ್ರತಿಯೊಂದು ದಿನವನ್ನೂ ಪ್ರತಿಯೊಂದು ಗಳಿಗೆಯನ್ನು ಕಳೆಯಬೇಕಾದರೂ, ಕರಪತ್ರಗಳನ್ನು ಪುಸ್ತಕಗಳನ್ನು ಮುದ್ರಣಮಾಡಲು ನಮ್ಮ ಎಲ್ಲಾ ಹಣವನ್ನು ಖರ್ಚುಮಾಡ-ಬೇಕಾದರೂ, ಇಲ್ಲವೇ ಕರ್ತನ ಕಾರ್ಯೋದ್ದೇಶಗಳಲ್ಲಿ ನಾವು ಬೇರೆ ಯಾವುದೇ ವಿಧದಲ್ಲಿಯೂ ನಮ್ಮನ್ನು ಬಳಸಿ ಕೊಳ್ಳುವವರಾದರೂ, ಇದು ನಮ್ಮ ಹೃದಯಗಳಲ್ಲಿನ ಪ್ರೀತಿಯ ಫಲವಾಗದೇ ಹೋದಲ್ಲಿ ಇದರಿಂದ ನಮಗೇನೂ ಪ್ರಯೋಜನ-ವಾಗಲಾರದು. ನಾವು ಹೀಗೆ ನೋಡುವ ಅಂಶವೇನಂದರೆ-ಪವಿತ್ರಾತ್ಮನ ಫಲಗಳಾದ ಸಾಧುತ್ವ ನಯವಿನಯ ತಾಳ್ಮೆ ಪ್ರೀತಿ ಮುಂತಾದವುಗಳನ್ನು ನಮ್ಮ ಹೃದಯಗಳಲ್ಲಿ ಬೆಳಸಿಕೊಂಡವರಾಗಿ "ಹೆಚ್ಚು ಫಲಭರಿತರು" ಆಗಬೇಕಾದಲ್ಲಿ ಇವುಗಳು ಕರ್ತನಿಗೆ ಮೆಚ್ಚಿಗೆಯಾಗುವಷ್ಟು ಹೆಚ್ಚಿನ ಪ್ರಮಾಣದಲ್ಲಿ ಇರಬೇಕೆಂಬದು. ಆದುದರಿಂದ ಈ ಫಲಗಳೆಂಬುದರಲ್ಲಿ ವ್ಯಕ್ತವಾಗಿರುವ ಅಂಶವು ನಿಸ್ಸಂದೇಹವಾಗಿಯೂ ಹಲವಾರು ವಿಧಾನಗಳ ಮೂಲಕವಾಗಿ ಅಂದರೆ ಬಹುಶಃ ಬಡವರಿಗೆ ದಾನಕೊಡುವದು, ಬಹುಶಃ ಸತ್ಯವನ್ನು ಪ್ರಸ್ತುತಪಡಿಸುವಲ್ಲಿ ನಮ್ಮನ್ನು ರಕ್ತಸಾಕ್ಷಿಗಳಾಗುವಲ್ಲಿಗೆ ನಡೆಸಬಹದಾದಂಥ ನಮ್ಮ ನಂಬಿಗಸ್ತಿಕೆ, ಇವುಗಳ ಮೂಲಕವಾಗಿ ನಮ್ಮ ದೇಹವನ್ನು ಸುಡುವದಕ್ಕೆ [ಅಂದರೆ ನಶಿಸುವದಕ್ಕೆ] ಒಪ್ಪಿಸುವದು. ನಮ್ಮ ದೇಹವನ್ನು ಸುಡುವದಕ್ಕೆ ಒಪ್ಪಿಸುವಂಥದ್ದು ಇಲ್ಲವೇ ನಮಗಿರುವದೆಲ್ಲವನ್ನು ನಷ್ಟಪಡಿಸಿಕೊಳ್ಳುವದು [ವ್ಯಯಮಾಡಿಕೊಳ್ಳುವದು] ನೀತಿತತ್ವಗಳಿಗೆ ನಮಗಿರುವಂಥಾ ನಂಬಿಗಸ್ತಿಕೆಯ ಮೂಲಕವಾಗಿದ್ದಲ್ಲಿ, ಕರ್ತನಿಗಿರುವ ನಮ್ಮ ಪ್ರೀತಿ ಹಾಗು ನಿಷ್ಠೆಯ ಮೂಲಕವಾಗಿದ್ದಲ್ಲಿ ನಾವು ನಿಜವಾಗಿಯೂ ಧನ್ಯರೇ.

## ಒಣಗಿದ ಕೊಂಬೆಗಳನ್ನು ಸುಡಲಾದದ್ದು

ದ್ರಾಕ್ಷೇಫಲಗಳನ್ನು ಕೊಡಲಾರದವರೆಲ್ಲರೂ ಕೊಂಬೆಗಳಾಗಿ-ರುವದರಿಂದ ಕತ್ತರಿಸಲ್ಪಟ್ಟು ಅವುಗಳು ಒಣಗಿಹೋಗಿ ಅಂತಿಮವಾಗಿ ಸುಡಲ್ಪಡುವದು ಎನ್ನುವದು ಎರಡನೇ ಮರಣವನ್ನು ಒಳಗೊಂಡಿರುವಂತೆ ತೋರುತ್ತದೆ, ಅಂದರೆ ಸೂಚಿತವಾದ ಆ ವರ್ಗದವರನ್ನು ಸಂಪೂರ್ಣವಾಗಿ ನಾಶಪಡಿಸುವದನ್ನು ಒಳಗೊಂಡಿರುವಂತೆ ತೋರುತ್ತದೆ. ಇವರು ಲೌಕೀಕರ ವರ್ಗಕ್ಕೆ ಸೇರಿದವರಲ್ಲ, ಯಾಕಂದರೆ ಅವರು ಎಂದೂ ಕ್ರಿಸ್ತನೊಂದಿಗೆ ಐಕ್ಯವಾಗಿರಲಿಲ್ಲ, ಎಂದೂ ದ್ರಾಕ್ಷೇಬಳ್ಳಿಯ ಕೊಂಬೆಗಳಾಗಿರಲಿಲ್ಲ; ಹೀಗಾಗಿ ಈ ಸಂಬಂಧವಾಗಿ ಎಂದೂ ಪರೀಕ್ಷೆಪರಿಶೋಧನೆಗಳಿಗೆ ಒಳಗಾಗಿರಲಿಲ್ಲ. ಅದು ಕೇವಲ ಕರ್ತನಿಗೆ ಪೂರ್ಣವಾಗಿ ಪ್ರತಿಷ್ಠೆ ಮಾಡಿಕೊಳ್ಳುವಷ್ಟರ ಹಂತಕ್ಕೆ ಹೋಗಿ ಆತನೊಡನೆ ಒಂದು ಪೂರ್ಣವಾದ ಐಕ್ಯತೆಯಲ್ಲಿರುವ-ವರಾಗಿ, ಅಂದರೆ ಆಮೂಲಾಗ್ರವಾಗಿ ಪ್ರತಿಷ್ಠೆಮಾಡಿಕೊಂಡು ಹಾಗು ಪವಿತ್ರಾತ್ಮನಿಂದ ಹುಟ್ಟಿರುವವರನ್ನು {ಅಂಕುರಿಸಲ್ಪಟ್ಟಿರು-ವವರನ್ನು] ಉಲ್ಲೇಖಿಸಲಾಗಿರುವದು. ಈ ಮಾತುಗಳು ಅಪೋಸ್ತಲನು ಪ್ರಕಟಮಾಡಿ ಹೇಳಿರುವದಕ್ಕೆ ಸರಿಬೀಳುವಂತೆ ತೋರುತ್ತದೆ: "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದುದು."

ಲೋಕವು ಜೀವಸ್ವರೂಪನಾದ ದೇವರ ಕೈಯಲ್ಲಿರುವದಿಲ್ಲ, ಆದರೆ ಈಗಿನ ಕಾಲದಲ್ಲಿ ಆದಾಮನಿಗುಂಟಾದ ದಂಡನೆಯಲ್ಲಿ ಸತ್ತದ್ದಾಗಿರುವದೆಂದು ಎಣಿಸಲ್ಪಟ್ಟಿದ್ದು ಕರ್ತನಿಂದ ನ್ಯಾಯ-ವಿಚಾರಣೆಗೆ ಒಳಗಾಗಿರುವದಿಲ್ಲ. ಕೇವಲ ಕ್ರೈಸ್ತಸಭೆಯು ಮಾತ್ರ ಆದಾಮನಿಗಾದ ದಂಡನೆಯಿಂದ ಮುಕ್ತವಾಗಿರುವದೆಂದು ಎಣಿಸಲ್ಪಟ್ಟಿದ್ದು ಪರೀಕ್ಷೆಗೆ ಅಥವಾ ನ್ಯಾಯವಿಚಾರಣೆಗೆ ಒಳಗಾಗಿರುವದು; ಆದುದರಿಂದ ಇವರು ಮಾತ್ರ ಮಧ್ಯಸ್ಥ-ನಾಗಿರುವ ಕ್ರಿಸ್ತನ ಕೈಯಿಂದ ತಪ್ಪಿಸಿಕೊಂಡು ಇಲ್ಲಿ ಸೂಚಿಸಿರುವ ಅರ್ಥದಲ್ಲಿ ತಂದೆಯ ಕೈಯಲ್ಲಿ ಸಿಕ್ಕಿಬೀಳಲು ಸಾಧ್ಯವಿರುವದು. ಕ್ರಿಸ್ತನಿಂದ ತಪ್ಪಿಸಿಕೊಂಡು ಹೊರಬಿದ್ದ ಅವರ ಸಂಗತಿಯು ಅವರಿಗೆ ನಿರೀಕ್ಷಾಹೀನವಾಗಿರುವದು, ಅಂಥವರಿಗೆ ಎರಡನೇ ಮರಣಕ್ಕಿಂತಲೂ ಉತ್ತಮವಾದುದನ್ನು ಎದುರುನೋಡಲು ನಮಗೆ ಯಾವದಾದರೂ ಇರುವದು ಸಾಧ್ಯವಿಲ್ಲ. ಹೀಗಿದ್ದರೂ ನಿತ್ಯಯಾತನೆಯ ಸಿದ್ಧಾಂತವು ನಿಜವಲ್ಲವೆಂಬುದಕ್ಕೆ ನಾವು ಸಂತೋಷವುಳ್ಳವರಾಗಿರುವೆವು; ಅಂದರೆ ಸಂಪೂರ್ಣವಾಗಿ ನಶಿಸಿಹೋಗುವಂಥ ಮರಣದ ಮೂಲಕವಾಗಿ ಸತ್ತಾಗ ದೇವರು ವಾಗ್ದಾನಮಾಡಲ್ಪಟ್ಟದ್ದೆಲ್ಲವನ್ನು ಅವರು ಕಳಕೊಂಡವರಾಗುವರು. ನಿತ್ಯಜೀವದ ಬಗ್ಗೆ ಮನನಮಾಡಿಕೊಂಡು ಅದನ್ನು ಅರಿತವರಾದ ಇವರಿಗೆ ಆ ನಷ್ಟವು ಘೋರವಾಗಿರುವದು.

ಕತ್ತರಿಸಲ್ಪಟ್ಟು ಒಣಗಿಹೋಗಿ ಸುಡಲ್ಪಡುವ ಕೊಂಬೆಗಳ ಸಂಬಂಧದ ಹೇಳಿಕೆಯಲ್ಲಿ ನಂಬಿಗಸ್ತರಾದ ಮನೆತನದವರೆಲ್ಲರನ್ನು ಪರಿಗಣನೆಗೆ ತೆಗೆದುಕೊಂಡಂತೆ ತೋರುವದಿಲ್ಲ; ಆಂತಹ ಕೊಂಬೆಗಳಾದವರು ಯೇಸುವಿನಲ್ಲಿ ನಂಬಿಕೆಯುಳ್ಳವರಾದರೂ ಅವರು ಎಂದೂ ಕ್ರಿಸನಲ್ಲಿನ ಕೊಂಬೆಗಳಾಗಲೀ ಅಥವಾ ಅಂಗಗಳಾಗಲೀ ಆಗುವಂಥ ಸ್ಥಿತಿಗೆ ಬಂದಿರುವದಿಲ್ಲ. ಇಲ್ಲವೇ ಮಹಾ ಸಮೂಹವಾಗುವದಕ್ಕೆ ಪರಿಗಣಿಸಲ್ಪಡುವಂತೆಯೂ ತೋರುವದಿಲ್ಲ. ನಿಜವಾಗಿಯೂ ಈ ವರ್ಗದ ಬಗ್ಗೆ ಕೆಲವೇ ವಾಕ್ಯಭಾಗಗಳಲ್ಲಿ ಅಲ್ಲದೆ ಅದು ಅಸ್ಪಷ್ಟವಾಗಿ ಉಲ್ಲೇಖಿಸಲಾಗಿರು-ವದು. ಯಾರೂ ಇಂಥಾ ಒಂದು [ಮಹಾ] ಸಮೂಹವಾಗುವ-ದಕ್ಕೆ ಕರೆಯಲ್ಪಟ್ಟಿಲ್ಲವೆನ್ನುವದನ್ನು ಕರ್ತನು ಹೀಗೆ ಸೂಚಿಸುತ್ತಿರುವನೆಂಬದು ನಮ್ಮ ನಂಬಿಕೆ. "ಬೆಂಕಿಯಿಂದ ತಪ್ಪಿಸಿಕೊಂಡವನ ಹಾಗಿರುವನು" ಎಂದು ಅಪೋಸ್ತಲನು ಕೆಲವರ ಬಗ್ಗೆ ನುಡಿದಿರುವನು ಅಲ್ಲದೆ ಇದೇ ವಿಷಯವಾಗಿ ಕರ್ತನ ಮಾತಿನ ಮೂಲಕವಾಗಿ ಒಂದು ಸಣ್ಣ ಸಲಹೆಯನ್ನು ತೆಗೆದುಕೊಳ್ಳಬಹುದು; ಅದೇನಂದರೆ ದ್ರಾಕ್ಷೇಬಳ್ಳಿಯಿಂದ ಕತ್ತರಿಸಲ್ಪಟ್ಟು ಒಣಗಿಹೋದ ಕೊಂಬೆಗಳಾಗಿ ಅವರು

ಸುಡಲ್ಪಡುವರು ಅಂದರೆ ಕೊಂಬೆಯಂತೆ [ಕೊಂಬೆಯ ರೂಪದಲ್ಲಿ] ಸುಡಲ್ಪಡುವರು; ಹೇಗಂದರೆ ಅವರು ಮೂಲತಃ ಸೇರಿದ್ದ ಒಡಂಬಡಿಕೆಯಲ್ಲಿನ ಅಂಗಗಳೆನಿಸಿಕೊಳ್ಳುವ ಗುಂಪಿನಿಂದ ತೆಗೆಯಲ್ಪಟ್ಟು ನಾಶವಾಗುವರು; ಆದರೆ ಅವರು ವೈಯುಕ್ತಿಕವಾಗಿ ನಿರಂತರಕ್ಕೂ ನಾಶನದಲ್ಲಿರುವ ಅಗತ್ಯವಿರುವದಿಲ್ಲ. ಈ ಗುಂಪಿವರ ಬಗ್ಗೆ ಅಪೋಸ್ತಲನು ತಿಳಿಸುತ್ತಾ ಹೀಗೆ ನುಡಿದಿರುವನು: ಅವರಾದರೋ ಬೆಂಕಿಯಿಂದ ತಪ್ಪಿಸಿಕೊಂಡವರಂತೆ ಇರುವದಾ–ದರೂ ಅವರ ಕೃತ್ಯಗಳು ಲಯವಾಗಿ ಹೋಗುವವು. ಕರ್ತನ ಹೇಳಿಕೆಯಲ್ಲಿ ಬಹುಶಃ ಇವರು ಈ ವಿಧದಲ್ಲಿ ಒಳಗೊಂಡಿರು–ವರೆಂದು ನಾವು ಪರಿಗಣಿಸಬೇಕು.

## ದ್ರಾಕ್ಷೇಬಳ್ಳಿಯ ಕೊಂಬೆಗಳಾಗುವದರಿಂದ ಲಭಿಸುವಂಥ ಫಲಗಳು

ತನ್ನೊಡನೆಯ ಈ ಐಕ್ಯತೆಯಿಂದ ಲಭಿಸುವ ಕೆಲವು ಫಲಗಳು ಯಾವುವೆಂಬುದನ್ನು ನಮಗೆ ತಿಳಿಸಲು ನಮ್ಮ ಕರ್ತನು ಮುಂದಾಗಿದ್ದನು: ಅವುಗಳು ಯಾವುವೆಂದರೆ–

ಮೊದಲನೆಯದು, ಅಂಥವರು ಯಾವುದನ್ನಾದರೂ ಬೇಕೆಂದು ಇಚ್ಛಿಸಿ ಕೇಳಿಕೊಂಡರೂ ಅದು ಅವರಿಗಾಗಿ ನೆರವೇರಿಸಲ್ಪಡುವದು. ಕೇವಲ ಅದಕ್ಕೆ ಒಂದೇ ಒಂದು ಷರತ್ತು ಅಥವಾ ಮಿತಿ ಇರುವದು, ಅದು ಯಾವುದಂದರೆ ಅವರು ಹೀಗೆ ಕೇಳಿಕೊಳ್ಳಲು ಸಿದ್ಧವಾಗುವಕ್ಕೆ ಮೊದಲು ಅವರು ಕರ್ತನ ನುಡಿಗಳಿಗೆ ಗಮನಕೊಟ್ಟವರಾಗಿ ಕರ್ತನ ಚಿತ್ತವು ಏನೆಂಬುದನ್ನು ಹಾಗು ಆತನ ಚಿತ್ತದ ಪ್ರಕಾರವಾಗಿ ತಾವು ಏನನ್ನು ಕೇಳಿಕೊಳ್ಳಬಹುದು ಎನ್ನುವದನ್ನು ತಿಳಿದಿರುವಂತೆ ನೋಡಿ–ಕೊಳ್ಳಬೇಕು. ಕ್ರಿಸ್ತನಲ್ಲಿ ನೆಲೆಗೊಂಡಿರುವವರಿಗೆ ತಮ್ಮ ಸ್ವಂತ ಚಿತ್ತವಿರಬಾರದು, ತಮ್ಮ ಶಿರಸ್ಸಾದವನ ಚಿತ್ತವೇ ಅವರದೂ ಆಗಿರಬೇಕು. ಅಲ್ಲದೆ ತಂದೆಯ ಚಿತ್ತವೇ ತನ್ನ ಚಿತ್ತವೂ ಆಗಿರುವದೆಂದು ಆ ಶಿರಸ್ಸಾದವನು ಈಗಾಗಲೇ ಪ್ರಕಟಿಸಿ ಹೇಳಿರುವನು. ಹೀಗಾಗಿ ನಾವು ತಂದೆಯ ಚಿತ್ತವನ್ನು ನಮ್ಮ ಹೃದಯಗಳಲ್ಲಿ ಇಟ್ಟುಕೊಳ್ಳುವದು ಹಾಗು ತಂದೆಯು ಮಾಡಿದ ವಾಗ್ದಾನಗಳನ್ನು ನಮ್ಮ ಹೃದಯಗಳಲ್ಲಿ ಇಟ್ಟುಕೊಳ್ಳುವದು ಇದಕ್ಕಿರುವ ಮಿತಿಯಾಗಿರುವದು; ಆನಂತರದಲ್ಲಿ ನಾವು ಮಾಡಿದ ವಿಜ್ಞಾಪನೆಗಳು ಇದಕ್ಕೆ ಅನುಸಾರವಾಗಿ ಮಾಡಿದಂಥವುಗಳಾಗಿದ್ದು ನಮ್ಮ ಕರ್ತನು ಇಂಥವುಗಳೆಲ್ಲವುಗಳನ್ನು ಅನುಗ್ರಹಿಸಲು ಹರ್ಷವುಳ್ಳವನಾಗಿರುವನು.

ಎರಡನೇಯ ಫಲಿತಾಂಶ ಅಥವಾ ಪರಿಣಾಮವು ಏನಾಗಿರುವದೆಂದರೆ, ನಮ್ಮ ಫಲವು ವೃದ್ಧಿಯಾಗುವಷ್ಟರ ಪ್ರಮಾಣದಲ್ಲಿಯೇ ತಂದೆಯು ಹೆಚ್ಚು ಮಹಿಮೆಹೊಂದುವನು ಅಲ್ಲದೆ ಇದರ ಅನುಸಾರವಾಗಿ ನಮ್ಮ ಶಿಷ್ಯವೃತ್ತಿಯು ಮುಂದುವರೆಯುವದು; ಹೇಗಂದರೆ ನಾವು ರೂಢಿಯಾಗಿ ತಂದೆಯ ಚಿತ್ತವನ್ನು ತಿಳಿದುಕೊಂಡು ಅದನ್ನು ನೆರವೇರಿಸ ಬಯಸುವಂಥವರಾಗಿ ಹಾಗು ಆತನ ಚಿತ್ತಕ್ಕೆ ವಿಧೇಯರಾಗಿ ಜೀವಿಸುವದರ ಮೂಲಕವಾಗಿ ಆತನಿಗೆ ಪ್ರಭಾವಮಾನಗಳನ್ನು ಉಂಟುಮಾಡುವೆವು. ಏನಾದರೂ ಇದಕ್ಕಿಂತ ಕಡಿಮೆಯಾದಲ್ಲಿ ನಮ್ಮ ಶಿಷ್ಯತನವು ರದ್ದಾಗಿಹೋಗುವದು. ಕರ್ತನು ಈ ಅವಕಾಶವನ್ನು ಬಳಸಿಕೊಂಡವನಾಗಿ ನಮ್ಮ ಸಂಗತಿಯನ್ನು ಹಗುರವಾಗಿ ಪರಿಗಣಿಸಿ ನಮ್ಮನ್ನು ಕಿತ್ತೆಸೆಯುವಂತಾಗಿ ಅದು ಆಕ್ಷಣದಿಂದಲೇ ರದ್ದಾಗುವದೆಂತಲ್ಲ; ನಾವು ಕೃಪೆಯಲ್ಲಿ ಬೆಳೆಯುವದು, ಪರಿಜ್ಞಾನದಲ್ಲಿ ವೃದ್ಧಿಯಾಗುವದು, ದೇವರೊಂದಿಗೆ ಹೊಂದಾಣಿಕೆಮಾಡಿಕೊಂಡು ವೃದ್ಧಿಗೊಳ್ಳುವದು, ಪವಿತ್ರಾತ್ಮನ ಫಲಗಳನ್ನು ವೃದ್ಧಿಸಿಕೊಳ್ಳುವದು ನಮ್ಮ ಒಡಂಬಡಿಕೆಯ ಒಂದು ಭಾಗವಾಗಿರುವದು ಅಲ್ಲದೆ ಈ ಒಪ್ಪಂದದಿಂದ ಅಥವಾ ಕರಾರಿನಿಂದ ಹಿಂದೆಕ್ಕೆ ತಿರುಗಿಕೊಂಡಲ್ಲಿ ಅದು ನಾವು ಶಿಷ್ಯರಾಗಿ ಇಲ್ಲವೇ ಅಂಗಗಳಾಗಿ ನಮ್ಮ ಸಂಬಂಧವನ್ನು ಉಳಿಸಿಕೊಂಡವರಾಗಿ ಪರಿಗಣಿಸಲ್ಪಡಲು ಸಾಧ್ಯವಾಗದಂತೆ ಮಾಡುವದು.

ಮೂರನೇ ಫಲ ಅಥವಾ ದ್ರಾಕ್ಷೇಬಳ್ಳಿಯಲ್ಲಿನ ಅಂಗಗಳಾಗಿ–ರುವದರ ಹಾಗೂ ಕೊಂಬೆಗಳಾಗಿ ಬೆಳೆಯುತ್ತಾ ಮುಂದುವರೆ–ಯುವದರ ಸಾಕ್ಷಿಪ್ರಮಾಣವು 9ನೇ ವಚನದಲ್ಲಿ ತಿಳಿಸಲಾಗಿರುವದು, ಅದೇನಂದರೆ ದ್ರಾಕ್ಷೇಬಳ್ಳಿಯಾಗಿರುವ ಕರ್ತನಾದ ಯೇಸುವನ್ನು ತಂದೆಯು ಪ್ರೀತಿಸಿದ ಹಾಗೆಯೇ ನಮ್ಮ ವಿಮೋಚಕನು ಆತನ ಕೊಂಬೆಗಳು ಅಥವಾ ಅಂಗಗಳಾಗಿರುವ ನಮ್ಮನ್ನೂ ಪ್ರೀತಿಸುವನು. ತನ್ನ ತಂದೆಯು ತನ್ನ ಕಡೆಗೆ ತೋರುವಂಥಾ ಪ್ರೀತಿಯನ್ನು ನಮ್ಮ ಒಡೆಯನು ನಮ್ಮ ಕಡೆಗೂ ತೋರುವನೆಂಬದು ಎಂಥಾ ಅದ್ಭುತವಾದ ಒಂದು ಆಲೋಚನೆ! ಈ ಅಂಶವನ್ನು ನಮ್ಮ ನಂಬಿಕೆಯು ಯಾವಾಗಲೂ ಹಿಡಿದುಕೊಂಡು ಈ ಹಿಡಿತವನ್ನು ಪಾಲಿಸಿಕೊಂಡು ಬಂದಲ್ಲಿ ನಮಗೆ ನಿಜವಾಗಿಯೂ ಬಯಸುವಂಥದ್ದು ಅಥವಾ ಹೆದರಿಕೊಳ್ಳುವಂಥದ್ದು ಯಾವದೂ ಇರಲು ಸಾಧ್ಯವಿರುವದಿಲ್ಲ. ಅಂದರೆ ಬೇಸಿಗೆ ಕಾಲವೆಂಬ ಅನಕೂಲಕರ ಸಮಯವು ವರ್ಷವೆಲ್ಲಾ ಮುಂದುವರೆಯುವದು. ಸಲಹೆಮಾಡಲಾದ ಮುಂದಿನ ಅಂಶವೇನಂದರೆ ಕರ್ತನ ಅನುಗ್ರಹದಲ್ಲಿನ ಈ ಉನ್ನತ ಸ್ಥಾನಕ್ಕೆ ತಲುಪಿದವರಾಗಿ ನಾವು ಆತನ ಶಿಷ್ಯರಾಗಿದ್ದು ಈ ವಿಷಯದಲ್ಲಿ ಆತನು ನಿಜವಾಗಿಯೂ ನಮಗೆ ಮಾಡಿರು–ವಂಥದನ್ನು ಮನಗಂಡವರಾಗಿದಲ್ಲಿ ಆತನ ಪ್ರೀತಿಯಲ್ಲಿ ಮುಂದುವರೆಯಲು ನಾವು ಬಯಸುವವರಾಗುವವೆಂಬದು. ಮುಂದೆ ಅನುಕ್ರಮವಾಗಿ ಬರುವಂಥದ್ದು ಆ ಪ್ರೀತಿಯಲ್ಲಿ ನಾವು ಮುಂದುವರೆಯುವದಕ್ಕೆ ಇರುವ ಷರತ್ತು ನಿಬಂಧನೆಗಳು, ಅದೇನಂದರೆ ನಾವು ಆತನ ಆಜ್ಞೆಯನ್ನು ಪಾಲಿಸಬೇಕೆಂಬದೇ.

ಇದು ಒಂದು ವಿವೇಚನಾ ರಹಿತವಾದ ಪ್ರಸ್ತಾವನೆ–ಯಲ್ಲವೆಂಬುದನ್ನು ತೋರಿಸಿಕೊಡುವ ನಿಟ್ಟಿನಲ್ಲಿ ನಮ್ಮ ಕರ್ತನು ಸಾರಿ ಹೇಳಿರುವದೇನಂದರೆ ಇವುಗಳು ತಂದೆಯು ತನ್ನೊಡನೆ ನಡಕೊಳ್ಳುವ ರೀತಿಯಲ್ಲಿಯೇ ಇರುವದೆಂಬದು ಅದೇನಂದರೆ– "ನಾನು ತಂದೆಯ ಆಜ್ಞೆಗಳನ್ನು ಕೈಗೊಂಡು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವಂತೆಯೇ" ಎಂಬದು. ನಾವು ಕರ್ತನ ಪ್ರೀತಿಯಲ್ಲಿ ನೆಲೆಗೊಂಡು ಆತನ ನಿಬಂಧನಾದೇಶಗಳ ವಿಷಯವಾಗಿ ಉದಾಸೀನರಾಗಿರುವದನ್ನು ಅಪೇಕ್ಷಿಸಲು ಸಾಧ್ಯವಾಗದು. ಕರ್ತನಿಗೆ ತನ್ನ ತಂದೆಯ ಕಡೆಗೆ ಇರುವ ವಿಧೇಯತೆಯ ಪರಿಮಾಣವು ತಂದೆಯ ಮೇಲಿನ ತನ್ನ ಪ್ರೀತಿಯ ಪರಿಮಾಣ ವನ್ನು ಸೂಚಿಸುವಂತೆಯೇ ಆತನ ಕಡೆಗಿರುವ ನಮ್ಮ ವಿಧೇಯ

ಪರಿಮಾಣವು ಆತನ ಕಡೆಗಿರುವ ನಮ್ಮ ನಂಬಿಗಸ್ತಿಕೆಯ ಪರಿಮಾಣವನ್ನು ಸೂಚಿಸುವದು. ಅಪೋಸ್ತಲನು ಇದೇ ಅಂಶವನ್ನು ತಿಳಿಸುವವನಾಗಿ ಇದಕ್ಕೆ ಸ್ವಲ್ಪ ಕೂಡಿಸಿ ಹೀಗೆ ಹೇಳಿರು–ವನು: "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದ–ವುಗಳಲ್ಲ." (1 ಯೋಹಾನ 5:3) ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದಷ್ಟೇ ಸಾಕಾಗಲಾರದು, ಆದರೆ ಇವುಗಳು ಭಾರವಾದ ವುಗಳೆಂದು ಪರಿಗಣಿಸುವದಿಲ್ಲವೆಂದೂ ಆದರೆ ನಿಜವಾಗಿಯೂ ಕರ್ತನ ನೀತಿಯುಳ್ಳ ನಿಬಂಧನೆಗಳು ಹಾಗು ಏರ್ಪಾಡುಗಳ ಅನುಸಾರವಾಗಿ ನಡೆದು ಅದಕ್ಕೆ ಹೊಂದಿಕೊಂಡಿರಲು ಹರ್ಷವುಳ್ಳವರಾಗಿದ್ದೇವೆಂಬುದನ್ನು ತೋರಿಸಿಕೊಡುವ ಸಲುವಾಗಿ ನಾವು ಅವುಗಳನ್ನು ಪ್ರೀತಿಪೂರ್ವಕ ವಾಗಿಯೂ ನಿಷ್ಠೆಯಿಂದಲೂ ಸಂತೋಷಭರಿತರಾಗಿಯೂ ಕೈಕೊಂಡು ನಡೆಯಬೇಕು. ನಾವೆಲ್ಲರೂ ನಮ್ಮ ಕರ್ತನಾದ ಯೇಸುವು ಹಾಕಿಕೊಟ್ಟ ನೀತಿತತ್ವಗಳಿಗೆ ಅಂದರೆ ಆತನ ಆಜ್ಞಾವಿಧಿಗಳಿಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗಿರುವ ಹೃದಯದ ಈ ಮನೋಭಾವವನ್ನು ಅಧಿಕಾಧಿಕವಾಗಿ ಬಯಸುವಂಥವರಾಗಿರೋಣ.

ನಮ್ಮ ಕರ್ತನ ಆಜ್ಞೆಗಳು ಮೋಶೆಯ ಕೊಟ್ಟ ದಶಾಜ್ಞೆ ಗಳಂತಲ್ಲ; ಆದರೆ ಅವು ಹೆಚ್ಚುಕಡಿಮೆ ವ್ಯಕ್ತ–ಸಂಗತಿಗಳ ದೃಷ್ಟಿಕೋನದ ಅನುಸಾರವಾಗಿರುವದು. ಶರೀರ ಸಂಬಂಧವಾಗಿ ಅಪೇಕ್ಷಿಸಲಾದ ಸಂಗತಿಗಳೆಂಬ ಅರ್ಥದಲ್ಲಿ ಅವುಗಳು ಅಲ್ಲವಾಗಿ–ರುವದು; ನಮ್ಮ ಹೃದಯಗಳಿಂದ ಅಪೇಕ್ಷಿಸಲಾದ ಸಂಗತಿ –ಗಳೆಂಬ ಅರ್ಥದಲ್ಲಿ ಅಧಿಕವಾಗಿರುವದು. ಒಟ್ಟಾರೆ ಸಂಕ್ಷೇಪಿಸಿ ಹೇಳುವದಾದರೆ ಆತನ ಆಜ್ಞೆಗಳು ಯಾವುವಂದರೆ ಸಂಪೂರ್ಣ ವಾದ ಹೃದಯದಿಂದಲೂ ಮನಸ್ಸಿನಿಂದಲೂ ಆತ್ಮದಿಂದಲೂ ಹಾಗು ಶಕ್ತಿಯಿಂದಲೂ ತಂದೆಯನ್ನು ಪ್ರೀತಿಸುವದು ಮತ್ತು ನಮ್ಮ ನೆರೆಯವರನ್ನು ನಮ್ಮಂತಯೇ ಪ್ರೀತಿಸುವದೆಂಬದೇ. ಇದು ನಮ್ಮ ಅಪೂರ್ಣವಾದ ಶರೀರಭಾವಕ್ಕೆ ಅಸಾಧ್ಯವಾದರೂ ಹೊಸದಾಗಿ ಹುಟ್ಟಿದ ನಮ್ಮ ಹೃದಯಗಳಿಗೆ ಸಾಧ್ಯವಿರುವದು. ಆದುದರಿಂದ ನಮ್ಮ ಕರ್ತನಿಗೆ ಬೇಕಿರುವದೇನಂದರೆ ನಮ್ಮ ಹೃದಯದ ಮೂಲಕವಾಗಿ ದೇವರ ಈ ಆಜ್ಞೆಗಳನ್ನು ಸೇವಿಸುವವರಾಗಿ ಮತ್ತು ನಮ್ಮ ಶರೀರದ ಮೂಲಕವಾಗಿ ನಮ್ಮ ಅತ್ಯುತ್ತಮ ಸಾಮರ್ಥ್ಯದ ಅನುಸಾರವಾಗಿ ಅವುಗಳನ್ನು ಕೈಗೊಂಡು ನಡೆಯುವಂಥದ್ದೇ. ಅಲ್ಲದೆ ನಮಗೆ ಭರವಸೆ ನೀಡಲಾಗಿರುವದೇನಂದರೆ ಪುನರುತ್ಥಾನದಲ್ಲಿ ನಾವು ಹೊಸ ದೇಹವನ್ನು ಹೊಂದಿದವರಾಗಿ ಕರ್ತನನ್ನು ಆಮೂಲಾಗ್ರವಾಗಿ ಪೂರ್ಣ ತೃಪ್ತಿಕರವಾದ ರೀತಿಯಲ್ಲಿ ಸೇವಿಸಲು ಶಕ್ತರಾಗಿರುವೆವೆಂಬದು.

## ನನ್ನ ಆನಂದವು ನಿಮ್ಮಲಿದ್ದು ನಿಮ್ಮ ಆನಂದವು ಪರಿಪೂರ್ಣಗಿರುವದು

ನಮ್ಮ ಕರ್ತನು ತಾನು ಏಕೆ ಇದನ್ನು ಹೇಳಿದನೆಂಬುದನ್ನು ಬಹು ಚಿಕ್ಕದಾಗಿಯೂ ಅದರೆ ಅರ್ಥಪೂರ್ಣವಾಗಿಯೂ ಗಾಢವಾಗಿಯೂ ಇರುವ ಒಂದು ನಿದರ್ಶನದ ರೂಪದಲ್ಲಿ ಹೀಗೆ ಹೇಳುವದರ ಮೂಲಕವಾಗಿ ಈ ಒಂದು ಚಿಕ್ಕ ಪಾಠವನ್ನು ಮುಕ್ತಾಯಗೊಳಿಸಿದ್ದನು: "ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗ ಬೇಕೆಂತಲೂ ಇದನ್ನೆಲ್ಲಾ ಹೇಳಿದ್ದೇನೆ." "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ". ಇವು ಅದ್ಭುತವಾದ ಜೀವವಾಕ್ಯಗಳಾಗಿದ್ದು ಶತಮಾನಗಳ ಮೂಲಕವಾಗಿ ನಮಗೆ ಇಳಿದು ಬಂದಿರುವಂಥವುಗಳಾಗಿ ಕರ್ತನ ಹಿಂಬಾಲಕರಲ್ಲಿ ಹಲವಾರು ಮಂದಿಯನ್ನು ಇಕ್ಕಟ್ಟಾದ ಮಾರ್ಗದಲ್ಲಿ [ನಡೆಯಲು] ಉಲ್ಲಾಸಗೊಂಡು ಉತ್ತೇಜಿತರಾಗಲು ಸಹಾಯ ಮಾಡಿರುವದು.

ಹಲವಾರು ಆಕ್ಷೇಪಣೆಗಳು ಈ ಶುದ್ಧವೂ ನಿರ್ಮಲವೂ ಆದ ಧರ್ಮದ ವಿರುದ್ಧವಾಗಿ ಎದ್ದಿರುವದು: ಕೆಲವರು ದೂರುವ–ದೇನಂದರೆ ಇದು ಮಂಕು ಕವಿದ ಹಾಗೂ ಸಂತೋಷ ರಹಿತ –ವಾಗಿದ್ದು ಹೃದಯ ಹಾಗು ಮೆದುಳಿಗೆ ಒಂದು ಸಂಕೋಲೆ ಯಾಗಿರುವದೆಂಬದು; ಇದು ಸಣ್ಣ ಹುರಿಹಗ್ಗಗಳುಳ್ಳ ಒಂದು ಕೊರಡೆಯ ಮೂಲಕವಾಗಿ ಉಲ್ಲಾಸವೆಂಬ ಪ್ರತಿಯೊಂದು ಆಲಯದಿಂದ ಮನುಷ್ಯರನ್ನು ಹೊರದೂಡುವದು; ಇದು ಸಂತೋಷದ ಪ್ರತಿಯೊಂದು ಕ್ಷೇತ್ರದಲ್ಲೂ "ಇಲ್ಲಿ ಅತಿಕ್ರಮ ಪ್ರವೇಶವಿರುವದಿಲ್ಲ" ಎಂಬ ಪ್ರಕಟಣಾಪತ್ರವನ್ನು ಅಂಟಿಸಿ–ರುವದು. ಇದು ಒಂದು ತಪ್ಪೆಂಬದು ನಮ್ಮ ಉತ್ತರವಾಗಿರಬೇಕು: ಯಾಕಂದರೆ ಇವುಗಳು ತಾವು ಮಾತನಾಡುವ ಸಂಗತಿಗಳು ಏನೆಂಬುದನ್ನು ತಿಳಿಯವರ ಇಲ್ಲವೇ ಇದನ್ನು ಅರ್ಥಮಾಡಿ–ಕೊಳ್ಳದವರ ಮಾತಾಗಿರಬೇಕು. ಯಾರು ನಿಜವಾಗಿಯೂ ಕರ್ತನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿರು–ವರೋ, ಯಾರು ಆತನನ್ನು ನಿಜವಾಗಿಯೂ ಅಂಗೀಕರಿಸಿ–ರುವರೋ, ಯಾರು ನಿಜವಾಗಿಯೂ ತಮ್ಮ ಜೀವಿತಗಳನ್ನು ಕರ್ತನ ಪಾದಗಳ ಬಳಿಯಲ್ಲಿ ಇಟ್ಟವರಾಗಿ ಪ್ರಾಮಾಣಿಕತೆಯಿಂದ ಆತನ ಹಿಂಬಾಲಕರಾಗಿರುವರೋ, ಆತನು ವಾಗ್ದಾನ ಮಾಡಿರುವಂತೆ ಅವರು ಆನಂದಭರಿತರಾಗಿರುವರು; ಅದು ಹೆಚ್ಚುತ್ತಾ ಬರುವ ಒಂದು ಆನಂದವಾಗಿದ್ದು ದಿನಗಳು ಹಾಗು ವರುಷಗಳು ಉರುಳಿದಂತೆ ಪೂರ್ಣತೆಗೆ ಹೆಚ್ಚುಹೆಚ್ಚಾಗಿ ಅದು ಹತ್ತಿರವಾಗುತ್ತಾ ಬರುವದು. ಹೇಗೂ ಪರಿಪೂರ್ಣತೆಯೆಂಬುದು ಬರುವವರೆಗೂ ಅಲ್ಲದೆ ಅಪೂರ್ಣತೆಯೆಂಬದು ಇಲ್ಲದಂತಾಗುವ ವರೆಗೂ, ನಾವು ಪುನರುತ್ಥಾನದ ಸ್ಥಿತಿಗೆ ಬಂದವರಾಗಿ ಈಗ ಕರ್ತನು ನಮ್ಮನ್ನು ನೋಡುವಂತೆ ನಾವು ಆತನನ್ನು ನೋಡುವವರಾಗಿ, ಆತನು ನಮ್ಮನ್ನು ತಿಳುಕೊಂಡಂತೆ ನಾವು ಆತನನ್ನು ತಿಳಿದುಕೊಂಡವರಾಗಿ, ಆತನಿಂದಾಗುವ ಪೂರ್ಣ ಸಂತೋಷವನ್ನು ಮನಗೊಂಡವರಾಗಿ, ಆತನು ನೀಡುವ ಸ್ವಾಗತವನ್ನು ಅಂದರೆ "ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರುವವನಾಗು" ಎಂಬ ಆತನ ಆಮಂತ್ರಣ ಧ್ವನಿಯನ್ನು ಕೇಳುವವರೆಗೂ ಆ ಒಂದು ಆನಂದವು ಸಂಪೂರ್ಣವಾಗುವದಿಲ್ಲ.

ಈಗ ನಾವು ನಂಬಿಕೆಯ ಮೂಲಕವಾಗಿ, ನಿರೀಕ್ಷೆಯ ಮೂಲಕವಾಗಿ, ಹೃದಯದಲ್ಲಿ ವಿಶ್ರಮಿಸುವದರ ಮೂಲಕವಾಗಿ ಆ ಆನಂದದಲ್ಲಿ ಸೇರುವೆವು; ಆದರೆ ಅಂತಿಮವಾಗಿ ನಾವು ನಿಜವಾದ ಅರ್ಥದಲ್ಲಿ ಅದರಲ್ಲಿ ಸೇರುವೆವು. ಈ ಮಧ್ಯದಲ್ಲಿ ಲೋಕವು,

ಕರ್ತನಿಗೆ ಒಳಗಾಗದೇ ಇರುವಂಥದಾಗಿ ಕರ್ತನಿಂದಾಗುವ ಆನಂದವನ್ನು ತಿಳುಕೊಳ್ಳದೇ ಇದ್ದು, ಅದು ಸಂಪೂರ್ಣವಾಗಿ ಸ್ವಾರ್ಥದಿಂದಲೂ ಆಕಾಂಕ್ಷೆಯಿಂದಲೂ ಹೋರಾಟ ಹೊಟ್ಟೆಕಿಚ್ಚಿನಿಂದಲೂ ತುಂಬಿಕೊಂಡಿರುವದು; ಅದು ಆತನನ್ನು ತಿಳಿದುಕೊಳ್ಳದಂತೆ ನಮ್ಮನ್ನೂ ತಿಳಿದುಕೊಂಡಿರುವದಿಲ್ಲ; ತನ್ನ ಜೀವವನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳುವ ಪರ್ಯಂತರದವರೆಗೂ ಸಹ ತಂದೆಯ ಚಿತ್ತವನ್ನು ನೆರವೇರಿಸುವಲ್ಲಿ ನಮ್ಮ ಕರ್ತನಿಗಿದ್ದ ಆನಂದದ ವಿಷಯವನ್ನು ಅದು ಎಂದೂ ಮನವರಿಕೆಮಾಡಿಕೊಳ್ಳದೇ ಇರುವ ಹಾಗೆಯೇ ಒಡೆಯನ ಸೇವೆಯಲ್ಲಿ ನಮಗಿರುವ ಆನಂದವನ್ನು ಅದು ತಿಳಿದು ಕೊಂಡಿರುವದಿಲ್ಲ.

## "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ"

ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಕರ್ತನು ಆದೇಶಿಸಿರುವದು ನಮಗೆ ಆಶ್ಚರ್ಯವನ್ನು ಉಂಟು ಮಾಡುವದಿಲ್ಲ, ಆದರೆ–"ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ" ಎಂಬ ಈ ಮಾತುಗಳಲ್ಲಿ ಒಳಗೊಂಡಿರುವ ಅಭಿಪ್ರಾಯದ ಬಗ್ಗೆ ನಾವು ವಿಸ್ಮಯವುಳ್ಳವರಾಗಿರುವೆವು. ಕರ್ತನು ನಮ್ಮಲ್ಲಿ ಪ್ರತಿಯೊಬ್ಬನನ್ನು ಪ್ರೀತಿಸಿದ ರೀತಿಯಲ್ಲಿಯೇ ನಾವು ಒಬ್ಬರನ್ನೊಬ್ಬರು ಪ್ರೀತಿಸಲು ಹೇಗೆ ಸಾಧ್ಯ? ಎಂಬದು ನಾವು ಮಾಡುವ ಮೊದಲ ವಿಚಾರಣೆ. ನಮ್ಮ ಉತ್ತರವೇನಂದರೆ, ಇದು ಮೊದಮೊದಲು ಅಸಾಧ್ಯವಾಗುತ್ತದೆ, ಆದರೆ ನಾವು ಕರ್ತನ ಆತ್ಮದಿಂದ ಹೆಚ್ಚುಹೆಚ್ಚು ಭರಿತರಾದಂತೆ ಕರ್ತನವರೆಲ್ಲರ ಪರವಾದ ಈ ಪರಿಪೂರ್ಣ ಪ್ರೀತಿಯ ಮಟ್ಟಕ್ಕೆ ಅಧಿಕವಾಗಿ ಹತ್ತಿರವಾಗುತ್ತಾ ಹೋಗುತ್ತೇವೆ. ಈ ಪ್ರೀತಿಯು ಮತ್ತೊಬ್ಬರಿಗೆ ಹಾನಿಮಾಡಲು ನಿರಾಕರಿಸುವದು ಮಾತ್ರವಲ್ಲದೆ ಅದು ತನ್ನ ಸಮಯ ಸೌಕರ್ಯಗಳನ್ನೆಲ್ಲಾ ತ್ಯಾಗಮಾಡಿ ಒಬ್ಬ ಸಹೋದರನಿಗೆ ಒಳ್ಳೆಯದನ್ನು ಮಾಡಲು ಹರ್ಷಿಸುವದು. ಯೇಸುವು ಹೀಗೆ ನಮ್ಮನ್ನು ಪ್ರೀತಿಮಾಡಿ ತನ್ನ ರಕ್ತದ ಮೂಲಕವಾಗಿ ನಮ್ಮನ್ನು ವಿಮೋಚಿಸಿರುವನು; ಅಲ್ಲದೆ ನಾವು ಎಷ್ಟರ ಮಟ್ಟಿಗೆ ಆತನ ಕೃಪೆಯಲ್ಲಿ ಪರಿಜ್ಞಾನದಲ್ಲಿ ಹಾಗು ಪ್ರೀತಿಯಲ್ಲಿ ಬೆಳೆಯುವೆವೋ ಅಷ್ಟರ ಮಟ್ಟದಲ್ಲಿ ನಾವು ಕ್ರಿಸ್ತನ ಹೋಲಿಕೆಗೆ ಬಂದವರಾಗಿ ಕ್ರಿಸ್ತನಲ್ಲಿರುವಂಥ ಒಂದು ಪ್ರೀತಿಯನ್ನು ಹೊಂದಿಕೊಳ್ಳುವೆವು. ಈ ಪ್ರೀತಿಯಿಂದಲೇ ನ್ಯಾಯಪ್ರಮಾಣವು ನೆರವೇರಲ್ಪಡುವದು ಮತ್ತು ಯಾರು ಸಹೋದರರ ಪರವಾದ ಇಂಥಾ ಒಂದು ಪ್ರೀತಿಯನ್ನು ಹೊಂದಿರುವರೋ ಅವರು ನಿಸ್ಸಂದೇಹವಾಗಿ ನರಳಾಟದಲ್ಲಿರುವ ಸೃಷ್ಟಿಯ ಕಡೆಗೆ ಒಂದು ಸಂಪೂರ್ಣ ಸಹಾನುಭೂತಿಯುಳ್ಳ ಪ್ರೀತಿಯನ್ನು ಹೊಂದಿದವರಾಗಿದ್ದು ಈಗ ಅವರ ಪರವಾಗಿ ಸಾಧ್ಯವಾದ ಒಂದು ಅಲ್ಪವಾದುದನ್ನಾದರೂ ಮಾಡಲು ಸಂತೋಷವುಳ್ಳವರಾಗಿರುವರು ಅಲ್ಲದೆ ಕರ್ತನು ತನ್ನದೇ ಆದ [ಒಂದು] ಒಳ್ಳೆಯ ಕಾಲದಲ್ಲಿ ಹಾಗು ತನ್ನ ಸುಚಿತ್ತದ ಪ್ರಕಾರ ಅದಾಮನ ಸಂತತಿಯಲ್ಲಿನ ಪ್ರತಿಯೊಬ್ಬನಿಗೂ ಒಂದು ಭವ್ಯವಾಗಿಯೂ ಅದ್ಭುತವಾಗಿಯೂ ಇರುವ ಆಶೀರ್ವಾದವನ್ನು ನೀಡುವವನಾಗಿರುವನು ಎಂಬುದಕ್ಕೆ ಎರಡರಷ್ಟು ಸಂತೋಷವುಳ್ಳವರಾಗಿರುವರು.

ಒಬ್ಬರು ಹೇಳಿರುವದೇನಂದರೆ: "ನೀನು ಈ ಸಂಗತಿಗಳನ್ನು ಹೇಗೆ ಪಡೆದುಕೊಳ್ಳಬೇಕೆಂಬುದನ್ನು ತಿಳಿದ ಮಾತ್ರವೇ ನೀನು ಇವುಗಳನ್ನು ಪಡಕೊಂಡಿರುವೆನೆಂದು ನೆನಸಬೇಡ. ಅಲ್ಲದೆ ಅಡಿಗೆಮಾಡುವದನ್ನು ತಿಳಿಸಿಕೊಡುವ ಪುಸ್ತಕದ ಮೂಲಕವಾಗಿ ಪೋಷಣೆಹೊಂದಲು ಸಹ ಯತ್ನಿಸಬೇಡ." ಇಲ್ಲಿ ಒಂದು ಒಳ್ಳೆಯ ಹಾಗು ಮುಖ್ಯವಾದ ಅಂಶವಿರುವದು, ಅದೇನಂದರೆ ನಾವು ಈ ಸಂಗತಿಗಳನ್ನು ತಿಳಿದುಕೊಂಡು, ಕರ್ತನ ಸಂಕಲ್ಪಗಳನ್ನು ಅರ್ಥಮಾಡಿಕೊಂಡವರಾಗಿ ಆತನ ಮಾತಿನಲ್ಲಿರುವ ಮೂಲತತ್ವಗಳನ್ನು ಮನವರಿಕೆಮಾಡಿಕೊಳ್ಳುವದು ಅತಿ ಮುಖ್ಯವಾದುದು. ಆದರೆ ನಾವು ಪರಿಜ್ಞಾನವನ್ನೆಲ್ಲವನ್ನು ಪಡಕೊಂಡವರಾದರೂ ಅವುಗಳನ್ನು ಉಪಯೋಗಿಸಿಕೊಳ್ಳದಿದ್ದಲ್ಲಿ, ಅದರಿಂದ ನಮಗೆ ಪ್ರಯೋಜನವಾಗುವದಿಲ್ಲ. ನಾವು ಕರ್ತನ ಕೃಪಾಪೂರ್ಣವಾದ ಏರ್ಪಾಡುಗಳನ್ನು ಹೇಗೆ ಪಡಕೊಳ್ಳಬಹುದೆಂಬುದನ್ನು ತಿಳಿದುಕೊಂಡ ಮಾತ್ರಕ್ಕೆ ಅವುಗಳಿಂದ ಪ್ರಯೋಜನ ಹೊಂದಬಹುದೆಂದು ನೆನಸದಿರೋಣ. ಆದರೆ ಅದಕ್ಕೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವವರಾಗೋಣ; ಹೇಗಂದರೆ ಆತನು ತಿಳಿಸಿ–ಕೊಟ್ಟಿರುವಂತೆ, ನಾವು ಸಂಪೂರ್ಣವಾಗಿ ಆತನವರಾಗಿ ಅತನೊಂದಿಗೆ ನಿಕಟವಾಗಿ ಜೀವಿಸುತ್ತಾ ಆತನಿಗೆ ಫಲಗಳನ್ನು ನೀಡುವಂಥವರಾಗಿ ಆತನ ಪ್ರೀತಿಯಲ್ಲಿಯೂ ತಂದೆಯ ಪ್ರೀತಿಯಲ್ಲಿಯೂ ಒಬ್ಬರ ಮೇಲೆ ಒಬ್ಬರಿಗಿರುವ ಪರಸ್ಪರವಾದ ಪ್ರೀತಿಯಲ್ಲಿಯೂ ನೆಲೆಗೊಂಡವರಾಗಿರೋಣ.

# ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮ

**ರೀಪ್ರಿಂಟ್ಸ್ ಪುಟ 4164**

## ಯೋಹಾನ 16:4–15

**"ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು." – ಯೋಹಾನ 14:16**

ನಮ್ಮ ಕರ್ತನು ತನ್ನನ್ನು ಹಿಡುಕೊಟ್ಟ ರಾತ್ರಿಯಲ್ಲಿ ಗೆತ್ಸೆಮನೆ ತೋಟದ ಮಾರ್ಗದಲ್ಲಿ ಹೋಗುತ್ತಾ ತನ್ನ ಶಿಷ್ಯರಿಗೆ ಪಾಠದಲ್ಲಿನ ಈ ಪ್ರಬೋಧನೆಯನ್ನು ಮಾಡಿದ್ದನು. ತನ್ನ ಶಿಷ್ಯರಾಗಿ ಅವರು ಏನನ್ನು ನಿರೀಕ್ಷಿಸಬೇಕೆಂಬುದನ್ನು ಅವರಿಗೆ ಹೇಳಿಕೊಡುತ್ತಿದ್ದನು; ಅದೇನಂದರೆ ತನಗೆ ಹಾಗು ತಾನು ಪ್ರತಿನಿಧಿಸುವಂಥ ಸಹೋದರರ ಬಗ್ಗೆ ನಂಬಿಗಸ್ತರಾಗಿರುವ ಕಾರಣದಿಂದ ಅವರು

ಅಪಾರ್ಥ ಮಾಡಲ್ಪಡುವರು, ಹಿಂಸೆಹೊಂದುವರು, ನಿಂದಿಸಲ್ಪಡುವರು–"ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ.." (ವಚನ 4) ತಾವು ಯಾವುದೆಲ್ಲವನ್ನು ನಿರೀಕ್ಷಿಸಬಹುದೆಂಬುದನ್ನು ಆತನು ಅವರಿಗೆ ಹೇಳಿರಲಿಲ್ಲ; ಅದನ್ನು ಹೀಗೆ ಹೇಳುವುದರ ಮೂಲಕ ತಿಳಿಸಿದ್ದನು: "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸಧ್ಯಕ್ಕೆ ಅದನ್ನು ಹೊರಲಾರಿರಿ." ಇದೇ ಸಂಗತಿಯು ಎಂದಾದರೂ ಕರ್ತನ ಶಿಷ್ಯರಾಗುವವರೆಲ್ಲರ ವಿಷಯದಲ್ಲಿಯೂ ನಿಜವಾಗಿರುವದೆಂದು ಹೇಳಬಹುದು. ಒಂದು ಸಮಯಕ್ಕೆ ಒಂದು ಹೆಜ್ಜೆಗೆ ಸಾಕಾಗುವಷ್ಟು ಬೆಳಕನ್ನು ಕಾಣುವರು; ಆದರೆ ಮುಂದೆ ಬರುವ ಕಷ್ಟಪರಿಶೋಧನೆಗಳ ದೆಸೆಯಿಂದ ಅವರು ಭಾವಪರವಶರಾಗಿ ಮುಳುಗಿ ಹೋಗಬಾರದೆಂಬ ಕಾರಣಕ್ಕಾಗಿ ಇವುಗಳನ್ನು ಔದಾರ್ಯ ಪೂರ್ವಕವಾಗಿ ಅವರಿಂದ ತಡೆಹಿಡಿಯಲಾಗಿತ್ತು. "ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು." ಇದು ಭ್ರಾಂತಿಯಾಗಿರಲಿಲ್ಲ, ತಮ್ಮ ಚಿತ್ತಕ್ಕೆ ವಿರುದ್ಧವಾಗಿ ನಡಕೊಳ್ಳುವಂತೆ ಆತನ ಶಿಷ್ಯರನ್ನು ಒಲಿಸುವಂಥದ್ದೂ ಆಗಿರಲಿಲ್ಲ. ಆರಂಭದ ಬಹು ಮೊದಲಲ್ಲೇ ಒಡೆಯನು ನಮಗೆ ಭರವಸೆನೀಡಿ ಹೇಳಿರುವದೇನಂದರೆ ನಾವು ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನ ಹಿಂದೆ ಬರದ ಹೊರತು ನಾವು ಆತನ ಶಿಷ್ಯರಾಗಿರಲು ಸಾಧ್ಯವಾಗದೆಂಬದು. ನಾವು ಪ್ರಾಮಾಣಿಕತೆಯಿಂದ ಯಥಾರ್ಥವಾಗಿ ಈ ಕ್ರಮವನ್ನು ತೆಗೆದುಕೊಂಡಲ್ಲಿ ಇದರ ಸಂಬಂಧವಾಗಿ ಹೇರಳವಾದ ಕಷ್ಟಗಳು ಬರುವದನ್ನು ಕಾಣುತ್ತೇವೆ; ಬರುವಂಥವುಗಳು ನಿರ್ದಿಷ್ಟವಾಗಿ ಯಾವುವೆಂಬದು ತಿಳಿದಿರುವದಿಲ್ಲ. ನಿಜವಾಗಿಯೂ ಮುಂಬರುವ ಕಷ್ಟಸಂಕಟಗಳ ಬಗ್ಗೆ ನಮಗೆ ತಿಳಿದಿದ್ದೇಯಾದಲ್ಲಿ ಅದರಿಂದ ನಾವು ಅನ್ಯಾಯವಾಗಿ ಭಾವಪರವಶರಾಗಿ ಹೋಗಬಹುದು. ಯಾಕಂದರೆ ಆರಂಭದಲ್ಲಿ "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ..." ಎಂಬ ಕರ್ತನ ಮಾತುಗಳ ಅರ್ಥವನ್ನು ಹಾಗು ನಾವು ಸಹಿಸಬಹುದಾದುದಕ್ಕಿಂತಲೂ ಅಧಿಕವಾದ ಶೋಧನೆಯನ್ನು ಆತನು ನಮ್ಮ ಮೇಲೆ ಬರಮಾಡುವದಿಲ್ಲ; ಆದರೆ ಶೋಧನೆಯಾಗುತ್ತಲೇ ಅದನ್ನು ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು ಎಂಬ ಭರವಸೆಯ ಮಾತುಗಳ ಅರ್ಥವನ್ನು ಅಪೂರ್ಣವಾಗಿ ಗ್ರಹಿಸಿಕೊಂಡಿರುವಂಥವರಾಗಿರುವೆವು. (2 ಕೊರಿಂಥ 12:9; 1 ಕೊರಿಂಥ 10:13) ಹೀಗಾಗಿ ಕರ್ತನ ಜನರು ಒಂದು ಹೆಜ್ಜೆಯ ನಂತರ ಮತ್ತೊಂದನ್ನು ತೆಗೆದುಕೊಳ್ಳುವಾಗ ಈ ವಾಗ್ದಾನಗಳು ಬಹು ಸತ್ಯವಾದವುಗಳೆಂಬುದನ್ನು ಕಂಡುಕೊಳ್ಳುವರು; ತಾವು [ಇದರಿಂದ] ಪೋಷಿತರಾಗಿರುತ್ತೇವೆಂಬುದನ್ನು ತಾವೇ ಕಂಡುಕೊಂಡಿರುವರು, ತಾವು ಸಹಿಸಿಕೊಳ್ಳುವದಕ್ಕಿಂತಲೂ ಮಿಗಿಲಾದದ್ದು ಯಾವದೂ ಇರುವದಿಲ್ಲವೆಂದು ಅವರು ಕಂಡುಕೊಂಡಿರುವರು, ತಮ್ಮ ಪರಿಶೋಧನೆಗಳು ನಿಜವಾಗಿಯೂ ಆರಂಭಕ್ಕಿಂತಲೂ ಕಠಿಣವಾಗುತ್ತಿರುವದಾದರೂ ಕೃಪೆಯಲ್ಲಿಯೂ ಪರಿಜ್ಞಾನದಲ್ಲಿಯೂ ಬೆಳೆಯುತ್ತಿರುವ ಕಾರಣ ಇವುಗಳನ್ನು ಜಯಿಸಲು ಸಾಧ್ಯವೆಂಬುದನ್ನು ಕಂಡುಕೊಂಡಿರುವರು.

ಕರ್ತನು ವೈಯುಕ್ತಿಕವಾಗಿ ತಾನು ಅನುಪಸ್ಥಿತಿಯಲ್ಲಿರುವಾಗ [ಇಲ್ಲದೇ ಇರುವಾಗ] ಹಿಂಸೆಗೊಳಗಾದ ತನ್ನ ಹಿಂಬಾಲಕರಿಗೆ ಅನುಗ್ರಹಿಸುತ್ತಿರುವ ನೆರವಿನ ವಿಷಯವಾಗಿ ಗ್ರಹಿಸಿಕೊಳ್ಳಲು ಅವರಿಗೆ ಒಂದಷ್ಟು ಕಷ್ಟಕರವಾಗಿರುತ್ತಿತ್ತು. ನಮ್ಮ ಪಾಠದಲ್ಲಿ ಕರ್ತನು ಈ ಸಂಗತಿಯನ್ನು ಸಾಧ್ಯವಾದಷ್ಟು ಸರಳವಾಗಿ ಮಾಡಿ ತಾನು ಅವರ ಪರವಾಗಿ ಪ್ರಯೋಗಿಸುವ ಶಕ್ತಿ ಪ್ರಭಾವಗಳನ್ನು ಪವಿತ್ರಾತ್ಮ, ದೇವರ ಆತ್ಮ, ಕ್ರಿಸ್ತನ ಆತ್ಮ, ಸತ್ಯದ ಆತ್ಮವೆಂದು ಕರೆದಿರುವನು. ಆತನು ಹೀಗೆ ಅವರ ಮೇಲೆ ಪ್ರಯೋಗಿಸುತ್ತಿರುವ ಪ್ರಭಾವವು ಪೋಷಣಕಾರಿಯೂ ಆದರಣೆದಾಯಕವೂ ಆಗಿದ್ದು ಕರ್ತನು ಈ ಆತ್ಮ ಅಥವಾ ಶಕ್ತಿಯನ್ನು ಒಬ್ಬ ಸಂತೈಸುವವನೆಂತಲೂ, ಒಬ್ಬ ಪೋಷಕನೆಂತಲೂ, ಒಬ್ಬ ಸಹಾಯಕನೆಂತಲೂ ವರ್ಗೀಕರಿಸಿರುವನು. ಅವರೊಂದಿಗೆ ವ್ಯವಹರಿಸಲು ಮತ್ತೊಬ್ಬ ವ್ಯಕ್ತಿಯನ್ನು ಕಳುಹಿಸಿಕೊಡುವೆನೆಂದು ಆತನು ಹೇಳಿರಲಿಲ್ಲ; ಅವರೊಂದಿಗೆ ವ್ಯವಹರಿಸಲು ಆತನಿಗಿಂತಲೂ ಉತ್ತಮನಾದ ವ್ಯಕ್ತಿ ಬೇರೊಬ್ಬನಿರುವದಿಲ್ಲ. ಆತನು ಕಳುಹಿಸಿಕೊಡುವಂಥದ್ದು ಒಂದು ಆತ್ಮ, ಒಂದು ಪ್ರಭಾವ, ಒಂದು ಶಕ್ತಿಯಾಗಿದ್ದು ಅದು ತಂದೆಯನ್ನು ಸಂಪೂರ್ಣವಾಗಿ ಪ್ರತಿನಿಧಿಸುವಂಥದ್ದೂ ತನ್ನನ್ನು ಸಂಪೂರ್ಣವಾಗಿ ಪ್ರತಿನಿಧಿಸುವಂಥದ್ದೂ ಆಗಿದ್ದು, ಹೀಗಾಗಿ ಪವಿತ್ರಾತ್ಮವನ್ನು ಅವರು ಹೊಂದಿಕೊಂಡಾಗ ಅವರು ತಂದೆಯ ಅನ್ಯೋನ್ಯತೆಯನ್ನೂ ಹಾಗು ಮಗನ ಅನ್ಯೋನ್ಯತೆಯನ್ನೂ ಹೊಂದಿಕೊಳ್ಳುವರು. ತಂದೆ ಮತ್ತು ಮಗನನ್ನು ಪುಲ್ಲಿಂಗದಲ್ಲಿ ಸೂಚಿಸಿ ಹೇಳಿರುವಂತೆಯೇ ಈ ಪವಿತ್ರಾತ್ಮವನ್ನು ಸೂಕ್ತವಾಗಿ ಪುಲ್ಲಿಂಗದಲ್ಲಿ ಸೂಚಿಸಿ ಹೇಳಲಾಗಿರುವದು. ಈಗಿನ ಅದರ ಸ್ಥಿತಿಯಲ್ಲಿ ಈ ಗುಣವು ಸುಸ್ಪಷ್ಟವಾಗಿರುವದು.

## ಪವಿತ್ರವಾದ ತ್ರೈಯೇಕತ್ವ

"ಜ್ಞಾನಾಂಧಕಾರ ಯುಗದಲ್ಲಿ" (ಡಾರ್ಕ್ ಏಜಸ್) ಒಂದು ದೊಡ್ಡ ಪ್ರಮಾಣ ದಲ್ಲಿನ ಗೊಂದಲಮಯವಾದ ಅಭಿಪ್ರಾಯಗಳು ಪ್ರಚಲಿತ ಗೊಂಡು ಸತ್ಯವೇದದಲ್ಲಿನ ಸ್ಪಷ್ಟವಾದ ಬೋಧನೆಗಳು ಕಣ್ಮರೆಯಾ ಗಿದ್ದವು. ನಿಜವಾಗಿಯೂ ಸತ್ಯವೇದವು ಒಂದು ಕಾಲಕ್ಕೆ ಬಳಕೆಯಲ್ಲಿರಲಿಲ್ಲ. ಬಿಷೋಪರುಗಳು [ಪವಿತ್ರಾತ್ಮ] ಪ್ರೇರಣೆಯಲ್ಲಿ ಅಪೋಸ್ತಲರಿಗೆ ಸಮನಾದವರೆಂದು ಮಾನ್ಯ ಮಾಡಲ್ಪಟ್ಟು ಅಪೋಸ್ತಲರ ಬೋಧನಾ ಪಾರಂಪರ್ಯದಲ್ಲಿ ಅವರಿಗೆ ಉತ್ತರಾಧಿಕಾರಿಗಳೆಂದು ಪರಿಗಣಿಸಲ್ಪಟ್ಟಿದ್ದರು. ಹೀಗಾಗಿ ಸಭಾಮಂಡಲಿಗಳಲ್ಲಿ ಅವರ ಮತಾಭಿಪ್ರಾಯ ಅಥವಾ ತೀರ್ಮಾನವು ಅಪೋಸ್ತಲರ ಬೋಧನಾತತ್ವಗಳಂತೆ ಅಧಿಕಾರವುಳ್ಳದೆಂದು ಅಂಗೀಕರಿಲ್ಪಟ್ಟಿದ್ದವು. ಕರ್ತನು ಆದುಕೊಂಡದ್ದಾದರೂ ಹನ್ನೆರಡು ಮಂದಿ ಅಪೋಸ್ತಲರೆಂದೂ ಅವರಿಗೆ ಉತ್ತರಾಧಿಕಾರಿಗಳ ಬಗ್ಗೆ ಏನೂ ಹೇಳಿರಲಿಲ್ಲವೆಂಬುದನ್ನು ಹಾಗು ಪ್ರಕಣಾಗ್ರಂಥದಲ್ಲಿ ಹೊಸ ಯೆರೂಸಲೇಮಿನ ಕೇವಲ ಹನ್ನೆರಡು ಅಸ್ತಿವಾರಗಳ ಬಗ್ಗೆ ಹಾಗು ಅದರಲ್ಲಿನ ಯಜ್ಞದ ಕುರಿಯಾದಾತನ ಹನ್ನೆರಡು ಅಪೋಸ್ತಲರ ಹೆಸರುಗಳ ಬಗ್ಗೆ ತೋರಿಸಿಕೊಡುವಾಗ ಅದಕ್ಕೆ ಉತ್ತರಾಧಿಕಾರಿಗಳಿರುವರೆಂದು ಆತನು ತಿಳಿಸಿರಲಿಲ್ಲವೆಂಬ ಅಂಶವನ್ನು ಅಲಕ್ಷ್ಯ ಮಾಡಿದಂತೆ ತೋರುತ್ತಿತ್ತು. – ಪ್ರಕಟನೆ 21:14

ಎರಡನೇ ಶತಮಾನದ ಆರಂಭದಿಂದಲೂ ಕ್ರೈಸ್ತಸಭೆಯ ಮೇಲಿದ್ದ ಗ್ರೀಕರ ತತ್ವಬೋದನೆಯ ಪ್ರಭಾವವು ಗಮನಾರ್ಹ –ವಾಗಿದ್ದು ಅನೇಕ ವಿಧವಾದ ತಪ್ಪುಬೋಧನೆಗಳು ಪ್ರಖ್ಯಾತಿಗೆ ಬಂದಿದ್ದವು. ಅವುಗಳಲ್ಲಿ ಒಂದು ವಿಶೇಷವಾಗಿ ನಮ್ಮ ಕರ್ತನಿಗೆ ಸಂಬಂಧಿಸಿದ್ದು ಕಾರ್ಯತಃ ಆತನನ್ನು ಗ್ರೀಕ್ ತತ್ವಜ್ಞಾನಿಗಳಾದ ಸಾಕ್ರಟೀಸ್ ಪ್ಲೇಟೋರವರಿಗೆ ಸಮಾನನಾಗಿ ಮಾಡಲ್ಪಟ್ಟು ಆತನ ವಿಶೇಷ ಜನನ ಹಾಗು ಪೂರ್ವಾಸ್ಥಿತ್ವಗಳು ಅಲ್ಲಗಳೆಯಲ್ಪಟ್ಟಿದ್ದವು. ಈ ತಪ್ಪುಗಳ ವಿರುದ್ಧವಾಗಿ ಹೋರಾಡುವಲ್ಲಿ ಕರ್ತನಿಗೆ ನಿಷ್ಠಾವಂತರಾದ ಕೆಲವರು ಮತ್ತೊಂದು ವಿಪರೀತವಾದ ಹಂತಕ್ಕೆ ಹೋದವರಾಗಿ ಕರ್ತನ ಮಾತಿಗೇ ತದ್ವಿರುದ್ಧವಾಗಿ ಆತನು ತಂದೆಗೆ ಸಮಾನನಾದವನೆಂದು ಸಾರಿ ಹೇಳಿದ್ದರು. (ಯೋಹಾನ 10:29; 14:28) ನಂತರದಲ್ಲಿ ಬಂದದ್ದು ಪವಿತ್ರಾತ್ಮನ ವಿಷಯವಾದ ವಿವಾದ ಅಲ್ಲದೆ ಇದೇ ತೀವ್ರವಾದಿಗಳು ಇದನ್ನು ಆಧಾರವಾಗಿ ತೆಗೆದುಕೊಂಡವರಾಗಿ ತಂದೆ ಮಗ ಮತ್ತು ಪವಿತ್ರಾತ್ಮನೆಂಬ ಮೂರು ದೇವರುಗಳು ಇರುವರೆಂದು "ಅವರು ಬಲದಲ್ಲಿಯೂ ಮಹತ್ತಿನಲ್ಲಿಯೂ ಸಮಾನರೆಂದು" ಹೇಳವವರಾದರು.

ವಿಚಿತ್ರ ಸಂಗತಿಯೆಂದರೆ, ಅವರುಗಳು ಸಮಾನರಾಗಿ–ದ್ದರೆಂದು ಹೇಳಿಕೊಂಡ ನಂತರ, [ಇಲ್ಲಿ ಅವರುಗಳು ವ್ಯಕ್ತಿಗಳಾಗಿ ಒಬ್ಬರೇ ಆಗಿರುವದಿಲ್ಲ ಆದರೆ ಅವರು ಬೇರೆಬೇರೆ ವ್ಯಕ್ತಿಗಳೆಂಬುದು ಅಡಕವಾಗಿರುತ್ತದೆ] ಅವರು ಹೇಳಿಕೊಂಡದ್ದೇ–ನಂದರೆ ಅವರುಗಳು ನಿಜವಾಗಿಯೂ ವ್ಯಕ್ತಿಯಾಗಿ ಒಂದೇ ಆಗಿದ್ದಾರೆಂಬದೇ. ಸಹಜವಾಗಿ ಸತ್ಯವೇದದಲ್ಲಿ ಇಲ್ಲದಂಥ ಈ ತರ್ಕರಹಿತವಾದ ಪ್ರತಿಪಾದನೆಗೆ ತನ್ನನ್ನು ತಾನೇ ಸಮರ್ಥಿಸಿ–ಕೊಳ್ಳಲು ಸಾಧ್ಯವಾಗದು; ಮತ್ತು ಹೀಗಾಗಿ ಈ ನಿಲುವನ್ನು ತೆಗೆದುಕೊಂಡವರು ಹಲವಾರು ಯುಕ್ತಿಯುಳ್ಳ ಹಾಗು ನುಣುಚಿಕೊಳ್ಳುವಂಥ ವಾದದ ಎಡೆಗೆ ನಡೆಸಲ್ಪಟ್ಟಿರುವರು. ಒಂದು ಕಾಲಕ್ಕೆ ಅವರಲ್ಲಿ ಕೆಲವರು ನಿಜವಾಗಿಯೂ ಒಂದೇ ವ್ಯಕ್ತಿಯಲ್ಲಿ ಮೂರು ದೇವರುಗಳಿರುವರೆಂದು ಹೇಳಿಕೊಳ್ಳುವಲ್ಲಿ, ಬೇರೆಯವರು ಹೇಳಿಕೊಳ್ಳುವದೇನಂದರೆ ನಿಜವಾಗಿಯೂ ಒಬ್ಬ ದೇವರಲ್ಲಿ ಮೂರು ವ್ಯಕ್ತಿಗಳಿರುವರೆಂಬದು; ಅಲ್ಲದೆ ಅವರು ಅಸಂಬದ್ಧವಾದ ಈ ಎರಡು ಹೇಳಿಕೆಗಳನ್ನು ವಿವರಿಸಿ ಹೇಳಲು ಅಸಮರ್ಥರಾಗಿ ಅವರು ತಪ್ಪುಗಳು ಹಾಗು ಮೂಢನಂಬಿಕೆಗಳಿಗೆ ಬಹು ಸಹಾಯಕಾರಿಯಾಗಿರುವ ಒಂದು ಶಬ್ದದ ಮರೆಹೋಗಿರುವರು; ಅದೇನಂದರೆ "ಮರ್ಮ", "ಮರ್ಮ" ಎನ್ನುವಂಥದೆ. ಅವರು ನಮಗೆ ಹೇಳುವದೇನಂದರೆ, ತ್ರೈಯೇಕತ್ವ ಎಂಬ ವಿಷಯುವು ಎಷ್ಟು ಮಾರ್ಮಿಕವಾದುದೆಂದರೆ ತಮಗಾಗಲೀ ಇಲ್ಲವೇ ಯಾರಿಗೇ ಆಗಲೀ ಅವರಿಗೆ ಇದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿಲ್ಲವೆನ್ನುವದೇ. ಅವರಿಗೆ ಇದು ಅರ್ಥವಾಗದಿದ್ದಲ್ಲಿ ಅವರು ನಿಜವಾಗಿಯೂ ಇದನ್ನು ಚರ್ಚಿಸಬಾರದು; ಆದರೆ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿರುವ ಇತರರಿಗೆ ಇದು ಅಡ್ಡಿಯನ್ನುಂಟುಮಾಡಬಾರದು; ಅಲ್ಲದೆ ಇದನ್ನು ಬಹು ಸ್ಪಷ್ಟವಾಗಿ ದೃಷ್ಟಿಸುವಂಥವರಿಗೆ ಈ ಮರ್ಮವೆಲ್ಲಮೂ ಸಂಪೂರ್ಣವಾಗಿ ಸ್ವತಃ ಅವರೇ ನಿರ್ಮಿಸಿಕೊಂಡಂಥದೆಂದೂ [ಕಲ್ಪಿಸಿಕೊಂಡಂಥದೆಂದೂ]; ಈ ವಿಷಯದ ಬಗ್ಗೆ ಇರುವ ಸತ್ಯವೇದದ ಬೋಧನೆಯು ಬಹು ಸ್ಪಷ್ಟವಾಗಿಯೂ, ಸರಳವಾಗಿಯೂ, [ಪರಸ್ಪರ] ಹೊಂದಾಣಿಕೆ–ಯಿರುವದಾಗಿಯೂ ಹಾಗು ತೃಪ್ತಿಕರವಾಗಿಯೂ ಇರುವದಾಗಿ ಕಂಡುಬರುವದು.

ದೇವರ ವಿಚಾರದ ಬಗ್ಗೆ ಚರ್ಚಿಸುವಾಗ ಅಪೋಸ್ತಲನು ನಮಗೆ ತಿಳಿಸುವದೇನಂದರೆ ಜೀವಸ್ವರೂಪನೂ ಸತ್ಯವಂತನೂ ಆದ ದೇವರು ಒಬ್ಬನೇ, ಮೂವರಲ್ಲ ಎನ್ನುವಂಥದೇ! ಆತನು ಮುಂದುವರಿದವನಾಗಿ ಹೇಳಿರುವದು: ಈ ಜೀವಸ್ವರೂಪನೂ ಸತ್ಯವಂತನೂ ಆದ ಏಕ ದೇವರು ತಂದೆ ಎಂಬಾತನೇ; ಅನಂತರ ಆತನು–ಯೇಸು ಕ್ರಿಸ್ತನೆಂಬ ಒಬ್ಬನೇ ಕರ್ತನಿದ್ದಾನೆ ಎಂದು ಇದಕ್ಕೆ ಕೂಡಿಸಿ ಹೇಳಿರುವನು. (1 ಕೊರಿಂಥ 8:6). ನಾವು ಈಗಾಗಲೇ ನೋಡಿರುವಂತೆ ಇದೇ ಅಪೋಸ್ತಲನು–ತಂದೆಯು ಕರ್ತನಾದ ಯೇಸುವನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಆತನಿಗೆ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಅನುಗ್ರಹಿಸಿದ್ದಾನೆಂದೂ; ಆದುದರಿಂದ ಎಲ್ಲಾ ಜನರೂ ಆತನಿಗೆ ಅಡ್ಡಬಿದ್ದು ತಂದೆಗೆ ಮಹಿಮೆ ಸಲ್ಲಿಸುವರೆಂದು ಸಾರಿ ಹೇಳಿರುವನು. (ಫಿಲಿಪ್ಪ 2:9,10; ಯೋಹಾನ 5:23) ಇದರ ಅರ್ಥವೇನಂದರೆ ಇರುವಂಥವರು ಇಬ್ಬರು ವ್ಯಕ್ತಿಗಳೇ, ಹೀಗಾಗಿ ಒಬ್ಬರು ಮತ್ತೊಬ್ಬರಿಗೆ ಅತ್ಯುನ್ನತ ಸ್ಥಾನಕ್ಕೆ ಏರಿಸಿ ಗೌರವಿಸಲು ಬೇರೆ ಯಾವ ವಿಧದಿಂದಲೂ ಸಾಧ್ಯವಿರುವದಿಲ್ಲವೆಂಬದು; ಮಗನು ಏನಾದರೂ ತಂದೆಯಂತೆ ಗೌರವಿಸಲ್ಪಡಬೇಕಾರೆ, ಇತರ ಶಾಸ್ತ್ರವಚನಗಳು ತೋರಿಸಿ–ಕೊಡುವಂತೆ, ಆತನು ಈಗ ದೈವಸ್ವಭಾವದಲ್ಲಿ ಪಾಲುಗಾರ ನಾಗಿದ್ದು, ಈ ಉನ್ನತವಾದ ಘನತೆಗೌರವಗಳುಳ್ಳ ಸ್ಥಾನಕ್ಕೆ ಏರಿಸಲ್ಪಟ್ಟಿರುವನು ಅಂದರೆ ತಂದೆಯ ಚಿತ್ತಕ್ಕೆ ತಾನು ವಿಧೇಯನಾದುದರ ಹಾಗು ದೇವರ ಉದ್ದೇಶಗಳ ಅನುಸಾರವಾಗಿ ಲೋಕಕ್ಕೆ ಬಂದು ಮಾನವಕುಲವನ್ನು ತನ್ನ ಸ್ವಂತ ಜೀವವನ್ನು ಅರ್ಪಿಸಿ ವಿಮೋಚಿಸಿದುದರ ಫಲವಾಗಿ "ದೇವದೂತರಿಗಿಂತಲೂ, ರಾಜತ್ವ ಅಧಿಕಾರಗಳಿಗಿಂತಲೂ" ಉನ್ನತವಾದ ಸ್ಥಾನಕ್ಕೆ ಏರಿಸಲ್ಪಟ್ಟಿರುವನು. ಇದನ್ನು ನಾವು ಈಗಾಗಲೇ ಯೋಹಾನ 1:1ರ ಮೂಲಕವಾಗಿ ನೋಡಿರುವೆವು; ಅದೇನಂದರೆ ನಮ್ಮ ಕರ್ತನು ಲೋಕಕ್ಕೆ ಬರುವ ಮೊದಲು, ಲೋಕವು ತಂದೆಯ ಪ್ರತಿನಿದಿ–ಯಾದ ಈತನ ಮೂಲಕವಾಗಿ ಉಂಟಾಗುವದಕ್ಕೆ ಮೊದಲು, ಲೋಗಾಸ್ ಅಂದರೆ, ವಾಕ್ಯವೆಂಬವನಾದ, ದೇವರಾದ ಯೆಹೋವನ ದೂತನಿದ್ದನು; ಅಲ್ಲದೆ ಈತನು ಒಬ್ಬ ದೇವರು ಅಂದರೆ ಒಬ್ಬ ಪರಾಕ್ರಮಿಯೂ, ದೇವದೂತರುಗಳಿಗಿಂತಲೂ ಶ್ರೇಷ್ಠನೂ ಆಗಿದ್ದನು; "ಉಂಟಾಗಿರುವ ವಸ್ತುಗಳೆಲ್ಲವೂ ಈತನ ಮೂಲಕವಾಗಿ ಉಂಟಾಗಿತ್ತು; ಮತ್ತು ಉಂಟಾಗಿರುವ ವಸ್ತುಗಳಲ್ಲಿ ಈತನಿಲ್ಲದೆ ಒಂದಾದರೂ ಉಂಟಾಗಲಿಲ್ಲ."

ತಂದೆಯ ಮತ್ತು ಮಗನ ಬಗ್ಗೆ ಹೇಳುವಾಗ ಅವರು ಪ್ರತ್ಯೇಕ ವ್ಯಕ್ತಿಗಳೆಂದು ಅಪೋಸ್ತಲನು ಉಲ್ಲೇಖಿಸಿರುವದನ್ನು ಗಮನಿಸಲಾಗುವದು, ಅಲ್ಲದೆ ಆತನು ಪವಿತ್ರಾತ್ಮವನ್ನು ಮತ್ತೊಬ್ಬ ದೇವರೆಂದು ಇಲ್ಲವೇ ದೇವರ ಮೂರನೇ ಭಾಗವೆಂದು ಉಲ್ಲೇಖಿಸಿರುವದಿಲ್ಲ, ಅಪೋಸ್ತಲನು ಪವಿತ್ರಾತ್ಮವನ್ನು ಹೇಗೂ ನಿರ್ಲಕ್ಷಿಸಿರುವನೆಂದಲ್ಲ; ಯಾಕಂದರೆ ಆತನ ಪತ್ರಿಕೆಗಳ

ಪರ್ಯಂತರ ಅದನ್ನು ಸಭೆಯಲ್ಲಿ ತಂದೆಯನ್ನು ಮತ್ತು ಮಗನನ್ನು ಪ್ರತಿನಿಧಿಸುತ್ತಿರುವ ತಂದೆಯ ಆತ್ಮ ಹಾಗು ಮಗನ ಆತ್ಮವೆಂದು ಗುರುತಿಸಲಾಗಿರುವದು. ಇಲ್ಲವೇ "ದೇವರು ಆತ್ಮಸ್ವರೂಪನು" ಎಂದು ನಾವು ಓದುವಾಗ ಪವಿತ್ರಾತ್ಮವನ್ನು ಒಂದು ಆತ್ಮಿಕವಾದ ಜೀವಿಯೆಂದು ನಾವು ಅರ್ಥಮಾಡಿಕೊಳ್ಳ–ಬೇಕೆಂದಲ್ಲ; ಆದರೆ ಬಳಸಲಾಗಿರುವ ಶಬ್ಧವು–ಒಂದು ಜೀವಿಯ ಚೈತನ್ಯ, ಶಕ್ತಿ, ಪ್ರಭಾವ, ಚಿತ್ತ, ಉದ್ದೇಶ, ಅಧಿಕಾರ ಅಥವಾ ಒಬ್ಬ ವ್ಯಕ್ತಿಯಿಂದ ಹೊರಡುವಂಥ ಯಾವುದನ್ನಾದರೂ ಸೂಚಿಸು–ವದು. ಪವಿತ್ರಾತ್ಮವು ತಂದೆಯಿಂದಲೂ ಮತ್ತು ಮಗನಿಂದಲೂ ಒಂದು ಪ್ರಭಾವವಾಗಿ ಇಲ್ಲವೇ ಶಕ್ತಿಯಾಗಿ ಹೊರಟು ಬರುವಂಥದೆಂದು ಹಾಗು ಈ ಪ್ರಭಾವ ಅಥವಾ ಶಕ್ತಿಯು ಪ್ರತಿಯಾಗಿ ನಂಬಿದವರಾದ ಪ್ರತಿಷ್ಠಿತರ ಸಭೆಯಲ್ಲಿ ಅವರು [ಸಭೆಯವರು] ಬೆರೆಯುವಂಥವರ ಮೇಲೆ ಕಾರ್ಯವೆಸಗುವದು. ಅದು ಯಾವಾಗಲೂ ಒಂದು ಒಳ್ಳೆಯ ಹಾಗು ಪರಿಶುದ್ಧ ಆತ್ಮ ಅಥವಾ ಪ್ರಭಾವವಾಗಿದ್ದು ಅದು ಹೀಗೆ ಲೌಕೀಕ ಆತ್ಮ ಅಥವಾ ಲೌಕೀಕ ಪ್ರವೃತ್ತಿ, ಲೌಕೀಕ ಪ್ರಭಾವ, ಪಾಪಪೂರ್ಣವಾದ ಆತ್ಮ, ಕ್ರಿಸ್ತವಿರೋಧಿಯ ಆತ್ಮ, ಮುಂತಾದವುಗಳಿಗಿಂತಲೂ ಸ್ವಷ್ಟವಾಗಿ ವಿಭಿನ್ನವಾಗಿರುವದು.

## "ಪವಿತ್ರಾತ್ಮ ವರವು ಇನ್ನೂ ಕೊಡಲ್ಪಟ್ಟಿರಲಿಲ್ಲ"

ನಮ್ಮ ಕರ್ತನು ವಿನಯಪೂರ್ಣವಾಗಿ ದುಃಖಿತರಾಗಿ ದಿಗ್ಭ್ರಾಂತರಾಗಿದ್ದ ತನ್ನ ಶಿಷ್ಯರಿಗೆ ಮುಂದೆ ತಾನು ತನ್ನನ್ನು ಕಳುಹಿಸಿಕೊಟ್ಟ ತಂದೆಯ ಬಳಿಗೆ ನಿರ್ಗಮಿಸುವ ಸುದ್ಧಿಯನ್ನು ಹೊರಗೆಡವಿದ್ದನು. ಎಲ್ಲಿಗೆಂದು ಅವರು ಆತನನ್ನು ಕೇಳಲಿಲ್ಲ, ಯಾಕಂದರೆ ಅವರು ಆತನು ತಂದೆಯ ಬಳಿಯಿಂದ ಹೊರಟು ಬಂದಿರುವನೆಂದೂ ತನ್ನನ್ನು ಕಳುಹಿಸಿಕೊಟ್ಟ ತಂದೆಯ ಬಳಿಗೆ ಹೋಗುವನೆಂಬ ಆತನ ಮಾತನ್ನು ನಂಬಿದ್ದರು. ಆದರೆ ದುಃಖವು ಅವರ ಹೃದಯಗಳನ್ನು ತುಂಬಿಕೊಡಿತ್ತು. ಕರ್ತನನ್ನು ಬಿಟ್ಟು ಅವರು ಮಾಡುವದಾದರೂ ಏನು! ಆತನು ಹೊರಟು ಹೋದಲ್ಲಿ ದೇವರ ರಾಜ್ಯದ ವಿಷಯವಾದ ವಾಗ್ದಾನವು ನೆರವೇರಲು ಹೇಗೆ ತಾನೇ ಸಾಧ್ಯ! ಮೂರು ವರುಷಗಳು ಅವರೇನಾದರೂ ಭ್ರಾಂತನ್ನು ಹಿಂಬಾಲಿಸಿ ಹೋಗಿದ್ದರೇ? ಕರ್ತನನ್ನು ಅವರು ಸಂದೇಹಿಸಿರಲಿಲ್ಲ, ಆದರೆ ಅವರು ಗೊಂದಲದಲ್ಲಿದ್ದರು. ಆದುದರಿಂದ ಅವರು ಸಂಗತಿಯನ್ನು ಸರಿಯಾಗಿ ಗ್ರಹಿಸಿಕೊಂಡಿದ್ದೇಯಾದರೆ ಅದು ಅವರ ಆತಂಕವನ್ನು ಬಹುವಾಗಿ ಶಮನಗೊಳಿಸುವದು, ಕಾರಣ ನಿಜವಾಗಿಯೂ ಅವರ ಪ್ರಯೋಜನಾರ್ಥವಾಗಿಯೇ, ಅವರ ಹಿತಕ್ಕಾಗಿಯೇ ತಾನು ಹೊರಟು ಹೋಗಬೇಕಿರುವದೆಂಬುದನ್ನು ನಮ್ಮ ಕರ್ತನು ಅವರಿಗೆ ವಿವರಿಸಿ ಹೇಳಿದ್ದನು. ಆತನು ಹೋಗದಿದ್ದಲ್ಲಿ ಅವರನ್ನು ಪವಿತ್ರಾತ್ಮನಿಂದ ಹುಟ್ಟಿಸುವಂತಾಗಿ ಅವರನ್ನು ದೇವರ ಮಕ್ಕಳೆಂದು ಮಾನ್ಯಮಾಡಲು ತಂದೆಗೆ ಸಾಧ್ಯವಿರುತ್ತಿರಲಿಲ್ಲ; ಹೀಗಾಗಿ ಅವರಿಗೆ ನರಭಾವದವರಿಗಿಂತಲೂ ಹೆಚ್ಚಿನವರಾಗಿ ಆತ್ಮಿಕಭಾವದವರಾಗಲು ಇಲ್ಲವೇ ದೈವಸ್ವಭಾವದಲ್ಲಿ ಅದರ ಮಾನಪ್ರಭಾವಗಳಲ್ಲಿ ಪಾಲುಗಾರರಾಗಲು ಅವರಿಗೆ ಎಂದೂ ಸಾಧ್ಯವಾಗುತ್ತಿರಲಿಲ್ಲ. ನಿಜವಾಗಿಯೂ ನಮ್ಮ ಕರ್ತನ ನಿರ್ಗಮಿಸುವಿಕೆಯ ಹೊರತು ಅವರಿಗೆ ಮಾನವರ ಸ್ಥಿತಿಗೆ ಪುನರುದ್ಧರಿತರಾಗಲೂ [ಹಿಂದಿರುಗಲು] ಸಹ ಅಸಾಧ್ಯವಾಗಿರುತ್ತಿತ್ತು. ಯಾಕಂದರೆ ಕ್ರೈಸ್ತಸಭೆಯ ಹಾಗು ಲೋಕದ ರಕ್ಷಣೆಯ ಕಾರ್ಯವು ಸಂಪೂರ್ಣವಾಗಿ ನಮ್ಮ ಕರ್ತನು ದೇವರ ನ್ಯಾಯವಿಧಿಯ ಬೇಡಿಕೆಗಳನ್ನು ಈಡೇರಿಸುವದರ ಮೇಲೆ ಅವಲಂಭಿತವಾಗಿತ್ತು. ಮಾರಣೆಯ ದಿನ ಕರ್ತನು ದೇವರ ಕುರಿಮರಿಯಾಗಿ ಸಮಸ್ತ ಮಾನವಕುಲದ ಮೇಲೆ ನೆಲೆಸಿರುವ ಆದಾಮನಿಂದಾದ ಪಾಪಗಳ ನಿವಾರಣೆಗಾಗಿ ಮರಣ ಹೊಂದಿದ್ದನು. ಅಲ್ಲದೆ ಮೂರನೆಯ ದಿನದಲ್ಲಿ ತಂದೆಯು ತನ್ನ ಬಲದಿಂದ ಆತನನ್ನು ಎಬ್ಬಿಸಿದನು. ನಮ್ಮ ಪರವಾದ ಈ ಮಹಾ ಕಾರ್ಯನಿರ್ವಹಣೆಯಲ್ಲಿ ಒಂದು ಮುಖ್ಯವಾದ ಸಂಗತಿಯು ಪೂರ್ಣಗೊಂಡಿತ್ತು; ಆದರೆ ದೇವರ ಏರ್ಪಾಟಿನ ಮೂಲಕವಾಗಿ ನಮ್ಮ ಕರ್ತನು ಮೊದಲು ತಂದೆಯ ಸಾನಿಧ್ಯದಲ್ಲಿ ಕಾಣಿಸಿಕೊಂಡು ತನ್ನ ಯಜ್ಞಫಲವನ್ನು ತನ್ನ ಜನರ ಪರವಾಗಿ ಸಮರ್ಪಿಸುವವರೆಗೂ ಇದರ ಪ್ರಯೋಜನವು ಸಭೆಗಾಗಲೀ ಇಲ್ಲವೇ ಲೋಕಕ್ಕಾಗಲೀ ಲಭಿಸಲು ಸಾಧ್ಯವಿರಲಿಲ್ಲ. ನಮ್ಮ ಕರ್ತನು ತನ್ನ ಹಿಂಬಾಲಕರೊಂದಿಗೆ ಈ [ಸುವಾರ್ತಾ] ಯುಗದ ಪರ್ಯಂತರ ಆತ್ಮಿಕ ಜೀವಿಯಾಗಿಯೂ (ಅವರೊಂದಿಗೆ ನಾಲ್ವತ್ತು ದಿನಗಳು ಇದ್ದಂತೆ) ಅವರೊಂದಿಗೆ ಉಳಿದುಕೊಂಡಿದ್ದೇಯಾದರೆ ಪವಿತ್ರಾತ್ಮದಿಂದ ಹುಟ್ಟಿದವರಾಗಲು [ಅಂಕುರಿಸಲ್ಪಡಲು] ಯಾರಿಗೂ ಸಾಧ್ಯವಿರುತ್ತಿರಲಿಲ್ಲ. ನಾವು [ದೇವರಿಂದ] ಸ್ವೀಕರಿಸಲ್ಪಟ್ಟು ಪುತ್ರರಾಗಿ ಅಂಗೀಕಾರವಾಗಿ ಪವಿತ್ರಾತ್ಮವನ್ನು ಪಡಕೊಳ್ಳುವದಕ್ಕೆ ಮೊದಲು ಕ್ರಿಸ್ತನಿಗೆ ಪರಲೋಕಕ್ಕೆ ಏರಿಹೋಗಿ ತನ್ನ ಯಜ್ಞಫಲವನ್ನು ಸಮರ್ಪಿಸುವದು ಅವಶ್ಯವಿತ್ತು.

ಪಂಚಾಶತ್ತಮ ದಿನದಂದು ಅಪೋಸ್ತಲರು ಪವಿತ್ರಾತ್ಮವನ್ನು ಹೊಂದಿದಾಗ–"ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" ಎಂದು ಅವರು ಹೇಳಿದ್ದರು: [ಆದರೆ] ಈತನು ಪ್ರವಾದಿಯಾದ ಯೋವೇಲನು ಹೇಳಿದಾತನು ಎಂದಿರಲಿಲ್ಲ. ಅವರು ಇದನ್ನು ಪವಿತ್ರಾತ್ಮದೊಡನೆ ಸ್ನಾನ ಹೊಂದುವಂಥದೆಂದು ಕರೆದಿದ್ದರು. ಒಬ್ಬ ವ್ಯಕ್ತಿಯೊಂದಿಗೆ ದೀಕ್ಷಾಸ್ನಾನಹೊಂದುವದೆಂಬದು ಕಲ್ಪಿಸಿಕೊಳ್ಳುವಂಥ ಇಲ್ಲವೇ ಸರಿಯಾದ ಒಂದು ಅಭಿಪ್ರಾಯವಲ್ಲ; ಇಲ್ಲವೇ ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿ ನಂಬಿದವನಾದ ಪ್ರತಿಯೊಬ್ಬನ ಹೃದಯದಲ್ಲಿ ವೈಯುಕ್ತಿಕವಾಗಿ ನೆಲೆಸುವನೆಂಬದು ಒಂದು ಸೂಕ್ತ ಅಭಿಪ್ರಾಯವೂ ಆಗಿರುವದಿಲ್ಲ. ವ್ಯಕ್ತಿಯೆಂಬ ಅಂಶವನ್ನು ನಾವು ಯಾವ ಸಂದರ್ಭದಲ್ಲಿಯಾದರೂ ಸೇರಿಸಿ ಹೇಳುವದಾದರೆ ಅದರಲ್ಲಿ ಸ್ಥಳಾವಕಾಶವೆಂಬದು ಅಡಕವಾಗಿರುವದು. ನಾವು ಹೀಗೆ ದೇವರು ಒಬ್ಬ ಆತ್ಮನು ಎಂಬುದನ್ನು ನೋಡುತ್ತೇವೆ, ದೇವರೇ ಆ ಆತ್ಮವಲ್ಲ; ಆದರೆ ಒಬ್ಬ ವ್ಯಕ್ತಿಯು ತಂದೆಯಿಂದಲೂ ಮಗನಿಂದಲೂ ಪ್ರತ್ಯೇಕವಾಗಿಯೂ ವಿಭಿನ್ನವಾಗಿಯೂ ಇರುವ ಪ್ರಕಾರವೇ ಪವಿತ್ರಾತ್ಮವು ಪ್ರತ್ಯೇಕವಾಗಿರುವಂಥದೆಂದು ನಾವು ಹೇಳುವದಿಲ್ಲ. ಸತ್ಯವೇದದಲ್ಲಿ ಅದು ದೇವರ ಆತ್ಮವಾಗಿದ್ದು ದೇವರಿಗೆ ಸಂಬಂಧಿಸಿರುವದೆಂದೂ ದೇವರಿಂದ ಹೊರಡು–ವಂಥದೆಂದೂ ಉಲ್ಲೇಖಿಸಲಾಗಿರುವದು; ಕ್ರಿಸ್ತನು ಒಂದು ಆತ್ಮವಾಗಿದ್ದು ಕ್ರಿಸ್ತನಿಂದ ಹೊರಡುವಂಥದೆಂದೂ; ಒಂದು ಆತ್ಮ

ಅಥವಾ ಪ್ರಭಾವ ಇಲ್ಲವೇ ಶಕ್ತಿಯಾಗಿದ್ದು ಅದು ಎಲ್ಲೆಡೆ ಪ್ರಸರಿಸುವಂಥದಾಗಿದ್ದು ಯಾವ ಸ್ಥಳದಲ್ಲಿಯಾದರೂ ಅಥವಾ ಎಷ್ಟೇ ಸಂಖ್ಯೆಯ ಸ್ಥಳಗಳಲ್ಲಿಯಾದರೂ ಯಾವುದೇ ಸಮಯದಲ್ಲಿಯಾದರೂ ಎಲ್ಲಾ ವಿಧವಾದ ಕೆಲಸವನ್ನು ಅಥವಾ ಕಾರ್ಯಭಾರವನ್ನು ನಿರ್ವಹಿಸುವದು. ಪವಿತ್ರಾತ್ಮದ ಬಗ್ಗೆ ಇರುವ ನಿಜವಾದ ಅಭಿಪ್ರಾಯವು ನಿರರ್ಥಕವಾಗಿಯೂ ಸತ್ಯವೇದ ರಹಿತವಾಗಿಯೂ ಇರುವ ಅಭಿಪ್ರಾಯಕ್ಕಿಂತಲೂ ಎಷ್ಟೋ ಅಧಿಕ ತೃಪ್ತಿಕರವಾದದ್ದು! ಈ ಸಂಬಂಧವಾಗಿ ನಾವು ಗ್ರೀಕ್ ಭಾಷೆಯಲ್ಲಿ 7ನೇ ವಚನದಲ್ಲಿರುವ "ಆತನು" ಎಂಬ ಶಬ್ದವನ್ನು "ಅದು" ಎಂದು ಅದೇ ಒಂದು ಔಚಿತ್ಯದಿಂದ ಹೇಳಬಹುದೆಂಬದು ಗಮನಾರ್ಹ. ಅದೇನಂದರೆ, "ನಾನು ಅದನ್ನು ನಿಮಗೆ ಕಳುಹಿಸಿಕೊಡುವೆನು." ಎಂಬದೇ. ಏನೇ ಇದ್ದರೂ, ಈ ಪವಿತ್ರವಾದ ಆತ್ಮ ಅಥವಾ ಪ್ರಭಾವು ತಂದೆಗೆ ಸಂಬಂಧಿಸಿದಂಥದ್ದೂ ಅಥವಾ ತಂದೆಯಿಂದ ಬಂದಿರುವಂಥದ್ದೂ ಅಗಿರುವದರಿಂದ ಆತನು ಎಂಬ ಶಬ್ದವನ್ನು ಬಳಸುವದಕ್ಕೆ ವಿರುದ್ಧವಾಗಿ ಒತ್ತಾಯಿಸಲು ನಮಗೆ ಯಾವುದೇ ಅಭ್ಯಂತರ ಇರುವದಿಲ್ಲ. ಇದೇ ರೀತಿಯಲ್ಲಿ ಗ್ರೀಕ್ ಭಾಷೆಯ ಅನುಸಾರವಾಗಿ ವಚನ 8ರಲ್ಲಿ ಇರುವ "ಆತನು" ಎಂಬ ಶಬ್ಧವನ್ನು ಅದೇ ಔಚಿತ್ಯದಿಂದ "ಅದು" ಎಂದೂ ಭಾಷಾಂತರಿಸಬಹುದು.

## ಅದು ಲೌಕೀಕ ಆತ್ಮವಲ್ಲ

ಪವಿತ್ರಾತ್ಮನ ಕಾರ್ಯನಿರ್ವಹಣೆಯ ಬಗ್ಗೆ ಇರುವ ತಪ್ಪಾದ ಅಭಿಪ್ರಾಯಗಳಲ್ಲಿ ಒಂದು ಹೇಳಿಕೊಳ್ಳುವದೇನಂದರೆ– ಪವಿತ್ರಾತ್ಮವು ಒಬ್ಬ ವ್ಯಕ್ತಿಯಾಗಿ ಈ ಸುವಾರ್ತಾಯುಗದ ಪರ್ಯಂತರವಾಗಿ ಅಲ್ಲಿಂದ ಇಲ್ಲಿಗೆ ಓಡಾಡುತ್ತಾ ಜನರಿಗೆ ಪಾಪದ ಬಗ್ಗೆ ಮನವರಿಕೆ ಮಾಡಿಕೊಡುತ್ತಾ ಹಾಗು ಅವರನ್ನು ನೀತಿಯ ಕಡೆಗೆ ಮಾನಸಾಂತರಪಡಿಸುವಲ್ಲಿ ಕಾರ್ಯಮಗ್ನ–ವಾಗಿರುವದೆಂಬದು. ದೇವರ ಪವಿತ್ರವಾದ ಆತ್ಮವು ಅದ್ಭುತ ರೀತಿಯಲ್ಲಿ ಒಬ್ಬರ ಮೇಲೆ ಕಾರ್ಯವೆಸಗದಿದ್ದಲ್ಲಿ ಅವರು ಪಾಪದಿಂದ ತಿರುಗಿಕೊಂಡು ಮಾನಸಾಂತರವಾಗಲು ಸಾಧ್ಯವಾಗದೆಂಬಷ್ಟರ ಮಟ್ಟಿನ ತಪ್ಪಾದ ಅಭಿಪ್ರಾಯವನ್ನು ಹಿಡಿದಿರುವರು. ಈ ಅಭಿಪ್ರಾಯಗಳು ಯಾವುದೇ ಹಂತದಲ್ಲಿ ಸತ್ಯಾಂಶಕ್ಕೆ ಸಮೀಪವಾಗಿದ್ದಲ್ಲಿ ಲೋಕವು ಈದಿನದ ವರೆಗೂ ಮಾನಸಾಂತರಗೊಂಡಿರುವದಿಲ್ಲ ಎಂಬ ಅಂಶಕ್ಕೆ ಕೇವಲ ದೇವರೇ ಹೊಣೆಗಾರನೆಂದೂ, ಯಾಕಂದರೆ ಲೋಕವನ್ನು ಮಾನಸಾಂತರ ಪಡಿಸುವಲ್ಲಿ ಖಂಡಿಸುವದರಲ್ಲಿ ಹಾಗೂ ಅಪರಾಧ ನಿರ್ಣಯಿಸುವಲ್ಲಿ ಪವಿತ್ರಾತ್ಮವು ತನ್ನ ಪಾತ್ರವನ್ನು ನಿರ್ವಹಿಸಲು ವಿಫಲವಾಗಿರುವದೆಂಬುದನ್ನು ಅಡಕಮಾಡಿ ಹೇಳಿರುತ್ತಾರೆ. ಆದರೆ ಇವೆಲ್ಲವೂ ಒಂದು ಘೋರವಾದ ತಪ್ಪು.

ಪವಿತ್ರಾತ್ಮವು ಲೋಕದವರ ಹೃದಯಗಳಲ್ಲಿ ಯಾವ ಕಾರ್ಯವನ್ನೂ ನಿರ್ವಹಿಸುವದಿಲ್ಲ; ಆದರೆ ನಮ್ಮ ಕರ್ತನು ಸಾರಿ ಹೇಳಿರುವಂತೆ ಅದು ನನ್ನ ಶಿಷ್ಯರಾಗಿರುವ ನಿಮ್ಮಲ್ಲಿ ಇರುವಂಥ ತಂದೆಯ ಆತ್ಮ, ಮಗನ ಆತ್ಮ ಅಥವಾ ಮನೋಭಾವ, ಸತ್ಯದ ಆತ್ಮ, ಸ್ವಸ್ಥಚಿತ್ತದ ಆತ್ಮ, ಕರ್ತನ ಕಡೆಗಿರುವ ಪವಿತ್ರವಾದ ಮನೋಭಾವವಾಗಿರುವದು. ಪವಿತ್ರಾತ್ಮನ ಈ ಯಾವುದೇ ಗುಣಲಕ್ಷಣಗಳು ಪಾಪಮಯವಾದ ಲೋಕದವರಲ್ಲಿ ಕಂಡು–ಬರುವದಿಲ್ಲ; ಅದು "ಕ್ರಿಸ್ತ ಯೇಸುವಿನಲ್ಲಿ ಶುದ್ಧೀಕರಿಸಲ್ಪಟ್ಟವರ" ಸಲುವಾಗಿ ಉದ್ದೇಶಿತವಾದದ್ದೂ, ಅವರಿಗೆ ಸಂಬಂಧಪಟ್ಟದ್ದೂ ಆಗಿರುವದು. ದೇವರ ಶಕ್ತಿಯು ತನಗೆ ಪೂರ್ಣವಾಗಿ ಪ್ರತಿಷ್ಠಿಸಿಕೊಂಡವರ ಹೃದಯಗಳಲ್ಲಿ ಕಾರ್ಯನಿರ್ವಹಿಸು–ವಂಥದ್ದಾಗಿ ಅವರನ್ನು ಲೌಕೀಕ ಆತ್ಮದಿಂದ ಪ್ರತ್ಯೇಕಿಸಿ ದೇವರ ಸೇವೆಯಲ್ಲಿ ಅವರನ್ನು ಬಳಸಿಕೊಳ್ಳುವದು. ಲೌಕೀಕ ಆತ್ಮವು ಪಾಪಮಯವೂ ಸ್ವಾರ್ಥವೂ ಉಳ್ಳಂಥ ಆತ್ಮವಾಗಿರುವದು; ದೇವರ ಆತ್ಮವು ಪವಿತ್ರವಾದ ಆತ್ಮವಾಗಿದ್ದು ದೇವರ ಚಿತ್ತಕ್ಕೆ ಪ್ರತಿಷ್ಠಿಸಿಕೊಳ್ಳುವಂಥದಾಗಿರುವದು.

## "ಆತನು ಲೋಕವನ್ನು ಖಂಡಿಸುವನು"

ಹಾಗಾದರೆ ನಿಮ್ಮಲ್ಲಿರುವ ಪವಿತ್ರಾತ್ಮನು ಹೇಗೆ ಅವರನ್ನು ಖಂಡಿಸುವನು? ನಾವು ಉತ್ತರಿಸುವದೇನಂದರೆ ಪವಿತ್ರಾತ್ಮನಿಂದ ಹುಟ್ಟಿದವರಾಗಿ ಹೀಗೆ ಜ್ಞಾನಪ್ರಕಾಶವನ್ನು ಪಡಕೊಂಡ ಸಭೆಯು ತಮ್ಮ ಬೆಳಕನ್ನು ಜನರ ಮುಂದೆ ಪ್ರಕಾಶಿಸುವಂತೆಮಾಡಿ ಆದು ಲೋಕವನ್ನು ಖಂಡಿಸುವಂತಾಗ ಮಾಡಬೇಕು. ಲೋಕವನ್ನು ಖಂಡಿಸುವಂಥದ್ದು ಸಭೆಯ ಪರಿಶುದ್ಧತೆ. ದೇವರ ಆತ್ಮವು ಅಂದರೆ ತನ್ನ ಜನರಲ್ಲಿರುವ ದೈವಪ್ರವೃತ್ತಿಯು ಪಾಪದಲ್ಲಿ ಜೀವಿಸುತ್ತಿರುವವರನ್ನು ಖಂಡಿಸುವದು. ನಮ್ಮ ಕರ್ತನು ಸಾರಿ ಹೇಳಿರುವಂತೆ ಆತನ ಸಂಗತಿಯೂ ಹೀಗೆಯೇ ಇರುತ್ತಿತ್ತು. ಈ ಒಂದು ವಿಶೇಶವಾದ ಅರ್ಥದಲ್ಲಿ ತನ್ನ ಸ್ನಾನದೀಕ್ಷೆಯ ಸಮಯದಲ್ಲಿ ತಂದೆಯ ಆತ್ಮವು ಆತನಿಗೆ ಕೊಡಲಾಯಿತು; ಈ ವಿಷಯವಾಗಿ ಯೋಹಾನನು ಹೀಗೆ ಸಾಕ್ಷಿ ನುಡಿದಿರುವನು: "ದೇವರಾತ್ಮವು ಆತನ ಮೇಲೆ ಇಳಿದು ಬಂದು ಆತನಲ್ಲಿ ನೆಲೆ–ಗೊಂಡಿತ್ತು." ಆತನು ತಂದೆಯ ಆತ್ಮವನ್ನು ಅಳತೆಯಿಲ್ಲದ ಪ್ರಮಾಣದಲ್ಲಿ, ಮಿತಿಯಲ್ಲದೆ ಪಡಕೊಂಡಿದ್ದನು, ಯಾಕಂದರೆ ಆತನು ತಂದೆಯ ಸ್ವರೂಪ ಹಾಗು ಹೋಲಿಕೆಯಲ್ಲಿದ್ದು ಪರಿಪೂರ್ಣನಾಗಿದ್ದರಿಂದ ಆತನಿಗೆ ತಂದೆಯ ಆತ್ಮವನ್ನು ಪೂರ್ಣ ಪ್ರಮಾಣದಲ್ಲಿ ಪಡಕೊಳ್ಳಲು ಸಾಧ್ಯವಾಗಿತ್ತು. ಪ್ರತಿಯಾಗಿ ನಾವು [ಆದಾಮನ ಅವಿಧೇಯತೆಯ ಮೂಲಕವಾಗಿ ಪರಿಪೂರ್ಣತೆ –ಯಿಂದ] ಬಿದ್ದುಹೋಗಿ ದೋಷಪೂರ್ಣರಾಗಿದ್ದು ನಮ್ಮ ನ್ಯೂನ್ಯತೆಗಳ ಕಾರಣದಿಂದ ಅದನ್ನು ಕೇವಲ ಒಂದು ಸೀಮಿತ ಪ್ರಮಾಣದಲ್ಲಿ ಪಡಕೊಳ್ಳಬಹುದು; ಅಂದರೆ ಕೆಲವರು ಹೆಚ್ಚಾಗಿ ಕೆಲವರು ಕಡಿಮೆಯಾಗಿ ಪಡಕೊಳ್ಳಬಹುದು. ಆದರೆ ನಾವು ದಿನಗಳು ಕಳೆದಂತೆ ಹೆಚ್ಚು ಹೆಚ್ಚಾಗಿ ಪವಿತ್ರಾತ್ಮ ಭರಿತರಾಗಿ ಅದರ ಮೂಲಕವಾಗಿ ಶುದ್ಧೀಕರಣಹೊಂದುವದು ನಮ್ಮ ಸೌಭಾಗ್ಯ –ವಾಗಿರುವದೆಂಬುದಕ್ಕೆ ದೇವರಿಗೆ ಸ್ತೋತ್ರವಾಗಲಿ. ಜನರ ಮುಂದೆ ಪ್ರಕಾಶಗೊಳಿಸಿದ ನಮ್ಮ ಕರ್ತನ ಬೆಳಕು ಒಂದು ಬಹು ಶ್ರೇಷ್ಠವಾದುದಾಗಿತ್ತು. ಹೋಲಿಸಿ ನೋಡಿದಾಗ ನಮ್ಮ ಬೆಳಕು ಕ್ಷೀಣವಾಗಿರುವದು; ಆದರೆ ನಾವು ನಮ್ಮ ಕರ್ತನ ಮಾದರಿಯನ್ನು ಅನುಸರಿಸುವವರಾಗಿ ಹೆಚ್ಚು ಹೆಚ್ಚಾಗಿ ಸತ್ಯದ ಆತ್ಮನಿಂದ, ಸತ್ಯದ ಬೆಳಕಿನಿಂದ ತುಂಬಲ್ಪಟ್ಟು ನಮ್ಮ ಪ್ರಭಾವದಲ್ಲಿ ಇರುವವರೆಲ್ಲರ

ಮೇಲೆ ಜ್ಞಾನಯುಕ್ತರಾಗಿ ಅದನ್ನು ಪ್ರಕಾಶಿಸುವಂತೆ ಮಾಡುವವರಾಗೋಣ.

ವಚನ 8–11ರಲ್ಲಿ ಹೇಳಿರುವಂತೆ, ಇದರ ಪರಿಣಾಮವು ಮೂರು ಪಟ್ಟಾಗಿರುತ್ತದೆ.

(1) "ಅದು ಪಾಪಮಯ ಲೋಕವನ್ನು ಖಂಡಿಸುತ್ತದೆ"– ಅಂದರೆ ಅದು ಲೋಕಕ್ಕೆ ತನ್ನಲ್ಲಿರುವ ಪಾಪದ ಸ್ಥಿತಿಯ ಬಗ್ಗೆ ಅರುಹನ್ನು ಉಂಟುಮಾಡುತ್ತದೆ. ಅದು ಲೋಕಕ್ಕೆ ಅದರ ಪಾಪಮಯವಾದ ಘೋರ ಸ್ಥಿತಿಯನ್ನು ಹೆಚ್ಚುಹೆಚ್ಚಾಗಿ ತೋರಿಸಿಕೊಡುತ್ತದೆ. ಲೋಕದಲ್ಲಿರುವ ಅನೇಕರು ದೇವರ ಸ್ವರೂಪವನ್ನು ಎಷ್ಟರ ಮಟ್ಟಿಗೆ ಕಳಕೊಂಡವರಾಗಿ ಎಷ್ಟರ ಮಟ್ಟಿಗೆ ಪಾಪಪ್ರಜ್ಞಾರಹಿತರಾಗಿರುವರೆಂದರೆ ಅವರಿಗೆ ಪ್ರಮಾಣಿಕತೆ ಅಪ್ರಮಾಣಿಕತೆ, ಸತ್ಯಾಸತ್ಯತೆ, ಪಾಪನೀತಿ ಇವುಗಳ ನಡುವೆ ಇರುವ ದೊಡ್ಡ ವ್ಯತ್ಯಾಸವನ್ನು ಯುಕ್ತಾಯುಕ್ತತೆಯನ್ನು ಪರಿಗ್ರಹಿಸಲು ಸಾಧ್ಯವಿಲ್ಲದಂತಾಗಿರುವದು. ಲೋಕವು ತನ್ನವರಲ್ಲಿಯೇ ತನ್ನನ್ನು ಅಳೆದುಕೊಳ್ಳುವ ಅಭ್ಯಾಸದಲ್ಲಿರುವದು; ಆದರೆ ಈಗ ಕ್ರಿಸ್ತನಲ್ಲಿ ಹಾಗು ಆತನ ಸಭೆಯಲ್ಲಿ ದೇವರು ಒಂದು ಹೊಸ ಗುಣಮಟ್ಟವನ್ನು ಲೋಕದವರಿಗಾಗಿ ನಿರೂಪಿಸಿ ತೋರಿಸಿರುವನು; ಅಲ್ಲದೆ ಸಭೆಯು ತನ್ನ ನುಡಿಗಳಿಂದ ಮಾತ್ರವಲ್ಲದೆ ತನ್ನ ನಡೆಯಿಂದಲೂ ಕರ್ತನ ವಾಕ್ಯದಲ್ಲಿರುವ ಪ್ರೀತಿನೀತಿನ್ಯಾಯಗಳ ಸಂಬಂಧವಾಗಿರುವ ಭವ್ಯವಾದ ಗುಣಮಟ್ಟವನ್ನು ಎತ್ತಿಹಿಡಿಯಬೇಕಿರುವದು.

(2) ಲೋಕವನ್ನು ಪಾಪದ ವಿಷಯದಲ್ಲಿ ತಪ್ಪಿತಸ್ಥರನ್ನಾಗಿ ಮಾಡುವದಷ್ಟೇ ಸಾಲದು; ಅದಕ್ಕೆ ಪಾಪದ ವಿರುದ್ಧವಾಗಿರುವ ನೀತಿಯ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳುವ ಅಗತ್ಯವಿರುವದು; ಒಂದು ಗಣನೀಯ ಪ್ರಮಾಣದ ನೀತಿಯನ್ನು ಪಡೆಯಲು ಅದಕ್ಕೆ ಸಾಧ್ಯವಿರುವದಾದರೂ ಅದನ್ನು ಪಡೆದುಕೊಳ್ಳಲು ಇರುವ ತೊಡಕು ಎಂದರೆ [ಪರಿಪೂರ್ಣತೆಯಿಂದ] ಬಿದ್ದುಹೋಗಿರುವಂಥ [ಮಾನವನ] ಸ್ವಭಾವ. ನೀತಿಯೆಂಬದೇ ಸೂಕ್ತವಾದ ಗುಣಮಟ್ಟವೆಂದೂ ಹಾಗು ಇದೊಂದನ್ನೇ ದೇವರು ಮಾನ್ಯಮಾಡುವನೆಂದೂ ಅಲ್ಲದೆ ದೇವರು ತನ್ನ ಅದ್ಭುತವಾದ ಯೋಜನೆಯಲ್ಲಿ ನಿತ್ಯಜೀವವು ಕೇವಲ ನೀತಿವಂತರಿಗೇ ಅನುಗ್ರಹಿಸಿರುವನೆಂಬುದನ್ನು ಲೋಕಕ್ಕೆ ಮನವರಿಕೆ ಮಾಡಿಕೊಡಬೇಕಿರುವದು. ಆತ್ಮನಿಂದ ಜ್ಞಾನಪ್ರಕಾಶ ಹೊಂದಿದವರಾಗಿ ನೀತಿಯನ್ನು ಬೋಧಿಸುವಂಥವರು ಕಂಡುಕೊಳ್ಳುವದೇನಂದರೆ: ತಮ್ಮ ಸ್ವನೀತಿ ಕಾರ್ಯಗಳ ಮೂಲಕವಾಗಿ ತಂದೆಯೊಂದಿಗೆ ಹೊಂದಾಣಿಕೆಗೆ ಬರಲು ಯಾರಿಗೂ ಸಾಧ್ಯವಿಲ್ಲವೆಂದೂ ಆದರೆ ಕ್ರಿಸ್ತನ ಯಜ್ಞದ ಮೂಲಕವಾಗಿ ಒದಗಿಸಲಾಗಿರುವ ಪಾಪಕ್ಷಮೆ, ಪಾಪಗಳ ಮರೆಮಾಡುವಿಕೆ ಇವುಗಳು ಅಗತ್ಯವೆಂಬುದನ್ನು ಸ್ಪಷ್ಟಪಡಿಸುವದು ಈ ಸಂಬಂಧದಲ್ಲಿ ಅವರಿಗೆ ಅನಿವಾರ್ಯವಾಗುವದೆಂಬದು.

(3) ತನ್ನ ಜನರಲ್ಲಿರುವ ಕರ್ತನ ಆತ್ಮವು ಅವರ ನೆರೆಹೊರೆಯವರಿಗೆ ಮನವರಿಕೆ ಮಾಡಿಕೊಡುವದೇನಂದರೆ ತಮ್ಮಲ್ಲಿರುವ ಬೆಳಕಿನ ಹಾಗು ತಮ್ಮ ಸಂದೇಶದ ವ್ಯಾಪ್ತಿಯೊಳಗೆ ಬರುವವರೆಲ್ಲರೂ ಈಗಿನ ಜೀವಿತ ಮಾತ್ರವೇ ಇರುವಂಥದ್ದೆಲ್ಲವೂ ಅಲ್ಲ, ಆದರೆ ದೇವರ ಏರ್ಪಾಡಿನಲ್ಲಿ ಮಾನವ ಕುಲದವರೆಲ್ಲರಿಗೂ [ಮುಂದೆ] ಒಂದು ಪರೀಕ್ಷಾರ್ಥವಾದ ಕಾಲವು ಅಂದರೆ ಒಂದು ನ್ಯಾಯವಿಚಾರಣೆ, ಒಂದು ಪರೀಕ್ಷೆಯು ಉದ್ದೇಶಿಸಲಾಗಿರುವದೆಂಬದು. ಈ ಸಂದೇಶವನ್ನು ಯಾರೆಲ್ಲಾ ಕೇಳಿಕೊಳ್ಳುವರೋ ಅವರು ಇದರಲ್ಲಿರುವ ವಿವೇಚನಾಯುಕ್ತವಾದ ಅಂಶವನ್ನು ಅಂಗೀಕರಿಸಿಕೊಳ್ಳಬೇಕು ಅಲ್ಲದೆ ನಿತ್ಯಜೀವವನ್ನು ಬಯಸುವಂಥವರಿಗೆ ಇದು ಅವರ ಸಂತೋಷ ನಿರೀಕ್ಷೆಗಳಿಗೆ ಆಧಾರವಾಗಬೇಕು. ಈ ನಿಶ್ಚಿತಾಭಿಪ್ರಾಯಗಳನ್ನು ಹಿಡಿದುಕೊಂಡು ಅವುಗಳನ್ನು ಸರಿಯಾಗಿ ಹಾಗು ಗಾಢವಾಗಿ ಅಭ್ಯಾಸ ಮಾಡುವಂಥರೇ ಕರ್ತನನ್ನೂ ಹಾಗು ಈಗಿನ ಜೀವಿತದಲ್ಲಿ ಕೃಪೆಯನ್ನು ಹೊಂದಲು ಆತನು ಒದಗಿಸಿರುವ ಹಲವಾರು ವಿಧಾನಗಳನ್ನು ಕಂಡುಕೊಂಡವರಾಗಿ ತಾವು ಸಹ ತಮ್ಮ ನ್ಯಾಯವಿಚಾರಣೆ ಹಾಗು ಸಭೆಯ ಅಂಗಗಳಾದವರಿಗೆ ಬರಮಾಡಲಾಗುವ ಪರಿಶೋಧನೆಗಳನ್ನು ಹೊಂದಲು ಬಯಸುವಂಥವರಾಗುವದು. ಆದರೆ ಈ ರೀತಿಯಲ್ಲಿ ಅಭ್ಯಾಸಮಾಡದೇ ಇಲ್ಲವೇ ಪ್ರಭಾವಿತರಾಗದೇ ಇರುವವರು ಸಭೆಯ ಮೂಲಕವಾಗಿ ತಿಳುವಳಿಕೆಯನ್ನು ಪಡೆಯುವರು; ಹೇಗೂ ಬೆಳಕನ್ನು ಅಥವಾ ಪರಿಜ್ಞಾನವನ್ನು ಪಡಕೊಳ್ಳುವಷ್ಟರ ಪ್ರಮಾಣದಲ್ಲಿ ಅವರು ಜವಾಬ್ದಾರಿಯನ್ನೂ ಪಡೆಯುವರು. ದೇವರು ತನ್ನ ಯೋಜನೆಯಲ್ಲಿ ಲೋಕದವರಿಗೆ ಭವಿಷ್ಯತ್ತಿನಲ್ಲಿ ನ್ಯಾಯವಿಚಾರಣೆಗಾಗಿ ಒಂದು ದಿನವನ್ನು ಗೊತ್ತುಮಾಡಿರುವನು; ಅದರಲ್ಲಿ ಎಲ್ಲರೂ ನ್ಯಾಯವಿಚಾರಣೆಯ ಪೂರ್ಣವಾದ ಅವಕಾಶವನ್ನು ಅಂದರೆ ಕರ್ತನ ಪರವಾಗಿರುವ ತಮ್ಮ ನಿಷ್ಠೆಯ ಸಂಬಂಧವಾಗಿ ಪರಿಕ್ಷೆಯನ್ನು ಅವರು ಹೊಂದುವರು. ಹೇಗೂ ಈ ಜೀವಿತದಲ್ಲಿನ ಅವರ ನಡವಳಿಕೆಗಳು ಅವರ ಮುಂದಿನ ನ್ಯಾಯವಿಚಾರಣೆ ಅಥವಾ ಪರೀಕ್ಷೆಯಲ್ಲಿ ಪರಿಣಾಮ ಬೀರುವದು. ಈಗಿನ ಕಾಲದಲ್ಲಿ ಅವರು ತಮ್ಮ ಮನಸಾಕ್ಷಿಗೆ ಅವಿಧೇಯರಾಗಿ ಸತ್ಯದ ನಡಿಸುವಿಕೆಯನ್ನು ಅನುಸರಿಸುವಲ್ಲಿ ವಿಫಲರಾಗುವಷ್ಟರ ಪ್ರಮಾಣದಲ್ಲಿ ಅವರು ಪೆಟ್ಟುಗಳನ್ನು ಅಂದರೆ ಕಷ್ಟಗಳನ್ನು ಮುಂದೆ ಜಯಿಸಬೇಕಿರುವದು ಅಲ್ಲದೆ ಅವರು ಈಗ ಎಷ್ಟರ ಮಟ್ಟಿಗೆ ನೀತಿಯನ್ನು ಅನುಸರಿಸಿ ಜೀವಿಸಲು ಅವರು ಪರಿಶ್ರಮಿಸುವರೋ [ಅಷ್ಟರ ಮಟ್ಟಿಗೆ] ತಮಗಾಗಿ ಒಂದು ಆಶೀರ್ವಾದವನ್ನು ಕೂಡಿಟ್ಟುಕೊಳ್ಳುವರು; ಇದು ಅವರಿಗೆ ಆ ನ್ಯಾಯವಿಚಾರಣೆಯ ದಿನದಲ್ಲಿ ಸಹಾಯ ಮಾಡುವದು.

## "ಅವರು ನಂಬದ ಕಾರಣ"

ಸಭೆಯಲ್ಲಿರುವ ಪವಿತ್ರವಾದ ಸತ್ಯದ ಆತ್ಮವು ಲೋಕದವರಿಗೆ ಅವರು ಪಾಪಿಗಳ ಮನೋಭಾವದಲ್ಲಿ ಮುಂದುವರೆಯುತ್ತಾ "ದೇವರ ಕೋಪಕ್ಕೆ" ಗುರಿಯಾಗಿರುವದಕ್ಕೆ ಕಾರಣವೇನಂದರೆ ಅವರು ಕ್ರಿಸ್ತನನ್ನು ನಂಬದೇ ಹಾಗೂ ಪಾಪನಿವಾರಣೆಯ ಸಲುವಾದ ಆತನ ಮಹತ್ವಪೂರ್ಣವಾದ ಯಜ್ಞವನ್ನು ಅಂಗೀಕರಿಸದೇ ಇರುವದೇ ಎಂಬುದನ್ನು ತಿಳಿಸಿಕೊಡುವದು. ಸಭೆಯಲ್ಲಿರುವ ಪವಿತ್ರಾತ್ಮವು ಲೋಕದವರಿಗೆ ತಿಳಿಸಿಕೊಡುವದೇನಂದರೆ: ನೀತಿಯೆಂಬಂಥ ಒಂದು ಸಂಗತಿ ಅಂದರೆ ನಮ್ಮ ಕರ್ತನು ತನ್ನ ಯಜ್ಞದ ಮೂಲಕವಾಗಿ ಸಂಪಾದಿಸಿಕೊಂಡು

ನೀತಿವಂತರನ್ನಾಗಿ ನಿರ್ಣಯಿಸುವವನೆಂಬ ಒಂದು ಸಂಗತಿ-ಯಿರುವದೆಂದು, ಅದನ್ನು ಆತನು ತಂದೆಯ ಮುಂದೆ ಸಮರ್ಪಿಸಿರುವನೆಂಬದು. ಕರ್ತನು ಈಗಿನ ದುಷ್ಟವ್ಯವಸ್ಥೆಗೆ ಅಧಿಕಾರಿಯಾಗಿರುವ ಸೈತಾನನನ್ನು ಪ್ರತಿಬಂಧಿಸುವ ಸಲುವಾಗಿ ನ್ಯಾಯವಾದ ಹಕ್ಕನ್ನು ಸಂಪಾದಿಸಿಕೊಂಡವನಾಗಿ ಲೋಕವನ್ನು ಈಗಾಗಲೇ ವಿಮೋಚಿಸಿರುವದರಿಂದ ಈಗಿರುವ ವ್ಯವಸ್ಥಾ ಕ್ರಮಗಳು ಮುಂದುವರೆಯಲು ಸಾಧ್ಯವಾಗದೆಂಬುದನ್ನೂ ನಮ್ಮ ಕರ್ತನ ಎರಡನೆಯ ಬರುವಿಕೆಯಲ್ಲಿ ಒಂದು ಹೊಸ ವ್ಯವಸ್ಥಾಕ್ರಮಗಳು ಬರುವದೆಂಬುದನ್ನು ಸಭೆಯಲ್ಲಿರುವ ಪವಿತ್ರಾತ್ಮವು ಲೋಕವನ್ನು ಪ್ರಭೋಧಿಸಿ ಹೇಳುವದು.

## "ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು"

ನಮ್ಮ ಕರ್ತನು ತಾನು ಪ್ರತ್ಯಕ್ಷನಾಗಿರುವ ಕಾಲದಲ್ಲಿ ಅವರು ಹೊಂದಿಕೊಂಡ ಬೋಧನೆಗಳಿಗಿಂತಲೂ ಅಧಿಕವಾದ ಬೋಧನೆ ಗಳನ್ನು ತಾನು ಪರಲೋಕಕ್ಕೆ ಏರಿಹೋದ ನಂತರ ಪಡಕೊಳ್ಳು – ವಂತಾಗಲು ತನ್ನ ಹಿಂಬಾಲಕರನ್ನು ಸಿದ್ಧಪಡಿಸಿದ್ದನು. ಇದು ಅಗತ್ಯವಾದುದಕ್ಕೆ ಕಾರಣವೇನಂದರೆ ಮೇಲಿನಿಂದ ಅವರಿಗೆ ಶಕ್ತಿಯು ಹೊದಿಸಲ್ಪಡುವವರೆಗೂ ಅವರು ಇದಕ್ಕೆ ಸಿದ್ಧವಾಗಿರಲಿಲ್ಲವೆಂಬದೇ. ಇದು ನೆರವೇರಲ್ಪಡುವವರೆಗೂ ಅವರು ಪ್ರಾಕೃತ ಮನುಷ್ಯರಾಗಿರುವರು ಅಲ್ಲದೆ ಅಪೋಸ್ತಲನು ತೋರಿಸಿ ಕೊಟ್ಟಿರುವಂತೆ, "ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ...ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು." ಕೆಲವು ಅಪೋಸ್ತಲರು ಆಳವಾದ ವಿಷಯಗಳನ್ನು ಬೋಧಿಸಿದಂತೆ ನಮ್ಮ ಕರ್ತನಾದ ಯೇಸುವು ಏಕೆ ಆ ಆಳವಾದ ವಿಷಯಗಳನ್ನು ಬೋಧಿಸಲಿಲ್ಲವೆಂಬುದಕ್ಕೆ ಇದು ವಿವರಣೆಯಾಗಿರುವದು. ಆತನಿಗೆ ಈ ಸತ್ಯಾರ್ಥಗಳನ್ನು ಪ್ರಸ್ತುತಿಪಡಿಸಲು ಸಾಮರ್ಥ್ಯ-ವಿರಲಿಲ್ಲವೆಂದಲ್ಲ ಆದರೆ ಅವುಗಳು ತನ್ನ ಶಿಷ್ಯರಿಗೆ ಆ ಕಾಲಕ್ಕೆ ನಿಗಧಿತವಾದ ಆಹಾರವಾಗಿರದೇ ಇದ್ದು ಅದು ಅವರನ್ನು ಉಸಿರುಕಟ್ಟುವಂತೆ ಮಾಡಿ ಅವರಿಗೆ ಹಾನಿಗೊಳಿಸುತ್ತಿದ್ದವು. ಹೀಗಾಗಿ ನಮ್ಮ ಕರ್ತನ ಬೋಧನೆಯಲ್ಲಿನ ಆಳವಾದ ಸಂಗತಿಗಳನ್ನು ಬಹುವಾಗಿ ಸಾಮ್ಯದ ರೂಪದಲ್ಲಿ ತಿಳಿಸಿ-ಕೊಡಲಾಗುತ್ತಿತ್ತು. ಅವುಗಳು ಆ ಸಮಯದಲ್ಲಿ ಅವರಿಗೆ ಹಾನಿಪಡಿಸದೆ ಇದ್ದು ಆನಂತರದಲ್ಲಿ ಅವರು ಅವುಗಳನ್ನು ಮನನಮಾಡಿಕೊಂಡು ಗ್ರಹಿಸಿಕೊಳ್ಳುತ್ತಿದ್ದರು. ಮತ್ತೊಂದು ಸಾರಿ ಆತನು ಹೀಗೆ ಹೇಳಿದ್ದನು: "ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆ ಹೋದರೆ [ಅವುಗಳನ್ನು ಸ್ವೀಕರಿಸಿಕೊಳ್ಳಲು ಅಸಮರ್ಥರಾದರೆ] ಪರಲೋಕದ ಸಂಗತಿಗಳನ್ನು ಕುರಿತು ನಿಮಗೆ ಹೇಳುವಾಗ ಹೇಗೆ ನಂಬೀರಿ?" – ಯೋಹಾನ 3:12

ಆದರೆ ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ಸಕಲ ವಿಷಯದಲ್ಲಿ ಸತ್ಯಕ್ಕೆ ನಡಿಸುವನು, ಆದರೂ ಇದು ಒಂದು ಸಾಧನವೇ ಹೊರತು ಅಧಿಕಾರವುಳ್ಳದ್ದೇನೂ ಅಲ್ಲ, ಯಾಕಂದರೆ ಅದು ದೇವರ ಯೋಜನೆಯ ಅನೇಕ ಲಕ್ಷಣಗಳ ಬಗ್ಗೆ ತಿಳಿಸಿಕೊಡುವದು ಹಾಗು ಅವುಗಳಲ್ಲಿ ಇನ್ನೂ ನಿಮಗೆ ವ್ಯಕ್ತಪಡದ ಸಂಗತಿಗಳು ಅಡಕವಾಗಿರುವದು; ಆದರೆ ಅವುಗಳನ್ನು ನಿಗಧಿತ ಸಮಯದಲ್ಲಿ [ದೇವರ] ವಾಕ್ಯದ ಮೂಲಕವಾಗಿ ಹಾಗು ಪವಿತ್ರಾತ್ಮದ ಪ್ರಭಾವದ ಮೂಲಕವಾಗಿಯೂ ನಿಮ್ಮ ಗಮನಕ್ಕೆ ತರಲಾಗುವದು. ಈ ಪವಿತ್ರಾತ್ಮದ ಮೂಲಕವಾಗಿ ನಾನು ಮಹಿಮೆ ಹೊಂದುವೆನು ಯಾಕಂದರೆ ನಿಮಗೆ ತೋರಿಸಲಾದ ಸಂಗತಿಗಳು ನನ್ನವುಗಳು ಯಾಕಂದರೆ ತಂದೆಗಿರುವಂಥವುಗಳೆಲ್ಲವೂ ನನ್ನದು; ಆದುದರಿಂದಲೇ ಆತನು [ಅದು] ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತೋರಿಸಿಕೊಡುವನೆಂದು ನಾನು ಹೇಳಿದೆನು. ಈ ಹೇಳಿಕೆಯಲ್ಲಿ ತಂದೆಗೆ ಇರುವಂಥ ಪ್ರಾಧಾನ್ಯತೆಯನ್ನು ಗಮನಿಸಿ. ಎಲ್ಲವೂ ತಂದೆಯದೇ ಆದರೆ ತಂದೆಯು ಮಗನನ್ನು ಸಹಬಾಧ್ಯ-ನನ್ನಾಗಿಯೂ, ತನಗೆ ಸಹಾಯಕನನ್ನಾಗಿಯೂ ಮಾಡಿಕೊಂಡಿ-ರುವನು, ಅಲ್ಲದೆ ಯಾವದೂ ಪವಿತ್ರಾತ್ಮನಿಗೆ ಸಂಬಂಧಿಸಿರು ವದೆಂದು ಹೇಳಿಲ್ಲ, ಯಾಕಂದರೆ ಅದು ಕೇವಲ ದೇವರು ಬಳಸುವ ಒಂದು ಸಾಧನ ಅಥವಾ ಕಾರ್ಯನಿರ್ವಹಣಾ ವ್ಯವಸ್ಥೆಯಾಗಿದ್ದು, ಇದರ ಮೂಲಕವಾಗಿ ಸುದ್ದಿಸಂಪರ್ಕ ಆಶೀರ್ವಾದ ಆದೇಶ ಮುಂತಾದವುಗಳು ತಿಳಿಸಲ್ಪಡುವವು. ಪವಿತ್ರಾತ್ಮವು ಒಂದು ವ್ಯಕ್ತಿಯಲ್ಲ, ಆದರೆ ಅದು ಸರ್ವಶಕ್ತನಾದ ದೇವರ ಹಾಗು ಅತನ ನಿತ್ಯಕುಮಾರನಾದ ನಮ್ಮ ಕರ್ತನ ಆತ್ಮಚೈತನ್ಯ ಅಥವಾ ಪ್ರಭಾವ ಇಲ್ಲವೇ ಶಕ್ತಿಯಾಗಿರುವದು. ಈ ವಿಷಯದ ಪೂರ್ಣ ವಿವರಣೆಗಾಗಿ ಸತ್ಯವೇದಾಧ್ಯಯನ ಪಾಠಮಾಲೆಯ 5ನೇ ಗ್ರಂಥದ 8ನೇ ಅಧ್ಯಾಯವನ್ನು ನೋಡಿರಿ.

## "ನಿಮಗೆ ಬೇರೊಬ್ಬ ಸಹಾಯಕನನ್ನು ಕೊಡುವನು."

ನಮ್ಮ ಸುವರ್ಣಮಯ ಪಠ್ಯಭಾಗವು ಸೊಗಸಾಗಿರು-ವಂಥದ್ದೂ ಸಹಾಯಕಾರಿಯೂ ಆಗಿರುವದು. ನಿಜವಾಗಿಯೂ ನಮ್ಮ ಕರ್ತನು ವಿವರಿಸಿ ಹೇಳಿರುವದೇನಂದರೆ, ಪವಿತ್ರಾತ್ಮವು ಸಂತೈಸುವಂಥ ಒಂದು ಪ್ರಭಾವಚೈತನ್ಯವೂ, ಒಂದು ಮಾರ್ಗದರ್ಶಕವೂ, ಒಂದು ಪ್ರಭೋದಿಸುವಿಕೆಯೂ ಅಲ್ಲದೆ ಸಹಾಯಕವೂ ಆಗಿದ್ದು ಇಕ್ಕಟ್ಟಿನ ಮಾರ್ಗದಲ್ಲಿರುವ ಕರ್ತನ ಜನರಿಗೆ ಅದು ತಂದೆಯಿಂದ ಬಂದಿರುವಂಥ ಒಂದು ವರವಾಗಿರುವದು. ಇದು ಪಂಚಾಶತ್ತಮ ದಿನದಂದು ಬಂದ ಆಶೀರ್ವಾದದ ಸಂಬಂಧವಾಗಿ ಅಪೋಸ್ತಲನು ನೀಡಿದ ವಿವರಣೆ ಯೊಂದಿಗೆ ಸಮ್ಮತಿಸುವದು. ಈ ಸಂಗತಿಯನ್ನು ವಿವರಿಸುವನಾಗಿ ಅಪೋಸ್ತಲನಾದ ಪೇತ್ರನು ಹೇಳಿರುವದೇನಂದರೆ, ನಮ್ಮ ಕರ್ತನು ದೇವರ ಬಲಪಾರ್ಶ್ವದಲ್ಲಿನ ಅಧಿಕಾರಸ್ಥಾನಕ್ಕೆ ಏರಿಸಲ್ಪಟವನಾಗಿ ತಂದೆಯಿಂದ ಈ ಪವಿತ್ರಾತ್ಮ, ಅಧಿಕಾರವನ್ನು ಪಡೆದುಕೊಂಡು ಅದನ್ನು ಪಂಚಾಶತ್ತಮ ದಿನದಂದು ತನ್ನ ಹಿಂಬಾಲಕರ ಮೇಲೆ ಸುರಿಸಿದನು ಅಥವಾ ವ್ಯಾಪನಗೊಳಿಸಿದನೆಂಬದು. ಈ ವರ್ಣನೆಯು ಪವಿತ್ರಾತ್ಮದ ಬಗ್ಗೆ ಇರುವ ಸೂಕ್ತವಾದ ಅಭಿಪ್ರಾಯಕ್ಕೆ ಸರಿಬೀಳುವದು, ಆದರೆ ಪವಿತ್ರಾತ್ಮವು ಒಂದು ವ್ಯಕ್ತಿಯೆಂಬುದು ಇರುವ ತಪ್ಪಾದ ಅಭಿಪ್ರಾಯಕ್ಕೆ ಬಹುವಾಗಿ

ಹೊರತಾಗಿರುವದು. ಒಬ್ಬ ವ್ಯಕ್ತಿಯನ್ನು ಸುರಿಸಲು ಅಥವಾ ವ್ಯಾಪನಗೊಳ್ಳುವಂತೆ ಮಾಡಲು ಹೇಗೆ ಸಾಧ್ಯ! ಒಬ್ಬನು ಅಧಿಕಾರದಲ್ಲಿ ತನಗೆ ಸಮನಾಗಿರುವ ಮತ್ತೊಬ್ಬನಿಗೆ ತಮ್ಮಿಬ್ಬರಿಗೂ ಸಮನಾಗಿರುವ ಮೂರನೆಯವನನ್ನು ಒಂದು ವರವಾಗಿ ಸುರಿಸಲ್ಪಡುವಂತೆ ಪ್ರಾರ್ಥಿಸುವದು ಹೇಗೆ ಸಾಧ್ಯ! ಸಾಮರಸ್ಯರಹಿತವಾದ ಈ ತಪ್ಪಿನ ವಿಷಯವಾಗಿ ನಮ್ಮ ಮನೋನೇತ್ರಗಳು ತೆರೆಯುತ್ತಿದ್ದಂತೆಯೇ ಇದರಲ್ಲಿನ ಅಸತ್ಯತೆಯು ವ್ಯಕ್ತವಾಗತೊಡಗುವದು. ಆದರೆ ಇದರ ನಿಜವಾದ ಅಭಿಪ್ರಾಯವು ಅಂದರೆ ನಮ್ಮ ಕರ್ತನಾದ ಯೇಸುವು ತಂದೆಯ ಸನ್ನಿಧಿಯಲ್ಲಿ ನಮ್ಮ ಸಹಾಯಕನಾಗಿ [ಅಂದರೆ, ನಮ್ಮ ಪರವಾಗಿ ವಾದಿಸುವಂಥವನಾಗಿ] ಕಾಣಿಸಿಕೊಂಡು ನಮ್ಮ ಸಲುವಾದ ತನ್ನ ಯಜ್ಞದ ಫಲವನ್ನು ಅರ್ಪಿಸಿದ ಕೂಡಲೇ ತಂದೆಯು ಇದಕ್ಕೆ ಪ್ರಸನ್ನನಾಗಿ ತನ್ನ ಪವಿತ್ರಾತ್ಮವನ್ನು ಅಂದರೆ ತನ್ನ ಪವಿತ್ರವಾದ ಪ್ರಭಾವಚೈತನ್ಯಗಳನ್ನು ನಮ್ಮ ಮೇಲೆ ಸುರಿಸಿ ನಮ್ಮನ್ನು ತನ್ನ ಕುಟುಂಬದವರನ್ನಾಗಿ ಸ್ವೀಕರಿಸಿಕೊಂಡು ತನ್ನ ಪುತ್ರರಂತೆ ನಮ್ಮನ್ನು ನಡೆಸಿಕೊಳ್ಳುವಂಥದ್ದು ಎಷ್ಟೋ ಸೊಗಸಾಗಿರುವದು!

ಛಾಯಾರೂಪದಲ್ಲಿ ತೋರಿಸಿರುವಂತೆ ಪಂಚಾಶತ್ತಮ ದಿನದ ಆಶೀರ್ವಾದವು ಕೇವಲ ಅದನ್ನು ಪಡಕೊಂಡವರಿಗೆ ಮಾತ್ರವಲ್ಲದೆ ಇಡೀ ಸಭೆಗೆ ಇರುವದೆಂಬ ಅಂಶವು ಎಷ್ಟೋ ಅಮೂಲ್ಯವಾದದ್ದು! ಪೂರ್ವಕಾಲದಲ್ಲಿ ಯಾಜಕರನ್ನು ಒಳಗೊಂಡಂತೆ ಅರಸರುಗಳು ವಿಶೇಷ ಸೇವೆಗಾಗಿ ಪ್ರತ್ಯೇಕಿಸಲ್ಪಟ್ಟವರಾಗಿ ಅಭಿಷೇಕಿಸಲ್ಪಡುತ್ತಿದ್ದರು, ಅಲ್ಲದೆ ಕ್ರಿಸ್ತನು ಹಾಗು ಆತನ ಸಭೆಯು ಮೆಲ್ಕಿಜ್ಹೆದೇಕನ ಕ್ರಮದಲ್ಲಿನ ನಿಜವಾದ ಅರಸರುಗಳು ಹಾಗು ನಿಜವಾದ ಯಾಜಕರುಗಳಾಗಿದ್ದು ರಾಜವಂಶದ ಯಾಜಕರಾದ ಇವರ ಸೇವೆಯ ಮೂಲಕವಾಗಿ ಲೋಕದ ಎಲ್ಲಾ ಕುಲಗಳು ಆಶೀರ್ವದಿಸಲ್ಪಡುವವು. ನಮ್ಮ ಕರ್ತನು ಶಿರಸ್ಸಾಗಿದ್ದು ನಾವು ವಿಶೇಷವಾಗಿರುವ ಆತನ [ದೇಹದ] ಅಂಗಗಳಾಗಿರುವೆವು. ಪವಿತ್ರಾತ್ಮವು ಆತನ ಮೇಲೆ ಬಂದಿಳಿದು ಆತನನ್ನು ಅರಸನಾಗಲು ಯೋಗ್ಯವಾಗ ಮಾಡಿ ಮೆಲ್ಕಿಜ್ಹೆದೇಕನ ತರಹದ ಯಾಜಕನನ್ನಾಗಿ ಆತನನ್ನು ಸಿದ್ಧಗೊಳಿಸುವದನ್ನು ತೈಲದಿಂದ ಅಭಿಷೇಕಿಸುವ ಕಾರ್ಯದ ಛಾಯಾರೂಪದಲ್ಲಿ ಸಾಂಕೇತಿಕವಾಗಿ ಸೂಚಿಸಲಾಗಿರುವದು. ಹೀಗೆ ಈ ಅಭಿಷೇಕವು ಆರೋನನ ತಲೆಯ ಮೇಲೆ ಹೊಯ್ಯಲ್ಪಟ್ಟು ಆತನ ಗಡ್ಡದ ಮೇಲೆಯೂ ಅಲ್ಲಿಂದ ಆತನ ಕೊರಳ ಪಟ್ಟಿಯ ವರೆಗೂ ಹರಿದು ಬರುವದೆಂದು ಪ್ರವಾದಿಯು ನುಡಿದಿರುವನು: ನಾವು ನೋಡಿರುವಂತೆ ಇದು ಪವಿತ್ರಾತ್ಮನ ಮೂಲಕವಾಗಿ ಪುತ್ರರನ್ನಾಗಿ ಸ್ವೀಕರಿಸಿಕೊಳ್ಳುವದನ್ನು ಸೂಚಿಸುವಂಥದ್ದಾಗಿದ್ದು ಅದು [ಸಭೆಗೆ] ಶಿರಸ್ಸಾಗಿರುವ ನಮ್ಮ ಕರ್ತನ ಮೇಲೆ ಆತನ ಸ್ನಾನದೀಕ್ಷೆಯಲ್ಲಿ ಬಂದಿಳಿದಿದ್ದು ಹಾಗು ಪಂಚಾಶತ್ತಮ ದಿನದಂದು ಅದು ಆತನ [ದೇಹದ] ಅಂಗಗಳಾಗಿ ಅಂಗೀಕರಿಸಲ್ಪಡಲು ಸಿದ್ಧರಾಗಿ ಕಾಯುತ್ತಿದ್ದವರೆಲ್ಲರ ಮೇಲೆಯೂ ಸುರಿಸಲ್ಪಟ್ಟಿದ್ದು ಅಲ್ಲದೆ ಆನಂತರದಲ್ಲಿ ಅವರ ವಾಕ್ಯದ ಮೂಲಕವಾಗಿ ಆತನ ಮೇಲೆ ನಂಬಿಕೆ ಇಟ್ಟವರಾಗಿ ಅದೇ ದೇಹದಲ್ಲಿನ ಅಂಗಗಳಾಗಿ ಕೂಡಿ ಬಂದಿರುವ ನಾವೂ ಅದೇ ಅಭಿಷೇಕವನ್ನು ಹೊಂದಿರುವೆವು; ಮತ್ತು "ಆತನಿಂದ ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿದ್ದು" ನಿಮ್ಮಲ್ಲಿ ಅದು ವಾಸವಾಗಿರುವದು. ಈ ಅಭಿಷೇಕವು ಒಬ್ಬ ವ್ಯಕ್ತಿಯನ್ನು ಪ್ರತಿನಿಧಿಸುವಂಥದಾಗಿರಲಿಲ್ಲ, ಆದರೆ ಅದು ಒಂದು ಪ್ರಭಾವ ಹಾಗು ಆಶೀರ್ವಾದವನ್ನು ಸೂಚಿಸುವಂಥದಾಗಿತ್ತು.

ದೇವ ಜನರಿಗೆ ತಾವು ಕರ್ತನಿಂದ ಬಳಸಲ್ಪಡುವವರಾಗುವಂಥ ಸೌಭಾಗ್ಯವನ್ನು ಪಡೆದು, ಪವಿತ್ರಾತ್ಮನಿಂದ ಹುಟ್ಟುವದರ [ಅಂಕುರಿಸಲ್ಪಟ್ಟುಡುವದರ] ಮೂಲಕವಾಗಿ ಆತನ ಮನೆತನಕ್ಕೆ [ಮಕ್ಕಳಾಗಿ] ಅಂಗೀಕರಿಸಲ್ಪಡುವರೆಂಬುದು ಎಂಥಾ ಒಂದು ಸಂತೃಪ್ತಿ, ಎಂಥಾ ಒಂದು ಆದರಣೆಯನ್ನು ತಂದಿರುವದು. ಪವಿತ್ರಾತ್ಮದಿಂದ ಅಂದರೆ ಪವಿತ್ರವಾದ ಪ್ರಭಾವದ ಮೂಲಕವಾಗಿ ಅಭಿಷೇಕಿಸಲ್ಪಡುವದು, ತಂದೆಯ ಹಾಗು ಮಗನ ಆಶೀರ್ವಾದಗಳು, ನಮಗಾಗುವ ನ್ಯಾಯವಿಚಾರಣೆಯಲ್ಲಿ ಮಾರ್ಗದರ್ಶನ ಪಡೆಯುವದು, ನಮ್ಮ ಹೃದಯಗಳನ್ನು ಮಾರ್ಗದರ್ಶಿಸುವದು, ಶಾಸ್ತ್ರವಚನಗಳ ಕಡೆಗೆ ನಮ್ಮ ಕಣ್ಣುಗಳನ್ನು ತೆರೆಯುವಂತೆ ಮಾಡಿ ನಮ್ಮ ಹಾಗು ಲೋಕದ ಎಲ್ಲಾ ಕುಲಗಳವರ ರಕ್ಷಣೆಯ ವಿಷಯವಾಗಿ ನಮ್ಮ ತಂದೆಯು ಮಾಡಿರುವ ಪ್ರಭಾವಪೂರ್ಣವಾದ ಯೋಜನೆಯ ಉದ್ದ ಅಗಲ ಎತ್ತರ ಮತ್ತು ಆಳಗಳನ್ನು ಇನ್ನೂ ಹೆಚ್ಚಾಗಿ ಮನನ ಮಾಡಿಕೊಳ್ಳುತ್ತಾ ಹೋದಂತೆ ಅದು ನಮ್ಮ ಹೃದಯಗಳು ನಮ್ಮಲ್ಲಿ ಕುದಿಯುವಂತೆ ಮಾಡುವದು.

ಪವಿತ್ರಾತ್ಮನ ಈ ನೆಲೆಗೊಂಡಿರುವಿಕೆಯು ಒಂದು ತಾತ್ಕಾಲಿಕವಾದ ಅಂದರೆ ಒಂದು ದಿನದ, ಒಂದು ತಿಂಗಳಿನ, ಒಂದು ವರುಷದ ಸಂಗತಿಯಾಗಿರಲಿಲ್ಲ; ಆದರೆ ಅದು ಯುಗಾಂತ್ಯದ ವರೆಗೆ, ಯುಗದ ಪರ್ಯಂತರ, ಪೂರ್ಣಾವಧಿಯವರೆಗೆ ಇರುವಂಥದ್ದಾಗಿತ್ತು. ಅದು ಹೀಗಿರುವಂಥದ್ದು ನಮಗೆ ಎಷ್ಟು ಸಂತೋಷಕರ, ನಾವು ಹೊಂದುತ್ತಿರುವ ಶಿಕ್ಷಣ ಹಾಗು ಮಾರ್ಗದರ್ಶನಗಳು ಎಷ್ಟು ಭಾಗ್ಯಕರವಾದವುಗಳು! ನಮ್ಮ ಕರ್ತನು ಹೇಳಿರುವಂತೆ ಪವಿತ್ರಾತ್ಮವು ಸತ್ಯವಾಗಿಯೂ ಮುಂದೆ ಬರಲಿರುವ ಸಂಗತಿಗಳ ವಿಷಯವಾಗಿ ನಮಗೆ ತೋರಿಸಿಕೊಡುವದಲ್ಲದೆ ಹಿಂದಿನ ಸಂಗತಿಗಳ ಬಗ್ಗೆ ನಮಗೆ ವಿವರಿಸಿ ಹೇಳುವದು. ಮುಂಬರುವ ಸಂಗತಿಗಳನ್ನು ಅಂದರೆ [ಕ್ರಿಸ್ತನ] ಸಾವಿರ ವರುಷದ ಸಾಮ್ರಾಜ್ಯ, ಸಮಸ್ತವನ್ನು ಸರಿಪಡಿಸುವ ಕಾಲಗಳು, ಭೂಲೋಕದ ಎಲ್ಲಾ ಕುಲಗಳನ್ನು ಮೇಲಕ್ಕೆತ್ತಿ ಅವರನ್ನು ಬಲಪಡಿಸುವದು ಇವುಗಳನ್ನು ಮನವರಿಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನಮಗೆ ದೊರೆತಿರುವ ಆಶೀರ್ವಾದಗಳೆಷ್ಟೋ!

*****

# “ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ”

**ರೀಪ್ರಿಂಟ್ಸ್ ಪುಟ 3551**

## ಯೋಹಾನ 17:15–26

ನಮ್ಮ ಕರ್ತನು ತನ್ನ ಮರಣವನ್ನು ಸ್ಮರಣೆಮಾಡುವ ಆಚಾರ ಕ್ರಮವನ್ನು ಏರ್ಪಡಿಸುವ ರಾತ್ರಿಯಲ್ಲಿ ತನ್ನ ಬಗ್ಗೆ ಹಾಗು ಸಮೀಸುತ್ತಿದ್ದ ಶಿಲುಬೆಯ ಮರಣದ ಬಗ್ಗೆ ಬಹು ಚಿಂತಾಕ್ರಾಂತ–ನಾಗಿರುವದಕ್ಕೆ ಬದಲಾಗಿ ಆತನು ವಿಶೇಷವಾಗಿ ತನ್ನ ಶಿಷ್ಯರ ಬಗ್ಗೆ ಯೋಚಿಸುವವನಾಗಿ ಅವರಿಗಾಗಿ ಪ್ರಾರ್ಥಿಸುತ್ತಿದ್ದನು. ಯೋಹಾನನ ಸುವಾರ್ತೆಯ 16ನೇ ಅಧ್ಯಾಯದ ಕಡೆಯ ವಾಕ್ಯವು ಮುಂದಿನ ಬುದ್ಧಿವಾದಗಳನ್ನು ದಾಖಲಿಸಿರುವದು: “ನೀವು ನನ್ನಲ್ಲಿದ್ದು ಮನಶ್ಯಾಂತಿಯನ್ನು ಹೊಂದಿದವರಾಗಿರ ಬೇಕೆಂದು ಇದನ್ನೆಲ್ಲಾ ನಾನು ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟವುಂಟು; ಆದರೆ ಧೈರ್ಯವಾಗಿರಿ, ನಾನು ಲೋಕವನ್ನು ಜಯಿಸಿದ್ದೇನೆ.” ಯೇಸುವು ಈ ಮಾತುಗಳನ್ನು ಹೇಳಿ ಆಕಾಶದ ಕಡೆಗೆ ಕಣ್ಣುಗಳನ್ನೆತ್ತಿ ತನ್ನ ಶಿಷ್ಯರಿಗಾಗಿ ಹೀಗೆ ಪ್ರಾರ್ಥಿಸಿದ್ದನು: ”ನಾನು ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ; ನಿನ್ನವರಾಗಿ–ದ್ದಾರೆ. ನನ್ನದೆಲ್ಲಾ ನಿನ್ನದೇ, ನಿನ್ನದೆಲ್ಲಾ ನನ್ನದೇ; ಮತ್ತು ಇವರಿಂದ ನನಗೆ ಮಹಿಮೆ ಉಂಟಾಗಿದೆ. ಇನ್ನು ನಾನು ಲೋಕದಲ್ಲಿ ಇರುವದಿಲ್ಲ, ಇವರು ಲೋಕದಲ್ಲಿ ಇರುತ್ತಾರೆ, ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ... ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು.”

ನಮ್ಮ ಕರ್ತನ ಇಡೀ ಜೀವಿತವು ಒಂದು ನಿದರ್ಶನವನ್ನು ಒದಗಿಸಿಕೊಡುತ್ತದೆ; ಅಪೋಸ್ತಲನು ಅದನ್ನು ಸಭೆಯವರೆಲ್ಲರಿಗೆ ಈ ಮುಂದಿನ ಮಾತುಗಳಲ್ಲಿ ಪ್ರಸಂಶಿಸಿ ಹೇಳಿದ್ದಾನೆ: “ಎಡೆಬಿಡದೆ ಪ್ರಾರ್ಥಿಸಿರಿ.” ನಮ್ಮ ಕರ್ತನು ಯಾವಾಗಲೂ ಹೃದಯದಲ್ಲಿ ಈ ಪ್ರಾರ್ಥನಾ ಮನೋಭಾವವುಳ್ಳವನಾಗಿರುತ್ತಿದ್ದನು. ಅದು ತನ್ನ ಜೀವನದ ಆಗುಹೋಗುಗಳೆಲ್ಲವುಗಳ ಬಗ್ಗೆ ತಂದೆಗೆ ಕೃತಜ್ಞತಾಪೂರ್ಣವಾಗಿ ಆತನ ಪೋಷಣಾ ಪರಿಪಾಲನೆಯನ್ನು ಗುರುತಿಸುವಂತಾಗಿ ಆತನಲ್ಲಿ ಭರವಸೆಯಿಟ್ಟು ಆತನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿಯೊಂದು ಸಂಕಟದ ಪರಿಸ್ಥಿತಿಯಲ್ಲಿಯೂ ಉಂಟಾದ ಆ ಅನುಭವಗಳೆಲ್ಲವೂ ಒಳಿತಾಗುವಂತೆ ಮಾರ್ಪಡಿಸುವ ಸಲುವಾಗಿ ಆತನನ್ನು ಎದುರು ನೋಡುತ್ತಿರು–ವದು. ಆದರೆ ನಮ್ಮ ಕರ್ತನಲ್ಲಿದ್ದ ಸತತವಾಗಿ ಎಡಬಿಡದೆ ಪ್ರಾರ್ಥಿಸುವಂಥ ಮನೋಭಾವವು ಜೀವಿತದ ಆಗುಹೋಗು–ಗಳಿಂದ ತಿರುಗಿಕೊಂಡು ತಂದೆಯೊಡನೆ ಏಕಾಂತವಾಗಿ – ಕೆಲವು ಸಮಯದಲ್ಲಿ ಸಂಕ್ಷೇಪವಾಗಿ, ಅಲ್ಲದೆ ಕೆಲವು ಸಮಯಗಳಲ್ಲಿ ಇಡೀ ರಾತ್ರಿಯ ಪರ್ಯಂತರವಾಗಿ–ಮಾತನಾಡುವಂಥ ಆತನ ಇನ್ನೂ ಬಹು ನಿಖರವಾದ ಶ್ರದ್ಧಾಭಕ್ತಿಗಳಿಗೆ ಅಡ್ಡಿಯುಂಟು–ಮಾಡಿರಲಿಲ್ಲ. ಆತನು ತನ್ನ ಶಿಷ್ಯರನ್ನು ಪ್ರೀತಿಸುತ್ತಿದ್ದರೂ ಅವರು ಇನ್ನೂ ಪವಿತ್ರಾತ್ಮನಿಂದ ಹುಟ್ಟಿದವರಾಗಿಲ್ಲದ ಕಾರಣ ಅವರು ಆತನ ದೃಷ್ಟಿಯಿಂದ ಸಂಗತಿಗಳನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ತಂದೆಯು ಮಾತ್ರವೇ ಪೂರ್ಣವಾಗಿ ಪರಿಸ್ಥಿತಿಯನ್ನು ಗ್ರಹಿಸಿಕೊಳ್ಳುವ ಶಕ್ತಿಯುಳ್ಳವನಾಗಿದ್ದರಿಂದ ನಮ್ಮ ಕರ್ತನು ಮಾನವರೆಲ್ಲರ ಸಹಾಯ ಹೊಂದುವದರಿಂದ ತನ್ನನ್ನು ಪೂರ್ಣವಾಗಿ ಪ್ರತ್ಯೇಕಿಸಿಕೊಂಡಂಥದ್ದು ಪ್ರಾರ್ಥನೆಯಲ್ಲಿ ತನ್ನನ್ನು ತಂದೆಯ ಬಳಿಗೆ ಹತ್ತಿರಹತ್ತಿರ ಹಾಗು ಪದೇಪದೇ ಬರುವಂತೆ ಮಾಡುತ್ತಿತ್ತು.

ಹೀಗೆಯೇ ಇರುವದು ಅಥವಾ ಹೀಗಿಯೇ ಇರಬೇಕು ಕರ್ತನ ಹಿಂಬಾಲಕರ ಸಂಗತಿ. ನಾವು ಆತನ ಗುಣದ ಹೋಲಿಕೆಯಲ್ಲಿ ಬೆಳೆಯುವಷ್ಟರ ಪ್ರಮಾಣದಲ್ಲಿ ನಾವು ಹೀಗೆಯೇ ಎಡೆಬಿಡದೆ ಪ್ರಾರ್ಥಿಸುತ್ತಾ ಸರ್ವ ವಿಷಯದಲ್ಲಿಯೂ [ದೇವರ ಮುಂದೆ] ಕೃತಜ್ಞತಾಸ್ತುತಿಯನ್ನು ಮಾಡುವವರಾಗಿ ನಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ ನಮ್ಮ ನಿರೀಕ್ಷೆ ಆಕಾಂಕ್ಷೆ ಹಾಗು ಸಂತೋಷಗಳಿಗೆ ಆತನೇ ಕೇಂದ್ರಬಿಂದುವಾಗಿರುವನೆಂಬುದನ್ನು ಮನನಮಾಡಿಕೊಳ್ಳುವೆವು. ಹಾಗು ಇದೇ ರೀತಿಯಲ್ಲಿ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತ–ವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರುವಂಥ ಬಹು ಔಪಚಾರಿಕವಾದ ಸೌಭಾಗ್ಯವನ್ನು ಬಳಸಿಕೊಳ್ಳುವೆವು. ಇದೇ ರೀತಿಯಲ್ಲಿ ಸಹ ಕೆಲವೊಂದು ಸಾರಿ ಲೋಕರೀತಿಯಲ್ಲಿ ಇಲ್ಲವೇ ಆತ್ಮಿಕ ರೀತಿಯಲ್ಲಿ ಸಂಬಂಧಿಸಿದ ನಮ್ಮ ಪ್ರೀಯರು ನಮ್ಮ ಶ್ರಮಾನುಭವಗಳಲ್ಲಿ ನಮ್ಮೊಡನೆ ಸಹಾನುಭೂತಿಯುಳ್ಳ–ವರಾಗಿರಲು ಅಶಕ್ತರಾಗಿರುವಷ್ಟರ ಪ್ರಮಾಣದಲ್ಲಿ ನಾವು ಇಂಥಾ ಲೌಕೀಕವಾದ ಸಹಾನುಭೂತಿ ಹೊಂದಲಾಗದಂಥ ಸನ್ನಿವೇಶಗಳಿಂದ ಪ್ರಯೋಜನವನ್ನು ಪಡೆಯಬಹುದು. ಇಂಥಾ ಸನ್ನಿವೇಶಗಳಲ್ಲಿನ ಶ್ರಮಾನುಭವಗಳು ನಮ್ಮನ್ನು ಹೆಚ್ಚು ಬಾರಿ ಪರಲೋಕದಿಂದ ಸಂತೈಸುವವಾತನ ಬಳಿಗೆ ಕೊಂಡೊಯ್ಯುತ್ತವೆ; ನಾವು ಆತನಿಂದ ಹೆಚ್ಚಾದ ಸಂತೋಷಾನಂದಗಳನ್ನು ಪಡೆದುಕೊಳ್ಳುತ್ತೇವೆ.

## ಸಭೆಗೋಸ್ಕರ, ಲೋಕಕ್ಕಾಗಿಯಲ್ಲ

ಇತರ ಎಲ್ಲೆಡೆ ಇರುವ [ಪವಿತ್ರಾತ್ಮ] ಪ್ರೇರಿತವಾದ ವಾಕ್ಯದಲ್ಲಿರುವ ಪ್ರಕಾರವೇ ಈ ಪ್ರಾರ್ಥನೆಯಲ್ಲಿಯೂ ಸಭೆಯ ಹಾಗು ಲೋಕದ ನಡುವೆ ಇರುವ ಒಂದು ಸೂಕ್ಷ್ಮವಾದ ವೈವಿಧ್ಯತೆಯನ್ನು ತೋರಿಸಿಕೊಡಲಾಗಿರುವದು. ಇದನ್ನು ಕಾಣದಿರುವಂಥವರಿಗೆ ಒಂದು ದೊಡ್ಡ ನಷ್ಟವುಂಟಾಗುವದು; ಯಾಕಂದರೆ ಇದು “ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸಲು

[ವಿಭಾಗಿಸಲು]" ಅದ್ಭುತ ರೀತಿಯಲ್ಲಿ ಸಹಾಯ ಮಾಡುವದು. "ದೇವರು ಲೋಕವನ್ನು ಎಷ್ಟೋ ಪ್ರೀತಿಮಾಡಿ.." ಯೇಸುವು "ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇಬೇಕಾಗಿದ್ದು" ಹಾಗು ಲೋಕದ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದನು, ಆದರೂ ಆತನು ಲೋಕಕ್ಕೆ ಸಂಬಂಧಿಸಿದವನಾಗಿರಲಿಲ್ಲ ಅಲ್ಲದೆ ಆತನ ಶಿಷ್ಯರಾಗು–ವಂಥವರೂ ಲೋಕದವರಾಗಿರುವದಿಲ್ಲ. "ನಾನು ಲೋಕದವ –ನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ." ಸಭೆ ಹಾಗು ಲೋಕದ ನಡುವೆ ಇರುವ ಸ್ಪಷ್ಟವಾದ ವೈವಿಧ್ಯತೆಯನ್ನು ತಿಳಿದುಕೊಳ್ಳುವಂಥದ್ದು ಇಲ್ಲದೆ ಹೋಗಿರುವದು ನಿಜವಾದ ಕ್ರೈಸ್ತತ್ವಕ್ಕೆ ಒಂದು ಗಾಢವಾದ ಪೆಟ್ಟಾಗಿರುವದು.

ಲೋಕದವರು [ದೇವರ] ಕೆಲವು ವಾಗ್ದಾನಗಳು, ಪದ್ಧತಿ ಹಾಗು ಆಚರಣೆಗಳನ್ನು ಸ್ವತಃ ತಾವೂ ಆಚರಿಸುವಂಥವರಾಗಿ ಸಭೆಯ ಗುಣ ವಿಶೇಷತೆಯನ್ನು ಹೆಚ್ಚು ಕಡಿಮೆ ಹೋಲುವಂತೆ ಅಥವಾ ನಕಲಾಗಿ ಮಾಡಿಕೊಂಡಿದ್ದು, ಇದನ್ನು ನಾಗರಿಕತೆ ಎಂದು ಕರೆಯಲಾಗಿರುವದು. ಮತ್ತು ಹೀಗಾಗಿ ಲೋಕದ ಒಂದು ದೊಡ್ಡ ಪಾಲು ಜನರನ್ನು ಸಭೆಯ ಒಂದು ಭಾಗವೆಂದು ಈದಿನದಲ್ಲಿ ತಪ್ಪಾಗಿ ಮಾನ್ಯಮಾಡಲಾಗಿರುವದು. ಇದು ಅವರ ಅನಾನುಕೂಲಕ್ಕಾಗಿಯೇ ಆಗಿರುವದು; ಯಾಕಂದರೆ ಸಭೆಯಾಗುವಂಥವರು ಪವಿತ್ರಾತ್ಮನಿಂದ ಮತ್ತೆ ಅಂಕುರಿಸಲ್ಪಡುವ –ವರಾಗಬೇಕೆಂಬುದನ್ನು ಮತ್ತು ಪುನರುತ್ಥಾನದಲ್ಲಿ ಅವರು [ಪವಿತ್ರಾತ್ಮದಿಂದ] ಮತ್ತೆ ಹುಟ್ಟಿದವರಾಗುವರು ಎಂಬುದನ್ನು ಕಂಡುಕೊಳ್ಳಲಾಗದವರು ಕೇವಲ ತಮ್ಮನ್ನು ತಾವೇ ಮೋಸ ಪಡಿಕೊಂಡಿರುವರು. ತಮ್ಮಲ್ಲಿರುವ ನೂತನ ಸ್ವಭಾವವು ಶಾರೀರಿಕ ಬಲಹೀನತೆಗಳ ವಿರುದ್ಧವಾಗಿ ಹೋರಾಟ ಮಾಡಬೇಕಿದ್ದು ನಿಜವಾದ ಸಭೆಯಾಗಿರುವ ಕರ್ತನ ನಿಜವಾದ ಹಿಂಬಾಲಕರಿಗೆ–ತಮ್ಮಲ್ಲಿರುವ ಶರೀರಭಾವವು ಸಾಮಾನ್ಯವಾಗಿರುವ ಆಚಾರ ಪದ್ಧತಿಗಳ ಪ್ರಕಾರ ತಮ್ಮನ್ನು ಸಮರ್ಥಿಸಿ ಕೊಳ್ಳುವಂಥದ್ದು ಹಾಗು ಸಾಮಾನ್ಯ ಮಟ್ಟದ ಆಚಾರ ಪದ್ಧತಿಗಳನ್ನು ಮೀರಿ ಹೋಗುವಂಥದನ್ನು ಮತಾಂಧತೆಯೆಂದು ಅತಿರೇಕವೆಂದು ಹೇಳುವದು ಅಂಥವರ ಅನಾನುಕೂಲಕ್ಕಾಗಿಯೇ ಇರುವದು. ಕರ್ತನು ಹಾಗು ಅಪೋಸ್ತಲರಿಂದ ನಿಗಧಿತವಾದ ಮಟ್ಟವು ಅಂದರೆ ಮರಣಪರ್ಯಂತರವಾಗಿ ತಮ್ಮನ್ನು ನಿರಾಕರಿಸಿ ಕೊಂಡಂಥ ಯೇಸುವಿನ ಹಾಗೂ ಅಪೋಸ್ತಲರ ಜೀವಿತಗಳ ನಿದರ್ಶಗಳ ಮೂಲಕವಾಗಿ ನಿಗಧಿಯಾದ ಮಟ್ಟಕ್ಕೆ ಬರುವಂಥಾ–ಗಲು ಕರ್ತನ ಜನರು ಲೋಕದ ದೃಷ್ಟಿಯಲ್ಲಿ ಹಾಗು ಹೆಸರಿನ ಕ್ರೈಸ್ತರ ದೃಷ್ಟಿಯಲ್ಲಿ ಅತಿರೇಕಿಗಳೆಂದು ನಿರ್ಣಯಿಸಲ್ಪಡ ಬೇಕಿರುವದೆಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು.

ನಮ್ಮ ಕರ್ತನು ಲೋಕಕ್ಕಾಗಿ ಪ್ರಾರ್ಥನೆಮಾಡಿರಲಿಲ್ಲ, ಯಾಕಂದರೆ ಕರ್ತನಿದ್ದ ಸಮಯದಲ್ಲಿ ಲೋಕದೊಡನೆ ವ್ಯವಹರಿಸುವಂಥ ಕಾಲವು ಇನ್ನೂ ಬಂದಿರಲಿಲ್ಲ; ಕ್ರಿಸ್ತನ ದೇಹವಾಗಿರುವ ಸಭೆಯನ್ನು ಆದುಕೊಳ್ಳುವದು ಪೂರ್ಣವಾಗುವ ವರೆಗೂ ಅದು ಸಂಭವಿಸುವಂಥದಲ್ಲ. ಆತನು ಅಪೋಸ್ತಲರಿ–ಗೋಸ್ಕರ ಅತಿ ವಿಶೇಷವಾಗಿ ಪ್ರಾರ್ಥನೆಮಾಡಿದ್ದನು, ಯಾಕಂದರೆ ಲೋಕದಲ್ಲಿ ಅವರು ಮುಂದೆ ಕರ್ತನಿಗೆ ವಿಶೇಷ ಪ್ರತಿನಿಧಿಗಳಾಗಲಿರುವಂಥವರು, ಅಲ್ಲದೆ ಆತನು ಮಾಡಿದ ಪ್ರಾರ್ಥನೆಯು ಆ ಸಮಯದ ವರೆಗೆ ತಮ್ಮ ಪ್ರಾಮಾಣಿಕವಾದ ಹೃದಯಗಳ ಮೂಲಕವಾಗಿ ಆತನನ್ನು ನಂಬಿದ ಐನೂರು ಮಂದಿಗಳೆಲ್ಲರನ್ನು ಸಹ ಒಳಗೊಂಡದ್ದಾಗಿತ್ತು. ಅದು ಮಾತ್ರವಲ್ಲದೆ (ವಚನ 20ರ ಪ್ರಕಾರ) ಆತನು ಮಾಡಿದ ವಿಜ್ಞಾಪನೆಯು [ಸುವಾರ್ತಾ]ಯುಗದ ಪರ್ಯಂತರವಾಗಿ ಇರುವ ಇದೇ ವಿಧವಾದ ವರ್ಗದವರೆಲ್ಲರನ್ನು ಒಳಗೊಂಡಿತ್ತು. ಆತನ ಮೇಲೆ ಅವರು ಎಷ್ಟು ಸಂಪೂರ್ಣವಾಗಿ ಹಾಗು ಪ್ರಾಮಾಣಿಕವಾಗಿ ನಂಬಿಕೆ ಇಡಬೇಕಿತ್ತೆಂದರೆ ಅವರ ಆ ನಂಬಿಕೆಯು ಅವರನ್ನು ಆತನ ಶಿಷ್ಯರನ್ನಾಗಿ ಅಂದರೆ ಆ ಇಕ್ಕಟ್ಟಾದ ಮಾರ್ಗದಲ್ಲಿ ಅದೇ ಸತ್ಯದಲ್ಲಿ ನಡೆಯುವ ಹಿಂಬಾಲಕರನ್ನಾಗಿ ಮಾಡುವ ಸಲುವಾಗಿ ಅವರನ್ನು ಲೋಕದಿಂದ ಪ್ರತ್ಯೇಕಿಸುವಂಥದ್ದಾಗಿರಬೇಕು.

## ಆತನು ಪ್ರಾರ್ಥಿಸದೇ ಇದ್ದದ್ದು ಯಾವುದಕ್ಕಾಗಿ

ನಾವು ಈ ದಿನದ ಲೋಕವನ್ನು ದೃಷ್ಟಿಸಿ ನೋಡಿ ಹೆಸರಿನ ಕ್ರೈಸ್ತರ ಒಂದು ಅಭಿಪ್ರಾಯವನ್ನು ಹಿಡಿದುಕೊಂಡವರಾಗಿ ನಂಬಿದವನಾದ ಹೆಸರಿನ ಕ್ರೈಸ್ತನ ಸ್ಥಾನವನ್ನು ಆತನ ತೋರಿಕೆಯ ಅಭಿಪ್ರಾಯವನ್ನು ಹಿಡಿದುಕೊಂಡು ಆನಂತರದಲ್ಲಿ ಕರ್ತನು ಈಗಿನ ಸಂಗತಿಗಳ ಬಗ್ಗೆ ಮಾಡಿದ್ದ ಪ್ರಾರ್ಥನೆಯನ್ನು ಕಲ್ಪಿಸಿಕೊಂಡಲ್ಲಿ ಆತನ ಪ್ರಾರ್ಥನೆಯು ಈ ಯಾವದೋ ಒಂದು ಬಗೆಯಲ್ಲಿ ಇರುತ್ತಿತ್ತು:

ನನ್ನ ಹಿಂಬಾಲಕರು ಬಹು ಸಂಖ್ಯೆಯಲ್ಲಿರುವವರಾಗಿದ್ದು ಅವರು ಬಹು ಐಶ್ವರ್ಯವುಳ್ಳವರೂ ಹೆಚ್ಚು ವಿಧ್ಯಾವಂತರೂ ಆಗಿ ಲೋಕದಲ್ಲಿ ಗಣ್ಯತೆಗೆ ಬರಬೇಕೆಂದು ಪ್ರಾರ್ಥಿಸುತ್ತೇನೆ. ಅವರು ದೊಡ್ಡ ಪಂಗಡಗಳಾಗಿ ವಿಂಗಡಿಸಲ್ಪಟ್ಟು, ಕೆಲವರು ಸತ್ಯದ ಒಂದು ತುಣುಕನ್ನು ಮತ್ತು ಕೆಲವರು ಮತ್ತೊಂದನ್ನು ಹಿಡಿದುಕೊಂಡ ವರಾಗಿ ಅದನ್ನು ಹೊಂದಾಣಿಕೆಯಿಲ್ಲದ ತಪ್ಪಿನೊಡನೆ ಅಧಿಕವಾಗಿ ಬೆರಸಿಕೊಂಡಂಥವರಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಪ್ರಾರ್ಥಿಸುವದೇನಂದರೆ ಗಣ್ಯತೆಗೆ ಬಂದ ಒಂದು ವರ್ಗವಿದ್ದು ಅದು ಆತ್ಮ ಸಂತೃಪ್ತಿಯುಳ್ಳದ್ದಾಗಿ ಬಾಹ್ಯಾಚಾರಗಳ ಪ್ರಕಾರವಾದ ಭಯಭಕ್ತಿಯನ್ನು ಹೊಂದಿದ್ದಾಗಿದ್ದು ಅದನ್ನು ಎಪಿಸ್ಕೋಪಲರ ದೆಂದು [ಬಿಷೋಪರ ಅಧೀನದಲ್ಲಿರುವದೆಂದು] ಕರೆಯಲ್ಪಡ ಬೇಕೆಂಬದೇ. ಗಣ್ಯವ್ಯಕ್ತಿಗಳುಳ್ಳ ಇನ್ನೊಂದು ವರ್ಗವಿದ್ದು ಅದು ವೆಸ್ಟ್–ಮಿನಿಸ್ಟರ್ ಎಂಬುವ ನಂಬಿಕೆಯ ಸೂತ್ರವನ್ನು ಅರಿಕೆಮಾಡುವದಾಗಿ ಅಲ್ಲದೆ 1902ನೆ ಇಸವಿಯ ನಂತರದಲ್ಲಿ ಅದರ ನಂಬಿಕೆಯ ಬಗ್ಗೆ ಸಂಕ್ಷೇಪಕರವಾದ ಒಂದು ಅರಿಕೆಯನ್ನು [ಮೊದಲಿನದಕ್ಕೆ] ಪೂರಕವಾಗಿ ಅಂಗೀಕಾರ ಮಾಡಿಕೊಂಡಿರ –ಬೇಕೆಂದೂ, ಇದರ ಪರಿಣಾಮವಾಗಿ ಅವು ಪರಸ್ಪರ ತದ್ವಿರುದ್ಧವಾಗಿರಬೇಕೆಂದು ನಾನು ಪ್ರಾಥಿಸುತ್ತೇನೆ. ವೆಸ್ಲಿಯೆಂಬುವರ ನೇತೃತ್ವದಲ್ಲಿನ ದೊಡ್ಡ ಒಡಕುತೊಡಕುಗಳುಳ್ಳ ಮತ್ತೊಂದು ಗುಂಪು ಇದ್ದು ಅದು ತನ್ನ ಭಕ್ತಿಯ ವಿಷಯದಲ್ಲಿ ಅನೇಕ ಲೌಕೀಕ ಪದ್ಧತಿಗಳನ್ನು ಮಿಶ್ರಣಮಾಡಿಕೊಂಡು

ಬಹಳವಾಗಿ ವೃದ್ಧಿಗೆ ಬಂದು ವರುಷದಲ್ಲಿನ ಪ್ರತಿಯೊಂದು ದಿನದಲ್ಲಿಯೂ ಒಂದೊಂದು ಸಭೆಯನ್ನು ಕಟ್ಟುವದಾಗಿ ಕೊಚ್ಚಿಕೊಳ್ಳುವಂಥದ್ದಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ನನ್ನ ಹಿಂಬಾಲಕರಲ್ಲಿ ಮತ್ತೊಂದು ದೊಡ್ಡ ಪಂಗಡ ಅಥವಾ ಗುಂಪಿದ್ದು ಅದು ನನ್ನ ಹೆಸರನ್ನು ತೆಗೆದುಕೊಂಡದ್ದಾಗಿ ಲೂಥರ್ ಎಂಬುವವರನ್ನು ಅನುಸರಿಸುವವರಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ರೋಮನ್ ಕೆಥೋಲಿಕರ ದೊಡ್ಡ ಸಭೆಯಿದ್ದು ಅದು ನನ್ನ ರಾಜ್ಯವಾಗಿರುವದೆಂದು ಹೇಳಿಕೊಂಡು ಲೋಕದ ಸಾಮ್ರಾಜ್ಯಗಳ ಮೇಲೆ ಅಧಿಕಾರ ಘನತೆ ಗೌರವಗಳ ಮೂಲಕವಾಗಿ ಆಳ್ವಿಕೆಮಾಡುತ್ತಾ ಅದು ಲೋಕದಲ್ಲಿನ ಆತ್ಮಿಕ ಸಂಗತಿಗಳ ವಿಷಯದಲ್ಲಿ ಚಕ್ರಾಧಿಪತ್ಯವನ್ನು ಪಡೆದುಕೊಂಡು ಈತನು [ಈ ಚಕ್ರಾಧಿಪತಿಯು] ತನ್ನ ಮುಖ್ಯಸ್ಥನೂ ಪ್ರತಿನಿಧಿಯೂ ಆಗಿರುವನೆಂದು ಹೇಳಿಕೊಳ್ಳಬೇಕೆಂಬುದಾಗಿ ನಾನು ಪ್ರಾರ್ಥಿಸುತ್ತೇನೆ. ಯುಕ್ತಿಯುಳ್ಳ ಕಾರ್ಯನೀತಿಯ ಮೂಲಕವಾಗಿ ನನ್ನ ವಾಕ್ಯವು ಜನಸಾಮಾನ್ಯರಿಗೆ ತಲುಪದಂತೆ ನೋಡಿಕೊಂಡು ಅದು [ಆ ಕಾರ್ಯನೀತಿಯು] ಪಾಪನಿವಾರಣೆಗಾಗಿರುವ ನನ್ನ ಮಹಾ ಯಜ್ಞಾರ್ಪಣೆಯನ್ನು ಮಾಸ್ ಎಂಬ ಅಸಂಖ್ಯಾತವಾದ ಯಜ್ಞಾರ್ಪಣೆಗಳ ಮೂಲಕವಾಗಿ ಪ್ರತಿನಿಧಿಸಬೇಕೆಂಬು–ದಾಗಿಯೂ ಅಲ್ಲದೆ ಅದು ವೃದ್ಧಿಗೆ ಬಂದು "ಪರಾತ್ಪರನಾದ ದೇವರ ಭಕ್ತರನ್ನು ಸವೆಸುವಂಥದ್ದು" ಆಗಿರಬೇಕೆಂದು ಪ್ರಾರ್ಥಿಸುತ್ತೇನೆ.

ನಾನು ಮತ್ತೂ ಪ್ರಾರ್ಥಿಸಿಕೊಳ್ಳುವದೇನಂದರೆ ಚಿಕ್ಕಚಿಕ್ಕ ಪಂಗಡಗಳೂ ಅಲ್ಲದೆ ಗುಂಪುಗಳು ಹಾಗು ಒಡಕುಗಳೂ ಇದ್ದು ಅವು ವೃದ್ಧಿಗೆ ಬರಬೇಕೆಂದೂ, ಅವುಗಳಲ್ಲಿ ಪ್ರತಿಯೊಂದೂ ತಾವು ಸತ್ಯವನ್ನು ಹೊಂದಿರುವದಾಗಿ ಅಲೋಚಿಸಿಕೊಂಡು ತಮ್ಮ ನಂಬಿಕೆಯ ಸೂತ್ರದಲ್ಲಿ ಸಂತೃಪ್ತರಾಗಿ ಸತ್ಯವೇದವನ್ನು ಹುಡುಕಿ ಆ ಮೂಲಕವಾಗಿ ಮಾರ್ಗವೂ ಜೀವವೂ ಸತ್ಯವೂ ಆಗಿರುವಾತನನ್ನು ತಿಳಿದುಕೊಳ್ಳಲು ಅಡ್ಡಿಯನ್ನು ಉಂಟುಮಾಡುತ್ತಿರುವಂಥದ್ದೂ ಆಗಿರಬೇಕೆಂಬದೇ. ಇವುಗಳೆಲ್ಲವೂ ಹೀಗೆ ಚದುರಿಸಲ್ಪಟ್ಟು ಪ್ರತ್ಯೇಕಗೊಂಡು ಪ್ರತಿಯೊಂದು ತಮ್ಮತಮ್ಮ ಮಧ್ಯದಲ್ಲಿ ಬೇಲಿಗಳನ್ನು ಹಾಕಿಕೊಂಡಿರಬೇಕೆಂತಲು ಪ್ರಾರ್ಥಿಸುತ್ತೇನೆ. ಇಷ್ಟೇ ಅಲ್ಲದೆ ಅವು ಕೇವಲ ತಮ್ಮನ್ನು ಪ್ರತ್ಯೇಕಿಸಿಕೊಂಡಿರುವ ಸಲುವಾಗಿ ಪಂಗಡಗಳ ವ್ಯವಸ್ಥೆಯನ್ನು ಮಾಡಿಕೊಂಡಿರುವದು ಮಾತ್ರವಲ್ಲದೆ ಜೊತೆಯಲ್ಲಿ ರಾಜಕೀಯ ವ್ಯವಸ್ಥೆಯನ್ನು ಹಾಗು ಜನಾಂಗೀಯ ಪೂರ್ವಾಗ್ರಹವನ್ನು ಹೊಂದಿದವರಾಗಿದ್ದು, ಹೀಗೆ ಒಂದು ಪಂಗಡದ ಅಥವಾ ಜನಾಂಗದ ಲಕ್ಷಾಂತರ ಜನರು ಮತ್ತೊಂದು ಪಂಗಡದ ಇಲ್ಲವೇ ಜನಾಂಗದವರನ್ನು ಬೆದರಿಸಿ ಅವರ ಮೇಲೆ ಯುದ್ಧಮಾಡಿ ಅವರನ್ನು ಸಂಹಾರ ಮಾಡುತ್ತಿರಬೇಕೆಂತಲೂ ಪ್ರಾರ್ಥಿಸುತ್ತೇನೆ. ಅವರ ಮಧ್ಯದಲ್ಲಿರುವ ಈ ಜನಾಂಗೀಯ ತಾರತಮ್ಯಗಳು ಎಷ್ಟು ಉನ್ನತವಾಗಿ ನಡೆಯುತ್ತಿರಬೇಕೆದೆಂದರೆ ಅವರು ಪರಸ್ಪರ ಹೋರಾಡಿಕೊಂಡು ಪರಸ್ಪರ ಹೆದರಿಸುತ್ತಾ ಬೆದರಿಸುತ್ತಾ ಇರುವಂತಾಗಲು ಪ್ರತಿ ವರುಷವೂ ಸೈನ್ಯಗಳಿಗಾಗಿ ಯುದ್ಧಾಯುಧಗಳಿಗಾಗಿ ಮತ್ತು ಯುದ್ಧನೌಕೆಗಳಿಗಾಗಿ ಅವರಿಗೆ ಲಕ್ಷಾಂತರ ಹಣದ ಅಗತ್ಯವಿರಬೇಕೆಂತಲೂ ಪ್ರಾರ್ಥಿಸುತ್ತೇನೆ. ಹೀಗಾಗಿ ನನ್ನ ಬೋಧನೆಯ ಭವ್ಯವಾದ ಪರಿಣಾಮದಿಂದ ಲೋಕದ ಜನಾಂಗಗಳು ಮೋಹಗೊಂಡವರಾಗಿ ಅವರೂ ಒಕ್ಕೊರಲಿನಿಂದ ನಾವೂ ಸಹ ವಿಂಗಡಿಸಲ್ಪಟ್ಟವರೂ ಪಂಗಡಾಭಿಮಾನಿಗಳೂ ಆಗಿರೋಣ ಹಾಗು ನಾವು ಸಹ ಆಯುಧಗಳನ್ನು ಹಿಡಿದು ಹೋರಾಡೋಣವೆಂದು ಹೇಳುವಂಥವರಾಗಬೇಕೆಂದು ಪ್ರಾರ್ಥಿಸುತ್ತೇನೆ. ನಾವೂ ಸಹ ಈ ಕ್ರೈಸ್ತ ಜನಾಂಗಗಳ ಪದ್ಧತಿಗಳನ್ನು ಕಲಿತುಕೊಳ್ಳೋಣ; ಹೀಗೆ ಅವರ ಪಾಶಾಂಡತೆ ಹಾಗು ಕುಡಿಕತನ ಮತ್ತು ವ್ಯಭಿಚಾರ ಇವುಗಳನ್ನು ಮಾಡುವದರಲ್ಲಿ ಕೇವಲ ಅವರು ಏಕ ಮಾತ್ರವೇ ಆಗಿರದಂತೆ ನೋಡಿಕೊಂಡವರಾಗಿ ನಾವುಗಳೂ ಇವುಗಳಲ್ಲಿ ಪಾಲುಗಾರರಾಗಿರೋಣ ಎಂದು ಹೇಳುವಂಥವರಾಗಬೇಕೆಂದು ಪ್ರಾರ್ಥಿಸುತ್ತೇನೆ.

## ನಮ್ಮ ಕರ್ತನು ಪ್ರಾರ್ಥಿಸಿದ್ದು ಯಾವುದಕ್ಕಾಗಿ

ನಮ್ಮ ಕರ್ತನು ಮಾಡಿದ ವಿಜ್ಞಾಪನೆ ಬಹು ಭಿನ್ನವಾಗಿತ್ತು. ತನ್ನ ಶಿಷ್ಯರು ಲೋಕದಲ್ಲಿನ ಅಲ್ಪಸಂಖ್ಯಾತರಲ್ಲಿ ಒಂದು ಸಣ್ಣ ಗುಂಪಿನವರಾಗಿ ಲೋಕದಿಂದ ಹಗೆಮಾಡಲ್ಪಟ್ಟು ಲೋಕದ ವಿರೋಧಕ್ಕೊಳಗಾಗಿ ಲೋಕದವರಿಂದ ಅಪಾರ್ಥಮಾಡಿಕೊಳ್ಳಲ್ಪಟ್ಟವರಾಗಿದ್ದು, ಅವರಲ್ಲಿ ವಿಧ್ಯಾವಂತರು ಅನೇಕರಿಲ್ಲದೆ, ಐಶ್ವರ್ಯವುಳ್ಳವರು ಅನೇಕರಿಲ್ಲದೆ, ಕುಲೀನರು ಅನೇಕರಿಲ್ಲದೆ, ಅವರಲ್ಲಿ ಪ್ರಮುಖವಾಗಿ ಬಡವರಿದ್ದು ಒಟ್ಟಾರೆ ಅವರು ಒಂದು "ಚಿಕ್ಕ ಹಿಂಡು" ಆಗಿರುವರೆಂಬುದನ್ನು ಆತನ ಪ್ರಾರ್ಥನೆಯು ಸೂಚಿಸುತ್ತದೆ. ಯೇಸುವು ವೈಯುಕ್ತಿಕವಾಗಿ ಆದುಕೊಂಡ ಶಿಷ್ಯರ ಗುಣಲಕ್ಷಣಗಳು ನಂತರದಲ್ಲಿ ಆತನ ನಿಜವಾದ ಹಿಂಬಾಲಕ–ರಾಗುವರೆಲ್ಲರಲ್ಲಿಯೂ ಇರಬೇಕೆಂಬುದನ್ನು ಅಪೇಕ್ಷಿಸಲಾಗಿತ್ತು.

ಕ್ರೈಸ್ತ ಜನಾಂಗದ ಹಾಗು ಕ್ರೈಸ್ತ ಪಂಗಡಗಳ ದೊಡ್ಡ ವ್ಯೂಹಗಳಿದ್ದರೂ ಕರ್ತನಿಗೆ "ತನ್ನವರು ಯಾರಾರೆಂಬದು ತಿಳಿದಿರುವದು" ಅಲ್ಲದೆ ಈ ಪ್ರಾರ್ಥನೆಗೆ ಅನುಸಾರವಾಗಿಯೇ ಈ [ಸುವಾರ್ತಾ]ಯುಗದ ಪರ್ಯಂತರ ಆತನು ತನ್ನ ಜನರನ್ನು ಲೋಕದಿಂದ ಪ್ರತ್ಯೇಕಿಸಿರಲಿಲ್ಲ ಆದರೆ ಕೇವಲ ಹೃದಯಗಳಿಗೆ ಸಂಬಂಧಿಸಿದಂತೆ ಅವರನ್ನು ಲೋಕದಿಂದ ಪ್ರತ್ಯೇಕವಾಗಿರುವಂತೆ ಮಾಡಿದ್ದನು–"ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ." ಕೆಟ್ಟತನವನ್ನು ಒಳ್ಳೆಯದೆಂದು ನಾವು ಹೇಳುವದಿಲ್ಲ, ಲೋಕದವರು ಭಕ್ತಿವಂತರಾಗುವರೆಂದು ನಾವು ಹೇಳುವದಿಲ್ಲ; ಲೋಕವು ಈಗಲೂ ಕೆಟ್ಟತನದಲ್ಲಿಯೇ ಇರುವದು. ಇಂದಿನ ಕ್ರೈಸ್ತ ಸಮುದಾಯವು ಕಾರ್ಯತಃ ಕರ್ತನನ್ನು ಶಿಲುಬೆಗೆ ಹಾಕಿಸಿ ಆತನ ಹಿಂಬಾಲಕರನ್ನು ಹಿಂಸಿಸಿದ್ದ ಯೆಹೂದೀ ಜನಾಂಗದಂತೆಯೇ ಇರುವದು.

ಆನಂತರ ಯೆಹೂದ್ಯರ ಪ್ರಮುಖವಾದ ಪಂಗಡವು ತಮ್ಮನ್ನು ದೇವರ ಪವಿತ್ರವಾದ ಜನರೆಂದು (ಫರಿಸಾಯ ಎಂಬ ಪದದ ಅರ್ಥವು ಇದೇ ಆಗಿರುವದು) ಕರೆದುಕೊಂಡಿರುವರು ಮತ್ತು ಇಡೀ ಜನಾಂಗವು ತೋರಿಕೆಗಾಗಿರುವ ಒಂದು ನೈತಿಕತೆಯ ಮಟ್ಟದಲ್ಲಿದ್ದು ಅದನ್ನು ಕರ್ತನು ತನ್ನ ದೃಷ್ಟಿಯಲ್ಲಿ ಒಂದು

ನಾಟಕೀಯವಾಗಿರುವದೆಂದು ಸಾರಿ ಹೇಳಿದ್ದನು. ಆತನು ಅವರ ನಾಯಕರುಗಳನ್ನು ಒಳಗೆ ಹೊಲಸಿನಿಂದ ತುಂಬಿರುವ ಸುಣ್ಣಾ ಹಚ್ಚಿದ ಸಮಾಧಿಗಳೆಂದು ಕರೆದಿದ್ದನು. ಅವರು ಪಂಚ ಪಾತ್ರೆಯ ಹೊರಗೆ ಶುಚಿಮಾಡುತ್ತಾರಾದರೂ ಒಳಗಿರುವ ಅಶುಚಿಯನ್ನು ತೊಳೆಯದೆ ಬಿಟ್ಟಿರುತ್ತಾರೆಂದು ಅವರಿಗೆ ಹೇಳಿದ್ದನು; ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಯನ್ನು ಅಗಲಮಾಡಿಕೊಂಡು ಹೊರಗೆ [ಬೀದಿಗಳಲ್ಲಿ] ಪ್ರಾರ್ಥನೆ ಮಾಡುತ್ತಾರೆ, ಆದರೆ ಅವರ ಹೃದಯವು ಪರಿಶುದ್ಧತೆ ಅಥವಾ ಪ್ರೀತಿಗಳಿಂದ ಬಹು ದೂರವಾಗಿರುತ್ತದೆ– ಅದು ಎಷ್ಟರ ಮಟ್ಟಿಗೆ ದೂರ ಹೋಗಿರುವದೆಂದರೆ ಅವರ ಕೃತ್ಯವು ಧರ್ಮಶಾಸ್ತ್ರದ ಬಾಹ್ಯಾಚಾರ ಪದ್ಧತಿಯು ಅನುಮತಿ ನೀಡುವಂತಾಗಿ ಹಾಗು ಅದು ಅತಿಯಾದ ತೆಗಳಿಕೆಯನ್ನು ತರುವದಿಲ್ಲವೆಂದಾದಲ್ಲಿ ಅವರು ಒಬ್ಬ ಬಡ ವಿಧವೆಯ ಮನೆಯನ್ನು ಅನ್ಯಾಯವಾಗಿ ತೆಗೆದುಕೊಳ್ಳಲೂ ಇಚ್ಛಿಸುವಂಥವರಾಗಿದ್ದರು. (ಮತ್ತಾಯ 23: 14, 23–28) ಈದಿನದಲ್ಲೂ ಇದು ಬಹುವಾಗಿ ಇದೇ ರೀತಿಯಲ್ಲಿಯೇ ಇರುತ್ತದೆ; ಅದು ಬಾಹ್ಯಕಾಂತಿ ಅಥವಾ ಹೊರಲೇಪನ ಉಳ್ಳದ್ದಾಗಿ ಅನೇಕ ಸಂಗತಿಗಳಲ್ಲಿ ಕಪಟತನದಿಂದ ಕೂಡಿದ ಒಂದು ಬಹ್ಯಾಚಾರದ ಆರಾಧನೆಯಾಗಿದ್ದು, ತುಟಿಗಳಿಂದ ಹತ್ತಿರವಾದರೂ ಹೃದಯದಲ್ಲಿ ಆತನಿಂದ [ದೇವರಿಂದ] ದೂರವಾಗಿರುವದು; ಅದು ಅತಿಯಾದ ಪಾಪಗಳಿಂದ ಕೂಡಿಲ್ಲದಿದ್ದರೂ ವೇಷವೈಖರಿಗಳಲ್ಲಿಯೂ ವಿಲಾಸವಿನೋದ ಮತ್ತು ಹಣಗಳಿಕೆಯ ಪೂಜೆಗಳಲ್ಲಿಯೂ ನಿರತವಾಗಿರುವದು.

ನಮ್ಮ ಕರ್ತನು ಪ್ರಾರ್ಥಿಸಿದ್ದದ್ದೇನಂದರೆ ತನ್ನ ನಿಜವಾದ ಹಿಂಬಾಲಕರು ಪರಲೋಕದ ಶಕ್ತಿಯ ಮೂಲಕವಾಗಿ ಇಂಥ ಪರಿಸ್ಥಿತಿಗಳಿಂದ ತಪ್ಪಿಸಿ ಕಾಪಾಡಲ್ಪಡಬೇಕೆಂಬದೇ ಅಂದರೆ ಅವರಿಗೆ ಸಹಾನುಭೂತಿ ತೋರದೆ ಅವರಲ್ಲಿ ಸೇರಬಾರದೆಂಬದು. ಇದು ಈ ಸುವಾರ್ತಾಯುಗದ ಪರ್ಯಂತರಕ್ಕೂ ನಿಜವಾಗಿರು –ವದೆಂಬದು ನಮ್ಮ ನಂಬಿಕೆ. ಕರ್ತನ ಪ್ರಾರ್ಥನೆಯು ಈಡೇರಿಸಲ್ಪಟ್ಟಿರುವದೆಂದು ಹಾಗು ನಿಜವಾದ ದ್ರಾಕ್ಷೆಬಳ್ಳಿಯಾಗಿ ಚದರಿಕೊಂಡಿರುವ ಚಿಕ್ಕ ಹಿಂಡು ಹೃದಯಗಳಲ್ಲಿ ಆತ್ಮಿಕವಾಗಿ ಅಭಿವೃದ್ಧಿಹೊಂದಿ ಲೋಕದ ಒಂದು ಭಾಗವಾದ ಹೆಸರಿನ ಕ್ರಿಸ್ತೀಯ ವ್ಯವಸ್ಥೆಯಿಂದ ಸಂಪೂರ್ಣವಾಗಿ ಮುಕ್ತವಾಗಿರುವ ಒಂದು ಪ್ರತ್ಯೇಕವಾದ ಜೀವಿತವನ್ನು ಸಾಗಿಸಿಕೊಂಡು ಬರುತ್ತಿರುವರೆಂಬುದನ್ನು ನಾವು ನಂಬಿರುತ್ತೇವೆ. ಇದೇ ಸಂಗತಿ ಈದಿನದಲ್ಲಿಯೂ ನಿಜವಾಗಿದ್ದು, ಈ ಸುವಾರ್ತಾಯುಗದಲ್ಲಿ ಲೋಕದಲ್ಲಿರುವಂಥವರಾದ ಇವರು ಲೋಕಾನುಸಾರಿಗಳಾಗಿರದೆ ಬಾಬೇಲಿನಿಂದ ಹೊರಬರಲು ಕರೆಯಲ್ಪಡುತ್ತಿವರು, "ನನ್ನ ಪ್ರಜೆಗಳೇ ಅವಳನ್ನು ಬಿಟ್ಟುಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಿರದೆ ಅವಳಿಗುಂಟಾಗುವ ಉಪದ್ರವಗಳಿಗೆ ಗುರಿಯಾಗಬಾರದು." ಆದರೆ ಬಾಬೇಲನ್ನು ಬಿಟ್ಟು ಹೊರಬರುವ ಅವಕಾಶ ನೀಡಲಾದಾಗ, ಅಲ್ಲಿಂದ ಹಿಂದಿರುಗಿದ ಇಸ್ರಾಯೇಲ್ಯರ ಸಂಖ್ಯೆಯು ಕೇವಲ ಸುಮಾರು 50,000 ಆಗಿತ್ತು. ಇದರಂತೆಯೇ ತಪ್ಪುಗಳಿಗೆ ಸಂಬಂಧಿಸಿದ ವಿಷಯಗಳ ಜನಪ್ರಿಯತೆ ಹಾಗು ಸತ್ಯಕ್ಕೆ ಸಂಬಂಧಿಸಿದ ವಿಷಯಗಳ ಅಪ್ರಸಿದ್ಧತೆ ಇವುಗಳನ್ನು ಕರ್ತನು ಹೇಗೆ ಹೊಂದಿಸಿರುವನೆಂದರೆ: ತಮ್ಮದೆಲ್ಲವನ್ನು ತ್ಯಜಿಸಿ ಕೊಂಡವರಾಗಿ ಸತ್ಯನೀತಿಯನ್ನು ಅನುಸರಿಸಲು ಸಂತೋಷಿಸಿ ಅದಕ್ಕೆ ಸಿದ್ಧರಾಗಿರುವವರ ಸಂಖ್ಯೆಯು ಅತ್ಯಲ್ಪವಾಗಿರುವದೆಂಬುದನ್ನು ಇಲ್ಲಿ ನಾವು ನಿರೀಕ್ಷಿಸಬಹುದು.

## "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು"

ಈ ಪ್ರಾರ್ಥನೆಯು ಮುಂದುವರೆದು ಎರಡು ಸಂಗತಿಗಳನ್ನು ತೋರಿಸಿಕೊಡುವದು–ಮೊದಲನೇದಾಗಿ, ಕರ್ತನ ಹಿಂಬಾಲಕರು ಹೇಗೆ ಕಾಪಾಡಲ್ಪಡುವರೆಂಬದು ಹಾಗು ಎರಡನೆಯದಾಗಿ ಅವರು ಏಕೆ ಕಾಪಾಡಲ್ಪಡುವರೆಂಬದು.

(1) ಅವರು ಕಾಪಾಡಲ್ಪಡುವದು ಅವರು ಲೋಕದವರಲ್ಲದೆ ಇರುವ ಕಾರಣಕ್ಕಾಗಿ, ಅವರು ಕರ್ತನ ಕಡೆಗೆ ಖಚಿತವಾದ ನಡೆಯನ್ನು ತೆಗೆದುಕೊಂಡಿರುವದರ ಕಾರಣಕ್ಕಾಗಿ, ಅಲ್ಲದೆ ಅವರು ಲೋಕಕ್ಕಾಗಿ ಮತ್ತು ಪಾಪಕ್ಕಾಗಿ ತಮ್ಮನ್ನು ಸತ್ತವರಂತೆ ಎಣಿಸಿಕೊಂಡು ಪವಿತ್ರಾತ್ಮನಿಂದ ಮತ್ತೆ ಹುಟ್ಟಿದವರಾಗಿ ಹೊಸ ಜೀವಿತವನ್ನು ಪಡೆದಿರುವ ಕಾರಣಕ್ಕಾಗಿರುವದು.

(2) ತಮ್ಮ ಹೃದಯಗಳಲ್ಲಿರುವ ಸತ್ಯ ಬಲದ ಮೂಲಕವಾಗಿ ಅವರು ಲೋಕದಲ್ಲಿ ಇದ್ದರೂ ಲೋಕದವರಾಗಿ ಇರುವದಿಲ್ಲ. ಸತ್ಯವು ಅವರನ್ನು ಶುದ್ಧೀಕರಿಸಿ ಪ್ರತ್ಯೇಕಿಸುವದು; ಇದು ಯಾವುದೋ ಸತ್ಯಾರ್ಥದ ಮೂಲಕವಾಗಿಯಲ್ಲ, ಇದು ಎಲ್ಲಾ ವಿಧದ ಸತ್ಯಾರ್ಥಗಳ ಮುಖಾಂತರವಾಗಿಯೂ ಅಲ್ಲ, ಆದರೆ ಆ ಸತ್ಯಾರ್ಥದ ಮೂಲಕವಾಗಿಯೇ ಆಗಿರುವದು; ಅದೇನಂದರೆ ದೇವರ ಗುಣಲಕ್ಷಣ ಹಾಗು ದೇವರ ಯೋಜನೆಯ ಸಂಬಂಧವಾಗಿ ದೇವರು ಪ್ರಕಟಮಾಡಿದ ಸತ್ಯಾರ್ಥ ಹಾಗು ಇದರೊಂದಿಗೆ ಅವರಿಗೆ ಇರುವ ಸಂಬಂಧದ ಮೂಲಕವಾಗಿರುವದು. ಇವೆಲ್ಲವುಗಳ ತಿರುಳಾಗಿ ಕರ್ತನು ನುಡಿರುವದು– "ನಿನ್ನ ವಾಕ್ಯವೇ ಸತ್ಯವು"; ಇದು ಮಾತ್ರವೇ ನನ್ನ ಶಿಷ್ಯರನ್ನು ಶುದ್ಧೀಕರಿಸಿ ಅವರನ್ನು ಲೋಕದಿಂದ ಬೇರ್ಪಡಿಸುವಂಥದು.

ಈ "ಧರ್ಮಬೋಧೆ" ಲೋಕದ ಎಲ್ಲಾ ಕಡೆಗಳಲ್ಲಿಯೂ ಹಾಗು ಹೆಸರಿನ ಸಭೆಯಲ್ಲಿಯೂ ಬಹು ಅಪ್ರಿಯವಾಗಿರುವ –ದೆಂದು ನಮಗೆ ತಿಳಿದಿರುವದು. ಆಶ್ಚರ್ಯವೇನಿಲ್ಲ! ಕ್ರೈಸ್ತ ಸಾಮ್ರಾಜ್ಯದ ಹಲವಾರು ಪಂಗಡ ಹಾಗು ಪಂಥಗಳ ಮತಭೋದನೆಗಳು ಹಾಗು ನಂಬಿಕೆಯ ಸೂತ್ರಗಳು ತಪ್ಪಿನೊಂದಿಗೆ ಎಷ್ಟು ಬೆರೆತುಹೋಗಿ ಆತ್ಮಿಕ ಮನಸ್ಸುಳ್ಳವರ ಆತ್ಮಿಕ ಗ್ರಹಿಕೆಯ ಮೇಲೆ ಎಷ್ಟು ಆಕ್ರಮಣ ನಡೆಸಿರುವದೆಂದರೆ ಅದು ತಮ್ಮ [ಆತ್ಮಿಕ] ಭೋಜನದ ಮೇಜಿನ ಮೇಲಿರುವ ಇಂಥಾ ಸಂಗತಿಗಳಲ್ಲಿ ಪಾಲುತೆಗೆದುಕೊಳ್ಳುವದರಲ್ಲಿ ಸಂತೋಷಿಸಲು ಅವರಿಗೆ ಸಾಧ್ಯವಾಗದಂತೆ ಮಾಡಿರುವದು. ಪ್ರವಾದಿಯು ಈ ಸಂಗತಿಯ ಬಗ್ಗೆ ವರ್ಣನೆಮಾಡಿ ಹೀಗೆ ನುಡಿದಿರುವನು– "ಮೇಜುಗಳೆಲ್ಲವೂ ವಾಂತಿಯಿಂದ ತುಂಬಿರುವದು"; ಜ್ಞಾನಾಂಧಕಾರದ ಯುಗದಲ್ಲಿ ರೂಪುಗೊಂಡ ಪ್ರತಿಯೊಂದು ನಂಬಿಕೆಯ ಸೂತ್ರಗಳು ಈದಿನದಲ್ಲಿ ಅವಶ್ಯವಾಗಿ ಜಿಗುಪ್ಸೆ ಹುಟ್ಟಿಸುವಂಥದ್ದಾಗಿರುವದು. ಆದರೆ ಸತ್ಯ ಅಂದರೆ "ನಿನ್ನ ವಾಕ್ಯವೇ ಸತ್ಯವು" ಎನ್ನುವದು ಎಂದಿಗೂ ನೀರಸವಾಗುವದಿಲ್ಲ,

ಎಂದಿಗೂ ಹಳಸಿದಂತಾಗಲೀ ಇಲ್ಲವೇ ಆಕ್ರಮಣಕಾರಿಯಾಗಲೀ ಆಗದೇ ಅದು ಇಂದಿಗೂ ಪರಲೋಕದಿಂದ ಇಳಿದುಬರುವ ರೊಟ್ಟಿಯಾಗಿ ಸಜೀವ ವಾಕ್ಯವಾಗಿದ್ದು, ಅದನ್ನು ಸತ್ಯಪರರೆಲ್ಲರೂ ಅಂದರೆ ಕ್ರಿಸ್ತನಲ್ಲಿ ಕೇವಲ ಶಿಶುಗಳಾಗಿರದೆ ಆತನ ವಾಕ್ಯವೆಂಬ ರೊಟ್ಟಿಯಲ್ಲಿ ಪಾಲುತೆಗೆದುಕೊಳ್ಳುವದರ ಮೂಲಕವಾಗಿ ಮನನ ಮಾಡಿಕೊಂಡು, ಅಂದರೆ ಹಾಲನ್ನು ಉಣಿಸುವ ಎದೆಗಳಿಂದ ಎಳೆಯಲ್ಪಟ್ಟು ಸ್ತನ್ಯಪಾನದಿಂದ ತಪ್ಪಿಸಿಕೊಂಡವರಾಗಿ ಅಭಿವೃದ್ಧಿ ಹೊಂದುತ್ತಿರುವವರೆಲ್ಲರೂ ದೇವರ ಯೋಜನೆಯ ವಿಷಯವಾದ ಕಥೆಯ ಬಗ್ಗೆ ಕವಿಯೊಂದಿಗೆ ಕೂಡಿಕೊಂಡು ಹೀಗೆ ಹೇಳಲು ಸಾಧ್ಯವಾಗುವದು,

## "ಬೇರಾವದೂ ನೀಡಲಾಗದಂಥಾ ರೀತಿಯಲ್ಲಿ ಇದು ನನ್ನ ಹಂಬಲಿಕೆಯನ್ನು ಥಣಿಸಿರುವದು"

ಸತ್ಯವು ಹೃದಯವನ್ನು ಶುದ್ಧೀಕರಿಸುವ ಶಕ್ತಿಯನ್ನು ಹೊಂದಿರುವದು ಯಾಕಂದರೆ ಅದು ಹೃದಯದ ಹಂಬಲಿಕೆ–ಯನ್ನು ಪೂರ್ಣಗೊಳಿಸುವದು. ಪ್ರತಿಯೊಂದು ಹೃದಯವೂ ತಲಾಂತು [ಸಾಮರ್ಥ್ಯ] ಹಾಗು ಬೇಡಿಕೆಗಳನ್ನು ಹೊಂದಿದ್ದು ಇವುಗಳನ್ನು ಕಾರ್ಯಾಚರಣೆಗೆ ತರಲು ಚಟುವಟಿಕೆ ಆಗ್ರಹಿಸುವದು. ಮನಸ್ಸಿನ ಈ ಅನೇಕ ವಿಧವಾದ ಸಾಮರ್ಥ್ಯ ಹಾಗು ಗುಣಲಕ್ಷಣಗಳ ಬಯಕೆಗಳನ್ನು ಈಡೇರಿಸಲು ಕೆಲವೊಂದನ್ನು ಒದಗಿಸಬೇಕು. ಈ ಹಂಬಲಿಕೆ ಇಲ್ಲವೇ ತೀವ್ರವಾದ ಬಯಕೆಗಳನ್ನು ಹೊಂದಿರುವ ಹೃದಯದಲ್ಲಿ ದೇವರ ವಾಕ್ಯದಲ್ಲಿನ ಉತ್ಕೃಷ್ಟವೂ ಅಮೂಲ್ಯವೂ ಆಗಿರುವ ಈ ವಾಗ್ದಾನ–ಗಳು ಸ್ವೀಕರಿಸಲ್ಪಡದೆ ಇದ್ದಲ್ಲಿ ಅದು ಬೇರೆ ವಿಧವಾದವುಗಳಿಂದ ಪೋಷಿಸಲ್ಪಡುವದು; ಅಲ್ಲದೆ ಲೋಕ ಶಾರೀರಿಕಭಾವ ಮತ್ತು ವಿರೋಧಿಯಾದ ಸೈತಾನ ಇವೆಲ್ಲವೂ ಅದರ ಮೇಲೆ ಕಿಕ್ಕಿರಿದು ಆವರಿಸಿಕೊಂಡು ಹಲವಾರು ಆಕರ್ಷಣೆಗಳನ್ನು ಒಡ್ಡಿರುವರು. ಹೃದಯವು [ಯಾವುದನ್ನಾದರೂ ಸ್ವೀಕರಿಸಿಕೊಂಡು] ಪೂರ್ಣವಾಗದೆ ಇದ್ದರೆ ಇವುಗಳಲ್ಲಿ ಯಾವುದಾದರೂ ಕೆಲವು ಸ್ವೀಕರಿಸಲ್ಪಡುವವು. ನಮ್ಮ ಕರ್ತನ ಸಾಮ್ಯವು ಹೀಗೆ ಸೈತಾನನನ್ನು ಹೊರದೂಡಿ ಅದನ್ನು ಚೆನ್ನಾಗಿ ಗುಡಿಸಿ ಅಲಂಕರಿಸಲ್ಪಟ್ಟು, ಇನ್ನೂ ಅದರಲ್ಲಿ ವಾಸವಿಲ್ಲದೆ ಆನಂತರದಲ್ಲಿ ಏಳು ದೆವ್ವಗಳು ಮತ್ತೆ ಸೇರಿಕೊಂಡಿದ್ದ ಒಂದು ಹೃದಯವನ್ನು ಸೂಚಿಸುವದು. ನಮ್ಮ ಹೃದಯಗಳಲ್ಲಿ ಕೇವಲ ನೀತಿ ನಿರ್ಣಯದ ಮೂಲಕವಾಗಿ ಜೀವವನ್ನು ಪಡಕೊಂಡು ನಮ್ಮ ಪಾಪಗಳಿಂದ ಶುದ್ಧೀಕರಿಸಲ್ಪಡುವದು ಅವಶ್ಯವಾಗಿರುವದು ಮಾತ್ರವಲ್ಲದೆ ಅದು ಕರ್ತನಿಂದ ತುಂಬಲ್ಪಡುವದು ಸಹ ಅಗತ್ಯವಿರುವದು. ತಾನೇ ಸತ್ಯವಾಗಿರುವೆನೆಂದು ಹೇಳಿದ ಕರ್ತನು ನಮ್ಮ ಹೃದಯಗಳಿಗೆ ಹಲವಾರು ಸತ್ಯಾರ್ಥಗಳನ್ನು ಆಹಾರ ವನ್ನಾಗಿ ಒದಗಿಸಿಕೊಟ್ಟು, ಅದನ್ನು ಪೋಷಿಸುವನು; ನಮ್ಮ ಹೃದಯಗಳನ್ನು ಪೂರ್ಣಗೊಳಿಸಿ ನಮ್ಮ ಹಂಬಲಿಕೆಗಳನ್ನು ಈಡೇರಿಸುವನು; ಅಲ್ಲದೆ ಹೀಗೆ ನೀತಿಗಾಗಿ ಹಸಿದು ಬಾಯಾರಿದ ವರನ್ನು ಶುದ್ಧೀಕರಿಸುವನು ಅಲ್ಲದೆ ಹೀಗೆ ಅವರನ್ನು ಸಂಪೂರ್ಣ ವಾಗಿ ಪ್ರತ್ಯೇಕಮಾಡಿ ಅವರನ್ನು ಲೋಕದಿಂದ ಅದರ ಭಾವನೆಗಳಿಂದ, ಅದರ ನಿರೀಕ್ಷೆಗಳಿಂದ ಅದರ ಧ್ಯೇಯೋದ್ದೇಶ ಗಳಿಂದ ಅದರ ಆಕಾಂಕ್ಷೆಗಳಿಂದ ಬೇರ್ಪಡಿಸಿ ಕಾಯುವನು.

## ದೇವರು ನೇಮಿಸಿದ ಸಮಯದಲ್ಲಿ ತೋರಲಾಗುವ ದೇವರ ಶಕ್ತಿ

ನಾವು ನೀತಿಯ ವಿಷಯದ ಮೇಲಿನ ಪ್ರೀತಿಯನ್ನು ಹೊಂದಿರುವೆವೋ? ಅದನ್ನು ಲೋಕದಲ್ಲಿ ಕಂಡುಕೊಳ್ಳಲು ಸಾಧ್ಯವಿರುವದಿಲ್ಲ, ಇಲ್ಲವೇ ಈಗಿನ ಪರಿಸ್ಥಿತಿಯಲ್ಲಿ ಅದನ್ನು ದೃಢೀಕರಿಸಿಕೊಳ್ಳುವದನ್ನು ನಿರೀಕ್ಷಿಸಲು ಸಾಧ್ಯವಿರುವದಿಲ್ಲ. ದೇವರ ರಾಜ್ಯಕ್ಕಿಂತಲೂ ಕಡಿಮೆಯಿರುವ ಯಾವುದರಿಂದಲೂ ನೀತಿ ಸ್ಥಾಪನೆಯಾಗುವದಿಲ್ಲವೆಂಬುದನ್ನು ಒಪ್ಪಿಕೊಳ್ಳುವದು ನಮಗೆ ಅನಿವಾರ್ಯವಾಗುತ್ತದೆ. ಹೀಗಾಗಿ ನೋಹನು ಕಳುಹಿಸಿದ ಪಾರಿವಾಳದಂತೆ ನೀತಿಯ ಕೇಂದ್ರವೂ ಅದರ ಬುಗ್ಗೆಯೂ ಆಗಿರುವ ಕರ್ತನ ಬಳಿಗೆ ನಮ್ಮ ಹೃದಯಗಳು ಹಿಂದಿರುಗಬೇಕಾ ಗುತ್ತದೆ. ಸಂತೋಷ ಸಮಾಧಾನಗಳನ್ನು ನಾವು ಬಯಸುತ್ತಿರು –ವೆವೋ? ಲೋಕವು ಸಂತೋಷವನ್ನು ಬಯಸುತ್ತಿದ್ದರೂ ಅದನ್ನು ಕಂಡುಕೊಂಡಿರುವದಿಲ್ಲವೆಂಬುದನ್ನು ಲೋಕದಲ್ಲಾದ ನಮ್ಮ ಹಿಂದಿನ ಅನುಭವಗಳು ನಮಗೆ ಮನವರಿಕೆಮಾಡಿಕೊಡುತ್ತವೆ. ಕರ್ತನನ್ನು ಕಂಡುಕೊಂಡವರಾದ ನಾವು ಸಂತೋಷದ ಗುಟ್ಟನ್ನು ಅಂದರೆ ಪ್ರತಿಯೊಂದು ದಿನವನ್ನೂ ಒಂದು ಸಂತೋಷಕರವಾದ ದಿನವನ್ನಾಗಿ ಮಾಡಿಕೊಳ್ಳುವ ಕ್ರೈಸ್ತರ ಗುಟ್ಟನ್ನು ಕಂಡುಕೊಂಡವರಾಗಿದ್ದೇವೆ. ಒಳ್ಳೆಯದನ್ನು ಮಾಡುವದಕ್ಕಾಗಿ ಪ್ರಯೋಗಿಸುವಂಥ ಶಕ್ತಿಪ್ರಭಾವಗಳಿಗಾಗಿ ನಾವು ಹಂಬಲಿಸು –ವೆವೋ? ಅದನ್ನು ಈಗಿನ ಪರಿಸ್ಥಿತಿಯಲ್ಲಿ ಕಂಡುಕೊಳ್ಳಲು ಅಸಾಧ್ಯವೆಂಬುದನ್ನೂ, ಆದರೆ ನಾವು ನಂಬಿಗಸ್ತರಾಗಿದ್ದಲ್ಲಿ ಮೊದಲನೇ ಪುನರುತ್ಥಾನದಲ್ಲಿ ನಾವು ಬಲ ಪ್ರಭಾವ ಮಾನ ಮತ್ತು ನಿರ್ಲಯತ್ವಗಳನ್ನು ಪಡಕೊಳ್ಳುವದನ್ನೂ ಮತ್ತು ಆನಂತರದಲ್ಲಿ ಭೂಲೋಕದ ಎಲ್ಲಾ ಕುಲಗಳಿಗೆ ಉಂಟಾಗಲಿರುವ ದೇವರ ರಾಜ್ಯದ ಆಶೀರ್ವಾದಗಳಲ್ಲಿ ನಮ್ಮ ಭವ್ಯವಾದ ನಿರೀಕ್ಷೆ ಹಾಗು ಆದರ್ಶಗಳು ಕೈಗೂಡುವದೆಂದು ಸತ್ಯವಚನಗಳು ಭರವಸೆ ನೀಡಿರುವದು. ಐಶ್ವರ್ಯಗಳು ನಮಗೆ ಆಕರ್ಷಕವಾಗಿ ತೋರುತ್ತವೆಯೋ? ಸತ್ಯವೇದ ವಾಕ್ಯಗಳು ನಮಗೆ ನಿಜವಾದ ಐಶ್ವರ್ಯವನ್ನು ಕೊಡುವಂಥದಾಗಿದ್ದು, ಕರ್ತನನ್ನು ಹಿಂಬಾಲಿಸುವಲ್ಲಿ ಎಲ್ಲಾ ಸಂಗತಿಗಳು ಈಗ ನಂಬಿಕೆಯ ಮೂಲಕ ನಮ್ಮದಾಗಿರುವದಾಗಿಯೂ ಹಾಗು ಕಡೆಗೆ ಪರಲೋಕ ರಾಜ್ಯದಲ್ಲಿ ನಮ್ಮ ಕರ್ತನಿಗೆ ನಾವು ಸಹಕಾರಿಗಳಾದಾಗ ಅವು ನಿಜವಾಗಿಯೂ ನಮ್ಮದಾಗುವದೆಂಬ ಭರವಸವನ್ನು ಅದು ನಮಗೆ ನೀಡಿರುವದು.

"ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಸಹ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು." ಎಂದು ನಮ್ಮ ಕರ್ತನು ಸಾರಿ ಹೇಳಿರುವನು. ತಂದೆಯು ಹೇಗೆ ಮಗನನ್ನು ಕಳುಹಿಸಿರು ವನೆಂಬುದು ಬಹು ಸ್ಪಷ್ಟವಾಗಿರುವದು; ಅದೇನಂದರೆ ಮಗನು ಲೋಕ ಉಂಟಾಗುವದಕ್ಕೆ ಮೊದಲೇ ತಂದೆಯ ಬಳಿಯಲ್ಲಿ ತನಗೆ ಇದ್ದ ಮಹಿಮೆಯನ್ನು ಬಿಟ್ಟು ಶರೀರಧಾರಿಯಾಗಿ ನಮ್ಮ ಮಧ್ಯದಲ್ಲಿ ವಾಸಿಸಿದನು; ಆದರೆ ಲೋಕದವರಾಗಿ ಹುಟ್ಟಿರುವಂಥ ನಾವು ಯಾವ ಅರ್ಥದಲ್ಲಿ ಲೋಕಕ್ಕೆ ಕಳುಹಿಸಲ್ಪಟ್ಟಿದ್ದೇವೆ? ವಾಸ್ತವದಲ್ಲಿ ಅಪೋಸ್ತಲರು ಲೋಕಕ್ಕೆ ಹಿಂದೊಮ್ಮೆ ವಿಶೇಷವಾಗಿ ಕಳುಹಿಸಲ್ಪಟ್ಟಿದ್ದರು, ಆದರೆ ಕರ್ತನ ಹಿಂಬಾಲಕರೆಲ್ಲರೂ ಒಂದು

ಅರ್ಥದಲ್ಲಿ ಅಥವಾ ಒಂದು ಹಂತದಲ್ಲಿ ಕಳುಹಿಸಲ್ಪಟ್ಟಿರುವರು. ನಾವು ಹೃದಯದಲ್ಲಿಯೂ ಹಾಗು ಸತ್ಯದಲ್ಲಿಯೂ ಆತನವರಾಗುವ ಸಲುವಾಗಿ ಲೋಕದಿಂದ ಬೇರ್ಪಡಿಸಿ–ಕೊಳ್ಳುವವರೆಗೂ ನಾವು ಕಳುಹಿಸಲ್ಪಟ್ಟವರಾಗುವದಿಲ್ಲ. ಆನಂತರದಲ್ಲಿ ಆತನು ನಮಗೆ ಒಂದು ಕಾರ್ಯಭಾರ ಅಥವಾ ಒಂದು ಸಂದೇಶವನ್ನು ಕೊಟ್ಟಿರುವನು, ಅದೇನಂದರೆ ಲೋಕದಲ್ಲಿ ಆತನ ಹೆಸರಿನಲ್ಲಿನ ಹಾಗು ಆತನು ಪ್ರತಿನಿಧಿಸುವ ಧ್ಯೇಯದ ಪರವಾಗಿ ಅಂದರೆ ನೀತಿಯ ವಿಷಯವಾದ ಧ್ಯೇಯೋದ್ದೇಶದ ಪರವಾಗಿ ಕಾರ್ಯನಿರ್ವಹಿಸುವಂಥದೇ. ಹೀಗಿರುವಾಗ ಕರ್ತನ ನಿಜವಾದ ಹಿಂಬಾಲಕರು ಯೇಸುವಿನ ಪ್ರತಿನಿಧಿಗಳಾಗಿ ದೇವರ ರಾಯಭಾರಿಗಳಾಗಿರುವರು. ಆತನು ಲೋಕದಲ್ಲಿ ಇದ್ದಂತೆಯೇ ನಾವೂ ಲೋಕದಲ್ಲಿ ಇರುತ್ತೇವೆ; ಹೀಗಾಗಿ ನಾವು ಬೆಳಕಿನ ಮಕ್ಕಳಾಗಿ ನಡೆಯುವವರಾಗುವಂತೆಯೂ, ನಮ್ಮಲ್ಲಿರುವ ಪಾಪವನ್ನು ವಿರೋಧಿಸುವವರಾಗಿರುವಂತೆಯೂ ಅಲ್ಲದೆ ನಮ್ಮ ಪ್ರಭಾವಬಲಗಳೆಲ್ಲವನ್ನು ಪಾಪಕ್ಕೆ ವಿರುದ್ಧವಾಗಿಯೂ ಮತ್ತು ನೀತಿಸತ್ಯತೆ ಹಾಗು ನ್ಯಾಯವಾದವುಗಳ ಪರವಾಗಿ ಸೂಕ್ತವಾದ ಎಲ್ಲಾ ರೀತಿಯಲ್ಲಿಯೂ ಬಳಸುವಂತೆ ಆತನು ನಮಗೆ ಕರೆ ನೀಡಿರುವನು.

## ಸಭೆಯೊಂದಿಗೆ ಹಂಚಿಕೊಳ್ಳಲಾದ ಮಹಿಮೆ

ನಮ್ಮ ಕರ್ತನು ಮುಂದುವರೆದವನಾಗಿ ಸಾರಿ ಹೇಳಿದ್ದು– "ಇವರು ನಿಜವಾಗಿ [ಸತ್ಯದ ಮೂಲಕವಾಗಿ] ಪ್ರತಿಷ್ಠಿತರಾಗ ಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿ–ಕೊಳ್ಳುತ್ತೇನೆ." ಈ ಹೇಳಿಕೆಯು ಒಂದು ಅಂಶವನ್ನು ತನ್ನೊಂದಿಗೆ ಹೊತ್ತುತಂದಿರುವಂತೆ ತೋರುತ್ತದೆ: ಅದೇನಂದರೆ, ಬೇರೊಂದೆಡೆ ಈ ಪ್ರಾರ್ಥನೆಯಲ್ಲಿ ಸೂಚಿಸಿರುವಂತೆ, ನಮ್ಮ ಕರ್ತನು ಈ ಸಮಯಕ್ಕಾಗಲೇ ತಂದೆಯ ಯೋಜನೆಗಳ ಬಗ್ಗೆ ಒಂದು ಪೂರ್ಣವಾದ ಗ್ರಹಿಕೆಯುಳ್ಳವನಾಗಿದ್ದನೆಂಬದು, ಅಂದರೆ ತನ್ನ ಶಿಷ್ಯರು ದೇವರ ರಾಜ್ಯದಲ್ಲಿ ತನಗೆ ಸಹಬಾಧ್ಯರಾಗಿ ತನ್ನ ಮಹಿಮೆಯಲ್ಲಿ ಪಾಲುಗಾರರಾಗುವ ಉದ್ದೇಶಕ್ಕಾಗಿ ಅವರನ್ನು ಅಭಿವೃದ್ಧಿಪಡಿಸಬೇಕಿತ್ತೆಂಬದೇ. ಇಸ್ರಾಯೇಲ್ಯರಿಗೆ ನ್ಯಾಯತೀರಿ–ಸಲು ಮೋಶೆಯೊಡನೆ ಸಹಕಾರಿಗಳಾಗುವಂತೆ ಎಪ್ಪತ್ತು ಮಂದಿಯನ್ನು ನೇಮಕಮಾಡಿದ್ದು ಮೊದಲ ನೋಟಕ್ಕೆ ಮೋಶೆಯ ಅಧಿಕಾರ ಘನತೆಯು ಸಂಕುಚಿತವಾದಂತೆ ಅಥವಾ ಕುಂದಿಹೋದಂತೆ ತೋರಿದ ಹಾಗೆ ದೇವರ ರಾಜ್ಯದಲ್ಲಿನ ಇಂಥಾ ಒಂದು ಭವ್ಯವಾದ ಪಾಲುಗಾರಿಕೆಯೂ ಮೊದಲಿಗೆ ಯೇಸುವಿನ ಮಹಾ ಪ್ರಭಾವವು ಕಡಿಮೆಯಾದಂತೆ ಕಾಣಬಹುದು.

ಆದರೆ ಛಾಯಾರೂಪದ ಮೋಶೆಯು ಬಹು ಸಾತ್ವಿಕನಾಗಿದ್ದು ಎಲ್ಲಾ ಹಿರಿಯರ ಸೇವಾ ಸಹಕಾರವನ್ನು ಸಂತೋಷದಿಂದ ಸ್ವಾಗತಿಸುತ್ತಾ ಹೀಗೆ ಹೇಳಿದ್ದನು: "ಯೇಹೋವನ ಅನುಗ್ರಹದಿಂದ ಆತನ ಜನರೆಲ್ಲರೂ ಆತ್ಮೀಯವರಗಳನ್ನು ಹೊಂದಿದವರೂ ಪ್ರವಾದಿಸುವವರೂ ಆದರೆ ಎಷ್ಟೋ ಒಳ್ಳೇದು!" (ಅರಣ್ಯಕಾಂಡ 11:29) ಹೀಗೆಯೇ ಕರ್ತನಾದ ಯೇಸುವು ದೇವರ ರಾಜ್ಯದಲ್ಲಿ ತನ್ನೊಡನೆ ಸಹ–ಬಾಧ್ಯರಾಗುವಂತೆ ಸಭೆಯನ್ನು ಆದುಕೊಳ್ಳುವದು ತನ್ನ ಮಹಿಮೆಯನ್ನು ಕುಂದಿಸುವದೆಂದು ಭಾವವಿಸುವದಕ್ಕೆ ಬದಲಾಗಿ, ದೈವೀಕ ಯೋಜನೆಯಲ್ಲಿ ಹೃತ್ಪೂರ್ವಕವಾಗಿ ಸೇರಿಕೊಂಡವನಾಗಿ ತಾನು ಪ್ರಕಟಿಸಿ ಹೇಳಿದ್ದೇನಂದರೆ: ತನ್ನ ಶಿಷ್ಯರು ತಂದೆಯು ನೀಡಲಿರುವಂಥ ಬಹುಮಾನವಾದ ಮಹಿಮೆ ಹಾಗು ಘನತೆಯಲ್ಲಿ ಒಂದು ಪಾಲನ್ನು ತೆಗೆದುಕೊಂಡವರಾಗಿ ತನಗೆ ಸಹ–ಬಾಧ್ಯರಾಗುವಂತಾಗಲು ಅವರು ಸತ್ಯದ ಮೂಲಕವಾಗಿ ತಮ್ಮನ್ನು ಪ್ರತಿಷ್ಠಿಸಿಕೊಂಡವರಾಗಿ, ಅವರಿಗೆ ಉತ್ಕೃಷ್ಟವೂ ಅಮೂಲ್ಯವೂ ಆದ ವಾಗ್ದಾನಗಳನ್ನು ಅನುಗ್ರಹಿಸುವದರ ಮೂಲಕ ಅವರನ್ನು ಈ ಗೌರವಸ್ಥಾನಕ್ಕೆ ಕೊಂಡುತರುವ ಸಲುವಾಗಿ [ಕ್ರಿಸ್ತನು] ತನ್ನನ್ನು ತಾನೇ ಪ್ರತಿಷ್ಠೆಪಡಿಸಿಕೊಂಡು ಆ [ಮಹಿಮಾಘನತೆಯ] ಪದವಿಯ ವೈಶಿಷ್ಟ್ಯತೆಯಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುವದಾಗಿ [ಅಂದರೆ ತಾನು ಅದನ್ನು ಬಿಟ್ಟುಕೊಡುವದಾಗಿ] ಹೇಳಿದ್ದನು. ಇದೇ ಅಭಿಪ್ರಾಯವು ಈ ಮುಂದಿನ ವಾಕ್ಯದಲ್ಲಿ ಸೂಚಿತವಾದಂತೆ ತೋರುತ್ತದೆ (ವಚನ 22,23)–"ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರ–ಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದು ಲೋಕಕ್ಕೆ ತಿಳಿದುಬರುವದು."

ದೇವರ ಪ್ರೀತಿಯು ನಮ್ಮ ಹೃದಯಗಳಲ್ಲಿ ವ್ಯಾಪಿಸಿ–ಕೊಂಡಿದ್ದು ಅದರಲ್ಲಿ ಸ್ವಾರ್ಥಭಾವಕ್ಕೆ ಅವಕಾಶವಿರುವದಿಲ್ಲ; ಅಲ್ಲದೆ ನಮ್ಮ ಪ್ರಿಯ ವಿಮೋಚಕನು ಹೀಗೆಯೇ ಯಾವನಾದರೂ ದೈವ ಸ್ವಭಾವಕ್ಕೆ ಏರಿಸಲ್ಪಟ್ಟು ದೇವರ ರಾಜ್ಯದಲ್ಲಿ ಪಾಲನ್ನು ತೆಗೆದುಕೊಳ್ಳುವ ಬಗ್ಗೆ ಅಸೂಯೆಪಡುವದಕ್ಕೆ ಬದಲಾಗಿ ತಂದೆಗೆ ಮಾಡಿದ ಈ ಪ್ರಾರ್ಥನೆಯಲ್ಲಿ ತನ್ನ ಸಂಪೂರ್ಣವಾದ ಸಮ್ಮತಿಯನ್ನೂ ಹೃದಯಪೂರ್ವಕವಾದ ಸಹಕಾರವನ್ನೂ ಅದನ್ನು ನಿರ್ವಹಿಸುವಲ್ಲಿ ತನಗಿರುವ ಸಂತೋಷವನ್ನು ಪ್ರಕಟಿಸಿ ಹೇಳಿದ್ದನು. ಈಗಾಗಲೇ ಪರಲೋಕದ ಮದಲಿಂಗನಿಗೆ ನಿಶ್ಚಿತಾರ್ಥಮಾಡಲ್ಪಟ್ಟು ಭವಿಷ್ಯತ್ತಿನಲ್ಲಿ ಮದಲಗಿತ್ತಿಯಾಗುವ ನಮಗೆ ಇದು ಎಂಥಾ ಒಂದು ಆಲೋಚನೆಯನ್ನು ನೀಡಿರುವದು. ತನ್ನ ರಾಜ್ಯ, ತನ್ನ ಸಿಂಹಾಸನ, ತನ್ನ ತಂದೆಯ ಪ್ರೀತಿ ಇವುಗಳಲ್ಲಿ ನಮ್ಮನ್ನು ತನ್ನಲ್ಲಿ ಒಂದಾಗಿಸಿಕೊಳ್ಳುವ ಸಲುವಾಗಿ ಈ ದೀನಾವಸ್ಥೆಯಿಂದ ನಮ್ಮನ್ನು ಮೇಲಕ್ಕೆ ತರಲು ಆತನು ಸಂತೋಷವುಳ್ಳವನಾಗಿರುವನು.

ಆಶ್ಚರ್ಯಗಳಲ್ಲಿ ಆಶ್ಚರ್ಯ! ದೇವರ ಕರುಣೆಯು ಕೊನೆಗೊಳ್ಳುವದೆಲ್ಲಿ! ದೇವರು ನೀಡಿದ ಮರಣದಂಡನೆಗೆ ಒಳಗಾದವರಾಗಿ ನಾವು ಪಾಪಿಗಳಾಗಿದ್ದಾಗಲೇ ನಾವು ಪ್ರೀತಿ ಮಾಡಲ್ಪಟ್ಟು ಒಂದು ದೊಡ್ಡ ಬೆಲೆಯ ಮೂಲಕವಾಗಿ ವಿಮೋಚಿಸಲ್ಪಟ್ಟವರಾಗಿದ್ದೇವೆ; ಮತ್ತು ಈಗ ವಿಮೋಚಿಸಲ್ಪಟ್ಟ–ವರಾಗಿ "ಮೇಲಕ್ಕೆ ಬಾ" ಎಂಬ ಪರಲೋಕದಿಂದಾದ ಈ ಸ್ವರವನ್ನು, ಹೌದು, ಸಿಂಹಾಸನದ ಬಳಿಗೆ ಸಹ, ರಾಜಾಧಿರಾಜನೂ ಕರ್ತರ ಕರ್ತನೂ ಆಗಿದ್ದು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನೂ ಆದ ತಂದೆಯ ಏಕ ಮಾತ್ರ ಪುತ್ರನಾಗಿರುವ–

ವನೊಡನೆ ಸಹಬಾಧ್ಯತೆ ಹೊಂದಲು ಕರೆಯಲ್ಪಟ್ಟಿರುವ ಸ್ವರವನ್ನು ನಾವು ಕೇಳಿದ್ದೇವೆ. ದೇವರು ತೋರಿಸಿದ ಈ ದಿವ್ಯವಾದ ಪ್ರೀತಿ ಹಾಗು ನಿಸ್ವಾರ್ಥತೆಯನ್ನು ನಾವು ಯಾವಾಗಲೂ ಮನಸ್ಸಿನಲ್ಲಿ ಇಟ್ಟುಕೊಳ್ಳಲು ಸಾಧ್ಯವಾದಲ್ಲಿ ಇದು ದೇವರ ಪ್ರಿಯ ಕುಮಾರನ ಪ್ರತಿರೂಪಿಗಳಾಗಲು ಪರಿಶ್ರಮಿಸುತ್ತಿರುವವರೆಲ್ಲರ ಮನಸ್ಸಿನಲ್ಲಿ ಒಬ್ಬರ ಮೇಲೆ ಮತ್ತೊಬ್ಬರಿಗೆ ಇರುವ ಪೈಪೋಟಿಯ ಭಾವವನ್ನು ಸಂಪೂರ್ಣವಾಗಿ ಚದುರಿಸಿಬಿಡುವದು. ಕ್ರಿಸ್ತನ ದೇಹದ ಅಂಗಗಳಾದ ಪ್ರತಿಯೊಬ್ಬರ ವಿಷಯವಾದ ಕರ್ತನ ಸೇವೆಯಲ್ಲಿ ಉಪಯುಕ್ತರಾಗಿ ಬೆಳೆದು ಅಭಿವೃದ್ಧಿಯಾಗುವದರಲ್ಲಿ ಇದು ಎಷ್ಟು ಸಂತೋಷವನ್ನು ಉಂಟುಮಾಡುವದು. "ಪ್ರತಿಯೊಬ್ಬನೂ ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ" ಎಂದು ಶಾಸ್ತ್ರವಚನವು ವರ್ಣಿಸಿರುವಂಥ ಭಾವನೆ ಯಲ್ಲಿ ಹೇಗೆ ಹೆಚ್ಚುತ್ತಾ ಬರುವಂತಾಗಬೇಕು. ಒಬ್ಬ ಸಹೋದರನು ಏಳಿಗೆಯಾಗುವದರಲ್ಲಿ, ಆತನು ಸಭೆಯಲ್ಲಿ ಉಪಯುಕ್ತನಾಗಿ ಬೆಳೆಯುವದರಲ್ಲಿ, ದೇವರ ಮತ್ತು ಮನುಷ್ಯರ ಅನುಗ್ರಹದಲ್ಲಿ ಬೆಳೆಯುತ್ತಾಬರುವಂಥದರ ಸಾಕ್ಷಿಪ್ರಮಾಣದಲ್ಲಿ ಅದು ಸಂತೋಷಿಸುವದು. ಕ್ರಿಸ್ತನ ದೇಹದ ಜೊತೆಯ ಅಂಗಗಳು ಏಳಿಗೆ ಯಾಗುವದರಲ್ಲಿ ಸಂತೋಷಿಸುವಂಥವರಿಗೆ ನಮಗೆ ಉತ್ಕೃಷ್ಟವೂ ಭವ್ಯವೂ ಆಗಿರುವ ನಮ್ಮ ಶಿರಸ್ಸಾದವನ ಹೋಲಿಕೆಯಲ್ಲಿ ಬೆಳೆಯುತ್ತಾ ಬರುತ್ತಿರುವರೆಂಬುದಕ್ಕೆ ಹೀಗೆ ಇದು ಮತ್ತೊಂದು ಪ್ರಮಾಣವಾಗಿರುವದು. ಈ ಒಂದು ಮನೋಭಾವವಿಲ್ಲದವರು ಇದಕ್ಕಾಗಿ ಪರಿಶ್ರಮಿಸುವವರಾಗಿ ಇದನ್ನು ಪಡಕೊಳ್ಳುವವರೆಗೂ ಯಾವ ತೃಪ್ತಿಯೂ ಇಲ್ಲದವರಂತೆ ಇರಬೇಕು.

## "ಅವರೆಲ್ಲರೂ ಒಂದಾಗಿರಬೇಕು"

ಲೋಕದಲ್ಲೆಲ್ಲಾ ವಿಸ್ತರಿಸಿಕೊಂಡಿರುವ ವಿಶ್ವಸ್ತ ಮಂಡಲಿ [ಟ್ರಸ್ಟ್] ಹಾಗು ಸಂಯೋಜನಾ ಮನೋಭಾವವು ಸಭೆಗಳನ್ನು ಒಟ್ಟುಗೂಡಿಸುವಲ್ಲಿ, ಪಂಗಡಗಳನ್ನು ಒಂದುಮಾಡುವಲ್ಲಿ, ಪರಿಣಾಮಕಾರಿಯಾಗಿರುವ ಪ್ರತಿಯೊಂದು ಸಂಗತಿಗಳಲ್ಲಿಯೂ ಪ್ರಸರಿಸಿಕೊಂಡಿದ್ದು, ಸಾಧಾರಣವಾಗಿ ಅವು ಧಾರ್ಮಿಕ ಮಹಾ ವಿಶ್ವಸ್ತ ಮಂಡಲಿಗಳನ್ನು ರಚಿಸಲು ಶೀಘ್ರವಾಗಿ ಮುಂದೋಡು–ತ್ತಿರುವದು. ಇದು ಹೀಗೆ ಅಭಿವೃದ್ಧಿಯಾಗುತ್ತಿರುವದು ಕರ್ತನ ನಿಜವಾದ ಪ್ರತಿಷ್ಠಿತ ಜನರಿಗೆ ತೀವ್ರವಾದ ಬೆದರಿಕೆ–ಯೊಡ್ಡುತ್ತಿರುವದಾದರೂ, ಇದು ಅವರ ಆತ್ಮಿಕ ಹಿತಾಸಕ್ತಿಗಳಿಗೆ ಹಾನಿಕರವಾಗಿರುವದಿಲ್ಲ. ಬದಲಾಗಿ ಕರ್ತನ ಚಿಕ್ಕ ಹಿಂಡಿಗೆ ಅದು ಆಶೀರ್ವಾದಕರವಾಗಿ ಪರಿಣಮಿಸಿದ್ದು ಅದರಲ್ಲಿ ಅವರಿಗೆ ಸತ್ಯವೇದ ಬೋಧನೆಗಳಿಗಿರುವ ತಾರತಮ್ಯವನ್ನು ಬಹು ನಿರ್ದಿಷ್ಟವಾಗಿ ತೋರಿಸಿಕೊಡುವಂತಾಗಿ ಅದನ್ನು ದೃಢೀಕರಿಸು ವಂತೆ ಮಾಡಿ ಹೆಸರಿಗಾಗಿರುವ [ಧಾರ್ಮಿಕ] ವ್ಯವಸ್ಥೆಗಳಿಂದ ಅವರನ್ನು ಪೂರ್ಣವಾಗಿ ಪ್ರತ್ಯೇಕವಾಡುವದು, ಅಲ್ಲದೆ ಹಣಜಿಯನ್ನು ಹೊರೆಕಟ್ಟುವಂತೆ ಮಾಡುವದು; ಈ ಮಧ್ಯೆ ಈ ಯುಗವು ಅಂತ್ಯವಾಗುವದಕ್ಕೆ ಮೊದಲು ಈ ಮಹಾ ಬಾಬೇಲೆಂಬುದು ಮುರಿದು ಬೀಳುವದನ್ನು ಸತ್ಯವೇದವು ಸ್ಪಷ್ಟವಾಗಿ ದೃಢೀಕರಿಸಿ ಹೇಳಿರುವಂಥದನ್ನು ಅವರಿಗೆ ತೋರಿಸಿಕೊಡುವದು–ಪ್ರಕಟನೆ 18:21

"ಅವರೆಲ್ಲರೂ ಒಂದಾಗಿರಬೇಕು" ಎಂಬ ನಮ್ಮ ಕರ್ತನ ಪ್ರಾರ್ಥನೆಯು ಈ [ಸುವಾರ್ತಾ] ಯುಗದ ಪರ್ಯಂತರವಾಗಿ ನೆರವೇರುತ್ತಿರುವದು. ನಿಜವಾಗಿಯೂ ಆತನವರಾಗಿರುವ–ವರೆಲ್ಲರೂ ತಂದೆಯೊಡನೆಯೂ ಮತ್ತು ಮಗನೊಡನೆಯೂ ಹೃದಯದಲ್ಲಿ ಐಕ್ಯತೆ, ಉದ್ದೇಶದಲ್ಲಿ ಐಕ್ಯತೆ, ಆತ್ಮದಲ್ಲಿ ಐಕ್ಯತೆಯನ್ನು ಅಂದರೆ ದೈವೀಕವಾದ ಅನ್ಯೋನ್ಯತೆಯನ್ನು ಹೊಂದಿರುವರು; ಅದನ್ನು ಭೂಸಂಬಂಧವಾದ ನಂಬಿಕೆಯ ಸೂತ್ರ ಹಾಗೂ ನಿರ್ಬಂಧಗಳ ಮೂಲಕವಾಗಿ ಉಂಟುಮಾಡಲು ಸಾಧ್ಯವಿರುವದಿಲ್ಲ. ಇದು ಈ ದಿನದಲ್ಲಿಯೂ ಹೀಗೆಯೇ ಇರುವದು ಅಲ್ಲದೆ ನಿಜವಾದ ಕರ್ತನ ಜನರ ನಡುವೆ ಯಾವಾಗಲೂ ಹೀಗೆಯೇ ಇರುವದು. ಅವರು ಸೂಚ್ಯ ಪದಗಳ [ಪಾಸ್ ವರ್ಡ್] ಮೂಲಕವಾಗಲೀ ಇಲ್ಲವೆ ಹಸ್ತಲಾಘವದ ಹಿಡಿತದ ಮೂಲಕವಾಗಲೀ ಅಥವಾ ಸಂಕೇತಗಳ ಮೂಲಕವಾಗಲೀ ಒಬ್ಬರನ್ನೊಬ್ಬರನ್ನು ತಿಳಿದುಕೊಳ್ಳುವದಿಲ್ಲ ಆದರೆ ಅದು ನೀಡುವಂಥ ಹಾಗೂ ಪ್ರತಿಯೊಬ್ಬರಿಂದಲೂ ಗ್ರಹಿಸಿಕೊಳ್ಳಲಾಗುವಂಥ ನಂಬಿಕೆ ಹಾಗು ಪ್ರೀತಿಯ ಸ್ಪರ್ಷದ ಮೂಲಕವಾಗಿ ಅವರು ಒಬ್ಬರನ್ನೊಬ್ಬರು ಅರಿತುಕೊಳ್ಳುವರು. "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು." "ನಾವಂತೂ ಕ್ರೈಸ್ತಸಹೋದರರನ್ನು ಪ್ರೀತಿಸುವವರಾಗಿರುವದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದ್ದೇವೆಂಬದು ನಮಗೆ ಗೊತ್ತಾಗಿದೆ." ನಿಜ, ನಾವಂತೂ ಎಲ್ಲಾ ಮನುಷ್ಯರನ್ನು ಪ್ರೀತಿಸುವವರಾಗಿ ನಮಗೆ ಅವಕಾಶ ದೊರೆತ ಹಾಗೆಲ್ಲಾ ಅವರಿಗೆ ಸೇವೆಮಾಡಲು ಬಯಸುವವರಾಗಿರುವೆವು; ಆದರೆ ಅಪೋಸ್ತಲನು ವಿವರಿಸಿ ಹೇಳಿರುವಂತೆ "ವಿಶೇಷವಾಗಿ ಒಂದೇ ಮನೆಯವ–ರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ" ಅಂದರೆ ಕರ್ತನನ್ನು ಪ್ರೀತಿಸಿ ಆತನ ಅಮೂಲ್ಯವಾದ ರಕ್ತದಲ್ಲಿ ಭರವಸೆಯಿಟ್ಟು ಆತನಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡವರಾಗಿ ತಮ್ಮ ಶಕ್ತ್ಯಾನುಸಾರ–ವಾಗಿ ಅತನ ಚಿತ್ತವನ್ನು ನೆರವೇರಿಸುವವರಾಗಿ, ಅನುದಿನವೂ ಆತನ ಚಿತ್ತವನ್ನು ಇನ್ನೂ ಅಧಿಕವಾಗಿ ತಿಳುಕೊಳ್ಳಲು ಪರಿಶ್ರಮಿಸುವವರನ್ನು ನಾವು ಪ್ರೀತಿಸಿ ಅವರಿಗೆ ಸೇವೆಮಾಡಲು ಬಯಸುವವರಾಗಿದ್ದೇವೆ.

ಕರ್ತನ ಜನರೊಡನೆ ಇರುವ ಐಕ್ಯತೆಯು ವ್ಯಕ್ತಿಗಳಾಗಿ ಒಂದಾಗಿರುವಂಥದಲ್ಲವೆಂಬದು ಸ್ಪಷ್ಟ. ಕರ್ತನ ಹಿಂಬಾಲಕರು ವ್ಯಕ್ತಿಗಳಾಗಿ ಅಲ್ಲ ಆದರೆ ಆತ್ಮಿಕವಾಗಿ ಒಂದಾಗಿರುವರು. ಈ ಐಕ್ಯತೆಯು ತನಗೂ ಹಾಗು ತಂದೆಗೂ ನಡುವೆ ಇರುವಂಥ–ದೆನ್ನುವದಕ್ಕೆ ಕರ್ತನು ಈ ನಿದರ್ಶನವನ್ನು ನೀಡಿರುವನು. ಅದೇನಂದರೆ ಅವರು ವ್ಯಕ್ತಿಗಳಾಗಿ ಒಬ್ಬರಾಗಿರುವದಿಲ್ಲ, ಆದರೆ ಮನೋಭಾವದಲ್ಲಿ ಉದ್ದೇಶದಲ್ಲಿ ಚಿತ್ತದಲ್ಲಿ ಒಂದೇ ಆಗಿರುವರು; ಇದು ನಮ್ಮ ಕರ್ತನು ತನ್ನ ಹಾಗೂ ತಂದೆಯ ನಡುವೆ ಇರುವ ಐಕ್ಯತೆಗೆ ನೀಡಿರುವ ಒಂದು ನಿದರ್ಶನ, ಅಂದರೆ ಅವರು ವ್ಯಕ್ತಿಗಳಾಗಿ ಒಬ್ಬರೇ ಆಗಿರುವಂಥವರಲ್ಲ ಆದರೆ ಮನೋಭಾವ ಉದ್ದೇಶ ಚಿತ್ತಗಳನ್ನು ಹೊಂದಿರುವಲ್ಲಿ ಒಂದಾಗಿರುವರೆಂಬದೇ. ನಮ್ಮ ಕರ್ತನು ತಾನು ಯಾವಾಗಲೂ ತಂದೆಯ ಚಿತ್ತವನ್ನು ನೆರವೇರಿಸುವವನಾಗಿರುವನೆಂದು ಅಂದರೆ ತಂದೆಯ ದೃಷ್ಟಿಯಲ್ಲಿ

ಮೆಚ್ಚಿಗೆಯಾಗಿರುವಂಥ ಸಂಗತಿಗಳನ್ನು ನೆರವೇರಿಸುವವ–ನಾಗಿರುವನೆಂದು ಸಾರಿ ಹೇಳಿರುವನು. ಮತ್ತು ನಾವು ಹೀಗೆಯೇ ಕರ್ತನ ಚಿತ್ತವನ್ನು ನೆರವೇರಿಸುವದರ ಮೂಲಕವಾಗಿ ಆತನ ಪ್ರೀತಿಯಲ್ಲಿ ಮತ್ತು ಆತನಲ್ಲಿ ನೆಲೆಗೊಂಡಿರುವೆವು; ಆ ಚಿತ್ತವು ತಂದೆಯ ಚಿತ್ತವೂ ಆಗಿರುವದು. ಹೀಗೆ ತಂದೆ ಮತ್ತು ಮಗನು ಮತ್ತು ಮದಲಗಿತ್ತಿಯಾದ ಸಭೆ ಇವರೆಲ್ಲರೂ ಆತ್ಮದಲ್ಲಿ [ಮನೋಭಾವದಲ್ಲಿ] ಹಾಗು ಸತ್ಯದಲ್ಲಿ ಒಂದೇ ಆಗಿರುವರು.

## ಕ್ರಿಸ್ತನೊಡನೆ ಆತನ ಮಹಿಮೆಯಲ್ಲಿ ಪಾಲನ್ನು ಹೊಂದುವದು

"ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ." (ವಚನ 24) ಎಂಬ ನಮ್ಮ ಕರ್ತನ ಈ ಮಾತು ಒಂದು ವಿಜ್ಞಾಪನೆಯಾಗಿರುವದಿಲ್ಲ, ಆದರೆ ಅದು ಕರ್ತನ ಚಿತ್ತದ ಬಗ್ಗೆ ಒಂದು ಘೋಷಣೆಯಾಗಿರುವದು. ಅದು ಆತನು ಹೀಗೆ ಹೇಳಿದಂತೆ ಇರುವದು: ತಂದೆಯೇ, ಇದು ನನ್ನ ಹಿಂಬಾಲಕರಾದ ಇವರ ವಿಷಯವಾದ ನಿನ್ನ ಚಿತ್ತವೆಂಬುದನ್ನು ನಾನು ಗ್ರಹಿಸಿಕೊಂಡಿದ್ದೇನೆ. ಅಲ್ಲದೆ ನೀನು ಮಾಡಿರುವ ಉದಾರವಾದ ಈ ಮಹಾ ಏರ್ಪಾಡನ್ನು ಸಮ್ಮತಿಸುವವನಾಗಿ ನಾನು ಸಹ ಇದನ್ನೇ ಇಚ್ಛೈಸುತ್ತೇನೆ. ನನ್ನ ಹಿಂಬಾಲಕರೂ ಕಡೆಯಲ್ಲಿ ನನ್ನೊಡನೆ ಇದೇ ನನ್ನ ಮಹಿಮೆಯನ್ನು ಹೊಂದಿದವರಾಗಲು ಮತ್ತು ನೀನು ನನಗೆ ನೀಡಿರುವಂಥ ಮಹಿಮೆಯನ್ನು ಅವರು ನೋಡಿ ಅದರಲ್ಲಿ ಪಾಲುಗಾರರಾಗಿ ಆಶೀರ್ವದಿಸಲ್ಪಡು–ವಂತಾಗಲು ನಾನು ಸಂತೋಷಿಸುತ್ತೇನೆ. ನೀನು ಜಗದುತ್ಪತ್ತಿಗೆ ಮೊದಲೇ ಅಂದರೆ ನನ್ನ ಶಿಷ್ಯರಿಗಾಗಿ ಈ ಏರ್ಪಾಡುಗಳನ್ನು ಮಾಡುವ ಮೊದಲಿನಿಂದಲೇ ನನ್ನನ್ನು ಯಾವಾಗಲೂ ಪ್ರೀತಿಸುತ್ತಿರುವಿ.

ಈ ಪ್ರಾರ್ಥನೆಯ ಮುಕ್ತಾಯದ ಮಾತುಗಳು ಸೊಗಸಾಗಿದ್ದು ಅವು ನಮ್ಮ ಕರ್ತನಿಗೆ ತನ್ನ ತಂದೆಯ ಮೇಲಿದ್ದ ವಿಶ್ವಾಸ ಹಾಗು ಆತನೊಂದಿಗೆ ಇರುವ ಅನ್ಯೋನ್ಯತೆಯ ಬಗ್ಗೆ ಒಂದು ಒಳನೋಟವನ್ನು ನಮಗೆ ನೀಡುವದು. ಆತನು ತಂದೆಯನ್ನು ಬಲ್ಲವನಾಗಿದ್ದನು, ಹೀಗಾಗಿ ಅತನು ನಮ್ಮ ವಿಷಯವಾಗಿ ಪ್ರಕಟಮಾಡುವವನಾಗಿ ತಂದೆಯಿಂದ ನಾವು ಅಂಗೀಕರಿಸಲ್ಪಟ್ಟು ಆತನು ನಮಗಾಗಿ ಒದಗಿಸಿರುವ ನಿತ್ಯಜೀವದಲ್ಲಿ ಪಾಲುಗಾರರಾ–ಗುವದಕ್ಕೆ ಇದು ನಮಗೆ ಅನುಗ್ರಹಿಸಲು ಸಾಧ್ಯವಿರುವ ಅತ್ಯುನ್ನತವಾದ ಸಾಕ್ಷ್ಯಾಧಾರವೆಂದು ಹೇಳಿರುವನು; ಅದೇನಂದರೆ "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನು ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನು ತಿಳಿಯುವದೇ ನಿತ್ಯಜೀವವು." ನಮ್ಮ ಕರ್ತನು ಸಾರಿ ಹೇಳಿರುವದು: "ನೀತಿಸ್ವರೂಪನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ. ಆದರೆ ನಾನು ನಿನ್ನನ್ನು ತಿಳಿದಿದ್ದೇನೆ; ಮತ್ತು ಇವರು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ತಿಳಿದಿದ್ದಾರೆ." ನಿನ್ನ ಹೆಸರನ್ನು ನಿನ್ನ ಗುಣಾತಿಶಯವನ್ನು, ನಿನ್ನ ಮಹತ್ವವನ್ನು, ನಿನ್ನ ಒಳ್ಳೆಯತನವನ್ನು, ನಿನ್ನ ಪ್ರೀತಿಯನ್ನು, ನಿನ್ನ ಮಹೋಪಕಾರಗಳನ್ನು ನಾನು ಅವರಿಗೆ ತಿಳಿಸಿಕೊಟ್ಟಿದ್ದೇನೆ. ಅಲ್ಲದೆ ಅವರು ಹೊಂದಲು ಶಕ್ತರಾಗಿರುವಷ್ಟು ಪ್ರಮಾಣದಲ್ಲಿ ಅಂದರೆ ಅವರು ಸತ್ಯದ ಪರಿಜ್ಞಾನದಲ್ಲಿ ಅಭಿವೃದ್ಧಿಯಾದಂತೆಲ್ಲಾ ನಾನು ಮುಂದೆ ಅವರಿಗೆ ಇನ್ನೂ ಹೆಚ್ಚಾಗಿ ತಿಳಿಸುತ್ತಾ ಹೋಗುವೆನು. ಹೀಗಾಗಿ ನೀನು ನನ್ನ ಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂತಲೂ ನಾನೂ ಅವರಲ್ಲಿ ಇರಬೇಕೆಂದು ಪ್ರಾರ್ಥಿಸುವೆನು.

ಅದೆಷ್ಟು ಆಶ್ಚರ್ಯಕರವಾದುದು ದೇವರ ಈ ಪ್ರೀತಿ ಹಾಗು ಕ್ರಿಸ್ತನ ಪ್ರೀತಿ! ಅದರ ಉದ್ದ ಅಗಲ ಎತ್ತರ ಹಾಗು ಆಳವನ್ನು ಅಳೆಯಲು ಎಷ್ಟೋ ಅಸಾಧ್ಯವಾಗಿರುವಂತೆ ನಮಗೆ ತೋರುವದು! ಕರ್ತನನ್ನು ತಮ್ಮ ವಿಮೋಚಕನೆಂದು ಅಂಗೀಕರಿಸಿ, ಆತನೊಡನೆ ಒಡಂಬಡಿಕೆಯ ಸಂಬಂಧದಲ್ಲಿ ಸೇರಿದವರಾಗಿ, ತಮಗಿರುವ ಅಲ್ಪವಾದವುಗಳೆಲ್ಲವನ್ನು ಆತನಿಗೆ ಅರ್ಪಿಸಿ, ಆತನು ಮಾಡಿರುವ ಏರ್ಪಾಡಿನಲ್ಲಿನ ಈ ಎಲ್ಲಾ ಆಶೀರ್ವಾದಗಳಲ್ಲಿ ಪಾಲುಗಾರಿಕೆಯನ್ನು ಆತನಿಂದ ಅಂಗೀಕರಿಸಿರುವವರು ಎಂದಾದರೂ ತಮ್ಮ ಬಲಹೀನತೆಯ ಅಥವಾ ತಮಗುಂಟಾಗುವ ವಿರೋಧದ ಇಲ್ಲವೇ ಯಾವುದೇ ಕಾರಣದಿಂದಾದರೂ ಬಿದ್ದುಹೋದಲ್ಲಿ ಅವರು ತಂದೆಯು ನಮ್ಮ ಮೇಲಿಟ್ಟಿರುವಂಥಾ ಹಾಗು ಮಗನು ಪಾಲನ್ನು ನೀಡುವಂಥಾ ಪ್ರೀತಿಯನ್ನು ನೆನಪಿಗೆ ತಂದುಕೊಳ್ಳಲಿ; ನಾವು ಕೇವಲ ಪಾಪಿಗಳಾಗಿದ್ದಾಗಲೇ ಆ ಪ್ರೀತಿಯು ಕೇವಲ ನಮ್ಮನ್ನು ವಿಮೋಚಿಸಿದುದು ಮಾತ್ರವಲ್ಲದೆ ಆನಂತರದಲ್ಲಿ ಅದು–ನಾವು ಆತನೊಡನೆ ಬಾಧೆಯನ್ನು ಅನುಭವಿಸಿದ್ದೇ ಆದಲ್ಲಿ–ನಮ್ಮನ್ನು ಅದು ಆತನೊಡನೆ ಸಹ–ಬಾಧ್ಯರಾಗುವಂತೆ ಮಾಡುವಂಥಾ ಆಶ್ಚರ್ಯಕರವಾದ ಸೌಭಾಗ್ಯಾಶೀರ್ವಾದಗಳನ್ನು ಹೊಂದಲು ನಮಗೆ ಕರೆ ನೀಡುವದು. ಈ ಪ್ರೀತಿಯನ್ನು ಲಘುವಾಗಿ ಪರಿಗಣಿಸಿ ಅದನ್ನು ತಿರಸ್ಕರಿಸಲಾಗದು; ಅದು ನಮ್ಮನ್ನು ಎರಡನೇ ಮರಣದಲ್ಲಿ ಬೀಳುವಂತೆ ಮಾಡುವದಕ್ಕೆ ಬದಲಾಗಿ ನಮ್ಮನ್ನು ಶಿಕ್ಷಿಸಿ ಶುದ್ಧೀಕರಿಸುವದು; ಯೇಸುವಿನಲ್ಲಿ ಭರಸವಿಟ್ಟವರಾಗಿ ನಂಬಿಗಸ್ತ–ವಾದ ವಾಕ್ಯಗಳನ್ನು ಹಿಡಿದುಕೊಂಡು ಮುಂದುವರೆಯುವವರನ್ನು ಈ ಪ್ರೀತಿಯು ಅವರನ್ನು ಅಂತ್ಯದಲ್ಲಿ ಚಿಕ್ಕ ಹಿಂಡಿಗೆ ಇಲ್ಲವೇ ಮಹಾ ಸಮೂಹಕ್ಕೆ ತಲುಪಿಸುವದು. ಆದರೆ ದೇವರ ಪ್ರೀತಿಯು ನಮ್ಮಲ್ಲಿ ಹೇರಳವಾಗಿ ನೆಲೆಸಿರುವಷ್ಟರ ಪ್ರಮಾಣದಲ್ಲಿ, ನಮ್ಮ ಹೃದಯುಗಳಲ್ಲಿ ಕ್ರಿಸ್ತನು ಆಸನಾರೂಢನಾಗಿರುವಷ್ಟರ ಪ್ರಮಾಣದಲ್ಲಿ, ನಾವೂ ಅದೇ ಪ್ರಮಾಣದ ಪ್ರೀತಿಯಿಂದ ಪ್ರತಿಸ್ಪಂದಿಸಲ್ಪಡುವಂಥವರಾಗುವೆವು; ಆ ಪ್ರೀತಿಯು ನಮ್ಮ ತಂದೆಯ ದೃಷ್ಟಿಯಲ್ಲಿ ಮೆಚ್ಚಿಗೆಯಾಗಿರುವಂಥಾ ಮತ್ತು ನಮ್ಮ ಕರ್ತನಿಗೆ ಅಂಗೀಕೃತವಾದುದಂಥಾ ಎಲ್ಲವುಗಳನ್ನು ನೆರವೇರಿಸುವದರಲ್ಲಿ ಸಂತೋಷಿಸುವವರಾಗಿ ರುವೆವು ಮತ್ತು ಅದೇ ಪ್ರಮಾಣದಲ್ಲಿ ನಮ್ಮ ಕರ್ತನಿಗೂ ಹಾಗೂ ನಮಗೂ ನಡುವೆ ಮಬ್ಬುಕವಿಸುವಂಥ ಯಾವುದೇ ಸಂಗತಿಗಳನ್ನು ಮಾಡಲು ಇಷ್ಟಪಡದೇ ಇರುವವರಾಗಿರುವೆವು. ಹೀಗಿರುವಲ್ಲಿ ದೇವಪ್ರೀತಿಯ ಉದ್ದ ಅಗಲ ಎತ್ತರ ಹಾಗು ಆಳವನ್ನು ಕಂಡವರಾದ ಕಾರಣ ನಾವು ಹೊಸ ಧೈರ್ಯಸ್ಥೈರ್ಯಗಳನ್ನು ತೆಗೆದುಕೊಳ್ಳುವವರಾಗೋಣ ಮತ್ತು ದೇವರ ಈ ಪ್ರೀತಿಯು ಆತನ ಹಾಗು ಆತನ ಕಾರ್ಯೋದ್ದೇಶಗಳ ಬಗ್ಗೆ ಹೆಚ್ಚಾದ ಹುರುಪು ಉತ್ಸಾಹ ಮತ್ತು ಶ್ರದ್ಧೆಭಕ್ತಿಯುಳ್ಳವರಾಗಿರುವಂತೆ ಒತ್ತಾಯ ಪಡಿಸುವಂತಾಗಲಿ.

# ಕರ್ತನ ಗುಣದ ಹೋಲಿಕೆ

### ರೀಪ್ರಿಂಟ್ಸ್ ಪುಟ 5358

**"ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ... ಅವರೆಲ್ಲರೂ ಒಂದಾಗಿರಬೇಕೆಂತಲೂ... ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ... ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು."**
**ಯೋಹಾನ 17:9, 20–23**

ನಮಗೆ ನೆನಪಿರುವ ಹಾಗೆ ಈ ಮಾತುಗಳನ್ನು ನಮ್ಮ ಕರ್ತನು ತನ್ನನ್ನು ಹಿಡುಕೊಟ್ಟ ರಾತ್ರಿಯಲ್ಲಿ ಸ್ಮರಣ ಭೋಜನವನ್ನು ಆಚರಿಸಿದ "ಮೇಲುಪ್ಪರಿಗೆ" ಇಂದ ಗೆತ್ಸೇಮನೆ ತೋಟಕ್ಕೆ ಹೋಗುವ ಮಾರ್ಗದಲ್ಲಿ ಹೇಳಿರುಬಹುದೆಂಬದು ನಮ್ಮ ಭಾವನೆ. ಆತನು ಪ್ರಾರ್ಥನೆಮಾಡಿದುದು ಆತನ ಹನ್ನೆರಡು ಮಂದಿ ಅಪೊಸ್ತಲರಿಗೋಸ್ಕರವಾಗಿತ್ತೆಂಬದು ಸ್ಪಷ್ಟ; ಅಥವಾ ವಾಸ್ತದಲ್ಲಿ ಆ ಸಮಯಕ್ಕೆ ಹನ್ನೊಂದು ಮಂದಿಗಾಗಿ; ಯಾಕಂದರೆ ಆ ಸಂದರ್ಭದಲ್ಲಿ ಆತನು ಹೇಳಿರುವದು: "ನಾಶಕ್ಕೆ ಗುರಿಯಾದ ಆ ಮನುಷ್ಯನೇ ಹೊರತು ಇವರಲ್ಲಿ ಮತ್ತಾರೂ ನಾಶವಾಗಲಿಲ್ಲ." ಆದರೆ ಆತನ ಪ್ರಾರ್ಥನೆಯು [ಸುವಾರ್ತಾ] ಯುಗದ ಪರ್ಯಂತರವಾಗಿ ಎಲ್ಲರನ್ನೂ ಒಳಗೊಂಡಿರುತ್ತದೆಂಬದು ಅಲ್ಲಿನ ಸನ್ನಿವೇಶವು ತೋರಿಸುತ್ತದೆ. ಆತನು ಹೇಳಿರುವದು: "ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ." ತಾನು ತನ್ನ ತಂದೆಯು ಒಂದಾಗಿರುವ ಪ್ರಕಾರವೇ ತನ್ನ ಹಿಂಬಾಲಕರೆಲ್ಲರೂ ಒಂದಾಗಿರಬೇಕೆಂದು ಪ್ರಾರ್ಥಿಸಿದ್ದನು. ಇದು ಅದೇ ವಿಧದ ಒಂದಾಗಿರುವಿಕೆ, ಅಂದರೆ ಮಾನಸಿಕವಾಗಿ ಒಂದಾಗಿರುವದಾಗಿತ್ತು.

ಕರ್ತನಾದ ಯೇಸುವು ಹಾಗು ತಂದೆಯು ಒಂದೇ ವ್ಯಕ್ತಿಯಾಗಿಲ್ಲವೆಂಬುದಕ್ಕೆ ಈ ಪಠ್ಯಭಾಗವು ಒಂದು ಅತ್ಯುತ್ತಮವಾದ ಸಾಕ್ಷ್ಯಾಧಾರವಾಗಿರುವದು. ಸಭೆಯವರೆಲ್ಲರೂ ವ್ಯಕ್ತಿಯಾಗಿ ಒಬ್ಬರೇ ಆಗಿರಬೇಕೆಂದು ಪ್ರಾರ್ಥಿಸುವದಕ್ಕೆ ಆತನಿಗೆ ಸಾಧ್ಯವಿರಲಿಲ್ಲ. ಅದು ಚಿತ್ತದಲ್ಲಿ ಒಂದಾಗಿರುವಿಕೆ, ಚಿತ್ತದ ವಿಷಯದಲ್ಲಿ ಸಂಪೂರ್ಣ ಹೊಂದಾಣಿಕೆ, ಉದ್ದೇಶದ ವಿಷಯದಲ್ಲಿ ಒಂದಾಗಿರುವಿಕೆಯಾಗಿತ್ತು. "ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ." ಎಂದು ಕರ್ತನು ಹೇಳಿದ್ದನು. ಆತನು ಹೀಗೆ ತಂದೆಯೊಡನೆ ಅಂದರೆ ತಂದೆಯ ಚಿತ್ತದ, ತಂದೆಯ ಯೋಜನೆಗಳ ಬಗ್ಗೆ ಪೂರ್ಣ ಸಮ್ಮತಿ, ಹೊಂದಾಣಿಕೆಗಳಿಗೆ ಬಂದಿದ್ದನು. ಆ ಸಮ್ಮತಿಸುವಿಕೆಯ ಸಲುವಾಗಿ ಪ್ರತಿಯೊಬ್ಬನೂ ತನ್ನ ಹಕ್ಕುಗಳಲ್ಲಿ ಕೆಲವನ್ನು ಬಿಟ್ಟುಕೊಡುವಂಥ ಒಂದು ಪರಸ್ಪರವಾಗಿ ರಿಯಾಯಿತಿ ನೀಡುವಂಥದಾಗಿರಲಿಲ್ಲ.

ಲೋಕದ ಮಾನವರೊಡನೆ ವ್ಯವಹರಿಸುವದಕ್ಕೆ ಮೊದಲು ಅಂದರೆ ಅವನು ಲೋಕರಕ್ಷಕನಾಗಿ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗುವದಕ್ಕೆ ಮೊದಲು ಆತನು ಮಾಡಬೇಕಿದ್ದ ಮೊದಲನೇ ಕಾರ್ಯವೆಂದರೆ ಸಭೆಯನ್ನು ಆದುಕೊಳ್ಳುವದಾಗಿತ್ತು. ಆತನು ಪ್ರಾರಂಭಮಾಡಿದ ಕಾರ್ಯವು ಆಗ ಇದೇ ಆಗಿತ್ತು. ಅಲ್ಲದೆ ಆತನು ದೈವೋಕ್ತಿಯನ್ನು ಅವರ ವಶಕ್ಕೆ ಒಪ್ಪಿಸುತ್ತಿದ್ದನು. ಸಭೆಯವರೆಲ್ಲರೂ ಉದ್ದೇಶದಲ್ಲಿ ಒಂದಾಗಿರುವದನ್ನು, ತನ್ನ ಚಿತ್ತದಲ್ಲಿ ಅವರ ಚಿತ್ತವು ಒಂದಾಗಿಸುವದನ್ನು ಆತನು ಬಯಸಿದ್ದನು. ಇದನ್ನು ಕೇವಲ ಒಂದೇ ವಿಧಾನದ ಮೂಲಕವಾಗಿ ಅಂದರೆ ನಮ್ಮ ಚಿತ್ತವನ್ನು ಪೂರ್ಣವಾಗಿ ಬಿಟ್ಟುಕೊಡುವದರ ಮೂಲಕವಾಗಿ ಪಡಕೊಳ್ಳಬಹುದೆಂಬುದನ್ನು ನಾವು ನೋಡುತ್ತೇವೆ. ಅಲ್ಲದೆ ಇದು ತಮ್ಮನ್ನು ಸತ್ತವರಂತೆ ಮಾಡಿಕೊಳ್ಳುವದರ ಮೂಲಕವಾಗಿ ನೆರವೇರುವದೆಂದು ಶಾಸ್ತ್ರವಚನಗಳು ಸಾರಿ ಹೇಳುತ್ತವೆ.

## ಮನಸ್ತಾಪವಾಗಲು ಇರುವ ಎರಡು ಕಾರಣಗಳು

ಒಬ್ಬ ಪುರುಷನಾಗಲೀ ಅಥವಾ ಸ್ತ್ರೀಯಾಗಲೀ ಯಾರೆನ್ನುವದು ಕೇವಲ ಅವರು ಇಚ್ಛಿಸುವದೇನು ಎನ್ನುವರಲ್ಲಿ ಹಾಗು ಆ ಇಚ್ಛೆಯು ಶರೀರದ ಮೂಲಕ ತನ್ನ ಸನ್ನಿವೇಶಕ್ಕೆ ಅನುಗುಣವಾಗಿ ಏನನ್ನು ಮಾಡಲು ಸಾಧ್ಯವೆನ್ನುವದರಲ್ಲಿ ಕಂಡಬರುತ್ತದೆ. ನಮ್ಮ ಶಿಷ್ಯವೃತ್ತಿಯ ಆರಂಭದಲ್ಲಿಯೂ ಹೀಗೆಯೇ ಇರುವದು. ನಾವು ಮಾಡಬೇಕಾದ ಮೊದಲ ಸಂಗತಿಯೆಂದರೆ ನಮ್ಮ ಇಚ್ಛೆಗೆ ಸಂಬಂಧಿಸಿದಂತೆ ನಾವು ಸತ್ತವರಂತಾಗಿ ಹಾಗು ಕರ್ತನಾದ ಯೇಸು ಕ್ರಿಸ್ತನಿಗೆ ಸಂಬಂಧಿಸಿದಂತೆ ಜೀವಿಸುವಂತವರಾಗಿ ಇರುವಂತೆ ನೋಡಿಕೊಳ್ಳಬೇಕೆಂಬದು. ಇದನ್ನು ಮಾಡುವವರೆಲ್ಲರನ್ನು ಆತನು ಹೊಸ ಸೃಷ್ಟಿಗಳೆಂದು ಕರೆಯುವನು. ಅವರು ನೂತನ ಮನಸ್ಸು ಹಾಗು ನೂತನ ಚಿತ್ತವುಳ್ಳವರಾಗಿರುವಂತೆ ಅವರಿಗೆ ಪವಿತ್ರಾತ್ಮವನ್ನು ಅನುಗ್ರಹಮಾಡುವನು. ಅವರು ನೂತನ ಮನಸ್ಸು ಹಾಗು ನೂತನ ಚಿತ್ತವನ್ನು ಹೊಂದಿರುವಷ್ಟರ ಪ್ರಮಾಣದಲ್ಲಿಯೇ ಅವರಲ್ಲಿನ ಪ್ರತಿಯೊಬ್ಬನಲ್ಲಿಯೂ ಪರಸ್ಪರವಾದ ಒಂದಾಗಿರುವಿಕೆಯು ನೆಲೆಗೊಂಡಿರುವದು.

ಕರ್ತನ ಜನರಲ್ಲಿ ಒಡಕು ಉಂಟಾಗಿರಲು ಕಾರಣವೇನೆಂದರೆ ಅವರಲ್ಲಿ ನಿಷ್ಠೆಯ ಕೊರತೆ ಇಲ್ಲವೇ ತಿಳುವಳಿಕೆಯ ಕೊರತೆಯಿರುವದೇ. ಅದು ನಿಷ್ಠೆಯ ಕೊರತೆಯಾಗಿದ್ದರೆ ಅವರು ಕ್ರಮೇಣ ನಿಷ್ಕ್ರೀಯರಾಗಿ ಹೋಗುವರು. ಕರ್ತನು ತನ್ನ ಮನೆತನದವರನ್ನು ಒತ್ತಾಯಿಸುವದಿಲ್ಲ. ಆತನು ತನ್ನನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕನುಸಾರವಾಗಿ ಆರಾಧಿಸುವಂಥವರನ್ನು ಅಂದರೆ ಎಲ್ಲಾ ರೀತಿಯಲ್ಲಿಯೂ ನಿಷ್ಠಾವಂತರಾಗಿರುವವರನ್ನು

ಆದುಕೊಳ್ಳುತ್ತಿರುವನು. ಈ ವರ್ಗದವರನ್ನು ಆದುಕೊಳ್ಳುವ ಉದ್ದೇಶಕ್ಕಾಗಿಯೇ ಆತನು ಸುವಾರ್ತಾಯುಗವನ್ನು ಸಂಪೂರ್ಣವಾಗಿ ಮೀಸಲಾಗಿಟ್ಟಿರುವನು. ಈ ಆದುಕೊಳ್ಳಲಾಗುತ್ತಿರುವ ಕಾರ್ಯವು ಸುಮಾರು ಹತ್ತೊಂಬತ್ತು ಶತಮಾನಗಳಿಂದಲೂ ಮುಂದುವರೆಯುತ್ತಿರುವದು. ಅಲ್ಲದೆ ಈ ಗುಂಪು ಒಂದು ಚಿಕ್ಕ ಹಿಂಡಾಗಿರುವದು. ಅವರು ಸಂಪೂರ್ಣವಾಗಿ ಒಂದು ಆಯಲ್ಪಟ್ಟ ವರ್ಗದವರಾಗಿರಬೇಕು ಎಂಬುದು ಸ್ಪಷ್ಟ. ಅವರು ನೋಡುವವ-ರಾಗಿ ನಡೆಯದೆ ನಂಬುವವರಾಗಿ ನಡೆಯಬೇಕೆಂಬದು ಅವಶ್ಯ.

ದೇವರಿಗೂ ಹಾಗು ನೀತಿಗೂ ನಿಷ್ಠಾವಂಥರಾಗಿ ಆ ಮಾರ್ಗದಲ್ಲಿ ನಡೆದು ಲೋಕವನ್ನು ಅದರ ಯೋಜನೆಗಳೆಲ್ಲವನ್ನು ನಷ್ಟವೆಂದೆಣಿಸುವಂಥವರು ಅನೇಕರಿರುವದಿಲ್ಲ. ನಿಷ್ಠೆಯಿಲ್ಲದವರು ತಮ್ಮ ಸ್ಥಾನವನ್ನು ತೆರವು ಮಾಡುತ್ತಿರುವಂತೆಯೇ ನಿಷ್ಠಾವಂತರು ಹೆಚ್ಚು ಹೆಚ್ಚಾಗಿ ಅದರ ಕಡೆಗೆ ಎಳೆಯಲ್ಪಡುತ್ತಿರುವದಾಗಿ ಕಂಡುಕೊಂಡಿರುವರು. ಅವರಲ್ಲಿನ ನಂಬಿಗಸ್ತರಾದವರಲ್ಲಿ ಅಧಿಕವಾದ ಒಂದಾಗಿರುವಿಕೆ ಇರುವದು ಕಂಡುಬರುವದು. ಇದು ಎಲ್ಲಾ ಕಾಲದಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯವಾಗಿ ಸತ್ಯವಾಗಿರುವದು. ಸಂಪೂರ್ಣವಾಗಿ ನಿಷ್ಠಾವಂತರಾಗಿರು-ವವರೆಲ್ಲರೂ ತಂದೆಯ ಚಿತ್ತವನ್ನು ನೆರವೇರಿಸುವ ಅಂದರೆ ತಂದೆಯ ವಿಷಯವಾದ ಸೇವೆಯಲ್ಲಿ ತಮ್ಮ ಜೀವವನ್ನು ಮುಡುಪಾಗಿಡುವ ಬಯಕೆಯುಳ್ಳವರಾಗಿರುವರು. ಅಲ್ಲದೆ ಈ ಬಯಕೆಯು ಅವರನ್ನು ಒಂದುಮಾಡುವದು.

## ಪ್ರೌಢತೆಗೆ ಬಂದಂತೆ ಘರ್ಷಣೆ ಕಡಿಮೆಯಾಗುವದು

ಅವರೆಲ್ಲರೂ ಒಂದಾಗಿದ್ದು ಸಿದ್ಧಿಗೆ ಬರಬೇಕೆಂದು ಕರ್ತನು ನುಡಿದಿರುವನು. ಪ್ರತಿಯೊಬ್ಬ ವ್ಯಕ್ತಿಯೂ ಅಭಿವೃದ್ಧಿಯಾದಂತೆಲ್ಲಾ ಆತನು ತನಗೆ ನೀಡಲಾದ ಸ್ಥಾನವನ್ನು ತುಂಬಲು ಅಥವಾ ತನಗೆ ನೀಡಲಾದ ಅವಕಾಶವನ್ನು ಉಪಯೋಗಿಸಿಕೊಳ್ಳಲು ಯೋಗ್ಯನಾಗುವನು. ಮತ್ತು ಹೀಗೆ [ಕ್ರಿಸ್ತನ] ದೇಹವು ಹೆಚ್ಚು ಫಲಕಾರಿಯಾಗುವದು. ಆದರೆ ನಮ್ಮ ಕರ್ತನು ಇಲ್ಲಿ ವ್ಯಕ್ತಪಡಿಸುತ್ತಿರುವ ಅಭಿಪ್ರಾಯವು ವಾಸ್ತವದಲ್ಲಿ ಪೂರ್ಣವಾಗುವ-ದರ ವಿಷಯವಾಗಿರುವದು. ಯುಗಾಂತ್ಯದಲ್ಲಿ ಈ ಕಾರ್ಯವು ಪೂರ್ಣಗೊಂಡು, ಪರಿಪಕ್ವತೆಗೆ ಬಂದು ಅವರೆಲ್ಲರೂ ಒಂದಾಗಿರುವ ಬಗ್ಗೆ ಆತನು ಉಲ್ಲೇಖಿಸಿರುವನು. ಇದರ ಭವ್ಯವಾದ ಪೂರ್ಣಗೊಳ್ಳುವಿಕೆಯು ಕರ್ತನು ತಾನೇ ನಿರ್ವಹಿಸುವ ಕೆಲವು ಸಂಗತಿಗಳ ಮೂಲಕವಾಗಿ ನೆರವೇರಲಾಗು-ವದು. ಅನಿವಾರ್ಯ ಕಾರಣಗಳಿಂದಾಗಿ ನಮ್ಮಲ್ಲಿರುವ ಶಾರೀರಿಕ ಭಿನ್ನತೆಯೆಲ್ಲವೂ ನಿರ್ದಿಷ್ಟವಾಗಿ ಒಂದೇ ಸಮನಾಗಿರುವದನ್ನು ನಾವು ಕಾಣುವದಿಲ್ಲ. ಕೇವಲ ಈಗ ನಮಗೆ ಅದನ್ನು ಹೆಚ್ಚು ಕಡಿಮೆ ಅಸ್ಪಷ್ಟವಾಗಿ ಕಾಣಲು ಮಾತ್ರ ಸಾಧ್ಯವಾಗಿರುವದು.

ನಮಗೆ ಈಗ ಅದು ಪೂರ್ಣವಾಗಿ ಕೊನೆಗೊಂಡಿರು-ವದನ್ನು ನೋಡಲು ಸಾಧ್ಯವಾಗಿಲ್ಲ. ಪರಿಣಾಮವಾಗಿ ತಂದೆಯ ಚಿತ್ತವನ್ನು ನೆರವೇರಿಸಲು ಪೂರ್ಣವಾಗಿ ಪ್ರತಿಷ್ಠಿತ-ರಾದವರಲ್ಲಿಯೂ ಸಹ ಹೆಚ್ಚು ಕಡಿಮೆ ಯಾವಾಗಲೂ ಘರ್ಷಣೆಯುಂಟಾಗುತ್ತಿರುವದು. ನಾವು ಪ್ರೌಢತೆಗೆ ಬಂದಂತೆಲ್ಲಾ ಈ ಘರ್ಷಣೆಯು ಕಡಿಮೆಯಾಗುತ್ತಿರಬೇಕು. ಆದರೆ ನಾವು ಪುನರುತ್ಥಾನ ಹೊಂದಿ "ಒಂದು ಕ್ಷಣದಲ್ಲಿ, ರೆಪ್ಪೆ ಬಡಿಯುವಷ್ಟ-ರೊಳಗೆ" ಮಾರ್ಪಡುವವರೆಗೂ ಇದು ವೈಭವಯುತವಾಗಿ ಪೂರ್ಣಗೊಳ್ಳುವದನ್ನು ಏಕಾಭಿಪ್ರಾಯವಾಗಿ ಕಾಣಲು ಸಾಧ್ಯವಿರುವದಿಲ್ಲ; [ಯಾಕಂದರೆ] "ರಕ್ತಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು." ಈ ಅಪರಿಪೂರ್ಣ ದೇಹದಲ್ಲಿ ನಾವು ಕಷ್ಟಪರಿಶೋಧನೆಯನ್ನು ಹೊಂದಬೇಕಿರುವದು. ಯಾರು ಲೋಕ, ಶರೀರಭಾವ ಹಾಗು ಸೈತಾನ ಇವುಗಳಿಗೆ ವಿರೋಧವಾಗಿ ಹೋರಾಡುವದರಲ್ಲಿ ಅಂತ್ಯದ ವರೆಗೂ ನಿಷ್ಠೆಯುಳ್ಳವರಾಗಿ -ರುವರೋ ಅವರು ಕ್ರಿಸ್ತನೊಡನೆ ಸಹ-ಬಾಧ್ಯತೆ ಹೊಂದಿ, ಆತನ ರಾಜ್ಯದಲ್ಲಿ ಪಾಲುಗಾರರಾಗಿ, ಲೋಕವನ್ನು ಆಶೀರ್ವದಿಸುವ ದೇವರ ಕಾರ್ಯಕ್ರಮವನ್ನು ಕಾರ್ಯಗತ ಮಾಡುವರು.

## ಒಂದು ವಿಸ್ಮಯಕಾರಿ ಹೇಳಿಕೆ

ಎಪಿಫ್ಯಾನಿಯಾ (epiphania) ಅಥವಾ ಕರ್ತನ ಪ್ರತ್ಯಕ್ಷತೆಯು ಪ್ರಜ್ವಲಗೊಳ್ಳುವ ಹಂತದಲ್ಲಿ ದೇವರು ಸಭೆಗೆ ಮಾರ್ಗದರ್ಶನ ಮಾಡುವ ಈಗಿನ ಕಾರ್ಯವನ್ನು ಮುಗಿಸುವನು, ಅಲ್ಲದೆ ಲೋಕವು ಒಂದು ವಿಭಿನ್ನ [ಆಡಳಿತ] ವ್ಯವಸ್ಥಾಪನಾಕ್ರಮದ ಕಾಲದಲ್ಲಿ ಇರುವದಾಗಿ ಅದಕ್ಕೆ ತಿಳಿಸಲಾಗುವದು. ಲೋಕವು ಈ ಸಂಗತಿಯನ್ನು ಪೂರ್ಣವಾಗಿ ಗ್ರಹಿಸಿಕೊಂಡಾಗ, ತಂದೆಯು ಕ್ರಿಸ್ತನನ್ನು ಪ್ರೀತಿಸುವಂತೆ ಸಭೆಯನ್ನೂ ಪ್ರೀತಿಸಿರುವನೆಂದು ಕರ್ತನು ತನ್ನ ಶಿಷ್ಯರೊಡನೆ ಮಾಡಿದ ಕಡೆಯ ಪ್ರಾರ್ಥನೆಯಲ್ಲಿ ನುಡಿದ ಆತನ ಮಾತಿನ ಸತ್ಯಾಂಶವು ಅದರ ಗ್ರಹಿಕೆಗೆ ಬರುವದು. ಇದು ಒಂದು ಬಹು ವಿಸ್ಮಯಕಾರಿಯಾದ ಹೇಳಿಕೆಯಾಗಿರುವದು. ಇದು ನಮ್ಮ ಕರ್ತನಲ್ಲಿ ಯಾವ ಸ್ವಾರ್ಥವೂ ಇರುವದಿಲ್ಲವೆಂಬುದನ್ನು ತೋರಿಸಿಕೊಡುವದು. "ಅವರು ಯಾವಾಗಲೂ ನನಗಿಂತ ಕೀಳಾಗಿರುವರು. ನಾನು ಹೊಂದುವ ಮಹಿಮೆಯನ್ನು ಅವರು ಎಂದೂ ಹೊಂದಲಾರರು." ಎಂದು ಆತನು ಹೇಳಿರಲಿಲ್ಲ.

ಬದಲಾಗಿ ಪರಲೋಕದ ತಂದೆಯು ತನ್ನ ಗುಣದ ಅಂದರೆ ತನ್ನ ನೀತಿನಿಯಮದ ಅನುಸಾರ ತನ್ನ ಪ್ರೀತಿಯನ್ನು ಪ್ರಯೋಗಿಸುವನೆಂಬುದನ್ನು ಕರ್ತನಾದ ಯೇಸುವು ತಿಳಿದುಕೊಂಡಿದ್ದನು. ಅಲ್ಲದೆ ಇದೇ ಮಹಿಮೆಯುಳ್ಳ ವರ್ಗಕ್ಕೆ ಸೇರುವರೆಲ್ಲರೂ ನಮ್ಮ ಕರ್ತನಲ್ಲಿದ್ದ ಮಹಿಮಾಗುಣವನ್ನು ಪಡೆದವರಾಗಿರಬೇಕು; ಹೇಳುವದಾದರೆ ಅವರೂ ಪೂರ್ಣವಾಗಿ ನಿಷ್ಠಾವಂತರಾಗಿರಬೇಕು. ಅವರು ಧರ್ಮವನ್ನು ಪ್ರೀತಿಸುವವರೂ ಅಧರ್ಮವನ್ನು ದ್ವೇಷಿಸುವವರೂ ಆಗಿರುವರೆಂಬುದನ್ನು ತೋರಿಸಿಕೊಡಬೇಕು. "ನೀನು ಧರ್ಮವನ್ನು ಪ್ರೀತಿಸಿದ್ದೀ ಅಧರ್ಮವನ್ನು ದ್ವೇಷಿಸಿದ್ದೀ. ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದತೈಲದಿಂದ ಅಭಿಷೇಕಿಸಿದ್ದಾನೆ." (ಇಬ್ರಿಯ 1:9) ಎಂಬುದನ್ನು ನಾವು ಓದುತ್ತೇವೆ. ಹೀಗಾಗಿ ಆತನು ಸಭೆಯೆಂಬ ವರ್ಗಕ್ಕೆ ಶಿರಸ್ಸಾಗುವ ಸಲುವಾಗಿ ಅಭಿಷೇಕಿಸಲ್ಪಟ್ಟಿದ್ದನು. ಆದರೆ

ಸಭೆಯೆಂಬ ವರ್ಗವು ಆತನಿಗೆ ಸಹಕಾರಿಗಳು ಆಗಲಿರುವರೆಂದು ಶಾಸ್ತ್ರವಚನಗಳು ಸಾರಿ ಹೇಳಿರುವದು. ಅವರು ಒಂದೇ ಅಂತಸ್ತಿನವರಾಗಿದ್ದು ಕೀಳು ಮಟ್ಟದಲ್ಲಿರುವವರಲ್ಲ ಆದರೆ ಒಂದೇ ಸಮನಾದ ಅನ್ಯೋನ್ಯತೆಯಲ್ಲಿರುವರು. ಮತ್ತು ತಂದೆಯು ಯೇಸುವನ್ನು ಪ್ರೀತಿಸಿದಂತೆಯೇ ಸಭೆಯನ್ನು ಪ್ರೀತಿಸಿರುವ – ನೆಂಬುದು ಲೋಕಕ್ಕೆ ಆಗ ತಿಳಿದುಬರುವದು. ಸಭೆಯು ತನ್ನ ಕರ್ತನಾದ ಯೇಸುವಿನೊಂದಿಗೆ ಒಂದೇ ಮಟ್ಟದಲ್ಲಿರುವರೆಂದು ನಾವು ಗ್ರಹಿಸಿಕೊಂಡಿರುವೆವು. ಆದಾಗ್ಯೂ ದೇವರು "ಆತನನ್ನು ಎಲ್ಲಾದರ ಮೇಲೆ ಒಡೆಯನನ್ನಾಗಿ ಮಾಡಿರುವನು–ದೇವರಿಗೆ ನಿರಂತರ ಸ್ತೋತ್ರವಾಗಲಿ." ಎಂಬುದನ್ನು ನಾವು ಮನಸ್ಸಿನಲ್ಲಿಟ್ಟು–ಕೊಳ್ಳಬೇಕಿರುವದು. ಸಭೆಯು ಎಂದೂ ಕ್ರಿಸ್ತನೊಡನೆ ಸಮನಾದ ಸ್ಥಾನದಲ್ಲಿರುವದಿಲ್ಲ.

ಪರಲೋಕದಲ್ಲಿರುವ ತಂದೆಯು ಕ್ರಿಸ್ತನನ್ನು ಪ್ರೀತಿಸುವಂತೆಯೇ ನಮ್ಮನ್ನು ಪ್ರೀತಿಸಬೇಕೆಂಬದು ಅಂದರೆ ಕೆಸರಿನಲ್ಲಿರುವ ಇಲ್ಲವೇ ಅದು ಎಲ್ಲಿ ಸಿಕ್ಕಬಹುದಿದ್ದರೂ ಅಂಥದನ್ನು ಕರ್ತನು ಪ್ರೀತಿಸುವನೆಂಬದು ನಮಗೆ ಬಹು ಆಶ್ಚರ್ಯವಾಗಿ ತೋರುತ್ತದೆ! ಕರ್ತನಾದ ಯೇಸುವು ಈ ಗುಣಗಳುಳ್ಳವರನ್ನು ಮಾನವ–ಪಾಪವೆಂಬ ಕೆಸರಿನೊಳಗಿಂದ ಆದುಕೊಳ್ಳುತ್ತಿರುವನು. ಹಾಗು ಯಾರು ಕರ್ತನಾದ ಯೇಸುವು ನಿಷ್ಠೆಯುಳ್ಳವನಾಗಿದ್ದಂತೆಯೇ ನಿಷ್ಠೆಯುಳ್ಳವರೂ, "ಪೂರ್ಣ ಜಯಶಾಲಿಗಳೂ" ಆಗುವರೋ ಅಂಥವರನ್ನು ತಂದೆಯು ಯೇಸು ಕರ್ತನನ್ನು ಪ್ರೀತಿಸಿದಂತೆಯೇ ಅವರನ್ನೂ ಪ್ರೀತಿಸಿ ಅವರಿಗೆ ತನ್ನ ಮಗನೊಡನೆ ಮಹಿಮೆಪಡಿಸುವನು.

"ನೀನು ಜಲರಾಶಿಯನ್ನು ಹಾದುಹೋಗುವಾಗ
ನಾನು ನಿನ್ನ ಸಂಗಡ ಇರುವೆನು!"
ಖಚಿತವೂ ಮದುರವೂ ಹಾಗು ಪೂರ್ಣ ಸಂತೃಪ್ತಿಕರವೂ
ಆಗಿರುವದು ಆತನ ಪ್ರತ್ಯಕ್ಷತೆಯು.
ದೇವರ ಬೃಹತ್ ತೆರೆಗಳೆಲ್ಲವೂ ಆತನಿಂದ ಉಕ್ಕಿಹರಿದಿತ್ತು
ಮಹಾ ದೋಷಪರಿಹಾರಕ ದಿನದಂದು;
ಈಗ ಆತನು ನಿನ್ನನ್ನು ಅವುಗಳ ಮೂಲಕವಾಗಿ ನಡೆಸುವನು
ಮಾರ್ಗದಲ್ಲಲ್ಲೆಲ್ಲಾ ನಿನ್ನೊಂದಿಗಿದ್ದು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 14 | ಗೆತ್ಸೇಮನೆ | ತೋಟದಲ್ಲಾದ ಮನೋವ್ಯಥೆ; ಯೇಸುವನ್ನು ಹಿಡಿದುಕೊಟ್ಟದ್ದು ಮತ್ತು ಬಂಧಿಸಲಾದದ್ದು | 26:30,36–56 | 14:26,32–52 | 22:39–53 | 18:1–12 |

# ಮತ್ತಾಯ 26:30, 36–56

ಬಳಿಕ ಅವರು ಕೀರ್ತನೆಯನ್ನು ಹಾಡಿ ಎಣ್ಣೆಯ ಮರಗಳ ಗುಡ್ಡಕ್ಕೆ ಹೊರಟುಹೋದರು. ಅನಂತರ ಯೇಸು ತನ್ನ ಶಿಷ್ಯರ ಸಂಗಡ ಗೆತ್ಸೇಮನೆ ಎಂಬ ತೋಟಕ್ಕೆ ಬಂದು ಅವರಿಗೆ–ಇಲ್ಲೇ ಕೂತುಕೊಳ್ಳಿರಿ, ನಾನು ಅತ್ತಲಾಗಿ ಹೋಗಿ ಪ್ರಾರ್ಥನೆಮಾಡಿ ಬರುತ್ತೇನೆ ಎಂದು ಹೇಳಿ ಪೇತ್ರನನ್ನು ಜೆಬೆದಾಯನ ಇಬ್ಬರು ಮಕ್ಕಳನ್ನು ಕರಕೊಂಡು ಹೋಗಿ ದುಃಖಪಟ್ಟು ಮನಗುಂದಿ – ದವನಾದನು. ಮತ್ತು ಅವರಿಗೆ–ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ; ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ಬೋರಲ ಬಿದ್ದು–ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು. ಆ ಮೇಲೆ ಆ ಶಿಷ್ಯರ ಬಳಿಗೆ ಬಂದು ಅವರು ನಿದ್ದೆಮಾಡುವದನ್ನು ಕಂಡು ಪೇತ್ರನಿಗೆ–ಹೀಗೋ? ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ? ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು ಎಂದು ಹೇಳಿದನು. ತಿರಿಗಿ ಎರಡನೆಯ ಸಾರಿ ಹೋಗಿ–ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆಮಾಡಿದನು. ಆತನು ತಿರಿಗಿ ಬಂದಾಗ ಅವರು ನಿದ್ದೆಮಾಡುವದನ್ನು ಕಂಡನು; ಅವರ ಕಣ್ಣುಗಳು ಭಾರವಾಗಿ–ದ್ದವು. ಆ ಮೇಲೆ ತಿರಿಗಿ ಅವರನ್ನು ಬಿಟ್ಟುಹೋಗಿ ತಿರಿಗಿ ಅದೇ ಮಾತನ್ನು ಹೇಳುತ್ತಾ ಮೂರನೆಯ ಸಾರಿ ಪ್ರಾರ್ಥಿಸಿದನು. ತರುವಾಯ ಶಿಷ್ಯರ ಬಳಿಗೆ ಬಂದು ಅವರಿಗೆ–ನೀವು ಇನ್ನೂ ನಿದ್ದೆಮಾಡಿ ದಣುವಾರಿಸಿಕೊಳ್ಳಿರಿ; ಇಗೋ, ಗಳಿಗೆ ಸಮೀಪಿಸಿತು, ಈಗ ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ, ಹೋಗೋಣ; ನನ್ನನ್ನು ಹಿಡುಕೊಡುವವನು ಹತ್ತಿರಕ್ಕೆ ಬಂದಿದ್ದಾನೆ ನೋಡಿರಿ ಎಂದು ಹೇಳಿದನು. ಆತನು ಇನ್ನೂ ಮಾತಾಡುತ್ತಿರಲು ಇಗೋ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯೂದನು ಬಂದನು; ಮಹಾಯಾಜಕರು ಜನರ ಹಿರಿಯರು ಇವರ ಕಡೆಯಿಂದ ಬಹು ಜನರ ಗುಂಪು ಕತ್ತಿ ದೊಣ್ಣೆಗಳನ್ನು ಹಿಡುಕೊಂಡು ಅವನ ಸಂಗಡ ಬಂತು. ಇದಲ್ಲದೆ ಆತನನ್ನು ಹಿಡುಕೊಡುವವನು ಅವರಿಗೆ–ನಾನು ಯಾರಿಗೆ ಮುದ್ದಿಡು–ತ್ತೇನೋ ಅವನೇ ಆತನು; ಅವನನ್ನು ಹಿಡಿಯಿರಿ ಎಂದು ಗುರುತು ಹೇಳಿಕೊಟ್ಟನು. ಕೂಡಲೆ ಅವನು ಯೇಸುವಿನ ಬಳಿಗೆ ಹೋಗಿ–ಗುರುವೇ, ನಮಸ್ಕಾರ ಎಂದು ಹೇಳಿ ಅತನಿಗೆ ಮುದ್ದಿಟ್ಟನು. ಯೇಸು ಅವನಿಗೆ–ಗೆಳೆಯನೇ, ನೀನು ಬಂದ ಕೆಲಸ ಇದೆಯೋ? ಎಂದು ಹೇಳಲು ಅವರು ಹತ್ತರಕ್ಕೆ ಬಂದು ಯೇಸುವಿನ ಮೇಲೆ ಕೈ

ಹಾಕಿ ಆತನನ್ನು ಹಿಡಿದರು. ಹಿಡಿಯುತ್ತಲೆ ಯೇಸುವಿನ ಸಂಗಡ ಇದ್ದವರಲ್ಲಿ ಒಬ್ಬನು ಕೈಚಾಚಿ ತನ್ನ ಕತ್ತಿಯನ್ನು ಹಿರಿದು ಮಹಾಯಾಜಕನ ಆಳನ್ನು ಹೊಡೆದು ಅವನ ಕಿವಿಯನ್ನು ಕಡಿದುಹಾಕಿದನು. ಆಗ ಯೇಸು ಅವನಿಗೆ–ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲರು ಕತ್ತಿಯಿಂದ ಸಾಯುವರು. ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆ–ನೆಂದೂ ಬೇಡಿಕೊಂಡರೆ ಆತನು ನನಗೆ ಈಗಲೇ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿ–ಕೊಡುವದಿಲ್ಲವೆಂದು ನೆನಸುತ್ತೀಯಾ? ಕಳುಹಿಸಿಕೊಟ್ಟರೆ ನನಗೆ ಇಂಥಿಂಥದು ಆಗಬೇಕೆಂಬುವ ಶಾಸ್ತ್ರದ ಮಾತುಗಳು ನೆರವೇರುವದು ಹೇಗೆ ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಯೇಸು ಗುಂಪುಗುಂಪಾಗಿಕೂಡಿದ್ದ ಜನರಿಗೆ–ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನು ದೊಣ್ಣೆಗಳನ್ನು ತೆಗೆದುಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ? ನಾನು ದಿನಾಲು ದೇವಾಲಯದಲ್ಲಿ ಕೂತುಕೊಂಡು ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯಲಿಲ್ಲ; ಆದರೆ ಪ್ರವಾದಿಗಳು ಬರೆದ ವಚನಗಳು ನೆರವೇರುವಂತೆ ಇದೆಲ್ಲಾ ಆಯಿತು ಎಂದು ಹೇಳಿದನು. ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು.

## ಮಾರ್ಕ 14:26, 32–52

ಬಳಿಕ ಅವರು ಕೀರ್ತನೆಹಾಡಿ ಎಣ್ಣೇಮರಗಳ ಗುಡ್ಡಕ್ಕೆ ಹೊರಟುಹೋದರು. ತರುವಾಯ ಅವರು ಗೆತ್ಸೇಮನೆ ಎಂಬ ತೋಟಕ್ಕೆ ಬಂದರು. ಆತನು ತನ್ನ ಶಿಷ್ಯರಿಗೆ–ಇಲ್ಲೇ ಕೂತುಕೊಳ್ಳಿರಿ, ನಾನು ಪ್ರಾರ್ಥನೆಮಾಡಿ ಬರುತ್ತೇನೆ ಎಂದು ಹೇಳಿ ಪೇತ್ರ ಯಾಕೋಬ ಯೋಹಾನರನ್ನು ತನ್ನ ಜೊತೆಯಲ್ಲಿ ಕರಕೊಂಡು ಹೋಗಿ ಬೆಚ್ಚಿಬೆರಗಾಗಿ ಮನಗುಂದಿದವನಾದನು. ಮತ್ತು ಅವರಿಗೆ ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ. ನೀವು ಇಲ್ಲೇ ಇದ್ದು ಎಚ್ಚರವಾಗಿರ್ರಿ ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ನೆಲದ ಮೇಲೆ ಅಡ್ಡಬಿದ್ದು ಸಾಧ್ಯವಾದರೆ ಆ ಗಳಿಗೆ ತನ್ನನ್ನು ಬಿಟ್ಟುಹೋಗುವಂತೆ ದೇವರನ್ನು ಪ್ರಾರ್ಥಿಸಿ–ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಅಂದನು. ಆ ಮೇಲೆ ಆತನು ಬಂದು ಅವರು ನಿದ್ದೆಮಾಡುವದನ್ನು ಕಂಡು ಪೇತ್ರನಿಗೆ–ಸೀಮೋನನೇ, ನಿದ್ದೆಮಾಡುತ್ತೀಯಾ? ಒಂದು ಗಳಿಗೆಯಾದರೂ ಎಚ್ಚರವಾಗಿರ –ಲಾರೆಯಾ? ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲಸಾಲದು ಎಂದು ಹೇಳಿದನು. ಆ ಮೇಲೆ ತಿರಿಗಿ ಹೋಗಿ ಅದೇ ಮಾತನ್ನು ಹೇಳುತ್ತಾ ಪ್ರಾರ್ಥಿಸಿದನು. ತಿರಿಗಿ ಬಂದಾಗ ಅವರು ನಿದ್ದೆಮಾಡುವದನ್ನು ಕಂಡನು; ಅವರ ಕಣ್ಣುಗಳು ಬಹು ಭಾರವಾಗಿದ್ದವು; ಮತ್ತು ಆತನು ಕೇಳಿದ್ದಕ್ಕೆ ಏನು ಉತ್ತರ ಕೊಡಬೇಕೋ ತಿಳಿಯಲಿಲ್ಲ. ಆತನು ಮೂರನೆಯ ಸಾರಿ ಹೋಗಿ ಬಂದು ಅವರಿಗೆ–ನೀವು ಇನ್ನೂ ನಿದ್ದೆಮಾಡಿ ದಣುವಾರಿಸಿ ಕೊಳ್ಳಿರಿ; ಸಾಕು; ಆ ಗಳಿಗೆ ಬಂತು; ಇಗೋ, ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಿಕೊಡುತ್ತಾನೆ, ಏಳಿರಿ, ಹೋಗೋಣ; ನನ್ನನ್ನು ಹಿಡುಕೊಡುವವನು ಹತ್ತರಕ್ಕೆ ಬಂದಿದ್ದಾನೆ ನೋಡಿರಿ ಎಂದು ಹೇಳಿದನು. ಆತನು ಇನ್ನೂ ಮಾತನಾಡುತ್ತಿರುವಾಗಲೇ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯೂದನು ಬಂದನು. ಮಹಾಯಾಜಕರು ಶಾಸ್ತ್ರಿಗಳು ಹಿರಿಯರು ಇವರ ಕಡೆಯಿಂದ ಒಂದು ಗುಂಪು ಕತ್ತಿ ದೊಣ್ಣೆಗಳನ್ನು ಹಿಡುಕೊಂಡು ಅವನ ಸಂಗಡ ಬಂತು; ಇದಲ್ಲದೆ ಆತನನ್ನು ಹಿಡುಕೊಡುವವನು ಅವರಿಗೆ–ನಾನು ಯಾರಿಗೆ ಮುದ್ದಿಡುತ್ತೇನೋ ಅವನೇ ಆತನು; ಅವನನ್ನು ಹಿಡಿದು ಭದ್ರವಾಗಿ ತೆಗೆದುಕೊಂಡು ಹೋಗಿರಿ ಎಂದು ಗುರುತು ಹೇಳಿಕೊಟ್ಟಿದ್ದನು. ಅಲ್ಲಿಗೆ ಬಂದ ಕೂಡಲೇ ಅವನು ಯೇಸುವಿನ ಬಳಿಗೆ ಹೋಗಿ–ಗುರುವೇ ಎಂದು ಹೇಳಿ ಆತನಿಗೆ ಮುದ್ದಿಡಲು ಅವರು ಆತನ ಮೇಲೆ ಕೈಹಾಕಿ ಆತನನ್ನು ಹಿಡಿದರು. ಆದರೆ ಹತ್ತಿರ ನಿಂತಿದ್ದವರಲ್ಲಿ ಒಬ್ಬನು ತನ್ನ ಕತ್ತಿಯನ್ನು ಹಿರಿದು ಮಹಾಯಾಜಕನ ಆಳನ್ನು ಹೊಡೆದು ಅವನ ಕಿವಿಯನ್ನು ಕಡಿದುಹಾಕಿದನು. ಅವರು ಯೇಸುವನ್ನು ಹಿಡಿದಾಗ ಆತನು ಅವರಿಗೆ–ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನು ದೊಣ್ಣೆಗಳನ್ನು ತೆಗೆದುಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ? ನಾನು ದಿನಾಲು ನಿಮ್ಮ ಸಂಗಡ ಇದ್ದು ದೇವಾಲಯದಲ್ಲಿ ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯಲಿಲ್ಲ. ಆದರೆ ಶಾಸ್ತ್ರವಚನಗಳು ನೆರವೇರುವಂತೆ ಇದೆಲ್ಲಾ ಆಯಿತು ಎಂದು ಉತ್ತರ ಕೊಟ್ಟನು. ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು. ಒಬ್ಬಾನೊಬ್ಬ ಯವನಸ್ಥನು ಬರೀ ಮೈ ಮೇಲೆ ನಾರು ಮಡಿಯನ್ನು ಹೊದ್ದವನಾಗಿ ಆತನ ಹಿಂದೆ ಜನರ ಕೂಡ ಬರುತ್ತಿದ್ದನು. ಅವರು ಅವನನ್ನು ಹಿಡಿಯಲಾಗಿ ಅವನು ಆ ನಾರು ಮಡಿಯನ್ನು ಬಿಟ್ಟು ಬರೀ ಮೈಲಿ ಓಡಿಹೋದನು.

## ಲೂಕ 22:39–53

ತರುವಾಯ ಆತನು ಹೊರಟು ಪದ್ಧತಿ ಪ್ರಕಾರ ಎಣ್ಣೇಮರಗಳ ಗುಡ್ಡಕ್ಕೆ ಹೋದನು. ಶಿಷ್ಯರು ಆತನ ಹಿಂದೆ ಹೋದರು. ಆತನು ಕ್ಲುಪ್ತಸ್ಥಳಕ್ಕೆ ಬಂದಾಗ ಅವರಿಗೆ–ನೀವು ಶೋಧನೆಗೆ ಒಳಗಾಗದಂತೆ ದೇವರನ್ನು ಪ್ರಾರ್ಥಿಸಿ ಎಂದು ಹೇಳಿದನು. ಆ ಮೇಲೆ ಆತನು ಅವರನ್ನು ಬಿಟ್ಟು ಕಲ್ಲೆಸುಗೆಯಷ್ಟು ದೂರ ಹೋಗಿ ಮೊಣಕಾಲೂರಿ–ತಂದೆಯೇ, ನಿನಗೆ ಇಷ್ಟವಿದ್ದರೆ ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಹೇಗೂ ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ ಅಂದನು. ಆಗ ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು. ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು. ಆತನು ಪ್ರಾರ್ಥನೆ ಮುಗಿಸಿ ಎದ್ದು ಶಿಷ್ಯರ ಬಳಿಗೆ ಬಂದು ದುಃಖಭಾರ ದಿಂದ ಇವರಿಗೆ ನಿದ್ರೆಹತ್ತಿರುವದನ್ನು ಕಂಡು ಅವರಿಗೆ–ನೀವು ನಿದ್ರೆ ಮಾಡುವದೇನು? ಏಳಿರಿ, ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸಿರಿ ಎಂದು ಹೇಳಿದನು. ಆತನು ಇನ್ನೂ ಮಾತನಾಡುತ್ತಿ–ರಲು ಇಗೋ, ಜನರ ಗುಂಪು ಕಾಣಿಸಿತು. ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಯೂದನೆಂಬವನು ಆ ಜನರ ಮುಂದೆ ಮುಂದೆ ನಡೆದನು. ಅವನು ಯೇಸುವಿಗೆ ಮುದ್ದಿಡುವದಕ್ಕಾಗಿ

ಆತನ ಬಳಿಗೆ ಬರಲು ಯೇಸು ಅವನಿಗೆ–ಯೂದನೇ, ಮುದ್ದಿಟ್ಟು ಮನುಷ್ಯಕುಮಾರನನ್ನು ಹಿಡುಕೊಡುತ್ತೀಯಾ ಎಂದು ಕೇಳಿದನು. ಆತನ ಸುತ್ತಲಿದ್ದವರು ಮುಂದೆ ಆಗುವದನ್ನು ತಿಳಿದು–ಸ್ವಾಮೀ, ನಾವು ಕತ್ತಿಯಿಂದ ಹೊಡೆಯೋಣೋ ಎಂದು ಕೇಳಿದರು. ಅವರಲ್ಲಿ ಒಬ್ಬನು ಮಹಾಯಾಜಕನ ಆಳನ್ನು ಹೊಡೆದು ಅವನ ಬಲಗಿವಿಯನ್ನು ಕಡಿದು ಹಾಕಿದನು. ಆದರೆ ಯೇಸು–ಇಷ್ಟಕ್ಕೇ ಬಿಡಿರಿ ಎಂದು ಹೇಳಿ ಆ ಕಿವಿಯನ್ನು ಮುಟ್ಟಿ ಅವನಿಗೆ ವಾಸಿ ಮಾಡಿದನು. ಬಳಿಕ ಯೇಸು ತನ್ನನ್ನು ಹಿಡಿಯುವದಕ್ಕೆ ಬಂದ ಮಹಾಯಾಜಕರಿಗೂ ದೇವಾಲಯದ ಕಾವಲಿನ ದಳವಾಯಿ – ಗಳಿಗೂ ಸಭೆಯ ಹಿರಿಯರಿಗೂ–ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನೂ ದೊಣ್ಣೆಗಳನ್ನೂ ತೆಗೆದುಕೊಂಡು ಬಂದಿರಾ? ನಾನು ದಿನಾಲು ದೇವಾಲಯದಲ್ಲಿ ನಿಮ್ಮ ಸಂಗಡ ಇದ್ದಾಗ ನೀವು ನನ್ನ ಮೇಲೆ ಕೈಹಾಕಲಿಲ್ಲ; ಆದರೆ ಇದು ನಿಮ್ಮ ಕಾಲ, ಇದು ಅಂಧಕಾರದ ದೊರೆತನ ಎಂದು ಹೇಳಿದನು.

## ಯೋಹಾನ 18:1–12

ಯೇಸು ಇದನ್ನು ಹೇಳಿದ ಮೇಲೆ ತನ್ನ ಶಿಷ್ಯರ ಸಂಗಡ ಕೆದ್ರೋನ್ ಹಳ್ಳದ ಆಚೆಗೆ ಹೊರಟುಹೋದನು. ಅಲ್ಲಿ ಒಂದು ತೋಟವಿತ್ತು. ಅದರೊಳಕ್ಕೆ ಆತನೂ ಆತನ ಶಿಷ್ಯರೂ ಹೋದರು. ಯೇಸುವೂ ಆತನ ಶಿಷ್ಯರೂ ಆಗಾಗ್ಗೆ ಅಲ್ಲಿ ಕೂಡುತ್ತಾ ಇದ್ದದ್ದರಿಂದ ಆತನನ್ನು ಹಿಡುಕೊಟ್ಟ ಯೂದನಿಗೂ ಆ ಸ್ಥಳವು ಗೊತ್ತಾಗಿತ್ತು. ಹೀಗಿರಲಾಗಿ ಯೂದನು ಸಿಪಾಯಿಗಳ ಪಟಾಲಮ್ಮನ್ನು ಮಹಾಯಾಜಕರು ಮತ್ತು ಫರಿಸಾಯರು ಕೊಟ್ಟ ಓಲೇಕಾರರನ್ನೂ ಕರಕೊಂಡು ದೀವಿಟಿಗೆಗಳನ್ನು ಪಂಜುಗಳನ್ನು ಆಯುಧಗಳನ್ನು ಹಿಡಿಸಿಕೊಂಡು ಅಲ್ಲಿಗೆ ಬಂದನು. ಆಗ ಯೇಸು ತನ್ನ ಮೇಲೆ ಬರುವದನ್ನೆಲ್ಲಾ ತಿಳಿದು ಹೊರಟುಹೋಗಿ–ನೀವು ಯಾರನ್ನು ಹುಡುಕುತ್ತೀರಿ ಎಂದು ಅವರನ್ನು ಕೇಳಿದನು. ಅದಕ್ಕೆ ಅವರು ನಜರೇತಿನ ಯೇಸುವನ್ನು ಹುಡುಕುತ್ತೇವೆ ಅನ್ನಲು ಯೇಸು ಅವರಿಗೆ–ನಾನೇ ಅವನು ಎಂದು ಹೇಳಿದನು. ಆತನನ್ನು ಹಿಡುಕೊಡುವ ಯೂದನೂ ಸಹ ಅವರ ಸಂಗಡ ನಿಂತಿದ್ದನು. ಆತನು ಅವರಿಗೆ–ನಾನೇ ಅವನು ಎಂದು ಹೇಳಿದಾಗ ಅವರು ಹಿಂದಕ್ಕೆ ಸರಿದು ನೆಲದ ಮೇಲೆ ಬಿದ್ದರು. ಆತನು–ಯಾರನ್ನು ಹುಡುಕುತ್ತೀರೆಂದು ತಿರಿಗಿ ಅವರನ್ನು ಕೇಳಲು ಅವರು–ನಜರೇತಿನ ಯೇಸುವನ್ನು ಹುಡುಕುತ್ತೇವೆ ಅಂದರು. ಅದಕ್ಕೆ ಯೇಸು–ನಾನೇ ಅವನೆಂದು ನಿಮಗೆ ಹೇಳಿದನಲ್ಲಾ; ನೀವು ನನ್ನನ್ನೇ ಹುಡುಕುವವ –ರಾದರೆ ಇವರು ಹೋಗಬಿಡಿರಿ ಅಂದನು. ನೀನು ನನಗೆ ಕೊಟ್ಟವರಲ್ಲಿ ಒಬ್ಬನನ್ನಾದರೂ ನಾನು ಕಳಕೊಳ್ಳಲಿಲ್ಲವೆಂದು ಆತನು ಹೇಳಿದ ಮಾತು ಹೀಗೆ ನೆರವೇರಿತು. ಸೀಮೋನ ಪೇತ್ರನಲ್ಲಿ ಒಂದು ಕತ್ತಿಯಿತ್ತು; ಅದನ್ನು ಅವನು ಹಿರಿದು ಮಹಾಯಾಜಕನ ಆಳನ್ನು ಹೊಡೆದು ಅವನ ಬಲಗಿವಿಯನ್ನು ಕತ್ತರಿಸಿದನು. ಆ ಆಳಿನ ಹೆಸರು ಮಲ್ಕನು. ಆಗ ಯೇಸು ಪೇತ್ರನಿಗೆ–ಕತ್ತಿಯನ್ನು ಒರೆಯಲ್ಲಿ ಹಾಕು ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ ಎಂದು ಹೇಳಿದನು. ಮೇಲೆ ಆ ಸಿಪಾಯಿಗಳು ಸಹಸ್ರಾಧಿಪತಿಯೂ ಯೆಹೂದ್ಯರ ಓಲೇಕಾರರೂ ಯೇಸುವನ್ನು ಹಿಡುಕೊಂಡು ಕಟ್ಟಿ ಮೊದಲು ಅನ್ನನ ಬಳಿಗೆ ಕರಕೊಂಡು ಹೋದರು.

*****

# ಕರ್ತನಿಗಾದ ವಿಶ್ವಾಸದ್ರೋಹ

### ರೀಪ್ರಿಂಟ್ಸ್ ಪುಟ 2467

## ಯೋಹಾನ 18:1–14

**"ಅವನು ಜನರು ಓರೆಮುಖಮಾಡಿಕೊಳ್ಳುವ ದಿಕ್ಕಾರಕ್ಕೊಳಗಾಗಿದ್ದನು" – ಯೆಶಾಯ 53:3**

ಕರ್ತನು ಮಾಡಿದ ಕಡೆಯ ಭೋಜನದ ನಂತರದಲ್ಲಿ ಮತ್ತು ಶಿಷ್ಯರಿಗೆ ದ್ರಾಕ್ಷೇಬಳ್ಳಿ ಮತ್ತು ಕೊಂಬೆಗಳ ವಿಷಯವಾದ ತನ್ನ ಪ್ರಬೋಧನೆಯನ್ನು ನೀಡಿದ ಮೇಲೆ ಬಂದಿತ್ತು ಯೋಹಾನನ ಸುವಾರ್ತೆಯ 17ನೇ ಅಧ್ಯಾಯದಲ್ಲಿ ದಾಖಲಾಗಿರುವ ನಮ್ಮ ಕರ್ತನ ಸೊಗಸಾದ ಪ್ರಾರ್ಥನೆ. ಆನಂತರ ಸುಮಾರು ಮಧ್ಯರಾತ್ರಿಯ ಸಮಯಕ್ಕೆ ಯೇಸುವು ಹನ್ನೊಂದು ಮಂದಿಯೊಂದಿಗೆ ಯೆರೂಸಲೇಮಿನ ಬಾಗಿಲಿನ ಹೊರಗೆ ಸಾಗಿದವನಾಗಿ ಕಿದ್ರೋನ್ ಎಂದು ಕರೆಯಲ್ಪಡುವ ಚಿಕ್ಕ ಹಳ್ಳದ ತೊರೆಯನ್ನು ದಾಟಿದ ನಂತರದಲ್ಲಿ ಮುಂದಿರುವ ಗುಡ್ಡದ ಮೇಲಿನ ಎಣ್ಣೆಮರಗಳ ಹಣ್ಣಿನ ತೋಟವಾದ ಗೆತ್ಸೇಮನೆ ಎಂದು ತಿಳಿಯಲಾದ ತೋಟವನ್ನು ಸೇರಿದ್ದರು; ಬಹುಶಃ ಅದು ಒಂದು ಸಾರ್ವಜನಿಕ ಉದ್ಯಾನವನ ಆಗಿರುವ ಅಥವಾ ನಮ್ಮ ಕರ್ತನಿಗೆ ಮಿತ್ರರಾಗಿದ್ದ ಒಬ್ಬರ ತೋಟವಾಗಿರುವ ಸಾಧ್ಯತೆಯಿತ್ತು. ಅದರ ಸ್ಥಳವು ಯಾವ ಉದ್ದೇಶಕ್ಕಾಗಿ ಇರುತ್ತಿದ್ದಾದರೂ ಈಗ ಅದು ಒಂದು ತೋಟವಾಗಿ ಸಂರಕ್ಷಿಸಲಾಗಿದ್ದು ಅದು ಶತಮಾನಗ–ಳಿಂದಲೂ ಇರುವದು. ಅದು ಈಗ ಕ್ರೈಸ್ತ ಸನ್ಯಾಸಿಗಳ ಅಧೀನದಲ್ಲಿದ್ದು ಅದನ್ನು ನೋಡಲು ಬರುವ ಸಂದರ್ಶನಕಾರ–ರನ್ನು ಸ್ವೀಕರಿಸಿಕೊಳ್ಳಲು ಅವರು ಹರ್ಷವುಳ್ಳವರಾಗಿರುವರು. ಪ್ರಸ್ತುತದಲ್ಲಿ ಸುಮಾರು ಆರು ಅಥವಾ ಎಂಟು ಬಹು ವಿಶಾಲ–ವಾದ ಮರಗಳು ಆ ತೋಟದಲ್ಲಿದ್ದು ಅವು ಬಹು ಹಳೆಯದಾಗಿ–ರುವದೆಂಬದು ಸ್ಪಷ್ಟವಾಗಿದ್ದು ಅವು ಕನಿಷ್ಠದಲ್ಲಿ ಒಂದು ಸಾವಿರ ವರುಷಗಳಷ್ಟು ಹಳೆಯದಾಗಿದ್ದರೂ ಇನ್ನೂ ಬಹು ಹಳೆಯದಾಗಿ–ರುವ ಸಾಧ್ಯತೆಯಿರುವದೆಂಬ ಸಾಕ್ಷ್ಯಾಧಾರ ಹೊಂದಿರುವದು.

ತನ್ನ ಶಿಷ್ಯರೊಡನೆ ಮಾತನಾಡುತ್ತಿರುವಾಗಲೂ ಮತ್ತು ಅವರಿಗಾಗಿ ಪ್ರಾರ್ಥಿಸುವಾಗಲೂ ನಮ್ಮ ಕರ್ತನು ಸಾಕಷ್ಟು

ಧೈರ್ಯವುಳ್ಳವನಾಗಿರುವಂತೆ ತೋರುತ್ತಿತ್ತು: ಅವರ ಹೃದಯಗಳು ಕಳವಳಗೊಳ್ಳದಂತೆ ಪ್ರೋತ್ಸಾಹಿಸುವಾಗಲೂ ಆತನ ಹೃದಯವು ಕುಂದಿಹೋಗಿರಲಿಲ್ಲವೆಂಬದು ಸ್ಪಷ್ಟವಾಗಿತ್ತು. ಆದರೆ ಆ ಸಣ್ಣ ಗುಂಪು ಗೆತ್ಸೇಮನೆಯ ಕಡೆಗೆ ತನ್ನ ದಾರಿಯನ್ನು ನಿಧಾನವಾಗಿ ಕ್ರಮಿಸುತ್ತಿರುವಾಗ ನಮ್ಮ ಪ್ರಿಯ ವಿಮೋಚಕನ ಸೂಕ್ಷ್ಮ ಮನಸ್ಸು ಬಹು ಭಾರವಾಗಿರಬಹುದೆಂಬುದನ್ನು ನಾವು ಚೆನ್ನಾಗಿ ಕಲ್ಪಿಸಿಕೊಳ್ಳಬಹುದು. "ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ" (ಮತ್ತಾಯ 26:38) ಎಂದು ನಮ್ಮ ಕರ್ತನು ಹೇಳುತ್ತಿರುವದನ್ನು ಭಾವಿಸಿಕೊಳ್ಳಲು ನಮಗೆ ಸಾಧ್ಯ. ಆದುದರಿಂದ ಪ್ರಸ್ತುತದಲ್ಲಿ ಗೆತ್ಸೇಮನೆ ತೋಟಕ್ಕೆ ನಮ್ಮ ಕರ್ತನು ನೀಡುತ್ತಿರುವ ಭೇಟಿಯು ಹಿಂದಿನವುಗಳಿಗಿಂತ ಬಹು ಭಿನ್ನವಾಗಿದ್ದುದು ಸ್ಪಷ್ಟವಾಗಿತ್ತು. ಆ ಮಹತ್ವದ ಘಟನೆಯು ನಮ್ಮ ಒಡೆಯನ ಮನಗುಂದುವಿಕೆಯ ಮೂಲಕವಾಗಿ ಅಪೋಸ್ತಲರ ಹೃದಯಗಳಲ್ಲಿ ಸ್ಫೂರ್ತಿ ಉಂಟು ಮಾಡಿತ್ತೆಂಬದು ನಿಸ್ಸಂದೇಹ–ವಾಗಿತ್ತು. ಆದರೂ ಆನಂತರದಲ್ಲಿ ಸಂಭವಿಸಲಿರುವದು ಏನೆಂಬದನ್ನು ಅವರು ಲಘುವಾಗಿ ಗ್ರಹಿಸಿಕೊಂಡಿರುವ ಸಂಭವವಿತ್ತು.

ತೋಟಕ್ಕೆ ಆಗಮಿಸಿದ ನಮ್ಮ ಕರ್ತನು ಅಪೋಸ್ತಲರಲ್ಲಿ ಎಂಟು ಮಂದಿಯನ್ನು ಬಾಗಲಿನ ಬಳಿಯಲ್ಲೇ ಬಿಟ್ಟು ತನ್ನ ಸಹಪಾಟಿಗಳಲ್ಲಿ ಬಹು ನಿಕಟವಾಗಿದ್ದ ಪೇತ್ರ ಯಾಕೋಬ ಯೋಹಾನರನ್ನು ತನ್ನೊಡನೆ ಸ್ವಲ್ಪ ಮುಂದೆ ಕರಕೊಂಡು ಹೋಗಿ ಅದು ಬಹು ವಿಶೇಷವಾದ ಪರಿಶೋಧನಾ ಸಮಯವಾಗಿದ್ದರಿಂದ ಅವರೆಲ್ಲರೂ ಎಚ್ಚರವಾಗಿದ್ದು ಪ್ರಾರ್ಥಿಸುವದರಲ್ಲಿ ಜಾಗರೂಕರಾಗಿರಬೇಕೆಂದು ಹೇಳಿದುದನ್ನು ನಾವು ಇತರ ಸೌವಾರ್ತಿಕರ [ವಿವರಣೆಯ] ಮೂಲಕ ಅಲ್ಪಸ್ವಲ್ಪವಾಗಿ ಕಲೆಹಾಕಿಕೊಳ್ಳಬಹುದು. ಆತನು ಇನ್ನು ಸ್ವಲ್ಪ ಮುಂದೆ ಹೋಗಿ ಏಕಾಂತವಾಗಿ ತಂದೆಯೊಡನೆ ಸಂಸರ್ಗದಲ್ಲಿದ್ದನು. ಆತನು ತನ್ನ ಭಾವನೆಯನ್ನು ತನ್ನ ಪ್ರಿಯ ಶಿಷ್ಯರೊಂದಿಗೆ ಸಹ ಹಂಚಿಕೊಳ್ಳಲಾಗುತ್ತಿರಲಿಲ್ಲ, ಅದು ಸಾಧ್ಯವೂ ಇರುತ್ತಿರಲಿಲ್ಲ; ಆತನಿಗಾದ ಪರಿಶೋಧನೆಯ ಬಗ್ಗೆ ಗ್ರಹಿಸಿಕೊಳ್ಳಲು ಅವರಿಗೆ ಸಾಧ್ಯವಿರಲಿಲ್ಲ; ಅವರು ಇನ್ನೂ ಪವಿತ್ರಾತ್ಮನಿಂದ ಹುಟ್ಟಿದವರಾಗಿ–ರಲಿಲ್ಲ. ಹೀಗೆ ತನ್ನ ಅತಿ ಪರಿಶೋಧನಾ ಸಮಯದಲ್ಲಿ ಯೇಸುವು ಒಬ್ಬೊಂಟಿಗನಾಗಿದ್ದನು. "ಜನಾಂಗದವರಲ್ಲಿ ಯಾರೂ ನನ್ನೊಂದಿಗಿರಲಿಲ್ಲ" – ಯೆಶಾಯ 63:3

ರಕ್ತದೋಪಾದಿಯಲ್ಲಿ ಬೆವರಿನ ಹನಿಗಳನ್ನು ಉಂಟು ಮಾಡಿದ್ದ ಆ ಸಂದರ್ಭದಲ್ಲಿ ತನ್ನ ನರಮಂಡಲದ ಮೇಲೆ ಉಂಟುವಾಡಿದ ಒತ್ತಡ ಎಷ್ಟೆಂಬುದನ್ನು ತಿಳಿಯುವ ಮೂಲಕವಾಗಿ ನಮ್ಮ ಪ್ರಿಯ ಕರ್ತನ ಪರಿಶೋಧನೆಯ ನಿಜವಾದ ಗುಣಲಕ್ಷಣಗಳ ಬಗ್ಗೆ ಮನವರಿಕೆಮಾಡಿಕೊಳ್ಳಲು ಬಹು ಪಾಲು ಜನರಿಗೆ ಅದರಲ್ಲಿಯೂ ಕ್ರೈಸ್ತರಿಗೆ ಸಹ ಕಷ್ಟಕರವಾಗಿರುವದು. ಹಲವರು–ನಮ್ಮ ಕರ್ತನು ಬಾಧೆಯನ್ನು ಅನುಭವಿಸಿದ ರೀತಿಯನ್ನು ರಕ್ತಸಾಕ್ಷಿಗಳಾದ ಆತನ ಕೆಲವು ಹಿಂಬಾಲಕರು ಅಸಾಧಾರಣವಾದ ಧೈರ್ಯದಿಂದ ಮರಣಕ್ಕೆ ಹೋದುದನ್ನು ಹೋಲಿಸಿಕೊಂಡು ಹಾಗು ಆ ಸಂಗತಿಗಳನ್ನು ಪ್ರತಿಯಾಗಿ ಹೋಲಿಸಿಕೊಂಡವರಾಗಿ ಪರಿಪೂರ್ಣತೆಯುಳ್ಳವನಾಗಿದ್ದ ನಮ್ಮ ಕರ್ತನು ತನ್ನ ಅಪರಿಪೂರ್ಣರಾದ ಹಿಂಬಾಲಕರುಗಳಿಗಿಂತಲೂ ಏಕೆ ಬಹು ಅಧಿಕವಾದ ಶ್ರಮಸಂಕಟಗಳನ್ನು ಸಹಿಸಿಕೊಳ್ಳಬೇಕಾಗಿ ಬಂತೆಂಬದಕ್ಕೆ ಆಶ್ಚರ್ಯಪಡುವ ಪ್ರವೃತ್ತಿಯುಳ್ಳವರಾಗಿರುವರು. ನಿಜವಾದ ಸನ್ನಿವೇಶದ ಬಗ್ಗೆ ಗ್ರಹಿಸಿಕೊಳ್ಳಲು ಹಲವಾರು ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವದು ಅವಶ್ಯವಾಗಿರುವದು; ಅದೇನಂದರೆ:–

(1) ಜೀವಿತದ ಪರಿಪೂರ್ಣವಾದ ಹಕ್ಕನ್ನು ಹೊಂದಿರುವ ನಮ್ಮ ಕರ್ತನಿಗೆ ಅದನ್ನು ಮರಣಕ್ಕೆ ಒಪ್ಪಿಸಿಕೊಡುವಂಥದ್ದು, ಆ ಹಕ್ಕನ್ನು ಕಳಕೊಂಡು ಕುಂಠಿತವಾಗಿರುವ ಜೀವವನ್ನು ಹೊಂದಿಕೊಂಡವರಾಗಿ ದೀರ್ಘಕಾಲದ ವರೆಗೂ ಅದನ್ನು ಉಳಿಸಿಕೊಳ್ಳಲು ಯಾವ ನಿರೀಕ್ಷೆಯೂ ಇಲ್ಲದಂಥವರು ತಮ್ಮ ಜೀವವನ್ನು ಮರಣಕ್ಕೆ ಒಪ್ಪಿಸಿಕೊಡುವದಕ್ಕಿಂತಲೂ, ಒಂದು ವಿಭಿನ್ನ ಸಂಗತಿಯಾಗಿತ್ತು.

(2) ನಮ್ಮ ಸಂತತಿಯವರಲ್ಲಿ ಹತ್ತರಲ್ಲಿ ಒಂಭತ್ತು ಪಾಲು ಈಗಾಗಲೇ ಸತ್ತವರಾಗಿದ್ದು ಜೀವಕ್ಕೆ ಇರುವ ಮಹತ್ತರವಾದ ಬೆಲೆಯ ಬಗ್ಗೆ ಕ್ಷೀಣವಾದ ರೀತಿಯಲ್ಲಿ ಅರಿತವರಾಗಿದ್ದು, ಅವರ ಅನುಭವಗಳೆಲ್ಲವೂ ಮರಣಕ್ಕೆ ಸಂಬಂಧಿಸಿದ್ದು, ಮರಣವನ್ನು ಅವುಗಳಿಗೆ ಸಮನಾಗಿ ಪರಿಗಣಿಸುವಂತಾಗಿರುವದು. ಆದರೆ "ಜೀವ ನಾಯಕನಾದ" ನಮ್ಮ ಕರ್ತನ ಸಂಗತಿಯು ಹೀಗಿರಲಿಲ್ಲ, ಈತನು ಆದಿಯಿಂದಲೂ ತಂದೆಯೊಡನೆ ಇದ್ದವನಾಗಿ; ಎಲ್ಲಾ ವಸ್ತುಗಳು ಈತನ ಮೂಲಕವಾಗಿ ಉಂಟಾಗಿರಲು, ಜೀವವೆಂಬದು ಒಂದು ಅಮೂಲ್ಯವಾದ ವರದಾನ, ಸೌಭಾಗ್ಯಕರವಾದುದು, ಅನುಭವದಾಯಕವೆಂಬುದನ್ನು ಈತನು ಮನಗಂಡವನಾಗಿದ್ದನು. ಆದುದರಿಂದ ಮರಣವೆನ್ನುವದು ಈತನಿಗೆ ನಮಗಿಂತಲೂ ಅತ್ಯಂತ ಭೀಕರವಾದ ಸಂಗತಿ–ಯಾಗಿರಬೇಕು. ನಮ್ಮಲ್ಲಿ ಹತ್ತರಲ್ಲಿ ಒಂಭತ್ತು ಪಾಲು ಈಗಾಗಲೇ ಸತ್ತವರಾಗಿದ್ದು ನಮ್ಮ ಮನಸ್ಸಿನ ಸೂಕ್ಷ್ಮತೆಯೆಲ್ಲವೂ ಇದರ ಅನುಗುಣವಾಗಿ ಮೊಂಡಾಗಿರುವದು. ಆತನು [ಕರ್ತನು] ಮರಣದ ಪರ್ಯಂತರವಾಗಿ ನಂಬಿಗಸ್ತನಾಗಿದ್ದಲ್ಲಿ ಪುನರುತ್ಥಾನ ಹೊಂದುವನೆಂಬ ಬರವಸೆಯನ್ನು ತಂದೆಯಿಂದ ಪಡೆದಿದ್ದನೆಂಬದು ನಿಜವೇ. ಮತ್ತು ಆತನು ತಂದೆಯ ವಾಗ್ದಾನವನ್ನು ಪ್ರಶ್ನಾತೀತವಾಗಿ ನಂಬಿದ್ದನು. ಆತನ ಜೀವಿತದ ಮಾರ್ಗವೆಲ್ಲವೂ ತಂದೆಯ ಮೇಲಿದ್ದ ತನ್ನ ನಿರ್ವಿವಾದ ಪ್ರೀತಿಯ ಬಗ್ಗೆ ಹೇರಳವಾದ ಸಾಕ್ಷ್ಯಾಧಾರವನ್ನು ನೀಡುತ್ತದೆ. ಆದರೂ ಆತನ ವಿಷಯದಲ್ಲಿ ಇದು ನಂಬಿಕೆಯ ಸಂಬಂಧವಾಗಿ ನಮಗಿಂತಲೂ ಬಹು ನಿರ್ಣಾಯಕವಾದ ಒಂದು ಅಧಿಕ ರೀತಿಯ ಪರಿಶೋಧನೆಯಾಗಿರಬೇಕು. ನಾವು ಕಳೆದುಕೊಂಡಂಥ ಜೀವದ ಕೇವಲ ಒಂದು ತುಣುಕು ಮಾತ್ರವೇ ಅರ್ಪಿಸ ಸಲುವಾಗಿ ಹೊಂದಿರುವೆವು; ಆದರೆ ಇದಕ್ಕೆ ಬದಲಾಗಿ ನಾವು ಕ್ರಿಸ್ತನ ಮೂಲಕವಾಗಿ ಮುಂದಿನ ಜೀವಿತದ ಬಗ್ಗೆ ತಂದೆಯಿಂದ ವಾಗ್ದಾನ ಹೊಂದಿರುವದು ಮಾತ್ರವಲ್ಲದೆ ನಮ್ಮ ಪ್ರೀಯ ವಿಮೋಚಕನ ಪುನರುತ್ಥಾನದಲ್ಲಿ ತೋರಲಾದ ತಂದೆಯ ಶಕ್ತಿಯ ದೃಷ್ಟಾಂತವನ್ನೂ ಹೊಂದಿರುವೆವು. ಆದರೆ ನಮ್ಮ ಕರ್ತನಾದ ಯೇಸುವಿಗೆ ಇಂಥಾ ದೈವೀಕ ಶಕ್ತಿಯ ಸಾಕ್ಷ್ಯಾಧಾರವಿರಲಿಲ್ಲ. ತಾನೇ ದೇವರ ವಾಗ್ದಾನದ ಪ್ರಕಾರವಾಗಿ "ಸತ್ತವರೊಳಗಿಂದ

ಮೊದಲು ಎದ್ದು ಬಂದವನೂ" "ದೇವರ... ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ" ಆಗಬೇಕಿತ್ತು. – ಕೊಲೊಸ್ಸೆ 1:18; 1:15

ಆದರೆ ತನ್ನ ಸೇವೆಯ ಬಹು ಆದಿಯಲ್ಲೇ ಇವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡವನಾಗಿ ಆಗಲೇ ಇದನ್ನು ವಿಚಾರಮಾಡಿ ಪರಿಶೀಲಿಸಿ ಅಂಗೀಕರಿಸಿಕೊಂಡಿದ್ದನು. ತನ್ನ ಕುರಿಗಳಿಗಾಗಿ ತನ್ನ ಪ್ರಾಣವನ್ನು ಕೊಡುವದು ಅಗತ್ಯವಿರುವದಾಗಿ ಆತನು ಆಗಲೇ ಶಿಷ್ಯರಿಗೆ ಹೇಳಿ ಅದನ್ನು ಮಾಡಲು ಮುಂದಾಗಿದ್ದನು. (ಯೋಹಾನ 10:15) ಆದುದರಿಂದ ನಮ್ಮ ಪ್ರಿಯ ವಿಮೋಚಕನು–"ತಂದೆಯೇ, ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ" ಎಂದು ಪ್ರಾರ್ಥಿಸಿದ್ದಾಗ–ಸಾಧ್ಯವಿದ್ದಲ್ಲಿ ತಾನು ಮರಣದಿಂದ ತಪ್ಪಿಸಿಕೊಳ್ಳಬೇಕೆಂಬ ಅರ್ಥದಲ್ಲಿ ಆತನು ಇದನ್ನು ಹೇಳಿದ್ದನೆಂದು ನಾವು ಭಾವಿಸಿಕೊಳ್ಳಬಾರದು. ತಾನು ದೋಷಪರಿಹಾರಕ ಯಜ್ಞವಾಗಿ [ಶಿಲುಬೆಯ ಮೇಲೆ] ಎತ್ತಲ್ಪಡದ ಹೊರತು ಲೋಕವನ್ನು ತನ್ನ ಬಳಿಗೆ ಎಳೆದುಕೊಳ್ಳುವಂಥದು ಸಂಭವಿಸುವದಿಲ್ಲವೆಂಬುದು ಆತನಿಗೆ ಚೆನ್ನಾಗಿ ತಿಳಿದಿದ್ದು, ನಮ್ಮ ಪಾಪಗಳಿಗಾಗಿ ತಾನು ಮರಣಹೊಂದಿ ತನ್ನ ಮಹಿಮೆಗೆ ಸೇರುವದು ಸಂಪೂರ್ಣವಾಗಿ ಅಗತ್ಯವೆಂಬುದನ್ನು ಆಗಲೇ ಆತನು ಅಪೊಸ್ತಲರಿಗೆ ವಿವರಿಸಿ ಹೇಳಿದ್ದನು. – ಯೋಹಾನ 3:14; 12:32

ಆದುದರಿಂದ ಸಾಧ್ಯವಾದಲ್ಲಿ ಆ ಪಾತ್ರೆಯು ತನ್ನನ್ನು ಬಿಟ್ಟುಹೋಗಲಿ ಎಂದು ಪ್ರಾರ್ಥನೆ ಮಾಡಿದ್ದರಲ್ಲಿ ಪಾತ್ರೆಯೆಂಬದು ತಾನು ಒಬ್ಬ ನಿಯಮ ಉಲ್ಲಂಘನೆಮಾಡಿದ್ದರ ಪರಿಣಾಮವಾಗಿ ಬಂಧನವಾಗುವದು, ಸಾರ್ವಜನಿಕವಾದ ವಿಚಾರಣೆ, ಅಪರಾಧ ನಿರ್ಣಯ ಹಾಗು ಆನಂತರದಲ್ಲಿ ಒಬ್ಬ ಅಪರಾಧಿಯಂತೆ ಶಿಲುಬೆಗೆ ಹಾಕಲ್ಪಡುವದು ಇದರಲ್ಲಿ ಉಂಟಾಗುವ ಅವಮಾನ ಅಪಕೀರ್ತಿಯ ಬಗ್ಗೆ ಎಂಬುದನ್ನು ನಾವು ಕಲ್ಪಿಸಿಕೊಳ್ಳಬೇಕು. ಮನುಷ್ಯರು ಸಾಧಾರಣವಾಗಿ ಸಾಯುವಂತೆ ನಮ್ಮ ಪಾಪಗಳಿಗಾಗಿ ವಿಶೇಷವಲ್ಲದ ಅವಮಾನ ಹಾಗು ಅಪಕೀರ್ತಿಯನ್ನು ಹೊಂದದೆಯೇ ಸಾಯುವದು ಒಂದು ಸಂಗತಿಯಾದರೆ ತೀವ್ರವಾದ ಅವಮಾನ ಅಗೌರವ ತಿರಸ್ಕಾರಗಳೊಂದಿಗೆ ಸಾಯಬೇಕೆಂಬುವಂಥದು ಮತ್ತೊಂದು ಸಂಗತಿಯಾಗಿತ್ತು. ತಂದೆಯ ಜ್ಞಾನವಿವೇಕದ ಪ್ರಕಾರವಾಗಿ ಈ ಕಡೆಯ ಘಟನಾವಳಿಗಳು ಅದು ನೆರವೇರುವ ಸಮಯವು ಬರುವವರೆಗೂ ನಮ್ಮ ಪ್ರಿಯ ವಿಮೋಚಕನಿಂದ ಹೆಚ್ಚುಕಡಿಮೆ ಅದನ್ನು ಮುಚ್ಚಿಡುವದು ಬಹು ಸಂಭವನೀಯವಾಗಿತ್ತು. ಅಲ್ಲದೆ ನಮ್ಮ ಕರ್ತನಾದ ಯೇಸುವಿಗೆ ಈಡುಬೆಲೆಯನ್ನು ಕೊಡುವ ಸಲುವಾಗಿ ಪಾಪಿಯು ಬಾಧೆಯನ್ನು ಅನುಭವಿಸುವದಕ್ಕಿಂತಲೂ ಹೆಚ್ಚಾಗಿ ಬಾಧೆಯನ್ನು ಅನುಭವಿಸುವದರ ಪೂರ್ಣ ಅಗತ್ಯತೆ ಯಾವುದಾದರೂ ಇರುವದು ಆತನಿಗೆ ಕಂಡುಬಂದಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದುದರಿಂದ ಆ ಸಮಯದಲ್ಲಿ "ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ" ಎಂಬುದು ಆತನ ಪ್ರಾರ್ಥನೆಯಾಗಿತ್ತು. ಅಪೊಸ್ತಲನು ಸಹ ಈ ವಿಶಿಷ್ಟತೆಯನ್ನು ಗಮನಿಸಿ ಹೀಗೆ ಹೇಳಿರುವನು–ಆತನು "ಮರಣವನ್ನು" ಅಂದರೆ "ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು." – ಫಿಲಿಪ್ಪಿ 2:8

ಈ ವರೆಗೂ ನಾವು ತೀರ್ಮಾನಿಸ ಶಕ್ತ್ಯಾನುಸಾರ ನಿಂದಾಪಮಾನ ಮುಂತಾದವುಗಳ ಸಹಿತವಾದ ಶಿಲುಬೆಯ ಮರಣವು ನಮ್ಮ ಈಡು ಬೆಲೆಯಾಗುವ ಅಗತ್ಯವಿರಲಿಲ್ಲ; ಯಾಕಂದರೆ ಆ ದಂಡನೆಯಲ್ಲಿ–ನೀನು [ಇದನ್ನು] ತಿಂದ ದಿನವೇ ಸಾರ್ವಜನಿಕ ನಿಂದಾಪಮಾನಗಳ ಸಹಿತವಾದ ಶಿಲುಬೆಯ ಮರಣದ ಮೂಲಕವಾಗಿ ಸತ್ತೇಹೋಗುವಿ ಎಂದು ಹೇಳಲಿರಲಿಲ್ಲ. ಆ ಶಿಕ್ಷೆಯು ಮರಣವಾದ್ದರಿಂದ (ಆದಿಕಾಂಡ 2:17) ಯಾವ ವಿಧದದ ನಮ್ಮ ಕರ್ತನ ಮರಣವಾದರೂ ಮನುಷ್ಯನ ಈಡು ಬೆಲೆಯಾಗಿ ಪೂರ್ಣವಾದ ರೀತಿಯಲ್ಲಿ ಸಂದಾಯ–ವಾಗುತ್ತಿತ್ತೆಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು. ಹೇಗೂ ಹೆಚ್ಚುವರಿಯ ದಂಡನಾನುಭವಗಳು ಅವಶ್ಯವೆಂದು ತಂದೆಯಿಂದ ಎಣಿಸಲಾಗಿತ್ತು; ಹೀಗಾಗಿ ಆ "ಪಾತ್ರೆಯು" [ಆತನನ್ನು] ಬಿಟ್ಟುಹೋಗಿರಲಿಲ್ಲ. ಇಂಥಾ ವಿಪರೀತ [ಮಟ್ಟದ] ವಿಧೇಯತೆಯು "ತನ್ನ ಪ್ರಿಯ ಕುಮಾರನ" ಹೃದಯದ ನಿಷ್ಠಾಪೂರ್ಣತೆಯ ಒಂದು ಪರೀಕ್ಷೆಯಾಗಿ ತಂದೆಗೆ ಮಾತ್ರವಲ್ಲದೆ ತನ್ನ ವಿವೇಚನಾಪೂರ್ಣರಾದ ಸೃಷ್ಟಿಗಳೆಲ್ಲವುಗಳಿಗೆ ಒಂದು [ನಿಷ್ಠಾಪೂರ್ಣತೆಯ] ಸಾಕ್ಷ್ಯಾಧಾರದ ಅವಶ್ಯವಿತ್ತು. ಇದಾದ ಸ್ವಲ್ಪ ಕಾಲದಲ್ಲೇ ತನ್ನ ರಾಜ್ಯದಲ್ಲಿ ತನ್ನ ದೈವಿಕ ಸ್ವಭಾವದಲ್ಲಿ ತನ್ನೊಡನೆ ಸಹ–ಬಾಧ್ಯತೆಹೊಂದಲು [ತಂದೆಯು] ಯೋಜನೆ ಮಾಡಿದ್ದನು. ನಮ್ಮ ಪ್ರಿಯ ವಿಮೋಚಕನ ನಿಷ್ಠೆಯನ್ನು ಪೂರ್ಣವಾಗಿ ದೃಢೀಕರಿಸಿ ಅಪೊಸ್ತಲನು ಹೀಗೆ ಪ್ರಕಟಮಾಡಿ ಹೇಳಿರುವನು, ಆತನು "ಅವಮಾನವನ್ನು ಅಲಕ್ಷ್ಯಮಾಡಿದನು" ಹೇಳುವದಾದರೆ ಆತನ ದೃಷ್ಟಿಯಲ್ಲಿ ತಂದೆಯ ಉದ್ದೇಶವನ್ನು ತಂದೆಗೆ ಮೆಚ್ಚಿಕೆಯಾದ ರೀತಿಯಲ್ಲಿ ನೆರವೇರಿಸುವದನ್ನು ಹೋಲಿಸಿದಲ್ಲಿ ಆ ಅವಮಾನವು ಆತನಿಗೆ ಏನೂ ಅಲ್ಲವಾಗಿತ್ತು. (ಇಬ್ರೀಯ 12:2) ಆವರೆಗೂ ಆತನು ಈ ಅವಮಾನಕರ ಸಂಗತಿಗಳು ತೆಗೆದುಹಾಕಲ್ಪಡುವ ಸಾಧ್ಯತೆಯಿತ್ತೆಂದು ಯೋಚಿಸಿದ್ದನು. ಸಾಧ್ಯವಿದ್ದಲ್ಲಿ ಅದು ಹೀಗೆಯೇ ಆಗಬೇಕೆಂದು ಆತನು ಆತಂಕದಿಂದ ತವಕಪಡುತ್ತಿದ್ದನು. ಆದರೆ ಇದು ತಂದೆಯ ಚಿತ್ತವಾಗಿರಲಿಲ್ಲವೆಂಬುದನ್ನು ಅರಿತುಕೊಂಡ ಕೂಡಲೇ ಆತನ ಹೃದಯವು ಕ್ಷಣದಲ್ಲಿ ಸ್ಪಂಧಿಸಿ ಹೀಗೆ ಹೇಳಿದ್ದನು, "ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ." ತಂದೆಯ ಚಿತ್ತದ ವಿಷಯವಾಗಿ ತೆಗೆದುಕೊಂಡ ತೀರ್ಮಾನವು ಕೂಡಲೇ ಬಲವನ್ನು ತಂದುಕೊಟ್ಟಿತ್ತು; ಆತನು ಆಗ ಯಾವ ವಿಧವಾದ ಕಷ್ಟಾನು–ಭವಕ್ಕೂ ಸಿದ್ಧನಾಗಿದ್ದನು, "ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನು ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ."

ಈ ಮಧ್ಯೆ ಯೂದನು ಕೆಲವು ದಿನಗಳ ಹಿಂದೆ ಯೇಸುವನ್ನು ಹಿಡುಕೊಡಲು ಮಹಾಯಾಜಕನೊಡನೆ ಗೊತ್ತುಮಾಡಿಕೊಂಡ ಪ್ರಕಾರ ರಾತ್ರಿಭೋಜನವಾದ ನಂತರ ಕೂಡಲೇ ಮೇಲುಪ್ಪರಿಗೆಯನ್ನು ಬಿಟ್ಟುಹೋಗಿ ತನ್ನ ಅತಿದುಷ್ಟ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಮಹಾಯಾಜಕರಿಂದಲೂ ಫರಿಸಾಯರಿಂದಲೂ ಜನರ ಗುಂಪನ್ನು ಪಡಕೊಂಡವನಾಗಿ ಆ

ರಾತ್ರಿಯಲ್ಲಿ ಯೇಸುವನ್ನು ಬಂಧಿಸುವ ಹಾಗು ಪಸ್ಕಹಬ್ಬಕ್ಕೆ ಮೊದಲು ಆತನ ಮರಣದಂಡನೆಯನ್ನು ಕಾರ್ಯಗತಮಾಡುವ ಅಧಿಕಾರವನ್ನು ಹೊಂದಿದ ಒಬ್ಬ ಅಧಿಕಾರಿಯೊಡನೆ ಹೊರಟನು. ಆ "ಗುಂಪು" ಮೂರರಿಂದ ಆರುನೂರು ರೋಮಾಯರ ಸಿಪಾಯಿಗಳನ್ನು ಒಳಗೊಂಡಿತ್ತೆಂದು ಸಾಧಾರಣವಾಗಿದ್ದ ಅಭಿಪ್ರಾಯವನ್ನು ನಾವು ಪೂರ್ಣವಾಗಿ ಒಪ್ಪಿಕೊಳ್ಳಬಾರದು. ಸಿಪಾಯಿಗಳು ಇಂಥಾ ಸಂದರ್ಭಗಳಲ್ಲಿ ಸಾಧಾರಣವಾಗಿ ನಡಕೊಳ್ಳುವದಕ್ಕಿಂತಲೂ ಅವರು ಬಹು ಭಿನ್ನವಾಗಿ ವರ್ತಿಸಿದ್ದರೆಂಬದು ಖಚಿತವಾಗಿತ್ತು. ಅಲ್ಲದೆ ಸೌವಾರ್ತಿಕರೆಲ್ಲರೂ ದಾಖಲಿಸಿರುವದೇನಂದರೆ ಕಳುಹಿಸಲ್ಪಟ್ಟಂಥ ಗುಂಪು ರೋಮಾಯರ ಪ್ರತಿನಿಧಿಗಳಾದ ಹೆರೋದನಿಂದಾಗಲಿ ಇಲ್ಲವೇ ಪಿಲಾತನ ಕಡೆಯವರಾಗಿರಲಿಲ್ಲ, ಆದರೆ ರೋಮಾಯರ ಕಾವಲುದಂಡಿನ ಮೇಲೆ ಯಾವ ನಿಯಂತ್ರಣವೂ ಹೊಂದದಂಥ ಮಹಾಯಾಜಕರು ಹಾಗು ಫರಿಸಾಯರು ಇವರ ಕಡೆಯಿಂದಾಗಿತ್ತು. ನಾವು ಗ್ರಹಿಸಿಕೊಂಡಿರುವ ಪ್ರಕಾರ ಯೇಸುವನ್ನು ಹಿಡಿದಂಥ ಆ ಗುಂಪು ಯೋಹಾನ 7:32–36ರಲ್ಲಿ ಹೇಳಿರುವದಕ್ಕೆ ಬಹುವಾಗಿ ಹೋಲುವಂಥದೇ ಆಗಿತ್ತು.

ಯೆಹೂದ್ಯರ ಸೆನ್-ಹದ್ರೀನ್ ಎಂಬ ಹಿರಿಸಭೆಯು ಧಾರ್ಮಿಕ ವಿಷಯಗಳ ಮೇಲೆ ಕೆಲವು ಅಧಿಕಾರವನ್ನು ಪ್ರಯೋಗ ಮಾಡುತ್ತಿದ್ದು ಬಂಧನ ಮಾಡುವ ಅಪ್ಪಣೆಯನ್ನು ಪಡೆದಿತ್ತಾದರೂ ರೋಮನರ ದೇಶಾಧಿಪತಿಯ ಸಮ್ಮತಿಯಿಲ್ಲದೆ ಅಪರಾಧಿಗಳಿಗೆ ಮರಣದಂಡನೆ ವಿಧಿಸುವಂತಿರಲಿಲ್ಲವೆಂದು ತೋರುತ್ತದೆ. ಅಪೋಸ್ತಲರು ಅನೇಕ ಸಂದರ್ಭಗಳಲ್ಲಿ ಯೆಹೂದ್ಯರ ಇಂಥಾ ಅಧಿಕಾರಿಗಳಿಂದ ಬಂಧಿಸಲ್ಪಟ್ಟಿದ್ದರೆಂಬದು ನಮಗೆ ನೆನಪಿರುತ್ತದೆ. ಅಪೋಸ್ತಲರ ಕೃತ್ಯಗಳು 5:17, 18, 22, 25–40 ಇವುಗಳನ್ನು ನೋಡಿ.

ಮಹಾಯಾಜಕರ ಹಾಗು ಫರಿಸಾಯರ ಕಡೆಯಿಂದ ಓಲೆಕಾರರ ಅಧಿಕಾರಿಗಳ ಒಂದು ಗುಂಪು ಒಟ್ಟಾಗಿ ಕೂಡಿ-ಬಂದಿತ್ತೆಂದು ಮತ್ತಾಯ ಮತ್ತು ಮಾರ್ಕ ಇವರಿಬ್ಬರೂ ಹೇಳಿರುವರು; ಅಲ್ಲದೆ ಜನರಲ್ಲಿ ಸಾಮಾನ್ಯವಾಗಿದ್ದ ದೊಣ್ಣೆ ಹಾಗು ಕತ್ತಿಗಳಿಂದ ಅವರು ಸಜ್ಜಿತರಾಗಿದ್ದರೆಂದು ನಮ್ಮ ಕರ್ತನ ಮಾತುಗಳು ಸೂಚಿಸುತ್ತವೆ. ಮತ್ತು ರೋಮಾಯ ಸೈನಿಕರ ದಂಡಿನ ಆಯುಧದ ಒಂದು ಭಾಗವಾಗಿದ್ದ ಸಂಭವವಿರುವ ಈಟಿಯ ವಿಷಯವಾಗಿ ಆತನು ಹೇಳಿರುವದಿಲ್ಲ. ಮಹಾಯಾಜಕರ ಸೇವಕರು ಯೇಸುವಿನ ಮೇಲೆ ಮೊದಲು ಆಕ್ರಮಣಮಾಡಿ ಪೇತ್ರನ ಕತ್ತಿಯಿಂದ ಒಂದು ಹೊಡೆತ ತಿಂದದ್ದು ಈ ಅಂಶಕ್ಕೆ ಹೆಚ್ಚು ಒತ್ತುಕೊಡುತ್ತದೆ. ರೋಮಾಯರ ಸಿಪಾಯಿಗಳು ಈ ವಿಷಯದ ಹೊಣೆಯನ್ನು ತೆಗೆದುಕೊಂಡದ್ದೇ-ಯಾದಲ್ಲಿ ಮಹಾಯಾಜಕರ ಸೇವಕರಿಗೆ ಇದರಲ್ಲಿ ಕಡಿಮೆ ಅಧಿಕಾರವಿರುತ್ತಿತ್ತೆಂಬದು ನಿಸ್ಸಂದೇಹ.

ಯೇಸುವನ್ನು ಹುಡುಕುತ್ತಿದ್ದ ಈ ತಂಡವು ಯೂದನ ಮಾರ್ಗದರ್ಶನದಲ್ಲಿ ನಮ್ಮ ಕರ್ತನು ಹಾಗು ಅಪೋಸ್ತಲರು ಮೇಲುಪ್ಪರಿಗೆಯನ್ನು ಬಿಟ್ಟುಹೋದ ಒಂದು ಗಂಟೆಯ ಒಳಗೆ ಅಲ್ಲಿಗೆ ಹೋಗಿದ್ದ ಸಂಭವಿತ್ತೆಂದು ಭಾವಿಸುವದಕ್ಕೆ ಸ್ಪಷ್ಟವಾದ ಒಳ್ಳೆಯ ಕಾರಣವಿರುವದು. ಯೇಸುವು ಹಾಗು ಹನ್ನೊಂದು ಮಂದಿ ಹೊರಟುಹೋದುದನ್ನು ಕಂಡುಕೊಂಡವರಾಗಿ, ಅವರನ್ನು ಗೆತ್ಸೇಮನೆ ತೋಟದಲ್ಲಿ ಕಂಡುಕೊಳ್ಳುವ ಸಾಧ್ಯತೆಯು ಬಹುವಾಗಿ ಇರುವದೆಂದು ಯೂದನಿಗೆ ತಿಳಿದಿತ್ತು, ಯಾಕಂದರೆ "ಯೇಸುವೂ ಆತನ ಶಿಷ್ಯರು ಆಗಾಗ್ಗೆ ಅಲ್ಲಿ ಕೂಡುತ್ತಾ ಇದ್ದದರಿಂದ ಆತನನ್ನು ಹಿಡುಕೊಟ್ಟ ಯೂದನಿಗೂ ಆ ಸ್ಥಳವು ಗೊತ್ತಾಗಿತ್ತು." ಯೇಸುವನ್ನು ಹಿಡುಕೊಟ್ಟುದರ ಬಗ್ಗೆ ಇತರ ಸೌವಾರ್ತಿಕರು ನೀಡಿದ ವಿವರಣೆಯನ್ನು ಯೋಹಾನನು ತನ್ನ ವಿವರಣೆಯಲ್ಲಿ ಬಿಟ್ಟುಬಿಟ್ಟಿರುವನು; ಈ ಪ್ರಿಯ ಶಿಷ್ಯನಿಗೆ ಆ ಸಂಗತಿಯು ಬಹು ಅವಮಾನಕರವೆಂದು ಅನ್ನಿಸಿದ್ದ ಕಾರಣ ಆತನು ಇವುಗಳನ್ನು ತಿಳಿಸದೇ ಇರಲು ಇಷ್ಟಪಟ್ಟಿದ್ದ ಸಂಭವವಿರುವದು. ಖಂಡಿತವಾಗಿಯೂ ಕೆಲವೇ ಕೆಲವು ವಿಶ್ವಾಸಘಾತುಕತನದ ಕೃತ್ಯಗಳು ಇದಕ್ಕೆ ಎಂದಾದರೂ ಸಮನಾಗಿರುವದು; ಅಲ್ಲದೆ ಮನುಕುಲದವರೆಲ್ಲರೂ ತಮ್ಮ ವಿಕೃತ ಮನೋಸ್ಥಿತಿಯಲ್ಲಿಯೂ ಈ ವಿಶ್ವಾಸದ್ರೋಹಿಯ ಸ್ಥಾನವು ಚರಿತ್ರೆಯಲ್ಲಿನ ಅತಿ ಹೀನರ ಪಟ್ಟಿಯಲ್ಲಿ ಇರುವದಾಗಿ ಮನಗೊಂಡಿರುವರು. ಮತ್ತು ನಮ್ಮ ಒಡೆಯನ ಇಂಥಾ ಕರುಣೆ ಪ್ರೀತಿ ಒಳ್ಳೆಯತನದ ವಿರುದ್ಧವಾಗಿ ಯೂದನು ಮಾಡಿದ ಇಂಥಾ ವಿಶ್ವಾಸದ್ರೋಹವು ಬಹು ಸಾಧಾರಣವಲ್ಲವೆಂಬುದಕ್ಕೆ ನಾವು ದೇವರಿಗೆ ಕೃತಘ್ನತೆಯುಳ್ಳವರಾಗಿರಬಹುದು. ಅಲ್ಲದೆ ಹೀಗಾಗಿಯೂ ಕರ್ತನ ಜನರ ಕಷ್ಟಾನುಭವಗಳಲ್ಲಿ ಅಂದರೆ "ಸುಳ್ಳು ಸಹೋದರುಗಳ ನಡುವೆ ಇರುವಾಗ ಅಪಾಯಗಳು" ಇದಕ್ಕೆ ಹೋಲಿಕೆಗಳಿರುವದು. ಯೂದನ ಮನೋಭಾವಕ್ಕೆ ಸಂಬಂಧಿಸಿದಂಥ ಯಾವ ಸಂಗತಿಯೂ ನಮ್ಮ ಹೃದಯಗಳನ್ನು ಕೊರೆಯದಂತೆ ನೋಡಿಕೊಳ್ಳುವದು ನಮಗೆ ಸೂಕ್ತವಾಗಿರುವದು. ನಮ್ಮ ಕರ್ತನು "ತನ್ನ ದೇಹದ ಅಂಗಗಳ" ವಿಷಯವಾಗಿ ಇಂತಹ ಸಂಗತಿಗಳನ್ನು ತನ್ನ ಒಂದು ಸ್ಥಾನದಲ್ಲಿ ಇಟ್ಟುಕೊಂಡವನಾಗಿ-ಯಾವನಾದರೂ ತನ್ನ ಈ ಸಹೋದರರಲ್ಲಿ ಅಲ್ಪವಾದವನಿಗೆ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲನ್ನು ಕಟ್ಟಿ ಆಳವಾದ ಸಮುದ್ರದಲ್ಲಿ ಮುಳುಗಿಸಿಬಿಡುವದು ಅವನಿಗೆ ಲೇಸು ಎಂದು ನಮಗೆ ಭರವಸೆ ನೀಡಿ ಹೇಳಿರುವನು. – ಮತ್ತಾಯ 18:6

ವಾಸ್ತವದಲ್ಲಿ ಶಿರಸ್ಸಿನ ಸಹಿತವಾಗಿ ಆತನ ಅಧೀನದಲ್ಲಿರುವ ದೇಹದ ಅಂಗಗಳೆಲ್ಲರ ಮೇಲೂ ಬರಮಾಡಲಾಗುವ ಪ್ರತಿಯೊಂದು ಕಾರ್ಯದ ಹಿಂದೆ ಯಾವಾಗಲೂ ಒಂದು ಒಳ್ಳೆಯ ಅಥವಾ ಕೆಟ್ಟ ಉದ್ದೇಶವಿರುವದು. ಈ ಬಲವಾದ ಉದ್ದೇಶಗಳನ್ನು ಕಂಡುಹಿಡಿಯುವಂಥದು ಆ ವಿಶ್ವಾಸ ದ್ರೋಹವನ್ನು ಸಮರ್ಥಿಸಿಕೊಳ್ಳುವಕ್ಕೆ ಒಂದು ಸರಿಯಾದ ಕಾರಣವನ್ನು ಕಂಡುಕೊಂಡುಕೊಳ್ಳುವದು ಎಂದಲ್ಲ. ಇದುವರೆಗೆ ನಮಗಾದ ಅನುಭವದ ಹಾಗು ನಾವು ತೆಗೆದುಕೊಂಡಿರುವ ತೀರ್ಮಾನದ ಪ್ರಕಾರವಾಗಿ, ಇಲ್ಲಿರುವ ಪಾಠವೇನಂದರೆ "ಸುಳ್ಳು ಸಹೋದರರಿಂದ" ಉಂಟಾಗುವ ಇಂಥಾ ವಿಶ್ವಾಸದ್ರೋಹದ ಉಗಮವು ಸಾಮಾನ್ಯವಾಗಿ ಲೋಭ, ಪ್ರಭಾವಿಯಾಗುವ ಬಯಕೆ, ಅಧಿಕಾರ ಅಥವಾ ಸ್ಥಾನಮಾನ ಹೊಂದುವ ಆಸೆ ಇಂಥವುಗಳಲ್ಲಿ ಇರುವದು. ಅಲ್ಲದೆ ಇಂಥಾ ಅಪವಿತ್ರ ಆಕಾಂಕ್ಷೆಗಳನ್ನು

ವೈಭವೀಕರಿಸುವ ಬಯಕೆಗಳಿಗೆ ಆಶ್ರಯ ನೀಡುವ ಯಾವುದೇ ಹೃದಯವನ್ನು ಭ್ರಷ್ಟಗೊಳಿಸುವಲ್ಲಿ ಇದು ವಿಫಲವಾಗಲು ಸಾಧ್ಯವೇ ಇಲ್ಲ. ಒಬ್ಬರು ಹೇಳಿರುವಂತೆ–

"ಬಿತ್ತು ಒಂದು ಆಲೋಚನೆಯ, ಕೊಯ್ಯುವಿ ನೀ ಒಂದು ಕಾರ್ಯವ;
ಬಿತ್ತು ಒಂದು ಕಾರ್ಯವ, ಕೊಯ್ಯುವಿ ನೀ ಒಂದು ಅಭ್ಯಾಸವ;
ಬಿತ್ತು ಒಂದು ಅಭ್ಯಾಸವ, ಕೊಯ್ಯುವಿ ನೀ ಒಂದು ಗುಣವ;
ಬಿತ್ತು ಒಂದು ಗುಣವ, ಕೊಯ್ಯುವಿ ನೀನು ಒಂದು ಧ್ಯೇಯವ;"

ಯೂದನು ಈ ಕೆಟ್ಟ ಆಲೋಚನೆಗಳಲ್ಲಿ ಕೆಲವನ್ನು, ಅವು ಕೆಟ್ಟ ಕಾರ್ಯವಾಗಿ ರೂಪುಗೊಂಡು ಹೊರಬರುವ ಮೊದಲು, ಒಂದು ಗಣನೀಯವಾದ ಸಮಯದಿಂದಲೂ ಬಿತ್ತುತ್ತಿದ್ದನು. ಅವನು ಧನಪ್ರಭಾವಗಳನ್ನು ಅತಿಯಾಗಿ ಆಶಿಸುತ್ತಾ ಇದ್ದನು; ಆತನು ಶಿಷ್ಯರ ಒಂದು ಚಿಕ್ಕ ಗುಂಪಿಗೆ ಖಜಾಂಚಿಯಾದನು, ಅಲ್ಲದೆ ಸತ್ಯವೇದವು ತಿಳಿಸುವದೇನಂದರೆ ವಂತಿಕೆಯಾಗಿ ಬಂದ ಹಣದ ಒಂದು ಭಾಗವನ್ನು ಕದ್ದುಕೊಂಡು ಅದನ್ನು ಆತನು ತನ್ನ ಸ್ವಂತಕ್ಕಾಗಿ ಬಳಸುತ್ತಿದ್ದನೆಂಬದು. ಸಾಮಾನ್ಯವಾಗಿಯೇ, ಆತನು ಇದನ್ನು ಅಧಿಕವಾಗಿ ಅಭ್ಯಾಸಿಸಿದಂತೆಲ್ಲಾ ಹಣದ ಮೇಲಿನ ಆತನ ಆಶೆಯು ಹೆಚ್ಚುತ್ತಾ ಬಂದು–ಆತನನ್ನು ಅದು ಮೂವತ್ತು ಬೆಳ್ಳಿ ನಾಣ್ಯಗಳಿಗೆ ತನ್ನ ಒಡೆಯನನ್ನು ಹಿಡುಕೊಡಲು ಇಚ್ಛೈಸುವ ಪರ್ಯಂತರವಾಗಿ ನಡೆಸುತ್ತಾ ಬಂದಿತ್ತು. ಆ ಹಣದ ಮೊತ್ತವು ಈ ದಿನದ ಇಪ್ಪತ್ತು ಡಾಲರ್‌ಗಳಿಗೆ ಸಮನಾಗಿರುವದಾದರೂ ಕೂಲಿಯ ಸಂಬಂಧವಾಗಿ ಅದು ಒಂದು ಅಧಿಕ ಮೊತ್ತವಾಗಿ–ರುವದು. ಯೂದನು ಸಹ ವಾಗ್ದಾನ ಮಾಡಲ್ಪಟ್ಟ [ದೇವರ] ರಾಜ್ಯವನ್ನು ಎದುರು ನೋಡುವವನಾಗಿದ್ದು ಆ ರಾಜ್ಯದಲ್ಲಿ ಆತನು ರಾಜ–ಖಜಾಂಚಿಯಾಗುವಂಥ ಒಂದು ಉನ್ನತ ಸ್ಥಾನವನ್ನು ಅಪೇಕ್ಷಿಸುತ್ತಿದ್ದ ಸಂಭವವಿದ್ದಂತೆ ತೋರುತ್ತದೆ.

ಯೂದನು ತಾನು ವಿಶ್ವಾಸ ದ್ರೋಹವಮಾಡಿದ್ದ ಸಂಬಂಧವಾಗಿ ಉಂಟಾದ ಪರಿಣಾಮದ ಬಗ್ಗೆ ಗಂಭೀರವಾಗಿ ನಿರಾಶನಾಗಿದ್ದ ಸಾಧ್ಯತೆಯು ಬಹುವಾಗಿದ್ದು, ನಿಜವಾಗಿಯೂ ಹಾಗೆಯೇ ಆಗುವ ಸಂಭವವಿತ್ತೆಂದು ನಾವು ಯೋಚಿಸುವೆವು. ನಮ್ಮ ಕರ್ತನು ಅದ್ಭುತ ಶಕ್ತಿಯ ಮೂಲಕವಾಗಿ ತನ್ನ ಶತ್ರುಗಳ ಕೈಯಿಂದ ಬಿಡಿಸಿಕೊಳ್ಳುವನೆಂದು ಆತನು ನಿರೀಕ್ಷಿದ್ದನೆಂಬದು ಸ್ಪಷ್ಟ. ನಮಗೆ ತಿಳಿದಿರುವಂತೆ ಇದು ಆತನ ವಿಶ್ವಾಸದ್ರೋಹದ ನಡತೆಯನ್ನು ಹೇಗೆ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಇರುವ ಅತಿ ಔದಾರ್ಯವುಳ್ಳ ದೃಷ್ಟಿಯಾಗಿರುವದು. ಇದು ಆ ಕಾರ್ಯದ ವಿಷಯದಲ್ಲಿ ಹತ್ತಿಕೊಂಡಿರುವ ಕಪ್ಪುಚುಕ್ಕೆಯನ್ನು ಕೇವಲ ಒಂದು ಬಹು ಅಲ್ಪವಾದ ರೀತಿಯಲ್ಲಿ ತಗ್ಗಿಸುವದು. ಆದರೂ ತನ್ನ ಉತ್ತಮ ಸ್ನೇಹಿತನನ್ನು ಹಣದ ಕಾರಣಕ್ಕಾಗಿ ಕೇವಲ ಸ್ವಲ್ಪ ಸಮಯಕ್ಕಾದರೂ ತುಚ್ಛವಾಗಿ ಬಳಸಿಕೊಳ್ಳುವಂಥದು ತನ್ನಲ್ಲಿನ ಒಳ್ಳೆಯತನ ಹಾಗು ಘನತೆಗೌರವಯುತವಾದ ಪ್ರವೃತ್ತಿಯೆಲ್ಲವು–ಗಳನ್ನು ಹಣದಾಸೆಗಾಗಿ ಮಾರಿ ಕೊಳ್ಳುವಂಥದಕ್ಕೆ ಪ್ರಮಾಣವಾಗಿರುತ್ತದೆ. ನಿಜವಾಗಿಯೂ ಮಾನಹೊಂದುವದರ ಆಸೆಯು ಈ ವಿಷಯದಲ್ಲಿ ಗಣನೀಯವಾದ ರೀತಿಯಲ್ಲಿ ಕಾರ್ಯ ಪ್ರವೃತ್ತವಾದಂತಿರುವದು. ಯಾಕಂದರೆ ಈ ಸಂದಿಗ್ಧ ಪರಿಸ್ಥಿತಿಯನ್ನು ಉಂಟುಮಾಡಿದ್ದರಲ್ಲಿ ನಮ್ಮ ಕರ್ತನು ಬಹುಕಾಲದಿಂದ ವಾಗ್ದಾನ ಮಾಡಲ್ಪಟ್ಟ ರಾಜ್ಯವನ್ನು ಸ್ಥಾಪಿಸಲು ಆತನನ್ನು ಒತ್ತಾಯಿಸಿದಂತಾಗುವದೆಂದೂ ಇಲ್ಲವಾದಲ್ಲಿ ತಾನು ಹೇಳಿಕೊಳ್ಳುವಂಥದ್ದೆಲ್ಲವೂ ಹಾಗು ಮಾಡಲ್ಪಟ್ಟ ವಾಗ್ದಾನವೆಲ್ಲವೂ ಮೊಸಕರವಾಗಿತ್ತೆಂದು ಆತನು ಒಪ್ಪಿಕೊಂಡಂತೆ ಆಗುತ್ತದೆಂಬು–ದನ್ನು ತಾನು ನಿರೀಕ್ಷಿಸಿದ್ದಿರಬಹುದು.

ಯೂದನು ಖಂಡಿತವಾಗಿಯೂ ವಿಷಯುವನ್ನು ಕಾರ್ಯಗತಃಗೊಳಿಸಿ ಭ್ರೂಣಾವಸ್ಥೆಯಲ್ಲಿನ ದೇವರ ರಾಜ್ಯವನ್ನು ಸ್ಥಾಪಿಸುವಲ್ಲಿ ಸಫಲನಾಗಿದ್ದನು; ಆದರೆ ಇದು ತಾನು ನಿರೀಕ್ಷಿಸಿದ್ದ ರೀತಿಯಲ್ಲಿ ಇಲ್ಲವೇ ಯಾವ ಹಂತದಲ್ಲಿಯೂ ತನ್ನ ಸ್ವಂತ ಮಾನಕ್ಕಾಗಿ ಅಥವಾ ಅನುಕೂಲಕ್ಕಾಗಿ ಸಂಭವಿಸಿರಲಿಲ್ಲ. ಸತ್ಯವನ್ನು ಸ್ವೀಕರಿಸಿಕೊಂಡು ಅದರ ಅನುಸಾರ ಶಿಷ್ಯತನವನ್ನು ತೋರ್ಪಡಿಸಿಕೊಳ್ಳುವವರ ಸಂಗತಿಯೂ ಹೀಗೆಯೇ ಇರಬೇಕು. ಅಂದರೆ ಇದು ಸತ್ಯದ ಮೇಲಿನ ಪ್ರೀತಿಗೆ ಅನುಗುಣವಾಗಿಯಲ್ಲ ಆದರೆ ಅದು ಇಂದು ಇಲ್ಲವೇ ಮುಂದೆ ಅಪೇಕ್ಷಿಸಲಿರುವ ಗೌರವದ ಮೇಲಿನ ಆಸೆಯ ಅನುಸಾರವಾಗಿರುವದು. ಕ್ರಿಸ್ತನ ಹೆಸರನ್ನು ಹೇಳಿಕೊಂಡಿರುವ ನಾವೆಲ್ಲರೂ ಈ ದುಷ್ಟ ಗುಣದ ಅಂಶಗಳಲ್ಲಿ ಯಾವುದಾದರೂ ನಮ್ಮಲ್ಲಿ ಯಾರಲ್ಲಿಯೂ ಇರದಂತೆ ಎಚ್ಚರಿಕೆಯಾಗಿದ್ದು ಪ್ರಾರ್ಥಿಸುವವರಾಗೋಣ. ಅಲ್ಲದೆ ನಾವು ಕರ್ತನಿಗೆ ಹಾಗು "ಸಹೋದರಿಗೆ" ವಿಶ್ವಾಸದ್ರೋಹವನ್ನು ಎಸಗುವ ಅನೇಕ ಬಗೆಯ ಗುಪ್ತವಿಧಾನಗಳು ಹಾಗು ಬಾಹ್ಯವಿಧಾನಗಳು ಇರುವದೆಂಬುದನ್ನು ನೆನಪಿಸಿ–ಕೊಳ್ಳುವವರಾಗೋಣ.

ತನ್ನ ಮೇಲೆ ಬರಲಿರುವ ಸಂಗತಿಗಳೆಲ್ಲವೂ ಯೇಸುವಿಗೆ ಮುಂದಾಗಿ ತಿಳಿದಿತ್ತೆಂಬುದನ್ನು ಸೌವಾರ್ತಿಕನು ಪ್ರಕಟಮಾಡಿ ಹೇಳಿರುವನು. ಆತನು ಪ್ರಾರ್ಥಿಸುವಾಗ "...ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು." (ಲೂಕ 22:43) ಎಂಬುದನ್ನು ನಮಗೆ ಮತ್ತೊಂದು ಕಡೆ ತಿಳಿಸಲಾಗಿರುವದು. [ದೇವದೂತನ] ಈ ಸೇವಾಕಾರ್ಯವು ತಾನು ಎಂಥಾ ಬಾಧೆಗಳನ್ನು ಅನುಭವಿಸ–ಬೇಕೆಂಬದು ತಂದೆಯ ಚಿತ್ತವಾಗಿರುವದೆಂದೂ, ಮತ್ತು ಅತನು ಅದನ್ನು ಹೇಗೆ ನಿರೀಕ್ಷಿಸಬೇಕೆಂದೂ, ಮತ್ತು ಈ ಸಂಗತಿಯು ನಿರ್ಧರಿತವಾಗಿದ್ದು, ಇವೆಲ್ಲವುಗಳನ್ನು ತಂದೆಯು [ಮಾರ್ಪಡಿಸಿ] ರದ್ದುಪಡಿಸುವನೆಂಬ ಭರವಸೆಯನ್ನು ಆತನಿಗೆ ನೀಡುವದನ್ನು ಒಳಗೊಂಡಿದ್ದು ಇದು ಆತನ ಹೃದಯವನ್ನು ಬಲಗೊಳಿಸಿ, ನಾವು ಗಮನಿಸಿರುವಂತೆ, ಅದು ಆತನ ಮುಂದಿನ ನಡೆಯಲ್ಲೆಲ್ಲಾ ಆತನಿಗೆ ವಿಶೇಷ ರೀತಿಯ ಶಾಂತಿಯನ್ನು ನೀಡಿತ್ತು.

ಆತನನ್ನು ಹಿಡಿಯುವದಕ್ಕೆ ಕಳುಹಿಸಲ್ಪಟ್ಟ "ಜನರ ಗುಂಪಿಗೆ" ತಾವು ಆತನನ್ನು ಮರಗಳ ನೆರಳು ಮುಂತಾದವುಗಳಲ್ಲಿ ಹುಡುಕಬೇಕಾಗುವ ಅನಿವಾರ್ಯತೆ ಇರುವದನ್ನು ನಿರೀಕ್ಷಿಸಿದ್ದುದು

ಸ್ಪಷ್ಟವಾಗಿದ್ದುದರಿಂದ ಅವರಿಗೆ ಪಂಜುಗಳು ಹಾಗು ದೀವಟಿಗೆಗಳನ್ನು ಒದಗಿಸಲಾಗಿತ್ತು. ಅವರಿಂದ ಓಡಿಹೋಗು–ವದಕ್ಕೆ ಬದಲಾಗಿ ನಮ್ಮ ಕರ್ತನು ಅವರ ಮುಂದೆ ಬಂದು ತಾವು ಯಾರನ್ನು ಹುಡುಕುತ್ತಿರುವಿರೆಂದು ವಿಚಾರಿಸಿದ್ದುದು ಅವರನ್ನು ಬಹು ಆಶ್ಚರ್ಯಚಕಿತರನ್ನಾಗಿ ಮಾಡಿತ್ತೆಂಬುದು ನಿರ್ವಿವಾದದ ಮಾತಾಗಿರುವದು. ಆ "ಜನರ ಗುಂಪಿನಲ್ಲಿ" ಕೆಲವರಿಗೆ ಕರ್ತನ ವಿಷಯವಾಗಿ ಆತನು ನಡೆಸಿದ್ದ ಅದ್ಭುತ ಕಾರ್ಯ, ದೆವ್ವಗಳ ಮೇಲೆ ಆತನಿಗಿದ್ದ ಅಧಿಕಾರ, ಮುಂತಾದವುಗಳ ಬಗ್ಗೆ ಮೊದಲೇ ತಿಳಿದಿರುವ ಸಾಧ್ಯತೆಯು ಬಹುವಾಗಿದ್ದು ಇದು ಅವರ ಬಲಹೀನತೆಯು ತೋರ್ಪಡಲಾದುದಕ್ಕೆ ಅಂದರೆ ಅವರು ಹಿಂದೆ ಸರಿದು ನೆಲದ ಮೇಲೆ ಬಿದ್ದುಹೋದುದಕ್ಕೆ ಕಾರಣ–ವಾಗಿರಬಹುದು. ಅಥವಾ ನಮ್ಮ ಕರ್ತನು ಅವರ ಮೇಲೆ ತನ್ನ ಉತ್ಕೃಷ್ಟವಾದ ಮನೋಬಲವನ್ನು ಪ್ರಯೋಗಿಸಿ ಈ ಪರಿಣಾಮವನ್ನು ಉಂಟುಮಾಡಿರುವ ಸಾಧ್ಯತೆಯೂ ಇರುವದು, ಅಂದರೆ ತಾನು ಪ್ರಯೋಗಿಸ ಬಯಸಿದ್ದಲ್ಲಿ ಅವರನ್ನು ಪ್ರತಿರೋಧಿಸುವದಕ್ಕೆ ತನಗೆ ಪೂರ್ಣವಾದ ಅಧಿಕಾರ ಉಂಟೆಂಬುದನ್ನು ತೋರಿಸಿಕೊಡುವ ಉದ್ದೇಶವಿದ್ದ ಸಾಧ್ಯತೆಯೂ ಇರುವದು.

ಪೇತ್ರನು ಮಹಾಯಾಜಕನ ಆಳಿನ ಮೇಲೆ ಕತ್ತಿಯನ್ನು ಬಳಸಿದ ವಿಷಯದಲ್ಲಿಯೂ ಇದೇ ಪಾಠವನ್ನು ಕಲಿಸಿಕೊಡಲಾಗಿರುವದೆಂಬದು ನಮ್ಮ ನಂಬಿಕೆ. ನಮ್ಮ ಕರ್ತನು ಅಪೋಸ್ತಲರಿಗೆ ತಮ್ಮೊಂದಿಗೆ ಕತ್ತಿಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದ್ದನ್ನು ಸೌವಾರ್ತಿಕರಲ್ಲಿ ಒಬ್ಬನು ದಾಖಲಿಸಿರುವದನ್ನು ನಾವು ನೆನಪಿಸಿಕೊಳ್ಳಬೇಕಿರುವದು. ಅಲ್ಲದೆ ಅವರಲ್ಲಿನ ಇಬ್ಬರಲ್ಲಿ ಕತ್ತಿಯಿರುವದು ಕಂಡುಬಂದಾಗ ಆತನು ಹೇಳಿದ್ದು, "ಅಷ್ಟು ಸಾಕು." (ಲೂಕ 22:36,38) ತನ್ನ ಶಿಷ್ಯರು ಲೋಕಸಂಬಂಧವಾದ ಯುದ್ಧವನ್ನು ತನ್ನ ಪರವಾಗಿ ಮಾಡಬೇಕೆಂಬುದಾಗಿ ನಮ್ಮ ಕರ್ತನು ಆಲೋಚಿಸಿರಲಿಲ್ಲ–ವೆಂಬದು ಆತನು ನಂತರದಲ್ಲಿ ಹೀಗೆ ಹೇಳಿದ್ದರಲ್ಲಿ ತಿಳಿದುಬರುತ್ತದೆ–"ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಕಾದಾಡುತ್ತಿದ್ದರು." (ಯೋಹಾನ 18:36) ಆ ಎರಡು ಕತ್ತಿಗಳು–ನಮ್ಮ ಕರ್ತನು ಹಿಡಿಯಲ್ಪಟ್ಟದ್ದು ಅಲ್ಲಿ ತನಗೆ ರಕ್ಷಿಸಿಕೊಳ್ಳುವ ಉಪಾಯವಿರಲಿಲ್ಲವೆಂಬ ಕಾರಣಕ್ಕಾಗಲಿ ಇಲ್ಲವೆ ತನ್ನ ಶಿಷ್ಯರಲ್ಲಿದ್ದ ಹೇಡಿತನದ ಕಾರಣಕ್ಕಾಗಲಿ ಆಗಿರಲಿಲ್ಲ ಆದರೆ ಅದು ಕೇವಲ ಆತನು ತನ್ನನ್ನು ಅಧೀನ ಮಾಡಿಕೊಂಡದ್ದ ಕಾರಣಕ್ಕೆಂಬುದನ್ನು ತೋರಿಸಿಕೊಡಲು ಸಾಕಾಗಿದ್ದವು. ಅಂದರೆ ಆತನಿಗೆ ತನ್ನ ಕಾಲವು ಸಮೀಪಿಸಿತ್ತೆಂದೂ ಮತ್ತು ತಾನು ಹೀಗೆ ನಮ್ಮ ಪಾಪಗಳಿಗಾಗಿ ಬಾಧೆಯನ್ನು ಅನುಭವಿಸಿ ತನ್ನ ಮಹಿಮಾ ಪದವಿಗೆ ಸೇರಬೇಕೆಂದು ಆತನಿಗೆ ತಿಳಿದಿದ್ದು ಆ ಕಾರಣಕ್ಕಾಗಿ ತನ್ನನ್ನು ಅಧೀನಮಾಡಿಕೊಂಡಿದ್ದ ಸಲುವಾಗಿ ಎಂಬುದನ್ನು ತೋರಿಸಿ–ಕೊಡಲು ಆ ಎರಡು ಕತ್ತಿಗಳು ಸಾಕಾಗಿದ್ದವು. – ಲೂಕ 24:46

ಆ ಜನರ ಗುಂಪನ್ನು ನಿಭಾಯಿಸಲು ತನಗೆ ಪೂರ್ಣ ಸಾಮರ್ಥ್ಯವಿರುವುದನ್ನು ಸೂಚಿಸುವ ಈ ಒಂದು ಶಕ್ತಿಯನ್ನು ತೋರ್ಪಡಿಸಿದ ನಂತರ ಹಾಗು ತಾನು ಬಯಸಿದ್ದಲ್ಲಿ ನಿಜವಾಗಿಯೂ ತನ್ನನ್ನು ರಕ್ಷಿಸಿಕೊಳ್ಳಲು ದೇವದೂತರ ಹನ್ನೆರಡು ಗಣಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವಿರುವದಾಗಿ ತೋರ್ಪಡಿಸಿದ ಮೇಲೆ (ಮತ್ತಾಯ 26:53) ನಮ್ಮ ಕರ್ತನು ಕೇವಲ ತನ್ನ ಶಿಷ್ಯರು ಹೋಗಲು ಬಿಡಬೇಕೆಂಬ ಷರತ್ತಿನೊಡನೆ ತಾನು ಬಂಧಿಸಲ್ಪಡಲು ಪೂರ್ಣವಾಗಿ ಒಪ್ಪಿಸಿಕೊಟ್ಟದ್ದನ್ನು ನಾವು ಕಂಡುಕೊಂಡಿದ್ದೇವೆ. ಅಂಥಾ ಒಂದು ಕ್ಷಣದಲ್ಲಿ ಅಂಥಾ ಒಂದು ಪರಿಶೋಧನಾ ಪರಿಸ್ಥಿತಿಯಲ್ಲಿ ತನ್ನ ಬಗ್ಗೆ ಪೂರ್ಣವಾಗಿ ಮರೆತವನಾಗಿ ಕೇವಲ ಇತರರ ಹಿತಚಿಂತನೆಯಲ್ಲಿ ಆಸಕ್ತಿ ತೋರಿದ ಗುಣವು ಎಷ್ಟು ಭವ್ಯವಾದದ್ದು! ಇದಕ್ಕೆ ಸಮನಾದುದನ್ನು ನಾವು ಆತನಿಂದ ಎಲ್ಲಿ ಹಾಗು ಅದನ್ನು ಹೇಗೆ ನಿರೀಕ್ಷಿಸಬೇಕು!

"ನೀನು ನನಗೆ ಕೊಟ್ಟವರಲ್ಲಿ ಒಬ್ಬನನ್ನಾದರೂ ನಾನು ಕಳಕೊಳ್ಳಲಿಲ್ಲವೆಂದು ಆತನು ಹೇಳಿದ ಮಾತು ಹೀಗೆ ನೆರವೇರಿತು." ಗುರುವು ಮೇಲುಪ್ಪರಿಗೆಯಿಂದ ಹೊರಡುವ ಮೊದಲು ತಾನು ಮಾಡಿದ ಪ್ರಾರ್ಥನೆಯನ್ನು ಪ್ರತಿಪಾದಿಸುವ ಸಲುವಾಗಿ ಆತನು ಅನುಸರಿಸಿದ ವಿಧಾನವು ಇಲ್ಲಿಯೂ ಸಹ ತನ್ನ ಶಿಷ್ಯರ ಬಗ್ಗೆ ಇದ್ದ ಕಾಳಜಿಯ ಒಂದು ದೃಷ್ಟಾಂತವನ್ನು ನಾವು ಕಂಡುಕೊಳ್ಳುವೆವೆಂಬದು ಲೇಖಕನ ಅರ್ಥವಾಗಿತ್ತೆಂದು ನಾವು ಗ್ರಹಿಸಿಕೊಂಡಿರುವೆವು. ತನ್ನ ಪ್ರಾರ್ಥನೆಯಲ್ಲಿನ ಅಂಶವು ಅವರ ಆತ್ಮಿಕ ಹಿತಾಸಕ್ತಿಯು ಅಂದರೆ ಅವರಲ್ಲಿ ಒಬ್ಬನನ್ನೂ ಕಳಕೊಳ್ಳಬಾರದೆಂಬದು ಮುಖ್ಯವಾಗಿದ್ದುದಾದರೂ ಇದು ತನ್ನ ಶಿಷ್ಯರಾಗುವವರೆಲ್ಲರ ಶಾರೀರಿಕ ಹಿತಾಸಕ್ತಿಯ ಬಗ್ಗೆಯೂ ನಮ್ಮ ಕರ್ತನಿಗಿರುವ ಕಾಳಜಿಯನ್ನು ದೃಢೀಕರಿಸುವ ಒಂದು ದೃಷ್ಟಾಂತವೆಂಬುದನ್ನು ಗಮನಿಸುವದು ನಮಗೆ ಒಳ್ಳೆಯದು. ಅವರ ತಲೆಕೂದಲಿನಲ್ಲಿ ಒಂದಾದರೂ ನಾಶವಾಗದು; ಅವರಿಗೆ ಹಾನಿಯುಂಟು ಮಾಡುವ ಯಾವದನ್ನೂ ಬರಮಾಡಲಾಗದು. ಅವರ ಜೀವಿತದ ಪ್ರತಿಯೊಂದು ಘಟನೆ ಮತ್ತು ಹಾಗು ಹೋಗುಗಳೆಲ್ಲವನ್ನೂ ಅವರ ಪರಮ ಹಿತಕ್ಕಾಗಿ ಮಾರ್ಪಡಿಸ–ಲಾಗುವದು – ಮತ್ತಾಯ 6:32,33

ಯೇಸುವನ್ನು ಹಿಡಿದು ಕಟ್ಟಲು ಆರಂಭಿಸುವಾಗ ಪೇತ್ರನು ತನ್ನ ಕತ್ತಿಯನ್ನು ಆತನ ರಕ್ಷಣೆಯ ಸಲುವಾಗಿ ಹಿರಿದಿರುವ ಸಂಭವವಿರುವದು; ಬಹುಶಃ ಕೆಲವು ಗಂಟೆಗಳ ಹಿಂದೆ ತನ್ನ ಹಿಂಬಾಲಕರೆಲ್ಲರೂ ತನ್ನನ್ನು ಬಿಟ್ಟು ಓಡಿಹೋಗುವರೆಂದು ಕರ್ತನು ನುಡಿದದ್ದನ್ನು ಮತ್ತು "ಎಲ್ಲರೂ ಹಿಂಜರಿದರೂ ನಾನು ಹಾಗೆ ಮಾಡುವದಿಲ್ಲ." ಎಂಬ ತನ್ನ ವಾಗ್ದಾನವನ್ನು ಆತನು ನೆನಪಿಸಿಕೊಂಡಿರಬಹುದು. (ಮಾರ್ಕ 14:29) ಗಣ್ಯನಾದ ಆಸಕ್ತ ಪೇತ್ರನು! ತನ್ನ ಘನವಾದ ಮನೋಭಾವವನ್ನು ವ್ಯಕ್ತಪಡಿಸಿ–ದುದಕ್ಕಾಗಿ ಮತ್ತು ತನ್ನ ಕತ್ತಿಯಿಂದ ಹೆಚ್ಚಿನ ಸಂಖ್ಯೆಯುಳ್ಳವರ ವಿರುದ್ಧ ವೀರಾವೇಶನಾಗಿ ತನ್ನ ಒಡೆಯನ ರಕ್ಷಣೆಗಾಗಿ ಹೋರಾಡಿದುದಕ್ಕಾಗಿ ನಾವು ಆತನನ್ನು ಇಷ್ಟಪಡುವೆವು. ಪೇತ್ರನ ಈ ಕ್ರಿಯೆಯನ್ನು ದುಡುಕುತನದಿಂದಾದ ಇನ್ನೊಂದು ತಪ್ಪೆಂದು ದೂಷಿಸುವದು ಅನೇಕರಲ್ಲಿ ವಾಡಿಕೆಯಾಗಿರುವದು. ಹೇಗೂ ಆ ಅಪೋಸ್ತಲನು ಇನ್ನೂ ಪವಿತ್ರಾತ್ಮವನ್ನು ಹೊಂದಿರಲಿಲ್ಲ ಮತ್ತು ಹೀಗಾಗಿ ಅವರು ಕರೆಯಲ್ಪಟ್ಟ ರಾಜ್ಯವು ಒಂದು ಆತ್ಮಿಕವಾದ

ರಾಜ್ಯವೆಂಬ ಅಂಶವನ್ನು ಮನವರಿಕೆಮಾಡಿಕೊಳ್ಳಲು ಅವರಿಗೆ ಸಾಧ್ಯವಿರಲಿಲ್ಲ. ಅಲ್ಲದೆ ನಾವು ನೋಡಿರುವಂತೆ ಆತನು ತನ್ನೊಡನೆ ಕತ್ತಿಯನ್ನು ತೆಗೆದುಕೊಳ್ಳುವಲ್ಲಿ ಕೇವಲ ತನ್ನ ಒಡೆಯನ ಸಲಹೆಯನ್ನು ಅನುಸರಿಸುವವನಾಗಿದ್ದು ಅದನ್ನು ಬಳಸುವಲ್ಲಿ ದೈವೀಕ ಉದ್ದೇಶವನ್ನು ಕಾರ್ಯಗತಗೊಳಿಸಿದ್ದನೆಂಬದು ಸಹ ಸ್ಪಷ್ಟವಾಗಿರುವದು. ನಮಗೆ ದೋಷಹೊರಿಸುವಂಥದ್ದೇನು ಇರುವದಿಲ್ಲ, ಎಲ್ಲವೂ ಪ್ರಸಂಶಿಸುವಂಥದ್ದೇ. ಪೇತ್ರನೂ ಹಾಗೂ ಅಲ್ಲಿದ್ದ ಇತರರು ಗ್ರಹಿಸಿರುವದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿನ ಪ್ರಾಧಾನ್ಯತೆಗೆ ಅಲ್ಲಿ ಅದು ಸೂಚನೆಯಾಗಿತ್ತು.

ಆದರೆ ವಿಷಯವು ಇಷ್ಟರ ವರೆಗೆ ಹೋಗಲು ಬಿಟ್ಟ ತರುವಾಯ ನಮ್ಮ ಕರ್ತನು ಪೇತ್ರನನ್ನು ತಡೆದು ಹೀಗೆ ಹೇಳಿದ್ದನು, "ಇಷ್ಟಕ್ಕೇ ಬಿಡು, ಕತ್ತಿಯನ್ನು ಒರೆಯಲ್ಲಿ ಹಾಕು; ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ?" ಅಲ್ಲದೆ ಹೀಗೆ ಹೇಳಿ ಗಾಯಗೊಂಡ ಶತ್ರುವನ್ನು ಮುಟ್ಟಿ ಅವನನ್ನು ಗುಣಪಡಿಸಿದನು. ನಮ್ಮ ಕರ್ತನು ತನ್ನ ಶತ್ರುಗಳಿಗೆ ತನ್ನನ್ನು ಒಪ್ಪಿಸಿಕೊಡುವಲ್ಲಿ ಸ್ವಯಂ ಪ್ರೇರಣೆಯಿಂದಲೇ ಮಾಡಿದ್ದನೆಂಬು–ದನ್ನು ನೋಡಿ ಅದನ್ನು ಗ್ರಹಿಸಿಕೊಂಡವರಾಗಿ ಶಿಷ್ಯರು ಪೂರ್ಣ ಭರವಸವುಳ್ಳವರಾಗಬೇಕಿತ್ತು ಮತ್ತು ಹೀಗೆ ನಡೆದ ಕಾರ್ಯಕಲಾಪವು ಈ ಪಾಠವನ್ನು ಒತ್ತಾಯಪೂರ್ವಕವಾಗಿ ತೋರ್ಪಡಿಸ ಸಲುವಾದ ನಾಟಕ ರೂಪವಾಗಿತ್ತು.

ನಮ್ಮ ವಿಮೋಚಕನ ಸೇವೆಯಲ್ಲಿ ಸಂಭವಿಸಿದ್ದ ಸಣ್ಣಸಣ್ಣ ವಿಷಯಗಳಲ್ಲೆಲ್ಲಾ ಹೇಗೆ ದೀನತೆಯ ಸೊಗಸು ಹೊಳೆಯುವದು; ತನ್ನ ಶತ್ರುಗಳಿಗೆ ತನ್ನನ್ನು ಅಧೀನಮಾಡಿಕೊಳ್ಳುವ ಈ ಸಂದರ್ಭದಲ್ಲಿಯೂ ಸಹ ತನ್ನ ನಡೆಯು ಒಂದು ಸ್ವಯಂಪ್ರೇರಿತವೆಂದು ಆತನು ಕೊಚ್ಚಿಕೊಂಡಿರಲಿಲ್ಲ, ಇಲ್ಲವೇ ಒಬ್ಬ ರಕ್ತಸಾಕ್ಷಿಯಾಗಿ ಹೊಗಳಿಕೆಯನ್ನು ಬಯಸಿರಲಿಲ್ಲ! ತಂದೆಯು ಇದನ್ನು ತನ್ನ ವೈಯುಕ್ತಿಕವಾದ ನಿಷ್ಠೆಗೆ ಒಂದು ಪ್ರಮಾಣವಾಗಿ ಬಯಸುತ್ತಿರುವನೆಂಬ ಸರಳವಾದ ಸತ್ಯವನ್ನು ಪ್ರಕಟಮಾಡಿ ಹೇಳುವವನಾಗಿದ್ದನು. ತಾನು ಒಬ್ಬ ದೇವರ ಸೇವಕನೆಂದೂ, ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡಿರುವನೆಂದು ಅರಿಕೆಮಾಡುವವನಾಗಿದ್ದನು. "ತಂದೆಯು ನನಗೆ ಕೊಟ್ಟ ಪಾತ್ರೆಯನ್ನು ನಾನು ಕುಡಿಯಬಾರದೋ?" ನಿಜವಾಗಿಯೂ ಇದೇ ಆತನ ಯಶಸ್ಸಿನ ಬಲ. ಹೇಗಂದರೆ ತಂದೆಯ ಚಿತ್ತಕ್ಕೆ ತನ್ನ ಚಿತ್ತವನ್ನು ಪೂರ್ಣವಾಗಿ ಅಧೀನಮಾಡಿಕೊಂಡಿದ್ದನು, ಅಲ್ಲದೆ ತಂದೆಯು ಯಾವ ಅನಗತ್ಯವಾದ ಕೇಡನ್ನು ತನ್ನ ಮೇಲೆ ಬರಮಾಡುವದಿಲ್ಲವೆಂದೂ ಆದರೆ ತಾನು ಅದನ್ನು ತನ್ನ ಹಿತಕ್ಕಾಗಿ ಮಾರ್ಪಡಿಸಲು ಆತನಿಗೆ ಸಾಧ್ಯವೆಂಬ ಹಾಗು ಅತನು ಅದನ್ನು ಮಾರ್ಪಡಿಸುನೆಂಬ ಅಂಶವನ್ನು ಆತನ ನಂಬಿಕೆಯು ಬಧ್ರವಾಗಿ ಹಿಡಿದುಕೊಂಡಿತ್ತು.

ಈ ಶ್ರೇಷ್ಠ ಮಹಾಯಾಜಕನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಬಯಸುವವರೆಲ್ಲರಿಗೆ ಅಂದರೆ ರಾಜವಂಶದ ಯಾಜಕವರ್ಗದವರೆಲ್ಲರಿಗೆ ಇಲ್ಲಿ ಒಂದು ಅಮೂಲ್ಯವಾದ ಪಾಠವಿರುವದು. ನಾವು ಕ್ರಿಸ್ತನಲ್ಲಿ ನೆಲೆಗೊಂಡಿರುವವರೆಗೂ ಮತ್ತು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಬಯಸುವವರೆಗೂ ಜೀವಿತದಲ್ಲಿ ಪರಿಕ್ಷಾರ್ಥವಾಗಿ ಬರಮಾಡಲಾಗುವ ಅನುಭವ–ಗಳೆಲ್ಲವೂ ನಮ್ಮ ಕರ್ತನಿಂದ ನಮಗಾಗಿ ಜಾಗೂರಕತೆಯಿಂದ ಅಳೆದು ನೋಡಲಾಗುವದೆಂಬುದನ್ನು ಅಂದರೆ ಆತನು ನಮಗೆ ಅಗತ್ಯವಿಲ್ಲದ ಹಾಗೂ ನಂತರದಲ್ಲಿ ಅತ್ಯಧಿಕವಾದ ನಿರಂತರ ಪ್ರಭಾವಗೌರವಗಳನ್ನು ದೊರಕಿಸಿಕೊಡಲಾರದಂಥ ಯಾವ ಕಹಿ ಅನುಭವವನ್ನೂ ನಮ್ಮ ಶ್ರಮಸಂಕಟ ಪರಿಶೋಧನೆಯೆಂಬ ಪಾತ್ರೆಯಲ್ಲಿ ಸುರಿಯುವದಿಲ್ಲವೆಂಬುದನ್ನು ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. (2 ಕೊರಿಂಥ 4:17) ಈ ಬರವಸೆಗಳೊಂದಿಗೆ ಮತ್ತು ಮಹಿಮಾ ಪದವಿಗೆ ಸೇರಿದ ನಮ್ಮ ಒಡೆಯನೂ ಹಾಗು ಮುಂದಾಗಿ ಓಡಿ ಹೋಗಿ ತೆರೆಯ ಆಚೆಯ ಕಡೆಯಲ್ಲಿ [ದೇವರ ಸಾನಿಧ್ಯದಲ್ಲಿ] ಪ್ರವೇಶಿಸಿದಾತನಿಗೆ ತೋರಲಾದ ತಂದೆಯ ನಂಬಿಗಸ್ತಿಕೆಯ ಸಾಕ್ಷಾಧಾರಗಳೊಂದಿಗೆ ಸುವಾರ್ತೆಯಲ್ಲಿ ಪ್ರತಿಪಾದಿಸಲಾದ ನಿರೀಕ್ಷೆಯಲ್ಲಿ ಆಶ್ರಯವನ್ನು ಹೊಂದಬೇಕೆಂದು ಓಡಿಬಂದ ನಾವು ನಿಜವಾಗಿಯೂ ಬಲವಾದ ಧೈರ್ಯಾಧರಣೆಯನ್ನು ಹೊಂದಬಹುದು. ಇಬ್ರೀಯ 6:18–20.

ನಮ್ಮ ಕರ್ತನು ಮಾಡಿದ ಕಡೆಯ ಅದ್ಭುತಕಾರ್ಯವಾದ ಕತ್ತರಿಲ್ಪಟ್ಟ ಕಿವಿಯನ್ನು ಗುಣಪಡಿಸಿದಂಥದ್ದು ನಮ್ಮ ಕರ್ತನ ಗುಣಲಕ್ಷಣ ಹಾಗು ಬೋಧನೆಗಳಿಗೆ ಬಹು ಸೊಗಸಾದ ಸಚಿತ್ರ ಉದಾಹರಣೆಯಾಗಿತ್ತು. ಅದು–"ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮಗೆ ಹಗೆಮಾಡುವವರಿಗೆ ಉಪಕಾರಮಾಡಿರಿ." ಎಂಬ ಆತನ ಮಾತಿನ ನಿದರ್ಶನವಾಗಿತ್ತು. ಆತನು ತನ್ನ ಬೋಧನೆಗಳಲ್ಲಿ ಒತ್ತಿ ಹೇಳುತ್ತಿದ್ದ ದೈವಾನುರಾಗದಿಂದ ತುಂಬಿದವನಾಗಿದ್ದನು ಅಲ್ಲದೆ ತನ್ನ ಮೇಲೆ ಕೆಟ್ಟಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿ ತನ್ನನ್ನು ಹಿಂಸೆಡಿಸಿದವರ ಮೇಲೆ ಯಾವ ಕಟು ಭಾವನೆಯನ್ನೂ ಇಟ್ಟುಕೊಂಡಿರಲಿಲ್ಲವೆಂಬುದನ್ನು ಇದು ತೋರಿಸಿಕೊಟ್ಟಿತ್ತು.

ತಮ್ಮನ್ನು ಕಳುಹಿಸಿಕೊಟ್ಟವರಿಗೆ ತಮ್ಮ ಪರಾಕ್ರಮವನ್ನು ಪ್ರದರ್ಶಿಸುವಂಥ ಬಯಕೆಯು ಆ "ಜನರ ಗುಂಪಿಗೆ" ಇದ್ದಿರ–ಬಹುದೆಂಬುದನ್ನು ಹೊರತುಪಡಿಸಿದಲ್ಲಿ ನಮ್ಮ ಕರ್ತನನ್ನು ಕಟ್ಟಿಹಾಕಿದಂಥದ್ದು ಪೂರ್ಣವಾಗಿ ಅನವಶ್ಯಕವಾಗಿತ್ತು. ಮಾರ್ಕ 14:48–49ರಲ್ಲಿ ನೀಡಿರುವ ವಿವರಣೆಯ ಅನುಸಾರ ನಮ್ಮ ಕರ್ತನು ಈ ಮುಂದಿನ ಮಾತನ್ನು ಹೇಳುವ ಮೂಲಕ ಇದನ್ನು ಪ್ರತಿರೋಧಿಸಿದ್ದಂತೆ ತೋರುತ್ತದೆ: "ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನು ದೊಣ್ಣೆಗಳನ್ನು ತೆಗೆದುಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ? ನಾನು ದಿನಾಲೂ ನಿಮ್ಮ ಸಂಗಡ ಇದ್ದು ದೇವಾಲಯದಲ್ಲಿ ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯಲಿಲ್ಲ. ಆದರೆ ಶಾಸ್ತ್ರವಚನಗಳು ನೆರವೇರುವಂತೆ ಇದೆಲ್ಲಾ ಆಯಿತು." ಇದಾದ ನಂತರವೇ ಆ ಹನ್ನೊಂದು ಮಂದಿ ಆತನನ್ನು ತೊರೆದು ಓಡಿಹೋದದ್ದು. ಯೂದನು ಆ ಗುಂಪಿನೊಡನೆ ಮುಂದುವರೆದವನಾಗಿ ಯಾಜಕನಾದ ಅನ್ನನ ಮನೆಯವರೆಗೂ ಹೋಗಿದ್ದನು; ಆ ಸಮಯಕ್ಕೆ ಅನ್ನನು ಯೂದನೊಡನೆ ವ್ಯವಹರಿಸಿ ಮೂವತ್ತು ಬೆಳ್ಳಿನಾಣ್ಯವನ್ನು ಆತನಿಗೆ ಕೊಟ್ಟಿದ್ದನೆಂಬದು ನಿಸ್ಸಂದೇಹವಾಗಿತ್ತು. ಆಗ ಯೂದನು ತನ್ನ ಒಪ್ಪಂದವನ್ನು ಪೂರ್ಣಗಳಿಸಿರುವದಾಗಿ ತೋರಿಸಿಕೊಟ್ಟಿದ್ದನು. ನೀಚನಾದ ಬಡ ಮನುಷ್ಯನು! ತನ್ನ ವಿಷಯವಾಗಿ ಬರೆದಿರುವಂತೆ ಮನುಷ್ಯ ಕುಮಾರನು ನಿಜವಾಗಿಯೂ ಮರಣಾವಸ್ಥೆಗೆ

ಹೋಗಿದ್ದನು. ಆದರೆ ಏನೇ ಆದರೂ ಇದು ಆತನನ್ನು ಶತ್ರುಗಳಿಗೆ ಒಪ್ಪಿಸಿದವನಲ್ಲಿ ಘೋರ ವಿಶ್ವಾಸದ್ರೋಹ ದುರಾಶೆ ಕೊಲೆಗಡುಕ ಭಾವವನ್ನು ಉಂಟುಮಾಡಿತ್ತು. ಕ್ರಿಸ್ತನ ದೇಹದ ಅಂಗಗಳ ವಿಷಯವಾಗಿಯೂ ಹೀಗೆಯೇ ಇರುವದು: ಈ ವಿಘ್ನಗಳು ಬರುವದರ ಅಗತ್ಯವೂ ಇರುವದು; ಅಂದರೆ ಕ್ರಿಸ್ತನ ಬಾಧೆಗಳಲ್ಲಿ ಉಳಿದುದ್ದನ್ನು ಆತನ ದೇಹದ ಅಂಗಗಳು ಅನುಭವಿಸಿ ತೀರಿಸುವದು ದೇವರ ಯೋಜನೆಯ ಒಂದು ಭಾಗವಾಗಿರುವದು. (ಕೊಲೆಸ್ಸೆ 1:24) ಆದರೆ ಏನೇ ಇದ್ದರೂ ಇಂಥಾ ವಿಶ್ವಾಸ ಘಾತುಕತನ ಮಾಡಿದವರಲ್ಲಿ–ಅದರಲ್ಲೂ ವಿಶೇಷವಾಗಿ ಅವರು ಸತ್ಯದ ಪರಿಜ್ಞಾನಕ್ಕೆ ಸೇರಿದ "ಸುಳ್ಳು ಸಹೋದರರು" ಆಗಿದ್ದಲ್ಲಿ–ಅವರ ನಡವಳಿಕೆಯನ್ನು ಇದು ಪಾಪಮಯವನ್ನಾಗಿ ಮಾಡುವದು. ಹೇಗೂ ಪ್ರತಿಯೊಂದು ಘಟನೆಯಲ್ಲಿಯೂ ಗಮನಿಸುವಲಾಗುವದೇನೆಂದರೆ ನಮ್ಮ ಕರ್ತನಿಗೆ ಈ ಪರಿಶೋಧನೆಗಳು ಆಶೀರ್ವಾದವನ್ನು ಉಂಟುಮಾಡಿದಾಗ್ಯೂ ಅಲ್ಲದೆ ಆತನೊಡನೆ ಬಾಧೆಯನ್ನು ಅನುಭವಿಸುವದರ ಮೂಲಕವಾಗಿ ಆತನಲ್ಲಿ ನಂಬಿಗಸ್ತರಾದವರ ವಿಷಯವು ಹೀಗೆಯೇ ಇದ್ದರೂ, ಯೂದನ ಮಾರ್ಗವನ್ನು ಅನುಸರಿಸಿ, ತಮ್ಮನ್ನು ದುಷ್ಟತನಕ್ಕೆ ಮಾರಿಕೊಂಡು ಅನೀತಿಯ ಫಲವನ್ನು ಬಯಸುವರಲ್ಲಿ ಅವರು ಅಪೇಕ್ಷಿಸಿದಂಥ ಘನವಾನ ಆಶೀರ್ವಾದಗಳು ಎಂದೂ ಅವರಿಗೆ ಲಭಿಸಲಾರವು ಎಂಬದೇ.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 14 | ಯೆರೂಸಲೇಮ್ | ಅನ್ನನು ಕಾಯಫನು ಸನ್ಹದ್ರೀನ್ ಸಭೆ ಮಾಡಿದ ವಿಚಾರಣೆ, ಪೇತ್ರನು ಅಲ್ಲಗಳೆದದ್ದು | 26:57–27:1 | 14:53–15:1 | 22:54–71 | 18:13–27 |

# ಮತ್ತಾಯ 26:57–27:1

ಯೇಸುವನ್ನು ಹಿಡಿದವರು ಆತನನ್ನು ಮಹಾಯಾಜಕನಾದ ಕಾಯಫನ ಬಳಿಗೆ ತೆಗೆದುಕೊಂಡು ಹೋದರು. ಅಲ್ಲಿ ಶಾಸ್ತ್ರಿಗಳೂ ಹಿರಿಯರೂ ಕೂಡಿಬಂದಿದ್ದರು. ಪೇತ್ರನಾದರೋ ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಮಠದ ಅಂಗಳದ ತನಕ ಬಂದು ಒಳಗೆ ಹೊಕ್ಕು ಆತನ ಗತಿ ಏನಾಗುವದೋ ನೋಡಬೇಕೆಂದು ಓಲೆಕಾರರ ಸಂಗಡ ಕೂತುಕೊಂಡನು. ಆಗ ಮಹಾಯಾಜಕರೂ ಹಿರಿಯ ಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳುಸಾಕ್ಷಿಯನ್ನು ಹುಡುಕಿದರು; ಆದರೆ ಬಹು ಮಂದಿ ಸುಳ್ಳುಸಾಕ್ಷಿಗಳು ಬಂದು ನಿಂತರೂ ಏನೂ ಸಿಕ್ಕಲಿಲ್ಲ. ಕಡೆಗೆ ಇಬ್ಬರು ಮುಂದೆ ಬಂದು–ನಾನು ದೇವರ ಆಲಯವನ್ನು ಕೆಡವಿಬಿಟ್ಟು ಮೂರು ದಿನಗಳಲ್ಲಿ ಕಟ್ಟಬಲ್ಲೆನೆಂದು ಇವನು ಹೇಳಿದನು ಅಂದರು; ಆಗ ಮಹಾಯಾಜಕನು ಎದ್ದು ನಿಂತು–ನೀನೇನೂ ಉತ್ತರ ಹೇಳುವದಿಲ್ಲವೋ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು ಎಂದು ಆತನನ್ನು ಕೇಳಿದನು. ಆದರೆ ಯೇಸು ಸುಮ್ಮನಿದ್ದನು. ಆಗ ಮಹಾಯಾಜಕನು–ನಿನಗೆ ಜೀವಸ್ವರೂಪನಾದ ದೇವರ ಆಣೆಯನ್ನು ಇಡುತ್ತೇನೆ; ನೀನು ದೇವಕುಮಾರನಾದ ಕ್ರಿಸ್ತನು ಹೌದೋ ಅಲ್ಲವೋ ಎಂಬುದನ್ನು ನಮಗೆ ಹೇಳಬೇಕು ಎಂದು ಅನ್ನಲಾಗಿ ಯೇಸು–ನೀನೇ ಹೇಳಿದ್ದೀ; ಇದಲ್ಲದೆ ಇನ್ನು ಮೇಲೆ ಮನುಷ್ಯ ಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳ ಮೇಲೆ ಕುಳಿತು ಬರುವದನ್ನೂ ಕಾಣುವಿರಿ ಎಂದು ನಿಮಗೆ ಹೇಳುತ್ತೇನೆ ಅಂದನು. ಆಗ ಮಹಾಯಾಜಕನು ತನ್ನ ಬಟ್ಟೆಗಳನ್ನು ಹರಕೊಂಡು–ಇದು ದೇವದೂಷಣೆಯ ಮಾತು; ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು? ಇವನು ಈಗಲೇ ಆಡಿದ ದೂಷಣೆಯ ಮಾತನ್ನು ಕೇಳಿದಿರಲ್ಲಾ; ನಿಮಗೆ ಹೇಗೆ ತೋರುತ್ತದೆ? ಅನ್ನಲು ಇವನು ಮರಣದಂಡನೆ ಹೊಂದತಕ್ಕವನು ಎಂದು ಉತ್ತರ ಕೊಟ್ಟರು. ಆಗ ಆತನ ಮುಖದ ಮೇಲೆ ಉಗುಳಿ ಆತನನ್ನು ಗುದ್ದಿದರು; ಕೆಲವರು ಆತನ ಕೆನ್ನೆಗೆ ಏಟುಹಾಕಿ–ಕ್ರಿಸ್ತನೇ, ನಿನ್ನನ್ನು ಹೊಡೆದವರಾರು? ನಮಗೆ ಪ್ರವಾದನೆ ಹೇಳು ಅಂದರು.

ಇತ್ತಲಾಗಿ ಪೇತ್ರನು ಹೊರಗೆ ಅಂಗಳದಲ್ಲಿ ಕೂತಿದ್ದನು. ಅಲ್ಲಿ ಒಬ್ಬ ದಾಸಿಯು ಅವನ ಬಳಿಗೆ ಬಂದು–ನೀನು ಸಹ ಗಲಿಲಾಯದ ಯೇಸುವಿನ ಕೂಡ ಇದ್ದವನು ಅನ್ನಲು ಅವನು–ಅಲ್ಲ, ನೀನು ಏನನ್ನುತ್ತೀಯೋ ನನಗೆ ಗೊತ್ತಿಲ್ಲ ಎಂದು ಎಲ್ಲರ ಮುಂದೆ ಹೇಳಿದನು. ಅವನು ಅಲ್ಲಿಂದ ಬಾಗಲಿನ ಕಡೆಗೆ ಹೊರಟು ಹೋದಾಗ ಮತ್ತೊಬ್ಬಳು ಅವನನ್ನು ಕಂಡು ಅಲ್ಲಿರುವವರಿಗೆ–ಇವನೂ ನಜರೇತಿನ ಯೇಸುವಿನ ಕೂಡ ಇದ್ದವನು ಎಂದು ಹೇಳಿದಳು. ಅವನು ತಿರಿಗಿ–ಅಲ್ಲ, ಆ ಮನುಷ್ಯನನ್ನು ನಾನರಿಯೆನು ಎಂದು ಆಣೆಯಿಟ್ಟುಕೊಂಡು ಹೇಳಿದನು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ನಿಂತವರು ಮುಂದೆ ಬಂದು ಪೇತ್ರನಿಗೆ–ನಿಶ್ಚಯವಾಗಿ ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೇ ನಿನ್ನನ್ನು (ಗಲಿಲಾಯದವನೆಂದು) ತೋರಿಸಿಕೊಡುತ್ತದೆ ಎಂದು ಹೇಳಲಾಗಿ ಅವನು–ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಾಪ ಹಾಕಿಕೊಳ್ಳುವದಕ್ಕೂ ಆಣೆಯಿಟ್ಟುಕೊಳ್ಳುವದಕ್ಕೂ ಪ್ರಾರಂಭಿಸಿದನು. ಕೂಡಲೇ ಕೋಳಿ ಕೂಗಿತು. ಆಗ ಪೇತ್ರನು–ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯ ವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ ಎಂದು ಯೇಸು ಹೇಳಿದ ಮಾತನ್ನು ನೆನಸಿ ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು.

ಬೆಳಗಾಗಲು ಎಲ್ಲಾ ಮಹಾಯಾಜಕರೂ ಜನರ ಹಿರಿಯರೂ ಯೇಸುವನ್ನು ಕೊಲ್ಲಿಸಬೇಕೆಂದು ಆಲೋಚನೆ ಮಾಡಿಕೊಂಡು ಆತನನ್ನು ಕಟ್ಟಿಸಿ ತೆಗೆದುಕೊಂಡು ಹೋಗಿ ದೇಶಾಧಿಪತಿಯಾದ ಪಿಲಾತನಿಗೆ ಒಪ್ಪಿಸಿದರು.

## ಮಾರ್ಕ 14:53-15:1

ಅಷ್ಟರಲ್ಲಿ ಅವರು ಯೇಸುವನ್ನು ಮಹಾಯಾಜಕನ ಬಳಿಗೆ ತೆಗೆದುಕೊಂಡು ಹೋದರು. ಇವನ ಬಳಿಗೆ ಮಹಾಯಾಜಕರು ಹಿರಿಯರು ಶಾಸ್ತ್ರಿಗಳು ಇವರೆಲ್ಲರೂ ಕೂಡಿಬಂದರು. ಮತ್ತು ಪೇತ್ರನು ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಮಠದ ಅಂಗಳದೊಳಗೂ ಬಂದು ಓಲೆಕಾರರ ಸಂಗಡ ಬೆಂಕಿಯ ಮುಂದೆ ಕೂತುಕೊಂಡು ಚಳಿಕಾಯಿಸಿ - ಕೊಳ್ಳುತ್ತಿದ್ದನು. ಆಗ ಮಹಾಯಾಜಕರೂ ಹಿರೀಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸಾಕ್ಷಿಯನ್ನು ಹುಡುಕಿದರು; ಆದರೆ ಏನೂ ಸಿಕ್ಕಲಿಲ್ಲ. ಬಹು ಮಂದಿ ಬಂದು ಆತನ ಮೇಲೆ ಸುಳ್ಳುಸಾಕ್ಷಿ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ. ತರುವಾಯ ಕೆಲವರು ಎದ್ದು ನಿಂತು-ಕೈಯಿಂದ ಕಟ್ಟಿರುವ ಈ ದೇವಾಲಯವನ್ನು ನಾನು ಕೆಡವಿಬಿಟ್ಟು ಕೈಯಿಂದ ಕಟ್ಟದಿರುವ ಮತ್ತೊಂದನ್ನು ಮೂರು ದಿನಗಳಲ್ಲಿ ಕಟ್ಟುವೆನು ಎಂದು ಇವನು ಹೇಳಿದ್ದನ್ನು ನಾವು ಕೇಳಿದ್ದೇವೆ ಎಂಬದಾಗಿ ಆತನ ಮೇಲೆ ಸುಳ್ಳುಸಾಕ್ಷಿ ಹೇಳಿದರು. ಹೀಗೆ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ. ಆಗ ಮಹಾಯಾಜಕನು ಎದ್ದು ನಡುವೆ ನಿಂತು-ನೀನೇನೂ ಉತ್ತರ ಹೇಳುವದಿಲ್ಲವೋ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು? ಎಂದು ಯೇಸುವನ್ನು ಪ್ರಶ್ನಿಸಿದನು. ಆದರೆ ಆತನು ಸುಮ್ಮನಿದ್ದು ಏನೂ ಉತ್ತರ ಹೇಳಲಿಲ್ಲ. ತಿರಿಗಿ ಮಹಾಯಾಜಕನು -ಭಗವಂತನ ಕುಮಾರನಾದ ಕ್ರಿಸ್ತನೋ ನೀನು? ಎಂದು ಆತನನ್ನು ಕೇಳಲಾಗಿ ಯೇಸು-ನಾನೇ, ಇದಲ್ಲದೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿ-ರುವದನ್ನೂ ಆಕಾಶದ ಮೇಘಗಳೊಂದಿಗೆ ಬರುವದನ್ನೂ ನೋಡುವಿರಿ ಅಂದನು. ಇದನ್ನು ಕೇಳಿ ಮಹಾಯಾಜಕನು ತನ್ನ ಅಂಗಿಗಳನ್ನು ಹರಕೊಂಡು-ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು? ಇವನು ಮಾಡಿದ ದೂಷಣೆಯನ್ನು ಕೇಳಿದಿರಲ್ಲಾ; ನಿಮಗೆ ಹೇಗೆ ಕಾಣುತ್ತದೆ ಅನ್ನಲು ಅವರೆಲ್ಲರೂ-ಇವನು ಮರಣ ದಂಡನೆ ಹೊಂದ ತಕ್ಕವನು ಎಂದು ತೀರ್ಪುಮಾಡಿದರು. ಆ ಮೇಲೆ ಕೆಲವರು ಆತನನ್ನು ಉಗುಳಿ ಆತನ ಮುಖಕ್ಕೆ ಮುಸುಕುಹಾಕಿ ಗುದ್ದಿ-ಪ್ರವಾದನೆ ಹೇಳು ಅನ್ನುತ್ತಿದ್ದರು. ಮತ್ತು ಓಲೆಕಾರರು ಆತನ ಕೆನ್ನೆಗೆ ಏಟುಹಾಕುತ್ತಾ ತಮ್ಮ ವಶಕ್ಕೆ ತೆಗೆದುಕೊಂಡರು.

ಇತ್ತಲಾಗಿ ಪೇತ್ರನು ಕೆಳಗೆ ಅಂಗಳದಲ್ಲಿ ಇದ್ದಾಗ ಮಹಾಯಾಜಕನ ದಾಸಿಯರಲ್ಲಿ ಒಬ್ಬಳು ಬಂದು ಅವನು ಚಳಿಕಾಯಿಸಿಕೊಳ್ಳುತ್ತಿರುವದನ್ನು ಕಂಡು ಅವನನ್ನು ನೋಡಿ-ನೀನು ಸಹ ಆ ನಜರೇತಿನವನಾದ ಯೇಸುವಿನ ಕೂಡ ಇದ್ದವನು ಅಂದಳು. ಅವನು-ಅಲ್ಲ; ನೀನು ಏನನ್ನುತ್ತೀಯೋ ನನಗೆ ಗೊತ್ತಿಲ್ಲ, ತಿಳಿಯುವದಿಲ್ಲ ಎಂದು ಹೇಳಿ ಹೊರಾಂಗಳಕ್ಕೆ ಹೋದನು. ಅಲ್ಲಿ ದಾಸಿಯು ಅವನನ್ನು ಕಂಡು ಹತ್ತಿರದಲ್ಲಿ ನಿಂತಿದ್ದವರಿಗೆ - ಇವನೂ ಅವರಲ್ಲಿ ಒಬ್ಬನು ಎಂದು ತಿರಿಗಿ ಹೇಳುವದಕ್ಕೆ ತೊಡಗಿದಳು. ಅವನು ತಿರಿಗಿ ಅಲ್ಲ ಅಂದನು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ನಿಂತವರು ಪೇತ್ರನಿಗೆ-ನಿಶ್ಚಯವಾಗಿ ನೀನು ಅವರಲ್ಲಿ ಒಬ್ಬನು; ನೀನು ಗಲಿಲಾಯದವನಷ್ಟೇ ಎಂದು ತಿರಿಗಿ ಹೇಳಿದರು. ಆದರೆ ಅವನು-ನೀವು ಹೇಳುವ ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಪಿಸಿಕೊಳ್ಳುವದಕ್ಕೂ ಆಣೆಯಿಟ್ಟು ಕೊಳ್ಳುವದಕ್ಕೂ ಪ್ರಾರಂಭಿಸಿದನು. ಕೂಡಲೇ ಕೋಳಿ ಎರಡನೆಯ ಸಾರಿ ಕೂಗಿತು. ಆಗ ಪೇತ್ರನು-ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯನೆಂಬುದಾಗಿ ಹೇಳುವಿ ಎಂದು ಯೇಸು ತನಗೆ ಹೇಳಿದ ಮಾತನ್ನು ನೆನಪಿಗೆ ತಂದು ಕೊಂಡು ಆ ವಿಷಯದಲ್ಲಿ ಯೋಚಿಸಿ ಅತ್ತನು.

ಬೆಳಗಾದ ಕೂಡಲೇ ಮಹಾಯಾಜಕರೂ ಹಿರಿಯರೂ ಶಾಸ್ತ್ರಿಗಳೂ ಹಿರೀಸಭೆಯವರೆಲ್ಲರೂ ಒಟ್ಟುಗೂಡಿ ಆಲೋಚನೆ ಮಾಡಿಕೊಂಡು ಯೇಸುವನ್ನು ಕಟ್ಟಿಸಿ ತೆಗೆದುಕೊಂಡು ಹೋಗಿ ಪಿಲಾತನಿಗೆ ಒಪ್ಪಿಸಿದರು.

## ಲೂಕ 22:54-71

ಅವರು ಆತನನ್ನು ಹಿಡಿದು ಸಾಗಿಸಿಕೊಂಡು ಮಹಾಯಾಜಕನ ಮನೆಯೊಳಕ್ಕೆ ತೆಗೆದುಕೊಂಡು ಹೋದರು; ಪೇತ್ರನು ದೂರದಿಂದ ಹಿಂದೆಹಿಂದೆ ಹೋಗುತ್ತಿದ್ದನು. ಅಂಗಳದ ನಡುವೆ ಅವರು ಬೆಂಕಿಹೊತ್ತಿಸಿ ಒಟ್ಟಾಗಿ ಕೂತುಕೊಳ್ಳಲು ಅವರ ನಡುವೆ ಪೇತ್ರನೂ ಕೂತುಕೊಂಡನು. ಅವನು ಬೆಳಕಿಗೆ ಮುಖವಾಗಿ ಕೂತಿರುವಾಗ ಒಬ್ಬ ದಾಸಿಯು ಅವನನ್ನು ಕಂಡು ಅವನನ್ನು ದೃಷ್ಟಿಸಿ ನೋಡಿ-ಇವನು ಸಹ ಅವನ ಸಂಗಡ ಇದ್ದವನು ಅಂದಳು. ಆದರೆ ಅವನು-ನಾನು ಅವನನ್ನು ಅರಿಯೆನಮ್ಮಾ ಎಂದು ಹೇಳಿದನು. ತುಸು ಹೊತ್ತಿನ ಮೇಲೆ ಒಬ್ಬನು ಅವನನ್ನು ಕಂಡು-ನೀನು ಸಹ ಅವರಲ್ಲಿ ಒಬ್ಬನು ಅನ್ನಲು ಪೇತ್ರನು-ಅಲ್ಲಪ್ಪಾ ಅಂದನು. ಹೆಚ್ಚು ಕಡಿಮೆ ಒಂದು ಗಂಟೆ ಹೊತ್ತಿನ ಮೇಲೆ ಇನ್ನೊಬ್ಬನು-ನಿಶ್ಚಯವಾಗಿ ಇವನೂ ಸಹ ಅವನ ಸಂಗಡ ಇದ್ದನು, ಇವನು ಗಲಿಲಾಯದವನಷ್ಟೇ ಎಂದು ದೃಢವಾಗಿ ಹೇಳಿದನು. ಆದರೆ ಪೇತ್ರನು-ನೀನು ಹೇಳುವದೇನೋ ನಾನರಿಯೆನಪ್ಪಾ ಅಂದನು. ಅವನು ಈ ಮಾತನ್ನು ಆಡುತ್ತಿರು-ವಾಗಲೇ ಕೋಳಿ ಕೂಗಿತು. ಸ್ವಾಮಿಯು ಹಿಂತಿರುಗಿಕೊಂಡು ಪೇತ್ರನನ್ನು ದೃಷ್ಟಿಸಿ ನೋಡಿದನು. ಆಗ ಪೇತ್ರನು-ಈ ಹೊತ್ತು ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯ ವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ ಎಂದು ಸ್ವಾಮಿ ನುಡಿದ ಮಾತನ್ನು ನೆನಸಿ ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು.

ಆ ಮೇಲೆ ಯೇಸುವನ್ನು ಹಿಡಿದವರು ಆತನನ್ನು ಹಾಸ್ಯಮಾಡುತ್ತಾ ಆತನನ್ನು ಮುಸುಕುಹಾಕಿ ಹೊಡೆದು-ನಿನ್ನನ್ನು ಹೊಡೆದವರಾರು? ಪ್ರವಾದನೆ ಹೇಳು ಎಂದು ಆತನನ್ನು ಕೇಳಿದರು. ಆತನಿಗೆ ಇನ್ನೂ ಅನೇಕ ದೂಷಣೆಯ ಮಾತುಗಳನ್ನಾಡಿದರು.

ಬೆಳಗಾಗುವಾಗ ಯೆಹೂದ್ಯರ ಹಿರೀ ಸಭೆಯವರು ಅಂದರೆ ಮಹಾಯಾಜಕರು ಶಾಸ್ತ್ರಿಗಳೂ ಕೂಡಿ ಆತನನ್ನು ತಮ್ಮ ನ್ಯಾಯವಿಚಾರಣಾ ಸಭೆಗೆ ತೆಗೆದುಕೊಂಡು ಬಂದು-ನೀನು ಕ್ರಿಸ್ತನಾಗಿದ್ದರೆ ನಮಗೆ ಹೇಳು ಅಂದರು. ಆತನು ಅವರಿಗೆ-ನಾನು

ನಿಮಗೆ ಹೇಳಿದರೆ ನೀವು ನಂಬುವದಿಲ್ಲ, ನಾನು ನಿಮ್ಮನ್ನು ಏನಾದರೂ ಕೇಳಿದರೆ ನೀವು ಉತ್ತರಕೊಡುವದಿಲ್ಲ. ಆದರೆ ಇಂದಿನಿಂದ ಮನುಷ್ಯಕುಮಾರನು ಸರ್ವಶಕ್ತನಾದ ದೇವರ ಬಲಗಡೆಯಲ್ಲಿ ಆಸೀನನಾಗಿರುವನು ಎಂದು ಹೇಳಿದನು. ಆಗ ಎಲ್ಲರೂ–ಹಾಗಾದರೆ ನೀನು ದೇವರ ಕುಮಾರನೋ ಎಂದು ಕೇಳಲು ಆತನು ಅವರಿಗೆ–ನನ್ನನ್ನು ಅವನೇ ಎಂದು ನೀವೇ ಹೇಳುತ್ತೀರಿ ಎಂದು ಹೇಳಿದನು. ಅದಕ್ಕೆ ಅವರು–ನಮಗೆ ಸಾಕ್ಷಿ ಇನ್ನು ಯಾತಕ್ಕೆ ಬೇಕು? ನಾವೇ ಇವನ ಬಾಯಿಂದ ಕೇಳಿದೆವಲ್ಲಾ ಅಂದರು.

## ಯೋಹಾನ 18:13–27

ಇವನು ಆ ವರುಷದಲ್ಲಿ ಮಹಾಯಾಜಕನಾಗಿದ್ದ ಕಾಯಫನ ಮಾವನಾಗಿದ್ದನು. ಆ ಕಾಯಫನೇ–ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವದು ಹಿತಕರವೆಂದು ಯೆಹೂದ್ಯರಿಗೆ ಆಲೋಚನೆ ಕೊಟ್ಟವನು.

ಸೀಮೋನ ಪೇತ್ರನೂ ಮತ್ತೊಬ್ಬ ಶಿಷ್ಯನೂ ಯೇಸುವಿನ ಹಿಂದೆ ಹೋದರು. ಆ ಶಿಷ್ಯನಿಗೆ ಮಹಾಯಾಜಕನ ಪರಿಚಿತಿ ಇದ್ದದರಿಂದ ಯೇಸುವಿನ ಕೂಡ ಮಹಾಯಾಜಕನ ಅಂಗಳ ದೊಳಕ್ಕೆ ಹೋದನು; ಪೇತ್ರನು ಹೊರಗೆ ಬಾಗಲ ಹತ್ತರ ನಿಂತಿದ್ದರಿಂದ ಮಹಾಯಾಜಕನ ಪರಿಚಿತನಾದ ಆ ಶಿಷ್ಯನು ಹೊರಗೆ ಬಂದು ಬಾಗಲು ಕಾಯುವವಳ ಸಂಗಡ ಮಾತಾಡಿ ಪೇತ್ರನನ್ನು ಒಳಕ್ಕೆ ಕರಕೊಂಡು ಹೋದನು. ಆಗ ಬಾಗಲು ಕಾಯುವ ದಾಸಿಯು–ನೀನು ಸಹ ಈ ಮನುಷ್ಯನ ಶಿಷ್ಯರಲ್ಲಿ ಒಬ್ಬನೇನು? ಎಂದು ಪೇತ್ರನನ್ನು ಕೇಳಲು ಅವನು–ಅಲ್ಲ ಅಂದನು. ಆಗ ಚಳಿಯಾಗಿದ್ದದರಿಂದ ಆಳುಗಳೂ ಓಲೇಕಾರರೂ ಇದ್ದಲಿನ ಬೆಂಕಿ ಮಾಡಿ ಚಳಿಕಾಯಿಸಿಕೊಳ್ಳುತ್ತಾ ನಿಂತಿರಲಾಗಿ ಪೇತ್ರನೂ ಅವರ ಸಂಗಡ ನಿಂತುಕೊಂಡು ಚಳಿಕಾಯಿಸಿ–ಕೊಳ್ಳುತ್ತಿದ್ದನು.

ಅಷ್ಟರೊಳಗೆ ಮಹಾಯಾಜಕನು ಯೇಸುವನ್ನು ಆತನ ಶಿಷ್ಯರ ವಿಷಯವಾಗಿಯೂ ಉಪದೇಶದ ವಿಷಯವಾಗಿಯೂ ವಿಚಾರಿಸಿದನು. ಅದಕ್ಕೆ ಯೇಸು–ನಾನು ಧಾರಾಳವಾಗಿ ಲೋಕದ ಮುಂದೆ ಮಾತಾಡಿದ್ದೇನೆ; ಯೆಹೂದ್ಯರೆಲ್ಲಾ ಕೂಡುವಂಥ ಸಭಾ ಮಂದಿರಗಳಲ್ಲಿಯೂ ದೇವಾಲಯದಲ್ಲಿಯೂ ಯಾವಾಗಲೂ ಉಪದೇಶಮಾಡುತ್ತಾ ಬಂದೆನು;  ಮರೆಯಾಗಿ ಯಾವದನ್ನೂ ಮಾತಾಡಲಿಲ್ಲ. ನನ್ನನ್ನು ಯಾಕೆ ವಿಚಾರಿಸುತ್ತೀ? ನಾನು ಏನೇನೂ ಮತಾಡಿದೆನೋ ಅದನ್ನು ಕೇಳಿದವರಲ್ಲಿ ವಿಚಾರಿಸು; ನಾನು ಹೇಳಿದ್ದು ಇವರಿಗೆ ತಿಳಿದಿದೆಯಲ್ಲಾ ಎಂದು ಉತ್ತರಕೊಟ್ಟನು. ಯೇಸು ಈ ಮಾತನ್ನು ಹೇಳಿದಾಗ ಹತ್ತರ ನಿಂತಿದ್ದ ಓಲೆಕಾರರಲ್ಲಿ ಒಬ್ಬನು–ಮಹಾಯಾಜಕನಿಗೆ ಹೀಗೆ ಉತ್ತರ ಕೊಡುತ್ತೀಯಾ ಎಂದು ಹೇಳಿ ಆತನ ಕೆನ್ನೆಗೆ ಒಂದು ಏಟು ಹಾಕಿದನು. ಯೇಸು ಅವನಿಗೆ–ನಾನು ಮಾತಾಡಿದ್ದರಲ್ಲಿ ಏನಾದರೂ ದೋಷವಿದ್ದರೆ ಆ ದೋಷ ಇಂಥದೆಂದು ಸಾಕ್ಷಿಹೇಳು; ನಾನು ಮಾತಾಡಿದ್ದು ಸರಿಯಾಗಿದ್ದರೆ ನನ್ನನ್ನು ಯಾಕೆ ಹೊಡೆಯುತ್ತೀ ಎಂದು ಹೇಳಿದನು. ಆಗ ಅನ್ನನು ಆತನನ್ನು ಕಟ್ಟಿಸಿ ಮಹಾಯಾಜಕನಾದ ಕಾಯಫನ ಬಳಿಗೆ ಕಳುಹಿಸಿಕೊಟ್ಟನು.

ಇತ್ತಲಾಗಿ ಸೀಮೋನ ಪೇತ್ರನು ನಿಂತುಕೊಂಡು ಚಳಿಕಾಸಿ–ಕೊಳ್ಳುತ್ತಾ ಇದ್ದನು. ಆಗ ಅಲ್ಲಿದ್ದವರು ಅವನನ್ನು–ನೀನು ಅವನ ಶಿಷ್ಯರಲ್ಲಿ ಒಬ್ಬನೇನು? ಎಂದು ಕೇಳಲು ಅವನು–ಅಲ್ಲ ಅಂದನು. ಮಹಾಯಾಜಕನ ಆಳುಗಳಲ್ಲಿ ಪೇತ್ರನು ಕಿವಿ ಕತ್ತರಿಸಿದವನ ಬಂಧುವಾಗಿದ್ದ ಒಬ್ಬನು–ನಾನು ನಿನ್ನನ್ನು ತೋಟದಲ್ಲಿ ಅವನ ಸಂಗಡ ಕಂಡೆನಲ್ಲವೇ ಅಂದನು. ಅದಕ್ಕೆ ಪೇತ್ರನು ತಿರಿಗಿ ಅಲ್ಲ ಅಂದನು. ಕೂಡಲೆ ಕೋಳಿ ಕೂಗಿತು.

# ಶ್ರೇಷ್ಠ ಮಹಾಯಾಜಕನು ನಿಂದಿಸಲ್ಪಟ್ಟದ್ದು

**ರೀಪ್ರಿಂಟ್ಸ್ ಪುಟ 2469**

## ಯೋಹಾನ 18:15–27

**"ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ" – ಯೋಹಾನ 1:11**

ಅಪೋಸ್ತಲರೆಲ್ಲರೂ [ಕ್ರಿಸ್ತನನ್ನು ತೊರೆದು] ಓಡಿಹೋದ–ರೆಂದು ತಿಳಿಯಪಡಿಸಿದಾಗ್ಯೂ, ಪೇತ್ರನು ಹಾಗೂ ತಾನು ದೂರದಿಂದ [ಯೇಸುವನ್ನು] ಹಿಂಬಾಲಿಸಿದ್ದೆವೆಂಬುದನ್ನು ಯೋಹಾನನು ತೋರಿಸಿಕೊಟ್ಟಿರುವನು. ಅವರ ಗಾಢಾಸಕ್ತಿಯು ಅವರನ್ನು ಮನೆಗೆ ಹೋಗಗೊಡಿಸಿರಲಿಲ್ಲ; ಅವರು ಅತನನ್ನು ತಮ್ಮ ದೃಷ್ಟಿಯಲ್ಲಿರಿಸಿಕೊಂಡವರಾಗಿ ಕಡೆಗೆ ಆತನ ಸಂಗತಿಯು ಏನಾಗುವದೋ ಎಂಬುದನ್ನು ಗಮನಿಸಬೇಕಿತ್ತು. ಇಂಥಾ ಬಹು ಅನಿರೀಕ್ಷಿತವಾದ ಸಂದರ್ಭದಲ್ಲಿ ಅಲ್ಲದೆ ಇತರರ ಸಹಾಯವನ್ನು ಬಯಸಲು [ಯೇಸುವು] ನಿರಾಕರಿಸಿದ್ದ ಸನ್ನಿವೇಶದಲ್ಲಿ ಆತನಿಗೆ ಸಹಾಯಮಾಡಲು ಅವರು ಅಶಕ್ತರಾಗಿದ್ದರು. ಆದರೆ ಇನ್ನೂ ಅವರು ಆತನನ್ನು ಪ್ರೀತಿಸಲು ಅಶಕ್ತರಾಗಿರಲಿಲ್ಲ; ಯೋಹಾನನು ಮಹಾ ಯಾಜಕನ ಅರಮನೆಯವರೊಡನೆ ಕೆಲಮಟ್ಟಿನ ಪರಿಚಯವಿದ್ದು ಆತನು ಸುಲಭವಾಗಿ ತನಗೆ ಮಾತ್ರವಲ್ಲದೆ ಪೇತ್ರನಿಗೂ ಸಹ ಒಳಗೆ ಪ್ರವೇಶವನ್ನು ಗಳಿಸಿಕೊಂಡಿದ್ದನು.

ಆದರೆ ಈ ಸೌಲಭ್ಯಾನುಕೂಲಗಳು ಪೇತ್ರನಿಗೆ ಪರೀಕ್ಷೆಯಾಗಿ ಪರಿಣಮಿಸಿದ್ದು ಅದು ಕರ್ತನನ್ನು ಅಲ್ಲಗಳೆಯುವರೆಗೂ ಆತನನ್ನು ನಡೆಸಿತ್ತು. ಮತ್ತು ಈ ದಿವಸದಲ್ಲಿನ ಕರ್ತನ ಹಿಂಬಾಲಕರ ಸಂಗತಿಯೂ ಹೀಗೆಯೇ ಇರುವದು. ತಮ್ಮ ವಿಷಯದಲ್ಲಿ ಇಲ್ಲವೇ ತಮ್ಮಲಿರುವಂಥಾ ಅಮೂಲ್ಯವಾದ

ನಂಬಿಕೆಯಲ್ಲಿರುವ ಇತರರೊಡನೆ ಇರುವಾಗ ಅವರು ಕರ್ತನನ್ನು [ಒಡೆಯನೆಂದು] ಅರಿಕೆಮಾಡಿ ಆತನಿಗೆ ಸೇವೆಸಲ್ಲಿಸುವಂಥಾ ಧೈರ್ಯಸ್ಥೈರ್ಯಗಳಿದ್ದರೂ, ಒಂದು ವೇಳೆ ಅವರು ಹೆಸರಿನ ಕ್ರೈಸ್ತರ ಮಹಾಯಾಜಕರ ಸೇವಕರು ಮತ್ತು ಅಧಿಕಾರಿಗಳು ಇವರೊಂದಿಗೆ ಸೇರಿಕೊಂಡಲ್ಲಿ ಏನಾದರೂ ಒಂದು ವೇಳೆ ತಮ್ಮನ್ನು ಇನ್ನೂ ಸತ್ಯವನ್ನು ಅಂಗೀಕರಿಸಿಕೊಳ್ಳದಂಥವರ ಸಹವಾಸದಿಂದ ಅವರು ಬಹಿಷ್ಕರಿಸಬಹುದೆಂಬುದಕ್ಕೆ ಅಂಜಿಕೊಂಡವರಾಗಿ ಅವರು ಒಡೆಯನ ವಿಷಯವಾಗಿ ನಾಚಿ–ಕೊಂಡು ಅತನ ಬಗ್ಗೆ ಅರಿಕೆಮಾಡಲು ಅಂಜಿಕೊಳ್ಳುವರು. ನಿಸ್ಸಹಾಯಕನಾದ ಪೇತ್ರನಿಗೆ ತಾನು ಬಹಿರಂಗವಾಗಿ–"ಹೌದು ನಾನು ಆತನ ಶಿಷ್ಯರಲ್ಲಿ ಒಬ್ಬನು; ಅಂಥವರು ಯಾರೂ ಇಲ್ಲಿರುವದು ಬೇಕಿಲ್ಲವೆಂಬುದನ್ನು ಊಹಿಸಿಕೊಂಡವನಾಗಿ ನಾನು ಹೊರಗೆ ಹೋಗುವೆನು" ಎಂದು ಬಹಿರಂಗವಾಗಿ ಹೇಳಿದ್ದಲ್ಲಿ ಅವನಿಗೆ ಬಹು ಉತ್ತಮವಾಗುತ್ತಿತ್ತು. ಅವನಿಗೆ ತಾನು ಅನುಸರಿಸುತ್ತಿದ್ದ ಆ ಸೂಕ್ತವಾದ ವಿಧಾನವು ಎಷ್ಟೋ ಗೌರವವುಳ್ಳ–ದ್ದಾಗಿ ಅವನಿಗೆ ಪರಿಣಮಿಸುತ್ತಿತ್ತು, ಅಲ್ಲದೆ ನೀತಿವಂತರೆಲ್ಲರ ದೃಷ್ಟಿಯಲ್ಲಿ ಅವನಿಗೆ ಎಷ್ಟೋ ಧನ್ಯತೆಯನ್ನು ತಂದುಕೊಡುತ್ತಿತ್ತು!

ಸೂಕ್ತವಾದ ವಿಧಾನವನ್ನು ಅನುಸರಿಸಲು ವಿಫಲನಾಗಿದ್ದ ಪೇತ್ರನಿಗೆ ನಂತರದಲ್ಲಿ ಕಿವಿ ಕತ್ತರಿಸಿಕೊಂಡವನ ಬಂಧುವು–"ನಾನು ನಿನ್ನನ್ನು ತೋಟದಲ್ಲಿ ಆತನೊಡೆ ಇದ್ದದ್ದನ್ನು ನೋಡಿದ್ದೆನಲ್ಲವೇ?" ಎಂದು ನೇರವಾಗಿ ಪ್ರಶ್ನಿಸಿದಾಗ ಅವನಿಗೆ ಇನ್ನೂ ಒಂದು ಅಧಿಕವಾದ ಪರಿಶೋಧನಾ ಸ್ಥಿತಿಯನ್ನು ತಂದುಕೊಟ್ಟಿತ್ತು. ಆ ಬಡ ಪೇತ್ರನ ಸಂಗತಿಗಳು ಬಹು ಕಠಿಣವಾಗುತ್ತಾ ಬಂದಿತ್ತು. ಬೆಂಕಿಕಾಯಿಸಿಕೊಳ್ಳುವದನ್ನು ಬಿಟ್ಟು ಮಹಾಯಾಜಕನ [ಅರಮನೆಯ] ಅಂಗಳದಲ್ಲಿರುವ ಸವಲತ್ತು–ಗೌರವಗಳನ್ನು ಕಳಕೊಳ್ಳುವದು ಆತನಿಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು: ಈಗ ಅಲ್ಲಿ ಯೇಸುವನ್ನು ಒಂದು ಕತ್ತಿಯಿಂದ ಕಾಪಾಡಿದವನು ಯಾರೆನ್ನುವ ಗುರುತು ಹಿಡಿದಿರಲಾಗಿ ಇನ್ನು ಆತನು ಬಂಧನಕ್ಕೊಳಗಾಗಿ ಒಡೆಯನೊಡನೆ ಅದೇ ವಿಚಾರಣಾ ಸಭೆಯಲ್ಲಿ ವಿಚಾರಣೆಗೊಳಗಾಗುವಂಥ ಸಮಸ್ಯೆ ಎದುರಾಗಿತ್ತು. ಒಂದು ತಪ್ಪು ಹೆಜ್ಜೆ ಸಹಜವಾಗಿಯೇ ಮತ್ತೊಂದಕ್ಕೆ ನಡೆಸು–ವದು; ಈಗ ಯೇಸುವಿನ ಪರವಾಗಿ ತನ್ನನ್ನು ಪ್ರಕಟಿಸಿಕೊಳ್ಳುವದು ತಾನು ಒಬ್ಬ ಸುಳ್ಳುಗಾರನೆಂಬುದಕ್ಕೆ ಒಂದು ಬಹಿರಂಗ ಸಾಕ್ಷಿಯಾದಂತಾಗಿ ತನ್ನನ್ನು ಬಂಧನಕ್ಕೆ ನಡೆಸುವಂಥದ್ದು ಸೇರಿಕೊಂಡಿದ್ದರಿಂದ ಪೇತ್ರನು ತನ್ನನ್ನು ಕಾಪಾಡಿಕೊಳ್ಳುವ ಸಲುವಾಗಿ ತಾನು ಆ ಸುಳ್ಳನ್ನು ಮತ್ತೆ ಹೇಳುವದು ಮಾತ್ರವಲ್ಲದೆ ತನ್ನ ಒಡೆಯನನ್ನು ಮತ್ತೆ ಅಲ್ಲಗಳೆಯಲು ನಿರ್ಣಯಿಸಿ–ಕೊಂಡಿದ್ದನು, ಆದರೂ ತನ್ನನ್ನು ಆಪಾದಿಸುವವರ ಮುಂದೆ ಆ ಸಂಗತಿಯನ್ನು ಮತ್ತಷ್ಟು ದೃಢಪಡಿಸಲು ತನ್ನನ್ನು ತಾನು ಶಪಿಸಿಕೊಳ್ಳಲೂ ಯೇಸುವನ್ನು ತಾನು ಅರಿಯೆನೆಂಬುದಕ್ಕೆ ತಾನು ಆಣೆಯಿಟ್ಟುಕೊಳ್ಳಲೂ ಆರಂಭಿಸಿದ್ದನು.

ನಿಸ್ಸಹಾಯಕ ಪೇತ್ರನು! ನಮ್ಮ ಒಡೆಯನು ಆತನಿಗೆ ಹೇಳಿದಂತೆ ಸೈತಾನನು ಆತನನ್ನು ಹಿಡಿದು ಒನೆಯಲು ಬಯಸಿದ್ದನೆಂಬದು ನಿಜವೇ, ಆ ಸಮಯದಲ್ಲಿ ಆತನು ಖಂಡಿತ ವಾಗಿಯೂ ಬಹು ತೀಕ್ಷಣವಾಗಿ ಒನೆಯಲ್ಪಡುವವನಾಗಿದ್ದನು. ಆತನು ತನ್ನ ಸಮತೋಲನವನ್ನು ಮತ್ತೆ ಪಡಕೊಂಡವನಾಗಿ ತನ್ನ ಪಾಪಗಳಿಗಾಗಿ ಪಶ್ಚಾತಾಪಪಟ್ಟು ಕ್ಷಮೆಯನ್ನು ಕಂಡು–ಕೊಂಡಂಥದ್ದು ಒಂದು ಅದ್ಭುತವೋ ಎಂಬಂತೆ ತೋರುತ್ತದೆ. ನಮ್ಮ ಕರ್ತನ ಪ್ರಾರ್ಥನೆಯು ತಾನು ಈ ಅಲ್ಲಗಳೆಯುವಿಕೆಯ ಬಗ್ಗೆ ಪೇತ್ರನಿಗೆ ಈ ಹಿಂದೆ ನೀಡಿದ ಮುನ್ಸೂಚನೆ ಮೂಲಕವಾಗಿ ಕಾರ್ಯವೆಸಗಿದಂತೆ ತೋರುತ್ತದೆ, ಯಾಕಂದರೆ ಆತನು ಹೀಗೆ ಅಲ್ಲಗಳೆದ ನಂತರ ಹಾಗು ಕೋಳಿ ಕೂಗಿದುದನ್ನು ತಾನು ಗಮನಿಸಿದವನಾಗಿ–"ಇವನನ್ನು ಅರಿಯನೆಂದು ನೀನು ಮೂರು ಸಾರಿ ಹೇಳುವ ತನಕ ಈ ಹೊತ್ತು ಕೋಳಿ ಕೂಗುವದಿಲ್ಲ..." ಎಂಬ ಕರ್ತನ ಈ ಮಾತನ್ನು ಪೇತ್ರನು ನೆನಪಿಸಿಕೊಂಡಿದ್ದಂತೆ ತೋರುತ್ತದೆ. ಅವರು ವರ್ಣಿಸಲು ಸಾಧ್ಯವಿರುವದಕ್ಕಿಂತಲೂ ಉತ್ತಮವಾದ ಭಾವನೆಯಿಂದ ಪೇತ್ರನು ಬಹಳವಾಗಿ ಅತ್ತು ಕರ್ತನಿಂದ ಕ್ಷಮೆಯನ್ನು ಬೇಡುವ ಸಲುವಾಗಿ ತನ್ನ ಸ್ವಯಿಚ್ಛೆಯಿಂದ ಮಹಾಯಾಜಕನ [ಅರಮನೆಯ] ಕೊಠಡಿಯಿಂದ ತ್ವರಿತವಾಗಿ ಮುಂಜಾನೆಯ ನೆರಳಿನಲ್ಲಿ ಹೊರಗೆ ಹೋದನು.

ಪೇತ್ರನ ವೈಫಲ್ಯವು ಬಹುವಾಗಿ ತನ್ನ ಶಕ್ತಿಸಾಮರ್ಥ್ಯದ ದೆಸೆಯಿಂದಾಗಿತ್ತು ಎನ್ನುವ ಅಂಶದಲ್ಲಿ ನಮಗೆ ಒಂದು ಪಾಠವಿರುವದು. ಆವನು ಸಹಜವಾಗಿಯೇ ಧೈರ್ಯಶಾಲಿಯಾ–ಗಿದ್ದು ಅದರ ವಿಷಯದಲ್ಲಿ ಕೊಚ್ಚಿಕೊಂಡಿದ್ದನು. ಆದಾಗ್ಯೂ ಧೈರ್ಯದ ಕೊರತೆಯಿಂದ ಆತನು ವಿಫಲನಾಗಿದ್ದನು. "ನಾನು ಯಾವಾಗ ನಿರ್ಬಲನಾಗಿದ್ದೆನೋ ಆವಾಗಲೇ ಬಲವುಳ್ಳವನಾ–ಗಿದ್ದೇನೆ." ಎಂಬದು ಪೇತ್ರನ ವಿಷಯದಲ್ಲಿದ್ದಂತೆ ತಾನು ಬಲವುಳ್ಳವನೆಂದು ಭಾವಿಸುವವನು ನಿಜವಾಗಿಯೂ ಬಲಹೀನ–ನಾಗಿರುವನು ಎಂಬದು ಅನ್ವಯವಾಗುತ್ತದೆ. ನಮಗೆ ಕುಯುಕ್ತಿ–ಯುಳ್ಳ ವಿರೋಧಿಯು ಇರುವನೆಂಬುದನ್ನು ನೆನೆಯುವವರಾಗಿ ನಾವು ಭಾವಿಸಿಕೊಳ್ಳುವ ಗುಣದಲ್ಲಿನ ಬಲವಾದ ಅಂಶಗಳ ಬಗ್ಗೆ ವಿಶೇಷವಾದ ಜಾಗ್ರತೆವಹಿಸುವದನ್ನು ನಾವೆಲ್ಲರೂ ಕಲಿತುಕೊಳ್ಳು–ವರಾಗೋಣ. ನಮ್ಮ [ಗುಣದ] ಪ್ರತಿಯೊಂದು ಅಂಶದ ಬಗ್ಗೆ ಎಚ್ಚರಿಕೆವಹಿಸಿ ನಮ್ಮ ರಕ್ಷಣವೀರನ ಸಹಾಯುವನ್ನು ಅವಲಂಭಿಸುವದನ್ನು ಹೊರತು ಪಡಿಸಿದಲ್ಲಿ ನಮ್ಮ [ಇತರ] ಬಲಹೀನತೆಯ ಬಗ್ಗೆ, ನಮ್ಮ ದೌರ್ಬಲ್ಯದ ವಿಷಯಗಳ ಬಗ್ಗೆ ನಾವು ಅರಿತವರಾಗಿರಬೇಕು.

ಯೋಹಾನನು ವಿಷಯವನ್ನು ಪೂರ್ಣವಾಗಿ ಹೇಳಿರುವ–ದಿಲ್ಲ; ಆತನು ಪೇತ್ರನು ಶಪಿಸಿದುದರ ಹಾಗು ಆಣೆಯಿಟ್ಟು–ಕೊಳ್ಳುವದರ ಉಲ್ಲೇಖವನ್ನು ಬಿಟ್ಟುಬಿಟ್ಟಿರುವನು. ಸಹೋದರ –ನಾದ ಪೇತ್ರನ ಮೇಲಿನ ತನ್ನ ಪ್ರೀತಿಯು ಕರ್ತನ ಭವಿಷ್ಯವಾಣಿಯ ನಿರೂಪಣೆಯ ಭಾಗವನ್ನು ಖಚಿತಪಡಿಸುವದು ಪೂರ್ಣವಾಗಿ ಅಗತ್ಯವಿರಲಿಲ್ಲವೆಂಬಂಥ ಪ್ರಭಾವು ಆತನ ಮೇಲೆ ಬೀರಿದ್ದುದು ಸ್ಪಷ್ಟವಾಗಿತ್ತು. ಮಾರ್ಕನ ಸುವಾರ್ತೆಯಲ್ಲಿ ನೀಡಲಾದ [ಪೇತ್ರನ] ಶಪಿಸುಕೊಳ್ಳುವಿಕೆಯ ಹಾಗು ಆಣೆಯಿಟ್ಟುಕೊಳ್ಳುವಿಕೆಯ ವಿವರಣೆಯು ಪೇತ್ರನು ತಾನೇ ಹೇಳಿ ಬರೆಸಿರುವದಾಗಿದ್ದು ಅದು ದೊಡ್ಡ ಪ್ರಮಾಣದಲ್ಲಿ ಪೇತ್ರನ ವಿವರಣೆಯೇ ಆಗಿರುವದು. –ಮಾರ್ಕ 14:66–72

ಮಹಾಯಾಜಕನಿಂದ ಯೇಸುವಿನ ತನಿಖೆ ನಡೆದಿತ್ತು: ಈ

ಕಾರ್ಯನಿರ್ವಹಿಸಿದವನು ಹೇಗೂ ಹೃದಯದಲ್ಲಿ ಕೆಟ್ಟವನಾಗಿ ಕೊಲೆಗಡುಕ ಪ್ರವೃತ್ತಿಯುಳ್ಳವನಾಗಿದ್ದು ಕನಿಷ್ಠ ಪಕ್ಷದಲ್ಲಿ ನ್ಯಾಯವಿಧಿವಿದಾನಗಳನ್ನು ಸಂರಕ್ಷಿಸಲು ಬದ್ಧವಿರುವದಾಗಿ ಭಾವಿಸಿದ್ದನು; ಹೀಗಿದ್ದರೂ ಬೇರೊಂದೆಡೆಯ ದಾಖಲೆಗಳಿಂದ ನಮಗೆ ತಿಳಿದು ಬರುವದೇನಂದರೆ: ಮಹಾಯಾಜಕನು ಹಾಗು ತನ್ನ ಸಹಕಾರಿಗಳಾದ ಯಾಜಕರು ಹಾಗು ಫರಿಸಾಯರು ಆಗಲೇ ಯೇಸುವನ್ನು ಕೊಲ್ಲಿಸಬೇಕೆಂದು ನಿರ್ಧರಿಸಿದ್ದರೆಂಬದು; ಕಾರಣ ಜನರಲ್ಲಿದ್ದ ಆತನ [ಯೇಸುವಿನ] ಪ್ರಭಾವವು ಅವರಿಗೆ ವಿರೋಧವಾಗಿತ್ತು. ಇದಕ್ಕೆ ಕಾರಣ ಆತನ ಬೋಧನೆಯು ಅವರ ಬೋಧನೆಯನ್ನು ಮರೆಮಾಡಿ ಅವರ ಟೊಳ್ಳುತನ ಮತಾಂಧತೆ ಹಾಗು ಕಪಟತನವನ್ನು ಹೊರಹಾಕಿತ್ತು. ನಮ್ಮ ಕರ್ತನು ಇದರ ಅನುಸಾರವಾಗಿ ಅವರ ಪ್ರಶ್ನೆಗಳಿಗೆ ಉತ್ತರಿಸಿದವನಾಗಿ ಅದಕ್ಕೆ ನಿರ್ದಿಷ್ಟವಾದ ವಿವರಣೆಯನ್ನು ಕೊಡಲು ನಿರಾಕರಿಸಿದ್ದು ಆತನು ಕೇವಲ ತನ್ನ ಬೋಧನೆಯನ್ನು ಉಲ್ಲೇಖಿಸಿ ಒಬ್ಬ ಯೆಹೂದ್ಯನಾಗಿ ತನ್ನ ಹಕ್ಕಿನ ವಿಷಯದಲ್ಲಿ ಮನವಿ ಮಾಡಿದ್ದನು; ಆತನ ಉತ್ತರವು ಸಂಪೂರ್ಣವಾಗಿ ಸೂಕ್ತವಾಗಿದ್ದು ಕಾನೂನು ಬದ್ಧವಾಗಿತ್ತು. ನ್ಯಾಯವಾದ ಕಾರಣವಿಲ್ಲದೆ ಆತನು ಬಂಧಿಸಲ್ಪಟ್ಟಿದ್ದನು, ಅಲ್ಲದೆ ನ್ಯಾಯಾಧಿಪತಿಯು ಆಗ ಒಂದು ಕಾರಣವನ್ನು ಹುಡುಕಲು ಯತ್ನಿಸುತ್ತಿದ್ದನು. ನಮ್ಮ ಕರ್ತನು ಕೇವಲ ತಾನು ಬಂಧಿಸಲ್ಪಡುವ ಮೊದಲು ತನ್ನ ಬಂಧನಕ್ಕೆ ಎಡೆಮಾಡಿದ್ದ ಯಾವುದಾದರೂ ಒಂದಷ್ಟು ಕಾರಣವನ್ನು ಕೊಡಬೇಕೆಂಬುದನ್ನು ತೋರಿಸಿ-ಕೊಟ್ಟಿದ್ದನು.

ಯೇಸುವನ್ನು ತನ್ನ ಕೈಯಿಂದ ಹೊಡೆದು ಮಹಾಯಾಜಕ-ನಿಗೆ ಅಯುಕ್ತವಾದ ಭಾಷೆಯನ್ನು ಆಡಿದುದಕ್ಕಾಗಿ ಆತನನ್ನು ಖಂಡಿಸಿದ್ದ ಓಲೆಕಾರನು ಈ ವಿಷಯದಲ್ಲಿ ಉದ್ದೇಶ ಪೂರ್ವಕವಾಗಿ ಅನ್ಯಾಯವಾಗಿ ನಡಕೊಂಡಿದ್ದನೆಂದು ಭಾವಿಸಿ-ಕೊಳ್ಳುವ ಅಗತ್ಯವು ನಮಗಿರುವದಿಲ್ಲ. ವಾಸ್ತವದಲ್ಲಿ ನಾವು ಭಾವಿಸಿಕೊಳ್ಳಬಹುದೇನಂದರೆ ಮಹಾಯಾಜಕನ ಸ್ಥಾನವನ್ನು ಮತ್ತು ಆತನ ತೀರ್ಪನ್ನು ಬೆಂಬಲಿಸಬೇಕೆಂಬ ಬಯಕೆಯಿಂದ ಆತನು ಪ್ರಭಾವಿತನಾಗಿದ್ದನೆಂಬದೇ. ಆತನು [ಪರಿಪೂರ್ಣತೆ-ಯಿಂದ] ಬಿದ್ದುಹೋದ ಒಬ್ಬ ಮನುಷ್ಯನಾಗಿದ್ದು ಆತನ ಮನಸ್ಸಿನ ಅಸಮತೋಲನವು ಅಧಿಕಗೊಂಡು ಅಲ್ಲಿ ಯಾವ ಕೆಟ್ಟತನವೂ ಇಲ್ಲದಿದ್ದರೂ ಅದನ್ನು ಊಹಿಸಿಕೊಳ್ಳುವಂತೆ ಇದು ಆತನನ್ನು ನಡೆಸಿತ್ತು. ಈ ಸನ್ನಿವೇಶವು ಹೇಗೂ ನಮಗೆ ನಮ್ಮ ಕರ್ತನು ತನ್ನ ಪರ್ವತ ಪ್ರಸಂಗದಲ್ಲಿ –"...ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಒಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು." (ಮತ್ತಾಯ 5:39) ಎಂದು ವ್ಯಕ್ತಪಡಿಸಿದ್ದರ ಅರ್ಥವೇನೆಂಬುದನ್ನು ಗ್ರಹಿಸಿ ಕೊಳ್ಳುವ ಅವಕಾಶವನ್ನು ನೀಡುತ್ತದೆ. ನಮ್ಮ ಕರ್ತನು ಅಕ್ಷರಶಃ ಇನ್ನೊಂದು ಕೆನ್ನೆಯನ್ನು ಆ ಮನುಷ್ಯನಿಗೆ ಒಡ್ಡಿ ಅದರ ಮೇಲೆಯೂ ಸಹ ಹೊಡೆಯಬೇಕೆಂದು ಕೇಳಿಕೊಂಡಿದ್ದನೆಂದಾಗಲೀ ಇಲ್ಲವೇ ಮೌನವಾಗಿ ಆ ಹೊಡೆತವನ್ನು ತಿಂದನೆಂದಾಗಲೀ ಎಂಬುದಲ್ಲ. ತನ್ನ ಒಳ್ಳೆಯ ನಡತೆ ಹಾಗು ಸೂಕ್ತವಾದ ಭಾಷೆಯ ಬಗ್ಗೆ, ಕನಿಷ್ಠ ಪಕ್ಷದಲ್ಲಿ ವಿಷಯವನ್ನು ತಿದ್ದಿಹೇಳುವ ಪ್ರಯತ್ನ ಮಾಡದೆಯೇ, ಕೆಟ್ಟದಾಗಿ ಹೇಳಲ್ಪಡುವುವನ್ನು ಆತನು ಇಚ್ಛಿಸಿರಲಿಲ್ಲ. ಆದುದರಿಂದ ಆತನು ತನ್ನನ್ನು ಹೊಡೆದವನಿಗೆ ತಾನು ಎಲ್ಲಿ ಕೆಟ್ಟದ್ದಾಗಿ ಮಾತಾಡಿದೆನೆಂಬುದನ್ನು ತೋರಿಸಿಕೊಡಲು ಕೇಳಿ-ಕೊಂಡಿದ್ದನು ಅಲ್ಲದೆ ತಾನು ಕೆಟ್ಟದಾಗಿ ಹೇಳಿದ್ದೇನೆಂಬುದನ್ನು ತೋರಿಸಿಕೊಡಲು ಆತನಿಗೆ ಸಾಧ್ಯವಾಗದಿದ್ದಲ್ಲಿ ತಾನು ಅಯುಕ್ತವಾಗಿ ಹೊಡೆದಿದ್ದರ ತಪ್ಪನ್ನು ಒಪ್ಪಿಕೊಳ್ಳಬೇಕೆಂಬ ಸಲಹೆ ನೀಡಿದ್ದನು; ಆತನಿಗೆ ಅದನ್ನು ತೋರಿಸಿಕೊಡಲು ಸಾಧ್ಯವಾಗಿರಲಿಲ್ಲ.

ಈ ನಿದರ್ಶನದ ಬೆಳಕಿನಲ್ಲಿ ಕರ್ತನ ಜನರು–ಮತ್ತೊಂದು ಕೆನ್ನೆಯನ್ನು ಒಡ್ಡು ಎನ್ನುವದು ಕೇವಲ ಅವರು ಕೆಟ್ಟತನವನ್ನು ಕೆಟ್ಟತನದ ಮೂಲಕವಾಗಿ ಎದುರಿಸಬಾರದೆಂದೂ; ವಾಸ್ತವದಲ್ಲಿ ಅವರು ತಮಗಾದ ಕೇಡಿಗೆ ಯಾವ ವಿಧದಲ್ಲಿಯಾದರು ಪ್ರತಿಕಾರವಮಾಡುವದಕ್ಕೆ ಬದಲಾಗಿ ಹೆಚ್ಚಾದ ಕೇಡನ್ನು ಸಹಿಸಿಕೊಳ್ಳಬೇಕು ಎಂದು ಈ ಆಜ್ಞಾವಿಧಿಯನ್ನು ಅರ್ಥಮಾಡಿ-ಕೊಳ್ಳಬೇಕು. ಹೇಗೂ ಪ್ರತಿಯಾಗಿ ಅವರು ಒಡೆಯನು ಮಾಡಿದಂತೆ ಕೇಡು ಬಗೆದವರಿಗೆ ಸ್ನೇಹಭಾವದಿಂದ ಬುದ್ಧಿಹೇಳುವದರ ಮೂಲಕವಾಗಿ ಕೆಟ್ಟತನವನ್ನು ಒಳ್ಳೆಯತನ-ದಿಂದ ಎದುರಿಸಬೇಕಾಗಿರುವದು. ಆ [ವಿವಾದದ] ಸಮಸ್ಯೆಯಲ್ಲಿನ ಸರಿತಪ್ಪುಗಳನ್ನು ಅವರು ಕಾಣುವವರಾಗುವಂತೆ ಕರುಣೆಯಿಂದ ನಯವಿನಯವಾಗಿ ಪರಿಶ್ರಮಿಸಬೇಕು.

ಯೆಹೂದ್ಯರಿಂದ ನಡೆದ ಕರ್ತನ ವಿಚಾರಣೆಯು ತಾತ್ಕಾಲಿಕವಾಗಿರುವ ಮಹಾಯಾಜಕನೂ ಅನ್ನನ ಅಳಿಯನೂ ಯೆಹೂದ್ಯರ ನಿಯಮದ ಪ್ರಕಾರ ಸೂಕ್ತವಾದವನೂ ಆದ ಕಾಯಫನ ಎದುರಿನಲ್ಲಿ ನಡೆದಂತೆ ತೋರುತ್ತದೆ. ಹದಿನಾಲ್ಕನೆಯ ವಚನವು ಕಾಯಫನು ಈ ಮೊದಲು ಹೀಗೆ ಹೇಳಿದಂಥವ-ನೆಂಬುವದನ್ನು ಗುರುತಿಸುತ್ತದೆ–"ಜನವೆಲ್ಲಾ ನಾಶವಾಗುವದಕ್ಕಿಂತ ಒಬ್ಬ ಮನುಷ್ಯನು ಸಾಯುವದು ನಿಮಗೆ ಹಿತವೆಂದು ನೀವು ಆಲೋಚಿಸುವದೂ ಇಲ್ಲ ಎಂಬದಾಗಿ ಹೇಳಿದನು. ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು."

ಒಂದು ಮಹತ್ತರವಾದ ಸತ್ಯಾರ್ಥವನ್ನು ಹೇಗೆ ಎರಡು ತದ್ವಿರುದ್ಧ ದೃಷ್ಟಿಕೋನಗಳಿಂದ ನೋಡಬಹುದೆಂಬುದಕ್ಕೆ ಇಲ್ಲಿ ಇದು ಒಂದು ನಿದರ್ಶನವಾಗಿರುತ್ತದೆ. ಕಾಯಫನು ನುಡಿದ ಪ್ರವಾದನೆಯು ನಿಖರವಾಗಿ ಸತ್ಯತೆಯುಳ್ಳದ್ದಾಗಿದ್ದು, ಕರ್ತನ ವಾಕ್ಯವು ಪ್ರಕಟಮಾಡಿ ಹೇಳಿದ್ದೆಲ್ಲವುಗಳಿಗೆ ಕರಾರುವಕ್ಕಾಗಿ ಹೊಂದಿಕೆಯಾಗಿದ್ದು, ಅದನ್ನು ಕರ್ತನು ತಾನು ರೂಢಿಯಾಗಿ ಬಳಸುತ್ತಿದ್ದ ಮಾಧ್ಯಮಗಳಲ್ಲಿ ಒಂದಾದ ಮಹಾಯಾಜಕನ ಕಛೇರಿಯ [ಕಾರ್ಯಸ್ಥಾನದ] ಮೂಲಕವಾಗಿ ಕಳುಹಿಸಿದ್ದನು; ಆದರೆ ಈ ಕಾರ್ಯಸ್ಥಾನ ಹೊಂದಿದ್ದ ವ್ಯಕ್ತಿಯು ಕರ್ತನೊಡನೆ ಹೃದಯದಲ್ಲಿ ಹೊಂದಾಣಿಕೆಯಿಲ್ಲದವನಾಗಿದ್ದು ದೈವಿಕ ಯೋಜನೆಯ ಹಲವಾರು ಗುಣಲಕ್ಷಣಗಳ ವಿಷಯದಲ್ಲಿಯೂ ಸಹ ಸಹಮತವಿಲ್ಲದವನಾಗಿ ಒಂದು ದುಷ್ಕಾರ್ಯಕ್ಕೆ ಪ್ರಚೋದಕನೂ ಸಹಕಾರಿಯೂ ಆಗಿದ್ದನು. ಹೇಗೂ ಅದು ದೇವರ ಭವಿಷ್ಯತ್–ಜ್ಞಾನ ಹಾಗು ಕ್ರಿಯಾಸೂಚಿಯ ಅನುಸಾರವಾಗಿ ಕಾರ್ಯನಿರ್ವಹಿಸಿತ್ತು.

ಕರ್ತನ ಜನರೆಲ್ಲರಿಗೂ ಇಲ್ಲಿ ಸಹ ದೈವಿಕ ಸತ್ಯಾರ್ಥದ ಪ್ರತಿಯೊಂದು ಗುಣಲಕ್ಷಣಗಳ ಬಗ್ಗೆ ಒಂದು ಪಾಠವಿರುವದು. ನಾವು ಕೆಲವು ಸತ್ಯಾಂಶಗಳನ್ನು ತಿಳಿಯುವದಷ್ಟೇ ಸಾಲದು; ನಾವು ಕರ್ತನೊಡನೆ ಹೃದಯದ ಹೊಂದಾಣಿಕೆಯಲ್ಲಿರುವ ಅಗತ್ಯವೂ ಇರುವದು, ಇಲ್ಲವಾದಲ್ಲಿ ಕಾಯಫನಂತೆ ನಾವು ಒಂದು ತಪ್ಪಾದ ನಿಲುವನ್ನು ತೆಗೆದುಕೊಂಡು ಕರ್ತನ ಯೋಜನೆಯನ್ನು ಹೇಗೂ ನೆರವೇರಿಸುವಂಥವರಾಗಿ ಇತರರೊಡನೆ ಶಾಪಕ್ಕೊಳಗಾದಾಗ್ಯೂ ಕರ್ತನ ಯೋಜನೆಯು ಪೂರ್ಣಗೊಳ್ಳಲು ಸಹಕರಿಸುವಂಥ-ವರಾಗುವೆವು. ಬೆಳಕಿನವರಾಗಿ ಸತ್ಯವನ್ನು ಸ್ವೀಕರಿಸಿಕೊಂಡಿರುವ ನಾವೆಲ್ಲರೂ ಯೂದನು ಪೇತ್ರನು ಹಾಗು ಕಾಯಫನ ವಿಷಯಗಳಲ್ಲಿ ಉದಾಹರಿಸಲಾದ ತೊಡಕುಗಳನ್ನು ಜಾಗರೂಕತೆಯಿಂದ ನಿವಾರಿಸಿಕೊಂಡವರಾಗಿ ಬೆಳಕಿನಲ್ಲಿ ಹಾಗು ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯಲು ಹೆಚ್ಚುಹೆಚ್ಚಾಗಿ ಪರಿಶ್ರಮಿಸೋಣ.

ಯಹೂದ್ಯರ ಎದುರಿನಲ್ಲಿ ಮಾಡಲಾದ ವಿಚಾರಣೆಯು ಮೂರು ವಿಭಾಗಗಳಾಗಿತ್ತು:–

(1) ಕಾನೂನು ಬದ್ಧ ಮಹಾಯಾಜಕನಾದ ಅನ್ನನ ಮುಂದೆ ನಡೆದ ಪರಿಶೀಲನೆಯು ಸಂಪೂರ್ಣವಾಗಿ ಅನಧಿಕೃತವಾಗಿತ್ತು. ಆತನು ಯೇಸುವನ್ನು ಕಟ್ಟಿಸಿ ರೋಮಾಯರಿಂದ ವಿಧ್ಯುಕ್ತವಾಗಿ ನೇಮಕವಾಗಿದ್ದ ಕಾಯಫನ ಬಳಿಗೆ ಕಳುಹಿಸಿಕೊಟ್ಟಿದ್ದನು. ಹೀಗಾಗಿ ಕಾಯಫನು ಸೆನ್ಹದ್ರೀನ್ ಸಭೆಯ ಅಧ್ಯಕ್ಷನೂ ಆಗಿದ್ದು ಆತನ ನ್ಯಾಯವಿಚಾರಣಾ ಕೊಠಡಿಯು ಅದೇ ಅರಮನೆಯಲ್ಲಿರುವ ಸಂಭವವಿದ್ದು, ಅದರ ಮುಂದಿರುವ ಮೊಗಸಾಲೆಯಲ್ಲಿಯೇ ಪೇತ್ರನು ನಿಂತುಕೊಂಡು ಚಳಿಕಾಯಿಸಿಕೊಳ್ಳುತ್ತಿದ್ದನು.

(2) ಕಾಯಫನ ಎದುರಿನಲ್ಲಿ ನಡೆದ ಪೂರ್ವಭಾವಿ ವಿಚಾರಣೆಯು ಶುಕ್ರವಾರದ ಮುಂಜಾನೆ ಸುಮಾರು ಎರಡು ಹಾಗು ಮೂರು ಗಂಟೆಯ ಸಮಯದಲ್ಲಿ ನಡೆದಿರಬಹುದೆಂದು ಭಾವಿಸಲಾಗಿರುವದು; ಯೇಸುವನ್ನು ಹಿಡಿದ ಕೂಡಲೇ ಸೆನ್ಹದ್ರೀನ್ ಸಭೆಯ ಅಥವಾ ಯೆಹೂದ್ಯರ ನ್ಯಾಯಾಲಯದ ಸದಸ್ಯರನ್ನು ದೂತರ ಮುಖಾಂತರವಾಗಿ ಹೇಳಿ ಕರೆಸಲಾಗಿತ್ತು. ಈ ವಿಚಾರಣೆಯು ಯೇಸುವನ್ನು ವಿಚಾರಿಸಿ ಮುಂಜಾನೆ ಸುಮಾರು ಐದು ಗಂಟೆಗೆ ವಿಧ್ಯುಕ್ತವಾಗಿ ನಡೆಸಲಾಗುವ ಸಭೆಯಲ್ಲಿ ಯಾವ ಆರೋಪದಿಂದ ಆತನನ್ನು ಅಪರಾಧಿಯನ್ನಾಗಿ ಮಾಡಬಹು-ದೆಂಬುದನ್ನು ನಿರ್ಧರಿಸುವ ಅರ್ಥದಲ್ಲಿ ಅದು ಪೂರ್ವಭಾವಿ-ಯಾಗಿತ್ತು. ಯಾಕಂದರೆ ಯೆಹೂದ್ಯರ ನಿಯಮವು ರಾತ್ರಿಯಲ್ಲಿ ನ್ಯಾಯವಿಚಾರಣೆಮಾಡುವದನ್ನು ನಿಷೇಧಿಸಿರುವದು. – ಲೂಕ 22:66–71

(3) ಸನ್ಹೆದ್ರೀನ್ ಸಭೆಯ ಎದುರಿನಲ್ಲಿ ಔಪಚಾರಿಕವಾಗಿ ಮುಂಜಾನೆ ನಡೆದ ವಿಚಾರಣೆಯು ಕೇವಲ ಒಂದು ನಾಟಕೀಯವಾದ ಕಾರ್ಯಕಲಾಪವಾಗಿತ್ತು. ಯೇಸುವನ್ನು ಕೊಲ್ಲುವ ನಿರ್ಧಾರವನ್ನು ಆತನನ್ನು ಹಿಡಿಯುವದಕ್ಕೆ ಬಹು ಹಿಂದೆಯೇ ಮಾಡಲಾಗಿದ್ದು ಆತನ ದಂಡನೆಯ ತೀರ್ಪಿನ ವಿಷಯವನ್ನು ಮುಂದಿನ ಎರಡು ಕಾರಣಗಳಿಗಾಗಿ ಅವಸರದಿಂದ ತೆಗೆದುಕೊಳ್ಳಲಾಗಿತ್ತು. [ಅ] ಸಾಧಾರಣ ಜನರು ಈ ಸುಳ್ಳಿನ ಆರೋಪವನ್ನು ಪ್ರತಿರೋಧಿಸಿ ಯೇಸುವನ್ನು ಕಾಪಾಡುವ-ರೆಂಬುದಕ್ಕೆ ಆ ಯೆಹೂದ್ಯ ಗಣ್ಯರು ಹೆದರಿಕೊಂಡಿದ್ದರು; ಅವರಿಗೆ [ಸುಳ್ಳಾಗಿ] ನಿರೂಪಿಸಲು ಸಾಧ್ಯವಾಗಿದ್ದುದು ಕೇವಲ ಇದೊಂದೇ [ಆಪಾದನೆ] ಆಗಿತ್ತು. [ಆ] ಪಸ್ಕ ಹಬ್ಬವು ಸಮೀಪಿಸಿದ್ದು ಇದಕ್ಕೆ ಮೊದಲೇ ಆತನನ್ನು ಕೊಲ್ಲಬೇಕೆಂದಿದ್ದರು. ಆಹಾ! ತಮ್ಮ ಹೃದಯದಲ್ಲಿನ ದುಷ್ಟ ಬಯಕೆಯನ್ನು ಪ್ರಯೋಗಿಸಲು ಅವರು ದೇವರಿಂದಲೇ ಅನುಮತಿ ಹೊಂದಿದ್ದರೆಂಬುದನ್ನು ಎಷ್ಟೋ ಅಲ್ಪವಾಗಿ ಗ್ರಹಿಸಿಕೊಂಡವರಾಗಿದ್ದು, ಆ ನಿಶ್ಚಿತ ದಿನದವರೆಗೂ ಪ್ರವಾದನೆಗಳನ್ನು ಛಾಯಾರೂಪದಲ್ಲಿ ಅವರು ಹೀಗೆ ನೆರವೇರಿಸುವಂಥವರಾಗಿದ್ದರು.

ದೇವಜನರಿಗೆ ಇದರಲ್ಲಿರುವ ಒಂದು ಪಾಠವೆಂದರೆ, ನಾವು ನ್ಯಾಯವನ್ನು ಔಪಚಾರಿಕವಾಗಿ ಅಥವಾ ಆಚರಣೆಯಾಗಿ ಅನುಸರಿಸುವದಷ್ಟೇ ಸಾಕಾಗದು; ಇಲ್ಲವೇ ದೈವೀಕ ಯೋಜನೆಗಳು ಪೂರ್ಣಗೊಳ್ಳುವುದಕ್ಕೆ ಅಡ್ಡಿಪಡಿಸಲು ಅಥವಾ ಅದನ್ನು ಉಪಾಯದಿಂದ ತಪ್ಪಿಸಲು ಸಾಧ್ಯವಾಗದೆಂಬುದನ್ನು ಮುಂದಾಗಿ ತಿಳಿಯುವದಷ್ಟೇ ಸಾಲದೆಂಬದೇ. [ಕ್ರಿಸ್ತನು] ಲೆಕ್ಕವನ್ನು ತೆಗೆದುಕೊಳ್ಳುವ ಹಾಗು ತನ್ನನ್ನು ಪ್ರಕಟಿಸಿಕೊಳ್ಳುವ ದಿನದಲ್ಲಿ ಅನೇಕರು ತಮಗೆ ಯಾವ ಲಾಭವೂ ಇಲ್ಲವೇ ಗೌರವವೂ ಪಡೆಯದೆ ದೇವರ ಉದ್ದೇಶಗಳನ್ನು ಈಡೇರಿಸುವವ-ರಾಗಿದ್ದೆವೆಂಬುದನ್ನೂ, ಅದನ್ನು ತಮಗೆ ಮೆಚ್ಚಿಗೆ ತರುವದಕ್ಕೆ ಬದಲಾಗಿ ಖಂಡನೆ ತರುವ ರೀತಿಯಲ್ಲಿ ನೆರವೇರಿಸಿ-ದ್ದೇವೆಂಬುದನ್ನು ಕಂಡುಕೊಳ್ಳುವರು. ಅಲ್ಲದೆ ಆ ಮಹಾ ವಿರೋಧಿಯಾದ ಸೈತಾನೂ ಸಹ ಕಟ್ಟಕಡೆಯಲ್ಲಿ ತಾನು ದೇವರನ್ನು ಕ್ರಿಸ್ತನನ್ನು ಮತ್ತು "ಸಹೋದರರನ್ನು" ವಿರೋಧಿಸಿ-ದ್ದೆಲ್ಲವೂ ದೇವರ ಜ್ಞಾನದ ಮೂಲಕವಾಗಿಯೂ ಹಾಗೂ ಆತನ ಬಲದ ಮೂಲಕವಾಗಿಯೂ ಮನುಷ್ಯರೆಲ್ಲರ ಕೋಪವೂ ತನಗೆ ಘನಪಡಿಸುವಂತೆ ಮಾರ್ಪಡಿಸುವವನಾತನ ಮೂಲಕವಾಗಿ ಒಳ್ಳೆಯದಾಗುವಂತೆ ಮಾರ್ಪಡಿಸಿರುವನೆಂಬುದನ್ನು ಕಂಡು-ಕೊಳ್ಳುವನು. ಆದರೆ ಅದನ್ನು ತನಗೆ ಯಾವ ಪ್ರಮಾಣದಲ್ಲಿಯೂ ಹೆಸರನ್ನು ಇಲ್ಲವೇ ಆಶೀರ್ವಾದವನ್ನು ತರುವ ರೀತಿಯಲ್ಲಿ ನಡೆದಿರುವದಿಲ್ಲವೆಂಬುದನ್ನು ಕಂಡುಕೊಳ್ಳುವನು.

ಹೀಗಿರುವಲ್ಲಿ ನಾವು ನ್ಯಾಯನೀತಿಯನ್ನು ಔಪಚಾರಿಕ-ವಾಗಿ ಅನುಸರಿಸುವದಕ್ಕಿಂತಲೂ ಹೆಚ್ಚಾದುದನ್ನು ಮಾಡಬೇಕೆಂಬದು ಎಲ್ಲಾ ವಿಧದಲ್ಲಿಯೂ ಮುಖ್ಯವಾದುದು; ನಾವು ನೀತಿಭಾವವನ್ನು, ನೀತಿಯನ್ನು ಪ್ರೀತಿಸುವದನ್ನು ಹೊಂದಿಕೊಳ್ಳಬೇಕು, ಅಂದರೆ ದೇವರ ಚಿತ್ತವನ್ನು ತಿಳುಕೊಳ್ಳುವ ಹಾಗು ಅದನ್ನು ನೆರವೇರಿಸುವ ಸಲುವಾದ ಒಂದು ಪ್ರಾಮಾಣಿಕ ಬಯಕೆಯುಳ್ಳವರಾಗಬೇಕು, ಇಲ್ಲದಿದ್ದರೆ ಯೆಹೂದ್ಯರು ಆ ನೀತಿವಂತನನ್ನು ಅಪರಾಧಿಯನ್ನಾಗಿ ಮಾಡಿ ಕೊಲೆಮಾಡಿದ ರೀತಿಯಲ್ಲಿ ನಾವು ನ್ಯಾಯವನ್ನು ಔಪಚಾರಿಕವಾಗಿ ಅನುಸರಿಸುವವರಾಗಿ ಆತನ "ಸಹೋದರರನ್ನು" ಅಪರಾಧಿಗಳನ್ನಾಗಿ ಮಾಡಿ ಅವರಿಗೆ ಹಾನಿಪಡಿಸುವಂಥವರಾ-ಗುವೆವು. ಅಲ್ಲದೆ ದೇವರು ಹಾಗು ನೀತಿಯನ್ನು ಪ್ರೀತಿಸುವದೆಂಬ

ಅಪೇಕ್ಷಣೀಯ ಸ್ಥಿತಿಯನ್ನು ಪಡಕೊಳ್ಳುವ ಸಂಗತಿಯು-ಹೃದಯವನ್ನು ಒಂದು ಸಂಪೂರ್ಣವಾದ ರೀತಿಯಲ್ಲಿ ಕರ್ತನಿಗೆ ಪ್ರತಿಷ್ಠೆಪಡಿಸಿಕೊಳ್ಳುವದನ್ನು ಅಡಕವಾಗಿರುವದು. ಹೀಗೆ ಈ ವಿಷಯದ ಬಗ್ಗೆ ನಡೆಸುವ ಪ್ರತಿಯೊಂದು ಪರಿಶೀಲನೆಯು ನಮ್ಮ ಗಮನಕ್ಕೆ ಮತ್ತೆ ಕೊಂಡುತರುವ ಅಂಶವೇನಂದರೆ: ಕರ್ತನಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡು ಆತನ ವಾಕ್ಯದಲ್ಲಿ ಪ್ರಕಟವಾಗಿರುವ ಆತನ ಚಿತ್ತಕ್ಕೆ ಪೂರ್ಣವಾಗಿ ತಮ್ಮನ್ನು ಅಧೀನವಮಾಡಿಕೊಳ್ಳುವದೊಂದೇ-"ಭಲಾ ನಂಬಿಗಸ್ತನಾದ ಒಳ್ಳೆಯ ಆಳು ನೀನು ಧಣಿಯ ಸೌಭಾಗ್ಯದಲ್ಲಿ ಸೇರು" ಎಂದು ಒಡೆಯನು ನುಡಿದ ಮಾತನ್ನು ಕೇಳ ಬಯಸುವಂಥವರಿಗೆ ಉಳಿದಿರುವ ಸೂಕ್ತವಾದ ಹಾಗು ಸುರಕ್ಷಿತವಾದ ಮಾರ್ಗವೆಂಬದೇ.

ಬೆಳಿಗ್ಗೆ 3 ಗಂಟೆಯಲ್ಲಿ ನಡೆದ ಪರಿಶೀಲನೆ ಹಾಗು 5 ಗಂಟೆಯಲ್ಲಿ ನಮ್ಮ ಕರ್ತನಿಗೆ ಆತನ ಪ್ರಭಾವೀ ವಿರೋಧಿಗಳ ಮೂಲಕವಾಗಿ ಔಪಚಾರಿಕವಾಗಿ ನಡೆದ ಅಪರಾಧ ನಿರ್ಣಯಗಳ ನಡುವೆ, ಮೂರು ಮಂದಿ ಸೌವಾರ್ತಿಕರು ವರ್ಣನೆ-ಮಾಡಿರುವಂತೆ, ಕರ್ತನು ಎರಡು ಗಂಟೆಗಳ ಪರಿಹಾಸ್ಯ ನಿಂದನೆಗಳಿಗೆ ಒಳಗಾಗಿದ್ದನು. (ಮತ್ತಾಯ 26:67-68; ಮಾರ್ಕ 14:65; ಲೂಕ 22:63-65.) ಈ ಆವಮಾನಗಳು "ಸೇವಕರ" ಮೂಲಕವಾಗಿ ನಡೆಯಲಾಗಿದ್ದು, ಇದು ಅವರು ತಮಗಿಂತ ಶ್ರೇಷ್ಠರೆಂದು ಅರಿತುಕೊಂಡಿರುವವರ ದೌರ್ಭಾಗ್ಯದಲ್ಲಿ ಆನಂದಿಸುವಂಥ ಕೀಳು ಮನಸ್ಸುಳ್ಳವರೆಂಬ ಅಂಶವನ್ನು ಚೆನ್ನಾಗಿ ನಿದರ್ಶಿಸುವದು. ಈ ಸೇವಕರುಗಳು ತಮ್ಮ ಯಜಮಾನ-ರಲ್ಲಿದ್ದಂಥ ಅಂದರೆ ಮಹಾಯಾಜಕರು ಹಾಗು ಫರಿಸಾಯ-ರುಗಳು ಇವರಲ್ಲಿದ್ದಂಥ ಮನೋಭಾವವನ್ನೇ ತೋರ್ಪಡಿಸು-ವವರಾಗಿದ್ದರು. ಅವರು ಹೆಚ್ಚು ತಿಳುವಳಿಕೆಯಿಲ್ಲದ ಹಾಗು ನಯವಿಲ್ಲದ ಕಾರಣ ಅವರು ಅನುಸರಿಸುತಿದ್ದ ವಿಧಾನವು ಬಹು ಒರಟಾಗಿರುತ್ತಿತ್ತು. ಇದಕ್ಕೆ ಪ್ರತಿಯಾಗಿ ಕ್ರಿಸ್ತನ ಆತ್ಮವು ಅಂದರೆ ಪ್ರೀತಿಯ ಆತ್ಮವು-ಅದು ವಿಧ್ಯಾವಂತರಲ್ಲಿಯೇ ಇರಲೀ ಇಲ್ಲವೇ ತಿಳುವಳಿಕೆಯಿಲ್ಲದವರಲ್ಲಿಯೇ ಇರಲೀ ಅದು ಒಂದು ಪ್ರೀತಿಯೂ, ನಯವಿನಯವೂ, ಅನುಕಂಪವೂ, ಕರುಣೆಯೂ ಉಳ್ಳ ಆತ್ಮವಾಗಿರುವದು. ಅವರ ಫಲಗಳ ಮೂಲಕವಾಗಿ ಈ ಎರಡೂ ಆತ್ಮಗಳನ್ನು [ಮನೋಭಾವಗಳನ್ನು] ತಿಳಿದುಕೊಳ್ಳಬಹುದು. "ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ."

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಅಪೋಸ್ತಲರ ಕೃತ್ಯಗಳು |
|---|---|---|---|---|
| ನಿಸ್ಸಾನ್ 14 | ಯೆರೂಸಲೇಮ್ | ವಿಶ್ವಾಸ ದ್ರೋಹಿಯಾದ ಯೂದನು ನೇಣು ಹಾಕಿಕೊಂಡದ್ದು | 27:3-10 | 1:18-19 |

## ಮತ್ತಾಯ 27:3-10

ಆಗ ಆತನನ್ನು ಹಿಡುಕೊಟ್ಟ ಯೂದನು ಆತನಿಗೆ ಮರಣ ದಂಡನೆಯ ತೀರ್ಪಾಯಿತೆಂದು ನೋಡಿ ಪಶ್ಚಾತಾಪಪಟ್ಟು ಆ ಮೂವತ್ತು ರೂಪಾಯಿಗಳನ್ನು ಮಹಾಯಾಜಕರಿಗೂ ಹಿರಿಯರಿಗೂ ತಿರಿಗಿ ತಂದು-ತಪ್ಪಿಲ್ಲದವನನ್ನು ಮರಣಕ್ಕೆ ಒಪ್ಪಿಸಿ ಕೊಟ್ಟು ಪಾಪಮಾಡಿದೆನು ಅಂದನು. ಅದಕ್ಕವರು-ಅದು ನಮಗೇನು? ನೀನೇ ನೋಡಿಕೋ ಅಂದರು. ಆಗ ಅವನು ಹಣವನ್ನು ದೇವಾಲಯದೊಳಗೆ ಬಿಸಾಟುಬಿಟ್ಟು ಹೊರಟು ಹೋಗಿ ಉರ್ಲು ಹಾಕಿಕೊಂಡು ಸತ್ತನು. ಮಹಾಯಾಜಕರು ಆ ಹಣವನ್ನು ತೆಗೆದುಕೊಂಡು ಅದು ಜೀವಹತ್ಯಕ್ಕೆ ಕೊಟ್ಟ ಕ್ರಯವಾ - ದ್ದರಿಂದ ಅದನ್ನು ಕಾಣಿಕೆಪೆಟ್ಟಿಗೆಯಲ್ಲಿ ಹಾಕಬಾರದು ಎಂದರು. ಬಳಿಕ ಆಲೋಚನೆಮಾಡಿ, ಪರದೇಶಿಗಳನ್ನು ಹೂಣುವದಕ್ಕೋ - ಸ್ಕರ ಅದರಿಂದ ಕುಂಬಾರನ ಹೊಲವೆಂಬ ಭೂಮಿಯನ್ನು ಕೊಂಡುಕೊಂಡರು. ಈ ಕಾರಣದಿಂದ ಇಂದಿನವರೆಗೂ ಆ ಹೊಲಕ್ಕೆ ಜೀವಹತ್ಯದ ಹೊಲವೆಂಬ ಹೆಸರು ಅದೆ. ಹೀಗೆ ಪ್ರವಾದಿ ಯಾದ ಯೆರಮೀಯನು ಹೇಳಿದ ಮಾತು ನೆರವೇರಿತು, ಅದೇನಂದರೆ ಅವರು ಆ ಮೂವತ್ತು ರೂಪಾಯಿ ತೆಗೆದು ಕೊಂಡು ಕರ್ತನು ನನಗೆ ಅಪ್ಪಣೆಮಾಡಿದಂತೆ ಅದನ್ನು ಕುಂಬಾರನ ಹೊಲಕ್ಕೆ ಕೊಟ್ಟರು. ಇದೇ ಅವರು ಕ್ರಯಕಟ್ಟಿದವನ ಬೆಲೆ, ಇದೇ ಇಸ್ರಾಯೇಲ್ಯರಲ್ಲಿ ಕೆಲವರು ಕ್ರಯಕಟ್ಟಿದವನ ಬೆಲೆ ಎಂಬದು.

## ಅಪೋಸ್ತಲರ ಕೃತ್ಯಗಳು 1:18-19

ಈ ಮನುಷ್ಯನು ತನ್ನ ದ್ರೋಹದಿಂದ ಸಂಪಾದಿಸಿದ ಹಣಕ್ಕೆ ಒಂದು ಹೊಲವನ್ನು ಕೊಂಡುಕೊಂಡನು; ಮತ್ತು ತಲೆಕೆಳಗಾಗಿ ಬಿದ್ದು ಅವನ ಹೊಟ್ಟೆ ಒಡೆದು ಕರುಳುಗಳೆಲ್ಲಾ ಹೊರಗೆ ಸುರಿದವು. ಇದು ಯೆರೂಸಲೇಮ್ ಪಟ್ಟಣದ ನಿವಾಸಿಗಳಿಗೆಲ್ಲಾ ತಿಳಿದುಬಂದದರಿಂದ ಆ ಹೊಲಕ್ಕೆ ಅವರ ಮಾತಿನಲ್ಲಿ ಅಕೆಲ್ದಮಾ ಅಂದರೆ ಜೀವಹತ್ಯದ ಹೊಲ ಎಂಬ ಹೆಸರು ಬಂತು.

*****

# ಒಬ್ಬ ಅಪನಂಬಿಗಸ್ತ ಖಜಾಂಚಿಯ ಪತನ

**ರೀಪ್ರಿಂಟ್ಸ್ ಪುಟ 5552**

## ಮತ್ತಾಯ 26:14–25; 47–50; 27:3–10

**"ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ" – ಮತ್ತಾಯ 26:24**

ಯೇಸುವಿನ ಶಿಷ್ಯರಲ್ಲಿನ ಇತರ ಹನ್ನೊಂದು ಮಂದಿ ಗಲಿಲಾಯದವರಾಗಿರುವಲ್ಲಿ, ಯೂದನು ಪಾಲೆಸ್ತೀನ ದೇಶದ ದಕ್ಷಿಣ ಭಾಗದಿಂದ ಬಂದವನಾಗಿದ್ದನು. ಯೂದನಲ್ಲಿದ್ದ ಅತ್ಯುತ್ತಮ ವ್ಯವಹಾರ ಜ್ಞಾನದ ಗುಣದ ಕಾರಣ ಅವನು ಅಪೋಸ್ತಲರ ಗುಂಪಿನವರಲ್ಲಿ ಖಜಾಂಜಿಯಾಗಿ ಮಾಡಲ್ಪಟ್ಟಿದ್ದ–ನೆಂದು ಭಾವಿಸಲಾಗಿರುವದು. ಯೇಸುವಿನ ಮಿತ್ರರು ಗಮನಿಸಿದ್ದ ಅಂಶವೆಂದರೆ ಆತನು ಮತ್ತು ಆತನ ಹಿಂಬಾಲಕರು ತಮ್ಮ ಸಮಯವನ್ನು ಸಂಪೂರ್ಣವಾಗಿ ದೇವರ ರಾಜ್ಯವನ್ನು ಸಾರುವದಕ್ಕೆ ನೀಡುವ ಅಗತ್ಯವಿರುವದೆಂಬದು. ಹೀಗಾಗಿ ಕೆಲವರು ಸ್ವಯಂ ಪ್ರೇರಿತರಾಗಿ ಅವರ ಸಹಾಯಕ್ಕಾಗಿ ಹಣವನ್ನು ವಂತಿಗೆಯಾಗಿ ನೀಡುತ್ತಿದ್ದರೆಂಬುದನ್ನು ನಾವು ಓದುವದು ಆಶ್ಚರ್ಯವೇನಲ್ಲ.

ಯೇಸು ಹಾಗು ಆತನ ಅಪೋಸ್ತಲರು ಹಣಕ್ಕಾಗಿ ಬಿಕ್ಷೆಬೇಡುತ್ತಿದ್ದರೆಂದಾಗಲಿ ಇಲ್ಲವೆ ಹಣ ಸಂಗ್ರಹಕ್ಕಾಗಿ ಕೈಚಾಚುತ್ತಿದ್ದರೆಂದಾಗಲಿ ಸಹ ಊಹಿಸಿಕೊಳ್ಳಲು ನಮಗೆ ಸಾಧ್ಯವಾಗದು. ಹೀಗೆ ಮಾಡುವದರಿಂದ ಚಿನ್ನವೆಲ್ಲವೂ, ಬೆಳ್ಳಿಯೆಲ್ಲವೂ, ಮತ್ತು ಸಾವಿರಾರು ಬೆಟ್ಟಗಳ ಮೇಲಿರುವ ಪಶುಗಳೆಲ್ಲವೂ ನನ್ನವು ಎಂದು ಯೆಹೋವನು ಮಾಡಿರುವ ಪ್ರಕಟಣೆಯನ್ನು ಕಡೆಗಣಿಸಿದಂತಾಗುವದು; ಅಲ್ಲದೆ ಅತನಿಗೆ ಸಹಾಯ ಪಡೆಯುವ ಅಗತ್ಯವಿರುವದೆಂಬದನ್ನು ಅಡಕಮಾಡಿದಂತಾಗುವದು. ಪ್ರತಿಯಾಗಿ ಶಾಸ್ತ್ರವಚನವು ನಮಗೆ ಹೇಳುವದೇನಂದರೆ ಕೆಲವರು ತಾವಾಗಿಯೇ ಒಡೆಯನ ಬೆಂಬಲವಾಗಿ ವಂತಿಗೆ ನೀಡುತ್ತಿದ್ದರೆಂಬದು; ದೃಷ್ಟಾಂತವಾಗಿ ಹೇಳುವದಾದರೆ, ಹೆರೋದನ ಮನೆವಾರ್ತೆಯವನಾದ ಕೂಜನ ಹೆಂಡತಿಯಾದ ಯೋಹಾನಳು ಮತ್ತು ಇತರರು. (ಲೂಕ 8:3) ಇಂಥಾ ಸ್ವಯಂ ಪ್ರೇರಿತವಾಗಿ ನೀಡಲಾದ ವಂತಿಕೆಗಳು–ಆ ಗುಂಪಿಗೆ ಒಬ್ಬ ಸಾಮಾನ್ಯ ಖಜಾಂಚಿಯಿರಬೇಕೆಂಬದನ್ನು ಅಲ್ಲದೆ ಆತನು ಅತ್ಯುತ್ತಮ ವ್ಯವಹಾರ ಚಾತುರ್ಯವುಳ್ಳವ–ನಾಗಿರಬೇಕೆಂಬುದನ್ನು ಸೂಕ್ತವನ್ನಾಗಿಸಿತ್ತು.

ಯೇಸುವು ಯೂದನನ್ನು ಹನ್ನೆರಡು ಅಪೋಸ್ತಲರಲ್ಲಿ ಒಬ್ಬನನ್ನಾಗಿ ಆಯ್ಕೆಮಾಡುವಾಗ ಆತನು ಕೆಟ್ಟವನಾಗಿದ್ದನೆಂದು ನಂಬುವದಕ್ಕೆ ನಮಗೆ ಯಾವ ಕಾರಣವೂ ಸಿಕ್ಕುವದಿಲ್ಲ. ಆತನು ಒಂದು ಅತ್ಯುತ್ತಮ ಪ್ರಭಾವಾನುಕೂಲಗಳುಳ್ಳ [ಸನ್ನಿವೇಶದಲ್ಲಿ] ಅಂದರೆ ಯೇಸುವಿನ ಹಾಗು ಇತರ ಅಪೋಸ್ತಲರ ಜೊತೆಗೆ ಹಾಗು ಆ [ದೇವರ] ರಾಜ್ಯದ ಸಂದೇಶವು ತನ್ನ ಕಿವಿಯಲ್ಲಿ ಸತತವಾಗಿ ಮೊಳೆಯುತ್ತಿರುವ ಸನ್ನಿವೇಶದಲ್ಲಿಯೂ ಸಹ ಒಂದು ಕೆಟ್ಟ ಗುಣವನ್ನು ಬೆಳೆಸಿಕೊಂಡಿದ್ದನೆಂಬುದಕ್ಕೆ ನಮಗೆ ಪ್ರತಿಯೊಂದು ಕಾರಣಗಳಿರುವವು. ಹೇಗೂ ಅಲ್ಲಿ ಆತನ ದಾರಿತಪ್ಪುವಿಕೆಯು ಆರಂಭವಾಗಿತ್ತು; ಅಲ್ಲದೆ ಶಾಸ್ತ್ರವಚನಗಳು ತಿಳಿಸುದೇನಂದರೆ ಆತನಿಗೆ ಉಂಟಾದ ಶೋಧನೆಯು ಲೋಭ ಸ್ವಾರ್ಥ ಹಣದಾಸೆಗಳ ಸಂಬಂಧವಾಗಿ ಬಂದವುಗಳಾಗಿದ್ದವು.

## "ಸಕಲ ವಿಧವಾದ ಕೆಟ್ಟತನದ ಮೂಲವು"

ಅಯ್ಯೋ! ಹಣದಾಸೆಯ ಮೂಲಕವಾಗಿ ನೀತಿಮಾರ್ಗ–ದಿಂದ ತಪ್ಪಿಹೋಗುವಂಥ ದುಷ್ಪ್ರೇರಣೆಗೆ ಒಳಗಾದವರು ಅದೆಷ್ಟು ಮಂದಿ ಪ್ರಾಮಾಣಿಕ ಮನುಷ್ಯರು! ಫರಿಸಾಯರ ವಿರುದ್ಧವಾಗಿ ಯೇಸುವು ಮಾಡಿದ ಗಂಭೀರ ಆರೋಪಗಳಲ್ಲಿ ಒಂದೆಂದರೆ ಅವರು ಹಣದಾಸೆಯುಳ್ಳವರೆಂಬುದನ್ನು ನಾವು ನೆನಪಿಸಿ–ಕೊಳ್ಳುತ್ತೇವೆ. ಈ ದಿನದಲ್ಲಿರುವ ಹಲವಾರು ಕ್ರೈಸ್ತರಿಗೆ ತೊಂದರೆ ಇರುವದು ಈ ಹಣದಾಸೆಯ ಸಂಬಂಧದಲ್ಲಿಯೇ ಎಂಬ ಅಂಶವು ಸಾಬೀತಾದಲ್ಲಿ ಅದು ನಮಗೆ ಆಶ್ಚರ್ಯವಾಗಿ ತೋರಲಾಗದು. "ಹಣದಾಸೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ" (1 ತಿಮೋಥೆ 6:19) ಎಂಬದು ಈಗಲೂ ಸತ್ಯ. ಈ ಭ್ರಾಂತಿಯಿಂದ ಅನೇಕರು ತಮ್ಮನ್ನು ತಿವಿಸಿಕೊಂಡು ಸಂಕಟಪಡುತ್ತಿರುವರೆಂದು ಅಪೋಸ್ತಲನು ಸಾರಿ ಹೇಳಿರುವನು. ಹೇಗೂ ಯೂದನ ವಿಷಯದಲ್ಲಿದ್ದಂಥ ಗಂಭೀರತೆಯು ಯಾವಾಗಲೂ ಇರಲಾರದು.

ಯೂದನು ಹಣವನ್ನು ಎಷ್ಟರ ಮಟ್ಟಿಗೆ ಆಶಿಸುತ್ತಿದ್ದನೆಂದರೆ ಅದು ಅವನನ್ನು ಮೂವತ್ತು ಬೆಳ್ಳಿ ನಾಣ್ಯಗಳಿಗೆ ತನ್ನ ಒಡೆಯನನ್ನು ಹಿಡುಕೊಡಲು ಇಚ್ಛಿಸುವಂತೆ ಮಾಡಿತ್ತು; ಇದು ಕೂಲಿಕಾರನ ಸಂಬಳದ ಅನುಸಾರ ಈಗಿನ ಇನ್ನೂರು ಮತ್ತು ಮುನ್ನೂರು ಡಾಲರ್ ಇವುಗಳ ನಡುವಿನ ಮೊತ್ತಕ್ಕೆ ಸಮನಾಗಿರುವದು. ಇತರರು ಹಣವನ್ನು ಎಷ್ಟರ ಮಟ್ಟಿಗೆ ಪ್ರೀತಿಸಿರುವರೆಂದರೆ ಅವರು ಧನ ಸಂಪಾದನೆಯ ಸಲುವಾಗಿ ತಮ್ಮ ಮನಃಸಾಕ್ಷಿಯನ್ನೇ ಮಾರಿಕೊಂಡಿರುವರು. ಕೆಲವರು ತಾವು ತಪ್ಪಾದುದನ್ನು ಪ್ರತಿಪಾದಿಸುವದರ ಮೂಲಕ ವ್ಯವಹಾರದಲ್ಲಿ ಉತ್ತಮವಾಗಿ ಏಳಿಗೆಯಾಗುವೆವೆಂದು ನಂಬುವವರಾಗಿ ಸತ್ಯವನ್ನು ಹಣಕ್ಕಾಗಿ ಮಾರಿಕೊಂಡಿರುವರು. ಬೇರೆಯವರು ಸಭೆಯನ್ನು ಹಣಕ್ಕಾಗಿ ಮಾರಿಕೊಂಡವರಾಗಿ ಹಣವನ್ನು ಕಂತಿನಲ್ಲಿ ಪಡೆದು ಜನರ ಮೆಚ್ಚಿಗೆಯನ್ನು ಗಳಿಸುವ ಸಲುವಾಗಿ ತಾವು ನಂಬದಂಥವುಗಳನ್ನು ಬೋಧಿಸಲು ಇಚ್ಛಿಸುವಂತವರಾಗಿರುವರು. ಕೆಲವರು ದೇಶಭಕ್ತಿಯನ್ನು ಹಣಕ್ಕಾಗಿ ವಿನಿಮಯಮಾಡಿಕೊಂಡು ತಮ್ಮ

ದೇಶದ ಹಿತಾಸಕ್ತಿಗಳನ್ನು ಮಾರಿಕೊಂಡಿರುವರು.

ಖಂಡಿತವಾಗಿಯೂ ಪ್ರತಿಯೊಬ್ಬನಿಗೂ ಆಂತರ್ಯ-ದಲ್ಲಿರುವ ಹಣದಾಸೆಗೆ ವಿರುದ್ಧವಾಗಿ ಎಚ್ಚೆತ್ತು [ತನ್ನನ್ನು] ಕಾಪಾಡಿಕೊಳ್ಳುವಂಥ ದೊಡ್ಡ ಅವಶ್ಯಕತೆಯಿರುವದು. ಆದರೆ ನಾವು ಹಣ ಮತ್ತು ಹಣದಾಸೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು; ಯಾಕೆಂದರೆ [ಹಣದಾಸೆ-ಯೆಂಬ] ಎರಡನೇ ಸಂಗತಿಯೇ ನಮ್ಮನ್ನು ಹಾಳುಮಾಡಿ ನಮ್ಮ ಆತ್ಮಕ್ಕೆ ಆಮಿಷ ಒಡ್ಡಿ ಬೋನಿಗೆ ಸಿಕ್ಕಿಬೀಳುವಂತೆ ಮಾಡುವಂಥದ್ದು. ಹಣವು ದುಡಿಮೆ ಶ್ರಮಿಸುವಿಕೆ ಸಂಗ್ರಹಣೆಯನ್ನು ಪ್ರತಿನಿಧಿಸುವದು; ಮತ್ತು ಹೀಗಾಗಿ ಇದರಿಂದ ಉಂಟಾಗುವ ಒಳ್ಳೆಯದಕ್ಕೆ ನಾವು ಪ್ರಾಮುಖ್ಯತೆ ನೀಡಬೇಕು. ಆದರೆ ಹಣವನ್ನು ಆಶಿಸಿ ಅದರ ಸೇವೆಮಾಡುವದು, ಅದನ್ನು ಒಂದು ವಿಗ್ರಹವನ್ನಾಗಿ ಮಾಡಿಕೊಂಡು ನಮ್ಮ ಹೃದಯಗಳನ್ನು ದೇವರಿಂದ ದೂರವಾಗುವಂತೆ ಮಾಡಿಕೊಳ್ಳುವದು, ಇವುಗಳನ್ನು ನಾವು ಮಾಡಕೂಡದು. ಈ ಹಣದಾಸೆಯೇ ಯೂದನನ್ನು ಘೋರವಾಗಿ ವಿಫಲನಾಗುವಂತೆ ಮಾಡಿದ ಅತಿ ಮುಖ್ಯವಾದ ಕಾರಣವೆಂಬುದನ್ನು ನಾವು ಮರೆಯದಿರೋಣ.

## ಪ್ರವಾದನೆಯ ನೆರವೇರುವಿಕೆ

ಮೊದಲಲ್ಲೇ ಅಲ್ಲ, ಆದರೆ ಆ ನಂತರ ಶಿಷ್ಯರು ಖಜಾಂಜಿಯ ಚೀಲವನ್ನು ಹೊತ್ತುಕೊಂಡು ಬಂದಿದ್ದ ಯೂದನು ಒಬ್ಬ ಕಳ್ಳನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದರು. (ಯೋಹಾನ 12:6) ಆ ಸಣ್ಣ ಗುಂಪಿನ ಸಹಾಯಕ್ಕಾಗಿ ವಂತಿಕೆಯಾಗಿ ನೀಡಿದ ಹಣವನ್ನು ಸ್ವಂತಕ್ಕಾಗಿ ಬಳಸುವಾಗಲೂ ಸಹ ಯೂದನು ಮೇಲ್ನೋಟಕ್ಕೆ ಸಮಂಜಸವಾಗಿ ತೋರುವ ಕೆಲವು ಸಬೂಬುಗಳನ್ನು ನೀಡಿರುವ ಸಾಧ್ಯತೆಗಳಿದ್ದವೆಂಬದು ನಿಸ್ಸಂಶಯ, ಯಾಕಂದರೆ ಪಾಪವು ಯಾವಾಗಲೂ ವಂಚಕವಾದದ್ದು. "ಒಡೆಯನು ಹಾಗು ನಮ್ಮೆಲ್ಲರಿಗೂ ಹಣವು ಬಹು ಅಗತ್ಯವಾಗಿ ಬೇಕಿರುವ ಸಮಯವು ಬರುವದು ಎಂದು ಅಲೋಚಿಸಿ ಆ ಸಮಯದಲ್ಲಿ ಬಳಸುವ ಸಲುವಾಗಿ ನಾನು ಹಣವನ್ನು ತೆಗೆದಿಟ್ಟಿದ್ದೇನೆ ಮತ್ತು ಆಗ ನನ್ನ ಮುಂದಾಲೋಚನಾ ದೃಷ್ಟಿಯು ಪ್ರಸಂಶಿಸಲ್ಪಡುವದು" ಎಂದು ಆತನು ನಿಸ್ಸಂದೇಹವಾಗಿ ಹೇಳುವನು. ಈ ವಿಷಯವನ್ನು ಹೊತ್ತು ತಿರುಗಾಡುವಾಗ ಆತನಲ್ಲಿರುವ ಹಣದಾಸೆಯು ಹೆಚ್ಚುತ್ತಾ ಬಂದು ಸಕ್ರಿಯ ವ್ಯವಹಾರ ಜ್ಞಾನವುಳ್ಳ ಆತನ ಮನಸ್ಸು ಯೇಸುವನ್ನು ಹಿಡುಕೊಡುವ ಒಳಸಂಚು ಮಾಡುವಂತೆ ನಡೆಸಿತ್ತು.

ದಾಖಲೆಗಳು ಹೇಳುವಂತೆ ಯೇಸುವಿಗೆ ಮರಣದಂಡನೆ ಯಾದುದನ್ನು ಯೂದನು ಅರಿತಾಗ ತನ್ನ ಕೃತ್ಯಕ್ಕೆ ತೀವ್ರವಾಗಿ ಪಶ್ಚಾತಾಪ ಪಟ್ಟವನಾಗಿ ಆ ಹಣವನ್ನು ತೆಗೆದುಕೊಂಡು ಮಹಾಯಾಜಕನಿಗೆ ಹಿಂದಿರುಗಿಸಿ ತನ್ನ ಕೃತ್ಯವನ್ನು ನಿಷ್ಫಲ-ಗೊಳಿಸಲು ಇಚ್ಛಿಸಿದ್ದನು. ಅವರು ಆತನ ವಿಷಯವಾಗಿ ನಕ್ಕು ಒಬ್ಬ ನಿರಪರಾಧಿಯನ್ನು ಹಿಡುಕೊಟ್ಟು ಆತನ ರಕ್ತವನ್ನು ಸುರಿಸಿದ್ದು ತಮಗೇನೂ ಸಂಬಂಧವಿಲ್ಲದಾಗಿದ್ದು ಅದು ಆತನ ಸ್ವಂತ ವಿಷಯ ವೆಂದು ಸಾರಿ ಹೇಳಿದ್ದರು. ಹಿಂದಿರುಗಿಸಲಾದ ಆ ಹಣವು "ರಕ್ತಾಪರಾಧಕ್ಕಾಗಿ" ಕೊಟ್ಟ ಕಾರಣ, ಅದನ್ನು ದೇವಾಲಯದ ಭಂಡಾರಕ್ಕೆ ಮತ್ತೆ ಹಾಕಲು ಸಾಧ್ಯವಿರಲಿಲ್ಲ; ಬದಲಾಗಿ ಅವರು ಆ ಹಣದಿಂದ ಪರದೇಶಿಗಳನ್ನು ಹೂಣಿಡುವ ಸಲುವಾಗಿ ಕುಂಬಾರನ ಹೊಲವೆಂಬ ಅಗ್ಗದ ಬೆಲೆಯ ಭೂಮಿಯನ್ನು ಕೊಂಡುಕೊಂಡಿದ್ದರು. ಈ ರೀತಿಯಲ್ಲಿ ಅವರು- "ಹೀಗೆ ಪ್ರವಾದಿಯಾದ ಯೆರೆಮೀಯನು ಹೇಳಿದ ಮಾತು ನೆರವೇರಿತು, ಅದೇನಂದರೆ-ಅವರು ಆ ಮೂವತ್ತು ರೂಪಾಯಿ ತೆಗೆದುಕೊಂಡು ಕರ್ತನು ನನಗೆ ಅಪ್ಪಣೆಮಾಡಿದಂತೆ ಅದನ್ನು ಕುಂಬಾರನ ಹೊಲಕ್ಕೆ ಕೊಟ್ಟರು. ಇದೇ ಅವರು ಕ್ರಯಕಟ್ಟಿದವನ ಬೆಲೆ, ಇದೇ ಇಸ್ರಾಯೇಲ್ಯರಲ್ಲಿ ಕೆಲವರು ಕ್ರಯಕಟ್ಟಿದವನ ಬೆಲೆ" ಎಂಬ ಒಂದು ಪ್ರವಾದನೆಯನ್ನು ಅಕ್ಷರಶಃ ನೆರವೇರಿಸಿದವ-ರಾಗಿದ್ದು, ಅವರು ಅದನ್ನು ಮರೆತುಹೋಗಿದ್ದ ಸಂಭವವಿತ್ತು. – ಮತ್ತಾಯ 27:9–10

ಯೇಸುವಿಗೆ ಮರಣದಂಡನೆಯಾಗಿದ್ದು ಯೂದನಿಗೆ ಆಶ್ಚರ್ಯ ಉಂಟುಮಾಡಿತ್ತೆಂಬದು ಆ ವಿವರಣೆಯಲ್ಲಿ ಅಡಕವಾಗಿರುವದು. ಈ ನಿರ್ಣಾಯಕವಾದ ಪರೀಕ್ಷೆಗೆ ಒಳಗಾದಾಗ ಮೆಸ್ಸೀಯನು ತನ್ನ ಅಧಿಕಾರವನ್ನು ಪ್ರಯೋಗಿಸಿ ತನ್ನ ಶತ್ರುಗಳ ಮೇಲೆ ಜಯಹೊಂದುವನೆಂದು ಆತನು ನಿರ್ಣಯಿಸಿಕೊಂಡದ್ದು ಸ್ಪಷ್ಟವಾಗಿತ್ತು. ಹೀಗೆ ಯೂದನು ತಾನು ದೇವರ ರಾಜ್ಯವು ಸ್ಥಾಪನೆಯಾಗುವದನ್ನು ತ್ವರಿತಗೊಳಿಸುವ ಬಗ್ಗೆ ಆಲೋಚಿಸಿದ್ದು ಹಾಗೂ ಅದರಲ್ಲಿ ತಾನು ಪಾಲುತೆಗೆದು-ಕೊಳ್ಳುವದನ್ನು ನಿರೀಕ್ಷಿಸಿದ್ದ ಸಂಭವವಿತ್ತು. ಇದಕ್ಕೆ ತಾನು ಕ್ಷಮೆಯಾಚಿಸಿ ಕಡೆಯಲ್ಲಿ ಹೀಗೆ ಹೇಳಲು ಸಾಧ್ಯವಿತ್ತು: "ಸರಿ, ನಾವು ಕೇವಲ ಮೂವತ್ತು ಬೆಳ್ಳಿ ನಾಣ್ಯಗಳಿಗಿಂತಲೂ ಮುಂದಾಗಿದ್ದು, ಸಂಗತಿಗಳನ್ನು ಮುಖ್ಯವಾದ ಘಟ್ಟಕ್ಕೆ ಬೇರೆ ಯಾವ ವಿಧಕ್ಕಿಂತಲೂ ಶೀಘ್ರವಾಗಿ ತಂದದ್ದಕ್ಕಾಗಿ ನೀವು ನನಗೆ ಕೃತಜ್ಞತೆಯನ್ನು ಸಲ್ಲಿಸಬಹುದು." ಹೀಗೆ ಆತನು ಒಬ್ಬ ವೀರನಂತೆ ಶೋಭಿಸುವವನಾಗಿ, ತನ್ನ ಹಣಕಾಸಿನ ವ್ಯವಹಾರ ಜ್ಞಾನವನ್ನು ಮತ್ತು ದೇವರ ರಾಜ್ಯದಲ್ಲಿನ ದೊಡ್ಡ ಖಜಾಂಚಿಯ ಸ್ಥಾನಕ್ಕೆ ತನ್ನ ಅರ್ಹತೆಯನ್ನು ತೋರ್ಪಡಿಸಿಕೊಳ್ಳುವದಕ್ಕಿದ್ದನು. ಆದರೆ, ಇವೆಲ್ಲವುಗಳಿಗಿಂತ ಹೆಚ್ಚಾಗಿ ಒಡೆಯನು ಮರಿಯಳು ತಂದಿದ್ದ ಸುಗಂಧ ದ್ರವ್ಯ ಭರಣಿಯ ವಿಷಯವಾಗಿ ಪ್ರಸಂಶೆಮಾಡಿದ ಬಗ್ಗೆ ಆತನು ಯೇಸುವಿನ ಮೇಲೆ ಸ್ವಲ್ಪ ಕೋಪಗೊಂಡದ್ದು ಸ್ಪಷ್ಟವಾಗಿತ್ತು. ಈ ಸಿಟ್ಟಿನಿಂದಾದ ಪ್ರಚೋದನೆಯ ಫಲವಾಗಿಯೇ ಆತನು [ಯೇಸುವನ್ನು] ಹಿಡುಕೊಡಲು ಸಮಾಲೋಚಿಸು-ವದಕ್ಕಾಗಿ ಯಾಜಕರು ಹಾಗು ಶಾಸ್ತ್ರಿಗಳ ಬಳಿಗೆ ಹೋಗ ಬಯಸಿದ್ದುದು.

## ಅಸಡ್ಡೆ-ಪುನರುತ್ಥಾನದ ನಿರೀಕ್ಷೆಯಿಲ್ಲದಂಥ ಸ್ಥಿತಿ

ನಾವು ಇಲ್ಲಿ ಯೂದನಿಗೆ ನೀಡುವ ಸಬೂಬುಗಳ ಬಗ್ಗೆ ಸಲಹೆ ಮಾಡುತ್ತಿಲ್ಲ. ದೇವರಿಗೂ ಮತ್ತು ಆತನ ಧ್ಯೇಯೋದ್ದೇಶಗಳ ವಿಷಯವಾಗಿ ಮಾಡಿದ ನಂಬಿಕೆದ್ರೋಹಕ್ಕೆ ಯಾವ ಸೂಕ್ತವಾದ ಸಬೂಬುಗಳೂ ಇರಲು ಸಾಧ್ಯವಿಲ್ಲ. ಪ್ರತಿಯೊಬ್ಬ ಅತಿಕ್ರಮಣಕಾರಿಯೂ ಕೇವಲ ತಾನು

ತೆಗೆದುಕೊಳ್ಳುವ ತಪ್ಪಾದ ವಿಧಾನದ ಬಗ್ಗೆ ತನ್ನ ಮನಸ್ಸಾಕ್ಷಿಯ ಒಪ್ಪಿಗೆಯನ್ನು ಪಡೆಯಬೇಕೆಂಬುದನ್ನು ಮಾತ್ರ ನಾವು ತೋರಿಸಿಕೊಡುತ್ತಿದ್ದೇವೆ. ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ಪಾಪಮಾಡಲು ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಗೆ ಮೊದಲು ಮನಸ್ಸು ಹಾಗು ಮನಸಾಕ್ಷಿಗಳು ವಿಕೃತಗೊಂಡದ್ದಾಗಿರಬೇಕೆಂಬದು. ಹೀಗಾಗಿ ಯೇಸುವಿನ ಈ ಮಾತು ಪೂರ್ಣವಾಗಿ ನ್ಯಾಯಸಮ್ಮತವಾಗಿರುವದು: "ಮನುಷ್ಯಕುಮಾರನು ಹೊರಟು ಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಚೆನ್ನಾಗಿತ್ತು..." –ಮತ್ತಾಯ 26:24

ಇಂಥಾ ನಂಬಿಕೆದ್ರೋಹ, ತನ್ನ ಮಿತ್ರನೂ ತನ್ನ ಬೋಧಕನೂ ಆದವನನ್ನು ಹಿಡುಕೊಡುವಂಥಾ ಇಚ್ಛೆ, ಅಲ್ಲದೆ ದೇವರ ಕುಮಾರನೆಂದು ಅಂಗೀಕರಿಸಿಕೊಂಡಂಥಾ ಒಬ್ಬನನ್ನು, ಮೆಸ್ಸೀಯನ ರಾಜ್ಯವನ್ನು ಯಾವಾತನ ಮೂಲಕವಾಗಿ ಅಪೇಕ್ಷಿಸುವವನಾಗಿದ್ದನೋ ಅದು ವಿನಾಶದ ಅತಿ ಕೆಟ್ಟ ಮಾದರಿಯಾಗಿರುವದು. ಇತರ ಅಪೋಸ್ತಲರೆಲ್ಲರೊಡನೆ ಯೂದನು ಯೇಸುವಿನ ಹೆಜ್ಜೆಯ ಜಾಡಿನಲ್ಲಿ ನಡೆದು, ಸತ್ಯದ ಬಗ್ಗೆ ಇರುವ ನಂಬಿಗಸ್ತಿಕೆಯ ನಿಮಿತ್ತವಾಗಿ ಸಂಭವಿಸುವ ಬಾಧೆಗಳು ಹಾಗು ಪರಿಶೋಧನೆಗಳಲ್ಲಿ ಪಾಲನ್ನು ತೆಗೆದುಕೊಂಡವನಾಗಿ, ಜನರಿಂದ ಅಪಾರ್ಥಕ್ಕೊಳಗಾಗಿ, ಇದರಲ್ಲಿ ನಂಬಿಗಸ್ತನಾದಲ್ಲಿ ತನ್ನ ಒಡೆಯನೊಂದಿಗೆ ಪರಲೋಕ ರಾಜ್ಯದಲ್ಲಿ ಒಂದು ಪಾಲನ್ನು ಅಂದರೆ ಭೂಲೋಕದವರೆಲ್ಲರನ್ನು ಆಶೀರ್ವಧಿಸುವ ಕಾರ್ಯದಲ್ಲಿ ಒಂದು ಪಾಲನ್ನು ಪಡೆಯುವದಕ್ಕಾಗಿ ಕರೆಯಲ್ಪಟ್ಟಿದ್ದನು. ಇತರರೊಂದಿಗೆ ಯೂದನು ಯೇಸುವಿನ ಹೆಸರಿನಲ್ಲಿ ಕಾರ್ಯವೆಸಗುವ ದೇವರ ಶಕ್ತಿಯ ಮೂಲಕವಾಗಿ ದೇವರ ರಾಜ್ಯವನ್ನು ಪ್ರಚುರಪಡಿಸುವವನಾಗಿದ್ದು, ದೆವ್ವಗಳನ್ನು ಬಿಡಿಸಿ, ರೋಗಿಗಳನ್ನು ಗುಣಪಡಿಸಿದ್ದನು. ಆತನು ರಕ್ಷಕನೊಡನೆ ಸತತವಾಗಿ ಇರುತ್ತಿದ್ದು, ಆತನ [ರಕ್ಷಕನ] ಜೀವಿತದ ಪರಿಶುದ್ಧತೆಯ ಬಗೆಯೂ ತಿಳಿದಿದ್ದನು, ದೇವರ ಕಡೆಗೆ ಆತನಿಗಿದ್ದ ನಿಷ್ಠೆಯ ಬಗ್ಗೆ ತಿಳಿದಿತ್ತು. ಆದುದರಿಂದ ಈ ಎಲ್ಲಾ ಸಂಗತಿಗಳ ಮೂಲಕವಾಗಿ ಆತನ ಹೊಣೆಗಾರಿಕೆ ಹಾಗು ಪಾಪಪ್ರಜ್ಞೆ ರೂಪುಗೊಂಡಿತ್ತು.

ಆತನು ಆತ್ಮಹತ್ಯೆ ಮಾಡಿಕೊಂಡಿದ್ದನೆಂಬ ಅಂಶದಲ್ಲಿ ಯೇಸುವಿನ ಮಾತು ನೆರವೇರಲ್ಪಟ್ಟದ್ದು ಅಡಕವಾಗಿರುತ್ತದೆ; ಅದೇನಂದರೆ ಯೂದನು ತಾನು ಹುಟ್ಟಲೇಬಾರದಿತ್ತೆಂದು ಇಚ್ಛಿಸಿದನೆಂಬದು. ಆತ್ಮಹತ್ಯೆಮಾಡಿಕೊಳ್ಳುವ ಪ್ರತಿಯೊಬ್ಬನು ಇದೇ ಅಂಶವನ್ನು ಪ್ರಕಟಿಸಿ ಹೇಳಿರುವನು, ಆದರೂ ಆತ್ಮಹತ್ಯೆಮಾಡಿಕೊಂಡ ಇತರರಿಗೆ ತಮ್ಮ ಅಜ್ಞಾನದ ಹಾಗು ಕ್ರಿಸ್ತನು ಎಲ್ಲರಿಗಾಗಿ ಮರಣಹೊಂದಿದ ದೆಸೆಯಿಂದ [ಪುನರುತ್ಥಾನದ] ನಿರೀಕ್ಷೆಯಿರಬಹುದು; ಅಲ್ಲದೆ ಇದರ ಫಲವಾಗಿ ಅವರಿಗೆ ಇತರರೊಡನೆ ಖಂಡಿತವಾಗಿಯೂ ಒಂದು ಆಶೀರ್ವಾದ ಹಾಗು ನಿತ್ಯಜೀವ ಪಡೆಯುವ ಅವಕಾಶವಿರುವದು.

ಆದರೆ ಯೂದನ ವಿಷಯದಲ್ಲಿ, ಆತನು ಈಗಾಗಲೇ ಇಂಥ ಸವಲತ್ತು ಅವಕಾಶ ಹಾಗು ಪರಿಜ್ಞಾನವನ್ನು ಪಡೆದ ಕಾರಣದಿಂದ ಅಲ್ಲದೆ ಆತನು ಬೆಳಕಿಗೆ ಹಾಗು ತಿಳುವಳಿಕೆಗೆ ವಿರೋಧವಾಗಿ ಪಾಪಮಾಡಿದ್ದ ಕಾರಣದಿಂದ ಈ ಅಂಶಗಳೆಲ್ಲ – ವುಗಳನ್ನು ಕಡೆಗೆಣಿಸಲಾಗಿರುವದು. ಆತನು ತನಗೆ ತಕ್ಕದಾದ ಸ್ಥಳಕ್ಕೆ, ತನಗೆ ಸೂಕ್ತವಾದ ಸ್ಥಳಕ್ಕೆ, ಹೋಗಿರುವನೆಂದು ಪ್ರಕಟಿಸಲಾದ ಸಂಗತಿಯು ಯೂದನು ಇಲ್ಲವೇ ಯಾರಾದರೂ ಪಾಪಕ್ಕೆ ನೀಡಲಾದ ಡಂಡನೆಯಾಗಿ ನಿತ್ಯ ಯಾತನೆಗೆ ಸೇರಬೇಕೆಂಬುದನ್ನು ಸೂಚಿಸುವದಿಲ್ಲ. ವಾಸ್ತವದಲ್ಲಿ ಆತನ ಸ್ವಸ್ಥಳವು ಮರವೆಯ ಲೋಕ, ನಿರೀಕ್ಷಾ ಹೀನವಾದ ಮರವೆಯ ಲೋಕ, ಪುನರುತ್ಥಾನದ ಸಂಭವವಿಲ್ಲದ ಪರಿಸ್ಥಿತಿ. ಆತನು ಸಹಜವಾಗಿ [ಕೊಲೆಗೂ ಬೇಟೆಗೂ] ಹುಟ್ಟಿರುವ ಕಾಡು ಮೃಗಗಳಂತೆ ಸಾವನ್ನಪ್ಪಿದ್ದು, ಇಂಥಾ ಒಂದು ಸೌಭಾಗ್ಯಗಳನ್ನು ಹೊಂದಿದವನಿಗೆ ಏಕೆ ಇಂಥಾ ಒಂದು ಗುಣವಿತ್ತೆಂಬುದಕ್ಕೆ ಹಾಗೂ ಇಂಥವನಿಗೆ ಮುಂದೆ ಎಂದಾದರೂ ಒಂದು ಅವಕಾಶವಿರಬೇಕೆಂಬದಕ್ಕೆ ಯಾವ ತಾರ್ಕಿಕವಾದವೂ ಇರುವದೆಂಬುದನ್ನು ತೋರಿಸಲಾಗದು.

## ಎರಡು ವಿವರಣೆಗಳಲ್ಲಿರುವ ಸಾಮ್ಯತೆ.

ಯೂದನ ಗತಿಯ ಬಗ್ಗೆ ಒಂದು ಶಾಸ್ತ್ರವಚನವು ತಿಳಿಸುವದೇನಂದರೆ ಆತನು ಹೊರಟುಹೋಗಿ ತಾನು ಉರ್ಲು ಹಾಕಿಕೊಂಡನೆಂಬದು. (ಮತ್ತಾಯ 27:5) ಮತ್ತೊಂದು ಶಾಸ್ತ್ರವಚನವು ಪ್ರಕಟಮಾಡಿರುವದೇನಂದರೆ: ಆತನ ದ್ರೋಹವು ಒಂದು ಹೊಲವನ್ನು ಕೊಂಡುಕೊಳ್ಳುವದರಲ್ಲಿ ಪೂರ್ಣಗೊಂಡದ್ದಲ್ಲದೆ ಆತನು ತಲೆಕೆಳಗಾಗಿ ಬಿದ್ದು ಆತನ ಹೊಟ್ಟೆಯೊಡೆದು ಕರುಳು ಹೊರಗೆ ಸುರಿದವೆಂಬದು. (ಅಪೋಸ್ತಲರ ಕೃತ್ಯಗಳು 1:18) ಈ ಎರಡು ವಿವರಣೆಗಳನ್ನು ಹೊಂದಾಣಿಕೆಮಾಡುವದು ಬಹು ಸರಳವಾದದ್ದು. ಇವೆರಡೂ ಸತ್ಯವೇ. ತಾನು ಉರ್ಲುಹಾಕಿಕೊಳ್ಳಲು ಒಂದು ಕಡಿದಾದ ಸ್ಥಳದ ಮೇಲಿರುವ ಮರದ ಕೊಂಬೆಯನ್ನು ಆತನು ಆಯ್ಕೆಮಾಡಿಕೊಂಡಿದ್ದ ಸಂಭವವಿರುವದು. ಅಲ್ಲಿ ಆತನು ತನ್ನ ಉದ್ದೇಶವನ್ನು ಬಹು ಸುಲಭವಾಗಿ ನೆರವೇರಿಸಿಕೊಳ್ಳಲು ಸಾಧ್ಯವಿತ್ತು. ಆ ಭಾರದಿಂದ ಹಗ್ಗವು ಮುರಿದುಹೋದಲ್ಲಿ ಆತನು ತಲೆಕೆಳಗಾಗಿ ಬೀಳುವಂಥದು ಹೇಗೆ ಸಂಭವಿಸಿತೆಂಬುದನ್ನು ನಾವು ಸುಲಭವಾಗಿ ಕಾಣಬಹುದು.

ಹೇಗೂ ಆತನ ಮರಣದ ವಿಷಯವು ಅಲ್ಪ ಪ್ರಾಮುಖ್ಯತೆಯುಳ್ಳದ್ದು. ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಅದು ಆತನ ಪ್ರಾಣವು ಹೇಗೆ ಸಾವನ್ನಪ್ಪಿತ್ತೆಂಬದು, ಇದರಲ್ಲಿ ಆತನು ತಂದೆಯೊಡನೆ ಮತ್ತು ಕ್ರಿಸ್ತನೊಡನೆ ತನಗೆ ಇದ್ದ ಸಂಬಂಧವನ್ನು ಕಳಕೊಂಡಿದ್ದನಲ್ಲದೆ, ಇದರಿಂದಾಗಿ ಮುಂದಿನ ಜೀವಿತದ ಒಂದು ನಿರೀಕ್ಷೆಯನ್ನು ಕಳಕೊಂಡಿದ್ದನು. ಆದರೂ ಒಡೆಯನು ಅವನ ಬಗ್ಗೆ ಕಟ್ಟಕಡೆಯ ವರೆಗೂ ವಿನಯದಿಂದ ನಡಕೊಂಡಿದ್ದನು; ಹೇಗಂದರೆ ಆತನು

ತನ್ನ ಪಟ್ಟನ್ನು ಸಡಿಲಿಸಿಕೊಂಡು ತನ್ನ ಹೆಚ್ಚೆಯನ್ನು ಹಿಂದೆಗೆದುಕೊಳ್ಳಲು ಅಂತ್ಯದ ವರೆಗೂ ಎಲ್ಲಾ ಅವಕಾಶಗಳನ್ನು ನೀಡಿದ್ದನು.

ದೇವರು ಆರಂಭದಿಂದಲೂ ಹನ್ನೆರಡು ಮಂದಿಯಲ್ಲಿ ಒಬ್ಬನು ಯೇಸುವನ್ನು ಹಿಡುಕೊಡುವನೆಂಬುದನ್ನು ಮುಂದಾಗಿ ತಿಳಿದಿದ್ದನೆಂಬ ಅಂಶ ಅಲ್ಲದೆ ಈ ರಕ್ತಾಪರಾಧದ ಹಣದಿಂದ ಒಂದು ಹೊಲವು ಕೊಂಡುಕೊಳ್ಳಲ್ಪಡುವದೆಂಬ ಅಂಶವು ಮೊದಲೇ ಪ್ರವಾದಿಸಲ್ಪಟ್ಟಂಥಾಗಿದ್ದು, ಯೂದನು ತಾನು ಸ್ವತಃ ಬಿದ್ದುಹೋದದರ ವಿಷಯದಲ್ಲಿ ಆತನ ಸ್ವಂತ ಹೊಣೆಗಾರಿಕೆಯನ್ನು ಇದು ಮಾರ್ಪಡಿಸಿರಲಿಲ್ಲ. ದೇವರು ಮುಂದಾಗಿ ತಿಳಿದಿದ್ದಂಥ ಸಂಗತಿಯು ಯೂದನನ್ನು ಹಾನಿಗೊಳಿಸಿರಲಿಲ್ಲ, ಆದರೆ ಆತನನ್ನು ಹಾನಿಪಡಿಸಿದಂಥದ್ದು ಸ್ವತಃ ಆತನು ಹಿಡಿದ ತಪ್ಪಾದ ಮಾರ್ಗ, ಅಲ್ಲದೆ ಎಲ್ಲರ ವಿಷಯದಲ್ಲಿಯೂ ಇದು ಹೀಗೆಯೇ ಇರುವದು. ದೇವರು ಆದಿಯಿಂದಲೂ ಎಲ್ಲವನ್ನು ಮುಂದಾಗಿ ತಿಳಿದಿರುವಂಥದ್ದು ಏನೇ ಆಗಿದ್ದರೂ ಅದು ನೆರವೇರಲ್ಪಟ್ಟಲ್ಲಿ ನಮ್ಮ ಮೇಲೆ ಅದು ಯಾವ ಪರಿಣಾಮವನ್ನೂ ಬೀರುವದಿಲ್ಲ. ಯಾಕಂದರೆ ನಾವು ಯಾವುದನ್ನು ಮಾಡಿದರೂ ಅದು ನಮ್ಮ ಸ್ವ-ಇಚ್ಛೆಯಿಂದಲೇ ಎಂಬುದನ್ನೂ, ನಾವು ಪಾಪಮಾಡುವದಕ್ಕೆ ನಮ್ಮನ್ನು ಒಪ್ಪಿಸಿಕೊಡುವಂಥದ್ದು ಕೇವಲ ನಮ್ಮಲ್ಲಿರುವ ದುರಾಶೆಯಿಂದಲೇ ಎಂಬುದನ್ನು ಆತನು ತಿಳಿದವನಾಗಿರುವನು.

ಯೇಸುವಿಗೆ ತನ್ನನ್ನು ಹಿಡುಕೊಡುವವರು ಯಾರೆಂಬದು ಮುಂದಾಗಿಯೇ ತಿಳಿದಿತ್ತೆಂಬ ಶಾಸ್ತ್ರವಚನದ ಸಾಕ್ಷಿಯು ಯೇಸುವು ಯೂದನನ್ನು ಆಯ್ಕೆಮಾಡುವ ಸಮಯದಲ್ಲೇ ಆತನು ಇದರ [ಇವನ] ವಿಷಯವಾಗಿ ತಿಳಿದಿದ್ದನೆಂಬದನ್ನು ಸಾಬೀತುಪಡಿಸುವದಿಲ್ಲ. ತನ್ನ ಶಿಷ್ಯರಲ್ಲಿ ಒಬ್ಬನು ತನ್ನನ್ನು ಹಿಡುಕೊಡುವನೆಂದು ಶಾಸ್ತ್ರವಚನವು ತಿಳಿಸಿರುವದಾಗಿ ಆತನಿಗೆ ಗೊತ್ತಿತ್ತು; ಯೂದನು ದುರಾಸೆಗೆ ಒಳಪಟ್ಟು ದಾರಿ ತಪ್ಪಿದವನಾಗಿ ಪಾಪದ ಕಡೆಗೆ ತಿರುಗಿಕೊಂಡಂದಿನಿಂದಲೇ ನಂಬಿಕೆದ್ರೋಹದ ಕೃತ್ಯವನ್ನು ಎಸಗುವವನು ಈತನೊಬ್ಬನೇ ಆಗಿರಬೇಕೆಂಬದು ಯೇಸುವಿಗೆ ತಿಳಿದಿತ್ತು; ಆದರೂ ಈ ಮಾತಿನ ಯಾವ ಅರ್ಥದಲ್ಲಿಯೂ ಯೇಸುವಿನ ನಡವಳಿಕೆಯು ಯೂದನನ್ನು ತಪ್ಪುಮಾಡುವಂತೆ ನಡೆಸಿರಲಿಲ್ಲ, ಆದರೆ ಇದಕ್ಕೆ ಪ್ರತಿಯಾಗಿ ನಿಜವಾಗಿಯೂ ಇದು ಆತನಿಗೆ ಮುನ್ನೆಚ್ಚರಿಕೆ ನೀಡಿತ್ತು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 14 | ಯೆರೂಸಲೇಮ್ | ಪಿಲಾತನ ಎದುರಿನಲ್ಲಿ, ನಂತರ ಹೆರೋದನ ಮುಂದೆ, ಆನಂತರದಲ್ಲಿ ಮತ್ತೆ ಪಿಲಾತನ ಬಳಿಗೆ | 27:2,11–14 | 15:1–5 | 23:1–12 | 18:28–38 |
| | ಯೆರೂಸಲೇಮ್ | ಪಿಲಾತನು ಆತನ ಬಿಡುಗಡೆಗೆ ಪ್ರಯತ್ನಿಸಿದ ನಂತರ ಮರಣಕ್ಕೆ ಒಪ್ಪಿಸಿದುದು. | 27:15–30 | 15:6–19 | 23:13–25 | 18:39–19:16 |

# ಮತ್ತಾಯ 27:2, 11–30

ಬೆಳಗಾಗಲು ಎಲ್ಲಾ ಮಹಾಯಾಜಕರೂ ಜನರ ಹಿರಿಯರೂ ಯೇಸುವನ್ನು ಕೊಲ್ಲಿಸಬೇಕೆಂದು ಆಲೋಚನೆ ಮಾಡಿಕೊಂಡು ಆತನನ್ನು ಕಟ್ಟಿಸಿ ತೆಗೆದುಕೊಂಡು ಹೋಗಿ ದೇಶಾಧಿಪತಿಯಾದ ಪಿಲಾತನಿಗೆ ಒಪ್ಪಿಸಿದರು.

ಯೇಸು ದೇಶಾಧಿಪತಿಯ ಮುಂದೆ ನಿಂತಿರುವಾಗ ದೇಶಾಧಿಪತಿಯು ಆತನನ್ನು–ನೀನು ಯೆಹೂದ್ಯರ ಅರಸನು ಹೌದೋ ಎಂದು ಕೇಳಿದನು. ಯೇಸು–ನೀನೇ ಹೇಳಿದ್ದೀ ಅಂದನು. ಮತ್ತು ಮಹಾಯಾಜಕರು ಹಿರಿಯರು ಆತನ ಮೇಲೆ ದೂರು ಹೇಳುತ್ತಿರುವಾಗ ಆತನು ಏನೂ ಉತ್ತರ ಕೊಡಲಿಲ್ಲ. ಪಿಲಾತನು ಆತನನ್ನು–ಇವರು ನಿನ್ನ ಮೇಲೆ ಎಷ್ಟು ಸಾಕ್ಷಿ ಹೇಳುತ್ತಾರೆ, ನೀನು ಕೇಳುವದಿಲ್ಲವೋ? ಎಂದು ಕೇಳಿದನು. ಆತನು ಅವನಿಗೆ ಒಂದು ಮಾತಿಗಾದರೂ ಉತ್ತರಕೊಡಲಿಲ್ಲ. ಅದನ್ನು ನೋಡಿ ದೇಶಾಧಿಪತಿಯು ಬಹಳ ಆಶ್ಚರ್ಯಪಟ್ಟನು. ಆದರೆ ಆ ಹಬ್ಬದಲ್ಲಿ ಜನರು ಅಪೇಕ್ಷಿಸುವ ಸೆರೆಯವನನ್ನು ಅವರಿಗೆ ಬಿಟ್ಟುಕೊಡುವದು ದೇಶಾಧಿಪತಿಯ ಪದ್ಧತಿಯಾಗಿತ್ತು. ಆ ಕಾಲದಲ್ಲಿ ಬರಬ್ಬನೆಂಬ ಪ್ರಸಿದ್ಧನಾದ ಒಬ್ಬ ಸೆರೆಯವನು ಸಿಕ್ಕಿಬಿದ್ದನು. ಹೀಗಿರಲಾಗಿ ಅವರು ಕೂಡಿಬಂದ ಸಮಯದಲ್ಲಿ ಪಿಲಾತನು ಹೊಟ್ಟೆಕಿಚ್ಚಿನಿಂದ ಆತನನ್ನು ಒಪ್ಪಿಸಿಕೊಟ್ಟಿದ್ದನೆಂದು ತಿಳಿದು–ನಿಮಗೆ ಯಾರನ್ನು ಬಿಟ್ಟುಕೊಡಬೇಕೆನ್ನುತ್ತೀರಿ? ಬರಬ್ಬನನ್ನೋ? ಕ್ರಿಸ್ತನೆನ್ನಿಸಿಕೊಳ್ಳುವ ಯೇಸುವನ್ನೋ? ಎಂದು ಅವರನ್ನು ಕೇಳಿದನು. ಇದಲ್ಲದೆ ಅವನು ನ್ಯಾಯಾಸ್ಥಾನದಲ್ಲಿ ಕೂತಿರುವಾಗ ಅವನ ಹೆಂಡತಿಯು–ನೀನು ಆ ಸತ್ಪುರುಷನ ಗೊಡವೆಗೆ ಹೋಗಬೇಡ; ಅವನ ದೆಸೆಯಿಂದ ಈ ಹೊತ್ತು ಕನಸಿನಲ್ಲಿ ಬಹಳ ತೊಂದರೆಪಟ್ಟೆನು ಎಂದು ಅವನ ಬಳಿಗೆ ಹೇಳಿ ಕಳುಹಿಸಿದಳು. ಅತ್ತಲಾಗಿ ಮಹಾಯಾಜಕರೂ ಹಿರಿಯರೂ ಬರಬ್ಬನನ್ನು ಬಿಟ್ಟುಕೊಡಬೇಕೆಂದು ಬೇಡಿಕೊಳ್ಳುವ ಹಾಗೂ ಯೇಸುವನ್ನು ನಾಶಗೊಳಿಸುವ ಹಾಗೂ ಜನರನ್ನು ಒಡಂಬಡಿಸಿದರು. ಅದಕ್ಕೆ ದೇಶಾಧಿಪತಿಯು ಅವರನ್ನು–ಈ ಇಬ್ಬರಲ್ಲಿ ಯಾರನ್ನು ನಿಮಗೆ ಬಿಟ್ಟುಕೊಡಬೇಕೆನ್ನುತ್ತೀರಿ ಎಂದು ಕೇಳಲು–ಬರಬ್ಬನನ್ನು ಅಂದರು. ಪಿಲಾತನು ಅವರನ್ನು–ಹಾಗಾದರೆ ಕ್ರಿಸ್ತನನ್ನಿಸಿಕೊಳ್ಳುವ ಯೇಸುವನ್ನು ನಾನೇನು ಮಾಡಲಿ

ಎಂದು ಕೇಳಲು ಎಲ್ಲರೂ–ಅವನನ್ನು ಶಿಲುಬೆಗೆ ಹಾಕಿಸು ಅಂದರು. ಅದಕ್ಕವನು–ಯಾಕೆ? ಕೆಟ್ಟದ್ದೇನು ಮಾಡಿದನು? ಅಂದನು. ಆದರೆ ಅವರು–ಅವನನ್ನು ಶಿಲುಬೆಗೆ ಹಾಕಿಸು ಎಂದು ಬಹಳವಾಗಿ ಆರ್ಭಟಿಸಿದರು. ಆಗ ಪಿಲಾತನು ತನ್ನ ಯತ್ನ ನಡೆಯುವದಿಲ್ಲ, ಗದ್ದಲ ಮಾತ್ರ ಹೆಚ್ಚಾಗುತ್ತದೆ ಎಂದು ತಿಳಿದು ನೀರು ತಕ್ಕೊಂಡು ಜನರ ಮುಂದೆ ಕೈತೊಳಕೊಂಡು–ಈ ಪುರುಷನನ್ನು ಕೊಲ್ಲಿಸಿದ್ದಕ್ಕೆ ನಾನು ಸೇರಿದವನಲ್ಲ, ನೀವೇ ನೋಡಿಕೊಳ್ಳಿರಿ ಅನ್ನಲಾಗಿ ಜನರೆಲ್ಲಾ–ಅವನನ್ನು ಕೊಲ್ಲಿಸಿದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ ಅಂದರು. ಆಗ ಬರಬ್ಬನನ್ನು ಅವರಿಗೆ ಬಿಟ್ಟುಕೊಟ್ಟು ಯೇಸುವನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿದನು.

ಆ ಮೇಲೆ ದೇಶಾಧಿಪತಿಯ ಸಿಪಾಯಿಗಳು ಯೇಸುವನ್ನು ಅರಮನೆಯೊಳಕ್ಕೆ ತೆಗೆದುಕೊಂಡು ಹೋಗಿ ಪಟಾಲಮ್ಮನ್ನೆಲ್ಲಾ ಆತನ ಸುತ್ತಲು ಕೂಡಿಸಿಕೊಂಡು ಆತನ ಬಟ್ಟೆಗಳನ್ನು ತೆಗೆದುಹಾಕಿ ಕೆಂಪು ವಲ್ಲಿಯನ್ನು ಹೊದಿಸಿ ಮುಳ್ಳುಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಬಲಗೈಯಲ್ಲಿ ಬೆತ್ತವನ್ನು ಕೊಟ್ಟು ಆತನ ಮುಂದೆ ಮೊಣಕಾಲೂರಿ–ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ ಎಂದು ಆತನನ್ನು ಪರಿಹಾಸ್ಯ ಮಾಡಿದರು. ಮತ್ತು ಆತನ ಮೇಲೆ ಉಗುಳಿ ಆ ಬೆತ್ತವನ್ನು ಕಸಕೊಂಡು ಆತನ ತಲೆಯ ಮೇಲೆ ಹೊಡೆದರು.

## ಮಾರ್ಕ 15:1–19

ಬೆಳಗಾದ ಕೂಡಲೆ ಮಹಾಯಾಜಕರೂ ಹಿರಿಯರೂ ಶಾಸ್ತ್ರಿಗಳೂ ಹಿರಿಸಭೆಯವರೆಲ್ಲರೂ ಒಟ್ಟುಗೂಡಿ ಆಲೋಚನೆ ಮಾಡಿಕೊಂಡು ಯೇಸುವನ್ನು ಕಟ್ಟಿಸಿ ತೆಗೆದುಕೊಂಡು ಹೋಗಿ ಪಿಲಾತನಿಗೆ ಒಪ್ಪಿಸಿದರು. ಪಿಲಾತನು ಆತನನ್ನು–ನೀನು ಯೆಹೂದ್ಯರ ಅರಸನು ಹೌದೋ ಎಂದು ಕೇಳಲು ಆತನು–ನೀನೇ ಹೇಳಿದ್ದೀ ಎಂದು ಉತ್ತರಕೊಟ್ಟನು. ಮಹಾಯಾಜಕರು ಆತನ ಮೇಲೆ ತುಂಬಾ ದೂರು ಹೇಳುತ್ತಿದ್ದರು. ಆಗ ಪಿಲಾತನು ಇನ್ನೊಂದಾವರ್ತಿ ಆತನನ್ನು–ನೀನು ಏನೂ ಉತ್ತರಕೊಡುವ–ದಿಲ್ಲವೇ? ಇವರು ನಿನ್ನ ಮೇಲೆ ಎಷ್ಟು ದೂರು ಹೇಳುತ್ತಾರೆ ನೋಡು ಎಂದು ಕೇಳಿದನು. ಆದರೆ ಯೇಸು ಇನ್ನೇನೂ ಉತ್ತರ ಕೊಡಲಿಲ್ಲ. ಅದನ್ನು ನೋಡಿ ಪಿಲಾತನು ಆಶ್ಚರ್ಯಪಟ್ಟನು.

ಅವನು ಆ ಹಬ್ಬದಲ್ಲಿ ಜನರು ಬೇಡಿದ ಸೆರೆಯವನನ್ನು ಅವರಿಗೆ ಬಿಟ್ಟುಕೊಡುವ ಪದ್ಧತಿಯಿತ್ತು. ಆಗ ಬರಬ್ಬನೆಂಬವ–ನೊಬ್ಬನಿದ್ದನು. ಇವನನ್ನು ದಂಗೆಯಲ್ಲಿ ಕೊಲೆಪಾತಕ ಮಾಡಿದ ದಂಗೆಗಾರರ ಕೂಡ ಕಟ್ಟಿಹಾಕಿದ್ದರು. ಜನರು ಪಿಲಾತನ ಬಳಿಗೆ ಹೋಗಿ–ನೀನು ನಮಗೆ ಮಾಡುತ್ತಾ ಬಂದ ಪ್ರಕಾರ ಮಾಡು ಎಂದು ಬೇಡಿಕೊಳ್ಳುತ್ತಿದ್ದರು. ಮಹಾಯಾಜಕರು ಹೊಟ್ಟೆಕಿಚ್ಚಿನಿಂದ ಯೇಸುವನ್ನು ಒಪ್ಪಿಸಿಕೊಟ್ಟಿದ್ದಾರೆಂದು ಪಿಲಾತನು ಗ್ರಹಿಸಿಕೊಂಡು –ನಾನು ಯೆಹೂದ್ಯರ ಅರಸನನ್ನು ನಿಮಗೆ ಬಿಟ್ಟುಕೊಡ–ಬೇಕೆನ್ನುತ್ತೀರೋ ಎಂದು ಅವರನ್ನು ಕೇಳಿದರು. ಅತ್ತಲಾಗಿ ಮಹಾಯಾಜಕರು–ಬರಬ್ಬನನ್ನೇ ಬಿಟ್ಟುಕೊಡಬೇಕೆಂದು ಬೇಡಿಕೊಳ್ಳಿರಿ ಎಂಬದಾಗಿ ಜನರನ್ನು ಪ್ರೇರೇಪಿಸಿದರು. ಅದಕ್ಕೆ ಪಿಲಾತನು ತಿರಿಗಿ ಅವರನ್ನು–ಹಾಗಾದರೆ ನೀವು ಹೇಳುವ ಯೆಹೂದ್ಯರ ಅರಸನನ್ನು ನಾನೇನು ಮಾಡಲಿ ಎಂದು ಕೇಳಲು ಅವರು–ಅವನನ್ನು ಶಿಲುಬೆಗೆ ಹಾಕಿಸು ಎಂದು ತಿರಿಗಿ ಬೊಬ್ಬೆಹಾಕಿದರು. ಪಿಲಾತನು–ಯಾಕೆ? ಕೆಟ್ಟದ್ದೇನು ಮಾಡಿದನು? ಅಂದನು. ಅದರೆ ಅವರು–ಅವನನ್ನು ಶಿಲುಬೆಗೆ ಹಾಕಿಸು ಎಂದು ಬಹಳವಾಗಿ ಆರ್ಭಟಿಸಿದರು. ಅದಕ್ಕೆ ಪಿಲಾತನು ಜನರ ಮನಸ್ಸನ್ನು ಸಮಾಧಾನಪಡಿಸಬೇಕೆಂದು ಬರಬ್ಬನನ್ನು ಅವರಿಗೆ ಬಿಟ್ಟುಕೊಟ್ಟು ಯೇಸುವನ್ನು ಕೊರಡೆಗಳಿಂದ ಹೊಡಿಸಿ ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿದನು.

ಸಿಪಾಯಿಗಳು ಆತನನ್ನು ಅಧಿಪತಿಯ ಅರಮನೆಗೆ ಸೇರಿದ ಅಂಗಳದೊಳಗೆ ಸಾಗಿಸಿ ಕೊಂಡುಹೋಗಿ ಪಟಾಲಮ್ಮನ್ನೆಲ್ಲಾ ಒಟ್ಟಿಗೆ ಕರೆದು ಆತನಿಗೆ ಕೆಂಪು ಒಲ್ಲಿಯನ್ನು ಹೊದಿಸಿ ಮುಳ್ಳಿನ ಕಿರೀಟವನ್ನು ಹೆಣೆದು ಆತನಿಗಿಟ್ಟು–ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ ಎಂದು ಆತನಿಗೆ ವಂದನೆಮಾಡಿ ಬೆತ್ತದಿಂದ ಆತನ ತಲೆಯ ಮೇಲೆ ಹೊಡೆದು ಆತನ ಮೇಲೆ ಉಗುಳಿ ಆತನ ಮುಂದೆ ಮೊಣಕಾಲೂರಿ ಅಡ್ಡಬಿದ್ದರು.

## ಲೂಕ 23:1–25

ಅಲ್ಲಿ ಕೂಡಿದ್ದವರೆಲ್ಲರು ಎದ್ದು ಆತನನ್ನು ಪಿಲಾತನ ಬಳಿಗೆ ತೆಗೆದುಕೊಂಡು ಹೋಗಿ–ಇವನು ತಾನೇ ಕ್ರಿಸ್ತನೆಂಬ ಒಬ್ಬ ಅರಸನಾಗಿದ್ದೇನೆಂದು ಹೇಳುತ್ತಾ ಕೈಸರನಿಗೆ ತೆರಿಗೆಕೊಡ–ಬಾರದೆಂದು ಬೋಧಿಸುತ್ತಾ ನಮ್ಮ ದೇಶದವರ ಮನಸ್ಸು ಕೆಡಿಸುವದನ್ನು ನಾವು ಕಂಡೆವು ಎಂಬದಾಗಿ ಆತನ ಮೇಲೆ ದೂರು ಹೇಳುವದಕ್ಕೆ ತೊಡಗಿದರು. ಪಿಲಾತನು ಆತನನ್ನು–ನೀನು ಯೆಹೂದ್ಯರ ಅರಸನು ಹೌದೋ ಎಂದು ಹೇಳಲು ಆತನು–ನೀನೇ ಹೇಳಿದ್ದೀ ಎಂದು ಉತ್ತರ ಕೊಟ್ಟನು. ಪಿಲಾತನು ಮಹಾಯಾಜಕರಿಗೂ ಜನರ ಗುಂಪಿಗೂ–ಈ ಮನುಷ್ಯನಲ್ಲಿ ನನಗೆ ಯಾವ ಅಪರಾಧವೂ ಕಾಣಿಸುವದಿಲ್ಲವೆಂದು ಹೇಳಿದನು. ಅದಕ್ಕೆ ಅವರು–ಗಲಿಲಾಯದಲ್ಲಿ ಪ್ರಾರಂಭಮಾಡಿ ಇಲ್ಲಿಯವರೆಗೂ ಯೂದಾಯ ಸೀಮೆಯಲ್ಲೆಲ್ಲಾ ಇವನು ಬೋಧನೆ ಮಾಡುತ್ತಾ ಜನರ ಮನಸ್ಸನ್ನು ಕದಲಿಸುತ್ತಾನೆ ಎಂದು ಇನ್ನೂ ಒತ್ತಿ ಹೇಳಿದರು. ಇದನ್ನು ಪಿಲಾತನು ಕೇಳಿ–ಈ ಮನುಷ್ಯನು ಗಲಿಲಾಯದವನೋ ಎಂದು ವಿಚಾರಿಸಿ ಇವನು ಹೆರೋದನ ಅಧಿಕಾರಕ್ಕೆ ಒಳಪಟ್ಟವನು ಎಂದು ತಿಳುಕೊಂಡು ಆತನನ್ನು ಹೆರೋದನ ಬಳಿಗೆ ಕಳುಹಿಸಿ –ದನು. ಹೆರೋದನು ಆ ದಿವಸಗಳಲ್ಲಿ ಯೆರೂಸಲೇಮಿನಲ್ಲೇ ಇದ್ದನು.

ಹೆರೋದನು ಯೇಸುವನ್ನು ನೋಡಿದಾಗ ಬಹಳ ಸಂತೋಷಪಟ್ಟನು. ಯಾಕಂದರೆ ಆತನ ವಿಷಯವಾಗಿ ಅನೇಕ ಸಂಗತಿಗಳನ್ನು ಕೇಳಿದ್ದರಿಂದ ಆತನನ್ನು ಕಾಣಬೇಕೆಂದು ಬಹು ಕಾಲದಿಂದ ಅಪೇಕ್ಷಿಸಿದ್ದನು. ಆತನಿಂದ ಯಾವದಾದರೂ ಒಂದು ಸೂಚಕಕಾರ್ಯವಾಗುವದನ್ನು ನೋಡಬೇಕೆಂದು ನಿರೀಕ್ಷಿಸಿದನು. ಆದರೆ ಅವನು ಅನೇಕ ಮಾತುಗಳಿಂದ ಆತನನ್ನು

ಪ್ರಶ್ನೆಮಾಡಿದಾಗ್ಯೂ ಆತನು ಅವನಿಗೆ ಏನೂ ಉತ್ತರಕೊಡಲಿಲ್ಲ. ಮಹಾಯಾಜಕರೂ ಶಾಸ್ತ್ರಿಗಳೂ ನಿಂತುಕೊಂಡು ಆತನ ಮೇಲೆ ಬಹು ಬಲವಾಗಿ ದೂರು ಹೇಳುತ್ತಿದ್ದರು. ಕಡೆಗೆ ಹೆರೋದನು ತನ್ನ ಸಿಪಾಯಿಗಳನ್ನು ಕೂಡಿಕೊಂಡು ಆತನನ್ನು ತಿರಸ್ಕರಿಸಿ ಹಾಸ್ಯಮಾಡಿ ಶೋಭಾಯಮಾನವಾದ ಉಡುಪನ್ನು ಹಾಕಿಸಿ ಪಿಲಾತನ ಬಳಿಗೆ ತಿರಿಗಿ ಕಳುಹಿಸಿಕೊಟ್ಟನು. ಅದೇ ದಿನದಲ್ಲಿ ಹೆರೋದನೂ ಪಿಲಾತನೂ ಒಬ್ಬರಿಗೊಬ್ಬರು ಸ್ನೇಹಿತರಾದರು; ಅದಕ್ಕಿಂತ ಮೊದಲು ವೈರಿಗಳಾಗಿದ್ದರು.

ತರುವಾಯ ಪಿಲಾತನು ಮಹಾಯಾಜಕರನ್ನೂ ಅಧಿಕಾರಿಗಳನ್ನೂ ಪ್ರಜೆಗಳನ್ನೂ ಒಟ್ಟಾಗಿ ಕರೆಸಿ ಅವರಿಗೆ–ಈ ಮನುಷ್ಯನು ಪ್ರಜೆಗಳನ್ನು ತಿರಿಗಿ ಬೀಳುವಂತೆ ಮಾಡುವವನು ಎಂದು ಇವನನ್ನು ನನ್ನ ಬಳಿಗೆ ತಂದಿರಲ್ಲಾ; ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆಮಾಡಿದರೂ ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ. ಹೆರೋದನಿಗಾದರೂ ಕಾಣಲಿಲ್ಲ; ಅವನು ಇವನನ್ನು ಹಿಂತಿರುಗಿ ನಮ್ಮ ಬಳಿಗೆ ಕಳುಹಿಸಿದನಲ್ಲಾ. ಇವನು ಮರಣ ದಂಡನೆಗೆ ಯೋಗ್ಯವಾದುದ್ದೇನೂ ಮಾಡಿದವನಲ್ಲವೆಂದಾಯಿತು. ಆದುದರಿಂದ ನಾನು ಇವನನ್ನು ಹೊಡೆಸಿ ಬಿಟ್ಟುಬಿಡುತ್ತೇನೆ ಎಂದು ಹೇಳಿದನು. ಆದರೆ ಅವರು–ಅವನನ್ನು ಕೊಲ್ಲಿಸು, ನಮಗೆ ಬರಬ್ಬನನ್ನು ಬಿಟ್ಟುಕೊಡು ಎಂದು ಒಟ್ಟಾಗಿ ಕೂಗಿದರು. ಈ ಬರಬ್ಬನನ್ನು ಆ ಪಟ್ಟಣದಲ್ಲಿ ನಡೆದ ಒಂದಾನೊಂದು ದಂಗೆಯ ನಿಮಿತ್ತವಾಗಿಯೂ ಕೊಲೆಯ ನಿಮಿತ್ತವಾಗಿಯೂ ಸೆರೆಮನೆಯಲ್ಲಿ ಹಾಕಿದ್ದರು. ಪಿಲಾತನು ಯೇಸುವನ್ನು ಬಿಡಿಸಬೇಕೆಂದು ಮನಸ್ಸುಳ್ಳವನಾಗಿದ್ದು ತಿರಿಗಿ ಅವರ ಸಂಗಡ ಮಾತಾಡಿದನು. ಆದರೆ ಅವರು–ಅವನನ್ನು ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು ಎಂದು ಕೂಗುತ್ತಿದ್ದರು. ಅವನು ಮೂರನೆಯ ಸಾರಿ–ಯಾಕೆ? ಕೆಟ್ಟದ್ದೇನು ಮಾಡಿದನು? ನಾನು ಇವನಲ್ಲಿ ಮರಣ ದಂಡನೆಗೆ ತಕ್ಕ ಅಪರಾಧವೇನೂ ಕಾಣಲಿಲ್ಲ; ಆದುದರಿಂದ ಇವನನ್ನು ಹೊಡೆಸಿ ಬಿಟ್ಟುಬಿಡುತ್ತೇನೆ ಎಂದು ಹೇಳಿದನು. ಆದರೆ ಅವರು ದೊಡ್ಡ ಕೂಗಾಟಮಾಡುತ್ತಾ–ಅವನನ್ನು ಶಿಲುಬೆಗೆ ಹಾಕಿಸಬೇಕೆಂದು ಬಲವಂತ ಮಾಡಿದರು; ಅವರ ಕೂಗಾಟವು ಗೆದ್ದಿತು. ಪಿಲಾತನು–ನೀವು ಕೇಳಿಕೊಂಡಂತೆ ಆಗಲಿ ಎಂದು ನಿರ್ಣಯಿಸಿ ದಂಗೆ ಕೊಲೆಗಳ ನಿಮಿತ್ತವಾಗಿ ಸೆರೆಮನೆಯಲ್ಲಿ ಬಿದ್ದ ಆ ಮನುಷ್ಯನನ್ನು ಅವರು ಕೇಳಿಕೊಳ್ಳುತ್ತಿದ್ದ ಪ್ರಕಾರ ಬಿಟ್ಟುಕೊಟ್ಟು ಯೇಸುವನ್ನು ಅವರ ಚಿತ್ತಾನುಸಾರ ಒಪ್ಪಿಸಿದನು.

## ಯೋಹಾನ 18:28–40

ಆ ಮೇಲೆ ಅವರು ಯೇಸುವನ್ನು ಕಾಯಫನ ಬಳಿಯಿಂದ ಅರಮನೆಗೆ ಕರಕೊಂಡು ಹೋದರು. ಆಗ ಮುಂಜಾನೆ ಆಗಿತ್ತು. ಅವರು ತಮಗೆ ಮೈಲಿಗೆ ತಟ್ಟಿ ಪಸ್ಕದ ಊಟವನ್ನು ಮಾಡುವದಕ್ಕೆ ಅಡ್ಡಿಯಾದೀತೆಂದು ಅರಮನೆಯೊಳಕ್ಕೆ ಹೋಗಲಿಲ್ಲ. ಹೀಗಿರಲಾಗಿ ಪಿಲಾತನು ಹೊರಕ್ಕೆ ಅವರ ಬಳಿಗೆ ಬಂದು–ಈ ಮನುಷ್ಯನ ಮೇಲೆ ಏನು ದೂರು ತರುತ್ತೀರಿ ಎಂದು ಕೇಳಿದನು. ಅವರು ಅವನಿಗೆ–ಇವನು ದುಷ್ಕರ್ಮಿಯಲ್ಲದಿದ್ದರೆ ನಾವು ಇವನನ್ನು ನಿನಗೆ ಒಪ್ಪಿಸಿಕೊಡುತ್ತಿದ್ದಿಲ್ಲವೆಂದು ಉತ್ತರ ಕೊಟ್ಟರು. ಆಗ ಪಿಲಾತನು ಅವರಿಗೆ–ನೀವೇ ಅವನನ್ನು ತಕ್ಕೊಂಡುಹೋಗಿ ನಿಮ್ಮ ಧರ್ಮಶಾಸ್ತ್ರದ ಪ್ರಕಾರ ಅವನಿಗೆ ತೀರ್ಪುಮಾಡಿರಿ ಎಂದು ಹೇಳೀದನು. ಅದಕ್ಕೆ ಯೆಹೂದ್ಯರು–ಮರಣದಂಡನೆಯನ್ನು ವಿಧಿಸುವ ಅಧಿಕಾರವು ನಮಗಿಲ್ಲ ಎಂದರು. ಇದರಿಂದ ಯೇಸು ತಾನು ಎಂಥಾ ಸಾವು ಸಾಯುವನೆಂದು ಸೂಚಿಸಿ ಹೇಳಿದ ಮಾತು ನೆರವೇರಿತು.

ಆಗ ಪಿಲಾತನು ತಿರಿಗಿ ಅರಮನೆಯೊಳಕ್ಕೆ ಹೋಗಿ ಯೇಸುವನ್ನು ಕರೆದು ಅತನನ್ನು–ನೀನು ಯೆಹೂದ್ಯರ ಅರಸನು ಹೌದೋ ಎಂದು ಕೇಳಿದನು. ಯೇಸು–ನಿನ್ನಷ್ಟಕ್ಕೆ ನೀನೇ ಇದನ್ನು ಹೇಳುತ್ತೀಯೊ? ಮತ್ತೊಬ್ಬರು ನನ್ನ ವಿಷಯದಲ್ಲಿ ನಿನಗೆ ಹೇಳಿದ್ದಾರೋ ಎಂದು ಕೇಳಲು ಪಿಲಾತನು–ನಾನೇನು ಯೆಹೂದ್ಯನೇ? ನಿನ್ನ ಸ್ವಂತ ಜನವೂ ಮಹಾಯಾಜಕರೂ ನಿನ್ನನ್ನು ನನಗೆ ಒಪ್ಪಿಸಿದ್ದಾರೆ; ನೀನು ಏನು ಮಾಡಿದ್ದೀ ಎಂದು ಕೇಳಿದ್ದಕ್ಕೆ ಯೇಸು–ನನ್ನ ರಾಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೊಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಕಾದಾಡುತ್ತಿದ್ದರು; ಆದರೆ ನನ್ನ ರಾಜ್ಯವು ಇಲ್ಲಿಯದಲ್ಲವೆಂದು ಉತ್ತರಕೊಟ್ಟನು. ಅದಕ್ಕೆ ಪಿಲಾತನು–ಹಾಗಾದರೆ ನೀನು ಯೆಹೂದ್ಯರ ಅರಸನು ಹೌದಲ್ಲವೇ ಅಂದನು. ಅದಕ್ಕೆ ಯೇಸು–ನನ್ನನ್ನು ಅರಸನೆಂದು ನೀನೇ ಹೇಳಿದ್ದೀ. ನಾನು ಸತ್ಯದ ವಿಷಯದಲ್ಲಿ ಸಾಕ್ಷಿಹೇಳುವದಕ್ಕೋಸ್ಕರ ಹುಟ್ಟಿದವನು, ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ. ಸತ್ಯಪರರೆಲ್ಲರೂ ನನ್ನ ಮಾತಿಗೆ ಕಿವಿಕೊಡುತ್ತಾರೆ ಎಂದು ಉತ್ತರ ಕೊಟ್ಟನು ಪಿಲಾತನು ಸತ್ಯವೆಂದರೇನು ಅಂದನು.

ಇದನ್ನು ಹೇಳಿ ಪಿಲಾತನು ತಿರಿಗಿ ಯೆಹೂದ್ಯರ ಬಳಿಗೆ ಹೊರಕ್ಕೆ ಬಂದು–ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸುವದಿಲ್ಲ. ಆದರೆ ಪಸ್ಕಹಬ್ಬದಲ್ಲಿ ನಾನು ಒಬ್ಬನನ್ನು ನಿಮಗೆ ಬಿಟ್ಟುಕೊಡುವ ಪದ್ಧತಿ ಉಂಟಷ್ಟೇ; ನಾನು ಯೆಹೂದ್ಯರ ಅರಸನನ್ನು ಬಿಟ್ಟುಕೊಡುವದು ನಿಮಗೆ ಇಷ್ಟವೋ ಎಂದು ಅವರನ್ನು ಕೇಳಿದನು. ಅದಕ್ಕೆ ಅವರು–ಇವನು ಬೇಡ, ಬರಬ್ಬನನ್ನು ಬಿಟ್ಟುಕೊಡಬೇಕು ಎಂದು ತಿರಿಗಿ ಕೂಗಿ ಹೇಳಿದರು. ಈ ಬರಬ್ಬನು ಒಬ್ಬ ಕಳ್ಳನಾಗಿದ್ದನು.

## ಯೋಹಾನ 19:1–16

ಆ ಮೇಲೆ ಪಿಲಾತನು ಯೇಸುವನ್ನು ಕೊರಡೆಗಳಿಂದ ಹೊಡಿಸಿದನು. ಮತ್ತು ಸಿಪಾಯಿಗಳು ಮುಳ್ಳುಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿ ಆತನ ಬಳಿಗೆ ಬಂದು–ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ! ಎಂದು ಹೇಳಿ ಆತನ ಕೆನ್ನೆಗೆ ಏಟು ಹಾಕಿದರು. ತರುವಾಯ ಪಿಲಾತನು ತಿರಿಗಿ ಹೊರಗೆ ಬಂದು ಯೆಹೂದ್ಯರಿಗೆ–ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸಲಿಲ್ಲವೆಂಬದು ನಿಮಗೆ ತಿಳಿಯುವಂತೆ ಅವನನ್ನು ನಿಮ್ಮ ಬಳಿಗೆ ಹೊರಗೆ ತರುತ್ತೇನೆ, ನೋಡಿರಿ ಎಂದು ಹೇಳಿದನು. ಆಗ

ಯೇಸು ಮುಳ್ಳಿನ ಕಿರೀಟವನ್ನೂ ಕೆಂಪು ಒಲ್ಲಿಯನ್ನು ಧರಿಸಿದವನಾಗಿ ಹೊರಕ್ಕೆ ಬಂದನು. ಪಿಲಾತನು ಅವರಿಗೆ–ಇಗೋ, ಈ ಮನುಷ್ಯನು! ಅಂದನು. ಮಹಾಯಾಜಕರೂ ಓಲೆಕಾರರೂ ಆತನನ್ನು ಕಾಣುತ್ತಲೇ–ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು ಎಂದು ಕೂಗಿದರು. ಪಿಲಾತನು ಅವರಿಗೆ–ಬೇಕಾದರೆ ನೀವೇ ಅವನನ್ನು ತಕ್ಕೊಂಡು ಹೋಗಿ ಶಿಲುಬೆಗೆ ಹಾಕಿಸಿರಿ; ನನಗೆ ಅವನಲ್ಲಿ ಅಪರಾಧವು ಕಾಣಿಸಲಿಲ್ಲವೆಂದು ಹೇಳಿದನು. ಯೆಹೂದ್ಯರು ಅವನಿಗೆ–ನಮಗೆ ನೇಮ ಉಂಟು, ಆ ನೇಮದ ಪ್ರಕಾರ ಇವನು ಸಾಯತಕ್ಕವನು; ಯಾಕಂದರೆ ಅವನು ತನ್ನನ್ನು ದೇವರ ಮಗನನ್ನಾಗಿ ಮಾಡಿಕೊಂಡಿದ್ದಾನೆ ಎಂದು ಉತ್ತರಕೊಟ್ಟರು. ಪಿಲಾತನು ಈ ಮಾತನ್ನು ಕೇಳಿ ಮತ್ತಷ್ಟು ಹೆದರಿಕೊಂಡು ತಿರಿಗಿ ಅರಮನೆಯೊಳಕ್ಕೆ ಹೋಗಿ–ನೀನು ಎಲ್ಲಿಂದ ಬಂದವನು ಎಂದು ಯೇಸುವನ್ನು ಕೇಳಿದನು. ಆದರೆ ಯೇಸು ಅವನಿಗೆ ಉತ್ತರಕೊಡಲಿಲ್ಲ. ಪಿಲಾತನು–ನನ್ನ ಸಂಗಡವೂ ನೀನು ಮಾತಾಡುವದಿಲ್ಲವೋ? ನಿನ್ನನ್ನು ಬಿಡಿಸುವ ಅಧಿಕಾರವೂ ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವು ನನಗೆ ಉಂಟೆಂಬದು ನಿನಗೆ ಗೊತ್ತಿಲ್ಲವೋ ಎಂದು ಆತನನ್ನು ಕೇಳಿದನು. ಅದಕ್ಕೆ ಯೆಸು–ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ. ಆದಕಾರಣ ನನ್ನನ್ನು ನಿನಗೆ ಒಪ್ಪಿಸಿದವನಿಗೆ ಹೆಚ್ಚಿನ ಪಾಪ ಉಂಟು ಅಂದನು.

ಈ ಮಾತಿನ ದೆಸೆಯಿಂದ ಪಿಲಾತನು ಆತನನ್ನು ಬಿಡಿಸುವದಕ್ಕೆ ಪೇಚಾಡಿದನು. ಆದರೆ ಯೆಹೂದ್ಯರು–ನೀನು ಇವನನ್ನು ಬಿಡಿಸಿದರೆ ನೀನು ಕೈಸರನಿಗೆ ಮಿತ್ರನಲ್ಲ; ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವವನು ಕೈಸರನಿಗೆ ವಿರೋಧಿ ಎಂದು ಕೂಗಿ ಹೇಳಿದರು. ಈ ಮಾತುಗಳನ್ನು ಪಿಲಾತನು ಕೇಳಿ ಯೇಸುವನ್ನು ಹೊರಕ್ಕೆ ಕರೆತರಿಸಿ ಇಬ್ರಿಯ ಮಾತಿನಲ್ಲಿ ಗಬ್ಬಥಾಯೆನಿಸಿಕೊಳ್ಳುವ ಕಲ್ಲುಹಾಸಿದ ಕಟ್ಟೆ ಎಂಬ ಹೆಸರುಳ್ಳ ಸ್ಥಳಕ್ಕೆ ಹೋಗಿ ನ್ಯಾಯಪೀಠದ ಮೇಲೆ ಕೂತುಕೊಂಡನು. ಪಸ್ಕಹಬ್ಬದ ಸೌರಣೆಯ ದಿವಸದಲ್ಲಿ ಬೆಳಿಗ್ಗೆ ಹೆಚ್ಚುಕಡಿಮೆ ಆರು ಗಂಟೆಯಾಗಿತ್ತು. ಅವನು ಯೆಹೂದ್ಯರಿಗೆ–ಇಗೋ, ನಿಮ್ಮ ಅರಸನು! ಎಂದು ಹೇಳಿದನು. ಅದಕ್ಕೆ ಅವರು–ಅವನನ್ನು ಕೊಲ್ಲಿಸು, ಕೊಲ್ಲಿಸು, ಶಿಲುಬೆಗೆ ಹಾಕಿಸು ಎಂದು ಕೂಗಿದರು. ಪಿಲಾತನು–ನಿಮ್ಮ ಅರಸನನ್ನು ಶಿಲುಬೆಗೆ ಹಾಕಿಸಲೋ? ಅಂದದ್ದಕ್ಕೆ ಮಹಾಯಾಜಕರು–ಕೈಸರನೇ ಹೊರತು ನಮಗೆ ಬೇರೆ ಅರಸನಿಲ್ಲ ಎಂದು ಉತ್ತರಕೊಟ್ಟರು. ಆಗ ಅವನು ಆತನನ್ನು ಶಿಲುಬೆಗೆ ಹಾಕಿಸುವದಕ್ಕೆ ಅವರ ವಶಕ್ಕೆ ಕೊಟ್ಟನು.

*****

# ಪಿಲಾತನ ಮುಂದೆ "ಒಳ್ಳೆಯ ಅರಿಕೆ"

**ರೀಪ್ರಿಂಟ್ಸ್ ಪುಟ 2470**

## ಯೋಹಾನ 18:28–40; 1 ತಿಮೋಥೆ 6:13

**"ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸಲಿಲ್ಲ" – ಯೋಹಾನ 19:4**

ಯೂದಾಯದ ದೇಶಾಧಿಪತಿಯಾದ ಪಿಲಾತನು ಜೀವವನ್ನು ಉಳಿಸುವ ಮತ್ತು ತೆಗೆಸುವ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದನು. ಯೆಹೂದ್ಯರ ಸನ್‌ಹೆದ್ರೀನ್ ಸಭೆಗೆ ಧಾರ್ಮಿಕವಾಗಿ ಅಂದರೆ ಯೆಹೂದ್ಯರ ಸಂಪ್ರದಾಯ ನಿಯಮಗಳ ಪ್ರಕಾರ ದೇಶದ ಆಡಳಿತ ಮಾಡುವದಕ್ಕೆ ಅನುಮತಿ ನೀಡಲಾಗಿತ್ತು; ಆದರೆ ಅದಕ್ಕೆ ಸಾರ್ವಜನಿಕವಾಗಿ ಮರಣದಂಡನೆ ವಿಧಿಸುವ ಅಧಿಕಾರವಿರಲಿಲ್ಲ. ಸ್ತೆಫನನ ವಿಷಯದಲ್ಲಿದ್ದಂತೆ ದೇವದೂಷಣೆಗೆ [ಯೇಸುವಿಗೆ ದಂಡನೆ ವಿಧಿಸಲು ಮಾಡಿದ ದೋಷಾರೋಪಕ್ಕೆ] ಕಲ್ಲೆಸೆದು ಕೊಲ್ಲುವ ಅಧಿಕಾರವು ಅವರಿಗೆ ಇದ್ದುದು ಸ್ಪಷ್ಟವಾಗಿತ್ತು (ಅಪೋಸ್ತಲರ ಕೃತ್ಯಗಳು 7:28); ಮತ್ತು ಹೀಗಾಗಿ ಯೇಸುವಿನ ಮೇಲೆ ಅವರಿಗೆ ಇಂಥಾ ಒಂದು ಅಧಿಕಾರವಿದ್ದುದಾಗಿ ನಾವು ಭಾವಿಸಿಕೊಳ್ಳಬಹುದು, ಆದರೆ ಜನರು ಈ ಅನ್ಯಾಯದ ಬಗ್ಗೆ ಸಿಟ್ಟಿಗೇಳುವರೆಂಬ ಕಾರಣದಿಂದ ಅವರು ಈ ಅಧಿಕಾರವನ್ನು ಪ್ರಯೋಗಿಸುವಲ್ಲಿ ವಿಫಲರಾಗಿದ್ದರು. ಇದಕ್ಕಿಂತಲೂ ಹೆಚ್ಚಾಗಿ ಆತನ [ಯೇಸುವಿನ] ಬೋಧನೆಗಳು ಆಗಲೇ ವ್ಯಾಪಕವಾಗಿ ಪ್ರಭಾವ ಬೀರಿರುವದನ್ನು ಅವರು ಮನಗೊಂಡಿದ್ದು ಆತನ ಮರಣ ದಂಡನೆಯನ್ನು ಸಾರ್ವಜನಿಕ –ವಾಗಿ ಎಷ್ಟು ಅಪಮಾನಕರವಾಗಿ ಕಾರ್ಯಗತಗೊಳಿಸಲು ಸಾಧ್ಯವೋ ಅಷ್ಟು ಅಪಮಾನಕರವಾಗಿ ಅಂದರೆ ಯೇಸುವು ಸಹಿತವಾಗಿ ಆತನ ಹಿಂಬಾಲಕರೂ ಅಪಮಾನಹೊಂದಿ ಕುಗ್ಗಿಹೋಗುವಷ್ಟರ ಮಟ್ಟಿಗೆ ಅದನ್ನು ಜಾರಿಗೊಳಿಸಲು ಅವರು ಬಯಸಿರುವ ಸಾಧ್ಯತೆಯು ಬಹುವಾಗಿತ್ತು. ಒಬ್ಬ ಅಪರಾಧಿಯಾಗಿ ದಂಡನೆಯುನ್ನು ಅಂದರೆ ದೇಶದ [ರೋಮಾಯುರ] ಕಾನೂನುಬದ್ಧ ನ್ಯಾಯಾಧಿಪತಿಯ ಮೂಲಕ ಹಾಗು ಧಾರ್ಮಿಕ–ವಿಧಿಯ ಪ್ರಕಾರವಾದ ನ್ಯಾಯಾಧಿಪತಿಯ ಮೂಲಕವಾಗಿ ಸಾರ್ವಜನಿಕವಾಗಿ ಮರಣ ದಂಡನೆ ಹೊಂದಿದವನ ಶಿಷ್ಯರೆಂದು ಅರಿಕೆಮಾಡಲು ಯಾರೂ ಇಷ್ಟಪಡುವದಿಲ್ಲವೆಂಬ ಕಾರಣದಿಂದಾಗಿತ್ತು. ಹೀಗೆ ಅವರು ನೂತನ ಪದ್ಧತಿಯ ಧಾರ್ಮಿಕ ಬೋಧನೆಯನ್ನು ಮೊಗ್ಗಿನಲ್ಲೇ ಚಿವುಟಿಹಾಕಲು ಬಯಸಿದ್ದರು; [ಯಾಕಂದರೆ] ಅದನ್ನು ಹೀಗೆಯೇ ಮುಂದುವರೆಯಲು ಬಿಟ್ಟಲ್ಲಿ ಜನರ ಮೇಲೆ ಅವರಿಗಿರುವ ಪ್ರಭಾವವನ್ನು ಅದು ಸಂಪೂರ್ಣವಾಗಿ ಬುಡಮೇಲು ಮಾಡುವದೆಂಬದು ಸ್ಪಷ್ಟವಾಗಿತ್ತು. ಹೀಗೆ ಈ ದುಷ್ಕರ್ಮಿಗಳು ವಿವೇಚನಾರಹಿತರಾಗಿ ದೇವರು ಮುಂದಾಗಿ ಏರ್ಪಡಿಸಿದ್ದನ್ನೇ ಕಾರ್ಯಗತಗೊಳಿಸುವವರಾಗಿದ್ದರು. ಅದನ್ನು ಹೀಗೆ ಮಾಡಲು ತಮ್ಮ ಸ್ವಂತ ದುರಿಚ್ಛೆಯನ್ನೇ ಪೂರ್ಣವಾಗಿ ಪ್ರಯೋಗಿಸಿದ್ದರು.

ಈಗಾಗಲೇ ಗಮನಿಸಿರುವಂತೆ, ಯೆಹೂದ್ಯರ ಮೂಲಕ–ವಾಗಿ ನಮ್ಮ ಕರ್ತನಿಗೆ ವಿಧ್ಯುಕ್ತವಾಗಿ ಮರಣ ದಂಡನೆಯ ತೀರ್ಪನ್ನು ಮುಂಜಾನೆಯಲ್ಲಿ ಅಂದರೆ ಐದರಿಂದ ಆರನೆ ಗಂಟೆಯ ಸಮಯದಲ್ಲಿ ನೀಡಲಾಗಿತ್ತು. ಮತ್ತು ಕೂಡಲೇ ಆತನನ್ನು ರೋಮಾಯರ ಸಿಪಾಯಿಗಳ ಮೂಲಕವಾಗಿ ಮರಣದಂಡನೆಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಕಾರ್ಯಗತ–ಗೊಳಿಸುವ ಉದ್ದೇಶದಿಂದ ಪಿಲಾತನ ನ್ಯಾಯಪೀಠಕ್ಕೆ ಅವಸರದಿಂದ ಸಾಗಿಸಿಕೊಂಡು ಹೋಗಿದ್ದರು; ಹೀಗಾಗಿ ಅವರು ಈತನ ಸಂಗತಿಯು ಜನರ ಗುಂಪು ಮಧ್ಯಪ್ರವೇಶಿಸುವ ಅಧಿಕಾರದಿಂದ ಹೊರತಾಗಿರುವದೆಂದು ಗ್ರಹಿಸಿಕೊಳ್ಳ–ಬಹುದೆಂಬುದಾಗಿತ್ತು. ಪಿಲಾತನು ಮರಣದಂಡನೆಯನ್ನು ಕಾರ್ಯಗತಗೊಳಿಸುವ ಆದೇಶವನ್ನು ನೀಡಲು ಹಿಂಜರಿಯುವಕ್ಕೆ ಯಾವ ನಿರ್ಧಿಷ್ಟ ಕಾರಣವೂ ಇರುವದಿಲ್ಲವೆಂಬುದನ್ನು ಯೆಹೂದ್ಯರ ಮುಖಂಡರು ಭಾವಿಸಿದ್ದರು. ಪಿಲಾತನು ಕ್ರೌರ್ಯ ಪ್ರದರ್ಶಿಸುವ ವಿಷಯದಲ್ಲಿ ಪ್ರಖ್ಯಾತಿಯನ್ನು ಹೊಂದಿದವ–ನಾಗಿದ್ದಂತೆ ತೋರುತ್ತದೆ. ಫೀಲೋ ಎಂಬವನು [ಚರಿತ್ರಕಾರನು] ಪಿಲಾತನ ಬಗ್ಗೆ ಹೀಗೆ ಹೇಳಿರುವನು: “ಆತನ ಭ್ರಷ್ಟಾಚಾರ, ಆತನ ಸೊಕ್ಕಿನ ಕಾರ್ಯ, ಜನರನ್ನು ಅವಹೇಳನ ಮಾಡುವ ಆತನ ಪ್ರವೃತ್ತಿ, ಆತನ ಕ್ರೌರ್ಯ, ನ್ಯಾರ್ಯತೀರ್ಪು ನೀಡದೆಯೇ, ಮರಣದಂಡನೆಯನ್ನು ವಿಧಿಸದೆಯೇ ಜನರನ್ನು ಸತತವಾಗಿ ಕೊಲೆಗೈಯುವಿಕೆ, ಎಲ್ಲಾ ಕಾಲದಲ್ಲಿಯೂ ಎಂದೂ ತೀರದ ಆತನ ಅತಿ ಕ್ರೂರವಾದ ಅಮಾನುಷ್ಯತನ, ಅಂದರೆ ಅತಿ ಕ್ರೂರ ಪ್ರವೃತ್ತಿಯುಳ್ಳ ಮನುಷ್ಯ, ನಿಷ್ಕರುಣೆ ಸಹಿತವಾಗಿ ಆತನು ಅತಿ ಹಠಮಾರೀತನದವನಾಗಿದ್ದನು.” ಯೆಹೂದ್ಯರ ಅಧಿಕಾರಿಗಳಿಗೆ ಪಿಲಾತನಿಂದ ದಯೆಗಾಗಿ ಬಿನ್ನವಿಸಲು ಪದೇ ಪದೇ ಆತನ ಬಳಿಗೆ ಬರುತ್ತಿರುವ ಕಾರಣಗಳಿರುತ್ತಿದ್ದುದು ಮತ್ತು ಅದರಿಂದ ಸಾಧಾರಣವಾಗಿ ಯಾವ ಫಲವೂ ದೊರೆಯದಿದ್ದುದು ಸ್ಪಷವಾಗಿತ್ತು; ಯಾವ ಸೆರೆಯವನನ್ನಾಗಲಿ ಆತನ ಬಳಿಗೆ ಮರಣದಂಡನೆ ಜಾರಿಗೊಳಿಸಲು ಕರಕೊಂಡು ಬಂದಾಗ ಆತನು ಅವರ ಕೋರಿಕೆಯನ್ನು ನೆರವೇರಿಸಲು ಹರ್ಷಿಸುತ್ತಿದ್ದನೆಂಬುದನ್ನು ಭಾವಿಸಿಕೊಂಡಂತೆ ತೋರುತ್ತಿತ್ತು.

ಆ ನೀತಿವಂತನಾದ ಒಬ್ಬನನ್ನು ನಾಶಗೊಳಿಸಲು ಸಂಚನ್ನು ರೂಪಿಸಿರುವ ಈ ಮನುಷ್ಯರೇ “ತಮಗೆ ಮೈಲಿಗೆ ತಟ್ಟೀತೆಂದು” ಹಾಗೂ ಅವರು ಪಸ್ಕಹಬ್ಬವನ್ನು ಆಚರಿಸಲು ಅಡ್ಡಿಯಾಗು–ವದೆಂದು ಪಿಲಾತನು ನ್ಯಾಯತೀರ್ಪು ನೀಡುವ ಅರಮನೆಯ ಕೊಠಡಿಯ ಒಳಗೆ ಹೋಗದೇ ಇರುವದನ್ನು ನಾವು ಓದುವಾಗ ಕರ್ತನು ಫರಿಸಾಯರಿಗೆ ಹೇಳಿದ ಈ ಮುಂದಿನ ಮಾತು ನಮಗೆ ನೆನಪಾಗುವದು: “ನೀವು ಮನುಷ್ಯರ ಮುಂದೆ ನೀತಿವಂತರಾಗಿ ತೋರ್ಪಡಿಸಿಕೊಳ್ಳುವವರು; ಆದರೆ ನಿಮ್ಮೊಳಗೆ ಕಪಟತನ ಹಾಗು ದ್ರೋಹಗಳು ತುಂಬಿರುವವು.” ಅದೆಷ್ಟು ಸಾಮರಸ್ಯವಿಲ್ಲದ ನೀಚರೂ ಹಾಗು ಕಪಟಿಗಳೂ ಆಗಿದ್ದರು ಅವರು! ಅನ್ಯಜನರ ಆಡಳಿತ ವ್ಯಾಪ್ತಿಯುಳ್ಳ ಪಿಲಾತನ ನ್ಯಾಯಾಲಯದ ಒಳಗೆ ಹೋಗಲು ಅಂಜಿದ ಅವರು ತಮಗೆ (ಪಾಪದ ಸಂಕೇತ–ವಾಗಿರುವ) ಕೆಲವು ಹುಳಿಪದಾರ್ಥಗಳು ತಗಲೀತೆಂದು ಅಂಜಿಕೊಂಡಿದ್ದ ಅವರು ನಿಜವಾದ ಹುಳಿಪದಾರ್ಥವಾದ ಪಾಪವು ತಮ್ಮ ಹೃದಯದಲ್ಲಿ ವ್ಯಾಪನಗೊಂಡು ಅದು ಕೋಪ ಮತ್ಸರ ಹಗೆತನ ಅಸೂಯೆ ಕಲಹಗಳೆಂಬ ಹುಳಿಯಿಂದ ಪೂರ್ಣವಾಗಿ ತುಂಬಿಕೊಂಡಿತ್ತೆಂಬುದನ್ನು ಗ್ರಹಿಸದೇ ಹೋಗಿದ್ದರು.

ಕರ್ತನ ಜನರಿಗೆ ಎಂಥಾ ಒಂದು ಪಾಠವು ಇಲ್ಲಿರುವದು: ಯಾಕಂದರೆ ಭ್ರಷ್ಟ ಹೃದಯರಾದ ಈ ಸಂಚುಕಾರರು ತಮ್ಮ ದಿನದಲ್ಲಿ ಹಾಗೂ ತಮ್ಮ ಸಭೆಯಲ್ಲಿ ಪರಿಶುದ್ಧ ಜನರಂತೆ ತೋರಿಸಿಕೊಳ್ಳುವವರಾಗಿದ್ದರು. ಕರ್ತನನ್ನು ಶಿಲುಬೆಗೆ ಹಾಕಿ ಆತನನ್ನು ಬಹಿರಂಗವಾಗಿ ಅಪಮಾನಗೊಳಿಸುವ ಅಧಿಕಾರವು ಇಂದು ಯಾರಲ್ಲಿಯೂ ಇರದಿದ್ದರೂ, ಆತನ ದೇಹದ ಅಂಗಗಳಾಗಿರುವ ಆತನ ಸಹೋದರರನ್ನು ಅಪಮಾನಪಡಿಸಿ ಶಿಲುಬೆಗೆ ಹಾಕುವ ಅಧಿಕಾರವು ನಮ್ಮಲ್ಲಿರುವದು. ಯೇಸುವಿನ ಶಿಲುಬೆಗೇರಿಸುವಿಕೆಯನ್ನು ಗಳಿಸಿಕೊಂಡ ಮಹಾಯಾಜಕರೂ ಹಾಗೂ ಫರಿಸಾಯರಂತೆಯೇ ಈ ದಿನದಲ್ಲಿನ ಕೆಲವರು ತಮ್ಮನ್ನು ಸಾಧ್ಯವಾದಷ್ಟು ಮರುಳುಗೊಳಿಸಿಕೊಂಡವರಾಗಿ ಇಂಥದನ್ನು ಮಾಡುತ್ತಿರುವರೆಂಬುದಕ್ಕಾಗಿ ನಮಗೆ ಅಂಜಿಕೆಯಾಗುವದು. ಪೇತ್ರನು ಹೇಳಿರುವಂತೆ: “ಅದಿರಲಿ ಸಹೋದರರೇ, ನೀವು ನಿಮ್ಮ ಹಿರಿಯರೂ ಇದನ್ನು ತಿಳಿಯದೆ ಮಾಡಿದಿರೆಂಬುದನ್ನು ಬಲ್ಲೆನು.” (ಅಪೋಸ್ತಲರ ಕೃತ್ಯಗಳು 3:17) ಎನ್ನುವದು ನಿಜವೇ. ಮತ್ತು ಇದರಂತೆಯೇ ಈ ದಿವಸದಲ್ಲಿಯೂ “ಕ್ರಿಸ್ತನ ದೇಹದ” ಅಂಗಗಳಾದವರನ್ನು ಅವಮಾನಪಡಿಸುವವರಿಗೆ ತಾವು ಏನನ್ನು ಮಾಡುತ್ತಿರುವರೋ ಅದನ್ನು ತಿಳಿಯದಿರುವ ಸಂಭವವಿರುವದು. ಹೀಗಿದ್ದರೂ ಅವರು ತಮ್ಮನ್ನು ಕರ್ತನ ಈ ತೀರ್ಪಿಗೆ ಒಳಪಡಿಸಿಕೊಳ್ಳುವರು: “ಅವನ ಕೊರಳಿಗೆ ಒರಳುಕಲ್ಲನ್ನು ಕಟ್ಟಿ ಅವನನ್ನು ಸಮುದ್ರದಲ್ಲಿ ಮುಳುಗಿಸಿಬಿಡುವದು ಅವನಿಗೆ ಮೇಲಾಗಿರುವದು.” (ಲೂಕ 17:2) ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ಹೃದಯವನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳೋಣ, ಅದರಿಂದ ಜೀವಧಾರೆಗಳು ಹೊರಡುವವು.

ಫರಿಸಾಯರ ಹೃದಯಗಳು ಸೂಕ್ತವಾದ ಸ್ಥಿತಿಯಲ್ಲಿದ್ದಲ್ಲಿ ಅಂದರೆ ನೀತಿಸತ್ಯತೆಗಳನ್ನು ಪೂರ್ಣವಾಗಿ ಪ್ರೀತಿಸುವ, ಹಾಗು ಯಾವುದು ಸತ್ಯವೋ, ಯಾವುದು ಮಾನ್ಯವೋ, ಯಾವದು ನ್ಯಾಯುವೋ, ಯಾವದು ಶುದ್ಧವೋ, ಯಾವುದು ಮನೋಹರವಾಗಿರುವದೋ, ಯಾವುದು ಕೀರ್ತಿಗೆ ಯೋಗ್ಯವೋ ಇಂಥ ಸಂಗತಿಗಳು ಮನವರಿಕೆಯಾಗಿದ್ದಲ್ಲಿ ಅಂಥವರಿಗೆ ಯಜ್ಞದ ಕುರಿಯಾದಾತನನ್ನು ತಿರಸ್ಕರಿಸಿ ಶಿಲುಬೆಗೆ ಹಾಕುವಂಥಾ ತಪ್ಪನ್ನು ಮಾಡಲು ಸಾಧ್ಯವಿರುತ್ತಿರಲಿಲ್ಲ. ಇದರಂತೆಯೇ, ಯಾರು ಸಹೋದರರನ್ನು ಪ್ರೀತಿಸುವಂಥ ಆತ್ಮವನ್ನು ಹೊಂದಿರುವರೋ ಅವರು ಯಾವುದೇ ರೀತಿಯಲ್ಲಿ ಅವರ [ಸಹೋದರರ] ಹಿಂಸಕರಾಗುವದರಿಂದ ತಪ್ಪಿಸಿಕೊಳ್ಳುವರು. ಕೇವಲ ಇಂಥವರಿಗೇ ನಿಜರೂಪದ ಪಸ್ಕವನ್ನು ಸೂಕ್ತವಾದ ರೀತಿಯಲ್ಲಿ ಭೋಜನ ಮಾಡಲು ಸಾಧ್ಯ.

ರೋಮಾಯರ ದೇಶಾಧಿಪತಿಯು ಪಸ್ಕಹಬ್ಬ ಕಾಲದ ವಿಷಯುದಲ್ಲಿರುವ ಅವರ ವಿಶಿಷ್ಟ ಪದ್ಧತಿಯನ್ನು

ತಿಳಿದವನಾಗಿದ್ದು ಅವರ ಸಿದ್ಧಾಂತಕ್ಕೆ ತನ್ನನ್ನು ಒಳಪಡಿಸಿ–ಕೊಂಡವನಾಗಿ ತನ್ನ ಆಸನವನ್ನು ನ್ಯಾಯಾಲಯದ ಹೊರಗೆ ಎತ್ತರದ ಜಗಲಿಯ ಮೇಲೆ ಅಂದರೆ ಕಲ್ಲುಹಾಸು ಎನ್ನಿಸಿಕೊಳ್ಳುವ ಸ್ಥಳದ ಮೇಲೆ ಹಾಕಿಸಿ ಕೂತುಕೊಂಡಿದ್ದನು. ಯೆಹೂದ್ಯರು ಅಪರಿಶುದ್ಧ ಸ್ಥಳದ ಹೊರಗೆ ನಿಂತುಕೊಂಡು ತಮ್ಮ ಅರೋಪಗಳನ್ನು ಪಿಲಾತನಿಗೆ ತಿಳಿಸುತ್ತಿರುವಲ್ಲಿ, ಯೇಸುವನ್ನು ಪರಿಶೀಲನೆಗಾಗಿ ಈ ಜಗಲಿಗೆ ಕರೆಸಲಾಗಿತ್ತು. ಯೇಸುವನ್ನು ಒಬ್ಬ ಸೆರೆಯವನನ್ನಾಗಿ ಶಿಲುಬೆಗೆ ಹಾಕಿಸುವದಕ್ಕೆ ಕೇವಲ ಪ್ರಸ್ತುತ ಪಡಿಸುವದಷ್ಟೇ ಸಾಕೆಂದು ಅವರು ನಿರೀಕ್ಷಿಸಿದ್ದು ಸ್ಪಷ್ಟವಾಗಿತ್ತು. ತಾವು ಆತನ ಮೇಲೆ ಒಂದು ದೋಷಾರೋಪಣೆ ಮಾಡುವ ಅವಶ್ಯಕತೆಯು ಸಹ ಇರುತ್ತದೆಂಬುದನ್ನು ಅವರು ನಿರೀಕ್ಷಿಸಿರಲಿಲ್ಲ; ಆದುದರಿಂದ ಅವರು ಉತ್ತರಿಸಿದ್ದು: "ಈತನು ಒಬ್ಬ ಅಪರಾಧಿಯಲ್ಲದಿದ್ದರೆ [ದುಷ್ಕರ್ಮಿಯಲ್ಲದಿದ್ದರೆ] ನಾವು ಅವನನ್ನು ನಿನಗೆ ಒಪ್ಪಿಸುತ್ತಿರಲಿಲ್ಲ." ಕೆಲವರು ಮಾಡಿರುವ ಸಲಹೆ ಎಂದರೆ, ಪಿಲಾತನಲ್ಲಿದ್ದ ಸ್ವಭಾವಕ್ಕೆ ಅನುಸಾರವಾಗಿ ಮತ್ತು ಫರಿಸಾಯರ ಮೇಲೆ ಆತನಿಗೆ ಅಗೌರವವಿರುವ ಸಾಧ್ಯತೆಯ ನಿಮಿತ್ತವಾಗಿ, ಆತನ ಪ್ರಶ್ನೆಯು ನಿಜವಾಗಿ ಹೀಗಿತ್ತು: "ಈತನ ಮೇಲೆ ಏನು ದೂರು ತಂದಿರುವಿರಿ?" ಅಲ್ಲದೆ ಇದು ಯೇಸುವಿಗೂ ನಿಜವಾಗಿ ಫರಿಸಾಯರ ವಿರುದ್ಧವಾಗಿ ಅರೋಪ ಮಾಡುವದಕ್ಕೆ ಕಾರಣಗಳಿರುವದೆಂಬದನ್ನು ಅಡಕಮಾಡಿ ಹೇಳಿದಂತ್ತಿತ್ತು. ಸಂಗತಿಯು ವಾಸ್ತವದಲ್ಲಿ ಹೀಗೆಯೇ ಇತ್ತು. ರೋಮಾಯರ ಈ ಕಠಿಣ ಮನುಷ್ಯನು ನಿಸ್ಸಂದೇಹವಾಗಿ ಮಾನವನ ಗುಣಸ್ವಭಾವವನ್ನು ನೋಡುವಲ್ಲೇ ತಿಳಿದುಕೊಳ್ಳುವದರಲ್ಲಿ ಪರಿಣಿತನಾಗಿದ್ದು, ನಮ್ಮ ಕರ್ತನ ಮುಖಚರ್ಯೆಯಲ್ಲಿ ಯಾವ ಅಪರಾಧೀ ಲಕ್ಷಣಗಳು ಇಲ್ಲದಿರುವದನ್ನು ಅಲ್ಲದೆ ಆತನ ಮೇಲೆ ದೋಷಾರೋಪಣೆ ಮಾಡುವವರಲ್ಲಿ ಇಂಥ ಅನೇಕ ಲಕ್ಷಣಗಳಿದ್ದುದನ್ನು ಸುಲಭವಾಗಿ ತಿಳಿದುಕೊಂಡಿರುವ ಸಾಧ್ಯತೆಗಳಿದ್ದವು.

ಯಾಜಕರು ಮತ್ತು ಫರಿಸಾಯರು ಬೆರಗಾಗುವಂತೆ ಪಿಲಾತನು ಯೇಸುವನ್ನು ಅವರ ಮುಂದೆ ತಂದು ಸಾರಾಂಶವಾಗಿ ಹೀಗೆ ಹೇಳಿದ್ದನು, ಇದು ಒಂದು ಸಣ್ಣ ಧಾರ್ಮಿಕ ಕಲಹ ಇದರಲ್ಲಿ ನನಗೇನೂ ಆಸಕ್ತಿಯಿಲ್ಲ; ಈ ಸೆರೆಯವನನ್ನು ತೆಗೆದುಕೊಂಡು ಹೋಗಿ ನಿಮ್ಮ ಸ್ವಂತ ನೇಮಾಚಾರಗಳ ಅನುಸಾರ ಇವನನ್ನು ಸೆರೆಗೆ ಹಾಕುವದೋ, ಇಲ್ಲವೆ ಛಡಿ ಏಟುಗಳನ್ನು ಹೊಡಿಸುವದೋ, ಅಥವಾ ನಿಮ್ಮ ಧರ್ಮಶಾಸ್ತ್ರ ನಿಯಮದ ಪ್ರಕಾರ ನಿಮಗೆ ಯಾವದು ಸರಿಕಾಣುವದೋ ಹಾಗೆ ಮಾಡಿರಿ. ಆದರೆ ಕರ್ತನ ಮರಣಕ್ಕಾಗಿ ಹಾತೊರೆಯುತ್ತಿದ್ದ ಆತನ ಹಿಂಸಕರು ತಮ್ಮ ಹೃದಯದ ನಿಜ ಸ್ಥಿತಿಯನ್ನು ಹೊರಗೆಡವಿ ಹೀಗೆ ಹೇಳಿದ್ದರು; "ಯಾವನಿಗೂ ಮರಣವಿಧಿಸುವ ಅಧಿಕಾರ ನಮಗಿಲ್ಲ."

ಪಿಲಾತನು ಕಠಿಣನೂ, ಕ್ರೂರಿಯೂ, ಕರುಣೆಯಿಲ್ಲದವ–ನಾದರೂ ನಿಜವಾದ ಪರಿಸ್ಥಿತಿಯನ್ನು ಅಂದರೆ ಪಾಪಪ್ರಜ್ಞೆ–ಯುಳ್ಳವರು ನಿರಪರಾಧಿಯನ್ನು ಕೊಲ್ಲಲು ಬೆನ್ನಟ್ಟುತ್ತಿರುವ–ರೆಂಬುದನ್ನು ಗ್ರಹಿಸಿದವನಾಗಿದ್ದನು. ತಾನು ನಿಧಾನವಾಗಿ ಯೋಚಿಸುವಂಥ ಉತ್ತಮವಾದ ಅವಕಾಶವನ್ನು ಪಡೆದಿರಬಹುದಾಗಿದ್ದು ಮತ್ತು ಯೇಸುವು ತನ್ನ ಸ್ವರಕ್ಷಣೆಗಾಗಿ ಏನು ಹೇಳುವನೆಂಬುದನ್ನು ಕೇಳಲು ಸಹ ಬಯಸುವವನಾಗಿದ್ದು, ಪಿಲಾತನು ಯಹೂದ್ಯರನ್ನು ಬಿಟ್ಟು ಒಳಗೆ ಬಂದು ಯೇಸುವನ್ನು ನ್ಯಾಯಾಲಯದ ಒಳಗೆ ತನ್ನ ಬಳಿಗೆ ಕರೆದು ಅಲ್ಲಿ ಸಂಭಾಷಣೆ ಮಾಡಿದ್ದನು. ನಮ್ಮ ಕರ್ತನು ವೈಯುಕ್ತಿಕವಾಗಿ ಕಾಣಿಸಿಕೊಳ್ಳುವಾಗ ಆತನಲ್ಲಿ ಕೆಲವು ಗಮನ ಸೆಳೆಯುವ ಲಕ್ಷಣಗಳು ಇದ್ದಿರಬೇಕು. ಅದು ಪಿಲಾತನನ್ನು ಒಂದು ಸಮಯಕ್ಕೆ ಯೆಹೂದ್ಯರ ನ್ಯಾಯಾಲಯ ಅಥವಾ ಸನ್–ಹೆದ್ರೀನ್ ಸಭೆಯ ಬೇಡಿಕೆಗಳನ್ನು ತಿರಸ್ಕರಿಸುವಂತೆ ಮಾಡಿದ್ದು, ಆತನಿಗೆ ಜೀವಕೊಡುವ ಹಾಗು ಮರಣ ವಿಧಿಸುವ ಅಧಿಕಾರವಿದ್ದರೂ, ಆತನ ಮೊದಲನೇ ಕರ್ತವ್ಯವು ತನ್ನ ಸಾಮ್ರಾಜ್ಯದಲ್ಲಿ ಶಾಂತಿ ನೆಮ್ಮದಿಗಳನ್ನು ಕಾಪಾಡುವದಾಗಿತ್ತು; ಇದು ಕನಿಷ್ಠ ಪಕ್ಷದಲ್ಲಿ ಆತನು ಸಾಮಾನ್ಯವಾಗಿ ಜನಪ್ರಿಯರ ಪರವಾಗಿರುವದನ್ನು ಅಡಕವಾಗಿದ್ದು, ಆ ಸಾಮ್ರಾಜ್ಯದ ಮುಖ್ಯಸ್ತರು ಒಬ್ಬನು ಸಮಾದಾನವನ್ನು ಕದಡುವವನೆಂದು ಖಂಡನೆಮಾಡಿ ಆತನ ಮರಣ ದಂಡನೆಯನ್ನು ಬಯಸುವಲ್ಲಿ, ಪಿಲಾತನ ಸ್ಥಾನಮಾನವು ಅನೇಕ ವಿಧದಲ್ಲಿ ಸೂಕ್ಷ್ಮವಾಗಿರುತ್ತಿತ್ತು. ಆತನು ರೋಮ್ ಪಟ್ಟಣದಲ್ಲಿರುವ ಸರಕಾರದವರನ್ನು ಮೆಚ್ಚಿಸಬೇಕಿದ್ದುದು ಅಲ್ಲದೆ ಸ್ಥಳೀಯ ಅಧಿಕಾರಿಗಳೊಡನೆ ಅನಾವಶ್ಯಕವಾದ ಕಲಹಗಳನ್ನು ತಪ್ಪಿಸಬೇಕಿತ್ತು. ಈ ಪ್ರಸ್ತುತ ಸಂಗತಿಯಲ್ಲಿ ತಮ್ಮ ದುಷ್ಟ ಸಂಚು ವಿಫಲವಾಗುವದಕ್ಕೆ ಬದಲಾಗಿ ಎಲ್ಲೆಡೆ ಶಾಂತಿಯನ್ನು ಕದಡುವ ಒಂದು ಒಳಸಂಚನ್ನು ಸ್ಥಳೀಯ ಅಧಿಕಾರಿಗಳು ಉಂಟು–ಮಾಡಿದ್ದರು. ವಾಸ್ತವಾಂಶವೆಂದರೆ ಆರು ವರುಷಗಳ ನಂತರ ಇದೇ ಜನರು ರೋಮಾಯರ ಚಕ್ರವರ್ತಿಗೆ ಪಿಲಾತನ ಮೇಲೆ ಎಂಥಾ ಆರೋಪವನ್ನು ಮಾಡಿ ಕಳುಹಿಸಿದ್ದರೆಂದರೆ ಅದು ಆತನ್ನು ತನ್ನ ಸ್ಥಾನದಿಂದ ತೆಗೆದುಹಾಕುವಂತೆ ಮಾಡಿತ್ತು.

ಯೇಸುವಿನೊಂದಿಗೆ ಏಕಾಂತದಲ್ಲಿರುವಾಗ ಪಿಲಾತನು ಮಾಡಿದ ಪ್ರಶ್ನೆಯೆಂದರೆ, "ನೀನು ಯೆಹೂದ್ಯರ ಅರಸನು ಹೌದೋ?" ಯೆಹೂದ್ಯರು ಯೇಸುವಿನ ವಿರುದ್ಧವಾಗಿ ಇಂಥಾ ಒಂದು ಆರೋಪವನ್ನು ಮಾಡಿರಲಿಲ್ಲ; ನಿಜವಾಗಿಯೂ ಅವರು ಗಲಿಲಾಯುದವನನ್ನು ಯೆಹೂದ್ಯರ ಅರಸನನ್ನಾಗಿ ಅಂಗೀಕರಿಸಿಕೊಳ್ಳಲು ಅಥವಾ ಯಾವುದೇ ಸಂಖ್ಯೆಯಲ್ಲಿನ ಜನರು [ಯೇಸುವನ್ನು] ಹೀಗೆ ಗುರುತಿಸಿಕೊಳ್ಳ ಬಯಸುವದರಿಂದ ದೂರವಾಗಿ ಉಳಿದಿದ್ದರು; ಆ ವರೆಗೆ ಅವರು ಯೇಸುವನ್ನು ಕೇವಲ ಒಬ್ಬ ದುಷ್ಕರ್ಮಿಯೆಂದು, ಒಬ್ಬ ದಂಗೆಕೋರನೆಂದು, ಆರೋಪಿಸಿ ಆತನ ಮರಣವು ದೇಶದ ಶಾಂತಿಗೆ ಅವಶ್ಯಕವೆಂದಿದ್ದರು. ಕೆಲವೊಂದು ದಿನಗಳ ಹಿಂದೆ ಯೇಸುವು ಕತ್ತೆಯ ಮೇಲೆ ಸವಾರಿ ಮಾಡಿ ಬಂದಿದ್ದ ಹಾಗು ಜನರು ಆತನನ್ನು ದಾವೀದನ ಕುಮಾರನೆಂದು ಜಯಕಾರಹಾಕಿ ಸ್ವಾಗತಿಸಿದ್ದ ಬಗ್ಗೆ ಪಿಲಾತನು ಕೆಲವು ವಲಯಗಳ ಮೂಲಕವಾಗಿ ಕೇಳಿ ತಿಳುಕೊಂಡಿದ್ದಂತೆ ಕಾಣುತ್ತದೆ. ಇದು ಯೆಹೂದ್ಯರು ಮಾಡಿದ ಆರೋಪದಲ್ಲಿನ ಒಂದು ಅಂಶವಾಗಿರಲಿಲ್ಲವೆಂಬುದು ಕರ್ತನು ಪಿಲಾತನಿಗೆ ಕೊಟ್ಟ ಈ ಉತ್ತರದಿಂದ ಸ್ಪಷ್ಟವಾಗುತ್ತದೆ: "ನಿನ್ನಷ್ಟಕ್ಕೆ ನೀನೇ ಇದನ್ನು ಹೇಳುತ್ತೀಯೋ? ಮತ್ತೊಬ್ಬರು ನನ್ನ

ವಿಷಯದಲ್ಲಿ ನಿನಗೆ ಹೇಳಿದ್ದಾರೋ..." ಅಂದರೆ ನೀನು ಈ ವಿಷಯದಲ್ಲಿನ ಸತ್ಯತೆಯನ್ನು ವಿಚಾರಿಸಿ ತಿಳಿದುಕೊಳ್ಳಲು ಆಸಕ್ತಿಯುಳ್ಳವನೋ ಇಲ್ಲವೇ ನೀನು ಕೇವಲ ಕೇಳಿರುವ ಸಂಗತಿಯನ್ನು ಜ್ಞಾಪಿಸಿಕೊಳ್ಳುತ್ತಿರುವೆಯೋ? "ನಾನೇನು ಯೆಹೂದ್ಯನೇ?" ಎಂಬ ಪಿಲಾತನ ಉತ್ತರವು ಹೀಗೆ ಹೇಳಿರುವದಕ್ಕೆ ಸಮನಾಗಿತ್ತು: ಯೆಹೂದ್ಯರಾದ ನಿಮ್ಮ ನಿರೀಕ್ಷೆ ಹಾಗು ಎದುರುನೋಡುವಿಕೆಗಳ ಬಗ್ಗೆ ನನಗೇನು ತಿಳಿದಿರುವದು? ನಾನು ರೋಮಾಯರ ದೇಶಾಧಿಪತಿ ಅಲ್ಲದೆ ನೀನು ಒಬ್ಬ ಯೆಹೂದ್ಯರ ಅರಸನಾಗಿದ್ದಲ್ಲಿ ನಿನ್ನ ಸ್ವಂತ ಜನ ಹಾಗು ಅದರ ಮುಖ್ಯ ಪ್ರತಿನಿಧಿಗಳೇ ನಿನ್ನನ್ನು ನನಗೆ ಒಪ್ಪಿಸಿದ್ದಾರೆ. ನೀನು ಏನು ಮಾಡಿದ್ದೀ, ನೀನು ಅವರ ಅರಸನಾಗಿದ್ದಲ್ಲಿ ನಿನ್ನ ಅಧೀನದಲ್ಲಿರುವವರು ನಿನಗೆ ಹೀಗೆ ನಿಷ್ಠೆಯಿಲ್ಲದವರೆಂಬಂತೆ ಇದು ಮಾಡುತ್ತದೆ? ರೋಮ್ ಸಾಮ್ರಾಜ್ಯದ ವಿರುದ್ಧವಾಗಿ ನೀನು ಯಾವ ಅಧಿಕಾರವನ್ನು ಪ್ರಯೋಗಿಸಿದರೂ ಅದಕ್ಕೆ ಯಾವ ದೊಡ್ಡ ಅಪಾಯವಿಲ್ಲದಿರುವದು ಸ್ಪಷ್ಟ; ನೀನು ಸಾತ್ವಿಕನು, ನಯವಿನಯ–ವುಳ್ಳವನು, ದೀನನೂ, ನಿನ್ನ ವಿಷಯವಾಗಿ ಯಾವ ಪ್ರತಿರೋಧವನ್ನು ಒಡ್ಡದವನು, ಅಲ್ಲದೆ ನಿನ್ನ ಜನರು ನಿನಗೆ ವಿರೋಧವಾಗಿ ಕೂಗನ್ನು ಎಬ್ಬಿಸುತ್ತಿರುವರು. ಯೆಹೂದ್ಯರ ಅರಸನೇ ಈ ವಿಚಿತ್ರ ಪರಿಸ್ಥಿತಿಯ ಬಗ್ಗೆ ವಿವರಿಸು.

ಆಗ ಯೇಸು ವಿವರಿಸಿ ಹೇಳಿದ್ದೇನಂದರೆ, ತನ್ನ ರಾಜ್ಯವು ಈ [ಲೋಕದ] ವ್ಯವಸ್ಥೆಯದ್ದಲ್ಲ, ಇಲ್ಲವಾದಲ್ಲಿ ತನ್ನ ಪರಿವಾರದವರು ಹೋರಾಡಿ ತನ್ನನ್ನು ಕಾಪಾಡುತ್ತಿದ್ದರು ಅಲ್ಲದೆ ತಾನು ಈಗಿನ ಕಾಲದಲ್ಲಿದ್ದಂತೆ ತನ್ನ ವಿರೋಧಿಗಳ ದಯೆಯಲ್ಲಿ ಇರುತ್ತಿರಲಿಲ್ಲ; ಅಲ್ಲದೆ ತನ್ನ ರಾಜ್ಯವು ಇನ್ನೂ ಆರಂಭವಾಗಿರಲಿಲ್ಲ. ಪಿಲಾತನು ಆಶ್ಚರ್ಯಚಕಿತನಾಗಿದ್ದನಲ್ಲದೆ ಬಹುಶಃ ಆ ಮಹಾ ಆಧಿಪತಿಯ ಇಂಥಾ ದೀನಾವಸ್ಥೆಯ ಬಗ್ಗೆ ಕೆಲವು ಮಟ್ಟಿನ ಸಹಾನುಭೂತಿ–ಯುಳ್ಳವನಾಗಿ, ಆತನು ಕೇಳುವದು: ಹೀಗಿದ್ದಲ್ಲಿ ನೀನು ಒಬ್ಬ ಅರಸನೆಂದು ಹೇಳಿಕೊಳ್ಳುತ್ತೀಯೋ? ನಮ್ಮ ಕರ್ತನು ಉತ್ತರಿಸುವದು, "ನೀನೇ ಹೇಳಿದ್ದೀ," ಅಂದರೆ ನಿನ್ನ ಹೇಳಿಕೆಯು ಸರಿಯೆ; ನಾನು ಒಬ್ಬ ಅರಸನು. "ಸತ್ಯದ ವಿಷಯದಲ್ಲಿ ಸಾಕ್ಷಿಹೇಳುವದಕ್ಕೋಸ್ಕರ ನಾನು ಹುಟ್ಟಿದವನು, ಅದಕ್ಕೋಸ್ಕರವೇ ನಾನು ಈ ಲೋಕಕ್ಕೆ ಬಂದಿದ್ದೇನೆ. ಸತ್ಯಪರರೆಲ್ಲರೂ ನನ್ನ ಮಾತಿಗೆ ಕಿವಿಗೊಡುತ್ತಾರೆ."

ಇದು ನಮ್ಮ ಕರ್ತನು ಪಿಲಾತನ ಮುಂದೆ ಸಾಕ್ಷಿಯಾಗಿ ಹೇಳಿದ ಒಂದು ಒಳ್ಳೆಯ ಅರಿಕೆಯಾಗಿತ್ತು, ಇದನ್ನು ಅಪೋಸ್ತಲನು ಉಲ್ಲೇಖಿಸಿರುವನು (1 ತಿಮೋಥೆ 6:13) ಆತನು ತನ್ನ ಅರಸುತನವನ್ನು ಹಾಗು ತನ್ನ ದೈವೀಕ ಅಧಿಕಾರದ ಬಗ್ಗೆ ಅರಿಕೆಮಾಡಿದ್ದನು. ಪಿಲಾತನು ನಮ್ಮ ಕರ್ತನು ಅರಸನೆಂದು ಹೇಳಿಕೊಂಡುದರ ಬಗ್ಗೆ ಸಂದೇಹಪಟ್ಟಿದ್ದುದರಲ್ಲಿ ಮತ್ತು ಆತನನ್ನು ಒಬ್ಬ ಧರ್ಮಾಂಧನೆಂದು ಆಲೋಚಿಸಿರುವ ಸಾಧ್ಯತೆಯಿದ್ದಲ್ಲಿ ಅದಕ್ಕೆ ನಾವು ಅಚ್ಚರಿಪಡಬೇಕಿಲ್ಲ. ಗಮನಾರ್ಹವಾದ ಸಂಗತಿಯೆಂದರೆ ನಿಜವಾಗಿಯೂ ಯೇಸುವಿನಿಂದ ಕೇಳಿದವರಲ್ಲಿ ಸ್ವಲ್ಪ ಜನರೇ ಆತನು ಅರಸನೆಂಬ ಈ ಹೇಳಿಕೆಯ ಸತ್ಯಾಂಶವನ್ನು ಗುರುತಿಸಿಕೊಂಡಿದ್ದರು. ತೋರಿಕೆಯ ಕ್ರೈಸ್ತರಲ್ಲಿಯೂ ಅದೆಷ್ಟು ಸ್ವಲ್ಪ ಮಂದಿ ನಮ್ಮ ಕರ್ತನ ಅರಸುತನದ ಅಧಿಕಾರಸ್ಥಾನವನ್ನು ಗುರುತಿಸಿರುವರು! ಯೇಸುವನ್ನು ನಿಜವಾಗಿಯೂ ಸಂಕಷ್ಟಕ್ಕೊಳಗಾದವನು ಬಾಧೆಪೀಡಿತನೆಂದು ಗುರುತಿಸಿದ್ದ ಅನೇಕರು ಅಲ್ಲದೆ ನಮ್ಮ ಪಾಪಗಳಿಗಾಗಿ ಆತನು ಸತ್ತನೆಂದು ಅರಿತುಕೊಂಡಿರುವ ಕೆಲವರು, ಆತನು ಮನುಷ್ಯನನ್ನು ಕೊಂಡುಕೊಂಡಿರುವದು ಮಾತ್ರವಲ್ಲದೆ ಮೊದಲನೆಯ ಆದಾಮನಿಗೆ ಆದಿಯಲ್ಲಿ ನೀಡಿದ ಸಾಮ್ರಾಜ್ಯವನ್ನೂ ಕೊಂಡುಕೊಂಡಿರುವನೆಂಬುದನ್ನು ಎಂದೂ ಕಂಡುಕೊಂಡಿರು–ವದಿಲ್ಲ. ಅನೇಕರು ನಮ್ಮ ಕರ್ತನಲ್ಲಿನ ಯಾಜಕನ ಮನೋಭಾವ–ವನ್ನು ಕಂಡಿರಲು ಸಾಧ್ಯವಾಗಿದ್ದರೂ ಆತನು ಒಬ್ಬ ಅರಸನೂ ಸಹ ಆಗುವನೆಂದೂ ಅಲ್ಲದೆ ಆತನು ಸಾವಿರ ವರುಷದ [ಆಳ್ವಿಕೆಯ] ಕಾಲದ ಪರ್ಯಂತರವಾಗಿ ತನ್ನ ಸಿಂಹಾಸನದಲ್ಲಿ ಕುಳಿತುಕೊಳ್ಳುವ "ಮೆಲ್ಕಿಜದೇಕನ ತರಹದ" ಯಾಜಕನೆಂಬು–ದನ್ನೂ, ಆತನ ಸಭೆಯೂ ಮದಲಗಿತ್ತಿಯೂ ಆಗಿರುವವರು ಆತನಿಗೆ ಸಹಕಾರಿಗಳಾಗಿ ಆತನ ಯಾಜಕತ್ವ ಹಾಗು ಆತನ ಅರಸುತನ ಈ ಎರಡು ಕಾರ್ಯಸ್ಥಾನದಲ್ಲಿ ಪಾಲುಹೊಂದು–ವರೆಂಬುದನ್ನು ಅರಿತುಕೊಳ್ಳುವದರಲ್ಲಿ ವಿಫಲರಾಗಿರುವರು.

ಯಾಜಕತ್ವದ ಕಾರ್ಯಸ್ಥಾನವು ಕರುಣೆ ಕ್ಷಮಿಸುವಿಕೆ ಹಾಗು ಕೃಪಾ ಸಹಾಯದ ವಿಷಯವಾಗಿ ಹೇಳುವವು; ಆದರೆ ಅರಸನ ಕಾರ್ಯಸ್ಥಾನವು ಲೋಕ ರಕ್ಷಣೆಗಿಂತಲೂ ಅಂದರೆ ಮನುಷ್ಯರನ್ನು ಪಾಪದ ದಾಸತ್ವದೊಳಗಿಂದ ಬಿಡಿಸುವದಕ್ಕಿಂತಲೂ ಕಡಿಮೆ ಪ್ರಾಮುಖ್ಯತೆಯುಳ್ಳದ್ದಾಗಿರುವದಿಲ್ಲ, ಅವರು ನಿರಂತರವಾದ ಜೀವವನ್ನು ಹೊಂದಿಕೊಳ್ಳಲು ಅವರನ್ನು ಅಭಿವೃದ್ಧಿಪಡಿಸಿ ಯೋಗ್ಯರನ್ನಾಗಿ ಮಾಡುವ ಸಲುವಾಗಿ ಕಬ್ಬಿಣದ ಗದೆಯಿಂದ ಆಳಲ್ಪಡಬೇಕು; ಅಲ್ಲದೆ ಈ ಕಾರ್ಯಗಳೆಲ್ಲವೂ ತನ್ನ ಸ್ವರಕ್ತದಿಂದ ನಮ್ಮನ್ನು ವಿಮೋಚಿಸಿದಾತನಿಗೆ ಸೇರಿರುತ್ತದೆ. ನಮ್ಮ ಕರ್ತನು ಹೇಳಿದ ಸಾಮ್ಯಗಳಲ್ಲಿನ ಒಂದು ಬಹು ದೊಡ್ಡ ಅಂಶವು ವಿವಿಧ ಹಂತಗಳಲ್ಲಿರುವ ದೇವರ ರಾಜ್ಯಕ್ಕೆ ಸಂಬಂಧಿಸಿದ್ದಾಗಿದ್ದು ಅದು ಈಗ ಭ್ರೂಣಾವಸ್ಥೆಯಲ್ಲಿದ್ದು, ಕ್ರಮೇಣ ಅದು ಪೂರ್ಣ ಬಲಾಧಿಕಾರಗಳಿಂದ ಕೂಡಿ ಕೆಟ್ಟತನವನ್ನು ಕೊನೆಗಾಣಿಸಿ ಶಾಶ್ವತವಾದ ನೀತಿಯನ್ನು ಪ್ರಸ್ತುತ ಪಡಿಸುತ್ತದೆಂಬುದನ್ನು ನೆನಪಿಸಿಕೊಳ್ಳುವದು ನಮಗೆ ಉತ್ತಮ.

ಆ ರಾಜ್ಯವು ಸತ್ಯ, ನೀತಿ ಹಾಗು ಪ್ರೀತಿಯಿಂದ ಕೂಡಿದ ರಾಜ್ಯವಾಗಿದ್ದು, ತನ್ನ ಪ್ರಜೆಗಳೆಲ್ಲರ ಒಳಿತಿಗಾಗಿ ಕಾರ್ಯ ನಿರ್ವಹಿಸುವದು, ಅಲ್ಲದೆ ನಮ್ಮ ಕರ್ತನ ಮೊದಲನೇ ಬರುವಿಕೆಯಲ್ಲಿನ ತನ್ನ ಕಾರ್ಯಭಾರವು ಸತ್ಯದ ವಿಷಯದಲ್ಲಿ ಸಾಕ್ಷಿಯಾಗಿರುವದರ ಮೂಲಕವಾಗಿ ಆ ರಾಜ್ಯಕ್ಕೆ ಅಸ್ತಿವಾರವನ್ನು ಹಾಕುವದಾಗಿತ್ತು. ಆ ಸತ್ಯವೆಂದರೆ ಅದು ದೇವರು ನೀತಿವಂತನೂ ಪ್ರೀತಿಸ್ವರೂಪನೂ ಎರಡೂ ಆಗಿದ್ದು ನೀತಿಸತ್ಯತೆಗಳನ್ನು ಪ್ರೀತಿಸುವವರೆಲ್ಲರನ್ನು ಮರಳಿ ತನ್ನೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಇಚ್ಛಿಸುವನಾಗಿರುವನೆಂಬದು. ನಮ್ಮ ಕರ್ತನಿಗೆ ಸತ್ಯದ ಬಗ್ಗೆ ಇದ್ದ ನಂಬಿಗಸ್ತಿಕೆಯೇ ಆತನಿಗೆ ವಿರೋಧಿಯಿಂದ [ಸೈತಾನಿಂದ] ಮಂಕುಮಾಡಲ್ಪಟ್ಟಿರುವವರ ವಿರೋಧವನ್ನು ತಂದುಕೊಟ್ಟಿತ್ತು, ಆದುದರಿಂದಲೇ ಸತ್ಯಕ್ಕೆ ಸಾಕ್ಷಿ ನೀಡುವ

ಸಲುವಾಗಿ ತಾನು ಲೋಕಕ್ಕೆ ಬಂದಿರುವನೆಂಬ ಆತನ ಕಾರ್ಯಭಾರದ ವಿಷಯದಲ್ಲಿನ ಸಂಕ್ಷಿಪ್ತ ಹೇಳಿಕೆಯಾಗಿತ್ತು. ಸತ್ಯದ ಪರವಾಗಿ ನೀಡಿದ ಸಾಕ್ಷಿಯೇ ಆತನಿಗೆ ಜೀವ ನಷ್ಟವನ್ನುಂಟುಮಾಡಿದ್ದು ಅಲ್ಲದೆ ಸತ್ಯದ ರಕ್ಷಣಾರ್ಥವಾಗಿ ಆತನು ನೀಡಿದ ತನ್ನ ಜೀವವೇ ವಿಮೋಚನಾ ಕ್ರಯವಾಗಿ ರೂಪುಗೊಂಡಿರುವದು. ಇದೇ ರೀತಿಯಲ್ಲಿಯೇ ಕರ್ತನ ಹಿಂಬಾಲಕರೆಲ್ಲರೂ ಸತ್ಯದ ಪರವಾಗಿ ಅಂದರೆ ದೇವರ ಗುಣಲಕ್ಷಣಗಳ ಹಾಗು ಆತನ ಯೋಜನೆಗಳ ಬಗ್ಗೆ, [ಕ್ರಿಸ್ತನ] ಮೊದಲನೇ ಬರುವಿಕೆಯಲ್ಲಿ ಲೋಕದ ವಿಮೋಚನೆಯ ಸಂಬಂಧವಾಗಿ ನೆರವೇರಲಾದ [ಆ ಯೋಜನೆಯ] ಗುಣಲಕ್ಷಣ ಬಗ್ಗೆ, ಎರಡನೇ ಬರುವಿಕೆಯಲ್ಲಿ ಲೋಕವನ್ನು ಪಾಪ ಮತ್ತು ಭ್ರಷ್ಟತೆಯಿಂದ ಬಿಡಿಸುವ ಸಂಬಂಧದಲ್ಲಿ ನೆರವೇರಲಾಗುವ [ದೇವರ] ಆ ಯೋಜನೆಯ ಗುಣಲಕ್ಷಣಗಳ ವಿಷಯವಾಗಿ ಸಾಕ್ಷಿನೀಡುವವರಾಗಬೇಕು. ಸತ್ಯದ ವಿಷಯವಾಗಿ ನೀಡಲಾಗುವ ಇಂಥಾ ಸಾಕ್ಷಿಯೇ ಯೇಸುವಿನ ನಿಜವಾದ ಹಿಂಬಾಲಕರೆಲ್ಲರಿಗೂ ತಮ್ಮನ್ನು ಕ್ರಿಸ್ತ ಯೇಸುವಿನ ಮೂಲಕವಾಗಿ ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳುವದರಲ್ಲಿ ಅವರ ಜೀವನಷ್ಟವನ್ನು ಉಂಟುಮಾಡಬೇಕಿರುವದು. ಜೀವನಾಯಕನೊಡನೆ ಆ ರಾಜ್ಯದಲ್ಲಿ ಸಹಬಾಧ್ಯರಾಗಲು ನಿರೀಕ್ಷಿಸುತ್ತಿರುವಂಥ ಪ್ರತಿಯೊಬ್ಬನು ಸತ್ಯದ ವಿಷಯವಾಗಿ ಸಾಕ್ಷಿಹೇಳುವವನಾಗಲಿ. ಅಂದರೆ [ದೇವರ] ಆ ರಾಜ್ಯದ ಬಗ್ಗೆ ಅದರ ಅಸ್ತಿವಾರ ಹಾಗು ಅಂತಿಮವಾಗಿ [ರೂಪುಗೊಳ್ಳುವ] ಅದರ ಭವ್ಯವಾದ ಕಟ್ಟಡದ ಬಗ್ಗೆ ಒಳ್ಳೆಯ ಅರಿಕೆಯನ್ನು ಮಾಡುವವರಾಗಲಿ.

ಇಂಥಾ ಒಂದು ಮೂಲಪಾಠದ ಬಗ್ಗೆ ಬಹು ಚಿಕ್ಕದಾದ ಒಂದು ಪ್ರಬೋಧನೆಯು ಪಿಲಾತನಿಗೆ ಸಾಕಾಗಿತ್ತು. ತನ್ನ ಹಿಂದಿನ ನಡವಳಿಕೆಯ ದಾಖಲೆಗಳ ಬಗ್ಗೆ ಕೇವಲ ಅನುಕೂಲಕರವಲ್ಲದ ರೀತಿಯಲ್ಲಿ ಪ್ರತಿಫಲಿಸುವಂಥ ದೇವಜ್ಞಾನದ ವಿಷಯವಾಗಿ ಚರ್ಚಿಸುವದರ ಬಗ್ಗೆ ಪಿಲಾತನಿಗೆ ಆಸಕ್ತಿಯಿರಲಿಲ್ಲ. "ಸತ್ಯವೆಂದರೇನು?" ಎಂದು ಕೇಳುವದರ ಮೂಲಕವಾಗಿ ಆತನು ಸಂಭಾಷಣೆಯನ್ನು ಹಠಾತ್ತಾಗಿ ಮುರಿದು ಹಾಕಿದ್ದನು. ಅದು ಆತನು ಹೀಗೆ ಹೇಳಿದಂತ್ತಿತ್ತು – ಸತ್ಯವಂತರು ಯಾರು? ಸಂಪೂರ್ಣವಾದ ನ್ಯಾಯ, ಸಂಪೂರ್ಣವಾದ ಸತ್ಯ, ಸಂಪೂರ್ಣ –ವಾದ ಪ್ರಾಮಾಣಿಕತೆ ಇವುಗಳನ್ನು ಕಂಡುಕೊಳ್ಳುವದೆಲ್ಲಿ? ಉತ್ತರಕ್ಕಾಗಿ ಕಾಯದೆ ಆತನು ಯೇಸುವನ್ನು ಬಿಟ್ಟು ಕಲ್ಲುಹಾಸಿನ ಕಟ್ಟೆಯೆಂಬ ಸ್ಥಳಕ್ಕೆ ಅಲ್ಲಿ ಪ್ರಚಲಿತಗೊಂಡಿದ್ದ ಗೊಂದಲದ ಬಗ್ಗೆ ಸಾಕ್ಷ್ಯಾಧಾರ ನೀಡಲು ಕಾದುಕೊಂಡಿದ್ದ ಸನ್–ಹೆದ್ರೀನ್ ಸಭೆ ಹಾಗೂ ಅವರ ಅನುಯಾಯಿಗಳಾದ ಸೇವಕರ ಹಾಗು ಕಾದುಕೊಂಡಿದ್ದ ಗುಂಪನ್ನು ಸಂಬೋಧಿಸಲು ಹೋಗಿದ್ದನು.

"ಈ ಮನುಷ್ಯನಲ್ಲಿ ನನಗೆ ಯಾವ ಅಪರಾಧವೂ ಕಾಣುವದಿಲ್ಲ" ಎಂದು ಹೇಳುವದರ ಮೂಲಕವಾಗಿ ಪಿಲಾತನು ತನ್ನ ನಿರ್ಧಾರವನ್ನು ಪ್ರಕಟಿಸಿದ್ದನು. ಆನಂತರ ಯೆಹೂದ್ಯರು ತಮ್ಮ ಬಲಿಪಶು ತಪ್ಪಿಸಿಕೊಂಡು ಹೋಗುವದರಲ್ಲಿರುವದಾಗಿ ಅಂಜಿಕೊಂಡು ಅರೋಪವನ್ನು ಪ್ರತಿಪಾದಿಸ ಸಲುವಾಗಿ ಪುನರಾಲೋಚಿಸುವದಕ್ಕೆ ಆರಂಭಿಸಿದ್ದರು. ಯೇಸುವಿನ ಮೇಲೆ ತಾವು ಯಾವ ಆರೋಪವನ್ನು ಅಂದರೆ ದೇವದೂಷಣೆಯನ್ನು ಸುಳ್ಳಾಗಿ ಹೊರಿಸಿ ಆತನನ್ನು ತಪ್ಪಿತಸ್ಥನನ್ನಾಗಿ ಮಾಡಿರುವ–ರೆಂಬುದನ್ನು ಅವರು ತಿಳಿಸಿರಲಿಲ್ಲ; ಯಾಕಂದರೆ ಇದು ರೋಮಾಯರ ಅಧಿಪತಿಯ ದೃಷ್ಟಿಯಲ್ಲಿ ಅಪರಾಧ ವಾಗಿರುತ್ತಿರಲಿಲ್ಲ. ಬದಲಾಗಿ ಅವರು ಮೂರು ಅರೋಪಗಳನ್ನು ಮಾಡಿದ್ದರು, ಅವುಗಳು ಯಾವುವೆಂದರೆ:

(1) ರಾಜದ್ರೊಹ ಅಂದರೆ ಅಲ್ಲಿ ಜನಪ್ರಿಯವಾಗಿರುವ ಆಚಾರ ಪದ್ಧತಿಗಳ ವಿರುದ್ಧವಾಗಿ ಜನರನ್ನು ದಂಗೆ ಏಳುವಂತೆ ಮಾಡುವದು;

(2) ಆತನು ತೆರಿಗೆ ಕೊಡುವದರ ಬಗ್ಗೆ ಮಧ್ಯೆಪ್ರವೇಶಿಸಿ ಜನರಿಗೆ ವಿದೇಶಿ ಅಧಿಕಾರಕ್ಕೆ ತಲೆಗಂದಾಯವನ್ನು ಕೊಡುವದು ಸೂಕ್ತವಲ್ಲವೆಂದು ಜನರಿಗೆ ಬೋಧಿಸುವದು;

(3) ತಾನು ಒಬ್ಬ ಅರಸನಾಗಿದ್ದೇನೆಂದು ಹೇಳಿಕೊಂಡಿರುವದು – ಲೂಕ 23:2

ಆದರೆ ಈಗ ಯೇಸುವಿನ ಮನೆಯು ಮತ್ತು ಆತನ ಪ್ರಮುಖವಾದ ಸೇವಾಕಾರ್ಯವು ಗಲಿಲಾಯದಲ್ಲಿ ಆಗಿರುವದೆಂಬುದನ್ನು ಅರಿತುಕೊಂಡ ಪಿಲಾತನು, ಎಲ್ಲಾ ಸಂಗತಿಯನ್ನು ಗಲಿಲಾಯ ಸೀಮೆಯ ಮೇಲೆ ಅಧಿಕಾರ ಹೊಂದಿದ್ದ ಹೆರೋದನಿಗೆ ವಹಿಸಿಕೊಡುವದರ ಮೂಲಕವಾಗಿ ತಾನು ಇದರಿಂದ ಬಿಡುಗಡೆ ಹೊಂದಲು ಅಲೋಚಿಸಿದ್ದನು. ಹೆರೋದನು ಆಗ ಯೆರೂಸಲೇಮಿನಲ್ಲಿ ಬಹು ಹತ್ತಿರದ ಒಂದು ಸ್ಥಳದಲ್ಲಿದ್ದ ಅರಮನೆಯಲ್ಲಿದ್ದನು. ಈ ಹೆರೋದನೇ ಸ್ನಾನಿಕನಾದ ಯೋಹಾನನ ಮರಣಕ್ಕೆ ಕಾರಣವಾಗಿದ್ದನು. ಲೂಕನು ನಮಗೆ ಹೇಳುವದೇನಂದರೆ (23:8) ಯೇಸುವನ್ನು ನೋಡಲು ಹೆರೋದನು ಬಹು ಸಂತೋಷವುಳ್ಳವನಾಗಿದ್ದನು, ಯಾಕಂದರೆ ಆತನ ವಿಷಯವಾಗಿ ಬಹುವಾಗಿ ಕೇಳಿರಲು ಆತನು ಸಹ ಯೇಸುವಿನಿಂದ ಕೆಲವು ಅದ್ಭುತಕಾರ್ಯಗಳು ನಡೆಯುವಂಥದನ್ನು ನೋಡಲು ಅಪೇಕ್ಷಿಸಿದ್ದನು. ಹೆರೋದನು ನಮ್ಮ ಕರ್ತನನ್ನು ಅನೇಕ ಮಾತುಗಳಿಂದ ಪ್ರಶ್ನೆಮಾಡಿದ್ದನು, ಆದರೆ ಆತನಿಂದ ಯಾವುದೇ ಪ್ರತಿಕ್ರಿಯೆಯನ್ನು ಪಡೆಯಲಿಲ್ಲ. ಮಹಾಯಾಜಕರು ಹಾಗು ಶಾಸ್ತ್ರಿಗಳು ಆಪಾದನೆ ಮಾಡುವದರಲ್ಲಿ ಅವರ ಉಗ್ರತೆಯು ತೀಕ್ಷ್ಣವಾಗುತ್ತಿರಲು, ಅವರು ಹೇಳುತ್ತಿದ್ದ ಯಾವುದನ್ನೂ ಯೇಸುವು ನಿರಾಕರಿಸುತ್ತಿಲ್ಲವೆಂಬುದನ್ನು ಕಂಡ ದೆಸೆಯಿಂದ [ಹೆರೋದನು] ಅವರಿಂದ ಯಾವುದೇ ಸಾಕ್ಷ್ಯಾಧಾರಗಳನ್ನು ಕೇಳಿರಲಿಲ್ಲ.

ಹೆರೋದನು ನಮ್ಮ ಕರ್ತನ ನಡವಳಿಕೆಯಿಂದ ನಿಸ್ಸಂದೇಹವಾಗಿ ಅಸಮಧಾನಪಟ್ಟು ನಿರಾಶನಾಗಿದ್ದುದು ಅಲ್ಲದೆ ತಾನು ನಿರೀಕ್ಷಿಸುತ್ತಿದ್ದಂತೆ ಮನರಂಜನೆ ಹೊಂದಲು ವಿಫಲನಾಗಿ ತಾನು ಮತ್ತು ತನ್ನ ಕಾವಲುಗಾರರನ್ನು ಕೂಡಿಕೊಂಡು ವಿಮೋಚಕನು ಹೇಳಿಕೊಳ್ಳುವ ಅರಸುತನ ಹಾಗು ಘನತೆಯ ಬಗ್ಗೆ ಪರಿಹಾಸ್ಯ ಮಾಡಿ ವಿನೋದಗೊಂಡಿದ್ದರು.

ಆದರೆ ಪಿಲಾತನ ಅಭಿನಂಧನೆಯನ್ನು ಹಿಂದಿರುಗಿಸುವ ಬಯಕೆಯಿಂದ ಹಾಗು ಬಹುಶಃ ಸ್ನಾನಿಕನಾದ ಯೋಹಾನನ ತಲೆ

ಹೊಯಿಸಿದ ಸಂಗತಿಯ ಬಗ್ಗೆ ತೀವ್ರ ಪಶ್ಚಾತ್ತಾಪವುಳ್ಳ ಮನಸ್ಸಾಕ್ಷಿಯ ಕೆಲ ಸ್ಪರ್ಶದಿಂದ ಹೆರೋದನು ನಮ್ಮ ಕರ್ತನನ್ನು ಪಿಲಾತನ ಬಳಿಗೆ ಹಿಂತಿರುಗಿ ಕಳುಹಿಸಿಕೊಡುವದರ ಮೂಲಕವಾಗಿ ತನ್ನ ಹೊಣೆಗಾರಿಕೆಯಿಂದ ಜಾರಿಕೊಂಡಿದ್ದನು. ನಮ್ಮ ಕರ್ತನು ಪಿಲಾತನ ನ್ಯಾಯಪೀಠದ ಸಭಾಂಗಣಕ್ಕೆ ಹಿಂದಿರುಗಿದ ನಂತರವೇ ಪಿಲಾತನು ಯೆಹೂದ್ಯರನ್ನು ಸಮಾಧಾನಪಡಿಸುವ ಒಂದು ಅಂತಿಮ ಪ್ರಯತ್ನವಾಗಿ ಹಾಗು ದೇಶದ ಶಾಂತಿಯನ್ನು ಕಾಪಾಡುವ ಸಲುವಾಗಿ, ಅಲ್ಲದೆ ತಾನು ನಿರ್ದೋಷಿಯೆಂದು ಸ್ಪಷ್ಟವಾಗಿ ಕಂಡುಕೊಂಡಾತನನ್ನು ಬಿಡಿಸುವ ಸಲುವಾಗಿ ಯೇಸುವಿನ ವಿರೋದವಾಗಿ ಎದ್ದಿರುವ ಕೋಲಾಹಲದ ದೆಸೆಯಿಂದ ಆತನಲ್ಲಿ ಯಾವ ತಪ್ಪು ಕಾಣದಿದ್ದರೂ ಸಹ ಆತನನ್ನು ಕೊರಡೆಗಳಿಂದ ಹೊಡಿಸಿ ಬಿಟ್ಟುಬಿಡುವದಾಗಿ ಸ್ಪಷ್ಟವಾಗಿ ಘೋಷಣೆ ಮಾಡಿದ್ದನು. ಕೊರಡೆಯ ಹೊಡೆತ (ಛಡಿ ಏಟು) ಹಾಗು ಆ ಸಂದರ್ಭದಲ್ಲಿ ಉಂಟಾಗುವ ಅವಮಾನದ ಮೂಲಕವಾಗಿ ಆತನ ಮೇಲೆ ಅರೋಪಿಸುವವರ ಹೊಟ್ಟೆಕಿಚ್ಚಿಗೆ ತೃಪ್ತಿಯಾದಂತಾಗಿ ಅವರು ಆತನನ್ನು ಬಿಡುಗಡೆ ಮಾಡುವದಕ್ಕೆ ಸಾಮಾಧಾನದಿಂದ ಒಪ್ಪಿಕೊಳ್ಳುವರೆಂದು ಆತನು ನಿರೀಕ್ಷಿಸಿದ್ದು ಸ್ಪಷ್ಟವಾಗಿತ್ತು. ರೋಮಾಯರ ಸಿಪಾಯಿಗಳು ಒಂದು ಒಳಗಿನ ಕೊಠಡಿಯಲ್ಲಿ ಕೊರಡೆಗಳಿಂದ ಛಡಿ ಏಟನ್ನು ನೀಡಿದ್ದುದು ಸ್ಪಷ್ಟ; ಅಲ್ಲದೆ ಪಿಲಾತನ ಪೂರ್ಣ ಸಹಮತಿಯಿಂದಲೇ ಅವರು ಒಂದು ಶಿಥಿಲವಾದ ರಾಜವಸ್ತ್ರ [ಕೆಂಪು ನಿಲುವಂಗಿ] ಹಾಗು ಮುಳ್ಳಿನ ಕಿರೀಟವನ್ನು ನಮ್ಮ ಕರ್ತನಿಗೆ ತೊಡಿಸಿದ್ದ ಸಂಭವವಿತ್ತು. ಈ ಕೃತ್ಯವು ಮರುಕವಿಲ್ಲದ ಸಿಪಾಯಿಗಳಿಗೆ ಮನರಂಜನೆಯಾಗಿಯೂ ಹಾಗು ನಮ್ಮ ಕರ್ತನಿಗೆ ಅಷ್ಟೇ ಪ್ರಮಾಣದ ನಿಂದನಾಪಮಾನಗಳು ಉಂಟಾದಂಥದ್ದು ಆತನ ಹಿಂಸಕರಿಗೆ ಆತನ ಬಗ್ಗೆ ಕನಿಕರವನ್ನು ಜಾಗೃತಿಗೊಳಿಸದಿದ್ದರೂ ಕನಿಷ್ಠ ಪಕ್ಷದಲ್ಲಿ ಅವರನ್ನು ತೃಪ್ತಿಪಡಿಸಿದ್ದುದು ಸ್ಪಷ್ಟವಾಗಿತ್ತು.

ಈ ಬಗೆಯ ಅಲೋಚನಾ ಪ್ರಕಾರವಾಗಿ ನಡೆದು-ಕೊಂಡವನಾಗಿ ಪಿಲಾತನು ಯೆಹೂದ್ಯರ ಎದುರಿಗೆ ಮತ್ತೆ ಬಂದು ಹಿಂದಿನ ರಾತ್ರಿಯಲ್ಲಿ ಉಂಟಾದ ವಿಚಾರಣಾನುಭವದಿಂದಲೂ, ಅಲ್ಲದೆ ಆಗತಾನೆ ಪಡೆದ ಛಡಿ ಏಟಿನ ನೋವಿನ ಪರಿಣಾಮದಿಂದ ದುರ್ಬಲಗೊಂಡು ನಿರ್ಬಲನಾಗಿಯೂ ತೀವ್ರವಾಗಿ ಬಳಲಿದವನಾಗಿಯೂ ದುಃಖಭಾವದವನಾಗಿಯೂ ಇದ್ದ ನಮ್ಮ ಕರ್ತನನ್ನು ಹೊರಗೆ ತರಲು ಅಪ್ಪಣೆ ಮಾಡಿದ್ದನು. ಆತನ ಮೇಲಿದ್ದ ಮುಳ್ಳಿನ ಕಿರೀಟ ಹಾಗು ತೊಟ್ಟ ಮಲಿನವಾದ ಕೆಂಪುವಲ್ಲಿಯು ನಿಜವಾಗಿಯೂ ಶೋಚನೀಯವಾದ ದೃಶ್ಯವಾಗಿತ್ತು; ಆದರೂ ಆತನ ಪರಿಪೂರ್ಣ ಮನುಷ್ಯತ್ವದ ಪ್ರಸಂಶನೀಯವಾದ [ಮುಖಚರ್ಯೆಯ] ರೂಪರೇಖೆಗಳು ಎದ್ದುಕಾಣುತ್ತಿದ್ದು ಪಿಲಾತನಿಗೆ: "ಇಗೋ, ಈ ಮನುಷ್ಯನು!" (ಯೋಹಾನ 19:5) ಎಂಬ ಮಾತುಗಳನ್ನು ನುಡಿಯಲು ಸಲಹೆ ಮಾಡಿದ್ದುದು ನಿಸ್ಸಂದೇಹವಾಗಿತ್ತು. ಇದು ಶತಮಾನಗಳಿಂದಲೂ ಪ್ರತಿಧ್ವನಿಸುತ್ತಿರುವದು. ಪಿಲಾತನು ಕರ್ತನ ವ್ಯಕ್ತಿತ್ವದಿಂದ ಪ್ರಭಾವಿತ ನಾಗಿದ್ದುದು ಸ್ಪಷ್ಟವಾಗಿತ್ತು; ಹಿಂದೆದೂ ಆತನು ಮಾನವ ಕುಲದ ಅತಿ ಭವ್ಯವಾದ ಒಂದು [ಮನುಷ್ಯ] ಮಾದರಿಯನ್ನು ಕಂಡಿರಲಿಲ್ಲ. ಆತನು ಎಂಥವನಾಗಿದ್ದನೆಂದರೆ ಯಾವ ಜನರೇ ಆಗಲಿ ಆತನನ್ನು ತಮ್ಮ ಅರಸನನ್ನಾಗಿ ಗೌರವಿಸಲು ಹರ್ಷವುಳ್ಳವರಾಗಬಹುದಾ-ಗಿತ್ತು. ಯೇಸುವಿನ ಮೇಲೆ ಆರೋಪಮಾಡಿ ಕೂಗಾಡುತ್ತಿದ್ದ ಜನರ ದೊಡ್ಡ ಗುಂಪಿನ ಮೇಲೆ ಕೆಲವೊಂದು ಪ್ರಭಾವ ಉಂಟಾಗಬಹುದೆಂದು ಆತನು ನಿರೀಕ್ಷಿಸಿದ್ದುದು ಸ್ಪಷ್ಟವಾಗಿತ್ತು. ಆದರೆ ಆತನಿಂದ ಅದು ತಪ್ಪಾಗಿತ್ತು; ಅವರು "ಆತನನ್ನು ಶಿಲುಬೆಗೆ ಹಾಕಿಸು!" "ಆತನನ್ನು ಶಿಲುಬೆಗೆ ಹಾಕಿಸು!" ಎಂದು ಇನ್ನೂ ಹೆಚ್ಚಾಗಿ ಕೂಗಾಡುತ್ತಿದ್ದರು. ಈ ಮಧ್ಯೆ ಪಿಲಾತನ ಹೆಂಡತಿಯು ಈ ವಿಚಾರಣೆಯ ಬಗ್ಗೆ ಕೇಳಿದವಳಾಗಿ ತನ್ನ ಕನಸಿನ ವಿಚಾರವಾಗಿ ಪಿಲಾತನಿಗೆ ಮಾತನ್ನು ಕಳುಹಿಸಿದ್ದಲ್ಲದೆ ಈ ಸತ್ಪುರುಷನಿಗೆ ಹಾನಿ ಮಾಡುವದರಲ್ಲಿ ಆತನು ಯಾವ ಪಾತ್ರವನ್ನು ವಹಿಸಬಾರದೆಂಬ ಬುದ್ಧಿಮಾತನ್ನು ಹೇಳಿಕಳುಹಿಸಿದ್ದಳು. – ಮತ್ತಾಯ 27:19.

ಪಿಲಾತನು ಕೂಡಲೇ ಯೆಹೂದ್ಯರಿಗೆ–ಅದು ನಿಮ್ಮ ಧರ್ಮಶಾಸ್ತ್ರ ನಿಯಮವೇ ಆಗಿದ್ದಲ್ಲಿ ಈತನನ್ನು ನೀವೇ ತೆಗೆದುಕೊಂಡು ಹೋಗಿ ಶಿಲುಬೆಗೆ ಹಾಕಿರಿ ಎಂದು ಹೇಳಿದನು. ರೋಮಾಯರ ದೇಶಾಧಿಪತಿಯು ಈ ವಿಷಯದಲ್ಲಿ ಮಧ್ಯೆಪ್ರವೇಶಿಸುವದಿಲ್ಲವೆಂಬ ಭರವಸೆ ನೀಡಿದ್ದರೂ, ಫರಿಸಾಯರು ಈ ಪ್ರಸ್ತಾವನೆಯನ್ನು ಒಪ್ಪಿಕೊಳ್ಳಲು ಹಿಂಜರಿದಿದ್ದರು; ಯೇಸುವಿನ ಮಿತ್ರರು ಹಾಗು ಆತನಿಂದ ಗುಣಹೊಂದಿ ಆತನ ಬೋಧನೆ ಕೇಳಿಕೊಂಡಿರುವವರೆಲ್ಲರೂ ಆತನ ಸಹಾಯಕ್ಕೆ ಬಂದು ತಮ್ಮನ್ನು ತಲೆ ಎತ್ತದಂತೆ ಅದುಮಿಹಾಕದೆ ಇರಲೆಂದು ಭಾವಿಸಿ ಶಿಲುಬೆಗೆ ಹಾಕುವದನ್ನು ರೋಮಾಯರ ದೇಶಾಧಿಪತಿ ಹಾಗು ಆತನ ಸಿಪಾಯಿಗಳ ಕೈಯಿಂದ ಮಾಡಿಸಲು ಬಹುವಾಗಿ ಇಷ್ಟಪಟ್ಟಿದ್ದರು; ಹೀಗಾಗಿ ಅವರು ಪಿಲಾತನಿಗೆ ತಮ್ಮ ನಿಯಮದ ಪ್ರಕಾರ ಅವನು ಸಾಯಬೇಕು, ಯಾಕಂದರೆ ಅವನು ತನ್ನನ್ನು ದೇವರ ಮಗನನ್ನಾಗಿ ಮಾಡಿಕೊಂಡಿರುವನೆಂದು ಉತ್ತರಿಸಿದ್ದರು. ಅವರು ತಮ್ಮ ನಿಲುವನ್ನು ಎತ್ತಿಹಿಡಿಯುವ ಸಲುವಾಗಿ ಸತ್ಯಾಂಶವನ್ನು ತಿರುಚಿಹಾಕಿದ್ದರು, ಯಾಕಂದರೆ ದೇವರ ಮಗನೆಂದು ಹೇಳಿಕೊಳ್ಳುವವನಿಗೆ ಧರ್ಮಶಾಸ್ತ್ರ ನಿಯಮದಲ್ಲಿ ಮರಣವನ್ನು ಶಿಕ್ಷೆಯನ್ನಾಗಿ ವಿಧಿಸಿರಲಿಲ್ಲ. ನಮ್ಮ ಕರ್ತನು ತನ್ನನ್ನು ತಂದೆಯೆಂದು ಹೇಳಿಕೊಂಡಿದ್ದಲ್ಲಿ ಆತನು ದೇವದೂಷಣೆಯ ನಿಮಿತ್ತವಾಗಿ ಮರಣದಂಡನೆಯ ನಿಯಮ ವಿಧಿಗಳಿಗೆ ಒಳಗಾಗುತ್ತಿದ್ದನು, ಆದರೆ ಇದಕ್ಕೆ ಅಂತಹ ಯಾವ ಶಿಕ್ಷೆಯೂ ಇರಲಿಲ್ಲ, ಇಲ್ಲವೇ ಆತನು ಹೇಳಿಕೊಂಡಂತೆ – ತನ್ನನ್ನು ತಾನು ದೇವರ ಮಗನೆಂದು ಕರೆದುಕೊಳ್ಳುವದು ದೇವದೂಷಣೆ-ಯಾಗುತ್ತಿರಲಿಲ್ಲ.

ಪಿಲಾತನು ಇದನ್ನು ಕೇಳಿದಾಗ ಬಹು ಭೀತಿಯುಳ್ಳವ ನಾಗಿದ್ದನು. ಯೇಸುವಿನ ಗುಣಲಕ್ಷಣಗಳು ಸ್ವತಃ ಪ್ರಭಾವ ಬೀರುವಂತವುಗಳಾಗಿದ್ದವು, ಆದರೆ ಇಂಥಾ ಗುಣಲಕ್ಷಣಗಳನ್ನು ಹೊಂದಿದವನು ದೇವರೊಂದಿಗೆ ಸಂಬಂಧವಿರುವದಾಗಿ ಹೇಳಿಕೊಂಡಲ್ಲಿ ಖಂಡಿತವಾಗಿಯೂ ಭಯಪಡುವದಕ್ಕೆ ಅಲ್ಲಿ ಕೆಲವು ಕಾರಣಗಳಿದ್ದವು. ಪಿಲಾತನು ಆಗಲೂ ಯೆಹೂದ್ಯರ ಕೂಗಾಟಕ್ಕೆ ಧೈರ್ಯಗೆಡದೆ ನಮ್ಮ ಕರ್ತನನ್ನು ಬಿಡುಗಡೆ

ಮಾಡಲು ಯತ್ನಿಸಿದ್ದನು. ಆಗ ಯೆಹೂದ್ಯರು ಕೊನೆಯ ಪ್ರಯತ್ನವಾಗಿ ಪಿಲಾತನಿಗೆ ಬೆದರಿಕೆಯನ್ನು ಒಡ್ಡಿದವರಾಗಿ ಆತನಿಗೆ ಹೀಗೆ ಕೂಗಿ ಹೇಳಿದ್ದರು "ನೀನು ಇವನನ್ನು ಬಿಡಿಸಿದರೆ ನೀನು ಕೈಸರನಿಗೆ ಮಿತ್ರನಲ್ಲ; ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವವನು ಕೈಸರನಿಗೆ ವಿರೋಧಿ..." ಹೀಗೆ ಅವರು ತಿಳಿಸಿದ್ದೇನಂದರೆ: ಪಿಲಾತನು ತಮ್ಮ ಸಂಚನ್ನು ನಿಷ್ಫಲಗೊಳಿಸಿ ತಮ್ಮ ಬೇಡಿಕೆಯಂತೆ ಯೇಸುವನ್ನು ಶಿಲುಬೆಗೆ ಹಾಕಲು ನಿರಾಕರಿಸಿದ್ದಲ್ಲಿ ತಾನು ಕೈಸರನಿಗೆ ಮತ್ತು ಆತನ ಸಾಮ್ರಾಜ್ಯಕ್ಕೆ ಒಬ್ಬ ಶತೃವೂ, ಒಬ್ಬ ದಂಗೆಕೋರ ವ್ಯಕ್ತಿಯ ಪ್ರೋತ್ಸಾಹಕನೂ, ಆ ಸಾಮ್ರಾಜ್ಯದಲ್ಲಿ ಎದುರಾಳಿ ರಾಜರನ್ನು ಪೋಷಿಸುವವನೂ ಆಗಿರುವನೆಂಬದೇ. ಈ ವಾದವನ್ನು ಎದುರಿಸಿ ನಿಲ್ಲಲು ಪಿಲಾತನಿಗೆ ಸಾಧ್ಯವಾಗಿರಲಿಲ್ಲ, ಅಲ್ಲದೆ ಜನ ಸಮೂಹದವರ ಸಮಕ್ಷಮದಲ್ಲಿ ತನ್ನ ಕೈಯನ್ನು ತೊಳೆದುಕೊಂಡು ತನ್ನ ಈ ಕೃತ್ಯದ ಮೂಲಕ ಹಾಗು ಮಾತಿನ ಸಹಿತವಾಗಿ ಹೀಗೆ ಹೇಳಿದ್ದನು, "ಈ ಪುರುಷನನ್ನು ಕೊಲ್ಲಿಸಿದ್ದಕ್ಕೆ ನಾನು ಸೇರಿದವನಲ್ಲ, ನೀವೇ ನೋಡಿಕೊಳ್ಳಿರಿ..." ಆಗ ಯೆಹೂದ್ಯರು–"ಅವನನ್ನು ಕೊಲ್ಲಿಸಿದ್ದಕ್ಕೆ ನಾವು ನಮ್ಮ ಮಕ್ಕಳು ಉತ್ತರ ಕೊಡುತ್ತೇವೆ..." ಹೀಗೆ ಕೂಗಿ ಹೇಳಿದ್ದಾಗ ಪಿಲಾತನು ಆತನನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿಕೊಟ್ಟನು. – ಮತ್ತಾಯ 27:24,25.

ನಾವು ಪಿಲಾತನನ್ನು ಖಂಡನೆ ಮಾಡುವವರೊಡನೆ ಸೇರಿದವರಲ್ಲ; ಆತನು ಆ ಸಾಮ್ರಾಜ್ಯದ ಸೇವಕನಾಗಿದ್ದು ತನ್ನ ಆಧಿಪತ್ಯದಲ್ಲಿ ಶಾಂತಿಯನ್ನು ಕಾಪಾಡಲು ಪ್ರತಿಯೊಂದು ಸೂಕ್ತ ಕ್ರಮವನ್ನು ತೆಗದುಕೊಳ್ಳುವ ಜವಾಬ್ದಾರಿಯನ್ನು ಹೊಂದಿದವ–ನಾಗಿದ್ದನು, ಅಲ್ಲದೆ ಯೇಸುವನ್ನು ಬಿಡಿಸಲು ಕೇವಲ ಒಂದು ಸ್ಪಷ್ಟ ಜ್ಞಾನಪ್ರಕಾಶವನ್ನು ಪಡೆದು, ಪೂರ್ಣ ಪ್ರತಿಷ್ಠಿತನಾದ ಭಕ್ತನಿಗೆ ಮಾತ್ರ ಪಿಲಾತನಿಗಿಂತಲೂ ಹೆಚ್ಚಿಗೆಯಾದುದನ್ನು ಮಾಡಲು ಸಾಧ್ಯವಿತ್ತು. ನಮ್ಮ ಕರ್ತನು ಯಾವ ಅರ್ಥದಲ್ಲೂ ಪಿಲಾತನಲ್ಲಿ ಪಾಪಪ್ರಜ್ಞೆಯುಂಟೆಂದು ಹೇಳಿರಲಿಲ್ಲ. ಆ ಹೊಣೆಗಾರಿಕೆಯನ್ನು ಯೆಹೂದ್ಯರು ಹೊತ್ತುಕೊಂಡಿದ್ದರು, ಮತ್ತು ಖಂಡಿತವಾಗಿಯೂ ಅದರ ಶಿಕ್ಷೆಯು ಅವರ ಮೇಲೂ ಹಾಗು ಅವರ ಮಕ್ಕಳ ಮೇಲೂ ಕಳೆದ ಹದಿನೆಂಟು ಶತಮಾನಗಳಿಂದಲೂ ಬಲವಾಗಿ ನೆಲೆಯೂರಿದ್ದು, ವ್ಯಥೆಯೆಂಬ ಅವರ ಪಾತ್ರೆಯು ಇನ್ನೂ ಪೂರ್ಣವಾಗಿ ತುಂಬಿರುವದಿಲ್ಲ. ಈಗ ಸಮೀಪಿಸುತ್ತಿರುವ ಮಹಾ ಸಂಕಟದ ಕಾಲಗಳಲ್ಲಿ "ಯಾಕೋಬನ ಇಕ್ಕಟ್ಟಿನ ದಿನಗಳು" ಮುಖ್ಯವಲ್ಲದೆ ಇರುವದಿಲ್ಲ; ಅವರ ಹಾಗೂ ನರಳುತ್ತಿರುವ ಜಗತ್ತಿನ ಇತರರೆಲ್ಲರ ಬಿಡುಗಡೆಯು ಸಮೀಪವಾಗಿರುವದಕ್ಕೆ ನಾವು ದೇವರಿಗೆ ಅವರ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುವವ–ರಾಗಿದ್ದೇವೆ. ತಾವು ಇರಿದವನನ್ನು ದಿಟ್ಟಿಸಿ ನೋಡಿ ಆತನಿಗಾಗಿ ಗೋಳಾಡುವಾಗ ಆ ಕಣ್ಣೀರಿನಿಂದ ಕೂಡಿದ ಕಷ್ಟಸಂಕಟವು ನಿರೀಕ್ಷೆಯಿಲ್ಲದಂಥಾಗಿರುವದಿಲ್ಲ ಎಂಬ ಆಲೋಚನೆಯು ಎಷ್ಟೋ ಆಶೀರ್ವಾದಕರವಾದದ್ದು; ಯಾಕಂದರೆ ದೇವರು ಅವರಿಗೆ– "ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು; ಇದ್ದೊಬ್ಬ ಮಗನನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು. ಚೊಚ್ಚಲಮಗನ ವಿಯೋಗ–ಕ್ಕೋಸ್ಕರ ದುಃಖಪಟ್ಟಂತೆ ಅವನಿಗಾಗಿ ದುಃಖಿಸುವರು." ಎಂದು ಹೇಳಿರುವನು –ಜೆಕರ್ಯ 12:10

*****

# ಪಿಲಾತನ ಎದುರಿನಲ್ಲಿ ಯೇಸು

**ರೀಪ್ರಿಂಟ್ಸ್ ಪುಟ 1809**

## ಮಾರ್ಕ 15:1–15; – ಮತ್ತಾಯ 27:1–30; – ಲೂಕ 23:1–25 ಯೋಹಾನ 18:28–40; 19:1–16

**"ಆದರೆ ಯೇಸು ಇನ್ನೇನೂ ಉತ್ತರ ಕೊಡಲಿಲ್ಲ. ಅದನ್ನು ನೋಡಿ ಪಿಲಾತನು ಆಶ್ಚರ್ಯಪಟ್ಟನು."**

ಹಿಂದಿನ ಪಾಠದಲ್ಲಿ ವರ್ಣಿಸಿರುವ ಪ್ರಕಾರ ಸೆನ್–ಹೆದ್ರಿನ್ ಸಭೆಯು ಅನೌಪಚಾರಿಕ ಕೂಟ ನಡೆದಂದಿನಿಂದ ಸೂರ್ಯೋದಯ ದವರೆಗೂ ಕಾನೂನಾತ್ಮಕವಾದ ಒಂದು ತೀರ್ಪನ್ನು ತೆಗೆದುಕೊಳ್ಳಲು ಸಾಧ್ಯವಾಗದ ಕಾರಣ, ಈ ಬೆಳಗ್ಗೆ ನಡೆದ ಸಭಾಕೂಟ ಹಾಗು ಸಮಾಲೋಚನೆಗಳು ಕೇವಲ ಹಿಂದೆ ತೆಗೆದುಕೊಂಡ ನಿರ್ಣಯಗಳಿಗೆ ಅನುಮೋದನೆ ನೀಡುವ ಸಲುವಾಗಿತ್ತು. ಆನಂತರ ಅವರು ಯೇಸುವನ್ನು ಕಟ್ಟಿಸಿ ಪಿಲಾತನಿಗೆ ಒಪ್ಪಿಸಿದ್ದರು, ತಮ್ಮ ಉದ್ದೇಶವು ಪೂರ್ಣಗೊಳ್ಳುವದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸಮಸ್ತ ಜನಸಮೂಹವು ಆತನನಿಗೆ ಬೆಂಗಾವಲಾಗಿ ಹೋಗಿತ್ತು. – ಲೂಕ 23:1

ವಚನ 2–5: ದೇವದೂಷಣೆಯ ಆರೋಪವನ್ನು ಆಯ್ಕೆ ಮಾಡುವದರಲ್ಲಿ ಸೆನ್–ಹೆದ್ರಿನ್ ಸಭೆಯು ದುಷ್ಟತನವು ನಿಪುಣತೆಯನ್ನು ಪಡೆದಿತ್ತು; ಯಾಕಂದರೆ ಆ ಸಭೆಯವರು ಜನರ ಮುಂದೆ ಧರ್ಮಶಾಸ್ತ್ರ ನಿಯಮಗಳ ವಿಷಯದಲ್ಲಿ ಬಹು ಅಭಿಮಾನವುಳ್ಳವರಂತೆ ಕಾಣಿಸಿಕೊಳ್ಳುವ ಬಯಕೆ–ಯುಳ್ಳವರಾಗಿದ್ದಾಗ್ಯೂ ಆತನ [ಯೇಸುವಿನ] ಮೇಲೆ ಸಂಪೂರ್ಣವಾಗಿ ಒಂದು ಭಿನ್ನವಾದ ಹಾಗು ಅಷ್ಟೇ ಸುಳ್ಳಾದ ಆರೋಪಗಳ ಕಂತೆಯನ್ನೇ ಪಿಲಾತನ ಎದುರಿನಲ್ಲಿ ತಂದು ಒಡ್ಡಿದ್ದರು. ರೋಮಾಯರ ಅಧಿಪತಿಯಾದ ಪಿಲಾತನಿಗೆ ಅವರ ಧಾರ್ಮಿಕ ಅಭಿಪ್ರಾಯಗಳ ಬಗ್ಗೆ ಕಾಳಜಿಯಿಲ್ಲದಿದ್ದುದು ಸ್ಪಷ್ಟವಾಗಿತ್ತು. ಪಿಲಾತನ ಎದುರಿನಲ್ಲಿ ಮಾಡಿದ ಅರೋಪವು

ದೇಶದ್ರೋಹದ ವಿಷಯವನ್ನು ಒಳಗೊಂಡಿದ್ದು ಅದು ಬಹುಶಃ ಆಳ್ವಿಕೆಮಾಡುತ್ತಿದ್ದ ರೋಮಾಯರಲ್ಲಿ ಕೋಪಕ್ರೋಧವನ್ನು ಉಂಟುಮಾಡುವಂಥ ಸಂಭವವನ್ನು ಹೆಚ್ಚುಮಾಡಿತ್ತು. ಅವರು ಆತನ ಮೇಲೆ ದಂಗೆಬಂಡಾಯಗಳನ್ನು ಎಬ್ಬಿಸುವಂಥ, ತಲೆಗಂದಾಯವನ್ನು ಕೊಡದಂತೆ ಬಹಿಷ್ಕರಿಸುವಂಥ, ಯೆಹೂದ್ಯರ ಅರಸನೆಂಬ ಪದವಿಯನ್ನು ಕಲ್ಪಿಸಿಕೊಂಡಿರುವಂಥ, ಈ ರೀತಿಯಲ್ಲಿ ಕೈಸರನಿಗೂ ಮತ್ತು ಆತನ ರೋಮಾಯರ ಆಡಳಿತಾಧಿಕಾರಕ್ಕೂ ವಿರೋಧವಾಗಿ ಸ್ಪಷ್ಟವಾದ ಒಳಸಂಚನ್ನು ಮಾಡಿದಂಥ ಆರೋಪಗಳನ್ನು ಮಾಡಿದ್ದರು.

ಎರಡನೆಯ ಆರೋಪವು ಸಂಪೂರ್ಣವಾಗಿ ಸುಳ್ಳಾಗಿರಲು (ಮತ್ತಾಯ 22:21) ಇತರ ಎರಡು ಆರೋಪಗಳು ಸತ್ಯವಾದವುಗಳಂತೆ ಕಾಣುವಂತಿದ್ದು ಇವುಗಳೊಂದಿಗೆ ಅಸಂಖ್ಯಾತವಾದ ಸಣ್ಣಪುಟ್ಟ ವೈಯುಕ್ತಿಕವಾದ ಆರೋಪಗಳನ್ನು ಸೇರಿಸಲಾಗಿತ್ತು. ಆದರೆ ಇವುಗಳಲ್ಲಿ ಯಾವುದಕ್ಕೂ ನಮ್ಮ ಕರ್ತನು ಉತ್ತರಿಸಿರಲಿಲ್ಲ, ಹೀಗಾಗಿ ಇಂಥಾ ಅಪಾಯ ಸ್ಥಿತಿಗಳ ನಡುವೆ ತನ್ನ ಸ್ವರಕ್ಷಣೆಗಾಗಿ [ಉತ್ತರಿಸಲು] ಆತನು ಯಾವ ಪ್ರಯತ್ನವನ್ನೂ ಮಾಡದಿದ್ದುದು ಪಿಲಾತನಿಗೆ ಆಶ್ಚರ್ಯವನ್ನುಂಟು ಮಾಡಿತ್ತು.

ವಚನ 6–14. ತಮ್ಮ ಅಧಿಕಾರಿಗಳಿಂದ ಪ್ರಚೋದಿತರಾಗಿ ಆತನ ಮರಣಕ್ಕಾಗಿ ಪಟ್ಟುಹಿಡಿದು ಗಟ್ಟಿಯಾಗಿ ಕೂಗಾಡುತ್ತಿದ್ದ ಜನಸಮೂಹದ ಎದುರಿನಲ್ಲಿ ನಿರ್ದೋಷಿಯಾದ ತನ್ನ ಸೆರೆಯವನನ್ನು ಹೊಟ್ಟೆಕಿಚ್ಚಿನಿಂದ ತನಗೆ ಒಪ್ಪಿಸಿಕೊಟ್ಟಿರುವ–ರೆಂಬುದನ್ನು ಕಂಡುಕೊಂಡ ಪಿಲಾತನು ಅವನನ್ನು ಬಿಡುಗಡೆ ಮಾಡ ಸಲುವಾಗಿ ಮಾಡಿದ ಅನೇಕ ಪ್ರಯತ್ನಗಳು ನಿಷ್ಫಲವಾಗಿದ್ದವು; ಆ ಮರಣವು ಕ್ರೂರ ವಿಧಾನದಿಂದ ಕೂಡಿದ ಅತಿ ಅವಮಾನಕರವಾದ ಶಿಲುಬೆಯ ಮರಣವಾಗಿದ್ದು [ಜನರ] ನೆನಪಿನಲ್ಲಿ ಆತನು ನಿರಂತರವೂ ಅಪಖ್ಯಾತಿಯಿಂದ ಆವರಿಸಲ್ಪಟ್ಟಿರುವಂತೆ ಮಾಡಲಾಗಿತ್ತು.

ವಚನ 15: ಆನಂತರ ಪಿಲಾತನು ನೈತಿಕತೆಗಿಂತಲೂ ಹೆಚ್ಚಾಗಿ [ರೋಮಾಯರ] ಕಾರ್ಯನೀತಿಯ ಪರಿಗಣನೆಯಿಂದ ಪ್ರಭಾವಿತನಾಗಿ ಜನರನ್ನು ತೃಪ್ತಿಪಡಿಸುವ ಇಚ್ಛೆಯುಳ್ಳವನಾಗಿ ಯೇಸುವನ್ನು ಕೊರಡೆಗಳಿಂದ ಹೊಡಿಸಿ ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿದ್ದನಾದರೂ ಅದೇ ಸಮಯದಲ್ಲಿ ತನ್ನ ಸೆರೆಯವನ ಮುಗ್ಧತೆಯನ್ನು ಪ್ರತಿಭಟಿಸುವವನಾಗಿ ಈ ನಿರಪರಾಧಿಯಾದ ಸೆರೆಯವನನ್ನು ಹೀಗೆ ಅವರಿಗೆ ಒಪ್ಪಿಸಿದುದರಲ್ಲಿ ತಾನು ನಿರ್ದೋಷಿಯೆಂದು ಸೂಚಿಸುವ ಗುರುತಾಗಿ ತನ್ನ ಕೈಗಳನ್ನು ತೊಳಕೊಂಡಿದ್ದನು. ತನ್ನನ್ನು ಸರಕಾರಕ್ಕೆ ಶತೃವಾಗಿ ಮಾಡಿಕೊಂಡು ಕೈಸರನ ವಿಶ್ವಾಸಕ್ಕೆ ದ್ರೋಹ ಬಗೆದವನಾಗಿ, ಸರಕಾರಕ್ಕೆ ವಿರೋಧವಾಗಿ ಒಳಸಂಚನ್ನು ಮಾಡಿ ದಂಗೆ ಎಬ್ಬಿಸುವವನಾಗಿರುವನೆಂದು ಕೈಸರನಿಗೆ ವರದಿಮಾಡುವದಾಗಿ ಜನರ ಗುಂಪಿನಿಂದ ತನಗೆ ಬೆದರಿಕೆ ಉಂಟಾಗುವವರೆಗೂ ಯೇಸುವನ್ನು ಕಾಪಾಡುವ ಪ್ರಯತ್ನವನ್ನು ಪಿಲಾತನು ಬಿಟ್ಟಿರಲಿಲ್ಲ. –ಯೋಹಾನ 19:12–16; ಮತ್ತಾಯ 27:24,25

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಶುಕ್ರವಾರ ಮಧ್ಯಾಹ್ನ 3 ಗಂಟೆ | ಯೆರೂಸಲೇಮಿನ ಗೊಲ್ಗೊಥಾ | ಶಿಲುಬೆಯಲ್ಲಿ ಯೇಸುವಿನ ಮರಣ ಹಾಗೂ ಇದರ ಜೊತೆಯಲ್ಲಿ ನಡೆದ ಘಟನೆಗಳು | 27:31–56 | 15:20–41 | 23:25–49 | 19:16–30 |
| ನಿಸ್ಸಾನ್ 14 | ಯೆರೂಸಲೇಮ್ | ಯೇಸುವಿನ ದೇಹವನ್ನು ಶಿಲುಬೆಯಿಂದ ಇಳಿಸಿ ಹೂಣಿಟ್ಟದ್ದು | 27:57–61 | 15:42–47 | 23:50–56 | 19:31–42 |
| ನಿಸ್ಸಾನ್ 15 | ಯೆರೂಸಲೇಮ್ | ಮಹಾಯಾಜಕರು ಮತ್ತು ಫರಿಸಾಯರು ಸಮಾಧಿಗೆ ಕಾವಲುಗಾರರನ್ನು ಪಡಕೊಂಡದ್ದು | 27:62–66 | –– | –– | –– |

## ಮತ್ತಾಯ 27:31–66

ಹೀಗೆ ಆತನನ್ನು ಪರಿಹಾಸ್ಯ ಮಾಡಿದ ಮೇಲೆ ಆ ಒಲ್ಲಿಯನ್ನು ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವದಕ್ಕೆ ತೆಗೆದುಕೊಂಡು ಹೋದರು.

ಹೊರಕ್ಕೆ ಹೋಗುತ್ತಿರುವಾಗ ಕುರೇನೆ ಪಟ್ಟಣದ ಸಿಮೋನನೆಂಬವನನ್ನು ಕಂಡು ಅವನನ್ನು ಆತನ ಶಿಲುಬೆಯನ್ನು ಹೊರುವದಕ್ಕೆ ಬಿಟ್ಟೀಹಿಡಿದರು. ಮತ್ತು ಗೊಲ್ಗೊಥಾ ಅಂದರೆ ಕಪಾಲಸ್ಥಳ ಎಂಬ ಸ್ಥಾನಕ್ಕೆ ಬಂದಾಗ ಆತನಿಗೆ ಕಹಿಬೆರೆಸಿದ ದ್ರಾಕ್ಷಾರಸವನ್ನು ಕುಡಿಯುವದಕ್ಕೆ ಕೊಟ್ಟರು; ಆತನು ಅದನ್ನು ರುಚಿನೋಡಿ ಕುಡಿಯಲೊಲ್ಲದೆ ಇದ್ದನು. ಬಳಿಕ ಅವರು ಆತನನ್ನು ಶಿಲುಬೆಗೆ ಹಾಕಿ ಆತನ ಬಟ್ಟೆಗಳಿಗಾಗಿ ಚೀಟುಹಾಕಿ ಪಾಲು ಮಾಡಿಕೊಂಡರು; ಮತ್ತು ಅಲ್ಲಿ ಕೂತುಕೊಂಡು ಆತನನ್ನು ಕಾಯುತ್ತಾ ಇದ್ದರು. ಇದಲ್ಲದೆ ಆತನ ಮೇಲೆ ಹೊರಿಸಿದ ಅಪರಾಧವನ್ನು ಬರೆದು ಆತನ ತಲೆಯ ಮೇಲ್ಗಡೆ ಹಚ್ಚಿದರು;

ಅದೇನಂದರೆ–ಇವನು ಯೇಸು, ಯೆಹೂದ್ಯರ ಅರಸನು ಎಂಬದೇ. ಆಗ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ ಆತನ ಸಂಗಡ ಶಿಲುಬೆಗೆ ಹಾಕಿದರು. ಅಲ್ಲಿ ಹಾದುಹೋಗುವವರು ತಲೇ ಆಡಿಸಿ–ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸುತ್ತಿದ್ದರು. ಅದೇ ಮೇರೆಗೆ ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ–ಅವನು ಮತ್ತೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು. ಅವನು ಇಸ್ರಾಯೇಲಿನ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದು ಬರಲಿ, ಇಳಿದು ಬಂದರೆ ಅವನಲ್ಲಿ ನಂಬಿಕೆ ಇಟ್ಟೇವು. ದೇವರಲ್ಲಿ ಭರವಸವಿಟ್ಟಿದ್ದಾನೆ, ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಾನಲ್ಲಾ ಎಂದು ಹಾಸ್ಯದಿಂದ ಮಾತಾಡುತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಕಳ್ಳರೂ ಸಹ ಆತನನ್ನು ಅದೇ ಪ್ರಕಾರ ನಿಂದಿಸುತ್ತಿದ್ದರು.

ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಮೂರು ಗಂಟೆಯ ವರೆಗೆ ಆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು. ಸುಮಾರು ಮೂರು ಗಂಟೆಗೆ ಯೇಸು–ಏಲೀ, ಏಲೀ, ಲಮಾ ಸಬಕ್ತಾನೀ, ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾ ಧ್ವನಿಯಿಂದ ಕೂಗಿದನು. ಅಲ್ಲಿ ನಿಂತಿದ್ದವರಲ್ಲಿ ಕೆಲವರು ಅದನ್ನು ಕೇಳಿ–ಇವನು ಎಲೀಯನನ್ನು ಕರೆಯುತ್ತಾನೆ ಅಂದರು. ಕೂಡಲೆ ಅವರಲ್ಲಿ ಒಬ್ಬನು ಓಡಿಹೋಗಿ ಸ್ಪಂಜನ್ನು ತಂದು ಹುಳಿರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತನಿಗೆ ಕುಡಿಯುವದಕ್ಕೆ ಕೊಟ್ಟನು. ಮಿಕ್ಕಾದವರು–ಬಿಡು, ಎಲೀಯನು ಬಂದು ಅವನನ್ನು ರಕ್ಷಿಸುವನೇನೋ ನೋಡೋಣ ಅಂದರು. ಯೇಸು ತಿರಿಗಿ ಮಹಾ ಧ್ವನಿಯಿಂದ ಕೂಗಿ ಪ್ರಾಣಬಿಟ್ಟನು. ಆಗ ಇಗೋ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು; ಭೂಮಿಯು ಅದರಿತು; ಬಂಡೆಗಳು ಸೀಳಿಹೋದವು; ಸಮಾಧಿಗಳು ತೆರೆದವು; ನಿದ್ದೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು; ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಕ್ಕೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು. ಶತಾಧಿಪತಿಯು ಮತ್ತು ಅವರ ಸಂಗಡ ಯೇಸುವನ್ನು ಕಾಯುತ್ತಿದ್ದವರು ಭೂಕಂಪವನ್ನೂ ನಡೆದ ಸಂಗತಿಗಳನ್ನೂ ನೋಡಿ ಬಹಳ ಹೆದರಿಕೊಂಡು–ನಿಜವಾಗಿ ಈತನು ದೇವಕುಮಾರನಾಗಿದ್ದನು ಅಂದರು. ಇದಲ್ಲದೆ ಅನೇಕ ಸ್ತ್ರೀಯರು ಅಲ್ಲಿ ಇದ್ದು ದೂರದಿಂದ ನೋಡುತ್ತಿದ್ದರು. ಇವರು ಯೇಸುವಿನ ಸೇವೆ ಮಾಡುತ್ತಾ ಗಲಿಲಾಯದಿಂದ ಆತನ ಹಿಂದೆ ಬಂದಿದ್ದರು. ಇವರಲ್ಲಿ ಮಗ್ದಲದ ಮರಿಯಳೂ ಯಾಕೋಬ ಯೋಸೇಯರ ತಾಯಿಯಾದ ಮರಿಯಳೂ ಜೆಬೆದಾಯನ ಮಕ್ಕಳ ತಾಯಿಯೂ ಇದ್ದರು.

ಸಂಜೆಯಾದಾಗ ಅರಿಮಥಾಯದ ಯೋಸೇಫನೆಂಬ ಒಬ್ಬ ಧನವಂತನೂ ಬಂದನು; ಇವನೂ ಸಹ ಯೇಸುವಿನ ಶಿಷ್ಯನಾಗಿದ್ದನು. ಇವನು ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು ತನಗೆ ಕೊಡಿಸಬೇಕೆಂದು ಬೇಡಿಕೊಳ್ಳಲಾಗಿ ಪಿಲಾತನು ಅದನ್ನು ಕೊಡಬೇಕೆಂದು ಅಪ್ಪಣೆಮಾಡಿದನು. ಯೋಸೇಫನು ಆ ದೇಹವನ್ನು ತೆಗೆದುಕೊಂಡು ಅದನ್ನು ಶುದ್ಧವಾದ ನಾರುಮಡಿಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ ತನ್ನ ಹೊಸ ಸಮಾಧಿಯಲ್ಲಿ ಇಟ್ಟು ಸಮಾಧಿಯ ಬಾಗಿಲಿಗೆ ದೊಡ್ಡ ಕಲ್ಲನ್ನು ಉರುಳಿಸಿ ಹೋದನು. ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ ಅಲ್ಲಿ ಸಮಾಧಿಗೆ ಎದುರಾಗಿ ಕೂತಿದ್ದರು.

ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ ಕೂಡಿಬಂದು–ದೊರೆಯೇ, ಆ ಮೋಸಗಾರನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು; ಆದಕಾರಣ ಮೂರನೆಯ ದಿನದ ತನಕ ಸಮಾಧಿಯನ್ನು ಭದ್ರಮಾಡಿ ಕಾಯುವದಕ್ಕೆ ಅಪ್ಪಣೆ ಕೊಡಬೇಕು; ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೇಡಾದೀತು ಅಂದರು. ಪಿಲಾತನು ಅವರಿಗೆ–ಕಾವಲುಗಾರರನ್ನು ತಕ್ಕೊಳ್ಳಿ; ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ ಎಂದು ಹೇಳಲಾಗಿ ಅವರು ಹೊರಟು ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರೆಹಾಕಿ ಸಮಾಧಿಯನ್ನು ಭದ್ರಮಾಡಿದರು.

## ಮಾರ್ಕ 15:20–47

ಹೀಗೆ ಆತನನ್ನು ಪರಿಹಾಸ್ಯಮಾಡಿದ ಮೇಲೆ ಆ ಒಲ್ಲಿಯನ್ನು ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವದಕ್ಕೆ ತೆಗೆದುಕೊಂಡು ಹೋದರು.

ಆಗ ಹೊಲದಿಂದ ಹೊರಟು ಆ ಮಾರ್ಗವಾಗಿ ಬರುತ್ತಿದ್ದ ಒಬ್ಬನನ್ನು ಆತನ ಶಿಲುಬೆಯನ್ನು ಹೊರುವದಕ್ಕೆ ಬಿಟ್ಟೀಹಿಡಿದರು. ಇವನು ಯಾರಂದರೆ ಅಲೆಕ್ಸಾಂಡ್ರ ರೂಫ ಎಂಬುವರ ತಂದೆಯಾದ ಕುರೇನೆ ಪಟ್ಟಣದ ಸೀಮೋನನು. ಬಳಿಕ ಆತನನ್ನು ಗೊಲ್ಗೊಥಾ ಎಂಬ ಸ್ಥಳಕ್ಕೆ ಕರಕೊಂಡು ಬಂದರು. ಗೊಲ್ಗೊಥಾ ಅಂದರೆ ಕಪಾಲಸ್ಥಳ. ಅಲ್ಲಿ ಆತನಿಗೆ ರಕ್ತಬೋಳ ಬೆರೆಸಿದ ದ್ರಾಕ್ಷಾರಸವನ್ನು ಕೊಟ್ಟರು; ಆದರೆ ಆತನು ತೆಗೆದುಕೊಳ್ಳಲಿಲ್ಲ. ಅವರು ಆತನನ್ನು ಶಿಲುಬೆಗೆ ಹಾಕಿ ಆತನ ಬಟ್ಟೆಗಳಲ್ಲಿ ಯಾವ ಯಾವದು ಯಾರಾರಿಗೆ ಆಗಬೇಕೆಂದು ಚೀಟುಹಾಕಿ ಪಾಲು ಮಾಡಿಕೊಂಡರು. ಆತನನ್ನು ಶಿಲುಬೆಗೆ ಹಾಕುವಾಗ ಹೊತ್ತಾರೆ ಒಂಭತ್ತು ಗಂಟೆಯಾಗಿತ್ತು. ಇದಲ್ಲದೆ ಅವರು ಹೊರಸಿದ ಅಪರಾಧವನ್ನು ಸೂಚಿಸುವ ಒಂದು ವಿಳಾಸವು ಶಿಲುಬೆಯ ಮೇಲೆ ಬರೆದಿತ್ತು; ಅದೇನಂದರೆ–ಯೆಹೂದ್ಯರ ಅರಸನು ಎಂಬದೇ. ಅದಲ್ಲದೆ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಆತನ ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ ಆತನ ಸಂಗಡ ಶಿಲುಬೆಗೆ ಹಾಕಿದರು. ಅಲ್ಲಿ ಹಾದುಹೋಗುವವರು ತಲೇ ಆಡಿಸಿ ಆಹಾ, ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ಶಿಲುಬೆಯಿಂದ ಇಳಿದು ನಿನ್ನನ್ನು ರಕ್ಷಿಸಿಕೋ ಎಂದು

ಆತನನ್ನು ಹಂಗಿಸುತ್ತಿದ್ದರು. ಅದೇ ಮೇರೆಗೆ ಮಹಾಯಾಜಕರೂ ಶಾಸ್ತ್ರಿಗಳೂ–ಅವನು ಮತ್ತೊಬ್ಬರನ್ನು ರಕ್ಷಿಸಿದನು; ತನ್ನನ್ನು ರಕ್ಷಿಸಿಕೊಳ್ಳಲಾರನು. ಇಸ್ರಾಯೇಲ್ಯರ ಅರಸನಾದ ಈ ಕ್ರಿಸ್ತನು ಈಗ ಶಿಲುಬೆಯಿಂದ ಇಳಿದು ಬರಲಿ; ಇಳಿದು ಬಂದರೆ ನಾವು ನೋಡಿ ನಂಬೇವು ಎಂದು ತಮ್ಮತಮ್ಮೊಳಗೆ ಹಾಸ್ಯದಿಂದ ಮಾತಾಡುತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟವರು ಸಹ ಆತನನ್ನು ನಿಂದಿಸುತ್ತಿದ್ದರು.

ಮಧ್ಯಾಹ್ನವಾದಾಗ ದೇಶದ ಮೇಲೆಲ್ಲಾ ಕತ್ತಲೆ ಕವಿದು ಸಾಯಂಕಾಲ ಮೂರು ಗಂಟೆಯ ತನಕ ಇತ್ತು. ಮೂರು ಗಂಟೆಗೆ ಯೇಸು–ಎಲೋಹೀ, ಎಲೋಹೀ, ಲಮಾ ಸಬಕ್ತಾನೀ ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದನು. ಹತ್ತಿರ ನಿಂತಿದ್ದವರಲ್ಲಿ ಕೆಲವರು–ಎಲೀಯನನ್ನು ಕರೆಯುತ್ತಾನೇ ಕಾಣಿರೋ ಅಂದರು. ಆಗ ಒಬ್ಬನು ಓಡಿಹೋಗಿ ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತನಿಗೆ ಕುಡಿಯುವದಕ್ಕೆ ಕೊಟ್ಟು–ಬಿಡಿರಿ, ಎಲೀಯನು ಇವನನ್ನು ಇಳಿಸುವದಕ್ಕೆ ಬರುವನೇನೋ ನೋಡೋಣ ಅಂದನು. ಆದರೆ ಯೇಸು ಮಹಾಧ್ವನಿಯನ್ನು ಗೈದು ಪ್ರಾಣಬಿಟ್ಟನು. ಆಗ ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ವರೆಗೂ ಹರಿದು ಎರಡು ಭಾಗವಾಯಿತು. ಆತನು ಹೀಗೆ ಪ್ರಾಣಬಿಟ್ಟದ್ದನ್ನು ಆತನ ಹತ್ತಿರ ಎದುರಿಗೆ ನಿಂತಿದ್ದ ಶತಾಧಿಪತಿಯು ನೋಡಿ–ನಿಜವಾಗಿ ಈ ಮನುಷ್ಯನು ದೇವ ಕುಮಾರನಾಗಿದ್ದನು ಅಂದನು. ಇದಲ್ಲದೆ ಅಲ್ಲಿ ಸ್ತ್ರೀಯರು ಸಹ ದೂರದಿಂದ ನೋಡುತ್ತಿದ್ದರು; ಇವರಲ್ಲಿ ಆತನು ಗಲಿಲಾಯದಲ್ಲಿದ್ದಾಗ ಆತನನ್ನು ಹಿಂಬಾಲಿಸಿ ಸೇವೆಮಾಡುತ್ತಿದ್ದವರಾದ ಮಗ್ದಲದ ಮರಿಯ, ಚಿಕ್ಕ ಯಾಕೋಬನ ಮತ್ತು ಯೋಸೆಯ ತಾಯಿಯಾದ ಮರಿಯ ಸಲೋಮೆ ಎಂಬುವರೂ ಆತನ ಸಂಗಡ ಯೆರೂಸಲೇಮಿಗೆ ಬಂದಿದ್ದ ಇನ್ನೂ ಅನೇಕ ಸ್ತ್ರೀಯರೂ ಇದ್ದರು.

ಆಗಲೇ ಸಂಜೆಯಾಗಿತ್ತು; ಮತ್ತು ಆ ದಿನವು ಸೌರಣೆಯ ದಿನ, ಅಂದರೆ ಸಬ್ಬತ್ ದಿನದ ಹಿಂದಿನ ದಿನ ಆಗಿತ್ತು. ಹೀಗಿರಲಾಗಿ ಅರಿಮಥಾಯದ ಯೋಸೇಫನೆಂಬವನು ಬಂದು ಧೈರ್ಯದಿಂದ ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು ತನಗೆ ಕೊಡಿಸಬೇಕೆಂದು ಬೇಡಿಕೊಂಡನು. ಇವನು ಹಿರೀಸಭೆಯವರಲ್ಲಿ ಘನವಂತನೂ, ದೇವರ ರಾಜ್ಯವನ್ನು ಎದುರು ನೋಡುತ್ತಿದ್ದವನು. ಪಿಲಾತನು–ಅವನು ಇಷ್ಟು ಬೇಗ ಸತ್ತನೋ ಎಂದು ಆಶ್ಚರ್ಯಪಟ್ಟು ಶತಾಧಿಪತಿಯನ್ನು ಕರೆಸಿ–ಅವನು ಆಗಲೇ ಸತ್ತನೋ ಎಂದು ಅವನನ್ನು ಕೇಳಿ ಆತನು ಸತ್ತದ್ದನ್ನು ಶತಾಧಿಪತಿಯಿಂದ ತಿಳಿದು ಶವವನ್ನು ಯೋಸೇಫನಿಗೆ ಕೊಡಿಸಿದನು. ಯೋಸೇಫನು ನಾರುಮಡಿಯನ್ನು ಕೊಂಡುತಂದು ಆತನನ್ನು ಇಳಿಸಿ ನಾರುಮಡಿಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ ಸಮಾಧಿಯಲ್ಲಿಟ್ಟು ಸಮಾಧಿಯ ಬಾಗಿಲಿಗೆ ಕಲ್ಲನ್ನು ಉರುಳಿಸಿದನು. ಮಗ್ದಲದ ಮರಿಯಳೂ ಯೋಸೆಯ ತಾಯಿ ಮರಿಯಳೂ ಆತನನ್ನಿಡುವ ಸ್ಥಳವನ್ನು ನೋಡಿದರು.

# ಲೂಕ 23:26–56

ಅವರು ಆತನನ್ನು ತೆಗೆದುಕೊಂಡು ಹೋಗುತ್ತಿರುವಾಗ ಹೊಲದಿಂದ ಬರುತ್ತಿದ್ದ ಕುರೇನೇ ಪಟ್ಟಣದ ಸೀಮೋನ–ನೆಂಬುವನನ್ನು ಹಿಡಿದು ಶಿಲುಬೆಯನ್ನು ಅವನ ಮೇಲೆ ಇಟ್ಟು ಯೇಸುವಿನ ಹಿಂದೆ ಹೊತ್ತುಕೊಂಡು ಬರುವ ಹಾಗೆ ಮಾಡಿದರು.

ಜನರೂ ಸ್ತ್ರೀಯರೂ ದೊಡ್ಡ ಗುಂಪಾಗಿ ಆತನ ಹಿಂದೆ ಬಂದರು. ಆ ಸ್ತ್ರೀಯರು ಎದೆಬಡುಕೊಳ್ಳುತ್ತಾ ಆತನ ವಿಷಯದಲ್ಲಿ ಗೋಳಾಡುತ್ತಾ ಇದ್ದರು. ಯೇಸು ಅವರ ಕಡೆಗೆ ತಿರಿಗಿಕೊಂಡು–ಯೆರೂಸಲೇಮಿನ ಸ್ತ್ರೀಯರೇ, ನನಗೋಸ್ಕರ ಅಳಬೇಡಿರಿ, ನಿಮಗೋಸ್ಕರವೂ ನಿಮ್ಮ ಮಕ್ಕಳಿಗೋಸ್ಕರವೂ ಅಳಿರಿ. ಯಾಕಂದರೆ ಬಂಜೆಯರೂ ಬಸುರಾಗದವರೂ ಮೊಲೆಕುಡಿಸ–ದವರೂ ಧನ್ಯರು ಎಂದು ಜನರು ಹೇಳುವ ದಿವಸಗಳು ಬರುತ್ತವೆ. ಆ ಕಾಲದಲ್ಲಿ ಜನರು–ಬೆಟ್ಟಗಳೇ, ನಮ್ಮ ಮೇಲೆ ಬೀಳಿರಿ; ಗುಡ್ಡಗಳೇ, ನಮ್ಮನ್ನು ಮುಚ್ಚಿಕೊಳ್ಳಿರಿ ಅನ್ನುವರು. ಮರ ಹಸಿಯಾಗಿರುವಾಗ ಇಷ್ಟೆಲ್ಲಾ ಮಾಡಿದರೆ ಮರ ಒಣಗಿರುವಾಗ ಏನಾಗಬಹುದು? ಅಂದನು.

ಆತನ ಸಂಗಡ ಕೊಲ್ಲುವದಕ್ಕಾಗಿ ದುಷ್ಕರ್ಮಿಗಳಾಗಿದ್ದ ಬೇರೆ ಇಬ್ಬರನ್ನು ತೆಗೆದುಕೊಂಡು ಹೋದರು. ಅವರು ಕಪಾಲವೆಂಬ ಸ್ಥಳಕ್ಕೆ ಬಂದಾಗ ಅಲ್ಲಿ ಆತನನ್ನೂ ಆ ದುಷ್ಕರ್ಮಿಗಳನ್ನೂ ಶಿಲುಬೆಗೆ ಹಾಕಿದರು. ಒಬ್ಬನನ್ನು ಆತನ ಬಲಗಡೆಯಲ್ಲಿ ಒಬ್ಬನ್ನು ಆತನ ಎಡಗಡೆಯಲ್ಲಿ ಹಾಕಿದರು. ಆಗ ಯೇಸು–ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು ಅಂದನು. ಆ ಮೇಲೆ ಆತನ ಬಟ್ಟೆಗಳನ್ನು ಪಾಲುಮಾಡಿ ಚೀಟುಹಾಕಿದರು. ಜನರು ನೋಡುತ್ತಾ ನಿಂತರು. ಇದಲ್ಲದೆ ಅಧಿಕಾರಿಗಳೂ ಹಾಸ್ಯಮಾಡಿ–ಅವನು ಮತ್ತೊಬ್ಬರನ್ನು ರಕ್ಷಿಸಿದನು; ಅವನು ದೇವರಾರಿಸಿಕೊಂಡ ಕ್ರಿಸ್ತನು ಆಗಿದ್ದರೆ ತನ್ನನ್ನು ತಾನೇ ರಕ್ಷಿಸಿಕೊಳ್ಳಲಿ ಅಂದರು. ಸಿಪಾಯಿಗಳೂ ಆತನನ್ನು ಹಾಸ್ಯಮಾಡಿದರು; ಅವರು ಆತನ ಹತ್ತಿರ ಬಂದು ಉಳಿಮದ್ಯವನ್ನು ತೋರಿಸಿ–ನೀನು ಯೆಹೂದ್ಯರ ಅರಸನಾಗಿದ್ದರೆ ನಿನ್ನನ್ನು ರಕ್ಷಿಸಿಕೋ ಅಂದರು. ಇದಲ್ಲದೆ ಆತನ ಮೇಲ್ಗಡೆಯಲ್ಲಿ–ಇವನು ಯೆಹೂದ್ಯರ ಅರಸನು ಎಂಬದಾಗಿ ಒಂದು ವಿಳಾಸವಿತ್ತು.

ತೂಗುಹಾಕಿದ್ದ ಆ ದುಷ್ಕರ್ಮಿಗಳಲ್ಲಿ ಒಬ್ಬನು ಆತನನ್ನು ದೂಷಿಸಿ–ನೀನು ಬರಬೇಕಾದ ಕ್ರಿಸ್ತನಲ್ಲವೇ, ನಿನ್ನನ್ನು ರಕ್ಷಿಸಿಕೋ, ನಮ್ಮನ್ನೂ ರಕ್ಷಿಸು ಎಂದು ಹೇಳಿದ್ದಕ್ಕೆ ಎರಡನೆಯವನು ಅವನನ್ನು ಗದರಿಸಿ–ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವದಿಲ್ಲವೋ? ನಾವಂತೂ ನ್ಯಾಯವಾಗಿ ದಂಡನೆ ಯಲ್ಲಿದ್ದೇವೆ, ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ ಎಂದು ಹೇಳಿ–ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ ಅಂದನು. ಅದಕ್ಕೆ ಯೇಸು–ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ

ಹೇಳುತ್ತೇನೆ ಎಂದು ಉತ್ತರ ಕೊಟ್ಟನು. ಇಷ್ಟರಲ್ಲಿ ಹೆಚ್ಚು ಕಡಿಮೆ ಮಧ್ಯಾಹ್ನವಾಯಿತು. ಆಗಲಿಂದ ಸೂರ್ಯನು ಕಾಂತಿಗುಂದಿ ಮೂರು ಗಂಟೆಯ ತನಕ ಆ ದೇಶದ ಮೇಲೆಲ್ಲಾ ಕತ್ತಲೆಕವಿಯಿತು; ಇದಲ್ಲದೆ ದೇವಾಲಯದ ತೆರೆಯು ನಡುವೆ ಹರಿದು ಹೋಯಿತು. ಆ ಮೇಲೆ ಯೇಸು–ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ ಎಂದು ಮಹಾಧ್ವನಿಯಿಂದ ಕೂಗಿದನು; ಇದನ್ನು ಹೇಳಿದ ಮೇಲೆ ಪ್ರಾಣಬಿಟ್ಟನು. ಶತಾಧಿಪತಿಯು ನಡೆದ ಸಂಗತಿಯನ್ನು ನೋಡಿ–ಈ ಮನುಷ್ಯನು ಸತ್ಪುರುಷನೇ ನಿಜ ಎಂದು ದೇವರನ್ನು ಕೊಂಡಾಡಿದನು. ಈ ನೋಟಕ್ಕಾಗಿ ಕೂಡಿಬಂದಿದ್ದ ಜನರೆಲ್ಲರೂ ನಡೆದ ಸಂಗತಿಯನ್ನು ನೋಡಿ ಎದೆಬಡುಕೊಳ್ಳುತ್ತಾ ಹಿಂತಿರುಗಿ ಹೋದರು. ಇದಲ್ಲದೆ ಆತನ ಪರಿಚಿತಿಯವರೆಲ್ಲರೂ ಗಲಿಲಾಯದಿಂದ ಆತನ ಹಿಂದೆ ಬಂದಿದ್ದ ಸ್ತ್ರೀಯರೂ ದೂರದಲ್ಲಿ ನಿಂತು ಈ ಸಂಗತಿಗಳನ್ನು ನೋಡುತ್ತಿದ್ದರು.

ಅರಿಮಥಾಯವೆಂಬ ಯೆಹೂದ್ಯರದೊಂದು ಪಟ್ಟಣದ ಒಬ್ಬ ಮನುಷ್ಯನಿದ್ದನು; ಅವನ ಹೆಸರು ಯೋಸೇಫನು. ಅವನು ಹಿರೀಸಭೆಯವನು, ಉತ್ತಮನು, ಸತ್ಪುರುಷನು, ದೇವರ ರಾಜ್ಯವನ್ನು ಎದುರು ನೋಡುತ್ತಿದ್ದವನು; ಅವನು ಹಿರೀಸಭೆಯವರ ಆಲೋಚನೆಗೂ ಕೃತ್ಯಕ್ಕೂ ಸಮ್ಮತಿಪಟ್ಟಿರಲಿಲ್ಲ. ಅವನು ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು ತನಗೆ ಕೊಡಿಸಬೇಕೆಂದು ಬೇಡಿಕೊಂಡು ಅದನ್ನು ಇಳಿಸಿ ನಾರುಮಡಿ ಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ ಸಮಾಧಿಯಲ್ಲಿ ಇಟ್ಟನು. ಅದರಲ್ಲಿ ಅದುವರೆಗೆ ಯಾರನ್ನೂ ಮಲಗಿಸಿರಲಿಲ್ಲ. ಆ ದಿನವು ಸೌರಣೆಯ ದಿನವಾಗಿತ್ತು; ಮತ್ತು ಸಬ್ಬತ್ ದಿನ ಪ್ರಾರಂಭವಾಗು–ವದಕ್ಕೆ ಸ್ವಲ್ಪ ಹೊತ್ತು ಮಾತ್ರ ಇತ್ತು. ಹೀಗಿರುವಲ್ಲಿ ಗಲಿಲಾಯದಿಂದ ಆತನ ಸಂಗಡ ಬಂದಿದ್ದ ಸ್ತ್ರೀಯರು ಜೊತೆಯಲ್ಲಿ ಹಿಂದೆಯೇ ಹೋಗಿ ಆ ಸಮಾಧಿಯನ್ನೂ ಆತನ ದೇಹವನ್ನಿಟ್ಟ ರೀತಿಯನ್ನೂ ನೋಡಿ ಹಿಂತಿರುಗಿ ಬಂದು ಪರಿಮಳದ್ರವ್ಯಗಳನ್ನೂ ಸುಗಂಧ ತೈಲವನ್ನೂ ಸಿದ್ಧಮಾಡಿಕೊಂಡರು.

## ಯೋಹಾನ 19:16–42

ಆಗ ಅವನು ಆತನನ್ನು ಶಿಲುಬೆಗೆ ಹಾಕಿಸುವದಕ್ಕೆ ಅವರ ವಶಕ್ಕೆ ಕೊಟ್ಟನು. ಅವರು ಯೇಸುವನ್ನು ತೆಗೆದುಕೊಂಡು ಹೋದರು; ಆತನು ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು ಕಪಾಲಸ್ಥಳವೆಂಬ ಸ್ಥಾನಕ್ಕೆ ಹೋದನು. ಇದಕ್ಕೆ ಇಬ್ರೀಯ ಮಾತಿನಲ್ಲಿ ಗೊಲ್ಗೊಥಾ ಎಂದು ಹೆಸರು. ಅಲ್ಲಿ ಆತನನ್ನೂ ಆತನ ಸಂಗಡ ಇನ್ನಿಬ್ಬರನ್ನೂ ಶಿಲುಬೆಗೆ ಹಾಕಿದರು; ಅವರಲ್ಲಿ ಆ ಕಡೆ ಒಬ್ಬನನ್ನೂ ಈ ಕಡೆ ಒಬ್ಬನನ್ನೂ ನಡುವೆ ಯೇಸುವನ್ನು ಇಟ್ಟರು.

ಇದಲ್ಲದೆ ಪಿಲಾತನು ಒಂದು ವಿಳಾಸವನ್ನು ಬರೆದು ಆತನ ಶಿಲುಬೆಯ ಮೇಲ್ಗಡೆ ಹಚ್ಚಿಸಿದನು. ಅದೇನಂದರೆ–ನಜರೇತಿನ ಯೇಸು, ಯೆಹೂದ್ಯರ ಅರಸನು ಎಂಬದೇ. ಅವರು ಯೇಸುವನ್ನು ಶಿಲುಬೆಗೆ ಹಾಕಿದ ಸ್ಥಳವು ಪಟ್ಟಣಕ್ಕೆ ಹತ್ತಿರವಾಗಿದ್ದದರಿಂದ ಯೆಹೂದ್ಯರಲ್ಲಿ ಬಹಳ ಮಂದಿ ಆ ವಿಳಾಸವನ್ನು ಓದಿದರು. ಅದು ಇಬ್ರೀಯ ಲಾತೀನ್ ಗ್ರೀಕ್ ಭಾಷೆಗಳಲ್ಲಿ ಬರೆದಿತ್ತು. ಹೀಗಿರಲಾಗಿ ಯೆಹೂದ್ಯರ ಮಹಾಯಾಜಕರು ಪಿಲಾತನಿಗೆ–ಯೆಹೂದ್ಯರ ಅರಸನು ಎಂದು ಬರೆಯದೆ ನಾನು ಯೆಹೂದ್ಯರ ಅರಸನೆಂದು ಹೇಳಿದವನು ಎಂಬುದಾಗಿ ಬರೆಯಬೇಕಂತ ಹೇಳಿದರು. ಅದಕ್ಕೆ ಪಿಲಾತನು–ನಾನು ಬರೆದದ್ದು ಬರೆದಾಯಿತು ಅಂದನು.

ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ ಅವರು ಆತನ ಮೇಲು ಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲುಮಾಡಿ ಒಬ್ಬೊಬ್ಬ ಸಿಪಾಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳಅಂಗಿಯನ್ನು ಸಹ ತಕ್ಕೊಂಡರು; ಆದರೆ ಆ ಅಂಗಿಗೆ ಹೊಲಿಗೆ ಇರಲಿಲ್ಲ. ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಅದನ್ನು ನೋಡಿ ಅವರು–ನಾವು ಇದನ್ನು ಹರಿಯಬಾರದು; ಚೀಟುಹಾಕಿ ಇದು ಯಾರಿಗೆ ಬರುವದೋ ನೋಡೋಣ ಎಂದು ಮಾತಾಡಿ ಕೊಂಡರು. ಇದರಿಂದ–ನನ್ನ ಬಟ್ಟೆಗಳನ್ನು ತಮ್ಮಲ್ಲಿ ಪಾಲುಮಾಡಿಕೊಂಡರು, ನನ್ನ ಅಂಗಿಗೋಸ್ಕರ ಚೀಟುಹಾಕಿದರು ಎಂಬ ಶಾಸ್ತ್ರದ ಮಾತು ನೆರವೇರಿತು. ಸಿಪಾಯಿಗಳು ಇದನ್ನೆಲ್ಲಾ ಮಾಡಿದರು.

ಯೇಸುವಿನ ಶಿಲುಬೆಯ ಬಳಿಯಲ್ಲಿ ಆತನ ತಾಯಿಯೂ ಆತನ ತಾಯಿಯ ತಂಗಿಯೂ ಕ್ಲೋಫನ ಹೆಂಡತಿಯಾದ ಮರಿಯಳೂ ಮಗ್ದಲದ ಮರಿಯಳೂ ನಿಂತಿದ್ದರು. ಯೇಸು ತನ್ನ ತಾಯಿಯನ್ನು ಹತ್ತರದಲ್ಲಿ ನಿಂತಿದ್ದ ತನ್ನ ಪ್ರೀತಿಯ ಶಿಷ್ಯನನ್ನು ನೋಡಿ ತಾಯಿಗೆ–ಅಮ್ಮಾ, ಇಗೋ ನಿನ್ನ ಮಗನು ಎಂದು ಹೇಳಿದನು. ತರುವಾಯ ಆ ಶಿಷ್ಯನಿಗೆ–ಇಗೋ ನಿನ್ನ ತಾಯಿ ಎಂದು ಹೇಳಿದನು. ಆ ಹೊತ್ತಿನಿಂದ ಆ ಶಿಷ್ಯನು ಆಕೆಯನ್ನು ತನ್ನ ಮನೆಯಲ್ಲೇ ಇರಿಸಿಕೊಂಡನು.

ಇದಾದ ಮೇಲೆ ಯೇಸು ಈಗ ಎಲ್ಲಾ ತೀರಿತೆಂದು ತಿಳಿದು ಶಾಸ್ತ್ರದ ಮಾತು ನೆರವೇರುವಂತೆ–ನನಗೆ ನೀರಡಿಕೆ ಆಗಿದೆ ಅಂದನು. ಅಲ್ಲಿ ಹುಳಿರಸ ತುಂಬಿದ ಗಡಿಗೆ ಇಟ್ಟಿರಲಾಗಿ ಅವರು ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಈಸೋಪ್ ಗಿಡದ ಕೋಲಿಗೆ ಸಿಕ್ಕಿಸಿ ಆತನ ಬಾಯಿಗೆ ಮುಟ್ಟಿಸಿದರು. ಯೇಸು ಆ ಹುಳಿರಸವನ್ನು ತಕ್ಕೊಂಡ ಮೇಲೆ–ತೀರಿತು ಎಂದು ಹೇಳಿ ತಲೆಬಾಗಿಸಿ ಆತ್ಮವನ್ನು ಒಪ್ಪಿಸಿಕೊಟ್ಟನು.

ಆ ಹೊತ್ತು ಸೌರಣೆಯ ದಿವಸವಾಗಿದ್ದದರಿಂದ ಯೆಹೂದ್ಯರು ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯ ಮೇಲೆ ಇರಬಾರದೆಂದು ಪಿಲಾತನನ್ನು–ಅವರ ಕಾಲುಗಳನ್ನು ಮುರಿಸಿ ಅವರನ್ನು ತೆಗೆಸಿಹಾಕಬೇಕೆಂಬದಾಗಿ ಕೇಳಿಕೊಂಡರು; ಯಾಕೆಂದರೆ ಆ ಸಬ್ಬತ್ ದಿನವು ಬಹು ವಿಶೇಷವಾದದ್ದು. ಆದುದರಿಂದ ಸಿಪಾಯಿಗಳು ಬಂದು ಮೊದಲನೆಯವನ ಕಾಲುಗಳನ್ನು ಅವನ ಜೊತೆಯಲ್ಲಿ ಶಿಲುಬೆಗೆ ಹಾಕಿಸಿಕೊಂಡಿದ್ದ ಮತ್ತೊಬ್ಬನ ಕಾಲುಗಳನ್ನು ಮುರಿದನು. ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವದನ್ನೂ ಅವರು ಕಂಡು

ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು; ತಿವಿದಕೂಡಲೇ ರಕ್ತವೂ ನೀರೂ ಹೊರಟಿತು. ಅದನ್ನು ಕಂಡವನೇ ಸಾಕ್ಷಿಹೇಳಿದ್ದಾನೆ, ಅವನ ಸಾಕ್ಷಿ ಸತ್ಯವೇ; ತಾನು ಹೇಳುವದು ಸತ್ಯವೆಂದು ಅವನು ಬಲ್ಲನು; ನೀವು ಸಹ ನಂಬಬೇಕೆಂದು ಇದನ್ನು ಹೇಳಿದ್ದಾನೆ. ಯಾಕಂದರೆ–ಆತನ ಒಂದು ಎಲುಬನ್ನಾದರೂ ಮುರಿಯಕೂಡದು ಎಂದು ಶಾಸ್ತ್ರದಲ್ಲಿ ಬರೆದ ಮಾತು ನೆರವೇರುವಂತೆ ಇದಾಯಿತು; ಮತ್ತು–ಅವರು ತಾವು ಇರಿದವನನ್ನು ದಿಟ್ಟಿಸಿನೋಡುವರು ಎಂದು ಶಾಸ್ತ್ರದಲ್ಲಿ ಮತ್ತೊಂದು ಮಾತು ಹೇಳಿ ಅದೆ.

ಇದಾದ ಮೇಲೆ ಯೆಹೂದ್ಯರ ಭಯದಿಂದ ಗುಪ್ತವಾಗಿ ಯೇಸುವಿನ ಶಿಷ್ಯನಾಗಿದ್ದ ಅರಿಮಥಾಯದ ಯೋಸೇಫನು–ಯೇಸುವಿನ ದೇಹವನ್ನು ತೆಗೆದುಕೊಂಡು ಹೋಗುವದಕ್ಕೆ ಅಪ್ಪಣೆಯಾಗಬೇಕೆಂದು ಪಿಲಾತನನ್ನು ಬೇಡಿಕೊಂಡನು. ಪಿಲಾತನು ಅಪ್ಪಣೆಕೊಡಲಾಗಿ ಅವನು ಬಂದು ಆತನ ದೇಹವನ್ನು ತೆಗೆದುಕೊಂಡು ಹೋದನು. ಇದಲ್ಲದೆ ಮೊದಲು ಒಂದು ಸಾರಿ ರಾತ್ರಿವೇಳೆಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ನಿಕೋದೇಮನು ಸಹ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಅಲ್ಲಿಗೆ ಬಂದನು. ಅವರು ಯೇಸುವಿನ ದೇಹವನ್ನು ತಕ್ಕೊಂಡು ಯೆಹೂದ್ಯರಲ್ಲಿ ಹೂಣಿಡುವ ಪದ್ಧತಿಯ ಪ್ರಕಾರ ಅದನ್ನು ಸುಗಂಧ ದ್ರವ್ಯಗಳ ಸಹಿತವಾಗಿ ನಾರುಬಟ್ಟೆಯಲ್ಲಿ ಸುತ್ತಿದರು. ಆತನನ್ನು ಶಿಲುಬೆಗೆ ಹಾಕಿದ ಸ್ಥಳದಲ್ಲಿ ಒಂದು ತೋಟವಿತ್ತು; ಆ ತೋಟದಲ್ಲಿ ಒಂದು ಹೊಸ ಸಮಾಧಿಯಿತ್ತು; ಅದರಲ್ಲಿ ಅದುವರೆಗೆ ಯಾರನ್ನೂ ಇಟ್ಟಿದ್ದಿಲ್ಲ. ಆ ದಿನವೂ ಯೆಹೂದ್ಯರ ಸೌರಣೆಯ ದಿನವಾದುದರಿಂದ ಆ ಸಮಾಧಿ ಹತ್ತರವಿರುತ್ತದೆಂದು ಯೇಸುವನ್ನು ಅಲ್ಲೇ ಇಟ್ಟರು.

*****

# ಕ್ರಿಸ್ತನು ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು

**ರೀಪ್ರಿಂಟ್ಸ್ ಪುಟ 1815**

## ಮಾರ್ಕ 15:22–37; ಮತ್ತಾಯ 27:31–66;
## ಲೂಕ 23:26–56; ಯೋಹಾನ 19:16–42

**"ನಾವು ಪಾಪಿಗಳಾಗಿದ್ದಾಗಲೇ ಕ್ರಿಸ್ತನು ನಮಗಾಗಿ ಸತ್ತನು" – ರೋಮಾ 5:8**

**ವಚನ 22.** ಶಿಲುಬೆಗೆ ಹಾಕಿಸುವ ತೀರ್ಪನ್ನು ಪಡಕೊಂಡಂಥ ಉದ್ರಿಕ್ತ ಜನರ ಗುಂಪು ಪೈಶಾಚಿಕ ಉತ್ಸಾಹದಿಂದ ಪ್ರಭಾವಿತರಾಗಿ ಸೆರೆಯವನನ್ನು ಆತುರದಿಂದ ವಧ್ಯಸ್ಥಾನಕ್ಕೆ ಒಯ್ದಿದ್ದರು; ಅಲ್ಲಿಗೆ ಶುಕ್ರವಾರ ಸುಮಾರು ಒಂಭತ್ತು ಗಂಟೆಗೆ ತಲುಪಿದ್ದರು. ಆತನು ಕಳೆದಂಥ ರಾತ್ರಿಯು ಎಂಥಾ ಭೀಕರವಾ – ದದ್ದು! ತನ್ನ ಶಿಷ್ಯರೊಂದಿಗೆ ಕಳೆದ ಕಡೆಯ [ಪಸ್ಕ] ಭೋಜನದ ದುಃಖಕರವಾದ ಸನ್ನಿವೇಶದಿಂದ ಆರಂಭವಾಗಿ ಗೆತ್ಸೇಮನೆ ತೋಟದಲ್ಲಿ ಉಂಟಾದ ಆತನ ಮನೋವ್ಯಥೆ, ಅನ್ನನ ಬಳಿಗೆ ನಡೆದ ಅವಸರದ ಪ್ರಯಾಣ, ಆನಂತರ ಕಾಯಫನ ಬಳಿಗೆ, ಪಿಲಾತನ ಬಳಿಗೆ, ಹೆರೋಧನ ಬಳಿಗೆ, ಮತ್ತೆ ಹಿಂದಿರುಗಿ ಪಿಲಾತನ ಬಳಿಗೆ ಇವುಗಳನ್ನು ನೆನಪಿಗೆ ತಂದುಕೊಳ್ಳಿರಿ; ರಾತ್ರಿಯೆಲ್ಲಾ ಆತನು ಎಷ್ಟೋ ಘೋರ ಅವಮಾನದಿಂದ ನಡೆಸಲ್ಪಟ್ಟಿದ್ದನು; ಅಂದರೆ ಕುಚೋದ್ಯಕ್ಕೊಳಗಾಗಿ, ಗುದ್ದುತಿಂದು, ಮುಖದ ಮೇಲೆ ಉಗುಳಿಸಿಕೊಂಡು, ದೂಷಣೆಗೊಳಗಾಗಿ ಅಪಹಾಸ್ಯಹೊಂದಿ ಸುಳ್ಳು ಆರೋಪವನ್ನು ಹೊತ್ತವನಾಗಿ ಮತ್ತು ಕಡೆಯಲ್ಲಿ ಕ್ರೂರವಾದ ಮುಳ್ಳಿನ ಕಿರೀಟವನ್ನು ಧರಿಸಿದವನಾಗಿ ಛಡಿ ಏಟನ್ನು ಹೊಡಿಸಿಕೊಂಡಿದ್ದನು.

ಇಂಥಾ ಶ್ರಮಸಂಕಟಗಳನ್ನು ಅನುಭವಿಸಿದ ನಂತರ ಕರ್ತನಿಗೆ ಶಿಲುಬೆಯ ಮರಣದಂಥ ಕಠಿಣ ಪರೀಕ್ಷೆಗೆ ಒಳಗಾಗಲು ಯಾವುದೇ ಶಕ್ತಿಚೈತನ್ಯಗಳು ಉಳಿದಿದ್ದಲ್ಲಿ ಅದು ಆಶ್ಚರ್ಯಕರವಾಗಿ ತೋರುವದು. ತೀವ್ರವಾಗಿಯೂ ಸುದೀರ್ಘ–ವಾಗಿಯೂ ಮುಂದುವರೆದ ನರಮಂಡಲದ ಮೇಲಿನ ಒತ್ತಡ ಹಾಗು ಉಂಟಾದ ದೌರ್ಬಲ್ಯ ಅಲ್ಲದೆ ಶಾರೀರಿಕವಾದ ಶ್ರಮಸಂಕಟಗಳು ಸಹಜವಾದ ದೈಹಿಕ ಶಕ್ತಿಸಾಮರ್ಥ್ಯಗಳನ್ನು ಕುಂದಿಹೋಗುವಂತೆ ಮಾಡಿತ್ತು; ಆದರೆ ನಮ್ಮ ಕರ್ತನು ತನ್ನ ಸೇವಾಕಾರ್ಯದಲ್ಲಿ ಸ್ವಪ್ರೇರಿತನಾಗಿ ಶಾರೀರಿಕ ಶಕ್ತಿಸಾಮರ್ಥ್ಯ–ವನ್ನು ತ್ಯಾಗಮಾಡಿಕೊಂಡಿದ್ದಾಗ್ಯೂ ತಾನು ಒಬ್ಬ ಪರಿಪೂರ್ಣ ಮನುಷ್ಯನಾಗಿ ಬಹು ವಿಶೇಷವಾದ ಸಹನಾಶಕ್ತಿ ಪಡೆದವನಾದ್ದನು. ಹೇಗೂ ಆತನು ಬಹುವಾಗಿ ದಣಿದಿದ್ದನೆಂಬುದು ಶಿಲುಬೆಗೆ ಹಾಕುವ ಸ್ಥಳದವರೆಗೆ ಆತನ ಶಿಲುಬೆಯನ್ನು ಹೊರಲು ಬೇರೊಬ್ಬನನ್ನು ಬಲವಂತ ಮಾಡಿದ್ದ ಅಂಶದ ಮೂಲಕ ಸ್ಪಷ್ಟವಾಗುತ್ತದೆ. – ಲೂಕ 23:26

**ವಚನ 23.** ರಕ್ತಬೋಳ ಮಿಶ್ರಿತವಾದ ದ್ರಾಕ್ಷಾರಸವನ್ನು ಒಂದು ನೋವುನಿವಾರಕ ಔಷಧಿಯಾಗಿ ನೋವಿನಿಂದ ಉಪಶಮನಗೊಳಿಸುವ ಸಲುವಾಗಿ ನೀಡಲಾಗಿತ್ತು. ರೋಮಾಯರ ಕ್ರೂರ ಪದ್ಧತಿಯ ಮೂಲಕ ಮರಣದಂಡನೆಗೆ ಒಳಗಾಗಬೇಕಿದ್ದ ಅಪರಾಧಿಗಳಿಗೆ ದಯೆತೋರಿಸುವ ಕಾರ್ಯ–ಭಾರವನ್ನು ಯೆರೂಸಲೇಮಿನ ಕೆಲವು ಸ್ತ್ರೀಯರು ನಿರ್ವಹಿಸುತ್ತಿದ್ದರೆಂದು ಹೇಳಲಾಗಿರುವದು. ಯೇಸವು ತನಗೆ ತೋರಲಾದ ದಯೆಯನ್ನು ಅದನ್ನು ರುಚಿಸಿ ನೋಡುವ

ಮೂಲಕವಾಗಿ ಅಂಗೀಕರಿಸಿಕೊಂಡಿದ್ದನಾದರೂ ನಂತರದಲ್ಲಿ ಅದನ್ನು ನಿರಾಕರಿಸಿದವನಾಗಿ ತನ್ನ ಮನಸ್ಸು ಕಡೆ ವರೆಗೂ ಎಚ್ಚರಗೊಂಡದ್ದಾಗಿ ಸ್ವಸ್ಥಚಿತ್ತದಿಂದಿರಲು ಇಷ್ಟಪಟ್ಟಿದ್ದನು. ಅದನ್ನು ತೆಗೆದುಕೊಂಡದ್ದೇ ಆದಲ್ಲಿ ಆತನು ತನ್ನ ತಾಯಿಯನ್ನು ಯೋಹಾನನ ಪರಿಪಾಲನೆಗೆ ಒಪ್ಪಿಸಿದುದನ್ನು ಹಾಗು "ತೀರಿತು" ಎಂದು ಹೇಳಿದ ನಮಗೆ ಅರ್ಥಪೂರ್ಣವಾಗಿರುವ ಮಾತಿನಲ್ಲಿ ತೋರಿಬಂದ ಆತನ ಸ್ವಸ್ಥಚಿತ್ತತೆಯನ್ನು ತಿಳಿಯುವದು ನಮಗೆ ತಪ್ಪಿಹೋಗುತ್ತಿತ್ತು. ಅಲ್ಲದೆ ಒಡೆಯನ ಪ್ರೀತಿ ಹಾಗೂ ತನ್ನಿಂದ ಆತನಿಗಾದ ನಿರಾಶೆಯನ್ನು ನೆನಪಿಗೆ ತಂದಂಥಾ ಹಾಗು ತನಗೆ ಕೂಡಲೆ ಪಶ್ಚಾತಾಪವನ್ನು ಉಂಟುಮಾಡಿದ್ದ ಒಡೆಯನ ದುಃಖಭಾವದ ನೋಟವು ಪೇತ್ರನಿಗೆ ತಪ್ಪಿಹೋಗುತ್ತಿತ್ತು ಮತ್ತು ಕರ್ತನು ತನ್ನ ಭಯಂಕರವಾದ ಮರಣಕ್ಕೆ ಸಂಬಂಧಿಸಿದಂಥ ಮನೋವ್ಯಥೆಯ ನಡುವೆಯೂ ಆತನಿಗೆ ಇತರರ ಮೇಲಿದ್ದ ಆಲೋಚನೆಗಳ [ಕಾಳಜಿಯ] ಬಗ್ಗೆ ಗ್ರಹಿಸಿಕೊಳ್ಳುದರಲ್ಲಿ ನಾವೆಲ್ಲರೂ ವಿಫಲರಾಗಬೇಕಾಗುತ್ತಿತ್ತು.

**ವಚನ 25–28**. ಶಿಲುಬೆಗೇರಿಸುವಿಕೆಯ ಕಾರ್ಯವು ಬೆಳಿಗ್ಗೆ ಸುಮಾರು ಒಂಭತ್ತು ಗಂಟೆಗೆ ಸಂಭವಿಸಿದ್ದು, ಅದು ಮಧ್ಯಾಹ್ನ ಮೂರು ಗಂಟೆಗೆ ಮರಣದಲ್ಲಿ ಅಂತ್ಯಗೊಂಡಿತು; ಇಬ್ಬರು ಕಳ್ಳರ ಜೊತೆಯಲ್ಲಿನ ಸನ್ನಿವೇಶವು ಯೆಶಾಯ 53:12ರಲ್ಲಿ ಹೇಳಿರುವಂಥ ಮುಂದಿನ ಮಾತು ನೆರವೇರುವಂಥದಾಗಿತ್ತು: "ಆತನು ದ್ರೋಹಿಗಳೊಂದಿಗೆ ತನ್ನನ್ನು ಎಣಿಸಿಕೊಂಡು..."

"ಅವನು ಮತ್ತೊಬ್ಬರನ್ನು ರಕ್ಷಿಸಿದನು; ತನ್ನನ್ನು ತಾನು ರಕ್ಷಿಸಿಕೊಳ್ಳಲಾರನು" ಎಂಬ ಮಹಾಯಾಜಕರ ಹಾಗು ಶಾಸ್ತ್ರಿಗಳ ಪರಿಹಾಸ್ಯದ ಮಾತಿಗೆ ನಿಜವಾಗಿಯೂ ಅವರು ಗ್ರಹಿಸಿಕೊಂಡಿದ್ದ –ಕ್ಕಿಂತಲೂ ಒಂದು ಗಾಢವಾದ ಮಹತ್ವವಿತ್ತು. ಆತನಿಗೆ ಇತರರನ್ನು ರಕ್ಷಿಸಲು ಹಾಗು ತನ್ನನ್ನು ತಾನು ರಕ್ಷಿಸಿಕೊಳ್ಳಲೂ ಸಹ ಸಾಧ್ಯವಾಗುತ್ತಿರಲಿಲ್ಲ; ಯಾಕಂದರೆ ಕೇವಲ ಆತನು ತನ್ನನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳುವದರ ಮೂಲಕವಾಗಿಯೇ ಇತರರನ್ನು ರಕ್ಷಿಸುವದನ್ನು ನಿರೀಕ್ಷಿಸಲು ಸಾಧ್ಯವಾಗಿತ್ತು; ಆದುದರಿಂದ ಆತನು ಮರದ ಕಂಬದ ಮೇಲೆ ತನ್ನ ದೇಹದಲ್ಲಿ ನಮ್ಮ ಪಾಪಗಳಿಗಾಗುವ ದಂಡನೆಯನ್ನು ಹೊತ್ತುಕೊಳ್ಳು ವಂಥಾಗಿತ್ತು; ಆತನು ತಾನಾಗಿಯೇ ತನ್ನ ಜೀವವನ್ನು ಕೊಟ್ಟಿದ್ದನು, ಆತನ ಅಪ್ಪಣೆಯಿಲ್ಲದೆ ಯಾರಿಗೂ ಅದನ್ನು ಆತನಿಂದ ತೆಗೆಯಲು ಅಧಿಕಾರವಿರುತ್ತಿರಲಿಲ್ಲ, ಅಲ್ಲದೆ ಆತನು ಇಚ್ಛಾಪೂರ್ವಕವಾಗಿಯೇ ಅನುಮತಿಸಿರುವದು ಆತನ ನಡವಳಿಕೆಯ ಮೂಲಕವಾಗಿ ತೋರ್ಪಡಲಾಗಿತ್ತು. ಅಂದರೆ ಗೆತ್ಸೆಮನೆಯ ತೋಟದಲ್ಲಿ ವಿಶ್ವಾಶ ದ್ರೋಹಿಯ ಮುತ್ತನ್ನು ತಿಳಿದವನಾಗಿಯೇ ಸ್ವೀಕರಿಸಿಕೊಂಡಂಥದ್ದು; ರೋಮಾಯರ ಸಿಪಾಯಿಗಳಿಗೆ ತನ್ನನ್ನು ತಾನೇ ಧಾರಾಳವಾಗಿ ಅಧೀನಮಾಡಿ ಕೊಂಡದ್ದು; ಆತನ ಮೇಲೆ ಅರೋಪ ಹೊರಿಸುತಿದ್ದವರ ಮುಂದೆ ಮೌನವಾಗಿದ್ದುದು; ಅವರ ಮುಂದೆ ತಾನು ಮೆಸ್ಸೀಯನಾಗಿರು–ವೆನೆಂದು ಮುಕ್ತವಾಗಿ ಅರಿಕೆಮಾಡಿದ್ದುದು, ಅವರು ಇದನ್ನು ದೇವದೂಷಣೆಯೆಂದು ಎಣಿಸಿದ್ದರು; ತನ್ನ ಸ್ವರಕ್ಷಣೆಗಾಗಿ ಒಂದು ಪ್ರಯತ್ನವನ್ನೂ ಮಾಡದೇ ಇಲ್ಲವೇ ಒಂದು ಮಾತನ್ನೂ ಆಡದೆ ಮೌನವಾಗಿ ಶಿಲುಬೆಯ ಮರಣದ ತೀರ್ಪನ್ನು ಅಂಗೀಕರಿಸಿ –ಕೊಂಡದ್ದು. ನಿಜವಾಗಿಯೂ "ಉಣ್ಣೇ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ [ಮೌನವಾಗಿ] ಇದ್ದನು, ಬಾಯಿ ತೆರೆಯಲೇ ಇಲ್ಲ." ಯಾಕೆ? ಕಾರಣ ಆತನು ಇತರರನ್ನು ರಕ್ಷಿಸಲು ಬಯಸಿದ್ದನು, ಅಲ್ಲದೆ ಅವರು ರಕ್ಷಿಸಲ್ಪಡಲು ತಾನು ಯಜ್ಞಾರ್ಪಿತನಾಗುವದು ಅಗತ್ಯವೆಂಬುದು ಆತನಿಗೆ ತಿಳಿದಿತ್ತು.

ಮತ್ತು ಹೀಗಾಗಿ ಪ್ರವಾದಿಯು ಪ್ರಕಟಮಾಡಿರುವಂತೆ (ಯೆಶಾಯ 53;5,12): "ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆ–ಗಳಿಂದ ನಮಗೆ ಗುಣವಾಯಿತು." "...ತನ್ನ ಪ್ರಾಣವನ್ನು ಧಾರೆಯೆರೆದು ಮರಣಹೊಂದಿ... ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆಮಾಡಿದನಲ್ಲಾ." ಒಹ್, ಎಂಥಾ ಪ್ರೀತಿ, ಎಂಥಾ ಸದ್ಗುಣವು ಇಲ್ಲಿ ಪ್ರದರ್ಶಿತವಾಗಿತ್ತು! ಆದರೂ ಮನುಷ್ಯರು ಅವನನ್ನು "ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿದ್ದರು." ಮತ್ತು ಇದು ನಮ್ಮ ರಕ್ಷಕನಿಗಾದ ಅತಿ ತೀಕ್ಷಣ ಪರಿಶೋಧನೆಗಳಲ್ಲಿ ಒಂದಾಗಿದ್ದಂಥ–ಅಂದರೆ ದೇವರಿಗೆ ವಿರೋಧವಾಗಿ ಅಪರಾಧ ಮಾಡಿ ದೇವರ ರೌದ್ರಕ್ಕೆ ಒಳಗಾದವನೆಂದು ಎಣಿಸಲ್ಪಡುವಂಥ ಸಂಭವವುಳ್ಳದ್ದಾಗಿತ್ತು.

ಇದೇ ರೀತಿಯಲ್ಲಿ ಕರ್ತನ ಜನರಿಗೆ ಉಂಟಾಗುವ ಶ್ರಮಸಂಕಟಗಳು ಲೋಕವು ಸಹಿತವಾಗಿ ಕ್ರೈಸ್ತರೆಂದು ತೋರ್ಪಡಿಸಿಕೊಳ್ಳುವವರಲ್ಲಿ ವಿವೇಚನೆಯಿಲ್ಲದ ದುಡುಕಿನ ಸ್ವಭಾವವುಳ್ಳವರಿಂದ ಆಗ್ಗಾಗ್ಗೆ ಅಪಾರ್ಥಮಾಡಿಕೊಳ್ಳಲ್ಪಡುವದು. ಆದರೆ ಅಂಥವರು– "ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ; ಧಣಿಗಿಂತ ಆಳು ದೊಡ್ಡವನಲ್ಲ" ಎಂಬುದನ್ನು ಪರಿಗಣಿಸುವವ–ರಾಗಲಿ; ಕರ್ತನ ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವರೆಲ್ಲರೂ ಹಿಂಸೆಗೊಳಗಾಗುವರು; ಈ ದುಷ್ಟ ಯುಗದಲ್ಲಿ ಕೆಟ್ಟತನವು ಪ್ರಾಭಲ್ಯಕ್ಕೆ ಬಂದಿರುವದು, ಮತ್ತು ಇದರಿಂದ ನೀತಿವಂತರು ಬಾಧಿಸಲ್ಪಡುತ್ತಿರುವರು; ಸೈತಾನು ಈ ಲೋಕದ ಅಧಿಪತಿಯಾಗಿರುವನು; ಮತ್ತು ಆತನು ಕಟ್ಟಲ್ಪಡುವವರೆಗೂ ನೀತಿವಂತರು ಏಳಿಗೆಯಾಗುವದಿಲ್ಲ. ಇದು ನೀತಿವಂತರು ಅಂದರೆ ಭ್ರೂಣಾವಸ್ಥೆಯಲ್ಲಿನ ಪರಲೋಕ ಸಂಸ್ಥಾನದವರು ಹಿಂಸೆಯನ್ನು ಅನುಭವಿಸಲಿರುವಂಥ ಹಾಗು ಬಲಾತ್ಕಾರಿಗಳು ಅದರಲ್ಲಿ ಬಲವಂತದಿಂದ ನುಗ್ಗಬಹುದಾದಂಥ ಸಮಯ. ಅಲ್ಲದೆ ನಮಗೆ ಕರ್ತನೂ ಶಿರಸ್ಸೂ ಆಗಿರುವ ಕ್ರಿಸ್ತನು ಹೀಗೆ ಬಾಧೆಪಟ್ಟಿರುವಲ್ಲಿ ನೀತಿಸತ್ಯತೆಯ ನಿಮಿತ್ತ ಆತನೊಡನೆ ಬಾಧೆಪಡುವವರೆಲ್ಲರೂ ಆತನಿಗೆ [ಕ್ರಿಸ್ತನಿಗೆ] ಆದರಣೆ ನೀಡಿದಂಥ ದೇವರ ಅದೇ ಭರವಸೆಯ ಮೂಲಕವಾಗಿ ತಮ್ಮನ್ನು ಸಂತೈಸಿಕೊಳ್ಳುವವರಾಗಲಿ. "ಯೆಹೋವನ ಸನ್ನಿಧಾನದಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು; ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು..." ಕೀರ್ತನೆ 37:6,7.

ಕರ್ತನ ಮಿತ್ರರಲ್ಲಿ ಕೆಲವರು ಸಹ ಆ ಸಂದರ್ಭದಲ್ಲಿ ತಮ್ಮ ಪ್ರೀತಿಅನುಕಂಪಗಳಿಂದ ಕೂಡಿದವರಾಗಿ ಅಲ್ಲಿ ಉಪಸ್ಥಿತರಿದ್ದರು; ಅವರುಗಳು ಯಾರೆಂದರೆ: ಯೇಸುವಿನ ತಾಯಿಯಾದ ಮರಿಯಳು, ಮಗ್ದಲದ ಮರಿಯಳು, ಕ್ಲೆಯೋಫನ ಹೆಂಡತಿ–ಯಾದ ಮರಿಯಳು ಮತ್ತು ಜನರ ಗುಂಪನ್ನು ಹಿಂಬಾಲಿಸಿ ಬಂದಿದ್ದ ಇತರ ಸ್ತ್ರೀಯರು; ಅವರಲ್ಲಿ ಕೆಲವರು [ರಕ್ತಬೋಳ] ಉಳಿ ಬೆರೆಸಿದ ದ್ರಾಕ್ಷಾರಸವನ್ನು ಅರ್ಪಿಸಿದ್ದ ಸಂಭವವಿದ್ದು, ಅವರ ಕಣ್ಣೀರು ಗೋಳಾಟಗಳಿಗೆ ಉತ್ತರವಾಗಿ ಯೇಸುವು ಹೀಗೆ ಹೇಳಿದ್ದನು: "ಯೆರೂಸಲೇಮಿನ ಸ್ತ್ರೀಯರೇ, ನನಗೋಸ್ಕರ ಅಳಬೇಡಿರಿ, ನಿಮಗೋಸ್ಕರವೂ ನಿಮ್ಮ ಮಕ್ಕಳಿಗೋಸ್ಕರವೂ ಅಳಿರಿ... ಮರ ಹಸಿಯಾಗಿರುವಾಗ ಇಷ್ಟೆಲ್ಲಾ ಮಾಡಿದರೆ ಮರ ಒಣಗಿರುವಾಗ ಏನಾಗಬಹುದು?" (ಲೂಕ 23:27–31) ಇದನ್ನು ಆತನು ಆ ಜನಾಂಗದವರನ್ನು ಹೊರಹಾಕುವದಕ್ಕೂ ಹಾಗು ಯೆರೂಸಲೇಮಿನ ನಾಶನಕ್ಕೂ ಗುರುತಾದಂಥ ಹಾಗು ತನ್ನ ಕಡೆಗೆ ತೋರಲಾದ ಅದೇ ದುಷ್ಟ ಪ್ರವೃತ್ತಿ ಅದೇ ಅತಿರೇಕಗಳನ್ನು ಉಲ್ಲೇಖಿಸಿ ಹೀಗೆ ಹೇಳಿದ್ದನು. ಯಾಕಂದರೆ ಆ ಜನರ ಮೇಲೆ ಬಂದಿದ್ದ  ಕಷ್ಟತೊಂದರೆಗಳು ಕೇವಲ ಹೊರಗಿನ ಶತೃಗಳಿಂದ ಮಾತ್ರವಲ್ಲದೆ ಅಂತಃ ಕಲಹಗಳ ದೆಸೆಯಿಂದಾಗಿತ್ತು; ಯಾಕಂದರೆ ಪ್ರತಿಯೊಬ್ಬನೂ ತನ್ನ ನೆರೆಯವನ ಮೇಲೆ ಕೈಯೆತ್ತುವವ ನಾಗಿದ್ದನು. ಯೆರೂಸಲೇಮಿಗೆ ಮುತ್ತಿಗೆಹಾಕಿದ ಸಮಯದಲ್ಲಿ ನೂರಾರು ಜನ ಯೆಹೂದ್ಯರನ್ನು ಒಂದೇ ಕಾಲಕ್ಕೆ ಶಿಲುಬೆಗೆ ಹಾಕಿ ಪಟ್ಟಣದ ಗೋಡೆಯಿಂದ ಕಾಣುವಂತೆ ಅವರನ್ನು ನೇತುಹಾಕಿ ಹಾಗೇ ಬಿಡಲಾಗಿತ್ತೆಂದು ಹೇಳಲಾಗಿರುವದು.

**ವಚನ 33,34**. ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಮೂರು ಗಂಟೆಯ ವರೆಗೆ ದೇಶದ ಮೇಲೆ ಕವಿದುಕೊಂಡಿದ್ದ ಕತ್ತಲು ಒಂದು ಅಸಹಜವಾದ ಕತ್ತಲಾಗಿತ್ತು; ಯಾಕಂದರೆ ಪಸ್ಕಹಬ್ಬದ ಪೂರ್ಣ ಚಂದ್ರನಿರುವ ಸಮಯದಲ್ಲಿ ಸೂರ್ಯಗ್ರಹಣವು ಸಂಭವಿಸುವದು ಅಸಾಧ್ಯವಾಗಿತ್ತು. ಅದು ನಿಸ್ಸಂದೇಹವಾಗಿಯೂ ದೈವೀಕ ರೌದ್ರವನ್ನು ವ್ಯಕ್ತಪಡಿಸುವ ಸಲುವಾಗಿ ಕಳುಹಿಸಲ್ಪಡಲಾಗಿತ್ತು, ಅಲ್ಲದೆ ಈ ಕೃತ್ಯದ ಮೂಲಕವಾಗಿ ದೀರ್ಘಕಾಲದಿಂದ ದೈವಾನುಗ್ರಹಕ್ಕೆ ಪಾತ್ರವಾಗಿದ್ದ ಜನಾಂಗವು ದೇವರಿಂದಾದ ಅಗಲಿಕೆಯೆಂಬ ಕತ್ತಲೆಗೆ ಛಾಯಾರೂಪದ ಸಂಕೇತವಾಗಿತ್ತು.

**ವಚನ 34**ರಲ್ಲಿ ವ್ಯಕ್ತವಾಗಿರುವ ಸಂಗತಿಯು ಸನ್ನಿಹಿತವಾಗುತ್ತಿದ್ದ ಭಯಾನಕ ಮರಣದ ವಿಷಯವಾದ ಗ್ರಹಿಕೆಯ ಸಲುವಾಗಿತ್ತು. ಯೆಹೋವನ ಜೀವಾಧಾರಕ ಶಕ್ತಿಯು ಹಿಂತೆಗೆಯಲ್ಪಡುವದು ಅವಶ್ಯವಾಗಿದ್ದುದಲ್ಲದೆ  ಯಜ್ಞಾರ್ಪಣೆ–ಯನ್ನು ಪೂರ್ಣಗೊಳಿಸುವ ಸಲುವಾಗಿ ಶ್ರಮಸಂಕಟವೆಂಬ ಪಾತ್ರೆಯಲ್ಲಿರುವ ಕಹಿಯನ್ನು ತಳದ [ಗಸಿಯ] ಮಟ್ಟಿಗೂ ಹೀರಲ್ಪಡಬೇಕಿತ್ತು. ಆದರೆ ದೇಹಮನಸ್ಸುಗಳು ವಿಫಲಗೊಂಡಾಗ ಇದರ ಮಹತ್ವವನ್ನು ಗ್ರಹಿಸಿಕೊಳ್ಳುವದು ಕಷ್ಟಕರವಾಗಿತ್ತು; ಆದುದರಿಂದಲೇ ಬೆರಗಾಗಿಸುವಂಥ ಈ ಪ್ರಶ್ನೆಯನ್ನು [ಕೇಳಲಾಗಿದ್ದು]: "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನ ಕೈಬಿಟ್ಟಿದ್ದೀ?" ಆ ವರೆಗೆ ಆತನ ಎಲ್ಲಾ ಶ್ರಮಸಂಕಟಗಳಲ್ಲಿ ದೇವಕೃಪೆಯು ಆತನಿಗೆ ಆಧಾರವಾಗಿತ್ತು. ಆದರೆ ಈಗ ಆತನು [ನ್ಯಾಯ] ದಂಡದ ಅಡಿಯಲ್ಲಿ ಸೊರಗಿಹೋಗಿ, ನಾವು ಆತನ ಬಾಸುಂಡೆಗಳಿಂದ ಗುಣಹೊಂದ ಸಲುವಾಗಿ, ಜೀವಾಶೀರ್ವಾದ –ಗಳನ್ನು ಹೊಂದಿರುವಾತನ ಅನುಗ್ರಹದಿಂದ ಬೇರ್ಪಟ್ಟವ–ನಾಗಬೇಕಿತ್ತು.

**ವಚನ 37**. ಉಳಿದ [ತನ್ನ] ಚೈತನ್ಯವೆಲ್ಲವನ್ನು ಒಟ್ಟು–ಗೂಡಿಸಿಕೊಂಡು ಅದೆಲ್ಲವನ್ನು ಹೊರಹಾಕಮಾಡಿದ ಈ ಕಡೆಯ ಕೂಗು ಯಶಸ್ಸು ಪೂರ್ಣವಾದ ನಂಬಿಕೆಯ ಅಂತ್ಯ ಗೆಲುವಾಗಿತ್ತು. ತಾನು ಇತರರ ಪರವಾಗಿ ಪಾಪನಿವಾರಣಾ ಯಜ್ಞವನ್ನಾಗಿ ಅರ್ಪಿಸಿಕೊಳ್ಳುವ ಸಲುವಾಗಿ ಪಾಪಿಗಳ ಸ್ಥಾನದಲ್ಲಿ ನಿಂತುಕೊಳ್ಳ–ಬೇಕಾದ ಕಾರಣದಿಂದ ಆವರೆಗೂ ತನಗೆ ಜೀವಾಧಾರವಾಗಿದ್ದ ದೇವಾನುಗ್ರಹವು ಆಗ ಹಿಂದೆಗೆದುಕೊಳ್ಳಬೇಕೆಂಬುದು ಆತನ ಗ್ರಹಿಕೆಗೆ ಬಂದಿದ್ದಾಗ್ಯೂ, ಆವರೆಗೂ ದೇವರ ವಾಗ್ದಾನಗಳ ಮೇಲೆ ಭದ್ರವಾಗಿ ನೆಲೆಯೂರಿದ್ದ ಆತನ ನಂಬಿಕೆಯು ದೇಹವೆಂಬ ತೆರೆಯ ಆಚೆಕಡೆಲ್ಲಿ ಅದರ  ಅಂತ್ಯಫಲವು ಕೈಗೂಡುವದಕ್ಕಾಗಿ ತನ್ನ ಆತ್ಮವನ್ನು ಭರವಸಪೂರ್ಣವಾದ ಸುಗಂಧವಾಸನೆಯುಳ್ಳ [ಯಜ್ಞವಾಗಿ] ತಂದೆಗೆ ಒಪ್ಪಿಸಿಕೊಟ್ಟಿದ್ದನು. ನೀತಿಯ ನಿಮಿತ್ತವಾಗಿ ಬಾಧೆಯನ್ನು ಅನುಭವಿಸುವಂಥವರೆಲ್ಲರೂ ಇದನ್ನು ಈ ರೀತಿಯಲ್ಲಿಯೇ ಮಾಡಬೇಕೆಂದು ಪೇತ್ರನು ಹೀಗೆ ಹೇಳಿರುವನು, "...ದೇವರ ಚಿತ್ತಾನುಸಾರ ಬಾಧೆಪಡುವವರು ಒಳ್ಳೇದನ್ನು ಮಾಡುವವರಾಗಿದ್ದು ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿ ಕರ್ತನಿಗೆ ಒಪ್ಪಿಸಲಿ." –  1 ಪೇತ್ರ 4:19

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ನಿಸ್ಸಾನ್ 18 | ಯೆರೂಸಲೇಮಿನ ಸುತ್ತುಮುತ್ತಣ ಪ್ರದೇಶ | ಯೇಸುವಿನ ಪುನರುತ್ಥಾನ ಹಾಗು ಆ ದಿನದಲ್ಲಿ ನಡೆದ ಘಟನೆಗಳು | 28:1–15 | 16:1–8 | 24:1–49 | 20:1–25 |

# ಮತ್ತಾಯ 28:1–17

ಸಬ್ಬತ್ ದಿನ ಆದ ಮೇಲೆ ವಾರದ ಮೊದಲನೆಯ ದಿವಸ ಬೆಳಗಾಗುವಾಗ ಮಗ್ದಲದ ಮರಿಯಳು ಆ ಬೇರೆ ಮರಿಯಳೂ ಸಮಾಧಿಯನ್ನು ನೋಡುವದಕ್ಕೆ ಬಂದರು. ಆಗ ಮಹಾ ಭೂಕಂಪವಾಯಿತು. ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಬಾಗಿಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು. ಅವನ ಮುಖಭಾವವು ಮಿಂಚಿನಂತೆ ಇತ್ತು.

ಅವನ ಉಡುಪು ಹಿಮದಂತೆ ಬೆಳ್ಳಗಿತ್ತು; ಕಾವಲುಗಾರರು ಅವನಿಗೆ ಹೆದರಿ ನಡುಗಿ ಸತ್ತವರ ಹಾಗಾದರು. ಆಗ ದೂತನು ಆ ಹೆಂಗಸರಿಗೆ–ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ; ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ–ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ; ನಾನು ನಿಮಗೆ ಹೇಳಿದ್ದೇನೆ, ನೋಡಿರಿ ಎಂದು ಹೇಳಿದನು. ಅವರು ಭಯದಿಂದಲೂ ಮಹಾ ಸಂತೋಷದಿಂದಲೂ ಬೇಗ ಸಮಾಧಿಯ ಬಳಿಯಿಂದ ಹೊರಟು ಆತನ ಶಿಷ್ಯರಿಗೆ ತಿಳಿಸುವದಕ್ಕೆ ಓಡಿಹೋದರು. ಆಗ ಯೇಸು ಅವರ ಎದುರಿಗೆ ಬಂದು–ನಿಮಗೆ ಶುಭವಾಗಲಿ ಅಂದನು. ಅವರು ಹತ್ತರಕ್ಕೆ ಬಂದು ಆತನ ಪಾದಗಳನ್ನು ಹಿಡಿದು ಆತನಿಗೆ ನಮಸ್ಕಾರ ಮಾಡಿದರು. ಯೇಸು ಅವರಿಗೆ–ಹೆದರಬೇಡಿರಿ; ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ; ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದನು.

ಅವರು ಹೋಗುತ್ತಿರುವಾಗ ಕಾವಲುಗಾರರಲ್ಲಿ ಕೆಲವರು ಪಟ್ಟಣದೊಳಕ್ಕೆ ಬಂದು ನಡೆದ ಸಂಗತಿಗಳನ್ನೆಲ್ಲಾ ಮಹಾಯಾಜಕರಿಗೆ ತಿಳಿಸಿದರು. ಇವರು ಹಿರಿಯರ ಸಂಗಡ ಕೂಡಿಕೊಂಡು ಆಲೋಚನೆಮಾಡಿ ಆ ಸಿಪಾಯಿಗಳಿಗೆ ಬಹಳ ಹಣಕೊಟ್ಟು–ಅವನ ಶಿಷ್ಯರು ರಾತ್ರಿಯಲ್ಲಿ ಬಂದು ನಾವು ನಿದ್ದೆಮಾಡುತ್ತಿರುವಾಗ ಅವನನ್ನು ಕದ್ದುಕೊಂಡು ಹೋದರು ಎಂದು ಹೇಳಿರಿ. ಈ ಸುದ್ಧಿ ದೇಶಾಧಿಪತಿಯ ಕಿವಿಗೆ ಬಿದ್ದರೆ ನಾವು ಅವನನ್ನು ಸಮಾಧಾನ ಪಡಿಸಿ ನಿಮಗೆ ಭಯವಿಲ್ಲದ ಹಾಗೆ ಮಾಡುತ್ತೇವೆ ಅಂದರು. ಇವರು ಆ ಹಣವನ್ನು ತೆಗೆದುಕೊಂಡು ತಮಗೆ ಹೇಳಿಕೊಟ್ಟ ಹಾಗೆ ಮಾಡಿದರು. ಈ ಮಾತು ಇಂದಿನ ವರೆಗೂ ಯೆಹೂದ್ಯರಲ್ಲಿ ಹಬ್ಬಿ ಅದೆ.

## ಮಾರ್ಕ 16:1–8

ಸಬ್ಬತ್ ದಿನ ಕಳೆದ ಮೇಲೆ, ಮಗ್ದಲದ ಮರಿಯಳೂ ಯಾಕೋಬನ ತಾಯಿ ಮರಿಯಳೂ ಸಲೋಮೆಯೂ ಆತನ ದೇಹಕ್ಕೆ ಹಚ್ಚುವದಕ್ಕಾಗಿ ಸುಗಂಧದ್ರವ್ಯಗಳನ್ನು ಕೊಂಡರು. ಮತ್ತು ವಾರದ ಮೊದಲನೆಯ ದಿನದ ಬೆಳಿಗ್ಗೆ ಹೊತ್ತು ಮೂಡುವಾಗ ಅವರು ಸಮಾಧಿಯ ಬಳಿಗೆ ಬಂದರು. ಸಾಮಾಧಿಗೆ ಮುಚ್ಚಿದ್ದ ಕಲ್ಲು ಬಹಳ ದೊಡ್ಡದಾಗಿದ್ದದರಿಂದ ಅವರು–ಸಮಾಧಿಯ ಬಾಗಿಲಿನಿಂದ ಆ ಕಲ್ಲನ್ನು ನಮಗೋಸ್ಕರ ಉರುಳಿಸುವವರು ಯಾರಿದ್ದಾರೆ ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಾ ಇರಲಾಗಿ ತಲೆಯೆತ್ತಿ ನೋಡಿ ಆ ಕಲ್ಲು ಉರುಳಿಸಲ್ಪಟ್ಟಿರುವದನ್ನೂ ಕಂಡರು. ಅವರು ಸಮಾಧಿಯೊಳಗೆ ಹೋಗಿ ಒಬ್ಬ ಯವನಸ್ಥನು ಬಿಳೀ ಅಂಗಿಯನ್ನು ತೊಟ್ಟುಕೊಂಡು ಬಲಗಡೆ ಕೂತಿರುವದನ್ನು ಕಂಡು ಬೆಚ್ಚಿ ಬೆರಗಾದರು. ಅವನು ಅವರಿಗೆ–ಬೆರಗಾಗಬೇಡಿರಿ. ಶಿಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸುವನ್ನು ಹುಡುಕುತ್ತೀರಲ್ಲವೇ. ಆತನು ಜೀವಿತನಾಗಿ ಎದ್ದಿದ್ದಾನೆ; ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು ಇದೇ, ನೋಡಿರಿ. ಆದರೆ ನೀವು ಹೋಗಿ ಆತನ ಶಿಷ್ಯರಿಗೂ ಪೇತ್ರನಿಗೂ–ಆತನು ನಿಮಗೆ ಹೇಳಿದಂತೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ ಎಂದು ಹೇಳಿದನು. ಅವರು ಭ್ರಮೆಹಿಡಿದವರಾಗಿ ನಡುಗುತ್ತಾ ಹೊರಗೆ ಬಂದು ಸಮಾಧಿಯ ಬಳಿಯಿಂದ ಓಡಿ ಹೋದರು; ಅವರು ಹೆದರಿಕೊಂಡದ್ದರಿಂದ ಯಾರಿಗೂ ಏನೂ ಹೇಳಲಿಲ್ಲ.

## ಲೂಕ 24:1–49

ಆ ಸ್ತ್ರೀಯರು ಸಬ್ಬತ್ ದಿನದಲ್ಲಿ ಧರ್ಮನಿಯಮದ ಪ್ರಕಾರ ವಿಶ್ರಮಿಸಿಕೊಂಡು ವಾರದ ಮೊದಲನೆಯ ದಿವಸದಲ್ಲಿ ಇನ್ನೂ ಮೊಬ್ಬಿರುವಾಗ ತಾವು ಸಿದ್ಧಮಾಡಿದ ಸುಗಂಧದ್ರವ್ಯಗಳನ್ನು ತೆಗೆದುಕೊಂಡು ಸಮಾಧಿಗೆ ಬಂದರು. ಸಮಾಧಿಗೆ ಮುಚ್ಚಿದ್ದ ಕಲ್ಲು ಅಲ್ಲಿಂದ ಉರುಳಿಸಲ್ಪಟ್ಟಿರುವದನ್ನು ಕಂಡು ಒಳಕ್ಕೆ ಹೋಗಿ ನೋಡುವಲ್ಲಿ ಯೇಸು ಸ್ವಾಮಿಯ ದೇಹವು ಕಾಣಲಿಲ್ಲ. ಈ ವಿಷಯದಲ್ಲಿ ಅವರಿಗೆ ಗಲಿಬಿಲಿ ಉಂಟಾದಾಗ ಹೊಳೆಯುವ ಉಡುಪನ್ನು ಧರಿಸಿದ್ದ ಇಬ್ಬರು ಪುರುಷರು ಅಕಸ್ಮಾತಾಗಿ ಅವರ ಬಳಿಯಲ್ಲಿ ನಿಂತುಕೊಂಡರು. ಆ ಸ್ತ್ರೀಯರು ಭಯಹಿಡಿದವರಾಗಿ ತಮ್ಮ ಮುಖಗಳನ್ನು ನೆಲದ ಕಡೆಗೆ ಬೊಗ್ಗಿಸಿಕೊಂಡಿರುವಾಗ ಆ ಪುರುಷರು ಅವರಿಗೆ–ಸತ್ತವರೊಳಗೆ ಬದುಕಿರುವವನನ್ನು ಹುಡುಕುವದೇನು? ಆತನು ಇಲ್ಲಿ ಇಲ್ಲ, ಎದ್ದಿದ್ದಾನೆ. ಆತನು ಇನ್ನೂ ಗಲಿಲಾಯದಲ್ಲಿದ್ದಾಗ–ಮನುಷ್ಯಕುಮಾರನು ಪಾಪಿಗಳಾದ ಮನುಷ್ಯರ ಕೈಗೆ ಒಪ್ಪಿಸಲ್ಪಟ್ಟು ಶಿಲುಬೆಗೆ ಹಾಕಲ್ಪಟ್ಟು ಮೂರನೆಯ ದಿನದಲ್ಲಿ ಎದ್ದು ಬರುವದು ಅಗತ್ಯವೆಂದು ನಿಮಗೆ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಿರಿ ಎಂದು ಹೇಳಿದರು. ಸ್ತ್ರೀಯರು ಆತನ ಮಾತುಗಳನ್ನು ನೆನಪಿಗೆತಂದುಕೊಂಡು ಸಮಾಧಿಯ ಬಳಿಯಿಂದ ಹಿಂತಿರುಗಿ ಹೋಗಿ ಆ ಸಂಗತಿ–ಗಳನ್ನೆಲ್ಲಾ ಹನ್ನೊಂದು ಮಂದಿ ಶಿಷ್ಯರಿಗೂ ಉಳಿದವರೆಲ್ಲರಿಗೂ ತಿಳಿಸಿದರು. ಆ ಸ್ತ್ರೀಯರು ಯಾರಂದರೆ ಮಗ್ದಲದ ಮರಿಯಳು, ಯೋಹಾನಳು, ಯಾಕೋಬನ ತಾಯಿಯಾದ ಮರಿಯಳು ಇವರೇ. ಇವರ ಜೊತೆಯಲ್ಲಿದ್ದ ಬೇರೆ ಸ್ತ್ರೀಯರೂ ಸಹ ಅಪೊಸ್ತಲರಿಗೆ ಆ ಸಂಗತಿಗಳನ್ನು ಹೇಳಿದರು. ಅವರು ನಂಬಲಿಲ್ಲ; ಆ ಮಾತುಗಳು ಅವರಿಗೆ ಬರೀ ಹರಟೆಯಾಗಿ ತೋರಿದವು. {ಆದರೆ ಪೇತ್ರನು ಎದ್ದು ಸಮಾಧಿಗೆ ಓಡಿಹೋಗಿ ಬೊಗ್ಗಿ ನೋಡಿ ನಾರುಬಟ್ಟೆಗಳನ್ನು ಮಾತ್ರ ಕಂಡು ನಡೆದ ಸಂಗತಿಗಳಿಗೆ ತನ್ನಲ್ಲಿ ಆಶ್ಚರ್ಯಪಡುತ್ತಾ ಹೊರಟುಹೋದನು.}

ಅದೇ ದಿನದಲ್ಲಿ ಶಿಷ್ಯರಲ್ಲಿ ಇಬ್ಬರು ಯೆರೂಸಲೇಮಿಗೆ ಆರುವರೆ ಮೈಲು ದೂರದಲ್ಲಿದ್ದ ಎಮ್ಮಾಹು ಎಂಬ ಹಳ್ಳಿಗೆ ಹೋಗುತ್ತಾ ಸಂಭವಿಸಿದ ಈ ಎಲ್ಲಾ ಕಾರ್ಯಗಳ ವಿಷಯವಾಗಿ ಸಂಭಾಷಣೆ ಮಾಡುತ್ತಿದ್ದರು. ಅವರು ಸಂಭಾಷಣೆಯಲ್ಲಿ ಚರ್ಚಿಸುತ್ತಿರುವಾಗ ಯೇಸು ತಾನೇ ಹತ್ತಿರಕ್ಕೆ ಬಂದು ಅವರ ಜೊತೆಯಲ್ಲಿ ಹೋದನು. ಆದರೆ ಅವರು ಆತನ ಗುರುತನ್ನು ತಿಳಿಯಲಿಲ್ಲ; ಅವರ ಕಣ್ಣು ಕಟ್ಟಿದ ಹಾಗಾಯಿತು. ಆತನು ಅವರನ್ನು–ನೀವು ಮಾರ್ಗದಲ್ಲಿ ಹೋಗುತ್ತಾ ಚರ್ಚಿಸಿ

ಮಾತಾಡಿಕೊಳ್ಳುವ ಈ ಸಂಗತಿಗಳೇನು ಎಂದು ಕೇಳಲು ಅವರು ದುಃಖದ ಮುಖವುಳ್ಳವರಾಗಿ ನಿಂತರು. ಅವರಲ್ಲಿ ಕ್ಲೆಯೋಫನೆಂಬವನು ಆತನನ್ನು–ಯೆರೂಸಲೇಮಿಗೆ ಬಂದ ಪರಸ್ಥಳದವರೆಲ್ಲರಿಗೂ ಈ ದಿವಸಗಳಲ್ಲಿ ಅದರೊಳಗೆ ನಡೆದಿರುವ ಸಂಗತಿಗಳು ಗೊತ್ತಿರಲಾಗಿ ನಿನಗೆ ಮಾತ್ರ ಗೊತ್ತಿಲ್ಲವೋ ಎಂದು ಕೇಳಲು ಆತನು ಅವರನ್ನು–ಯಾವ ಸಂಗತಿಗಳು ಎಂದು ಕೇಳಿದನು. ಅದಕ್ಕೆ ಅವರು–ನಜರೇತಿನವನಾದ ಯೇಸುವಿನ ಸಂಗತಿಗಳೇ; ಆತನು ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಕೃತ್ಯದಲ್ಲಿಯೂ ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿಯಾಗಿದ್ದನು. ಆತನನ್ನು ಮಹಾಯಾಜಕರೂ ನಮ್ಮ ಅಧಿಕಾರಿಗಳೂ ಮರಣದಂಡನೆಗೆ ಒಪ್ಪಿಸಿಕೊಟ್ಟು ಶಿಲುಬೆಗೆ ಹಾಕಿಸಿದರು. ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವವು. ಇದು ಮಾತ್ರವಲ್ಲದೆ ಆ ಕಾರ್ಯಗಳು ನಡೆದು ಈ ಹೊತ್ತು ಮೂರನೆಯ ದಿನ; ಆದರೂ ನಮ್ಮಲ್ಲಿ ಕೆಲವು ಮಂದಿ ಸ್ತ್ರೀಯರು ಬೆಳಗಾಗುವಾಗ ಸಮಾಧಿಯ ಬಳಿಯಲ್ಲಿ ಇದ್ದು ಆತನ ದೇಹವನ್ನು ಕಾಣದೆ ಅಲ್ಲಿಂದ ಬಂದು ತಮಗೆ ದೇವದೂತರ ದರ್ಶನವಾಯಿತೆಂತಲೂ ಆತನು ಬದುಕುತ್ತಾನೆಂದು ಅವರು ಹೇಳಿದರೆಂತಲೂ ತಿಳಿಸಿ ನಮಗೆ ಆಶ್ಚರ್ಯವನ್ನುಂಟು ಮಾಡಿದರು. ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ ಆ ಸ್ತ್ರೀಯರು ಹೇಳಿದ ಪ್ರಕಾರವೇ ಕಂಡರು; ಆತನನ್ನು ಮಾತ್ರ ಕಾಣಲಿಲ್ಲ ಎಂದು ಹೇಳಿದರು. ಆತನು ಅವರಿಗೆ–ಎಲಾ, ಬುದ್ಧಿಯಿಲ್ಲದವರೇ, ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬುವದರಲ್ಲಿ ಮಂದ ಹೃದಯರೇ, ಕ್ರಿಸ್ತನು ಇಂಥಾ ಶ್ರಮಗಳನ್ನು ಅನುಭವಿಸಿ ತನ್ನ ಮಹಾ ಪದವಿಗೆ ಸೇರುವದು ಅಗತ್ಯವಾಗಿತ್ತಲ್ಲವೇ ಎಂದು ಹೇಳಿ ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆಗಳನ್ನು ಅವರಿಗೆ ವಿವರಿಸಿದನು. ಅವರು ಹೋಗುತ್ತಿರುವ ಹಳ್ಳಿಯ ಸಮೀಪಕ್ಕೆ ಬಂದಾಗ ಆತನು ಇನ್ನೂ ಮುಂದಕ್ಕೆ ಹೋಗುವವನಂತೆ ಕಾಣಿಸಿದನು. ಆದರೆ ಅವರು–ನಮ್ಮ ಸಂಗಡ ಇರು, ಸಂಜೆಯಾಯಿತು, ಹೊತ್ತು ಇಳಿಯುತ್ತಾ ಬಂತು ಎಂದು ಆತನಿಗೆ ಹೇಳಿ ಬಲವಂತಮಾಡಲು ಅತನು ಅವರ ಕೂಡ ಇರುವದಕ್ಕೆ ಊರೊಳಕ್ಕೆ ಹೋದನು. ಆತನು ಅವರ ಸಂಗಡ ಊಟಕ್ಕೆ ಕೂತುಕೊಂಡಾಗ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಅವರಿಗೆ ಕೊಡುತ್ತಿರಲಾಗಿ ಅವರ ಕಣ್ಣುಗಳು ತೆರೆದವು, ಅವರು ಆತನ ಗುರುತನ್ನು ಹಿಡಿದರು; ಆತನು ಅವರ ಕಣ್ಣಿಗೆ ಮಾಯವಾದನು. ಆಗ ಅವರು ಒಬ್ಬರಿಗೊಬ್ಬರು–ಆತನು ದಾರಿಯಲ್ಲಿ ನಮ್ಮ ಸಂಗಡ ಮಾತನಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ ಎಂದು ಹೇಳಿಕೊಂಡು ಅದೇ ಗಳಿಗೆಯಲ್ಲಿ ಎದ್ದು ಯೆರೂಸಲೇಮಿಗೆ ಹಿಂತಿರುಗಿ ಹೋದರು. ಅಲ್ಲಿ ಹನ್ನೊಂದು ಮಂದಿ ಶಿಷ್ಯರೂ ಅವರ ಸಂಗಡ ಇದ್ದವರೂ ಒಟ್ಟಾಗಿ ಕೂಡಿಕೊಂಡಿದ್ದು–ಸ್ವಾಮಿ ಎದ್ದದ್ದು ನಿಜ, ಆತನು ಸೀಮೋನನಿಗೆ ಕಾಣಿಸಿಕೊಂಡನು ಎಂದು ಹೇಳುತ್ತಿದ್ದರು. ಇದನ್ನು ಕಂಡು ಅವರು ದಾರಿಯಲ್ಲಿ ನಡೆದ ಸಂಗತಿಯುನ್ನು ರೊಟ್ಟಿ ಮುರಿಯುವದರಲ್ಲಿ ತಾವು ಆತನ ಗುರುತು ಹಿಡಿದೆವೆಂಬದನ್ನು ವಿವರಿಸಿದರು.

ಅವರು ಈ ಸಂಗತಿಯನ್ನು ಕುರಿತು ಮಾತಾಡು–ತ್ತಿರುವಾಗ ಆತನೇ ಅವರ ನಡುವೆ ನಿಂತು {–ನಿಮಗೆ ಮನಶ್ಶಾಂತಿಯಾಗಲಿ} ಎಂದು ಹೇಳಿದನು. ಅವರು ದಿಗಿಲು ಬಿದ್ದು ಭಯಹಿಡಿದವರಾಗಿ ತಾವು ಕಂಡದ್ದನ್ನೂ ಭೂತವೆಂದು ಭಾವಿಸಿದ್ದರು. ಆತನು ಅವರಿಗೆ ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯದಲ್ಲಿ ಅನುಮಾನಗಳು ಹುಟ್ಟುವದೇಕೆ? ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ, ನಾನೇ ಅಲ್ಲವೇ. ನನ್ನನ್ನು ಮುಟ್ಟಿ ನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವು ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ ಎಂದು ಹೇಳಿದನು. {ಇದನ್ನು ಹೇಳಿದ ಮೇಲೆ ಆತನು ತನ್ನ ಕೈಗಳನ್ನೂ ಕಾಲುಗಳನ್ನೂ ತೋರಿಸಿದನು.} ಆದರೆ ಅವರು ಸಂತೋಷದ ದೆಸೆಯಿಂದ ಇನ್ನು ನಂಬದೆ ಆಶ್ಚರ್ಯಪಡುತ್ತಿರಲಾಗಿ ಆತನು–ತಿನ್ನತಕ್ಕ ಪದಾರ್ಥವೇನಾದರೂ ಇಲ್ಲಿ ನಿಮಗುಂಟೋ ಎಂದು ಅವರನ್ನು ಕೇಳಲು ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು. ಆತನು ತಕ್ಕೊಂಡು ಅವರ ಮುಂದೆ ತಿಂದನು.

ತರುವಾಯ ಆತನು–ನಾನು ಇನ್ನು ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥ–ಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವದೆಲ್ಲಾ ನೆರವೇರುವದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ಅಂದನು. ಆ ಮೇಲೆ ಅವರು ಶಾಸ್ತ್ರವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ–ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರಿಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವ–ರಾಗಿದ್ದೀರಿ. ಇಗೋ ನನ್ನ ತಂದೆಯು ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು.

## ಯೋಹಾನ 20:1–25

ವಾರದ ಮೊದಲನೆಯ ದಿನದಲ್ಲಿ ಮಗ್ದಲದ ಮರಿಯಳು ಮುಂಜಾನೆ ಇನ್ನೂ ಕತ್ತಲೆ ಇರುವಾಗಲೇ ಸಮಾಧಿಯ ಬಳಿಗೆ ಬಂದು ಸಮಾಧಿಯ ಕಲ್ಲು ಅಲ್ಲಿಂದ ತೆಗೆದಿರುವದನ್ನು ಕಂಡಳು. ಅಕೆ ಸೀಮೋನ ಪೇತ್ರನ ಬಳಿಗೂ ಯೇಸುವಿಗೆ ಪ್ರಿಯನಾಗಿದ್ದ ಆ ಮತ್ತೊಬ್ಬ ಶಿಷ್ಯನ ಬಳಿಗೂ ಓಡಿ ಬಂದು ಅವರಿಗೆ–ಸ್ವಾಮಿಯನ್ನು ಸಮಾಧಿಯೊಳಗಿಂದ ತೆಗೆದುಕೊಂಡು ಹೋಗಿ ಆತನನ್ನು ಎಲ್ಲಿಟ್ಟಿದ್ದಾರೋ ನಮಗೆ ಗೊತ್ತಿಲ್ಲವೆಂದು ಹೇಳಿದಳು. ಆಗ ಪೇತ್ರನೂ ಆ ಮತ್ತೊಬ್ಬ ಶಿಷ್ಯನೂ ಹೊರಟು ಸಮಾಧಿಯ ಕಡೆಗೆ

ಹೋದರು. ಅವರಿಬ್ಬರೂ ಜೊತೆಯಾಗಿ ಓಡಿದರು; ಆದರೆ ಆ ಮತ್ತೊಬ್ಬ ಶಿಷ್ಯನು ಪೇತ್ರನಿಗಿಂತ ಮುಂದೆ ಓಡಿ ಮೊದಲೇ ಸಮಾಧಿಗೆ ಮುಟ್ಟಿ ಬೊಗ್ಗಿ ನೋಡಿ ಆ ನಾರುಬಟ್ಟೆಗಳು ಬಿದ್ದಿರುವದನ್ನು ಕಂಡನು; ಆದರೆ ಒಳಕ್ಕೆ ಹೋಗಲಿಲ್ಲ. ಸೀಮೋನ ಪೇತ್ರನು ಅವನ ಹಿಂದೆ ಬಂದು ಸಮಾಧಿಯೊಳಕ್ಕೆ ಹೋಗಿ ಆ ನಾರುಬಟ್ಟೆಗಳು ಬಿದ್ದಿರುವದನ್ನೂ ಆತನ ತಲೆಯ ಮೇಲಿದ್ದ ಕೈಪಾವುಡವು ಆ ನಾರುಬಟ್ಟೆಗಳ ಕೂಡ ಇರದೆ ಸುತ್ತಿ ಒಂದು ಕಡೆಯಲ್ಲಿ ಬೇರೇ ಇರುವದನ್ನೂ ನೋಡಿದನು. ಆಗ ಸಮಾಧಿಯ ಬಳಿಗೆ ಮೊದಲು ಬಂದಿದ್ದ ಆ ಮತ್ತೊಬ್ಬ ಶಿಷ್ಯನು ಸಹ ಒಳಕ್ಕೆ ಹೋಗಿ ನೋಡಿ ನಂಬಿದನು. ಆತನು ಸತ್ತ ಮೇಲೆ ಜೀವದಿಂದೆದ್ದು ಬರಬೇಕೆಂಬದಾಗಿ ಶಾಸ್ತ್ರದಲ್ಲಿ ಬರೆದಿರುವ ಮಾತು ಅವರಿಗೆ ಇನ್ನೂ ತಿಳಿದಿರಲಿಲ್ಲ. ತರುವಾಯ ಆ ಶಿಷ್ಯರು ತಿರಿಗಿ ತಮ್ಮವರ ಬಳಿಗೆ ಹೋದರು.

ಆದರೆ ಮರಿಯಳು ಹೊರಗೆ ಸಮಾಧಿಯ ಬಳಿಯಲ್ಲಿ ಅಳುತ್ತಾ ನಿಂತಿದ್ದಳು. ಹೀಗೆ ಆಕೆ ಅಳುತ್ತಿರುವಾಗ ಸಮಾಧಿಯೊಳಗೆ ಬೊಗ್ಗಿ ನೋಡಲು ಯೇಸುವಿನ ದೇಹವು ಇಟ್ಟಿದ್ದ ಸ್ಥಳದಲ್ಲಿ ಬೆಳ್ಳಗಿರುವ ವಸ್ತ್ರಗಳನ್ನು ಹೊದ್ದುಕೊಂಡ ಇಬ್ಬರು ದೇವದೂತರನ್ನು ಕಂಡಳು; ಅವರಲ್ಲಿ ಒಬ್ಬನು ತಲೆಯಿದ್ದ ಕಡೆಯಲ್ಲಿ ಒಬ್ಬನು ಕಾಲಿದ್ದ ಕಡೆಯಲ್ಲಿ ಕೂತಿದ್ದರು. ಅವರು ಆಕೆಯನ್ನು–ಅಮ್ಮಾ, ನೀನು ಯಾಕೆ ಅಳುತ್ತೀ ಎಂದು ಕೇಳಲು ಆಕೆ–ನನ್ನ ಸ್ವಾಮಿಯನ್ನು ತೆಗೆದುಕೊಂಡು ಹೋಗಿದ್ದಾರೆ; ಆತನನ್ನು ಎಲ್ಲಿ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ ಅಂದಳು. ಇದನ್ನು ಹೇಳಿ ತಿರಿಗಿಹೊಂಡು ಯೇಸು ನಿಂತಿರುವದನ್ನು ಕಂಡಳು, ಆದರೆ ಆತನು ಯೇಸು ಅಂತ ಆಕೆಗೆ ತಿಳಿಯಲಿಲ್ಲ. ಯೇಸು ಆಕೆಯನ್ನು–ಅಮ್ಮಾ, ಯಾಕೆ ಅಳುತ್ತೀ? ಯಾರನ್ನು ಹುಡುಕುತ್ತೀ? ಎಂದು ಕೇಳಲು ಆಕೆ ಆತನನ್ನು ತೋಟಗಾರನೆಂದು ನೆನಸಿ ಆತನಿಗೆ–ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೋಗಿದ್ದರೆ ಎಲ್ಲಿ ಇಟ್ಟಿದ್ದೀ ನನಗೆ ಹೇಳು ನಾನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದಳು. ಯೇಸು ಆಕೆಗೆ–ಮರಿಯಳೇ, ಎಂದು ಹೇಳಿದನು. ಆಕೆ ತಿರಿಗಿಕೊಂಡು ಇಬ್ರೀಯ ಮಾತಿನಲ್ಲಿ ರಬ್ಬೂನಿ, ಅಂದಳು. (ರಬ್ಬೂನಿ ಅಂದರೆ ಗುರುವೇ ಎಂದು ಅರ್ಥ). ಯೇಸು ಆಕೆಗೆ–ನನ್ನನ್ನು ಹಿಡಿಯಬೇಡ; ಯಾಕಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದವನಲ್ಲ. ನೀನು ನನ್ನ ಸಹೋದರರ ಬಳಿಗೆ ಹೋಗಿ–ನಾನು ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ ಎಂದು ಅವರಿಗೆ ಹೇಳು ಅಂದನು. ಮಗ್ದಲದ ಮರಿಯಳು ಹೋಗಿ–ನಾನು ಸ್ವಾಮಿಯವರನ್ನು ನೋಡಿದ್ದೇನೆ; ಆತನು ಇಂತಿಂದ್ದನ್ನು ನನಗೆ ಹೇಳಿದನು ಎಂದು ಶಿಷ್ಯರಿಗೆ ತಿಳಿಸಿದಳು.

ಅದೇ ದಿವಸದ ಅಂದರೆ ವಾರದ ಮೊದಲನೆಯ ದಿವಸದ ಸಂಜೆಯಲ್ಲಿ ಶಿಷ್ಯರು ಯೆಹೂದ್ಯರ ಭಯದಿಂದ ತಾವು ಇದ್ದ ಮನೆಯ ಬಾಗಿಲುಗಳನ್ನು ಮುಚ್ಚಿಕೊಂಡಿರಲು ಯೇಸು ಬಂದು ನಡುವೆ ನಿಂತು–ನಿಮಗೆ ಸಮಾಧಾನವಾಗಲಿ ಅಂದನು. ಇದನ್ನು ಹೇಳಿದ ಮೇಲೆ ಅವರಿಗೆ ತನ್ನ ಕೈಗಳನ್ನೂ ಪಕ್ಕೆಯನ್ನೂ ತೋರಿಸಿದನು. ಶಿಷ್ಯರು ಸ್ವಾಮಿಯನ್ನು ನೋಡಿದ್ದರಿಂದ ಸಂತೋಷಪಟ್ಟರು. ಯೇಸು ಅವರಿಗೆ–ನಿಮಗೆ ಸಮಾಧಾನ–ವಾಗಲಿ ಎಂದು ತಿರಿಗಿ ಹೇಳಿ–ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿ ಕೊಡುತ್ತೇನೆ ಅಂದನು. ಇದನ್ನು ಹೇಳಿ ಅವರ ಮೇಲೆ ಊದಿ ಅವರಿಗೆ ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ; ನೀವು ಯಾರ ಪಾಪಗಳನ್ನು ಕ್ಷಮಿಸಿಬಿಡುತ್ತೀರೋ ಅವರಿಗೆ ಅವುಗಳ ಕ್ಷಮಾಪಣೆಯಾಗುತ್ತದೆ; ಯಾರ ಪಾಪಗಳನ್ನು ಕ್ಷಮಿಸದೆ ಉಳಿಸುತ್ತೀರೋ ಅವರಿಗೆ ಅವುಗಳು ಉಳಿಯುತ್ತವೆ ಅಂದನು.

ಯೇಸು ಬಂದಾಗ ಹನ್ನೆರಡು ಮಂದಿ ಶಿಷ್ಯರೊಳಗೆ ಒಬ್ಬನಾದ ದಿದುಮನೆನಿಸಿಕೊಳ್ಳುವ ತೋಮನು ಅವರ ಸಂಗಡ ಇರಲಿಲ್ಲ. ಆದುದರಿಂದ ಉಳಿದ ಶಿಷ್ಯರು–ನಾವು ಸ್ವಾಮಿಯನ್ನು ನೋಡಿದ್ದೇವೆ ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು–ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು.

# ಯೇಸುವಿನ ಪುನರುತ್ಥಾನದ ಮಹತ್ವ

**ರೀಪ್ರಿಂಟ್ಸ್ ಪುಟ 3374**

## ಮತ್ತಾಯ 28:1–15

**"ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು." 1 ಕೊರಿಂಥ 15:20**

ಕೆಲವು ಮಂದಿಯೇ ನಮ್ಮ ಕರ್ತನ ಪುನರುತ್ಥಾನದ ಮಹತ್ವವನ್ನು–ಅಂದರೆ ಇಡೀ ಸುವಾರ್ತೆಯ ಸಂದೇಶದ ಮೇಲೆ ಅದಕ್ಕಿರುವ ಸಂಬಂಧದ ಬಗ್ಗೆ ಗ್ರಹಿಸಿಕೊಂಡಿರುವಂತೆ ತೋರುತ್ತದೆ. ಅಪೋಸ್ತಲನು ಬರೆಯುವಾಗ ಇದರ [ಪುನರುತ್ಥಾನದ] ಮೇಲೆ ಈ [ಸುವಾರ್ತೆಯ] ವಿಷಯವು ಎಷ್ಟು ಅವಲಂಬಿಸಿರುವದೆಂದು ಈ ಮುಂದಿನ ಮಾತುಗಳಲ್ಲಿ ಸೂಚಿಸಿರುವನು–"ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯು

ಹುರುಳಿಲ್ಲದ್ದು ...ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆಹೋದವರು ನಾಶವಾದರು." (1 ಕೊರಿಂಥ 15:14,18) ಪುನರುತ್ಥಾನದ ಬಗ್ಗೆ ಗ್ರಹಿಸಿಕೊಳ್ಳುವದರಲ್ಲಿ ವಿಫಲರಾಗಿರುವ ಅಂದರೆ ಅದರಲ್ಲಿ ನಿಜವಾಗಿಯೂ ನಂಬಿಕೆಯಿಲ್ಲದವರಾದ ಕರ್ತನ ತೋರಿಕೆಯ ಹಿಂಬಾಲಕರುಗಳು, ಸಭಾಸೇವಕರುಗಳು, ಮತ್ತು ಜನಸಮಾನ್ಯರ ಸಂಖ್ಯೆಯು ಬಹು ದೊಡ್ಡದಾಗಿರುವದು. ಇದನ್ನು ನಿಜವಾಗಿಯೂ ನಂಬುವವರ ಸಂಖ್ಯೆಯು ಬಹು ಸಣ್ಣದು. ಅಂಧಕಾರದ ಯುಗದ (ಡಾರ್ಕ್ ಏಜಸ್) ಮೂಲಕವಾಗಿ ಬಂದ ಬೋಧನೆಗೆ ಒಳಗಾಗಿರುವ ಬಹು ಪಾಲು ಜನರು ಮರಣವೆಂಬದು ಜೀವದ ರದ್ದಾಗುವಿಕೆಯೆಂಬುದನ್ನು ಅಲ್ಲದೆ –"ಅವನ ಸಂಕಲ್ಪಗಳೆಲ್ಲಾ ಅದೇ ದಿನದಲ್ಲಿ ಹಾಳಾಗುವವು." ಎಂದು ಶಾಸ್ತ್ರವಚನಗಳು ಪ್ರಕಟಮಾಡಿರು–ವಂಥದನ್ನು ಗ್ರಹಿಸಿಕೊಳ್ಳಲು ಸಂಪೂರ್ಣವಾಗಿ ವಿಫಲರಾ–ಗಿರವರು; ಪ್ರತಿಯಾಗಿ ಕ್ರೈಸ್ತಸಮೂಹದ ದೊಡ್ಡ ಗುಂಪು–ಸಾವೆಂಬದು ಇರುವದಿಲ್ಲವೆಂದೂ ಸಾವನ್ನು ಹೊಂದಿರುವವರು ಸಾವನ್ನಪ್ಪುವದಕ್ಕೆ ಮೊದಲು ಇದ್ದುದಕ್ಕಿಂತಲೂ ಹೆಚ್ಚು ಜೀವಂತರಾಗಿರುವರೆಂಬುದನ್ನು ನಂಬುತ್ತಾ ಬಂದಿರುವರು. ಈ ಅಭಿಪ್ರಾಯವನ್ನು ನಮ್ಮ ಕರ್ತನಿಗೂ ಮತ್ತು ಇತರರಿಗೂ ಅನ್ವಯಮಾಡಿದವರಾಗಿ ಅವರು–"ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತು ಮೂರನೇ ದಿನದಲ್ಲಿ ಎದ್ದು ಬಂದಿರುವನು" ಎಂದು ಶಾಸ್ತ್ರವಚನಗಳು ಪ್ರಕಟಿಸಿರುದನ್ನು ಮನನಮಾಡಿ–ಕೊಂಡಿರುವದಿಲ್ಲ. [ಸಾವನ್ನಪ್ಪಿದ್ದ] ಆ ಸಮಯದಲ್ಲಿ ಆತನು ಜೀವಂತನಾಗಿದ್ದು ಕೇವಲ ಆತನ ಶರೀರವು ಸಮಾಧಿಯಲ್ಲಿ ಅಚೇತನವಾಗಿತ್ತೆಂದೂ ಮತ್ತು ಮೂರನೆಯ ದಿನದಲ್ಲಾದ ಪುನರುತ್ಥಾನವು ಆತನ ಜೀವಕ್ಕೋಸ್ಕರವಾದ ಪುನರುತ್ಥಾನ–ವಾಗಿರದೆ ಕೇವಲ ಅದು ಆತನ ಮೃತದೇಹವು ಪುನಶ್ಚೇತನ–ಗೊಂಡಿತ್ತೆಂದು ಅವರು ಆಲೋಚಿಸುವವರಾಗಿರುವರು.

## ತಪ್ಪು ಗೊಂದಲಕ್ಕೆ ಎಡೆಮಾಡಿಕೊಡುವದು

ಮತಸುಧಾರಕರಿಂದ ಅಂಗೀಕೃತವಾದ ಮಧ್ಯಯುಗದಲ್ಲಿನ ತಪ್ಪು[ಬೋಧನೆ]ಗಳು ಈ ದಿನದ ನಾಗರೀಕ ಪ್ರಪಂಚದವರ ಮನಸ್ಸುಗಳಲ್ಲಿ ಬೆಸೆದುಕೊಂಡಿದ್ದು ಇದರಿಂದ ಗೊಂದಲಗೊಂಡ ಬಹು ಪಾಲಿನ ಕ್ರೈಸ್ತ ಜನರಿಗೆ ಸತ್ಯವೇದದಲ್ಲಿ ಪ್ರಕಟಿಸಲಾಗಿರುವ ನಮ್ಮ ಕರ್ತನ ಪುನರುತ್ಥಾನದ ಪ್ರಾಮುಖ್ಯತೆಯನ್ನು ಮನನಮಾಡಿಕೊಳ್ಳಲು ಸಾಧ್ಯವಾಗಿರುವದಿಲ್ಲ. ಯೇಸುವು ಸತ್ತವರೊಳಗಿಂದ ಎದ್ದು ಬರಲಿಲ್ಲವಾದರೆ ನಮ್ಮ ನಂಬಿಕೆಯು ಹುರುಳಿಲ್ಲದ್ದು ನಮ್ಮ ಬೋಧನೆಯೂ ನಿಷ್ಪ್ರಯೋಜನ –ವಾದ್ದದೆಂದು ಈಗತಾನೇ ನಾವು ಉಲ್ಲೇಖಿಸಿದಂಥ ಅಪೊಸ್ತಲರ ಹೇಳಿಕೆಯ ಪರಿಣಾಮಕಾರಿ ವಚನಗಳನ್ನು ನಂಬುವದಕ್ಕೆ ಬದಲು ಕ್ರೈಸ್ತಸಮೂಹದಲ್ಲಿನ ಬಹು ಪಾಲು ಮಂದಿ ಕೇವಲ ಇದಕ್ಕೆ ವಿರುದ್ಧವಾದುದನ್ನು ಅಂದರೆ ಈ ಮುಂದಿನದನ್ನು ಹೇಳುವ ಪ್ರವೃತ್ತಿಯುಳ್ಳವರಾಗಿರುವರು: "ಯೇಸುವಿನ ದೇಹವು ಸಮಾಧಿಯಲ್ಲೇ ಬಿಡಲಾಗಿದ್ದಲ್ಲಿ ಅದು ಗತಿಸಿಹೋದ ನಮ್ಮ ಪ್ರಿಯರ ಬಗ್ಗೆ ಯಾವ ವ್ಯತ್ಯಾಸವನ್ನು ಉಂಟುಮಾಡದು, ನಮ್ಮ ಬೋಧನೆಯ ಬಗ್ಗೆ ಅದು ಯಾವ ವ್ಯತ್ಯಾಸವನ್ನು ಉಂಟುಮಾಡದು, ನಮ್ಮ ನಂಬಿಕೆಯ ವಿಷಯದಲ್ಲಿ ಇದರಿಂದ ಯಾವ ವ್ಯತ್ಯಾಸಉಂಟಾಗದು." ಆದುದರಿಂದ ಕೇವಲ ಸತ್ತು ಹೋದವರು ಸತ್ತೇಹೋಗಿರುವರೆಂದು ಅಂದರೆ ಮರಣವೆಂಬ ನಿದ್ರೆಯಿಂದ ಎಬ್ಬಿಸಲ್ಪಡುವ ವರೆಗೂ ಪ್ರಜ್ಞೆಯಿಲ್ಲದ ಸ್ಥಿತಿಯಲ್ಲಿರು ವರೆಂಬುದನ್ನು ಗ್ರಹಿಸಿರುವವರು ಮಾತ್ರ ಪುನರುತ್ಥಾನದ ಮಹತ್ವವನ್ನು ನಿಜವಾಗಿಯೂ ಮನನಮಾಡಿಕೊಂಡಿರಲು ಸಾಧ್ಯ.

ಯೇಸುವು ಮರಣದಿಂದ ಎಬ್ಬಿಸಲ್ಪಡದಿದ್ದಲ್ಲಿ ಸುವಾರ್ತೆಯನ್ನು ಸಾರಲು ನಮಗೆ ಯಾವುದೇ ಆಧಾರವಿರುತ್ತಿರಲಿಲ್ಲ – ಯಾಕಂದರೆ ಸುವಾರ್ತೆಯ ಸಂದೇಶವು ಏನಂದರೆ: ದೇವರ ಕೃಪೆಯಿಂದ ಯೇಸುವಿನ ಮರಣವು ತಂದೆಯಾದ ಆದಾಮನ ಮತ್ತು ಆತನ ಸಂತತಿಯನ್ನು [ವಿಮೋಚಿಸುವ ಸಲುವಾದ] ಈಡು ಬೆಲೆಯಾಗಿದ್ದು, ಮತ್ತು ಈ ಕಾರಣದಿಂದ ಯೇಸು ಮಾನವ ಸಂತತಿಯವರೆಲ್ಲರ ಪರವಾಗಿ ಹೀಗೆ ದಂಡವನ್ನು ತೆತ್ತು ತನ್ನ ಮರಣದ ಮೂಲಕವಾಗಿ ಮರಣದಂಡನೆಯ ತೀರ್ಪಿನಿಂದ ಎಲ್ಲರನ್ನು ವಿಮೋಚಿಸಿರುವನು, ಮತ್ತು ಹೀಗಾಗಿ ಕ್ಲುಪ್ತಕಾಲದಲ್ಲಿ ಅಂದರೆ ದೇವರು ನಿಗದಿಮಾಡಿದ ಸಮಯದಲ್ಲಿ ಆದಾಮ ಹಾಗು ಅವನ ಸಂತತಿಯು ಮರಣ ದಂಡನೆಯ ತೀರ್ಪಿನಿಂದ ಬಿಡುಗಡೆಯಾಗ ಬೇಕಿರುವದು, ಅಲ್ಲದೆ ಕ್ರಿಸ್ತನು ದೊಡ್ಡ ಅರಸನಾಗಿ ಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಬೇಕಿರುವದು, ಮತ್ತು ಅದರ ಮೂಲಕವಾಗಿ ಮಾನವ ಕುಲದ ಮೇಲಿರುವ ಮರಣ ದಂಡನೆಯೆಂಬ ಹೊರೆಯನ್ನು ತೆಗೆದು ಹಾಕುವನು ಮತ್ತು ಆಗ ತಮ್ಮ ಸಮಾಧಿಗಳಲ್ಲಿರುವ ಎಲ್ಲರೂ ಮನುಷ್ಯಕುಮಾರನ ಧ್ವನಿಯನ್ನು ಕೇಳಿ ಹೊರಬಂದು [ಕ್ರಿಸ್ತನ] ಸಾವಿರ ವರುಷದ ಆಳ್ವಿಕೆಯ ಭವ್ಯವಾದ ಸದವಕಾಶವನ್ನು ಅಂದರೆ ದೇವರೊಡನೆ ಸಂಧಾನವಾಗಿ, [ಆದಾಮನ ಅವಿಧೇಯತೆ ಮೂಲಕವಾಗಿ] ಬಿದ್ದುಹೋದ [ಕಳೆದುಕೊಂಡ] ಅಪರಿಪೂರ್ಣತೆಯಿಂದ ಬಿಡುಗಡೆಯಾಗುವ ಅವಕಾಶವನ್ನು ಹೊಂದುವರು. ನಮ್ಮ ಮುಂದಿರುವ ಸತ್ಯಾಂಶದ ಮೂಲಕವಾಗಿ ಇಂಥಾ ಒಂದು ಸುವಾರ್ತೆಯನ್ನು ಸಾರುವದು ಅಂದರೆ ಪುನರುತ್ಥಾನದ ವಿಷಯವಾದ ಯಾವ ಸಾಕ್ಷ್ಯಾಧಾರವಿಲ್ಲದೆಯೇ ಯೇಸುವು ಮರಣಹೊಂದಿದನೆಂಬುದನ್ನು ಸಾರಿದಲ್ಲಿ ನಮ್ಮ ಬೋಧನೆಯು ನಿಷ್ಪ್ರಯೋಜನಕರವಾದುದೂ, ಅವಿವೇಕದ ಬೋಧನೆಯೂ ಆಗಿದ್ದು ಜನರನ್ನು ಮರುಳುಗೊಳಿಸುವಂಥ –ದ್ದಾಗಿರುವದು. ಇಂಥಾ ಒಂದು ಸಂದರ್ಭದಲ್ಲಿ ಈ ರೀತಿಯ ಒಂದು ಸುವಾರ್ತೆಯನ್ನು ನಂಬುವದು ನಮ್ಮ ಮೇಲೆ ಅದು ವಿವೇಕವಿಲ್ಲದ ಪೆದ್ದರೆಂಬ ಮುದ್ರೆ ಬೀಳುವಂತೆ ಮಾಡುವದು ಅಲ್ಲದೆ ಸತ್ತುಹೋದ ಕ್ರಿಸ್ತನ ಮೂಲಕವಾಗಿ ಮೃತರಾದ ನಮ್ಮ ಮಿತ್ರರು ಎಂದಾದರೂ ಪ್ರಯೋಜನಹೊಂದುವರೆಂಬ ನಿರೀಕ್ಷೆಯನ್ನಿಟ್ಟುಕೊಳ್ಳುವದೂ ನಿರರ್ಥಕವೆನ್ನಿಸಿಕೊಳ್ಳುವದು.

ಕರ್ತನ ಪುನರುತ್ಥಾನದ ಪ್ರಾಮುಖ್ಯತೆ ಹಾಗು ಸುವಾರ್ತೆಯ ಪ್ರತಿಯೊಂದು ಗುಣಲಕ್ಷಣಗಳು ಹೇಗೆ ಈ ವಿಶೇಷವಾದ ಅಂಶದ ಮೇಲೆ ಅವಲಂಬಿಸಿರುವದೆಂಬುದನ್ನು ಕಂಡ ನಂತರ ಅಪೊಸ್ತಲರ ಬೋಧನೆಯು ಅಂದರೆ ಪಾಪಗಳ ಪರಿಹಾರ ಮತ್ತು ಮುಂದೆ ಲಭಿಸುವಂಥ ಆಶೀರ್ವಾದಗಳು ಕ್ರಿಸ್ತನು ನಮ್ಮ ಪಾಪಗಳ

ಪರಿಹಾರಕ್ಕಾಗಿ ಈಡು ಬೆಲೆಯಾಗಿ ಸತ್ತಂಥದ್ದು ಮಾತ್ರವಲ್ಲದೆ ನಮ್ಮನ್ನು ನೀತಿವಂತರನ್ನಾಗಿ ನಿರ್ಣಯಿಸಿ, [ಮರಣದಂಡನೆಯ] ಆ ತೀರ್ಪಿನಿಂದ, ಪಾಪಪ್ರಜ್ಞೆಯಿಂದ, ಮತ್ತು ಅದರ ಶಿಕ್ಷೆಯಿಂದ ಅಂದರೆ ಮಾನವ ಕುಲದವರಾದ ನಮ್ಮ ಮೇಲಿರುವ ಮರಣದಂಡನೆಯೆಂಬ ಶಿಕ್ಷೆಯಿಂದ ಬಿಡುಗಡೆಯಾಗುವದು ಇವೆಲ್ಲವೂ ಆತನು ಸತ್ತರವರೊಳಗಿಂದ ಎದ್ದು ಬಂದಿರುವ ಅಂಶದ ಮೇಲೆ ಆಧಾರಗೊಂಡಿರುವದೆಂಬದಕ್ಕೆ ಇರುವ ಕಾರಣವು ಏನೆಂಬದು ನಮಗೆ ಅರ್ಥವಾಗುವದು. ಹೀಗಿರುವಾಗ ನಾವು ನಮ್ಮ ಕರ್ತನ ಪುನರುತ್ಥಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಸಂಗತಿಗಳ ಅಷ್ಟು ಸುವ್ಯಕ್ತವಾದ ಒಂದು ವಿವರಣೆಯನ್ನು, ಅಷ್ಟು ಸುಧೀರ್ಘವಾದ ಒಂದು ಹೇಳಿಕೆಯನ್ನು ಹೊಂದಿರಬೇಕೆಂದು ನಮ್ಮ ಪರಲೋಕದ ತಂದೆಯು ಏರ್ಪಾಟು ಮಾಡಿರುವನೆಂಬುದರಲ್ಲಿ ಆಶ್ಚರ್ಯವಿಲ್ಲ; ಸೌವಾರ್ತಿಕರು ಈ ಸಂಗತಿಯನ್ನು ಇಷ್ಟು ಕೂಲಂಕುಷವಾದ ರೀತಿಯಲ್ಲಿ ದಾಖಲಿಸಿರುವರೆಂಬುದಕ್ಕೆ ಆಶ್ಚರ್ಯಪಡಬೇಕಿಲ್ಲ; ಅಪೋಸ್ತಲರು ತಮ್ಮ ಎಲ್ಲಾ ಉಪದೇಶಗಳಲ್ಲಿ ತಂದೆಯ ಕಡೆಗಿರುವ ತಮ್ಮ ಸ್ವಂತ ವಿಶ್ವಾಸದ ಮೇಲೆ ಆಧಾರಗೊಂಡಿರುವ ಈ ಮೂಲಭೂತವಾದ ಸತ್ಯಾಂಶವನ್ನು ಸಭೆಯ ಎದುರಿನಲ್ಲಿ ಬಹು ಮುಖ್ಯವಾದುದೆಂದು ಪ್ರತಿಪಾದಿಸಿರುವದರಲ್ಲಿ ಆಶ್ಚರ್ಯವೇನಿಲ್ಲ. ಈ ದೃಷ್ಟಿಯಿಂದ ಈ ಪ್ರಸ್ತುತ ಪಾಠವು ಕರ್ತನ ಜನರೆಲ್ಲರಿಗೂ ಎಲ್ಲಾ ಕಾಲದಲ್ಲಿಯೂ, ಒಂದು ಗಾಢವಾದ ಆಸಕ್ತಿಯುಳ್ಳದ್ದಾಗಿರಬೇಕು; ದೇವರ ರಾಜ್ಯವು ಬಾಹ್ಯವಾಗಿ ತೋರ್ಪಡುವವರೆಗೂ ಇದು ಸಾಕ್ಷಿ ನೀಡುವಂಥಾ–ಗಿದ್ದು ಇದನ್ನು ನಂಬಿಗಸ್ತರ ಮನೆತನದವರೆಲ್ಲರೂ ಈ ಸಾಕ್ಷಿಯ ಮೇಲೆ ರೂಪುಗೊಂಡಿರುವ ನಂಬಿಕೆಯ ಮೂಲಕವಾಗಿ ಈಗ ಇದನ್ನು ಅಂಗೀಕರಿಸಿಕೊಳ್ಳುವಂಥವರಾಗಿರಬೇಕು.

## ಆತನು ಮೂರನೆಯ ದಿನದಲ್ಲಿ ಎದ್ದು ಬಂದನು.

ನಮ್ಮ ಕರ್ತನ ಶಿಲುಬೆಗೆ ಹಾಕೋಣವು ಯೆಹೂದ್ಯರ ಕಾಲಮಾನವಾದ ನಿಸ್ಸಾನ್ ತಿಂಗಳಿನ 14ನೇ ದಿನದಲ್ಲಿ ನಡೆಯ –ಲಾದದ್ದೆಂದು ಸಾಮಾನ್ಯವಾಗಿ ಅಂಗೀಕೃತವಾಗಿರುವ ಅಭಿಪ್ರಾಯವನ್ನು ನಾವು ಸಹಮತಿಸುವವರಾಗಿದ್ದು, ಅದು ಸಮರ್ಪಕವಾಗಿ ದೃಡೀಕರಿಸಲ್ಪಟ್ಟಿರುವದೆಂದು ನಾವು ನಂಬಿರು–ವೆವು; ಅದು ವಾರದ ಆರನೇ ದಿನಕ್ಕೆ ಸರಿಬೀಳುವಂಥದ್ದಾಗಿದ್ದು, ಈಗ ಅದನ್ನು ನಾವು ಶುಕ್ರವಾರವೆಂದು ಕರೆಯುವೆವು. ದಾಖಲೆಗಳ ಪ್ರಕಾರ ನಮ್ಮ ಕರ್ತನು ಮಧ್ಯಾಹ್ನ ಮೂರು ಗಂಟೆಗೆ ಮರಣಹೊಂದಿದ್ದನು. ಕಲ್ವಾರಿಯು ಯೆರೂಸಲೇಮಿನ ಬಾಗಿಲಿ–ನಿಂದ, ದೇವಾಲಯದಿಂದ ಮತ್ತು ಪಿಲಾತನ ನಿವಾಸದಿಂದ ಸ್ವಲ್ಪ ದೂರದಲ್ಲಿತ್ತು. ಹೀಗಾಗಿ ಸನ್–ಹೆದ್ರೀನ್ ಸಭೆಯ ಸದಸ್ಯರಾದ ನಿಕೋದೇಮನು ಹಾಗು ಯೋಸೇಫನು ಯೇಸುವಿನೊಂದಿಗೆ ಸ್ಪಷ್ಟವಾದ ಸ್ನೇಹದಿಂದಿದ್ದರೂ, ಆತನು ಹೇಳಿಕೊಳ್ಳುವ ವಿಷಯದ ಸತ್ಯತೆಯ ಬಗ್ಗೆ ಸಾಕಷ್ಟು ಮನವರಿಕೆಯಾಗದವರಾಗಿದ್ದು ಇಲ್ಲವೇ ಆತನೊಂದಿಗೆ ತಮ್ಮ ಜೀವವನ್ನು ಕೊಡಲು ಸಾಕಷ್ಟು ಧೈರ್ಯವಿಲ್ಲದವರಾಗಿದ್ದು, ಆತನ ಮರಣವನ್ನು ಗಮನಿಸಿದ ನಂತರ ಅತನನ್ನು ಹೂಣುವ ಸಲುವಾಗಿ ಒಪ್ಪಿಗೆಯನ್ನು ಪಡಕೊಳ್ಳಲು ಅವರಿಗೆ ಅತಿ ದೂರ ಕ್ರಮಿಸಬೇಕಾಗಿದ್ದಿರಲಿಲ್ಲ; ಅಲ್ಲದೆ ಆತನನ್ನು ಹೂಣಿಡಲು ಉದ್ದೇಶಿಸಲಾದ ಸಮಾಧಿಯು ಶಿಲುಬೆಯಿರುವದೆಂದು ಹೇಳಲಾದ ಸ್ಥಳದಿಂದ ಕಲ್ಲೆಸುಗೆಯ ದೂರದಲ್ಲಿತ್ತೆಂದು ಭಾವಿಸಲಾಗಿರುವದು. ಹೀಗಾಗಿ ಶುಕ್ರವಾರಕ್ಕೆ ಸರಿಬೀಳುವವೆಂದು ನಾವು ಹೇಳುವ ಆ ದಿನ ಮಧ್ಯಾಹ್ನ ಸುಮಾರು ನಾಲ್ಕು ಗಂಟೆಯಲ್ಲಿ ನಮ್ಮ ಕರ್ತನು ಹೂಣಲ್ಪಟ್ಟನೆಂದು ಭಾವಿಸಲಾಗಿರುವದು. ಮಾರಣೆಯ ದಿನವು ನಾವು ಕರೆಯುವ ಶನಿವಾರವಾಗಿದ್ದು ಯೆಹೂದ್ಯರು ಅದನ್ನು ಏಳನೇ ದಿನ ಅಥವಾ ಸಬ್ಬತೆಂದು ಕರೆದಿದ್ದು, ಅದು ಯೆಹೂದ್ಯರ ಕಾಲಮಾನದಂತೆ ಶುಕ್ರವಾರ ಸಂಜೆ ಸೂರ್ಯಾಸ್ತಮದೊಡನೆ ಆರಂಭವಾಗಿ ನಾವು ಕರೆಯುವ ಶನಿವಾರದ ಸೂರ್ಯಾಸ್ತಮಾನದಲ್ಲಿ ಮುಕ್ತಾಯ ವಾಗುವದು, ಅಲ್ಲದೆ ನಮ್ಮ ಕರ್ತನ ಪುನರುತ್ಥಾನವು ವಾರದ ಮೊದಲನೇ ದಿನದ ಮುಂಜಾನೆಯಲ್ಲಿ ಸಂಭವಿಸಲಾಗಿದ್ದು, ಅದನ್ನು ಈಗ ನಾವು ಭಾನುವಾರವೆಂದು ಹೆಸರಿಸಿರುವೆವು.

ಹೀಗೆ ನಮ್ಮ ಕರ್ತನು “ಮೂರನೇ ದಿನದಂದು” ಮರಣದಿಂದ ಎದ್ದುಬಂದಿದ್ದನು. ಶುಕ್ರವಾರ ಮೂರು ಗಂಟೆಯಿಂದ ಆರು ಗಂಟೆಯ ವರೆಗೆ, ಆನಂತರದ ರಾತ್ರಿಯೆಲ್ಲಾ, ಮತ್ತು ಮರುದಿನ ಅಂದರೆ ಶನಿವಾರ ಪೂರ್ತಿಯಾಗಿ, ಯೆಹೂದ್ಯರು ವಾರದ ಮೊದಲನೇ ದಿನದ ಆದಿಭಾಗವೆಂದು ಕರೆಯುವ ಆನಂತರದ ಆ ರಾತ್ರಿಯೆಲ್ಲಾ, ವಾರದ ಮೊದಲನೇ ದಿನದ ಮುಂಜಾನೆಯ ಸಮಯದವರೆಗೂ ಆತನು ಮರಣಾವಸ್ಥೆಯಲ್ಲಿದ್ದನು. ಇದು ಮೂರು ದಿನ ಹಗಲುರಾತ್ರಿಗಳು ಪೂರ್ಣಗೊಳ್ಳುವಂತೆ ಅಂದರೆ ಎಪ್ಪತ್ತೆರಡು ಗಂಟೆಗಳು ಮುಕ್ತಾಯಗೊಳ್ಳುವಂತೆ ಮಾಡುವದಿಲ್ಲ; ಆದರೆ ಮೂರನೆಯ ದಿನದಂದು ಎದ್ದುಬರುವನೆಂದು ಅರ್ಥಬರುವಂತೆ ನಮ್ಮ ಕರ್ತನು ಪ್ರಕಟಮಾಡಿ ಹೇಳಿದ್ದನ್ನು ಒಳಗೊಂಡಿರುವದೆಂದು ನಾವು ನಂಬಿರುವೆವು. ಕೆಲವರು ಮೂರು ದಿನ ಹಗಲು ಹಾಗು ರಾತ್ರಿಗಳನ್ನು ಪೂರ್ಣವಾಗಿ ಎಣಿಸಲು ಬಯಸುವವರಾಗಿದ್ದು ಇದು ಅವರನ್ನು ನಮ್ಮ ಕರ್ತನು ಗುರುವಾರದಂದು ಶಿಲುಬೆಗೆ ಹಾಕಲ್ಪಟ್ಟನೆಂದು ಹೇಳಿಕೊಳ್ಳುವಂತೆ ನಡೆಸಿರುವದು; ಆದರೆ ಇದು ಮೂರು ಹಗಲು ಮೂರು ರಾತ್ರಿ ಅಂದರೆ ಎಪ್ಪತ್ತೆರಡು ಗಂಟೆಗಳನ್ನಾಗಿಸುವದಿಲ್ಲ. ಪೂರ್ಣವಾದ ಮೂರು ದಿನಗಳು ಮತ್ತು ಪೂರ್ಣವಾದ ಮೂರು ರಾತ್ರಿಗಳನ್ನು ಹೊಂದಿಸುವ ಸಲುವಾಗಿ ನಮ್ಮ ಕರ್ತನು ಬುಧವಾರದಂದು ಶಿಲುಬೆಗೆ ಹಾಕಲ್ಪಟ್ಟಿರುವನೆಂಬುದನ್ನು ಭಾವಿಸಿಕೊಳ್ಳುವದು ನಮಗೆ ಅನಿವಾರ್ಯವಾಗುವದು. ಆದರೆ ಇಂಥಾ ಒಂದು ಕಲ್ಪನೆಗೆ ಸಾಕ್ಷ್ಯಾಧಾರಗಳೆಲ್ಲವೂ ವಿರೋಧವಾಗಿದ್ದು ಅದು ಶುಕ್ರವಾರದ ಪರವಾಗಿ ಹಾಗು ನಮ್ಮ ಕರ್ತನು ಉಲ್ಲೇಖಿಸಿರುವಂತೆ ಭಾಗಶಃ ಮೂರು ದಿನ ಹಗಲು ರಾತ್ರಿಗಳನ್ನು ಎಣಿಸುವದರಲ್ಲಿ ನಿರ್ಧಾರಿತವಾಗಿರುವದು. ಆದರೆ ಯಾರಾದರೂ ನಮ್ಮ ಈ ಅಭಿಪ್ರಾಯಕ್ಕಿಂತಲೂ ಭಿನ್ನವಾದ ಅಭಿಪ್ರಾಯವನ್ನು ಹೊಂದಿದ್ದಲ್ಲಿ, ನಾವು ಅವರೊಂದಿಗೆ ವಿವಾದಿಸಲಾರೆವು: ಇದು ಒಂದು ಅಲ್ಪ ಸಂಗತಿಯಾಗಿದ್ದು, ಇದಕ್ಕೆ ಯಾವುದೇ ಮಹತ್ವವಿರುವದಿಲ್ಲ. ನಮ್ಮ ಕರ್ತನು ಮರಣಾವಸ್ಥೆಯಲ್ಲಿದ್ದ ಅವಧಿಯ ಮೇಲೆ ಯಾವುದೊಂದೂ ಅವಲಂಭಿತವಾಗಿರು –

ವದಿಲ್ಲ. ಮುಖ್ಯವಾದ ಅಂಶಗಳು ಯಾವುದಾಗಿದ್ದವೆಂದರೆ ಆತನು ನಿಜವಾಗಿಯೂ ಮರಣಹೊಂದಬೇಕಿದ್ದು, ಆತನು ಮರಣಹೊಂದಿದ್ದನೆಂಬುದನ್ನು ಹಾಗು ಮರಣದಿಂದ ಎಬ್ಬಿಸಲ್ಪಡುವನೆಂಬುದನ್ನು ಖಚಿತವಾಗಿ ತಿಳಿಯುವಂತಾಗಲು ತಾನು ಸಾಕಷ್ಟು ದೀರ್ಘಕಾಲ ಮರಣಾವಸ್ಥೆಯಲ್ಲಿ ಇರಬೇಕೆಂಬುದಾಗಿತ್ತು.

## ದೇವಾಲಯವನ್ನು ಕೆಡವಿ [ಮತ್ತೆ] ಅದನ್ನು ಎಬ್ಬಿಸಲ್ಪಡುವದು

"ಈ ದೇವಾಲಯವನ್ನು ಕೆಡವಿರಿ ಅದನ್ನು ಮೂರು ದಿನದಲ್ಲಿ ಎಬ್ಬಿಸುವೆನು" ಎಂದು ನಮ್ಮ ಕರ್ತನು ಮುಂದಾಗಿ ಹೇಳಿದಾಗ "ಆತನು ತನ್ನ ದೇಹವೆಂಬ ದೇವಾಲಯವನ್ನು ಸೂಚಿಸಿ ಹೇಳಿದ್ದನು." (ಯೋಹಾನ 2:21) ಆದರೆ ಆತನು ಯಾವ ದೇಹದ ಸಂಬಂಧದಲ್ಲಿ ಹೇಳಿದ್ದನು? ಪಾಪಗಳ ನಿವಾರಣೆಗಾಗಿ ಯಜ್ಞಾರ್ಪಣೆಮಾಡಿಕೊಂಡು ಅದನ್ನು ಮರಣ ಹೊಂದುವ ಸಲುವಾಗಿ ಪ್ರತಿಷ್ಠೆಪಡಿಸಿಕೊಳ್ಳಲು ತಾನು ತೆಗೆದುಕೊಂಡ ದೇಹವೋ? ಮೂರನೇ ದಿನದಲ್ಲಿ ಎಬ್ಬಿಸಲ್ಪಡು–ವದೆಂಬ ಅರ್ಥವುಳ್ಳಂತೆ ಆತನು ಹೇಳಿದ ದೇಹವಾಗಿತ್ತೋ? ನಮ್ಮ ಉತ್ತರವೇನಂದರೆ ಆ ದೇಹವು ಆತನ ಆಲಯವಾಗಿರಲಿಲ್ಲ, ಆದರೆ ಅದು ಕೇವಲ ಆತನ ಗುಡಾರವಾಗಿತ್ತು. ಪುನರುತ್ಥಾನ ಹೊಂದಿದ ನಮ್ಮ ಕರ್ತನ ದೇಹವು ಯೆಹೂದ್ಯರು ನಾಶಪಡಿಸಿದಂಥ ದೇಹವಾಗಿರಲಿಲ್ಲ, ಆದರೆ ಅದು ಅವರು ಎಂದೂ ನೋಡದಿದ್ದ ಒಂದು ಆತ್ಮಿಕ ದೇಹವಾಗಿದ್ದು, ಅದು "ದಿನ ತುಂಬದೆ ಹುಟ್ಟಿದವನಾದ' ಅಪೋಸ್ತಲನಾದ ಪೌಲನಿಗೆ ದಮಸ್ಕಕ್ಕೆ ಹೋಗುವ ದಾರಿಯಲ್ಲಿ ಕಾಣಿಸಿಕೊಂಡಂಥದ್ದಾಗಿತ್ತು. ಯೇಸುವು ಅವನಿಗೆ "ಮಧ್ಯಾಹ್ನದ ಬೆಳಕಿಗಿಂತಲೂ ಅಧಿಕವಾಗಿ ಹೊಳೆಯುವವನಾಗಿ" ಕಾಣಿಸಿಕೊಂಡಿದ್ದನು.

ನಮ್ಮ ಕರ್ತನು ತಾನು ಶಿರಸ್ಸಾಗಿರುವೆನೆಂದು ತನ್ನ ದೇಹವಾದ ಸಭೆಯ ವಿಷಯವಾಗಿ ಹೇಳಿದ್ದನೆಂಬುದನ್ನು ಭಾವಿಕೊಳ್ಳುವದು ಬಹು ವಿವೇಚನೆಯುಳ್ಳದ್ದು. ಯೆಹೂದ್ಯರು ಆ ಶಿರಸ್ಸಾದವನನ್ನು ನಾಶಗೊಳಿಸಿದ್ದರು ಅಲ್ಲದೆ ಸುವಾರ್ತಾ ಯುಗದ ಪರ್ಯಂತರವಾಗಿ ಕ್ರಿಸ್ತನ ದೇಹದ ಅಂಗಗಳಾಗಿರುವ ಹಲವರು "ಆತನೊಡನೆ ಬಾಧೆಯುನ್ನುಭವಿಸಲು", "ಆತನೊಂದಿಗೆ ಸತ್ತವರಾಗಿರಲು", "ತಮ್ಮ ಸಹೋದರರಿಗಾಗಿ ಪ್ರಾಣಗಳನ್ನು ಕೊಡುವವರಾಗಲು" ಕರೆಯಲ್ಪಟ್ಟಿರುವರು. ಆ ದೇಹವು ಯೇಸುವಿನ ದಿನದಿಂದ ಈಗಿನ ವರೆಗೂ ನಾಶಹೊಂದುವ ಪ್ರಕ್ರಿಯೆಯಲ್ಲಿದ್ದು ಅತಿ ಶೀಘ್ರದಲ್ಲಿ ಕಡೆಯ ಸದಸ್ಯನು [ಅಂಗವು] "ಮರಣದ ಪರ್ಯಂತರವಾಗಿ ನಂಬಿಗಸ್ತನಾಗಿ" ತನ್ನನ್ನು ಪ್ರಮಾಣಿಸಿಕೊಳ್ಳಲ್ಪಡುವನೆಂಬುದನ್ನು ನಾವು ನಂಬುವೆವು. ಈಗ ನಾವು, ಪೇತ್ರನು ಪ್ರಕಟಮಾಡಿ ಹೇಳಿರುವಂತೆ, ಕರ್ತನು ತಾನೇ ಮುಖ್ಯವಾದ ಮೂಲೆಗಲ್ಲಾಗಿದ್ದು, ಆತನ ನಂಬಿಗಸ್ತನಾದ ಶಿಷ್ಯನು ಅದಕ್ಕೆ ಜೀವವುಳ್ಳ ಕಲ್ಲುಗಳನ್ನು ಒಳಗೊಂಡ ದೇವಾಲಯವಾದ ಈ ಸಭೆಯನ್ನು ಆತನು ಹೇಗೆ ಎಬ್ಬಿಸುವನೆಂಬುದನ್ನು ನೋಡೋಣ. (1 ಪೇತ್ರ 2:4) "ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತಿರುವದೆಂಬ" ನಮ್ಮ ಕರ್ತನ ದೃಷ್ಟಿಕೋನದಿಂದ ಕಾಲವನ್ನು ಪರಿಗಣಿಸುವವರಾಗಿದ್ದಲ್ಲಿ ನಮ್ಮ ಕರ್ತನು ಲೋಕ ಉಂಟಾದ 4161ನೇ ವರುಷದಲ್ಲಿ ಅಂದರೆ ನಾಲ್ಕು ದಿನಗಳು ಕಳೆದ ನಂತರ ಮತ್ತು ಐದನೇ ದಿನದ ಆರಂಭವಾಗಿದ್ದಾಗ ಮರಣಹೊಂದಿದ್ದನು.

ಸಭೆಯಾಗಿರುವ ದೇವಾಲಯದ ನಾಶನವು ಮುಖ್ಯವಾದ ಮೂಲೆಗಲ್ಲಿನ ನಾಶನದಲ್ಲಿ ಆರಂಭವಾಗಿ ಅಂದಿನಿಂದ ಅಂದರೆ ಐದನೇ ದಿನದ ಉಳಿದ ಭಾಗದಲ್ಲಿ ಮತ್ತು ಆರನೆಯ ದಿನ ಪೂರ್ಣವಾಗಿ ಅದು ಪ್ರಗತಿಯಲ್ಲಿದ್ದು ಈಗ ನಾವು ಏಳನೇ ದಿನದ ಆರಂಭದಲ್ಲಿ ಅಂದರೆ "ಮುಂಜಾನೆಯ ಬಹು ಆದಿಯಲ್ಲಿ" ಇದ್ದೇವೆ. ಮತ್ತು ಕರ್ತನು ನೀಡಿರುವ ವಾಗ್ದಾನವೇನಂದರೆ (ಶಿರಸ್ಸು ಹಾಗೂ ಅದರ ದೇಹವಾದ) ಕರ್ತನ ಪುನರುತ್ಥಾನವು ಸುಮಾರು ಈ ಸಮಯದಲ್ಲಿ ಪೂರ್ಣವಾಗುವದೆಂಬದು – "ಉದಯ ಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು." (ಕೀರ್ತನೆ 46:5) ಹೀಗೆ ನಾವು ವಿಷಯವನ್ನು ನೋಡುವದೇನಂದರೆ ಕರ್ತನು ಭಾಗಶಃ ಮೂರು ದಿನಗಳು ಮರಣಾವಸ್ಥೆಯಲ್ಲಿದ್ದು ಮೂರನೆಯ ದಿನದ ಮುಂಜಾನೆಯಲ್ಲಿ ಎದ್ದುಬಂದಿದ್ದನು. ಇದರಂತೆಯೇ ಮೊದಲನೇ ಪುನರುತ್ಥಾನವು ಪೂರ್ಣಗೊಳ್ಳುವದು ಅಂದರೆ ಕ್ರಿಸ್ತನ ಸಂಪೂರ್ಣ ದೇಹವು ಮೂರನೆಯ ದಿನದ ಮುಂಜಾನೆಯಲ್ಲಿ ಎಬ್ಬಿಸಲ್ಪಡುವದು.

ಪುನರುತ್ಥಾನ ಸಂಭವಿಸಿದ ಸಮಯದಲ್ಲಿ ಆ ವಿಷಯವು ಅಪೋಸ್ತಲರ ಮಾನಸಿಕ ಗ್ರಹಿಕೆಗೆ ಹೊರತಾಗಿದ್ದುದು ಸ್ಪಷ್ಟವಾಗಿತ್ತು. ಯೇಸುವು ತಾನು ಮೂರನೆಯ ದಿನದಲ್ಲಿ ಮತ್ತೆ ಎದ್ದುಬರುವೆನೆಂದು ಮುಂದಾಗಿಯೇ ಹೇಳಿದ್ದನು, ಆದರೆ ಅವರು ಆತನ ಮಾತುಗಳ ಅರ್ಥವನ್ನು ಗ್ರಹಿಸಿಕೊಂಡಿರಲಿಲ್ಲ: ಆ ಕ್ಷಣಕ್ಕೆ ಅವರಲ್ಲಿ ಯಾರೂ ಆತನ ಪುನರುತ್ಥಾನದ ಬಗ್ಗೆ ಯೋಚಿಸಿರಲಿಲ್ಲ, ಆದರೆ ಆತನ ದೇಹವನ್ನು ಕೆಡದಂತೆ ಮುಲಾಮು ಹಚ್ಚಿ ಇಡಲು ಏನು ಮಾಡಲು ಸಾಧ್ಯವೆಂಬುದನ್ನು ಯೋಚಿಸಿದ್ದು ಆತನ ಮೃತ ದೇಹಕ್ಕೆ ಯಾವುದೇ ಒಬ್ಬ ಪ್ರಿಯ ಮಿತ್ರನಿಗೆ ಅಥವಾ ಸಹೋದರನಿಗೆ ಇಲ್ಲವೇ ಸಹೋದರಿಗೆ ತೋರಲಾಗುವ ಪ್ರೀತಿ ಸಹಾನುಭೂತಿಗಳನ್ನು ತೋರಲು ಯೋಚಿಸಿದ್ದರು. ಹೀಗೆ ಅವರಿಗೆ ಯೆಹೂದ್ಯರ ನಿಯಮದ ಪ್ರಕಾರ ಸಬ್ಬತ್ ದಿನದಲ್ಲಿ ಸಮಾಧಿಯ ಬಳಿಗೆ ಬರಲು ಅಡ್ಡಿಯುಂಟಾಗಿತ್ತು. ಯೆಹೂದ್ಯರ ವಿಧಿನಿಯಮಗಳು ಸಬ್ಬತ್ ದಿನದಲ್ಲಿ ಯಾವುದೇ ವಿಧವಾದ ಕೆಲಸ ಮಾಡುವದನ್ನು ನಿಷೇಧಮಾಡಿರುತ್ತವೆ. ಕರ್ತನ ಮಿತ್ರರು ಮೊದಲೇ ಗೊತ್ತುಮಾಡಿಕೊಂಡಿರುವ ಪ್ರಕಾರ ಸಬ್ಬತ್ ದಿನ ಕಳೆದ ನಂತರ ವಾರದ ಮೊದಲನೇ ದಿನದ ಉದಯದಲ್ಲಿ ಸಮಾಧಿಯ ಬಳಿಗೆ ಕೂಡಿಬರಲು ಆರಂಭಿಸಿದ್ದ ಸಂಭವವಿತ್ತು. ಅಲ್ಲಿ ಗಲಿಲಾಯದಿಂದ ಬಂದವರ ಒಂದು ಗುಂಪಿತ್ತು ಹಾಗು ಅವರು [ಯೆರೂಸಲೇಮ್] ಪಟ್ಟಣದ ಬೇರೆ ಬೇರೆ ಭಾಗಗಳಲ್ಲಿದ್ದ ಅವರ ಮಿತ್ರರ ಮನೆಯಲ್ಲಿ ಬಹುಶಃ ಬೇಥಾನ್ಯದಲ್ಲಿದ ಕೆಲವರ ಮನೆಯಲ್ಲಿ ಇಳುಕೊಂಡಿದ್ದ ಸಂಭವವಿತ್ತು; ಹೀಗಾಗಿ ಅವರು

ಬೇರೆ ಬೇರೆ ಮಾರ್ಗಗಳಿಂದ ಹೊರಟಿದ್ದರು. ವಿವರಣೆಗಳಲ್ಲಿ ವ್ಯತ್ಯಾಸವಿರುತ್ತದಾದರೂ ಅವು ಪೂರ್ಣವಾಗಿ ಸಮ್ಮತಿಸುವಂಥ–ವುಗಳಾಗಿದ್ದು ಅವುಗಳೆಲ್ಲವೂ ನಿಜವಾಗಿರುವದು. ಅವುಗಳು ಪ್ರತಿಯೊಬ್ಬ ಲೇಖಕನ ವಿವಿಧ ದೃಷ್ಟಿಕೋನದ ಪ್ರಕಾರವಾಗಿ ಹೇಳಲಾಗಿದ್ದು ಅವೆಲ್ಲವುಗಳೂ ನಮಗೆ ಸಾಕ್ಷ್ಯಾಧಾರಗಳಾಗಿ ಬಹು ನಿರ್ಣಾಯಕವಾಗಿರುವವು. ಅದರಲ್ಲಿ ಸುವಾರ್ತೆಯ ಲೇಖಕರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ; ವಿಷಯಗಳನ್ನು ಪೂಣವಾಗಿ ಒಂದೇ ವಿಧದಲ್ಲಿ ಹೇಳುವಂಥಾ ಯಾವುದೇ ಪ್ರಯತ್ನವಿರಲಿಲ್ಲ, ಆ ವಿವರಣೆ ಏನಾದರೂ ಕಲ್ಪನೆಯ ಕಟ್ಟುಕತೆಯಾಗಿದ್ದಲ್ಲಿ ಖಂಡಿತವಾಗಿ ಇಂಥಾ ಪ್ರಯತ್ನಗಳಿರುತ್ತಿದ್ದವು.

## ಸತ್ಯಕ್ಕೆ ವಿರುದ್ಧವಾಗಿರುವ ವಾದಗಳು ಬಲಹೀನವಾದವು.

ಶಿಷ್ಯರಲ್ಲಿ ಯಾವನಾದರೂ ಬರುವದಕ್ಕೆ ಮೊದಲು ಸಮಾಧಿಯ ಬಳಿ ರೋಮಾಯರ ಸಿಪಾಯಿಗಳು ಇನ್ನೂ ಕಾವಲಲ್ಲಿರುವಾಗ ಕರ್ತನ ಒಬ್ಬ ದೂತನು ಆ ಸ್ಥಳದಲ್ಲಿ ಕಾಣಿಸಿಕೊಂಡನು ಅಲ್ಲದೆ ಭೂಕಂಪದಂತಹ ಅಘಾತದ ಅನುಭವವಾಗಿ ಕಾವಲಿನಲ್ಲಿದ್ದ ಸಿಪಾಯಿಗಳು ಬಹುಪಾಲು ಮೂರ್ಛೆಹೋಗಿ ಇಲ್ಲವೇ ಪ್ರಜ್ಞಾಹೀನರಾಗಿ ಸತ್ತವರಂತೆ ಆಗಿದ್ದರು. ಆದರೆ ಎಚ್ಚೆತ್ತವರಾಗಿ ನಡೆದ ಸಂಗತಿಗಳನ್ನು ವರದಿಮಾಡಲು ಆ ಸ್ಥಳದಿಂದ ತ್ವರೆಯಾಗಿ ತಮ್ಮನ್ನು ಈ ಕಾಯುವ ಕಾರ್ಯಕ್ಕೆ ನೇಮಿಸಿದ್ದ ಮಹಾಯಾಜಕರ ಬಳಿಗೆ ಹೋದರು. ಮಹಾಯಾಜಕರು ನಾವು ನಿದ್ದೆಮಾಡುತ್ತಿರುವಾಗ ಆತನ ಶಿಷ್ಯರು ಆ ದೇಹವನ್ನು ಕದ್ದುಕೊಂಡು ಹೋದರೆಂದು ಪ್ರಚಾರಮಾಡುವದಕ್ಕಾಗಿ ಅವರನ್ನು ಪ್ರೇರೇಪಿಸಿದ್ದು, ಈ ವರದಿಯು ಮುಂದೆ ಸ್ವಲ್ಪ ಸಮಯದ ವರೆಗೆ ಚಾಲ್ತಿಯಲ್ಲಿದ್ದುದು ಸ್ಪಷ್ಟವಾಗಿತ್ತು. ಇದನ್ನು ನಾವು ಹೀಗೆ ಓದುತ್ತೇವೆ–"ಈ ಮಾತು ಇಂದಿನವರೆಗೂ ಯೆಹೂದ್ಯರಲ್ಲಿ ಹಬ್ಬಿ ಅದೆ." ಅಂದರೆ ಮತ್ತಾಯನ ಸುವಾರ್ತೆಯು ಬರೆಯಲ್ಪಡುವ ಸಮಯದ ತನಕ ಇದು ಹಬ್ಬಿತ್ತೆಂಬದು; ಈ ಘಟನೆ ನಡೆದ ಒಂಭತ್ತು ವರುಷಗಳ ನಂತರ ಈ ಸುವಾರ್ತೆಯು ಬರೆಯಲ್ಪಟ್ಟಿತೆಂದು ಭಾವಿಸಲಾಗಿರುವದು. ಈ ಸತ್ಯಾಂಶಕ್ಕೆ ವಿರೋಧವಾಗಿರುವ ಎಲ್ಲಾ ವಾದಗಳಂತೆ ಇದೂ ಬಲಹೀನವಾಗಿತ್ತು. ಆದರೆ ಮಾಡಲು ಅವರಿಗೆ ಸಾಧ್ಯವಿದ್ದ ಅತ್ಯುತ್ತಮವಾದ ಕಾರ್ಯವೆಂದರೆ ಇದೇ. ತಾವು ನಿದ್ರಿಸುತ್ತಿದ್ದಾಗ ಏನು ನಡೆಯಿತೆಂಬುದನ್ನು ಹೇಳುವ ಮನುಷ್ಯರ ಸಾಕ್ಷಿಯು ಎಂಥಾ ಬುದ್ಧಿಹೀನವಾದದ್ದು! ಈ ಸುಳ್ಳು ಹೇಳಿಕೆ ನೀಡುವ ಸಲುವಾದ ಬೆಲೆಯಾಗಿ ಸಿಪಾಯಿಗಳಿಗೆ ಲಂಚವನ್ನು ನೀಡಲಾಗಿದ್ದು, ಅಲ್ಲದೆ ಕರ್ತವ್ಯದ ಮೇಲಿರುವ ರೋಮಾಯರ ಸಿಪಾಯಿಗಳು ನಿದ್ರಿಸಿದಾಗ ಅವರಿಗೆ ಸಾಮಾನ್ಯವಾಗಿ ನೀಡಲಾಗುವ ಶಿಕ್ಷೆಯಿಂದ ಅವರನ್ನು ಸುರಕ್ಷಿತವಾಗಿ ಕಾಪಾಡುವ ಭರವಸೆಯನ್ನು ಅವರು [ಫರಿಸಾಯರಿಂದ} ಹೊಂದಿದ್ದರು; ಆದರೆ ಅವರು ರೋಮಾಯರ ಸರ್ಕಾರದ ಕರ್ತವ್ಯದ ಮೇಲೆ ಇರಲಿಲ್ಲ; ಅವರು ಕೇವಲ ಮಹಾಯಾಕರ ಹಿತದೃಷ್ಟಿಯಿಂದ ಅವರ ಕೋರಿಕೆಯ ಮೇರೆಗೆ ಅವರ ಅಗತ್ಯತೆಗೆ ತಕ್ಕಂತೆ ಒದಗಿಸಲಾಗಿದ್ದ ಕಾವಲುಗಾರರಾಗಿದ್ದರು.

ಈ ಮಧ್ಯೆ ನಡೆದ ಆ ಸಂಗತಿಗಳನ್ನು ಮಹಾಯಾಜಕರಿಗೆ ವರದಿಮಾಡಲು ಕಾವಲುಗಾರರು ಹೋಗುತ್ತಿರಲು, ಕರ್ತನ ಮಿತ್ರರು ತಮ್ಮ ಪ್ರೀತಿ ಹಾಗು ಸುಗಂಧದ್ರವ್ಯ ಮುಂತಾದವು ಗಳೊಂದಿಗೆ ಕೂಡಿಬರಲು ಆರಂಭಿಸಿದ್ದರು. ಆ ಗುಂಪಿನಲ್ಲಿನ ಸ್ತ್ರೀಯರು ಮೊದಲು ಆಗಮಿಸಿದ್ದರು, ಮತ್ತು ಅವರು ಹೀಗೆ ಮಾಡುವದರ ಮೂಲಕವಾಗಿ ತಮ್ಮ ಹೃದಯದಲ್ಲಿನ ಪ್ರೀತಿ ಸಹಾನುಭೂತಿಗಳ ಬಗ್ಗೆ ಎಲ್ಲಾ ಸಮಯಗಳಿಗೂ ಪ್ರಮಾಣ ವಾಗಿದ್ದು, ಅದಕ್ಕಾಗಿ ಅವರು ಗೌರವಿಸಲ್ಪಟ್ಟು, ಹೌದು, ಹೀಗೆ ಮಾಡುವದರ ಮೂಲಕ ತಮ್ಮ ಲಿಂಗಜಾತಿಯವರನ್ನು (ಸ್ತ್ರೀಯರನ್ನು) ಮಹಿಮೆಪಡಿಸಿದ್ದರು. ನಮ್ಮ ಪಾಠದಲ್ಲಿ ಹೆಸರಿಸಲಾದ ಮೂವರ ಬಗ್ಗೆ ಆನಂತರದಲ್ಲಿ ಎಲ್ಲಾ ಜನಾಂಗಗಳ ಕವಿಗಳ ಮೂಲಕವಾಗಿ ಘನತೆಯಿಂದ ಪ್ರಸ್ತಾಪಿಸಲಾಗಿರುವರು.

"ಮೂವರು ಸ್ತ್ರೀಯರು ದಿನದ ಉದಯದಲ್ಲಿ ಮೆಲ್ಲನೆ
ಸರಿದಿದ್ದರು,
ಕತ್ತಲಿನ ದಾರಿಯುದ್ದಕ್ಕೂ ತಡಕಾಡುತ್ತಾ
ಯೊಸೇಫನ ತೋಟದಲ್ಲಿದ್ದ ಸಮಾಧಿಗೆ ಹೋಗಿದ್ದರು.

"ಪ್ರತಿಯೊಬ್ಬಳೂ ಅದರುತಿದ್ದ ತನ್ನ ಎದೆಯಲ್ಲಿ ಹೊತ್ತಿದ್ದಳು
ಸುಗಂಧದ್ರವ್ಯದ ಹೊರೆಯ, ಇಂಥಾ ಸಂಗ್ರಹವು
ಹಿಂದೆ ಎಂದಿಗೂ ಇರಿಸಿರಲಿಲ್ಲ.

"ಇನ್ನೂ ರಕ್ತಬೋಳ ಹೊತ್ತವರು ಶಾಂತರಾಗಿ ಹೊರನಡೆದು
ಎಂಥಾ ರಸ್ತೆಯನ್ನು ಪರಿಶುದ್ಧ ಸ್ತ್ರೀಯರು ಕ್ರಮಿಸಿದ್ದರು,
ಹಿಂಪಡೆಯಲಾಗದ ದೇವರ ಕೊಡುಗೆಯ ಹೊರೆಹೊತ್ತಿದ್ದರು.

ಅಪೂರ್ವ ಕಾಣಿಕೆಯಾಗಿದ್ದ ಅದಕ್ಕೆ ಅತ್ಯಮೂಲ್ಯ
ಬೆಲೆಕಟ್ಟಲಾಗಿದ್ದು
ಈ ಒಂದು ಆಲೋಚನೆಯು ಎಲ್ಲವನ್ನು ಸಂತೃಪ್ತಿಗೊಳಿಸಿತ್ತು:
ಅವರ ಪರಿಮಳದ್ರವ್ಯ ಕ್ರಿಸ್ತನಿಗಾಗಿ ಜಜ್ಜಲಾಗಿತ್ತು.

ಆ ಬೆಳಗಿನಿಂದ ಆರಂಭವಾಗಿ ನಮ್ಮ ಕರ್ತನ ದಿವಾರೋಹಣದಲ್ಲಿ ಮುಕ್ತಾಯಗೊಂಡಿದ್ದ ನಾಲ್ವತ್ತು ದಿನಗಳ ಕಾಲಾವಧಿಯಲ್ಲಿ ಹೆಚ್ಚೆಂದರೆ ಆತನು ಹನ್ನೊಂದು ಸಂದರ್ಭಗಳಲ್ಲಿ ಕಾಣಿಸಿಕೊಂಡಿದ್ದನು; ಕೆಲವು ವೇಳೆ ಒಬ್ಬರಿಗೆ ಮತ್ತು ಕೆಲವು ವೇಳೆ ಮತ್ತೊಬ್ಬರಿಗೆ ಮತ್ತು ಒಂದು ಸಂದರ್ಭದಲ್ಲಿ ಒಂದೇ ಸಾರಿ ಐನೂರಕ್ಕಿಂತಲೂ ಹೆಚ್ಚು ಮಂದಿಗೆ ಕಾಣಿಸಿಕೊಂಡಿದ್ದನು. ಹನ್ನೊಂದು ಸಂದರ್ಭಗಳಿಗೆ ಬದಲಾಗಿ ಏಳು ಸಂದರ್ಭಗಳಿದ್ದು–ಇತರ ನಾಲ್ಕು ತೋರ್ಪಡಿಸಿ ಕೊಳ್ಳುವಿಕೆಯು ಕೇವಲ ವ್ಯತ್ಯಾಸದಿಂದ ಕೂಡಿದ [ಉಳಿದ] ಏಳು ತೋರ್ಪಡಿಸಿಕೊಳ್ಳುವಿಕೆಯ ವರ್ಣನೆಯಾಗಿದ್ದ ಸಂಭವವು ಬಹುವಾಗಿತ್ತು.

## “ಆತನು ದೋಷರಹಿತವಾದ ಸಾಕ್ಷ್ಯಾಧಾರಗಳಿಂದ ತನ್ನನ್ನು ತೋರ್ಪಡಿಸಿಕೊಂಡಿದ್ದನು”

ನಮ್ಮ ಕರ್ತನು ಮೊದಲನೆಯದಾಗಿ ಕಾಣಿಸಿಕೊಂಡದ್ದು ಮಗ್ದಲದ ಮರಿಯಳಿಗೆ, ಆಕೆಯಿಂದ ಏಳು ದೆವ್ವಗಳನ್ನು ಹೊರಹಾಕಲಾಗಿದ್ದು, ಅಂದಿನಿಂದ ಆಕೆಯು ಕರ್ತನ ಅತಿ ಪ್ರಾಮಾಣಿಕರಾದ ಹಿಂಬಾಲಕರಲ್ಲಿ ಒಬ್ಬಳಾಗಿದ್ದಳು. ಆಕೆಯು ಬಹುವಾಗಿ ಕ್ಷಮಿಸಲ್ಪಟ್ಟವಳಾಗಿದ್ದು [ಯೇಸುವನ್ನು] ಆಕೆಯು ಹೆಚ್ಚಾಗಿ ಪ್ರೀತಿಸಿದ್ದಳು; ಆಕೆಯ ಪ್ರೀತಿಯು ಆಕೆಯನ್ನು ಬೇಗನೆ ಸಮಾಧಿಯ ಬಳಿಗೆ ಕರೆದುಕೊಂಡು ಬಂದಿತ್ತು. ಮಗ್ದಲದ ಮರಿಯಳು ಸಮಾಧಿಯ ಬಳಿಗೆ ಆಗಮಿಸಿದ ಸ್ತ್ರೀಯರಲ್ಲಿ ಮೊದಲಿಗಳಾಗಿದ್ದುದು ಸ್ಪಷ್ಟವಾಗಿತ್ತು; ಅಲ್ಲದೆ ಯೇಸುವು ಸಮಾಧಿಯಲ್ಲಿ ಇಲ್ಲದಿದ್ದನ್ನು ಕಂಡುಕೊಂಡ ಕೂಡಲೇ ಆಕೆಯು ಆ ಸಂಗತಿಯನ್ನು ಪೇತ್ರ ಮತ್ತು ಯೋಹಾನರಿಗೆ ಪ್ರಕಟಿಸಲು ತ್ವರೆಪಟ್ಟಿದ್ದಳು. ಸಮಾಧಿಗೆ ಹಿಂದಿರುಗಿ ಬಂದಾಗ, ಇತರ ಸ್ತ್ರೀಯರು ಅಲ್ಲಿಗೆ ತಲುಪಿದವರಾಗಿ ಮತ್ತು ಅವರು ಹಿಂದಿರುಗಿದ ನಂತರದಲ್ಲಿ ಆಕೆಯು ಅಲ್ಲಿಗೆ ತಲುಪಿರುವದು ಸ್ಪಷ್ಟವಾಗಿತ್ತು. ಅಲ್ಲದೆ, ಯೋಹಾನು ವರ್ಣಿಸಿರುವಂತೆ (20:11–18) ಆಕೆಯು ಇನ್ನೂ ಸಮಾಧಿಯ ಬಳಿಯಲ್ಲಿರುವಾಗಲೇ ಯೇಸುವು ಮೊಟ್ಟ ಮೊದಲನೇದಾಗಿ ಆಕೆಗೆ ಕಾಣಿಸಿಕೊಂಡಿದ್ದನು.

ಆನಂತರ ಕರ್ತನು ಇತರ ಸ್ತ್ರೀಯರನ್ನು, ಅವರು ನಂಬಿಗಸ್ತರ ಮನೆತನದವರಿಗೆ ಸುದ್ಧಿಯನ್ನು ಮುಟ್ಟಿಸಲು ಹೋಗುತ್ತಿರುವ ದಾರಿಯಲ್ಲಿ ಅವರನ್ನು ಸಂಧಿಸಿದ್ದನು. ಆತನು ಅವರನ್ನು ಸಂಬೋಧಿಸಿ–“ನಿಮಗೆ ಶುಭವಾಗಲಿ” ಎಂದು ಹೇಳಿದ್ದನು; ಇದು ಗ್ರೀಕ್ ಭಾಷೆಯಲ್ಲಿ ಸಾಮಾನ್ಯವಾಗಿರುವ ಅಭಿನಂದನೆಯಾಗಿದ್ದು ಕಾರ್ಯತಃ ಹರ್ಷಿಸಿರಿ ಎಂಬುದನ್ನು ಸೂಚಿಸುವದು! ಅವರು ಆತನಿಗೆ ಅಡ್ಡಬಿದ್ದು ಆತನ ಪಾದವನ್ನು ಹಿಡಿದುಕೊಂಡು ಆತನನ್ನು ಆರಾಧಿಸಿ, ಇನ್ನು ಮುಂದೆ ಯಾವ ಸಂಗತಿಯಾದರು ತಮ್ಮನ್ನು ಆತನಿಂದ ಅಗಲಿಸಬಹುದೆಂಬುದಕ್ಕೆ ಅವರು ಹೆದರಿದಂತೆ ಕಂಡುಬಂದಿದ್ದರು. ಹೇಗೂ ನಮ್ಮ ಕರ್ತನು ಅವರ ಕರ್ತವ್ಯದ ಬಗ್ಗೆ–ಅಂದರೆ ತನ್ನ ಪುನರುತ್ಥಾನದ ವಿಷಯವಾದ ಶುಭವಾರ್ತೆಯನ್ನು ಪ್ರಚಾರಮಾಡಬೇಕೆಂದು ಅವರಿಗೆ ಜ್ಞಾಪಕಪಡಿಸಿದ್ದನು. ಅದೇ ಪಾಠವು ನಮಗೂ ಬಂದಿರುವದು; ಅದೇನಂದರೆ ಕರ್ತನನ್ನು ನಾವು ಕಂಡುಕೊಂಡು, ಸತ್ಯದ ಬಗ್ಗೆ ಮನಗಂಡವರಾದ ನಂತರ ಅದರ ವಿಷಯವಾಗಿ ಸೇವೆಮಾಡುವ ಅವಕಾಶವನ್ನು ಹೊಂದುವಂಥ ಮಹಾ ಸೌಭಾಗ್ಯ ಹಾಗು ನಮ್ಮ ಹೃದಯಗಳು ಹರ್ಷಿಸುವಂತೆ ಮಾಡಿದ ಸಂಗತಿ ಯಾವುದೆಂಬುದನ್ನು ಆವರೆಗೂ ತಿಳಿಯದಿರುವಂಥ ಸಹೋದರರ ಬಗ್ಗೆ (ಅದನ್ನು ತಿಳಿಸುವಂತ) ಒಂದು ದೊಡ್ಡ ಕರ್ತವ್ಯವು ನಮಗಿರುವದು. ನಾವು ಸತ್ಯವನ್ನು ಕೇವಲ ನಮ್ಮ ಹೃದಯಗಳಲ್ಲಿ ಹಿಡಿದಿಟ್ಟುಕೊಳ್ಳಬೇಕೆಂಬುದಾಗಿ ಊಹಿಸಿಕೊಳ್ಳ–ಬೇಕಿಲ್ಲ, ಆದರೆ ಅದು ಇತರರ ಸಲುವಾಗಿಯೂ ಇರುವದೆಂಬು–ದನ್ನು ನೆನಪಿನಲ್ಲಿಟ್ಟುಕೊಂಡವರಾಗಿ, ಅದನ್ನು ಇತರರಿಗೂ ಹಂಚಿಕೊಡುವದರಲ್ಲಿ ಸಂತೋಷ ಉಳ್ಳವರಾಗಬೇಕು. ಯಾವಾತನು ಕರ್ತನಿಗೂ ಹಾಗೂ ಆತನ ಮನೆತನದವರಿಗೂ ಹೀಗೆ ಸೇವೆಮಾಡುವನೋ ಅವನಿಗೆ ಅಂತ್ಯದಲ್ಲಿ ಖಂಡಿತವಾಗಿಯೂ ದೊಡ್ಡ ಆಶೀರ್ವಾದವಿರುವದು.

ಕರ್ತನು ನೀಡಿದ ಸಂದೇಶವೇನಾಗಿತ್ತೆಂದರೆ, ತಾನು ಮತ್ತೆ ಅವರನ್ನು ಗಲಿಲಾಯದಲ್ಲಿ ಸಂಧಿಸುವೆನೆಂಬುದನ್ನು ಶಿಷ್ಯರಿಗೆ ಅವರು ತಿಳಿಸಬೇಕೆಂಬುದೇ. ಹೀಗೆ ಯೆರೂಸಲೇಮಿನ ಸುತ್ತಲಿನಲ್ಲಿ ಐದು ಅಥವಾ ಆರು ಸಾರಿ ಕಾಣಿಸಿಕೊಂಡ ನಂತರ ನಮ್ಮ ಕರ್ತನು ಮುಂದೆ ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವದನ್ನು ನಿಲ್ಲಿಸಿಬಿಟ್ಟಿದ್ದನು; ಮತ್ತು ಅವರು ತಮ್ಮ ಸ್ವಂತ ನಾಡಾದ ಗಲಿಲಾಯಕ್ಕೆ ಹಿಂದಿರುಗಿದವರಾಗಿ ಅಲ್ಲಿ ಆತನು ನಿಶ್ಚಯಿಸಿದ್ದಂತೆ ಆತನನ್ನು ಸಂಧಿಸಿದ್ದರು. ನಮ್ಮ ಕರ್ತನ ಸೇವೆಯು ಬಹು ಪಾಲು ಗಲಿಲಾಯದಲ್ಲಿ ನಡೆಯಲಾಗಿದ್ದು ಆತನನ್ನು ನಂಬಿದ್ದವರಲ್ಲಿ ಬಹು ಮಂದಿ ಗಲಿಲಾಯದವರಾಗಿದ್ದರು. ನಂಬಿಗಸ್ತರ ಮನೆತನದವರೆಲ್ಲರಿಗೂ ನಮ್ಮ ಕರ್ತನ ಪುನರುತ್ಥಾನವನ್ನು ಸಾಕ್ಷಿಯಾಗಿ ನೋಡುವ ಅವಕಾಶವನ್ನು ಪಡೆದಿರಬೇಕೆಂಬುದನ್ನು ಅಪೇಕ್ಷಿಸಲಾಗಿದ್ದು, ಹೀಗಾಗಿ ಅಪೋಸ್ತಲನಾದ ಪೌಲನು ಗಲಿಲಾಯದಲ್ಲಿ ಆನಂತರ ತೋರ್ಪಡಿಸಿಕೊಂಡ ಸಂದರ್ಭಗಳಲ್ಲಿ ಒಂದನ್ನು ಉಲ್ಲೇಖಿಸುವವನಾಗಿ ಹೀಗೆ ತಿಳಿಸಿರುವನು: “ತರುವಾಯ ಒಂದೇ ಸಮಯದಲ್ಲಿ ಐನೂರು ಮಂದಿಗಿಂತಲೂ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು. ಇವರಲ್ಲಿ ಹೆಚ್ಚು ಜನರು ಇಂದಿನವರೆಗೂ (ಅಂದರೆ ಅಪೋಸ್ತಲನು ಇದನ್ನು ಬರೆಯುತ್ತಿದ್ದ ಸಮಯದ ವರೆಗೂ) ಇದ್ದಾರೆ.”– 1 ಕೊರಿಂಥ 15:6

ನಮ್ಮ ಕರ್ತನು ತಾನು ಸತ್ತವರೊಳಗಿಂದ ಎದ್ದು ಬಂದಿದ್ದೇನೆಂಬ ಅಂಶವನ್ನು ತನ್ನ ಹಿಂಬಾಲಕರಿಗೆ ನೀಡಿದ ಹಲವಾರು ಸಂದರ್ಶನಗಳ ಸಂಬಂಧದಲ್ಲಿ ಆತನಿಗೆ ಎರಡು ಉದ್ದೇಶಗಳಿದ್ದವೆಂಬುದನ್ನು ನಾವು ಜಾಗರೂಕತೆಯಿಂದ ಗಮನಿಸುವ ಅಗತ್ಯವಿರುವದು. ಇವುಗಳಲ್ಲಿ ಮೊದಲನೆಯದು: ಅವರು ಹಿಂದಿನ ವರುಷಗಳಲ್ಲಿ ಆತನ ಒಡನಾಟದಲ್ಲಿದ್ದಾಗ ಅವರು ತಿಳುಕೊಂಡಿದ್ದಂತೆ ತಾನು ಭೂಲೋಕದ ಪರಿಸ್ಥಿತಿಗಳಿಗೆ ಸೀಮಿತನಾಗಿಲ್ಲವೆಂಬುದನ್ನು ರುಜುವಾತುಪಡಿಸುವ ಸಲುವಾಗಿತ್ತು; ಆದರೆ ಈಗ ಆತನು ಆತ್ಮಿಕ ಜೀವಿಗಳೆಲ್ಲರಂತೆ ಗಾಳಿಯಂತೆ ಅಂದರೆ ಅದೃಶ್ಯನಾಗಿ, ಗೌಪ್ಯತೆಯಿಂದ ಬಂದು ಹೋಗಲು ಸಮರ್ಥನಾಗಿದ್ದನು. ಎಲ್ಲಾ ಆತ್ಮಿಕ ಜೀವಿಗಳಂತೆ ಈಗ ಆತನು ಮಹಿಮೆಯುಳ್ಳವನಾಗಿದ್ದನು. ಅಪೋಸ್ತಲನು 1 ಕೊರಿಂಥ 15:51,52ರಲ್ಲಿ ಜಯಶಾಲಿಗಳಾದ ಸಭೆಯವರ ಪುನರುತ್ಥಾನದ ಬಗ್ಗೆ ವಿವರಿಸಿ ಹೇಳಿರುವನು; ಅಲ್ಲದೆ ಶಾಸ್ತ್ರವಚನಗಳು ಭರವಸೆ ನೀಡಿ ಹೇಳಿರುವಂತೆ: ನಮ್ಮ ಪುನರುತ್ಥಾನದಲ್ಲಿ ನಾವು ಕರ್ತನ ಹೋಲಿಕೆಯಲ್ಲಿದ್ದು ಆತನಿರುವಂತೆಯೇ ನಾವು ಆತನನ್ನು ನೋಡುವವರಾಗಿ ಆತನ ಮಹಿಮೆಯಲ್ಲಿ ಪಾಲನ್ನು ಹೊಂದುವೆವು. ನಮ್ಮ ಪುನರುತ್ಥಾನವು ನಿಜವಾಗಿಯೂ ಆತನ ಪುನರುತ್ಥಾನದ ಒಂದು ಭಾಗವಾಗಿರುವದೆಂದು ಅಂದರೆ ಪ್ರಥಮ ಪುನರುತ್ಥಾನದ ಭಾಗವಾಗಿರುವದೆಂದು ಸಹ ಶಾಸ್ತ್ರವಚನವು ನಮಗೆ ಭರವಸೆ ನೀಡಿರುವದು. ಹೇಗಂದರೆ ಮಹಿಮಾಪ್ರಭಾವವನ್ನು ಹೊಂದಿರುವ ಕ್ರಿಸ್ತನೆಂಬ [ದೇಹದ] ಶಿರಸ್ಸಾಗಿರುವಾತನಾದ ಯೇಸುವು ಮರಣದ ಅಧಿಕಾರದಿಂದ

ಬಿಡಿಸಿ ಎಬ್ಬಿಸಲ್ಪಟ್ಟು ತಾನು ಮರಣಹೊಂದಿದ ನಂತರದ ಮೂರನೇ ದಿನದಲ್ಲಿ ಪ್ರಭಾವಮಹಿಮೆಗಳನ್ನು ಹೊಂದಿದ್ದು, ಅಲ್ಲದೆ ಹೊಸ ವ್ಯವಸ್ಥಾಕ್ರಮವೆಂಬ ದಿನದ ಮುಂಜಾನೆಯಲ್ಲಿ ಸಭೆಯು ಆತನ ಹೋಲಿಕೆಯಲ್ಲಿ ಮರಣದಿಂದ ಎದ್ದುಬಂದು ಆತನ [ಕ್ರಿಸ್ತನ] ಪುನರುತ್ಥಾನದಲ್ಲಿ ಪಾಲನ್ನು ಹೊಂದುವರು. – ಫಿಲಿಪ್ಪ 3:10

## ನಮ್ಮ ಕರ್ತನಿಗೆ ಪುನರುತ್ಥಾನದಲ್ಲಿ ಉಂಟಾದ ಮಾರ್ಪಾಟು

ನಮ್ಮ ಕರ್ತನು ಆತ್ಮಿಕ ದೇಹವನ್ನು ಸ್ವೀಕರಿಸಿಕೊಂಡ ಸಮಯವು ಪುನರುತ್ಥಾನದ ಸಮಯವಾಗಿತ್ತಲ್ಲದೆ ಆನಂತರದ ಸಮಯುವಾಗಿರಲಿಲ್ಲವೆಂಬದು ಸತ್ಯವೆಂಬುದನ್ನು ನಾವು ತಿಳಿದವರಾಗಿದ್ದು; ಇದನ್ನು ಅಪೋಸ್ತಲನು ಹೀಗೆ ಹೇಳಿರುವನು: "ಆತನು ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟನು, ಆತ್ಮ ಸಂಬಂಧದಲ್ಲಿ ಬದುಕುವವನಾದನು." ನಮ್ಮ ಕರ್ತನ ದೀನಾವಸ್ಥೆಯ ವಿಷಯವಾಗಿ ಹಾಗು ನಂತರದಲ್ಲಿ ಆತನ ಪುನರುತ್ಥಾನದಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿದ್ದರ ಬಗ್ಗೆ ಹೇಳುತ್ತಾ ಅಪೋಸ್ತಲನು ಭರವಸೆ ನೀಡಿ ತಿಳಿಸಿರುವದೇನಂದರೆ, ನಮ್ಮ ಕರ್ತನು ತಂದೆಯೊಡನೆ ತನಗಿದ್ದ ಮಹಿಮೆಯನ್ನು ತ್ಯಜಿಸಿ ಮನುಷ್ಯನಾಗಲು ತನ್ನನ್ನು ಮರಣದವರೆಗೂ ಅಂದರೆ ಶಿಲುಬೆಯ ಮರಣದವರೆಗೂ ತಗ್ಗಿಸಿಕೊಂಡನು; ಆದುದರಿಂದ ದೇವರು ಅವನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂದ ಮೇಲಾದ [ಶ್ರೇಷ್ಠವಾದ] ಹೆಸರನ್ನು ಆತನಿಗೆ ದಯಪಾಲಿಸಿರುವನು. ಈ ಉನ್ನತ ಸ್ಥಾನಕ್ಕಾದ ಏರಿಸುವಿಕೆಯು ಪುನರುತ್ಥಾನದಲ್ಲಿ ಉಂಟಾದ ಮಾರ್ಪಾಟಿನಲ್ಲಿ ಆತನಿಗೆ ದೊರೆಯಿತು. ಆಗ ಇದು ಆತನ ವಿಷಯದಲ್ಲಿ ಸತ್ಯವಾಗಿದ್ದ ಹಾಗೆಯೇ ಕ್ಲುಪ್ತಕಾಲದಲ್ಲಿ ಆತನ ದೇಹದ ಅಂಗಗಳೆಲ್ಲರ ವಿಷಯದಲ್ಲಿಯೂ ಸತ್ಯವಾಗುವದು; ಅದೇನಂದರೆ ಆತನು ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಟ್ಟಿದ್ದನು, ಬಲಾವಸ್ಥೆಯಲ್ಲಿ ಎದ್ದು ಬರುವನು; ಪ್ರಾಕೃತ [ಪ್ರಾಣಿ, ಮನಷ್ಯ] ದೇಹವಾಗಿ ಬಿತ್ತಲ್ಪಟ್ಟಿದ್ದನು ಆತ್ಮಿಕ ದೇಹವಾಗಿ ಎಬ್ಬಿಸಲ್ಪಟ್ಟನೆಂಬದೇ.

ನಮ್ಮ ಕರ್ತನ ಈ ಆತ್ಮಿಕ ದೇಹವು ಆತನು ಪುನರುತ್ಥಾನ ವಾದ ಕ್ಷಣದಲ್ಲಿ ಮಹಿಮೆಯುಳ್ಳದ್ದಾಗಿರುವಂತೆಯೇ ಆನಂತರ ಎಲ್ಲಾ ಕಾಲಗಳಲ್ಲಿಯೂ ಇದೇ ಪ್ರಕಾರವಾಗಿದ್ದು, ಈಗಲೂ ಇದೇ ರೀತಿಯುಲ್ಲಿರುವದು. ಆತ್ಮಿಕ ಜೀವಿಗಳಿಗೆ ಸೂಕ್ತವಾಗಿ ದಯಪಾಲಿಸಿರುವಂಥ ಎಲ್ಲಾ ಅಧಿಕಾರಗಳು ಕರ್ತನಲ್ಲಿ ಹೊಂದಾಣಿಕೆಯಲ್ಲಿದ್ದವು. ಆತನು ಹಿಂದೆ ಇದ್ದಂತೆ ಕೇವಲ ಮನುಷ್ಯನಾದ ಕ್ರಿಸ್ತ ಯೇಸುವಾಗಿರಲಿಲ್ಲ, ಆದರೆ ಈಗ ಆತನು ಮಹಿಮೆಯುಳ್ಳ ಕರ್ತನಾಗಿದ್ದನು. ಹೀಗಾಗಿ ಆತನು ತನ್ನ ಶಿಷ್ಯರೊಡನೆ ಸದೃಶ್ಯನಾಗಿ ಇಲ್ಲವೇ ಅದೃಶ್ಯನಾಗಿ ಅಥವಾ ಅವರೊಂದಿಗೆ ಒಡನಾಟದಲ್ಲಿರಲು ಸಮರ್ಥನಾಗಿದ್ದನು, ಇಲ್ಲವೇ ಬೆಂಕಿಹೊತ್ತಿದ ಪೊದೆಯಲ್ಲಿ ಅಗ್ನಿಜ್ವಾಲೆಯಾಗಿ ಕಾಣಿಸಿಕೊಳ್ಳಲು ಅಥವಾ ಅಬ್ರಹಾಮನಿಗೆ ಇತರರೊಡನೆ ಕಾಣಿಸಿಕೊಂಡಂತೆ ದಾರಿಯಲ್ಲಿ ಹೋಗುತ್ತಿದ್ದ ಮನುಷ್ಯನಾಗಿ ಕಾಣಿಸಿಕೊಳ್ಳಲು ಇಲ್ಲವೇ ತನಗೆ ಸರಿಕಾಣುವಂಥ ಇನ್ನು ಯಾವುದೇ ವಿಧದಲ್ಲಿ ಕಾಣಿಸಿಕೊಳ್ಳಲು ಸಮರ್ಥನಿದ್ದನು. ನಂತರದಲ್ಲಿ ತಾರ್ಸದ ಸೌಲನಿಗೆ ಹೊಳೆಯುವ ಮಿಂಚಿನಂತೆ ಕಾಣಿಸಿಕೊಂಡ ಅಥವಾ ರೋಮಾಯರ ಸಿಪಾಯಿಗೆ ಕಾಣಿಸಿಕೊಂಡು ಅವನನ್ನು ಮಣಿಸಿ ಓಡಿಹೋಗುವಂತೆ ಮಾಡಿದ ದೂತನಂತೆ ಅದೇ ಮಹಿಮೆಯುಳ್ಳ ಜೀವಿಯಾಗಿದ್ದನು.

ಹೀಗಿರಲು ಆತನು ಏಕೆ ಆ ಸ್ತ್ರೀಯರಿಗೆ ಹಾಗು ಅಪೋಸ್ತಲ –ರಿಗೆ ಅದೇ ಮಹಿಮೆಯಲ್ಲಿ ಹೊಳೆಯುವನಾಗಿ ಕಾಣಿಸಿ ಕೊಳ್ಳಲಿಲ್ಲ? ಎಂದು ಕೆಲವರು ವಿಚಾರಿಸಬಹುದು. ನಾವು ಉತ್ತರಿಸುವದೇನಂದರೆ ಹಾಗೆ ಮಾಡುವದರಿಂದ ತಾನು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದ ತನ್ನ ಉದ್ದೇಶವು ನೆರವೇರಲು ಅಡ್ಡಿಯಾಗುತ್ತಿತ್ತೆಂಬದು. ಆಗ ಇನ್ನೂ ಪವಿತ್ರಾತ್ಮನಿಂದ ಹುಟ್ಟದೇ ಇದ್ದುದರ ಪರಿಣಾಮವಾಗಿ ಆತ್ಮಿಕ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಅಶಕ್ತರಾಗಿದ್ದ ಆತನ ಹಿಂಬಾಲಕರಿಗೆ ಇದನ್ನು ಹೇಗೆ ಅರ್ಥಮಾಡಿ ಕೊಳ್ಳಲು ಸಾಧ್ಯವಿತ್ತು. (1 ಕೊರಿಂಥ 2:14) ಹೇಗಂದರೆ ಮೂರು ದಿನಗಳ ಹಿಂದೆ ಶಿಲುಬೆಗೆ ಹಾಕಲ್ಪಟ್ಟವನಾಗಿದ್ದುದನ್ನು ನೋಡಿದ್ದ ಶಿಷ್ಯರು ದೇವದೂತನಂತೆ ಹೊಳೆಯುತ್ತಿದ್ದವನು ಕರ್ತನಾದ ಯೇಸುವೆಂಬುದನ್ನು ಅರಿತುಕೊಳ್ಳಲು ಹೇಗೆ ಸಾಧ್ಯವಿತ್ತು? ಅಲ್ಲದೆ ಅವರು ಕೆಲವು ವಿಧದಲ್ಲಿ ಆ ಇಬ್ಬರನ್ನು ಒಟ್ಟುಗೂಡಿಸಿ ಒಬ್ಬರೇ ಎಂದು ಹೇಳಲು ಸಾಧ್ಯವಿದ್ದಾಗ್ಯೂ ಆನಂತರದಲ್ಲಿ ಇತರರಿಗೆ ಯಾವ ಸಾಕ್ಷ್ಯಾಧಾರಗಳು ಇರುವಂತಾಗುತ್ತಿತ್ತು? ನಮ್ಮ ಕರ್ತನ ಮೃತದೇಹವನ್ನು ಸಮಾಧಿಯಿಂದ ತೆಗೆದುಹಾಕಲ್ಪಡುವದು ಆ ದಿನದ ಶಿಷ್ಯರ ಹಾಗು ಆನಂತರದಲ್ಲಿ ಅವರ ಮಾತಿನ ಮೂಲಕ –ವಾಗಿ ಆತನ ಮೇಲೆ ನಂಬಿಕೆಯಿಡುವವರೆಲ್ಲರಿಗೆ ಅವಶ್ಯವಾಗಿತ್ತು. ಹಾಗು ಆತನು ಜೀವಿತನಾಗಿರುವನೆಂದು ತೋರ್ಪಡಿಸಿ–ಕೊಳ್ಳುವದು ಸಹ ಇವರೆಲ್ಲರಿಗೆ ಅವಶ್ಯವಾಗಿತ್ತು. ನಮ್ಮ ಕರ್ತನು ನೀಡಿದ ಆದೇಶ ಮತ್ತು ಪ್ರವಾದನೆಗಳನ್ನು ಆತನು ವಿವರಿಸಿ ಹೇಳಿ ಅದನ್ನು ತನಗೆ ಅನ್ವಯ ಮಾಡಿಕೊಂಡಂಥವುಗಳು ಆ ನಿರ್ದಿಷ್ಟ ಸಮಯದಲ್ಲಿ ನಂಬಿಕೆಗೆ ಒಂದು ಸ್ಥಿರವಾದ ಅಸ್ತಿವಾರವಾಗಿ ಅಗತ್ಯವಾಗಿದ್ದವು. ಈ ವಿಧದಲ್ಲಿ ಅವು ನಡೆಯದಿದ್ದಲ್ಲಿ ಆ ಉದ್ದೇಶ ಗಳಲ್ಲಿ ಯಾವುದೂ ಬೇರೆ ಯಾವ ವಿಧದಲ್ಲಿಯೂ ಇಷ್ಟು ಚೆನ್ನಾಗಿ ನೆರವೇರಲ್ಪಡುತ್ತಿರಲಿಲ್ಲ. ನಮ್ಮ ಕರ್ತನು ಮೊದಲನೇಯದಾಗಿ ಮರಿಯಳಿಗೆ ಕಾಣಿಸಿಕೊಂಡದ್ದು ಒಬ್ಬ ತೋಟಗಾರನಂತಿತ್ತು. ಆಕೆಯು ಆತನನ್ನು ಗುರುತುಹಿಡಿದಿರಲಿಲ್ಲ; ಆತನ ಉಡುಪಾಗಲೀ ಇಲ್ಲವೇ ಆತನ ಮುಖಚರ್ಯೆಯಾಗಲೀ ಆಕೆ ಹಿಂದೆ ಆತನನ್ನು ನೋಡಿದಂತೆ ಅಂದರೆ ಹಿಂದೆ ಆತನನ್ನು ಗುರುತಿಸಿದಂತೆ ಇರಲಿಲ್ಲ. ಆತನ ಬಟ್ಟೆಗಳನ್ನು ರೋಮಾಯರ ಸಿಪಾಯಿಗಳು ಪಾಲುಮಾಡಿಕೊಂಡಿದ್ದರು, ಆತನಿಗೆ ಸುತ್ತಿದ್ದ ಸಮಾಧೀ ವಸ್ತ್ರಗಳು ಇನ್ನೂ ಸಾಮಾಧಿಯಲ್ಲಿದ್ದವು, ಆಕೆಯು ನೋಡಿದ್ದ ದೇಹವು ಒಂದು ವಿಶೇಷವಾದದ್ದಾಗಿದ್ದು ಆತನ ವಸ್ತ್ರವು ಆ ವಿಶೇಷ ಸಂದ –ರ್ಭಕ್ಕೆ ಸಿದ್ಧಮಾಡಲ್ಪಟ್ಟು ಅದನ್ನು ಬಳಸಲಾಗಿತ್ತು. ಕರ್ತನು ತನ್ನ ಸ್ವರವನ್ನು ಆಕೆ [ಹಿಂದೆ] ಗುರುತುಹಿಡಿಯುತ್ತಿದ್ದ ಸ್ವರಕ್ಕೆ ಅಳವಡಿಸಿಕೊಳ್ಳುವವರೆಗೂ ಆಕೆಯು ಆತನನ್ನು ತಿಳಿದು ಕೊಂಡಿರಲಿಲ್ಲ.

ಅದೇ ದಿನದ ನಂತರದ ಭಾಗದಲ್ಲಿ ಎಮ್ಮಾಹುವಿಗೆ ಹೋಗುತ್ತಿದ್ದ ಇಬ್ಬರ ಸಂಗಿತಿಯೂ ಇದೇ ಆಗಿತ್ತು. ಯೇಸುವು

ಅವರೊಡನೆ ನಡೆದುಕೊಂಡು ಹೋಗಿದ್ದನು, ಆದರೆ ಅವರಿಗೆ ಆತನೆಂದು ತಿಳಿದಿರಲಿಲ್ಲ; ಆತನ ಉಡುಪು ಬೇರೆಯಾಗಿತ್ತು, ಆತನ ಮುಖಚರ್ಯೆಯು ಬೇರೆಯಾಗಿತ್ತು, ಆತನ ಕೈಗಳಲ್ಲಿಯಾಗಲೀ ಇಲ್ಲವೇ ಕಾಲುಗಳಲ್ಲಿಯಾಗಲೀ ಮೊಳೆಯ ಗಾಯದ ಗುರುತುಗಳಿರಲ್ಲಿಲ್ಲ. "ನೀನು ಈ [ಪ್ರದೇಶದ] ಭಾಗಕ್ಕೆ ಅನ್ಯನೇನು?" ಎಂದು ಅವರು ಆತನನ್ನು ಕೇಳಿದ್ದರು. ಅವರೊಡನೆ ಸಂಭಾಷಿಸುವ ಅವಕಾಶವನ್ನು ಉತ್ತಮ ಪಡಿಸಿಕೊಂಡವನಾಗಿ ಪ್ರಶಾಂತತೆಯಿಂದ ಉದ್ದೇಶಪೂರ್ವಕವಾಗಿ ಜಾಗರೂಕತೆ–ಯುಳ್ಳವನಾಗಿ ತನ್ನ ವಿಷಯವಾದ ಪ್ರವಾದನೆಗಳನ್ನು ಎಷ್ಟು ಪ್ರಬಲವಾಗಿ ಎಷ್ಟು ಸ್ಪಷ್ಟವಾಗಿ ವಿವರಿಸಿ ಹೇಳಿದ್ದನೆಂದರೆ ಆ ಸ್ತ್ರೀಯರಿಂದ ಕೇಳಿದ್ದ ಸುದ್ದಿಯು ಅಂದರೆ ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಡಬೇಕಿರುವದೆಂಬದು ನಿಜವಾಗಿಯೂ ಸತ್ಯವಾಗಿರುವ ಸಾಧ್ಯತೆಯು ಇರಬಹುದೆನ್ನುವ ಬಗ್ಗೆ ಅವರು ಯೋಚಿಸುತ್ತಿರುವಾಗ ಅವರ ಹೃದಯವು ಅವರಲ್ಲಿ ಕುದಿಯತೊಡಗಿತ್ತು. ನಮ್ಮ ಕರ್ತನು ಅವರ ದೃಷ್ಟಿಯಿಂದ ಕಣ್ಮರೆಯಾಗಲು ಸಿದ್ದನಾಗುವವರೆಗೂ ತನ್ನ ಗುರುತನ್ನು ಪ್ರಕಟಮಾಡಿಕೊಂಡಿರಲಿಲ್ಲ. ಆತನು ಕಣ್ಮರೆಯಾದಾಗ ಆತನ ಶರೀರ ಹಾಗು ವಸ್ತ್ರಗಳೂ ಸಹ ಕಣ್ಮರೆಯಾಗಿದ್ದವು. ಅದೇ ಸಾಯಂಕಾಲ ಯೆರೂಸಲೇಮಿನ ಮೇಲುಪ್ಪರಿಗೆಯಲ್ಲಿ ಅದರ ಬಾಗಿಲುಗಳು ಮುಚ್ಚಿಕೊಂಡಿದ್ದ ಗುಂಪಿಗೆ ಕಾಣಿಸಿಕೊಂಡಿದ್ದನು. ಅವರು ನಿಸ್ಸಂಶಯವಾಗಿ ಆ ದಿನದಲ್ಲಿ ಮತ್ತು ಆ ಹಿಂದಿನ ದಿನ ನಡೆದ ಘಟನೆಗಳ ಬಗ್ಗೆ ಮಾತನಾಡುತ್ತಿರುವಾಗಲೇ ಆತನು ಇದ್ದಕ್ಕಿಂದ್ದಂತೆ ಅವರ ಮಧ್ಯದಲ್ಲಿ ಕಾಣಿಸಿಕೊಂಡಿದ್ದನು. ಆತನು ದೇಹಧಾರಿಯಾಗಿ–ಹೇಳುವದಾದರೆ ಆತನು ಒಬ್ಬ ಆತ್ಮಿಕ ಜೀವಿಯಾಗಿ ಅವರ ಮಧ್ಯದಲ್ಲಿ ಬಂದು ಅಲ್ಲಿ ವಸ್ತ್ರದಿಂದ ಪೂರ್ಣವಾಗಿ ಹೊದಿಕೆಯಾಗಿದ್ದ ಶರೀರವನ್ನು ಧರಿಸಿ–ಕೊಂಡವನಾಗಿ ಕಾಣಿಸಿಕೊಂಡಿದ್ದನು. ಇದನ್ನು ಮಾಡಲು ಆತನಿಗೆ ಹೇಗೆ ಸಾಧ್ಯ? ಎಂದು ಯಾರಾದರೂ ಕೇಳಿದರೆ ನಮಗೆ ಉತ್ತರಿಸಲು ಸಾಧ್ಯವಾಗದು, ಆದರೆ ಯಾರಿಗೆ ನೀರನ್ನು ದಾಕ್ಷಾರಸವನ್ನಾಗಿ ಮಾರ್ಪಡಿಸಲಾದ ಅದ್ಭುತಕಾರ್ಯವನ್ನು ಗ್ರಹಿಸಿಕೊಳ್ಳಲು ಸಾಧ್ಯವೋ ಅವರಿಗೆ ಮೇಲುಪ್ಪರಿಗೆಯಲ್ಲಿ ಅದರ ಬಾಗಿಲುಗಳು ಮುಚ್ಚಿರುವಾಗಲೇ ನಮ್ಮ ಕರ್ತನು ಕಾಣಿಸಿಕೊಂಡ ಬಗೆಯನ್ನು ಸುಲಭವಾಗಿ ಗ್ರಹಿಸಿಕೊಳ್ಳಲು ಸಾಧ್ಯವಿರುವದು; ಅಲ್ಲದೆ ಆ ಸಂದರ್ಶನದ ನಂತರ ಅಷ್ಟೇ ನಿಗೂಢವಾಗಿ ಅವರ ದೃಷ್ಟಿಯಿಂದ ಆ ದೇಹವಸ್ತ್ರಗಳೆಲ್ಲವೂ ಕಣ್ಮರೆಯಾಗಿದ್ದವು. ನಿಸ್ಸಂದೇಹವಾಗಿ ಯೆಹೂದ್ಯರ ಭಯದಿಂದ ಬಾಗಿಲುಗಳು ಇನ್ನೂ ಮುಚ್ಚಿರುವಾಗಲೇ ಅಂದರೆ ಕರ್ತನ ಮರಣವನ್ನು ಬೆನ್ನಟ್ಟಿ ಬಂದಿದ್ದ ಅದೇ ಹಗೆತನವು ಆತನ ಹಿಂಬಾಲಕರ ಮೇಲೆ ಸಹ ತಾನಾಗಿಯೇ ಸುತ್ತಿಕೊಳ್ಳಬಹುದೆಂಬುದನ್ನು ನಿರೀಕ್ಷಿಸುವವರಾಗಿ ಜಾಗರೂಕತೆಯಿಂದ ಅಗುಳಿಗಳನ್ನು ಭದ್ರವಾಗಿ ಹಾಕಿಕೊಂಡಿದ್ದರು.

## ನಂಬದವನಾಗಿರಬೇಡ ನಂಬುವವನಾಗು

ಆನಂತರದಲ್ಲಿ [ಆತನು] ಕಾಣಿಸಿಕೊಂಡದ್ದು ಒಂದು ವಾರದ ನಂತರ ನಡೆದಿರುವ ಸಂಭವವಿದ್ದು, ಮತ್ತೆ ಅದು ವಾರದ ಮೊದಲನೇ ದಿನದಲ್ಲಿ ಅದೇ ಮೇಲುಪ್ಪರಿಗೆಯಲ್ಲಾಗಿತ್ತು. ತೋಮನು ಹಾಜರಿದ್ದನು; ಆತನು ಹಿಂದಿನ ಸಂದರ್ಭದಲ್ಲಿ ಗೈರುಹಾಜರನಾಗಿದ್ದು ಇತರರು ಹೇಳಿದ ಸಾಕ್ಷಿಯನ್ನು ನಂಬಲು ಆತನಿಗೆ ಸಾಧ್ಯವಾಗಿರಲಿಲ್ಲ. ತೋಮನು ತನ್ನ ಸಂದೇಹವನ್ನು ಅತಿ ಪ್ರಭಲವಾಗಿ ವ್ಯಕ್ತಪಡಿಸಿದ್ದು ಇತರು ಬಹು ಸುಲಭವಾಗಿ ಮನಗಂಡವರಾಗಿದ್ದು, ಅಂತಿಮವಾಗಿ ಯೇಸುವು ಇತರರೊಡನೆ ತನಗೆ ಕಾಣಿಸಿಕೊಂಡು ಮೊಳೆಯಿಂದಾದ ಗಾಯದ ಗುರುತಿನಲ್ಲಿ ತನ್ನ ಬೆರಳನ್ನು ಇಟ್ಟು ಅದನ್ನು ಮುಟ್ಟಿ ನೋಡೆಂದು ಕೇಳಿಕೊಂಡ ನಂತರವೇ ತಾನು ತೃಪ್ತನಾಗುವನೆಂದು ಹೇಳಿ ಪಟ್ಟುಹಿಡಿದಿದ್ದನು. ತೋಮನು ನಿಜವಾಗಿಯೂ ಮೂರು ದಿನಗಳ ಹಿಂದೆ ಶಿಲುಬೆಯಲ್ಲಿ ನೇತುಹಾಕಲ್ಪಟ್ಟ ಆ ದೇಹವನ್ನು ನೋಡಿ ತನ್ನ ಬೆರಳಿನಿಂದ ಗಾಯದ ಗುರುತನ್ನು ಮುಟ್ಟಿ ನೋಡಿದ್ದನೇ? ಇಲ್ಲವೆಂಬದು ನಮ್ಮ ಉತ್ತರ; ಮೂಳೆಮಾಂಸದಿಂದ ಕೂಡಿದ ಆ ದೇಹವು ಬಾಗಿಲು ಮುಚ್ಚಿರುವಾಗ ಒಳಗೆ ಬರಲು ಸಾಧ್ಯವಿರಲಿಲ್ಲ. ಮೇಲುಪ್ಪರಿಗೆಯಲ್ಲಿ ಕಾಣಿಸಿಕೊಂಡಿದ್ದ ಆ ದೇಹವು ನಿಜವಾದ ಮಾಂಸ ಹಾಗು ನಿಜವಾದ ಎಲುಬಿನಿಂದ ಕೂಡಿದ ಒಂದು ದೇಹಧಾರಣೆಯಾಗಿತ್ತು. ಆ ಬಗ್ಗೆ ನಮ್ಮ ಕರ್ತನು ಹೀಗೆ ಹೇಳಿದ್ದನು, "ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ." ಅವರು ನೋಡಿದಂಥದ್ದು ಆತ್ಮಿಕ ದೇಹವಾಗಿರಲಿಲ್ಲ, ಅವರು ನೋಡಿದಂಥದ್ದು ನಿಜವಾದ ಮೂಳೆಮಾಂಸಗಳಾಗಿದ್ದವು. ಆತ್ಮಿಕ ಜೀವಿಯಾಗಿ ಆತನು ಅವರ ದೃಷ್ಟಿಗೆ ಮರೆಯಾಗಿದ್ದನು; ಅವರ ಮಧ್ಯದಲ್ಲಿ ಆತನು ಮೂಳೆಮಾಂಸಗಳಿಂದ ಕೂಡಿದ ದೇಹವನ್ನು ಧರಿಸಿಕೊಂಡಿದ್ದನು; ಅದು ಅಲ್ಲಿಯೇ ಉಂಟುಮಾಡಟ್ಟಿತ್ತು ಮತ್ತು ವಸ್ತ್ರವು ಸಹ ಉಂಟುಮಾಡಲ್ಪಟ್ಟಿತ್ತು.

ಯಾವನಾದರೂ ಕರ್ತನಿಗಿದ್ದ ಮೂಳೆಮಾಂಸಗಳನ್ನು ಸೃಷ್ಟಿಮಾಡುವ ಶಕ್ತಿಯ ಬಗ್ಗೆ [ಸಂದೇಹಿಸಿ] ವಿವಾದಿಸಿದ್ದಲ್ಲಿ ವಸ್ತ್ರದ ಸೃಷ್ಟಿಯ ವಿಷಯವಾಗಿಯೂ ಅದೇ ಸಂದೇಹ ವಿವಾದಗಳು ಅತನಿಗೆ ಉಂಟಾಗುವವು; ಯಾಕಂದರೆ ಕೊಠಡಿಯು ಬಾಗಿಲುಗಳು ಮುಚ್ಚಿರುವಾಗ ಅದರ ಒಳಗೆ ದೇಹವನ್ನು ಸೃಷ್ಟಿಸುವದಕ್ಕಿಂತಲೂ ವಸ್ತ್ರವನ್ನು ಸೃಷ್ಟಿಸುವದು ಕಷ್ಟಕರವಾದುದೆಂದು ಯಾರು ತಾನೇ ಹೇಳಬಲ್ಲರು? ಮೂಳೆಮಾಂಸವನ್ನು ತಿಳಿಗಾಳಿಯಲ್ಲಿ ಕಣ್ಮರೆಮಾಡುವದಕ್ಕಿಂತಲೂ ವಸ್ತ್ರವನ್ನು ತಿಳಿಗಾಳಿಯಲ್ಲಿ ಕಣ್ಮರೆಮಾಡುವದು ಸುಲಭಕರವೆಂದು ಯಾರು ತಾನೇ ಹೇಳಬಲ್ಲರು? ಇವುಗಳನ್ನು ಮಾಡುವ ಶಕ್ತಿಯು ನಮಗೆ ಸಹಜವಾದುದೇನೂ ಅಲ್ಲ, ಇಲ್ಲವೇ ಈ ಸಂಗತಿಯನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವದು ನಮಗೆ ಸಾಧ್ಯವೂ ಇರುವದಿಲ್ಲ. ಈಗ ನಾವು ಈ ಸಂಗತಿಗಳನ್ನು ದರ್ಪಣದ ಮೂಲಕ ಅಸ್ಪಷ್ಟವಾಗಿ ಕಾಣುತ್ತಿರುವೆವು, ಕ್ರಮೇಣ ನಮ್ಮ ಕರ್ತನಿಗೆ ಹೇಗೆ ಅದ್ಭುತಕಾರ್ಯಗಳನ್ನು ಮಾಡಲು ಸಾಧ್ಯವಿತ್ತೆಂಬುದನ್ನೂ ಮತ್ತು ಆತನು ಸತತವಾಗಿ ಹೇಗೆ ಅದನ್ನು ಮಾಡುತ್ತಿದ್ದನೆಂಬುದನ್ನು ಸಹ ಗ್ರಹಿಸಿಕೊಳ್ಳುವೆವು. ಯಾಕಂದರೆ ನಮ್ಮ ಸುತ್ತಲೂ ಪ್ರತಿ ದಿನವೂ ಪ್ರಕೃತಿಯಲ್ಲಿ ಸಂಭವಿಸುತ್ತಿರುವ ಅದ್ಭುತಗಳನ್ನು ನಾವು ನೋಡುತ್ತೇವಲ್ಲವೋ? ಗೋದಿಯ ಕಾಳನ್ನು ತೆಗೆದುಕೊಂಡಲ್ಲಿ, ಈ ಚಿಕ್ಕ ಕಾಳಿನಿಂದ ಹೇಗೆ ಒಂದು ಕಾಂಡ, ಒಂದು ಚಿಗುರು, ಒಂದು ಬುಡ ಹಾಗು ಕಾಳುಗಳಿಂದ ತುಂಬಿದ ತೆನೆಯು ಹೇಗೆ

ಬರಲು ಸಾಧ್ಯವೆಂಬದು? ಅದು ಒಂದು ಅದ್ಭುತವಾಗಿದ್ದು ಅದರ ನಿರ್ವಹಣೆಯು ನಮ್ಮ ಶಕ್ತಿಗೆ ಮೀರಿದ ವಿಷಯವಾಗಿದ್ದು, ಅದನ್ನು ಗ್ರಹಿಸಿಕೊಳ್ಳುವದೂ ಸಹ ನಮ್ಮ ಶಕ್ತಿಗೆ ನಿಲುಕದ ಸಂಗತಿ–ಯಾಗಿರುವದು. ಒಂದು ಗೋದಿ ಕಾಳನ್ನು ತಯಾರಿಸಲು ನಮಗೆ ಸಾಧ್ಯ, ಅದಕ್ಕೆ ಬೇಕಿರುವ ಹಲವಾರು ಮೂಲವಸ್ತುಗಳನ್ನೆಲ್ಲಾ ಕೂಡಿಸಿ ಅದಕ್ಕೆ ಗೋಧಿಯ ಆಕಾರವನ್ನು ಕೊಡಲು ನಮಗೆ ಸಾಧ್ಯ; ಆದರೆ ನಮ್ಮ ಕಾಳು ಪ್ರಕೃತಿದತ್ತವಾಗಿ ದೊರೆಯುವ ಕಾಳಿನೊಂದಿಗೆ ವಿಶ್ಲೇಷಣೆ ಮಾಡಿದಲ್ಲಿ ಅದು ಚಿಗುರು ಒಡೆಯುವದಿಲ್ಲ, ಅದಕ್ಕೆ ಕಾಂಡವಿರುವದಿಲ್ಲ, ಗೋಧಿಕಾಳನ್ನು ಅದು ಫಲಿಸುವದಿಲ್ಲ.

## "ಆತನ ದೇಹವು ಕೊಳೆಯುವ ಅವಸ್ಥೆಯನ್ನು ಕಾಣಲಿಲ್ಲ"

ಯೇಸುವಿನ ಇರಿಯಲ್ಪಟ್ಟ ಸಹಜವಾದ ದೇಹವು ಏನಾಯಿತೆಂಬುದನ್ನು ಹೇಳುವದು ನಮ್ಮ ವಿಷಯವಾಗಿರುವದಿಲ್ಲ. ಅದು ಕೊಳೆಯುವದಿಲ್ಲವೆಂಬುದನ್ನು ಹೊರತುಪಡಿಸಿದಲ್ಲಿ ಅದರ ವಿಷಯವಾದ ವಿವರಗಳನ್ನು ದೇವರು ನಮಗೆ ಪ್ರಕಟ ಮಾಡಿರುವದಿಲ್ಲ. ಹಾಗಿದ್ದಲ್ಲಿ ಅದು ಎಲ್ಲಿರುವದು? ನಮಗೆ ತಿಳಿದಿಲ್ಲ; ಆದರೆ ಯಾರಿಗೆ ಮೋಶೆಯ ದೇಹವನ್ನು ಯಾರಿಗೂ ಸಿಗದಂತೆ ಅಡಗಿಸಿಡಲು ಸಾಧ್ಯವಿತ್ತೋ ಆತನು ಯೇಸುವಿನ ದೇಹವನ್ನೂ ಹಾಗೆಯೇ ಮುಚ್ಚಿಡಲು ಶಕ್ತಿಯುಳ್ಳವನಾಗಿದ್ದನು. (ಧರ್ಮೋ. 34:5,6) ಕೊಳೆಯುವ ಅವಸ್ಥೆಯನ್ನು ಕಾಣಲಾಗದ ಯೇಸುವಿನ ದೇಹದ ವಿಷಯವಾಗಿ ನಡೆದ ಸಂಗತಿಗಳೆಲ್ಲವುಗಳ ಸತ್ಯಾಂಶದ ಬಗ್ಗೆ ಲೋಕದವರಿಗೆ ಮುಂದೆ ಎಲ್ಲಾ ಕಾಲಕ್ಕೂ ಸಾಕ್ಷ್ಯಾಧಾರವಾಗಿ ದೇವರು ಆ ದೇಹವನ್ನು ಇನ್ನೂ ಪ್ರಸ್ತುತಪಡಿಸಿರುವದಿಲ್ಲವೆಂದು ಯಾರಿಗಾದರೂ ಹೇಳಲಷ್ಟೇ ಸಾಧ್ಯ. ಇಸ್ರಾಯೇಲ್ಯರು ಪೋಷಿಸಲ್ಪಟ್ಟ ಮನ್ನಾ ಸಬ್ಬತ್ ದಿನವನ್ನು ಹೊರತು ಪಡಿಸಿ ಎರಡನೆಯ ದಿನದಲ್ಲಿ ನಶಿಸಹೋಗುತ್ತಿತ್ತೆಂಬು – ದನ್ನು ನಾವು ಸ್ಮರಿಸುವವರಾಗಿದ್ದೇವೆ; ಆದರೆ ಅರಣ್ಯದಲ್ಲಿ ನಡೆಯಲಾದ ದೊಡ್ಡ ಅದ್ಭುತದ ಸಾಕ್ಷಿಯಾಗಿ ಅಥವಾ ಸ್ಮರಣಾರ್ಥವಾಗಿ ಮಂಜೂಷ ಪೆಟ್ಟಿಗೆಯಲ್ಲಿನ ಚಿನ್ನದ ಪಾತ್ರೆಯಲ್ಲಿ ಮನ್ನಾವನ್ನು ಸಂರಕ್ಷಿಸಿಡಲಾಗಿತ್ತೆಂಬುದನ್ನು ಸಹ ನಾವು ನೆನಸಿಕೊಳ್ಳುವವರಾಗಿದ್ದೇವೆ. ಹೀಗಿರಲಾಗಿ ಮನ್ನಾವೆಂಬುದಕ್ಕೆ ಹೋಲಿಕೆಯಾಗಿರುವ ಪರಲೋಕದಿಂದ ಇಳಿದು ಬಂದ ರೊಟ್ಟಿಯ ವಿಷಯವಾಗಿ ಸಹ ನಾವು ಏನು ಹೇಳೋಣ? ಯೇಸುವಿನ ದೇಹವನ್ನು ಒಂದು ಸಾಕ್ಷಿಯನ್ನಾಗಿ ಸಂರಕ್ಷಿಸಿಡಲು ದೇವರು ಹಾಗೆಯೇ ಸಮರ್ಥನಾಗಿರುವನಲ್ಲವೋ, ಅಲ್ಲದೆ ಇತರ ದೇಹಗಳು ಲಯಾವಸ್ಥೆಯನ್ನು ಹೊಂದುವಂಥ ಸ್ಥಿತಿಯಲ್ಲಿರಲು ಈ ಒಂದು ದೇಹವು ನಿರ್ಲಯಾವಸ್ಥೆಯುಳ್ಳದ್ದಾಗಿ ಸಂರಕ್ಷಿಸಲ್ಪಡಬಹುದಲ್ಲವೇ? ಸತ್ಯವೇದದಲ್ಲಿ ಕೆಲವೊಂದು ಹೇಳಿಕೆಗಳಿದ್ದು, ಅವು ಈಟಿಯ ಗಾಯದ ಮತ್ತು ಮೊಳೆಯ ಗಾಯದ ಗುರುತುಗಳಿರುವ ಇದೇ ದೇಹವು ಮುಂದೆ ಪ್ರದರ್ಶಿಸಲ್ಪಡುವ ಸಲುವಾಗಿ ಎಲ್ಲೋ ಒಂದು ಕಡೆಯಲ್ಲಿ ಸಂರಕ್ಷಿಸಿಡಲಾಗಿರುವದೆಂಬುದನ್ನು ಅಡಕಮಾಡಿ ಹೇಳಿರುವಂತೆ ತೋರುವದು. ಆ ಬಗ್ಗೆ ಹೀಗೆ ಲಿಖಿತವಾಗಿರುವದು, "ತಾವು ಇರಿದವನನ್ನು ದಿಟ್ಟಿಸಿ ನೋಡುವರು." – ಜೆಕರ್ಯ 12:10

ನಮ್ಮ ಕರ್ತನ ಮೊದಲನೇ ಐದು ತೋರ್ಪಡಿಸಿಕೊಳ್ಳು–ವಿಕೆಗಳು ನಾಲ್ವತ್ತು ದಿನಗಳು ಆತನು ಪ್ರತ್ಯಕ್ಷವಾಗಿದ್ದ ಸಮಯದಲ್ಲಿ ನಡೆದ ಮೊದಲ ಎಂಟು ತೋರ್ಪಡಿಸಿಕೊಳ್ಳುವಿಕೆಯು ಸಮಯದಲ್ಲಿ ಸಂಭವಿಸಿತ್ತೆಂಬದು ಸ್ಪಷ್ಟವಾಗಿರು ವದು. ಹೀಗೆ ಅಪೋಸ್ತಲರಿಗೆ ಈ ಸನ್ನಿವೇಶಗಳ ಬಗ್ಗೆ ಆಲೋಚಿಸಿ ಚರ್ಚಿಸುವ ಸಲುವಾಗಿ ಸುದೀರ್ಘಕಾಲ ಕಾದುಕೊಂಡಿರುವಂಥ ಸಮಯಗಳು ಹೇರಳವಾಗಿದ್ದವು; ಆ ವೇಳೆಯಲ್ಲಿ ಕರ್ತನು ಯಾವ ವಿಧದಲ್ಲಿಯೂ ತೋರ್ಪಡಿಸಿಕೊಂಡಿರಲಿಲ್ಲ. ಅವರಲ್ಲಿ ಬಹು ಪಾಲು ಮಂದಿ ಗಲಿಲಾಯದವರಾಗಿದ್ದುದರಿಂದ ಅವರು ಯೆರೂಸಲೇಮಿನ ಸುತ್ತುಮುತ್ತಲು ನಮ್ಮ ಕರ್ತನು ಕಡೆಯದಾಗಿ ಕಾಣಿಸಿಕೊಂಡ ಎಂಟನೇ ದಿನದಿಂದ ಎರಡು ವಾರಗಳಿಗಿಂತಲೂ ಹೆಚ್ಚು ಸಮಯ ಉಳಿದುಕೊಳ್ಳದೇ ಇದ್ದಂಥ ಸಂಭವವಿದ್ದು, ಆದರೆ ಅವರು ತಮ್ಮ ಸ್ವನಾಡಿಗೆ ಹಿಂದಿಗುವವರಾಗಿ ತಾವು ಒಡೆಯನನ್ನು ಮುಂದೆ ಎಂದಾದರೂ ನೋಡುವೆವೋ ಇಲ್ಲವೋ, ಎಂದೂ ದಾರಿಯಲ್ಲಿ ಅವರಿಗೆ ಆತನು ಮತ್ತೆ ಕಾಣಿಸಿ – ಕೊಳ್ಳುವನೋ ಇಲ್ಲವೋ ಎಂದೂ, ಅಥವಾ ಗಲಿಲಾಯದಲ್ಲಿನ ಬೇರೊಂದು ಮೇಲುಪ್ಪರಿಗೆಯಲ್ಲಿ ಕೂಡಿ ಬಂದಿರುವಾಗ ಆತನು ಕಾಣಿಸಿಕೊಳ್ಳಬಹುದೋ ಏನೋ ಎಂದು ಆಶ್ಚರ್ಯಪಡುತ್ತಿದ್ದರು. ಬಹುಶಃ ಅವರು ಸ್ತ್ರೀಯರ ಮೂಲಕವಾಗಿ ಕಳುಹಿಸಲ್ಪಟ್ಟ ಸಂದೇಶವನ್ನು ಅಂದರೆ ಆತನು ಅವರ ಮುಂದಾಗಿ ಗಲಿಲಾಯಕ್ಕೆ ಹೋಗಿ ಅಲ್ಲಿ ಅವರನ್ನು ಭೇಟಿಮಾಡುವನೆಂದು ಹೇಳಿದ್ದನ್ನು ಸಹ ನೆನಪಿಸಿಕೊಂಡಿದ್ದರು.

ತಮ್ಮ ಹಳೆಯ ನೆನಪುಗಳು ಸುಳಿದಾಡುತ್ತಿದ ಸ್ಥಳದ ಸಮೀಪದಲ್ಲಿ ಅಂದರೆ ನಮ್ಮ ಕರ್ತನು ಹಾಗು ಅವರು ಆಗಾಗ್ಗೆ ಕೂಡಿಬರುತ್ತಿದ್ದ ಸ್ಥಳದಲ್ಲಿ ಸ್ವಲ್ಪ ಹೆಚ್ಚು ಸಮಯ ಕಾದುಕೊಂಡಿ–ರುವ ಸಲುವಾಗಿ ಹಾಗು ನಿಜ ಜೀವನಕ್ಕೆ ಅವಶ್ಯವಾಗಿರುವ ಸಂಗತಿಗಳು ಅವರನ್ನು [ದುಡಿಮೆಗೆ ಹೋಗುವಂತೆ] ಒತ್ತಾಯಿಸಲಾರಂಭಿಸಿದ್ದವು. ಮೀನು ಹಿಡಿಯುವ ಕಸುಬಿಗೆ ಮತ್ತೆ ಮರಳುವ ಉದ್ದೇಶವನ್ನು ಪ್ರಕಟಮಾಡಿ ಹೇಳಿದ್ದವರಲ್ಲಿ ಸೀಮೋನ ಪೇತ್ರನು ಮೊದಲಿಗನಾಗಿದ್ದನು, ಅಲ್ಲದೆ ಹಿಂದೆ ಅದೇ ವೃತ್ತಿಯಲ್ಲಿ ಪಳಗಿದ್ದ ಇತರ ಅಪೋಸ್ತಲರು ಅವರನ್ನು ಸೇರಿಕೊಂಡಿದ್ದು, ಬಹುಮಟ್ಟಿಗೆ ಎರಡು ಅಥವಾ ಹೆಚ್ಚು ವರುಷಗಳ ಹಿಂದೆ ಅಂದರೆ ಯೇಸುವು ಅವರನ್ನು ಅಪೋಸ್ತಲರಾಗಲು ಕರೆಯುವದಕ್ಕೆ ಮೊದಲು ಇದ್ದ ಅವರ ಹಿಂದಿನ ಪಾಲುಗಾರಿಕೆಯು ಮತ್ತೆ ಪುನರಾರಂಭಗೊಂಡಿತ್ತು. ನಮ್ಮ ಕರ್ತನು ಈ ಪರಿಸ್ಥಿತಿಯನ್ನು ಮೊದಲೇ ಕಂಡುಕೊಂಡವ–ನಾಗಿದ್ದು, ತಾನು ಪುನರುತ್ಥಾನವಾದ ನಂತರ ಪರಲೋಕ–ವನ್ನೇರುವದಕ್ಕೆ ಮೊದಲು ನಾಲ್ವತ್ತು ದಿನಗಳು ಕಾದುಕೊಂಡಿ–ದ್ದುದು ಹೆಚ್ಚಾಗಿ ಈ ಒಂದು ಪಾಠವನ್ನು ನೀಡುವ ಉದ್ದೇಶ–ದಿಂದಲೇ ಆಗ ಅವರು ಕರೆಯಲ್ಪಟ್ಟಿದ್ದರೆಂಬುದು ನಮ್ಮ ನಂಬಿಕೆ. ಅವರಿಗೆ ಕೇವಲ ಹೇಗೆ ಎದೆಗುಂದಿದವರಾಗುವ ಅನುಭವವು ಉಂಟಾಗಿತ್ತೆಂಬುದು ಆತನಿಗೆ ತಿಳಿದಿತ್ತು; ಹೇಗಂದರೆ ತಾವು ಹಿಂದೆ ತಿಳಿದುಕೊಂಡಂತೆ ಆ ರಾಜ್ಯದ ನಿರೀಕ್ಷೆ ಪ್ರತೀಕ್ಷೆಗಳೆಲ್ಲಾ ಈ ಹೊಸ ಸನ್ನಿವೇಶದಲ್ಲಿ ಅಸ್ಪಷ್ಟವಾಗಿ ದೂರವಾಗಿದ್ದಂತೆ ತೋರಿಬಂದಿತ್ತು, ಮತ್ತು ಮುಂದೆ ಆದೇಶಿಸಲ್ಪಡದ ಹೊರತಾಗಿ ತಾನು ಉದ್ದೇಶಿಸಿದ

ಕಾರ್ಯಕ್ಕೆ ತನ್ನ ಹಿಂಬಾಲಕರು ತೆರಳಲು ಅವರು ಸಿದ್ಧರಾಗುವದಿಲ್ಲವೆಂಬದು ಆತನಿಗೆ ತಿಳಿದಿತ್ತು. ಈ ಎಲ್ಲಾ ವಾರಗಳಲ್ಲಿ ಆತನು ಅವರ ಮಧ್ಯದಲ್ಲಿ ಇರುತ್ತಿದ್ದನು, ಆದರೆ ಅದೃಶ್ಯನಾಗಿ ಒಬ್ಬ ಆತ್ಮಿಕ ಜೀವಿಯಾಗಿ ಇರುತಿದ್ದನು; ಆತನು ಅವರ ಪ್ರಶ್ನೆಗಳನ್ನು ಅವರ ಸಂದೇಹಗಳನ್ನು ಅವರ ವಿವರಣೆಗಳನ್ನು ಅವರ ಸಲಹೆಗಳನ್ನು ತೀರ್ಮಾನಗಳನ್ನು ಆಲಿಸಿ ಗಮನಕ್ಕೆ ತೆಗೆದುಕೊಂಡಿದ್ದು ತಕ್ಕ ಸಮಯದಲ್ಲಿ ತಕ್ಕ ಪಾಠವನ್ನು ಅನ್ವಯಮಾಡಿ ಹೇಳಲು ಸಿದ್ಧವಾಗಿದ್ದನು.

## “ನೀನು ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?

ಕರ್ತನು ಮೀನುಗಾರಿಕೆ ವೃತ್ತಿಯಲ್ಲಿನ ಪಾಲುಗಾಕೆಯು ಹೊಸದಾಗಿ ಆರಂಭವಾಗಿ ಅದು ಮುಂದುವರೆಯುವಂತಾಗಲು ಬಿಟ್ಟಿದ್ದನು. ಅವರು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನನ್ನೂ ಹಿಡಿದಿರಲಿಲ್ಲ, ಹೀಗಾಗಿ ಅವರು ನಿಸ್ಸಂದೇಹವಾಗಿ ಇನ್ನೂ ಹೆಚ್ಚು ನಿರುತ್ಸಾಹಗೊಂಡವರಾಗಿ ತಮಗೆ ಲೌಕೀಕ ಸಂಗತಿಗಳು ಸಹಿತವಾಗಿ ಆತ್ಮೀಕ ಸಂಗತಿಗಳಲ್ಲಿಯೂ ವೈಫಲ್ಯವು ಹಿಡಿದುಕೊಂಡಿರುವದೆಂಬ ನಿರ್ಣಯಕ್ಕೆ ಬಂದಿದ್ದರು. ಸದವಕಾಶದ ಕ್ಷಣವು ಬಂದಿತ್ತು ಮತ್ತು ಯೇಸುವು ಆ ದಡದಲ್ಲಿ ತನ್ನ ಸ್ವಂತ ಶರೀರ ಹಾಗು ತನ್ನ ಎಂದಿನ ವಸ್ತ್ರದೊಡನೆ ಅಲ್ಲದಿದ್ದರೂ ಬೇರೊಂದು ರೂಪದಲ್ಲಿ ವಿಶೇಷವಾಗಿ ಸಿದ್ಧಪಡಿಸಲಾದ ದೇಹವಸ್ತ್ರದಿಂದ ಕೂಡಿದವನಾಗಿ ನಿಂತುಕೊಂಡು ಅಪೋಸ್ತಲರನ್ನು ಕರೆದು ಅವರಲ್ಲಿ ಮೀನುಗಳು ಇರುವದೋ ಎಂದು ವಿಚಾರಿಸಿದ್ದನು. ಅವರು ಹಿಂದಿರುಗಿ ತಾವು ರಾತ್ರಿಯೆಲ್ಲಾ ಶ್ರಮಿಸಿದ್ದು ತಮಗೆ ಏನೂ ಸಿಕ್ಕಲಿಲ್ಲವೆಂದು ಕೂಗಿ ಹೇಳಿದ್ದರು. ಆತನು ಅವರಿಗೆ ದೋಣಿಯ ಮತ್ತೊಂದು ಭಾಗದಲ್ಲಿ ಬಲೆ ಬೀಸಲು ಸಲಹೆಮಾಡಿದ್ದನು. ಅದು ಅವರಿಗೆ ಬುದ್ಧಿಯಿಲ್ಲದ್ದಾಗಿ ತೋರಿದ್ದಿರಬೇಕು; ಯಾಕಂದರೆ ತಾವು ಈಗಾಗಲೇ ಹೋಗಿದ್ದ ಸ್ಥಳದಿಂದ ಅದು ಕೆಲವು ಅಡಿಗಳಷ್ಟು ದೂರದಲ್ಲಿದ್ದು ದೋಣಿಯು ಅಲ್ಲಿ ಸತತವಾಗಿ ಸುತ್ತಾಡಿತ್ತು. ಹೇಗೂ ದಡದಲ್ಲಿ ನಿಂತಿದ್ದ ಅಪರಿಚಿತನ ಕೆಲವೊಂದು ಸಂಗತಿಗಳು ಅವರ ಮೇಲೆ ಪ್ರಭಾವ ಬೀರಿದ್ದು ಅವರು ಬಲೆಯನ್ನು ಇನ್ನೊಂದು ಕಡೆಯಲ್ಲಿ ಬೀಸಲು ಕೂಡಲೇ ಬಲೆಯು ದೊಡ್ಡ ಮೀನುಗಳಿಂದ ತುಂಬಿಕೊಂಡಿತ್ತು. ಪೇತ್ರನ ಬಗ್ಗೆ ಹೇಳುವದಾದರೆ, ಅವನು ಆಗಲೇ ಪಾಠವನ್ನು ಕಲಿತು – ಕೊಂಡಿದ್ದನು. ಕರ್ತನು ತಮ್ಮನ್ನು ಅಪೋಸ್ತಲರಾಗುವದಕ್ಕೆ ಕರೆದಾಗ ಅವರಿಗೆ ಇದೇ ಅನುಭವವಾಗಿತ್ತು. ದಡದ ಮೇಲೆ ಇರುವಾತನು ಬೇರೊಂದು ರೂಪದಲ್ಲಿರುವ ಕರ್ತನೆಂಬುದನ್ನು ಆತನು ಶೀಘ್ರವಾಗಿ ಗ್ರಹಿಸಿಕೊಂಡಿದ್ದನು. ದೋಣಿಗಳು ದಡಕ್ಕೆ ಬರುವಂತಾಗಲು ಹಾಗು ಬಲೆ ಇಲ್ಲವೇ ಮೀನುಗಳಿಗಾಗಿಯೂ ಕಾಯದೆ ಪೇತ್ರನು ನೀರಿಗೆ ಧುಮುಕಿ ಕೂಡಲೇ ಕರ್ತನ ಬಳಿಗೆ ಹೋಗಲು ಕುತೂಹಲವುಳ್ಳವನಾಗಿದ್ದಲ್ಲದೆ ಆ ತೋರ್ಪಡಿಸಿ–ಕೊಳ್ಳುವಿಕೆಯು ಇತರ ಸಮಯಗಳಲ್ಲಿದ್ದಂತೆ ಇದ್ದಕ್ಕಿದ್ದಂತೆ ಅಂತ್ಯಗೊಳ್ಳಬಹುದೆಂಬುದನ್ನು ಮನಗೊಂಡವನಾಗಿದ್ದನು. ಜೊತೆಗೆ ಕೆಲ ಸಮಯದ ಹಿಂದೆ ತನ್ನ ಕರ್ತನನ್ನು ಹೇಗೆ ಅಲ್ಲಗಳೆದಿದ್ದನ್ನು ಸ್ಮರಿಸಿಕೊಂಡವನಾಗಿ ತನ್ನ ಪ್ರೀತಿ ಹಾಗು ನಂಬಿಗಸ್ತಿಕೆಯನ್ನು ತೋರ್ಪಡಿಸಲು ಹೀಗೆ ಉತ್ಸುಕನಾಗಿದ್ದನು.

ಈ ತೋರ್ಪಡಿಸಿಕೊಳ್ಳುವಿಕೆಯು ಸಂಬಂಧದಲ್ಲಿ ಯೇಸುವು ಪೇತ್ರನಿಗೆ ಈ ಮಾತುಗಳನ್ನು ವಿಶೇಷವಾಗಿ ನಿರ್ದೇಶಿಸಿ ಹೇಳಿದ್ದನು: “ಯೋನನ ಮಗನಾದ ಸೀಮೋನನೇ, “ನೀನು ಇವರಿಗಿಂತ ಅಂದರೆ ಈ ದೋಣಿ ಬಲೆ ಮುಂತಾದವುಗಳಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ? ಪೇತ್ರನಿಗೆ ಸಂಬೋಧಿಸಿ ಕೇಳಲಾದ ಆ ಪ್ರಶ್ನೆಯನ್ನು ಎಲ್ಲರಿಗೂ ಅನ್ವಯವಾಗಿತ್ತಾದರೂ ಅವರಲ್ಲಿ ಹಿರಿಯನೂ ನಾಯಕನೂ ಆಗಿದ್ದ ಪೇತ್ರನಿಗೆ ವಿಶೇಷ ಮಹತ್ವದಿಂದ ಕೂಡಿದ್ದಾಗಿಯೂ, ಒತ್ತಾಯಪೂರ್ವಕವಾಗಿಯೂ ಕೇಳಲಾಗಿತ್ತು; ಅಲ್ಲದೆ ಸ್ವಲ್ಪ ಸಮಯದ ಹಿಂದೆ ಪೇತ್ರನು ದೃಢವಾಗಿ ಹೀಗೆ ಹೇಳಿದ್ದನು: “ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವದಿಲ್ಲ.” ಪೇತ್ರನು ಕರ್ತನ ಕಡೆಗಿರುವ ತನ್ನ ಪ್ರೀತಿಯನ್ನು ಪ್ರಕಟಿಸಿದ್ದು ಆತನಿಗೆ ಕುರಿಗಳನ್ನು ಮೇಯಿಸಲು ಹಾಗು ಕುರಿಮರಿಗಳನ್ನು ಮೇಯಿಸಲು ಹೇಳಲಾಗಿತ್ತು. ಆ ಪಾಠವು ಸಮಯೋಚಿತವಾಗಿದ್ದು ಅದನ್ನು ಎಂದೂ ಪುನರುಚ್ಚರಿಸುವ ಅಗತ್ಯವಿರಲಿಲ್ಲ. ನಮಗೆ ತಿಳಿದಿರುವಂತೆ, ಪೇತ್ರನಿಗೂ ಹಾಗು ಇತರ ಅಪೋಸ್ತಲರಿಗೂ ನಂತರದಲ್ಲಿ ಅಪೋಸ್ತಲರಾಗಿ ತಮ್ಮ ಕಾರ್ಯಭಾರದ ಸಂಬಂಧದಲ್ಲಿ ಎಂದೂ ಸಂದೇಹ ಉಂಟಾಗಿರಲಿಲ್ಲ; ಆದರೆ ಅವರು ತಮ್ಮ ಸಂಪೂರ್ಣ ಸಮಯ ಸಾಮರ್ಥ್ಯಗಳನ್ನು ಕುರಿಗಳನ್ನು ಹಾಗು ಕುರಿಮರಿಗಳನ್ನು ಮೇಯಿಸುವದಕ್ಕೆ ನೀಡಿದ್ದರು. ಅವರು ಸಾಕ್ಷಿಯಾಗಿ ನೋಡಿದ್ದ ಅದ್ಭುತವು ಅವರನ್ನು ಲೌಕೀಕ ಸಂಗತಿಗಳಲ್ಲಿ ಆಶೀರ್ವದಿಸಲು ಇಲ್ಲವೇ ಅಡ್ಡಿಪಡಿಸಲು ಹಾಗು ಅದೇ ರೀತಿಯಲ್ಲಿ ತನ್ನ ಅಪೋಸ್ತಲರಾಗಿ ಹಾಗು ಪ್ರತಿನಿಧಿಗಳಾಗಿ ಅವರ ಪ್ರತಿಯೊಂದು ಹಿತಾಸಕ್ತಿಗಳನ್ನು ಪೂರೈಸಲು ಕರ್ತನಿಗಿರುವ ಶಕ್ತಿಯ ಬಗ್ಗೆ ಅವರಿಗೆ ಮನವರಿಕೆಯಾಗುವಂತೆ ಮಾಡಿತ್ತು. ಆ ಪಾಠವನ್ನು ನಿಖರತೆಯಿಂದ ಸೂಕ್ತ ಸಮಯದಲ್ಲಿ ನೀಡಲಾಗಿತ್ತು. ಅದನ್ನು ಹಿಂದೆಯೇ ಅವರ [ಶಿಷ್ಯವೃತ್ತಿಯ] ಅನುಭವಗಳಲ್ಲಿ ನೀಡಿದ್ದಾದಲ್ಲಿ ನಿಸ್ಸಂದೇಹವಾಗಿ ಅದು ಕಡಿಮೆ ಮಹತ್ವವುಳ್ಳದ್ದಾಗಿರುತ್ತಿತ್ತು; ಅವರು ಕಂಗಾಲಾಗಿ ಮೀನು ಹಿಡಿಯಲು ತೀರ್ಮಾನಿಸಿಕೊಂಡ ಆನಂತರ ಅವರ ವೃತ್ತಿಯ ಅನುಭವದಲ್ಲಿನ ಮೊದಲ ದಿನವೇ ಈ ಪ್ರಭಲವಾದ ಪಾಠವನ್ನು ನೀಡುವದು ಜ್ಞಾನದ ಒಂದು ಅಂಶವಾಗಿತ್ತು. ಅದು ನಮ್ಮ ಕರ್ತನ ಪುನರುತ್ಥಾನ ಸಂಬಂಧವಾದ ಹಾಗು ಆತನು ಮಾರ್ಪಟ್ಟವನಾಗಿರುವ ಅಂಶವನ್ನು ಸಹ ತೋರ್ಪಡಿಸಿಕೊಳ್ಳುವ ಸಂಬಂಧದಲ್ಲಿನ ಪಾಠವಾಗಿದ್ದು ಆತನು ಇನ್ನು ಮೇಲೆ ಮನುಷ್ಯನಾದ ಕ್ರಿಸ್ತ ಯೇಸುವಾಗಿ ಮಾನವನ ಸ್ಥಿತಿಗತಿಗಳಿಗೆ ಅಧೀನನಾಗಿಲ್ಲ–ವೆಂಬುದನ್ನು ತೋರಿಸಿಕೊಳ್ಳುವ ಸಲುವಾಗಿತ್ತು. ಆತನು ಪುನಃ ಅವರ ದೃಷ್ಟಿಗೆ ಅದೃಶ್ಯನಾಗಿದ್ದನು, ಆದರೆ ಅವರೆಲ್ಲರನ್ನು ಒಂದು ನಿಗದಿತವಾದ ಸ್ಥಳದಲ್ಲಿ ಸಂಧಿಸುವಂತೆ ನೇಮಕಮಾಡಿದ್ದನು.

ಈ ನೇಮಿತವಾದ ಭೇಟಿಯು ನಿಸ್ಸಂದೇಹವಾಗಿ ಅಪೋಸ್ತಲನಾದ ಪೌಲನು ತಿಳಿಸಿರುವಂಥದ್ದಾಗಿತ್ತು; ಅಂದರೆ

ಸುಮಾರು ಐನೂರು ಮಂದಿ ಸಹೋದರರು ಕರ್ತನು ಶರೀರ ರೂಪತಾಳಿ ತನ್ನನ್ನು ತೋರ್ಪಡಿಸಿಕೊಂಡದ್ದನ್ನು ಸಾಕ್ಷಿಯಾಗಿ ನೋಡಿದ್ದರು. ಅಲ್ಲಿ ನೀಡಲಾದ ಅನೇಕ ವಿಧವಾದ ಪಾಠಗಳ ಬಗ್ಗೆ ಪೂರ್ಣ ವಿವರಗಳು ನಮಗೆ ತಿಳಿದಿರುವದಿಲ್ಲ, ಆದರೆ ಆ ಪಾಠಗಳು ಮಾತುಗಳಿಗಿಂತಲೂ ಹೆಚ್ಚಾಗಿ ಕಾರ್ಯರೂಪದವು –ಗಳಾಗಿದ್ದವೆಂದು ನಾವು ಆಲೋಚಿಸುವ ಪ್ರವೃತ್ತಿಯುಳ್ಳವರಾಗಿರು –ವೆವು; ಅಂದರೆ ಈ ತೋರ್ಪಡಿಸಿಕೊಳ್ಳುವಿಕೆಗಳು ನಮ್ಮ ಕರ್ತನ ಪುನರುತ್ಥಾನ ಹಾಗು ಆತನು ಇಹಲೋಕದ ಸ್ಥಿತಿಯಿಂದ ಆತ್ಮಿಕ ಸ್ಥಿತಿಗೆ ಮಾರ್ಪಟ್ಟ ಸಂಗತಿಯಗಳನ್ನು ಅವರಿಗೆ ಮನದಟ್ಟು ಮಾಡಿಕೊಡುವ ಉದ್ದೇಶಕ್ಕಾಗಿತ್ತೆಂಬದು.

## [ಮೇಲಿನಿಂದ] ಇಳಿದು ಬಂದವನು [ಮೇಲಣ ಎಲ್ಲಾ ಲೋಕಗಳಿಗಿಂತ] ಉನ್ನತವಾಗಿ ಏರಿಹೋದವನೇ

ನಂತರದ ತೋರ್ಪಡಿಸಿಕೊಳ್ಳುವಿಕೆಯು ನಮ್ಮ ಕರ್ತನು ಎಣ್ಣೆಮರಗಳ ಗುಡ್ಡದ ಮೇಲಿಂದ [ಪರಲೋಕಕ್ಕೆ] ಏರಿಹೋದ ಸಮಯದಲ್ಲಿ ನಡೆದಿರುವ ಸಂಭವವಿತ್ತು. ಅಪೋಸ್ತಲರೆಲ್ಲರೂ ಅಲ್ಲದೆ ಬಹುಶಃ ಇತರರೂ ಯೆರೂಸಲೇಮಿಗೆ ಹಿಂದಿರುಗಿ–ದವರಾಗಿ ಎಣ್ಣೇಮರಗಳ ಗುಡ್ಡಕ್ಕೆ ಹೋಗಿಬಂದಿದ್ದರು; ಮೇಲಿನಿಂದ ಶಕ್ತಿಯು ಹೊದಿಸಲ್ಪಡುವ ವರೆಗೂ ಅವರು ಯೆರೂಸಲೇಮಿನಲ್ಲಿ ಕಾದುಕೊಂಡಿರಬೇಕೆಂಬ ಆದೇಶ–ವಾಗಿದ್ದುದು ಸ್ಪಷ್ಟವಾಗಿತ್ತು. ಅವರು ಆತನ ಸಂಗಡವಿದ್ದು ಆ ಕಡೆಯ ಆದೇಶವನ್ನು ಪಡೆಯುವಾಗ ಆತನು ಅವರ ಬಳಿಯಿಂದ ಬೇರ್ಪಟ್ಟಿದ್ದನು; ಅವರು ವೀಕ್ಷಿಸುತ್ತಿದ ಆ ಆಕೃತಿಯು ಕ್ರಮೇಣ ಮೋಡದೊಳಗೆ ಸರಿದುಹೋಗಿ [ನಂತರದಲ್ಲಿ] ಅವರ ದೃಷ್ಟಿಯಿಂದ ತೆಗೆಯಲ್ಪಟ್ಟಿತ್ತು. ಈ ಏರ್ಪಾಟಿನ ಮೂಲಕವಾಗಿ ಕರ್ತನು ಆತ್ಮನಿಂದ ಇನ್ನೂ ಹುಟ್ಟದೇ ಇದ್ದು ಹೀಗಾಗಿ ಆತ್ಮಿಕ ಸಂಗತಿಗಳನ್ನು ಗ್ರಹಿಸಲು ಸಾಧ್ಯವಿಲ್ಲದವರಿಗೆ ಮಾಡಿದ್ದ ಸಾಧ್ಯವಿದ್ದಷ್ಟು ಉತ್ತಮವಾದ ಸಂಗತಿ ಇದಾಗಿತ್ತು. ಆತನು ಶರೀರದಲ್ಲಿದ್ದವನಾಗಿ ಆತ್ಮಿಕವಾದುದಕ್ಕೆ ನಿಜವಾಗಿಯೂ ಮಾರ್ಪಾಟಾದ ಸಂಗತಿಗಳಿಗೆ ಸೂಚಿತನಾಗಿದ್ದನು. ಹೀಗಾಗಿ ಅಪೋಸ್ತಲರಿಗೆ ಆತ್ಮನಿಂದ ಹುಟ್ಟಿದ ನಂತರ [ಆ ವಿಷಯಗಳನ್ನು] ಅರ್ಥಮಾಡಿಕೊಳ್ಳಲು ಸಾಧ್ಯವಾಗಿತ್ತು. ಮತ್ತು ಪ್ರಾಕೃತ ಮನುಷ್ಯನ ಈ ದೃಷ್ಟಿಕೋನದಿಂದಲೇ ಅವರು ಬರೆದಂಥ ಸಂಗತಿಗಳು ನಮಗೆ [ಪಾರಂಪರ್ಯವಾಗಿ] ಬಂದಿರುವದು.

ಈ ಪಾಠದ ತಿರುಳು ಸುವರ್ಣ ಖಚಿತವಾದ ನಮ್ಮ ಪಠ್ಯಭಾಗದಲ್ಲಿ ಈ ಮುಂದಿನಂತೆ ವ್ಯಕ್ತವಾಗಿರುವದು–"ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದುಬಂದೇ ಇದ್ದಾನೆ; ನಿದ್ರೆಹೋದ–ವರಲ್ಲಿ ಪ್ರಥಮಫಲವಾದನು." ಇತರರು ಮರಣವೆಂಬ ನಿದ್ರೆಯಿಂದ ತಾತ್ಕಾಲಿಕವಾಗಿ ಎಬ್ಬಿಸಲ್ಪಟ್ಟಿದ್ದು ನಂತರದಲ್ಲಿ ಮತ್ತೆ ಕೇವಲ ಹಿಂದಿನ ಸ್ಥಿತಿಗೆ ಇಳಿದು ಹೋಗುವದಕ್ಕಾಗಿತ್ತು; ಆದರೆ ನಮ್ಮ ಕರ್ತನಾದ ಯೇಸುವು "ಸತ್ತವರೊಳಗಿಂದ ಮೊದಲು ಎದ್ದು ಬಂದವನಾಗಿದ್ದು "ನಿದ್ರೆಹೋದವರಲ್ಲಿ ಪ್ರಥಮ ಫಲವಾದನು;" ಅಪೋಸ್ತಲನಾದ ಪೌಲನು ಸಾರಿಹೇಳಿರುವಂತೆ– "ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ." ಆತನ ಪುನರುತ್ಥಾನವು ಜೀವಕ್ಕಾದ ಪುನರುತ್ಥಾನವಾಗಿತ್ತು ಹಾಗು ಅದು ಆತ್ಮಿಕರೂಪದಲ್ಲಿ ಪರಿಪೂರ್ಣತೆ ಹೊಂದುವ ಸಲುವಾಗಿದ್ದು ಇದರಲ್ಲಿ ಆತನು ನಿದ್ರೆಹೋದವರಲ್ಲಿ ಪ್ರಥಮ ಫಲವಾಗಿದ್ದನು; ಇದರಲ್ಲಿ ಅಡಕವಾಗಿರುವದೇನಂದರೆ ಅದೇ ರೀತಿಯಲ್ಲಿ ನಿದ್ರೆಹೋಗಿರು–ವವರು ಪುನರುತ್ಥಾನದಲ್ಲಿ ಇದೇ ವಿಧವಾಗಿ ಆತ್ಮಿಕ ಜೀವಿಗಳಾಗಿ ಎದ್ದುಬರುವರೆಂಬದು. ಪ್ರಥಮ ಫಲವಾಗಬೇಕೆಂಬುದರಲ್ಲಿ ಇತರರೂ ಇದೇ ರೀತಿಯಾಗಿರುವರೆಂಬುದು ಅಡಕ–ವಾಗಿರುವದು, ಯಾಕಂದರೆ ನಮ್ಮ ಕರ್ತನ ತನ್ನ ಪುನರುತ್ಥಾನವು ಇತರ ಎಲ್ಲಾ ಪುನರುತ್ಥಾನಗಳಿಗಿಂತ ಮುಂದಾಗಿರುವದೆಂಬ ಅರ್ಥದಲ್ಲಿ ನಿದ್ರೆಹೋದವರೆಲ್ಲರಲ್ಲಿ ಅದು ಪ್ರಥಮ ಫಲವಾಗಿದ್ದರೂ ಇನ್ನೊಂದು ಅರ್ಥದಲ್ಲಿ ಆತನು ತನ್ನ ದೇಹವಾದ ಕ್ರೈಸ್ತಸಭೆಯ ಪ್ರಥಮ ಫಲವಾಗಿದ್ದನು. ಇನ್ನೂ ಒಂದು ವಿಶಾಲವಾದ ಅರ್ಥದಲ್ಲಿ ಇಡೀ ಲೋಕದಲ್ಲಿ ಜೀವಕ್ಕೆ ಸೇರಿದವರಲ್ಲಿ ಶಿರಸ್ಸು ಹಾಗು ದೇಹದಿಂದ ಕೂಡಿದ ಕ್ರಿಸ್ತನೆಂಬದು ಪ್ರಥಮಫಲವಾಗಿರುವದು. ಈ ಸಂಗತಿಯನ್ನು ಅಪೋಸ್ತಲನಾದ ಯಾಕೋಬನು ಹೀಗೆ ವ್ಯಕ್ತಪಡಿಸಿರುವನು: "ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ ನಾವು ಆತನ ಸೃಷ್ಟಿಗಳಲ್ಲಿ ಪ್ರಥಮಫಲದಂತಾದೆವು." – ಯಾಕೋಬ 1:18

ಹೀಗೆ ನಾವು ಪ್ರಥಮಫಲವೆಂಬ ಶಬ್ದವನ್ನು ಎರಡು ಅರ್ಥದಲ್ಲಿ ನೋಡುವೆವು: ದೃಷ್ಟಾಂತವಾಗಿ ಹೇಳುವದಾದರೆ, ಒಂದು ವಿಶಾಲ ಅರ್ಥದಲ್ಲಿ ಸ್ಟ್ರಾಬೆರ್ರೀಸ್ ಹಣ್ಣು (ನೆಲಮುಳ್ಳಿ ಹಣ್ಣು) ಚೈತ್ರಮಾಸದಲ್ಲಿ ಇತರ ಹಣ್ಣುಗಳಿಗಿಂತ ಮೊದಲು ಕಂಡುಬರುವದರಿಂದ ಅದು ಪ್ರಥಮಫಲವಾಗುವದು. ಇದರಂತೆಯೇ ಸಭೆಯು ದೇವರಿಗೆ ಆತನ ಸೃಷ್ಟಿಗಳಲ್ಲೆಲ್ಲಾ ಪ್ರಥಮಫಲವೆಂದು ವ್ಯಕ್ತಪಡಿಸಲಾದ ಸಭೆಯಲ್ಲಿ ಎಲ್ಲರೂ ಒಂದೇ ವಿಧವಾದ ಸ್ವಭಾವವನ್ನು ಪಡೆದಿರುವರೆನ್ನುವದು ಅಡಕವಾಗಿರುವದಿಲ್ಲ. ಹೀಗಿರುವಾಗ ಸ್ಟ್ರಾಬೆರ್ರಿ ಹಣ್ಣುಗಳಲ್ಲಿ ಮೊದಲು ಮಾಗಿದನ್ನು ಸ್ಟ್ರಾಬೆರ್ರಿ ಹಣ್ಣುಗಳಲ್ಲಿ ಪ್ರಥಮಫಲವೆಂದು ಹೇಳಬಹುದು. ಈ ಮೇಲಿನ ಅರ್ಥದಲ್ಲಿಯೇ ನಮ್ಮ ಕರ್ತನಾದ ಯೇಸುವು ಸಭೆಯ ಪ್ರಥಮಫಲವಾಗಿದ್ದನು; ಮತ್ತು ಸಭೆಯು ಸೃಷ್ಟಿಯಲ್ಲೆಲ್ಲಾ ಪ್ರಥಮಫಲವಾಗಿರುವ ಕಾರಣ ಕ್ರಿಸ್ತನು ಕೇವಲ ಸಭೆಯಲ್ಲಿ ಪ್ರಮುಖಸ್ಥಾನವನ್ನು ಪಡೆದಿರುವದು ಮಾತ್ರವಲ್ಲದೆ ಯಾರು ಮರಣದಿಂದ ಸಂಪೂರ್ಣವಾಗಿ ಪರಿಪೂರ್ಣತೆಯುಳ್ಳ ಜೀವ ಹೊಂದುವ ಸಲುವಾಗಿ ಎಬ್ಬಿಸಲ್ಪಡುವರೋ ಅವರ ವಿಷಯದಲ್ಲಿಯೂ ಪ್ರಮುಖಸ್ಥಾನವನ್ನು ಹೊಂದುವರೆನ್ನುವದು ಅಡಕವಾಗಿರುವದು.

*****

| ದಿನಾಂಕ ಕ್ರಿ.ಶ. 33 | ಸ್ಥಳ | ಘಟನೆ | ಮತ್ತಾಯ | | | ಯೋಹಾನ |
|---|---|---|---|---|---|---|
| ನಿಸ್ಸಾನ್ 18 | ಯೆರೂಸಲೇಮಿನ ಸುತ್ತುಮುತ್ತಣ ಪ್ರದೇಶ | ಯೇಸು ಕ್ರಿಸ್ತನ ನಂತರದ ಕಾಣಿಸಿಕೊಳ್ಳುವಿಕೆಗಳು | 28:16–20 | 1 ಕೊರಿಂಥ 15:5–7 | ಅಪೋಸ್ತಲರ ಕೃತ್ಯಗಳು 1:3–8 | 20:26–21:25 |

## ಮತ್ತಾಯ 28:16–20

ಬಳಿಕ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ ಯೇಸು ತಮಗೆ ಗೊತ್ತುಮಾಡಿದ್ದ ಬೆಟ್ಟಕ್ಕೆ ಸೇರಿದರು. ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡಬಿದ್ದರು; ಆದರೆ ಕೆಲವರು ಸಂದೇಹಪಟ್ಟರು. ಆಗ ಯೇಸು ಹತ್ತರಕ್ಕೆ ಬಂದು– ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.

## 1 ಕೊರಿಂಥ 15:5–7

ಕೇಫನಿಗೂ ಆ ಮೇಲೆ ಹನ್ನೆರಡು ಮಂದಿ ಅಪೋಸ್ತಲರಿಗೂ ಕಾಣಿಸಿಕೊಂಡನು. ತರುವಾಯ ಒಂದೇ ಸಮಯದಲ್ಲಿ ಐನೂರು ಮಂದಿಗಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು. ಇವರಲ್ಲಿ ಹೆಚ್ಚು ಜನರು ಇಂದಿನವರೆಗೂ ಇದ್ದಾರೆ. ಕೆಲವರು ನಿದ್ರೆಹೋಗಿದ್ದಾರೆ. ತರುವಾಯ ಆತನು ಯಾಕೋಬನಿಗೂ ಆ ಮೇಲೆ ಅಪೋಸ್ತಲರಿಗೂ ಕಾಣಿಸಿಕೊಂಡನು.

## ಅಪೋಸ್ತಲರ ಕೃತ್ಯಗಳು 1:3–8

ಆತನು ಬಾಧೆಪಟ್ಟು ಸತ್ತ ಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೋಸ್ತಲರಿಗೆ ತೋರಿಸಿಕೊಂಡನು. ನಾಲ್ವತ್ತು ದಿವಸಗಳ ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು. ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ– ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂತ ನೀವು ನನ್ನಿಂದ ಕೇಳಿದಂತ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು. ಕೂಡಿ ಬಂದವರು ಆತನನ್ನು–ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿ – ಕೊಡುವಿಯೋ? ಎಂದು ಕೇಳಲು ಆತನು ಅವರಿಗೆ–ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.

## ಯೋಹಾನ 20:26–31

ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರಿಗಿ ಒಳಗಿದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಿಲುಗಳು ಮುಚ್ಚಿದ್ದವು. ಆಗ ಯೇಸು ಬಂದು ನಡುವೆ ನಿಂತು–ನಿಮಗೆ ಸಮಾಧಾನವಾಗಲಿ ಅಂದನು. ಆ ಮೇಲೆ ತೋಮನಿಗೆ–ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದನು. ತೋಮನು ಆತನಿಗೆ–ನನ್ನ ಸ್ವಾಮಿ, ನನ್ನ ದೇವರು! ಎಂದು ಹೇಳಿದನು. ಯೇಸು ಅವನಿಗೆ– ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ; ನೋಡದೆ ನಂಬಿದವರು ಧನ್ಯರು ಎಂದು ಹೇಳಿದನು. ಯೇಸು ಇನ್ನು ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ.

## ಯೋಹಾನ 21:1–25

ತರುವಾಯ ಯೇಸು ತಿಬೇರಿಯ ಸಮುದ್ರದ ಬಳಿಯಲ್ಲಿ ಶಿಷ್ಯರಿಗೆ ತಿರಿಗಿ ತನ್ನನ್ನು ತೋರಿಸಿಕೊಂಡನು. ತನ್ನನ್ನು ತೋರಿಸಿಕೊಂಡ ರೀತಿ ಯಾವದಂದರೆ–ಸೀಮೋನ ಪೇತ್ರನೂ ದಿದುಮನೆಂಬ ತೋಮನೂ ಗಲಿಲಾಯದ ಕಾನ ಊರಿನ ನತಾನಯೇಲನೂ ಜೆಬೆದಾಯನ ಕುಮಾರರೂ ಆತನ ಶಿಷ್ಯರಲ್ಲಿ ಇನ್ನಿಬ್ಬರು ಕೂಡಿದ್ದರು. ಅವರಿಗೆ ಸೀಮೊನ ಪೇತ್ರನು–ನಾನು ಮೀನು ಹಿಡಿಯುವದಕ್ಕೆ ಹೋಗುತ್ತೇನೆಂದು ಹೇಳಲು ಅವರು– ನಾವೂ ನಿನ್ನ ಸಂಗಡ ಬರುತ್ತೇವೆ ಅಂದರು. ಅವರು ಹೊರಟು ದೋಣಿಯನ್ನು ಹತ್ತಿದರು. ಆದರೆ ಆ ರಾತ್ರಿಯಲ್ಲಿ ಒಂದು ಮೀನೂ ಸಿಕ್ಕಲಿಲ್ಲ. ಬೆಳಗಾಗುವಾಗ ಯೇಸು ದಡದಲ್ಲಿ ನಿಂತಿದ್ದನು; ಆದಾಗ್ಯೂ ಶಿಷ್ಯರು ಆತನನ್ನು ಯೇಸುವೆಂದು ತಿಳಿಯಲಿಲ್ಲ. ಆಗ ಯೇಸು ಅವರನ್ನು–ಮಕ್ಕಳಿರಾ, ಊಟಕ್ಕೆ ನಿಮಗೆ ಏನೂ ಇಲ್ಲವೇ ಎಂದು ಕೇಳಲು ಅವರು ಇಲ್ಲವೆಂದು ಉತ್ತರಕೊಟ್ಟರು. ಆತನು ಅವರಿಗೆ–ನೀವು ದೋಣಿಯ

ಬಲಗಡೆಯಲ್ಲಿ ಬಲೆ ಬೀಸಿದರೆ ಸಿಕ್ಕುವದು ಎಂದು ಹೇಳಿದನು. ಅವರು ಹಾಗೆ ಬೀಸಿದಾಗ ಮೀನುಗಳು ಬಹಳ ಹೆಚ್ಚಾಗಿ ಸಿಕ್ಕಿದ್ದರಿಂದ ಬಲೆಯನ್ನು ಎಳೆಯುವದಕ್ಕೆ ಆಗದೆ ಹೋಯಿತು. ಆಗ ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನು ಪೇತ್ರನಿಗೆ–ಅವರು ಸ್ವಾಮಿಯವರು ಎಂದು ಹೇಳಿದನು. ಸ್ವಾಮಿಯವರೆಂದು ಸೀಮೋನ ಪೇತ್ರನು ಕೇಳಿ ಮೈ ಮೇಲೆ ಬಟ್ಟೆಯಿಲ್ಲದವ–ನಾಗಿದ್ದರಿಂದ ಒಲ್ಲಿಯನ್ನು ಸುತ್ತಿಕೊಂಡು ಸಮುದ್ರದಲ್ಲಿ ಧುಮುಕಿದನು. ದಡವು ದೂರವಾಗಿರದೆ ಹೆಚ್ಚು ಕಡಿಮೆ ಇನ್ನೂರು ಮೊಳದಲ್ಲಿದ್ದರಿಂದ ಉಳಿದ ಶಿಷ್ಯರು ಮೀನು ತುಂಬಿದ ಆ ಬಲೆಯನ್ನು ಎಳೆಯುತ್ತಾ ದೋಣಿಯಲ್ಲಿಯೇ ಬಂದರು. ಅವರು ಭೂಮಿಗೆ ಇಳಿದಾಗ ಕೆಂಡಗಳನ್ನೂ ಅವುಗಳ ಮೇಲೆ ಇಟ್ಟಿದ್ದ ಮೀನುಗಳನ್ನೂ ರೊಟ್ಟಿ ಸಹಿತವಾಗಿ ಕಂಡರು. ಯೇಸು ಅವರಿಗೆ ನೀವು ಈಗ ಹಿಡಿದ ಮೀನುಗಳಲ್ಲಿ ಕೆಲವನ್ನು ತನ್ನಿರಿ ಎಂದು ಹೇಳಲು ಸೀಮೋನ ಪೇತ್ರನು ದೋಣಿಯನ್ನು ಹತ್ತಿ ಬಲೆಯನ್ನು ಭೂಮಿಗೆ ಎಳಕೊಂಡು ಬಂದನು. ಅದು ನೂರೈವತ್ತು ಮೂರು ದೊಡ್ಡ ಮೀನುಗಳಿಂದ ತುಂಬಿತ್ತು. ಅಷ್ಟು ಮೀನುಗಳು ಇದ್ದರೂ ಬಲೆ ಹರಿಯಲಿಲ್ಲ. ಯೇಸು ಅವರಿಗೆ–ಬಂದು ಊಟಮಾಡಿರಿ ಎಂದು ಹೇಳಿದನು. ಶಿಷ್ಯರು ಆತನನ್ನು ಸ್ವಾಮಿಯವರೆಂದು ತಿಳಿದಿದ್ದರಿಂದ ನೀನಾರೆಂದು ವಿಚಾರಿಸುವದಕ್ಕೆ ಅವರಲ್ಲಿ ಒಬ್ಬರೂ ಧೈರ್ಯಪಡಲಿಲ್ಲ. ಯೇಸು ಬಂದು ರೊಟ್ಟಿಯನ್ನು ತೆಗೆದುಕೊಂಡು ಅವರಿಗೆ ಕೊಟ್ಟನು; ಹಾಗೆಯೇ ಮೀನನ್ನೂ ಕೊಟ್ಟನು. ಯೇಸು ಸತ್ತು ಜೀವದಿಂದೆದ್ದ ಮೇಲೆ ಶಿಷ್ಯರಿಗೆ ಕಾಣಿಸಿಕೊಂಡದ್ದು ಇದು ಮೂರನೆಯ ಸಾರಿ. ಅವರು ಊಟಮಾಡಿದ ಮೇಲೆ ಯೇಸು ಸೀಮೋನ ಪೇತ್ರನನ್ನು–ಯೋಹಾನನ ಮಗನಾದ ಸೀಮೋನನೇ, ನೀನು ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ಎಂದು ಕೇಳಲು ಅವನು–ಹೌದು, ಸ್ವಾಮೀ, ನಿನ್ನ ಮೇಲೆ ಮಮತೆ ಇಟ್ಟಿದ್ದೇನೆಂಬುದನ್ನು ನೀನೇ ಬಲ್ಲೆ ಅಂದನು. ಆತನು ಅವನಿಗೆ ನನ್ನ ಕುರಿಮರಿಗಳನ್ನು ಮೇಯಿಸು ಎಂದು ಹೇಳಿದನು. ಆತನು ತಿರಿಗಿ ಎರಡನೆಯ ಸಾರಿ ಅವನನ್ನು–ಯೋಹಾನನ ಮಗನಾದ ಸೀಮೋನನೇ, ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ಎಂದು ಕೇಳಲು ಅವನು–ಹೌದು, ಸ್ವಾಮೀ, ನಿನ್ನ ಮೇಲೆ ಮಮತೆಯಿಟ್ಟಿದ್ದೇನೆಂಬುದನ್ನು ನೀನೇ ಬಲ್ಲೆ ಅಂದನು. ಆತನು ಅವನಿಗೆ–ನನ್ನ ಕುರಿಗಳನ್ನು ಕಾಯಿ ಎಂದು ಹೇಳಿದನು. ಆತನು ಮೂರನೆಯ ಸಾರಿ–ಯೋಹಾನನ ಮಗನಾದ ಸೀಮೋನನೇ, ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ಕೇಳಿದನು. ಮೂರನೆಯ ಸಾರಿ ಆತನು–ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ತನ್ನನ್ನು ಕೇಳಿದ್ದಕ್ಕೆ ಪೇತ್ರನು ದುಃಖಪಟ್ಟು–ಸ್ವಾಮೀ, ನೀನು ಎಲ್ಲಾ ಬಲ್ಲೆ; ನಿನ್ನ ಮೇಲೆ ನಾನು ಮಮತೆ ಇಟ್ಟಿದ್ದೇನೆಂಬದು ನಿನಗೆ ತಿಳಿದದೆ ಅಂದನು. ಅವನಿಗೆ ಯೇಸು–ನನ್ನ ಕುರಿಗಳನ್ನು ಮೇಯಿಸು. ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ಯವನಸ್ಥನಾಗಿದ್ದಾಗ ನೀನೇ ನಡುವನ್ನು ಕಟ್ಟಿಕೊಂಡು ಇಷ್ಟಬಂದ ಕಡೆಗೆ ತಿರುಗಾಡುತ್ತಿದ್ದೀ; ಆದರೆ ನೀನು ಮುದುಕನಾದಾಗ ನಿನ್ನ ಕೈಗಳನ್ನು ಚಾಚುವಿ, ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು ಎಂದು ಹೇಳಿದನು. ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆಪಡಿಸುವನು ಎಂಬದನ್ನು ಆತನು ಈ ಮಾತಿನಿಂದ ಸೂಚಿಸಿದನು. ಇದನ್ನು ಹೇಳಿ ಆತನು ಅವನಿಗೆ–ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಪೇತ್ರನು ತಿರಿಗಿಕೊಂಡು ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನು ಹಿಂದೆ ಬರುವದನ್ನು ಕಂಡನು. ಆ ಶಿಷ್ಯನು ಊಟದಲ್ಲಿ ಯೇಸುವಿನ ಎದೆಯ ಕಡೆಗೆ ಬಾಗಿ–ಸ್ವಾಮೀ, ನಿನ್ನನ್ನು ಹಿಡುಕೊಡುವವನು ಯಾರು ಎಂದು ಕೇಳಿದವನೇ. ಇವನನ್ನು ಪೇತ್ರನು ಕಂಡು ಯೇಸುವನ್ನು–ಸ್ವಾಮಿ, ಇವನ ವಿಷಯವೇನು ಎಂದು ಕೇಳಲು ಯೇಸು ಅವನಿಗೆ–ನಾನು ಬರುವ ತನಕ ಇವನು ಇರಬೇಕೆಂದು ನನಗೆ ಮನಸ್ಸಿದ್ದರೆ ಅದು ನಿನಗೇನು? ನೀನು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಇದರ ದೆಸೆಯಿಂದ ಆ ಶಿಷ್ಯನು ಸಾಯುವದಿಲ್ಲವೆಂಬ ಮಾತು ಸಹೋದರರಲ್ಲಿ ಹಬ್ಬಿತು. ಆದರೆ ಅವನು ಸಾಯುವದಿಲ್ಲವೆಂದು ಯೇಸು ಅವನಿಗೆ ಹೇಳಲಿಲ್ಲ; ನಾನು ಬರುವ ತನಕ ಅವನು ಇರಬೇಕೆಂದು ನನಗೆ ಮನಸ್ಸಿದ್ದರೆ ಅದು ನಿನಗೇನು ಎಂತಲೇ ಆತನು ಹೇಳಿದನು. ಈ ಸಂಗತಿಗಳನ್ನು ಬರೆದು ಇವುಗಳ ವಿಷಯವಾಗಿ ಸಾಕ್ಷಿಹೇಳುವ ಶಿಷ್ಯನು ಇವನೇ. ಇವನ ಸಾಕ್ಷಿ ಸತ್ಯವೆಂದು ನಾವು ಬಲ್ಲೆವು. ಇದಲ್ಲದೆ ಯೇಸು ಮಾಡಿದ್ದು ಇನ್ನೂ ಬಹಳವಿದೆ. ಅದನ್ನೆಲ್ಲಾ ಒಂದೊಂದಾಗಿ ಬರೆಯುವದಾದರೆ ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೇ ಹೋದೀತೆಂದು ನಾನು ನೆನಸುತ್ತೇನೆ.

# ಸಭೆಯ ಪ್ರತಿಷ್ಠಾಪನೆ

**ರೀಪ್ರಿಂಟ್ಸ್ ಪುಟ 5587**

## ಮತ್ತಾಯ 28:16–20; ಲೂಕ 24:36–49

**"ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" – ಮತ್ತಾಯ 28:20**

ಈ ದಿನದ ಅಧ್ಯಯನವು ಯೇಸು ತನ್ನ ಪುನರುತ್ಥಾನದ ನಂತರದ ನಾಲ್ವತ್ತು ದಿವಸಗಳಲ್ಲಿನ ತನ್ನ ಪ್ರಬೋಧನೆಗಳಲ್ಲಿ ತನ್ನ ಸಭೆಯನ್ನು ಸೇವೆಗೆ ನೇಮಿಸಿಲಾದ ಕಾರ್ಯಬಾರ ಅಥವಾ ನೀಡಿದ ಅಧಿಕಾರದ ಬಗ್ಗೆ ಸಂಬಂಧಿಸಿರುತ್ತದೆ. ಮೊದಲನೆಯ–ದಾಗಿ ನಾವು ಹೊಂದಿರುವದು ಯೆರೂಸಲೇಮಿಗೆ ಸಮೀಪದಲ್ಲಿದ್ದ ಎಮ್ಮಾಹು ಎಂಬ ಹಳ್ಳಿಗೆ ತನ್ನ ಇಬ್ಬರು ಶಿಷ್ಯರೊಂದಿಗೆ ಸಂಜೆ ಪ್ರಯಾಣಿಸಿದ ನಂತರದ ಒಡೆಯನ ಮಾತುಗಳ ವಿಷಯವಾಗಿರುವದು. ಆ ನಂತರ ನಾವು ಹೊಂದಿರುವದು ಯೇಸು ತನ್ನ ಶಿಷ್ಯರಿಂದ ಬೇರ್ಪಟ್ಟು ತಾನು ಪರಲೋಕದಲ್ಲಿ ಸ್ವೀಕರಿಸುವದಕ್ಕೆ ಸ್ವಲ್ಪ ಸಮಯದ ಮೊದಲು ಅವರಿಗೆ

ಸಾಮಾನ್ಯವಾಗಿ ವಹಿಸಲಾದ ಕಾರ್ಯಭಾರದ ಒಂದು ಭಾಗ ಮಾತ್ರ.

ಎಮ್ಮಾಹುವಿಗೆ ಪ್ರಯಾಣಿಸುವಾಗ ಮತ್ತು ಆನಂತರದ ಕಾಣಿಸಿಕೊಳ್ಳುವಿಕೆಗಳ ಸಂಬಂಧವಾದ ಪಾಠಗಳು ಕ್ರಿಸ್ತನ ಹಿಂಬಾಲಕರೆಲ್ಲರಿಗೂ ಆ ಸಮಯದಲ್ಲಿ ಬಹು ಅಮೂಲ್ಯ-ವಾಗಿರಬೇಕು. ಆತನು ಹೇಳಿದ್ದು, "ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ [ಅಂದರೆ ನನ್ನ ಪುನರುತ್ಥಾನಕ್ಕೆ ಮೊದಲು ನಾನು ಮನುಷ್ಯನಾದ ಕ್ರಿಸ್ತ ಯೇಸುವಾಗಿದ್ದಾಗ] ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರ-ದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವದೆಲ್ಲಾ ನೆರವೇರುವದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ಅಂದನು. ಆ ಮೇಲೆ ಅವರು ಶಾಸ್ತ್ರವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ-ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲು-ಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ." ಎಂದು ಪ್ರಭೋದಿಸಿದನು.

ಸೌವಾರ್ತಿಕರು ಆ ಸಂಭಾಷಣೆಯನ್ನು ಕೆಲವೇ ಮಾತುಗಳಲ್ಲಿ ಸಾರಾಂಶವಾಗಿ ಹೇಳಿರುವರು ಅಲ್ಲದೆ ಆ ಶಾಸ್ತ್ರವಚನಗಳ ವಿವರಣೆಯು ಕನಿಷ್ಟಪಕ್ಷದಲ್ಲಿ ಒಂದು ಗಂಟೆಯಾದರೂ ಹಿಡಿದಿರುವ ಸಂಭವವಿರುವದು. ಅವರ ಮನೋನೇತ್ರಗಳನ್ನು ತೆರೆದ ಈ ವಿವರಣೆಗಳು ಏನೆಂಬುದನ್ನು ನಮಗೆ ತಿಳಿಸಲಾಗಿಲ್ಲ, ಆದರೆ ಸಾರಾಂಶವನ್ನು ಹೇಳಲು ನಮಗೆ ಸಾಧ್ಯವಿರುವದು. ಆತನು ಅವರಿಗೆ ವರುಷದ ಆ ಸಮಯದಲ್ಲಿ ವಧಿಸಲಾಗುವ ಪಸ್ಕದ ಕುರಿಯ ಮಹತ್ವವನ್ನು ವಿವರಿಸಿ ಹೇಳಿ ತಾನು ಅದರ ನಿಜರೂಪವಾಗಿದ್ದೇನೆ ಎಂಬುದನ್ನು ತೋರಿಸಿ ಕೊಟ್ಟಿರುವ ಸಂಭವವಿರುವದು. ಪಸ್ಕದ ಆಚರಣೆಯ ನಿಜವಾದ ಮಹತ್ವವನ್ನು ವಿವರಿಸಿಹೇಳಿರುವ ಸಂಭವವಿದ್ದು, ಅದರ ಛಾಯಾರೂಪದಲ್ಲಿ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳು [ಮರಣದಿಂದ ಜೀವಕ್ಕೆ] ದಾಟಿಹೋಗಿದ್ದು ಆ ನಂತರದಲ್ಲಿ ಅವರನ್ನು ಯಾಜಕರು ಸಹಿತವಾದ ಲೇವಿ ಕುಲದವರು ಪ್ರತಿನಿಧಿಸಲ್ಪಟ್ಟಿದ್ದರು; ಇದರ ನಿಜರೂಪವು ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲು ಮಕ್ಕಳ ಸಭೆಯಾಗಿ-ರುವದು. ಅಂದರೆ ಮೆಸ್ಸೀಯನ ರಾಜ್ಯದಲ್ಲಿ ಲೋಕದವರನ್ನು ಉದ್ಧರಿಸಿ ಮೇಲೆತ್ತುವ ಕಾರ್ಯವನ್ನು ನಿರ್ವಹಿಸಲಿರುವ ರಾಜವಂಶದ ಯಾಜಕ ವರ್ಗದವರಾದ ಯೇಸುವಿನ ಹಿಂಬಾಲಕರಾಗಿರುವ ಭಕ್ತರೆಲ್ಲರೂ ಹಾಗು ಮೆಸ್ಸೀಯನ ರಾಜ್ಯದಲ್ಲಿ ಲೋಕದವರನ್ನು [ಮೇಲಕ್ಕೆತ್ತಿ] ಉದ್ಧಾರ ಮಾಡುವ ಕಾರ್ಯದಲ್ಲಿ ಇವರಿಗೆ ಸೇವಕರಾಗಿರುವ ನಿಜರೂಪದ ಲೇವಿಯರು ಒಳಗೊಂಡಿರುವರು.

ಒಡೆಯನು ನಿಜರೂಪದ ದೋಷಪರಿಹಾರಕ ಮಹಾ ದಿನದ ಹಾಗು "ಉತ್ತಮವಾದ ಯಜ್ಞಗಳ" ವಿಷಯವಾಗಿ ಕೆಲವು ಸಲಹೆಗಳನ್ನು ಸಹ ನೀಡಿರುವದು ನಿಸ್ಸಂದೇಹವಾಗಿರುವದು. ಅಂದರೆ ಸ್ವತಃ ತಾನೇ "ಆ ಉತ್ತಮವಾದ ಯಜ್ಞಗಳನ್ನು" ಆರಂಭಮಾಡಿದ್ದು ಅದು ನಂತರದಲ್ಲಿ ತನ್ನ ಶಿಷ್ಯರಲ್ಲಿ ಮುಂದುವರೆಯಲಿರುವದೆಂಬದು; ಮತ್ತು ಈ ಯಜ್ಞಗಳು ಪೂರ್ಣಗೊಂಡಾಗ ಈ ದೋಷಪರಿಹಾರದ ಫಲವಾದ [ದೇವರೊಂದಿಗಾಗುವ] ಸಂಧಾನದ ಆಶೀರ್ವಾದಗಳು ಮಹಾ ಯಾಜಕನ ಮೂಲಕವಾಗಿ ಹೊರಟುಬಂದು ಮೆಸ್ಸೀಯನ ಸಾವಿರ ವರುಷಗಳ (ಆಳ್ವಿಕೆಯ) ರಾಜ್ಯದ ಅವಧಿಯಲ್ಲಿ ಭೂಲೋಕದ ಎಲ್ಲಾ ಕಡೆಗಳಿಗೂ ವ್ಯಾಪನಗೊಳ್ಳುವದು.

## ಮೇಲಣ ಲೋಕದಿಂದ ಬರುವ ವಾಗ್ದಾನ ಮಾಡಲ್ಪಟ್ಟ ಶಕ್ತಿಯು

ಒಡೆಯನು ಬಿಚ್ಚಿ ಹೇಳಿ ಪ್ರಕಟಮಾಡುತ್ತಿರುವ ಆ ಮಹಾ ಯೋಜನೆಯ ಗುಣಲಕ್ಷಣಗಳು ಏನೇ ಇದ್ದರೂ ಅದು ಆತನ ಕೇಳುಗರಿಗೆ ಅದರಲ್ಲಿ ಗಾಢವಾದ ಆಸಕ್ತಿಯಿರುವದೆಂಬ ಆಶ್ವಾಸನೆಯನ್ನು ನಾವು ಹೊಂದಿರುವೆವು. ಅವರ ದುಃಖವು ಇಲ್ಲದೆ ಹೋಗಿತ್ತು. ಅವರ ಮೊದಲ ಅಲೋಚನೆ ಏನಾಗಿತ್ತೆಂದರೆ ಆಶೀರ್ವಾದ ನಿಧಿಯಾದ ತಮ್ಮ ಒಡೆಯನನ್ನು, ಆತನ ಮಾರ್ಗದರ್ಶನವನ್ನು, ಆತನ ಬೋಧನೆಗಳನ್ನು ತಾವು ಕೇವಲ ಕಳಕೊಂಡೆವೆಂಬದು; ಆದರೆ ಈಗ ಈ ಜ್ಞಾನಪ್ರಕಾಶದ ಮೂಲಕವಾಗಿ ಅವರ ಹೃದಯಗಳು ಆ ಪರಿಜ್ಞಾನದಿಂದಾದ ಹೊಸ ಪ್ರೇರಣೆಯಿಂದ ಕುದಿಯತೊಡಗಿತ್ತು. ಅವರು ಎಂದೂ ಕಲ್ಪಿಸಿಕೊಳ್ಳಲಾಗದಂಥ ದೇವರ ಯೋಜನೆಯಲ್ಲಿನ ಆಳ, ಎತ್ತರ, ಉದ್ದ ಮತ್ತು ಅಗಲಗಳನ್ನು ಕಂಡಿದ್ದರು. ದೇವರ ವಾಗ್ದಾನಗಳಿಂದ ಪ್ರೇರಿತವಾದ ನಿರೀಕ್ಷೆ ಸಫಲತೆಗಳೆಲ್ಲವೂ ಕೈಗೂಡುವಂತಾಗಲು ಯೇಸುವಿನ ಮರಣವು ಅವಶ್ಯವಾಗಿತ್ತೆಂಬುದನ್ನು ಅವರು ಅರಿತವರಾಗಿದ್ದರು. ಅದರಲ್ಲಿ ಆತನೊಡನೆ ಶ್ರಮೆಯನ್ನು ಅನುಭವಿಸುವದು ಮಾತ್ರವಲ್ಲದೆ ಮಹಿಮೆ ಹೊಂದುವ ಸೌಭಾಗ್ಯವನ್ನೂ ಸಹ ತಾವು ಪಡೆದಿರುವದೆಂಬುದನ್ನು ಅವರು ಅರಿತವರಾಗಿದ್ದರು.

ಆ ಸಂದರ್ಭದಲ್ಲಿ ಒಡೆಯನ ಸಂದೇಶದ ಕಡೆಯ ಭಾಗವು ಹೀಗಿತ್ತು: "ಇಗೋ ನನ್ನ ತಂದೆಯು ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ." ತಂದೆಯು ಹಲವಾರು ಛಾಯಾರೂಪದ ನಿದರ್ಶನಗಳ ಮೂಲಕವಾಗಿ ವಾಗ್ದಾನ ಮಾಡಿರುವದೇನಂದರೆ ಕ್ರಿಸ್ತನ ಮದಲಗಿತ್ತಿಯಾದ ಸಭೆಯು ತಮ್ಮ ಶಿರಸ್ಸಾದ ಯೇಸುವಿನ ಮೂಲಕವಾಗಿ ಪವಿತ್ರಾತ್ಮವನ್ನು ಹೊಂದಿಕೊಳ್ಳುವದೆಂಬದೇ. ದೃಷ್ಟಾಂತವಾಗಿ ಹೇಳುವದಾದರೆ ಅದು ಯೇಸುವಿಗೆ ಛಾಯಾರೂಪದಲ್ಲಿರುವ ಆರೋನನ ತಲೆಯ ಮೇಲೆ ಹೊಯ್ಯಲ್ಪಟ್ಟು ಆತನ ದೇಹದ ಮೇಲೆ ಹರಿದು ಬರುವ ಪರಿಶುದ್ಧ ತೈಲವನ್ನು ಅಂದರೆ ಆತನ ದೇಹವಾಗಿರುವ ಸಭೆಯನ್ನು ಅಭಿಷೇಕಿಸುವದಕ್ಕೆ ಛಾಯೆಯಾಗಿರುವದು.

ಸಭೆಯನ್ನು ಅಂಗೀಕರಿಸಿಕೊಳ್ಳುವ ಸಂಬಂಧವಾದ ಈ ದೈವವಾಗ್ದಾನವು ಬಹು ನಿರ್ಣಾಯಕವಾಗಿತ್ತು. ಇದರ ಹೊರತಾಗಿ

ಶಿಷ್ಯರಿಗೆ ಯಾವ ಕಾರ್ಯಭಾರವೂ ಇಲ್ಲದಂತಾಗಿ, ಅವರಿಗೆ ದೇವರ ರಾಯಭಾರಿಗಳಾಗಲು ಸಾಧ್ಯವಿರುತ್ತಿರಲಿಲ್ಲ. ಯೇಸುವು ನಿಜವಾಗಿಯೂ ಆ ಹನ್ನೆರಡು ಮಂದಿಯನ್ನು ಕಳುಹಿಸಿ–ಕೊಟ್ಟಿದ್ದನು, ಮತ್ತು ಆ ನಂತರದಲ್ಲಿ ಎಪ್ಪತ್ತು ಮಂದಿಯನ್ನು; ಆದರೆ ಅವರು ಆತನ ವೈಯುಕ್ತಿಕವಾದ ಪ್ರತಿನಿಧಿಗಳಾಗಿದ್ದು ಆತನು ಅವರಿಗೆ ತನ್ನ ಸ್ವಂತ ಆತ್ಮವನ್ನು, ತನ್ನ ಸ್ವಂತ ಅಧಿಕಾರವನ್ನು ಕೊಟ್ಟಿದ್ದನು, ಆ ಮೂಲಕವಾಗಿ ಅವರು ಅದ್ಭುತಗಳನ್ನು ನಡೆಸಿದ್ದರು, ದೆವ್ವಗಳನ್ನು ಹೊರಡಿಸಿಬಿಟ್ಟಿದ್ದರು, ಮುಂತಾದವುಗಳು. ಆದರೆ ಅವರು ಎಂದೂ ತಂದೆಯಿಂದ ಮಾನ್ಯತೆಪಡೆದಿರಲಿಲ್ಲ. ನಾವು ಓದುವಂತೆ, "ಆತನು ಇನ್ನೂ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ." (ಯೋಹಾನ 7:39) ಅವರು ಪವಿತ್ರಾತ್ಮನಿಂದ ಹುಟ್ಟಿದವರಾಗಿ ಅಭಿಷೇಕಿಸಲ್ಪಡಲು ಕಾದುಕೊಂಡಿರಬೇಕಿತ್ತು. ಕೇವಲ ಇದೊಂದು ಮಾತ್ರವೇ ಅವರನ್ನು ದೇವರ ರಾಯಭಾರಿಗಳೂ ಮತ್ತು ಪ್ರತಿನಿಧಿಗಳೂ ಆಗಿ ದೈವಿಕ ಸೇವೆಗೆ ಆತ್ಮಭರಿತರಾಗಿ ಅಥವಾ ಅವರನ್ನು ಅರ್ಹರನ್ನಾಗಿ ಮಾಡಲು ಸಾಧ್ಯವಿತ್ತು.

## "ನೋಡಿರಿ, ನಾನು... ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ..."

ಭಕ್ತನಾದ ಮತ್ತಾಯನು ನೀಡಿರುವ ವಿವರಣೆಯಂತೆ ನಮ್ಮ ಕರ್ತನು ತನ್ನ ಶಿಷ್ಯರಿಗೆ ನೀಡಿದ ಆಶೀರ್ವಾದವು ಹಾಗು ಅವರಿಗೆ ತನ್ನ ಸಂದೇಶವನ್ನು ಪ್ರಕಟಿಸಬೇಕೆಂದು ಆತನು ಅವರಿಗೆ ಕೊಟ್ಟ ಕಾರ್ಯಭಾರದ ವಿಷಯವು ನಮಗೆ ಪೂರ್ಣಾಸಕ್ತಿಯುಳ್ಳ–ದ್ದಾಗಿರುವದು. ಆತನು ಗೊತ್ತುಮಾಡಿದಂತೆ ಆ ಹನ್ನೊಂದು ಮಂದಿಯು ಗಲಿಲಾಯದ ಒಂದು ಪರ್ವತದಲ್ಲಿ ಆತನನ್ನು ಸಂಧಿಸಿದ್ದರು. ಕೆಲವು ಕ್ಷಣಗಳವರೆಗೆ ಮಾತ್ರ ಆತನು ಅವರಿಗೆ ಕಾಣಿಸಿಕೊಂಡಿದ್ದನು. ಅವರು ಆತನನ್ನು ಆರಾಧಿಸಿದ್ದರು, ಕೆಲವರು ಸಂಪೂರ್ಣವಾಗಿ ಮನವರಿಕೆಮಾಡಿಕೊಂಡಿದ್ದರು, ಇತರರು ಚಂಚಲರಾಗಿದ್ದರು. ಹೀಗೆ ಚಂಚಲರಾಗಿದ್ದವರಿಗೆ ಮನವರಿಕೆ ಮಾಡಿಕೊಡಲೆಂದೇ ಯೇಸುವು ನಾಲ್ವತ್ತು ದಿನಗಳು ಉಳಿದುಕೊಂಡಿದ್ದನು. ಆ ಹನ್ನೊಂದು ಮಂದಿಯನ್ನು ಸಂಪೂರ್ಣವಾಗಿ ಮನವರಿಕೆಮಾಡಿಕೊಡುವ ಕಾರ್ಯವನ್ನು ಅವನು ಪೂರ್ಣವಾಗಿ ನೆರವೇರಿಸಿದನೆಂಬುದು ನಮಗೆ ಖಚಿತವಾಗಿರುವದು; ಯಾಕಂದರೆ ಅವರೆಲ್ಲರೂ ಒಂದೇ ಹೃದಯವುಳ್ಳವರಾಗಿ ಒಂದೇ ಮನಸ್ಸಿನಿಂದ ಕೂಡಿ ಮೇಲುಪ್ಪರಿಗೆ–ಯುಲ್ಲಿ ಪಂಚಾಶತ್ತಮ ದಿನದ ಆಶೀರ್ವಾದವನ್ನು ಹೊಂದುವದಕ್ಕಾಗಿ ಕಾದುಕೊಂಡಿದ್ದರು.

ಯೇಸುವು ಅವರ ಬಳಿಗೆ ಬಂದು ತನಗೆ ಪರಲೋಕದಲ್ಲಿನ ಹಾಗು ಭೂಲೋಕದಲ್ಲಿನ ಎರಡೂ ಸಂಗತಿಗಳ ವಿಷಯ–ವಾಗಿಯೂ ಪೂರ್ಣವಾದ ಅಧಿಕಾರವನ್ನು ತನಗೆ ಕೊಟ್ಟಿರುವದಾಗಿ ಪ್ರಕಟಮಾಡಿ ಹೇಳಿದ್ದನು. ಇದನ್ನು ಅವರು ಮನನಮಾಡಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಅವರು ಆತನನ್ನು ಸೂಕ್ತವಾಗಿ ಪ್ರತಿನಿಧಿಸಲು ಅವರಿಗೆ ಅಸಾಧ್ಯವಾಗಿರುತ್ತಿತ್ತು. ಆತನಿಗೆ ಈ ಶಕ್ತಿ ಮತ್ತು ಅಧಿಕಾರಗಳು ಹಿಂದೆ ಆತನು ಭೂಲೋಕದಲ್ಲಿ ಸೇವೆಮಾಡುತ್ತಿದ್ದ ಕಾಲದಲ್ಲಿ ಇರಲಿಲ್ಲ. ಆಗ ಆತನು ಮರಣ ಅಂದರೆ ಶಿಲುಬೆಯ ಮರಣದ ಪರ್ಯಂತರವಾದ ನಿಷ್ಠೆಯ ಬಗ್ಗೆ ನಡೆಯುತ್ತಿದ್ದ ಪರೀಕ್ಷೆಯ ಹಂತದಲ್ಲಿದ್ದನು. ಆದರೆ ಆತನು ತನ್ನ ನಿಷ್ಠೆಯನ್ನು ರುಜುವಾತುಪಡಿಸಿದ ನಂತರ ತಂದೆಯು ಆತನನ್ನು ಮರಣದಿಂದ ಮಹಿಮಾಪೂರ್ಣವಾದ ಅಧಿಕಾರ ಸ್ಥಾನಕ್ಕೆ ಎಬ್ಬಿಸಿದನು. ಆತನು ಹೀಗೆ ಮರಣದಿಂದ ತಾನು ಪುನರುತ್ಥಾನ ಹೊಂದುವ ಮೂಲಕವಾಗಿ ಅಧಿಕಾರಯುಕ್ತನಾದ ದೇವಕುಮಾರ–ನೆಂದು ಘೋಷಿಸಲ್ಪಟ್ಟಿದ್ದನು. ತಾನು ಇನ್ನು ಮೇಲೆ ಮನುಷ್ಯ ಸ್ಥಿತಿಗತಿಗಳಿಗೆ ಸೀಮಿತವಾಗಿರುವದಿಲ್ಲವೆಂಬುದನ್ನು ಅಥವಾ ಮರಣ ಸಂಬಂಧವಾದ ನಿಬಂದನೆಗಳಿಗೆ ಸೀಮಿತವಾಗಿರು–ವದಿಲ್ಲವೆಂಬುದನ್ನು ತನ್ನ ಶಿಷ್ಯರು ತಿಳಿದಿರಬೇಕೆಂದು ಆಶಿಸಿದ್ದನು. ಆ ಕಾರ್ಯವನ್ನು ಆತನು ಪೂರ್ಣಗೊಳಿಸಿದ್ದನು. ಇದರ ಪ್ರತಿಫಲವಾದ ಆಶೀರ್ವಾದಕ್ಕೆ ಆತನು ಸೇರಿದ್ದನು. ಆತನು ಮಾರ್ಪಾಟನ್ನು ಹೊಂದಿದವನಾಗಿ, ಆಗ ಭೂಲೋಕದ ಸಂಗತಿಗಳ ಮೇಲೆ ಮಾತ್ರವಲ್ಲದೆ ಪರಲೋಕದ ಸಂಗತಿಗಳ ಮೇಲೆಯೂ ಎಲ್ಲಾ ಅಧಿಕಾರವನ್ನು ಹೊಂದಿದ್ದನು.

ಭೂಪರಲೋಕಗಳಲ್ಲಿರುವವರೆಲ್ಲರೂ ಆತನಿಗೆ ಅಡ್ಡಬೀಳುವ–ರೆಂದು ಪ್ರವಾದನೆಗಳು ಪ್ರಕಟಮಾಡಿ ಹೇಳಿರುವವು. ಈ ಪ್ರವಾದನೆಯು ಶೀಘ್ರದಲ್ಲಿ ಪೂರ್ಣಗೊಳ್ಳಲು ಆರಂಭವಾಗುವಂಥ ಸ್ಥಿತಿಗೆ ಅತನು ತಲುಪಿದ್ದನು. ಆತನು ಉನ್ನತ ಲೋಕಕ್ಕೆ ಏರಿಹೋಗಿದ್ದನು, ಅಲ್ಲಿ ದೇವದೂತರೆಲ್ಲರೂ ಆತನನ್ನು ಆರಾದಿಸಿ, ತಂದೆಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿರುವಾತನೆಂದು ಆತನನ್ನು ಲಕ್ಷಿಸುವರು.. ವಾಗ್ದಾನದ ನಂತರದ ಭಾಗವು ಅಂದರೆ ಭೂಲೋಕದ ಮೇಲಿರುವವರೆಲ್ಲರೂ ಆತನಿಗೆ ಅಡ್ಡಬೀಳುವ–ರೆಂಬದು ಇನ್ನೂ ನೆರವೇರಲಿಲ್ಲ. ಇಂಥಾ ಒಂದು ಮಾನ್ಯತೆಯನ್ನು ಪಡೆಯುವ ಸಮಯವು ಒಂದು ಸಾವಿರ ವರುಷಗಳ ಮೆಸ್ಸೀಯನ ರಾಜ್ಯದಲ್ಲಿರುವದು. ಈಗ ಯೇಸುವು ದೇವರ ಕುಮಾರನೆಂಬ ನಿಜವಾದ ಪರಿಜ್ಞಾನವನ್ನು ಹೊಂದಿರುವವರು ಆತನು ತಂದೆಯ ಪ್ರತಿನಿಧಿಯೆಂದು ಸಂತೋಷದಿಂದ ಆತನಿಗೆ ಅಡ್ಡಬೀಳುವರು, ಲೋಕದವರು ಬಹು ಸಂತೋಷದಿಂದ ಆತನನ್ನು ದೇವರಿಂದ ಹುಟ್ಟಿದಾತನೆಂದು ಮಾನ್ಯಮಾಡಿಕೊಂಡವರಾಗಿ ಆತನಿಗೆ ವಿಧೇಯರಾಗುವರು.

ಕಡೆಯಲ್ಲಿ ಎಲ್ಲರೂ ಆತನಿಗೆ ಅಡ್ಡಬಿದ್ದು [ಆತನನ್ನು ಒಡೆಯನೆಂದು] ಅರಿಕೆಮಾಡುವರು; ಯಾಕಂದರೆ ದೇವರ ಏರ್ಪಾಡಿನ ಪ್ರಕಾರ ಆತನನ್ನು ಮಹಿಮಾಸ್ಥಾನಕ್ಕೆ ಏರಿಸಲ್ಪಟ್ಟ ದೇವಕುಮಾರನೆಂದು ಮನವರಿಕೆಮಾಡಿಕೊಳ್ಳದೇ ಇರುವವರೆಲ್ಲರೂ ಆ ಸಮಯದಲ್ಲಿನ ದೇವಾನುಗ್ರಹ ಹಾಗು ದೇವಾಶೀರ್ವಾದಗಳನ್ನು ಪಡೆಯಲು ಅಯೋಗ್ಯರೆಂದು ಪರಿಗಣಿಸಲ್ಪಟ್ಟು ನಾಶ ಮಾಡಲ್ಪಡುವರು. [ಪರಿಪೂರ್ಣತೆಯಿಂದ] ಬಿದ್ದುಹೋದ ಮಾನವ ಸಂತತಿಗೆ ದೇವರು ಕ್ರಿಸ್ತನಲ್ಲಿ ಎಲ್ಲಾ ಆಶೀರ್ವಾದಗಳನ್ನು ಸಂಕಲ್ಪಿಸಿ ದಯಪಾಲಿಸಿರುವನು.

## “ಆದುದರಿಂದ ಹೊರಟು ಹೋಗಿ... ಸಾರಿರಿ”

ಇಲ್ಲಿರುವದು [ನೀಡಲಾದ] ಕಾರ್ಯಭಾರ. ಪ್ರಥಮವಾಗಿ ಇದು ಹನ್ನೊಂದು ಅಪೋಸ್ತಲರಿಗೆ ಸಂಬಂಧಿಸಿದ್ದಾದರೂ ನಂತರದಲ್ಲಿ ಅದು ಯೂದನ ಸ್ಥಾನವನ್ನು ತೆಗೆದುಕೊಂಡಿದ್ದಲ್ಲದೆ ಅತಿ ಶ್ರೇಷ್ಠರಾದ ಅಪೋಸ್ತಲರಿಗಿಂತ ಒಂದರಲ್ಲಾದರೂ ಕಡಿಮೆಯಿಲ್ಲದಂಥ (2 ಕೊರಿಂಥ 11:5) ಭಕ್ತನಾದ ಪೌಲನನ್ನು ಒಳಗೊಂಡಿರುವದು. ಕೇವಲ ಅಪೋಸ್ತಲರು ಮಾತ್ರವೇ ಕರ್ತನಾದ ಯೇಸು ಕ್ರಿಸ್ತನಿಗೆ ಮತ್ತು ಆತನ ಸಭೆಗೆ ಲೋಕದವರ ಮುಂದೆ ಬಾಯಂತಿರಲು ಅಧಿಕಾರ ಪಡೆದಿರುವರು. ಅಪೋಸ್ತಲಿಕರಾದ ಬಿಷೋಪರ ಬಗ್ಗೆ ಅಂದರೆ ಅವರು ಹನ್ನೆರಡು ಮಂದಿ ಅಪೋಸ್ತಲರ ಉತ್ತರಾಧಿಕಾರಿಗಳಾಗಿರುವರೆಂದು ನಮಗೆ ತಿಳಿಸಿರುವದೆಲ್ಲವೂ ಸುಳ್ಳಾಗಿದ್ದು ಅದು ಸತ್ಯವೇದಕ್ಕೆ ಹೊರತಾಗಿರುವದು. ಅವರಿಗೆ [ಅಪೋಸ್ತಲರಿಗೆ] ಉತ್ತರಾಧಿಕಾರಿಗಳಿರಲಿಲ್ಲ; ಇನ್ನೂ ಅವರು ನಮ್ಮೊಂದಿಗಿರುವರು. ಅವರ ಮೂಲಕವಾಗಿ ನೀಡಲಾದಂತ ಒಡೆಯನ ಸಂದೇಶವು ಹೊಸ ಒಡಂಬಡಿಕೆಯ ಗ್ರಂಥದಲ್ಲಿ ನಮಗೆ ಕೊಡಲಾಗಿರುವದು. ಈ ಬಗ್ಗೆ ಅವರಲ್ಲಿ ಒಬ್ಬರು ಬರೆದಿರುವದೇನಂದರೆ: “ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು... ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು.” (2 ತಿಮೋಥೆ 3:16,17) ಸಭೆಯನ್ನು ಉದ್ಘಾಟಿಸುವ ಶ್ರೇಷ್ಠ ಕಾರ್ಯವು ಈ ಅಪೋಸ್ತಲರಿಗೆ ಕೊಡಲಾಗಿತ್ತು. ಪಂಚಾಶತ್ತಮ ದಿನದಂದು ಅವರಿಗೆ ವಿಶೇಷ ಶಕ್ತಿಯನ್ನು ನೀಡಲಾಗಿತ್ತು.

ಆದರೆ ಯೇಸುವು ಆಪೋಸ್ತಲರನ್ನು ಸಭೆಗೆ ವಿಶೇಷವಾಗಿ ತನ್ನ ಬಾಯಾಗಿರುವಂತೆ ನೇಮಿಸಿ, ಭೂಲೋಕದಲ್ಲಿ ಅವರು ಯಾವುದನ್ನು ಕಟ್ಟುತ್ತಾರೋ ಅದು ಪರಲೋಕದಲ್ಲಿಯೂ ಕಟ್ಟಲಾಗಿರುತ್ತದೆಂದು ನಾವು ತಿಳಿದುಕೊಳ್ಳಬೇಕೆಂದೂ ಅಲ್ಲದೆ ಭೂಲೋಕದಲ್ಲಿ ಅವರು ಯಾವುದನ್ನು ಬಿಚ್ಚಲಾಗಿರುವದೆಂದು ಪ್ರಕಟಿಸುತ್ತಾರೋ ಅದು ಪರಲೋಕದ ದೃಷ್ಟಿಯಲ್ಲಿಯೂ ಬಿಚ್ಚಲಾಗಿರುವದೆಂದು ಪ್ರಕಟ ಮಾಡಿರುವದಾದರೂ ಸಭೆಯ ಪ್ರತಿಯೊಬ್ಬ ಸದಸ್ಯನೂ ಆತನ ಪ್ರತಿನಿಧಿಯಾಗಿರುವಂತೆ ಏರ್ಪಾಡು ಮಾಡಿದ್ದು ಅವರಿಗೆ ಅವಕಾಶವು ಲಭಿಸಿದಷ್ಟರ ಪ್ರಮಾಣದಲ್ಲಿ ಹಾಗು ಅವರ ಸಾಮರ್ಥ್ಯಾನುಸಾರವಾಗಿ ಸುವಾರ್ತಾ ಸಂದೇಶವನ್ನು ಸಾರುವದರಲ್ಲಿ ಪಾಲನ್ನು ಹೊಂದಿರುವಂತೆ ಮಾಡಿರುವನು. ಯಾರಾರು ಆತ್ಮನಿಂದ ಹುಟ್ಟಿದವರಾಗಿ [ಅಂದರೆ ಗರ್ಭಾಂಕುರಿಸಲ್ಪಟ್ಟವರಾಗಿ] ಅಭಿಷೇಕಿಸಲ್ಪಟ್ಟಿರುತ್ತಾರೋ ಅವರು ಯೆಶಾಯ 61:1–3ರಲ್ಲಿ ನೀಡಲಾದ ಹೇಳಿಕೆಯಲ್ಲಿ, ಒಳಗೊಂಡವರಾಗಿದ್ದು ಅಭಿಷೇಕಿಸಲ್ಪಟ್ಟ ಶಿರಸ್ಸಾಗಿರುವ ಯೇಸುವಿನ ದೇಹದ ಅಂಗಗಳಾಗಿರುವರು.

ಹೀಗೆ ನಾವು ಓದುವದು, “ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು; ಮನಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ” ಮುಂತಾದವುಗಳು. ಪವಿತ್ರಾತ್ಮವನ್ನು ಪಡೆದಿರುವ ಪ್ರತಿಯೊಬ್ಬನೂ ಹೀಗೆ ಆತನಿಗೆ ಅಥವಾ ಆಕೆಗೆ ದೊರೆತಿರುವ ಅವಕಾಶದ ಅಥವಾ ಸನ್ನಿವೇಶಗಳಿಗೆ ಸೀಮಿತಗೊಂಡಂತೆ ಇಲ್ಲವೇ ಪರಿಸ್ಥಿತಿಗಳ ಅನುಸಾರವಾಗಿ ಸುವಾರ್ತೆಯನ್ನು ಸಾರಲು ವಿಧ್ಯುಕ್ತವಾಗಿ ಇಲ್ಲವೇ ಅಧಿಕಾರಯುಕ್ತವಾಗಿ ನೇಮಿತಗೊಂಡಿರುತ್ತಾರೆ. ಅಪೋಸ್ತಲನು ನೀಡಿರುವ ಒಂದು ಮಿತಿಯೆಂದರೆ ಸಹೋದರಿಯರು ಬಹಿರಂಗವಾಗಿ ಉಪದೇಶಿಸಬಾರದೆಂಬದೇ. (1 ತಿಮೋಥೆ 2:12) ಹೇಗೂ ಅವಕಾಶಗಳು ಎಲ್ಲರಿಗೂ ಹೇರಳವಾಗಿರುವವು.

ಆದುದರಿಂದ ಕೇವಲ ತಾವು ಮಾತ್ರವೇ ದೇವರ ಸಂದೇಶವನ್ನು ಉಪದೇಶಿಸಲು ವಿಧ್ಯುಕ್ತವಾಗಿ ಅಧಿಕಾರ ಪಡೆದಿರುವರೆಂದು ತಮ್ಮನ್ನು ತಾವೇ ಘೋಷಿಸಿಕೊಂಡಿರುವ ಸಭಾಸೇವಕರ ವರ್ಗದವರ ವಿಷಯವಾಗಿ ಮಾಡಿರುವ ಏರ್ಪಾಟಿನಲ್ಲಿ ಒಂದು ದೊಡ್ಡ ತಪ್ಪನ್ನು ಮಾಡಲಾಗಿರುವದು ಸ್ಪಷ್ಟ. ಯೇಸುವು ಮತ್ತು ಅಪೋಸ್ತಲರು ಸಭಾಸೇವಕರೆಂಬ [Clergy] ಒಂದು ವರ್ಗದ ಬಗ್ಗೆ ಅಥವಾ ಜನಸಾಮಾನ್ಯರೆಂಬ [Laity] ಒಂದು ವರ್ಗದ ಬಗ್ಗೆ ಏನೂ ತಿಳಿದಿರಲಿಲ್ಲ. ಪ್ರತಿಯಾಗಿ ನಮ್ಮ ಕರ್ತನು ಪ್ರಕಟಮಾಡಿ ಹೇಳಿರುವದೇನಂದರೆ [ಕ್ರಿಸನು] “ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರೂ ಸಹೋದರರು.” ಅಲ್ಲದೆ ಒಡೆಯನು ಹಾಗು ಆತನ ಹನ್ನೆರಡು ಮಂದಿ ಅಪೋಸ್ತಲರು ತಮ್ಮ ಹಿಂಬಾಲಕರಲ್ಲಿ ಸಭಾಸೇವಕರೆಂಬ ಯಾವುದೇ ವರ್ಗವಾಗಲೀ ಮತ್ತು ದೊರೆತನವೆಂಬ ಯಾವುದೇ ಸಂಗತಿಯು ಒಳಗೆ ಪ್ರವೇಶಿಸುವದನ್ನು ವಿಶೇಷವಾಗಿ ನಿರ್ಬಂಧಿಸಿರುವರು.

## ಸಭೆಯ ಕಾರ್ಯಭಾರ

ಇಲ್ಲಿ ನೀಡಲಾದಂಥ ಸಂದೇಶವೇನಂದರೆ, “ಆದುದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ;” ಎಂಬುದೇ. ಆ ಕಾರ್ಯಭಾರವು ಎಲ್ಲಾ ಜನಾಂಗಗಳವರನ್ನು ಶಿಷ್ಯರನ್ನಾಗಿ ಮಾಡುವದಾಗಿರಲಿಲ್ಲ, ಆದರೆ ಬೇರೊಂದೆಡೆ ವ್ಯಕ್ತಪಡಿಸಿರುವಂತೆ ಎಲ್ಲಾ ಜನಾಂಗಗಳಲ್ಲಿ ಕ್ರಿಸ್ತನಿಗೆ ಶಿಷ್ಯರಾಗಲು ಇಚ್ಛೆಯುಳ್ಳವರೆಲ್ಲರನ್ನು ಒಟ್ಟುಗೂಡಿಸಬೇಕೆಂಬದು; ಅವರು ಐಶ್ವರ್ಯವಂತರಾಗಿರಲೀ ಇಲ್ಲವೇ ಬಡವರಾಗಿರಲೀ ಅಥವಾ ವಿದ್ಯೆಯುಳ್ಳವರಾಗಲೀ ಇಲ್ಲವೇ ವಿದ್ಯೆಯಿಲ್ಲದವರಾಗಲಿ, ಕುಲೀನರಾಗಲೀ ಅಥವಾ ಕಲಹೀನರಾಗಲೀ ಯಾರೇ ಆಗಿರಬಹುದು. ಕ್ರಿಸ್ತನ ಶಿಷ್ಯನು ಒಬ್ಬ ಹಿಂಬಾಲಕನೂ ಕಲಿಯುವವನೂ [ಆತನ] ಪ್ರತಿರೂಪಿಯೂ ಆಗಿರುವನು. ಈ ಶಿಷ್ಯತದ ಅರ್ಥವನ್ನು ಯೇಸುವು ವಿವರಿಸುವವನಾಗಿ ಹೀಗೆ ಹೇಳಿರುವನು, “ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ [ನನ್ನ ಶಿಷ್ಯನಾಗುವದಕ್ಕೆ] ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ [ತನ್ನನ್ನು ಪ್ರತ್ಯೇಕಿಸಿಕೊಂಡು, ತನ್ನನ್ನು ಕಡೆಗಣಿಸಿಕೊಂಡು ತನ್ನ ಪ್ರತಿಭೆಯನ್ನು ತನ್ನ ಚಿತ್ತವನ್ನು ತನ್ನ ಸಂಪತ್ತನ್ನು ತನ್ನದೆಲ್ಲವನ್ನು ಅಲಕ್ಷಿಸಿಕೊಂಡು ಅಂದರೆ ಶಿಷ್ಯತನಕ್ಕೆ ಪ್ರಧಾನ್ಯತೆಯನ್ನು ನೀಡಿ] ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ.”

ಇಲ್ಲಿ ಸೂಚಿಸಲಾಗಿರುದೇನಂದರೆ ಕ್ರಿಸ್ತನ ನಿಜವಾದ ಹಿಂಬಾಲಕರೆಲ್ಲರೂ ಕರ್ತನು ನಡೆದ ದಾರಿಯು ಒಂದು ಕಷ್ಟಕರವಾದುದೆಂದೂ ಅದರಲ್ಲಿ ಅವರ ಚಿತ್ತವೆಲ್ಲವೂ ಸತತವಾಗಿ

ಅಡ್ಡಿಮಾಡಲ್ಪಟ್ಟು ವಿರೋಧಿಸಲ್ಪಡಬೇಕೆಂಬುದನ್ನು ಕಂಡು–ಕೊಳ್ಳುವರೆಂಬದು. ಅದು ಶರೀರ ಸಂಬಂಧವಾಗಿ ನಿರಂತರ ಶ್ರಮಸಂಕಟಗಳುಳ್ಳ ಒಂದು ಮಾರ್ಗವಾಗಿರುವದು. ಹೇಗೂ ಕಡೆಯದಾಗಿ ನೀಡಲಾದ ವಾಗ್ದಾನವೇನಂದರೆ "...ಎಲ್ಲಿ ನಾನು ಇರುತ್ತೇನೋ [ಪರಲೋಕದಲ್ಲಿ ಅಥವಾ ಮಹಿಮೆಯುಳ್ಳ ರಾಜ್ಯದಲ್ಲಿ] ಅಲ್ಲಿ ನನ್ನ ಶಿಷ್ಯನೂ ಸಹ ಇರುವನು."

ಕ್ರಿಸ್ತನ ಸಭೆಯು ನೀರಿನ ಸ್ನಾನವೆಂಬುದನ್ನು ಲೋಕದ ಸಂಗತಿಗಳಿಗೂ ತಮ್ಮ ಸಂಗತಿಗಳ ಬಗ್ಗೆಯೂ ಸತ್ತವರಂತೆ ಮಾಡಿಕೊಂಡು, ಕ್ರಿಸ್ತನ ಸಭೆಯ ಅಂಗಗಳಾಗಿ ನೂತನ ಜೀವಿಗಳಾಗಿ ಎದ್ದು ಬರುವದಕ್ಕೆ ಒಂದು ಸಂಕೇತವಾಗಿರುವದೆಂಬ ಸೂಕ್ತ ದೃಷ್ಟಿಯುಳ್ಳದ್ದಾಗಿದ್ದರೂ ನೀರಿನ ಸ್ನಾನವು ನಿಜರೂಪಕ್ಕೆ ಒಂದು ಚಿತ್ರಣವಾಗಿರುವದು. ಹೀಗಾಗಿ ಇಲ್ಲಿ ಹೇಳಿರುವ–ದೇನಂದರೆ ನಮ್ಮ ಕಾರ್ಯಭಾರವು ನೀರಿನ ಸ್ನಾನವಾಗಿರದೆ, ತಂದೆಯ ಹೆಸರಿನಲ್ಲಿಯೂ ಮಗನ ಹೆಸರಿನಲ್ಲಿಯೂ ಮತ್ತು ಪವಿತ್ರಾತ್ಮನಲ್ಲಿಯೂ ನೀಡಲಾಗುವ ದೀಕ್ಷಾಸ್ನಾನವಾಗಿರುವದು. "ಹೆಸರಿನಲ್ಲಿ" ಎಂಬುದು ಹೊಂದಾಣಿಕೆಗೆ, ಅನ್ಯೋನ್ಯತೆಗೆ ಸೇರುವದು ಎಂಬುದನ್ನು ಸೂಚಿಸುವದು. ಕ್ರಿಸ್ತನ ಶಿಷ್ಯರೆಲ್ಲರೂ ತಂದೆಯ ಹೆಸರೆಂಬದು ನೀತಿಗಾಗಿ ನಿಲ್ಲಬೇಕೆಂಬುದನ್ನು ಗುರುತಿಸಿಕೊಂಡವರಾಗಿ, ಆತನ ಹೆಸರು ಸೂಚಿಸುವದಕ್ಕೆ ಬದಲಾದ ಇತರ ಎಲ್ಲಾ ತತ್ವಗಳಿಗೂ ತಾವು ಸತ್ತವರಂತಾಗಿ ಪರಿಗಣಿಸಿಕೊಂಡು ನೀತಿ ನ್ಯಾಯ ಹಾಗೂ ಸತ್ಯವುಳ್ಳ ಆ ಹೆಸರಿನಲ್ಲಿ ಪೂರ್ಣವಾಗಿ ಮುಳುಗಿದಂತವರಾಗಬೇಕು.

ಲೂಥರನ್ನರು ಅಥವಾ ವೆಸ್ಲಿಯನ್ನರು ಇಲ್ಲವೇ ಕಲ್ವಿಯನ್ನರು ಅಥವಾ ರಾಜ್ಯಾಡಳಿತವು ನಿರ್ವಹಿಸುವ ಸಭೆಯಾದ ರೋಮನ್ ಕೆಥೋಲಿಕರಾಗಲೀ ಅಥವಾ ಆಂಗ್ಲಿಕನ್ ಕೆಥೋಲಿಕ ರಾಗಲೀ ಅಥವಾ ಗ್ರೀಕ್ ಕೆಥೋಲಿಕರಾಗಲೀ ಇಂಥವರೆಲ್ಲರ ಹೆಸರುಗಳನ್ನು ಅಲಕ್ಷಿಸಿ ಕ್ರಿಸ್ತನ ಹೆಸರಿನಲ್ಲಿ ಪೂರ್ಣವಾಗಿ ಮುಳುಗಿಸಲ್ಪಟ್ಟವರಾಗಿ ಆತನ ಹೆಸರನ್ನು ಗುರುತಿಸಿಕೊಂಡವರಾಗಿ ಆತನ ದೇಹದ ಅಂಗಗಳಾದ ಸಭೆಯನ್ನು ಮನ್ನಣೆ ಮಾಡ ಬೇಕೆಂಬುದಕ್ಕೆ ಮಾನ್ಯತೆ ನೀಡಬೇಕಾಗಿರುವದು. ಇದಕ್ಕೂ ಮಿಗಿಲಾಗಿ, ಅವರು ಆತನ ಹೆಸರಿನಲ್ಲಿ ಅದನ್ನು ಮನ್ನಣೆಮಾಡು ವವರಾಗಿ ತಮ್ಮ ಆತ್ಮವನ್ನು ತಮ್ಮ ಸ್ವಂತ ಚಿತ್ತವನ್ನು ಸತ್ತಂತೆ ಪರಿಗಣಿಸಿಕೊಂಡು ಪವಿತ್ರಾತ್ಮನಲ್ಲಿ ಮುಳುಗಿಸಲ್ಪಟ್ಟವರಾಗಬೇಕು. ಅವರು ತಮ್ಮ ಧ್ಯೇಯಗಳನ್ನು ನಿರೀಕ್ಷೆಗಳನ್ನು ಮತ್ತು ಭರವಸೆಗಳನ್ನು ನಿರ್ಲಕ್ಷಿಸಿಕೊಂಡವರಾಗಿ ದೇವರ ಪರಿಶುದ್ಧವಾದ ಚಿತ್ತ, ದೇವರ ಮನಸ್ಸು, ದೇವರ ಪವಿತ್ರವಾದ ಉದ್ದೇಶಗಳನ್ನು ತಮ್ಮ ಚಿತ್ತ ಮತ್ತು ಉದ್ದೇಶಗಳನ್ನಾಗಿ ಮಾಡಿಕೊಳ್ಳಬೇಕು.

ಹೀಗೆ ನಮ್ಮ ಸಂದೇಶವನ್ನು ಕೇಳುವ ಕಿವಿಯುಳ್ಳ ಎಲ್ಲಾ ದೇಶಗಳ ಜನರ ವಿಷಯವಾಗಿ ನಮ್ಮ ಕಾರ್ಯಭಾರವನ್ನು ನಾವು ಕಂಡವರಾಗಿರುವೆವು. ಅವರಿಗೆ ತಂದೆಯ ಹೆಸರಿನಲ್ಲಿಯೂ ಮಗನ ಹೆಸರಿನಲ್ಲಿಯೂ ಮತ್ತು ಪವಿತ್ರಾತ್ಮನ ಹೆಸರಿನಲ್ಲಿಯೂ ಸ್ನಾನದೀಕ್ಷೆಯನ್ನು ನೀಡಿ ಅವರನ್ನು ಶಿಷ್ಯರನ್ನಾಗಿ ಮಾಡಬೇಕು. ಅವರಿಗೆ ಯೇಸುವು ಆಜ್ಞಾಪಿಸಿದ್ದನೆಲ್ಲಾ ಕೈಗೊಂಡು ನಡೆಯಲು ಬೋಧಿಸಬೇಕು. ಇದು ನಮ್ಮ ಅಧಿಕಾರದ ವ್ಯಾಪ್ತಿಯಾಗಿರುವದು. ನಾವು ಮಾನವ ಸಂಸ್ಥೆಗಳನ್ನು ವ್ಯವಸ್ಥಾಪನೆ ಮಾಡಿ ಅವುಗಳನ್ನು ರಾಜ್ಯವೆಂದಾಗಲೀ ಸಭೆಯೆಂದಾಗಲೀ ಅಥವಾ ಇನ್ನು ಯಾವುದೇ ಹೆಸರಿನಿಂದ ಕರೆಯಬಾರದು. ನಾವು ಕೇವಲ ಕ್ರಿಸ್ತನ ಹಿಂಬಾಲಕರನ್ನು ಸಿದ್ಧಗೊಳಿಸುವವರಾಗಿ ಅವರಲ್ಲಿ ದೇವರು ತನ್ನ ಸುಚಿತ್ತವನ್ನು ನೇರವೇರಿಸಲು ಉದ್ದೇಶವನ್ನು ಪ್ರಯತ್ನವನ್ನು ಉಂಟುಮಾಡುವ ಹಾಗೆ ಮಾಡಬೇಕು.

## "ಲೋಕದ ಕಟ್ಟ ಕಡೆಯವರೆಗೂ"

"ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ..." ಈತನ ಮಾತುಗಳು ಲೋಕವು ಅಂತ್ಯಗೊಳ್ಳಲಿರುವದನ್ನು ಸೂಚಿಸುವದೆಂದು ಅರ್ಥಮಾಡಿಕೊಳ್ಳಲಾಗಿರುವದು, ಆದರೆ ಗ್ರೀಕ್ ಭಾಷಾನುಸಾರ ಒಡೆಯನು ನಿಜವಾಗಿಯೂ ಹೇಳಿರುವದೇನಂದರೆ ಯುಗದ ಸಮಾಪ್ತಿಯವರೆಗೂ ಅಂದರೆ ಈ ಸುವಾರ್ತಾ ಯುಗದಲ್ಲಿ ತನ್ನ ದೈವಿಕ ಉದ್ದೇಶದ ಕಾರ್ಯಭಾರದಂತೆ ಕ್ರಿಸ್ತನಿಗಾಗಿ ಸಾಕಷ್ಟು ಸಂಖ್ಯೆಯ ಶಿಷ್ಯರನ್ನು ಒಟ್ಟುಗೂಡಿಸಿ ದೈವಿಕ ಉದ್ದೇಶವನ್ನು ಪೂರ್ಣಗೊಳಿಸುವ ಸಮಯದವರೆಗೂ ಆತನು ತನ್ನ ಜನರೊಡನೆ ಇರುವನೆಂಬದು. ಅಂದರೆ ರಾಜವಂಶದ ಯಾಜಕ–ರಾಗಿ ಮಹಿಮಾ ಪದವಿಗೆ ಸೇರುವಂಥ ಕ್ರಿಸ್ತನ ಮದಲಗಿತ್ತಿ–ಯಾಗುವವರ ಸೂಕ್ತವಾದ ಸಂಖ್ಯೆಯವರನ್ನು ಸುವಾರ್ತಾ ಸಂದೇಶವು ಸತ್ಯಕ್ಕೆ ವಿಧೇಯರಾಗುವದರ ಮೂಲಕವಾಗಿ ಪರಿಶುದ್ಧರನ್ನಾಗಿಸುವ ಕಾರ್ಯವು ಪೂರ್ಣಗೊಳ್ಳುವ ತನಕ ಕರ್ತನು ತನ್ನ ಜನರೊಡನೆ ಇರುವನೆಂಬದು. ಆಗ ಯುಗದ ಅಂತ್ಯವು ಬರುವದು. ಆಗ ಒಡೆಯನು ತಾನು ಆದುಕೊಂಡ–ವರನ್ನು ತನ್ನೊಡನೆ ಮಹಿಮೆಗೆ ಸೇರಿಸಿಕೊಳ್ಳಲು, ತನ್ನ ರಾಜ್ಯವನ್ನು ಸ್ಥಾಪಿಸಿ ಇನ್ನೂ ಆದುಕೊಳ್ಳದಿರುವ ಲೋಕದ ಮಾನವರನ್ನು ಆಶೀರ್ವದಿಸ ಸಲುವಾಗಿ ಆತನು ಆಗಮಿಸುವನು.

*****

# ನಮ್ಮ ಕರ್ತನ ದಿವಾರೋಹಣ

### ರೀಪ್ರಿಂಟ್ಸ್ ಪುಟ 1415

## ಅಪೋಸ್ತಲರ ಕೃತ್ಯಗಳು 1:1–12

**"ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು." – ಅಪೋಸ್ತಲರ ಕೃತ್ಯಗಳು 1:9**

**ವಚನ 1–2**: ಅಪೋಸ್ತಲರ ಕೃತ್ಯದ ಘಟನೆಗಳನ್ನು ಬರೆದವನು ಲೂಕನಾಗಿದ್ದನು. ಹಾಗು "ಮೊದಲು ಬರೆದ ಚರಿತ್ರೆ" ಎಂಬದು ಲೂಕನು ಬರೆದ ಸುವಾರ್ತೆ ಎಂದು ಕರೆಯಲ್ಪಟ್ಟಿತ್ತು.

**ವಚನ 3**: ಮೊದಲು ಬರೆದ ಆ ವಿವರಗಳು ನಮ್ಮ ಕರ್ತನ ಪುನರುತ್ಥಾನದ ನಂತರದ ನಾಲ್ವತ್ತು ದಿನಗಳಲ್ಲಿ ಸಂಭವಿಸಿದಂಥ ಹಲವಾರು ಘಟನೆಗಳನ್ನು ವರದಿಮಾಡಿರುವದಾದರೂ (ಲೂಕ 24ನೇ ಅಧ್ಯಾಯವನ್ನು ನೋಡಿ) ಅದು ಹೇಗೂ ಎಲ್ಲವನ್ನೂ ತಿಳಿಸಿರುವದಿಲ್ಲ; ಹಾಗು ಈ ಮುಂದಿನ ವರದಿಯು ಸುವಾರ್ತಾ ಯುಗದ ವ್ಯವಸ್ಥೆಯ ಆರಂಭಿಕ ಕಾರ್ಯಗಳನ್ನು ವಿವರಿಸಿ ಹೇಳಿದ್ದು, ಇದನ್ನು ಇತರ ವರದಿಗಳೊಂದಿಗೆ ಸೂಕ್ತವಾಗಿ ಸಂಯೋಜಿಸಿದಾಗ ಅದು ನಮ್ಮ ಒಡೆಯನು ಆ ನಾಲ್ವತ್ತು ದಿನಗಳಲ್ಲಿ ನೀಡಿದ ಆದೇಶಗಳ ಸಾರಾಂಶವೆಲ್ಲವೂ ವಿಶೇಷವಾಗಿ "ದೇವರ ರಾಜ್ಯದ ವಿಷಯದ ಸಂಗತಿಗಳನ್ನು" ಒಳಗೊಂಡಿತ್ತು.

ಲೂಕನು ನಮಗೆ ವಿವರಗಳನ್ನು ನೀಡಿರುವದಿಲ್ಲ; ಆದರೆ ನಾವು ಸುರಕ್ಷಿತವಾಗಿ ಕಲ್ಪಿಸಿಕೊಳ್ಳಬಹುದೇನಂದರೆ ಅವರಿಗೆ [ಶಿಷ್ಯರಿಗೆ] ಗಣನೀಯ ಪ್ರಮಾಣದ ಆದೇಶಗಳ ಅಗತ್ಯವಿದ್ದು ಅವುಗಳು ಯೆಹೂದ್ಯರೆಲ್ಲರಿಗೂ ಸಾಮಾನ್ಯವಾಗಿರುವ ನಿರೀಕ್ಷೆಯ ಬಗ್ಗೆ ಅಂದರೆ ದೇವರು ಮೆಸ್ಸೀಯನ ಅಧೀನತೆಯಲ್ಲಿ ಇಸ್ರಾಯೇಲ್ಯರನ್ನು ಭೂಲೋಕದ ಮುಖ್ಯವಾದ ಜನಾಂಗ–ವಾಗುವಂತೆ ಉನ್ನತಿಗೆ ತಂದು (ಅವರನ್ನು ತನ್ನ ಆಜ್ಞಾವಿಧಿಗಳನ್ನು ಲೋಕಕ್ಕೆ ತಿಳಿಸುವಂಥ ಸಾಧನವನ್ನಾಗಿ ಮಾಡಿಕೊಂಡು ಹೀಗೆ ಅಬ್ರಹಾಮನ ಸಂತತಿಯ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವಧಿಸುವನು) ಎಂಬ ನಿರೀಕ್ಷೆಯನ್ನು ಪಡೆದುಕೊಂಡಿರುವದು ಮಾತ್ರವಲ್ಲದೆ ಅವರು ನಮ್ಮ ಕರ್ತನು ತಾನು ಮರಣಹೊಂದುವದಕ್ಕೆ ಮೊದಲು ಅವರಿಗೆ ನೀಡಿದಂಥ ವಿಶೇಷವಾದ ವಾಗ್ದಾನಗಳನ್ನು ಅಂದರೆ ಅವರು ಆತನ ರಾಜ್ಯದಲ್ಲಿ ಸಿಂಹಾಸನದಲ್ಲಿ ಕುಳಿತುಕೊಂಡು ಇಸ್ರಾಯೇಲ್ಯರಿಗೆ ನ್ಯಾಯತೀರಿಸಬೇಕೆಂಬುದನ್ನು ಸಹ ತಮ್ಮ ಮನಸ್ಸಿನಲ್ಲಿಟ್ಟು–ಕೊಂಡಿದ್ದರು; ಅವರ ಮನಸ್ಸಿನಲ್ಲಿ ಈ ರಾಜ್ಯ ಸಂಬಂಧವಾದ ವಾಗ್ದಾನಗಳು ಎಷ್ಟು ದೊಡ್ಡ ಶಕ್ತಿಯುಳ್ಳದ್ದಾಗಿತ್ತೆಂದರೆ ಅವರು ಇಚ್ಛಾಪೂರ್ವಕವಾಗಿ ತಮ್ಮ ಕಸುಬಿನಲ್ಲಿ ಮುಂದೆ ಉಂಟಾಗುತ್ತಿದ್ದ ಏಳಿಗೆಗಳನ್ನು ಬಿಟ್ಟುಬಿಟ್ಟವರಾಗಿ ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗಲು ತಮ್ಮ ಜೊತೆಯವರಿಂದ ಉಂಟಾದ ನಿಂದನಾತಿರಸ್ಕಾರಗಳನ್ನು ಸಹಿಸಿಕೊಂಡಿದ್ದರು. ಅಲ್ಲದೆ ಒಡೆಯನು ಈ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ಹೊಂದಿದವ – ರಾಗಲು ಸತತವಾಗಿ ಪ್ರೋತ್ಸಾಹಿಸಿದ್ದನು. ಆತನು ಗದರಿಸಿದ್ದುದು ಕೇವಲ ಅವರಲ್ಲಿ ಯಾರು ಹೆಚ್ಚಿನವನಾಗಿದ್ದು ಆ ರಾಜ್ಯದಲ್ಲಿ ಆತನ ಎಡಬಲಗಡೆಗಳಲ್ಲಿ ಕೂತುಕೊಳ್ಳಬೇಕೆನ್ನುವ ಬಗ್ಗೆ ಅವರು ಮಾಡಿಕೊಂಡಿದ್ದ ಕಲಹದ ವಿಷಯಕ್ಕಾಗಿತ್ತು. –ಮತ್ತಾಯ 18:1–4; ಮಾರ್ಕ 9:33–37; ಲೂಕ 22:24–26

ಕರ್ತನು ಶಿಲುಬೆಗೆ ಹಾಕಲ್ಪಟ್ಟಾಗ ಈ ಎಲ್ಲಾ ಭರವಸೆ ನಿರೀಕ್ಷೆಗಳು ಭಗ್ನವಾದಂತೆ ಅವರಿಗೆ ಕಂಡಿತ್ತು. ಆದುದರಿಂದ ತಮ್ಮ ಕರ್ತನು ಪುನರುತ್ಥಾನವಾದುದನ್ನು ಅರಿತಾಗ ಅವರ ಆಲೋಚನೆ ವಿಚಾರಣೆಗಳು ಹಾಗು ಇದರ ಫಲವಾದ ಆತನ ಬೋಧನೆಗಳು ಸಹಜವಾಗಿಯೇ ದೇವರ ರಾಜ್ಯದ ಕುರಿತಾಗಿತ್ತು. ಇಸ್ರಾಯೇಲ್ ಜನಾಂಗವು ಆತನ ರಾಜ್ಯದಲ್ಲಿ ಸಹಬಾಧ್ಯತೆ ಹೊಂದಲು ನಿರಾಕೃತರಾದುದನ್ನು ಅವರಿಗೆ ವಿವರಿಸಿ ಹೇಳುವದು ಅಗತ್ಯವಾಗಿತ್ತು; ಕಾರಣ ಅವರು ವಂಶಪಾರಂಪರ್ಯವಾಗಿ ಅಬ್ರಹಾಮನ ಸಂತತಿಯವರಾಗಿದ್ದರೂ ಅವರಿಗೆ ಅಬ್ರಹಾಮನಲ್ಲಿದ್ದ ನಂಬಿಕೆಯಿರಲಿಲ್ಲ; ಹೀಗಾಗಿ ಅವರನ್ನು ಅಬ್ರಹಾಮನಿಗೆ ಮಾಡಿದ ವಾಗ್ದಾನದಲ್ಲಿ ಕ್ರಿಸ್ತನೊಂದಿಗೆ ಬಾಧ್ಯರನ್ನಾಗಿ ಮಾನ್ಯಮಾಡಲು ಸಾಧ್ಯವಾಗಲಿಲ್ಲ. ಅಲ್ಪ ಸಂಖ್ಯೆಯಲ್ಲಿನ ನಂಬಿಗಸ್ತರಾಗಿದ್ದ (ಅಂದರೆ ಸುಮಾರು ಐನೂರು ಮಂದಿ) ಶಿಷ್ಯರಿಗೆ ಆ ಜನಾಂಗದವರೊಡನೆ ಅವರು ನಿರಾಕೃತರಾಗಿಲ್ಲವೆಂದೂ ಮುಂದಾಗಿ ನಿಷ್ಕರ್ಷೆ ಮಾಡಲಾದ ಸಂಖ್ಯೆಯವರು ಆದುಕೊಳ್ಳಲ್ಪಡುವವರೆಗೂ ಆ ರಾಜ್ಯವನ್ನು ಸ್ಥಾಪಿಸುವ ಸಮಯವನ್ನು ಮುಂದೂಡುವದು ಅಗತ್ಯವಿರುವದಾದರೂ ಅವರು ಆಗಲೂ ಆ ರಾಜ್ಯಕ್ಕೆ ಬಾಧ್ಯರನ್ನಾಗಿ ಮಾನ್ಯಮಾಡಲಾಗಿರುದೆಂಬುದನ್ನು ಅವರಿಗೆ ತಿಳಿಸುವದು ಅವಶ್ಯವಾಗಿತ್ತು. ಅವರನ್ನು ರಾಜ್ಯದ ಮಹಿಮಾ ಪ್ರಭಾವಕ್ಕೆ ಏರಿಸಲ್ಪಡುವದು ಮುಂದೂಡಲ್ಪಡುವದಾದರೂ ಅವರು ತಂದೆಯಿಂದ ಶೀಘ್ರದಲ್ಲಿ ಮಾನ್ಯಮಾಡಲ್ಪಟ್ಟು ದೇವರ ಮಕ್ಕಳಾಗಿ ಹಾಗೂ ಮುಂದೆ ಕ್ರಿಸ್ತನೊಂದಿಗೆ ಸಹಬಾಧ್ಯರಾಗುವಂಥ ಪವಿತ್ರಾತ್ಮನ ಮೂಲಕವಾದ ಆಶೀರ್ವಾವು ಅವರಿಗೆ ಅನುಗ್ರಹ ಮಾಡಲ್ಪಡುವದು. ಇದರ ಅನುಸಾರವಾಗಿಯೆ ನಾವು ಮುಂದೆ ಓದುವದು.

**ವಚನ 4–5:** ಆತನು ಅವರಿಗೆ ಯೆರೂಸಲೇಮಿನಲ್ಲಿ ಕಾದುಕೊಂಡಿದ್ದು ದೇವರ ಮಕ್ಕಳಾಗಿ ಬಾಧ್ಯರಾಗಲು ದೇವರಾತ್ಮನಿಂದ ಹುಟ್ಟಿದವರಾಗುವದನ್ನು ನಿರೀಕ್ಷಿಸುವವರಾಗಿ

ಅದಕ್ಕಾಗಿ ಅವರು ಕಾಯಬೇಕೆಂದು ಆಜ್ಞಾಪಿಸಿದ್ದನು. ಇದು ಆಗಲೇ ತನ್ನ ಮೂಲಕವಾಗಿಯೂ ಮತ್ತು ಸ್ನಾನಿಕನಾದ ಯೋಹಾನನ ಮೂಲಕವಾಗಿಯೂ ಮುಂದಾಗಿ ಹೇಳಲ್ಪಟ್ಟಿರು–ವದೆಂಬುದನ್ನು ತೋರಿಸಿಕೊಟ್ಟಿದ್ದನು.

**ವಚನ 6–8:** ಆದರೆ ಹೀಗೆ ಅವರಿಗೆ ಕ್ರಿಸ್ತನ ರಾಜ್ಯದಲ್ಲಿ ಸಹಬಾಧ್ಯರಾಗಿ ದೇವರಿಂದ ಮಾನ್ಯತೆ ನೀಡುವಂತಾಗಲು "ಇನ್ನು ಬಹಳ ದಿವಸಗಳಿರುವದಿಲ್ಲ" ಎಂಬ ಭರವಸೆ ಹೊಂದಿದವರಾಗಿ (ವಚನ 5) ಅವರು ತಮ್ಮ ಹೃದಯಕ್ಕೆ ಬಹು ನಿಕಟವಾಗಿರುವ ಪ್ರಶ್ನೆಯನ್ನು ಹಾಕಿದ್ದರು–ಅದೇನಂದರೆ ದೇವರ ರಾಜ್ಯವು ಆ ಶಬ್ದದ ಪೂರ್ಣವಾದ ಅರ್ಥದಲ್ಲಿ ಹೇಗಿರುವದು? ಇದೇ ಸಮಯದಲ್ಲಿ ಅದು ಬರುವದೋ? ಅದೂ ಸಹ ಇನ್ನೂ ಅನೇಕ ದಿನಗಳ ನಂತರ ಆಗಿರದು ಅಲ್ಲವೇ?

ಒಡೆಯನ ಉತ್ತರವು ಖಂಡನೆಯಾಗಿರಲಿಲ್ಲ ಇಲ್ಲವೇ ತಿದ್ದುಪಾಟಿಯೂ ಸಹ ಆಗಿರಲಿಲ್ಲ ಅಥವಾ ಅವರ ಸಾಮಾನ್ಯ ನಿರೀಕ್ಷೆಗೆ ವಿರುದ್ಧವೂ ಆಗಿರಲಿಲ್ಲ. ಕೇವಲ ಆತನು ಅವರಿಗೆ ಹೇಳಿದ್ದೇನಂದರೆ ದೇವರ ರಾಜ್ಯವು ಪೂರ್ಣವಾಗಿ ಸ್ಥಾಪನೆಯಾಗುವ ಕಾಲ ಸಮಯಗಳನ್ನು ಆತನು [ದೇವರು] ತನ್ನ ಸ್ವಂತ ಅಧಿಕಾರದಲ್ಲಿ ಇಟ್ಟುಕೊಂಡಿರುವನು, ಅಲ್ಲದೆ ಅದನ್ನು ತಿಳಿದುಕೊಳ್ಳುವದು ಆಗ ಅವರಿಗೆ ಸೂಕ್ತವೂ ಆಗಿರುವದಿಲ್ಲ; ಆದರೆ ಅವರಿಗೆ ಶಕ್ತಿಯನ್ನು ಪಡಕೊಳ್ಳಬೇಕಿದ್ದು {ಅಂದರೆ ದೇವರ ಆಳವಾದ ಸಂಗತಿಗಳನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವನ್ನು – 1 ಕೊರಿಂಥ 2:10 ಪಡಕೊಳ್ಳಬೇಕಿದ್ದು ಮತ್ತು (ಅದನ್ನು ತಿಳಿದುಕೊಳ್ಳುವಂಥದ್ದು ಕಾಲಾನುಕ್ರಮದ ಪ್ರಕಾರ ನಿಗದಿತ–ವಾದಾಗ) ಆ ಮೂಲಕವಾಗಿ ಅವರು ಎಲ್ಲಾ ವಿಷಯಗಳಲ್ಲಿ ಸತ್ಯಕ್ಕೆ ನಡೆಸಲ್ಪಡಬೇಕು ಅಲ್ಲದೆ "ಮುಂದಾಗುವ ಸಂಗತಿಗಳನ್ನು" ಅವರಿಗೆ ತೋರಿಸಲ್ಪಡಬೇಕು–ಯೋಹಾನ 16:13} ಪವಿತ್ರಾತ್ಮನು ಅವರ ಮೇಲೆ ಬಂದ ನಂತರ ಅಂದರೆ ಪುತ್ರಭಾವದ ಆತ್ಮನನಿಂದ ಮುದ್ರಿತರಾದ ನಂತರ (ಯೋಹಾನ 15:15); ಅವರು ಇನ್ನು ಮೇಲೆ ಸೇವಕರಂತಾಗಿರದೆ ಮಕ್ಕಳಂತಾಗಿ ಅವರು ಎಲ್ಲಾ ಸ್ಥಳಗಳಲ್ಲಿಯೂ ಆತನಿಗೆ ಸಾಕ್ಷಿಯಾಗಿರಬೇಕು. ಆತನು ತಮಗೆ ಬೋಧಿಸಿದ ಸತ್ಯಾರ್ಥಗಳ ವಿಷಯವಾಗಿ ಅಂದರೆ ಆತನೇ (ಕ್ರಿಸ್ತನೇ) ಯೆಹೋವನಿಂದ ಅಭಿಷೇಕಿಸಲ್ಪಟ್ಟ ಪ್ರತಿನಿಧಿಯಾಗಿ ಲೋಕದ ಅರಸನಾಗಬೇಕಿದ್ದು ಆತನ ಸಾಮ್ರಾಜ್ಯವು ಆಕಾಶದ ಕೆಳಗೆ ಎಲ್ಲಾ ಸ್ಥಳಗಳಲ್ಲಿರುವದು; ಅಲ್ಲದೆ ಎಲ್ಲಾ ಜನಾಂಗಗಳು ಮತ್ತು ರಾಜ್ಯಗಳು ಆತನನ್ನು ಸೇವಿಸಿ ಆತನಿಗೆ ವಿಧೇಯವಾಗುವವು ಎಂಬುದಕ್ಕೆ ಸಾಕ್ಷಿನೀಡಬೇಕು. ಲೋಕವನ್ನು ಆಶೀರ್ವದಿಸಲು ಸ್ಥಾಪಿಸಲ್ಪಡುವಂಥ ಆತನ ರಾಜ್ಯ ಸಂಬಂಧವಾದ ವಾಗ್ದಾನಗಳೆಲ್ಲವೂ ನಿಜವೆಂದೂ; ನಮ್ಮ ಕರ್ತನ ಮರಣವು ಈ ಮಹಾ ಅಂತ್ಯಗುರಿಯನ್ನು ತಲುಪುವ ಸಲುವಾದ ಕೇವಲ ಒಂದು ಸಾಧನವಾಗಿರುವದೆಂದೂ; ಲೋಕದ ಪಾಪನಿವಾರಣೆಗಾಗಿ ಮೆಸ್ಸೀಯನ ಮರಣವು ಅಗತ್ಯವಾಗಿತ್ತೆಂದು ಅಂದರೆ ಆ [ಲೋಕದ] ಪಾಪಗಳು ಕ್ಷಮಿಸಲ್ಪಟ್ಟು ಅದರ ಶಿಕ್ಷೆಯನ್ನು ರದ್ದುಗೊಳಿಸಲು ಸಾಧ್ಯವಾಗಿಸುವ ಮೊದಲು ಹಾಗು ಆ ಪಾಪಿಗಳು ಆಶೀರ್ವದಿಸಲ್ಪಟ್ಟು ದೇವರ ಅನ್ಯೋನ್ಯತೆ ಮತ್ತು ಸೌಭಾಗ್ಯಗಳಿಗೆ ಮತ್ತೆ ಸ್ವೀಕರಿಸಲ್ಪಡುವದು ಸಾಧ್ಯವಾಗುವಕ್ಕೆ ಮೊದಲು ಮೆಸ್ಸೀಯನ ಮರಣವು ಅಗತ್ಯವಾಗಿತ್ತೆಂದು ಅವರು ಸಾಕ್ಷಿನೀಡಬೇಕೆಂಬದು. ಆ ಒಡೆಯನು ಆಜ್ಞಾಪಿಸಿದಂತೆ ನಂಬಿಕೆಯುಳ್ಳವರಿಗೆ ಅವರು ಹೀಗೆ ಪ್ರಾರ್ಥಿಸುವದನ್ನು ಮುಂದುವರೆಸಬೇಕೆಂದು ಹೇಳಬೇಕು: ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ. ಆತನ ಮಾತು ಮತ್ತು ವಾಗ್ದಾನಗಳಲ್ಲಿ ಯಾವದೂ ಸುಳ್ಳಾಗಿರುವದಿಲ್ಲವೆಂದೂ ಆದರೆ "ಕ್ಲುಪ್ತ ಕಾಲದಲ್ಲಿ" ವಾಗ್ದಾದ ಮಾಡಲ್ಪಟ್ಟ ಸಂಗತಿಗಳೆಲ್ಲವೂ ನೆರವೇರಬೇಕೆಂಬುದಕ್ಕೆ ಅವರು ಸಾಕ್ಷಿನೀಡಬೇಕು.

**ವಚನಗಳು 9–12:** ನಮ್ಮ ಕರ್ತನ ದಿವಾರೋಹಣವು ಯಾರಿಂದಲೂ ಕಾಣಲಾಗದಂತೆ ನಡೆದಿರಬಹುದಿತ್ತು; ಯಾಕಂದರೆ ಆತನ ಪುನರುತ್ಥಾನದ ನಂತರ ಆತನು ಒಬ್ಬ ಆತ್ಮಿಕ ಜೀವಿಯಾಗಿದ್ದನು ಅಲ್ಲದೆ "ಆ ಭೂತಕ್ಕೆ [ಆತ್ಮಿಕ ಜೀವಿಗೆ] ಮಾಂಸ ಎಲುಬುಗಳಿರುವದಿಲ್ಲ." ಅವನು ನಿಜವಾಗಿಯೂ ಶರೀರ–ಸಂಬಂಧದಲ್ಲಿ ಕೊಲ್ಲಲ್ಪಟ್ಟಿದ್ದನು, ಆತ್ಮಸಂಬಂಧದಲ್ಲಿ ಎಬ್ಬಿಸಲ್ಪಟ್ಟವ–ನಾಗಿ ತಿರಿಗಿ [ಆತ್ಮಿಕ ಜೀವಿಯಾಗಿ] ಬದುಕುವವನಾಗಿದ್ದನು. ಆತನು ಅಲ್ಲಿ ಆತ್ಮನಿಂದ ಹುಟ್ಟಿದವನಾಗಿದ್ದು "ನಿದ್ರೆಹೋದವರಲ್ಲಿ ಪ್ರಥಮ ಫಲವಾಗಿದ್ದನು"; ಅಲ್ಲದೆ ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ ಆಗಿದ್ದು ಮನುಷ್ಯರಿಂದ ಕಾಣಲಾಗದ ರೀತಿಯಲ್ಲಿ ಗಾಳಿಯಂತೆ ಹೋಗಿ ಬರಲು ಆತನಿಗೆ ಸಾಧ್ಯವಿರುವದು. (ಯೋಹಾನ 3:8) ಆದರೆ [ಮರಣದಿಂದ] ಎದ್ದುಬಂದ ನಮ್ಮ ಕರ್ತನು ಒಬ್ಬ ಆತ್ಮಿಕ ಜೀವಿಯಾಗಿದ್ದು ತನ್ನ ಪುನರುತ್ಥಾನವನ್ನು ಪ್ರಮಾಣಿಕರಿಸುವ ಸಲುವಾಗಿ ಆತನು ಅನೇಕ ಸಮಯಗಳಲ್ಲಿ ಅನೇಕ ರೂಪದಲ್ಲಿ ಅಥವಾ ದೇಹಗಳಲ್ಲಿ (ಅವುಗಳಲ್ಲಿ ಕೆಲವು ಶಿಲುಬೆಗೆ ಹಾಕಲ್ಪಟ್ಟ ಆತನ ಶರೀರವನ್ನು ಹೋಲುತ್ತಿತ್ತು) ಕಾಣಿಸಿಕೊಂಡಿದ್ದನು. ಹೀಗಾಗಿ ಆತನು ಈ ಅಂಶವನ್ನು ತನ್ನ ಶಿಷ್ಯರಿಗೆ ಸಾಬೀತುಪಡಿಸುವ ಸಲುವಾಗಿ ಆತನು ದಿವಾರೋಹಣವಾದಾಗ ತನ್ನನ್ನು ಒಂದು ಶಾರೀರಿಕವಾದ ದೇಹದಲ್ಲಿ ತೋರಿಸಿಕೊಂಡಿದ್ದನು.

ಆತನು ದಿವಾರೋಹಣವಾಗುವದಕ್ಕೆ ಮೊದಲು ನಾಲ್ವತ್ತು ದಿವಸಗಳು ತನ್ನ ಶಿಷ್ಯರೊಡನೆ ಇದ್ದನಾದರೂ ಹೆಚ್ಚೆಂದರೆ ಆತನು ಕೇವಲ ಏಳು ಸಾರಿ ಅವರಿಗೆ ಕಾಣಿಸಿಕೊಂಡಿದ್ದನು, ಅಲ್ಲದೆ ಆ ಎಲ್ಲಾ ದಿನಗಳಲ್ಲಿ ಪ್ರತಿ ಸಾರಿಯೂ ಅದು ಕೇವಲ ಕೆಲವು ಕ್ಷಣಗಳು ಮಾತ್ರವಾಗಿದ್ದವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು; ಅಲ್ಲದೆ ತಾನು ಹಿಂದೆ ಹೀಗೆ ಹೇಳಿದಂತೆ, "ಇನ್ನು ಸ್ವಲ್ಪಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ," ಲೋಕಕ್ಕೆ ಆತನು ಯಾವಾಗಲೂ ಅದೃಷ್ಯನೇ ಆಗಿದ್ದನು. ಅಪೋಸ್ತಲನಾದ ಪೌಲನು ನಮ್ಮ ಕರ್ತನು ಪುನರುತ್ಥಾನವಾದ ನಂತರ ತನ್ನನ್ನು ತೋರ್ಪಡಿಸಿಕೊಂಡಂಥ ಸಂದರ್ಭಗಳನ್ನು ಎಣಿಕೆಮಾಡಿ ಹೀಗೆ ಹೇಳಿದ್ದನು: "ತರುವಾಯ ಒಂದೇ ಸಮಯದಲ್ಲಿ ಐನೂರು ಮಂದಿಗಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು" "ಕಟ್ಟಕಡೆಗೆ... ನನಗೂ ಕಾಣಿಸಿಕೊಂಡನು." ಅದೇ ಯೇಸುವು ಶರೀರಧಾರಿಯಾಗಿ ಮರಿಯಳಿಗೆ ತೋಟಗಾರನಂತೆಯೂ,

ಎಮ್ಮಾಹುವಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರಿಗೆ ಇನ್ನೊಂದು ರೂಪದಲ್ಲಿ ಅಪರಿಚಿತನಂತೆಯೂ, ಕೊಠಡಿಯಲ್ಲಿ ಅದರ ಬಾಗಿಲುಗಳು ಮುಚ್ಚಿರುವಾಗ ಶಿಷ್ಯರ ನಡುವೆ ಮೊಳೆಗಳು ಹಾಗು ಈಟಿಯಿಂದ ತಿವಿಯಲಾಗಿದ್ದ ಮೂಳೆಮಾಂಸದ ದೇಹದ ಮೂಲಕವಾಗಿ ತಾನು ಪುನರುತ್ಥಾನವಾದುದಕ್ಕೆ ಸಾಕ್ಷಿಯಾಗಿ ಕಾಣಿಸಿಕೊಂಡಿದ್ದನು; ಆದರೆ ಮರು ಕ್ಷಣದಲ್ಲೇ ಮಾಂಸ ಎಲುಬು ಹಾಗು ವಸ್ತ್ರಗಳು ಅವರ ಕಣ್ಣಿನ ಎದುರಿನಲ್ಲೇ ಕರಗಿಹೋಗಿ ಅವರ ದೃಷ್ಟಿಗೆ ಕಣ್ಮರೆಯಾಗುವ ಮೂಲಕವಾಗಿ ತಾನು ಆಗ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟವನಾಗಿ [ರಕ್ತಮಾಂಸದ] ಶರೀರದಿಂದ ವಿಭಿನ್ನನಾಗಿರುವೆನೆಂಬುದನ್ನು ತೋರಿಸಿಕೊಟ್ಟಿದ್ದನು. ಇದೇ ಯೇಸುವು ಆಗ ಮೂಳೆಮಾಂಸವಲ್ಲದ "ಚೈತನ್ಯಪೂರ್ಣವಾದ ಒಂದು ಆತ್ಮಿಕ ಜೀವಿಯಾಗಿ" ತಾರ್ಸದ ಸೌಲನಿಗೆ ಸಹ ಶರೀರವೆಂಬ ಮುಸುಕಿನಿಂದ ಕೂಡಿದ ಆತ್ಮಿಕ ಜೀವಿಯಾಗಿ ಕಾಣಿಸಿಕೊಳ್ಳದೆ ಆತ್ಮಿಕ ದೇಹದ ಮಹಿಮೆಯ ಒಂದು ತುಣುಕನ್ನು ಕ್ಷಣಕಾಲ ತೋರಿಸಿಕೊಟ್ಟಿದ್ದನು; ಅದು ಆತನನ್ನು ಭೂಮಿಯ ಮೇಲೆ ಬೀಳುವಂತೆ ಮಾಡಿ ಆತನ ದೃಷ್ಟಿಗೆ ಹಾನಿಯನ್ನುಂಟು ಮಾಡಿತ್ತು. (ಅಪೋಸ್ತಲರ ಕೃತ್ಯಗಳು 26:13,14; 9:8) ಅದು ಮರಣದಿಂದ ಎಬ್ಬಿಸಲ್ಪಟ್ಟು ಮಹಿಮಾ ಪದವಿಗೆ ಸೇರಿದ ಆತ್ಮಿಕ ಜೀವಿಯಾದ ಯೇಸುವಾಗಿದ್ದನು; (1 ಕೊರಿಂಥ 15:40–44) ಆದರೆ ಆತನು ಶಿಷ್ಯರಿಗೆ [ಪರಲೋಕ] ರಾಜ್ಯದ ಸಂಗತಿಗಳ ಬಗ್ಗೆ ಅವರಿಗೆ ಕಲಿಸಿಕೊಡುವ ಸಲುವಾಗಿ ಆ ಆತ್ಮಿಕ ದೇಹದ ಮಹಿಮೆಯನ್ನು ಶಾರೀರಿಕ ದೇಹಗಳೆಂಬ ಮುಸುಕಿನ ಮೂಲಕವಾಗಿ ತನ್ನನ್ನು ಶಿಷ್ಯರಿಗೆ [ಮರೆ] ಮಾಡಿಕೊಂಡಿದ್ದನು. ದೇವದೂತರು ಸಾರಿ ಹೇಳಿರುವಂತೆ ಆತನು ಮತ್ತೆ ಬರಲಿರುವನು.

ಅನೇಕರು ವಿಶೇಷವಾಗಿ ತಮ್ಮನ್ನು ಸೆಕೆಂಡ್ ಅಡ್ವೆಂಟಿಸ್ಟ್‌ಗಳೆಂದು ಕರೆದುಕೊಳ್ಳುವ ನಮ್ಮ ಪ್ರಿಯ ಸಹೋದರರು ಹನ್ನೊಂದನೇ ವಚನದಲ್ಲಿನ ಹೇಳಿಕೆಯ ಬಗ್ಗೆ ಎಡವಿಬಿದ್ದವರಾಗಿರುವರು. ಅವರು ಆ ವಚನಭಾಗವು ಹೀಗೆ ಓದಲ್ಪಡುವದೆಂದು ಭಾವಿಸಿಕೊಂಡಿರುವರು: ಆತನು ಹೊರಟುಹೋದ ರೀತಿಯಲ್ಲೇ ತಾನು [ಮತ್ತೆ] ಬರುವದನ್ನು ನೀವು ನೋಡುವಿರಿ. ಆದರೆ ಅದು ಹೀಗೆ ಓದಲಾಗುವದಿಲ್ಲ. ಆತನು ಹೊರಟುಹೊದುದನ್ನು ನೋಡಿದ್ದ ಶಿಷ್ಯರು ಬಹು ಹಿಂದೆಯೇ ಸತ್ತುಹೋಗಿರುವರು, ಅಲ್ಲದೆ ಇತರರು ಆತನು ಬರುವದನ್ನು ನೋಡಬೇಕೆಂದಿದ್ದರೂ ಸಹ ಅವರಿಗೆ ಅದು ಆಗುವದಿಲ್ಲ. ಆದರೆ ದೇವದೂತನು ಆತನು ಬರುವದನ್ನು ಯಾರಾದರೂ ನೋಡುವರೆಂದು ಹೇಳಿರಲಿಲ್ಲ; ಕೇವಲ ಅವನು ದೃಢಪಡಿಸಿ ಹೇಳಿದ್ದೇನಂದರೆ ಆತನು ಹೊರಟು ಹೋದುದನ್ನು ಅವರು ನೋಡಿದ ರೀತಿಯಲ್ಲಿಯೇ ಆತನು ಬರುವ ರೀತಿಯೂ ಇರುವದೆಂಬದು.

ಆತನು ಹೊರಟುಹೋದ ಬಗೆಯು ಆಗ ಯಾವುದಿತ್ತು? ಆತನು ದಿವಾರೋಹಣವಾದ ರೀತಿಯ ವೈಶಿಷ್ಟ್ಯವೇನಾಗಿತ್ತು? ಅದು ಏನೇ ಇದ್ದರೂ ಇದರ [ಅಥವಾ, ಈ] ರೀತಿಯನ್ನು ಆತನು ಮತ್ತೆ ಆಗಮಿಸುವದನ್ನು ಗುರುತಿಸಲ್ಪಡುವದರ ವೈಶಿಷ್ಟ್ಯವೆಂಬುದನ್ನು ನಿರೀಕ್ಷಿಸಲ್ಪಡಬೇಕು. ಆತನು ಹೊರಟುಹೋದಂಥ ರೀತಿಯು ಗೋಪ್ಯವಾಗಿದ್ದು, ಅದು ಲೋಕವು ಕಾಣಲಾಗದ ರೀತಿಯಲ್ಲಿ, ಲೋಕವು ತಿಳಿಯಲಾಗದ ರೀತಿಯಲ್ಲಿ, ಲೋಕವು ನಂಬಲಾಗದ ರೀತಿಯಲ್ಲಿತ್ತು. ಹೇಗೂ ಅದು ಸಹೋದರರು ತಿಳಿದುಕೊಂಡಿದ್ದ, ಸಹೋದರರಿಗೆ ತೋರ್ಪಡಲಾಗಿದ್ದ ಹಾಗು ಸಹೋದರರು ನಂಬಲಾಗಿದ್ದ ರೀತಿಯಲ್ಲಿತ್ತು. ಹೀಗೆ ಆತನ ಎರಡನೇ ಬರೋಣವು ಒಬ್ಬ ಕಳ್ಳನಂತೆ ಗೌಪ್ಯವಾಗಿ, ಬಾಹ್ಯ ಪ್ರದರ್ಶನವಿಲ್ಲದ ರೀತಿಯಲ್ಲಿ, ಲೋಕಕ್ಕೆ ತಿಳಿಯದ ರೀತಿಯಲ್ಲಿದ್ದು ಅದು ಕೇವಲ ಕತ್ತಲೆಯಲ್ಲಿ ಇರದವರಾಗಿದ್ದು ಬೆಳಕಿನ ಮಕ್ಕಳಾಗಿ ಬೆಳಕಿನಲ್ಲಿ ನಡೆಯುವಂಥ ಸಹೋದರರಿಗೆ ತಿಳಿಸಲ್ಪಡುವದು. (1 ಥೆಸಲೊನಿಕ 5:1–5) ನಮ್ಮ ಕರ್ತನ ಎರಡನೇ ಬರುವಿಕೆಯ ವಿಧಾನದ ಬಗ್ಗೆ ಪೂರ್ಣವಾದ ವಿವರಣೆಗೆ ಸ್ಟಡೀಸ್ ಇನ್ ದ ಸ್ಕ್ರಿಪ್ಚರ್ಸ್ ಪಾಠಮಾಲೆಯ ಎರಡನೇ ಗ್ರಂಥದ 5ನೇ ಅಧ್ಯಾಯವನ್ನು ನೋಡಿ.

*****

"ವಧಿತನಾದ ಕುರಿಯಾದಾತನು
ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ
ಮಾನ ಪ್ರಭಾವ ಸ್ತೋತ್ರಗಳನ್ನು
ಹೊಂದುವದಕ್ಕೆ ಯೋಗ್ಯನು
ಎಂದು ಹೇಳಿದರು.



ಇದಲ್ಲದೆ ಆಕಾಶದಲ್ಲಿಯೂ
ಭೂಮಿಯ ಮೇಲೆಯೂ
ಭೂಮಿಯ ಕೆಳಗೂ ಸಮುದ್ರದ
ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು
ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ
ಇರುವುದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ
ಸ್ತೋತ್ರ  ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ
ಇರಲಿ ಎಂದು ಹೇಳುವುದನ್ನು ಕೇಳಿದೆನು."

ಪ್ರಕಟನೆ 5:12, 13